೧೦ ಸಮಗ್ರ ವಚನ ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನಸಂಪುಟ ೩

ಸಂಪಾದಕ
ಡಾ. ವೀರಣ್ಣ ರಾಜೂರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಂಕೀರ್ಣ ವಚನಸಂಪುಟ : ಐದು

(ಬಸವೋತ್ತರ ಯುಗ)

# ಸಂಕೀರ್ಣ ವಚನಸಂಪುಟ : ಐದು

(ಬಸವೋತ್ತರ ಯುಗ)

ಸಂಪಾದಕ

**ಡಾ. ವೀರಣ್ಣ ರಾಜೂರ**

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**SANKEERNA VACHANASAMPUTA : AIDU :** Complete Vachanas of 19 Vachanakaras of Post Basaveshvara Period, Ed. by Dr. Veeranna Rajur, Professor, Institute of Kannada Studies, Karnataka University, Dharwad - 580 003 and Published by The Administrative Officer, Kannada Pusthaka Pradhikara (Kannada Book Authority), Pampa Mahakavi Road, Chamarajpet, Bangalore - 560 018

Pp. Lii + 744

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ. ೪೫೦/-**
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ :
ತ್ವರಿತ ಮುದ್ರಣಾಲಯ
ಆಫ್‌ಸೆಟ್ ಪ್ರಿಂಟರ್ಸ್, ಗದಗ

ಮುದ್ರಣ :
ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
೧೧೭/೨, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು-೧೮
✆ : ೬೬೧೩೧೨೩, ೬೬೧೮೭೫೨

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

❊

# ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

## ಬಿನ್ನಹ

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

✲

# ಪ್ರಕಾಶಕರ ಮಾತು


**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ


ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಆನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

☼

# ಸಂಪಾದಕೀಯ

## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[೧]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[೨]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

## ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎನ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

*

# ಪ್ರಸ್ತಾವನೆ

ಪೀಠಿಕೆ :

ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ವಚನಗಳಿಗೆ ವಿಶಿಷ್ಟ ಸ್ಥಾನವಿದೆ. ಈ ಸಾಹಿತ್ಯದ ಉಗಮದ ಬಗೆಗೆ ವಾದಗಳಿದ್ದರೂ ಜೇಡರ ದಾಸಿಮಯ್ಯ ಮೊದಲಾದವರು ಬಸವಪೂರ್ವದ ವಚನಕಾರರೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಈ ಅವಧಿಯ ರಚನೆಗಳಿಗೆ 'ಸೂಳ್ನುಡಿ' ಎಂಬ ಹೆಸರು ಬಳಕೆಯಲ್ಲಿದ್ದು, ೧೨ನೆಯ ಶತಮಾನದಲ್ಲಿ ಅದಕ್ಕೆ 'ವಚನ'ವೆಂಬ ಪರ್ಯಾಯನಾಮ ರೂಢವಾಗಿರುವ ಸಾಧ್ಯತೆಯಿದೆ. ಸೂಳ್ನುಡಿ ತ್ರಿಪದಿಗೆ ಸಮೀಪವಾದ ಲಯವನ್ನು ಹೊಂದಿದ್ದು, ತಾತ್ವಿಕಕ್ಕಿಂತ ಸಾಮಾಜಿಕ ಚಿಂತನೆಗೆ ಹೆಚ್ಚು ಒತ್ತುಕೊಟ್ಟಂತೆ ಕಾಣುತ್ತದೆ.

ಬಸವಾದಿ ಪ್ರಮಥರ ಯುಗ ವಚನಸಾಹಿತ್ಯದ ವಸಂತಕಾಲ. ನೂರು ಜಾತಿ, ನೂರು ವೃತ್ತಿಗಳಿಂದ ಬಂದ ಶರಣರು ಸೃಷ್ಟಿಸಿದ ಈ ಸಾಹಿತ್ಯ ಕನ್ನಡಕ್ಕೆ ಸಂದ ಅಪೂರ್ವ ಕಾಣಿಕೆಯಾಗಿದೆ.

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ'–ಇದು ವಚನ ಚಳುವಳಿಯ ಮುಖ್ಯ ಪ್ರಣಾಳಿಕೆ. ಈ ಪ್ರಣಾಳಿಕೆ ಕಾರಣವಾಗಿ ಸ್ಥಾವರವನ್ನು ಕೆಡಹುವ, ಜಂಗಮವನ್ನು ಕಟ್ಟುವ ಕೆಲಸ ಈ ಕಾಲದಲ್ಲಿ ನಡೆಯಿತು. ಇದರ ಫಲವಾಗಿ ಚಲನಶೀಲ ವಸ್ತು, ಚಲನಶೀಲ ಶಿಲ್ಪ, ಚಲನಶೀಲ ಭಾಷೆ ಮೊದಲಾದವುಗಳೆಲ್ಲ ಒಗ್ಗೂಡಿ ವಚನಶರೀರ ಆಕಾರ ಪಡೆಯಿತು. ಈ ಜಂಗಮತ್ವ ಕಾರಣವಾಗಿ ವಚನಸಾಹಿತ್ಯ ಜಂಗಮಕ್ಕಳಿವಿಲ್ಲವೆಂಬಂತೆ ಈ ಕಾಲದ ವರೆಗೂ ನಡೆದುಬಂದಿದೆ.

ಹನ್ನೆರಡನೆಯ ಶತಮಾನದಲ್ಲಿ ಮಹಾಪೂರದಂತೆ ಬಂದು, ಎಲ್ಲ ದೃಷ್ಟಿಯಿಂದಲೂ ಅಪೂರ್ವತೆಯನ್ನು ತೋರಿ, ತನ್ನ ಸಾಧ್ಯತೆಗಳನ್ನೆಲ್ಲ ಸೂರೆಗೈದು, ಸಾಹಿತ್ಯದ ದಿಕ್ಕನ್ನೇ ಬದಲಿಸಿದ, ವೈಚಾರಿಕ ಪ್ರಪಂಚದ ಒಂದು ಅಚ್ಚರಿಯೆನಿಸಿದ ವಚನಸಾಹಿತ್ಯ ಕಲ್ಯಾಣದ ಕ್ರಾಂತಿಯಿಂದಾಗಿ 'ಊರು ಕೆಟ್ಟು ಸೂರೆಯಾಡುವಲ್ಲಿ ಆರಿಗಾರೂ ಇಲ್ಲ' ಎನ್ನುವಂತೆ ಅನಾಥವಾಯಿತು. ಮುಂದೆ ಬಂದ ಹರಿಹರಾದಿ ವೀರಶೈವ ಕವಿಗಳು ಅದನ್ನು ತಮ್ಮ ಕಾವ್ಯಗಳಲ್ಲಿ ಬದುಕಿಸುತ್ತ ನಡೆದರು. ಹದಿನೈದನೆಯ ಶತಮಾನದ ಹೊತ್ತಿಗೆ ಅದು ತನ್ನ ಅಜ್ಞಾತವಾಸದಿಂದ ಮುಕ್ತಿಪಡೆದು, ಮತ್ತೆ ಪ್ರಕಟವಾಗಿ ತೋರಿತು. ಈ ಅವಧಿಯಲ್ಲಿ ಈ ಸಾಹಿತ್ಯ ಕುರಿತಂತೆ ಎರಡು ಮುಖ್ಯವಾದ ಕಾರ್ಯಗಳು ನಡೆದವು. ಒಂದುಃ ಅಲ್ಲಲ್ಲಿ ಚದುರಿ ಹೋಗಿದ್ದ ಬಸವಾದಿ ಶರಣರ ವಚನಗಳನ್ನು ಶೋಧಿಸಿ ಒಂದೆಡೆ ಸಂಗ್ರಹಿಸಿ, ಸ್ಥಲಾನುಗುಣವಾಗಿ ಇಲ್ಲವೆ ನಾಮಾನುಗುಣವಾಗಿ ಜೋಡಿಸುವುದು; ಅವುಗಳಿಗೆ ಟೀಕೆ ಟಿಪ್ಪಣಿ, ವ್ಯಾಖ್ಯಾನ ಬರೆಯುವುದು. ಮತ್ತೊಂದುಃ ಸ್ವತಂತ್ರ ವಚನ ಸೃಷ್ಟಿಮಾಡುವುದು. ವೀರಶೈವ ದೊರೆ ಪ್ರೌಢದೇವರಾಯನ ಕಾಲದಲ್ಲಿ 'ವಿಜಯಕಲ್ಯಾಣ'ವೆನಿಸಿದ ವಿಜಯನಗರ (ಹಂಪೆ)ದಲ್ಲಿ ಸೇರಿದ ನೂರೊಂದು ವಿರಕ್ತರು ಈ ಸಾಹಿತ್ಯದ

ಪುನರುತ್ಥಾನಗೈದು ಅದಕ್ಕೆ ಮರುಹುಟ್ಟು ತಂದುಕೊಟ್ಟರೆ, ತೋಂಟದ ಸಿದ್ಧಲಿಂಗರ ಕಾಲದ ಏಳನೂರೊಂದು ವಿರಕ್ತರು ಈ ಎರಡೂ ವಿಧದ ಕಾರ್ಯಗಳನ್ನು ಶ್ರದ್ಧೆ–ನಿಷ್ಠೆ–ಅವಧಾನಗಳಿಂದ ಕೈಕೊಂಡು ಅದಕ್ಕೆ ಹನ್ನೆರಡನೆಯ ಶತಮಾನದ ವೈಭವವನ್ನು ಮತ್ತೆ ತಂದುಕೊಡಲು ಪ್ರಯತ್ನಿಸಿದರು. ಹೀಗೆ ನೂರೊಂದು ವಿರಕ್ತರು ಮತ್ತು ಏಳುನೂರೊಂದು ವಿರಕ್ತರು, ಆಯಾ ಕಾಲದ ಇತರರು ಹಾಗೂ ಆ ತರುವಾಯದವರು ಸೃಷ್ಟಿಸಿದ ಸ್ವತಂತ್ರ ವಚನ ಸಾಹಿತ್ಯವನ್ನು ''ಬಸವೋತ್ತರಯುಗದ ವಚನಸಾಹಿತ್ಯ'' ಎಂದು ಗುರುತಿಸಲಾಗುತ್ತದೆ.

ಬಸವಯುಗದ ವಚನಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಜನ ವಿದ್ವಾಂಸರು ಆಳವಾದ ಸಂಶೋಧನೆ, ವಿಚಾರವಿಮರ್ಶೆ ನಡೆಸಿದ್ದಾರೆ. ಆದರೆ ಬಸವೋತ್ತರ ಯುಗದ ವಚನಸಾಹಿತ್ಯ ಕುರಿತಂತೆ ಇಂಥ ಅಧ್ಯಯನ ಇದುವರೆಗೆ ನಡೆದಿಲ್ಲ. ಹೀಗಾಗಿ ಮೊಟ್ಟಮೊದಲ ಬಾರಿಗೆ ಈ ಯುಗದ ವಚನಸಾಹಿತ್ಯವನ್ನು ಸಮಗ್ರವಾಗಿ ಸಂಗ್ರಹಿಸಿ, ಪರಿಷ್ಕರಿಸಿ, ವಚನಕಾರರ ಜೀವನೇತಿಹಾಸ, ವಚನ ವಿವೇಚನೆಯೊಂದಿಗೆ ಐದು ಸಂಪುಟಗಳಲ್ಲಿ ಪ್ರಕಟಿಸುವ ಮೂಲಕ ಈ ಕೊರತೆಯನ್ನು ನೀಗಿಸುತ್ತಿರುವುದು ''ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ''ಯ ಒಂದು ಮಹತ್ವದ ಸಾಧನೆಯೆನಿಸಿದೆ. ಈ ಐದು ಸಂಪುಟಗಳಲ್ಲಿ ೧೫ನೆಯ ಶತಮಾನದ ಕರಸ್ಥಲ ಮಲ್ಲಿಕಾರ್ಜುನದೇವರಿಂದ, ೧೯ ನೆಯ ಶತಮಾನದ ಕಡಕೋಳ ಮಡಿವಾಳಪ್ಪನ ವರೆಗಿನ ೩೫ ಜನ ವಚನಕಾರರ ೬೭೬೪ ವಚನಗಳು ಸಮಾವೇಶಗೊಂಡಿವೆ[೧]. ಈ ಯುಗದ ಒಟ್ಟು ವಚನಕಾರರ ಹೆಸರು, ಅಂಕಿತ, ವಚನಸಂಖ್ಯೆ ಕೆಳಗಿನಂತಿದೆ :

| | | | |
|---|---|---|---|
| ೧. | ಇಮ್ಮಡಿ ಮುರಿಗಾ ಗುರುಸಿದ್ಧ | : ಪರಶಿವಲಿಂಗಯ್ಯ | ೨೦೯ |
| ೨. | ಕರಸ್ಥಲದ ಮಲ್ಲಿಕಾರ್ಜುನ | : ಪರಮಗುರು ಶಾಂತಮಲ್ಲಿಕಾರ್ಜುನ | ೪ |
| ೩. | ಕಾಡಸಿದ್ಧೇಶ್ವರ | : ಕಾಡನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೆ | ೫೦೦ |
| ೪. | ಕುಷ್ಟಗಿ ಕರಿಬಸವೇಶ್ವರ | : ಘನಲಿಂಗಗುರು ಚೆನ್ನ ಬಸವೇಶ್ವರ ಸಾಕ್ಷಿಯಾಗಿ | ೯೯ |
| ೫. | ಕೂಡಲಸಂಗಮೇಶ್ವರ | : ಕೂಡಲಾಖ್ಯ ಚನ್ನಸಂಗಮದೇವ | ೧೯ |
| ೬. | ಗಣದಾಸಿ ವೀರಣ್ಣ | : ಶಾಂತಕೂಡಲಸಂಗಮದೇವ | ೪೦ |
| ೭. | ಗುಮ್ಮಳಾಪುರದ ಸಿದ್ಧಲಿಂಗ | : ಬೋಳಬಸವೇಶ್ವರ | ೧೮ |
| ೮. | ಗುರುಸಿದ್ಧದೇವ | : ಸಂಗನಬಸವೇಶ್ವರ | ೧೦೧ |
| ೯. | ಗುಹೇಶ್ವರಯ್ಯ | : ಗುಹೇಶ್ವರಪ್ರಿಯ ನಿರಾಳಲಿಂಗ | ೪೩ |
| ೧೦. | ಗೋಣಿ ಮಾರಯ್ಯ | : ಕೀಟೇಶ್ವರಲಿಂಗ | ೯ |
| ೧೧. | ಘನಲಿಂಗಿದೇವ | : ಘನಲಿಂಗಿಯ ಮೋಹದ ಮಲ್ಲಿಕಾರ್ಜುನ | ೬೬ |

೧. ದ್ವಿತೀಯ ಆವೃತ್ತಿಯಲ್ಲಿ 'ಎಳಂದೂರ ಪರ್ವತ ಶಿವಯೋಗಿಯ ವಚನಗಳ' ಒಂದು ಸಂಪುಟ ಹೆಚ್ಚಿಗೆ ಸೇರಿರುವುದರಿಂದ ಬಸವೋತ್ತರಯುಗದ ಸಂಪುಟಗಳ ಸಂಖ್ಯೆ ಆರಾಗಿದೆ, ವಚನಕಾರರ ಸಂಖ್ಯೆ ೩೬ಕ್ಕೆ ಏರಿದೆ. ವಚನ ಸಂಖ್ಯೆ ೭೭೬೭ ಆಗಿದೆ.

| | | |
|---|---|---|
| ೧೨. ಘನಲಿಂಗದಯ್ಯ | : ಮಹಾಗುರು ಸಿದ್ಧೇಶ್ವರ | ೧ |
| ೧೩. ಚೆನ್ನಯ್ಯ | : ಚೆನ್ನಯ್ಯಪ್ರಿಯ ನಿರ್ಮಾಯ ಪ್ರಭುವೆ | ೪೩ |
| ೧೪. ಜಕ್ಕಣಯ್ಯ | : ಝೇಂಕಾರ ನಿಜಲಿಂಗಪ್ರಭುವೆ | ೭೭೮ |
| ೧೫. ತೋಂಟದ ಸಿದ್ಧಲಿಂಗೇಶ್ವರ | : ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ | ೭೦೧ |
| ೧೬. ದೇಶಿಕೇಂದ್ರ ಸಂಗನಬಸವಯ್ಯ | : ನಿರಂಜನ ಚೆನ್ನಬಸವಲಿಂಗ | ೧೨೪೨ |
| ೧೭. ನಿರಾಲಂಬ ಪ್ರಭುದೇವ | : ನಿಸ್ಸಂಗನಿರಾಳ ನಿಜಲಿಂಗಪ್ರಭುವೆ | ೧೪ |
| ೧೮. ಪರಂಜ್ಯೋತಿ | : ವರನಾಗನ ಗುರುವೀರನೆ ಪರಂಜ್ಯೋತಿಮಹಾವಿರಕ್ತಿ | ೧೩ |
| ೧೯. ಬಸವಲಿಂಗದೇವ | : ಮತ್ಪ್ರಾಣನಾಥ ಮಹಾ ಶ್ರೀಗುರು ಸಿದ್ಧಲಿಂಗೇಶ್ವರ | ೩೬ |
| ೨೦. ಬಾಲಸಂಗಯ್ಯ | : ಅಪ್ರಮಾಣ ಕೂಡಲಸಂಗಮದೇವ | ೯೨೦ |
| ೨೧. ಬೊಮ್ಮಗೊಂಡೇಶ್ವರ | : ಬಸವಣ್ಣ | ೧ |
| ೨೨. ಭಿಕ್ಷದ ಸಂಗಯ್ಯ | : ಬಸವಣ್ಣಪ್ರಿಯ ಚೆನ್ನಸಂಗಯ್ಯ | ೧ |
| ೨೩. ಮಡಿವಾಳಪ್ಪ | : ನಿರುಪಮ ನಿರಾಳ ಮತ್ಪ್ರಭು ಮಹಾಂತಯೋಗಿ | ೭೮ |
| ೨೪. ಮುದ್ವೀರಸ್ವಾಮಿ | : ಮುದ್ವೀರಪ್ರಿಯ ಸಂಗಮೇಶ್ವರ | ೧ |
| ೨೫. ಮುಮ್ಮಡಿ ಕಾರ್ಯೇಂದ್ರ | : ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ | ೧೦೯ |
| ೨೬. ಮೂರುಸಾವಿರ ಮುಕ್ತಿಮುನಿ | : ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ | ೧೦೧ |
| ೨೭. ಮೆಡ್ಲೇರಿ ಶಿವಲಿಂಗ | : ಇಷ್ಟಲಿಂಗೇಶ್ವರ | ೨೩ |
| ೨೮. ವೀರಣ್ಣದೇವ (ಕರಸ್ಥಲದ ವೀರಣ್ಣ) | : ನಿಜಗುರು ಶಾಂತಮಲ್ಲಿಕಾರ್ಜುನ | ೭ |
| ೨೯. ವೀರಸಂಗಯ್ಯ | : ನಮ್ಮ ಕೂಡಲ ಚೆನ್ನಸಂಗಮದೇವ | ೧೧೨ |
| ೩೦. ಷಣ್ಮುಖಸ್ವಾಮಿ | : ಅಖಂಡೇಶ್ವರ | ೭೧೭ |
| ೩೧. ಸಂಗನಬಸವೇಶ್ವರ | : ಬಸವಲಿಂಗೇಶ್ವರ | ೧ |
| ೩೨. ಸಿದ್ಧಮಲ್ಲಪ್ಪ | : ಮೇಗಣಗವಿಯ ಗುರು ಶಿವಸಿದ್ಧ ಪ್ರಭುವೆ | ೯ |
| ೩೩. ಸಿದ್ಧವೀರದೇಶಿಕೇಂದ್ರ | : ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರ | ೧ |
| ೩೪. ಸ್ವತಂತ್ರ ಸಿದ್ಧಲಿಂಗೇಶ್ವರ | : ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ | ೪೩೦ |
| ೩೫. ಹೇಮಗಲ್ಲ ಹಂಪ[೧] | : ಪಡುವಿಡಿ ಮಲ್ಲಿಕಾರ್ಜುನ | ೩೦೨ |

ಈ ವಚನಕಾರರ ಸಂಖ್ಯೆ ಹಾಗೂ ವಚನ ಮೊತ್ತ ಉಪೇಕ್ಷಿಸುವಂತಹದೇನಲ್ಲ. ಇದು ಹನ್ನೆರಡನೆಯ ಶತಮಾನದ ಮುಂದುವರಿಕೆಯಾಗಿದ್ದರೂ ಇದಕ್ಕೆ ತನ್ನದೇ ಆದ ಕೆಲವು ವಿಶಿಷ್ಟ ಲಕ್ಷಣಗಳಿವೆ.

---

೧. ಇಲ್ಲಿ ವಚನ ದೊರೆತು, ಕರ್ತೃವಿನ ಹೆಸರು ಅಜ್ಞಾತವಾಗಿದ್ದವರನ್ನು ಗಣನೆಗೆ ತೆಗೆದುಕೊಂಡಿಲ್ಲ. ಅಂಥವರನ್ನೂ ಸೇರಿಸಿದರೆ ಈ ಸಂಖ್ಯೆ ಎರಡು ಪಟ್ಟಾದರೂ ಆಗಬಹುದು.

೧. ಹೆಚ್ಚಾಗಿ ವಿರಕ್ತ ಪರಂಪರೆಗೆ ಸೇರಿದ ಅನುಭಾವಿಗಳಿಂದ ಈ ಸಾಹಿತ್ಯ ಸೃಷ್ಟಿಯಾಗಿದೆ.

೨. ಹನ್ನೆರಡನೆಯ ಶತಮಾನದ ಶರಣರಂತೆ ಪರಿಸರ ಪ್ರೇರಿತ ತೀವ್ರಾನುಭವದ ಅಭಿವ್ಯಕ್ತಿಗಳಾಗಿ ಈ ವಚನಗಳು ಮೂಡಿಬರದೆ, ಕುಳಿತು ವಿಚಾರಿಸಿ ಬರೆದ ರಚನೆಗಳಾಗಿ ತೋರುತ್ತವೆ.

೩. ಆ ಯುಗದಲ್ಲಿಯಂತೆ ಬಹು ಸಂಖ್ಯೆಯ ಶರಣರು ಏಕಕಾಲಕ್ಕೆ ಒಂದೆಡೆ ಸಂಘಟಿತರಾಗಿ, ಒಂದೇ ವೇದಿಕೆಯ ಮೇಲೆ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಸ್ಪಂದಿಸಿ ಪ್ರತಿಕ್ರಿಯಾರೂಪದಲ್ಲಿ ಆತ್ಮಸಾಕ್ಷಿಯಾಗಿ ನುಡಿದ ನುಡಿಯಾಗಿರದೆ, ಬೇರೆ ಬೇರೆ ಕಾಲ–ಸ್ಥಳ–ಪರಿಸರಗಳಲ್ಲಿ ನಿಂತು ಅಧ್ಯಯನ, ಮನನ, ಚಿಂತನಗಳ ಮೂಲಕ ಶಾಸ್ತ್ರಸಾಕ್ಷಿಯಾಗಿ ರಚಿಸಿದ ಬರಹಗಳಾಗಿವೆ.

೪. ಇವುಗಳಲ್ಲಿ ಸಾಮಾಜಿಕ ಕಾಳಜಿ–ಕಳಕಳಿಗಿಂತ ತತ್ವ, ಶಾಸ್ತ್ರ ಜಿಜ್ಞಾಸೆ ಅಧಿಕವಾಗಿ ಕಂಡುಬರುತ್ತದೆ.

೫. ಬಸವಾದಿಗಳಲ್ಲಿ ಕಂಡುಬರುವ ಸಾಧಕನ ಆಂತರಿಕ ತೊಳಲಾಟ, ಆತ್ಮನಿರೀಕ್ಷಣೆ ಇವುಗಳಲ್ಲಿ ಕಡಿಮೆ. ಇದ್ದರೂ ಅದು ಸಹಜ ನೋವಿನಿಂದ ಮೂಡಿಬಂದಂತೆ ತೋರುವುದಿಲ್ಲ.

೬. ಹನ್ನೆರಡನೆಯ ಶತಮಾನದ ಭಕ್ತಿ, ಜ್ಞಾನ, ಕ್ರಿಯೆಗಳೆಂಬ ಮೌಲ್ಯಗಳಲ್ಲಿ ಈ ಕಾಲಕ್ಕೆ ಮೊದಲಿನ ಎರಡಕ್ಕೆ ಹೆಚ್ಚು ಒತ್ತುಬಿದ್ದು ಕ್ರಿಯೆಗೆ ಬದಲಾಗಿ ವೈರಾಗ್ಯಕ್ಕೆ ಮಹತ್ವ ಲಭಿಸಿತು.

೭. ತತ್ವನಿರೂಪಣೆ, ಪಾರಿಭಾಷಿಕತೆಗಳಲ್ಲಿ ಚೆನ್ನಬಸವಾದಿಗಳ ಮುಂದುವರಿಕೆ ತೋರಿದರೂ ಕೆಲವು ಹೊಸ ಪಾರಿಭಾಷಿಕ ಪದಗಳ ಸೃಷ್ಟಿಯೂ ಈ ಕಾಲದಲ್ಲಿ ನಡೆಯಿತು. ತತ್ವಜಡತೆ, ಹೇರಳವಾದ ಪಾರಿಭಾಷಿಕ ಪದಗಳ ಬಳಕೆಯಿಂದ ಹೆಚ್ಚಿನ ವಚನಗಳು ಶಾಸ್ತ್ರಲಕ್ಷಣಕ್ಕೆ ಹೊರಳಿದವು. ವಚನ ಎಂಬುದು ಒಂದು 'ಶಾಸ್ತ್ರ' ಎಂಬ ಅಭಿಪ್ರಾಯಕ್ಕೆ ಅಧಿಕ ಪುಷ್ಟಿ ಲಭಿಸಿತು.

೮. ನೈತಿಕ, ತಾತ್ವಿಕ ವಿಷಯಪ್ರತಿಪಾದನೆಯೇ ಮುಖ್ಯ ಉದ್ದೇಶವಾದುದರಿಂದ ಮುಕ್ತಕಗಳಿಗಿಂತ, ವಿವರಣಾತ್ಮಕ ಗದ್ಯಲಕ್ಷಣಗಳನ್ನೊಳಗೊಂಡ ರಚನೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಹೀಗಾಗಿ ಶಿಲ್ಪಬಂಧುರತೆ, ರಚನಾಸುಭಗತೆಗಳು ಇಲ್ಲವಾಗಿ, ಶಿಥಿಲತೆ ಕೃತಕತೆಗಳು ಎದ್ದುತೋರುತ್ತವೆ.

೯ ಅನುಭವತೀವ್ರತೆ, ಭಾವ–ಭಾಷೆಗಳ ಸಹಜ ಬೆಸುಗೆ, ಲಯಾತ್ಮಕತೆ, ನೂತನ ಅಲಂಕಾರ, ಪ್ರತಿಮೆ, ಸಂಕೇತ, ಉಕ್ತಿವೈಚಿತ್ರ್ಯ, ಕಲ್ಪನಾ ರಮ್ಯತೆಗಳು ಕಂಡು ಬರದ ಕಾರಣ ಈ ಯುಗದ ವಚನಗಳಲ್ಲಿ ಕಾವ್ಯಗುಣ ಗೌಣ. ಆದರೂ ಕೆಲವರಲ್ಲಿ ಕ್ವಚಿತ್ತಾಗಿ ೧೨ನೆಯ ಶತಮಾನದ ಶರಣರನ್ನು ಸಮೀಪಿಸಿರುವ ಭಾವೋತ್ಕಟತೆ, ಅಭಿವ್ಯಕ್ತಿಸಹಜತೆಗಳು ಕಾಣಸಿಗುತ್ತವೆ. (ತೋಂಟದ ಸಿದ್ಧಲಿಂಗ, ಷಣ್ಮುಖ ಶಿವಯೋಗಿ, ಹೇಮಗಲ್ಲ ಹಂಪ, ದೇಶಿಕೇಂದ್ರ ಸಂಗನಬಸವ)

೧೦. ಭಾಷೆಯ ಬಳಕೆಯಲ್ಲಿ ಮಿತವ್ಯಯಕ್ಕಿಂತ ಧಾರಾಳತೆ, ಧ್ವನಿಪೂರ್ಣತೆಗಿಂತ ವಾಚ್ಯತೆ ಹೆಚ್ಚು. ಶಿಷ್ಟತೆಗಿಂತ ಆಯಾ ಪರಿಸರದ ಪ್ರಾದೇಶಿಕ ದೇಶೀ ಭಾಷೆಯನ್ನು ತೀರ ಸಹಜವಾಗಿ ಬಳಸಿಕೊಂಡುದು ಇವರಲ್ಲಿ ತೆರೆದುಕಾಣುವ ವೈಶಿಷ್ಟ್ಯವೆನಿಸಿದೆ.

೧೧. ಸಿದ್ಧ ತಾತ್ವಿಕಚೌಕಟ್ಟಿನ ಜೊತೆಗೆ ಹಲವು ಹತ್ತು ನೂತನ ಸ್ಥಲಯೋಜನೆ ರೂಪಿಸಿಕೊಂಡು, ಸ್ವತಃ ಕರ್ತೃವೇ ಆ ಸ್ಥಲಗಳಿಗನುಗುಣವಾಗಿ ವಚನ ರಚಿಸಿದ್ದಾರೆ. ಕೆಲವರು ತಮ್ಮ ವಚನಗಳಿಗೆ ತಾವೇ ಟೀಕೆ ಬರೆದರೆ, ಮತ್ತೆ ಕೆಲವರು ಬೇರೆಯವರ ವಚನಗಳನ್ನು ಸ್ಥಲಾನುಗುಣವಾಗಿ ಸಂಕಲಿಸಿ, ಅಲ್ಲಿ ತಮ್ಮ ವಚನಗಳನ್ನು ಅಳವಡಿಸಿದುದು ಈ ಯುಗದ ಎದ್ದುಕಾಣುವ ಅಂಶವಾಗಿದೆ.

೧೨. ಬೆಡಗಿನ ತಂತ್ರವನ್ನು ಹೆಚ್ಚಾಗಿ ಅಳವಡಿಸಿಕೊಂಡುದು, ಹೇರಳವಾಗಿ ಸಂಸ್ಕೃತ ಪ್ರಮಾಣಗಳನ್ನು ವಚನಗಳಲ್ಲಿ ಸೇರಿಸಿಕೊಂಡುದು ಈ ಯುಗದ ವಚನಗಳಲ್ಲಿ ಕಣ್ಣುಕುಕ್ಕುವ ಅಂಶವಾಗಿದೆ.

೧೩. ವಚನಗಳ ಜೊತೆ ಸ್ವರವಚನ, ತ್ರಿಪದಿ, ಕಂದ, ಶತಕ, ತಾರಾವಳಿ, ಷಟ್ಪದಿ ಇತ್ಯಾದಿ ಲಘುಸಾಹಿತ್ಯಪ್ರಕಾರಗಳ ರಚನೆಮಾಡಿದ್ದು ಈ ಯುಗದ ವಚನಕಾರರ ಮತ್ತೊಂದು ವಿಶೇಷ.

೧೪. ಒಟ್ಟಿನಲ್ಲಿ ಪಾರಂಪರಿಕ ಪ್ರಕಾರವೊಂದರಲ್ಲಿ ಧರ್ಮತತ್ವಗಳನ್ನು ಅಳವಡಿಸುವ, ಅವುಗಳನ್ನು ಪ್ರಚುರಪಡಿಸುವ, ಆ ಮೂಲಕ ವಚನಪ್ರಕಾರವನ್ನು ಮುಂದುವರಿಸಿಕೊಂಡು ಸಾಗುವ ಕಾರ್ಯವನ್ನು ಈ ಯುಗದ ವಚನಕಾರರು ನಿಷ್ಠೆಯಿಂದ ನೆರವೇರಿಸಿದ್ದಾರೆ.

**ಈ ಸಂಪುಟದ ವಚನಕಾರರು :**

''ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ''ಗೆ ಸಂಬಂಧಪಟ್ಟ ಹತ್ತನೆಯ ಸಂಪುಟವಿದು. ಬಸವೋತ್ತರಯುಗದ ಮೊದಲ ಸಂಪುಟವಾದ ಇದರಲ್ಲಿ ೧೧ ಜನ ವಚನಕಾರರ ೧೬೩೬ ವಚನಗಳನ್ನು ಸಂಗ್ರಹಿಸಲಾಗಿದೆ :

| | | |
|---|---|---|
| ೧. | ಕರಸ್ಥಲದ ಮಲ್ಲಿಕಾರ್ಜುನ | ೪ |
| ೨. | ಕಾಡಸಿದ್ಧೇಶ್ವರ | ೫೦೦ |
| ೩. | ಕುಷ್ಟಗಿ ಕರಿಬಸವೇಶ್ವರ | ೯೯ |
| ೪. | ಕೂಡಲಸಂಗಮೇಶ್ವರ | ೧೯ |
| ೫. | ಗಣದಾಸಿ ವೀರಣ್ಣ | ೪೦ |
| ೬. | ಗುರುಸಿದ್ಧದೇವ | ೧೦೧ |
| ೭. | ಗುಹೇಶ್ವರಯ್ಯ | ೪೩ |
| ೮. | ಗೋಣಿಮಾರಯ್ಯ | ೯ |
| ೯. | ಘನಲಿಂಗದಯ್ಯ | ೧ |

೧೦. ಚೆನ್ನಯ್ಯ ೪೨
೧೧. ಜಕ್ಕಣಯ್ಯ ೭೭೮

ಇವರಲ್ಲಿ ಕಾಡಸಿದ್ಧೇಶ್ವರ ಮತ್ತು ಗಣದಾಸಿ ವೀರಣ್ಣ ಇಬ್ಬರನ್ನು ಬಿಟ್ಟು ಉಳಿದವರೆಲ್ಲ ಕವಿಚರಿತೆಯಲ್ಲಿ ಉಕ್ತವಾಗದ, ಅಷ್ಟಾಗಿ ಪ್ರಚಾರಪಡೆಯದ ವ್ಯಕ್ತಿಗಳು. ಕಾಡಸಿದ್ಧೇಶ್ವರನ ವಚನಗಳು ೧೯೩೭ ರಷ್ಟು ಹಿಂದೆಯೇ ಪ್ರಕಟವಾಗಿದ್ದರೂ ಶುದ್ಧವಾಗಿ ಪರಿಷ್ಕರಣಗೊಂಡು ಅವುಗಳ ನಿಶ್ಚಿತ ಸ್ವರೂಪ, ಖಚಿತ ವಚನಸಂಖ್ಯೆ, ವಸ್ತು ವೈಶಿಷ್ಟ್ಯಗಳು ಸ್ಪಷ್ಟವಾಗಿ ತಿಳಿದಿರಲಿಲ್ಲ. ಕರಸ್ಥಲದ ಮಲ್ಲಿಕಾರ್ಜುನನ ಹೆಸರಿನಲ್ಲಿ ವಚನಗಳು ದೊರೆಯುತ್ತವೆಯೆಂಬ ವಿಷಯವೂ ಇದುವರೆಗೆ ಗೋಚರವಾಗಿರಲಿಲ್ಲ. ಗುಹೇಶ್ವರಯ್ಯ, ಚೆನ್ನಯ್ಯ, ಗೋಣಿಮಾರಯ್ಯ ಅವರ ಕಾಲ, ಜೀವನಸಂಗತಿ, ವಚನಗಳ ಸಂಖ್ಯೆ, ವಸ್ತು ಸ್ವರೂಪದ ಬಗೆಗೆ ಹೆಚ್ಚಿನ ವಿವರ–ವಿವೇಚನೆ ನಡೆದಿರಲಿಲ್ಲ. ಈ ಎಲ್ಲ ಕೊರತೆಗಳನ್ನು ಸಾಧ್ಯವಾದ ಮಟ್ಟಿಗೆ ನೀಗಿಸಲು ಪ್ರಯತ್ನಿಸಿರುವುದು ಈ ಸಂಪುಟದ ವಿಶೇಷ.

## ಕರಸ್ಥಲದ ಮಲ್ಲಿಕಾರ್ಜುನ :

ವೀರಶೈವ ಸಾಹಿತ್ಯಚರಿತ್ರೆಯಲ್ಲಿ ಕರಸ್ಥಲದ ಶಾಂತೇಶ, ಕರಸ್ಥಲದ ವೀರಣ್ಣೊಡೆಯ ಮತ್ತು ಕರಸ್ಥಲದ ನಾಗಿದೇವ ಎಂಬ ಹೆಸರುಗಳು ಪ್ರಸಿದ್ಧವಾಗಿವೆ. ಇವರು ಒಂದೇ ಪರಂಪರೆಗೆ ಸೇರಿದ ಗುರುಶಿಷ್ಯರು. (ಶಾಂತೇಶನ ಶಿಷ್ಯ ವೀರಣ್ಣೊಡೆಯ, ವೀರಣ್ಣೊಡೆಯನ ಶಿಷ್ಯ ನಾಗಿದೇವ), ಇವರ ಸಾಲಿಗೆ ಸೇರುವ ಮತ್ತೊಬ್ಬ ವ್ಯಕ್ತಿ ಪ್ರಸ್ತುತ 'ಕರಸ್ಥಲದ ಮಲ್ಲಿಕಾರ್ಜುನ' ಅಥವಾ 'ಕರಸ್ಥಲದ ಮಲ್ಲಿಕಾರ್ಜುನೊಡೆಯ' ಈತನ ವೈಯಕ್ತಿಕ ಸಂಗತಿಗಳು ಹೆಚ್ಚಿಗೆ ತಿಳಿದಿಲ್ಲ. 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ'[೨] ಎಂಬ ವಚನ ಸಂಕಲನದ ಪ್ರತಿ ಸ್ಥಲದ ಅಂತ್ಯ ಗದ್ಯದಲ್ಲಿ ''ಶ್ರೀ ಕರಸ್ಥಲದ ಮಲ್ಲಿಕಾರ್ಜುನ ಒಡೆಯರು ಸೇರಿಸಿದ ಮಹಾನುಭವ ಬೋಧೆಯಪ್ಪ ಶ್ರೀ ಮದ್ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ .....'' ಎಂದು ಹೇಳಲಾಗಿದ್ದು, ಈ ಕೃತಿಯ ಸಂಕಲನಕಾರ ಕರಸ್ಥಲದ ಮಲ್ಲಿಕಾರ್ಜುನ ಒಡೆಯ ಎಂಬುದು ಸ್ಪಷ್ಟವಾಗುತ್ತದೆ. ಈ ಕೃತಿಯ ಆದಿ ಮತ್ತು ಅಂತ್ಯದಲ್ಲಿರುವ ಸ್ತುತಿ ರೂಪದ ಕಂದಗಳಲ್ಲಿ 'ಪರಮಗುರು ಶಾಂತೇಶ' ಎಂಬ ಹೆಸರು ಉಕ್ತವಾಗಿದೆ. ಈ ಶಾಂತೇಶ ಇವನ ಗುರುವಾಗಿರಬೇಕು. ಕರಸ್ಥಲ ವೀರಣ್ಣೊಡೆಯ ಮತ್ತು ಕರಸ್ಥಲನಾಗಿ ದೇವರ ಗುರುವೂ 'ಶಾಂತೇಶ'ನೆ ಆಗಿರುವನೆಂಬುದು ಅವರ ಕೃತಿಗಳಲ್ಲಿ ಬರುವ ಅಂಕಿತಗಳಿಂದ ವೇದ್ಯವಾಗುತ್ತದೆ. ಇದರಿಂದ ಮಲ್ಲಿಕಾರ್ಜುನ ಒಡೆಯನೂ ಮೇಲಿನವರ ಪರಂಪರೆಗೆ ಸೇರಿದವನಾಗುತ್ತಾನೆ. ಕರಸ್ಥಲದ ವೀರಣ್ಣೊಡೆಯ ಪ್ರೌಢ ದೇವರಾಯನ (೧೪೧೯–೧೪೪೭) ಕಾಲದಲ್ಲಿದ್ದವನೆಂದು ತಿಳಿದುಬರುವುದರಿಂದ, ಅವನ ಪರಿಸರದವನಾದ ಮಲ್ಲಿಕಾರ್ಜುನ ಒಡೆಯನೂ ಅದೇ ಕಾಲದವನೆಂದು ಊಹಿಸಬಹುದಾಗಿದೆ.

---

೨. ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ : ಸಂ. ಡಾ. ಆರ್. ಸಿ. ಹಿರೇಮಠ, ಕವಿವಿ. ಧಾರವಾಡ ೧೯೭೩

ಕರಸ್ಥಲದ ಮಲ್ಲಿಕಾರ್ಜುನ ಒಡೆಯ ತನ್ನನ್ನು ''....ಲಿಂಗಾಂಗಸಂಯೋಗಾನುಭವ ಪ್ರಸಿದ್ಧ ಪರಿಪೂರ್ಣಶೀಲ ಪರಮಾದ್ವೈತ ವಿಶ್ರಾಂತರುಮಪ್ಪ ಪರಮ ಚರರೂಪ ಶ್ರೀ ಕರಸ್ಥಲದ ಮಲ್ಲಿಕಾರ್ಜುನೊಡೆಯರು'' ಎಂದು ಕರೆದುಕೊಂಡಿದ್ದಾನೆ. ಇದುವರೆಗೆ ಈತ ಕೇವಲ ಸಂಕಲನಕಾರನೆಂದು ನಂಬಲಾಗಿತ್ತು, ಆದರೆ ಈಗ ವಚನಕಾರನೂ ಆಗಿದ್ದಾನೆ ಎಂಬ ಸಂಗತಿ ಸ್ಪಷ್ಟವಾಗಿದೆ. ಈತನೇ ಸಂಕಲಿಸಿದ 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ' ಕೃತಿಯಲ್ಲಿ 'ಪರಮಗುರು ಶಾಂತೇಶ' ಎಂಬ ಅಂಕಿತದ ನಾಲ್ಕು ವಚನಗಳಿದ್ದು, ಸಂಪಾದಕರು ಅವುಗಳ ಕರ್ತೃ ಅಜ್ಞಾತ ಎಂದು ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ. ಈ ಅಂಕಿತದ ಒಂದು ವಚನ (ಕರಸ್ಥಲದ ಲಿಂಗವ....)ಗುರುಸಿದ್ಧದೇವನ 'ಚಿದೈಶ್ವರ್ಯ ಚಿದಾಭರಣ'ದಲ್ಲಿಯೂ ಇದ್ದು[೩], ಅದರ ಕರ್ತೃ ಕರಸ್ಥಲದ ಮಲ್ಲಿಕಾರ್ಜುನ ಒಡೆಯ ಎಂದು ಅದರ ಸಂಪಾದಕರಾದ ಪಿ.ಎಂ. ಗಿರಿರಾಜು ಅವರು ಸೂಚಿಸಿದ್ದಾರೆ.[೪] ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣದ ಆದಿ–ಅಂತ್ಯದ ಕಂದ ಮತ್ತು ವಚನಗಳ ಅಂಕಿತ ಒಂದೇ ಆಗಿರುವುದರಿಂದ ಈ ಕೃತಿಕರ್ತೃ ಮತ್ತು ವಚನಗಳ ಕರ್ತೃ ಕರಸ್ಥಲದ ಮಲ್ಲಿಕಾರ್ಜುನ ಒಡೆಯನೇ ಎಂಬುದು ಖಚಿತವಾಗುತ್ತದೆ.

ಕರಸ್ಥಲದ ಮಲ್ಲಿಕಾರ್ಜುನ ಒಡೆಯನ ದೊರೆತ ನಾಲ್ಕು ವಚನಗಳಲ್ಲಿ ಇಷ್ಟಲಿಂಗವಿದ್ದೂ ಸ್ಥಾವರಲಿಂಗ ಪೂಜಿಸುವ 'ನರಕಿ ನಾಯಿಗಳ'ನಿಂದೆ, 'ಸತಿಸುತರೆಂಬ ಸಂಸಾರದಲ್ಲಿ ಮೈಮರೆದು ಮತಿಗೆಟ್ಟು ಮರುಳಾದವರ' ಟೀಕೆ, ಅಂತರಂಗದ ಅರಿವಿಲ್ಲದ ಬಹಿರಂಗದ ಕ್ರೀವಂತರ ವಿಮರ್ಶೆ, 'ಪರಶಿವನ ನಿಜನೆಲೆಯರಿದು ನೆರೆದು ಪರವಶನಾಗಿ ತನ್ನ ಮರೆದು ಪರಿಭವದಿಂದ ಮುಕ್ತನಾದ ಪರಶಿವಯೋಗಿಯ' ಸ್ವರೂಪವರ್ಣನೆ ಮಾಡಲಾಗಿದೆ. ''ಅಂತರಂಗದಲ್ಲಿ ಅರಿವಿಲ್ಲದವಂಗೆ ಬಹಿರಂಗದಲ್ಲಿ ಕ್ರೀಯಿದ್ದು ಫಲವೇನು ? ಅದು ಕಣ್ಣಿಲ್ಲದವನ ಬಾಳುವೆಯಂತೆ, ಬಹಿರಂಗದಲ್ಲಿ ಕ್ರೀಯಿಲ್ಲದವಂಗೆ ಅಂತರಂಗದಲ್ಲಿ ಅರಿವಿದ್ದು ಫಲವೇನು ? ಅದು ಶೂನ್ಯಾಲಯದ ದೀಪದಂತೆ'' ''ವಾಯುವಿನೊಳಗಣ ಪರಿಮಳವ ಹಿಡಿದು ದಂಡೆಯ ಕಟ್ಟಿ ಮಂಡೆಯೊಳಗೆ ಮುಡಿಯಬಹುದೆ ಅಯ್ಯ ? ಬಯಲ ಮರೀಚಿಕಾಜಲವ ಕೊಡನಲ್ಲಿ ತುಂಬಿ ಹೊತ್ತು ತಂದು ಅಡಿಗೆಯಮಾಡಿ ಉಣಬಹುದೆ ಅಯ್ಯ ?'' ಎಂಬಂಥ ವಾಕ್ಯಗಳು ನೇರ ನಿರೂಪಣೆ, ಸರಳ ಭಾಷೆ–ಭಾವಗಳಿಂದ ಗಮನ ಸೆಳೆಯುತ್ತವೆ.

ನಾಲ್ಕರಲ್ಲಿ ೨ ವಚನಗಳು (ಕರಸ್ಥಲದ ಲಿಂಗವಬಿಟ್ಟು.......; ಸತಿಯ ನೋಡಿ...) ಸಕಲ 'ಪುರಾತನರ ವಚನಗಳು'[೫] ಕಟ್ಟುಗಳಲ್ಲಿ 'ಮಡಿವಾಳ ಮಾಚಯ್ಯಗಳ ಸಮಾಚಾರದ

---

೩. 'ಶಿವಯೋಗ ಚಿಂತಾಮಣಿ' ಎಂಬ ಕೃತಿಯಲ್ಲಿ 'ಅಂತರಂಗದಲ್ಲಿ.....' ಎಂಬ ವಚನವಿದ್ದು 'ಪರಮಗುರು ಮಲ್ಲಿಕಾರ್ಜುನ' ಎಂಬ ಅಂಕಿತ ಹೊಂದಿದೆ. (ಪು. ೬೨. ವ. ೧೭೮).

೪. ಚಿದೈಶ್ವರ್ಯ ಚಿದಾಭರಣ : ಪಿ. ಎಂ. ಗಿರಿರಾಜು, ಶರಣ ಸಂತಾನ ಪ್ರಕಾಶನ ಮೈಸೂರು, ಪುಟ. ೨೪೮

೫. ಸಕಲಪುರಾತನರ ವಚನಗಳು (ಸಂಪುಟ : ಮೂರು) : ಡಾ. ಎಂ. ಎಸ್. ಸುಂಕಾಪುರ. ಕವಿವಿ. ಧಾರವಾಡ. ಪು. ೨೦೯.

ಮಲ್ಲಿಕಾರ್ಜುನ' ಎಂಬ ವಚನಕಾರನ ಹೆಸರಿನಡಿಯಲ್ಲಿ ದೊರೆಯುತ್ತವೆ.[೬] ಅಂಕಿತ ಮಾತ್ರ 'ಪರಮ ಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನ' ಎಂದಿದೆ. ಇಬ್ಬರ ಹೆಸರಿನಲ್ಲಿಯ ವಿಶೇಷಣವನ್ನು ತೆಗೆದರೆ ಉಳಿಯುವ 'ಮಲ್ಲಿಕಾರ್ಜುನ' ಎಂಬುದು, ಇಬ್ಬರ ಅಂಕಿತದಲ್ಲಿನ 'ಪರಮ ಪಂಚಾಕ್ಷರಮೂರ್ತಿ' ಮತ್ತು 'ಪರಮ ಗುರು' ಎಂಬುದನ್ನು ತೆಗೆದರೆ ಉಳಿಯುವ 'ಶಾಂತಮಲ್ಲಿಕಾರ್ಜುನ' ಎಂಬುದು ಒಂದೆ ಆಗಿರುವುದು, ಇವರಿಬ್ಬರೂ ಭಿನ್ನರೋ ಅಥವಾ ಅಭಿನ್ನರೊ ಎಂಬ ಸಂಶಯಕ್ಕೆ ಎಡೆಮಾಡುತ್ತದೆ. ಕಾಲಮಾನದ ದೃಷ್ಟಿಯಿಂದ ವಿದ್ವಾಂಸರ ಪ್ರಕಾರ ಒಬ್ಬ ೧೫ನೆಯ ಶತಮಾನಕ್ಕೆ ಸೇರಿದವನಾದರೆ, ಮತ್ತೊಬ್ಬ, ೧೫ನೆಯ ಶತಮಾನಕ್ಕೆ ಸೇರಿದವನಾಗಿದ್ದಾನೆ. ಹಸ್ತಪ್ರತಿಗಳಲ್ಲಿ 'ಮಡಿವಾಳ ಮಾಚಯ್ಯಗಳ ಸಮಾಚಾರದ' ಎಂಬುದು 'ಮಡಿವಾಳ ಮಾಚಯ್ಯಗಳ ಸಮಯಾಚಾರದ' ಎಂದು ಪಾಠಾಂತರದೊಂದಿಗೆ ದೊರೆಯುತ್ತದೆ. ಇದರಿಂದ ಮಡಿವಾಳ ಮಾಚಯ್ಯನ ಸಮಯಾಚಾರವನ್ನು (ಅಂದರೆ ಗಣಾಚಾರ ನಿಷ್ಠೆಯನ್ನು) ಪಾಲಿಸುವ ವ್ಯಕ್ತಿ ಎಂಬುದು ಸ್ಪಷ್ಟವಾಗುತ್ತದೆ. ಆ ವ್ಯಕ್ತಿ ಯಾವ ಕಾಲದವನಾದರೂ ಆಗಿರಬಹುದು. ಈಗ ದೊರೆತ ಮಲ್ಲಿಕಾರ್ಜುನ ಒಡೆಯನ ವಚನಗಳಲ್ಲಿ ಗಣಾಚಾರನಿಷ್ಠೆ ವ್ಯಕ್ತವಾಗಿದೆ. ಹೀಗಾಗಿ ಕರಸ್ಥಲದ ಮಲ್ಲಿಕಾರ್ಜುನ ಒಡೆಯನೇ 'ಮಡಿವಾಳ ಮಾಚಯ್ಯಗಳ ಸಮಯಾಚಾರ'ವನ್ನು ಪಾಲಿಸುವ ಮಲ್ಲಿಕಾರ್ಜುನ ಆಗಿರುವ ಸಂಭವವಿದೆ. ಇದನ್ನು ಖಚಿತಗೊಳಿಸಲು ಇನ್ನಷ್ಟು ಆಧಾರಗಳ ಆವಶ್ಯಕತೆಯಿದೆ.

**ಕಾಡಸಿದ್ಧೇಶ್ವರ :**

ಭಾರತದಲ್ಲಿ, ಅದೇ ರೀತಿ ಕರ್ನಾಟಕದಲ್ಲಿ ಸಿದ್ಧಸಂಪ್ರದಾಯವೊಂದು ಉದ್ದಕ್ಕೂ ಬೆಳೆದುಬಂದಿದ್ದು, ಈ ಪಂಥದ ಸ್ವರೂಪ, ರೂಪಾಂತರ, ಇದು ಅನ್ಯ ಪಂಥಿಗಳೊಂದಿಗೆ ಲೀನವಾದ ವಿಷಯ ಇತ್ಯಾದಿಗಳು ದೊಡ್ಡ ಸಮಸ್ಯೆಯಾಗಿ ನಿಂತಿವೆ. ವೀರಶೈವದಲ್ಲಿ ರೇವಣಸಿದ್ಧ, ಅಮೋಘಸಿದ್ಧ, ಇವರನ್ನೊಳಗೊಂಡ ಒಂದು ಸಿದ್ಧ ಸಂಪ್ರದಾಯದ ಸೂಚನೆಗಳು ಕಂಡುಬರುತ್ತವೆ. ಇದಕ್ಕೆ ಹೊರತಾಗಿ ಸಿದ್ಧಗಿರಿಮಠದ ಒಂದು ಸಿದ್ಧ ಸಂಪ್ರದಾಯ ಪ್ರತ್ಯೇಕವಾಗಿ ಬೆಳೆದುಬಂದಿದೆ. ಪ್ರಸ್ತುತ ವಚನಕಾರ ಕಾಡಸಿದ್ಧೇಶ್ವರನು ಈ ಸಿದ್ಧಗಿರಿಮಠ ಪರಂಪರೆಗೆ ಸೇರಿದ ಪೀಠಾಧಿಕಾರಿಗಳಲ್ಲಿ ಒಬ್ಬನಾಗಿರುವನೆಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಆದರೆ ಈತನ ಜೀವನಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ.

ಕಾಡಸಿದ್ಧೇಶ್ವರ ತನ್ನ ಕೃತಿಯ ಆದಿಯ ಗುರುಸ್ತೋತ್ರ ವಚನದಲ್ಲಿ ತೋಂಟದ ಸಿದ್ಧಲಿಂಗ, ಗುರುಸಿದ್ಧ ದೇವರಂತೆ ತನ್ನ ಗುರುಪರಂಪರೆಯನ್ನು ಹೇಳಿಕೊಂಡಿದ್ದು, ಅದರಲ್ಲಿ "....ಸಂಗಮೇಶ್ವರದೇವರ ಕರಕಮಲದಲ್ಲಿ ಉತ್ಪತ್ಯವಾದ ಶಿಶುವು ಕಾಡಸಿದ್ಧನಾನಯ್ಯ" ಎಂದು ತಿಳಿಸಿದ್ದಾನೆ. ಇದರಿಂದ ಸಂಗಮೇಶ್ವರದೇವರು ಈತನ ಗುರುವೆಂದು ಸ್ಪಷ್ಟವಾಗುತ್ತದೆ.

---

೬ ಮೈಸೂರ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯಚರಿತ್ರೆ (ಸಂ. ೪, ಪು. ೬೯೪)ಯಲ್ಲಿ ಇವನ ಹೆಸರಿನಲ್ಲಿ ಒಂದು ವಚನ ಮಾತ್ರ ಸಿಕ್ಕಿದೆ ಎಂದು ಹೇಳಿ "ವಾರಿಧಿಯೊಳಗಣ...." ಎಂಬ ವಚನವನ್ನು ಉದಾಹರಿಸಿದ್ದಾರೆ.

ಜೀವನಚರಿತ್ರೆಯಂತೆ ಕಾಡಸಿದ್ಧೇಶ್ವರನ ಜೀವಿತಕಾಲದ ಬಗೆಗೂ ಭಿನ್ನಾಭಿಪ್ರಾಯಗಳಿವೆ. ಈತನ ವಚನಗಳನ್ನು ದ್ವಿತೀಯ ಬಾರಿಗೆ ಪ್ರಕಟಿಸಿದ ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿಗಳು ೧೨ನೆಯ ಶತಮಾನವೆಂದು, ಹಳಕಟ್ಟಿ ಅವರು ೧೪ನೆಯ ಶತಮಾನವೆಂದು ಹೇಳಿದರೆ, ಕವಿಚರಿತ್ರೆಕಾರರು ಕ್ರಿ.ಶ. ೧೭೨೫ ಎಂದು ತಿಳಿಸುತ್ತಾರೆ.[2] ಜಾಯಪ್ಪ ದೇಸಾಯಿಯ ಕುವಲಯಾನಂದ (೧೭೩೪)ದಲ್ಲಿ ಕಾಡಸಿದ್ಧೇಶ್ವರನ ಉಲ್ಲೇಖ ಬರುವುದರಿಂದ ಕವಿಚರಿತ್ರೆಕಾರರ ಅಭಿಪ್ರಾಯ ಸರಿಯೆನಿಸುತ್ತದೆ. ಇದಕ್ಕೆ ಪೂರಕವೆನ್ನುವಂತೆ ಇವನ ವಚನಗಳಲ್ಲಿ ಅನೇಕ ಉರ್ದು ಪದಗಳು ಸಿಗುತ್ತವೆ.

ಕಾಡಸಿದ್ಧೇಶ್ವರನ ಕೃತಿಯ ಹೆಸರು 'ವೀರಶೈವ ಷಟ್‌ಸ್ಥಲ'. ಇದನ್ನು ತನ್ನ ಮೊದಲನೆಯ ವಚನದಲ್ಲಿ ಹೇಳಿಕೊಂಡಿರುವುದರಿಂದ ಈತನ ತಾತ್ವಿಕ ನಿಲವು ಸ್ಪಷ್ಟವಾಗುತ್ತದೆ. ಹೆಸರಿಗೆ ತಕ್ಕಂತೆ ಗುರುಸ್ತೋತ್ರ, ಸಂಸಾರ ಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಸ್ಥಲಗಳೆಂಬ ಪೀಠಿಕಾಸ್ಥಲಗಳನ್ನು ಹೇಳಿ, ಭಕ್ತಸ್ಥಲದಿಂದ ಐಕ್ಯಸ್ಥಲದ ವರೆಗೆ ಈ ಸಿದ್ಧಾಂತವನ್ನು ಮುನ್ನಡೆಸಿಕೊಂಡು ಹೋದುದು ವೀರಶೈವಸಮ್ಮತವೆನಿಸಿದೆ. ಅದರಲ್ಲಿಯೂ ಪ್ರತಿಯೊಂದು ಸ್ಥಲದಲ್ಲಿ ಭಕ್ತನ ಭಕ್ತ ಭಕ್ತನ ಮಾಹೇಶ್ವರ ಎಂಬಂತೆ ಆರು ಅವಾಂತರಸ್ಥಲಗಳನ್ನು ಕಲ್ಪಿಸುತ್ತ ಹೋದುದು ವೀರಶೈವದ ಅಂಗಸ್ಥಲನಿಷ್ಠ ಮಿಶ್ರಷಟ್‌ಸ್ಥಲಕ್ರಮವೆನಿಸಿದೆ. ಈ ಮಿಶ್ರಷಟ್‌ಸ್ಥಲಗಳಿಗನುಗುಣವಾಗಿ ಈತ 'ಕಾಡನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ವಾಣಯ ಪ್ರಭುವೆ' ಎಂಬ ಅಂಕಿತದಿಂದ ೫೦೦ ವಚನಗಳನ್ನು ರಚಿಸಿ ಜೋಡಿಸಿದ್ದಾನೆ. ಪ್ರತಿಸ್ಥಲದ ಆದಿಯಲ್ಲಿ ಸೂತ್ರರೂಪದ ವಿವರಣೆ ಕೊಡಲಾಗಿದ್ದು, ಮಧ್ಯ ಮಧ್ಯ ಬೇರೆ ಬೇರೆ ಕಾಯಕದವರ ಹೆಸರುಗಳಡಿಯಲ್ಲಿ, ಅವರವರ ಕಾಯಕ ಪರಿಭಾಷೆಯನ್ನು ಬಳಸಿ ವಚನ ಬರೆದು ಅಳವಡಿಸಿದ್ದಾನೆ. ಇದು ಈತನ ವಚನಗಳ ಒಂದು ಎದ್ದು ಕಾಣುವ ವೈಶಿಷ್ಟ್ಯವೆನಿಸಿದೆ. ಈ ಹೆಸರುಗಳಲ್ಲಿ ಕೆಲವು ೧೨ನೆಯ ಶತಮಾನದ ಶರಣರವಾಗಿದ್ದರೆ, ಇನ್ನೂ ಕೆಲವು ಇದುವರೆಗೆ ಕೇಳದ ನೂತನ ಹೆಸರುಗಳಾಗಿವೆ. ಇದರಲ್ಲಿ 'ವಲ್ಲಿಯ ಪೀರಣ್ಣ' ಎಂಬಂಥ ಮುಸ್ಲಿಂ ಶರಣನ ಹೆಸರುಗಳು ಸೇರಿರುವುದೂ ಒಂದು ವಿಶೇಷವೆಂದೇ ಹೇಳಬೇಕು. ಈತ ಉಲ್ಲೇಖಿಸಿದ ಸು. ೬೧ ವ್ಯಕ್ತಿಗಳ ಹೆಸರುಗಳು ಹೀಗಿವೆ :

ಸಂಸಾರ ಸಂಗಣ್ಣಗಳು (ಸಂಸಾರ ಹೇಯಸ್ಥಲ), ಬಡವರ ಬಾಳಣ್ಣ (ಅದೇ), ಮಠಪತಿ ಭೀಮಯ್ಯ (ಗುರುಕರುಣಸ್ಥಲ), ಮಠಪತಿ ಮಡಿವಾಳಯ್ಯ (ಲಿಂಗಧಾರಣಸ್ಥಲ), ವಿಭೂತಿ ಪರಯ್ಯ (ವಿಭೂತಿಸ್ಥಲ), ರುದ್ರಾಕ್ಷಿ ಕಾಯಕದ ರಾಮಿದೇವಯ್ಯ

೨ ಕಾಡಸಿದ್ಧೇಶ್ವರನ ಒಂದು ವಚನದಲ್ಲಿ ''ಪರ್ವತೇಶನ ಅಂಗೈಯೊಳೊಗೆದಾನು ಭಕ್ತರಣುಗ ಕಾಡಸಿದ್ಧೇಶ'' ಎಂದಿರುವುದರಿಂದ ಈತ ಚತುರಾಚಾರ್ಯ ಪುರಾಣದ ಕರ್ತೃ ಪರ್ವತೇಶನ (೧೯೬೮) ಶಿಷ್ಯನಾಗಿರಬೇಕೆಂದು ಇವರು ಭಾವಿಸಿದ್ದಾರೆ. ಆದರೆ ಚಂದ್ರಶೇಖರ ಶಾಸ್ತ್ರಿಗಳು ಸಂಪಾದಿಸಿದ 'ಶ್ರೀ ಕಾಡಸಿದ್ಧೇಶ್ವರ ವಚನವು' (೧೯೩೨) ಕೃತಿಯಲ್ಲಾಗಲಿ, ನಾನು ನೋಡಿದ ಹಸ್ತಪ್ರತಿಗಳಲ್ಲಾಗಲಿ 'ಪರ್ವತೇಶ' ಎಂಬ ಹೆಸರು ಇಲ್ಲ. ಅದಕ್ಕೆ ಬದಲು 'ಸಂಗಮೇಶ್ವರ' ಎಂಬ ಹೆಸರು ಕಂಡು ಬರುವುದನ್ನು ಇಲ್ಲಿ ಗಮನಿಸಬೇಕು.

(ರುದ್ರಾಕ್ಷಿಸ್ಥಲ), ಮಂತ್ರಜಾತಯ್ಯ (ಪಂಚಾಕ್ಷರಿಸ್ಥಲ), ಗಾರುಡಭೀಮಯ್ಯ (ಅದೇ). ಕಾಮಾಟದ ರಾಮಿತಂದೆ (ಭಕ್ತನ ಐಕ್ಯಸ್ಥಲ), ಒಕ್ಕಲಿಗ ಮುದ್ದಯ್ಯ (ಭಕ್ತಸ್ಥಲ), ಸಾವುಕಾರ ಮೊಲ್ಲೆ ಬೊಮ್ಮಣ್ಣ (ಭಕ್ತನ ಐಕ್ಯಸ್ಥಲ), ಗಣಾಚಾರಿ ವೀರಬಸವಂತಯ್ಯ (ಅದೇ), ಯಾತ್ರಿಕ ಸಂಕಣ್ಣ (ಮಾಹೇಶ್ವರನ ಭಕ್ತಸ್ಥಲ), ಬೇಡರ ಕನ್ನಪ್ಪ (ಮಾಹೇಶ್ವರನ ಪ್ರಸಾದಿಸ್ಥಲ), ಚೆರಿಕೇರಿ ಕಾಮಣ್ಣ (ಮಾಹೇಶ್ವರನ ಪ್ರಾಣಲಿಂಗಿ ಸ್ಥಲ), ಕೊರವರ ಸಂಕಣ್ಣ (ಮಾಹೇಶ್ವರನ ಶರಣಸ್ಥಲ), ಚತ್ರಿಯರ ಮಹಾಲಿಂಗ ಶಬರಿಗಳು (ಪ್ರಸಾದಿಯ ಶರಣಸ್ಥಲ), ಶಬರಿ ಕಬ್ಬಿನ ಕಾಳಣ್ಣ (ಅದೇ), ಕುರುಬರ ಭೀಮಣ್ಣ (ಪ್ರಾಣಲಿಂಗಿಯ ಐಕ್ಯಸ್ಥಲ), ಒಡ್ಡರ ತಿಮ್ಮಯ್ಯ (ಶರಣಸ್ಥಲ), ಡೋಹಾರ ಕಕ್ಕಯ್ಯ (ಅದೇ), ಚೆನ್ನಯ್ಯನವರ ಶೆಟ್ಟೆಣ್ಣ (ಅದೇ), ಹರಳಯ್ಯನವರ ಮಾಸಣ್ಣ (ಅದೇ), ಸಮಗಾರ ಸಾಬಣ್ಣ (ಅದೇ), ಕೋಮಟಿಗರ ಕಾಳಣ್ಣ (ಶರಣನ ಭಕ್ತಸ್ಥಲ), ಬಡಗೇರ ಬಾಬಣ್ಣ (ಅದೇ), ಕಮ್ಮಾರ ಕಾಶಣ್ಣ (ಅದೇ), ವೀರಘಂಟೆ ಮಡಿವಾಳಯ್ಯ (ಶರಣನ ಮಹೇಶ್ವರಸ್ಥಲ), ಕುಂಬಾರ ಗುಂಡಯ್ಯ (ಅದೇ), ಪತ್ತಾರ ಬಾಬಣ್ಣ (ಅದೇ), ಬಳಿಗಾರ ಬಸವಂತಯ್ಯ (ಶರಣನ ಪ್ರಸಾದಿಸ್ಥಲ), ಜೋಯಿಸರ ಗೋವಿಂದಭಟ್ಟ (ಅದೇ), ಶಾನಭೋಗ ರಾಮಯ್ಯ (ಶರಣನ ಪ್ರಾಣಲಿಂಗಿಸ್ಥಲ), ಸಿಂಪಿಗೇರ ಸಂಗಣ್ಣ (ಅದೇ), ಚಿತ್ರಗಾರ ಸೋಮಯ್ಯ (ಅದೇ), ಸುಣಗಾರ ಕೇತಯ್ಯ (ಅದೇ), ಗಾಣಿಗೇರ ಕಲ್ಲಪ್ಪ (ಅದೇ), ಬಿಳಿಮುಗ್ಗದ ಗುರುಬಸವಯ್ಯ (ಅದೇ), ಪಿಂಜಾರ ಮಹಮ್ಮದ ಖಾನಯ್ಯ (ಶರಣನ ಐಕ್ಯಸ್ಥಲ), ವಲ್ಲಿ ಪೀರಣ್ಣ (ಅದೇ), ಜೀರ ಸಂಕಣ್ಣ (ಅದೇ), ಮೇದಾರ ಕೇತಯ್ಯ (ಅದೇ), ಸುಂಕದ ಸೋಮಯ್ಯ (ಅದೇ), ಗೊಲ್ಲರ ನಾಗಣ್ಣ (ಅದೇ), ಮಜೂರಿ ಸಂಗಣ್ಣ (ಅದೇ), ಹಾದರದ ಬ್ರಹ್ಮಯ್ಯ (ಐಕ್ಯಸ್ಥಲ), ಮರುಳ ಶಂಕರದೇವರು (ಅದೇ), ಬೋಗಾರ ಕಾಶಣ್ಣ (ಅದೇ), ಉಪ್ಪಣಿಗ ಭರಮಣ್ಣ (ಐಕ್ಯನ ಭಕ್ತಸ್ಥಲ), ತೋಟಿಗರ ಮಲ್ಲಣ್ಣ (ಅದೇ), ಬಣ್ಣಗಾರ ಬಸಯ್ಯ (ಅದೇ), ಅವಟಿಗರ ಮಲ್ಲಣ್ಣ (ಐಕ್ಯನ ಮಾಹೇಶ್ವರಸ್ಥಲ), ಗಾಣದ ಕಣ್ಣಪ್ಪ (ಅದೇ), ಹೊಡೆಹುಲ್ಲ ಬಂಕಣ್ಣ (ಅದೇ), ಸೂಳೆ ಚೋಳಕ್ಕ (ಐಕ್ಯನ ಪ್ರಸಾದಿಸ್ಥಲ), ಸೂಳೆ ನಿಂಬವ್ವ (ಅದೇ), ಇಂಗಳಗಿ ವೈಜಕವ್ವೆ (ಐಕ್ಯನ ಪ್ರಾಣಲಿಂಗಿಸ್ಥಲ), ಸಪೂರಿ ಸಂಗಣ್ಣ (ಐಕ್ಯನ ಶರಣಸ್ಥಲ), ಗೌಳಿಗೇರ ನಾಗಣ್ಣ (ಅದೇ), ಸುಪ್ಪಿ ಶಿವಯ್ಯ (ಅದೇ), ಕಲಕೇತ ಮುರಿಗಿಸ್ವಾಮಿ (ಅದೇ).

ಕಾಡಸಿದ್ಧೇಶ್ವರನ ವಚನಗಳು ವೀರಶೈವ ತತ್ವಬೋಧೆ ಮತ್ತು ನೀತಿಬೋಧೆಯನ್ನು ಮುಖ್ಯ ಗುರಿಯಾಗಿಟ್ಟುಕೊಂಡಿವೆ. ನಿರೂಪಣೆ ನೇರ ಹಾಗೂ ಸ್ಪಷ್ಟವಾಗಿದ್ದು ದೇಶಿಭಾಷೆ ಮತ್ತು ಕಟೂಕ್ತಿಗಳನ್ನು ವಿಶೇಷವಾಗಿ ಅಳವಡಿಸಿಕೊಂಡಿದೆ. ಇದು ವಚನ ಸಂಪ್ರದಾಯದಲ್ಲಿ ಅಂಬಿಗರ ಚೌಡಯ್ಯನ ರಚನೆಗಳನ್ನು ಪ್ರತಿನಿಧಿಸುತ್ತದೆ. ಈತನ ರಚನೆಯ ಇನ್ನೊಂದು ವೈಶಿಷ್ಟ್ಯವೆಂದರೆ ಬೆಡಗು. ಇದು ಒಂದು ರೂಪಕದಂತೆ ಮೈತಾಳಿ ಅನ್ಯಾರ್ಥದ ಮೂಲಕ ತತ್ವವನ್ನು ಬಿತ್ತರಿಸುತ್ತದೆ. ಈ ತಂತ್ರವನ್ನು ಅಳವಡಿಸಿಕೊಂಡ ಸಂಖ್ಯೆಯೇ ಅಧಿಕವಾಗಿದ್ದರೂ, ಬಿಚ್ಚುಮಾತಿನ ಸರಳರಚನೆಗಳಿಗೂ ಇಲ್ಲಿ ಅವಕಾಶ ದೊರೆತಿರುವುದು ಕಾಡಸಿದ್ಧೇಶ್ವರನ ಉಭಯಶಕ್ತಿಗೆ ನಿದರ್ಶನವೆನಿಸಿದೆ. ವಚನಗಳಲ್ಲಿ ಉರ್ದು, ಮರಾಠಿ ಪದಗಳನ್ನು ಬಳಸುವುದರ ಜೊತೆಗೆ ಇಡೀ ವಚನಗಳನ್ನು ಕೆಲವು ಸಲ

ಉರ್ದು ಭಾಷೆಯಲ್ಲಿ ಬರೆದಿರುವುದು ಆ ಭಾಷೆಯಲ್ಲಿ ಈತನಿಗಿರುವ ಪರಿಣತಿಯನ್ನು ಪ್ರಕಟಿಸುತ್ತದೆ.

ಈತನ ವಚನಗಳು ಟೀಕಾಸಹಿತವಾಗಿ ಸಿಗುತ್ತವೆ. ಟೀಕೆ ರಚಿಸಿದವನು ಯಾರೆಂದು ತಿಳಿದಿಲ್ಲ. ಒಂದೆಡೆ ''ಟೀಕಾಕಾರ ಬೋಳಬಸವೇಶ್ವರ''ನ ಹೆಸರು ಬರುತ್ತದೆ. ಈತನೇ ಇವುಗಳಿಗೆ ಟೀಕೆ ಬರೆದನೋ ಹೇಗೋ ತಿಳಿಯದು. ಒಟ್ಟಿನಲ್ಲಿ ಅನೇಕ ಕಾಯಕದವರ ಹೆಸರುಗಳನ್ನು ಅಳವಡಿಸಿಕೊಂಡು, ಅವರವರ ಕಾಯಕ ಪರಿಭಾಷೆ, ಬೆಡಗಿನ ತಂತ್ರ, ಆಡು ಮಾತುಗಳ ಮೂಲಕ ವೀರಶೈವ ಷಟ್‌ಸ್ಥಲ ತತ್ವವನ್ನು ನೆರವಾಗಿ ನಿರೂಪಿಸುವ ಕಾಡಸಿದ್ಧೇಶ್ವರನ ವಚನಗಳು ಇನ್ನೂ ಅನೇಕ ವಿಶೇಷ ಅಂಶಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು, ಪ್ರೌಢವಾದ ಅಧ್ಯಯನಕ್ಕೆ ಆಹ್ವಾನ ನೀಡುತ್ತವೆ.

**ಕುಷ್ಟಗಿ ಕರಿಬಸವೇಶ್ವರ :**

''ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ ಶಿವಸಾಕ್ಷಿಯಾಗಿ'' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದ ಈತ ತನ್ನನ್ನು 'ಕರಿಬಸವ' (ವ. ೯೫), 'ಕುಷ್ಟಗಿಯ ನಿರ್ವಾಣ ಕರಿಯ ಬಸವರಾಜದೇವರು' (೯೬)', 'ವೀರವಿಜೇಯ ಕರಿಬಸವರಾಜದೇವರು' ಎಂದು ಕರೆದುಕೊಂಡಿದ್ದಾನೆ. 'ಕರಿಬಸವ' ಎಂಬುದು ಈತನ ಹೆಸರಾದರೆ, ಈ ಹೆಸರಿನ ಹಿಂದೆ ಸೇರಿದ 'ಕುಷ್ಟಗಿ' ಎಂಬುದು ಇವನ ಸ್ಥಳವನ್ನೂ, 'ವೀರವಿಜೇಯ' ಎಂಬುದು ವ್ಯಕ್ತಿ ವೈಶಿಷ್ಟ್ಯವನ್ನೂ ಎತ್ತಿಹೇಳುವ ವಿಶೇಷಣಗಳಾಗಿವೆ. ಕುಷ್ಟಗಿ ರಾಯಚೂರ (ಇಂದಿನ ಕೊಪ್ಪಳ ಜಿಲ್ಲೆಗೆ) ಜಿಲ್ಲೆಗೆ ಸೇರಿದ ಒಂದು ತಾಲೂಕು ಸ್ಥಳ. ಅಲ್ಲಿರುವ ಕಲ್ಮಠಕ್ಕೆ ಈತ ಸ್ವಾಮಿಯಾಗಿದ್ದನೆಂದು ತಿಳಿದುಬರುತ್ತದೆ. ಈ ಮಠ ನಿಡುಮಾಮಿಡಿ ಪೀಠಪರಂಪರೆಗೆ ಸೇರಿದುದೆಂದು ಹೇಳಲಾಗುತ್ತದೆ.[೮] ಕುಷ್ಟಗಿ ತಾಲೂಕಿಗೆ ಸೇರಿದ ನಿಡಸೇಸಿ ಹಾಗೂ ದೇವದುರ್ಗ ತಾಲೂಕಿನ ಗೆಜ್ಜಿಬಾವಿ ಎಂಬ ಊರುಗಳಲ್ಲಿಯೂ ಇದರ ಶಾಖಾಮಠಗಳಿದ್ದು, ಈ ಮೂರೂ ಮಠಗಳಿಗೆ ಸಂಬಂಧಿಸಿದಂತೆ ಈಗ ಇಪ್ಪತ್ತೊಂದು ಜನ ಸ್ವಾಮಿಗಳು ಆಗಿ ಹೋಗಿದ್ದಾರಂತೆ. ಅವರ ಮೂಲಪುರುಷ ಕರಿಬಸವಸ್ವಾಮಿ, ಅವರ ಶಿಷ್ಯ ಚೆನ್ನಬಸವಸ್ವಾಮಿ, ಅವರ ಶಿಷ್ಯ ಕರಿಬಸವಸ್ವಾಮಿ, ಅವರ ಶಿಷ್ಯ ಚೆನ್ನ ಬಸವಸ್ವಾಮಿ ಹೀಗೆ ಈ ಗುರುಶಿಷ್ಯಪರಂಪರೆಯಲ್ಲಿ ಈ ಎರಡೂ ಹೆಸರುಗಳು ಪುನರುಕ್ತವಾಗುತ್ತ ಹೋಗುತ್ತವೆ. ಇದರಿಂದಾಗಿ ಪ್ರಸ್ತುತ ಕರಿಬಸವೇಶ್ವರ ಎಷ್ಟನೆಯವನು ಎಂದು ನಿರ್ಧರಿಸುವುದು ಕಷ್ಟದ ಕಾರ್ಯವೆನಿಸಿದೆ. ಈತ ತನ್ನ ಒಂದು ವಚನದಲ್ಲಿ ''ಪರಮಗುರು ಪರಂಜ್ಯೋತಿ ಪರಶಿವ ಪರಕ್ಕೆ ಪರವಾದ ಶ್ರೀ ಪಟ್ಟುಕಂಥೆಯ (ಇದನ್ನು 'ಪಶ್ಚಕಂಥೆ' ಎಂದೂ ಹೇಳಲಾಗುತ್ತದೆ) ಚೆನ್ನಬಸವೇಶ್ವರ'' (೯೬) ಎಂದು ಹೇಳುವ ಮೂಲಕ ತನ್ನ ಗುರು 'ಚೆನ್ನಬಸವೇಶ್ವರ' ಎಂದು ತಿಳಿಸಿದ್ದಾನೆ. ಈ ಹೆಸರನ್ನೇ ವಚನಾಂಕಿತದಲ್ಲಿಯೂ ಸೇರಿಸಿಕೊಂಡಿದ್ದಾನೆ. ಇದರಿಂದ ಈತ ಮೂಲಪುರುಷನಾದ ಕರಿಬಸವಸ್ವಾಮಿಯಂತೂ ಅಲ್ಲವೆಂದು ಸ್ಪಷ್ಟವಾಗುತ್ತದೆ. ಉತ್ತಂಗಿ

---

೮ ಕುಷ್ಟಗಿ ಕರಿಬಸವೇಶ್ವರ ವಚನಗಳು : ಸಂ. ಎಸ್. ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಮಠ. ಗದಗ. ಮೊದಲ ಮಾತು ಪುಟ. vii.

ಚೆನ್ನಪ್ಪನವರು ಈತನ ಕಾಲವನ್ನು ೧೭೦೦ ಎಂದು ಊಹಿಸಿದ್ದಾರೆ.[೯] ಈತನ ವಚನಗಳಲ್ಲಿ ನಿರ್ವಾಣಿ ಬೋಳೇಶ (೧೪೩೦), ಕರಸ್ಥಲದದೇವ, ಪ್ರೌಢದೇವರಾಯರ (೧೪೧೯–೧೪೪೭) ಉಲ್ಲೇಖ ಬರುತ್ತದೆ. ಹೀಗಾಗಿ ಅವರಿಂದ ಈಚಿನವನಾಗಿ ಈತ ಬದುಕಿರುವುದು ಸಹಜ. ಇನ್ನಷ್ಟು ಆಧಾರಗಳು ದೊರಕುವ ವರೆಗೆ ಉತ್ತಂಗಿಯವರ ಊಹೆಯನ್ನೇ ಸ್ವೀಕರಿಸಿ ಮುಂದೆ ಸಾಗಬಹುದು.

ಕುಷ್ಟಗಿ ಕರಿಬಸವೇಶ್ವರನ ೯೯ ವಚನಗಳು ದೊರೆತಿವೆ*. ೯೮ನೆಯ ವಚನದಲ್ಲಿ ''ಚಿತ್ತಸದ್ಗತಿಯ ವಚನವ ನೂರೊಂದು ಸಾರಿ ಪೇಳಿದ ವೀರವಿಜೇಯ ಕರಿಬಸವರಾಜದೇವರು'' ಎಂದು ಹೇಳಿರುವುದರಿಂದ ಈತನ ಒಟ್ಟು ವಚನಸಂಖ್ಯೆ ೧೦೧ ಆಗಿದೆ. ಆದರೆ ಈಗ ದೊರೆತುದು ಮೇಲೆ ಸೂಚಿಸಿದಷ್ಟು. ಇಡಿಯಾಗಿ ಒಂದು ಕೃತಿರೂಪದಲ್ಲಿಯೇ ದೊರಕುವ ಈ ವಚನಗ್ರಂಥಕ್ಕೆ ಕರ್ತೃವೇ 'ಚಿತ್ತಸದ್ಗತಿಯ ವಚನ' ಎಂದು ಹೆಸರಿಟ್ಟಿದ್ದಾನೆ. ಇಲ್ಲಿನ ಕೆಲವು ವಚನಗಳು ಶಾಂತದೇವರ 'ಷಟ್ಪ್ರಕಾರ ಸಂಗ್ರಹ', ಗಣೇಶೋಪಾಸಕ ಸಂಪಾದಿಸಿದ 'ಅಂಬಿಗರ ಚೌಡಯ್ಯನ ವಚನ', ಅಜ್ಞಾತ ಸಂಕಲನಕಾರನ 'ಸಂಬಂಧಾಚರಣೆಯ ವಚನಗಳು' ಕೃತಿಗಳಲ್ಲಿ ಎಡೆಪಡೆದಿವೆ. ಗುರುಸ್ತುತಿ, ಅಷ್ಟಾವರಣ ಮಹತಿಯನ್ನೂ ಜೊತೆಗೆ ಸ್ಥಾವರ ಪೂಜಕರು, ಕಿರುಕುಳ ದೈವಪೂಜಕರು, ತಿಥಿ, ವಾರ ನೋಡುವವರು, ಡಾಂಭಿಕಭಕ್ತರು, ದುರಾಚಾರಿಗಳ ಟೀಕೆಯಲ್ಲದೆ, ಪಾರಂಪರಿಕವಾದ ವೀರಶೈವ ತತ್ವಗಳ ನಿರೂಪಣೆ ಈ ವಚನಗಳಲ್ಲಿ ಅಳವಟ್ಟಿದೆ. ಇವುಗಳ ಮೇಲೆ ೧೨ನೆಯ ಶತಮಾನದ ಶರಣರ ದಟ್ಟವಾದ ಪ್ರಭಾವ ಎದ್ದು ಕಾಣುತ್ತದೆ. ಅವರ ವಸ್ತು–ಧೋರಣೆ–ಪರಿಭಾಷೆ, ಕೆಲವು ಸಲ ಅವರ ವಚನಗಳ ಸಾಲುಗಳನ್ನೇ ಎತ್ತಿಕೊಂಡು ತನ್ನ ವಚನಗಳಲ್ಲಿ ಸೇರಿಸಿಕೊಂಡುದು ಕಂಡುಬರುತ್ತದೆ. ಸಾಮಾಜಿಕರಲ್ಲಿ ಕಂಡುಬರುವ ದೋಷಗಳನ್ನು ಎತ್ತಿಹೇಳಿ ಕಟುವಾಗಿ ಟೀಕಿಸಿ ನೇರ ಮಾರ್ಗಕ್ಕೆ ತರುವುದೇ ಈತನ ವಚನ ರಚನೆಯ ಪ್ರಮುಖ ಉದ್ದೇಶವಾಗಿದೆ. ಪ್ರಾದೇಶಿಕ ಆಡುಮಾತಿನ ಬಳಕೆ, ಸಹಜವಾದ ದೃಷ್ಟಾಂತಗಳು, ಬಿಚ್ಚುಮಾತಿನ ಬೈಗುಳಗಳು, ಸರಳವಾದ ಬೋಧೆ ಈ ವಚನಕಾರನ ವೈಶಿಷ್ಟ್ಯಗಳೆನಿಸಿವೆ.

'ಗಂಡನಿಂದ ಹೆಂಡತಿ ಮೊದಲು ಹುಟ್ಟಿದಳು. ಆ ಗಂಡನಿಂದ ಕಿರಿಯಳಲ್ಲದೆ ಹಿರಿಯಳಲ್ಲವಯ್ಯ' 'ಕೊರಡು ಕೊನರಬಲ್ಲುದೆ ?, ಬರಡು ಹಯನಾಗಬಲ್ಲುದೆ ? ಕುರುಡಗೆ ಕನ್ನಡಿಯ ತೋರಿದರೆ ನೋಡಬಲ್ಲನೆ ? ಮೂಗಂಗೆ ರಾಗವು ಹೊಳೆದರೆ ಹಾಡಬಲ್ಲನೆ ?' 'ಆಳಾಗಿದ್ದವನು ಅರಸಾಗಿದ್ದರೊಪ್ಪುವುದೇ ?' 'ತಂದೆಗೆ ಮಗ ದೊಡ್ಡವನಾಗಬಲ್ಲನೆ ?' 'ಮಾಳಿಗೆಯ ಮಣ್ಣು ಮಂಟಪಕ್ಕೆ ಸರಿಯೆ ?' 'ಕೆರೆಯನೊಡೆದ ಬಳಿಕ ತುಂಬಿ ತಡೆಯಬಲ್ಲುದೆ ? ಒಡಕ ಮಡಕೆಗೆ ಒತ್ತಿ ಮಣ್ಣ ಕೊಟ್ಟರೆ ನಿಲ್ಲಬಲ್ಲುದೆ ?'

---

೯. ಕಡಕೋಳ ಮಡಿವಾಳಪ್ಪ ತನ್ನ ಗುರುಪರಂಪರೆ ಹೇಳುವಲ್ಲಿ 'ನಿಡಮಾಮಿಡಿ ಕರಿಬಸವಸ್ವಾಮಿ' ಎಂಬ ಹೆಸರನ್ನು ಹೇಳಿದ್ದಾನೆ. (ನೋಡಿ ಸಂಕೀರ್ಣ ವಚನಸಂಪುಟ–೪, ಮಡಿವಾಳಪ್ಪನ ವಚನ–೪೧)

ಈತನು ಹಾಡುಗಳನ್ನೂ ಬರೆದಂತಿದೆ. (ನೋಡಿ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ–೯, ಸಂ. ೫೭)

ಎಂಬಂಥ ವಾಕ್ಯಗಳು ಹಳೆಯವಾದರೂ ಬಳಸಿಕೊಂಡ ರೀತಿ ಹೊಸದೆನಿಸಿದೆ. 'ಕತ್ತೆ ಸೂಳೆಯಮಕ್ಕಳಿರಾ ಸತ್ತಹಾಗೆ ಸುಮ್ಮನಿರಿರೊ', 'ಕುಲಗೇಡಿ ಖೂಳರಿಗೆ ದೀಕ್ಷವ ಕೊಟ್ಟರೆ ವ್ರತವಿಲ್ಲ' ಎಂಬಂಥ ಮಾತುಗಳು ಆತನ ಟೀಕೆಯ ಸ್ವರೂಪವನ್ನು ತಿಳಿಸುತ್ತವೆ. 'ಚಿತ್ತ ಒಡೆದರೆ ಭಕ್ತಿ ಬೀಸರವಲ್ಲದೆ ಮುಕ್ತಿಯೆಲ್ಲಿಯದೊ ?' ಇದು ಆತನ ವಚನಗಳ ಮುಖ್ಯ ಆಶಯ. ಚಿತ್ತಶುದ್ಧಿ ಕಾಯ್ದುಕೊಂಡು ಮುಕ್ತಿ ಪಡೆಯಲು ಬೋಧಿಸಿದ ಕರಿಬಸವೇಶ್ವರ ೧೨ನೆಯ ಶತಮಾನದ ಶರಣರ ಬಗೆಗೆ ತುಂಬ ಗೌರವ ಇಟ್ಟುಕೊಂಡು ತಾನು ಅವರ ಶಿಶುವೆಂದು ಹೇಳಿಕೊಂಡಿದ್ದಾನೆ. ''ಸೆರಗೊಡ್ಡಿ ಬೇಡಿಕೊಂಬೆನು ಸರಿದಪ್ಪನು ಪೇಳದೆ ನೆರೆ ಬಲ್ಲ ಗುರುಹಿರಿಯರು ಭಕ್ತ ವಿರಕ್ತರೊಪ್ಪುವುದು'' ಎಂದು ಹೇಳುವಲ್ಲಿ ಆತನ ವಿನಯಸಂಪನ್ನತೆ ವ್ಯಕ್ತವಾಗಿದೆ.

**ಕೂಡಲಸಂಗಮೇಶ್ವರ :**

ಈತ ಈಚೆಗೆ ತಾನೆ ಬೆಳಕಿಗೆ ಬಂದ ನೂತನ ವಚನಕಾರ. ಪ್ರೊ. ಬಿ. ರಾಜಶೇಖರಪ್ಪ ಅವರು ಈತನ ೧೯ ವಚನಗಳನ್ನು ಪ್ರಥಮ ಬಾರಿಗೆ ಶೋಧಿಸಿ 'ಸತ್ಯಶುದ್ಧಕಾಯಕ' (ಸಂಪುಟ–೭, ಸಂಚಿಕೆ ೩–೪, ಮಾ–ಅ ೧೯೮೭) ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಈತನ ಜೀವನ–ವಚನ ವೈಶಿಷ್ಟ್ಯ–ಹಸ್ತಪ್ರತಿ ವಿವರ ಕುರಿತು ಬರೆದಿದ್ದಾರೆ.

'ಕೂಡಲ ಸಂಗಮೇಶ್ವರನ ವಚನಗಳು' ಎಂದು ಹಸ್ತಪ್ರತಿಯ ಆದಿಯಲ್ಲಿ ಬರೆದಿರುವುದರಿಂದ 'ಕೂಡಲಸಂಗಮೇಶ್ವರ' ಎಂಬುದು ವಚನಕಾರನ ಹೆಸರಾಗಿರಬೇಕೆಂದು ಊಹಿಸಲಾಗಿದೆ. ಬಸವಣ್ಣನವರ ವಚನದ ಅಂಕಿತವಾದ ಇದು ಇಲ್ಲಿ ಒಬ್ಬ ವಚನಕಾರನ ಹೆಸರಾಗಿ ಬಳಕೆಯಾದುದು ಕುತೂಹಲಕಾರಿ ಎನಿಸಿದೆ. ಈತನ ಕಾಲ, ಸ್ಥಳ, ಕಾಯಕ, ಒಟ್ಟು ರಚಿಸಿದ ವಚನಗಳು–ಇತ್ಯಾದಿ ಯಾವ ವಿವರಗಳೂ ಸದ್ಯಕ್ಕೆ ದೊರೆತಿಲ್ಲ. ವಚನಗಳ ಭಾಷಾ ಶೈಲಿಯ ಹಿನ್ನೆಲೆಯಲ್ಲಿ ೧೬–೧೭ನೆಯ ಶತಮಾನದವನಾಗಿರಬೇಕೆಂದು ರಾಜಶೇಖರಪ್ಪ ನವರು ನಿರ್ಧರಿಸಿದ್ದಾರೆ. ಈತನ ವಚನಗಳಿರುವ ಹಸ್ತಪ್ರತಿಯ ಅಂತ್ಯದಲ್ಲಿ ದೊರೆಯುವ ಕಾಲಮಿತಿ ಶಾ.ಶ. ೧೬೪೪ ಎಂದಿದ್ದು, ಅದು ಕ್ರಿ.ಶ. ೧೭೨೨ ಆಗುತ್ತದೆ. ಹೀಗಾಗಿ ಇದಕ್ಕೂ ಪೂರ್ವದಲ್ಲಿ ಈತ ಇದ್ದಿರಬೇಕೆಂಬುದಂತೂ ನಿರ್ವಿವಾದ.

ಈ ವಚನಗಳಿರುವ ಹಸ್ತಪ್ರತಿ ಚಳ್ಳಕೇರಿ ಪ್ರದೇಶದಲ್ಲಿ ದೊರೆತುದೆಂದು ತಿಳಿಯುತ್ತದೆ. ಆದರೆ ಇದರೊಳಗಿನ ಹಸ್ತಪ್ರತಿಕಾರನ ಹೇಳಿಕೆಗಳ ಹಿನ್ನೆಲೆಯಲ್ಲಿ 'ಇದು ಕರ್ನಾಟಕಾಂಧ್ರ ಗಡಿಯ ಅನಂತಪುರ ಜಿಲ್ಲೆಯ ರಾಯದುರ್ಗದ ಆಸುಪಾಸಿನದೆಂದು ತಿಳಿಯುತ್ತದೆ' ಎಂದು ರಾಜಶೇಖರಪ್ಪನವರು ಅಭಿಪ್ರಾಯ ಪಡುತ್ತಾರೆ. ಇದರ ಲಿಪಿ ತೆಲುಗು ಮಿಶ್ರಿತ ಕನ್ನಡ (ತೆಲುಗನ್ನಡ). ಈ ಕಟ್ಟಿನಲ್ಲಿ ಅಂಬಿಗರ ಚೌಡಯ್ಯ ಮೊದಲಾದವರ ಕೆಲವು ವಚನಗಳೂ ಸಂಗ್ರಹ ವಾಗಿರುವುದರಿಂದ ಆಂಧ್ರಗಡಿನಾಡಿನ ಲಿಪಿಕಾರನೊಬ್ಬ ಈ ಹಸ್ತಪ್ರತಿಯನ್ನು ಸಿದ್ಧಪಡಿಸಿರಬೇಕು. ಇದರಿಂದ ಈ ವಚನಕಾರನ ಸ್ಥಳ ನಿರ್ಧರಿಸಲು ಯಾವುದೇ ಆಧಾರ ದೊರಕುವುದಿಲ್ಲ. ಸದ್ಯಕ್ಕೆ ಈತನ ಹೆಸರಿನ ಮೇಲಿಂದ ಕೂಡಲಸಂಗಮ ಪ್ರದೇಶದವನಾಗಿರಬೇಕೆಂದು ಊಹಿಸಬಹುದು.

'ಕೂಡಲಾದಿ ಚೆನ್ನಸಂಗಮದೇವ' ಈತನ ವಚನಗಳ ಅಂಕಿತ. ಸದ್ಯ ಈ ಅಂಕಿತದಲ್ಲಿ ೧೯ ವಚನಗಳು ಮಾತ್ರ ದೊರೆತಿವೆ. ಅವುಗಳ ವಸ್ತು–ನಿರೂಪಣೆ–ಭಾಷೆಗಳನ್ನು ಗಮನಿಸಿದರೆ ಮಾಹೇಶ್ವರ ಸ್ಥಲದಲ್ಲಿ ನಿಂತ ನಿಷ್ಠುರ ಶರಣನೊಬ್ಬನ ಉಪದೇಶದ ಮಾತುಗಳಂತೆ ತೋರುತ್ತವೆ. ಸಂಬೋಧನೆ ಅವುಗಳ ಮುಖ್ಯ ತಂತ್ರವಾಗಿದೆ. ಧರ್ಮ–ಸಮಾಜ–ವ್ಯಕ್ತಿಗಳ ನಡೆನುಡಿಗಳಲ್ಲಿ ಕಂಡುಬರುವ ಅಂಕುಡೊಂಕುಗಳನ್ನು ತಿದ್ದುವ ರೀತಿಯಲ್ಲಿ ಅವುಗಳ ಧಾಟಿ ಇದೆ.

ನಿಜವಾದ ಯತಿವರನ ಲಕ್ಷಣಗಳಾವವು?

''ತನುವಿನ ಹಂಗು ಹರಿಯಬೇಕು;
ಮನವ ಘನಲಿಂಗಕ್ಕೆ ಕಟ್ಟಿಹಾಕಬೇಕು;
ಧನವ ಸ್ವಪ್ನದಲ್ಲಿ ಮುಟ್ಟಲಾಗದು; ಅನ್ನದ ಆಸೆಯಬಿಡಬೇಕು;
ಚಿನ್ಮಯನಾಗಿ ನಡೆಯಬೇಕು;
ಚಿಂತೆಯ ಮರೆತು ವೈರಾಗ್ಯದಿಂದಿರಬೇಕು;
ಕಾಮದ ಹಂಗ ಕಳೆಯಬೇಕು; ಕರ್ಮೇಂದ್ರಿಯಗಳ ಸುಡಬೇಕು;
ಲಿಂಗದಲ್ಲಿ ಕರುಣ ಇರಬೇಕು; ಸ್ಫಟಿಕ ನಿರ್ಮಳ ಕಾಯನಾಗಿ
ನಿಶ್ಚಿಂತನಾಗಿ ಮೋಕ್ಷಮಂ ಕಂಡಡೆ ಯತಿವರನೆಂದು
ನಮೋ ಎಂಬೆನಯ್ಯ''

ನಿಜವಾದ ಶಿವಪೂಜೆಯ ವಿಧಾನವನ್ನು ರೂಪಕದ ರೀತಿಯಲ್ಲಿ ಹೀಗೆ ಹೇಳಿದ್ದಾನೆ :

''ಮಾನಸವೆಂಬೋ ಕಲ್ಲಿನ ಮೇಲೆ ಮದಮಚ್ಚರವೆಂಬೋ
ಗಂಧಕೊರಡಿನಿಂದ ತೇಯ್ದು
ಸತ್ಯವೆಂಬೋ ಗಂಧವಂ ಹಚ್ಚಿ, ನಿತ್ಯತ್ವವೆಂಬೋ ಅಕ್ಷತೆಯನಿಟ್ಟು,
ಗುರು ಕೀಲೆಂಬೋ ಒರಳಿನಲ್ಲಿ
ಮದಮಚ್ಚರವೆಂಬೋ ತಂಡುಲಂ ಕುಟ್ಟಿ,
ಬುದ್ಧಿಯೆಂಬೋ ಮೊರದಿಂದ ಝಾಡಿಸಿ ಕೇರಿ,
ನಿಜವೆಂಬೊ ಅನ್ನವಂ ಮಾಡಿ,
ನಿರ್ಮಳ ಚಿತ್ತವೆಂಬೋ ತುಪ್ಪವಂ ನೀಡಿ,
ನಿರುಪಮ ಅವಸ್ಥೆಗಳಿಂದ ನೈವೇದ್ಯಂ ಕೊಟ್ಟು,
ಕಾಮಕ್ರೋಧವೆಂಬೋ ಬತ್ತಿಯ ಹೊಸೆದು, ಗುರುಪ್ರಣುತವೆಂಬೋ
ಪಣತಿಯೊಳಗೆ ನಿರ್ಮಳವೆಂಬೋ ತೈಲವಂ ಎರೆದು ಜ್ಯೋತಿಯಮುಟ್ಟಿಸಿ,
ನಿರ್ಮಳಲಿಂಗಕ್ಕೆ ಅರ್ಪಿಸಿ ಮೋಕ್ಷವ ಕಂಡಡೆ
ಶಿವಪೂಜಕನೆಂದು ನಮೋ ಎಂಬೆನಯ್ಯ''

ಆಚಾರಹೀನರಾದವರು ಯಾರೇ ಇರಲಿ ಅವರನ್ನು 'ಮೂಳ ಹೊಲೆಯರೆಂದು' ನುಡಿದು, 'ಅವರ ಮುಖವ ನೋಡಲಾಗದು' ಎಂದು ನಿಂದಿಸುತ್ತಾನೆ :

''ಬರಿದೆ ನಾ ಶಿವಭಕ್ತ ನೀ ಶಿವಭಕ್ತನೆಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು''
''ಬಡಿವಾರಕ್ಕೆ ಮಿಂದುಟ್ಟು ನಾ ಬ್ರಾಹ್ಮಣ ನೀ ಬ್ರಾಹ್ಮಣನೆಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು''
''ಬರಿದೆ ಶಾಸ್ತ್ರವನೋದಿ ಕಂಡಕಂಡಲ್ಲಿ ಬಗುಳಿ ಕಾಲಕ್ಷೇಪವ ಕಳೆವ
ಮೂಳ ಹೊಲೆಯರ ಮುಖವ ನೋಡಲಾಗದು''

ಹೀಗೆಯೇ ಜ್ಯೋತಿಷ್ಯ ಘನವೆಂದು ನಂಬುವವರಿಗೆ ''ನಮ್ಮ ಪ್ರಮಥಗಣಾ ಧೀಶ್ವರರ ಪ್ರಸಾದವಾಕ್ಯವೇ ಸರ್ವಸಿದ್ಧಿ'' ಎಂದು ತಿಳಿಸುತ್ತಾನೆ. ''ಜೀವಾತ್ಮವ ಶಿವಾತ್ಮದಲ್ಲಿ ಐಕ್ಯಮಾಡಿದವ ನಿಜವಾದ ಶಿವಯೋಗಿ'' ಎಂದು ನುಡಿಯುತ್ತಾನೆ. ಅಂಗದ ಮೇಲೆ ಲಿಂಗವನ್ನು ಕಟ್ಟಿಯೂ ಅನ್ಯದೈವಕ್ಕೆರಗುವವರನ್ನು ''ಬರಿದೆ ಲಿಂಗಮಂ ಕಟ್ಟಿ, ಅಂಗದಲ್ಲಿ ಧರಿಸಿ ಮಂಗದೈವಂಗಳಿಗೆ ಅಡ್ಡ ಬಿದ್ದ ಬಳಿಕ ನಿನಗೆ ಲಿಂಗಾಂಗ ದೇಹವೆಲ್ಲೈತೋ?'' ಎಂದು ಪ್ರಶ್ನಿಸುತ್ತಾನೆ. ''ಗುರು ಹಚ್ಚಿದ ತ್ರಿಪುಂಡ್ರವೇ ಬ್ರಹ್ಮಲಿಖಿತ'' ''ದೇವರು ಒಬ್ಬನೇ ಅಲ್ಲದೆ ಇಬ್ಬರೆಂದು ಬಗುಳು ವನ ಮುಖವ ನೋಡಲಾಗದು'' ಎಂದು ನಿಂದಿಸುತ್ತಾನೆ. ''ದೇವರ ಗುಡಿ ಯೆಂದು ದೇಗುಲವ ಪೊಕ್ಕು ನಮಸ್ಕಾರ ಮಾಡುವಂಗೆ ಹೊರಗೆ ಕಳೆದ ಪಾದ ರಕ್ಷೆಯೇ ಪ್ರಾಣಲಿಂಗ'' ಎಂದು ಚಪ್ಪಲಿ ಚಿತ್ತದವರನ್ನು ವಿಡಂಬಿಸುತ್ತಾನೆ.

ತಾತ್ವಿಕ ವಿಚಾರಗಳನ್ನು ಹೇಳುವಲ್ಲಿ, ನೀತಿ ನಿರೂಪಣೆ ಮಾಡುವಲ್ಲಿ ಸೂತ್ರಬದ್ಧವಾದ ಮಾತುಗಳನ್ನು ಬಳಸುತ್ತಾನೆ. ಅವುಗಳಲ್ಲಿ ವಚನಕಾರನ ಸಂಗ್ರಹಶಕ್ತಿ ಸೂಕ್ಷ್ಮದೃಷ್ಟಿಗಳು ಒಡೆದು ತೋರುತ್ತವೆ :

''ಅಂಗಲಿಂಗ ಸಂಬಂಧವಾದುದೇ ಷಟ್‌ಸ್ಥಲ' ''ಪರಾನ್ನ ಅಪೇಕ್ಷಿತ ನಾಗದೆ ಪರಸ್ತ್ರೀಯರ ನೋಡದೆ, ಪರರೊಡವೆಯ ಹಂಗು ಹಚ್ಚದೆ ಪರಾತ್ಪರ ವಾಗಿಪ್ಪುದೆ ಜಂಗಮಲಿಂಗ'' ''ಏಕದೈವವ ಪೂಜಿಸುವವನೆ ಭಕ್ತ; ಹಲವು ದೈವಕ್ಕೆ ಹರಿವವನೆ ಭವಿ'' ''ಸ್ಥಾಪ್ಯಲಿಂಗವ ಪೂಜೆಯ ಮಾಡುವುದೇ ಶೈವ; ಗುರುಕೊಟ್ಟ ಇಷ್ಟಲಿಂಗವ ಪೂಜೆಯ ಮಾಡುವುದೇ ವೀರಶೈವ'' ''ಪರಸ್ತ್ರೀಯರ ಮುಟ್ಟ ದಿರ್ಪುದೇ ಶೀಲ; ಪರದ್ರವ್ಯವ ಅಪಹರಿಸದಿರುವುದೇ ಆಚಾರ; ಪರನಿಂದೆಯ ಕರ್ಣದಿಂ ಕೇಳದಿರ್ಪುದೇ ನಿತ್ಯಪ್ರಸಾದತ್ವ; ಪರರಂ ದೂಷಿಸದಿರ್ಪುದೇ ಬ್ರಹ್ಮತ್ವ''.

ಹೀಗೆ ಕೂಡಲಸಂಗಮೇಶ್ವರನ ವಚನಗಳಲ್ಲಿ ''ನೀತಿ, ತೀಕ್ಷ್ಣ ವ್ಯಂಗ್ಯ, ವಿಡಂಬನೆಗಳಿದ್ದು, ಅವುಗಳಲ್ಲಿ ಅವನ ನಿಷ್ಠುರ ವಿಮರ್ಶಾದೃಷ್ಟಿ, ಸತ್ಯಪರವಾದ ವೈಚಾರಿಕ ದೃಷ್ಟಿ ಎದ್ದುಕಾಣುತ್ತವೆ. ಅವನಿಗೆ ಸ್ವಮತ ಅನ್ಯಮತವೆಂಬ ಭೇದವಿಲ್ಲ; ಶಿವಭಕ್ತ ಬ್ರಾಹ್ಮಣ, ಶೀಲವಂತ, ಯತಿ, ಷಟ್‌ಸ್ಥಲಬ್ರಹ್ಮಿ, ಜೋತಿಷ್ಯವಾದಿ, ಶೈವ, ವೀರಶೈವ ಶಾಸ್ತ್ರವಾದಿ, ಲಿಂಗಾಂಗಿ, ಬ್ರಹ್ಮಲಿಖಿತವಾದಿ–ಹೀಗೆ ಎಲ್ಲರನ್ನೂ ಸಮಾನವಾಗಿ ತರಾಟೆಗೆ ತೆಗೆದುಕೊಳ್ಳುತ್ತಾನೆ. ಯಾವ ಸಂಕೋಚ, ಎಗ್ಗುಗಳಿಲ್ಲದೆ ಎಲ್ಲರ ಮೌಢ್ಯ, ಸೋಗು, ಅಹಂಕಾರ, ಭ್ರಮೆಗಳನ್ನು ತನ್ನ ಮಾತಿನಿಂದ ಬಯಲು ಮಾಡುತ್ತಾನೆ. ವೀರಶೈವರೂ ಸೇರಿದಂತೆ ಹಲವು ಬಗೆಯ ಧಾರ್ಮಿಕಪಥದ ಜನರಿದ್ದ ಇವನ ಸಮಕಾಲೀನ ಸಮಾಜ

ಹೇಗೆ ಟೊಳ್ಳಾಗುತ್ತ ನಡೆದಿತ್ತು; ಅದರಲ್ಲಿ ಸುಧಾರಣೆ ತರಲು ತನ್ನ ನಿಷ್ಠುರ ವಿಮರ್ಶೆಯ ಮೂಲಕ ತಾನು ಹೇಗೆ ಪ್ರಯತ್ನಿಸಿದ್ದ ಎನ್ನುವುದರ ಚಿತ್ರ ಈ ವಚನಗಳ ಅಭ್ಯಾಸದಿಂದ ನಮ್ಮ ಒಳಗಣ್ಣಿನಲ್ಲಿ ಮೂಡಬಹುದು. ಕೆಲವೆಡೆ ಅವನ ಭಾಷೆ ತೀರಾ ಒರಟು, ಕೀಳು ಎಂಬಂತೆ, ವ್ಯಾಕರಣ ನಿಯಮಕ್ಕೂ ವ್ಯತಿರಿಕ್ತ ಎಂಬಂತೆ ಕಂಡು ಬರುವುದಾದರೂ ಆ ಮಾತುಗಳ ಹಿಂದೆ ಲೋಕಕಲ್ಯಾಣಕ್ಕೆ ಹಂಬಲಿಸುವ ಕೂಡಲಸಂಗಮೇಶ್ವರನ ಹೃದಯ ಅರಿವಿಗೆ ಬಾರದಿರದು. ಒಟ್ಟಿನಲ್ಲಿ ಕೂಡಲಸಂಗಮೇಶ್ವರನ ವಚನಗಳು ಆತನೊಬ್ಬ ವಿಶಿಷ್ಟ ವಚನಕಾರ ಎಂಬು ದನ್ನು ಶ್ರುತಪಡಿಸುತ್ತವೆ."[೧]

## ಗಣದಾಸಿ ವೀರಣ್ಣ :

ಈತನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಯಾವ ಸಂಗತಿಗಳೂ ದೊರಕುವುದಿಲ್ಲ. ಜೀವಿತ ಕಾಲದ ಬಗೆಗೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ. ಪಾಲ್ಕುರಿಕೆ ಸೋಮನಾಥನ (೧೧೯೦) ಗಣಸಹಸ್ರ ನಾಮಾವಳಿಯಲ್ಲಿ ಈ ಹೆಸರಿನ ಒಬ್ಬ ವ್ಯಕ್ತಿಯ ಉಲ್ಲೇಖ ಇರುವುದನ್ನು ಗಮನಿಸಿ ಕವಿಚರಿತೆಕಾರರು ಈತನು ಬಸವ ಸಮಕಾಲೀನನಾಗಿ ಸು. ೧೧೬೦ರಲ್ಲಿ ಇದ್ದವನಾಗಿರಬೇಕೆಂದು ಊಹಿಸಿದ್ದಾರೆ. ಮೈಸೂರ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇದನ್ನು ಅಂಗೀಕರಿಸಲಾಗಿದೆ. ಆದರೆ ಬಿ. ಶಿವಮೂರ್ತಿ ಶಾಸ್ತ್ರಿ ಮತ್ತು ಎಸ್. ಶಿವಣ್ಣ ಅವರು ಇದನ್ನು ಒಪ್ಪದೆ ಈತನ ಕಾಲ ಸು. ೧೭ನೆಯ ಶತಮಾನ ಎಂದು ನಿರ್ಧರಿಸಿದ್ದಾರೆ. ಇದು ಸತ್ಯವೆನಿಸುತ್ತದೆ. ಈತ ಬಸವಾದಿಗಳ ಸಮಕಾಲೀನನಲ್ಲ ಎನ್ನುವುದಕ್ಕೆ ಈತನ ವಚನಗಳಲ್ಲಿಯೇ ಅಳವಟ್ಟ ಈ ಕೆಳಗಿನ ಅಂಶಗಳು ಸಾಕ್ಷಿ ನುಡಿಯುತ್ತವೆ :

ಒಂದು ವಚನದಲ್ಲಿ (೩೨) 'ಬಸವೇಶ್ವರಪುರಾಣ'ದ ಉಲ್ಲೇಖ ಬರುತ್ತದೆ. ಇದು ಭೀಮಕವಿಯ (೧೩೬೯) ಬಸವಪುರಾಣವಾಗಿರಬೇಕು. ಜೀನಸಿನಧಾನ್ಯ (೧೦), ಚೆನ್ನಂಗಿ ಬೇಳೆ (೨೬), ರೊಕ್ಕ (೨೭), ಮುಂಡಾಸ (೨೪) ಮೊದಲಾದ ಪದಗಳು ವಚನ ಗಳಲ್ಲಿ ಬಳಕೆಯಾಗಿವೆ. ಇವು ೧೫ನೆಯ ಶತಮಾನದಿಂದ ಈಚೆಗೆ ಪ್ರಚಲಿತವಾದವು ಗಳಾಗಿವೆ. ಗುರುಶಿಷ್ಯ ಸಂವಾದರೂಪದಲ್ಲಿ ವಚನಗಳನ್ನು ರಚಿಸಲಾಗಿದೆ. ಈ ತಂತ್ರ ಹೆಚ್ಚಾಗಿ ಶೂನ್ಯಸಂಪಾದನೆಗಳಿಂದ ಜಾರಿಗೆ ಬಂದುದಾಗಿದೆ. ಒಂದು ವಚನದಲ್ಲಿ (೧೬) "ನೂತನ ಗಣಂಗಳೆಲ್ಲರನು ಎನ್ನ ಇಷ್ಟಲಿಂಗದಲ್ಲಿ ತೋರಿದಾತ ನಮ್ಮ ಶಾಂತಕೂಡಲಸಂಗಮದೇವ" ಎಂದು ಹೇಳಿದ್ದಾನೆ. ನೂತನ ಗಣಂಗಳೆಂದರೆ ಬಸವಾದಿ ಪ್ರಮಥರೇ ಆಗಿದ್ದಾರೆ. ಇದಲ್ಲದೆ ೧೨ನೆಯ ಶತಮಾನದ ಅನೇಕ ಶರಣರನ್ನು ಭಕ್ತಿ ಗೌರವಗಳಿಂದ ನೆನೆದಿರುವುದು; ಅವರ ವಚನಗಳ ದಟ್ಟವಾದ ಪ್ರಭಾವ ಕ್ಕೊಳಗಾಗಿರುವುದು; ಅವರ ವಚನಶಿಲ್ಪಕ್ಕಿಂತ ಭಿನ್ನವಾದ, ಬಸವೋತ್ತರಯುಗದ ವಚನಕಾರರಲ್ಲಿ ಮಾತ್ರ ವಿಶೇಷವಾಗಿ ತೋರುವ ದೀರ್ಘತೆ, ಶಿಥಿಲತೆ, ಗದ್ಯಗುಣಗಳು ವಚನಗಳಲ್ಲಿ ಕಾಣುವುದು; ತತ್ವವಿವೇಚನೆಗೆ ಹೆಚ್ಚು ಒತ್ತು ಕೊಟ್ಟಿರುವುದು; ಈತನ

---

೧. ಸತ್ಯಶುದ್ಧಕಾಯ : ೩-೪, ೧೯೯೭- ಪು. ೧೪೭

ವಚನಗಳು ೧೨ನೆಯ ಶತಮಾನದ ಶರಣರ ವಚನಗಳ ಜೊತೆ ಯಾವುದೇ ಸ್ಥಲಕಟ್ಟಿನ ಕೃತಿಯಲ್ಲಿ ಸೇರದೇ ಇರುವುದು– ಇವೆಲ್ಲ ಮೇಲಿನ ಅಭಿಪ್ರಾಯಕ್ಕೆ ಪೋಷಕವಾದ ಅಂಶಗಳೆನಿಸಿವೆ. ೧೭೦೦ ರ ಸುಮಾರಿನಲ್ಲಿದ್ದ ಸಿದ್ಧನಂಜೇಶ ಈತನನ್ನು ತನ್ನ ಗುರುರಾಜ ಚಾರಿತ್ರದಲ್ಲಿ ಸ್ಮರಿಸಿದ್ದಾನೆ.

ಗಣದಾಸಿ ವೀರಣ್ಣ ತಾನು ಮರ್ತ್ಯಕ್ಕೆ ಬಂದ ಕಾರಣವನ್ನು, ತನಗೆ 'ಗಣದಾಸಿ ವೀರಣ್ಣ' ಎಂಬ ಹೆಸರು ಹೇಗೆ ಬಂದಿತೆಂಬುದನ್ನು ಕೆಳಗಿನ ವಚನದಲ್ಲಿ (೧೬) ಹೀಗೆ ತಿಳಿಸುತ್ತಾನೆ:

''ಆದಿ ಮಧ್ಯ ಅವಸಾನ ಹೇಗೆಂದಡೆ:
ಗುರುವಿನ ಕರಕಮಲದಲ್ಲಿ ಹುಟ್ಟಿದುದೆ ಆದಿ.
ಗುರುಲಿಂಗಜಂಗಮ ಪ್ರಸಾದವ ಕೊಂಬುದೇ ಮಧ್ಯ.
ಜಂಗಮದಲ್ಲಿ ಲಯವಾದುದೇ ಅವಸಾನ.
ಇದ ತಿಳಿದು ಎಲ್ಲ ಗಣಂಗಳು ಎನಗೆ, ಮರ್ತ್ಯಲೋಕಕ್ಕೆ ಹೋಗಿ
ಭಕ್ತಗಣಂಗಳ ಕೈಯಲ್ಲಿ ಹೊಯಿಸಿಕೊಂಡು ಬೈಸಿಕೊಂಡು
ಅವರೊಕ್ಕು ಮಿಕ್ಕ ಪ್ರಸಾದವ ಕೊಂಡು ಬಾಯೆಂದು
ಆಜ್ಞೆಯನ್ನಿತ್ತುದ ಭೇದವ ಗುರು ಅರುಹಿದನಾಗಿ
ಗಣದಾಸಿ ವೀರಣ್ಣನೆಂಬ ನಾಮವಾಯಿತ್ತೆನಗೆ.
ಸತ್ಯಣ್ಣನ ಮನೆಯ ಬಂಟ ನಾನಯ್ಯ.
ನನ್ನನ್ನು ತಮ್ಮ ಗಣಂಗಳು ಸಲುಹಿ ಕೃತಾರ್ಥನ ಮಾಡಿದರಯ್ಯ.
ಅವರಿಗೇನೆಂದುಪಮಿಸುವೆನಯ್ಯ.
ಅವರು ಮಹಾದೇವನಲ್ಲದೆ ಬೇರುಂಟೆ ?
ಅವರ ಮನೆಯ ದಾಸಾನುದಾಸ ನಾನು ಅವರ ಮನೆಯ ಹೂವಾಡಿಗನು.
ನೂತನ ಗಣಂಗಳೆಲ್ಲರನು ಎನ್ನ ಇಷ್ಟಲಿಂಗದೊಳಗೆ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ''.

ಈತನ ೪೦ ವಚನಗಳು ದೊರೆತಿವೆ.[೧೦] ಇವು 'ಗಣದಾಸಿ ವೀರಣ್ಣನ ವಚನಗಳು' ಎಂದು ಪ್ರಸಿದ್ಧವಾಗಿವೆ– ಆದರೆ ಹಸ್ತಪ್ರತಿಗಳಲ್ಲಿ ಇವುಗಳಿಗೆ ''ಗಣದಾಸಿ ವೀರಣಯ್ಯನವರು ನಿರೂಪಿಸಿದ ದೃಢವಿಡಿದು ಆಚರಿಸಿದ ಮಹಾಜ್ಞಾನದನುಭಾವದ ವಚನ'' ''ಗಣದಾಸಿ ವೀರಣ್ಣಗಳ ಜ್ಞಾನಸಾರಾಯದ ವಚನ'' ಎಂದು ಕರೆದಿರುವುದು ಕಂಡುಬರುತ್ತದೆ. ಇದರಿಂದ ವೀರಣ್ಣ ತನ್ನ ಕೃತಿಗೆ ''ಮಹಾಜ್ಞಾನದನುಭಾವದ ವಚನ''

---

೧೦. ''ಮೂವತ್ತಾರು ಲಿಂಗದ ಮುಖದಿಂದ ಮೂವತ್ತಾರು ವಚನವ ಓದಿದವರು ಕೇಳಿದವರು ಸದ್ಯೋನ್ಮುಕ್ತರಪ್ಪುದು ತಪ್ಪದು'' –ಎಂಬ ಕೊನೆಯ ವಚನದ ಹೇಳಿಕೆಯಿಂದ ಈತನ ವಚನ ಸಂಖ್ಯೆ ೩೬ ಎಂದು ಸ್ಪಷ್ಟವಾಗುತ್ತದೆ. ಆದರೆ ಹೆಚ್ಚು ಸಂಖ್ಯೆಯ ಹಸ್ತಪ್ರತಿಗಳಲ್ಲಿ ೩೭ ವಚನಗಳಿವೆ. ಒಂದು ಹಸ್ತಪ್ರತಿಯಲ್ಲಿ ೪೦ ವಚನಗಳಿವೆ. 'ಗಣದಾಸಿ ವೀರಣ್ಣಯ್ಯಗಳ ಛತ್ತೀಸ ವಚನ' ಎಂಬ ಹೆಸರೂ ಸಿಗುತ್ತದೆ. (ನೋಡಿ: ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಸೂಚಿ–೯ ನಂ. ೬೬)

''ಜ್ಞಾನ ಸಾರಾಯದ ವಚನ'' ಎಂದು ಹೆಸರಿಟ್ಟಂತೆ ತೋರುತ್ತದೆ. ಇದಕ್ಕನುಗುಣವಾಗಿ ವೀರಶೈವ ತತ್ವಾನುಭವ ಈ ವಚನಗಳಲ್ಲಿ ಕೆನೆಗಟ್ಟಿ ನಿಂತಿದೆ.

''ಅಷ್ಟಾವರಣವೆ ಅಂಗ, ಪಂಚಾಚಾರವೆ ಪ್ರಾಣ'' ಎಂದು ನಂಬಿದ ಈತನ ವಚನಗಳಲ್ಲಿ ಈ ಎರಡೂ ತತ್ವಗಳ ವ್ಯವಸ್ಥಿತ ವಿವೇಚನೆಗೆ ಹೆಚ್ಚಿನ ಸ್ಥಾನ ಸಂದಿದೆ. ಜೊತೆಗೆ ಸೃಷ್ಟಿ, ಸಹಜಜ್ಞಾನ, ಜೀವನ್ಮುಕ್ತಿ, ಗುರುವಿನ ಮಹಿಮೆ, ಪರಬ್ರಹ್ಮ ಸಾಧನೆ, ಮಹಾಲಿಂಗದ ಅರ್ಚನಾ ವಿಧಾನ, ಶರಣಸಹವಾಸಫಲ, ಲಿಂಗಸಾಧನೆ, ಜೀವಾತ್ಮ–ಅಂತರಾತ್ಮ–ಪರಮಾತ್ಮ ಸಾಧಕರ ವಿಚಾರ, ಲಿಂಗಾಂಗಸಾಮರಸ್ಯದ ಸ್ವರೂಪ, ಭಕ್ತನ ಪರೀಕ್ಷೆ, ಗುರುಭಕ್ತನ ನಡತೆ, ಪ್ರಸಾದ–ಪ್ರಸಾದಿ ವಿಚಾರ, ಭಕ್ತಗಣಂಗಳಿಗೆ ನಮಸ್ಕರಿಸುವ ಕ್ರಮ, ಓಂಕಾರಪ್ರಣವದ ರೀತಿ, ಪಾದಪೂಜೆಯ ವಿಧಾನ, ಧ್ಯಾನ ಧಾರಣ ಸಮಾಧಿಯೋಗ ವಿಚಾರಗಳನ್ನು ಸರಳವಾಗಿ ನಿರೂಪಿಸಲಾಗಿದೆ.

ಬಸವಾದಿ ಶರಣರ ಬಗೆಗೆ ವೀರಣ್ಣನಿಗೆ ಅಪಾರ ಭಕ್ತಿ. ಒಂದು ದೀರ್ಘವಚನದಲ್ಲಿ ಬಸವಣ್ಣ ತನ್ನ ಸರ್ವಾಂಗದಲ್ಲಿ ಮಂತ್ರಮೂರ್ತಿಯಾಗಿ ನಿಂತ ರೀತಿಯನ್ನು ಬಣ್ಣಿಸಿದರೆ, ಇನ್ನೊಂದು ವಚನದಲ್ಲಿ ನೀಲಲೋಚನೆ, ವೇಮನಾರಾಧ್ಯ, ಬಿಬ್ಬಿಬಾಚಯ್ಯ, ಓಹಿಲಯ್ಯ, ಚಾರಮರಾಯ, ಅಜಗಣ್ಣ, ಮಡಿವಾಳಯ್ಯ, ಚನ್ನಬಸವಣ್ಣ ಸಿದ್ಧರಾಮಯ್ಯ, ಪ್ರಭುದೇವ ಮೊದಲಾದವರು ಅಷ್ಟಾವರಣ ಷಟ್‌ಸ್ಥಲಸಾಧಕರೆಂದು ತಿಳಿಸುತ್ತಾನೆ. ಗೊಲ್ಲಾಳ, ಬಳ್ಳೇಶ ಮಲ್ಲಯ್ಯ, ನಂಬೆಣ್ಣ, ಕೆಂಬಾವಿ ಭೋಗಣ್ಣ ನೀಲಲೋಚನೆಯಮ್ಮ– ಇವರು ವಿಶ್ವಾಸದಿಂದ ಲಿಂಗದರ್ಶನ ಮಾಡಿದ ಶ್ರೇಷ್ಠರೆಂದು ನೆನೆಯುತ್ತಾನೆ.

ವೀರಣ್ಣ ಬಸವಾದಿಗಳ ಪ್ರಭಾವವನ್ನು ವಿಶೇಷವಾಗಿ ಸ್ವೀಕರಿಸಿದ್ದಾನೆ. ತತ್ವ ನಿರೂಪಣೆಯಲ್ಲದೆ, ಉಪಮೆ, ದೃಷ್ಟಾಂತ ಬಳಕೆಯಲ್ಲಿ, ಅಭಿವ್ಯಕ್ತಿಯ ವಿಧಾನಗಳಲ್ಲಿ ಅವರನ್ನು ಮುಕ್ತವಾಗಿ ಅನುಕರಿಸಿದ್ದಾನೆ. 'ಎನ್ನ ತಪ್ಪಿಂಗೇನೂ ಎಣೆಯಿಲ್ಲ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ', 'ಮೇರುಗುಣವನರಸುವುದೆ ಕಾಗೆಯಲ್ಲಿ, ಪರುಷಗುಣವನರಸುವುದೆ ಕಬ್ಬುನದಲ್ಲಿ', 'ನೀವು ಹಾಲಲದ್ದಿ, ನೀರಲದ್ದಿ', 'ಕರಿ ಕನ್ನಡಿಯೊಳಡಗಿದಂತೆ', 'ಒಂದಗುಳ ಕಂಡರೆ ತನ್ನ ಬಳಗನೆಲ್ಲವ ಕಾಗೆ ಕರೆಯದೆ ?' ಎಂಬ ವಾಕ್ಯಗಳು ನೇರವಾಗಿ ಬಸವಣ್ಣನ ವಚನಗಳಿಂದ ಎತ್ತಿಕೊಂಡುವಾಗಿವೆ.

ಪ್ರಭಾವಕ್ಕೆ ಒಳಗಾಗಿಯೂ ವೀರಣ್ಣ ಹಲವು ವೈಶಿಷ್ಟ್ಯಗಳನ್ನು ಮೆರೆದಿದ್ದಾನೆ. ನಿರೂಪಣೆಯಲ್ಲಿ ಸಂಭಾಷಣಾ ತಂತ್ರವನ್ನು ಅಳವಡಿಸಿಕೊಂಡಿರುವುದು, ತಾತ್ವಿಕ ವಿಷಯಗಳನ್ನು ಹೆಚ್ಚು ಸರಳವಾಗಿ ಸಾಮಾನ್ಯರಿಗೂ ತಿಳಿಯುವಂತೆ ಹೇಳಿದುದು, ತತ್ವ ಬೋಧೆಯಲ್ಲಿ ಕಥನರೀತಿಯನ್ನು ಅನುಸರಿಸಿದುದು, ಹೇಳುವ ಪ್ರತಿ ವಿಷಯಕ್ಕೂ ಸಂಸ್ಕೃತ ಪ್ರಮಾಣಗಳನ್ನು ಕೊಟ್ಟುದು, ಸಮಾಜ ವಿಮರ್ಶೆಯಲ್ಲಿ ಕಟೂಕ್ತಿಗಳನ್ನು ಬಳಸದೆ ನಯವಾದ ಮಾತುಗಳಲ್ಲಿ ನೀತಿಬೋಧೆ ಮಾಡಿದುದು. ಇವೇ ಮೊದಲಾದುವು ಈತನ ವಚನಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ.

'ಕುಲ ಎಷ್ಟು ಎಂದರೆ–ಎರಡು ಕುಲ. ಅವಾವೆಂದಡೆ–ಭವಿ ಒಂದು ಕುಲ, ಭಕ್ತ ಒಂದು ಕುಲ' ಇದು ಈತನ ಕುಲಾಚಾರ ವಿಚಾರ. 'ದಿನದಿನದ ಕಾಯಕವ ದಿನದಿನಕೆ ಸರಿಮಾಡಿ, ಇಂದಿನ ಕಾಸು ಉದಯಕ್ಕೆ ತಂಗುಳೆಂಬರು, ನಾಳಿನ ಚಿಂತೆ ನನಗೇಕೆಂಬರು' ಇದು ಕಾಯಕದ ರೀತಿ, ''ಗುರುಭಕ್ತರು ವಾರ ತಿಥಿ ನಕ್ಷತ್ರ ವ್ಯತೀಪಾತ ಯೋಗ ಕರಣ ಶುಭಾಶುಭವ ನೋಡಲಾಗದು, ಕೇಳಲಾಗದು'', 'ಹಬ್ಬ ಮಾಡುವಾಗ ಭಿಕ್ಷಕ್ಕೆ ಬಂದಡೆ ತಂಗಳ ನೀಡಿ ಕಳಿಸುವವರಿಗೆ ಎಲ್ಲಿಹುದೋ ಪರುಷ ?' ಇದು ನೇರ ನೀತಿಗೆ ಮಾದರಿ. 'ಶರಣಸತಿ ಲಿಂಗಪತಿಯೆಂಬ ಭೇದವ ತಿಳಿದಡೆ ಜೀವನ್ಮುಕ್ತಿ' 'ಶಿವಭಕ್ತನಿದ್ದುದೇ ಕೈಲಾಸ' ಇದು ತತ್ವದ ತಿಳಿಯಾದ ಬೋಧೆ.

ಹೀಗೆ ಗಣದಾಸಿ ವೀರಣ್ಣ ಸುಲಭವಾದ ಭಾಷೆಯಲ್ಲಿ, ತೀರ ಸರಳವಾಗಿ ವೀರಶೈವ ತತ್ವಾನುಭವವನ್ನು ಬೋಧಿಸಿ, ಸಾಮಾನ್ಯ ಭಕ್ತರಿಗೂ ಅದನ್ನು ತಲುಪಿಸುವ ಕಾರ್ಯ ಮಾಡಿದುದು ಒಂದು ವಿಶೇಷವೆನಿಸಿದೆ.

**ಗುರುಸಿದ್ಧ ದೇವರು :**

ಬಹುಕಾಲ ವಿದ್ವಾಂಸರ ದೃಷ್ಟಿಯಿಂದ ದೂರ ಉಳಿದು, 'ಚಿದೈಶ್ವರ್ಯ ಚಿದಾಭರಣ' ಕೃತಿಯ ಪ್ರಕಟನೆಯ ಮೂಲಕ ಪ್ರಕಾಶಕ್ಕೆ ಬಂದ ಗುರುಸಿದ್ಧದೇವ ಒಬ್ಬ ಸಂಕಲನಕಾರ–ವಚನಕಾರ–ಅನುಭಾವಿ. ಗುರುಸಿದ್ಧಶರಣ, ಗುರುಸಿದ್ಧೇಶ, ಗುರು ಸಿದ್ಧೇಶ್ವರಸ್ವಾಮಿ, ಗುರುಸಿದ್ಧಲಿಂಗ ಎಂದು ಕರೆಯಿಸಿಕೊಂಡ ಈತ, ಶಿಷ್ಯ ಬಸವಲಿಂಗ ದೇವನ ವಚನಗಳಲ್ಲಿ 'ಶ್ರೀಗುರುಸಿದ್ಧಲಿಂಗೇಶ್ವರ' ಎಂದು ಅಂಕಿತರೂಪದಲ್ಲಿಯೂ ಗೌರವಕ್ಕೆ ಪಾತ್ರನಾಗಿದ್ದಾನೆ. 'ಶ್ರೀಶೈಲ ಪರ್ವತಕ್ಕೆ ನೈರುತ್ಯಭಾಗದಲ್ಲಿನ ಕುಮಾರ ಪರ್ವತದ ಉತ್ತರ ದಿಕ್ಕಿನಲ್ಲಿರುವ ಸಾಗರಗವಿಯ ನಾಗರಗವಿಸಿಂಹಾಸನದ' ಅಧಿಪತಿ ಯಾದ ಈತ ಚಿದೈಶ್ವರ್ಯ ಚಿದಾಭರಣ ಎಂಬ ವಚನ ಸಂಕಲನವನ್ನು ಸಂಯೋಜಿಸಿದ್ದಾನೆ. ಅದರಲ್ಲಿ ಉಕ್ತವಾದ (ವ. ೩೯೨) ಈತನ ಗುರುಪರಂಪರೆ ಹೀಗಿದೆ :

೧. ಅನಾದಿಗಣೇಶ್ವರ, ೨. ಆದಿಗಣೇಶ್ವರ, ೩. ನಿರ್ಮಾಯಗಣೇಶ್ವರ, ೪. ನಿರಂಜನ ಗಣೇಶ್ವರ, ೫. ಜ್ಞಾನಾನಂದಗಣೇಶ್ವರ, ೬. ಆತ್ಮಗಣೇಶ್ವರ, ೭. ಅಧ್ಯಾತ್ಮಗಣೇಶ್ವರ, ೮. ರುದ್ರಗಣೇಶ್ವರ, ೯. ಬಸವಪ್ರಭುದೇವರು, ೧೦. ಆದಿಲಿಂಗ ದೇವರು, ೧೧. ಚನ್ನವೀರೇಶ್ವರದೇವರು, ೧೨. ಹರದನಹಳ್ಳಿ ಗೋಸಲದೇವರು, ೧೩. ಶಂಕರದೇವರು, ೧೪. ದಿವ್ಯಲಿಂಗದೇವರು, ೧೫. ಚೆನ್ನಬಸವೇಶ್ವರದೇವರು, ೧೬. ತೋಂಟದ ಸಿದ್ಧೇಶ್ವರ ಸ್ವಾಮಿಗಳು, ೧೭. ಮರುಳಸಿದ್ಧೇಶ್ವರಸ್ವಾಮಿ, ೧೮. ರೇವಣಸಿದ್ಧೇಶ್ವರಸ್ವಾಮಿ ೧೯. ಶಿವಲಿಂಗೇಶ್ವರಸ್ವಾಮಿ, ೨೦. ನಿರಂಜನೇಶ್ವರಸ್ವಾಮಿ, ೨೧. ಮರಿಬಸಲಿಂಗೇಶ್ವರಸ್ವಾಮಿ, ೨೨. ಸ್ವತಂತ್ರ ಸಿದ್ಧಲಿಂಗೇಶ್ವರಸ್ವಾಮಿ, ೨೩. ಚೆನ್ನ ಮಲ್ಲೇಶ್ವರಸ್ವಾಮಿ, ೨೪. ಚನ್ನಂಜೇಶ್ವರಸ್ವಾಮಿ, ೨೫. ಗುರುಶಾಂತೇಶ್ವರಸ್ವಾಮಿ. ೨೬. ಶಾಂತಮಲ್ಲಸ್ವಾಮಿ, ೨೭. ಗುರುಸಿದ್ಧಸ್ವಾಮಿ.

ಇದರ ಪ್ರಕಾರ ಗುರುಸಿದ್ಧದೇವ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನೆಂದು ವೇದ್ಯವಾಗುತ್ತದೆ. ಇವನ ನೇರವಾದ ಗುರು ಶಾಂತಮಲ್ಲಸ್ವಾಮಿ.

ಇವರು ೧೭ನೆಯ ಶತಮಾನದ ಉತ್ತರಾರ್ಧದಲ್ಲಿದ್ದರೆಂದು ತಿಳಿದುಬರುವುದರಿಂದ, ಅವರ ಶಿಷ್ಯನಾದ ಗುರುಸಿದ್ಧದೇವನೂ ಅದೇ ಕಾಲದವನೆನಿಸುತ್ತಾನೆ.

'ಚಿದೈಶ್ವರ್ಯ ಚಿದಾಭರಣ' ಒಂದು ವಚನ ಸಂಕಲನ. ಇದನ್ನು ಸಂಯೋಜಿಸಿ ಉಪದೇಶಿಸಿದವನು ಗುರುಸಿದ್ಧದೇವನಾದರೆ, ಬರೆದುಕೊಂಡವನು ಇವನ ಶಿಷ್ಯನಾದ ಬಸವಲಿಂಗದೇವ, ಇದಕ್ಕೆ ನಾಮಕರಣ ಮಾಡಿದವರು ಗುರುವಾದ ಶಾಂತಮಲ್ಲ ಸ್ವಾಮಿಗಳು. ಉಪದೇಶ ಕೇಳಿ, ಕೃತಿಯ ಹೆಸರಿಗೆ ವಿವರಣೆ ಬರೆದವನು ಸಂಗನ ಬಸವೇಶ್ವರ. ಹೀಗಾಗಿ ಇದು ನಾಲ್ಕು ಜನ ಅನುಭಾವಿಗಳಿಂದ ರೂಪಿತವಾದ ಒಂದು ಸಂಯುಕ್ತ ಪ್ರಯತ್ನದ ಫಲವೆನಿಸಿದ್ದರೂ ಮೂಲಸಂಯೋಜಕ ಗುರುಸಿದ್ಧ ದೇವನಾದುದರಿಂದ ಅವನ ಹೆಸರಿನಲ್ಲಿರುವುದು ಸಹಜವಾಗಿದೆ.

ಈ ಕೃತಿಯಲ್ಲಿ ಇತರ ಶರಣರ ವಚನಗಳ ಜೊತೆಗೆ ಗುರುಸಿದ್ಧದೇವ ಸ್ವತಃ ತಾನು ಬರೆದ ೧೦೧ ವಚನಗಳನ್ನೂ[೧೧] ಅಳವಡಿಸಿದ್ದಾನೆ. 'ಸಂಗನಬಸವೇಶ್ವರ' ಎಂಬ ಅಂಕಿತ ವನ್ನು ಹೊಂದಿದ ಇವುಗಳನ್ನು ಈ ಮೊದಲು 'ಸಂಗನಬಸವೇಶ್ವರ ವಚನಗಳು' ಎಂಬ ಹೆಸರಿನಲ್ಲಿ ಡಾ. ಹಳಕಟ್ಟಿಯವರು ಪ್ರಕಟಿಸಿದ್ದ ಕಾರಣ, ಇವುಗಳ ಕರ್ತೃ ಸಂಗನಬಸವೇಶ್ವರನಿರಬೇಕೆಂದು ಇಲ್ಲಿಯ ವರೆಗೆ ಭಾವಿಸಲಾಗಿತ್ತು. ಆದರೆ ಈಗ ಇವುಗಳ ನಿಜಕರ್ತೃ ಗುರುಸಿದ್ಧದೇವ ಎಂಬುದು ಸ್ಪಷ್ಟವಾಗಿದೆ. 'ಸಂಗನಬಸವೇಶ್ವರ' ಎಂಬುದು ಗುರುಸಿದ್ಧದೇವನ ಶಿಷ್ಯನ ಹೆಸರು. ಅವನನ್ನು ಸಂಬೋಧಿಸಿಯೇ ಎಲ್ಲ ವಚನಗಳು ಹೇಳಲ್ಪಟ್ಟಿವೆ. ಹೀಗೆ ಶಿಷ್ಯನ ಹೆಸರನ್ನು ಅಂಕಿತವಾಗಿ ಬಳಸಿಕೊಂಡುದು ವಚನಸಾಹಿತ್ಯದ ಇತಿಹಾಸದಲ್ಲಿಯೇ ಒಂದು ಅಪೂರ್ವ ಸಂಗತಿ ಎನಿಸಿದೆ.

ತತ್ವನಿರೂಪಣೆಯೇ ಎಲ್ಲ ವಚನಗಳ ಮುಖ್ಯ ಉದ್ದೇಶ. ಗುರು ಶಿಷ್ಯನಿಗೆ ಬೋಧಿಸಿದ ರೀತಿಯಲ್ಲಿರುವುದು ಇವುಗಳ ವಿಶೇಷ. ವೀರಶೈವದ ಪ್ರಮುಖ ತತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಸದ್ಭಕ್ತಿ, ಸದ್ಭಕ್ತನ ಲಕ್ಷಣ, ಕಿಂಕರತ್ವ, ಭೃತ್ಯತ್ವ, ಅರ್ಚನ, ಅರ್ಪಣ, ದೀಕ್ಷೆ, ಪ್ರವೃತ್ತಿ ನಿವೃತ್ತಿ ಶಿವಯೋಗ, ಅಂಗ–ಲಿಂಗ–ಸ್ಥಲ–ಚಕ್ರ–ಪ್ರಣವ–ಇತ್ಯಾದಿಗಳ ಸಂಬಂಧ, ಆಚರಣೆ ಸಂಬಂಧದ ನಿಲುಕಡೆ– ಈ ಮುಂತಾದ ವಿಷಯಗಳೆಲ್ಲ ಇಲ್ಲಿ ವಿವರಿಸಲ್ಪಟ್ಟಿವೆ. ಈ ತತ್ವಗಳನ್ನು ಗುರುವಿನ ಬೋಧೆಯ ಮುಖಾಂತರ ತಿಳಿದುಕೊಂಡು ವೀರಶೈವಾಚಾರಮಾರ್ಗದಲ್ಲಿ ನಡೆದ ಸದ್ಭಕ್ತನು ಪಂಚಸೂತಕ–ಪಾತಕಗಳನ್ನು ಹೊದ್ದಲಾಗದು, ಶೈವಮಾರ್ಗವನ್ನು ಮೆಟ್ಟಲಾಗದು, ವ್ರತಹೀನರ ಬೆರೆಸಲಾಗದು, ಕ್ಷುದ್ರ ದೈವಾರಾಧನೆ, ಭವಿಸಂಗ ಮಾಡಲಾಗದು. ದುಸ್ಸಂಗ ತ್ಯಜಿಸಬೇಕು. ಇಂದ್ರಿಯದ ದುರ್ವರ್ತನೆಯನ್ನು ತಡೆಯಬೇಕು–ಇದು ಇಲ್ಲಿನ ತತ್ವಬೋಧೆಯ ವಿಧಾನ. ತಾತ್ವಿಕತೆ, ಪಾರಿಭಾಷಿಕತೆಯೇ ವಚನಗಳ ಮುಖ್ಯ ಲಕ್ಷಣವಾಗಿರುವುದರಿಂದ ಕಾವ್ಯಗುಣಕ್ಕೆ ಇಲ್ಲಿ ಅವಕಾಶವಿಲ್ಲ. ಗದ್ಯದಂತೆ ದೀರ್ಘ

---

೧೧. ಪಿ. ಎಂ. ಗಿರಿರಾಜು ಅವರು ಸಗರ್ಭ ವಚನ (೧೪೦) ಒಂದನ್ನೂ ಸೇರಿಸಿ ಈ ಸಂಖ್ಯೆ ೧೦೨ ಎಂದಿದ್ದಾರೆ (ಚಿದೈಶ್ವರ್ಯ ಚಿದಾಭರಣ ಪು. ೨೪೯). ಇವನ ನಿಜ ವಚನ ೧೦೧ ಮಾತ್ರ.

ವಿವರಣೆಯನ್ನು ವಾಚ್ಯತೆಯನ್ನು ಅಳವಡಿಸಿಕೊಂಡ ಇವುಗಳಿಗೆ ತಾತ್ವಿಕ ದೃಷ್ಟಿಯಿಂದ ಮಾತ್ರ ಮಹತ್ವ ಸಲ್ಲುತ್ತದೆ.

**ಗುಹೇಶ್ವರಯ್ಯ :**

ಈತನ ಜೀವನೇತಿಹಾಸದ ಬಗೆಗೆ ಏನೊಂದು ವಿವರವೂ ದೊರಕುವುದಿಲ್ಲ. ಹಸ್ತಪ್ರತಿಗಳಲ್ಲಿ ಉಲ್ಲೇಖವಾದ 'ಗುಹೇಶ್ವರಯ್ಯನ ವಚನಗಳು' ಎಂಬ ಶೀರ್ಷಿಕೆಯ ಹಿನ್ನೆಲೆಯಲ್ಲಿ 'ಗುಹೇಶ್ವರಯ್ಯ' ಎಂಬುದು ವಚನಕಾರನ ಹೆಸರಾಗಿರಬೇಕೆಂದು ಹೇಳಬಹುದಾಗಿದೆ. ಆದರೆ ಇದು ವಚನಗಳ ಅಂಕಿತದ ಮೇಲಿಂದ ಹಸ್ತಪ್ರತಿಕಾರರು ಊಹಿಸಿ ಬರೆದ ಕಲ್ಪಿತ ಹೆಸರಾಗಿರುವ ಸಾಧ್ಯತೆ ಹೆಚ್ಚಾಗಿದೆ. ಸದ್ಯಕ್ಕೆ ಇದು ವಚನಕಾರನ ಹೆಸರೆಂದೇ ಗಣಿಸಿ ಮುನ್ನಡೆಯಲಾಗಿದೆ.

ಈತನ ೪೩ ವಚನಗಳು ದೊರೆತಿದ್ದು, 'ಗುಹೇಶ್ವರಪ್ರಿಯ ನಿರಾಳಲಿಂಗ' ಎಂಬ ಅಂಕಿತವನ್ನು ಹೊಂದಿವೆ. ಷಟ್‌ಸ್ಥಲ ತತ್ವನಿರೂಪಣೆ, ವ್ರತಾಚಾರವಿಹೀನರ ಟೀಕೆ ಇವುಗಳ ಮುಖ್ಯ ಗುರಿಯಾಗಿದೆ. ಮಕರತರ್ಕ ಪ್ರಸ್ತಾವದ ವಚನ, ಜೋಗಿಯ ತರ್ಕದ ಪ್ರಸ್ತಾವದ ವಚನ, ಗುರುಸ್ಥಲದ ವಚನ, ಪ್ರಾಣಲಿಂಗಿಸ್ಥಲದ ವಚನ, ಭಕ್ತಸ್ಥಲದ ವಚನ, ಕವಿಗಳ ತರ್ಕದ ಪ್ರಸ್ತಾವದ ವಚನ ಎಂಬ ಕೆಲವು ಸ್ಥಲಗಳ ವಿಭಜನೆಯಿದ್ದು, ಅವುಗಳಡಿಯಲ್ಲಿ ಆಯಾ ವಿಷಯದ ವಿವೇಚನೆ ಮಾಡಲಾಗಿದೆ.

''ಆಕಾಶದಲ್ಲಿ ಹಾರಿಹೋದ ಪಕ್ಷಿಯ ಮಾರ್ಗವನು ಹಿಂದೆ ಬಪ್ಪ ಪಕ್ಷಿ ಬಲ್ಲು ದಲ್ಲದೆ, ಕೆಳಗಾಡುವ ಕುಕ್ಕುಟಬಲ್ಲುದೆ ?'' ''ಮನಹೀನ ಬಂಟನ ಕೈಯಲ್ಲಿ ಬತ್ತೀಸಾಯುಧವಿದ್ದರೇನಯ್ಯ ? ಜಾರಸ್ತ್ರೀ ಸರ್ವಾಭರಣವನಿಟ್ಟಿದ್ದರೇನಯ್ಯ ? ಕುರುಡನ ಕೈಯಲ್ಲಿ ದರ್ಪಣವಿದ್ದರೇನಯ್ಯ ? ಧರ್ಮವನರಿಯದವನ ಕೈಯಲ್ಲಿ ಹಣ ವಿದ್ದರೇನಯ್ಯ? ಜ್ಞಾನಹೀನ ರೂಪ ಧರಿಸಿದ್ದರೇನಯ್ಯ ?'' ''ಅಂಗಗರಡಿಯೊಳು ನಿಜಲಿಂಗದ ಸಾಧನವ ಬಲ್ಲಡೆ ಹಂಗಿನ ಮನುಜಂಗೆ ಅರಿವುಂಟೆ ?'' ''ದಾನಿಯಾದ ಡೇನು ಅವನ ಬೇಡಿದಲ್ಲದೆ ಅರಿಯಬಾರದು. ರಣರಂಗಧೀರನಾದಡೇನು ಅಲಗು ಅಲಗು ಹಳಚಿದಲ್ಲದೆ ಅರಿಯಬಾರದು. ಗೆಳೆಯನಾದಡೇನು ಅಗಲಿದಲ್ಲದೆ ಅರಿಯ ಬಾರದು. ಹೇಮವಾದಡೇನು ಒರೆಗಲ್ಲುಯಿಲ್ಲದೆ ಅರಿಯಬಾರದು'' ''ಕತ್ತಲುಮನೆ ಯಲ್ಲಿ ಜ್ಯೋತಿಯ ನೆನೆದರೆ ಪ್ರಕಾಶವಾಗಬಲ್ಲುದೆ ? ಕಾಮಜ್ವರದವರು ರಂಭೆಯ ನೆನೆದರೆ ಕಾಮಜ್ವರ ತಂಬಿಸಬಹುದೆ ?'' ಎಂಬಂಥ ಸೂತ್ರಪ್ರಾಯವಾದ ವಾಕ್ಯಗಳು ಈತನ ಲೋಕಾನುಭವವನ್ನು ಪ್ರಕಟಿಸುತ್ತವೆ; ವಚನ ರಚನೆಗೆ ಒಂದು ವಿಧದ ಸೊಬಗನ್ನು ತಂದುಕೊಟ್ಟಿವೆ. ಕೆಲವು ವಚನಗಳು ಸರಳಭಾಷೆ ಸಂಕ್ಷಿಪ್ತ ರೂಪವನ್ನು ಅಳವಡಿಸಿಕೊಂಡಿದ್ದರೆ, ಹೆಚ್ಚಿನವು ದೀರ್ಘವಾಗಿದ್ದು ತಾತ್ವಿಕತೆಯನ್ನು ಮೈಗೂಡಿಸಿ ಕೊಂಡಿವೆ. ಒಂದೆರಡು ವಚನಗಳು ಬೆಡಗಿನ ಪರಿಭಾಷೆಯಲ್ಲಿಯೂ ರಚನೆಗೊಂಡಿವೆ.

**ಗೋಣಿ ಮಾರಯ್ಯ :**

'ಕೇಟೇಶ್ವರಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ ಈತನ ಬಗೆಗೆ ಯಾವುದೇ ಸಂಗತಿ ತಿಳಿದಿಲ್ಲ. ದೊರೆತ ಒಂಬತ್ತು ವಚನಗಳಲ್ಲಿ ಈತನ ಹೆಸರಿಗೆ ಸೇರಿದ

'ಗೋಣಿ' ಪದದ ಬಳಕೆ ವಿಶೇಷವಾಗಿದೆ. ಜೊತೆಗೆ ಭಿಕ್ಷ, ಗೋವಳ ಎಂಬ ಪದಗಳು ಮತ್ತೆ ಮತ್ತೆ ಬರುತ್ತವೆ. 'ಗೋಣಿಯ ಮರೆಯಲ್ಲಿ ಇಪ್ಪರೆಲ್ಲರೂ ಎನ್ನ ಗೋವರಾದುದ ನೀ ಮರೆದೆಯಾ ಕೇಟೇಶ್ವರಲಿಂಗವೆ ?'' ''ಎಲ್ಲಕ್ಕೆ ಶರಣೆಂದು ಎಲ್ಲರಾಲಯದಲ್ಲಿ ಭಿಕ್ಷವ ತೆಗೆದುಕೊಂಡು ಸಲ್ಲಲಿತ ಭಾವದಲ್ಲಿಪ್ಪ ಶರಣಂಗೆ ಗೋಣಿಯ ಮರೆಯ ಸಿಕ್ಕುದೊಡಕಿಲ್ಲ'' ''ಕಾಯದ ಕಂಥೆಯ ಹಿಡಿದು ಅಕಾಯಚರಿತ್ರ ಪರಮನೆಂಬ ಜಂಗಮ ಬಂದು ಕರಖರ್ಪರವನಳವಡಿಸಿಕೊಂಡು ಭಿಕ್ಷಕ್ಕೆ ನಡೆಯಲು ಕೇಳಿದ'' ಎಂಬ ವಾಕ್ಯಗಳಲ್ಲಿ ಉಕ್ತವಾದ ಸಂಗತಿಗಳು ಈತ ಗೋಣಿ (ತಟ್ಟು ಅಥವಾ ಕಂಬಳಿಯಿಂದ ಮಾಡಿದ ಕುಂಚಿಗೆ)ಯನ್ನು ಹೊದ್ದುಕೊಂಡು ದನಕಾಯುವ ಕಾಯಕ ಮಾಡುತ್ತಿದ್ದ, ಮನೆ ಮನೆಗೆ ಹೋಗಿ ಭಿಕ್ಷೆಬೇಡಿ ಜೀವಿಸುತ್ತಿದ್ದ ಎಂದು ತಿಳಿಸುತ್ತವೆ. ತನ್ನ ಈ ವೃತ್ತಿ ಮತ್ತು ವೇಷವಿಶೇಷಗಳನ್ನು ದೃಷ್ಟಾಂತವಾಗಿ ವಚನಗಳಲ್ಲಿ ಬಳಸಿಕೊಂಡು ವೃತ್ತಿಗೌರವವನ್ನು ಎತ್ತಿ ಹಿಡಿದಿದ್ದಾನೆ. ''ಗುರುವಾಜ್ಞೆಯಿಂದ ಬಂದ ಭಿಕ್ಷ ಅಮೃತಾನ್ನವೆಂದು ಕೈಕೊಂಡು ಭೋಜ್ಯ ಭೋಜ್ಯಗೆ ಓಂ ನಮಃಶಿವಾಯ ಎಂಬ ನುಡಿಯಿಂದ ಸೇವಿಸಿ ನಿತ್ಯತೃಪ್ತರಾಗಿ, ಸುಳುಹು ಪಾವನರಾಗಿ ಚರಿಸುವ ಮಹಾಮಹಿಮ ಶರಣರ ನಡೆ ಪರುಷ, ನುಡಿ ಪರುಷ ಮುಟ್ಟಿದ್ದು, ನೋಡಿ ಸೋಂಕಿದ್ದೆಲ್ಲ ಪಾವನ'' ಇದು ಲೌಕಿಕ ಭಿಕ್ಷವನ್ನು ಆತ ಆಧ್ಯಾತ್ಮಕ್ಕೆ ಬಳಸಿಕೊಂಡ ರೀತಿ. ಒಂದು ಕಡೆ (ವ. ೭) 'ಭಿಕ್ಷದ ನಿರುಗೆಯ ಬಲ್ಲ ನಿಜವೀರದೇವಯ್ಯ' ಎಂದು ಹೇಳಿದ್ದಾನೆ. ಈ ನಿಜವೀರದೇವಯ್ಯ ಯಾರೆಂದು ತಿಳಿಯದು. ವಚನಗಳು ಹೆಚ್ಚು ದೀರ್ಘವಾಗಿದ್ದು ಗದ್ಯಗುಣವನ್ನು ತೋರಿದರೂ ಅಲ್ಲಲ್ಲಿ ಬಳಕೆಯಾದ 'ಸಂಗಕ್ಕೆ ಶರಣರ ಸಂಗವೇ ಲೇಸು' 'ಕಿಚ್ಚು ಹತ್ತಿದಲ್ಲಿ ಊರಡವಿ ಕಾಡಡವಿಯೆಂದುಂಟೆ ?' 'ಆವನಾದರಾಗಲಿ ಶ್ರೀ ಮಹಾದೇವನ ನೆನೆವನೆ ದೇವ' 'ಅರಿವ ಗ್ರಹಿಸಿದ ಚಿತ್ತಕ್ಕೆ ಮರವೆಗೆ ತೆರನುಂಟೆ ?' ಎಂಬಂಥ ಸೂತ್ರ ಬದ್ಧವಾದ ಮಾತುಗಳು ಗಮನ ಸೆಳೆಯುತ್ತವೆ. ಈ ವಚನಗಳು ಸಣ್ಣಬರಹದ ಗುರು ಬಸವರಾಜದೇವರ (ಸು. ೧೭ ಶ.) ಶರಣ ಚಾರಿತ್ರದ ವಚನಗಳು, ಗುರುಶಂಕರ ಸ್ವಾಮಿಗಳ (ಸು. ೧೭ ಶ.) ಜ್ಞಾನಷಟ್‌ಸ್ಥಲಸಾರ ಎಂಬ ವಚನಸಂಕಲನಗಳಲ್ಲಿ ಎಡೆ ಪಡೆದಿರುವುದರಿಂದ ಗೋಣಿಮಾರಯ್ಯ ೧೬ನೆಯ ಶತಮಾನದ ಅಂತ್ಯ, ಇಲ್ಲವೆ ೧೭ನೆಯ ಶತಮಾನದ ಆದಿಯಲ್ಲಿ ಇದ್ದಿರಬೇಕೆನಿಸುತ್ತದೆ. ಕುಮಾರಚೆನ್ನಬಸವನ ಪುರಾತನರ ಚರಿತೆಯಲ್ಲಿ ಬರುವ ಗೋಣಿಯ ಮಲ್ಲಯ್ಯ ಈತನಿಂದ ಭಿನ್ನನೋ, ಹೇಗೋ ತಿಳಿಯದು.

**ಘನಲಿಂಗದಯ್ಯ :**

ಈತನ ಜೀವನಕ್ಕೆ ಸಂಬಂಧಿಸಿ ಸದ್ಯ ಯಾವ ವಿಷಯವೂ ತಿಳಿದಿಲ್ಲ. ಒಂದು ವಚನವಾತ್ರ ದೊರಕಿದೆ. ಅದರ ಶೈಲಿಯ ಮೇಲಿಂದ ಈತ ೧೭ನೆಯ ಶತಮಾನದಲ್ಲಿದ್ದವನಾಗಿರಬೇಕೆಂದು ಊಹಿಸಲಾಗಿದೆ. ವಚನ ತುಂಬ ದೀರ್ಘವಾಗಿದ್ದು ತಾತ್ವಿಕ ನಿರೂಪಣೆಯಿಂದ ಕೂಡಿದೆ. ಗದ್ಯದ ಲಕ್ಷಣವನ್ನು ಹೊಂದಿದೆ. ಅಂಕಿತ ಮಹಾಗುರು ಸಿದ್ಧೇಶ್ವರ.

ಚೆನ್ನಯ್ಯ :

"ಕೈಯುಳಿಗತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮಾರಾಮ ರಾಮನಾ" ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿ, ಬಸವಾದಿ ಶರಣರ ವಿಶೇಷ ಗೌರವಕ್ಕೆ ಪಾತ್ರನಾದ, ಬಸವಪೂರ್ವಯುಗದ ಶರಣನೆನಿಸಿದ ಮಾದಾರ ಚೆನ್ನಯ್ಯನಿಂದ ಭಿನ್ನ ನಾದ ಈತ, 'ಚೆನ್ನಯ್ಯಪ್ರಿಯ ನಿರ್ಮಾಣಪ್ರಭುವೆ' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾನೆ. ಗುರುಸಿದ್ಧದೇವ (ಸು. ೧೭ ಶ)ನ 'ಚಿದೈಶ್ವರ್ಯ ಚಿದಾಭರಣ'ದಲ್ಲಿ ಈ ಅಂಕಿತದ ೧೧ ವಚನಗಳು ಎಡೆಪಡೆದಿದ್ದು, ಇವುಗಳ ಕರ್ತೃ 'ನಿರ್ಮಾಣಯ ಪ್ರಭುದೇವ'ನೆಂಬವನಾಗಿರಬೇಕೆಂದು ಅದರ ಸಂಪಾದಕರು (ಪ್ರಶ್ನಾರ್ಥಕ ಚಿಹ್ನೆ ಹಾಕಿ) ಊಹೆ ಮಾಡಿದ್ದಾರೆ.[೨೨] ನಮಗೆ ದೊರೆತ ಹಸ್ತಪ್ರತಿಯಲ್ಲಿ ಸ್ಪಷ್ಟವಾಗಿ ಚೆನ್ನಯ್ಯನ 'ಕಂಡಿತದ ವಚನಗಳು' ಎಂದು ಬರೆದಿರುವುದರಿಂದ, ಈ ಅಂಕಿತದ ವಚನಗಳ ಕರ್ತೃ 'ಚೆನ್ನಯ್ಯ' ಎಂದು ನಿರ್ಧರಿಸಿದ್ದೇವೆ. ಈತನ ವಚನಗಳನ್ನು ತನ್ನ ಸಂಕಲನದಲ್ಲಿ ಅಳವಡಿಸಿಕೊಂಡ ಗುರುಸಿದ್ಧದೇವನ ಕಾಲ ೧೭ನೆಯ ಶತಮಾನದ ಉತ್ತರಾರ್ಧವೆಂದು ತಿಳಿದುಬರುತ್ತದೆ. ಚೆನ್ನಯ್ಯ ಆ ಪೂರ್ವದಲ್ಲಿ ಅಂದರೆ ೧೭ನೆಯ ಶತಮಾನದ ಆದಿಯಲ್ಲಿ ಇದ್ದವನಾಗಿರಬೇಕು. ಇವನ ವಚನಗಳ ವಸ್ತು-ಶಿಲ್ಪ, ರಚನಾರೀತಿ, ಬಳಸಿದ ಭಾಷೆ ಮೊದಲಾದ ಅಂಶಗಳು ಇದಕ್ಕೆ ಪೋಷಕವಾಗಿವೆ.

ಚೆನ್ನಯ್ಯನ ೪೨ ವಚನಗಳು ಈಗ ಲಭ್ಯವಾಗಿದ್ದು, ಅವುಗಳಿಗೆ 'ಕಂಡಿತದ ವಚನಗಳು' ಎಂದು ಕರೆಯಲಾಗಿದೆ. ಪ್ರಸಾದದ ಅರ್ಥವಿವರಣೆ, ಮಹತ್ವ, ಪ್ರಕಾರಗಳು, ಅರ್ಪಿತ ವಿಧಾನ, ಪಾದೋದಕ ಮಹತ್ವ, ಶರಣ-ಲಿಂಗ ಸಂಬಂಧ, ಇವುಗಳ ನಿಜದ ನಿಲವನರಿಯದೆ ನಿಂದಿಸುವ ವೇಷಧಾರಿಗಳ ಟೀಕೆ-ಇವು ಈ ವಚನಗಳಲ್ಲಿ ವಿವೇಚನೆಗೊಳಪಟ್ಟ ವಸ್ತುವಿಷಯಗಳು.

"ಪ್ರಸಾದವೆಂಬುದು ಅಚಲಾನಂದ ಅವಿನಾಶನ ಅವಿರಳ ದ್ವಂದ್ವಾತೀತ ಬಂಧ ಮೋಕ್ಷಕ್ಕೆ ಅತೀತ ನೋಡಾ" 'ಪ್ರಸಾದವ ಕೊಂಡ ಶರಣನ ಸರ್ವಾಂಗವೆಲ್ಲ ಪ್ರಸಾದವಾಯಿತ್ತು' 'ಪ್ರಸಾದವ ಸೋಂಕಿದಾತನ ತನುವೆಲ ಲಿಂಗಮಯ' 'ಪ್ರಸಾದ ಸೋಂಕಿ ಪ್ರಸಾದವಾಗದಿದ್ದರೆ ಅದು ಪ್ರಸಾದವಲ್ಲ' 'ಅಚ್ಚ ಪ್ರಸಾದವೆಂಬುದು ನಿಶ್ಚಲ ನಿರ್ವಯಲಕ್ಕೆ ನಾಮವು' 'ಕೊಟ್ಟು ಕೊಳಬಲ್ಲಾತನೆ ಮಹಾಪ್ರಸಾದಿ'-ಇವು ಪ್ರಸಾದ ಪ್ರಸಾದಿಗಳ ಸ್ವರೂಪ ಸಂಬಂಧವನ್ನು ತಿಳಿಸುವ ನುಡಿಗಳು, 'ಪಾದೋದಕವೆ ಪರಾತ್ಪರಾನಂದವು' ಇದು ಪಾದೋದಕದ ಅಗ್ಗಳಿಕೆಗೆ ಒಂದು ಉದಾಹರಣೆ. 'ಶರಣರ ಅಂಗದಲ್ಲಿ ಶಿವಲಿಂಗವೆ ತೃಪ್ತಿಗೊಳ್ಳುತ್ತಿಹುದು' 'ಲಿಂಗ ಸೋಂಕಿ ಲಿಂಗವಾಗದಿದ್ದರೆ ಅದು ಲಿಂಗವಲ್ಲ.' 'ಲಿಂಗ ಬೇರೆ ಶರಣ ಬೇರೆ ಎಂಬ ಭಂಗಿತರಿಗೆ ಶಿವಲಿಂಗ ಮುನ್ನವಿಲ್ಲ' 'ಅಂಗದ ಮೇಲೆ ಲಿಂಗವ ಧರಿಸಿದ ಬಳಿಕ ಸರ್ವಾಂಗಲಿಂಗವಾಗದಿದ್ದರೆ ಆ ಲಿಂಗವ ವಿತಕ್ಕೆ ಧರಿಸಲಿ ?' 'ಶರಣನ ಸರ್ವಾಂಗವೆಲ್ಲ ಶಿವಮಂದಿರವು' 'ಜಂಗಮಕ್ಕೆರೆದರೆ ಸ್ಥಾವರ ನನೆಯಿತ್ತು' ಇವು ಶರಣ-ಲಿಂಗ ಸಂಬಂಧವನ್ನು ಸುಂದರವಾಗಿ ತಿಳಿಸುವ ಸೂಳ್ನುಡಿಗಳು.

---

೨೨. ಚಿದೈಶ್ವರ್ಯ ಚಿದಾಭರಣ : ಪಿ. ಎಂ. ಗಿರಿರಾಜು, ಶರಣ ಸಂತಾನ ಪ್ರಕಾಶನ ಮೈಸೂರು ಪು. ೨೪೮

ಅಷ್ಟು ದೀರ್ಘವೂ ಅಲ್ಲದ, ಅಷ್ಟು ಸಂಕ್ಷಿಪ್ತವೂ ಅಲ್ಲದ ಮಧ್ಯಮ ಗಾತ್ರವನ್ನು ಪಡೆದುಕೊಂಡಿರುವುದು, ಸಂಸ್ಕೃತ ಪ್ರಮಾಣಗಳನ್ನು ಅಲ್ಲಲ್ಲಿ ಸ್ವಲ್ಪ ಹೆಚ್ಚಾಗಿಯೇ ಅಳವಡಿಸಿಕೊಂಡಿರುವುದು, ಸರಳವಾದ ಭಾಷೆಯಲ್ಲಿ ವಿಶೇಷವಾಗಿ ಪ್ರಸಾದ ತತ್ವ ನಿರೂಪಣೆ ಮಾಡಿರುವುದು ಇವನ ವಚನಗಳ ವಿಶೇಷ ಲಕ್ಷಣಗಳೆನಿಸಿವೆ. 'ಉರಿಕೊಂಡ ಕರ್ಪುರವ ಮರಳಿ ಸುಡುವರೆ?' 'ನವರತ್ನಪ್ರಭೆ ಏಕ ರವಿರಶ್ಮಿಯಾದಂತೆ' 'ಹಂಚು ಹಿಡಿದು ಹಲ್ಲು ತೆರೆವಂತೆ' ಎಂಬಂಥ ಹೇಳಿಕೆಗಳು ಸೊಗಸಾಗಿವೆ.

**ಜಕ್ಕಣಯ್ಯ :**

ಜಕ್ಕಣಯ್ಯನ ನಿರಾಳಮಂತ್ರಗೋಪ್ಯ ೧೮ ಸ್ಥಲ, ೭೭೮ ವಚನಗಳಿರುವ ಒಂದು ಏಕವ್ಯಕ್ತಿ ವಚನಸಂಕಲನ. ಹಸ್ತಪ್ರತಿಗಳಲ್ಲಿ ಇದರ ಕರ್ತೃವಿನ ಹೆಸರು 'ಜಕ್ಕಣಯ್ಯ' ಎಂದು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ವೀರಶೈವರಲ್ಲಿ ಈ ಹೆಸರಿನ ಇಬ್ಬರು ವ್ಯಕ್ತಿಗಳು ಕಂಡುಬರುತ್ತಾರೆ. ಒಬ್ಬ ಪುಲಿಗೆರೆಯ ಮಹಾಲಿಂಗದೇವನ ಶಿಷ್ಯ, ಇನ್ನೊಬ್ಬ ಈ ಕೃತಿಯ ಕರ್ತೃ. ಪುಲಿಗೆರೆಯ ಮಹಾಲಿಂಗದೇವನ ಶಿಷ್ಯನಾದ ಜಕ್ಕಣಾರ್ಯನಿಂದ ಈತ ಭಿನ್ನನೆಂದು ಇಬ್ಬರ ಕೃತಿಗಳ ಮೂಲಕ ಗೊತ್ತಾಗುತ್ತದೆ. ಜಕ್ಕಣಯ್ಯನ ಜೀವನಕ್ಕೆ ಸಂಬಂಧಪಟ್ಟ ವಿವರಗಳು ಸಿಗುವುದಿಲ್ಲವಾದರೂ ಈ ಕೃತಿಯ ಕೊನೆಯಲ್ಲಿ ಬರುವ ''ಇಂತಪ್ಪ ವಚನಂಗಳ ನಿರಾಳ ಝೇಂಕಾರಪ್ರಭುದೇವರ ಕರುಣದಿಂದ ಜಕ್ಕಣಯ್ಯಗಳು ನಿರೂಪಿಸಿದ ನಿರಾಳ ಗೋಪ್ಯದ ಪುಸ್ತಕ'' ಹಾಗೂ ''ನಿರಾಳ ಝೇಂಕಾರಪ್ರಭು ನುಡಿಸಿದರೆ ನುಡಿದೆನಲ್ಲದೆ ನಾನಾದರೆ ನುಡಿಯಲರಿಯೆನು'' (೪೮೦) ಎಂಬ ವಾಕ್ಯಗಳು ಈತನ ಗುರುವಿನ ಹೆಸರು 'ಝೇಂಕಾರ ಪ್ರಭು'ವೆಂದು ತಿಳಿಸುತ್ತವೆ. ಗುರುವಿನ ಈ ಹೆಸರನ್ನೇ ಈತ ವಚನಮುದ್ರಿಕೆಯಾಗಿ ಸ್ವೀಕರಿಸಿದ್ದು, ಹಳಕಟ್ಟಿಯವರು ಇದನ್ನು 'ಓಂಕಾರ ನಿಜಲಿಂಗಪ್ರಭುವೆ' ಎಂದು ತಪ್ಪಾಗಿ ಓದಿದ್ದರೆಂದು (ವಚನಶಾಸ್ತ್ರಸಾರ, ಭಾಗ ಒಂದು ಉತ್ತರಾರ್ಧ ಪು. ೨೮೬) ತಿಳಿದುಬರುತ್ತದೆ.

ಜಕ್ಕಣಯ್ಯನ ಜೀವನ ವಿವರಗಳಂತೆ, ಆತನ ಕಾಲದ ವಿಷಯವೂ ಮರೆಯಲ್ಲಿ ಉಳಿದಿದೆ. ೧೬–೧೭ನೆಯ ಶತಮಾನದ ವಚನಸಂಕಲನಗಳಲ್ಲಿ ಈತನ ರಚನೆಗಳು ಕಂಡು ಬಾರದಕಾರಣ ಈತನು ಈ ಅವಧಿಯ ಬಳಿಕ ಜೀವಿಸಿದವನಾಗಿರಬೇಕು. ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಒಂದು ಹಸ್ತಪ್ರತಿಯ ಅಂತ್ಯದಲ್ಲಿ ''ಶಾಲಿವಾಹನ ಶಕೆ ೧೭೬೪ ಶುಭಕೃತನಾಮ ಸಂವತ್ಸರದ ವೈಶಾಖ ಬಹುಳ ೧೩ ಸೋಮವಾರದಲ್ಲು ಮಾತ್ರಕೆ ಕಾಪಿ ಮಾಡಲಾಯಿತು'' ಎಂಬ ಉಲ್ಲೇಖವಿರುವುದರಿಂದ ಈತನು ಕ್ರಿ.ಶ. ೧೮೪೨ಕ್ಕೆ ಮೊದಲು ಬಾಳಿದವನಾಗಿರಬೇಕು. ಶ್ರೀ ವೀ.ರು. ಕೊಪ್ಪಳ ಅವರು ''ಇವನು ಧಾರವಾಡ ಬೆಳಗಾವಿ ನಾಡಿನಲ್ಲಿ ಕ್ರಿ.ಶ. ೧೮೦೦ ನೆಯ ಸುಮಾರಿಗೆ ಇದ್ದಿರಬಹುದು''[೧೩] ಎಂದು ಮಾಡಿದ ಊಹೆಯನ್ನು ಈಗಿನ ಮಟ್ಟಿಗೆ ಒಪ್ಪಿಕೊಳ್ಳುವುದು ಸೂಕ್ತ. ಈತನ ವಚನಗಳಲ್ಲಿ ವಜೀರ, ತಳವಾರ, ಮಹಾಲ್ದಾರ, ಚಾವಡಿ, ಠಾಣೆ ಮೊದಲಾದ ಶಬ್ದಗಳು ಕಂಡು

---

೧೩. ಪ್ರಸಾದ : ಸಂ. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪು. ೧೨೬.

ಬರುವುದರಿಂದ ಪೇಶ್ವೆಯರ ಪ್ರಭಾವಕ್ಕೆ ಕರ್ನಾಟಕ ಒಳಗಾಗಿದ್ದ ಸಂದರ್ಭದಲ್ಲಿ ಈತನು ಜೀವಿಸಿದ್ದನೆಂದು ಹೇಳಬೇಕಾಗುತ್ತದೆ. ಇದು ಮೇಲಿನ ಅಭಿಪ್ರಾಯವನ್ನು ಬೆಂಬಲಿಸುತ್ತದೆ.

ಜಕ್ಕಣಯ್ಯನ ಕೃತಿನಾಮ 'ನಿರಾಳಮಂತ್ರಗೋಪ್ಯ', 'ನಿರಾಳ ಗೋಪ್ಯ'-ಹೀಗೆ ಎರಡು ವಿಧಗಳಲ್ಲಿ ಸಿಗುತ್ತವೆ. ಕವಿಚರಿತೆಕಾರರು 'ನಿರಾಳಗೋಪ್ಯ' ಹೆಸರಿನ ಗ್ರಂಥ ವನ್ನು ಸೂಚಿಸಿದ್ದು (ಸಂಪುಟ-೩, ಪು. ೪೨೪) ಇದು ಈ ನಿರಾಳ ಮಂತ್ರಗೋಪ್ಯವೇ ಆಗಿರಬೇಕು. 'ನಿರಾಕುಳ' ಶಬ್ದದಿಂದ 'ನಿರಾಳ' ನಿಷ್ಪನ್ನಗೊಂಡಿದೆ. ಇದಕ್ಕೆ ಪರಿಶುದ್ಧ, ಪ್ರಶಾಂತ, ಅವ್ಯಕ್ತ ಎಂಬ ಅರ್ಥಗಳಿವೆ. ಇವು ಮೂರೂ ಪರವಸ್ತುವನ್ನೇ ಸೂಚಿಸುತ್ತವೆ. ಇಂಥ ಪರವಸ್ತುವನ್ನು ನಿಶ್ಚಿಂತನಿರಾಳ, ನಿಸ್ಸಂಗನಿರಾಳ ಎಂದು ಇಲ್ಲಿ ವರ್ಣಿಸಲಾಗಿದೆ.

ಈ ನಿರಾಳ ಪರವಸ್ತು ವೀರಶೈವದಲ್ಲಿ ಇಷ್ಟಲಿಂಗರೂಪದಲ್ಲಿ ಪೂಜೆಗೊಳ್ಳುತ್ತಿದ್ದು, ಆ ಕ್ರಿಯೆ ಗೌಪ್ಯವಾಗಿ ನಡೆಯುವಂತಹದಾಗಿದೆ. ಹೀಗಾಗಿ ಈ ಲಿಂಗಾನುಸಂಧಾನದ ಯೋಗರಹಸ್ಯವನ್ನು ವಿವರಿಸುವ ಈ ಕೃತಿಗೆ 'ನಿರಾಳಮಂತ್ರಗೋಪ್ಯ' ಎಂದು ಕರೆದುದು ಸಹಜವೇ ಸರಿ. ಈ ಮೊದಲು ಬಸವಾದಿ ಪ್ರಮಥರ ಮಂತ್ರಗೋಪ್ಯ, ಪದಮಂತ್ರ ಗೋಪ್ಯ, ಶೂನ್ಯಮಂತ್ರಗೋಪ್ಯ ಹೆಸರಿನ ಚಿಕ್ಕ ಪದ್ಯರೂಪದ ಕೃತಿಗಳು ಹುಟ್ಟಿದ್ದವು. ಆದರೆ ವಚನರೂಪದಲ್ಲಿ ಆ ತತ್ವವನ್ನು ವಿವರವಾಗಿ ಹೇಳುತ್ತಿರುವುದು ಈ ನಿರಾಳ ಮಂತ್ರಗೋಪ್ಯದ ವಿಶೇಷತೆಯೆನಿಸಿದೆ.

ವೀರಶೈವ ಸಿದ್ಧಾಂತ ಕೃತಿಗಳಲ್ಲಿ ಸ್ಥಲವಿಭಜನೆ ಅನೇಕ ಬಗೆಯಾಗಿದೆ. ಇಲ್ಲಿ ಈತ ನಿಷ್ಕಲಲಿಂಗಸ್ಥಲ ಮೊದಲು ಮಾಡಿ ನಿರ್ವಲಯಲಿಂಗಸ್ಥಲದ ವರೆಗೆ ೧೮ ಸ್ಥಲ ಪರಿಕಲ್ಪನೆಯನ್ನು ಮಾಡಿಕೊಂಡಿದ್ದಾನೆ. ನಿಷ್ಕಲಲಿಂಗಸ್ಥಲದಿಂದ ಎಂಟನೆಯ ಸ್ಥಲವಾದ ಮಹಾಲಿಂಗ ಸ್ಥಲದ ವರೆಗಿನ ಎಂಟು ಪ್ರಕರಣಗಳಲ್ಲಿ ಲಿಂಗದ ವಿಕಾಸವನ್ನು ವಿವರಿಸಿ, ಒಂಬತ್ತನೆಯ ಸ್ಥಲವನ್ನು ಇಷ್ಟಲಿಂಗಸ್ಥಲವೆಂದು ಕರೆಯುವ ಮೂಲಕ ಆತ್ಮವಿಕಾಸದ ದಾರಿಯತ್ತ ತನ್ನ ಕೃತಿಯನ್ನು ಬೆಳೆಸಿದ್ದಾನೆ. ಇಲ್ಲಿ ಇಷ್ಟಲಿಂಗಸ್ಥಲ, ಪ್ರಾಣಲಿಂಗಸ್ಥಲ ಭಾವಲಿಂಗಸ್ಥಲವೆಂಬ ವ್ಯಕ್ತಿಗತ ಲಿಂಗಸ್ಥಲಗಳನ್ನು ಪ್ರತಿಪಾದಿಸಿ, ಆಮೇಲೆ ಜ್ಞಾನೋದಯ ಮೊದಲು ಮಾಡಿ ನಿರವಯದ ವರೆಗಿನ ಸ್ಥಲಗಳಲ್ಲಿ ವಿಷಯವನ್ನು ಹಂಚಿಹಾಕಿದ್ದಾನೆ.

ಈ ವಿವರಗಳನ್ನು ನೋಡಿದರೆ ಈತನಿಗೆ ತತ್ವದ ಕಡೆಗೆ ಒಲವು ಹೆಚ್ಚು ಇದ್ದುದು ಸ್ಪಷ್ಟವಾಗುತ್ತದೆ. ಹೀಗಿದ್ದೂ ಕೃತಿ ಶಾಸ್ತ್ರ ಜಡತೆಯಿಂದ ಬಳಲದೆ ಸರಳ ನಿರೂಪಣೆ ಯಿಂದ ಕಂಗೊಳಿಸುತ್ತದೆ. ಆದರೆ ಈ ಗೋಪ್ಯ ಆಚರಣೆ ರಹಸ್ಯವಾಗಿರಬೇಕೆಂಬ ಉದ್ದೇಶದಿಂದ ವಚನಗಳಲ್ಲಿ ಬೆಡಗನ್ನು ಬಹುಪ್ರಮಾಣದಲ್ಲಿ ಬಳಸಿದ್ದಾನೆ. ಹೀಗಿದ್ದೂ ಅಲ್ಲಿ ಆತನ ಸ್ಥಾಯಿಯಾದ ಸರಳತೆಗೆ ಧಕ್ಕೆ ಬಂದಿಲ್ಲವೆಂದೇ ಹೇಳಬೇಕು.

ಪರಿಷ್ಕರಣ :

ಈ ಸಂಪುಟದ ಒಂಬತ್ತು ಜನ ವಚನಕಾರರು ಇದುವರೆಗೆ ಉಪೇಕ್ಷೆಗೆ ಗುರಿಯಾಗುತ್ತ ಬಂದಿರುವುದರಿಂದ, ಇವರ ವಚನಗಳ ವ್ಯವಸ್ಥಿತ ಪರಿಷ್ಕರಣ, ಪಾಠ ನಿರ್ಣಯ ವಿದ್ವಾಂಸರ ವಿವೇಚನೆಗೆ ಒಳಗಾಗಿಲ್ಲ. ಹೀಗಾಗಿ ವಚನಗಳ ಶೋಧ ಮತ್ತು

ಪಾಠನಿರ್ಣಯ ಈ ಎರಡೂ ಹೊಣೆಗಳನ್ನು ಇಲ್ಲಿ ಒಬ್ಬರೇ ಹೊರಬೇಕಾದ ಪ್ರಸಂಗ ಒದಗಿಬಂದಿದೆ.

ಕರಸ್ಥಲದ ಮಲ್ಲಿಕಾರ್ಜುನದೇವನ ವಚನಗಳನ್ನು ಮೂರು ಮೂಲಗಳಿಂದ (ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಶಿವಯೋಗ ಚಿಂತಾಮಣಿ, ಚಿದೈಶ್ವರ್ಯ ಚಿದಾಭರಣ) ಎತ್ತಿಕೊಳ್ಳಲಾಗಿದೆ. ಇವುಗಳಲ್ಲಿ ಅಂಥ ಪಾಠವ್ಯತ್ಯಾಸಗಳೇನೂ ತೋರದ ಕಾರಣ ಇದ್ದಂತೆ ಸ್ವೀಕರಿಸಲಾಗಿದೆ.

ಕಾಡಸಿದ್ಧೇಶ್ವರನ ವಚನಗಳು ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳಿಂದ ಪರಿಷ್ಕರಣಗೊಂಡು, ಈಗ ಎರಡು ಮುದ್ರಣಗಳನ್ನು (೧೯೩೭, ೧೯೮೪) ಕಂಡಿದ್ದರೂ ಅವುಗಳ ನಿಜಸ್ವರೂಪ, ಶುದ್ಧಪಾಠ, ಒಟ್ಟು ವಚನಸಂಖ್ಯೆ ಸ್ಪಷ್ಟವಾಗಿ ತಿಳಿಯದ ಕಾರಣ ಓದುಗರಿಗೆ ಅವು ಗೊಂದಲವನ್ನುಂಟುಮಾಡಿವೆ. ಕನ್ನಡ ಅಧ್ಯಯನ ಪೀಠದ ಎರಡು ಹಸ್ತಪ್ರತಿಗಳ ಸಹಾಯದಿಂದ, ಈ ಗೊಂದಲವನ್ನು ನಿವಾರಿಸಲಾಗಿದೆ. ಟೀಕೆಯನ್ನೂ ವಚನವೆಂದು ಭ್ರಮಿಸಿ ಒಟ್ಟು ವಚನ ಸಂಖ್ಯೆ ೧೭೧೨ ಎಂದು ಈ ಮೊದಲಿನ ಸಂಪಾದಕರು ಭಾವಿಸಿದುದನ್ನು ತಳ್ಳಿಹಾಕಿ, ಟೀಕೆಯಿಂದ ವಚನಗಳನ್ನು ಹೊರತೆಗೆದು ಅವುಗಳ ನಿಜಸಂಖ್ಯೆ ೫೦೦ ಎಂದು ನಿರ್ಣಯಿಸಿದ್ದೇವೆ. ಪ್ರತಿಯೊಂದು ವಚನವನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಶುದ್ಧಪಾಠವನ್ನು ಕೊಟ್ಟಿದ್ದೇವೆ. ಒಟ್ಟು ವಿನ್ಯಾಸದಲ್ಲಿ ಉಂಟಾಗಿದ್ದ ಅಸ್ತವ್ಯಸ್ತತೆಯನ್ನೂ ನಿವಾರಿಸಿ ಕೃತಿಯ ಮೂಲಚೌಕಟ್ಟನ್ನು ಗುರುತಿಸಿ ಕೊಟ್ಟಿದ್ದೇವೆ. ನಮ್ಮ ಯೋಜನೆಗನುಗುಣವಾಗಿ ವಚನಗಳಿಗಿರುವ ಟೀಕೆಯನ್ನು ಕೈಬಿಟ್ಟಿದ್ದೇವೆ.

ಕುಷ್ಟಗಿ ಕರಿಬಸವೇಶ್ವರನ ವಚನಗಳನ್ನು ಇತ್ತೀಚೆ ಎಸ್. ಶಿವಣ್ಣ ಅವರು ಪರಿಷ್ಕರಿಸಿ ಪ್ರಕಟಿಸಿದ್ದು, ಅಲ್ಲಿ ಉಳಿದಿರಬಹುದಾದ ಪಾಠದೋಷಗಳನ್ನು ತಿದ್ದಿ ಸ್ವೀಕರಿಸಿದ್ದೇವೆ. ಅಂಕಿತದಲ್ಲಿನ ಅಲ್ಪ ವ್ಯತ್ಯಾಸ ಕಾರಣವಾಗಿ ಅವರು ಕೈಬಿಟ್ಟ ಅಜ್ಞಾತ ಸಂಕಲನಕಾರನ 'ಸಂಬಂಧಾಚರಣೆಯ ವಚನಗಳು' ಕೃತಿಯಲ್ಲಿ ದೊರೆಯುವ ಒಂದು ವಚನವನ್ನು ಕುಷ್ಟಗಿ ಕರಿಬಸವನದೆಂದೇ ನಾವು ಸ್ವೀಕರಿಸಿ, ವಚನಸಂಖ್ಯೆಯನ್ನು ೯೮ ರಿಂದ ೯೯ಕ್ಕೆ ಬೆಳೆಸಿದ್ದೇವೆ. ವಚನಕಾರನೇ ತನ್ನ ವಚನಗಳಲ್ಲಿ ಸ್ಪಷ್ಟವಾಗಿ ಹೇಳಿದ 'ಚಿತ್ತ ಸದ್ಗತಿಯ ವಚನ' ಎಂಬುದನ್ನು ಕೃತಿಯ ಹೆಸರೆಂದು ಗಣಿಸಿ, ತಲೆಬರಹವಾಗಿ ಕೊಟ್ಟಿದ್ದೇವೆ.

ಗಣದಾಸಿ ವೀರಣ್ಣನ ವಚನಗಳು ಒಂದೇ ಕಡೆಗೆ ಹಸ್ತಪ್ರತಿಯಲ್ಲಿ ಸಿಕ್ಕುತ್ತಿದ್ದು, ಈಗಾಗಲೇ ಅನೇಕ ಸಲ ಪ್ರಕಟವಾಗಿವೆ. ಆ ಪ್ರಕಟಿತ ಆವೃತ್ತಿಗಳ ಜೊತೆಗೆ ಕನ್ನಡ ಅಧ್ಯಯನಪೀಠದ ಎರಡು ಹಸ್ತಪ್ರತಿಗಳನ್ನೂ ಇಟ್ಟುಕೊಂಡು ಈ ಕೃತಿಯನ್ನು ಪರಿಷ್ಕರಿಸಿದ್ದೇವೆ.

ಗುರುಸಿದ್ಧದೇವನ ವಚನಗಳು ಆತನ ಚಿದೈಶ್ವರ್ಯ ಚಿದಾಭರಣ ಎಂಬ ವಚನ ಸಂಕಲನದಲ್ಲಿ ಮಾತ್ರ ಸಿಗುತ್ತಿದ್ದು, ಅವುಗಳನ್ನು ಅದೇ ಕ್ರಮದಲ್ಲಿ ಸ್ವೀಕರಿಸಲಾಗಿದೆ. ಈ ಮೊದಲು ಪ್ರಕಟವಾದ ಮತ್ತು ಶ್ರೀ ಪಿ. ಎಂ. ಗಿರಿರಾಜು ಅವರು ಪ್ರಕಟಿಸಿದ ಚಿದೈಶ್ವರ್ಯ ಚಿದಾಭರಣ ಆವೃತ್ತಿಗಳನ್ನಲ್ಲದೆ, ಹಳಕಟ್ಟಿ ಅವರು 'ಸಂಗನ ಬಸವೇಶ್ವರ ವಚನಗಳು'

ಎಂಬ ಹೆಸರಿನಲ್ಲಿ ಪ್ರಕಟಿಸಿದ ಕೃತಿ ಹಾಗೂ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಗಳನ್ನು ಅವಲೋಕಿಸಿ, ಇಲ್ಲಿ ಪರಿಷ್ಕರಣ ಕಾರ್ಯವನ್ನು ಪೂರೈಸಿದ್ದೇವೆ.

ಗುಹೇಶ್ವರಯ್ಯ, ಗೋಣಿ ಮಾರಯ್ಯ, ಚೆನ್ನಯ್ಯ ಮತ್ತು ಜಕ್ಕಣಯ್ಯರ ವಚನಗಳ ಸಂಪಾದನೆಗೆ ಹೆಚ್ಚಾಗಿ ಹಸ್ತಪ್ರತಿಗಳನ್ನೇ ಅವಲಂಬಿಸಲಾಗಿದೆ. ಇಲ್ಲಿಯ ಏಳು ಜನ ವಚನಕಾರರ ಕೃತಿಗಳನ್ನು ತಾತ್ವಿಕ ಹಿನ್ನೆಲೆಯಲ್ಲಿ ಜೋಡಿಸಿದವುಗಳಾಗಿರುವುದರಿಂದ ಮೂಲ ಸ್ವರೂಪದಲ್ಲಿಯೇ ಉಳಿಸಿಕೊಂಡು, ಅನುಬಂಧದಲ್ಲಿ ಅವುಗಳ ವಚನ ಅಕಾರಾದಿಯನ್ನು ಕೊಡಲಾಗಿದೆ.

**ಕೃತಜ್ಞತೆಗಳು :**

'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯನ್ನು ಅಂಗೀಕರಿಸಿ ಧನಸಹಾಯ ನೀಡಿದ ಕರ್ನಾಟಕ ಸರಕಾರಕ್ಕೆ, ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ, ಈ ಸಂಪುಟ ಸಿದ್ಧಪಡಿಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಸಲಹಾಸಮಿತಿಯ ಎಲ್ಲ ಸದಸ್ಯರಿಗೆ, ಈ ಸಂಪುಟಗಳ ಪ್ರಧಾನ ಸಂಪಾದಕರಾಗಿ ಸಮರ್ಥ ಮಾರ್ಗದರ್ಶನ ನೀಡಿದ ಗುರುಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ನನ್ನ ಅನಂತ ನಮಸ್ಕಾರಗಳು.

ಈ ಸಂಪುಟ ಸಿದ್ಧಪಡಿಸುವಲ್ಲಿ ನಿರಂತರ ನೆರವಾಗ ಮಿತ್ರರಾದ ಬಸವರಾಜ ಹೂಗಾರ, ಬಿ. ಬಿ. ಬಿರಾದಾರ, ಸಂಶೋಧನ ವಿದ್ಯಾರ್ಥಿ ಎಫ್. ಟಿ. ಹಳ್ಳಿಕೇರಿ, ಈ ಯೋಜನೆಯ ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ವಾಯ್. ಎಂ. ಯಾಕೊಳ್ಳಿ, ಬಿ. ವಿ. ಕೋರಿ, ನನ್ನ ಶ್ರೀಮತಿ ಮಂಗಳಾ ಮೊದಲಾದವರಿಗೆ, ನಾವು ಕೊಟ್ಟ ತೊಂದರೆಗಳನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಂಡು ಅಂದವಾಗಿ ಮಾದರಿಪ್ರತಿ ಮುದ್ರಿಸಿಕೊಟ್ಟ ತ್ವರಿತ ಮುದ್ರಣದ ಶ್ರೀ ಫ. ಶಿ. ಭಾಂಡಗೆ ಅವರಿಗೆ ಮತ್ತು ಅವರ ಶ್ರದ್ಧಾವಂತ ಕೆಲಸಗಾರರಿಗೆ ನನ್ನ ಅಭಿನಂದನೆಗಳು.

**ಮರು ಪರಿಷ್ಕರಣ :**

ಈ ಸಂಪುಟವನ್ನು ಹೆಚ್ಚಿಗೆ ದೊರೆತ ಆಕರಗಳು ಹಾಗೂ ವಿದ್ವಾಂಸರು ಸೂಚಿಸಿದ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಮರುಪರಿಷ್ಕರಣಗೊಳಿಸಲಾಗಿದೆ. ಅದರಿಂದಾಗಿ ಈ ಕೆಳಗಿನ ಬದಲಾವಣೆಗಳು ಉಂಟಾಗಿವೆ.

೧. ಮೊದಲ ಆವೃತ್ತಿಯಲ್ಲಿ ಈ ಸಂಪುಟದಲ್ಲಿ ೯ ಜನ ವಚನಕಾರರ ೧೬೧೪ ವಚನಗಳು ಅಳವಟ್ಟಿದ್ದವು. ಈಗ ವಚನಕಾರರ ಸಂಖ್ಯೆ ೧೧ಕ್ಕೆ ಏರಿದ್ದರೆ, ವಚನಗಳ ಸಂಖ್ಯೆ ೧೬೩೬ ಕ್ಕೆ ಏರಿದೆ.

೨. ಕೂಡಲಸಂಗಮೇಶ್ವರ ಮತ್ತು ಘನಲಿಂಗದಯ್ಯ ಎಂಬ ಇಬ್ಬರು ವಚನಕಾರರು ಇಲ್ಲಿ ಹೆಚ್ಚಿಗೆ ಪ್ರವೇಶ ಪಡೆದಿದ್ದಾರೆ. ಅವರ ೨೦ (೧೯+೧) ವಚನಗಳು ಹೆಚ್ಚಿಗೆ ಸೇರಿಕೊಂಡಿವೆ. ಈ ಮೊದಲೇ ಪ್ರವೇಶ ಪಡೆದಿದ್ದ ಗಣದಾಸಿ ವೀರಣ್ಣನ ೩

ವಚನಗಳು ಹೆಚ್ಚಿಗೆ ದೊರೆತಿವೆ. ಹೀಗಾಗಿ ಒಟ್ಟು ೨೩ ವಚನಗಳು ಈ ಸಂಪುಟದಲ್ಲಿ ಅಧಿಕವಾಗಿ ಸೇರ್ಪಡೆಯಾದಂತಾಗಿದೆ.

೩. ಗುಹೇಶ್ವರಯ್ಯನ ವಚನಗಳಲ್ಲಿ (ಪ್ರಥಮ ಆವೃತ್ತಿ ಕ್ರಮಾಂಕ) ೭೭೭ ಮತ್ತು ೭೭೮ ನೆಯ ವಚನಗಳು ಪ್ರಭುದೇವರ ವಚನಗಳಾಗಿರುವುದರಿಂದ (ನೋಡಿ ಪ್ರಭುದೇವರ ವಚನ ಸಂಪುಟ–ವಚನ ಕ್ರಮಾಂಕ ೬೪೦ ಮತ್ತು ೧೪೪೦) ಅವುಗಳನ್ನು ಇಲ್ಲಿ ಕೈಬಿಡಲಾಗಿದೆ. ಇವನ ೭೫೫ ಮತ್ತು ೭೫೭ ನೆಯ ವಚನಗಳು ಎರಡೆರಡು ಸೇರಿ ಒಂದಾಗಿದ್ದುದನ್ನು ಗಮನಿಸಿ ಅವನ್ನು ಎರಡಾಗಿ ಬಿಡಿಸಲಾಗಿದೆ. ಹೀಗಾಗಿ ಇವನ ವಚನ ಸಂಖ್ಯೆ ಮೊದಲು ೪೩ ಇದ್ದದ್ದು ಎರಡು ಕಳೆಯಲು ೪೧ ಆಗಿ, ಎರಡನ್ನು ಬಿಡಿಸಿ ಸೇರಿಸಲು ಮತ್ತೆ ೪೩ ಆಗಿ ಯಥಾಸ್ಥಿತಿ ಉಳಿದಂತಾಗಿದೆ.

೪. ಚೆನ್ನಯ್ಯನ ೮೧೩ ನೆಯ ವಚನ (ಪ್ರ.ಆ.) ಬಸವಣ್ಣನವರದಾಗಿರುವುದರಿಂದ (ನೋಡಿ–ಬಸವಣ್ಣನವರ ವಚನ ಸಂಪುಟ–ವ.ಸಂ. ೧೯೬) ಅದನ್ನು ಇಲ್ಲಿ ಕೈಬಿಡಲಾಗಿದೆ. ಅದರಿಂದ ಈತನ ವಚನ ಸಂಖ್ಯೆ ೪೩ ಇದ್ದದ್ದು ೪೨ ಕ್ಕೆ ಇಳಿದಿದೆ.

೫. ಗಣದಾಸಿ ವೀರಣ್ಣನ ೩ ವಚನಗಳು ಹೆಚ್ಚಿಗೆ ದೊರೆತುದರಿಂದ ಈತನ ವಚನ ಸಂಖ್ಯೆ ೪೦ಕ್ಕೆ (೩೭+೩) ಏರಿದೆ. ಈತನ ೬೦೯, ೬೩೮, ೬೩೯ ನೆಯ ವಚನಗಳಲ್ಲಿ (ಪ್ರ. ಆ.) ಬಿಟ್ಟು ಹೋಗಿದ್ದ ಭಾಗವನ್ನು ಹೊಸದಾಗಿ ದೊರೆತ ಹಸ್ತಪ್ರತಿಯ ಸಹಾಯದಿಂದ ಸೇರಿಸಿ ಪೂರ್ಣಗೊಳಿಸಲಾಗಿದೆ.

೬. ಕುಷ್ಟಗಿ ಕರಿಬಸವೇಶ್ವರನ ವಚನಗಳಲ್ಲಿ ೫೮೦ನೆಯ ವಚನದ ನಾಲ್ಕು ಸಾಲು ತೋಂಟದ ಸಿದ್ಧಲಿಂಗರ ವಚನ (೧೬೧)ದಲ್ಲಿನವಾಗಿವೆ. ೫೫೦ನೆಯ ವಚನ ಕೊನೆಯ ಮೂರು ಸಾಲನ್ನು ಬಿಟ್ಟು ಉಳಿದುದೆಲ್ಲ ತೋಂಟದ ಸಿದ್ಧಲಿಂಗರ ವಚನವಾಗಿದೆ (೬೪೬). ೫೪೮, ೫೫೧, ೫೫೩ ಇವು ತೋಂಟದ ಸಿದ್ಧಲಿಂಗರ ವಚನದಲ್ಲಿಯೂ ಇವೆ (ಕ್ರಮವಾಗಿ ತೋಂ. ಸಿ. ವ. ೬೪೩, ೬೪೫, ೧೪೨). ಅಂಕಿತ ಮಾತ್ರ ಭಿನ್ನವಾಗಿದೆ. ಈ ವಚನಕಾರ ಒಂದು ತಾತ್ವಿಕ ಹಿನ್ನೆಲೆಯಲ್ಲಿ ಈ ಕೃತಿಯನ್ನು ಸಂಯೋಜಿಸಿರುವುದರಿಂದ ಆ ವಚನಗಳನ್ನು ತೆಗೆದು ಹಾಕದೆ ಹಾಗೇ ಉಳಿಸಿಕೊಳ್ಳಲಾಗಿದೆ ಮತ್ತು ಈ ಸಂಗತಿಯನ್ನು ಆಯಾ ವಚನದ ಅಡಿಯಲ್ಲಿ ಸೂಚಿಸಲಾಗಿದೆ.

೭. ಅನುಬಂಧದಲ್ಲಿ ಇದ್ದ ಕರಸ್ಥಲ ಮಲ್ಲಿಕಾರ್ಜುನದೇವರ ೩ ವಚನಗಳನ್ನು ಆತನ ಹೆಸರಿನಡಿಯಲ್ಲಿ ಸೇರಿಸಿಕೊಳ್ಳಲಾಗಿದೆ.

೮. ಅನುಬಂಧದ ತಿದ್ದುಪಡಿಗಳನ್ನು ಸರಿಪಡಿಸಿಕೊಳ್ಳುವುದರ ಜೊತೆಗೆ, ಆಮೂಲಾಗ್ರ ವಾಗಿ ಎಲ್ಲ ವಚನಗಳನ್ನು ಮತ್ತೊಮ್ಮೆ ಪರಿಶೀಲಿಸಿ ಉಳಿದಿದ್ದ ಪಾಠದೋಷ, ಮುದ್ರಣ ದೋಷಗಳನ್ನು ತಿದ್ದಲಾಗಿದೆ.

೯. ವಚನಗಳ ಒಡಲಲ್ಲಿ ಸೇರಿರುವ ಎಲ್ಲ ಸಂಸ್ಕೃತ ಶ್ಲೋಕಗಳನ್ನು ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳಿಂದ ಮತ್ತೊಮ್ಮೆ ತಿದ್ದುಪಡಿ ಮಾಡಿಸಲಾಗಿದೆ. ಹೀಗಿದ್ದೂ

ತಿದ್ದುಪಡಿ ಸಾಧ್ಯವಿಲ್ಲದ ಹೆಚ್ಚು ವಿಕೃತವಾದ ಶ್ಲೋಕಗಳನ್ನು ಪ್ರಶ್ನಾರ್ಥಕ ಚಿಹ್ನೆ ಹಾಕಿ ಹಾಗೇ ಉಳಿಸಿಕೊಳ್ಳಲಾಗಿದೆ.

೧೦. ಪ್ರಸ್ತಾವನೆಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಅವುಗಳಲ್ಲಿ ಬಸವೋತ್ತರಯುಗದ ಎಲ್ಲ ಸಂಪುಟಗಳು ಸೇರಿ ತೋರುವ ಒಟ್ಟು ವಚನಕಾರರ ಸಂಖ್ಯೆ ಪ್ರಥಮ ಆವೃತ್ತಿಯಲ್ಲಿ ೩೦ ಇದ್ದುದು ದ್ವಿತೀಯ ಆವೃತ್ತಿಯಲ್ಲಿ ೩೬ ಆಗಿದೆ; ವಚನ ಸಂಖ್ಯೆ ೬೫೯೦ ಇದ್ದುದು ೭೭೬೭ ಆಗಿದೆ; ಒಟ್ಟು ವಚನಕಾರರ ಪಟ್ಟಿಯಲ್ಲಿ ಕೂಡಲಸಂಗಮೇಶ್ವರ, ಘನಲಿಂಗದಯ್ಯ, ಬೊಮ್ಮಗೊಂಡೇಶ್ವರ, ಮೆಡ್ಲೇರಿ ಶಿವಲಿಂಗ ಮತ್ತು ವೀರಸಂಗಯ್ಯರ ಹೆಸರುಗಳು ಹೆಚ್ಚಿಗೆ ಸೇರ್ಪಡೆಯಾಗಿವೆ. ಮುಮ್ಮಡಿ ಕಾರ್ಯೇಂದ್ರನ ವಚನ ಸಂಖ್ಯೆ ೧೮೯ ಇದ್ದುದು ೧೨೫ ಆಗಿದೆ. ಗಣದಾಸಿ ವೀರಣ್ಣನ ವಚನ ಸಂಖ್ಯೆ ೩೭ ಇದ್ದುದು ೪೦ ಆಗಿದೆ. ಹಾಗೆಯೇ ಈ ಸಂಪುಟದ ವಚನಕಾರರು ಎಂಬ ಪಟ್ಟಿಯಲ್ಲಿ ಕೂಡಲಸಂಗಮೇಶ್ವರ, ಘನಲಿಂಗದಯ್ಯನ ಹೆಸರುಗಳನ್ನು ಸೇರಿಸಲಾಗಿದೆ. ೯ ಜನ ವಚನಕಾರರು ಇದ್ದುದು ೧೧ ಜನ ಆಗಿದೆ; ಒಟ್ಟು ೧೬೧೪ ವಚನಗಳಿದ್ದುದು ೧೬೩೬ ಆಗಿದೆ. ಇದಕ್ಕನುಗುಣವಾಗಿ ಆಯಾ ವಚನಕಾರರ ವಿಷಯದಲ್ಲಿಯೂ ಸೂಕ್ತ ಬದಲಾವಣೆ ಮಾಡಿಕೊಳ್ಳಲಾಗಿದೆ.

ಈ ಸಂಪುಟ ಮರು ಪರಿಷ್ಕರಣ ಮಾಡುವಲ್ಲಿ ಮೌಲಿಕ ಸಲಹೆ ಸೂಚನೆಗಳನ್ನಿತ್ತ ಪ್ರಧಾನ ಸಂಪಾದಕರಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ, ಕೂಡಲಸಂಗಮೇಶ್ವರ ವಚನಗಳನ್ನು ಬಳಸಿಕೊಳ್ಳಲು ಅನುಮತಿಯಿತ್ತ ಮಿತ್ರರಾದ ಪ್ರೊ. ಬಿ. ರಾಜಶೇಖರಪ್ಪ ಅವರಿಗೆ, ತಿದ್ದುಪಡಿಗಳನ್ನು ಸೂಚಿಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪನವರಿಗೆ, ಕರಡು ತಿದ್ದುವಲ್ಲಿ ಸಹಾಯಕಳಾದ ನನ್ನ ಶ್ರೀಮತಿ ಮಂಗಳಾ ಅವರಿಗೆ ಕೃತಜ್ಞತೆಗಳು.

■■ -ವೀರಣ್ಣ ರಾಜೂರ

*

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

೧. ಕರಸ್ಥಲ ಮಲ್ಲಿಕಾರ್ಜುನದೇವರ ವಚನ ೧
೨. ಕಾಡಸಿದ್ಧೇಶ್ವರನ ವೀರಶೈವಷಟ್‌ಸ್ಥಲ ೩
೩. ಕುಷ್ಟಗಿ ಕರಿಬಸವೇಶ್ವರನ ಚಿತ್ತಸದ್ಗತಿಯ ವಚನ ೨೬೦
೪. ಕೂಡಲಸಂಗಮೇಶ್ವರನ ವಚನ ೨೯೪
೫. ಗಣದಾಸಿ ವೀರಣ್ಣನ ವಚನ ೩೧೮
೬. ಗುರುಸಿದ್ಧ ದೇವರ ವಚನ ೩೬೦
೭. ಗುಹೇಶ್ವರಯ್ಯನ ವಚನ ೪೫೨
೮. ಗೋಣಿ ಮಾರಯ್ಯನ ವಚನ ೪೭೪
೯. ಘನಲಿಂಗದಯ್ಯನ ಮುಕ್ತಿಯ ವಚನ ೪೮೦
೧೦. ಚೆನ್ನಯ್ಯನ ಕಂಡಿತದ ವಚನ ೪೮೪
೧೧. ಜಕ್ಕಣಯ್ಯನ ನಿರಾಳ ಮಂತ್ರಗೋಪ್ಯ ೫೦೫

**ಅನುಬಂಧ**

ವಚನಗಳ ಅಕಾರಾದಿ ೭೦೭
ಕಠಿಣ ಪದಕೋಶ ೭೩೫
ಆಕರ ಗ್ರಂಥಗಳು ೭೪೨

## ಕರಸ್ಥಲ ಮಲ್ಲಿಕಾರ್ಜುನದೇವರ ವಚನ

೧

ಅಂತರಂಗದಲ್ಲಿ ಅರಿವಿಲ್ಲದವಂಗೆ
ಬಹಿರಂಗದಲ್ಲಿ ಕ್ರೀಯಿದ್ದು ಫಲವೇನು ?
ಅದು ಕಣ್ಣಿಲ್ಲದವನ ಬಾಳುವೆಯಂತೆ.
ಬಹಿರಂಗದಲ್ಲಿ ಕ್ರೀಯಿಲ್ಲದವಂಗೆ
ಅಂತರಂಗದಲ್ಲಿ ಅರಿವಿದ್ದು ಫಲವೇನು ?
ಅದು ಶೂನ್ಯಾಲಯದ ದೀಪದಂತೆ.
ಅಂತರಂಗದ ಅರಿವು, ಬಹಿರಂಗದ ಕ್ರಿಯೆ-
ಈ ಉಭಯಾಂಗವೊಂದಾಗಬೇಕು.
ಅದೆಂತೆಂದಡೆ :
``ಅಂತರ್ಜ್ಞಾನ ಬಹಿಃಕ್ರಿಯಾ ಏಕೀಭಾವೋ ವಿಶೇಷತಃ``
ಎಂದುದಾಗಿ,
ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಕ್ರೀಯುಳ್ಳ ಮಹಾತ್ಮನೆ
ಭಕ್ತನಪ್ಪ, ಮಹೇಶ್ವರನಪ್ಪ, ಪ್ರಸಾದಿಯಪ್ಪ
ಪ್ರಾಣಲಿಂಗಿಯಪ್ಪ, ಶರಣನೈಕ್ಯನಪ್ಪ.
ನಮ್ಮ ಪರಮಗುರು ಶಾಂತಮಲ್ಲಿಕಾರ್ಜುನ ತಾನೆಯಪ್ಪ. ॥ ೧ ॥

೨

ಕರಸ್ಥಲದಲ್ಲಿದ್ದ ಲಿಂಗವ ಬಿಟ್ಟು
ಧರೆಯ ಮೇಲಣ ಪ್ರತಿಷ್ಠೆಗೆರಗುವ
ನರಕಿ ನಾಯಿಗಳನೇನೆಂಬೆನಯ್ಯ
ಪರಮಗುರು ಶಾಂತಮಲ್ಲಿಕಾರ್ಜುನ ! ॥ ೨ ॥

೩

ವಾರಿಧಿಯೊಳಗಣ ವಾರಿಕಲ್ಲ ಕಡಿದು
ತೊಲೆ ಕಂಬವ ಮಾಡಿ ಮನೆಯ ಕಟ್ಟಿಕೊಂಡು
ಒಕ್ಕಲಿರಬಹುದೆ ಅಯ್ಯಾ ?
ಅಗ್ನಿಯೊಳಗಿಪ್ಪ ಕರ್ಪುರವ ಕರಡಿಗೆಯ ಮಾಡಿ
ಪರಿಮಳವ ತುಂಬಿ, ಅನುಲೇಪನಮಾಡಿ
ಸುಖಿಸಬಹುದೆ ಅಯ್ಯಾ ?
ವಾಯುವಿನೊಳಗಣ ಪರಿಮಳವ ಹಿಡಿದು
ದಂಡೆಯ ಕಟ್ಟಿ ಮಂಡೆಯೊಳಗೆ
ಮುಡಿಯಬಹುದೆ ಅಯ್ಯಾ ?
ಬಯಲ ಮರೀಚಿಕಾಜಲವ ಕೊಡನಲ್ಲಿ ತುಂಬಿ
ಹೊತ್ತು ತಂದು ಅಡಿಗೆಯ ಮಾಡಿಕೊಂಡು
ಉಣಬಹುದೆ ಅಯ್ಯಾ ?
ನಿಮ್ಮ ನೆರೆಯರಿದು ನೆರೆದು ಪರವಶನಾಗಿ
ತನ್ನ ಮರೆದ ಪರಶಿವಯೋಗಿಗೆ
ಮರಳಿ ಪರಿಭವಂಗಳುಂಟೆ
ಪರಮಗುರು ಶಾಂತಮಲ್ಲಿಕಾರ್ಜುನಾ ? ॥ ೩ ॥

೪

ಸತಿಯರ ನೋಡಿ ಸಂತೋಷವ ಮಾಡಿ,
ಸುತರ ನೋಡಿ ಸುಮ್ಮಾನವನೈದಿ,
ಮತಿಯ ಹೆಚ್ಚುಗೆಯಿಂದ ಮೈಮರದೊರಗಿ
ಸತಿಸುತರೆಂಬ ಸಂಸಾರದಲ್ಲಿ
ಮತಿಗೆಟ್ಟು ಮರುಳಾದುದನೇನೆಂಬೆ
ಎನ್ನ ಪರಮಗುರು ಶಾಂತಮಲ್ಲಿಕಾರ್ಜುನಾ. ॥ ೪ ॥

■ ■

## ಕಾಡಸಿದ್ಧೇಶ್ವರನ ವೀರಶೈವಷಟ್‌ಸ್ಥಲ

### ಗುರುಸ್ತೋತ್ರ

೫

ನಿರವಯನೆಂಬ ಗಣೇಶ್ವರನ ಶಿಷ್ಯ
ನಿರಾಮಯನೆಂಬ ಗಣೇಶ್ವರ.
ನಿರಾಮಯನೆಂಬ ಗಣೇಶ್ವರನ ಶಿಷ್ಯ
ನಿರಾಕುಳನೆಂಬ ಗಣೇಶ್ವರ.
ನಿರಾಕುಳನೆಂಬ ಗಣೇಶ್ವರನ ಶಿಷ್ಯ
ನಿರ್ಭೇದ್ಯನೆಂಬ ಗಣೇಶ್ವರ.
ನಿರ್ಭೇದ್ಯನೆಂಬ ಗಣೇಶ್ವರನ ಶಿಷ್ಯ
ನಿರ್ಮಳ ನಿಜೈಕ್ಯನೆಂಬ ಗಣೇಶ್ವರ.
ನಿರ್ಮಳ ನಿಜೈಕ್ಯನೆಂಬ ಗಣೇಶ್ವರನ ಶಿಷ್ಯ
ನಿರ್ಭಾವ ನಿಃಪುರುಷ ನಿರಂಜನನೆಂಬ ಗಣೇಶ್ವರ.
ನಿರ್ಭಾವ ನಿಃಪುರುಷ ನಿರಂಜನನೆಂಬ ಗಣೇಶ್ವರನ ಶಿಷ್ಯ
ನಿರಾಕಾರ ನಿರಾವರಣನೆಂಬ ಗಣೇಶ್ವರ.
ನಿರಾಕಾರ ನಿರಾವರಣನೆಂಬ ಗಣೇಶ್ವರನ ಶಿಷ್ಯ
ನಿರುಪಮನೆಂಬ ಗಣೇಶ್ವರ.
ನಿರುಪಮನೆಂಬ ಗಣೇಶ್ವರನ ಶಿಷ್ಯ

ನಿರ್ಗುಣ ನಿರಾಧಾರ ನಿರಾಲಂಬನೆಂಬ ಗಣೇಶ್ವರ.
ನಿರ್ಗುಣ ನಿರಾಧಾರ ನಿರಾಲಂಬನೆಂಬ ಗಣೇಶ್ವರನ ಶಿಷ್ಯ
ಸರ್ವಾಧಾರ ಸದಾಶಿವನೆಂಬ ಗಣೇಶ್ವರ.
ಸರ್ವಾಧಾರ ಸದಾಶಿವನೆಂಬ ಗಣೇಶ್ವರರ ಸ್ವರೂಪರಾದಂಥ
ಆದಿನಾಥೇಶ್ವರದೇವರು.
ಆದಿನಾಥೇಶ್ವರದೇವರ ಶಿಷ್ಯರು ಸತ್ಯೇಶ್ವರದೇವರು.
ಸತ್ಯೇಶ್ವರದೇವರ ಶಿಷ್ಯರು ಘಟಯಂತ್ರದೇವರು.
ಘಟಯಂತ್ರದೇವರ ಶಿಷ್ಯರು ಭೃಕುಟೇಶ್ವರದೇವರು.
ಭೃಕುಟೇಶ್ವರದೇವರ ಶಿಷ್ಯರು ವಿಶ್ವೇಶ್ವರದೇವರು.
ವಿಶ್ವೇಶ್ವರದೇವರ ಶಿಷ್ಯರು ಮುಕ್ತೇಶ್ವರದೇವರು.
ಮುಕ್ತೇಶ್ವರದೇವರ ಶಿಷ್ಯರು ಬ್ರಹ್ಮೇಶ್ವರದೇವರು.
ಬ್ರಹ್ಮೇಶ್ವರದೇವರ ಶಿಷ್ಯರು ಶಿವದೇವಯ್ಯನವರು.
ಶಿವದೇವಯ್ಯನವರ ಶಿಷ್ಯರು ಶಿವಜ್ಞಾನೇಶ್ವರದೇವರು.
ಶಿವಜ್ಞಾನೇಶ್ವರದೇವರ ಶಿಷ್ಯರು ಓಂಕಾರದೇವರು.
ಓಂಕಾರದೇವರ ಶಿಷ್ಯರು ಸೋಮಲಿಂಗದೇವರು.
ಸೋಮಲಿಂಗದೇವರ ಶಿಷ್ಯರು ಸಂಗಮೇಶ್ವರದೇವರು.
ಸಂಗಮೇಶ್ವರದೇವರ ಕರಕಮಲದಲ್ಲಿ ಉತ್ಪತ್ಯವಾದ
ಶಿಶುವು ಕಾಡಸಿದ್ಧ ನಾನಯ್ಯ.
ಹಾಂಗೆಂದು ಅನಾದಿವಿಡಿದು ಬಂದ ಗುರುಶಿಷ್ಯಸಂಬಂಧ,
ಹಾಂಗೆ ಅನಾದಿವಿಡಿದು ಬಂದ ಲಿಂಗ,
ಅನಾದಿವಿಡಿದು ಬಂದ ಜಂಗಮ,
ಅನಾದಿವಿಡಿದು ಬಂದ ಪಾದೋದಕ-ಪ್ರಸಾದ,
ಅನಾದಿವಿಡಿದು ಬಂದ ವಿಭೂತಿ-ರುದ್ರಾಕ್ಷಿ-ಮಂತ್ರ,
ಅನಾದಿವಿಡಿದು ಬಂದ ಭಕ್ತಿ-ಜ್ಞಾನ-ವೈರಾಗ್ಯ.
ಅನಾದಿವಿಡಿದು ಬಂದ ವೀರಶೈವಷಟ್‌ಸ್ಥಲದ ಆಚಾರವು.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧ ॥

## ಪಿಂಡಸ್ಥಲ

೨

ಆದಿ ಅನಾದಿಯಿಲ್ಲದಂದು :
ಶೂನ್ಯ ನಿಃಶೂನ್ಯವಿಲ್ಲದಂದು:

ಸುರಾಳ ನಿರಾಳವಿಲ್ಲದಂದು :
ಭೇದಾಭೇದಂಗಳೇನೂ ಇಲ್ಲದಂದು :
ನಿಮ್ಮ ನೀವರಿಯದೇ ಇರ್ದಿರಲ್ಲ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨ ||

೭

ಜಲದೊಳಗಣ ಸೂರ್ಯನಂತೆ;
ಭೂಮಿಯೊಳಗಣ ದ್ರವ್ಯದಂತೆ;
ಕಾಷ್ಠದೊಳಗಣ ಪಾವಕನಂತೆ;
ಪುಷ್ಪದೊಳಗಣ ಪರಿಮಳದಂತೆ;
ಕ್ಷೀರದೊಳಗಣ ಘೃತದಂತೆ;
ಇರ್ದಿರಯ್ಯ, ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. || ೩ ||

೮

ನೆಲದೊಳಗಣ ಮಧುರದಂತೆ;
ಶಿಲೆಯೊಳಗಣ ಜ್ಯೋತಿಯಂತೆ;
ಶಬ್ದದೊಳಗಣ ನಿಶ್ಯಬ್ದದಂತೆ;
ಕಪ್ಪಿನೊಳಗಣ ರೂಪಿನಂತೆ
ಇರ್ದಿರಯ್ಯ, ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. || ೪ ||

## ಪಿಂಡಜ್ಞಾನಸ್ಥಲ

ಸೂತ್ರ : ಇಂತಪ್ಪ ಚಿತ್ಪಿಂಡದಲ್ಲಿ ಪರವಸ್ತು ನಿಕ್ಷೇಪವಾಗಿರ್ದು ತನ್ನ ಸ್ವಲೀಲೆಯಿಂದ ಉದಯವಾಗುತ್ತಿರ್ದುದಾಗಿ ಮುಂದೆ ಪಿಂಡಜ್ಞಾನಸ್ಥಲವಾದುದು.

೯

ಉದಯಕಾಲದ ಸೂರ್ಯನಂತೆ;
ಮುಗಿಲೊಳಗಣ ಕ್ಷಣಿಕದಂತೆ;
ಗರ್ಭದೊಳಗಣ ಶಿಶುವಿನಂತೆ;
ನೆಲದಮರೆಯ ನಿಧಾನದಂತೆ;
ಜ್ಞಾನಕಲಾತ್ಮನಂಗದಿಂದ ಪರವಸ್ತು ನಿದರ್ಶನವಾಗುತ್ತಿರ್ದ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೫ ॥

೧೦

ಗುಡಿಗೊರವ ಗುಡಿಸಿ ಕಣ್ಣು ಕೆಂಪಗಾಗಿ
ಜಟ್ಟಿಂಗ ಬೇತಾಳನ ನುಂಗಿ,
ಬೇತಾಳ ಜಟ್ಟಿಂಗನ ನುಂಗಿ
ತಲೆ ನರೆಗೂದಲ ನುಂಗಿ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬ ॥

೧೧

ಊರ ಬೆಂಕಿ ಊರ ಸುಟ್ಟಿತ್ತ ಕಂಡೆ.
ಸುಟ್ಟ ಊರೊಳಗಣ ಅಗ್ನಿ
ಊರ ಮುಂದಿನ ಶಿಶುವ ನುಂಗಿತ್ತ ಕಂಡೆ.
ಆ ಶಿಶು ಊರ ಬೆಂಕಿಯ ನುಂಗಿ,
ಸೂಳಿಯ ಸಂಗವ ಮಾಡಿ,
ಆ ಶಿಶುವು ಸತ್ತಿತ್ತ ಕಂಡು ಬೆರಗಾದೆನಯ್ಯಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೭ ॥

೧೨

ಬೇವಿನಮರದ ಬೆಂಕಿ ಪುಟವಾಗಿ,
ಕಾಗೆ ಸತ್ತು ಗೂಡು ಉಳಿದಿತ್ತ ಕಂಡೆ.
ಆ ಗೂಡಿನೊಳಗಣ ಕೋಗಿಲೆ
ಬೇವಿನಮರದ ಬಳಗವನೊಂದುಳಿಯದೆ ಕೊಂದು
ಆರ ಹಂಗಿಲ್ಲದೆ ಎಲ್ಲರ ಕೂಡಿಕೊಂಡು
ಮೇಲುದೇಶಕ್ಕೆ ಹಾರಿಹೋಯಿತ್ತು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮ ॥

೧೩

ಪಿಂಡದಲ್ಲಿ ಶಿವಜ್ಞಾನ ತಲೆದೋರಿದ ಲಕ್ಷಣವೆಂತೆಂದೊಡೆ:
ಪೃಥ್ವಿ ಆಕಾಶದ ಮಧ್ಯದಲ್ಲಿ ತೋರುವ ತೋರಿಕೆಗಳು

ಸ್ವರ್ಗ-ಮರ್ತ್ಯ-ಪಾತಾಳಂಗಳೆಂಬ ತ್ರಿಲೋಕಮಧ್ಯದಲ್ಲಿ
ಪುಣ್ಯ-ಪಾಪ ಮೊದಲಾದ ಸರ್ವಕರ್ಮಂಗಳು
ಕೃತಯುಗ, ತ್ರೇತಾಯುಗ, ದ್ವಾಪರ, ಕಲಿಯುಗದಲ್ಲಿ
ಆಗು-ಚೇಗೆಗಳು-
ಇದಲ್ಲದೆ ಪಂಚತತ್ವಮಿಶ್ರವಾದ ದೇಹ ಪ್ರಕೃತಿ ಮನ
ಮೊದಲಾದ ಅರುವತ್ತಾರುಕೋಟಿ ಕರಣಂಗಳು
ಇಂತೀ ಎಲ್ಲವು ಪರಶಿವಲಿಂಗದಿಂದುದಯವಾಗಿ,
ತೋರಿ ತೋರಿ ಅಡಗುವುದಲ್ಲದೆ
ನಿಜವಲ್ಲವೆಂದು ವಿಭಾಗಿಸಿ,
ಪರಶಿವತತ್ವ ಒಂದೇ ನಿಜ, ಉಳಿದುವೆಲ್ಲ ಮಿಥ್ಯವೆಂದು
ತಿಳಿವುದೇ ಅದೇ ಪರಮಜ್ಞಾನ.
ಆ ಪರಮಜ್ಞಾನವೆಂಬಾತ ತಾನೆಂದು ತಿಳಿದಾತನೆ
ಶಿವಜ್ಞಾನಿಶರಣನೆಂದನಯ್ಯಾ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯ ॥

೧೪

ಪರಶಿವತತ್ವದ ಸ್ವರೂಪವ ಬಲ್ಲೆವೆಂಬಿರಿ,
ನಿಮ್ಮ ಬಲ್ಲತನವ ಪೇಳಿರಯ್ಯಾ.
ಆಗಮ ಪುರುಷರಿರಾ, ನಿಮ್ಮಾಗಮಂಗಳು ನಮ್ಮ ಶಿವನ ನಿಲುಕಡೆಯನರಿಯದೆ,
ಅರಸಿ ಅರಸಿ ಆಸತ್ತು ಬಳಲಿ ಹೋದವು ಕೇಳಿರಯ್ಯಾ.
ವೇದಪುರುಷರಿರಾ, ನಿಮ್ಮ ವೇದಂಗಳು ವೇದಿಸಲರಿಯದೆ
ನಾಯಾಗಿ ಬೊಗಳಿ, ಬೆಂಡಾಗಿ ಹೋದವು ಕೇಳಿರಯ್ಯಾ.
ಪುರಾಣಪುರುಷರಿರಾ, ನಿಮ್ಮ ಪುರಾಣಂಗಳು ಪೂರೈಸಿ ಪರಶಿವನ ಕಾಣದೆ
ವೀರಶೈವ ಪುಂಡ್ರಮಸ್ತಕದಿಂದ ಮಥನಿಸಿ ಹೋದವು ಕೇಳಿರಯ್ಯಾ.
ಶಾಸ್ತ್ರಸಂಧಿಗಳರಿರಾ ನಿಮ್ಮ ಶಾಸ್ತ್ರ ಸಾಧಿಸಿ ನಮ್ಮ ಪರಶಿವನ ನಿಲುಕಡೆಯ ಕಾಣದೆ
ಒರಲಿ ಒರಲಿ ಹೋದವು ಕೇಳಿರಯ್ಯಾ.
ತರ್ಕ ತಂತ್ರಗಳ ಕಲಿತು ಹೇಳುವರೆಲ್ಲ ಟಗರು, ಕೋಣ, ಹುಂಜಿನಂತೆ
ಹೋರಾಡಿ ಮಥನದಿಂದ ಹೊಡೆದಾಡಿ
ಪರಶಿವನ ಕಾಣದೆ ಸತ್ತು ಹೋದರಲ್ಲಾ !
ಇಂತೀ ವೇದ ಶಾಸ್ತ್ರಾಗಮ ಪುರಾಣ ತರ್ಕ ತಂತ್ರಗಳು
ಶಿವನ ನಿಲುಕಡೆಯನೆಂದಿಗೂ ಅರಿಯವು.

ಇಂತಿವನೆಲ್ಲವನು ನೋಡಿ ಶಿವನ ಕೂಡಬೇಕೆಂಬಣ್ಣಗಳು
ಮುನ್ನವೆ ಅರಿಯರು, ಅದೇನು ಕಾರಣವೆಂದಡೆ-
ಪ್ರಸೂತವಾಗದ ಮುನ್ನ ಶಿಶು ಬಯಸಿದರುಂಟೆ ?
ಹಸಿಯಿಲ್ಲದ ಭೂಮಿಯಲ್ಲಿ ಬೀಜವ ಬಿತ್ತಿ
ಫಲವ ಬಯಸಿದರುಂಟೆ ?
ಈ ದೃಷ್ಟಾಂತದಂತೆ ತಿಳಿದು
ಇಂತೀ ಎಲ್ಲವನು ವಿಸರ್ಜಿಸಿ ಕಳೆವುದು ಶಿವಜ್ಞಾನ.
ಅಂತಪ್ಪ ಶಿವಜ್ಞಾನದ ನಿಲವು ಕರಸ್ಥಳದ ಇಷ್ಟಲಿಂಗ.
ಆ ಇಷ್ಟಲಿಂಗಬ್ರಹ್ಮದ ನಿಜವು ತಾನೆಂದು ತಿಳಿದು
ಶಿಶುಕಂಡ ಕನಸಿನಂತೆ, ಮೂಕ ಸಕ್ಕರಿಮೆದ್ದಂತೆ ಇರ್ದರಯ್ಯಾ
ನಿಮ್ಮ ಶರಣರು ಎಂದನಯ್ಯಾ ನಿಮ್ಮ ಶರಣ ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೧೦ ॥

೧೧

ಅಗಮ್ಯ, ಅಗೋಚರವಾದ ಪರಬ್ರಹ್ಮವನು
ಪ್ರಮಾಣಕ್ಕೆ ತಂದು ಹೇಳುವಿರಯ್ಯಾ.
ಪ್ರಮಾಣಕ್ಕತೀತವಾಗಿರ್ಪುದು ಪರಬ್ರಹ್ಮವು.
ಹಳದಿ, ಹಸಿರು, ಕೆಂಪು, ಬಿಳಿದು, ನೀಲ, ಮಾಣಿಕ್ಯವೆಂಬ
ಷಡ್ವರ್ಣಗಳಿಂದ ವರ್ಣಿಸಿ ಹೇಳುವಿರಯ್ಯಾ;
ವರ್ಣಾತೀತವಾದ ವಸ್ತುವನು
ವರ್ಣಿಸುವ ಪರಿಯಿನ್ನೆಂತು ಹೇಳಿರಯ್ಯಾ !
ಜಪ-ತಪ-ಮಂತ್ರ-ಸ್ತೋತ್ರಂಗಳಿಂದ ವಾಚ್ಯಕ್ಕೆ ತಂದು ಹೇಳುವಿರಯ್ಯಾ;
ವಾಚಾತೀತವಾದ ವಸ್ತುವನು ವಾಚ್ಯಕ್ಕೆ ತರುವುದಿನ್ನೆಂತು ಹೇಳಿರಯ್ಯಾ !
ಇಂತೀ ಎಲ್ಲವನು ತನ್ನ ಪರಮಜ್ಞಾನದೃಷ್ಟಿಗೆ
ಮಿಥ್ಯವೆಂದು ತಿಳಿಯುವುದೇ ಶಿವಜ್ಞಾನ.
ಆ ಶಿವಜ್ಞಾನವೆಂಬರುಹೇ ತಾನೆಂಬ ತನು.
ತನ್ನಲ್ಲಿ ತಾನೇ ತಿಳಿಯುವುದೀಗ ಅದೇ ಬ್ರಹ್ಮಜ್ಞಾನವಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧ ॥

೧೨

ಬ್ರಹ್ಮಾಂಡವು ಹೇಗೆ ಪುಟ್ಟಿತ್ತು ಪೇಳ್ವೆ ಕೇಳಿರಯ್ಯಾ.
ಆದಿ, ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು

ತನ್ನ ಸ್ವರೂಪವ ತಾನರಿಯದೆ ಅನಂತ ಕಲ್ಪಕಲ್ಪಾಂತರ ಇರ್ದು
ತನ್ನ ಸ್ವಲೀಲೆಯಿಂದ ತಾನೇ ಜಗತ್ಸೃಷ್ಟಿ ನಿಮಿತ್ತವಾಗಿ,
ನೆನವುದೋರಲು, ಆ ನೆನವು ನಿರ್ಧರವಾಗಿ ಚಿತ್ತೆನಿಸಿತ್ತು.
ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.
ಆ ಚಿತ್ತು ತ್ರಿವಿಧಮಲ ಸಹವಾಗಿ ಚತುರ್ವಿಧವು ಘಟ್ಟಿಗೊಂಡು
ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.
ಆ ಮಹಾಲಿಂಗದಿಂದ ಆತ್ಮ ಜನನ ;
ಆತ್ಮದಿಂದ ಭಾವ ಪುಟ್ಟಿತ್ತು.
ಆ ಭಾವದಿಂದ ಮೋಹ ಪುಟ್ಟಿತ್ತು.
ಆ ಮೋಹವೆಂದಡೆ, ಮಾಯವೆಂದಡೆ, ಆಶೆಯೆಂದಡೆ, ಮನವೆಂದಡೆ
ಏಕಪರ್ಯಾಯಾರ್ಥ.
ಇಂತಪ್ಪ ಮೋಹದಿಂದ ತ್ರೈಲೋಕ ಮೊದಲಾಗಿ
ಚತುರ್ದಶಭುವನಂಗಳು ಪುಟ್ಟಿದವು.
ಆ ಚತುರ್ದಶಭುವನದ ಮಧ್ಯದಲ್ಲಿ ಇರುವೆ ಮೊದಲು ಆನೆ ಕಡೆಯಾಗಿ
ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ
ದೇವ-ದಾನವ-ಮಾನವರು ಮೊದಲಾದ ಹೆಣ್ಣು-ಗಂಡು,
ಸಚರಾಚರಂಗಳೆಲ್ಲವು ಉತ್ಪತ್ತಿಯಾದವು.
ಇಂತೀ ಎಲ್ಲವು ಪರಶಿವನ ನೆನವುಮಾತ್ರದಿಂದ ಮರೀಚಿಕಾಜಲದಂತೆ,
ಸುರಚಾಪದಂತೆ, ತೋರಿ ತೋರಿ ಅಡಗುವವಲ್ಲದೆ
ನಿಜವಲ್ಲ ಮಿಥ್ಯವೆಂದು ತಿಳಿದು ವಿಸರ್ಜಿಸಿ ಬಿಡುವಾತ
ತಾನೇ ಪರಶಿವನೆಂದು ತಿಳಿವುದಯ್ಯ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨ ॥

೧೭

ವಸ್ತುವೆಂದರೆ ಪರಬ್ರಹ್ಮದ ನಾಮವು.
ಅಂತಪ್ಪ ವಸ್ತುವಿನ ಕಳೆ, ಆ ವಸ್ತುವಿನ ನಿಲವು ಪೇಳ್ವೆ ಕೇಳಿರಯ್ಯ.
ಅನಂತಹಸ್ತ, ಅನಂತಪಾದ, ಅನಂತಮುಖ,
ಅನಂತನಯನ, ಅನಂತಕರಣ, ಅನಂತಾಂಗ,
ಅನಂತ ಮಿಂಚಿನಲತೆಪ್ರಕಾಶದಂತೆ,
ಅನಂತ ಚಂದ್ರ ಸೂರ್ಯಪ್ರಕಾಶದಂತೆ,
ಅನಂತ ವಜ್ರ ವೈಡೂರ್ಯ ಮಾಣಿಕದ ಪ್ರಕಾಶದಂತೆ,

ಇಂತೀ ನಿಲವನು, ಇಂತೀ ಪ್ರಕಾಶವನು ಗರ್ಭೀಕರಿಸಿಕೊಂಡು,
ಆದಿ-ಅನಾದಿ, ಸುರಾಳ-ನಿರಾಳ, ಶೂನ್ಯ-ನಿಃಶೂನ್ಯದಿಂದತ್ತತ್ತಲಾದ
ಪರವಸ್ತು ಸ್ವಯಂಭುವಾಗಿರ್ದು ತನ್ನ ವಿನೋದಕ್ಕೆ ತಾನೆ ಶಂಭುರೂಪದಿಂ
ಲೀಲಾಮೂರ್ತಿಯಾಗಿ, ಇಂತೀ ನಿಲವನು, ಇಂತೀ ಕಳೆಯನು ಧರಿಸಿ,
ಘನಮಹಾಲಿಂಗವಾಗಿರ್ಪನು.
ಅಂತಪ್ಪ ಘನಮಹಾಲಿಂಗವನು ಬಹಿಷ್ಕರಿಸಿ,
ಶ್ರೀಗುರು ಶಿಷ್ಯನ ಕರಸ್ಥಳಕ್ಕೆ ಇಷ್ಟಲಿಂಗವ ಮಾಡಿ,
ತೋರಿ ಕೊಟ್ಟ ಬಳಿಕ ಆ ಲಿಂಗದಲ್ಲಿ ತನ್ನ ತನುವನು ಅಡಗಿಸಿ,
ಆ ತನುವಿನಲ್ಲಿ ಆ ಲಿಂಗವ ಸಂಬಂಧಿಸಿ,
ಶಿಖಿ-ಕರ್ಪೂರದ ಸಂಯೋಗದ ಹಾಗೆ
ಅಂಗಲಿಂಗವೆಂಬುಭಯ ನಾಮ ನಷ್ಟವಾಗಿರ್ಪಾತನೇ
ಶಂಭುಸ್ವಯಂಭುಗಿಂದತ್ತತ್ತ ತಾನೆ ನೋಡಾ,
ಶಂಭು-ಎಂಬಡೆ ಇಷ್ಟಲಿಂಗ, ಸ್ವಯಂಭು ಎಂದೊಡೆ ಪ್ರಾಣಲಿಂಗ.
ಉಭಯದಿಂದತ್ತತ್ತವೆಂದೊಡೆ ಭಾವಲಿಂಗ.
ಅಂತಪ್ಪ ಭಾವಲಿಂಗಸ್ವರೂಪ ಶರಣ ತಾನೆ ನೋಡಾ ಎಂದನಯ್ಯ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೩ ||

೧೮

ಶಿಶುವಿನ ಗರ್ಭದೊಳಗೆ ಈರೇಳು ಭುವನಂಗಳಿರ್ಪವು.
ಆ ಭುವನಂಗಳನೆಲ್ಲ ಒಂದು ನಕ್ರ ನುಂಗಿರ್ಪುದು.
ಆ ನಕ್ರನ ತಲೆಯೊಳಗೆ ಒಂದು ಬೆಲೆಯಿಲ್ಲದ ರತ್ನ ಇರ್ಪುದು.
ಆ ರತ್ನಕ್ಕೆ ಇಬ್ಬರು ಹೆಣಗಾಡುತ್ತಿರ್ಪರು ನೋಡಾ!
ಹೆಳವ ನಡವ, ಅಂಧಕ ಕಂಡ, ಕೈಯಿಲ್ಲದವ ಪಿಡಿದುದ ಕಂಡು
ನಾ ಬೆರಗಾದೆನಯ್ಯಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೪ ||

೧೯

ಆಕಾರವಿಲ್ಲ-ನಿರಾಕಾರವಿಲ್ಲ, ಆದಿಯಿಲ್ಲ-ಅಂತರವಿಲ್ಲ,
ಎಡನಿಲ್ಲ-ಬಲನಿಲ್ಲ, ಹಿಂದಿಲ್ಲ-ಮುಂದಿಲ್ಲ,
ಒಳಗಿಲ್ಲ-ಹೊರಗಿಲ್ಲ, ಈರೇಳರಲ್ಲಿಲ್ಲ, ಮಧ್ಯದಲ್ಲಿಲ್ಲ.

ಮತ್ತೆಲ್ಲಿಹುದು? ಎರಡಳಿದು ಒಂದಿಲ್ಲದೆ
ನಿರಾಳದಲ್ಲಿಹುದುಯೆಂದನಯ್ಯ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೫ ॥

## ಮಾಯಾವಿಲಾಸ ವಿಡಂಬನಸ್ಥಲ

ಸೂತ್ರ : ಆವನೊಬ್ಬನ ಪಿಂಡದಲ್ಲಿ ಶಿವಕೃಪೆಯಿಂ ಸುಜ್ಞಾನೋದಯವಾಗಲಾಗಿ ಹೀಗೆಂದು ತಿಳಿವುದು. ಆ ತಿಳಿದಂಥ ಶರಣನು ತನ್ನ ಪರಮಜ್ಞಾನ ದೃಷ್ಟಿಗೆ ಇದಿರಿಟ್ಟು ತೋರುವ ಮಾಯಾವಿಲಾಸವ ವಿಡಂಬಿಸುತಿರ್ದ ಕಾರಣ ಮುಂದೆ ಮಾಯಾವಿಲಾಸ ವಿಡಂಬನಸ್ಥಲವಾದುದು.

೨೦

ಅಲುಕುಮಲುಕಿನ ಅರಮನೆಯಲ್ಲಿ
ಮೂರುಮುಖದ ಅಂಗನೆ ಇರ್ಪಳು.
ಆ ಅಂಗನೆಯ ಮೂರುಮುಖದಲ್ಲಿ
ಮೂರುರಾಜ್ಯಕ್ಕೆ ಒಡೆಯರಾದ ರಾಜರು ಇರ್ಪರು.
ಆ ಅಂಗನೆಯ ಕಾಲೊಳಗೆ ಕೆಲಬರು ಎಡೆಯಾಡುತ್ತಿರ್ಪರು.
ಆ ಅಂಗನೆಯ ಉದರದಲ್ಲಿ ಉರಿ ಉದ್ಭವಿಸಲು
ಅಂಗನೆಯಳಿದು ಮುಖವಿಕಾರವಾಗಿ, ತ್ರಿಪುರ ಸುಟ್ಟು,
ಅರಸು ಮಡಿದು, ಕಾಲು ಮುರಿದು, ಮನೆ ನಷ್ಟವಾದಲ್ಲದೆ
ತನ್ನ ತಾನರಿಯಬಾರದು ನೋಡಾ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬ ॥

೨೧

ಆರುವರ್ಣದ ಪಕ್ಷಿ ಮೂರುವರ್ಣದ ಗೂಡನಿಕ್ಕಿ,
ತಲೆಯಿಲ್ಲದ ಮರಿಯನೀದು
ಕಾಲಿಲ್ಲದೆ ನಡೆದಾಡುತಿರ್ಪುದ ಕಂಡೆ !
ಆ ಮರಿ ಹಾಲಸೊಲ್ಲದು.
ಬೆಲ್ಲ ಕಹಿಯೆಂದು ಬೇವಿನ ರಸವ ಕುಡಿದು,
ಮಲವ ತಿಂದು ಬದುಕೇನೆನುತಿರ್ಪುದ ಕಂಡೆ.
ಆ ಮರಿಗೆ ಅಗ್ನಿವರ್ಣದ ಕೋಳಿ ಗುಟುಕನಿಕ್ಕಿ,
ಗೂಗಿ ಆರೈಕೆಯ ಮಾಡಲು,

ತಲೆ ಬಂದು, ಕಣ್ಣು ತೆರೆದು, ಪಕ್ಕವಿಲ್ಲದೆ ಹಾರಿಹೋಗಿ,
ಕೊಂಕಣದೇಶದಲ್ಲಿ ಸತ್ತುದ ಕಂಡು ಬೆರಗಾದೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭ ॥

೨೨

ಹರಹರಾ, ಈ ಮಾಯೆ ಇದ್ದೆಡೆಯ ನೋಡಾ !
ಶಿವಶಿವಾ, ಈ ಮಾಯೆ, ಇದ್ದೆಡೆಯ ನೋಡಾ !
ಪುರುಷನ ಮುಂದೆ ಸ್ತ್ರೀಯಾಗಿರ್ಪಳು,
ಸ್ತ್ರೀಯ ಮುಂದೆ ಪುರುಷನಾಗಿರ್ಪುದ ಕಂಡೆ.
ಕೂಟಕ್ಕೆ ಸತಿಯಾಗಿರ್ಪಳು, ಮೋಹಕ್ಕೆ ಮಗಳಾಗಿರ್ಪಳು ಕಂಡೆ.
ಜನನಕ್ಕೆ ತಾಯಾಗಿರ್ಪಳು, ಮೋಹವಿಳಾಸಕ್ಕೆ
ಜಾರಸ್ತ್ರೀಯಾಗಿರ್ಪಳು ಕಂಡೆ.
ಧರ್ಮಕ್ಕೆ ಕರ್ಮರೂಪಿಣಿಯಾಗಿರ್ಪಳು,
ಕರ್ಮಕ್ಕೆ ಧರ್ಮರೂಪಿಣಿಯಾಗಿರ್ಪಳು ಕಂಡೆ.
ಯೋಗಿಗಳೆಂಬವರ ಭೋಗಕ್ಕೆ ಒಳಗುಮಾಡಿತ್ತು,
ಭೋಗಿಗಳೆಂಬವರ ಯೋಗಿಗಳ ಮಾಡಿತ್ತು ಕಂಡೆ.
ಇಂತಪ್ಪ ಮಾಯೆಯ ಗೆಲುವಡೆ ತ್ರೈಲೋಕದೊಳಗೆ
ದೇವ ದಾನವ ಮಾನವರು ಮೊದಲಾದವರ
ನಾನಾರನು ಕಾಣೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮ ॥

೨೩

ಇಂತಪ್ಪ ಮಾಯೆಯ ಗೆಲಲರಿಯದೆ
ಮುಂದೆ ಮೋಕ್ಷವ ಹಡೆಯಬೇಕೆಂಬಣ್ಣಗಳ ಮುಕ್ತಿಯ ಪೇಳುವೆ.
ಅದೆಂತೆನೆ:
ಕ್ಷುತ್ತಿಗೆ ಭಿಕ್ಷೆ, ಶೀತಕ್ಕೆ ರಗಟೆ,
ಮಾತಿಗೆ ಮಂತ್ರ, ನಿದ್ರೆಗೆ ಶಿವಧ್ಯಾನ.
ಇಂತಪ್ಪ ಶಿವಾಚಾರಮಾರ್ಗವನು ಹಿಡಿದು ಆಚರಿಸಿ
ಮುಂದೆ ಶಿವಪಥವ ಸಾಧಿಸಬೇಕಲ್ಲದೆ.
ಇಂತೀ ಗುರುವಾಕ್ಯವ ಮೀರಿ,

ಹೊನ್ನೊಂದು ಬಿಳುಪಿನ ಮಲ, ಹೆಣ್ಣೊಂದು ಕೆಂಪಿನ ಮಲ,
ಮಣ್ಣೊಂದು ಕಪ್ಪಿನ ಮಲ-
ಇಂತೀ ತ್ರಿವಿಧಮಲವ ತಿಂದು
ಸಂಸಾರವಿಷಯರಸವೆಂಬ ಕಾಳಕೂಟ ನೀರು ಕುಡಿದು,
ಮುಂದೆ ನಾವು ಶಿವಪಥವ ಸಾಧಿಸಿ ಮುಕ್ತಿಯ ಹಡೆಯಬೇಕೆಂಬ
ಯುಕ್ತಿಗೇಡಿಗಳು ಈ ಹೀಂಗೆ
ಪ್ರಪಂಚವಮಾಡಿ ಇದರೊಳಗೆ ಮೋಕ್ಷವೆಂದು,
ಇದನ್ನು ಬಿಟ್ಟರೆ ಮೋಕ್ಷವಿಲ್ಲವೆಂದು
ಯುಕ್ತಿಹೇಳುವ ಯುಕ್ತಿಗೇಡಿಗಳ ಈ ಮಾತ ಸಾದೃಶ್ಯಕ್ಕೆ ತಂದು,
ಆಚಾರಹೇಳುವ ಅನಾಚಾರಿಗಳ
ಈ ಉಭಯಭ್ರಷ್ಟ, ಹೊಲೆಮಾದಿಗರ ನಾಲಿಗೆಯ ಶಿರಸಿನ ಹಿಂಭಾಗದಲ್ಲಿ ಸೀಳಿ,
ಅವರ ನಾಲಿಗೆಯ ಹಿರಿದು ತೆಗೆದು
ಕೆರವಿನಟ್ಟೆಗೆ ಹಾಕೆಂದಾತ ವೀರಾಧಿವೀರ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೯ ||

೨೪

ಮನೆಯೆನ್ನದು, ಧನವೆನ್ನದು, ತನುವೆನ್ನದು,
ಮಾತಾಪಿತರು, ಸತಿಸುತರು ಎನ್ನವರು,
ಸ್ನೇಹಿತರು ಬಾಂಧವರು ಎನ್ನವರು ಎಂದರೆ
ಭಕ್ತಿ ಭಿನ್ನವಾಯಿತ್ತು.
ಅವನಿಗೆ ಗುರುವಿಲ್ಲ, ಗುರುವಿಲ್ಲವಾಗಿ ಲಿಂಗವಿಲ್ಲ,
ಲಿಂಗವಿಲ್ಲವಾಗಿ ಜಂಗಮವಿಲ್ಲ,
ಜಂಗಮವಿಲ್ಲವಾಗಿ ಪಾದೋದಕ ಪ್ರಸಾದವಿಲ್ಲ,
ಪಾದೋದಕ ಪ್ರಸಾದವಿಲ್ಲವಾಗಿ ವಿಭೂತಿ ರುದ್ರಾಕ್ಷಿ ಮಂತ್ರ
ಮೊದಲಾಗಿ ಅಷ್ಟಾವರಣಂಗಳಿಲ್ಲ.
ಇಂತಪ್ಪ ಪಂಚಮಹಾಪಾತಕರಿಗೆ ಮುಕ್ತಿಯೆಂಬುದು
ಎಂದೆಂದಿಗೂ ಇಲ್ಲ.
ಇಂಥ ನಿರ್ಣಯವನು ಸ್ವಾನುಭಾವಗುರುಮುಖದಿಂ ತಿಳಿದು ವಿಚಾರಿಸಿ,
ಸಕಲ ಪ್ರಪಂಚವನೆಲ್ಲವನು ನಿವೃತ್ತಿಯಂ ಮಾಡಿ,
ಹಿಂದೆ ಹೇಳಿದ ಗುರುಮಾರ್ಗ ಆಚಾರವನು ವಿಚಾರಿಸಿ ತಿಳಿದಲ್ಲದೆ
ಶಿವಪಥವೆಂದಿಗೂ ಸಾಧ್ಯವಾಗದು.

ಇದನರಿಯದೆ ಕಾಮದಲ್ಲಿ ಕರಗಿ, ಕ್ರೋಧದಲ್ಲಿ ಕೊರದು,
ಲೋಭ ಮೋಹದಲ್ಲಿ ಮಗ್ನರಾಗಿ,
ಮದಮತ್ಸರದಲ್ಲಿ ಮುಂದುಗಾಣದೆ,
ಅಷ್ಟಮದದಲ್ಲಿ ಕಟ್ಟುವಡೆದು,
ದಶವಾಯುಗಳಲ್ಲಿ ಹರಿದಾಡಿ,
ಹೀಗೆ ಭವದತ್ತ ಮುಖವಾಗಿ
ಹೊತ್ತುಗಳೆದು ಸತ್ತು ಹೋಗುವ
ಹೇಸಿ ಮೂಳರ ಹಿಡಿತಂದು,
ಅವರ ಮೂಗು ಹಲ್ಲು ಮೋರೆ ಕೊಯಿದು
ಕಟವಾಯಿ ಸೀಳಿ ಕನ್ನಡಿಯ ತೋರಿ,
ಅವನ ಬಾಯಲ್ಲಿ ಸಣ್ಣ ಸುಣ್ಣ ಮೆಣಸಿನ ಹಿಟ್ಟು ತುಂಬಿ
ಮೇಲು ಮುಂದಾಗಿ ನಮ್ಮ ಗಣಂಗಳ ಪಾದರಕ್ಷೆಯಲ್ಲಿ ಘಟ್ಟಿಸಿ
ಅಟ್ಟೆಂದಾತ ನಮ್ಮ ಶರಣ ವೀರಾಧಿವೀರ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦ ॥

೨೧

ನಿಮ್ಮ ತಂದಿ ಸತ್ತದ್ದು ನೋಡುತ್ತಿದ್ದಿ,
ನಿಮ್ಮ ತಂದಿಯ ತಂದಿ ಸತ್ತದ್ದು ಕಾಣುತ್ತಿದ್ದಿ,
ನಿಮ್ಮ ಅಜ್ಜ ಪಣಜ ಸತ್ತದ್ದು ಕೇಳುತ್ತಿದ್ದಿ,
ನಿಮ್ಮ ತಾಯಿ ಸತ್ತದ್ದು ನೋಡುತ್ತಿದ್ದಿ,
ನಿಮ್ಮ ತಾಯಿಯ ತಾಯಿ ಸತ್ತದ್ದು ಕಾಣುತ್ತಿದ್ದಿ,
ನಿಮ್ಮ ತಾಯಿಯ ಅಜ್ಜಿ ಪಣಜಿ ಸತ್ತದ್ದು ಕೇಳುತ್ತಿದ್ದಿ.
ನಿನ್ನ ಸತಿಸುತರು ಒಡಹುಟ್ಟಿದ ಬಂಧುಗಳು
ಸ್ನೇಹಿತರು ಬೀಗರು ಮೊದಲಾದ ಸಕಲಲೋಕಾದಿಲೋಕಂಗಳು
ನಿಮ್ಮ ಕಣ್ಣಮುಂದೆ ವೃಕ್ಷದ ಪರ್ಣಗಳು ಉದುರಿದ ಹಾಗೆ
ಸಕಲರು ಅಳಿದುಹೋಗುವುದ ನೋಡುತ್ತಿದ್ದಿ.
ಇದಲ್ಲದೆ ದೃಷ್ಟಾಂತ: ಒಬ್ಬ ರೋಮಜಋಷಿಗೆ
ಮೂರುವರೆಕೋಟಿ ರೋಮಂಗಳುಂಟು,
ಅಂತಹ ಋಷಿಗೂ ಕೃತಯುಗ, ತ್ರೇತಾಯುಗ,
ದ್ವಾಪರ, ಕಲಿಯುಗವೆಂಬ ಚತುರ್ಯುಗ ಪ್ರಳಯವಾದಲ್ಲಿ
ಒಂದು ರೋಮ ಉದುರುವದು.

ಹೀಗೆ ಈ ಪರಿಯಲ್ಲಿ ಮೂರುವರೆಕೋಟಿ ರೋಮಂಗಳು
ಉದುರಿದಲ್ಲಿ ಆ ರೋಮಋುಷಿಯೆಂಬ
ಮುನೀಶ್ವರನು ಪ್ರಳಯವಾಗುವನು.
ಮತ್ತೆ ದೇವಲೋಕದ ಸನಕ ಸನಂದಾದಿ
ಮುನಿಜನಂಗಳು ಅನಂತಕೋಟಿ ಋುಷಿಗಳು
ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಮೊದಲಾದ
ತೆತ್ತೀಸಕೋಟಿ ದೇವರ್ಕಳು ಇಂತಿವರೆಲ್ಲರು
ಎತ್ತಲಾನುಕಾಲಕ್ಕೆ ಮರಣಕ್ಕೆ ಒಳಗಾದರು.
ವೇದಾಗಮ ಶಾಸ್ತ್ರ ಪುರಾಣ ಶ್ರುತಿ ಪ್ರಮಾಣಗಳಿಂದ
ಮತ್ತೆ ಹರ, ಗುರು, ಪುರಾತನರ ವಾಕ್ಯದಿಂದ
ನಿಮ್ಮ ಉಭಯ ಕರ್ಣದಿಂ ಕೇಳುತ್ತಿದ್ದಿ.
ಇಂತೀ ಎಲ್ಲವನು ಕಂಡು ಕೇಳಿ ಗಾಢನಿದ್ರೆಯ ಮನುಷ್ಯನ ಹಾಂಗೆ
ನಿನ್ನ ನಿಜಸ್ವರೂಪವ ಮರದು ತ್ರಿವಿಧಮಲವ ಕಚ್ಚಿ
ಶುನಿ ಶೂಕರನ ಹಾಗೆ ಕಚ್ಚಿ ಕಡಿದಾಡಿ
ಸತ್ತು ಹೋಗುವ ವ್ಯರ್ಥಗೇಡಿ
ಮೂಳ ಹೊಲೆಮಾದಿಗರ ಕಿವಿ ಹರಿದು,
ಕಣ್ಣುಗುಡ್ಡೆಯ ಮೀಟಿ, ನೆತ್ತಿಯ ಮೇಲೆ ಮೂರು ಪಟ್ಟೆಯನೆ ಕೆತ್ತಿ
ಅವನ ಮುಖದ ಮೇಲೆ ಹೆಂಡಗಾರನ ಮುಖದಿಂದ
ಲೊಟ್ಟಲೊಟ್ಟನೆ ಉಗುಳಿಸಿ ಪಡುವಲದಿಕ್ಕಿಗೆ ಅಟ್ಟೆಂದ ಕಾಣಾ
ವೀರಾಧಿವೀರ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೧ ॥

೨೬

ಶಿವಶಿವಾ, ತಾವಾರೆಂಬುದನರಿಯದೆ
ತಮ್ಮ ನಿಜವನು ಮರೆದು ಈ ಮರುಳ ಮಾನವರು
ಕೆಟ್ಟ ಕೇಡ ಪೇಳ್ವೆ, ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ.
ಆನೆ ಮೊದಲು ಇರುವೆ ಕಡೆ ಒಂದೊಂದು ಜನ್ಮದಲ್ಲಿ
ಸಹಸ್ರವೇಳೆ ಸತ್ತು, ಸಹಸ್ರವೇಳೆ ಹುಟ್ಟಿ,
ತೊಡದ ದೇಹವ ತೊಟ್ಟು, ಮೆಟ್ಟದ ಭೂಮಿಯ ಮೆಟ್ಟಿ,
ಉಣ್ಣದ ಆಹಾರವನುಂಡು, ಭವಭವದಲ್ಲಿ ಘಾಸಿಯಾಗಿ,
ಕಡೆಯಲ್ಲಿ ಮನುಷ್ಯದೇಹವ ತಾಳಿದಲ್ಲಿ

ವಾತ ಪಿತ್ಥ ಶ್ಲೇಷ್ಮ ಮೊದಲಾದ ಮುನ್ನೂರರುವತ್ತು
ರೋಗಾದಿ ಬಾಧೆಗಳಿಂದ ಕಂದಿ ಕುಂದಿ ನೊಂದು ಬೆಂದು
ತಾಪತ್ರಯಾಗ್ನಿಯಿಂದ ದಗ್ಧವಾದ ದುಃಖವ ಪೇಳಲಿಕ್ಕೆ
ಸಹಸ್ರಹೆಡೆಯ ಶೇಷಂಗೆ ಎರಡು ಸಹಸ್ರಜಿಹ್ವೆಯಿಂದ ಅಳವಲ್ಲ,
ಸಹಸ್ರನೇತ್ರವುಳ್ಳ ದೇವೇಂದ್ರಂಗೆ ನೋಡೆನೆಂದರೆ ಅಸಾಧ್ಯ.
ಚತುರ್ಮುಖಬ್ರಹ್ಮಂಗೆ ಪೇಳಲಿಕ್ಕೆ ಅಗಮ್ಯ ಅಗೋಚರ.
ಇಂತಿದನು ಕಂಡು, ಕೇಳಿ ಮೈಮರೆದು,
ಹೇಸಿಕಿ ಸಂಸಾರದಲ್ಲಿ ಸಿಲ್ಕಿ ಸತ್ತುಹೋಗುವ
ಹೇಸಿಮೂಳ ಹೊಲೆಮಾದಿಗರಿಗೆ ಶಿವಪಥವು
ಎಂದೆಂದಿಗೂ ಸಾಧ್ಯವಿಲ್ಲ, ಅಸಾಧ್ಯವೆಂದಾತ
ನಿಮ್ಮ ಶರಣ ವೀರಾಧಿವೀರ ಕಾಡಸೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೨೨ ॥

೨೬

ಶಿವಶಿವಾ, ಈ ಮಾಯಾಸಂಸಾರಯುಕ್ತವಾದ
ದೇಹದ ಸುಖ ಹೇಳಲಂಜುವೆ.
ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ.
ಈ ದೇಹದ ವಿಸ್ತಾರ ಪೇಳ್ವೆ, ಎಲೆ ಮರುಳ ಮಾನವರಿರಾ,
ಲಾಲಿಸಿ ಕೇಳಿರಿ,
ಎಲುವಿನ ಕಂಬ, ಎಲುವಿನ ತೊಲೆಗಳು,
ಸಂದೆಲವುಗಳೆ ಬಿಗಿ ಮೊಳೆಗಳು,
ಕರುಳಜಾಳಿಗೆ ಬಿಗಿಜಂತಿಗಳು,
ಬರುಕಿ ಎಲವುಗಳೆ ಜಂತಿಗಳು,
ಬೆರಳೆಲವುಗಳೆ ಚಿಲಿಕೆಗಳು.
ಇಂತೀ ಗೃಹಕ್ಕೆ ಮಾಂಸದ ಮೇಲುಮುದ್ದೆಗಳು,
ರಕ್ತದ ಸಾರಣೆಗಳು, ಮಜ್ಜದ ಮಡುಗಳು,
ಕೀವಿನ ಕುಣಿಗಳು, ಪಿತ್ತದ ಕೊಂಡಗಳು,
ಶೋಣಿತದ ಕಾವಲಿಗಳು, ಮೂತ್ರದ ಹಳ್ಳಗಳು,
ಅಮೇಧ್ಯದ ಹುತ್ತಗಳು, ಹುಳುವಿನ ಡೋಣಿಗಳು,
ಜಂತಿನ ಬಣವೆಗಳು-ಇಂತಪ್ಪ ಮನಗೆ ಎಂಟು ಗವಾಕ್ಷಗಳು.
ಬಾಯಿ ಎಂಬುದೊಂದು ದೊಡ್ಡ ದರವಾಜು.
ಇಂತೀ ದುರಾಚಾರಯುಕ್ತವಾದ ದೇಹವೆಂಬ ಗೃಹಕ್ಕೆ

ಮೂವರು ಕರ್ತೃಗಳಾಗಿಹರು.
ಅವರು ಆರಾರೆಂದಡೆ:
ಹೊನ್ನೊಂದು ಭೂತ, ಹೆಣ್ಣೊಂದು ಭೂತ, ಮಣ್ಣೊಂದು ಭೂತ.
ಇಂತೀ ತ್ರಿವಿಧ ಭೂತಸ್ವರೂಪರಾದ
ಬ್ರಹ್ಮ ವಿಷ್ಣು ರುದ್ರರೆಂಬ ತ್ರಿವಿಧದೇವತೆಗಳು.
ಅದೆಂತೆಂದಡೆ:
ಹೊನ್ನು ರುದ್ರನಹಂಗು, ಹೆಣ್ಣು ವಿಷ್ಣುವಿನಹಂಗು,
ಮಣ್ಣು ಬ್ರಹ್ಮನಹಂಗು,
ಇಂತಪ್ಪ ತ್ರಿಮೂರ್ತಿಗಳ ಹಂಗಿನಿಂದಾದ ದೇಹವು
ಮಿಥ್ಯೆಯೆಂದು ತಿಳಿದು ವಿಸರ್ಜಿಸಲರಿಯದೆ,
ಆ ಅನಿತ್ಯದೇಹದ ಸುಖವನು ಮೆಚ್ಚಿ ಮರುಳಾಗಿ,
ಬಿಡಲಾರದೆ, ಈ ಹೇಸಿಕಿ ಹೊಲೆಸಂಸಾರದಲ್ಲಿ ಶಿಲ್ಕಿ
ಮಲತ್ರಯದಾಶೆಗೆ ಹೊಡದಾಡಿ
ಹೊತ್ತುಗಳೆದು ಸತ್ತುಹೋಗುವ
ಕರ್ತೃಗಳಿಗಿನ್ನೆತ್ತಣ ಮುಕ್ತಿ ಹೇಳಾ !
ಮುಂದೆ ಹೊಲೆಮಾದಿಗರ ಮನೆಯಲ್ಲಿ
ಶುನಿ ಶೂಕರ ಕುಕ್ಕುಟನ ಬಸುರಲ್ಲಿ ಹುಟ್ಟಿಸದೆ ಬಿಡನೆಂದಾತ
ನಿಮ್ಮ ಶರಣ ವೀರಾಧಿವೀರ ಕಾಡನೊಳಗಾದ
ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೨೩ ॥

೨೮

ಶಿವಶಿವಾ, ನಾವು ಗುರುಗಳು,
ನಾವು ಜಂಗಮಲಿಂಗಪ್ರೇಮಿಗಳು,
ನಾವು ಪಟ್ಟದಯ್ಯಗಳು, ನಾವು ಚರಂತಿಯ ಹಿರಿಯರು,
ನಾವು ಸದಾಚಾರ ಸತ್ಯಸದ್ಭಕ್ತರೆಂದು ಬೊಗಳುತ್ತಿಪ್ಪಿರಿ.
ಅದೆಲ್ಲಿಯದೊ ಸದಾಚಾರ ?
ಮಣ್ಣುಹಿಡಿದವಂಗೆ ಗುರುವಿಲ್ಲ,
ಹೆಣ್ಣುಹಿಡಿದವಂಗೆ ಲಿಂಗವಿಲ್ಲ,
ಹೊನ್ನುಹಿಡಿದವಂಗೆ ಜಂಗಮವಿಲ್ಲ.
ಇಂತೀ ತ್ರಿವಿಧಮಲವ ಕಚ್ಚಿದ
ಶೂಕರ ಶುನಿಗಳಿಗೆ ತೀರ್ಥಪ್ರಸಾದ ಅದೆಲ್ಲಿಯದೋ ?
ಇಲ್ಲವಾಗಿ, ಅಷ್ಟಾವರಣವು ಇಲ್ಲ.

ಇಂತಪ್ಪ ಪಂಚಮಹಾಪಾತಕರು
ನಾವು ಮೋಕ್ಷವ ಹಡೆಯಬೇಕೆಂದು
ಗುರು-ಲಿಂಗ-ಜಂಗಮವ ತಮ್ಮಂಗದಿಂದಿದಿರಿಟ್ಟು
ಪೂಜೋಪಚಾರವ ಮಾಡಿ, ಸಾಲೋಕ್ಯ, ಸಾಮೀಪ್ಯ,
ಸಾರೂಪ್ಯ, ಸಾಯುಜ್ಯವೆಂಬ
ಚತುರ್ವಿಧ ಖಂಡಿತಫಲಪದವ ಪಡೆದು,
ಅನುಭವಿಸಿ ಕಡೆಯಲ್ಲಿ ಎಂಬತ್ತುನಾಲ್ಕುಲಕ್ಷದ
ಭವಮಾಲೆಯಲ್ಲಿ ಬಪ್ಪುದು ತಪ್ಪದು.
ಇಂತಪ್ಪ ವಿಚಾರವನು ಸ್ವಾನುಭಾವಗುರುಮುಖದಿಂ ತಿಳಿದು
ವಿಚಾರಿಸಿ ಸಕಲ ಪ್ರಪಂಚವೆಲ್ಲವನು ನಿವೃತ್ತಿಯ ಮಾಡಿ
ದ್ವೈತಾದ್ವೈತವ ನಷ್ಟವ ಮಾಡಿ,
ಸಕಲ ಸಂಸಾರ ವ್ಯಾಪರದ ವ್ಯಾಕುಲಚಿಂತನೆಯ ಬಿಟ್ಟು,
ನಿಶ್ಚಿಂತನಾಗಿ ಏಕಾಗ್ರಚಿತ್ತದಲ್ಲಿ ಸ್ವಸ್ಥಿರನಾಗಿ
ಮುಂದೆ ಶಿವಪಥವ ಸಾಧಿಸಬೇಕಲ್ಲದೆ ಇದನರಿಯದೆ
ತನು-ಮನ-ಧನದ ಪ್ರಕೃತಿಯಲ್ಲಿ ಹರಿದಾಡಿ
ಮಾತಾಪಿತರು, ಸತಿಸುತರು, ಸ್ನೇಹಿತರು,
ಬಾಂಧವರು ಎನ್ನವರು ಎಂದು
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಮಲವ ತಿಂದು
ಸಂಸಾರ ರಸೋದಕವೆಂಬ ನೀರು ಕುಡಿದು
ಹಾಳಕೇರಿಗೆ ಹಂದಿ ಜಪಯಿಟ್ಟ ಹಾಂಗೆ
ಈ ಸಂಸಾರವೆಂಬ ಹಾಳಕೇರಿಗೆ ಜೀವನೆಂಬ ಹಂದಿ
ಮೆಚ್ಚಿ ಮರುಳಾಗಿ ಹೊಡೆದಾಡಿ ಹೊತ್ತುಗಳೆದು
ಸತ್ತುಹೋಗುವ ಹೇಸಿ ಮೂಳ ಹೊಲೆಮಾದಿಗರಿಗೆ
ಶಿವಪಥವು ಎಂದಿಗೂ ಸಾಧ್ಯವಿಲ್ಲವೆಂದಾತ
ವೀರಾಧಿವೀರ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೪ ||

೨೫

ಶಿವಶಿವಾ, ಈ ಮರುಳಮಾನವರಿಗೆ
ನಾನೇನೆಂಬೆನಯ್ಯಾ!
ಎನ್ನ ಮನೆ, ಎನ್ನ ಬದುಕು, ಎನ್ನ ತಾಯಿತಂದೆ,

ಎನ್ನಸತಿಸುತರು ಬಾಂಧವರು ಎಂದು
ಮೆಚ್ಚಿ ನಚ್ಚಿ ಮರುಳಾಗಿರ್ದರಯ್ಯಾ.
ಹಿಂದೆ ನಾನಾಯೋನಿಯಲ್ಲಿ
ಆನೆ ಮೊದಲು ಇರುವೆ ಕಡೆಯಾಗಿ
ಒಂದೊಂದು ಜನ್ಮದಲ್ಲಿ ಸಹಸ್ರವೇಳೆ ಹುಟ್ಟಿ, ಸಹಸ್ರವೇಳೆ ಸತ್ತು,
ಸಹಸ್ರವೇಳೆ ಹುಟ್ಟಿ ಬಪ್ಪಲ್ಲಿ
ಆವಾಗ ನಿನಗೆ ತಾಯಿ ಯಾರು, ನಿನಗೆ ತಂದೆ ಯಾರು,
ನಿನಗೆ ಸತಿಸುತರು ಬಾಂಧವರು ಯಾರು ?
ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ.
ನಿನಗೆ ಶ್ರೀಗುರುವೇ ತಾಯಿ, ನಿನಗೆ ಶ್ರೀಗುರುವೇ ತಂದೆ,
ನಿನಗೆ ಶ್ರೀಗುರುವೆ ಸತಿಸುತರು, ಬಂಧುಗಳೆಂಬ ನಿರ್ಣಯವನು
ಸಮ್ಯಜ್ಞಾನಗುರುಮುಖದಿಂದ ತಿಳಿದು
ವಿಚಾರಿಸಿಕೊಳ್ಳಬಲ್ಲರೆ ಬಲ್ಲರೆಂಬೆ.
ಗುರು-ಲಿಂಗ-ಜಂಗಮ ಒಂದೆಯೆಂದು ತಿಳಿಯಬಲ್ಲರ ಬಲ್ಲರೆಂಬೆ.
ಈ ಭೇದವನರಿಯದೆ ಮಿಥ್ಯಸಂಸಾರದ ಮಾತಾಪಿತರು,
ಸತಿಸುತರು ಬಾಂಧವರ ತನು-ಮನ-ಧನದ ಅಭಿಮಾನದಲ್ಲಿ
ಸಟೆಯ ಸಂಸಾರದಲ್ಲಿ ಹೊಡೆದಾಡಿ ಹೊತ್ತುಗಳೆದು
ಸತ್ತುಹೋಗುವ ಮಂಗಮನುಜರಿಗೆ
ಇನ್ನೆಂದು ಮೋಕ್ಷವಹುದೊ ?
ಶಿವಶಿವಾ, ಈ ಲೋಕದ ಅಭಿಮಾನವ ಬಿಟ್ಟು,
ಪರಲೋಕದಭಿಮಾನವ ಹಿಡಿದು ಆಚರಿಸಿ ಇರಬಲ್ಲರೆ
ಗುರು-ಲಿಂಗ-ಜಂಗಮದ ಪುತ್ರರೆಂಬೆ,
ಪುರಾತರ ಮಗನೆಂಬೆ,
ಇಲ್ಲದಿರೆ ಕಿರಾತರ ಮಗನೆಂಬೆ,
ನರಗುರಿಗಳ ಪುತ್ರರೆಂಬೆನೆಂದಾತ
ವೀರಾಧಿವೀರ ನಮ್ಮ ಶರಣ ಕಾಡಿನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. || ೨೬ ||

೩೦

ಮಣ್ಣ ಮೆಚ್ಚಿ ಗುರುವಿಗೆ ಹೊರತಾದೆ,
ಹೆಣ್ಣ ಮೆಚ್ಚಿ ಲಿಂಗಕ್ಕೆ ಹೊರತಾದೆ,
ಹೊನ್ನ ಮೆಚ್ಚಿ ಜಂಗಮಕ್ಕೆ ಹೊರತಾದೆ.

ಇಂತೀ ತ್ರಿವಿಧವ ಮೆಚ್ಚಿ ಅಕಟಕಟಾ ಕೆಟ್ಟೆನೆಂದು
ಗುರೂಪಾವಸ್ತೆಯಂ ಮಾಡಿ, ಗುರುವಾಕ್ಯ ಪ್ರಮಾಣವಿಡಿದು,
ಆಚರಿಸುವ ಜ್ಞಾನಕಲಾತ್ಮನಿಗೆ
ಈ ಲೋಕದ ಜಡಜೀವರು ಕಡುಪಾತಕರು ಬಂದು
ಈ ಸಂಸಾರದಲ್ಲಿ ಪಾರಮಾರ್ಥವುಂಟು,
ಇದರೊಳಗೆ ಸಾಧಿಸಬೇಕೆಂದು
ಇಹ ಬಿಟ್ಟು, ವೈರಾಗ್ಯದಲ್ಲಿ ಮೋಕ್ಷವಿಲ್ಲೆಂದು ಹೇಳುವರು.
ಇದಕ್ಕೆ ಉಪಮೆ-
ಹಿಂದೆ ಕಲ್ಯಾಣಪಟ್ಟಣಕ್ಕೆ ತಮ್ಮ ತಮ್ಮ ದೇಶವ ಬಿಟ್ಟು
ಬಂದ ಗಣಂಗಳಾರಾರೆಂದಡೆ:
ಮೋಳಿಗೆ ಮಾರತಂದೆಗಳು ಕಾಶ್ಮೀರದೇಶದ ಅರಸು.
ನಿಜಗುಣಸ್ವಾಮಿಗಳು ಕೈಕಾಡದೇಶದ ಅರಸು.
ಸುಲಿಯ ಚಂದಯ್ಯನವರು ಕೈಕಾಣ್ಯದೇಶದ ಅರಸುಗಳು.
ಇಂತಿವರು ಮೊದಲಾದ ಬಸವಾದಿ ಪ್ರಭುದೇವರಾಂತ್ಯಮಾದ
ಏಳನೂರೆಪ್ಪತ್ತು ಪ್ರಮಥಗಣಂಗಳು.
ತಮ್ಮ ತಮ್ಮ ದೇಶವ ಬಿಟ್ಟು ಕಲ್ಯಾಣಕ್ಕೆ ಬಂದರು.
ಅವರೆಲ್ಲರು ಹುಚ್ಚರು, ನೀವೇ ಬಲ್ಲವರು.
ಬಸವೇಶ್ವರದೇವರು ಮೊದಲಾಗಿ ಏಳನೂರೆಪ್ಪತ್ತು
ಪ್ರಮಥಗಣಂಗಳು ಕೂಡಿ ತಮ್ಮ ತಮ್ಮ ಹೃನ್ಮಂದಿರದಲ್ಲಿ ನೆಲಸಿರುವ
ಪರಶಿವಲಿಂಗಲೀಲಾವಿನೋದದಿಂ
ಎರಡೆಂಬತ್ತೆಂಟುಕೋಟಿ ವಚನಗಳನ್ನು ಹಾಡಿಕೊಂಡರು.
ಇದರನುಭಾವವ ತಿಳಿಯಬಲ್ಲರೆ ಹೇಳಿರಿ:
ಅರಿಯದಿದ್ದರೆ ಕೇಳಿರಿ.
ತನು-ಮನ-ಧನ ನೀನಲ್ಲ,
ಪಂಚವಿಂಶತಿತತ್ವ ನೀನಲ್ಲ,
ಪಂಚಭೂತಪ್ರಕೃತಿ ನೀನಲ್ಲ,
ಮನ ಮೊದಲಾದ ಅರವತ್ತಾರುಕೋಟಿ ಕರಣಾದಿ ಗುಣಂಗಳು ನೀನಲ್ಲ.
ಇಂತೀ ಎಲ್ಲವನು ನೀನಲ್ಲ, ನೀನು ಸಾಕಾರಸ್ವರೂಪಲ್ಲವೆಂದು
ಸ್ವಾನುಭಾವಜ್ಞಾನಗುರುಮುಖದಿಂದ ತಿಳಿದು
ಸಕಲಪ್ರಪಂಚವನೆಲ್ಲವ ನಿವೃತ್ತಿಯ ಮಾಡಿ.
ಸಕಲಸಂಶಯವಂ ಬಿಟ್ಟು, ನಿಶ್ಚಿಂತನಾಗಿ.

ಏಕಾಗ್ರಚಿತ್ತದಲ್ಲಿ ಸ್ವಸ್ಥಿರನಾಗಿ ಮುಂದೆ ಶಿವಪಥವ ಸಾಧಿಸೆಂದು
ಹಾಡಿದರಲ್ಲದೆ ಅವರೇನು ದಡ್ಡರೇ?
ನೀವೇ ಬಲು ಬುದ್ಧಿವಂತರು, ಬಲುಜಾಣರು !
ಇಂಥ ಯುಕ್ತಿ ವಿಚಾರವ ಹೇಳುವ
ಮತಿಭ್ರಷ್ಟ ಹೊಲೆಯರ ಕಾಲು ಮೇಲಕ್ಕೆ ಮಾಡಿ,
ತಲೆ ಕೆಳಯಕ್ಕೆ ಮಾಡಿ ಅವರಂಗದ ಮೇಲಿನ ಚರ್ಮವ
ಹೋತು ಕುರಿಗಳ ಚರ್ಮವ ಹರಿದ ಹಾಗೆ ಹರಿದು,
ಅವರ ತಿದಿಯನೆ ಹಿರಿದು, ಅವರ ಕಂಡವ ಕಡಿದು,
ಚಿನಿಪಾಲವ ಮಾಡಿ, ಹದ್ದು ಕಾಗೆ ನಾಯಿ ನರಿಗಳಿಗೆ
ಹಾಕೆಂದ ಕಾಣಾ ನಿಮ್ಮ ಶರಣ ವೀರಾಧಿವೀರ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೬ ||

೩೧

ಶಿವಶಿವಾ, ಈ ಸಂಸಾರದಂದುಗ ದುಃಖ ನಾನೆಂತು ಪೇಳ್ವೆ.
ಹೊನ್ನಿನ ವ್ಯಾಪಾರವ ಮಾಡಿ, ಧಾವತಿಯಿಂದ ಗಳಿಸುವದು ದುಃಖ.
ಆ ಹೊನ್ನು ಜೋಕೆಮಾಡುವದು ದುಃಖ.
ಆ ಹೊನ್ನು ಹೋದಮೇಲೆ ಅನೇಕ ದುಃಖ.
ಹೆಣ್ಣು ತರುವದು ದುಃಖ; ಆ ಹೆಣ್ಣು ಆಳುವದು ದುಃಖ.
ಹೆಣ್ಣು ಸತ್ತುಹೋದಮೇಲೆ ಅನೇಕ ದುಃಖ.
ಮಣ್ಣು ದೊರಕಿಸುವದು ದುಃಖ.
ಆ ಮಣ್ಣಿನ ಧಾವತಿ ಹೋರಾಟ ಮಾಡುವದು ದುಃಖ.
ಆ ಮಣ್ಣು ನಾಶವಾದ ಮೇಲೆ ಅನೇಕ ದುಃಖ.
ಇಂತೀ ತ್ರಿವಿಧವು ಮಲಸಮಾನವೆಂದರಿಯದೆ,
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂಬಿರಿ.
ಎಲೆ ಹುಚ್ಚು ಮರುಳು ಮಾನವರಿರಾ,
ನೀವು ಮರಣವಾದ ಮೇಲೆ ಅವು ನಿಮ್ಮ ಕೂಡ ಬರ್ಪವೆ ?
ಬರ್ಪುದಿಲ್ಲ ಕೇಳಾ, ಎಲೆ ಹುಚ್ಚ ಮರುಳ ಮಾನವರಿರಾ,
ಅವು ಆರ ಒಡವೆ ಎಂದರೆ ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ.
ಹೊನ್ನು ರಾಜನದು, ಹೆಣ್ಣು ಅನ್ಯರದು, ಮಣ್ಣು ಬಲ್ಲಿದರದು.
ಇಂತೀ ತ್ರಿವಿಧವು ಅನಿತ್ಯವೆಂದು
ತನ್ನ ಸ್ವಾತ್ಮಜ್ಞಾನದಿಂದ ತಿಳಿದೆಚ್ಚತ್ತು ವಿಸರ್ಜಿಸಿ,

ಗುರುಕಾರುಣ್ಯಮಂ ಪಡೆದು, ಲಿಂಗಾಂಗಸಂಬಂಧಿಯಾಗಿ,
ಗುರೂಪಾವಸ್ತೆಯಂ ಮಾಡಿ, ಮುಂದೆ ಮೋಕ್ಷವ ಪಡೆಯಬೇಕೆಂಬ
ಯುಕ್ತಿ ವಿವೇಕ ವಿಚಾರ ಬುದ್ಧಿಯನರಿಯದೆ
ಅಶನಕ್ಕಾಗಿ ಮಣ್ಣ ಮೆಚ್ಚಿ, ವ್ಯಸನಕ್ಕಾಗಿ ಹೆಣ್ಣ ಮೆಚ್ಚಿ,
ಅಂಗಸುಖಕ್ಕಾಗಿ ಹೊನ್ನ ಮೆಚ್ಚಿ-
ಇಂತೀ ತ್ರಿವಿಧ ಆಶೆ ಆಮಿಷ ಮಮಕಾರದಿಂದ ಮನಮಗ್ನರಾಗಿ,
ಮತಿಗೆಟ್ಟು ಮುಂದುಗಾಣದೆ, ಸಟೆಯ ಸಂಸಾರದಲ್ಲಿ ಹೊಡದಾಡಿ
ಹೊತ್ತುಗಳೆದು ವ್ಯರ್ಥ ಸತ್ತುಹೋಗುವ
ಕತ್ತೆಸೂಳೆಮಕ್ಕಳ ಬಾಳ್ವೆ ಶುನಿ ಸೂಕರ ಕುಕ್ಕುಟನ
ಬಾಳ್ವೆಗಿಂದತ್ತತ್ತಯೆಂದಾತ ನಿಮ್ಮ ಶರಣ ವೀರಾಧಿವೀರ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೭ ||

೩೨

ಶಿವಶಿವಾ, ಈ ಮರುಳಮಾನವರು ಸಟೆಯ ಸಂಸಾರದಲ್ಲಿ ಸಿಲ್ಕಿ,
ತಾವಾರೆಂಬುದನರಿಯದೆ, ತಮ್ಮ ನಿಜಸ್ವರೂಪವ ಮರದು
ಕೆಟ್ಟ ಕೇಡ ಹೇಳುವೆನು ಕೇಳಿರಯ್ಯ.
ಹುಲಿಯ ಬಾಯ ಕುರಿಯ ಹಾಗೆ, ತೋಳನ ಬಾಯ ಮರಿಯ ಹಾಗೆ,
ಸರ್ಪನ ಬಾಯ ಕಪ್ಪೆಯ ಹಾಗೆ, ಬೆಕ್ಕಿನ ಬಾಯ ಇಲಿಯ ಹಾಗೆ,
ಕಟುಕನ ಕೈಯ ಹೋತಿನ ಹಾಗೆ, ರಾಜನ ಕೈಯ ಚೋರನ ಹಾಗೆ,
ಇಂತೀ ದೃಷ್ಟಾಂತದಂತೆ-
ಮಾಯಾಕಾಳರಕ್ಕಸಿಯ ಮೂರು ಮುಖದಲ್ಲಿ-
ಆ ಮೂರು ಮುಖ ಆವಾವೆಂದಡೆ:
ಜಾಗ್ರ ಸ್ವಪ್ನ ಸುಷುಪ್ತಿಯೆಂಬ ತ್ರಿಮುಖದೊಳಗೆ
ಗೋಪ್ಯಮುಖ, ಸಂದ ಮುಖಗಳುಂಟು, ಪೇಳ್ವೆ.
ಜಾಗ್ರಾವಸ್ಥೆಯೇ ವಕ್ತ್ರವಾಗುಳ್ಳ ಮಣ್ಣಿನಲ್ಲಿ
ಕಾಮ ಕ್ರೋಧ ಲೋಭವೆಂಬ ತ್ರಿವಿಧಮುಖವು.
ಸ್ವಪ್ನಾವಸ್ಥೆಯೇ ವಕ್ತ್ರವಾಗುಳ್ಳ ಹೆಣ್ಣಿನಲ್ಲಿ
ಘ್ರಾಣ, ಜಿಹ್ವೆ, ನೇತ್ರ, ಶ್ರೋತ್ರ, ತ್ವಕ್ಕುಯೆಂಬ ಪಂಚಮುಖವು.
ಸುಷುಪ್ತಾವಸ್ಥೆಯೇ ವಕ್ತ್ರವಾಗುಳ್ಳ ಹೊನ್ನಿನಲ್ಲಿ
ಪ್ರಾಣಾದಿ ಧನಂಜಯಾಂತ್ಯಮಾದ ದಶವಾಯುಗಳೇ ದಶಮುಖವಾಗಿರ್ಪವು.
ಇಂತೀ ತ್ರಿವಿಧಮುಖ ಮೊದಲುಮಾಡಿಕೊಂಡು

ಹಲವು ಮುಖದಿಂದ ಹರಿಹರಿದುಕೊಂಡು ತಿಂದು
ಹಿಂಡಿ ಹಿಪ್ಪಿಯ ಮಾಡುವಾಗ
ಹಿಂದೆ ಹೇಳಿದ ದೃಷ್ಟಾಂತದಂತೆ ಮಾಯೆಯೆಂಬ ಹೊಲೆಯಲ್ಲಿ ಶಿಲ್ಕಿ
ಈರೇಳುಲೋಕವೆಲ್ಲ, ಆಳುತ್ತ, ಮುಳುಗುತ್ತ
ಆಲಪರಿದು, ಚಾಲಿಪರಿದು ಎಂಬತ್ತುನಾಲ್ಕುಲಕ್ಷ ಭವಮಾಲೆಯಲ್ಲಿ
ಸತ್ತುಹೋದ ಪ್ರಾಣಿಗಳಿಗೆ ಇನ್ನೆತ್ತಣ ಮುಕ್ತಿಯಯ್ಯಾ.
ಇಂತೀ ಮರುಳಮಾನವರ ಕಂಡು ಬೆಕ್ಕನೆ ಬೆರಗಾಗಿ
ಹೊಟ್ಟೆಹುಣ್ಣಾಗುವನ್ನಕ್ಕರ ನಕ್ಕು ಶಬ್ದಮುಗ್ಧನಾಗಿ
ಸುಮ್ಮನಿರ್ದ ಕಾಣಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೮ ||

೩೩

ಶಿವಶಿವಾ, ಈ ಮರುಳಮಾನವರ
ಮರುಳತನವ ನಾನೇನೆಂಬೆನಯ್ಯಾ.
ಹೊನ್ನು ತನ್ನದೆಂಬರು, ಹೊನ್ನು ರುದ್ರನದು.
ಹೆಣ್ಣು ತನ್ನದೆಂಬರು, ಹೆಣ್ಣು ವಿಷ್ಣುವಿನದು.
ಮಣ್ಣು ತನ್ನದೆಂಬರು, ಮಣ್ಣು ಬ್ರಹ್ಮನದು.
ಇಂತೀ ತ್ರಿವಿಧವು ನಿಮ್ಮವೆಂಬಿರಿ-
ನಿಮ್ಮವು ಅಲ್ಲ ಕಾಣಿರೋ ಎಲಾ ದಡ್ಡ ಪ್ರಾಣಿಗಳಿರಾ.
ಇದಕ್ಕೆ ದೃಷ್ಟಾಂತ:
ಗಗನದಲ್ಲಿ ಚಂದ್ರೋದಯವಾಗಲು
ಭೂಮಂಡಲದಲ್ಲಿ ಕ್ಷೀರಸಮುದ್ರ ಹೆಚ್ಚುವದು.
ಹೆಚ್ಚಿದರೇನು ? ಆ ಚಂದ್ರನ ವ್ಯಾಳ್ಯಕ್ಕೆ ಸಮುದ್ರವಿಲ್ಲ;
ಸಮುದ್ರದ ವ್ಯಾಳ್ಯಕ್ಕೆ ಚಂದ್ರನಿಲ್ಲ.
ಮತ್ತೆ ಆಕಾಶದಲ್ಲಿ ಮೋಡ ಬಂದು ಸುಳಿಗಾಳಿ ಬೀಸಲು
ಗಿರಿಯೊಳಗಿರ್ದ ನವಿಲು ತನ್ನ ಪಕ್ಕವ ಬಿಚ್ಚಿ
ಹರುಷಾನಂದದಲ್ಲಿ ಆಡುವದು :
ಪ್ರೇಮದಿಂದಲಿ ಕುಣಿಯುವದು.
ಕುಣಿದರೇನು ? ಚಂಡವಾಯುವಿನಿಂದ
ಆಕಾಶದೊಳಗಣ ಕಾರಮುಗಿಲು ಹಾರಿಹೋಹಾಗ
ನವಿಲು ಅಡ್ಡಬಂದಿತ್ತೆ ? ಇಲ್ಲ.

ಗಿರಿಯೊಳಗಣ ಮಯೂರನನ್ನು
ವ್ಯಾಧನು ಬಂದು ಬಲಿಹಾಕಿ ಕೊಲ್ಲುವಾಗ
ಆ ಮೋಡ ಅಡ್ಡಬಂದಿತ್ತೆ ? ಇಲ್ಲ.
ಇದರ ಹಾಂಗೆ, ನಿಮಗೆ ಬಾಲಪ್ರಾಯದಲ್ಲಿ ಮಾತಾಪಿತರ ಮೋಹ
ಯೌವ್ವನಪ್ರಾಯದಲ್ಲಿ ಸ್ತ್ರೀ, ಪುತ್ರಮೋಹ.
ಮಧ್ಯಪ್ರಾಯದಲ್ಲಿ ಧನಧಾನ್ಯದ ಮೋಹ.
ಈ ಪರಿಯಲ್ಲಿ ಸಕಲವು ನೀವು ಇರುವ ಪರ್ಯಂತರದಲ್ಲಿ
ಮಾಯಾ ಮಮಕಾರವಲ್ಲದೆ ಅಳಲಿ ಬಳಲಿ,
ಕುಸಿದು ಕುಗ್ಗಿ ಮುಪ್ಪುವರಿದು,
ಮರಣಕಾಲಕ್ಕೆ ಯಮದೂತರು ಬಂದು
ಓಂಡಿ ಓಪ್ಪಿಯ ಮಾಡಿ ಒಯ್ಯುವಾಗ,
ಮೂವರೊಳಗೆ ಒಬ್ಬರು ಅಡ್ಡಬಂದರೆ ? ಬಂದುದಿಲ್ಲ..
ಅವರ ಸಂಕಟಕ್ಕೆ ನೀವಿಲ್ಲ, ನಿಮ್ಮ ಸಂಕಟಕ್ಕೆ ಅವರಿಲ್ಲ.
ನಿನ್ನ ಪುಣ್ಯಪಾಪಕ್ಕೆ ಅವರಿಲ್ಲ, ಅವರ ಪುಣ್ಯಪಾಪಕ್ಕೆ ನೀನಿಲ್ಲ.
ನಿನ್ನ ಸುಖದುಃಖಕ್ಕೆ ಅವರಿಲ್ಲ, ಅವರ ಸುಖದುಃಖಕ್ಕೆ ನೀನಿಲ್ಲ.
ನಿನಗವರಿಲ್ಲ, ಅವರಿಗೆ ನೀನಿಲ್ಲ.
ಇಂತಿದನು ಕಂಡು ಕೇಳಿ ಮತ್ತಂ
ಓತ್ತಲಕ್ಕೆ ಹಳೆಯೆಮ್ಮಿ ಮನಸೋತ ಹಾಗೆ,
ಹಾಳಕೇರಿಗೆ ಹಂದಿ ಜಪ ಇಟ್ಟ ಹಾಗೆ,
ಹಡಕಿಗೆ ಶ್ವಾನ ಮೆಚ್ಚಿದ ಹಾಗೆ,
ಮತ್ತಂ, ಮಾನವರೊಳಗೆ ಹಂದಿ, ನಾಯಿ, ಹಳೆಯೆಮ್ಮಿಯೆಂದರೆ-
ಜೀವನಬುದ್ಧಿಯುಳ್ಳವನೇ ಹಂದಿ.
ಕರಣಬುದ್ಧಿಯುಳ್ಳವನೇ ನಾಯಿ.
ಮಾಯಾಪ್ರಕೃತಿಯುಳ್ಳವನೇ ಹಳೆಯೆಮ್ಮಿ.
ಇವಕ್ಕೆ ಮೂರು ಮಲವಾವೆಂದಡೆ :
ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯವನು,
ಕಟ್ಟಿ ಮೆಚ್ಚಿ ಮರುಳಾಗಿ ಬಿಡಲಾರದೆ ಕಂಡು ಕೇಳಿ ಮೋಹಿಸಿ,
ಇದನು ಬಿಟ್ಟು ವೈರಾಗ್ಯಹೊಂದಿದರೆ ಮೋಕ್ಷವಿಲ್ಲೆಂದು
ಪ್ರಪಂಚವಿಡಿದು ಪಾರಮಾರ್ಥ ಸಾಧಿಸಬೇಕೆಂದು ಹೇಳುವವರ,
ಹೀಂಗೆ ಮಾಡಬೇಕೆಂಬುವರ ಬುದ್ಧಿಯೆಂತಾಯಿತಯ್ಯಾ ಎಂದಡೆ:
ಗಿಳಿ ಓದಬಲ್ಲುದು; ಬಲ್ಲರೇನು ತನ್ನ ಮಲವ ತಾನು ತಿಂದ ಹಾಗೆ.
ವಿಹಂಗ ಹನ್ನೆರಡುಯೋಜನದಮೇಲೆ ಅಮೃತಫಲವಿಪ್ಪುದ ಬಲ್ಲುದು.

ಬಲ್ಲರೇನು, ಅದು ಬಾಯಿಲಿ ತಿಂದು ಬಾಯಿಲೆ ಕಾರುವದು.
ಹಾಂಗೆ ಈ ಮಾನವರು ತ್ರಿವಿಧಮಲಸಮಾನವೆಂಬುದ ಬಲ್ಲರು,
ಬಲ್ಲರೇನು ? ಬಿಡಲಾರರು.
ಇಂತೀ ಪರಿಪರಿಯಲ್ಲಿ ಕೇಳಿ ಕೇಳಿ ಕಂಡು ಬಿಡಲಾರದೆ ಇದ್ದರೆ
ಇಂಥ ಹೊಲೆಸೂಳೆಯ ಮಕ್ಕಳ ಶರೀರವ
ಖಡ್ಗದಿಂದ ಕಡಿದು ಕರಗಸದಿಂದ ಕೊರೆದು ಛಿದ್ರಚಿನಿಪಾಲವ ಮಾಡಿ,
ಹದ್ದು ಕಾಗೆ ನಾಯಿಗಳಿಗೆ ಹಾಕಿದರೆ ಎನ್ನ ಸಿಟ್ಟು ಮಾಣದು.
ಕಡೆಯಲ್ಲಿ ಚಂದ್ರಸೂರ್ಯರು ಇರುವ ಪರ್ಯಂತರ
ಮಹಾ ಅಘೋರ ನರಕದಲ್ಲಿ ಕಲ್ಪಕಲ್ಪಾಂತರದಲ್ಲಿ ಹಾಕದೆ ಬಿಡನೆಂದಾತನು
ವೀರಾಧಿವೀರ ನಿಮ್ಮ ಶರಣ ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೨೯ ॥

೩೦

ಶಿವಶಿವಾ, ಈ ಲೋಕದ ಮಾನವರು
ಸಂಸಾರಸುಖವ ಬಹುಸವಿಯೆಂದು ಹರುಷದಿಂದ ಉಬ್ಬಿ ಕೊಬ್ಬಿ
ಹೊನ್ನು, ಹೆಣ್ಣು, ಮಣ್ಣಿನ ಹೋರಾಟವ ಮಾಡುವ ಪರಿಯ-
ಪೇಳ್ವೆ ಕೇಳಿರಯ್ಯಾ.
ಹೊನ್ನಿಗಾಸೆಯ ಮಾಡಿ ನಾನಾದೇಶವ ತಿರುಗಿ ತಿರುಗಿ,
ನಾನಾವ್ಯಾಪಾರವ ಮಾಡಿ ದುಡಿದು ದುಃಖಮುಂಬಟ್ಟು
ಹಗಲು ಹಸುವಿನ ಚಿಂತೆ ಇಲ್ಲ, ಇರುಳು ನಿದ್ರೆಯ ಚಿಂತೆ ಇಲ್ಲ.
ಈ ಪರಿಯಲ್ಲಿ ಸರ್ವರನು ಠಕ್ಕುಠವಳಿಯಿಂದ ಸಿಂತರಿಸಬೇಕೆಂಬ
ಚಿಂತೆಯುಂಟಲ್ಲದೆ
ಇವರಿಗೆ ಜಂಗಮದ ನೆನವು ಎಲ್ಲಿಹುದೋ?
ಹೀಗೆ ನಾನಾ ಧಾವತಿಯಿಂದ ಆ ಹೊನ್ನ ಗಳಿಸಿ ತಂದು
ಆ ಹೆಣ್ಣು ತರಬೇಕು, ಈ ಹೆಣ್ಣು ಬಿಡಬೇಕು,
ಆ ಹೆಣ್ಣು ನೋಡಬೇಕು, ಈ ಹೆಣ್ಣು ಮಾಡಬೇಕು
ಎಂಬೀ ಉಲ್ಲಾಸದಿಂದ ಮದವೇರಿದ ಆನೆಯ ಹಾಗೆ
ಮಸ್ತಿಗೆ ಬಂದ ಕೋಣನ ಹಾಗೆ, ಮಚ್ಚರಕ್ಕೆ ಬಂದ ಟಗರಿನ ಹಾಗೆ,
ಇಂತೀ ಪರಿಯಲ್ಲಿ ತಿರುಗುವ ಕತ್ತಿಮೂಳರಿಗೆ
ಲಿಂಗದ ನೆನಹು ಎಲ್ಲಿಹುದೊ?
ಹೀಗೆ ಆ ಹೊನ್ನಿನಿಂದ ಆ ಊರಲ್ಲಿ ಹೊಲವ ಮಾಡಬೇಕು,
ಈ ಊರಲ್ಲಿ ಹೊಲವ ಮಾಡಬೇಕು,

ಅಲ್ಲಿ ಮನೆಯ ಮಾಡಬೇಕು, ಇಲ್ಲಿ ಮನೆಯ ಮಾಡಬೇಕು.
ಈ ಉಲ್ಲಾಸ ಚಿಂತೆಯಿಂದ ಹಗಲು ಹಸಿವಿನ ಚಿಂತೆ ಇಲ್ಲ.
ಇರುಳು ನಿದ್ರೆಯ ಖಬರಿಲ್ಲ.
ಇಂತೀ ಪರಿಯಲ್ಲಿ ಬೆಕ್ಕು ನಾಯಿಗಳು
ತಮ್ಮ ಒಡಲ ವಿಷಯದ ಚಿಂತೆಯಿಂದ ಹಗಲು ಇರುಳು ಚರಿಸುವಂತೆ
ಈ ಮಾಯಾ ಪ್ರಪಂಚದಲ್ಲಿ ತಿರುಗುವ ಮಂಗಮನುಜರಿಗೆ
ಗುರುವಿನ ನೆನಹು ಎಲ್ಲಿಹುದೋ?
ಇಂತೀ ಪ್ರಕಾರದಲ್ಲಿ ತ್ರಿವಿಧ ಹೋರಾಟದಲ್ಲಿ
ಸಿಲ್ಕಿದ ಜಡಜೀವರುಗಳಿಗೆ
ಪರಬ್ರಹ್ಮದ ಎಚ್ಚರವಿಲ್ಲದೆ
ಮುಂದೆ ಮೋಕ್ಷವ ಹರಿಯಬೇಕೆಂಬ ಚಿಂತೆಯಿಲ್ಲ.
ಇಂತೀ ವಿಚಾರವನು ತಿಳಿಯದೆ ಹೊನ್ನು, ಹೆಣ್ಣು, ಮಣ್ಣೆಂಬ
ತ್ರಿವಿಧಮಲವ ಕಚ್ಚಿ ಹಂದಿ ನಾಯಿಗಳ ಹಾಗೆ
ಈ ಸಂಸಾರವೆಂಬ ಹಾಳಕೇರಿಯಲ್ಲಿ ಹೊಡದಾಡಿ ಹೊತ್ತುಗಳೆದು
ವ್ಯರ್ಥ ಸತ್ತು ಹೋಗುವ ಕತ್ತೆಮೂಳ ಹೊಲೆಮಾದಿಗರಿಗೆ
ಇನ್ನೆತ್ತಣ ಮುಕ್ತಿ ಹೇಳಾ !
ಇಂತಪ್ಪ ಮೂಢಾತ್ಮರಿಗೆ ಕಲ್ಪಕಲ್ಪಾಂತರ
ಎಂಬತ್ತುನಾಲ್ಕುಲಕ್ಷ ಯೋನಿಚಕ್ರದಲ್ಲಿ ತಿರುಗುವುದೇ
ಪ್ರಾಪ್ತಿಯುಂಟೆಂದ ಕಾಣಾ
ನಿಮ್ಮ ಶರಣ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೦ ||

## ಸಂಸಾರಹೇಯಸ್ಥಲ

ಸೂತ್ರ : ಸಂಸಾರಹೇಯಸ್ಥಲದಲ್ಲಿ ಸಂಸಾರ ಸಂಗಣ್ಣಗಳು ಪ್ರಪಂಚವಮಾಡಿ ಪರಬ್ರಹ್ಮವ ಬೆರಸಿದ ಪರಿಯ ಪೇಳ್ವೆ :

೩೧

ಶುಕ್ಲ ಶೋಣಿತಾತ್ಮಸಂಬಂಧವಾದ
ಮಾತಾಪಿತೃಗಳ ಸಂಯೋಗ ಕಾಲಕ್ಕೆ
ಜೀವಾತ್ಮರು ಜನಿಸಿದ ಪರಿಯ ಪೇಳುವೆ.
ಅದೆಂತೆಂದೊಡೆ :
ಜನಿಸಿದ ಮೂರುದಿವಸಕ್ಕೆ ಸ್ತ್ರೀಯರ ನಯನ ಕೆಂಪಾಗಿ
ಮೂರಾರುದಿವಸಕ್ಕೆ ಕೈಕಾಲು ಕತ್ತರಿಸಿ

ಏಳೆಂಟುದಿವಸಕ್ಕೆ ಅಂಗ ಜಾಡ್ಯವಾಗಿ
ಈರ್ಹತ್ತುದಿವಸಕ್ಕೆ ಇಂದ್ರಿಯ ಹೆಪ್ಪುಗೊಂಡು
ಒಂದುಮಾಸಕ್ಕೆ ಮಾಂಸಗೊಂಡು
ಎರಡುತಿಂಗಳಿಗೆ ಪಿಂಡಗಟ್ಟಿ, ಬಯಕೆ ತೋರಿ
ಮೂರುತಿಂಗಳಿಗೆ ಅಂಡಗಟ್ಟಿ, ಹೇಸಿಕೆ ಹುಟ್ಟಿ
ನಾಲ್ಕುತಿಂಗಳಿಗೆ ಅಂಗರೂಪು ಹುಟ್ಟಿ
ಐದುತಿಂಗಳಿಗೆ ಅವಯವಂಗಳು ಹುಟ್ಟಿ,
ಆರುತಿಂಗಳಿಗೆ ಅವಯವಂಗಳು ಬಲಿದು
ಏಳುತಿಂಗಳಿಗೆ ರೋಮ ಹುಟ್ಟಿ
ಇಂತೀ ಪರಿಯಲ್ಲಿ ಶಿವಕೃಪೆಯಿಂದ ಪಿಂಡವರ್ಧನವಾಗಲು,
ಇಂತಪ್ಪ ಪಿಂಡದಲ್ಲಿ ಶಿವಾಜ್ಞೆಯಿಂದ
ಆತ್ಮನು ಪ್ರವೇಶವಾದಾಕ್ಷಣವೇ ಗರ್ಭದಲ್ಲಿ ಶಿಶುವು ಉಲುಕುವುದು.
ಎಂಟುತಿಂಗಳಿಗೆ ಕುಕ್ಕುಟಾಸನದಿಂದ ಶಿಶುವು ಹುದುಗಿಕೊಂಡಿರ್ಪುದು.
ನವಮಾಸಕ್ಕೆ ಮರ್ಕಟಾಸನದಿಂದ ನೆಟ್ಟನೆ ಕುಳ್ಳಿರ್ದು ಶಿಶುವು
ಸರ್ಪನುಂಗಿದ ಇಲಿಯ ಹಾಂಗೆ
ಗರ್ಭವೆಂಬ ಸರ್ಪ ಶಿಶುವನೊಳಕೊಂಡಿರ್ಪುದು.
ಆ ಶಿಶುವಿಗೆ ಕ್ರಿಮಿಕೀಟಕ ಜಂತುಗಳು ಮೊದಲಾದ
ಅನೇಕ ಬಾಧೆಗಳುಂಟು.
ಆ ಬಾಧೆಗಳಿಂದ ಆ ಶಿಶುವು ತನ್ನ ಕೆನ್ನೆಗೆರಡು ಹಸ್ತವ ಹಚ್ಚಿ
ಊರ್ಧ್ವಮುಖವಾಗಿ ಶಿವಧೋ ಶಿವಧೋ ಎಂದು
ಶಿವಧ್ಯಾನವ ಮಾಳ್ಪ ಸಮಯದಲ್ಲಿ
ಹರಕರುಣದಿಂದ ಆ ಗರ್ಭವೆಂಬ ಮನೆಯ ಬಿಟ್ಟು
ಹೊರಡುವ ಸಮಯಕ್ಕೆ
ಆ ಶಿಶುವಿನ ದುಃಖವ ಪೇಳ್ವೆ :
ಕೋಟಿಸಿಡಿಲು ಹೊಯ್ದಂತೆ, ಸಾವಿರಚೇಳು ಕಡಿದಂತೆ,
ಧರ್ಮಿಷ್ಟರಾಜನು ಮೃತವಾದರೆ ಅತಿಬಡವರಿಗೆ ದುಃಖವಾದಹಾಂಗೆ.
ಬಳಗುಳ್ಳ ಪುಣ್ಯಪುರುಷನು ಸಾಯಂಕಾಲದಲ್ಲಿ ಮೃತನಾಗಿ
ಪ್ರಾತಃಕಾಲದಲ್ಲಿ ಅವನ ಶವ ಎತ್ತುವಕಾಲಕ್ಕೆ
ಅವನ ಬಳಗಕ್ಕೆ ದುಃಖವಾದಹಾಂಗೆ.
ಆ ಮಾಯಾಯೋನಿಯೆಂಬ ಸೂಕ್ಷ್ಮ ಅಧೋದ್ವಾರದಿಂ ಆತ್ಮನು
ಅನೇಕ ದುಃಖ ದಾವತಿಯಿಂದ ಜನಿಸಲು

ಅಂತಪ್ಪ ಪಿಂಡಕ್ಕೆ ಯೋನಿ ಕಂಡರೆ ಹೆಣ್ಣೆಂಬರು
ಶಿಶ್ನವ ಕಂಡರೆ ಗಂಡೆಂಬರು.
ಒಳಗಿರುವ ಆತ್ಮನು ಹೆಣ್ಣು ಅಲ್ಲ, ಗಂಡು ಅಲ್ಲ ನಿರಾಳ ಬ್ರಹ್ಮಾಂಶಿಕವು.
ಅದೆಂತೆಂದಡೆ:
ಪಾಪದದೆಸೆಯಿಂದ ಹೆಣ್ಣಾಗಿ ಜನಿಸುವುದು;
ಪುಣ್ಯದದೆಸೆಯಿಂದ ಪುರುಷನಾಗಿ ಜನಿಸುವುದು.
ಇಂತೀ ಪರಿಯಲ್ಲಿ ಇರುವೆ ಮೊದಲು ಆನೆ ಕಡೆ
ಎಂಬತ್ತುನಾಲ್ಕುಲಕ್ಷ ಜೀವರಾಶಿಯ ಯೋನಿಚಕ್ರಮಾರ್ಗದಲ್ಲಿ
ತಿರುಗಿ ತಿರುಗಿ ಭವರಾಟಾಳಮಾರ್ಗದಲ್ಲಿ
ದೇವ ದಾನವ ಮಾನವರು ಮೊದಲಾದ
ಸಕಲಜನರು ಬರುವದುಕಂಡು ಥರಥರನೆ ನಡುಗಿ
ಮರಳಿ ಈ ಜನನೀಜಠರಕ್ಕೆ ಬರಲಾರೆನೆಂದು ಅಂಜಿ
ನಿಮ್ಮ ಮರೆಹೊಕ್ಕನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೧ ||

೩೨

ಇಂತಪ್ಪ ದೇಹವ ತಾಳಿ
ತನ್ನ ಮಲಮೂತ್ರದಲ್ಲಿ ತಾನೇ ಹೊರಳ್ಯಾಡಿ
ಬಾಲತ್ವ ತೀರಿ ಯೌವ್ವನವಯಸ್ಸು ಒದಗಲು,
ಕನ್ಯಕುಮಾರಿ ಹೆಣ್ಣಿನ ಕೆಂಪನ್ನ ಚರ್ಮವ ಕಂಡು
ಉಳುವಿನ ಕುದುರೆಯಂದದಿ
ಊರ ಮಾರಿಯ ಕೋಣನಂದದಿ
ಮದವೇರಿದ ಆನೆಯಂದದಿ
ಇಂದ್ರಿಯವೆಂಬ ಮದ ತಲೆಗೇರಿ ಮನಬಂದತ್ತ ತಿರಿತಿರಿಗಿ,
ಯೌವ್ವನವಯಸ್ಸು ತೀರಿದಮೇಲೆ
ಮುಪ್ಪಿನವಯಸ್ಸು ಒದಗಿ ಕಣ್ಣು ಒಳನಟ್ಟು,
ಗಲ್ಲ ಒಳಸೇರಿ ನಿರಿಗೆಗಟ್ಟಿ,
ಬೆನ್ನುಬಾಗಿ, ಮೊಣಕಾಲು ಗೂಡುಗಟ್ಟಿ, ಕೂದಲು ಬಿಳಿದಾಗಿ,
ಕೋಲುಪಿಡಿದು ಕೆಮ್ಮುತ್ತ ಕೆಕ್ಕರಿಸುತ್ತ ಮೊಣಕಾಲಮೇಲೆ ಕೈಯನ್ನೂರಿ
ಏಳುವಾಗ ಶಿವನ ನೆನೆದರೆ, ಶಿವನ ನೆನಹು ನೆಲೆಗೊಳ್ಳದು.
ಶಿವನು ಮೆಚ್ಚನು ನೋಡಾ

ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೬ ॥

೩೭

ಒಂದು ಕೊಟ್ಟು, ಎರಡು ಕೊಂಡು,
ಎರಡು ಕೊಟ್ಟು, ಮೂರು ಕೊಂಡು,
ಎರಡು ತಲೆಯುಳ್ಳ ಸ್ತ್ರೀಸಂಗದಲ್ಲಿ
ಲೋಕಾದಿಲೋಕಂಗಳು ಸಂಸಾರಮಾಡುತ್ತಿರ್ಪವು.
ಇಂತಪ್ಪ ಸಂಸಾರಮಾಡುವನಲ್ಲ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೭ ॥

೩೮

ಎರಡು ಕೊಟ್ಟು, ಒಂದು ಕೊಂಡೆ,
ಒಂದು ಕೊಟ್ಟು, ಏನೂ ಕೊಳ್ಳಲಿಲ್ಲ.
ಮೂರುಹಣವ ಕೊಟ್ಟು, ಮೂರುರತ್ನವ ಕೊಂಡೆ.
ಮೂರು ಕೊಂಡು ಆರುಮಂದಿಗೆ ಹೇಳದೆ
ಏಳರಲ್ಲಿ ಸತ್ತು ಸಂಸಾರ ಮಾಡುತಿರ್ದ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೮ ॥

೩೯

ಇಬ್ಬರ ಸಂಗದಲ್ಲಿ ಹುಟ್ಟಲಿಲ್ಲ,
ಒಬ್ಬರ ಸಂಗದಲ್ಲಿ ನಿಲ್ಲಲಿಲ್ಲ,
ಮೂವರ ಕೂಡ ಮಾತಾಡಲಿಲ್ಲ,
ನಾಲ್ವರ ಕೂಡ ನಡೆಯಲಿಲ್ಲ,
ಐವರ ಕೂಡ ಉಣಲಿಲ್ಲ.
ಕೈ ಕಾಲಿಲ್ಲದ ಕುರುಡಿಯ ಸಂಗದಲ್ಲಿ
ಸಂಸಾರವ ಮಾಡುತ್ತಿರ್ದನಯ್ಯಾ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯ ॥

೪೦

ಕುರುಡಿ ಕುಂಟರ ನಡುವೆ ನಾ ಹುಟ್ಟಿದೆನಯ್ಯಾ.
ಎನಗೆ ಐವರು ಸ್ತ್ರೀಯರ ಮದುವೆಯ ಮಾಡಿದರು.

ಅವರ ಸಂಗದಲ್ಲಿರಲೊಲ್ಲದೆ
ಒಬ್ಬಳ ಬ್ರಹ್ಮಂಗೆ ಕೊಟ್ಟೆ,
ಒಬ್ಬಳ ವಿಷ್ಣುವಿಂಗೆ ಕೊಟ್ಟೆ,
ಒಬ್ಬಳ ರುದ್ರಂಗೆ ಕೊಟ್ಟೆ,
ಒಬ್ಬಳ ಈಶ್ವರಂಗೆ ಕೊಟ್ಟೆ,
ಮತ್ತೊಬ್ಬಳ ಸದಾಶಿವಂಗೆ ಕೊಟ್ಟು
ತಾಯಿಯ ಒಡನಾಡಿ ಸಂಸಾರ ಮಾಡುತಿರ್ದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೬ ॥

೪೧

ಸಾಲ ಮಾಡಲಿಲ್ಲ, ಕಡ ಕೊಡಲಿಲ್ಲ,
ಊರನಾಶ್ರೈಸಲಿಲ್ಲ, ಕಾಂತಾರಕ್ಕೆ ಹೋಗಲಿಲ್ಲ.
ನೆಲವಿಲ್ಲದ ಭೂಮಿಯಲ್ಲಿ ಬೀಜವಿಲ್ಲದೆ ಬಿತ್ತಲು,
ಅದು ಅಂಕುರಿಸಿ ಎರಡಾಯಿತ್ತು,
ಶಾಖೆ ಮೂರಾಯಿತ್ತು, ತಳಿರು ಆರಾಯಿತ್ತು,
ಕುಸುಮ ಮೂವತ್ತಾರಾಯಿತ್ತು
ಫಲ ಇನ್ನೂರಾ ಹದಿನಾರಾಯಿತ್ತು,
ಹಣ್ಣು ವಿಶ್ವಪರಿಪೂರ್ಣವಾಯಿತ್ತು,
ಆ ಹಣ್ಣನು ಕಣ್ಣಿಲ್ಲದೆ ನೋಡಿ, ಕಾಲಿಲ್ಲದೆ ನಡೆದು,
ಕೈಯಿಲ್ಲದೆ ಪಿಡಿದು, ಬಾಯಿಲ್ಲದೆ ಪರಿಣಾಮಿಸಿ,
ಜಿಹ್ವೆ ಇಲ್ಲದೆ ರುಚಿಸಿ ಸುಖಿಯಾಗಿರ್ದು
ಸಂಸಾರವ ಮಾಡುತಿರ್ದ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೭ ॥

**ಸಂಸಾರಸ್ಥಲದೊಳಗಣ ಬಡವರ ಬಾಳಣ್ಣಗಳು**
**ಸಂಸಾರವ ಮಾಡುತಿರ್ದ ವಚನವ ಪೇಳ್ವೆ :**

೪೨

ಮೂರು ಹೊನ್ನು ಕೊಟ್ಟು
ಐದುಮಾರು ಭೂಮಿಯ ಕೊಂಡೆ.
ಆ ಭೂಮಿಯಲ್ಲಿ ಆರುವರ್ಣದ ಬೀಜವ ಬಿತ್ತಿ

ನೀರಿಲ್ಲದೆ ಫಲ ಒಡ್ಡಿದೆ.
ಬೆಳೆಯಿಲ್ಲದೆ ಕೊಯ್ದು ರಾಸಿಯ ಒಕ್ಕಿದೆ.
ಎರಡರಲ್ಲಿ ಅಳದರೆ
೩-೬-೯-೧೮-೩೬-೨೧೬-೧೦೫೨ ಕೊಳಗವಾಯಿತ್ತು.
ಮರಳಿ ಒಂದರಲ್ಲಿ ಅಳದರೆ ಒಮ್ಮನವಾಯಿತ್ತು.
ಆ ಒಮ್ಮನವ ಸರಕಾರಕ್ಕೆ ಕೊಟ್ಟು ಸುಮ್ಮನೆ ಇದ್ದನಯ್ಯಾ
ನಿಮ್ಮ ಶರಣ ಬಡವನಾಗಿ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮ ||

೪೩

ಹೊನ್ನು ತೆತ್ತಲ್ಲದೆ ಹೊಲ ಮಾಡಬಾರದು.
ಬಿಟ್ಟಿ ಬೇಗಾರವಿಲ್ಲದೆ ಊರೊಳಗಿರಬಾರದು.
ಸರಕಾರಕ್ಕೆ ರುಜು ಇಲ್ಲದೆ ರೈತನಾಗಬಾರದು.
ಅದೆಂತೆಂದೊಡೆ:
ಇಷ್ಟುಳ್ಳಾತನೇ ಪಾಚ್ಛಾರೈತ;
ಇಲ್ಲದಾತ ದುಬ್ಬುಳಕ ಎಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೯ ||

೪೪

ಹೊನ್ನು ತೆತ್ತಲ್ಲದೆ ಹೊಲ ಮಾಡಿದೆ,
ಬಿಟ್ಟಿ ಬೇಗಾರಿಲ್ಲದೆ ಊರೊಳಗೆ ಇದ್ದೆ,
ಸರಕಾರಕ್ಕೆ ರುಜು ಇಲ್ಲದೆ ರೈತನಾಗಿ.
ಅದೆಂತೆಂದಡೆ:
ಇಂತಲ್ಲದೆ ಪಾಚ್ಛಾರೈತನಲ್ಲ; ಅವ ನಕ್ರ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦ ||

೪೫

ಇಂತಪ್ಪ ಸಂಸಾರವ ಮಾಡಲರಿಯದೆ
ಹೊನ್ನು ನನ್ನದು, ಹೆಣ್ಣು ನನ್ನದು, ಮಣ್ಣು ನನ್ನದು ಎಂದು
ನೆಚ್ಚಿ ಮೆಚ್ಚಿಕೊಂಡು ಕೊಟ್ಟು

ಎರಡು ಬಡ್ಡಿಯ ತೆಗೆದುಕೊಂಡು ಗಳಿಸಿ, ಗಳಿಸಿ,
ತುಂಡ ಅಧಮ ಸೂಳೆಯರ ಬಾಯ ತೊಂಬಲ,
ಉಚ್ಚೆ ಹೊಯ್ಯುವ ಬಚ್ಚಲಹರಿಗೆ ಮೆಚ್ಚಿ ಮರುಳಾಗಿ
ತಾನು ಗಳಿಸಿದಂಥ ದ್ರವ್ಯವನು ಸತ್ಪಾತ್ರಕ್ಕಲ್ಲದೆ ಅಪಾತ್ರಕ್ಕೆ ಕೊಟ್ಟು,
ಕೆಟ್ಟು ನಷ್ಟವಾಗಿ ಹೋಗುವ ಮೂಳ ಹೊಲೆಯರಿಗೆ
ಇನ್ನೆತ್ತಣ ಶಿವಜ್ಞಾನವೆಂದನಯ್ಯಾ
ನಿಮ್ಮ ಶರಣ ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೪೮ ॥

೪೬

ಸಕಲ ಲೋಕಾದಿಲೋಕಂಗಳು
ಉದಯ, ಮಧ್ಯಾಹ್ನ, ಸಾಯಂಕಾಲ ಪರಿಯಂತರವು
ಒಡಲೋಪಾಧಿಯ ಚಿಂತೆಯಿಂದ
ತಾಪತ್ರಯಾಗ್ನಿಯಲ್ಲಿ ಬೇಯುತ್ತಿರ್ಪರು ನೋಡಾ.
ಅದೆಂತೆಂದೊಡೆ:
ಉದಯಕಾಲಕ್ಕೆ ಹೋರಾಟದ ಚಿಂತೆ,
ಮಧ್ಯಾಹ್ನಕಾಲಕ್ಕೆ ಅಶನದ ಚಿಂತೆ,
ಸಾಯಂಕಾಲಕ್ಕೆ ವ್ಯಸನದ ಚಿಂತೆ,
ಇಂತೀ ತ್ರಿವಿಧ ವ್ಯಸನದಲ್ಲಿ ಮನಮಗ್ನವಾದ ಪ್ರಾಣಿಗಳಿಗೆ
ಶಿವಜ್ಞಾನವೆಲ್ಲಿಯದಯ್ಯಾ?
ಇಂದಿನ ಚಿಂತೆಯ ಮಾಡುವರೆಲ್ಲ ಹಂದಿಗಳು.
ನಾಳಿನ ಚಿಂತೆಯ ಮಾಡುವರೆಲ್ಲ ನಾಯಿಗಳು.
ಅದೆಂತೆಂದೊಡೆ:
ನೀ ಹುಟ್ಟದ ಮುನ್ನವೆ ತಾಯಿಗರ್ಭದಲ್ಲಿ
ನವಮಾಸ ಪರಿಯಂತರವು
ನಿನಗೆ ಆಹಾರವ ಕೊಟ್ಟವರಾರು ಹೇಳಾ ಮರುಳೆ?
ಅಖಂಡತಂಡ ಶಿಲೆಯೊಳಗಿನ ಮಂಡೂಕಕ್ಕೆ
ಆಹಾರವ ಕೊಟ್ಟು ಸಲಹಿದವರಾರು ಹೇಳಾ ಮರುಳೆ?
ಕಟ್ಟಿಗಿಯೊಳಗಿನ ಭೃಂಗಕ್ಕೆ
ಮಳೆಗಳ ಕೊಟ್ಟು ಸಲಹಿದವರಾರು ಹೇಳಾ ಮರುಳೆ?
ಇರುವೆ ಮೊದಲು ಆನೆ ಕಡೆ
ಎಂಬತ್ತು ನಾಲ್ಕುಲಕ್ಷ ಜೀವರಾಶಿಯ ಗರ್ಭದಲ್ಲಿ

ಹುಟ್ಟಿ ಹುಟ್ಟಿ ಬರುವಲ್ಲಿ ನಿನಗೆ ಆಹಾರವ ಕೊಟ್ಟು,
ರಕ್ಷಣವ ಮಾಡಿದವರಾರು ಹೇಳಾ ಮರುಳೆ?
ಇಂತೀ ಸರ್ವಲೋಕಾದಿಲೋಕಂಗಳಿಗೆ ಶಿವನೇ ಕರ್ತನೆಂದು
ತಿಳಿದು ನೋಡಾ ಮರುಳೆ!
ಇಂತಪ್ಪ ಯುಕ್ತಿವಿಚಾರದ ಸುಜ್ಞಾನವಿಲ್ಲದೆ
ಬರಿಯ ಒಡಲ ಚಿಂತೆಯಲ್ಲಿ ಹೊತ್ತುಗಳೆದು
ಸತ್ತು ಹೋಗುವ ಹೇಸಿ ಮೂಳರ ಕಂಡು ನಾಚಿದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ||೪೨||

## ಗುರುಕರುಣಸ್ಥಲ

ಸೂತ್ರ : ಅಂತಪ್ಪ ಚಿದಂಶಿಕನಾದ ಜ್ಞಾನಕಲಾತ್ಮನು, ತನ್ನ ಪರಮಜ್ಞಾನದೃಷ್ಟಿಗೆ ಇದಿರಿಟ್ಟು ತೋರುವ ಮಾಯಾಪ್ರಪಂಚವೆಲ್ಲಾ ಮಿಥ್ಯವೆಂದು ತಿಳಿದು, ನಿವೃತ್ತಿಯ ಮಾಡಿ ಶ್ರೀಗುರುಕಾರುಣ್ಯವ ಪಡೆವುತ್ತಿರ್ದನಾಗಿ ಮುಂದೆ ಗುರುಕರುಣಸ್ಥಲವಾದುದು.

೪೩

ಗುರುವೆನಲು ಕೊರವದು ಭವಗಜವು.
ಗುರುವೆನಲು ಹರಿವದು ಬಹುಜನ್ಮದ ದೋಷವು.
ಗುರುವೆನಲು ಮುನ್ನೂರರುವತ್ತು ರೋಗಾದಿ ಬಾಧೆಗಳು
ಸಂಹಾರವಾಗುವವು.
ಗುರುವೆನಲು ಕಾಲಕಾಮಮಾಯಾದಿಗಳ ಭೀತಿ ಕಂಟಕಗಳು
ಸಂಹಾರವಾಗುವವು.
ಗುರುವೆನಲು ಸಕಲೈಶ್ವರ್ಯ ದೊರಕೊಂಬುವದು.
ಇಂತಪ್ಪ ಗುರುವಿನ ಶ್ರೀಚರಣಕ್ಕೆರಗಿ
ನಮೋ ನಮೋ ಎಂದು ಬದುಕಿದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩ ||

೪೪

ಶಿವಶಿವಾ, ಈ ಲೋಕದ ಮಾನವರನೇನೆಂಬೆನಯ್ಯಾ.
ಅದೆಂತೆಂದಡೆ:
ನಾವು ಗುರುಗಳು, ನಾವು ಲಿಂಗಾಂಗಿಗಳು,
ನಾವು ಜಂಗಮಲಿಂಗಿಗಳು,

ನಾವು ಸದಾಚಾರಸದ್ಭಕ್ತರು ಎಂಬರಯ್ಯ.
ಇಂತಿವರ ನಡತೆ ಆಚರಣೆಯೆಂತಾಯಿತೆಂದಡೆ:
ಒಬ್ಬಾನೊಬ್ಬ ಜಾತಿಹಾಸ್ಯಗಾರನು ವೇಷವ ಧರಿಸಿಕೊಂಡು
ಪುರಜನರ ಮೆಚ್ಚಿಸಿ, ತನ್ನ ಒಡಲಹೊರವಂತೆ,
ವಿಭೂತಿ ರುದ್ರಾಕ್ಷಿ ಕಾವಿ ಕಾಷಾಂಬರ ಮುಂತಾಗಿ ವೇಷವ ಧರಿಸಿ,
ಗುರು-ಹಿರಿಯರು ಜಂಗಮಲಿಂಗಿಗಳೆಂದು
ನಾಮವ ತಾಳಿ, ಭಕ್ತರಿಗೆ ಸದಾಚಾರಮಾರ್ಗವ ಹೇಳೇವು,
ಸದಮಲದ ಬೆಳಗ ತೋರೇವು ಎಂದು
ಧನಿಕರಿದ್ದೆಡೆಗೆ ಬಂದು, ನಿಮಗೆ ಉಪದೇಶವ ಹೇಳಿ,
ಲಿಂಗಾಂಗಸಮರಸವ ತೋರಿ,
ಮಾಂಸಪಿಂಡವಳಿದು ಮಂತ್ರಪಿಂಡವ ಮಾಡೇವು ಎಂದು ಹೇಳಿ,
ಆ ಭಕ್ತರ ಕೈಯಲ್ಲಿ ಅನ್ನ ಹಚ್ಚಡ ಹೊನ್ನು ವಸ್ತ್ರವ ತೆಗೆದುಕೊಂಡು
ಆ ಜಾತಿಕಾರನ ಹಾಗೆ ಇವರು ತಮ್ಮ ಉದರಾಗ್ನಿ ಅಡಗಿಸಿಕೊಂಬುವರಲ್ಲದೆ
ಇಂತಪ್ಪ ಗುರು-ಶಿಷ್ಯರ, ದೇವ-ಭಕ್ತರೆಂಬುಭಯರ
ಆಚರಣೆಯೆಂತಾಯಿತ್ತೆಂದೊಡೆ-
ಹಂದಿಯ ಬಾಯೊಳಗಿನ ತುತ್ತ ನಾಯಿ ಬಂದು ಕಚ್ಚಿದಂತೆ.
ಅದೆಂತೆಂದೊಡೆ:
ಜೀವನಬುದ್ಧಿಯುಳ್ಳ ಗುರುವೆಂದಾತ ಹಂದಿ,
ಕರಣಬುದ್ಧಿಯುಳ್ಳ ಶಿಷ್ಯನೆಂಬಾತ ನಾಯಿ.
ಇಂತಪ್ಪ ಗುರು-ಶಿಷ್ಯರ ಸಮ್ಮೇಲನವು
ಹುಟ್ಟುಗುರುಡನ ಕೈಯ ಕಟ್ಟಿ ಲೊಟ್ಟೆಗಣ್ಣಾವ ಪಿಡಿದು
ಕಾಣದೆ ಕಮ್ಮರಿಬಿದ್ದಂತಾಯಿತಯ್ಯ.
ಅದೇನು ಕಾರಣವೆಂದಡೆ,
ಗುರುವಿನಂತ ಶಿಷ್ಯನರಿಯ, ಶಿಷ್ಯನಂತ ಗುರುವರಿಯ,
ಜಂಗಮನಂತ ಭಕ್ತನರಿಯ, ಭಕ್ತನಂತ ಜಂಗಮವರಿಯದ ಕಾರಣ.
ಉಪಾಧಿಯುಳ್ಳವರು ಗುರುವಲ್ಲ ಶಿಷ್ಯರಲ್ಲ.
ಉಪಾಧಿಯುಳ್ಳವರಲ್ಲಿ ಉಪದೇಶವ ಪಡಿಯಬೇಕೆಂಬವರ,
ಉಪಾಧಿಯುಳ್ಳವರಿಗೆ ಉಪದೇಶವ ಹೇಳಬೇಕೆಂಬವರ,
ಈ ಉಭಯಭ್ರಷ್ಟ ಹೊಲೆಮಾದಿಗರ
ಸೂರ್ಯಚಂದ್ರರು ಅಳಿದುಹೋಗುವ ಪರಿಯಂತರವು
ಹಂದಿ ನಾಯಿಯ ನರಕದಲ್ಲಿಕ್ಕದೆ ಬಿಡನೆಂದಾತ ವೀರಾಧಿವೀರ ನಿಮ್ಮ ಶರಣ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೪ ॥

೪೯

ಶಿವಾಶಿವಾ, ಗುರು ಲಿಂಗಾಂಗಿ ಜಂಗಮ ಭಕ್ತರ ಭೇದವ
ಪೇಳ್ವೆ ಕೇಳಿರಯ್ಯಾ.
ಶೆರೆಯ ಕುಡಿದವನೇ ಗುರುವೆಂಬೆ.
ಸುರೆಯ ಕುಡಿದವನೇ ಲಿಂಗಾಂಗಿಯೆಂಬೆ.
ಕಂಡವ ತಿಂದವನೇ ಜಂಗಮವೆಂಬೆ.
ಇಂತೀ ಮೂವರ ಕೊಂದು ತಿಂದವನ
ಕೊಂದು ತಿಂದಾತನೇ ಭಕ್ತನೆಂಬೆ.
ಇಂತಿದರ ಅನುಭಾವ ತಿಳಿಯಬಲ್ಲರೆ
ಗುರು-ಲಿಂಗ-ಜಂಗಮ ಭಕ್ತನೆಂಬೆ.
ಇಂತೀ ಚತುರ್ವಿಧದ ನಿರ್ಣಯವ ಹೇಳಿದಾತನೇ
ಅನಾದಿಗುರುಲಿಂಗಜಂಗಮವೆಂಬೆ.
ಆತನಲ್ಲಿ ಉಪದೇಶವ ಹಡಿಯಬೇಕು.
ಇಂತಿದರ ಭೇದವ ತಿಳಿಯಬಲ್ಲಾತನೇ
ಅನಾದಿ ಶಿಷ್ಯ ಭಕ್ತನೆಂಬೆ.
ಇಂತಿವರಿಗೆ ಉಪದೇಶವ ಹೇಳಬೇಕು.
ಇಂತಪ್ಪ ಗುರುಶಿಷ್ಯಸಂಬಂಧವೆಂತೆಂದೊಡೆ:
ಶಿಖಿ-ಕರ್ಪುರ ಸಂಯೋಗದಂತೆ.
ಪಯೋಧರಫಲ ಉದಕದಲ್ಲಿ ಲೀಯವಾದಂತೆ.
ಲವಣ ಸಮುದ್ರದಲ್ಲಿ ಲೀಯವಾದಂತೆ.
ಈ ಗುರುಶಿಷ್ಯರುಭಯರು ಕೂಡಿ ಪರಶಿವಸಾಗರದಲ್ಲಿ
ನಿರ್ವಯಲಾದರೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೫ ॥

೫೦

ಶಿವಶಿವಾ, ಈ ಲೋಕದೊಳಗೆ
ನಾವು ಗುರುಗಳು, ನಾವು ಚರಂತಿಹಿರಿಯರೆಂದು ಬಂದು
ದೀಕ್ಷೋಪದೇಶ ಅಯ್ಯತನವ

ಮಾಡುವೆವೆಂದು ಹೇಳಿಕೊಂಬರಯ್ಯ.
ಅದೆಂತೆಂದೊಡೆ:
ಭಕ್ತರ ದೀಕ್ಷೋಪದೇಶವ ಮಾಡುವ ಕಾಲಕ್ಕೆ
ಅವರ ಮನೆಯೊಳಗಣ ಗಡಿಗೆ ಮಡಕೆಯ ಹೊರೆಯಕ್ಕೆ ಹಾಕಿಸಿ,
ಮೈಲಿಗೆ ಮುಟ್ಟುಚಟ್ಟನೆಲ್ಲವ ತೊಳಿಸಿ,
ಗೃಹವನೆಲ್ಲ ಸಾರಣೆಯ ಮಾಡಿಸಿ,
ಹೊಸ ಮಡಕೆಯ ತರಿಸಿ,
ಆ ಭಕ್ತರ ಮಂಡೆಯ ಬೋಳಿಸಿ, ಮೈಯ ತೊಳಸಿ,
ಹೊಸ ವಸ್ತ್ರವ ಉಡಿಸಿ, ತೊಡಿಸಿ, ಹೊದಿಸಿ,
ಅವರ ಪೂರ್ವದ ಲಿಂಗವನೆಲ್ಲ ವಿಚಾರಿಸಿ ನೋಡಿ
ಭಿನ್ನವಾದ ಲಿಂಗವನೆಲ್ಲ ತೆಗೆದು ಪ್ರತ್ಯೇಕಲಿಂಗವ ತಂದು,
ವೇಧಾಮಂತ್ರಕ್ರೀಯೆಂಬ ತ್ರಿವಿಧ ದೀಕ್ಷೆಯಿಂದ
ಮೂರೇಳು ಪೂಜೆಯ ಮಾಡಿ
ಅವರಂಗದ ಮೇಲೆ ಲಿಂಗವ ಧರಿಸಿ
ಮಾಂಸಪಿಂಡವಳಿದು ಮಂತ್ರಪಿಂಡವಾಯಿತು,
ಭವಿಜನ್ಮವಳಿದು ಭಕ್ತನಾದೆ, ಪೂರ್ವಜನ್ಮವಳಿದು ಪುನರ್ಜಾತನಾದೆ ಎಂದು
ಅವರಂಗದ ಮೇಲೆ ಲಿಂಗಧಾರಣ ಮಾಡಿ,
ವಿಭೂತಿ ರುದ್ರಾಕ್ಷಿಯ ಧರಿಸಿ, ಸದ್ಭಕ್ತರಾದಿರೆಂದು
ಅವರನು ಬೋಳೈಸಿಕೊಂಡು ತಮ್ಮ ಒಡಲ ಹೊರೆವರಲ್ಲದೆ
ಇವರು ಸದ್ಭಕ್ತರ ಮಾಡಲರಿಯರು.
ಸದ್ಭಕ್ತರ ಮಾಡುವ ಪರಿಯ ಪೇಳ್ವೆ.
ಅದೆಂತೆಂದೊಡೆ:
ಪಂಚಭೂತ ಮಿಶ್ರವಾದ ದೇಹವೆಂಬ ಘಟವನು ತೆಗೆದು,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ
ಪಂಚಲಕ್ಷಣವುಳ್ಳ ಚಿದ್ಘಟವ ತಂದು,
ಸಂಕಲ್ಪ ವಿಕಲ್ಪ, ಸಂಸಾರಸೂತಕವೆಂಬ
ಮುಟ್ಟು ಚಟ್ಟನೆಲ್ಲ ಚಿಜ್ಜಲದಿಂದ ತೊಳೆದು,
ಮಾಯಾ ಮೋಹವೆಂಬ ಹೊದಿಕೆಯ ತೆಗೆಸಿ,
ನಿರ್ಮಾಯ ನಿರ್ಮೋಹವೆಂಬ ವಸ್ತ್ರವನುಡಿಸಿ ತೊಡಿಸಿ,
ಆಶೆ ಎಂಬ ಕೇಶವ ಬೋಳಿಸಿ,
ಅವನ ಹಲ್ಲು ಕಳೆದು, ನಾಲಿಗೆಯ ಕೊಯ್ದು,

ಕಣ್ಣುಗುಡ್ಡಿಯ ಮೀಟಿ, ಎರಡು ದಾಡಿಯ ಮುರಿಗುಟ್ಟಿ,
ತಲೆ ಹೊಡೆದು, ಕೈಕಾಲು ಕಡಿದು, ತಿದಿಯ ಹರಿದು, ಸಂದ ಮುರಿದು,
ಹಂದಿ ನಾಯಿಯ ಕೊಂದು ಕಂಡವ ತಿನಿಸಿ,
ಕಪ್ಪೆಯ ಉಚ್ಚೆಯ ಕುಡಿಸಿ,
ಇಂತೀ ಪರಿಯಲ್ಲಿ ದೀಕ್ಷೋಪದೇಶವ ಮಾಡಿ
ಲಿಂಗವ ಕೊಡಬಲ್ಲರೆ ಗುರುವೆಂಬೆ.
ಇಲ್ಲವಾದರೆ ಕಳ್ಳಗುರುಕಿಮಕ್ಕಳೆಂಬೆ.
ಇಂತಪ್ಪ ವಿಚಾರವ ತಿಳಿದುಕೊಳ್ಳಬಲ್ಲರೆ ಭಕ್ತರೆಂಬೆ.
ಇಲ್ಲದಿದ್ದರೆ ಬದ್ಧಭವಿಗಳೆಂಬೆ.
ಇಂತೀ ತರುವಾಯದಲ್ಲಿ ಅಯ್ಯತನವ
ಮಾಡಬಲ್ಲರೆ ಚರಂತಿಹಿರಿಯರು ಎಂಬೆ.
ಇಲ್ಲದಿದ್ದರೆ ಮೂಕೊರತಿ ಮೂಳಿಯ ಮಕ್ಕಳೆಂಬೆ.
ಇಂತೀ ನಿರ್ಣಯವನು ಸ್ವಾನುಭಾವಗುರುಮುಖದಿಂ
ತಿಳಿದುಕೊಳ್ಳಬೇಕಲ್ಲದೆ,
ಈ ಲೋಕದ ಜಡಜೀವರು ಕಡುಪಾತಕರಲ್ಲಿ ಕೊಳ್ಳಲುಬಾರದು.
ಅದೇನು ಕಾರಣವೆಂದೊಡೆ:
ತಾವಾರೆಂಬ ತಮ್ಮ ನಿಲವ ತಾಪರಿಯರು,
ಇನ್ನೊಬ್ಬರಿಗೆ ಏನು ಹೇಳುವರಯ್ಯ?
ಇಂತಪ್ಪ ಮೂಢಾತ್ಮರಲ್ಲಿ-ಇದಕ್ಕೆ ದೃಷ್ಟಾಂತ:
ಹಿತ್ತಲಲ್ಲಿ ಪಡುವಲಕಾಯಿಗೆ ಕಲ್ಲು ಕಟ್ಟಿದಂತೆ,
ಬಾವಿಯೊಳಗೆ ಕೊಡಕ್ಕೆ ಹಗ್ಗವ ಕಟ್ಟಿ ಬಿಟ್ಟಂತೆ,
ನಾವು ನಮ್ಮ ಪಾದದಲ್ಲಿ ಮರೆಯ ಮಾಡಬೇಕೆಂದು,
ತಮ್ಮ ಕಾಲಿಗೆ ಒಂದೊಂದು ಪೋರಗಳ ಕಟ್ಟಿಕೊಂಡು
ಅಡ್ಡಡ್ಡ ಬಿದ್ದು ಮರಿಯ ಪಡಕೊಂಬವರ,
ಆ ಮರಿಗಳಿಗೆ ಅಯ್ಯತನ ಮಾಡಿದೆವು ಎಂಬವರ,
ಈ ಉಭಯಭ್ರಷ್ಟ ಹೊಲೆಮಾದಿಗರ
ಮೂಗ ಕೊಯಿದು ಕನ್ನಡಿಯ ತೋರಿ
ಮೂಗಿನೊಳಗೆ ಮೆಣಸಿನಹಿಟ್ಟು ತುಂಬಿ ಸಂಗನ ಶರಣರ
ಪಾದರಕ್ಷೆಯಲ್ಲಿ ಘಟ್ಟಿಸಿ,
ಮೂಡಲ ದಿಕ್ಕಿಗೆ ಅಟ್ಟೆಂದ ಕಾಣಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೬ ॥

೫೧

ಶಿವಶಿವಾ, ಮತ್ತೊಂದು ಪರಿಯ ಪೇಳ್ವೆ.
ಅದೆಂತೆಂದಡೆ:
ಈ ಲೋಕದೊಳಗೆ ಗುರುವೆಂಬಾತನು
ಭಕ್ತರಿಗೆ ದೀಕ್ಷೆಯ ಮಾಡಿ
ಪೂರ್ವಜನ್ಮವಳಿದು ಪುನರ್ಜಾತನ ಮಾಡಿದೆವೆಂಬರು.
ಜಂಗಮಲಿಂಗಿಗಳಿಗೆ ಚರಂತಿಹಿರಿಯರು
ಗುರುವೆಂಬಾತನು ಉಭಯರು ಕೂಡಿ,
ಅಯ್ಯತನ ಮಾಡಿದೆವು ಎಂಬರು.
ಅವರೇನು ಪೂರ್ವದಲ್ಲಿ ಕಪ್ಪಾಗಿದ್ದರೆ ?
ಈಗೇನು ಕೆಂಪಗಾದರೆ ?
ಅವರೇನು ಪೂರ್ವದಲ್ಲಿ ಬಿಳುಪಾಗಿದ್ದರೆ ? ಈಗೇನು ಕಪ್ಪಾದರೆ ?
ಎಲಾ ದಡ್ಡಪ್ರಾಣಿಗಳಿರಾ,
ಇದೇನು ವೀರಶೈವಮಾರ್ಗವಲ್ಲ; ಇದು ಶೈವಮಾರ್ಗ.
ಇನ್ನು ವೀರಶೈವಮಾರ್ಗದಾಚಾರವ ಬಲ್ಲರೆ ಹೇಳಿರಿ,
ಅರಿಯದಿದ್ದರೆ ಕೇಳಿರಿ.
ಆರೂರವರ ಉಲುಹ ಮಾಣಿಸಿ, ಮೂರೂರವರ ಮೂಲಿಗೆ ಹಾಕಿ,
ಬೇರೊಂದೂರವರ ತೋರಬಲ್ಲರೆ ವೀರಶೈವರೆಂಬೆ.
ಆರು ಮಂದಿಯನಟ್ಟಿ, ಮೂರು ಮಂದಿಯ ಕುಟ್ಟಿ,
ಬಟ್ಟಬಯಲಿನ ಘಟ್ಟಿಯ ತೋರಬಲ್ಲರೆ ವೀರಶೈವರೆಂಬೆ.
ಆರು ಬಟ್ಟೆಯನೇ ಮೆಟ್ಟಿ, ಮೂರು ಬಟ್ಟೆಯನೇ ದಾಂಟಿ,
ಮೇಲುಬಟ್ಟೆಯಲ್ಲಿ ನಿಂದು ನಿಟಿಲಲೋಚನನ
ತೋರಬಲ್ಲರೆ ವೀರಶೈವರೆಂಬೆ.
ಆರು ಬಾಗಿಲ ಹಾಕಿ, ಮೂರು ಬಾಗಿಲ ಮುಚ್ಚಿ,
ಇನ್ನೊಂದು ಕದವ ತೆಗೆದು ತೋರಬಲ್ಲರೆ ವೀರಶೈವರೆಂಬೆ.
ಇಂತೀ ಕ್ರಮವನರಿದು ದೀಕ್ಷೆಯ ಮಾಡಬಲ್ಲರೆ ಗುರುವೆಂಬೆ,
ಇಲ್ಲದಿದ್ದರೆ ನರಗುರಿಗಳೆಂಬೆ.
ಈ ಭೇದವ ತಿಳಿದು ಅಯ್ಯತನ ಮಾಡಬಲ್ಲರೆ
ಚರಮೂರ್ತಿಗಳೆಂಬೆ.
ಇಲ್ಲದಿದ್ದರೆ ಮತಿಭ್ರಷ್ಟ ಮರುಳಮಾನವರೆಂಬೆ.
ಇಂತೀ ವಿಚಾರವನು ಅರಿಯದೆ ದೀಕ್ಷೆಯ ಮಾಡಬೇಕೆಂಬವರ,

ಇಂತೀ ಭೇದವ ತಿಳಿಯದೆ ದೀಕ್ಷೆ ಪಡೆಯಬೇಕೆಂಬವರ,
ಈ ಉಭಯಭ್ರಷ್ಟ ಹೊಲೆಮಾದಿಗರ
ಅಘೋರನರಕದಲ್ಲಿಕ್ಕೆಂದ ಕಾಣಾ
ವೀರಾಧಿವೀರ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೭ ||

೫೨

ಇಂತೀ ಕ್ರಮವನರಿದು ದೀಕ್ಷೋಪದೇಶವ
ಮಾಡಬಲ್ಲಡಾತನೇ ಅನಾದಿಗುರುವೆಂಬೆ.
ಇಂತೀ ವಿಚಾರವ ತಿಳಿದು ದೀಕ್ಷೋಪದೇಶವ
ಹಿಡಿಯಬಲ್ಲಡಾತನೇ ಅನಾದಿಶಿಷ್ಯನೆಂಬೆ.
ಇಂತಿವರನುಭವ ತಿಳಿದು ಅನುಭಾವವ
ಹೇಳಬಲ್ಲಡಾತನೇ ಅನಾದಿಜಂಗಮವೆಂಬೆ.
ಇಂತಿದರ ಭೇದವ ತಿಳಿದು ದೀಕ್ಷೋಪದೇಶವ
ಕೇಳಬಲ್ಲಡಾತನೇ ಅನಾದಿಭಕ್ತನೆಂಬೆ.
ಇಂತೀ ಕ್ರಮವನರಿದು ದೀಕ್ಷೋಪದೇಶವ
ಮಾಡುವವರು,
ಇಂತೀ ಭೇದವ ತಿಳಿದು ದೀಕ್ಷೋಪದೇಶವ
ಪಡೆವವರು,
ಈ ಉಭಯತರು ಇಹಲೋಕಕ್ಕೆ ಸಲ್ಲರು,
ಪರಲೋಕಕ್ಕೆ ಸಲ್ಲರು.
ಈರೇಳುಲೋಕ ಮೊದಲಾದ ಆವಾವ ಲೋಕಕ್ಕೆ ಸಲ್ಲರು
ಎಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೮ ||

೫೩

ಇಂತಪ್ಪ ನಿರ್ಣಯವನರಿಯದೆ
ಪೃಥ್ವಿಯ ಮೇಲಣ ಕಣೆಯ ತಂದು ಕಲ್ಲುಕುಟಿಗನಿಂದ ಕಟಿಸಿ,
ಲಿಂಗವೆಂದು ಹೆಸರಿಟ್ಟು,
ಹಳ್ಳ ನದಿ ಕೊಳ್ಳ ಕೆರೆ ಬಾವಿ ಮೊದಲಾದ ಉದಕವ ತಂದು,

ಮಜ್ಜನಕ್ಕೆರೆದು ಪಂಚಾಭಿಷೇಕದಿಂದ ಅಭಿಷೇಕವ ಮಾಡಿಸಿ,
ಬಿಲ್ವಪತ್ರಿ ಮೊದಲಾದ ನಾನಾ ಜೀನಸದ ಕಾಡಪತ್ರಿಯ ತಂದು
ಆ ಲಿಂಗಕ್ಕೇರಿಸಲು,
ಅಂತಪ್ಪ ಜಡಪಾಷಾಣಲಿಂಗವ ಭಕ್ತನ ಅಂಗದ ಮೇಲೆ,
ಸ್ವಾಯತವ ಮಾಡುವಾತ ಗುರುವಲ್ಲ, ಆತ ಭಕ್ತನಲ್ಲ,
ಅದು ಲಿಂಗವಲ್ಲ.
ಅದೇನು ಕಾರಣವೆಂದಡೆ:
ಶಿಲಾಭಾವ ಕಳೆದು ಕಳಾಭೇದವ ತುಂಬಿ,
ಜೀವಭಾವವಳಿದು ಶಿವಭಾವ ತುಂಬಿ,
ಅಂಗದಲ್ಲಿ ಲಿಂಗ ಕಳೆದೋರಿ, ಲಿಂಗದಲ್ಲಿ ಅಂಗ ಕಳೆದೋರಿ,
ಅಂಗಲಿಂಗವೆಂಬುಭಯಭಾವವಳಿದು
ಲಿಂಗವ ಕೊಡಬಲ್ಲಡೆ ಆತ ಗುರು ಎಂಬೆ;
ಇಂತೀ ಭೇದವ ತಿಳಿದು ಲಿಂಗವ ಕೊಳಬಲ್ಲಡೆ ಶಿಷ್ಯನೆಂಬೆ.
ಇಂತಲ್ಲದೆ ತನು-ಮನ ಉಲ್ಲಾಸದಿಂದ
ಲಿಂಗವ ಕೊಟ್ಟಾತನು, ಆ ಲಿಂಗವ ಧರಿಸಿದಾತನು
ಈ ಉಭಯರು ಚಂದ್ರಸೂರ್ಯರಿರುವ ಪರ್ಯಂತರವು
ನರಕದಲ್ಲಿರ್ಪರು ಎಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯ ॥

**ಗುರುಕಾರುಣ್ಯಸ್ಥಲದಲ್ಲಿ ಮಠಪತಿ ಭೀಮಯ್ಯಗಳು**
**ಕಾಯಕವ ಮಾಡಿದ ವಚನವ ಪೇಳ್ವೆ :**

೫೪

ದೀಕ್ಷೋಪದೇಶವ ಮಾಡಿ ಗುರುವಿನ
ಕಣ್ಣು ಕಳೆದು ತಲೆ ಹೊಡೆದು ಮೂರು ಹಣವ ಕೊಂಡೆ.
ದೀಕ್ಷೋಪದೇಶವ ಹಡೆದ ಭಕ್ತರ ನಾಲಗೆಯ ಕೊಯ್ದು
ಕೈ ಮುರಿದು ಮೂರು ಹಣವ ಕೊಂಡೆ.
ಈ ಗುರುಶಿಷ್ಯರುಭಯರ ಸಂಯೋಗಕಾಲದಲ್ಲಿರುವ
ಸಾಕ್ಷಿಗಣಂಗಳ ಮನೆಯ ಸುಟ್ಟು, ಮೂರು ರತ್ನವ ಕೊಂಡೆ.
ಇಂತೀ ಮೂವರ ಹಣವ ತಂದು ಗುರುವಿಗೆ ಕೊಟ್ಟು,
ಕಾಯಕವ ಮಾಡುತ್ತಿರ್ದೆನಯ್ಯ

ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೦ ||

೫೫

ನೀರಿಲ್ಲದ ಮರದ ಬೇರ ತಂದು,
ಏಳು ಗುಳಿಗೆಯ ಮಾಡಿ
ಎನ್ನ ಕೈಯೊಳಗೆ ಕೊಟ್ಟನು ಗೊಲ್ಲನು.
ಆ ಏಳು ಗುಳಿಗೆಯನು- ಒಂದು ಬ್ರಹ್ಮಂಗೆ ಕೊಟ್ಟೆ,
ಒಂದು ವಿಷ್ಣುವಿಂಗೆ ಕೊಟ್ಟೆ,
ಒಂದು ಈಶ್ವರಂಗೆ ಕೊಟ್ಟೆ, ಒಂದು ಸದಾಶಿವಂಗೆ ಕೊಟ್ಟೆ,
ಒಂದು ರುದ್ರಂಗೆ ಕೊಟ್ಟೆ, ಒಂದು ಪರಮೇಶ್ವರಂಗೆ ಕೊಟ್ಟೆ,
ಒಂದು ನಾ ನುಂಗಿ ಸತ್ತು ಬದುಕಿ
ಕಾಯಕವ ಮಾಡುತ್ತಿರ್ದೆನಯ್ಯ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೧ ||

೫೬

ಎನಗೊಂದು ವ್ಯಾಧಿ ಹತ್ತಿ ಗೊಲ್ಲನ ಧ್ವನಿಮಾಡಲು,
ಆ ಗೊಲ್ಲನು ಮೆಲ್ಲಮೆಲ್ಲನೆ ಬಂದು
ತನ್ನ ಜೋಳಿಗೆಯೊಳಗಣ ನವಗುಳಿಗೆಯ ತೆಗೆದು,
ಎಂಟು ದಿಕ್ಕಿಗೆ ಎಂಟು ಗುಳಿಗೆಯನೊಗೆದು,
ಮಧ್ಯದಲ್ಲಿ ಒಂದು ಗುಳಿಗೆಯನಿಟ್ಟು,
ತಣ್ಣೀರು ಕುಡಿಯಬೇಡ, ತಂಗಳನ್ನವನುಣ್ಣಬೇಡ,
ಮಜ್ಜಿಗೆಯ ಕುಡಿಯಬೇಡ, ಎಮ್ಮೆಯ ಹಾಲ ಸೇವಿಬೇಡ,
ಇಂತೀ ಎಲ್ಲವನು ವಿಸರ್ಜಿಸಿ,
ಬಿಸಿನೀರು ಕುಡಿದು, ಬಿಸಿ ಅನ್ನವನುಂಡು,
ಬಿಳಿ ಆವಿನ ಹಾಲು ಸೇವಿಸಿ, ಪಥ್ಯವ ಮಾಡೆಂದು
ಗೊಲ್ಲನು ಪೇಳಿದನು.
ಇಂತೀ ಕ್ರಮದಲ್ಲಿ ಪಥ್ಯವ ಮಾಡಿದವರಿಗೆ
ರೋಗಾದಿಗಳ ಬಾಧೆ ಪಲಾಯನವಾಗುವದು ನೋಡಾ.
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೨ ||

೫೭

ಎನ್ನ ಮನದಲ್ಲಿ ನೀ ಹುಟ್ಟಿ, ನಿನ್ನ ಕರದಲ್ಲಿ ನಾ ಹುಟ್ಟಿ,
ಉಭಯರು ಕೂಡಲಿಕ್ಕೆ
ಎನಗೊಂದು, ನಿನಗೆ ಮೂರು ಮಕ್ಕಳು ಹುಟ್ಟಿ,
ನಾ ಬರುವಾಗ ನಿನ್ನ ಮಕ್ಕಳ ಮೂವರನು
ಒಬ್ಬನ ಮರ್ತ್ಯಲೋಕದಲ್ಲಿಟ್ಟೆ,
ಒಬ್ಬನ ಪಾತಾಳಲೋಕದಲ್ಲಿಟ್ಟೆ,
ಒಬ್ಬನ ಸ್ವರ್ಗಲೋಕದಲ್ಲಿಟ್ಟೆ.
ಇಂತೀ ಮೂವರನು ಮೂರುಲೋಕದಲ್ಲಿಟ್ಟು
ನಾ ನನ್ನ ಮಗನ ಸಂಗವ ಮಾಡಿ,
ಸತ್ತು ಮುತ್ತೈದೆಯಾಗಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೩ ||

## ಲಿಂಗಧಾರಣಸ್ಥಲ

ಸೂತ್ರ : ಇಂತಪ್ಪ ಶಿವಜ್ಞಾನೋದಯವಾದ ಶಿವಶರಣನು ಶ್ರೀಗುರುಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗಧಾರಣವಾಗುತಿರ್ದನಾಗಿ ಮುಂದೆ ಲಿಂಗಧಾರಣಸ್ಥಲವಾದುದು.

೫೮

ಭೂಮಿಯಲ್ಲಿ ಹುಟ್ಟಿದ ಕಲ್ಲು ತಂದು
ಲಿಂಗವೆಂದು ಹೆಸರಿಟ್ಟು,
ಶುಕ್ಲ ಶೋಣಿತಾತ್ಮಸಂಬಂಧವಾದ
ಮಾತಾಪಿತರ ಸಂಯೋಗದಿಂದ ಪುಟ್ಟಿದ ಮನುಜರಿಗೆ
ಭಕ್ತನೆಂದು ಹೆಸರಿಟ್ಟು,
ಇಂತಪ್ಪ ಭಕ್ತಂಗೆ ಅಂತಪ್ಪ ಲಿಂಗವನು
ವೇಧಾ, ಮಂತ್ರ, ಕ್ರಿಯೆ ಎಂಬ ತ್ರಿವಿಧ ದೀಕ್ಷೆಯಿಂದ
ಮೂರೇಳು ಪೂಜೆಯ ಮಾಡಿ,
ಅಂಗದ ಮೇಲೆ ಲಿಂಗಧಾರಣವ ಮಾಡಿವಡೆ,
ಅದು ಲಿಂಗವಲ್ಲ, ಅವನು ಭಕ್ತನಲ್ಲ.
ಅದೇನು ಕಾರಣವೆಂದಡೆ:
ಅವನು ಮರಣಕ್ಕೆ ಒಳಗಾಗಿ ಹೋಗುವಲ್ಲಿ

ಪೃಥ್ವಿಯ ಕಲ್ಲು ಪೃಥ್ವಿಯಲ್ಲಿ ಉಳಿಯಿತು.
ಭಕ್ತಿ ಭ್ರಷ್ಟವಾಗಿ ಹೋಯಿತು ಬಿಡಾ ಮರುಳೆ.
ಇದು ಲಿಂಗಾಂಗಸ್ವಾಯುತವಲ್ಲ.
ಲಿಂಗಾಂಗದ ಭೇದವ ಹೇಳ್ವೆ ಲಾಲಿಸಯ್ಯಾ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೪ ||

೫೯

ಪಂಚವರ್ಣದ ಭೂಮಿಯ ಮೇಲಿನ ಕಣೆಯ ತಂದು
ಮೂರುಮುಖದಪ್ಪಗೆ ಕೊಟ್ಟು,
ಮೂರುಮಂದಿಯ ಬಿಟ್ಟು, ಐವರ ಸುಟ್ಟು,
ಎಂಟುಮಂದಿಯ ಕುಟ್ಟಿ, ಗುಲ್ಲುಮಾಡದೆ
ಮೂರುಮುಖದಪ್ಪನ ಕೊಂದು, ಕಣೆಯ ಕೊಂಡೊಯಿದು,
ಈ ಬೆಡಗಿನ ಕೀಲವ ಬಲ್ಲಾತನೆ ಲಿಂಗಸಂಬಂಧಿ,
ಇಲ್ಲದಾತನೆ ಅಂಗಸಂಬಂಧಿ ಎಂದನಯ್ಯಾ
ಕಾಡಸೊಳಗಾದ ಶಂಕರಪ್ರಿಯ ಚನ್ನಕಂದಂಬಲಿಂಗ
ನಿರ್ಮಾಯಪ್ರಭುವೆ || ೫೫ ||

೬೦

ಕಕ್ಷೆ ಕರಸ್ಥಲ ಹೃದಯ ಕಂಠ ಉತ್ತಮಾಂಗ
ಅಮಳೋಕ್ಯವೆಂಬ
ಷಟ್‌ಸ್ಥಾನದಲ್ಲಿ ಲಿಂಗವ ಧರಿಸಬೇಕೆಂಬರು ವೇಷಧಾರಿಗಳು.
ಅದೆಂತೆಂದೊಡೆ:
ಕರಸ್ಥಲದಲ್ಲಿ ಲಿಂಗವ ಧರಿಸುವರೆಲ್ಲ ಸನ್ಯಾಸಿಗಳೆನಿಸುವರು.
ಕಕ್ಷೆಯಲ್ಲಿ ಲಿಂಗವ ಧರಿಸುವರೆಲ್ಲ ಮುಪ್ಪಿನ ಹಿರಿಯರೆನಿಸುವರು.
ಹೃದಯದಲ್ಲಿ ಲಿಂಗವ ಧರಿಸುವರೆಲ್ಲ ಪ್ರೌಢಪತಿಯೆನಿಸುವರು.
ಕಂಠದಲ್ಲಿ ಲಿಂಗವ ಧರಿಸುವರೆಲ್ಲ ಬಾಲಕರೆನಿಸುವರು.
ಉತ್ತಮಾಂಗದಲ್ಲಿ ಲಿಂಗವ ಧರಿಸುವರೆಲ್ಲ ಯತಿಗಳೆನಿಸುವರು.
ಅಮಳೋಕ್ಯದಲ್ಲಿ ಲಿಂಗವ ಧರಿಸುವರೆಲ್ಲ ಸಿದ್ಧರೆನಿಸುವರು.
ಇಂತೀ ಷಡ್ವಿಧಸ್ಥಾನಂಗಳಲ್ಲಿ ಕಲ್ಪಿಸಿ
ಲಿಂಗವ ಧರಿಸುವರಲ್ಲ ಷಟ್‌ಶೈವವಾದಿಗಳು
ಇವರು ಲಿಂಗಧಾರಕರಲ್ಲ:

ಇವರು ಲಿಂಗವೆಂಬ ಲಾಂಛನಧಾರಕರು
ನೋಡೆಂದ ನಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೧೬ ||

೬೧

ಲಿಂಗಧಾರಣದ ನಿರ್ಣಯವ ಪೇಳ್ವೆ.
ಅದೆಂತೆಂದಡೆ:
ಸುಜ್ಞಾನೋದಯವಾಗಿ ಸಕಲಪ್ರಪಂಚವ ನಿವೃತ್ತಿಯಮಾಡಿ,
ಶ್ರೀಗುರುಕಾರುಣ್ಯವ ಪಡದು,
ಅಂಗದ ಮೇಲೆ ಲಿಂಗಧಾರಣವಾದ ಶಿವಶರಣನು,
ಷಟ್‌ಸ್ಥಾನದಲ್ಲಿ ಲಿಂಗವ ಧರಿಸುತ್ತಿರ್ದ.
ಅದೆಂತೆಂದಡೆ:
ಕರಸ್ಥಲವೆಂಬ ಪೃಥ್ವಿತತ್ವದಲ್ಲಿ ಆಚಾರಲಿಂಗಸ್ವಾಯತವಮಾಡಿ,
ಕಕ್ಷೆಯೆಂಬ ಅಪ್ಪುತತ್ವದಲ್ಲಿ ಗುರುಲಿಂಗಸ್ವಾಯತವಮಾಡಿ,
ಹೃದಯವೆಂಬ ತೇಜತತ್ವದಲ್ಲಿ ಶಿವಲಿಂಗಸ್ವಾಯತವಮಾಡಿ,
ಕಂಠವೆಂಬ ವಾಯುತತ್ವದಲ್ಲಿ ಜಂಗಮಲಿಂಗಸ್ವಾಯತವಮಾಡಿ,
ಉತ್ತಮಾಂಗವೆಂಬಾಕಾಶತತ್ವದಲ್ಲಿ ಪ್ರಸಾದಲಿಂಗಸ್ವಾಯತವಮಾಡಿ,
ಅಮಳೋಕ್ಯವೆಂಬ ಆತ್ಮತತ್ವದಲ್ಲಿ ಮಹಾಲಿಂಗಸ್ವಾಯತವಮಾಡಿ,
ಇದಲ್ಲದೆ, ಆಪಾದಮಸ್ತಕ ಪರಿಯಂತರ
ಸರ್ವಾಂಗಲಿಂಗಮಯವಾಗಿ,
ಆವಾವೇಷವ ಧರಿಸದೆ ಲೌಕಿಕಾತ್ಮರಲ್ಲಿ
ಹತ್ತರೊಳಗೆ ಹನ್ನೊಂದು ಎಂಬ ಹಾಗೆ
ಸರ್ವರಲ್ಲಿಯೂ ಶಿವಶರಣನು ಅವರಂತೆ ಇರ್ಪನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೧೭ ||

೬೨

ಇಂತಪ್ಪ ಲಿಂಗಧಾರಣದ ಭೇದವ ತಿಳಿಯದೆ
ಕಲ್ಲ ಲಿಂಗಕ್ಕೆ ಕಾಡಹೂವ ತಂದು,
ಹೊಳೆ-ಬಾವಿ-ಹಳ್ಳ-ಕೊಳ್ಳ-ಕೆರೆಯ ನೀರು ತಂದು ಮಜ್ಜನಕ್ಕೆರೆದು,
ದೀಪ ಧೂಪ ಪತ್ರಿ ಪುಷ್ಪದಿಂದ ಶಿವನೆಂದು ಭಾವಿಸಿ

ಪೂಜೋಪಚಾರವ ಮಾಡಿ,
ವರವ ಬೇಡಿವರೆ ಬೇಡಿದ ಫಲವ ಕೊಟ್ಟು ಗಾಡಿಕಾರನಂತೆ
ಅವರ ಕಣ್ಣಿಗೆ ಮಂಜುಗವಿಸಿ ಕಡೆಗಾಗಿರ್ಪ ನಮ್ಮ ಶಿವನು.
ಇಂತಪ್ಪ ಮೂಢಾತ್ಮರು, ಅಂತಪ್ಪ ಜಡಪಾಷಾಣಲಿಂಗವ
ಅನಂತಕಾಲ ಧರಿಸಿ, ಪೂಜೋಪಚಾರವ ಮಾಡಿದಡೆಯೂ
ವ್ಯರ್ಥವಲ್ಲದೆ ಸ್ವಾರ್ಥವಲ್ಲ.
ಮುಂದೆ ಭವರಾಟಾಳದಲ್ಲಿ ಬಪ್ಪುದು ತಪ್ಪದು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೮ ||

೬೩

ಗಂಡಗೊಂದು ಲಿಂಗ, ಹೆಂಡತಿಗೊಂದು ಲಿಂಗ,
ಮಕ್ಕಳಿಗೊಂದು ಲಿಂಗ, ಸ್ನೇಹಿತರು ಗೆಳೆಯರಿಗೊಂದು ಲಿಂಗ,
ಇಂತೀ ನಾಲ್ವರಿಗೆ ನಾಲ್ಕು ಲಿಂಗವಾದರೆ
ಭವಮಾಲೆ ಹರಿಯದು.
ಇಂತೀ ನಾಲ್ವರಿಗೆ ಒಂದೇ ಲಿಂಗವಾದರೆ
ಭವಮಾಲೆ ಹಿಂಗುವುದು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೯ ||

**ಲಿಂಗಧಾರಣ ಸ್ಥಲದಲ್ಲಿ ಮಠಪತಿ ಮಡಿವಾಳಯ್ಯಗಳು**
**ಕಾಯಕವ ಮಾಡುತಿರ್ದ ವಚನವ ಪೇಳ್ವೆ :**

೬೪

ಹೊತ್ತಾರೆ ಎದ್ದು ಗುಡಿಯ ಚಾಡಿಸಿ,
ಪಾತಾಳಗಂಗೆಯ ಉದಕದಿಂದ ಮಜ್ಜನಕ್ಕೆರೆದು,
ಭಕ್ತರ ಮನೆಗೆ ಹೋಗಿ ಭಿಕ್ಷವ ಬೇಡಿ ತಂದು
ಶ್ರೀಶೈಲಲಿಂಗಕ್ಕೆ ನೈವೇದ್ಯವ ಕೊಟ್ಟು
ಸುಖದಿಂದ ಕಾಯಕವ ಮಾಡುತಿರ್ದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೬೦ ||

೬೫

ಹಾರುವರ ಬಿಟ್ಟಿಯ ಮಾಡಲಿಲ್ಲ, ಹಾಲಕೊಡ ಹೊರಲಿಲ್ಲ.
ತುಪ್ಪವನುಂಡು ಕಾರವೆ ಎನ್ನ ಸತಿಯ ಸಂಗವಬಿಟ್ಟು

ಅಪ್ಪನ ಸತಿಯ ಸಂಗವ ಮಾಡಿ
ನಾ ಸತ್ತು ಕಾಯಕವ ಮಾಡುತಿರ್ದೆನಯ್ಯ
ಕಾಡನೊಳಗಾದ ಶಂಕಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬೧ ॥

೬೬

ಇಂತಪ್ಪ ಲಿಂಗಧಾರಣದ ನಿರ್ಣಯವನು
ಸ್ವಾನುಭಾವಮೂರ್ತಿಗಳಿಂದ ವಿಚಾರಿಸಿಕೊಂಡು
ಅಂಗದ ಮೇಲೆ ಲಿಂಗಧಾರಣವಾಗಿ
ಪ್ರಪಂಚಮಾಡಿದಡೆಯೂ ಪ್ರಪಂಚಕನಲ್ಲ.
ಅದೇನು ಕಾರಣವೆಂದಡೆ-
ತಾವರೆಪರ್ಣ ಉದಕದಲ್ಲಿ ಪುಟ್ಟಿ
ಆ ಉದಕಕ್ಕೆ ಹೊಂದದೆ ಇರ್ಪಂತೆ-
ಲೋಕದ ಕಾಕುಜನರ ಮಧ್ಯದಲ್ಲಿ
ಶಿವಶರಣನುದ್ಭವಿಸಿದಡೆಯೂ
ಆ ಲೋಕಕ್ಕೆ ಸಮವಿಲ್ಲೆಂಬ ಹಾಗೆ.
ಚಿದಂಶಿಕನಾದ ಜ್ಞಾನಕಲಾತ್ಮನು
ಸುಜ್ಞಾನೋದಯವಾಗಿ ಶ್ರೀಗುರುಕಾರುಣ್ಯವ ಪಡೆದು
ಲಿಂಗಾಂಗಸಂಬಂಧಿಗಳಾಗಿ ಇಷ್ಟ ವ್ಯವಹಾರವನಾಚರಿಸಿದಡೆ
ಲಿಂಗಮುಖದಿಂದಾಚರಿಸುವರು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬೨ ॥

## ವಿಭೂತಿಸ್ಥಲ

ಸೂತ್ರ : ಶಿವಜ್ಞಾನೋದಯವಾದ ಶಿವಶರಣನು ಸಕಲಪ್ರಪಂಚ ನಿವೃತ್ತಿಯ ಮಾಡಿ ಗುರುಕಾರುಣ್ಯವ ಪಡೆದು, ಅಂಗದ ಮೇಲೆ ಲಿಂಗಧಾರಣವ ಮಾಡಿ, ಚಿದ್ವಿಭೂತಿಯ ಧರಿಸುತಿರ್ದನಾಗಿ ಮುಂದೆ ವಿಭೂತಿಸ್ಥಲವಾದುದು.

**ವಿಭೂತಿ ಪಾರಯ್ಯಗಳು ಕಾಯಕವ ಮಾಡುತಿರ್ದ ವಚನವ ಪೇಳ್ವೆ :**

೬೭

ಪಂಚವರ್ಣದ ಗೋವಿನ ಶೆಗಣೆಯ
ಬೆಂಕಿಲ್ಲದೆ ಸುಟ್ಟು, ನೀರಿಲ್ಲದೆ ನೀರಲ್ಲಿ ಕಲಿಸಿ ಉಂಡಿಗಟ್ಟಿ,
ಕೈಯಲ್ಲಿ ಪಿಡಿದು ಸರ್ವಾಂಗದಲ್ಲಿ ಧರಿಸಿ

ಕಾಯಕವ ಮಾಡುತಿರ್ದೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೬೩ ||

೬೮

ಇಂತೀ ನಿರ್ಣಯದಲ್ಲಿ ವಿಭೂತಿ ಧರಿಸಲರಿಯದೆ
ಕುಳ್ಳು ಕಟ್ಟಿಗೆಯ ಸುಟ್ಟು ಬೂದಿಯ ತಂದು,
ನೀರಲ್ಲಿ ಕಲಿಸಿದ ಉಂಡಿ ತಂದು,
ಜಂಗಮದ ಪಾದೋದಕದಿಂ ಶುದ್ಧಮಾಡಿ ಧರಿಸಿದಡೆ
ಭವ ಹಿಂಗುವುದೇ ? ಭವ ಹಿಂಗದು.
ವಿಶ್ವಾಸದಿಂದ ಚಿದ್ಭಸ್ಮವೆಂದು ಧರಿಸಿದಡೆ
ಪುಣ್ಯದ ಫಲ ಪ್ರಾಪ್ತಿಯಾಗುವುದು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೬೪ ||

೬೯

ಪಂಚವರ್ಣದ ಭಸ್ಮವನು ಸಂಚಲಗುಣವಳಿದು,
ಪಂಚಸ್ಥಾನದಲ್ಲಿ ಧರಿಸಬಲ್ಲಡೆ ಭಸ್ಮಧಾರಕರೆಂಬೆ.
ಅಷ್ಟವರ್ಣದ ಭಸ್ಮವನು ಅಷ್ಟಗುಣ ನಷ್ಟಮಾಡಿ
ಅಷ್ಟದಿಕ್ಕಿನಲ್ಲಿ ಧರಿಸಬಲ್ಲಡೆ ಭಸ್ಮಧಾರಕರೆಂಬೆ.
ಬಯಲ ಸುಟ್ಟ ಬೂದಿಯ ನೀರಿಲ್ಲದೆ ಧರಿಸಬಲ್ಲಡೆ
ಭಸ್ಮಧಾರಕರೆಂಬೆ.
ಮನೆಯ ಸುಟ್ಟ ಬೂದಿಯ ಕೈಯಿಲ್ಲದೆ ಧರಿಸಿ
ಶರಣು ಶರಣೆಂದು ಸತ್ತು ಕಾಯಕವ ಮಾಡುತಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೬೫ ||

೭೦

ಇಂತಪ್ಪ ಶ್ರೀವಿಭೂತಿಯ ಧರಿಸಲರಿಯದೆ
ಶ್ವೇತ, ಪೀತ, ಕಪೋತ, ಮಾಂಜಿಷ್ಟ, ಮಾಣಿಕ್ಯವೆಂಬ
ಪಂಚವರ್ಣದ ಗೋವಿಗೆ ಭೂಮಿಯ ಸಾರಿಸಿ
ಆ ಭೂಮಿಯಲ್ಲಿ ಪಂಚಗೋವುಗಳ ಕಟ್ಟಿ, ಪೂಜೋಪಚಾರ ಮಾಡಿ,
ಮಂತ್ರದಿಂದ ಅನ್ನ ಉದಕವ ಹಾಕಿ,

ಆ ಗೋವಿನ ಸಗಣಿ ಭೂಮಿಗೆ ಬೀಳದೆ ಅಂತರದಲ್ಲಿಯೇ ಪಿಡಿದು,
ಕುಳ್ಳು ಮಾಡಿ ಬಿಸಿಲಿಲ್ಲದೆ ನೆರಳಲ್ಲಿ ಒಣಗಿಸಿ,
ಮಂತ್ರದಿಂದ ನೆಲ ಸಾರಿಸಿ, ಮಂತ್ರದಿಂದ ಸುಟ್ಟು ಭಸ್ಮವ ಮಾಡಿ,
ಆ ಭಸ್ಮಕ್ಕೆ ಜಂಗಮಾರ್ಚನೆಯ ಮಾಡಿ,
ಜಂಗಮದ ಪಾದೋದಕದಿಂದ ಆ ಭಸ್ಮವ
ಮಂತ್ರದಿಂದ ಶುದ್ಧಸಂಸ್ಕಾರವ ಮಾಡಿ,
ಇಂತಪ್ಪ ವಿಭೂತಿಯ ತ್ರಿಕಾಲದಲ್ಲಿ ಕ್ರೀಯವಿಟ್ಟು ಧರಿಸಿ
ಲಿಂಗಾರ್ಚನೆಯ ಮಾಡಿದವರಿಗೆ
ಸಕಲ ಕಂಟಕಾದಿಗಳ ಭಯ ಭೀತಿ ನಷ್ಟವಾಗಿ
ಚತುರ್ವಿಧಫಲಪದಪ್ರಾಪ್ತಿ ದೊರಕೊಂಬುವದು.
ಆ ಫಲಪದ ಪಡೆದವರು ವೃಕ್ಷದ ಮೇಲೆ
ಮನೆಯ ಕಟ್ಟಿದವರು ಉಭಯರು ಒಂದೆ.
ಅದೆಂತೆಂದಡೆ:
ವೃಕ್ಷದ ಮೇಲೆ ಮನೆ ಕಟ್ಟಿದವರು
ಆ ವೃಕ್ಷವಿರುವ ಪರ್ಯಂತರವು ಆ ಮನೆಯಲ್ಲಿರುವರು.
ಆ ವೃಕ್ಷವು ಮುಪ್ಪಾಗಿ ಅಳಿದುಹೋದಲ್ಲಿ
ನೆಲಕ್ಕೆ ಬೀಳುವರಲ್ಲದೆ,
ಅಲ್ಲೆ ಸ್ಥಿರವಾಗಿ ನಿಲ್ಲಬಲ್ಲರೆ? ನಿಲ್ಲರೆಂಬ ಹಾಗೆ.
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ
ಚತುರ್ವಿಧಫಲಪದವ ಪಡೆದವರು
ಆ ಫಲಪದವಿ ಇರುವ ಪರ್ಯಂತರವು
ಸ್ಥಿರವಾಗಿ ಇರುವರಲ್ಲದೆ,
ಆ ಫಲಪದವಿ ಕಾಲೋಚಿತದ ಮೇಲೇರಿ
ಅಳಿದು ನಾಶವಾದ ಮೇಲೆ
ಮರಳಿ ಭವಕ್ಕೆ ಬೀಳುವರಲ್ಲದೆ,
ಅಲ್ಲಿ ಸ್ಥಿರವಾಗಿ ನಿಲ್ಲಲರಿಯರೆಂದು
ನಿಮ್ಮ ಶರಣ ಕಂಡು ಅದು ಮಾಯಾಜಾಲವೆಂದು
ತನ್ನ ಪರಮಜ್ಞಾನದಿಂ ಛೇದಿಸಿ
ಚಿದ್‌ವಿಭೂತಿಯನೇ ಸರ್ವಾಂಗದಲ್ಲಿ ಧರಿಸಿ,
ಶಿಖಿ-ಕರ್ಪುರದ ಸಂಯೋಗದ ಹಾಗೆ
ಆ ಚಿದ್ಭಸ್ಮದಲ್ಲಿ ನಿರ್ವಯಲಾದನಯ್ಯಾ ನಿಮ್ಮ ಶರಣ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬೬ ॥

೬೧

ಅರಣ್ಯವ ಸುಟ್ಟು, ಭಸ್ಮವ ಧರಿಸಬಲ್ಲಡೆ
ಭಸ್ಮಧಾರಕರೆಂಬೆ.
ಪರ್ವತವ ಸುಟ್ಟು, ಭಸ್ಮವ ಧರಿಸಬಲ್ಲಡೆ
ಭಸ್ಮಧಾರಕರೆಂಬೆ.
ನೀರ ಸುಟ್ಟು, ಭಸ್ಮವ ಧರಿಸಬಲ್ಲಡೆ
ಭಸ್ಮಧಾರಕರೆಂಬೆ.
ವಾಯುವ ಸುಟ್ಟು, ಭಸ್ಮವ ಧರಿಸಬಲ್ಲಡೆ
ಭಸ್ಮಧಾರಕರೆಂಬೆ.
ಸಮುದ್ರವ ಸುಟ್ಟು, ಭಸ್ಮವ ಧರಿಸಬಲ್ಲಡೆ
ಭಸ್ಮಧಾರಕರೆಂಬೆ.
ಇಂತಪ್ಪ ಭಸ್ಮವ ಧರಿಸಬಲ್ಲವರಿಗೆ
ಮೋಕ್ಷವೆಂಬುವದು ಕರತಳಾಮಳಕ ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬೭ ॥

೬೨

ಇಂತಪ್ಪ ಶ್ರೀ ವಿಭೂತಿಯ ಧರಿಸಲರಿಯದೆ
ಮಣ್ಣು ಮಟ್ಟಿಯ ಧರಿಸಿ ಭವಭಾರಕ್ಕೆ ಒಳಗಾದರು
ವಿಪ್ರ ಮೊದಲು ಶ್ವಪಚ ಕಡೆಯಾಗಿ ನೋಡಾ.
ಇಂತಪ್ಪ ಶ್ರೀ ವಿಭೂತಿಯ ಧರಿಸಲರಿಯದೆ
ದೇವ-ದಾನವ-ಮಾನವರು ಮೊದಲಾದ
ಸಕಲ ಲೋಕಾದಿಲೋಕಂಗಳು
ಭವಕ್ಕೆ ಭಾಜನವಾದರು ನೋಡಾ.
ಶ್ರೀ ವಿಭೂತಿಯ ಧರಿಸಲರಿಯದೆ
ಗರುಡ ಗಂಧರ್ವ ಕಿನ್ನರ ಕಿಂಪುರುಷರು ಮೊದಲಾದ
ಸಕಲ ಮನುಮುನಿಜನಂಗಳು ಋಷಿಗಳು
ಭವಕ್ಕೆ ಗುರಿಯಾದರು ನೋಡಾ.
ಶ್ರೀ ವಿಭೂತಿಯ ಧರಿಸಲರಿಯದೆ

ಅಂಗಾಲಕಣ್ಣವರು ಮೈಯೆಲ್ಲಕಣ್ಣವರು
ಒಂದುತಲೆಯವರು ಎರಡುತಲೆಯವರು
ಮೂರುತಲೆಯವರು ನಾಲ್ಕುತಲೆಯವರು
ಐದುತಲೆಯವರು ಆರುತಲೆಯವರು
ಏಳುತಲೆಯವರು ಎಂಟುತಲೆಯವರು
ಒಂಬತ್ತು ತಲೆಯವರು ಹತ್ತುತಲೆಯವರು
ಹನ್ನೊಂದುತಲೆಯವರು ನೂರುತಲೆಯವರು
ಐದುನೂರುತಲೆಯವರು ಸಾವಿರತಲೆಯವರು
ಗಂಗೆಗೌರಿವಲ್ಲಭರು ಸಮಾರುದ್ರರು ನಂದಿವಾಹನರು
ಇಂತಪ್ಪವರೆಲ್ಲ ಆದಿಪ್ರಮಥರು
ಇವರು ಎತ್ತಲಾನುಕಾಲಕ್ಕೆ ಭವಕ್ಕೆ ಬರುವರು ನೋಡಾ.
ಮತ್ತಂ, ಇಂತಪ್ಪ ಶ್ರೀ ವಿಭೂತಿಯನು
ಬಸವಾದಿ ಪ್ರಭುದೇವರಾಂತ್ಯಮಾದ
ಏಳುನೂರುಯೆಪ್ಪತ್ತು ಪ್ರಮಥಗಣಂಗಳು
ಮೂಳ್ಳೂರಲಿಕ್ಕೆ ಇಂಬಿಲ್ಲದೆ
ಸರ್ವಾಂಗದಲ್ಲಿ ಧರಿಸಿ ತ್ರೈಲೋಕ ಮೊದಲಾದ
ಚತುರ್ದಶಭುವನವ
ತಮ್ಮ ಚರಣದಿಂದ ಸ್ವಯವಮಾಡಿ
ಪರಶಿವಲಿಂಗದಲ್ಲಿ ಶಿಖಿಕರ್ಪುರ ಸಂಯೋಗದ ಹಾಗೆ
ಬೆರೆದು ನಿರ್ವಯಲಾದರು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೬೮ ||

## ರುದ್ರಾಕ್ಷಿಸ್ಥಲ

ಸೂತ್ರ : ಇಂತಪ್ಪ ವಿಭೂತಿಯ ಧರಿಸಿದ ಶಿವಶರಣನು ಅಂಗದ ಮೇಲೆ ರುದ್ರಾಕ್ಷಿಯ ಧರಿಸುತಿಪ್ಪನಾಗಿ ಮುಂದೆ ರುದ್ರಾಕ್ಷಿಸ್ಥಲವಾದುದು.

**ರುದ್ರಾಕ್ಷಿಸ್ಥಲದಲ್ಲಿ ರುದ್ರಾಕ್ಷಿಧರಿಸಿ ಕಾಯಕವ ಮಾಡುತಿರ್ದ ರಾಮಿದೇವಯ್ಯಗಳ ವಚನವ ಪೇಳ್ವೆ:**

೬೩

ಆರೂ ಇಲ್ಲದ ಭೂಮಿಯಲ್ಲಿ
ಬೇರಿಲ್ಲದ ರುದ್ರಾಕ್ಷಿಯ ಮರ ಪುಟ್ಟಿತ್ತು.

ನೀರಿಲ್ಲದೆ ಆ ವೃಕ್ಷ ಪಲ್ಲವಿಸಿತ್ತು.
ಆ ವೃಕ್ಷಕ್ಕೆ ರಕ್ತವರ್ಣದ ಒಂದು ಕುಸುಮ ಪುಟ್ಟಿತ್ತು.
ಆ ಕುಸುಮದಲ್ಲಿ ಒಂದುಮುಖದ ಮೂರುಮುಖದ
ಸಹಸ್ರಮುಖದ ದ್ವಿಮುಖದ
ಷೋಡಶಮುಖದ ದ್ವಾದಶಮುಖದ ದಶಮುಖದ ಷಣ್ಮುಖದ
ಚತುರ್ವಿಧಮುಖದ ಬ್ರಹ್ಮ ಮೊದಲಾಗಿ ರುದ್ರಾಕ್ಷಿಗಳು ಪುಟ್ಟಿದವು ನೋಡಾ.
ಅಂತಪ್ಪ ರುದ್ರಾಕ್ಷಿಗಳನು ಗುರುಮುಖದಿಂದ ಪಡಕೊಂಡು
ಒಂದುಮುಖದ ರುದ್ರಾಕ್ಷಿಯನು ಸ್ವರ್ಗಲೋಕದಲ್ಲಿಟ್ಟು,
ಮೂರುಮುಖದ ರುದ್ರಾಕ್ಷಿಯನು ಪಾತಾಳದಲ್ಲಿಟ್ಟುಕೊಂಡು
ಸಹಸ್ರಮುಖದ ರುದ್ರಾಕ್ಷಿಯನು ಮರ್ತ್ಯಲೋಕದಲ್ಲಿಟ್ಟು
ದ್ವಿಮುಖದ ಉದ್ರಾಕ್ಷಿಯನು ಬೈಲಲ್ಲಿಟ್ಟು,
ಷೋಡಶಮುಖದ ರುದ್ರಾಕ್ಷಿಯನು ಆಕಾಶದಲ್ಲಿಟ್ಟು
ದ್ವಾದಶಮುಖದ ರುದ್ರಾಕ್ಷಿಯನು ವಾಯುವಿನಲ್ಲಿಟ್ಟು,
ದಶಮುಖದ ರುದ್ರಾಕ್ಷಿಯನು ಅಗ್ನಿಯಲ್ಲಿಟ್ಟು,
ಷಣ್ಮುಖದ ರುದ್ರಾಕ್ಷಿಯನು ನೀರಲ್ಲಿಟ್ಟು
ಚತುರ್ಮುಖದ ರುದ್ರಾಕ್ಷಿಯನು ಭೂಮಿಯಲ್ಲಿಟ್ಟು,
ಇದಲ್ಲದೆ ಕೆಲವು ರುದ್ರಾಕ್ಷಿಗಳನು ಬ್ರಹ್ಮಾಂಡದಲ್ಲಿಟ್ಟು
ಇಂತೀ ಕ್ರಮದಲ್ಲಿ ರುದ್ರಾಕ್ಷಿಯನ್ನು ಧರಿಸಿ
ಕಾಯಕವ ಮಾಡುತಿರ್ದೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬೯ ॥

೭೪

ಇಂತಪ್ಪ ರುದ್ರಾಕ್ಷಿಯನು ಅಂತರಂಗ ಬಹಿರಂಗದಲ್ಲಿ
ಧರಿಸಿ ಆಚರಿಸಲರಿಯದೆ
ಬಹಿರಂಗದಲ್ಲಿ ಕ್ರೀಯವಿಟ್ಟು
ಹಸ್ತ, ತೋಳು, ಕಂಠ, ಕರ್ಣ, ಉತ್ತಮಾಂಗ, ಶಿಖೆ,
ಕಕ್ಷೆಯಲ್ಲಿ ಧರಿಸಿದವರಿಗೆ
ಪುಣ್ಯಫಲಪ್ರಾಪ್ತಿಯಾಗುವುದಲ್ಲದೆ ಭವ ಹಿಂಗದು ನೋಡಾ.
ಇಂತಪ್ಪ ಮೂಢಾತ್ಮರು ರುದ್ರಾಕ್ಷಿಯನು ಧರಿಸಿದ
ಆಚಾರವೆಂತೆಂದಡೆ:
ಔಡಲಗಿಡಕ್ಕೆ ಔಡಲಗೊನಿ ಬಿಟ್ಟಂತಾಯಿತು ನೋಡಾ.

ಇಂತಪ್ಪ ನಿರ್ಣಯವನು ಸುಜ್ಞಾನಿ ಶರಣನು
ತನ್ನ ಪರಮಜ್ಞಾನದಿಂದ ವಿಸರ್ಜಿಸಿ,
ಹಿಂದೆ ಹೇಳಿದ ವಚನದ ನಿರ್ಣಯವನು ತಿಳಿದು,
ತನ್ನ ಸರ್ವಾಂಗದಲ್ಲಿ ರುದ್ರಾಕ್ಷಿಯ ಧರಿಸಿ
ಚಿದ್ಘನಲಿಂಗದಲ್ಲಿ ನಿರ್ವಯಲಾದನು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೦ ||

೨೪

ಕತ್ತೆ ರುದ್ರಾಕ್ಷಿಯ ಹೊತ್ತು ವ್ಯವಹರಿಸಿದಲ್ಲಿ
ಮೋಕ್ಷವಾಯಿತು.
ಬೇಂಟೆಗಾರನು ಶುನಿಗಳ ಕೂಡಿಕೊಂಡು ಅರಣ್ಯದಲ್ಲಿ
ಬೇಂಟೆಯನಾಡುವ ಸಮಯದಲ್ಲಿ
ಒಂದು ರುದ್ರಾಕ್ಷಿಯ ಕಂಡು
ತನ್ನ ಶುನಿಗಳಿಗೆ ಗಾದಿಯ ಮಣಿಗಳೆಂದು ಕಟ್ಟಿಬಿಡಲು,
ಆ ಶುನಿಗಳು ಹೋಗಿ ಹಂದಿಯ ಹಿಡಿಯಲು
ಆ ಹಂದಿಗೂ ಆ ಶುನಿಗೂ ಮೋಕ್ಷವಾಯಿತು.
ವೇಶ್ಯಾಂಗನೆಯು ತನ್ನ ವಿನೋದಕ್ಕೆ
ಮರ್ಕಟ ಕುಕ್ಕುಟಂಗೆ ರುದ್ರಾಕ್ಷಿ ಧರಿಸಲು
ಅವಕ್ಕೆ ಮುಂದೆ ಅಂತ್ಯಕಾಲಕ್ಕೆ ಮೋಕ್ಷವಾಯಿತೆಂದು
ವೇದ, ಶ್ರುತಿ, ಪ್ರಮಾಣಗಳಿಂದ ಕೇಳಿ ಜೀವಾತ್ಮರು
ರುದ್ರಾಕ್ಷಿಯ ಧರಿಸುತ್ತಿರ್ದರು
ಕಾಣಾ ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. || ೨೧ ||

೨೬

ಸಹಸ್ರಮುಖ ರುದ್ರಾಕ್ಷಿಯನು ಬ್ರಹ್ಮನ ಸಂತತಿಗೆ ಕಟ್ಟಿದೆ.
ಮೂರುಮುಖದ ರುದ್ರಾಕ್ಷಿಯನು ವಿಷ್ಣುವಿನ ಸಂತತಿಗೆ ಕಟ್ಟಿದೆ.
ಏಕಮುಖದ ರುದ್ರಾಕ್ಷಿಯನು ರುದ್ರನ ಸಂತತಿಗೆ ಕಟ್ಟಿದೆ.
ಐದು ಬಾಗಿಲಿಗೆ ಐದು ರುದ್ರಾಕ್ಷಿಯನು ಕಟ್ಟಿದೆ.
ಒಂದು ರುದ್ರಾಕ್ಷಿಯನು ಒಳಹೊರಗೆ ಕಟ್ಟಿ,
ಕಾಯಕವ ಮಾಡುತಿರ್ದೆನಯ್ಯಾ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೭೨ ॥

೭೭

ಇಂತಪ್ಪ ರುದ್ರಾಕ್ಷಿಯನು ಧರಿಸಿದ
ಚೇರಮರಾಯಂಗೆ ಮೋಕ್ಷವಾಯಿತ್ತು.
ಈ ರುದ್ರಾಕ್ಷಿಯಿಂದ ಮಹಾದೇವಿಯಕ್ಕಗಳಿಗೆ
ಆರೂಢಪದವಾಯಿತ್ತು.
ಈ ರುದ್ರಾಕ್ಷಿಯಿಂದ ಸೌಂದರನಂಬೆಣ್ಣಗಳಿಗೆ
ನಿಜಲಿಂಗೈಕ್ಯಪದವಾಯಿತ್ತು.
ಇಂತಿವರು ಮೊದಲಾಗಿ ಸಕಲಗಣಂಗಳಿಗೆ
ರುದ್ರಾಕ್ಷಿಯಿಂದ ಶಿವಪದವಾಯಿತ್ತು.
ಇಂತಿದರ ನಿರ್ಣಯವನು ಸ್ವಾನುಭಾವಗುರುಮುಖದಿಂ
ತಿಳಿದು ವಿಚಾರಿಸಿಕೊಂಡು
ಸರ್ವಾಂಗದಲ್ಲಿ ರುದ್ರಾಕ್ಷಿಯನು ಧರಿಸಿ ರುದ್ರಾಕ್ಷಿಮಯವಾಗಿ
ಪರಶಿವಲಿಂಗದಲ್ಲಿ ಬೆರೆಯಬೇಕಲ್ಲದೆ
ಇಂತಪ್ಪ ವಿಚಾರವನು ತಿಳಿಯದೆ ರುದ್ರಾಕ್ಷಿಧಾರಕರ
ಕಂಡು ನೋಡಿ ಧರಿಸುವರೆಲ್ಲಾ
ಹುಲಿಯ ಬಣ್ಣಕ್ಕೆ ನರಿಯು ಮೈಸುಟ್ಟುಕೊಂಡು
ಸತ್ತಂತಾಯಿತ್ತು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೭೩ ॥

## ಪಂಚಾಕ್ಷರಸ್ಥಲ

ಸೂತ್ರ : ಇಂತಪ್ಪ ರುದ್ರಾಕ್ಷಿಯ ಧರಿಸಿದ ಶಿವಶರಣನು ಇನ್ನು ಪಂಚಾಕ್ಷರಿಮಂತ್ರವನುಚ್ಚರಿಸುತ್ತಿರ್ದನಾಗಿ ಮುಂದೆ ಪಂಚಾಕ್ಷರಸ್ಥಲವಾದುದು.

೭೮

ಪಂಚಾಕ್ಷರವೆಂದಡೆ ಪರಬ್ರಹ್ಮ.
ಪಂಚಾಕ್ಷರವೆಂದಡೆ ಪರಶಿವ.
ಪಂಚಾಕ್ಷರವೆಂದಡೆ ಪರವಸ್ತುವಿನ ನಾಮ.
ಪಂಚಾಕ್ಷರವೆಂದಡೆ ಭವಮರಿತ ಬಿಟ್ಟೋಡುವುದು.

ಪಂಚಾಕ್ಷರವೆಂದಡೆ ಬಹುಜನ್ಮದ ದೋಷ ಪರಿಹಾರವಾಗುವುದು.
ಪಂಚಾಕ್ಷರವೆಂದಡೆ ಸಕಲ ತೀರ್ಥಕ್ಷೇತ್ರಯಾತ್ರೆಯಾದ
ಪುಣ್ಯಫಲಪ್ರಾಪ್ತಿಯಾಗುವುದು.
ಪಂಚಾಕ್ಷರವೆಂದಡೆ ಅಷ್ಟಮಹಾಸಿದ್ಧಿ ನವಮಹಾಸಿದ್ಧಿ
ಅಷ್ಟಾಂಗಯೋಗದ ಫಲ ಅಷ್ಟೈಶ್ವರ್ಯಸಂಪತ್ತು
ದೊರಕೊಳ್ಳುವುದು ನೋಡಾ.
ಇಂತಪ್ಪ ಪಂಚಾಕ್ಷರೀಮಂತ್ರದ ಮಹತ್ವವ ಕಂಡು
ಮನ ಕರಗಿ ತನು ಉಬ್ಬಿ,
ಪಂಚಾಕ್ಷರಿ, ಪಂಚಾಕ್ಷರಿಯೆಂದು ನೆನೆನೆನೆದು
ಭವಹರಿದು ಪರಶಿವಲಿಂಗವ ಕೂಡಿ
ಸುಖಿಯಾಗಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೭೪ ||

೭೯

ಪಂಚಾಕ್ಷರಮಂತ್ರದಿಂದ
ಅಜಗಣ್ಣ ತಂದೆಗಳಿಗೆ ಆರೂಢಪದವಾಯಿತು.
ಪಂಚಾಕ್ಷರಮಂತ್ರದಿಂದ ಶಿವಜಾತಯ್ಯನ ಶಿಷ್ಯ
ಮಂತ್ರಜಾತಯ್ಯ ಮಂತ್ರದಲ್ಲಿ ಬಯಲಾದನು.
ಪಂಚಾಕ್ಷರಮಂತ್ರದಿಂದ ಸಾನಂದಮುನಿಗಣೇಶ್ವರನು
ಯಮಪುರವ ಹಾಳುಮಾಡಿದ.
ಪಂಚಾಕ್ಷರಮಂತ್ರದಿಂದ ವೀರಭದ್ರನು
ದಕ್ಷಬ್ರಹ್ಮನ ತಲೆಹೊಡೆದು ಯಜ್ಞವ ಕೆಡಿಸಿದ.
ಇಂತಪ್ಪ ಶ್ರುತಿಪ್ರಮಾಣ ವಾಕ್ಯಗಳಿಂದ
ಪಂಚಾಕ್ಷರ ಮಹತ್ವವ ಕೇಳಿ
ಜೀವಾತ್ಮರು ನೆನೆನೆನೆದು ಭವಕ್ಕೆ ಹೇಳಿದರು.
ನಾನು ಪಂಚಾಕ್ಷರವ ನೆನೆನೆದು
ಭವಮಾಲೆಯ ಹರಿದು ಮಂತ್ರದಲ್ಲಿ ಲಯವಾದೆನಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೭೯ ||

**ಪಂಚಾಕ್ಷರ ಸ್ಥಲದಲ್ಲಿ ಮಂತ್ರಜಾತಯ್ಯನವರು**
**ಕಾಯಕವ ಮಾಡಿದ ವಚನವ ಪೇಳ್ವೆ :**

೮೦

ಇಂತಪ್ಪ ಪ್ರಣವಪಂಚಾಕ್ಷರಿ ಮಂತ್ರವನು
ಸಾಯದಕಿನ್ನ ಮುನ್ನವೆ ಸುಜ್ಞಾನೋದಯವಾಗಿ
ಶ್ರೀಗುರುಕಾರುಣ್ಯವ ಹಡದು
ಸರ್ವಾಂಗದಲ್ಲಿ ಪ್ರಣವ ಮಂತ್ರವನು
ಸಂಬಂಧಿಸಿಕೊಳ್ಳಬೇಕಲ್ಲದೆ,
ಸತ್ತ ಶವಕ್ಕೆ ಭುಜಪತ್ರದ ಮೇಲೆ ಪ್ರಣಮವ ಬರದು
ಆ ದೇಹಕ್ಕೆ ಹಚ್ಚಿದರೆ ಆ ದೇಹವು ಮಂತ್ರದೇಹವಾಗಬಲ್ಲದೆ?
ಆಗಲರಿಯದು. ಅದೆಂತೆಂದಡೆ :
ಚಿತ್ರಕನು ಕಾಗದದ ಮೇಲೊಂದು
ಚಿತ್ರವ ಬರೆದು ಗೋಡೆಗೆ ಹಚ್ಚಿದರೆ
ಆ ಗೋಡೆಯು ಚಿತ್ರವಾಗಲರಿಯದು ಎಂಬ ಹಾಗೆ.
ಉಭಯವು ಒಂದೇ ಆದ ಕಾರಣ :
ಅಂತಪ್ಪ ಮೂಢಾತ್ಮರ ಮೇಳಾಪವ
ವಿಸರ್ಜಿಸಿದ ಶಿವಶರಣನು
ದೇಹದಲ್ಲಿರುವ ಪರಿಯಂತರದಲ್ಲಿ
ಶ್ರೀಗುರುಕಾರುಣ್ಯವ ಹಡದು
ಸರ್ವಾಂಗದಲ್ಲಿ ಪ್ರಣವಮಂತ್ರವನು
ಮುಳ್ಳೂರಲಿಕ್ಕೆ ಇಂಬಿಲ್ಲದ ಹಾಗೆ ಸ್ವಾಯತವ ಮಾಡಿಕೊಂಡು
ಆ ಮಂತ್ರದಲ್ಲಿ ಲೀಯವಾಗಿ
ಪ್ರಪಂಚವನಾಚರಿಸುತ್ತಿರ್ದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೭೬ ||

೮೧

ಬಾಲತ್ವದಲ್ಲಿ ತನ್ನ ಮಲಮೂತ್ರದೊಡನೆ ಹೊರಳಾಡಿ,
ಯೌವನಪ್ರಾಯದಲ್ಲಿ ಮದಮತ್ಸರದಿಂದ ಹೋರಾಡಿ,
ಕಾಮದಲ್ಲಿ ಕರಗಿ, ಕ್ರೋಧದಲ್ಲಿ ಕೊರದು,
ಲೋಭ ಮೋಹದಿಂದ ಮಗ್ನರಾಗಿ,

ಯೌವನಬಲಗುಂದಿ ಮುಪ್ಪುವರಿದು
ಹಲ್ಲು ಬಿದ್ದು, ಕಣ್ಣು ಒಳಸಟ್ಟು, ಬೆನ್ನು ಬಾಗಿ,
ದಮ್ಮು ಹತ್ತಿ, ಗುರುಗೂರಿ ಗರಹತ್ತಿ, ಸಾಯುವ ಮನುಜರಿಗೆ,
ವಿಭೂತಿ ವೀಳ್ಯೆ ಎಂದು ಮಾಡಿ,
ಅವನ ಪಣೆಯಲ್ಲಿ ವಿಭೂತಿಯ ಧರಿಸಿ,
ಸರ್ವಾಂಗದಲ್ಲಿ ವಿಭೂತಿ ಲೇಪನ ಮಾಡಿ,
ಸ್ಥಾನಸ್ಥಾನಂಗಳಲ್ಲಿ ರುದ್ರಾಕ್ಷಿಯ ಧರಿಸಿ,
ಅವನ ಮನೆಯಲ್ಲಿ ಶಿವಗಣಂಗಳು ಸಲಿಸಿ,
ಅವನ ಮಸ್ತಕದ ಮೇಲೆ ಸಕಲ ಗಣಂಗಳು ತಮ್ಮ ಪಾದವನಿಟ್ಟು,
ಅವನ ಕೈಯಲ್ಲಿ ವಿಭೂತಿ ರುದ್ರಾಕ್ಷಿ ಬಿಲ್ವಪತ್ರಿ ಸುವರ್ಣ
ಮೊದಲಾದ ಕಾಂಚನವ ಭಿಕ್ಷವ ಕೊಂಡು
ಅವನು ಸತ್ತುಹೋದ ಮೇಲೆ
ಊರ ಹೊರಗಾಗಲಿ, ಊರೊಳಗಾಗಲಿ,
ಲಿಂಗಸ್ಥಾಪನೆಯಿದ್ದ ಮಠಮಾನ್ಯದಲ್ಲಿ
ಏಳುಪಾದ ನಿಡಿದು, ಏಳುಪಾದ ಉದ್ದ ಭೂಮಿಯ ಒಳಗೆ,
ಐದುಪಾದ ಚೌಕು, ಮೂರುಪಾದ ಅಡ್ಡಗಲ,
ಮೂರುಪಾದ ಒಳಯಕ್ಕೆ ತ್ರಿಕೋಣೆ.
ಇಂತೀ ಕ್ರಮದಲ್ಲಿ ಕ್ರಿಯಾಸಮಾಧಿಯ ಮಾಡಿ,
ಸುಣ್ಣ ಕೆಂಪುಮಣ್ಣಿನ ಸಾರಣೆಯ ಮಾಡಿ
ರಂಗವಾಲಿಯ ತುಂಬಿ,
ತಳಿರುತೋರಣವ ಕಟ್ಟಿ, ಕೋಣೆ ಕೋಣೆ ಸ್ಥಾನಕ್ಕೆ
ಓಲೆಯ ಮೇಲೆ ಪ್ರಣಮವಂ ಬರೆದು
ಆ ಸಮಾಧಿಯಲ್ಲಿ ಸಂಬಂಧಿಸಿ,
ಮತ್ತಂ, ಅವನ ಶವಕ್ಕೆ ಹಾಗೆ ಪ್ರಣಮವಂ ಬರೆದು ಸಂಬಂಧಿಸಿ,
ಸಂಚರಿಸಿ ಮೇಲೆ ಮೋಕ್ಷವಾಯಿತು ಎಂಬರಯ್ಯಾ :
ಮೋಕ್ಷವಾಗಲರಿಯದು.
ಅದೆಂತೆಂದಡೆ, ಇಂತಿವೆಲ್ಲವು ಹೊರಗಣ ಉಪಚಾರವು.
ಈ ಉಪಚಾರದಿಂದ ಕರ್ಮದೋಷಗಳು ಹರಿದು
ಪಿಶಾಚಿಯಾಗನು, ಭವ ಹಿಂಗದು.
ಇಂತೀ ಕ್ರಮದಲ್ಲಿ, ಅಂತರಂಗದಲ್ಲಿ ಲಿಂಗಾಂಗಕ್ಕೆ
ಸ್ವಾನುಭಾವಜ್ಞಾನಸೂತ್ರದಿಂ

ಪ್ರಣವಸಂಬಂಧ ಮಾಡಿಕೊಂಡಡೆ
ಅದೇ ಕ್ರಿಯಾಸಮಾಧಿ, ಗೋಮುಖಸಮಾಧಿ,
ಮಹಾನಿಜ ಅಖಂಡ ಚಿದ್ಭಯಲಸಮಾಧಿ.
ಇಂತಪ್ಪ ಸಮಾಧಿ ಉಳ್ಳವರಿಗೆ ಭವಬಂಧನ ಹಿಂಗಿ
ಮುಂದೆ ಮೋಕ್ಷವಾಗುವದು ನೋಡೆಂದನಯ್ಯ
ನಿಮ್ಮ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೭೭ ||

೮೨

ಸಮಾಧಿ ಸಮಾಧಿ ಎಂಬರಯ್ಯಾ,
ಸಮಾಧಿಯ ಬಗೆಯ ಪೇಳ್ವೆ.
ಅದೆಂತೆಂದಡೆ :
ಪಂಚಭೂತಮಿಶ್ರವಾದ ದೇಹವೆಂಬುವುದೆ ಸಮಾಧಿ.
ಅಂತಪ್ಪ ದೇಹದ ಪೃಥ್ವಿತತ್ವದಲ್ಲಿ ನಕಾರಪ್ರಣವ ಸ್ವಾಯತ.
ಅಪ್ಪುತತ್ವದಲ್ಲಿ ಮಕಾರಪ್ರಣವ ಸ್ವಾಯತ.
ತೇಜತತ್ವದಲ್ಲಿ ಶಿಕಾರಪ್ರಣವ ಸ್ವಾಯತ.
ವಾಯುತತ್ವದಲ್ಲಿ ವಕಾರಪ್ರಣವ ಸ್ವಾಯತ.
ಆಕಾಶತತ್ವದಲ್ಲಿ ಯಕಾರಪ್ರಣವ ಸ್ವಾಯತ.
ಆತ್ಮದಲ್ಲಿ ಓಂಕಾರಪ್ರಣವ ಸ್ವಾಯತ.
ಮತ್ತಂ, ಬಲಪಾದದಲ್ಲಿ ನಕಾರ,
ಎಡಪಾದದಲ್ಲಿ ಮಕಾರ, ಮಧ್ಯನಾಭಿಸ್ಥಾನದಲ್ಲಿ ಶಿಕಾರ,
ಬಲಹಸ್ತದಲ್ಲಿ ವಕಾರ, ಎಡಹಸ್ತದಲ್ಲಿ ಯಕಾರ,
ಮಸ್ತಕದಲ್ಲಿ ಓಂಕಾರ.
ಇಂತೀ ಸ್ಥಾನಂಗಳಲ್ಲಿ ಪ್ರಣವಸಂಬಂಧವಾದುದೆ ಸಮಾಧಿ.
ಮತ್ತಂ, ಸ್ಥೂಲತನುವಿನಲ್ಲಿ ಬಕಾರಪ್ರಣವ ಸ್ವಾಯತ.
ಸೂಕ್ಷ್ಮತನುವಿನಲ್ಲಿ ನಕಾರಪ್ರಣವ ಸ್ವಾಯತ.
ಕಾರಣತನುವಿನಲ್ಲಿ ವಕಾರಪ್ರಣವ ಸ್ವಾಯತ.
ಮತ್ತಂ,
ವಿಶ್ವನಲ್ಲಿ ಅಕಾರಪ್ರಣವಸಂಬಂಧ.
ತೈಜಸನಲ್ಲಿ ಉಕಾರಪ್ರಣವಸಂಬಂಧ.
ಪ್ರಾಜ್ಞನಲ್ಲಿ ಮಕಾರಪ್ರಣವಸಂಬಂಧ.
ಇಂತೀ ಸ್ಥಾನಂಗಳಲ್ಲಿ ಪ್ರಣವಸಂಬಂಧವಾದುದೇ ಸಮಾಧಿ.

ಮತ್ತಂ,
ಆಧಾರದಲ್ಲಿ ನಕಾರ, ಸ್ವಾಧಿಷ್ಠಾನದಲ್ಲಿ ಮಕಾರ,
ಮಣಿಪೂರಕದಲ್ಲಿ ಶಿಕಾರ,
ಅನಾಹತದಲ್ಲಿ ವಕಾರ, ವಿಶುದ್ಧಿಯಲ್ಲಿ ಯಕಾರ,
ಆಜ್ಞೆಯಲ್ಲಿ ಓಂಕಾರ, ಬ್ರಹ್ಮರಂಧ್ರದಲ್ಲಿ
ಬಕಾರ, ಅಕಾರ, ಪಕಾರ, ಶಿಖೆಯಲ್ಲಿ ಕ್ಷಕಾರ, ಉಕಾರ, ಸಕಾರ.
ಪಶ್ಚಿಮದಲ್ಲಿ ಹಕಾರ, ಮಕಾರ, ವಕಾರ.
ಇಂತೀ ಸ್ಥಾನಂಗಳಲ್ಲಿ ಪ್ರಣವಸಂಬಂಧವಾದುದೇ ಸಮಾಧಿ.
ಮತ್ತಂ, ಬಲಭಾಗದಲ್ಲಿ ಓಂಕಾರ, ಎಡಭಾಗದಲ್ಲಿ ಮಕಾರ,
ಮುಂಭಾಗದಲ್ಲಿ ಅಕಾರ, ಹಿಂಭಾಗದಲ್ಲಿ ಮಕಾರ,
ಊರ್ಧ್ವಭಾಗದಲ್ಲಿ ಹಕಾರ.
ಮತ್ತಂ, ಬಲಹಸ್ತದ ಮಧ್ಯದಲ್ಲಿ ಓಂಕಾರ,
ಹೆಬ್ಬೆರಳಿನಲ್ಲಿ ಯಕಾರ, ಉಳಿದ ನಾಲ್ಕು ಬೆರಳಿನಲ್ಲಿ
ನಾಲ್ಕು ಪ್ರಣವಗಳು.
ಆ ಹಸ್ತದ ಮೇಲುಭಾಗದಲ್ಲಿ ಅಕಾರ, ಮುಂಗೈಯಲಿ ಬಕಾರ,
ಮೊಳಕೈಯಲ್ಲಿ ಉಕಾರ, ರಟ್ಟೆಯಲ್ಲಿ ಸಕಾರ,
ಭುಜದಲ್ಲಿ ಮಕಾರ, ಹೆಗಲಲ್ಲಿ ವಕಾರ,
ಇಂತೀ ಪರಿಯಲ್ಲಿ ಉಭಯ ಹಸ್ತ ತೋಳಿನಲ್ಲಿ
ಹಿಂದೆ ಹೇಳಿದ ಪಂಚಸ್ಥಾನಂಗಳಲ್ಲಿ
ಪ್ರಣವಸಂಬಂಧವಾದುದೇ ಸಮಾಧಿ.
ಮತ್ತಂ, ಉಭಯ ತಳಪಾದದಲ್ಲಿ ಓಂಕಾರ,
ಉಭಯ ಪಾದಾಂಗುಷ್ಠದಲ್ಲಿ ಯಕಾರ,
ಉಭಯ ನಾಲ್ಕು ಬೆರಳಿನಲ್ಲಿ ನಾಲ್ಕು ಪ್ರಣವಂಗಳು.
ಉಭಯ ಪಾದದ ಮೇಲುಭಾಗದಲ್ಲಿ ಅಕಾರ,
ಉಭಯ ಪಾದದ ಬಾಹ್ಯ ಹರಡಿನಲ್ಲಿ ಉಕಾರ,
ಉಭಯ ಪಾದದಂತರ ಹರಡಿನಲ್ಲಿ ಬಕಾರ.
ಉಭಯ ಪಾದದ ಹಿಂಬಡದಲ್ಲಿ ಮಕಾರ,
ಉಭಯ ಕಣಕಾಲಲ್ಲಿ ಸಕಾರ, ಮೊಳಕಾಲಲ್ಲಿ ಪಕಾರ,
ಉಭಯ ಕಿರಿದೊಡೆಯಲ್ಲಿ ಅಕಾರ.
ಹಿರಿದೊಡೆಯಲ್ಲಿ ಉಕಾರ, ಉಭಯಾಂಗದಲ್ಲಿ ಮಕಾರ.
ಇಂತೀ ಸ್ಥಾನಂಗಳಲ್ಲಿ ಪ್ರಣವಸಂಬಂಧವಾದುದೆ ಸಮಾಧಿ.

ಮತ್ತಂ, ಉಭಯ ಬರಕಿಯಲ್ಲಿ ಓಂ ನಮಃಶಿವಾಯ
ಎಂಬ ಮೂಲ ಷಡಕ್ಷರ.
ಉಭಯ ಮೊಲೆಯಲ್ಲಿ ಓಂಕಾರ, ಉಭಯ ಬಗಲಲ್ಲಿ ಬಕಾರ,
ಕಕ್ಷೆಯಲ್ಲಿ ಅಕಾರ, ಹೃದಯದಲ್ಲಿ ಉಕಾರ,
ಕಂಠದಲ್ಲಿ ಮಕಾರ, ಹೆಡಕಿನಲ್ಲಿ ಸಕಾರ,
ಹೆಡಕಿನ ಎಡಬಲದಲ್ಲಿ ಪಕಾರ,
ಉಭಯ ಕರ್ಣದ ಮಧ್ಯದಲ್ಲಿ ಓಂಕಾರ,
ಹಾಲಿಯಲ್ಲಿ ಯಕಾರ, ಕಿರಿಹಾಲಿಯಲ್ಲಿ ವಕಾರ,
ಕರ್ಣದ ಊರ್ಧ್ವಭಾಗದಲ್ಲಿ ಶಿಕಾರ,
ಬಲ ಎಡಭಾಗದಲ್ಲಿ ಮಕಾರ, ಕರ್ಣದ ಹಿಂಭಾಗದಲ್ಲಿ ಸಕಾರ.
ಇಂತೀ ಸ್ಥಾನಂಗಳಲ್ಲಿ ಪ್ರಣವಸಂಬಂಧವಾದುದೇ ಸಮಾಧಿ.
ಮತ್ತಂ,
ಬಲಭಾಗದ ನಯನದಲ್ಲಿ ಅಕಾರ, ಬಕಾರ.
ಎಡಭಾಗದ ನಯನದಲ್ಲಿ ಉಕಾರ, ಸಕಾರ,
ಉಭಯ ನಯನದ ಮಧ್ಯದಲ್ಲಿ ಮಕಾರ, ಪಕಾರ,
ಉಭಯ ಗಲ್ಲದಲ್ಲಿ ಓಂಕಾರ.
ನಾಶಿಕದ ತುದಿಯಲ್ಲಿ ಮಕಾರ.
ಬಲಭಾಗದ ಹೊಳ್ಳಿಯಲ್ಲಿ ಅಕಾರ,
ಎಡಭಾಗದ ಹೊಳ್ಳಿಯಲ್ಲಿ ಉಕಾರ.
ಮೇಲುಭಾಗದ ತುಟಿಯಲ್ಲಿ ಬಕಾರ.
ಕೆಳಭಾಗದ ತುಟಿಯಲ್ಲಿ ಸಕಾರ.
ಉಭಯಮಧ್ಯದಲ್ಲಿ ಪಕಾರ.
ನಾಲಿಗೆಯಲ್ಲಿ ಓಂ ನಮಃಶಿವಾಯವೆಂಬ
ಮೂಲ ಷಡಕ್ಷರ.
ದಂತಪಂಕ್ತಿಗಳೇ ಹಂ ಕ್ಷಂ ಎಂಬ ಶೂನ್ಯಪ್ರಣಮಂಗಳು.
ಚರ್ಮವೆ ವಕಾರ, ಅಸ್ತಿಯೇ ಮಕಾರ,
ಮಾಂಸವೇ ಶಿಕಾರ, ಮಜ್ಜವೇ ಪಕಾರ,
ರಕ್ತವೇ ಯಕಾರ, ಪ್ರಾಣವೇ ಓಂಕಾರ.
ರೇಚಕ ಪೂರಕ ಕುಂಭಕವೆಂಬ ಸ್ವರದಲ್ಲಿ
ಅಕಾರ, ಉಕಾರ, ಮಕಾರ.
ಮತ್ತಂ, ಆಪಾದಮಸ್ತಕದ ಪರಿಯಂತರವು

ರೋಮನಾಳಂಗಳಲ್ಲಿ ನಿರಂಜನ ಮೂಲಪ್ರಣಮಪೆಂಬ ಓಂಕಾರ.
ಇಂತೀ ಸ್ಥಾನಂಗಳಲ್ಲಿ ಪ್ರಣಮಸಂಬಂಧವಾದುದೇ ಸಮಾಧಿ.
ಇಂತೀ ಕ್ರಮದಲ್ಲಿ ಕೀಯವಿಟ್ಟು ಬಾಹ್ಯದಲ್ಲಿ ದೇಹಕ್ಕೆ
ಪ್ರಣಮಸಂಬಂಧಿಸಿದಡೆಯು
ಆ ದೇಹವು ಭೂಮಿಯ ಮರೆಯಲ್ಲಿ
ಒಂದು ಕ್ಷಣಕ್ಕೆ ನಿರ್ವಯಲಾಗುವುದು.
ಇಂತೀ ಕ್ರಮದಲ್ಲಿ ಅಂತರಂಗದಲ್ಲಿ ಪ್ರಾಣಕ್ಕೆ
ಪ್ರಣಮಸಂಬಂಧವ ಸುಜ್ಞಾನ ಕ್ರಿಯೆಗಳಿಂದ ಸಂಬಂಧಿಸಿದಡೆಯು
ದೇಹದಲ್ಲಿರಲಿಕ್ಕೆಯು ಜೀವನ್ಮುಕ್ತನಾಗುವನು.
ಅದೆಂತೆಂದಡೆ:
ಚಿದಂಶಿಕನಾದ ಜ್ಞಾನಕಲಾತ್ಮಂಗೆ ಸುಜ್ಞಾನೋದಯವಾಗಿ
ಸಕಲಪ್ರಪಂಚವ ನಿವೃತ್ತಿ ಮಾಡಿ,
ಶ್ರೀಗುರುಕಾರುಣ್ಯವ ಪಡೆದು
ಅಂಗದ ಮೇಲೆ ಇಷ್ಟಲಿಂಗವು ಧಾರಣವಾದಾಕ್ಷಣವೇ
ಹಿಂದೆ ಹೇಳಿದ ನಿರ್ಣಯದಲ್ಲಿ
ಸರ್ವಾಂಗದಲ್ಲಿ ಮೂಲಪ್ರಣಮಾದಿ ಕ್ಷಕಾರ ಪ್ರಣಮಾಂತ್ಯವಾದ
ಸಕಲನಿಃಷ್ಕಲಪ್ರಣಮಂಗಳು
ಬೆಲ್ಲದ ಕುಳ್ಳಿಗೆ ಇರುವೆ ಮುತ್ತಿದಂತೆ
ತನ್ನಿಂದ ತಾನೆ ಸಂಬಂಧವಾಗಿ
ಜೀವನ್ಮುಕ್ತನಾಗಿ ಲೀಲೆಯಲ್ಲಿರುವ ಪರಿಯಂತರದಲ್ಲಿ
ಉದಕದೊಳಗೆ ಇರ್ಪ ತಾವರೆಯಂತೆ
ನಿರ್ಲೇಪನಾಗಿ ಪ್ರಪಂಚವನಾಚರಿಸುವನು.
ಈ ಭೇದವನು ಶಿವಜ್ಞಾನಿ ಶರಣರು ಬಲ್ಲರಲ್ಲದೆ
ಈ ಲೋಕದ ಗಾದಿಮನುಜರೆತ್ತ ಬಲ್ಲರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೭೮ ॥

ಪಂಚಾಕ್ಷರಿ ಸ್ಥಲದಲ್ಲಿ ಗಾರುಡ ಭೀಮಯ್ಯಗಳು
ಕಾಯಕವ ಮಾಡುತಿರ್ದ ವಚನವ ಪೇಳ್ವೆ :

೮೩

ನಾ ಹುಟ್ಟಿದ ದ್ವಾದಶವರ್ಷಕ್ಕೆ ಎನ್ನ ತಂದೆ
ದ್ವಾದಶಮಂತ್ರವ ಕಲಿಸಿದ.

ಒಂದು ಮಂತ್ರದಿಂದ ಮರ್ತ್ಯಲೋಕವ ಸುಟ್ಟೆ.
ಒಂದು ಮಂತ್ರದಿಂದ ಪಾತಾಳಲೋಕವ ಸುಟ್ಟೆ.
ಒಂದು ಮಂತ್ರದಿಂದ ಸ್ವರ್ಗಲೋಕವ ಸುಟ್ಟೆ.
ಮೂರು ಮಂತ್ರದಿಂದ ಮುಪ್ಪುರದರಸುಗಳ ಕೊಂದೆ.
ಆರು ಮಂತ್ರದಿಂದ ಆರು ವರ್ಣವ ಸುಟ್ಟೆ.
ಇಂತೀ ಮಂತ್ರವ ಮಂತ್ರಿಸುವ ವೇಳೆಯಲ್ಲಿ
ನಾ ಸತ್ತು ಕಾಯಕವ ಮಾಡುತಿರ್ದೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೭೯ ||

೮೪

ಇಂತಪ್ಪ ಪ್ರಣಮಮಂತ್ರಸಂಬಂಧವನು
ಸ್ವಾನುಭಾವಗುರುಮೂರ್ತಿಗಳಿಂದ ವಿಚಾರಿಸಿಕೊಳ್ಳಬೇಕಲ್ಲದೆ,
ಭಿನ್ನ ಜ್ಞಾನಗುರುಮೂರ್ತಿಗಳಿಂದ ವಿಚಾರಿಸಿಕೊಳ್ಳಲಾಗದು.
ಅದೇನು ಕಾರಣವೆಂದಡೆ:
ದ್ವಾದಶ ರುದ್ರಾಕ್ಷಿಮಾಲೆಯಂ ಮಾಡಿ,
ಆ ದ್ವಾದಶ ರುದ್ರಾಕ್ಷಿಗೆ ದ್ವಾದಶಪ್ರಣಮವ ಸಂಬಂಧಿಸಿ,
ಶಿಖಾರುದ್ರಾಕ್ಷಿಗೆ ನಿರಂಜನ ಅವಾಚ್ಯಪ್ರಣವವೆಂಬ
ಹಕಾರ ಪ್ರಣಮವ ಸಂಬಂಧಿಸಿ,
ಉದಯ ಮಧ್ಯಾಹ್ನ ಸಾಯಂಕಾಲವೆಂಬ
ತ್ರಿಕಾಲದಲ್ಲಿ ಸ್ನಾನವ ಮಾಡಿ,
ಏಕಾಂತಸ್ಥಾನದಲ್ಲಿ ಉತ್ತರವಾಗಲಿ ಪೂರ್ವವಾಗಲಿ
ಉಭಯದೊಳಗೆ ಆವುದಾನೊಂದು ದಿಕ್ಕಿಗೆ ಮುಖವಾಗಿ
ಶುಭ್ರವಸ್ತ್ರವಾಗಲಿ, ಶುಭ್ರರೋಮಶಾಖೆಯಾಗಲಿ,
ಶುಭ್ರ ರೋಮಕಂಬಳಿಯಾಗಲಿ,
ತೃಣದಾಸನವಾಗಲಿ, ನಾರಾಸನವಾಗಲಿ,
ಇಂತೀ ಪಂಚಾಸನದೊಳಗೆ ಆವುದಾನೊಂದು
ಆಸನ ಬಲಿದು, ಮೂರ್ತವ ಮಾಡಿ,
ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ,
ಆ ರುದ್ರಾಕ್ಷಿಮಾಲೆಗೆ ವಿಭೂತಿ ಅಗ್ಗಣಿ ಪತ್ರಿಯ ಧರಿಸಿ,
ತರ್ಜನ್ಯವಾಗಲಿ ಅನಾಮಿಕ ಬೆರಳಾಗಲಿ
ಉಭಯದೊಳಗೆ ದಾವುದಾದರೇನು

ಒಂದು ಬೆರಳಿಗೆ ರುದ್ರಾಕ್ಷಿಯಂ ಧರಿಸಿ
ಅದರೊಳಗೆ ದೀಕ್ಷಾಗುರು ಅಧೋಮುಖವಾಗಿ
ರುದ್ರಾಕ್ಷಿಮಾಲೆಯ ಜಪಿಸೆಂದು ಪೇಳ್ವನು.
ಮತ್ತಂ, ಕುರುಡರೊಳಗೆ ಮೆಳ್ಳನು ಚಲುವನೆಂಬ ಹಾಗೆ
ಅಜ್ಞಾನಿಗಳೊಳಗಣ ಜ್ಞಾನಿಗಳು ಊರ್ಧ್ವಮುಖವಾಗಿ
ರುದ್ರಾಕ್ಷಿ ಜಪಿಸೆಂದು ಪೇಳುವರು.
ಇಂತಪ್ಪ ಸಂಶಯದಲ್ಲಿ ಮುಳುಗಿ
ಮೂರುಲೋಕವು ಭವಭವದಲ್ಲಿ
ಎಡೆಯಾಡುವುದು ಕಂಡು,
ಶಿವಜ್ಞಾನ ಶರಣನು ವಿಸರ್ಜಿಸಿ
ಸ್ವಾನುಭಾವಸೂತ್ರದಿಂ, ದ್ವಾದಶಪ್ರಣಮವ ಪೋಣಿಸಿ,
ಅಧೋ ಊರ್ಧ್ವವೆಂಬ ವಿಚಾರವಿಲ್ಲದೆ ದಿವಾರಾತ್ರಿಯಲ್ಲಿ
ನಿಮಿಷ ನಿಮಿಷವನಗಲದೆ ಮರಿಯದೆ
ಜಪಿಸಿ ಸದ್ಯೋನ್ಮುಕ್ತನಾಗಿ
ಶಿವಸುಖದಲ್ಲಿ ಸುಖಿಯಾಗಿರ್ದನಯ್ಯ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೬೦ ||

## ಭಕ್ತಸ್ಥಲ

ಸೂತ್ರ : ಚಿತ್ಪಿಂಡದಲ್ಲಿ ಉದಯವಾದ ಶಿವಶರಣನು ಕ್ರೀಗಳಿಂದ ಇಂತೀ ಸ್ಥಲದಲ್ಲಾಚರಿಸಿ ಮುಂದೆ ಸದ್ಭಕ್ತನಾಗುತಿರ್ದನಾಗಿ ಭಕ್ತಸ್ಥಲವಾದುದು.

೬೫

ಮುಖದಲ್ಲಿ ಮಂತ್ರ, ಪಣೆಯಲ್ಲಿ ವಿಭೂತಿ,
ಕೊರಳಲ್ಲಿ ರುದ್ರಾಕ್ಷಿ,
ಹೃದಯದಲ್ಲಿ ಶಿವಲಿಂಗಸಜ್ಜೆಯ ಧರಿಸಿ,
ಭಕ್ತಿಸ್ಥಲವನಾಚರಿಸುವ ಶರಣಜನಂಗಳು
ಶಿವಗಣಂಗಳ ಕಂಡು ಹರಹರ ಶಿವಶಿವ
ಶಿವಮಹಾದೇವ ಎಂದು ನಮಸ್ಕಾರವ ಮಾಡಿ,
ಅವರ ಪಾದದ ಮೇಲೆ ಉರುಳಾಡಿ,
ಅವರ ಪಾದಧೂಳವ ಸರ್ವಾಂಗದಲ್ಲಿ ಧರಿಸಿ,
ತಮ್ಮ ತಮ್ಮ ಗೃಹಾಶ್ರಮಕ್ಕೆ ಬಿಜಯಂಗೈಸಿಕೊಂಡು ಹೋಗಿ,
ಪಾದಾರ್ಚನೆಯಂ ಮಾಡಿ ಉನ್ನತಾಸನದ ಮೇಲೆ

ಮುಹೂರ್ತವ ಮಾಡಿಸಿ,
ಅಂಬಲಿ ಸೊಪ್ಪು ಮೊದಲಾದ ಪಂಚಾಮೃತವ ಎಡೆ ಮಾಡಿ,
'ಸ್ವಾಮೀ ಮನಃಪೂರ್ವಕ ಸಲಿಸೆಂ'ದು
ಹಸ್ತ-ಪಾದವ ಜೋಡಿಸಿಕೊಂಡು
'ಶರಣಾರ್ಥಿ ಸ್ವಾಮಿ ಲಿಂಗಾರ್ಪಣವಾಗಲೆಂ'ದು
ಅಡಿಗಡಿಗೆ ಇಚ್ಛಾಪದಾರ್ಥವ ಎಡೆಮಾಡಿ,
ಅವರು ಸಲಿಸಿದ ಮೇಲೆ ವೀಳ್ಯ ಅಡಿಕೆಯ ನೀಡಿ,
ಅವರ ಸುಖ-ದುಃಖವ ವಿಚಾರಿಸಿ,
ಅವರಿಗೆ ಶಿವಕೊಟ್ಟ ದ್ರವ್ಯವನು ಭಿಕ್ಷವ ನೀಡಿ,
ತಮ್ಮಾಪ್ತರಾದ ಬೀಗರು ಸ್ನೇಹಿತರು ಬಾಂಧವರು
ಉಲ್ಲಾಸದಿಂದ ಸರ್ವರೂ ಕೂಡಿ
ಊರಬಿಟ್ಟು ಹೊರಯಕ್ಕೆ ಬಂದು,
ಒಬ್ಬರಿಗೊಬ್ಬರು ಶರಣು ಶರಣೆಂದು ಕಳಿಸಿದ ಹಾಗೆ,
ಶಿವಗಣಂಗಳ ಪಾದಕ್ಕೆ ದೀರ್ಘದಂಡ ನಮಸ್ಕಾರವ ಮಾಡಿ,
'ಸ್ವಾಮಿ ಬರುವಂಥವರಾಗಿರಿ' ಎಂದು
ಶರಣು ಮಾಡಿದಾತನೆ ಶಿವಭಕ್ತ;
ಮೂರು ಲೋಕಕ್ಕೆ ಒಡೆಯನಾಗುವನು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೧ ॥

೮೬

ಭಕ್ತನಾದಮೇಲೆ ಗುರುವಿಗೆ ತನುವ ನೀಡಬೇಕು,
ಲಿಂಗಕ್ಕೆ ಮನವ ನೀಡಬೇಕು,
ಜಂಗಮಕ್ಕೆ ಧನವ ನೀಡಬೇಕು.
ಇಂತೀ ತ್ರಿವಿಧವ ತ್ರಿವಿಧಕ್ಕೆ ಕೊಟ್ಟು
ಹೊಲಗೇರಿಯ ಹೊಕ್ಕು ಕುಲಗೆಟ್ಟವನೇ ಭಕ್ತ ಕಾಣಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೨ ॥

೮೭

ಇಂತೀ ಕ್ರಮದಲ್ಲಿ ಗುರು-ಲಿಂಗ-ಜಂಗಮಕ್ಕೆ
ತನು-ಮನ-ಧನ ನೀಡಿದ ಭಕ್ತಗಣಂಗಳಿಗೆ

ಮೋಕ್ಷವೆಂಬುದು ಕರತಳಾಮಳಕವಾಗಿರ್ಪುದು.
ಇಂತಪ್ಪ ವಿಚಾರವ ತಿಳಿಯದೆ ಮೂಢಮತಿಯಿಂದ
ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನವ
ನೀಡಿದಾತನೇ ಭಕ್ತನೆಂದು
ವೇದಾಗಮಶ್ರುತಿ ಪ್ರಮಾಣವಾಕ್ಯಂಗಳು ಸಾರುತ್ತಿರ್ಪವು.
ಆ ಶ್ರುತಿ ಸಾರಿದ ವಾಕ್ಯಗಳು ಪ್ರಮಾಣ.
ಅದೆಂತೆಂದಡೆ:
ಅಂತಪ್ಪ ಶ್ರುತಿವಾಕ್ಯಂಗಳ ಕೇಳಿ
ಸ್ವಾನುಭಾವಗುರುಮುಖದಿಂದ ವಿಚಾರಿಸಿಕೊಳ್ಳಲರಿಯದೆ,
ತಮ್ಮಲ್ಲಿ ಸ್ವಯಂಜ್ಞಾನೋದಯವಾಗಿ
ತಾವು ತಿಳಿಯದೆ ಮೂಢಮತಿಯಿಂದ ಅಜ್ಞಾನ ಎಡೆಗೊಂಡು
ಗುರುವಿಗೆ ತನುವ ನೀಡಬೇಕೆಂದು,
ಆ ಗುರುವಿನ ಸೇವಾವೃತ್ತಿಯಿಂದ
ತನುವ ದಂಡನೆಯ ಮಾಡುವರು.
ಅದೇನು ಕಾರಣವೆಂದಡೆ:
ಗುರುವಿನ ನಿಲುಕಡೆಯನರಿಯದ ಕಾರಣ.
ಲಿಂಗಕ್ಕೆ ಮನವ ನೀಡಬೇಕೆಂದು
ಧೂಪ-ದೀಪ-ನೈವೇದ್ಯ-ತಾಂಬೂಲ ಮೊದಲಾದ
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿ,
ಹಸ್ತದಲ್ಲಿರುವ ಇಷ್ಟಲಿಂಗದಲ್ಲಿ ಮನವ ನಿಲ್ಲಿಸಬೇಕೆಂದು
ಎವೆಗೆ ಎವೆ ಹೊಡೆಯದೆ ಸತ್ತ ಮಲದ ಕಣ್ಣಿನಂತೆ
ಕಣ್ಣು ತೆರೆದು ನೋಡಿದಡೆ
ಆ ಕಲ್ಲಲಿಂಗದಲ್ಲಿ ಮನವು ನಿಲ್ಲಬಲ್ಲುದೆ ?
ನಿಲ್ಲಲರಿಯದು.
ಅದೇನು ಕಾರಣವೆಂದಡೆ :
ಆ ಇಷ್ಟಬ್ರಹ್ಮದ ನಿಜನಿಲುಕಡೆಯ ಸ್ವರೂಪ
ತಾವೆಂದರಿಯದ ಕಾರಣ.
ಇಂತೀ ಪರಿಯಲ್ಲಿ ಮನವ ಬಳಲಿಸುವರು.
ಜಂಗಮಕ್ಕೆ ಧನವ ನೀಡಬೇಕೆಂದು
ಅನ್ನ-ವಸ್ತ್ರ ಮೊದಲಾದ ಹದಿನೆಂಟು ಧಾನ್ಯ ಜೀನಸು ಸಹವಾಗಿ
ನಾನಾ ಭಾವತಿಯಿಂದ ಗಳಿಸಿ

ಸಕಲ ಪದಾರ್ಥವನು ಜಂಗಮಕ್ಕೆ ನೀಡಿ,
ಆತ್ಮನ ಬಳಲಿಸುವರು.
ಅದೇನು ಕಾರಣವೆಂದಡೆ,
ಆ ಜಂಗಮದ ನಿಜನಿಲುಕಡೆಯ ಸ್ವರೂಪ
ತಾವೆಂದರಿಯದ ಕಾರಣ.
ಇಂತಿವೆಲ್ಲವು ಹೊರಗಣ ಉಪಚಾರ.
ಈ ಹೊರಗಣ ಉಪಚಾರವ ಮಾಡಿದವರಿಗೆ
ಪುಣ್ಯಫಲಪ್ರಾಪ್ತಿ ದೊರಕೊಂಬುವದು.
ಆ ಪುಣ್ಯಫಲ ತೀರಿದ ಮೇಲೆ
ಮರಳಿ ಭವಬಂಧನವೇ ಪ್ರಾಪ್ತಿ.
ಅದೆಂತೆಂದಡೆ : ಪುಣ್ಯವೇ ತೈಲ, ಫಲವೇ ಜ್ಯೋತಿ.
ತೈಲವು ತೀರಿದ ಹಾಗೆ ಆ ಜ್ಯೋತಿಯ ಪ್ರಕಾಶ ಅಡಗುವದು.
ಪುಣ್ಯ ತೀರಿದ ಮೇಲೆ ಫಲಪದ ನಾಶವಾಗುವದು
ನೋಡೆಂದ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೩ ॥

೮೮

ಮೂರು ಮಲವ ಜರಿದು,
ಮೂರು ಮಲವ ತಿಂದು,
ಆರು ಮಂದಿಯ ಕೊಂದು,
ಆರು ಮಂದಿಯ ಸಂಗವ ಮಾಡಿ,
ಮೂರು ಮಂದಿಯ ಕೊಂದು,
ಮೂವರ ಕೂಡಿ ಗುಲ್ಲುಮಾಡದೆ ಸಲ್ಲಡಗಿ,
ಸೂರ್ಯನ ಪ್ರಕಾಶದಲ್ಲಿ ಸತ್ತು ಚಲಿಸುತಿರ್ದ ನಿಮ್ಮ ಭಕ್ತ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೪ ॥

೮೯

ಹಳೆಯು ರಗಳೆಯು ಹೋಲಬಲ್ಲರೆ ಭಕ್ತರೆಂಬೆ.
ಹರಿವ ನೀರ ಹೋಲಬಲ್ಲರೆ ಭಕ್ತರೆಂಬೆ.
ಭೂಮಿಯ ಹೋಲಬಲ್ಲರೆ ಭಕ್ತರೆಂಬೆ.

ಇಪ್ಪುಳ್ಳಾತನೆ ಶಿವನಲ್ಲಿ ಸಮರಸವನುಳ್ಳ ಸದ್ಭಕ್ತನೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೫ ॥

**ಒಕ್ಕಲಿಗರ ಮುದ್ದಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೯೦

ಹಾದಿಹೊಲವ ಮಾಡಿ, ಮೂರೆತ್ತು ಹೂಡಿ,
ಆ ಮೂರೆತ್ತಿಗೆ ಒಂದು ನೊಗ ಕಟ್ಟಿ, ನೇಗಲಿಯ ಹೂಡಿ,
ಕರಕಿಯ ಬಿಟ್ಟು ಕಣಗಿಲ ತೆಗೆದು,
ಹೊಲ ಹಸನ ಮಾಡಿ,
ಗೋದಿ, ಕಡಲೆ, ಜೋಳ ಮೊದಲಾದ
ಹದಿನೆಂಟು ಧಾನ್ಯ ಜೀನಸವಿಲ್ಲದೆ ಬಿತ್ತಿಬೆಳೆದು
ಹಕ್ಕಿ ಹೊಡೆಯದೆ ಹೊಲವ ಮಾಡಿ
ಕಾಯಕವ ಮಾಡುತಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೬ ॥

೯೧

ಇಂತಪ್ಪ ವಿಚಾರವ ತಿಳಿಯದೆ
ಹತ್ತು ಹೊನ್ನಿಗೆ ಒಂದು ಹೊಲವ ಮಾಡಿ,
ಹತ್ತು ಖಂಡಗ ಧಾನ್ಯವ ಬೆಳೆದು,
ಹಗೆಯ ಮೆಟ್ಟಿ ಹಗೆಯ ಹಾಕಿ,
ಮುಂದೆ ಮಾರಿ ಕಡಬಡ್ಡಿಯ ಕೊಟ್ಟು
ತೆಗೆದುಕೊಂಬವರು ಭಕ್ತರೆಂತಪ್ಪರಯ್ಯ ?
ಇಂತಪ್ಪವರು ಭಕ್ತರೆಂದರೆ
ನಗುವರಯ್ಯ ನಿಮ್ಮ ಶರಣರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೮೭ ॥

**ಭಕ್ತನ ಮಹೇಶ್ವರ**

೯೨

ಹತ್ತಕ್ಕೆ ನೀಡಿ ಹನ್ನೊಂದಕ್ಕೆ ನೀಡದಾತ
ಭಕ್ತನೇ ? ಅಲ್ಲಲ್ಲ.

ಭಿಕ್ಷವ ಕೊಡುವಲ್ಲಿ ಮುಖವ ನೋಡಿ ಕೊಡುವಾತ
ಭಕ್ತನೇ ? ಅಲ್ಲಲ್ಲ.
ಗಣಾರಾಧನೆಯ ಮಾಡಿದಲ್ಲಿ
ಒಳಗೊಂದು ಹೊರಗೊಂದು ನೀಡುವಾತ
ಭಕ್ತನೇ? ಅಲ್ಲಲ್ಲ.
ಅದೇನು ಕಾರಣವೆಂದರೆ ಇವರು ತಾಮಸಭಕ್ತರು.
ಇಂತಪ್ಪ ತಾಮಸಭಕ್ತರಿಗೆ
ಶಿವನು ಒಲಿ ಒಲಿ ಎಂದರೆ ಎಂತೊಲಿಯುವನಯ್ಯ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೮೮ ||

೯೩

ಬೇಡಿಸಿಕೊಂಡು ನೀಡುವಾತ ಭಕ್ತನಲ್ಲ.
ಬೇಡಿ ಉಂಬಾತ ಜಂಗಮನಲ್ಲ.
ರೂಪಕ್ಕೆ ಪರಿದಾಡುವಾತ ಭಕ್ತನಲ್ಲ,
ರುಚಿಗೆ ಹರಿದಾಡುವಾತ ಜಂಗಮನಲ್ಲ.
ಜಂಗಮಕ್ಕೆ ಅನ್ನ ವಸ್ತ್ರವ ಕೊಟ್ಟು
ಸುಖಿಸಿದೆನೆಂಬಾತ ಭಕ್ತನಲ್ಲ,
ಆ ಭಕ್ತನ ಅನ್ನ ವಸ್ತ್ರದಿಂದ
ನಾನು ಸುಖಿಯಾದೆನೆಂಬಾತ ಜಂಗಮನಲ್ಲ.
ಅದೆಂತೆಂದೊಡೆ:
ಆ ಜಂಗಮನಂತುವ ಭಕ್ತನರಿಯ,
ಆ ಭಕ್ತನಂತುವ ಜಂಗಮನರಿಯದ ಕಾರಣ,
ದೇವಭಕ್ತನೆಂಬ ನಾಮವಾಯಿತು.
ಇಂತೀ ಉಭಯರ ಭೇದವ
ನಿಮ್ಮ ಶರಣರೇ ಬಲ್ಲರಲ್ಲದೆ
ಈ ಲೋಕದ ಗಾದಿಯಮನುಜರೆತ್ತ ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ ? || ೮೯ ||

೯೪

ಭಕ್ತನಾದರೆ ಬಾಳೆಹಣ್ಣಿನಂತಿರಬೇಕು.
ಭಕ್ತನಾದರೆ ಬೆಲ್ಲದಕುಳ್ಳಿಯಂತಿರಬೇಕು.

ಭಕ್ತನಾದರೆ ಮಾವಿನಫಲದಂತಿರಬೇಕು.
ಇಂತಪ್ಪಾತನೇ ಸದ್ಭಕ್ತ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೦ ॥

೯೧

ಭಕ್ತಿಗೆ ತೋಲಾಗಿ ಓಡುವಾತ ಜಂಗಮವಲ್ಲ.
ಮಂತ್ರ ತಂತ್ರ ವಶೀಕರಣ ಕಲಿತು
ಮರೆದಾಡುವಾತ ಜಂಗಮವಲ್ಲ.
ವೇಷದ ಗುಣವನರಿಯದ ಹಾಸ್ಯಗಾರನ ಹಾಗೆ
ವಿಭೂತಿ ರುದ್ರಾಕ್ಷಿ ಕಾವಿಲಾಂಛನವ ಧರಿಸಿ
ತಿರುಗುವರೆಲ್ಲ ಜಂಗಮರಲ್ಲ.
ಬೇಟೆಯ ನಾಯಿಯಂತೆ ವಿಷಯದಾಶೆಗೆ
ಮುಂದುವರೆದು ತಿರುಗುವಾತ ಜಂಗಮವಲ್ಲ.
ಇವರು ಜಂಗಮವೆಂದಡೆ
ನಗುವರಯ್ಯ ನಿಮ್ಮ ಶರಣರು.
ಅದೇನು ಕಾರಣವೆಂದಡೆ:
ಇಂತಿವರೆಲ್ಲರು ಪರಮಜಂಗಮದ
ನಿಲುಕಡೆಯನರಿಯರಾಗಿ,
ಮುಂದೆ ಭವಜಾಲದಲ್ಲಿ ರಾಟಾಳ ತಿರುಗಿದಂತೆ
ತಿರುಗುವದೇ ಪ್ರಾಪ್ತಿ ನೋಡಾ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೧ ॥

## ಭಕ್ತನ ಪ್ರಸಾದಿ

೯೨

ಸೆರೆಯ ಕುಡಿದವ ಗುರು ಎಂಬೆನೆ? ಎನ್ನೆನಯ್ಯಾ.
ಹೆಂಡವ ಕುಡಿದವ ಲಿಂಗಾಂಗಿ ಎಂಬೆನೆ? ಎನ್ನೆನಯ್ಯಾ.
ಕಂಡವ ತಿಂದವ ಚರಲಿಂಗವೆಂಬೆನೆ? ಎನ್ನೆನಯ್ಯಾ.
ಈ ಭೇದವ ತಿಳಿಯಬಲ್ಲರೆ ಭಕ್ತರೆಂಬೆ.
ತಿಳಿಯದಿದ್ದರೆ ಭವಭಾರಿಗಳೆಂಬೆ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೨ ॥

೯೭

ಗುರುವೆಂಬವನೇ ಹೊಲೆಯ.
ಲಿಂಗಾಂಗಿ ಎಂಬವನೇ ಮಾದಿಗ.
ಜಂಗಮವೆಂಬವನೇ ಸಮಗಾರ.
ಈ ಮೂವರೊಳಗೆ ಹೊಕ್ಕು ಬಳಕೆಯ ಮಾಡಿದಾತನೇ ಭಕ್ತ.
ಆ ಭಕ್ತನೆಂಬುವನೇ ಡೋರ.
ಇಂತೀ ಚತುರ್ವಿಧ ಭೇದವ ತಿಳಿದು,
ಪಾದೋದಕ ಪ್ರಸಾದವ ಕೊಡಬಲ್ಲರೆ
ಗುರುಲಿಂಗಜಂಗಮವೆಂಬೆ.
ಈ ನಿರ್ಣಯವ ತಿಳಿದು ಪಾದೋದಕ ಪ್ರಸಾದ ಕೊಳ್ಳಬಲ್ಲರೆ
ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ,
ಶರಣೈಕ್ಯರೆಂಬ ಷಟ್‌ಸ್ಥಲಬ್ರಹ್ಮಿ ಎಂಬೆ.
ಆತನೇ ಅಚ್ಚಪ್ರಸಾದಿ, ನಿಚ್ಚಪ್ರಸಾದಿ,
ಸಮಯಪ್ರಸಾದಿ, ಏಕಪ್ರಸಾದಿ.
ಇಂತೀ ಕ್ರಮವರಿತು
ಪಾದೋದಕ ಪ್ರಸಾದವ ಕೊಳ್ಳಬಲ್ಲರೆ
ಮೋಕ್ಷವಾಗುವುದಕ್ಕೆ ತಡವಿಲ್ಲವಯ್ಯ.
ಈ ಭೇದವ ತಿಳಿಯದೆ
ಅಯ್ಯಾ, ಹಸಾದ ಮಹಾಪ್ರಸಾದ
ಪಾಲಿಸಿರೆಂದು, ಕರುಣಿಸಿರೆಂದು ಕೃಪೆ ಮಾಡಿ
ಭೂತದೇಹಿಗಳೆಮರಿಗೆ ಪಾತಕಮನುಜರು
ಅಡ್ಡಡ್ಡ ಬಿದ್ದು ಎದ್ದು ಪದ್ದುಗಟ್ಟಿ
ಮೊಳಕಾಲು ಗೂಡುಗಟ್ಟಿ ಹಣೆ ಬುಗುಟಿ ಎದ್ದು
ಈ ಪರಿಯಲ್ಲಿ ಅಯ್ಯಾ ಪ್ರಸಾದ ಪಾಲಿಸೆಂದು ಪಡಕೊಂಡು
ಲಿಂಗಕ್ಕೆ ತೋರಿ ತೋರಿ ತಮ್ಮ ಉದರಾಗ್ನಿ ಅಡಗಿಸಿಕೊಂಡು,
ಕಡೆಯಲ್ಲಿ ಎಣ್ಣೆಯ ಸಾತಕ್ಕೆ ಅಲಗ ನೆಕ್ಕುವ ಶ್ವಾನನ ಹಾಗೆ
ತಮ್ಮ ನಾಲಿಗಿಯಲಿ ತಳಗಿ ತಾಬಾಣವ ನೆಕ್ಕಿ ನೆಕ್ಕಿ,
ಆ ತಳಗಿ ತಾಬಾಣ ಸವೆದು ಸಣ್ಣಾಗಿ ಹೋದವಲ್ಲದೆ,
ಇಂತಪ್ಪ ಮತಿಭ್ರಷ್ಟ ಹೊಲೆಯ ಮಾದಿಗರಿಗೆ
ಪರಶಿವನ ಮಹಾಪ್ರಸಾದ ಸಾಧ್ಯವೇ? ಸಾಧ್ಯವಲ್ಲ.
ಮುಂದೆ ಎಂಬತ್ತುನಾಲ್ಕುಲಕ್ಷ

ಯೋನಿದ್ವಾರದಲ್ಲಿ ತಿರುಗಿ ತಿರುಗಿ
ಭವದತ್ತ ಮುಖವಾಗಿ ನರಕವನೆ
ಭುಂಜಿಸುವಮು ಉಂಟೆಂದ ನಿಮ್ಮ ಶರಣ ವೀರಾಧಿವೀರ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೯೩ ||

೯೪

ಹಂದಿ, ಮೊಲ, ಪಶುವ ತಿಂದವನೇ ಭಕ್ತ.
ಆನೆ, ಕುದುರೆ, ನಾಯಿಯ ತಿಂದವನೇ ಮಹೇಶ್ವರ.
ಕೋಣ, ಎಮ್ಮೆ, ಹುಲಿಯ ತಿಂದವನೇ ಪ್ರಸಾದಿ.
ಕೋಡಗ, ಸರ್ಪ, ಉಡವ ತಿಂದವನೇ ಪ್ರಾಣಲಿಂಗಿ.
ಬೆಕ್ಕನು, ಹರಿಣವನು, ಕರುಗಳನು ತಿಂದವನೇ ಶರಣನು.
ಹದ್ದು, ಕಾಗೆ, ಪಿಪೀಲಿಕನ ತಿಂದವನೇ ಐಕ್ಯ.
ಇಂತೀ ಎಲ್ಲವ ಕೊಂದು ತಿಂದವನ ಕೊಂದು
ಯಾರೂ ಇಲ್ಲದ ದೇಶಕ್ಕೆ ಒಯ್ದು
ಅಗ್ನಿ ಇಲ್ಲದೇ ಸುಟ್ಟು, ನೀರಿಲ್ಲದೆ ಅಟ್ಟು,
ಕಾಲಿಲ್ಲದೆ ನಡೆದು, ಕಣ್ಣಿಲ್ಲದೆ ನೋಡಿ, ಕೈಯಿಲ್ಲದೆ ಪಿಡಿದು,
ಪರಿಮಾಣವಿಲ್ಲದ ಹರಿವಾಣದಲ್ಲಿ ಗಡಣೆಸಿಕೊಂಡು,
ಹಿಂದು ಮುಂದಿನ ಎಡಬಲದ ಸಂಶಯಂ ಬಿಟ್ಟು ನಿಶ್ಚಿಂತನಾಗಿ,
ಸ್ವಸ್ಥ ಪದ್ಮಾಸನದಲ್ಲಿ ಮುಹೂರ್ತವ ಮಾಡಿ,
ಏಕಾಗ್ರಚಿತ್ತಿನಿಂದ ಹಲ್ಲು ಇಲ್ಲದೆ ಮೆಲ್ಲಬಲ್ಲರೆ
ಆತನೇ ಅಚ್ಚಪ್ರಸಾದಿ, ನಿಚ್ಚಪ್ರಸಾದಿ,
ಸಮಯಪ್ರಸಾದಿ, ಏಕಪ್ರಸಾದಿ,
ಗುರು ಲಿಂಗ ಜಂಗಮ ಪಾದೋದಕ ಪ್ರಸಾದಿ ಎಂಬೆನಯ್ಯಾ.
ಇಂತೀ ಭೇದವನು ತಿಳಿಯದೆ ಭಕ್ತರ ಮನೆಯಲ್ಲಿ
ಉನ್ನತಾಸನದ ಗದ್ದುಗೆಯ ಮೇಲೆ ಕುಳಿತು,
ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಪೂಜೆಗೊಂಬ
ಗುರುಮೂರ್ತಿಗಳು, ಚರಮೂರ್ತಿಗಳು
ಇಂತೀ ಉಭಯರು ಸತ್ತ ಶವದಿಂದತ್ತತ್ತ ನೋಡಾ.
ಇಂತೀ ವಿಚಾರವನು ತಿಳಿಯದೆ
ನಾವು ಪರಮವಿರಕ್ತರು, ಪಟ್ಟದಯ್ಯಗಳು, ಚರಮೂರ್ತಿಗಳು,
ಗುರುಸ್ಥಲದ ಅಯ್ಯತನದ ಮೂರ್ತಿಗಳೆಂದು

ಪಾದಪೂಜೆಯ ಮಾಡಿಸಿಕೊಂಡು
ಪಾದವ ಪಾಲಿಸುವರೆಂದು
ಭಕ್ತರಿಗೆ ತೀರ್ಥವೆಂದು ಕೊಡುವಂಥವರು
ಬೀದಿಬಾಜಾರದಲ್ಲಿ ಕುಳಿತು ಸೆರೆಯ ಮಾರುವ
ಹೆಂಡಗಾರರು ಇವರಿಬ್ಬರು ಸರಿ ಎಂಬೆ.
ಇಂತೀ ನಿರ್ಣಯವನು ತಿಳಿಯದೆ
ಭಕ್ತರನಪ್ಪಗೆಡಹಿಸಿಕೊಂಡು.
ಪ್ರಸಾದವೆಂದು ತಮ್ಮ ಎಡೆಯೊಳಗಿನ
ಕೂಳ ತೆಗೆದು ಕೈಯೆತ್ತಿ ನೀಡುವರು.
ಪೇಟೆ ಬಜಾರ, ಬೀದಿಯಂಗಡಿ ಕಟ್ಟೆಯಲ್ಲಿ ಕುಳಿತು
ಹೋತು ಕುರಿಗಳನು ಕೊಂದು
ಅದರ ಕಂಡವನು ಕಡಿದು ತಕ್ಕಡಿಯಲ್ಲಿ ಎತ್ತಿ ತೂಗಿ ಮಾರುವ
ಕಟುಕರು ಇವರಿಬ್ಬರು ಸರಿ ಎಂಬೆ.
ಇಂತೀ ಭೇದವ ತಿಳಿಯದೆ
ಗುರುಲಿಂಗಜಂಗಮವೆಂಬ ತ್ರಿಮೂರ್ತಿಗಳು
ಪರಶಿವಸ್ವರೂಪರೆಂದು ಭಾವಿಸಿ ಪಾದೋದಕ ಪ್ರಸಾದವ ಕೊಂಬ ಭಕ್ತನು
ಕೊಡುವಂತ ಗುರುಹಿರಿಯರು
ಇವರ ಪಾದೋದಕ ಪ್ರಸಾದವೆಂತಾಯಿತಯ್ಯಾ ಎಂದಡೆ.
ಹಳೆನಾಯಿ ಮುದಿಬೆಕ್ಕು ಸತ್ತ
ಮೂರುದಿನದ ಮೇಲೆ ಆರಿಸಿಕೊಂಡು ಬಂದು
ಅದರ ಜೀರ್ಣಮಾಂಸವನು ತಿಂದು
ಬೆಕ್ಕು, ನಾಯಿ, ಹಂದಿಯ ಉಚ್ಚಿಯ ಕುಡಿದಂತಾಯಿತಯ್ಯಾ.
ಇಂತಿದರನುಭಾವವನು ಸ್ವಾನುಭಾವಗುರುಮೂರ್ತಿಗಳಿಂದ
ತನ್ನ ಸ್ವಯಾತ್ಮಜ್ಞಾನದಿಂದ ವಿಚಾರಿಸಿ ತಿಳಿದು ನೋಡಿ,
ಇಂತಿವರೆಲ್ಲರೂ ಕೂಳಿಗೆ ಬಂದ ಬೆಕ್ಕು ನಾಯಿಗಳ ಹಾಗೆ
ಅವರ ಒಡಲಿಗೆ ಕೂಳನು ಹಾಕಿ,
ಬೆಕ್ಕು ನಾಯಿಗಳ ಅಟ್ಟಿದ ಹಾಗೆ ಅವರನು ಅಟ್ಟಬೇಕು ನೋಡಾ.
ಇಂತಿವರಲ್ಲಿ ಪಾದೋದಕ ಪ್ರಸಾದವ ಕೊಳಲಾಗದು.
ಈ ಹೊಲೆಯ ಮಾದಿಗರ ಮೇಳಾಪವನು ಬಿಟ್ಟು
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆಂಬ ಗುರುಲಿಂಗಜಂಗಮದ
ಪಾದೋದಕ ಪ್ರಸಾದವ ಕೊಳಬಲ್ಲರೆ

ಆ ಭಕ್ತರಿಗೆ ಮೋಕ್ಷವೆಂಬುದು ಕರತಳಾಮಳಕ ನೋಡೆಂದನಯ್ಯಾ
ನಿಮ್ಮ ಶರಣ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೯೪ ||

೯೫

ಶ್ರೀಗುರು ಬಂದು ತ್ರಿವಿಧದೀಕ್ಷೆಯಿಂದ
ಉಪದೇಶವ ಮಾಡುವ ಕಾಲದಲ್ಲಿ
ಹಸ್ತದಲ್ಲಿ ಶಸ್ತ್ರವ ಹಿಡಿದು ಕಡಿದುಕೊಂಡು
ನುಂಗಿದಾತನೇ ಶಿಷ್ಯನೆಂಬೆ.
ಲಿಂಗವು ಬಂದು ಹಸ್ತದಲ್ಲಿ
ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ
ಪೂಜೆಗೊಂಬ ವೇಳೆಯಲ್ಲಿ ವಜ್ರಾಯುಧದಿಂದ
ಬಡಿದು ಒಡೆದು ಚೂರ್ಣವ ಮಾಡಿ
ಉದಕದೊಳಗೆ ಹಾಕಿ ಕುಡಿಯುವವನೇ ಶರಣನೆಂಬೆ.
ಜಂಗಮ ಬಂದು ಇದುರಿನಲ್ಲಿ ಕುಳಿತು
ಅನುಭಾವಬೋಧೆಯನು ಮಾಡುವ ಸಮಯದಲ್ಲಿ
ಹಸ್ತದಲ್ಲಿ ಖಡ್ಗವ ಪಿಡಿದು
ಎಡಕ ಬಂದವನ ಕುಟ್ಟಿ, ಬಲಕ ಬಂದವನ ಹೆಟ್ಟಿ,
ಎದುರಿನಲ್ಲಿ ಬಂದವನ ಮೆಟ್ಟಿ,
ಆ ಜಂಗಮವನು ಕಡಿದು
ಅವನ ಕಂಡವ ಚಿನಿಪಾಲವ ಮಾಡಿ,
ನೀರಿಲ್ಲದೆ ಅಟ್ಟು, ಕಿಚ್ಚಿಲ್ಲದೆ ಸುಟ್ಟು,
ಹಸ್ತವಿಲ್ಲದೆ ಪಿಡಿದು, ಬಾಯಿಲ್ಲದೆ ಸವಿದು,
ಜಿಹ್ವೆಯಿಲ್ಲದೆ ರುಚಿಸಿ, ಸಂತೋಷವಿಲ್ಲದೆ
ಪರಿಣಾಮಿಸಬಲ್ಲರೆ ಭಕ್ತನೆಂಬೆ.
ಇಂತೀ ತ್ರಿವಿಧದ ಅನುಭಾವವ ಹೇಳಬಲ್ಲರೆ
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ
ಶರಣ ಐಕ್ಯನೆಂಬೆ.
ಲಿಂಗಾಂಗಿ ಎಂಬೆ, ಶಿವಜ್ಞಾನಸಂಪನ್ನರೆಂಬೆ.
ಪರಶಿವಯೋಗಿಗಳೆಂಬೆ. ಚಿತ್ಪ್ರಕಾಶಜ್ಞಾನಿಗಳೆಂಬೆ.
ಈ ವಚನವ ಭೇದವ ತಿಳಿಯದಿದ್ದರೆ
ಸತ್ತಹಾಗೆ ಸುಮ್ಮನೆ ಇರು ಎಂದ ಕಾಣಾ ನಿಮ್ಮ ಶರಣ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೯೯ ||

೧೦೦

ಇಂತಪ್ಪಪ್ರಸಾದದ ಘನವನರಿಯದೆ
ಸ್ಥಾವರಕ್ಕೆ ಕೊಟ್ಟ ದ್ರವ್ಯವು ಲಿಂಗಕ್ಕೆ ಸಲ್ಲದೆಂಬರು.
ಅದೇನು ಕಾರಣವೆಂದಡೆ:
ಸ್ಥಾವರವು ನಿಶ್ಶಬ್ದ, ಲಿಂಗವು ಮಂತ್ರಶಬ್ದ ಎಂಬರಯ್ಯಾ.
ಎಲೆ ಮರುಳ ಮಾನವರಿರಾ,
ಹದಿನೆಂಟು ಜೀನಸು ಧಾನ್ಯವು ಭೂಮಿಯಲ್ಲಿ ಬೆಳೆಯುವದು.
ಆ ಭೂಮಿ ಸ್ಥಾವರವಲ್ಲವೆ?
ಆ ಧಾನ್ಯವ ತಂದು ಕಲ್ಲವಳ್ಳಿಗೆ ಹಾಕಿ ಕುಟ್ಟಿ ಬೀಸಿ
ಗಡಿಗೆಯೊಳಗೆ ಹಾಕಿ ಪಾಕವ ಮಾಡುವರು.
ಆ ಕಲ್ಲು ಒಳ್ಳು ಗಡಿಗೆ ಸ್ಥಾವರವಲ್ಲವೆ?
ಅಂತಪ್ಪ ಪಾಕವನು ಗಡಿಗೆಯೊಳಗೆ ಇದ್ದಾಗ
ಬೋನವೆಂಬರು.
ಹರಿವಾಣಕ್ಕೆ ಬಂದಲ್ಲಿ ನೈವೇದ್ಯವೆಂಬರು.
ಜಂಗಮದ ಹಸ್ತಸ್ಪರ್ಶವಾದಾಗಲೇ
ಪದಾರ್ಥದ ಪೂರ್ವಾಶ್ರಯವಳಿಯಿತೆಂಬರು.
ಜಂಗಮವು ತನ್ನ ಲಿಂಗಕ್ಕೆ ತೋರಿ,
ಸಲಿಸಿದ ಮೇಲೆ ಪ್ರಸಾದವಾಯಿತೆಂಬರು.
ಇಂತಪ್ಪ ಪ್ರಸಾದಕ್ಕೆ 'ಅಯ್ಯಾ ಹಸಾದ
ಮಹಾಪ್ರಸಾದ ಪಾಲಿಸಿರೆ'ಂದು
ಕೂಳ ಚೆಲ್ಲಿದರೆ ಕಾಗಿ ನೆರೆದು
ಒಂದಕ್ಕೊಂದು ಕಚ್ಚಿ ಕಡಿದಾಡುವಂತೆ,
ಒಬ್ಬರಿಗೊಬ್ಬರು ನಾ ಮುಂದೆ ನೀ ಮುಂದೆಂದು
ಅಡ್ಡಡ್ಡ ಬಿದ್ದು,
ಆ ಜಂಗಮ ತಿಂದ ಎಂಜಲ ಪ್ರಸಾದವೆಂದು
ಪಡಕೊಂಡು ತಮ್ಮ ತಮ್ಮ ಲಿಂಗಕ್ಕೆ ತೋರಿ ತೋರಿ
ಆಧಾರಸ್ಥಾನ ಮೊದಲಾಗಿ ವಿಶುದ್ಧಿಸ್ಥಾನ ಪರಿಯಂತರ
ತೊಗಲತಿತ್ತಿ ನೀರ ತುಂಬಿದಂತೆ ತುಂಬಿಕೊಂಡು,
ಸತ್ತ ಮೊಲದಂತೆ ಕಣ್ಣು ಬಿಡುವಣ್ಣಗಳು

ನಿಮ್ಮ ಶಿವಶರಣರ ಮಹಾಘನಪ್ರಸಾದವ
ಈ ಕುರಿಮನುಜರೆತ್ತಬಲ್ಲರಯ್ಯ.
ಅದೆಂತೆಂದಡೆ :
ಲಿಂಗಕ್ಕೆ ಶಿವಕಳೆಯಿಲ್ಲ,
ಭಕ್ತಂಗೆ ಗುರುಕಾರುಣ್ಯವಿಲ್ಲ,
ಜಂಗಮಕ್ಕೆ ಪರಮಕಳೆಯಿಲ್ಲ.
ಪ್ರಸಾದಕ್ಕೆ ಜಡರೂಪಿಲ್ಲದಾದಕಾರಣ
ಹೀಗೆಂಬುದ ತಿಳಿಯದೆ ಮಾಡುವ ಮಾಟವೆಲ್ಲ,
ನೀರೊಳಗೆ ಅಗ್ನಿಹೋಮವನಿಕ್ಕಿದಂತೆ ಆಯಿತು ಕಾಣಾ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೬ ॥

## ಭಕ್ತನ ಪ್ರಾಣಲಿಂಗಿ

೧೦೧

ಲಿಂಗಜಂಗಮ ಒಂದೆಂದರಿಯದೆ
ಲಿಂಗಜಂಗಮವ ಭಿನ್ನವಿಟ್ಟು ಅರ್ಚಿಸುವರು.
ಅದೆಂತೆಂದಡೆ :
ದೇಹಕ್ಕೆ ಪ್ರಾಣಕ್ಕೆ ಭೇದ ಉಂಟೆ?
ಬೀಜ ವೃಕ್ಷಕ್ಕೆ ಭೇದವುಂಟೆ? ಜ್ಯೋತಿ ಪ್ರಭೆಗೆ ಭೇದ ಉಂಟೆ?
ಹಾಗೆ ಲಿಂಗಜಂಗಮಕ್ಕೆ ಭೇದವಿಲ್ಲ.
ಅದೇನು ಕಾರಣವೆಂದಡೆ :
ಲಿಂಗವೇ ಅಂಗ, ಜಂಗಮವೇ ಪ್ರಾಣ.
ಲಿಂಗವೇ ಬೀಜ, ಜಂಗಮವೇ ವೃಕ್ಷ.
ಲಿಂಗವೇ ಜ್ಯೋತಿ, ಜಂಗಮವೇ ಪ್ರಕಾಶ.
ಇಂತೀ ನಿರ್ಣಯವ ತಿಳಿದರೆ ಪ್ರಾಣಲಿಂಗಿ,
ತಿಳಿಯದಿದ್ದರೆ ಜಡಲಿಂಗಿಗಳೆಂದನಯ್ಯ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೭ ॥

೧೦೨

ಸ್ಥಾವರ ಜಂಗಮವೆಂದೆಂಬರು.
ಸ್ಥಾವರವು ನಿಃಶಬ್ದ, ಜಂಗಮವು ಮಂತ್ರಶಬ್ದ.
ಒಂದೆಂದಾಗದಯ್ಯ, ಒಂದಾಗಲರಿಯದು.

ಅದೆಂತೆಂದಡೆ :
ತಿಳಿದರೆ ಒಂದು, ತಿಳಿಯದಿದ್ದರೆ ಎರಡು.
ಅದೇನು ಕಾರಣವೆಂದರೆ-
ಸ್ಥಾವರವಾವುದು ಜಂಗಮವಾವುದು ತಿಳಿಯದ ಕಾರಣ.
ಸ್ಥಾವರವೇ ಇಷ್ಟಲಿಂಗ, ಜಂಗಮವೇ ಪ್ರಾಣಲಿಂಗ.
ಅಂತಪ್ಪ ಪ್ರಾಣಲಿಂಗವನೇ
ಶ್ರೀಗುರು ಬಹಿಷ್ಕರಿಸಿ ಕರಸ್ಥಲಕ್ಕೆ
ಇಷ್ಟಬ್ರಹ್ಮವ ಮಾಡಿಕೊಟ್ಟನೆಂದು ತಿಳಿಯಬಲ್ಲರೆ
ಸ್ಥಾವರ ಜಂಗಮ ಒಂದೇ.
ಈ ನಿರ್ಣಯವ ತಿಳಿಯದಿದ್ದರೆ ಸ್ಥಾವರ ಜಂಗಮ ಒಂದೇ ಅಲ್ಲವು.
ಉಭಯದ ಭೇದವ ನಿಮ್ಮ ಶರಣರೇ ಬಲ್ಲರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೮ ॥

೧೦೩

ಅಡ್ಡಕ್ಕೆ ಆರು, ದುಡ್ಡಿಗೆ ಮೂರು ಲಿಂಗ ಮಾರುವರು.
ಇಂತಪ್ಪ ಅಗ್ಗದ ಲಿಂಗವ ತಂದು
ಮೂಢಗುರುವಿನ ಕೈಯಲ್ಲಿ ಕೊಟ್ಟು
ಮಿಷ್ಟಜೀವಿಗಳು ಅಡ್ಡಬಿದ್ದು ಕಾಡಲಿಂಗವ ಪಡಕೊಂಡು
ತಮ್ಮ ಕೊರಳಲ್ಲಿ ಕಾಣೆಯ ಕಲ್ಲು
ತಕ್ಕಡಿಗೆ ಕಟ್ಟಿದ ಹಾಗೆ ಕಟ್ಟಿಕೊಂಡು,
ನಾವು ಪ್ರಾಣಲಿಂಗಿಗಳೆಂದಡೆ
ನಗುವರಯ್ಯ ನಿಮ್ಮ ಶರಣರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯೯ ॥

೧೦೪

ಇಂತಪ್ಪ ಮೂಢಾತ್ಮರ ಮೇಳಾಪವ ಬಿಟ್ಟು
ನೀರಿಲ್ಲದ ಹೊಳೆಯಲ್ಲಿ
ಪಂಚವರ್ಣದ ಒಂದು ಕಲ್ಲು ತಂದು
ಕಣ್ಣಿಲ್ಲದ ಗೊಲ್ಲನ ಕೈಯಲ್ಲಿ ಕೊಟ್ಟು,
ಗುಲ್ಲುಮಾಡದೆ ಆ ಕಲ್ಲು ಪಡಕೊಂಡು

ಸಂದುಸಂದಿನಲ್ಲಿ ಬಡಕೊಂಡು
ಆ ಕಲ್ಲ ಪೆಟ್ಟು ಆರಿಗೆ ಹೇಳದೆ
ಸತ್ತು ಸಮಾಧಿಯ ಕೊಳಲಿಲ್ಲ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೦೦ ||

೧೦೫

ನವಖಂಡಮಂಡಲದೊಳಗೊಂದು
ಅದ್ಭುತವಾದ ಪಟ್ಟಣವಿಪ್ಪುದು.
ಆ ಪಟ್ಟಣಕ್ಕೆ ಮೂರಾರು ಕೊತ್ತಲ,
ಎರಡೆಂಟು ಬುರುಜು, ಸಪ್ತ ಅಗಳತ,
ಎಂಟೊಂದು ದರವಾಜ, ಉಭಯ ಕವಾಟ,
ಷಡ್ವಿಧನಾಯಕರು, ಐವರು ತಳವಾರರು,
ಮೂರುಮಂದಿ ಸುದ್ದೇದಾರರು, ನಾಲ್ಕುಮಂದಿ ಕರಣಿಕರು,
ತಲೆಯಿಲ್ಲದ ಮಂತ್ರಿ, ಕಣ್ಣಿಲ್ಲದ ರಾಜನಾಗಿಹ,
ಮೂರಾರು ಕೆಡಿಸಿ, ಎರಡೆಂಟು ಹಿಟ್ಟಗುಟ್ಟಿ,
ಸಪ್ತ ಎಂಟೊಂದ ಮುಚ್ಚಿ,
ಎರಡು ಕಿತ್ತು, ಆರು ಆಯಿದು ಹರಿಗಡಿದು,
ಮೂರುನಾಲ್ಕು ಮುರಿಗಡಿದು,
ಮಂತ್ರಿಗೆ ತಲೆ ರಾಜನಿಗೆ ಕಣ್ಣು ಬಂದಲ್ಲದೆ,
ಆ ಪಟ್ಟಣ ಆರಿಗೂ ಸೌಖ್ಯವೇ? ಸೌಖ್ಯವಲ್ಲ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೦೧ ||

೧೦೬

ಪಂಚವರ್ಣದ ನಗರದಲ್ಲಿ,
ಕಾಲು ತಲೆಗಳಿಲ್ಲದ ದೊರೆಗಳು.
ಕಣ್ಣು ಕೈಗಳಿಲ್ಲದ ಕಾರಭಾರಿಗಳು.
ಗೌಡ, ಶ್ಯಾನಭೋಗರಿಂದುತ್ಪತ್ಯ,
ಪರಿಚಾರಕರಿಂದ ಬಂಧನ.
ಇಂತಿವರೆಲ್ಲರಿಗೆ ಒಡತಿ ಮೂರುಮುಖದ ಕುಂಪಣಿ.
ಪರಮೇಶಕ್ವದಪೇಕಾದರೆ

ಪಂಚವರ್ಣದ ಸಂಚಾರವ ಕೆಡಿಸಿ,
ಕಾಲು, ತಲೆ ದೊರೆಗೆ ಬಂದಲ್ಲದೆ,
ಕಣ್ಣು, ಕೈ ಕಾರಭಾರಿಗೆ ಬಂದಲ್ಲದೆ,
ಗೌಡ, ಶ್ಯಾನಭೋಗ, ಪರಿಚಾರಕರ ಕೊಂದಲ್ಲದೆ,
ಮೂರುಮುಖದ ಕುಂಪಣಿಯ ತಲೆಹೊಡೆದಲ್ಲದೆ
ಮುನ್ನಿನ ಬಟ್ಟೆಯನರಿಯಬಾರದು.
ಅರಿಯದಕಾರಣ ಅಸುಲಿಂಗಸಂಬಂಧಿಗಳಲ್ಲ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೦೨ ||

೧೦೭

ಏಳು ತೊಲೆಗೆ ನಾಲ್ಕು ಜೋದು, ಎಂಟು ಕಂಬ,
ಆರು ಬಿಗಿಜಂತಿ.
ಮೂರು ಕೋಣೆಗೆ ಒಂಬತ್ತು ಬಾಗಿಲ,
ಒಂದು ಕವಾಡ, ಎರಡು ಕುಲ್ಪಿ.
ಇಂತೀ ಅಲುಕುಮಲಕಿನ ಅರಮನೆಯಲ್ಲಿ
ಪಸುರುಕುಪ್ಪುಸ ಹಳದಿ ಶಾಲಿಯನುಟ್ಟು
ಕಾಲು ಮೇಲಾಗಿ, ತಲೆ ಕೆಳಗಾಗಿ
ಚಿತ್ರಾಂಗನೆಯೆಂಬ ವೇಶ್ಯಾಂಗನೆ ನಡದಾಡುತಿರ್ಪಳು.
ಶ್ರೀಗುರುಚೆನ್ನಮಲ್ಲಯ್ಯನ ಕೂಡಬೇಕೆಂಬಣ್ಣಗಳ
ಎರಡು ಬಟ್ಟೆಯಲ್ಲಿ ನಿಂದು ಕಣ್ಣುಸೊನ್ನೆಯ ಮಾಡಿ
ಕರವುತಿರ್ಪಳು ನೋಡಾ.
ಅಷ್ಟರಲ್ಲಿಯೇ ಕುಪ್ಪುಸ ಕಳೆದು ಶಾಲಿಯ ಹರಿದು
ತಲೆಯ ಮೇಲಕ್ಕೆ ಕಾಲು ಕೆಳಯಕ್ಕೆ ಮಾಡಿ
ಸೂತಕಾಗ್ನಿಯಂ ಬಿಟ್ಟು, ಸೂತಕ ಇಲ್ಲದ ಅಗ್ನಿಯಿಂದ
ಚಿತ್ರಾಂಗನೆಯೆಂಬ ವೇಶ್ಯಾಂಗನೆಯ ಮನೆಯಲ್ಲಿ ಸುಟ್ಟು,
ಎರಡು ಬಟ್ಟೆಯ ಮೆಟ್ಟಿ, ನಟ್ಟನಡುವಿನ ಬಟ್ಟೆಯ ಹಿಡಿದು,
ಶ್ರೀಗಿರಿಚೆನ್ನಮಲ್ಲಯ್ಯನಲ್ಲಿಗೆ ಹೊಗಬಲ್ಲರೆ
ಆತನೇ ಅಸುಲಿಂಗಸಂಬಂಧಿ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೦೩ ||

೧೦೮

ಒಂದು ಅಚ್ಚಿಗೆ ನಾಲ್ಕು ಗಾಲಿ, ಒಂದೇ ಕೀಲು.
ಎಂಟು ಕಂಬದ ಮಂಟಪದಲ್ಲಿ ಮಂಚದಮೇಲೆ
ಜಗನ್ಮೋಹಿನಿಯೆಂಬ ಸ್ತ್ರೀ ಇರುವಳು.
ಆ ಸ್ತ್ರೀಯಳ ಮಸ್ತಕದ ಮೇಲೊಂದು
ನವರತ್ನಯುಕ್ತವಾದ ವಜ್ರದ ಪೆಟ್ಟಿಗೆಯಲ್ಲಿ
ಬೆಲೆಯಿಲ್ಲದ ಒಂದು ಮಾಣಿಕ ಇರುವುದು.
ಆ ಮಾಣಿಕಕ್ಕೆ ಇಬ್ಬರು ಹೆಣಗಾಡುತಿರ್ಪರು.
ಅವರ ಹೆಣಗಾಟವ ಕಂಡು
ಅತ್ತಣ ಊರಿಂದ ಒಬ್ಬ ಪುರುಷ ಬಂದು,
ನಾಲ್ಕು ಗಾಲಿಯ ತುಂಡಿಸಿ, ಕೀಲನುಚ್ಚಿ, ಅಚ್ಚು ಮುರಿದು,
ಅಷ್ಟಕಂಬದ ಮಂಟಪವ ಕೆಡಿಸಿ, ಮಂಚವ ಮೆಟ್ಟಿ,
ಆ ಜಗನ್ಮೋಹಿನಿಯೆಂಬ ಸ್ತ್ರೀಯಳ ಕೈಕಾಲುತಲೆಹೊಡೆದು
ಆ ಪೆಟ್ಟಿಗೆಯೊಳಗಣ ಮಾಣಿಕವ ತಕ್ಕೊಳ್ಳಬಲ್ಲರೆ
ಆತನೇ ಅಸುಲಿಂಗಸಂಬಂಧಿ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೦೪ ॥

## ಭಕ್ತನ ಶರಣ

೧೦೯

ಶರಣಸತಿ ಲಿಂಗಪತಿ ಎಂಬಾಚಾರವ ಪಿಡಿದು
ಆಚರಿಸುವ ಭಕ್ತರು
ಇಷ್ಟಲಿಂಗಕ್ಕೆ ರೂಪು, ಮೊದಲಾದ ಪದಾರ್ಥವ
ಕೊಟ್ಟು ಸೇವಿಸಬೇಕು.
ಪ್ರಾಣಲಿಂಗಕ್ಕೆ ರುಚಿಪದಾರ್ಥವನರ್ಪಿಸಿ
ಸೇವಿಸಬೇಕು.
ಭಾವಲಿಂಗಕ್ಕೆ ತೃಪ್ತಿಪದಾರ್ಥವನರ್ಪಿಸಿ
ಸೇವಿಸಬೇಕು.
ಇಷ್ಟುಳ್ಳಾತನೇ ಶರಣಸತಿ ಲಿಂಗಪತಿ ಎಂಬಾಚಾರ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೦೫ ॥

೧೧೦

ಉದಯಕ್ಕೆ ತನುವೆಂಬ ಹಸ್ತದಲ್ಲಿ
ಇಷ್ಟಲಿಂಗವ ಮೂರ್ತಿಗೊಳಿಸಿ
ಪೂಜಿಸಬಲ್ಲರೆ ಶರಣನೆಂಬೆ.
ಮಧ್ಯಾಹ್ನಕ್ಕೆ ಮನವೆಂಬ ಹಸ್ತದಲ್ಲಿ
ಪ್ರಾಣಲಿಂಗವ ಮೂರ್ತಿಗೊಳಿಸಿ
ಪೂಜಿಸಬಲ್ಲರೆ ಶರಣನೆಂಬೆ.
ಅಸ್ತಮಾನಕ್ಕೆ ಧನವೆಂಬ ಹಸ್ತದಲ್ಲಿ
ಭಾವಲಿಂಗವ ಮೂರ್ತಿಗೊಳಿಸಿ
ಪೂಜಿಸಬಲ್ಲರೆ ಶರಣನೆಂಬೆ.
ತನು ಮುಟ್ಟದ ಮುನ್ನ, ಮನ ಮುಟ್ಟದ ಮುನ್ನ,
ಭಾವ ಮುಟ್ಟದ ಮುನ್ನ,
ಲಿಂಗಕ್ಕೆ ದ್ರವ್ಯವ ಸಲಿಸಬಲ್ಲರೆ ಶರಣನೆಂಬೆ.
ಕಾಲು ತಾಗದ ಮುನ್ನ, ಕೈ ಮುಟ್ಟದ ಮುನ್ನ
ಉದಕವ ತಂದು ಲಿಂಗಕ್ಕೆ ಮಜ್ಜನವ ನೀಡಬಲ್ಲರೆ
ಶರಣನೆಂಬೆ.
ಹೂವು ನೋಡದ ಮುನ್ನ, ಹಸ್ತದಿಂದ ಮುಟ್ಟದ ಮುನ್ನ,
ಹೂವಕೊಯಿದು ಧರಿಸಬಲ್ಲರೆ ಶರಣನೆಂಬೆ.
ಈ ಭೇದವ ತಿಳಿಯಬಲ್ಲರೆ
ಶಿವಜ್ಞಾನಿಶರಣ ಲಿಂಗಾಂಗಸಂಬಂಧಿ.
ಇಂತೀ ನಿರ್ಣಯವ ತಿಳಿಯದೆ
ಶರಣಸತಿ ಲಿಂಗಪತಿ ಎಂಬಾತನ ಲಿಂಗ ಪ್ರೇತಲಿಂಗ,
ಅವ ಭೂತಪ್ರಾಣಿ ಎಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೬ ॥

೧೧೧

ಲೌಕಿಕದಲ್ಲಿ ಒಬ್ಬ ಪುರುಷಂಗೆ ಸ್ತ್ರೀಯರು
ಒಬ್ಬರು, ಇಬ್ಬರು, ಮೂವರು, ನಾಲ್ವರು, ಐವರು
ಪರಿಯಂತರ ಸತಿಯರುಂಟು.
ಒಬ್ಬ ಸ್ತ್ರೀಯಳಿಗೆ ಐವರು ಪುರುಷರುಂಟೆ?
ಇಲ್ಲೆಂಬ ಹಾಗೆ, ಎನಗೆ ಎನ್ನ ತಾಯಿತಂದೆಗಳು

ಮೂರಾರು ಗಂಡರ ಮದುವೆ ಮಾಡಿ
ಒಗತನ ಮಾಡೆಂದು ಸಕಲಗಣಂಗಳ ಸಾಕ್ಷಿಯಾಗಿ
ಎನಗೆ ಕೊಟ್ಟರು.
ಆ ನಿರೂಪವ ಕೈಕೊಂಡು ಗಂಡನ ಸಂಗವ ಮಾಡದೆ
ಅವರ ಸಂಗವ ಬಿಡದೆ ರಂಗಮಂಟಪದಲ್ಲಿ ಒಬ್ಬನ ಕುಳ್ಳಿರಿಸಿ,
ನಡುಮನೆಯಲ್ಲಿ ಒಬ್ಬನ ಕುಳ್ಳಿರಿಸಿ,
ಒಬ್ಬನ ಹಿರಿಮನೆಯಲ್ಲಿ ಕುಳ್ಳಿರಿಸಿ,
ಷಡ್ವಿಧಸ್ಥಾನಗಳಲ್ಲಿ ಷಡ್ವಿಧರ ಕುಳ್ಳಿರಿಸಿ,
ಇಂತೀ ಪುರುಷರ ಕೂಡಿ ಒಗತನವ ಮಾಡಿ,
ಇವರಿಗೆ ಸಿಕ್ಕದೆ ಹೊಲೆಯನ ಕೂಡಿ ಕುಲಗೆಟ್ಟು
ನಾಯಿತ್ತ ಹೋದೆನೆಂದರಿಯನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೭ ॥

೧೧೨

ಲೋಕದ ಗಂಡರ ಪರಿ ಬೇರೆ,
ಎನ್ನ ಗಂಡನ ಪರಿ ಬೇರೆ ಕೇಳಿರವ್ವಾ.
ಲೋಕದ ಗಂಡರು ಉಪಚಾರವ ಮಾಡಿ
ಕರೆದರೆ ಬರುವರು.
ಇಲ್ಲದಾದರೆ ಮೋರೆಯ ತೋರರು.
ಎನ್ನ ಗಂಡ ಉಪಚಾರವ ಒಲ್ಲ.
ಕರೆದರೆ ಎನ್ನ ಬಿಟ್ಟು ಹೋಗುವ.
ಎನ್ನ ಒಡಹುಟ್ಟಿದವರ ಬಿಟ್ಟು
ಶಾಲಿಯ ಕಳದು ಪೋದೊಡೆ
ಎನ್ನ ಸರ್ವಾಂಗವನು ಬಿಗಿದಪ್ಪಿ
ಅಗಲದೆ ಇರುವನವ್ವಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೮ ॥

೧೧೩

ಇಂತಪ್ಪ ನಿರ್ಣಯವನು ಸ್ವಾನುಭಾವ ಗುರುಮುಖದಿಂ
ತಿಳಿದು ವಿಚಾರಿಸಿಕೊಳ್ಳದೆ,
ಭಿನ್ನಗುರುವಿನ ಕೈಯಲ್ಲಿ ಉಪದೇಶವ ಪಡದು,

ಲಿಂಗವ ಪಡಕೊಂಡು ಗುರುಕಾರುಣ್ಯ ಉಳ್ಳವರೆಂದು
ಲೋಕದ ಮುಂದೆ ಬೊಗಳುವ ಮೂಳಹೊಲೆಯರ
ಕಟಬಾಯ ಸೀಳಿ ನಿಮ್ಮ ಗಣಂಗಳ ಪಾದರಕ್ಷೆಯಿಂದ ಹೊಡೆದಡೆ,
ಎನ್ನ ಸಿಟ್ಟು ಮಾಣದು.
ಅದೇನು ಕಾರಣವೆಂದಡೆ,
ನೀವು ಪಡಕೊಂಡ ಗುರುವಿಗೆ ಗುರುಕಾರುಣ್ಯವಿಲ್ಲ.
ಅವನ ಗುರುವಿಗೆ ಮುನ್ನವೇ ಗುರುಕಾರುಣ್ಯವಿಲ್ಲ.
ನಿಮಗಿನ್ನಾವ ಕಡೆಯ ಗುರುಕಾರುಣ್ಯವೊ ?
ಎಲೆ ಮರುಳ ಮಾನವರಿರಾ ಗುರುಕಾರುಣ್ಯವಾದ ಬಳಿಕ
ತನು ಮನ-ಧನದಾಸೆ ಹಿಂದುಳಿದು
ಗುರು-ಲಿಂಗ-ಜಂಗಮದಾಶೆ ಮುಂದುಗೊಂಡಿರಬೇಕು.
ಗುರುಕಾರುಣ್ಯವಾದಡೆ
ಆಣವಮಲ, ಮಾಯಾಮಲ, ಕಾರ್ಮಿಕಮಲಗಳ ಜರಿದು
ಇಷ್ಟ-ಪ್ರಾಣ-ಭಾವದಲ್ಲಿ ಭರಿತವಾಗಬೇಕು.
ಗುರುಕಾರುಣ್ಯವಾದಡೆ
ಲಿಂಗವು ಆರಿಗೂ ತೋರದಿರಬೇಕು.
ಇಷ್ಟುಳ್ಳಾತನೆ ಗುರುಕಾರುಣ್ಯ ಉಳ್ಳವನೆಂದನಯ್ಯಾ
ನಿಮ್ಮ ಶರಣ ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೧೦೯ ॥

೧೧೪

ಇಂತಪ್ಪ ಭಿನ್ನ ಗುರುವಿನ ಕೈಯಿಂದ
ಪಡಕೊಂಡ ಲಿಂಗವ
ಮರಳಿ ಜ್ಞಾನಗುರುವಿನ ಕೈಯಲ್ಲಿ ಕೊಟ್ಟು
ಲಿಂಗವ ಪಡಿಯಲುಬೇಕು.
ಇದಕ್ಕೆ ಸಂಶಯ ಮಾಡುವಿರಿ;ಸಂಶಯ ಮಾಡಲಾಗದು.
ಅದು ಅಜ್ಞಾನದೊಳಗು.
ಅದೆಂತೆಂದೊಡೆ, ಇದಕ್ಕೆ ದೃಷ್ಟಾಂತ :
ಲೌಕಿಕದಲ್ಲಿ ಪಂಚಾಳಕುಲದಲ್ಲಿ
ಒಬ್ಬ ಪತ್ತಾರನಿಗೆ
ಒಂದು ಸನಗು ಮಾಡಿಕೊಡೆಂದು ಕೊಟ್ಟರೆ,
ಅವರು ಮಾಡಿಕೊಟ್ಟ ಸನಗು ತಮಗೆ

ಪರಿಣಾಮ ತಟ್ಟಿದಡೆ ಇಟ್ಟುಕೊಂಬುವರು.
ಪರಿಣಾಮವಿಲ್ಲದಾದರೆ ಮರಳಿ ಮತ್ತೊಬ್ಬ
ಜಾಣಪತ್ತಾರನ ಕೈಯಿಂದ ಮಾಡಿಸಿ ಇಟ್ಟುಕೊಂಬುವರು.
ಮತ್ತಂ, ಒಬ್ಬ ಬಡಿಗನಿಂದ
ಆವುದಾನೊಂದು ಗಳೆಯ ಹಾಸಿಕೊಂಡೊಯಿದು
ಹೋಗಿ ಭೂಮಿಯಲ್ಲಿ ಹೂಡಿ ಹೊಡೆದರೆ
ನೀಟವಾಗಿ ನಡೆದರೆ ಹೂಡುವರು.
ನೀಟವಾಗಿ ನಡೆಯದಿದ್ದರೆ
ಮರಳಿ ಮತ್ತೊಬ್ಬ ಬಡಗಿಯನ ಕರದೊಯ್ದು
ನೀಟವಾಗಿ ಗಳೆಯ ಹಾಯಿಸಿ
ಹೂಡುವುರಲ್ಲದೆ ಹಾಗೇ ಹೊಡೆಯರು.
ಒಬ್ಬ ಸಿಂಪಿಗನಲ್ಲಿ ಆವುದಾನೊಂದು
ಉಡಿಗೆತೊಡಿಗೆ ಹೊಲಿಸಿಕೊಂಡು ಉಟ್ಟುತೊಟ್ಟರೆ
ತಮ್ಮಂಗಕ್ಕೆ ಹಿತವಪ್ಪಿದರೆ ಇಟ್ಟುಕೊಂಬುವರು.
ಇಲ್ಲವಾದರೆ ಮರಳಿ ಮತ್ತೊಬ್ಬ
ಜಾಣ ಸಿಂಪಿಗನಲ್ಲಿ ಹೊಲಿಸಿಕೊಂಡು ತೊಡುವರಲ್ಲದೆ,
ಹಾಗೇ ತೊಡರು.
ಇಂತೀ ತ್ರಿವಿಧವು ಮೊದಲೇ ಇದ್ದ ಹಾಗೆ ಆಚರಿಸಿದಡೆ,
ಅವರಂಗಕ್ಕೆ ದಣುವಲ್ಲದೆ
ಹಿತಕರವಾಗಿ ತೋರದೆಂಬ ಹಾಗೆ,
ಅಂತಪ್ಪ ಭಿನ್ನಭಾವದ ಶೈವಗುರುವಿನ
ಉಪದೇಶವ ವಿಸರ್ಜಿಸಿ,
ಅಭಿನ್ನಭಾವವೆಂಬ ಸ್ವಾನುಭಾವಜ್ಞಾನಗುರುಮುಖದಿಂ
ತಾರಕಮಂತ್ರೋಪದೇಶವ ಪಡೆದು,
ಲಿಂಗಧಾರಣವಾದಡೆಯು
ವೀರಶೈವರ ಅಚ್ಚು, ಪುರಾತನರ ಮಚ್ಚು,
ಸರ್ವಗಣಂಗಳಿಗೆ ಸಮ್ಮತ.
ಇಂತಪ್ಪ ವಿಚಾರವನರಿಯದೆ
ಮೂಢಮತಿಯಿಂದ ಕಾಡಲಿಂಗವ ಕೈಯಲ್ಲಿ ಕೊಟ್ಟು,
ಪೂಜಿಸು ಎಂದು ಹೇಳುವ ಗುರುವು,
ಆ ಕಲ್ಲಲಿಂಗವ ಕೈಯಲ್ಲಿ ಪಿಡಿದು

ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ
ಪೂಜಿಸುವ ಶಿಷ್ಯನು,
ಬಳಿಗುರುಡನ ಕೈ ಬಳಿಗುರುಡ ಪಿಡಿದು,
ಕಾಣದೆ ಡೊಂಗುರವ ಬಿದ್ದಂತೆ
ಗುರುಶಿಷ್ಯರೆಂಬುಭಯರು ಯಮಗೊಂಡದಲ್ಲಿ
ಬೀಳುವರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೧೦ ||

೧೧೫

ಗುರುಕಾರುಣ್ಯವಾದಡೆ ಕಾಲಿಲ್ಲದೆ ನಡೆಯಬೇಕು,
ಕಣ್ಣಿಲ್ಲದೆ ನೋಡಬೇಕು, ಸತಿಸುತರ ಬಿಡಬೇಕು,
ಊರಲ್ಲಿರದೆ ಅರಣ್ಯಕ್ಕೆ ಹೋಗದೆ ಇರಬಲ್ಲರೆ
ಗುರುಕಾರುಣ್ಯವುಳ್ಳವರೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೧೦ ||

೧೧೬

ಜಂಗಮರ ಕಂಡರೆ ಜರಿವರು,
ಜೋಗಿ ಸನ್ಯಾಸಿಯ ಕಂಡರೆ ನಮಿಸುವರು.
ಲಿಂಗವ ಕಂಡರೆ ಹಿಂಗುವರು,
ಗಾಂಜಿ ಭಂಗಿಯುಳ್ಳವರ ಕಂಡರೆ ಬಗ್ಗುವರು.
ಹರಪೂಜೆಯೆಂದರೆ ಜರಿಯುವರು,
ನರಪೂಜೆಯೆಂದರೆ ಉಬ್ಬುವರು,
ಗುರು ಕೊಟ್ಟ ಲಿಂಗವ ನಂಬರು;
ವಿಪ್ರ ಮೊದಲು ಶ್ವಪಚರ ಕಡೆಯಾಗಿ
ನೂರೊಂದು ಕುಲದವರು ಕೂಡಿ ನೆರೆದು
ಒಂದು ಕಾಡಗಲ್ಲ ತಂದು ಲಿಂಗವೆಂದು
ನಡಸಿದ ಲಿಂಗಕ್ಕೆ ಒಂದೊತ್ತು ಉಪವಾಸ ಮಾಡಿ
ನೇಮನಿತ್ಯದಿಂದ ನಡೆವವರು
ಶರಣರೆಂದೊಡೆ ನಿಮ್ಮ ಪ್ರಮಥರು ನಗುವರಯ್ಯಾ.
ಶಿವನು ಒಲಿ ಒಲಿ ಎಂದಡೆ

ಇಂತಪ್ಪ ವ್ರತಭ್ರಷ್ಟ ಸೂಳೆಯ ಮಕ್ಕಳಿಗೆ
ಎಂತೊಲಿವನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೨ ॥

೧೧೭

ಅರಗಿನ ಭೂಮಿ ನೀರಹೊಳೆಯಲ್ಲಿ ಅಗ್ನಿ ಪುಟ್ಟಿ
ನೀರಲ್ಲಿ ನೊಂದದೆ ನೀರು ಸುಟ್ಟು.
ಆ ಅರಗಿನ ಭೂಮಿಯನುರುಹದೆ,
ಆ ಭೂಮಿಯಲ್ಲಿರುವ ತೃಣ ಪತ್ರಿ
ಮೊದಲಾದ ಎಲ್ಲ ವೃಕ್ಷವನು ದಹಿಸಿ,
ಆ ಅರಗಿನ ಭೂಮಿಯಲ್ಲಿ ಬಯಲಾದುದ ಕಂಡು
ಸೋಜಿಗ ಸೋಜಿಗ ಎಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೩ ॥

೧೧೪

ಮುದ್ದುಮುಖದ ಮಾನಿನಿಯ ಮಸ್ತಕದ ಮೇಲೆ
ಅಗ್ನಿವರ್ಣದ ಪಂಜರದಲ್ಲಿ ಶ್ವೇತವರ್ಣದ
ಒಂದು ಗಿಳಿ ಇಹುದು.
ಆ ಗಿಳಿಯ ಕೊಳ್ಳಬೇಕೆಂದು
ಆನೆ, ಕುದುರೆ, ವೈಲಿ, ಪಲ್ಲಕ್ಕಿಯನೇರಿಕೊಂಡು ಹೋದವರಿಗೆ
ಆ ಗಿಳಿಯ ಕೊಡಳು.
ದ್ರವ್ಯವುಳ್ಳವರಿಗೆ ಆ ಗಿಳಿಯ ತೋರಳು.
ಕೈ ಕಾಲು ಕಣ್ಣು ಇಲ್ಲದ ಒಬ್ಬ ಬಡವ್ಯಾಧನು ಬಂದರೆ,
ಆ ಗಿಳಿಯ ಕೊಟ್ಟು ಸುಖಿಸುವಳು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೪ ॥

೧೧೫

ಹೊಲಗೇರಿಯಲ್ಲಿ ಎಲುವಿನ ಮರ
ಪೂತು ಫಲವಾಗಿ,
ಆ ಫಲವ ಸೇವಿಸಿದವರು ಜೀವಿಸಿದರು.

ಆ ಫಲ ಸೇವಿಸದವರು ಸತ್ತು ಜೀವಿಸಿದರು.
ಈ ಬೆಡಗಿನ ಕೀಲ ಬಲ್ಲರೆ ಶರಣಲಿಂಗಸಂಬಂಧಿ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೫ ॥

೧೨೦

ಮೂಗಿಲ್ಲದ ಸತಿಗೆ ಪತಿಯಾದಾತ
ಚಂದ್ರಸಾಲೆಯ ರಚಿಸಿ,
ಮಲವ ಭುಂಜಿಸಿದಾತ ರಂಗಮಂಟಪವ ರಚಿಸಿ,
ಪುತ್ರರು ಇಲ್ಲದ ಸತಿಯರಿಗೆ ಪತಿಯಾದಾತ
ಗರ್ಭಮಂಟಪವ ರಚಿಸಿ,
ಈ ಮೂವರು ಕೂಡಿ ರಚಿಸಿದ
ಅರಗಿನ ದೇವಾಲಯದೊಳಗೆ ಒಂದು ಉರಿಲಿಂಗ ಉದ್ಭವಿಸಿ,
ಆಲಯದ ತೊಲಿ ಕಂಬ ಬೋದು ಜಂತಿಯೆಲ್ಲವನು ದಹಿಸಿ,
ಆಲಯವನುಳುಹಿ, ಗೊರವನ ನುಂಗಿ ಮೂವರ ಕೊಂದು
ಮೂರುಗೂಡಿದ ಠಾವಿನಲ್ಲಿ ನೀಃಪತಿಯಾಯಿತು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಬುವೆ,
ಈ ಭೇದವನು ನಿಮ್ಮ ಶರಣರೇ ಬಲ್ಲರಲ್ಲದೆ
ಈ ಲೋಕದ ಮೂಢಾತ್ಮರೆತ್ತ ಬಲ್ಲರಯ್ಯ ? ॥ ೧೧೬ ॥

## ಭಕ್ತನ ಐಕ್ಯ

**ಕಾಮಾಟದ ರಾಮಿತಂದೆಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೧೨೧

ಏಳುಕೊಳ್ಳದ ಕಲ್ಲು ತಂದು,
ವಜ್ರಸುತ್ತಿಗೆಯಿಂದ ಒಡೆದು,
ಮಣ್ಣಿಗೊಂದು ಕಲ್ಲು, ನೀರಿಗೊಂದು ಕಲ್ಲು ಹಾಕಿ,
ಚೌಷಷ್ಠಿಯ ಸಂಬಂಧಿಸಿದೆ.
ಅಗ್ನಿಗೊಂದು ಕಲ್ಲು, ಗಾಳಿಗೊಂದು ಕಲ್ಲು ಹಾಕಿ,
ರಂಗವಲ್ಲಿಯ ರಚಿಸಿದೆ.
ಅಂಬರಕೊಂದು ಕಲ್ಲು, ಬಯಲಿಗೊಂದು ಕಲ್ಲು ಹಾಕಿ,

ಕೋಣೆಯ ಬಂಧಿಸಿದೆ.
ಮೂರು ಕಲ್ಲು ಮೂರಕ್ಕೆ ಹಾಕಿ
ಉಳಿದ ಚೀಪುಗಲ್ಲು ಸಂದುಸಂದಿಗೆ ಬಂಧಿಸಿ,
ಮನೆಯ ಕಟ್ಟಿ ಕಾಯಕವ ಮಾಡುವೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೭ ॥

೧೨೨

ಕಣ್ಣಿಲ್ಲದ ಒಡ್ಡರು ಕಲ್ಲು ತಂದು
ತಲೆಯಿಲ್ಲದವನ ಮನೆಗೆ ಹಾಕಿ,
ಮನೆಯ ಕಟ್ಟದೆ ಕಲ್ಲಕೂಲಿಯ ತೆಗೆದುಕೊಂಡು ಗಮನಿಸಿದರು.
ಅಂತಪ್ಪ ಗೃಹಕ್ಕೆ ನಾನು ತಿಗಟೆಯ ಹೂಡಿ
ಮನೆಯ ಬಿಚ್ಚದೆ ಲೋಮುಗುಂಡುವ ಇಳಿಯ ಬಿಟ್ಟು,
ಮೂರುಮೂಲಿಯ ಯಾಸಿಯ ತಿದ್ದಿ,
ಮನೆಯ ಕಟ್ಟಿ ಮದುವೆಯ ಮಾಡಿ
ಸತ್ತು ಕಾಯಕವ ಮಾಡೆಂದು ಪೇಳಿದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೮ ॥

೧೨೩

ಶೈವರುಕಟ್ಟಿದ ಗುಡಿಯ ಬಿಚ್ಚದೆ,
ಶೈವಲಿಂಗವ ತೆಗೆಯದೆ,
ಪಾಯಾ ಸೋಸಿ ಗುಡಿಯ ಕಟ್ಟಿ,
ಆ ಶೈವಲಿಂಗವ ಸ್ಥಾಪಿಸಲು,
ಗುಡಿ ಲಿಂಗವ ನುಂಗಿ, ಲಿಂಗ ಗುಡಿಯ ನುಂಗಿದ ಕಂಡು,
ಸತ್ತು ಬದುಕಿ ಕಾಯಕವ ಮಾಡುತ್ತಿದ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧೯ ॥

೧೨೪

ಎಮ್ಮ ಶಿವಗಣಂಗಳು ಕಲ್ಯಾಣಪುರದಲ್ಲಿ
ಇಂತಪ್ಪ ಕಾಮಾಟದಿಂದ ಕಾಯಕವ ಮಾಡಿ
ಜಂಗಮಾರ್ಚನೆ ಮಾಡುತ್ತಿರ್ದರಲ್ಲದೆ,

ಲೌಕಿಕರ ಹಾಗೆ ಮಣ್ಣು ಕಲ್ಲಿನ ಕಾಮಾಟವ ಮಾಡಿ
ನಾಲ್ಕು ಹಾಗದ ಕಾಂಚನವ ತಂದು,
ಗುರು-ಲಿಂಗ-ಜಂಗಮಕ್ಕೆ ಭಿನ್ನವಿಟ್ಟು ಅರ್ಚಿಸಿ,
ಫಲಪದವ ಪಡವರೆ, ಇಲ್ಲೆಂಬ ಹಾಗೆ.
ಮತ್ತಂ, ಒಂದು ಸಮಯದಲ್ಲಿ
ಮಾಡಿದಡೆಯೂ ಮಾಡುವರು.
ಮಾಡಿದಡೆಯೂ ಜ್ಞಾನಕ್ಕೆ ಹಾನಿ ಇಲ್ಲ, ದೋಷವಿಲ್ಲ.
ಅದೆಂತೆಂದಡೆ :
ಶಿವಕೃಪೆಯಿಂ ದೇಹವ ತಾಳಿ
ಮರ್ತ್ಯಲೋಕಕ್ಕೆ ಬಂದ ಮೇಲೆ,
ಆ ದೇಹದಲ್ಲಿರುವ ಪರಿಯಂತರದಲ್ಲಿ
ಅನ್ನ ಉದಕ ವಸ್ತ್ರದಿಂದ ದೇಹವ ರಕ್ಷಿಸಬೇಕಲ್ಲದೆ,
ಆ ಅನ್ನ ಉದಕ ವಸ್ತ್ರದಿಂದ ದೇಹದ ಶೋಷಣವ ಮಾಡಲಾಗದು,
ಮಾಡಿದಡೆ ಜ್ಞಾನಕ್ಕೆ ಹಾನಿ.
ಅದೇನು ಕಾರಣವೆಂದಡೆ:
ಅಂತಪ್ಪ ದೇಹಕ್ಕೆ ಅನ್ನ ಉದಕ ವಸ್ತ್ರದಿಂದ
ಸುಖಿಸಿದಡೆ ಜ್ಞಾನಕ್ಕೆ ಹಾನಿ.
ಹೀಗೆಂದರೆಂದು ಆ ದೇಹಕ್ಕೆ ಅನ್ನ ಉದಕ ವಸ್ತ್ರದಿಂದ
ಶೋಷಣೆಯ ಮಾಡಿದಡೆಯು ಜ್ಞಾನಕ್ಕೆ ಹಾನಿ.
ಈ ಉಭಯ ಭೇದವ ತಿಳಿದು ಆ ದೇಹ ನಿಮಿತ್ಯವಾಗಿ
ಪ್ರಪಂಚವ ಮಾಡುವರಲ್ಲದೆ
ಇಂದಿಂಗೆಂತು ನಾಳಿಂಗೆಂತು ಎಂದು ಹೆಂಡರು ಮಕ್ಕಳುಪಾದಿಯ ಪಿಡಿದು
ಮಾಡುವರೆ ? ಮಾಡುವರಲ್ಲ.
ಈ ನಿರ್ಣಯವನು ಶಿವಜ್ಞಾನಶರಣರೇ ಬಲ್ಲರಲ್ಲದೆ,
ಈ ಲೋಕದ ಜಡಮತಿಗಳೆತ್ತ ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೨೦ ||

೧೨೧

ಇಂತಪ್ಪ ಭೇದವ ತಿಳಿಯದೆ
ಪುರಾತರ ವಚನವ ನೋಡಿ ಕೇಳಿ,
ಹೊನ್ನು, ಹೆಣ್ಣು, ಮಣ್ಣು ಬಿಟ್ಟು ಪ್ರಪಂಚವ ಬಿಟ್ಟೆವೆಂಬಿರಿ,

ಬಿಟ್ಟ ಪರಿಯ ಪೇಳಿರಯ್ಯ ?
ಹೊನ್ನಲ್ಲವೇ ಆತ್ಮ ? ಹೆಣ್ಣಲ್ಲವೇ ಮನಸ್ಸು ?
ಮಣ್ಣಲ್ಲವೇ ಪೃಥ್ವಿತತ್ವಾಂಶಭೂತವಾದ ದೇಹವು ?
ಇಂತಪ್ಪ ಹೊನ್ನು, ಹೆಣ್ಣು, ಮಣ್ಣು ಒಳಗಿಟ್ಟುಕೊಂಡು
ಬಾಹ್ಯದ ಹೊನ್ನು ಹೆಣ್ಣು ಮಣ್ಣನೆ ಬಿಟ್ಟರೆ,
ಬಿಟ್ಟಂತಾಯಿತೇ ಎಲಾ ಮರುಳ ಮಾನವರಿರಾ ?
ದೇಹವ ದಗ್ಧಮಾಡಬೇಕೆಂದು
ಅನ್ನ ಉದಕವ ಬಿಟ್ಟು, ಅರಣ್ಯಕ್ಕೆ ಹೋಗಿ,
ಕಂದಮೂಲ ಪರ್ಣಾಹಾರವ ಭಕ್ಷಿಸಿ
ತನು ಒಣಗಿಸಿದರೇನು ದೇಹದಗ್ಧವಾದಂತಾಯಿತೇ ? ಆಗದು.
ಹುತ್ತದ ಮೇಲೆ ಬಡಿದು ಸರ್ಪನ ಕೊಂದಂತಾಯಿತಲ್ಲದೆ
ದೇಹ ದಗ್ಧವಾಗಲರಿಯದು
ಎಲೆ ಮರುಳ ಮಾನವರಿರಾ.
ಅದೆಂತೆಂದೊಡೆ:
ಶಿವಜ್ಞಾನೋದಯವಾಗಿ ಗುರುಕಾರುಣ್ಯವ ಪಡದು,
ಲಿಂಗಾಂಗಸಂಬಂಧಿಯಾದ ಶಿವಶರಣನ ದೇಹವು
ಜ್ಞಾನಾಗ್ನಿಯಲ್ಲಿ ದಗ್ಧವಾಯಿತಲ್ಲದೆ
ಉಳಿದ ಜೀವಾತ್ಮರ ದೇಹವು ದಗ್ಧವಾಗಲರಿಯದು.
ದೇಹದ ಗುಣವ ಬಿಡಬೇಕೆಂಬಿರಿ,
ಬಿಡಲಿಕ್ಕೇನು ಕಟ್ಟಿದ ಪಶುಗಳೆ ?
ಬಿಡಲಿಕ್ಕೇನು ಹಟ್ಟಿಯ ಪಶುಗಳೆ ?
ಕಣ್ಣಿಗೆ ಕಾಣಿಸದ, ಕೈಗೆ ಸಿಕ್ಕದ ಗುಣಗಳ ಬಿಡಬೇಕೆಂಬಿರಿ.
ಇದಕ್ಕೆ ದೃಷ್ಟಾಂತ:
ಸೂರ್ಯನ ಬಿಂಬ ಜಲದಲ್ಲಿ ಕಾಣುವದು.
ಆ ಬಿಂಬವ ಹಿಡಿಯಬಲ್ಲರೆ ಗುಣವ ಬಿಟ್ಟರೆಂಬೆ.
ಜ್ಯೋತಿಯ ಪ್ರಭೆಯ ಕಡೆಯಕ್ಕೆ ತೆಗೆದು
ಹಿಡಿಯಬಲ್ಲರೆ ಗುಣವ ಬಿಟ್ಟರೆಂಬೆ.
ದೇಹದೊಳಗಣ ಪ್ರಾಣವ ಬಹಿಷ್ಕರಿಸಿ
ಹಿಡಿಯಬಲ್ಲರೆ ಗುಣವ ಬಿಟ್ಟರೆಂಬೆ.
ಇಂತೀ ಭೇದವ ತಿಳಿಯದೆ
ವನವಾಸದಲ್ಲಿ ತನುಮನವ ಬಳಲಿಸಿ

ಭವದತ್ತ ಮುಖವಾಗಿ ಹೋಗುವ
ಹೇಸಿಮೂಳರ ಕಂಡು ನಾಚಿತ್ತಯ್ಯ ಎನ್ನ ಮನವು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೦ ॥

**ಸಾವುಕಾರ ಮೊಲ್ಲೆಬೊಮ್ಮಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೧೨೧

ನೀಲವರ್ಣದ ಮಾಣಿಕಕ್ಕೆ ಐದುಹೊನ್ನು ಕೊಟ್ಟೆ.
ಪಂಚವರ್ಣದ ಮಾಣಿಕಕ್ಕೆ ಐದುಹೊನ್ನು ಕೊಟ್ಟೆ.
ಶ್ವೇತವರ್ಣದ ಮಾಣಿಕಕ್ಕೆ ಐದುಹೊನ್ನು ಕೊಟ್ಟೆ.
ಮುತ್ತಿನವರ್ಣದ ಮಾಣಿಕಕ್ಕೆ ಐದುಹೊನ್ನು ಕೊಟ್ಟೆ.
ರಕ್ತವರ್ಣದ ಮಾಣಿಕಕ್ಕೆ ನಾಲ್ಕುಹೊನ್ನು ಕೊಟ್ಟೆ.
ಅಗ್ನಿವರ್ಣದ ಮಾಣಿಕಕ್ಕೆ ಒಂದುಹೊನ್ನು ಕೊಟ್ಟೆ.
ಸೂರ್ಯಪ್ರಕಾಶದ ಮಾಣಿಕಕ್ಕೆ ಮರ್ತ್ಯಲೋಕವ ಕೊಟ್ಟೆ.
ಚಂದ್ರಕಾಂತಿಯ ಮಾಣಿಕಕ್ಕೆ ಸ್ವರ್ಗಲೋಕವ ಕೊಟ್ಟೆ,
ಅಗ್ನಿಕಾಂತಿಯ ಮಾಣಿಕಕ್ಕೆ ಪಾತಾಳಲೋಕವ ಕೊಟ್ಟೆ
ಇಂತೀ ರತ್ನವ ಕೊಂಡು ಮಣಿಯ ಸುಟ್ಟು ಬೂದಿಯ ಧರಿಸಿ
ಕಾಯಕವ ಮಾಡುತಿರ್ದ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೨ ॥

೧೨೨

ಇಬ್ಬರಲ್ಲಿ ಹುಟ್ಟದೆ ಕರದಲ್ಲಿ ಹುಟ್ಟಿ,
ಕೂಲಿಯ ಮಾಡದೆ ಸಾಲವ ಬೇಡದೆ
ಕಡ ಕೊಡದೆ, ಕೊಟ್ಟು ಮರಳಿ ಬೇಡದೆ,
ಕೊಂಡ ಒಡವೆಯ ಕೊಂಡ ಹಾಗೇ ಕೊಟ್ಟು
ಕಾಯಕವ ಮಾಡುತಿರ್ದೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೩ ॥

೧೨೪

ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳಿಯ ಕೊಡದೆ,
ತಾಮ್ರದುಡ್ಡು ಕೊಟ್ಟು ಜೋಗಿಯ ಕೈಯಲ್ಲಿ ಒಂದು ರತ್ನವ ಕೊಂಡೆ.

ಆ ರತ್ನ ಮೂರುಲೋಕಕ್ಕೆ ಬೆಲೆಯಾಯಿತ್ತು.
ಅಂತಪ್ಪ ರತ್ನವ ಆರಿಗೂ ತೋರದೆ ಬೀರದೆ
ಒಬ್ಬ ಒಡಭಕ್ತನು ಬಂದು ಕಬ್ಬಿಣವ ಕೊಟ್ಟರೆ
ಆ ರತ್ನವ ಕೊಟ್ಟು ಉದ್ಯೋಗ ಮಾಡುತಿರ್ದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೪ ॥

೧೨೯

ಮಹಾಮಲಸರೋವರದ ವರಾಹ ಆಕಾಶವ ನುಂಗಿ
ಊರನಾಯಿಗಳ ಸಮ್ಮೇಳದಲ್ಲಿರುವುದು.
ಊರಮಲವ ಭುಂಜಿಸಿ ಕೊಕ್ಕರನಾಗಿ
ಮೂರುಲೋಕಕ್ಕೆ ಒಡೆಯನೆಂದು ಚಿಂತೆಯಿಲ್ಲದೆ ಇರುವುದು.
ಅಂತಪ್ಪ ವರಾಹವ ಕೊಲ್ಲದೆ ಕಣ್ಣಕಳೆದು
ಹೃದಯದಲ್ಲಿ ಹುದುಗಿರ್ದ ಮಹಾಕಾಳಜವ ತೆಗೆದುಕೊಂಡು
ಸಲಿಸಬಲ್ಲಡೆ ಲಿಂಗೈಕ್ಯರೆಂಬೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೫ ॥

೧೩೦

ಇಂತಪ್ಪ ಲಿಂಗೈಕ್ಯದ ಭೇದವ ತಿಳಿಯದೆ
ತಮ್ಮಾತ್ಮನ ಭಿನ್ನಭಾವಮೂಢಮತಿಯಿಂದ
ಲಿಂಗೈಕ್ಯವಾಗಬೇಕೆಂದು
ಊರಬಿಟ್ಟು ಕಾಂತಾರಕ್ಕೆ ಪೋಗಿ
ಗುಷ್ಟ ಗಂಹಾರ ಕಲ್ಲುಪಡಿ ಗುಹೆದಲ್ಲಿ
ಅನ್ನ ಉದಕವ ತೊರೆದು, ವಸ್ತ್ರವ ಬಿಟ್ಟು,
ಕಂದಮೂಲ ಪರ್ಣಾಹಾರವ ಭಕ್ಷಿಸಿ,
ಇರುವ ಮರುಳುಗಳೆಲ್ಲಾ ಮರಣವಾದ ಮೇಲೆ,
ಮರಳಿ ವನಚರಪಕ್ಷಿಯಾಗಿ ಗೂಗಿಯಾಗಿ ಪುಟ್ಟುವರಲ್ಲದೆ,
ಇವರು ಲಿಂಗೈಕ್ಯವಾಗಲರಿಯರು ನೋಡೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೬ ॥

೧೩೧

ಲಿಂಗೈಕ್ಯವಾಗಬೇಕೆಂದು ಅಜ್ಞಾನದೊಳಗೆ
ಭಿನ್ನ ಜ್ಞಾನವೆಂಬ ಜ್ಞಾನೋದಯವಾಗಿ,
ಶೈವಗುರುಗಳಲ್ಲಿ ಶೈವಲಿಂಗವ ಪಡಕೊಂಡು,
ಶೈವಲಿಂಗವ ಪೂಜೆಯ ಮಾಡಿ,
ಆ ಶೈವಲಿಂಗವ ಸರ್ವಜೀವಿಗಳ ಹಾಗೆ
ಕಣ್ಣಗೊಂಬಿಯ ತಿರುಹಿ, ಅನಿಮಿಷದೃಷ್ಟಿಯೆಂದು
ಕಣ್ಣ ಕಿಸಿಕಿಸಿದು ನೋಡಿದಡೆಯು
ಕಣ್ಣ ಗುಡ್ಡಿ ಬ್ಯಾನಿಕ್ಕಿ ನೀರು ಸುರಿವುದಲ್ಲದೆ,
ಇವರು ಲಿಂಗೈಕ್ಯವಾಗಲರಿಯರು.
ಮತ್ತಂ, ಏಕಾಂತಸ್ಥಾನದಲ್ಲಿಗೆ ಹೋಗಿ
ಕಾಲ ಮೇಲಕ್ಕೆ ತಲೆಯ ಕೆಳಯಕ್ಕೆ ಮಾಡಿ,
ಆ ತಲೆಯ ಕೆಳಗೆ ಅಡಕಿಯಾಗಲೀ, ಹಳ್ಳವಾಗಲೀ
ಒಂದರ ಮೇಲೆ ಒಂದು ಇಟ್ಟು ಕಣ್ಣು ಮುಚ್ಚಿ ಕೈ ಮುಗಿದು
ಒಂದು ಜಾವ, ಗಳಿಗಿ, ತಾಸುವ್ಯಾಳ್ಯದಲ್ಲಿ
ತಪವ ಮಾಡುವವರೆಲ್ಲ ಮರಣವಾದ ಮೇಲೆ
ಮರಳಿ ವನಚರದೊಳಗೆ ವೃಕ್ಷದ ಕೊನೆಯಲ್ಲಿ
ಅಧೋಮುಖವಾಗಿರುವ ಹಕ್ಕಿಯಾಗಿ ಪುಟ್ಟುವರಲ್ಲದೆ
ಇವರು ಲಿಂಗೈಕ್ಯವಾಗಲರಿಯರು.
ಇಂತಪ್ಪ ಮೂಢಾತ್ಮರ ಕಂಡು ನಗುತಿರ್ದನಯ್ಯಾ ನಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೭ ॥

**ಗಣಾಚಾರಿ ವೀರಬಸವಂತಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೧೩೨

ಲೌಕಿಕದ ಮಧ್ಯದಲ್ಲಿ ಬಾಗಿಣವನಿಕ್ಕಿದ ಸ್ತ್ರೀಯರ
ಪುರುಷರು ಮೃತವಾದಡೆ ಮರಳಿ ಬಾಗಿಣವನಿಕ್ಕಿ
ವಿವಾಹವ ಮಾಡುವರು.
ವಿವಾಹವಾದ ಸ್ತ್ರೀಯರ ಪುರುಷರು ಮೃತವಾದಡೆ
ಮರಳಿ ಹಳದಿಯ ಪೂಸಿ ವಿವಾಹವ ಮಾಡುವರೆ ?
ಮಾಡಲಾಗದು.
ಅದರೊಳಗೊಬ್ಬ ಪತಿವ್ರತಾಸ್ತ್ರೀಯಳು

ಎನ್ನ ಪ್ರಾಣವಲ್ಲಭನು ಮೃತವಾದನೆಂದು
ಆ ಪುರುಷಂಗೆ ತನ್ನ ಪ್ರಾಣತ್ಯಾಗ ಮಾಡುವಳು.
ಒಬ್ಬರು ಮಂಡೆಬೋಳಾಗಿ ಮೈ ಬತ್ತಲೆಯಿರ್ಪರು.
ಒಬ್ಬರು ಮರಳಿ ಒಬ್ಬ ಪುರುಷನ ಕೈ ಹಿಡಿದು
ಪೋಗುವದ ಕಂಡು ಬೆರಗಾದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೨೮ ||

೧೩೩

ತಲೆಯಿಲ್ಲದ ಪುರುಷನಿಗೆ ಕಾಲಿಲ್ಲದ ಸ್ತ್ರೀ.
ಕುಲಗೇಡಿ ಗಂಡಗೆ ಅನಾಚಾರಿ ಹೆಂಡತಿ.
ಇಬ್ಬರ ಸಂಗದಿಂದುತ್ಪತ್ಯವಿಲ್ಲದ ಒಂದು ಶಿಶುವು ಹುಟ್ಟಿ,
ಒಡಹುಟ್ಟಿದ ಬಂಧುಗಳ ಕೊಂದು,
ತಂದಿತಾಯಿಯ ಹತವ ಮಾಡಿ,
ಸತ್ತವರ ನುಂಗಿ, ಬದುಕಿದವರ ಹೊತ್ತು
ಇತ್ತ ಮರದು, ಅತ್ತ ಹರಿದು,
ಸತ್ತು ಕಾಯಕವ ಮಾಡುತಿರ್ದುದು ಶಿಶು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೨೯ ||

೧೩೪

ಕಾಮವಿಲ್ಲದ ಸ್ತ್ರೀಗೆ ನಪುಂಸಕನೆಂಬ ಪುರುಷನು.
ಹುಟ್ಟುಬಂಜೆಗೆ ಗಂಡಸ್ತನಯಿಲ್ಲದ ಗಂಡನು.
ಇಬ್ಬರ ಸಂಗದಿಂದ ಅಂಗವಿಲ್ಲದೊಂದು ಉರಿಮಾರಿ ಶಿಶು ಹುಟ್ಟಿತ್ತು.
ಆ ಶಿಶುವು ತಾಮಸಪುರವೆಂಬ ರಾಜನ ಕಣ್ಣು ಕಳದು
ಮಂತ್ರಿಯ ತಲೆ ಚಂಡಾಡಿ,
ಆನೆ, ಕುದುರಿ, ನಾಯಿಗಳ ಕೊಂದು, ರಥ ಮುರಿದು,
ಬಾರಿಕ ತಳವಾರಕುಲವ ಸವರಿ,
ಸರ್ವಮಾರ್ಬಲವೆಲ್ಲ ಹೊಡೆದು
ತಾಮಸಪುರವೆಂಬ ಪಟ್ಟಣವ ಸುಟ್ಟು,
ಬೂದಿಯ ಧರಿಸಿ ಮಾತಾಪಿತರುಗಳ ಹತ ಮಾಡಿ
ಕಾಶಿ ವಿಶ್ವನಾಥನ ಚರಣಕ್ಕೆರಗಿ

ಸತ್ತು ಕಾಯಕವ ಮಾಡುತಿರ್ದಿತ್ತು ಆ ಶಿಶುವು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೦ ॥

೧೩೧

ಯೋನಿಯಿಲ್ಲದ ಸ್ತ್ರೀಗೆ ಶಿಶ್ನವಿಲ್ಲದ ಪುರುಷನು.
ಮೊಲೆ ಮುಡಿ ಇಲ್ಲದ ಸ್ತ್ರೀಗೆ ಕೈಕಾಲು ಇಲ್ಲದ ಪುರುಷನು.
ಇಬ್ಬರ ಸಂಗದಿಂದ ಕರುಳಿಲ್ಲದ
ಶ್ವೇತವರ್ಣದ ಶಿಶುವು ಹುಟ್ಟಿತ್ತು.
ಆ ಶಿಶುವು ನೋಡಿದವರ ನೋಟದಲ್ಲಿ ಸತ್ತು
ಬದುಕಿದವರ ಹೊತ್ತು, ಅತ್ತವರ ನುಂಗಿ,
ಹೆತ್ತವರ ಹೆಸರ ಮಾಜಿ
ಗುಹೇಶ್ವರನ ಚರಣದಲ್ಲಿ ಅಡಗಿತ್ತು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೧ ॥

## ಮಾಹೇಶ್ವರಸ್ಥಲ

ಸೂತ್ರ : ಇಂತು ಶ್ರದ್ಧಾಭಕ್ತಿಯಿಂದ ಆಚರಿಸಿದ ಶಿವಶರಣನು ಮುಂದೆ ನೈಷ್ಠಿಕಭಕ್ತಿಯಿಂದ ಚರಿಸುತಿರ್ದನಾಗಿ ಮುಂದೆ ಮಾಹೇಶ್ವರಸ್ಥಲವಾದುದು.

೧೩೭

ವಿಭೂತಿ ರುದ್ರಾಕ್ಷಿಯ ಧರಿಸಿ
ಕಾಂಚನಕ್ಕೆ ಕೈ ಒಡ್ಡುವಾತ ಮಹೇಶ್ವರನಲ್ಲ.
ಕಾವಿಕಾಷಾಂಬರ ಹೊದ್ದು ಶಿವಲಿಂಗಧಾರಣವಾಗಿ
ಮೃಷ್ಟಾನ್ನಕ್ಕೆ ಮನಸೋಲುವಾತ ಮಹೇಶ್ವರನಲ್ಲ.
ಕೌಪ ಖಟ್ವಾಂಗವ ಧರಿಸಿ
ಪರಸ್ತ್ರೀಯರ ಕಂಡು ಮನಯೆಳಸುವಾತ ಮಹೇಶ್ವರನಲ್ಲ.
ಜಂಗಮವ ಜರಿದು ಸ್ಥಾವರ ಪೂಜಿಸುವಾತ ಮಹೇಶ್ವರನಲ್ಲ
ಇವರು ನಮ್ಮ ವೀರಮಾಹೇಶ್ವರರ ಸರಿ ಎಂದಡೆ
ನಗುವರಯ್ಯಾ ನಿಮ್ಮ ಶರಣರು.
ಅದೆಂತೆಂದಡೆ : ಭವಭಾರಿಗಳಾದ ಕಾರಣ.
ಇಂತಪ್ಪ ಮಹೇಶ್ವರರ ಕಂಡಡೆ

ಮೂಗುಕೊಯ್ದು ಮೂಕಾರ್ತಿಯ ಮದುವೆಯ ಮಾಡಿ
ಹೊರಕೇರಿಯಲ್ಲಿರಿಸಿದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವಿನ ಶರಣ. ||೧೩೨||

೧೩೩

ಆನೆಯ ಏರುವಾತ ಮಹೇಶ್ವರನಲ್ಲ.
ಕುದುರೆಯ ಏರುವಾತ ಮಹೇಶ್ವರನಲ್ಲ.
ಬಸವನನೇರುವಾತ ಮಹೇಶ್ವರನಲ್ಲ.
ಕೋಣವನೇರುವಾತ ಮಹೇಶ್ವರನಲ್ಲ.
ವೈಲಿಪಾಲಿಕಿ ಸುಖಾಸನ ಏರುವಾತ ಮಹೇಶ್ವರನಲ್ಲ.
ಗರುಡಗಂಭವನೇರುವಾತ ಮಹೇಶ್ವರನಲ್ಲ.
ಕನ್ಯಸ್ತ್ರೀಯಳ ಕಳಸಕುಚವ ಪಿಡಿದು
ಸಂಗವ ಮಾಡಬಲ್ಲರೆ ಮಹೇಶ್ವರನೆಂಬೆನು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೧೩೩||

೧೩೪

ಭಕ್ತರಮನೆಗೆ ಕರೆಯದೆ ಅಶನಕ್ಕೆ ಪೋಗುವ ಮಹೇಶ್ವರರೆಲ್ಲ
ಬೆಕ್ಕು ನಾಯಿಗಳಂತೆ,
ಭಕ್ತರು ಹೊಡೆದು ಬಡಿದು ಹೊರಯಕ್ಕೆ ನೂಕಿದಡೆ
ಬಾಗಿಲಲ್ಲಿ ನಿಂತು ಅಶನವ ನೀಡೆಂದು ಒದರುವರೆಲ್ಲ
ಮನೆಮನೆ ತಪ್ಪದೆ ತಿರುಗುವ
ಚಂಚರು ಕೊರವರಂತೆ.
ಭಕ್ತರು ಭಿಕ್ಷವ ಕೊಟ್ಟರೆ ಹೆಳವ ಗೊರವಸಂತೆ
ಹೊಗಳಿ ಕೊಂಡಾಡುವರು.
ಇಲ್ಲವಾದರೆ ಬೆಕ್ಕು ನಾಯಿಗಳ ಹಾಗೆ ಬೊಗಳುವರು.
ಇಂತಪ್ಪವರು ಮಹೇಶ್ವರರೆಂದಡೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವಿನ
ಶರಣರು ಮೂಗಕೊಯ್ದು ಕನ್ನಡಿಯ ತೋರಿ
ತಮ್ಮ ಪಾವರಕ್ಷೆಯಲ್ಲಿ ಘಟ್ಟಿಸದೆ ಬಿಡುವರೆ ? ||೧೩೪||

೧೩೯

ಕಲ್ಲು ದೇವರೆಂದು ಪೂಜಿಸುವರೆಲ್ಲ
ಕಲ್ಲಾಗಿ ಪುಟ್ಟುವರು.
ಕಟ್ಟಿಗೆ ದೇವರೆಂದು ಪೂಜಿಸುವರೆಲ್ಲ
ಕಟ್ಟಿಗೆಯಾಗಿ ಪುಟ್ಟುವರು.
ಮಣ್ಣುದೇವರೆಂದು ಪೂಜಿಸುವರೆಲ್ಲ
ಮಣ್ಣಾಗಿ ಪುಟ್ಟುವರು.
ನೀರು ದೇವರೆಂದು ಪೂಜಿಸುವರೆಲ್ಲ
ನೀರಾಗಿ ಪುಟ್ಟುವರು.
ಅಗ್ನಿದೇವರೆಂದು ಪೂಜಿಸುವರೆಲ್ಲರು
ಅಗ್ನಿಯಾಗಿ ಪುಟ್ಟುವರು.
ಇದಕ್ಕೆ ದೃಷ್ಟಾಂತ:
'ಯದ್ದೃಷ್ಟಂ ತನ್ನಷ್ಟಂ ಯಥಾಭಾವಸ್ತಥಾ ಸಿದ್ಧಿಃ'
ಎಂದುದಾಗಿ,
ಇಂತಿವರೆಲ್ಲರು ದೇವರೆಂದು ಪೂಜಿಸುವರು
ಹುಟ್ಟುಕುರುಡನು ಬೆಣ್ಣೆಯೆಂದು
ನರಕವ ಭುಂಜಿಸಿದಂತಾಯಿತ್ತಯ್ಯಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೯ ॥

೧೪೦

ಒಂದು ಜನ್ಮದಲ್ಲಿ ನಿನ್ನ
ಕಲ್ಲದೇವರ ಮಾಡಿ ಪೂಜಿಸಿ,
ಜೋಗಿ, ಜಂಗಮ, ಗೊರವನಾಗಿ ಪುಟ್ಟಿದೆ.
ಒಂದು ಜನ್ಮದಲ್ಲಿ ನಿನ್ನ
ಕಟ್ಟಿಗೆದೇವರ ಮಾಡಿ ಪೂಜಿಸಿ
ಬಡಗಿ ಕಂಬಾರನಾಗಿ ಪುಟ್ಟಿದೆ.
ಒಂದು ಜನ್ಮದಲ್ಲಿ ನಿನ್ನ
ಮಣ್ಣುದೇವರ ಮಾಡಿ ಪೂಜಿಸಿ,
ಬಾರಿಕ ತಳವಾರನಾಗಿ ಪುಟ್ಟಿದೆ.
ಒಂದು ಜನ್ಮದಲ್ಲಿ ನಿನ್ನ
ನೀರದೇವರ ಮಾಡಿ ಪೂಜಿಸಿ, ವಿಪ್ರನಾಗಿ ಪುಟ್ಟಿದೆ.

ಒಂದು ಜನ್ಮದಲ್ಲಿ ನಿನ್ನ
ಬೆಂಕಿಯ ದೇವರೆಂದು ಮಾಡಿ ಪೂಜಿಸಿ,
ವಿಪ್ರಾಚಾರ್ಯನಾಗಿ ಪುಟ್ಟಿದೆ,
ಇಂತಿವೆಲ್ಲವನು ನೀನೆಂದು ಭಾವಿಸಿ ಪೂಜಿಸುವಲ್ಲಿ,
ಇಂತೀ ಭವದಲ್ಲಿ ನಾನು ಪುಟ್ಟಿದೆ.
ಇಂತೀ ಜಡಸ್ವರೂಪ ನೀನಲ್ಲ,
ನೀನು ನಿರಾಳ ನಿಃಶೂನ್ಯ ನಿರಾಕಾರನೆಂದು
ಎನ್ನ ಕರಸ್ಥಲದಲ್ಲಿ ಅರಿದು ಪೂಜಿಸಿ
ಸಕಲಕುಲದವರಿಗೆ ಹೊರತಾಗಿ
ಕುಲಗೆಟ್ಟು ನಾನಾವಜನ್ಮಕ್ಕೆ ಹೊದೆನೆಂದರಿಯೆನಯ್ಯಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೬ ॥

೧೪೧

ದೇವರು ದೇವರು ಎಂಬಿರಿ ದೇವರಿಗೆ ಪ್ರಳಯವುಂಟೆ ?
ದೇವರು ಪ್ರಳಯವಾದಡೆ ಜಗವು ಉಳಿಯಬಲ್ಲುದೆ ?
ಎಲಾ ಮರುಳಗಳಿರಾ, ಕಲ್ಲು ದೇವರೆಂಬಿರಿ,
ಕಲ್ಲು ದೇವರಾದಡೆ ವಜ್ರಾಯುಧದಿಂದ ಪ್ರಳಯವಾಗದೆ ?
ಕಟ್ಟಿಗೆ ದೇವರೆಂಬಿರಿ,
ಕಟ್ಟಿಗೆ ದೇವರೆಂದರೆ ಅಗ್ನಿಯಿಂದ ಪ್ರಳಯವಾಗದೆ ?
ಮಣ್ಣು ದೇವರೆಂಬಿರಿ,
ಮಣ್ಣು ದೇವರಾದಡೆ ಜಲದಿಂದ ಪ್ರಳಯವಾಗದೆ ?
ನೀರು ದೇವರೆಂಬಿರಿ,
ನೀರು ದೇವರಾದಡೆ ಅಗ್ನಿಯಿಂದ ಅರತುಹೋಗದೆ ?
ಅಗ್ನಿ ದೇವರೆಂಬಿರಿ,
ಅಗ್ನಿ ದೇವರಾದಡೆ ಜಲದಿಂದ ಪ್ರಳಯವಾಗದೆ ?
ಇಂತೀ ದೇವರೆಂದು ನಂಬಿ ಪೂಜಿಸಿದ ಜೀವಾತ್ಮರು
ಇರುವೆ ಮೊದಲು ಆನೆ ಕಡೆ
ಎಂಬತ್ನಾಲ್ಕುಲಕ್ಷ ಯೋನಿದ್ವಾರದಲ್ಲಿ
ರಾಟಾಳ ತಿರುಗಿದಂತೆ
ಜನನಮರಣಗಳಿಂದ
ಎಡೆಯಾಡುತಿಪ್ಪರು ನೋಡಾ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೭ ॥

೧೪೨

ಮಾನವರಿಗೆ ಮರ್ತ್ಯಲೋಕ,
ದೇವರಿಗೆ ದೇವಲೋಕ,
ಉಳಿದ ಪ್ರಾಣಿಗಳಿಗೆ ಯಮಲೋಕ,
ಎನಗೆ ಇನ್ನಾವಲೋಕವಿಲ್ಲ ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೮ ॥

೧೪೩

ಮುಷ್ಟಿಯ ಚಡಾಯಿಸಿ ಮಾನವರ ಕೊಲ್ಲುವಾತ
ಮಹೇಶ್ವರನಲ್ಲ.
ಯಂತ್ರವ ಬರೆದು ಕಟ್ಟಿ ಭೂತವ ಬಿಡಿಸುವಾತ
ಮಹೇಶ್ವರನಲ್ಲ.
ವೈದ್ಯಗಳ ಮಾಡಿ ರೋಗಾದಿಗಳ ಪರಿಹರಿಸುವಾತ
ಮಹೇಶ್ವರನಲ್ಲ.
ಅದೇನು ಕಾರಣವೆಂದಡೆ :
ಕಾಲ-ಕಾಮ-ಮಾಯಾದಿಗಳು
ಸಂಕಲ್ಪ ವಿಕಲ್ಪವೆಂಬ ಮುಷ್ಟಿಯ
ತಮ್ಮಂಗಕ್ಕೆ ಚಡಾಯಿಸಿ ಕೊಲ್ಲುವವನರಿಯದೆ,
ಪರರಿಗೆ ಮುಷ್ಟಿಯ ಮಾಡುವರು.
ಮತ್ತಂ, ಮಾಯೆಯೆಂಬ ಭೂತ,
ಹೊನ್ನು ಹೆಣ್ಣು ಮಣ್ಣೆಂಬ ಯಂತ್ರವ
ನಿಮ್ಮ ಮನದಲ್ಲಿ ನಿಲುಕಿಸಿ ಬಂಧಿಸಿ
ಭವಭವದಲ್ಲಿ ಗಾಸಿಯಾಗುವವನರಿಯದೆ
ಪರರಿಗೆ ಯಂತ್ರವ ಕಟ್ಟುವರು.
ಮತ್ತಂ, ಆಶೆ-ರೋಷ-ಹರುಷವೆಂಬ ರೋಗಾದಿಗಳು
ತಮ್ಮಾತ್ಮಂಗೆ ಪ್ರವೇಶವಾಗಿ
ಯುಗಯುಗಾಂತರದಲ್ಲಿ ಶ್ರಮಬಡುವುದನರಿಯದೆ
ಪರರಿಗೆ ವೈದ್ಯವ ಮಾಡುವರು,

ಇವರು ಮಹೇಶ್ವರರಲ್ಲ ; ಭವಭಾರಿಗಳು.
ಅದೆಂತೆಂದೊಡೆ-ಲಿಂಗವಿಲ್ಲದ ಕಾರಣ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೩೯ ॥

೧೪೪

ಸತ್ತವರ ಸಮಾಧಿಯಲ್ಲಿ ತಡಿಗಿಯ ಕಟ್ಟಿಸಿ,
ಹಿರಿಯರ ಗದ್ದುಗೆಯನ್ನು ಪೂಜಿಸುವವರು
ಮಹೇಶ್ವರರಲ್ಲ.
ಕಟ್ಟಿಗೆ ಹಾವಿಗೆ, ಬೆಳ್ಳಿಯ ಕಟ್ಟಿಗೆ ಜಡಿಗಟ್ಟಿದ ಕೂದಲು
ಹಿರಿಯರೆಂದು ಪೂಜಿಸುವವರು ಮಹೇಶ್ವರರಲ್ಲ.
ಸತ್ತ ತಾಯಿತಂದೆಗಳ ಹೆಸರು ತಮ್ಮ ಪುತ್ರರಿಗೆ ಇಟ್ಟು,
ಪರರಿಗೆ ತಮ್ಮ ಹಿರಿಯರು ಗಳಿಸಿದ
ಮಠಮಾನ್ಯವೆಂದು ಹೋರಾಡಿ ತಗಾದಿ ತಳ್ಳಿ ತಡಿಯ ಮಾಡಿ
ಸರಕಾರಕ್ಕೆ ಹೊನ್ನ ಕೊಟ್ಟವರು ಮಹೇಶ್ವರರಲ್ಲ.
ಇಂತಿವರು ಮಹೇಶ್ವರರೆಂದಡೆ
ನಿಮ್ಮ ಶರಣರು ತಮ್ಮ ಪಾದರಕ್ಷೆಯಿಂದ ಹೊಡೆಯದೆ ಮಾಣ್ಬರೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೦ ॥

೧೪೫

ಶೀಲವಂತರೆಲ್ಲ ಶೂಲದ ಹೆಣನೆಂಬೆ.
ಕ್ರಿಯಸ್ಥರೆಲ್ಲ ಬೇಡಿಬಂದಿಕಾರರೆಂಬೆ.
ವ್ರತಸ್ಥರೆಲ್ಲ ಥಾಲಿಬಂದಿಕಾರರೆಂಬೆ.
ನೇಮಸ್ಥರೆಲ್ಲ ಆಳುಗಳೆಂಬೆ.
ಲಿಂಗ ಇದ್ದವರಿಗೆ ಹೊಲೆಯರೆಂಬೆ.
ಲಿಂಗವಿಲ್ಲದವರಿಗೆ ಉತ್ತಮರೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೧ ॥

೧೪೬

ವಿಭೂತಿಯ ಪೂಸುವ ಪಣೆಗೆ ಬಂಡಾರವ ಪೂಸುವವರು
ಹೊಲಗೇರಿಯಲ್ಲಿ ಹಣೆಚಿಕ್ಕಹಂದಿಯಾಗಿ ಪುಟ್ಟುವರು.

ರುದ್ರಾಕ್ಷಿಯ ಧರಿಸುವ ತೋಳು ಕಂಠ ಮಸ್ತಕದಲ್ಲಿ
ಯಂತ್ರವಮಾಡಿಸಿ ತಾಯಿತದಲ್ಲಿ ಕಟ್ಟುವವರು
ಸುಡುಗಾಡುಸಿದ್ಧಯ್ಯರಾಗಿ ಪುಟ್ಟುವರು.
ಶಿವಲಿಂಗವ ಧರಿಸುವ ಕೊರಳಿಗೆ
ಬೆಳ್ಳಿಬಂಗಾರದ ತಾಯಿತದಲ್ಲಿ
ವೈದ್ಯರ ಗಿಡಮೂಲಿಕೆ ಹಾಕಿಸಿ ಕಟ್ಟುವವರೆಲ್ಲ
ಗೊಲ್ಲರಾಗಿ ಪುಟ್ಟುವರು.
ಶಿವಮಂತ್ರವನುಚ್ಚರಿಸುವ ಜಿಹ್ವೆಯಲ್ಲಿ
ಹಾವು ಚೋಳಿನ ಮಂತ್ರ ಮೊದಲಾದ
ಅನೇಕ ಕುಟಿಲ ವೈದ್ಯದ ಮಂತ್ರವ ಕಲಿತು
ಜಪಿಸುವವರೆಲ್ಲ ಗಾರುಡಗಾರರಾಗಿ ಪುಟ್ಟುವರು.
ಗುರುಹಿರಿಯರ ಕಂಡು ಶಿರಬಾಗಿ ಶರಣೆನ್ನದವರು
ಮರಳಿ ಕ್ಷೀಣಜಾತಿಯಲ್ಲಿ ಜನಿಸಿ,
ನೂರೊಂದು ಕುಲ, ಹದಿನೆಂಟು ಜಾತಿಯವರಿಗೆ
ಶಿರಬಾಗಿ ಶರಣುಮಾಡುವರು.
ಗುರುಕೊಟ್ಟ ಇಷ್ಟಲಿಂಗದ ಪೂಜೆಯ ಬಿಟ್ಟು,
ಶೈವರು ಸ್ಥಾಪಿಸಿದ ನಟ್ಟಕಲ್ಲು
ಸ್ಥಾವರ ಶೈವಲಿಂಗವ ಪೂಜಿಸುವವರು,
ಮರಳಿ ವಿಪ್ರ ಪಂಚಾಳ ಕುಲದವರು
ಮೊದಲಾಗಿ ಅನೇಕ ಭವಿಗಳಲ್ಲಿ ಜನಿಸಿ,
ಹುಲಿಗಿ, ಎಲ್ಲಿ, ಬನಶಂಕರಿ, ಕಾಳಿ, ಜಟ್ಟಿಂಗ,
ಹಿರಿಯೊಡಿಯ ಲಕ್ಕಿ, ದುರ್ಗಿದೇವಿ ಮೊದಲಾದ
ಬೀದಿಬಜಾರದಲ್ಲಿರುವ ಅಧಮ ಕ್ಷೀಣ ದೇವತೆಗಳ ಪೂಜಿಸುವವರು.
ಜಂಗಮವ ಕಂಡು ಜರಿದು
ಜಂಗುಳಿದೈವಕ್ಕೆ ಜನಿಗಿಯ ಬಿಟ್ಟು,
ಒಂದ್ಹೊತ್ತು ಉಪವಾಸ ಮಾಡಿ ಮಡಿಗಳನುಟ್ಟು,
ಎಡಿಯ ಕೊಟ್ಟುಂಬುವವರು ಮರಳಿ
ಆ ದೇವತೆಗಳ ಸೇವಕರಾಗಿ ಪುಟ್ಟುವರು.
ಅನ್ನೋದಕದ ಪೂರ್ವಾಶ್ರಯವನಳಿಯದೆ
ಲಿಂಗಕ್ಕೆ ತೋರಿ ಉಂಬವರೆಲ್ಲ
ಮರಳಿ ಹೆಂಡಗಾರ ಕಟುಕರಲ್ಲಿ ಜನಿಸಿ

ಕಂಡ ಹೆಂಡ ಸೇವಿಸುವರು.
ಇಂತಪ್ಪರಿಗೆ ಶಿವನು ಒಲಿ ಒಲಿ ಎಂದರೆ
ಎಂತೊಲಿವನಯ್ಯ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೧೪೭||

## ಮಹೇಶ್ವರನ ಭಕ್ತ

೧೪೮

ಹಳದಿಯ ಪೂಸಿ, ವಸ್ತ್ರವ ಪೊದ್ದು,
ಕಂಕಣವ ಕಟ್ಟಿ, ಕಾಳಗಕ್ಕೆ ಹೋಗಿ ಮರಳಿದರೆ,
ವೀರನೆಂತಪ್ಪನಯ್ಯ ?
ಅವುದಾನೊಂದು ಶುನಿಗೆ ಕಣಕ ತುಪ್ಪವ ತಿನ್ನಿಸಿ
ಕಾಲಗಗ್ಗರಿ ಜಂಗು ಜಲ್ಲಿ ಕೊರಳಲ್ಲಿ ಕಿರಿಗೆಜ್ಜೆಯ ಕಟ್ಟಿ,
ಶಿಕಾರಿಯವ್ವೆದು ಜಂಬುಕದ ಮೇಲೆ ಬಿಡಲು
ಮರಳಿದರೆ ವೀರನೆಂತಪ್ಪುದಯ್ಯ ?
ಹಾಗೆ ಶ್ರೀಗುರುಕಾರುಣ್ಯವ ಪಡೆದು
ಲಿಂಗಾಂಗಸಂಬಂಧಿಯಾಗಿ,
ಗುರುಲಿಂಗಜಂಗಮದ ನಡೆನುಡಿ ಭಕ್ತಿಯೆಂದಡೆಯು
ಮನ ಹಿಮ್ಮೆಟ್ಟಿದಡೆಯು
ನಿಮ್ಮ ಲಿಂಗಾಂಗಿಭಕ್ತನೆಂತಪ್ಪುವನಯ್ಯ ?
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೧೪೮||

೧೪೯

ಪುಣ್ಯಕ್ಷೇತ್ರಯಾತ್ರೆ ಪುಣ್ಯತೀರ್ಥಸ್ನಾನವ ಮಾಡಬೇಕೆಂಬಿರಿ.
ಮರ್ತ್ಯಲೋಕದ ಮಹಾಗಣಂಗಳು
ನೀವು ಬಲ್ಲಾದರೆ ಪೇಳಿ, ಅರಿಯದಿದ್ದರೆ ಕೇಳಿರಯ್ಯ.
ಶ್ರೀಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾಗಿ
ಸರ್ವಾಂಗಲಿಂಗಮಯವಾದ
ಒಬ್ಬ ಶಿವಭಕ್ತನ ದರ್ಶನವಾದವರಿಗೆ
ಅನಂತಕೋಟಿ ಪುಣ್ಯ ಫಲದೊರಕೊಂಬುವದು.

ಅದೆಂತೆಂದೊಡೆ :
ಆತನ ಮಂದಿರವೇ ಶಿವಲೋಕ.
ಆತನ ಕಾಯವೇ ಸತ್ಯಲೋಕ.
ಆತನ ಅಂಗದ ಮೇಲೆ ಇರುವ ಲಿಂಗವೇ
ಅನಾದಿಪರಶಿವಲಿಂಗ,
ಆತನ ಅಂಗಳವೇ ವಾರಣಾಸಿ.
ಅಲ್ಲಿ ಮುನ್ನೂರಾ ಅರುವತ್ತುಕೋಟಿ ಕ್ಷೇತ್ರಂಗಳಿರುವವು.
ಆತನ ಬಚ್ಚಲವೇ ಗಂಗಾತೀರ.
ಅಲ್ಲಿ ಮುನ್ನೂರರುವತ್ತುಕೋಟಿ ತೀರ್ಥಂಗಳಿರ್ಪವು.
ಇಂತಪ್ಪ ನಿರ್ಣಯವನು ಸ್ವಾನುಭಾವಗುರುಮುಖದಿಂ ತಿಳಿದು,
ವಿಚಾರಿಸಿ ಕೊಳ್ಳಲರಿಯದೆ ತೀರ್ಥಕ್ಷೇತ್ರವೆಂದು
ತಿರುಗುವ ವ್ರತಭ್ರಷ್ಟ, ಅನಾಚಾರಿ
ಮೂಳಹೊಲೆಯರಿಗೆ ನಾನೇನೆಂಬೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೪ ॥

೧೪೫

ಆದಿ ಅನಾದಿ ಸುರಾಳ ನಿರಾಳ
ಶೂನ್ಯ ನಿಃಶೂನ್ಯದಿಂದತ್ತತ್ತಲಾದ
ಘನಮಹಾಲಿಂಗವೆಂಬ ಪರಬ್ರಹ್ಮವು,
ಗುರುಕರುಣದಿಂ ಬಹಿಷ್ಕರಿಸಿ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬರಲು
ಆ ಲಿಂಗದಲ್ಲಿ ಕೃಷ್ಣಾ ಭಾಗೀರಥಿ ಮೊದಲಾದ ಅನೇಕ ತೀರ್ಥಂಗಳು,
ಕಾಶಿರಾಮೇಶ್ವರ ಮೊದಲಾದ ಅನೇಕ ಕ್ಷೇತ್ರಂಗಳು,
ಹಿಮಾಚಲ ಶ್ರೀಶೈಲಪರ್ವತ ಮೊದಲಾದ
ಅನೇಕ ಪುಣ್ಯಶೈಲಂಗಳುಂಟೆಂದು,
ತನ್ನ ಸ್ವಾನುಭಾವಮೂಲಜ್ಞಾನದಿಂ ತಿಳಿದು,
ಸಕಲ ಸಂಶಯಂ ಬಿಟ್ಟು ನಿಶ್ಚಿಂತನಾಗಿ,
ಮನವ ಮಹಾಘನದಲ್ಲಿರಿಸಿ ಇರಬಲ್ಲಡೆ
ಆತನೇ ಅನಾದಿಸದ್ವೀರಮಹೇಶ್ವರನ ಭಕ್ತನು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೫ ॥

೧೫೦

ಕಾಶಿಗೆ ಹೋಗಬೇಕೆಂಬಣ್ಣಗಳು ನೀವು ಲಾಲಿಸಿರಯ್ಯ,
ಕಾವಡಿಯ ಹೊತ್ತು ಹೋಹ
ವಿಪ್ರನ ಕಾವಡಿಯನೊಡದು ವಿಪ್ರನ ಕೊಂದು
ಬೆಕ್ಕುನಾಯಿಗಳು ಮಾತಾಪಿತರುಗಳು,
ಸತಿಸುತರುಗಳು
ಮೊದಲಾದವರುಗಳನ್ನು ಕ್ಷಣದಲ್ಲಿ ಹತಮಾಡಿ,
ಕಾಶಿಯ ಬಟ್ಟೆಯ ಮೆಟ್ಟಿ ಪೋಗುವ ಭಕ್ತಜನರಿಗೆ
ಮೋಕ್ಷವೆಂಬುದು ಕರತಳಾಮಳಕವಾಗಿ
ಕಾಣುವುದು ನೋಡೆಂದ,
ನಿಮ್ಮ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೭ ॥

೧೫೧

ಪರ್ವತಮಲ್ಲಯ್ಯನ ಯಾತ್ರೆಗೆ ಹೋಗಬೇಕೆಂಬರಯ್ಯಾ,
ಅದೇನು ಕಾರಣವೆಂದಡೆ :
ಗ್ರಂಥ : 'ಶ್ರೀಶೈಲಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ'
ಎಂದುದಾಗಿ,
ಅಂತಪ್ಪ ಪರ್ವತಮಲ್ಲಯ್ಯನ
ಶಿಖರವ ಕಂಡಾಕ್ಷಣದಲ್ಲಿ ಮೋಕ್ಷವಾಹುದೆಂದು,
ಶ್ರುತಿ ಪುರಾಣ ವಾಕ್ಯಂಗಳ ಕೇಳಬಲ್ಲಂಥ
ಭಕ್ತಜನಂಗಳು, ಉಳಿದಂಥ ಕೆಲವು ಗಣಂಗಳು
ಇಂತೀ ಸರ್ವರು ಕೂಡಿ ಸಾಲ ಕಡ ಮಾಡಿ
ಹೊನ್ನು ತಂದು ಒಂದೊತ್ತು ಬರಿಗಾಲಿಲೆ ನಡೆವುತ್ತ
ಆಸತ್ತು, ಬೇಸತ್ತು, ಅಳಲಿ, ಬಳಲಿ
ಶಿವಶಿವಾ ಹರಹರಾ ಎಂದು ಮಲ್ಲಯ್ಯನ ನೆನೆವುತ್ತ
ಎಡವುತ್ತ, ಮುಗ್ಗುತ್ತ ನಿನ್ನ ಪಾದ ಎಂದು ಕಂಡೆವು ಎನ್ನುತ್ತ,
ಸಕಲ ಲೋಕಾದಿಲೋಕಂಗಳೆಲ್ಲ
ಇಂತೀ ಪರಿಯಲ್ಲಿ ಹೋಹರಯ್ಯಾ.
ಇವರಿಗೆ ಮಲ್ಲಯ್ಯನ ದರುಶನವಿಲ್ಲ.
ಅವನ ಶಿಖರವ ಕಾಣಬಾರದು ನೋಡೆಂದ ನಿಮ್ಮ ಶರಣ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೭ ॥

೧೫೦

ಪರ್ವತಕ್ಕೆ ಹೋಗಬೇಕಾದರೆ
ಮನೆಯ ಸುಟ್ಟು, ಬಸವನ ಕೊಂದು,
ಶಿಶುವಿನ ತಲೆಹೊಡೆದು, ಗುರುಲಿಂಗಜಂಗಮವ ಕೊಂದು,
ತನ್ನ ಕೈಕಾಲು ತಲೆ ಛೇದಿಸಿ,
ತಿದಿಯ ಹಿಡಿದು, ಕಾವಡಿಯನೊಡದು,
ಸಾಲಮಾಡದೆ ತಾವು ಗಳಿಸಿದಂಥ ದ್ರವ್ಯವನೊಯ್ಯದೆ
ಪೋಗಿ ಕೇಶವನೆಲ್ಲಾ ಬೋಳಿಸಿ,
ಪಾತಾಳಗಂಗಿಯ ಸ್ನಾನವ ಮಾಡಿ,
ಮನೆಯ ಸುಟ್ಟು ಬೂದಿಯ ಧರಿಸಿ,
ಒಂದು ಪಾದವ ಹಿಂದಿಟ್ಟು, ಒಂದು ಪಾದವ ಮುಂದಿಟ್ಟು,
ಎಡಕ ಬಂದವನ ಮೆಟ್ಟಿ, ಬಲಕ ಬಂದವನ ಕುಟ್ಟಿ,
ಎದುರಿಗೆ ಬಂದವನ ಮೆಟ್ಟಿ, ಅವನಾಚೆಗೆ ದಾಟಿ ಹೋಗಬಲ್ಲರೆ,
ಮಲ್ಲಯ್ಯನ ದರುಶನವಾಹುದು,
ಆತನ ಶಿಖರ ಕಾಣುವದು.
ಕಂಡಾಕ್ಷಣವೇ ನಿರ್ವಯಲಪದವಹುದು.
ಇಂತಿದರ ವಿಚಾರವ ತಿಳಿಯಬಲ್ಲರೆ
ಕಾಶಿ ಶ್ರೀಶೈಲಯಾತ್ರೆಯ ಮಾಡಬಲ್ಲವರು ಎಂದನಯ್ಯಾ
ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೪೮ ॥

೧೫೩

ಇಂತಪ್ಪ ವಿಚಾರವನು
ಸ್ವಾನುಭಾವಗುರುಮುಖದಿಂ ತಿಳಿದು,
ವಿಚಾರಿಸಿಕೊಳ್ಳಲರಿಯದೆ ತಮ್ಮ ತನುಮನದ ಉಲ್ಲಾಸದಿಂದ,
ಕಾಶಿ ಶ್ರೀಶೈಲ ರಾಮೇಶ್ವರ ಉಳವಿ ಗೋಕರ್ಣ
ಕಾರ್ತಿಕ ಕಂಚಿ ಹಂಪಿ ಮೊದಲಾದ
ಸಕಲ ಕ್ಷೇತ್ರಯಾತ್ರೆಗಳಲ್ಲಿ ತಿರುಗಿ ತಿರುಗಿ

ತನುಮನ ಬಳಲಿ ಶ್ರಮಬಟ್ಟರಲ್ಲದೆ
ಶಿವನ ಕಾಣಲರಿಯರು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೪೯ ||

**ಯಾತ್ರಿಯ ಸಂಕಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ. :**

೧೫೦

ಒಂದು ಕ್ಷೇತ್ರಕ್ಕೆ ಹೋಗಿ
ಬ್ರಹ್ಮಲೋಕವ ದಾನವ ಕೊಟ್ಟೆ.
ಎರಡನೆಯ ಕ್ಷೇತ್ರಕ್ಕೆ ಹೋಗಿ
ವಿಷ್ಣುಲೋಕವ ದಾನವ ಕೊಟ್ಟೆ.
ಮೂರನೆಯ ಕ್ಷೇತ್ರಕ್ಕೆ ಹೋಗಿ
ರುದ್ರಲೋಕವ ದಾನವ ಕೊಟ್ಟೆ.
ನಾಲ್ಕನೆಯ ಕ್ಷೇತ್ರಕ್ಕೆ ಹೋಗಿ
ಈಶ್ವರಲೋಕವ ದಾನವ ಕೊಟ್ಟೆ.
ಐದನೆಯ ಕ್ಷೇತ್ರಕ್ಕೆ ಹೋಗಿ
ಸದಾಶಿವಲೋಕವ ದಾನವ ಕೊಟ್ಟೆ,
ಆರನೆಯ ಕ್ಷೇತ್ರಕ್ಕೆ ಹೋಗಿ
ಶಿವಲೋಕವ ದಾನವ ಕೊಟ್ಟೆ,
ಏಳನೆಯ ಕ್ಷೇತ್ರಕ್ಕೆ ಹೋಗಿ
ಮರ್ತ್ಯಲೋಕವ ದಾನವ ಕೊಟ್ಟೆ.
ಎಂಟನೆಯ ಕ್ಷೇತ್ರಕ್ಕೆ ಹೋಗಿ
ಸ್ವರ್ಗಲೋಕವ ದಾನವ ಕೊಟ್ಟೆ,
ಒಂಬತ್ತನೆಯ ಕ್ಷೇತ್ರಕ್ಕೆ ಹೋಗಿ
ಪಾತಾಳಲೋಕವ ದಾನವ ಕೊಟ್ಟೆ,
ದಶ ಕ್ಷೇತ್ರಕ್ಕೆ ಹೋಗಿ
ಚತುರ್ದಶಭುವನ ದಾನವ ಕೊಟ್ಟೆ.
ನಾ ಸತ್ತು ಬದುಕಿದವರ ಹೊತ್ತು ಕಾಯಕವ ಮಾಡುತಿರ್ದೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫೦ ||

೧೫೫

ಹುಟ್ಟಿದ ಮುನ್ನ ಹೋಗಾಡಿ ಕೊಟ್ಟು ಕೊಂಡೆ.
ಹುಟ್ಟಿದ ಮುನ್ನ ಮೂವರ ಸೇವೆ ಮಾಡಿದೆ.
ಹುಟ್ಟಿದ ಮುನ್ನ ಭವಿಗಳಲ್ಲಿ ಚರಿಸಿದೆ.
ಹುಟ್ಟಿದ ಮೇಲೆ ನಷ್ಟವ ಮಾಡಿ
ಅಂಗೈಯ ಮೇಲೆ ಹಾಲು ಕುಡಿದು
ಸತ್ತು ಕಾಯಕವ ಮಾಡುತಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೫೧ ॥

೧೫೬

ಶುಕ್ಲಶೋಣಿತಾತ್ಮಸಂಬಂಧವಾದ
ಮಾತಾ ಪಿತರುಗಳ ಕಾಮವಿಕಾರದಿಂದ ಪುಟ್ಟಿದ ಪಿಂಡಕ್ಕೆ,
ಅಂಗೈಯೊಳಗೆ ಇರುವ ಪರಿಯಂತರವಾಗಿ
ಜಡೆಯ ಕೂಸೆಂಬುವರು.
ಅಂಬೆಗಾಲಲಿ ನಡೆಯುವಾಗ ಹುಡುಗನೆಂಬುವರು.
ಎದ್ದು ಕಾಲಲಿ ನಡೆಯುವಾಗ ಪೋರನೆಂಬುವರು
ಒಳ ಹೊರಗೆ ಓಡಾಡುವಾಗ ಹೆಸರುಗೊಂಡು
ಬಾರಲೇ ಹೋಗಲೆಯೆಂಬುವರು.
ಷೋಡಶವರುಷಕ್ಕೆ ತಮ್ಮಾ ಅಪ್ಪಾ ಎಂದು ಕರೆವರು.
ಪಂಚವಿಂಶತಿವರುಷಕ್ಕೆ ಅಣ್ಣಾ ಅಪ್ಪಾ ಎಂದು ಕರೆವರು.
ಮೂವತ್ತುವರುಷದಿಂ ಐವತ್ತುವರುಷತನಕ ಅಪ್ಪನವರು ಎಂದು ಕರೆವರು,
ನೆರೆಯೊಡೆದ ಮೇಲೆ ಹಿರಿಯರೆಂಬುವರು.
ಹಲ್ಲುಬಿದ್ದ ಮೇಲೆ ಮುದುಕನೆಂಬುವರು.
ಬೆನ್ನುಬಾಗಿ ಕಣ್ಣು ಒಳನಟ್ಟು ಗೂಡುಗಟ್ಟಿ ಗೂರಿಗೂರಿ
ಮುಕುಳಿ ನೆಲಕ್ಕೆಹತ್ತಲು ಮುದೋಡ್ಯಾ ಎಂಬುವರು.
ಇಂತೀ ನಾಮಂಗಳು ಆತ್ಮಂಗೆ ದೇಹಸಂಗದಿಂದ ಪುಟ್ಟಿದವಲ್ಲದೆ
ಆ ದೇಹದೊಳಗಿರುವ ಆತ್ಮನು
ಕೂಸಲ್ಲ, ಪೋರನಲ್ಲ, ಹಿರಿಯನಲ್ಲ, ಮುದುಕನಲ್ಲ.
ಈ ಭೇದವ ನಿಮ್ಮ ಶರಣರು ಬಲ್ಲರಲ್ಲದೆ
ಈ ಲೋಕದ ಗಾದಿಮನುಜರೆತ್ತ ಬಲ್ಲರಯ್ಯಾ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೫೬ ॥

೧೫೭

ನಾನು ಪರಶಿವತತ್ವದಿಂ ಭಿನ್ನವಾಗಿ
ಶಿವಕೃಪೆಯಿಂ ಮರ್ತ್ಯಲೋಕದಲ್ಲಿ
ದೇಹಸಂಬಂಧಿಯಾಗಿ ಪುಟ್ಟಿದೇ ಮೋಹಯೆಂದು ಇರುತ್ತಿರಲು,
ಎನ್ನ ಕುಲದವರೆಂದಡೆ ಜೀವಾತ್ಮರು.
ಅಂತಪ್ಪ ಜೀವಾತ್ಮರು ಬಂದು
ನೀನಾವ ಕುಲದವನೆಂದು ವಿಚಾರಿಸಲು
ಎನ್ನ ನಿಜವ ಮರೆದು ನಾನು ಕರಿಕುಲದವನೆಂದಡೆ
ನಗುವರಯ್ಯ ನಿಮ್ಮ ಶರಣರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೫೭ ॥

೧೫೮

ರಾತ್ರಿಯಲ್ಲಿ ಬಹುಕುಲದಲ್ಲಿ ಪುಟ್ಟಿದೆ.
ಹಗಲಿನಲ್ಲಿ ಒಂದು ಕುಲದಲ್ಲಿ ಪುಟ್ಟಿದೆ.
ಉಭಯವಿಲ್ಲದಕಾರಣ ಆವಲ್ಲಿ ನಾ ಪುಟ್ಟಿದೆನೆಂಬುದ
ನೀ ಬಲ್ಲೆಯಲ್ಲದೆ ಇವರೆತ್ತ ಬಲ್ಲರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೫೮ ॥

೧೫೯

ಎನ್ನ ತಾಯಿ ಹೊಲೆಯನ ಸಂಗವಮಾಡಿ
ಎನ್ನ ಹಡದು ಊರಲ್ಲಿಟ್ಟಳು.
ಆ ಊರಿಗೆ ಒಡೆಯನಾಗಿ
ತಲೆಯಿಲ್ಲದ ಸ್ತ್ರೀಸಮ್ಮೇಳನದಲ್ಲಿರುತ್ತಿರಲು,
ಎನ್ನ ಕುಲದವರು ಬಂದು
ಈ ಊರವ ನೀನಲ್ಲ, ಹೊಲೆಯನೆಂದು ಪೇಳಿದಾಕ್ಷಣವೆ
ತಲೆಯಿಲ್ಲದ ಸ್ತ್ರೀಯ ಕೊಂದು,
ಊರ ಸುಟ್ಟು ಮನುಜರ ಬಿಟ್ಟು,
ಕುಲದವರ ಕೂಡಿ ಕಾಯಕವ ಮಾಡುತಿರ್ದರಯ್ಯಾ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫೫ ||

## ಮಹೇಶ್ವರನ ಪ್ರಸಾದಿ

೧೬೦

ಪ್ರಸಾದಿಗೆ ಪರದ್ರವ್ಯದ ಪ್ರೇಮವುಂಟೆ ?
ಪ್ರಸಾದಿಗೆ ಪರಸ್ತ್ರೀಯರ ಮೋಹವುಂಟೆ ?
ಪ್ರಸಾದಿಗೆ ಮಾತಾಪಿತ ಸತಿಸುತರ ಮಮಕಾರವುಂಟೆ ?
ಒಬ್ಬರಿಗೆ ಉಂಟು, ಒಬ್ಬರಿಗೆ ಇಲ್ಲ.
ಈ ಭೇದವ ನಿಮ್ಮ ಶರಣರೇ ಬಲ್ಲರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫೬ ||

೧೬೧

ಒಳ್ಳೆ ಪದಾರ್ಥಬಂದಡೆ ನೀಡೆಂಬಿರಿ,
ಕೀಳುಪದಾರ್ಥಬಂದಡೆ ಬೇಡೆಂಬಿರಿ.
ಕಮ್ಮಾದರೆ ನೀಡೆಂಬಿರಿ,
ಆ ಪದಾರ್ಥ ಹೆಚ್ಚಾದರೆ ಪ್ರಸಾದ[ವೆಂದು] ಕೈಕೊಂಬಿರಿ.
ಕಡ್ಡಿ ಹರಳು ಮೊದಲಾದ ಕಠಿಣಪದಾರ್ಥ ಬಂದಡೆ,
ಜಿಹ್ವೆಯಲ್ಲಿ ತೊಂಬಲವನಾರಿಸಿಬಿಡುವಿರಿ.
ಮಕ್ಷಿಕ ಮೊದಲಾದ ಕ್ರಿಮಿಗಳು ಬಿದ್ದರೆ
ಆರೂ ಅರಿಯದ ಹಾಗೆ ತೆಗೆದು ಸಿಪ್ಪದೆ ವರಸದೆ ಕದ್ದು ಚೆಲ್ಲುವಿರಿ.
ಇಂತಪ್ಪ ಮೂಳಹೊಲೆಯರು ಪ್ರಸಾದಿಗಳೆಂದಡೆ
ಪರಶಿವಪ್ರಸಾದಿಗಳಾದ ಶಿವಶರಣರು
ಊರ ಸೂಳೆಯರ ಹಾಟಹೊಯಿಸಿ ತಲೆಯಬೋಳಿಸಿ ಪಟ್ಟೆಯ ತೆಗೆದು
ಅವರ ಎಡಗಾಲಕೆರ್ಪಿನಿಂದ ಘಟ್ಟಿಸಿ
ಮೂಡಲದಿಕ್ಕಿಗೆ ಅಟ್ಟಿದರು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫೭ ||

೧೬೨

ಪ್ರಸಾದಿ ಪ್ರಸಾದಿಗಳೆಂದು ಹೆಸರಿಟ್ಟುಕೊಂಡು
ಪಸ್ತುಪರುಷವಿಲ್ಲದ ಪದಾರ್ಥ ಕಿಲ್ಬಿಷ

ಲಿಂಗಕ್ಕೆ ಅರ್ಪಿಸಲಾಗದೆಂದು ಶ್ರುತಿವಾಕ್ಯ ಕೇಳಿ,
ಲಿಂಗಜಂಗಮವ ಕಂಡಲ್ಲಿ
ಅನ್ನ ಉದಕವ ಜಂಗಮದ ಹಸ್ತಪರುಷದಿಂದ
ಸೇವಿಸುವರು.
ಸೂಳೆಯರ ಕಂಡಲ್ಲಿ ವೀಳ್ಯವ ಕೊಟ್ಟು
ಆ ವೀಳ್ಯವ ಅವರು ಅರ್ಧ ಕಡಿದು ಕೊಟ್ಟರೆ ತಿಂಬುವರು.
ಎಲ್ಲಿದೆಯಯ್ಯಾ ನಿಮ್ಮ ಹಸ್ತಪರುಷ ?
ಮೋಹದ ಪುತ್ರರಿಗೆ ಆವುದಾನೊಂದು
ಅಮೃತಫಲವ ತಂದುಕೊಟ್ಟು
ಆ ಪುತ್ರರು ಅದರ ಅರ್ಧ ಫಲವ ಸೇವಿಸಿ
ತಮ್ಮ ತಂದೆಗೆ ನೀ ತಿನ್ನೆಂದು ಕೊಟ್ಟರೆ
ಆ ಪುತ್ರನ ಮಮಕಾರದಿಂ ಎಂಜಲೆಂಬುದನ್ನರಿಯದೆ
ತಿಂಬುವರಿಗೆ ಎಲ್ಲಿಯದಯ್ಯ ಹಸ್ತಪರುಷ ?
ಇಂತಪ್ಪವರು ಪ್ರಸಾದಿಗಳೆಂದಡೆ
ಶಿವಜ್ಞಾನಿಗಳಾದ ಶರಣರು ಕಂಡು
ತಮ್ಮ ಹೊಟ್ಟೆಹುಣ್ಣಾಗುವತನಕ
ಶಬ್ದಮುಗ್ಧರಾಗಿದ್ದರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫೮ ||

೧೬೨

ಅಚ್ಚಪ್ರಸಾದಿಗಳೆಂದು ಹೆಸರಿಟ್ಟುಕೊಂಡು
ಪ್ರಸಾದಿಗಳ ಕಂಡರೆ ಅಗಲನೆಲ್ಲವ ನೀರಿನಿಂದ ತೊಳೆತೊಳೆದು
ಮುಸುರಿಗೆ ಬಿಟ್ಟ ಎಮ್ಮೆಯಂತೆ ಕುಡಿದು,
ಆಯತಮಾಡಿ ಅಗಲನೆಲ್ಲವ ನೆಕ್ಕಿ ನೀರ ತೊಂಬಲವೆಲ್ಲ ತೆಗೆವರು.
ಆರೂ ಇಲ್ಲದ ವೇಳೆಯಲ್ಲಿ ರಣಬೀರರಂತೆ
ಕೂಳ ತಿಂದು ಚಲ್ಲಾಡಿ,
ತುದಿಹಸ್ತವ ತೊಳೆದು ಹೋಗುವವರಿಗೆ
ಅಚ್ಚಪ್ರಸಾದವೆಲ್ಲಿಹುದಯ್ಯ ?
ದೇಹಕ್ಕೆ ವ್ಯಾಧಿ ಸಂಘಟಿಸಿದಲ್ಲಿ
ತನ್ನ ಖಬರು ತನಗೆ ವಿಸ್ಮೃತಿಯಾಗಲು
ಆ ವೇಳೆಯಲ್ಲಿ ಅನ್ನ ಉದಕವ ಆರು ನೀಡಿದಡೆಯೂ

ಜೀವನ ಕಕಲಾತಿಗೆ ತಾ ಮಲಗಿರ್ದ
ಹಾಸಿಗೆಯಲ್ಲಿ ಏಳದೆ ಮಲಗಿರ್ದಲ್ಲಿ
ಅನ್ನ ಉದಕವ ತಿಂಬುವವರಿಗೆ
ಎಲ್ಲಿಹುದಯ್ಯ ಅಚ್ಚಪ್ರಸಾದ ?
ಇಂತಪ್ಪ ವ್ರತಭ್ರಷ್ಟ ಸೂಳೆಯಮಕ್ಕಳು
ನುಚ್ಚಬಡಕರಲ್ಲದೆ ಇವರು ಅಚ್ಚಪ್ರಸಾದಿಗಳಾಗಬಲ್ಲರೆ ?
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫೯ ||

**ಬೇಡರ ಕನ್ನಪ್ಪಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೧೬೪

ಅಚ್ಚಪ್ರಸಾದ ನಿಚ್ಚಪ್ರಸಾದ ಸಮಯಪ್ರಸಾದ
ಏಕಪ್ರಸಾದ ಎಂಬರಯ್ಯಾ.
ಈ ನಾಲ್ಕು ಪ್ರಸಾದಿಗಳ ವಿವರ ಎಂತೆಂದಡೆ :
ಹಲ್ಲುಕಡ್ಡಿ ದರ್ಪಣ ಮುಳ್ಳು ಸ್ತ್ರೀಸಂಭೋಗ
ಮೊದಲಾದ ದಿವಾರಾತ್ರಿಯಲ್ಲಿ ಜಂಗಮಕ್ಕೆ
ಸಕಲ ಪದಾರ್ಥವನು ಅರ್ಪಿಸಿ
ಮರಳಿ ತಾ ಭೋಗಿಸಬಲ್ಲಾತನೆ ಅಚ್ಚಪ್ರಸಾದಿಗಳೆಂಬರು.
ತ್ರಿಕಾಲದಲ್ಲಿ ನಿತ್ಯ ತಪ್ಪದೆ ಜಂಗಮವನರ್ಚಿಸಿ
ಪಾದೋದಕ ಪ್ರಸಾದವ ಸಲಿಸಬಲ್ಲಾತನೆ
ನಿಚ್ಚ ಪ್ರಸಾದಿಗಳೆಂಬರು.
ತಮ್ಮ ಸಮಯಾಚಾರದ ಜಂಗಮವ ಕಂಡಲ್ಲಿ
ಪಾದೋದಕ ಪ್ರಸಾದ ಸಲಿಸಬಲ್ಲಾತನೆ
ಸಮಯಪ್ರಸಾದಿಗಳೆಂಬರು.
ಶ್ರೀಗುರೂಪದೇಶವ ಪಡೆದ ಸಮಯದಲ್ಲಿ
ಪಾದೋದಕ ಪ್ರಸಾದವ ಸೇವಿಸಿ
ಮರಳಿ ಪಾದೋದಕಪ್ರಸಾದವ ಸೇವಿಸದಾತನೆ
ಏಕಪ್ರಸಾದಿಗಳೆಂಬರು.
ಇಂತೀ ಚತುರ್ವಿಧಪ್ರಸಾದಿಗಳು
ನಮ್ಮ ನಿರ್ಮಾಯಪ್ರಭುವಿಂಗೆ ಸಲ್ಲರು
ಅದೇನು ಕಾರಣವೆಂದಡೆ, ಇವರು ಕರ್ಮಕಾಂಡಿಗಳಾದ ಕಾರಣ.

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೦ ॥

೧೬೫

ಎಮ್ಮ ಶಿವಶರಣರ ಪ್ರಸಾದವಿವರ ಎಂತೆಂದಡೆ :
ಶುದ್ಧಪ್ರಸಾದಸ್ವರೂಪವಾದ ಸದ್ರೂಪಾಚಾರ್ಯನನು
ತನುವಿನಲ್ಲಿ ಸ್ವಾಯತವ ಮಾಡಿ,
ಆ ತನುಪ್ರಕೃತಿ ಆ ಗುರುವಿನಲ್ಲಿ ನಷ್ಟವಾದುದೆ ಅಚ್ಚಪ್ರಸಾದ.
ಸಿದ್ಧಪ್ರಸಾದಸ್ವರೂಪವಾದ ಚಿದ್ರೂಪಲಿಂಗವನು
ಮನದಲ್ಲಿ ಸ್ವಾಯತವ ಮಾಡಿ,
ಆ ಮನೋಪ್ರಕೃತಿ ಆ ಲಿಂಗದಲ್ಲಿ ನಷ್ಟವಾದುದೆ ನಿಚ್ಚಪ್ರಸಾದ.
ಸಿದ್ಧಪ್ರಸಾದಸ್ವರೂಪವಾದ ಪರಮಾನಂದ ಜಂಗಮವನು
ಆತ್ಮದಲ್ಲಿ ಸ್ವಾಯತವ ಮಾಡಿ,
ಆತ್ಮಪ್ರಕೃತಿ ಆ ಜಂಗಮದಲ್ಲಿ ನಷ್ಟವಾದುದೇ ಸಮಯಪ್ರಸಾದ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದತ್ರಯದ
ಏಕಸ್ವರೂಪವಾದ ಮಹಾಪ್ರಸಾದ,
ಅಂತಪ್ಪ ಮಹಾಪ್ರಸಾದಸ್ವರೂಪವಾದ
ಘನಮಹಾಲಿಂಗವು.
ಆ ಘನ ಮಹಾಲಿಂಗವನು
ಆಪಾದ ಮಸ್ತಕ ಪರಿಯಂತರವಾಗಿ,
ಸರ್ವಾಂಗದಲ್ಲಿ ಸ್ವಾಯತವ ಮಾಡಿ
ಆ ಲಿಂಗಪ್ರಕಾಶದಲ್ಲಿ ಸರ್ವಾಂಗದ ಪ್ರಕೃತಿ ನಷ್ಟವಾಗಿ,
ಅಂತಪ್ಪ ಘನಮಹಾಲಿಂಗದೇಕಸ್ವರೂಪ
ತಾನಾದುದೇ ಏಕಪ್ರಾಸದ.
ಇಂತೀ ನಾಲ್ಕುತರದ ಪ್ರಸಾದವ ಕೊಂಡವರು ಆರೆಂದಡೆ :
ಹಿಂದಕ್ಕೆ ಕಲ್ಯಾಣಪುರದಲ್ಲಿ ಬಸವಾದಿ ಪ್ರಭುದೇವರಾಂತ್ಯಮಾದ
ಏಳುನೂರೆಪ್ಪತ್ತು ಪ್ರಮಥಗಣಂಗಳು,
ಇನ್ನು ಮುಂದೆ ಶಿವಜ್ಞಾನೋದಯವಾಗಿ
ಶ್ರೀಗುರುಕಾರುಣ್ಯವ ಪಡೆದು,
ಲಿಂಗಾಂಗಸಂಬಂಧಿಗಳಾದ ಶಿವಶರಣರಿಗೆ
ಇದೇ ಪ್ರಸಾದವು ನೋಡೆಂದನಯ್ಯಾ

ನಮ್ಮ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೧ ॥

೧೬೬

ಅರಣ್ಯದ ಅಡ್ಡಗುಡ್ಡದ ಸರೋವರದಲ್ಲಿರುವ ಹಂದಿಯ
ಉಕ್ಕಿನ ಬಿಲ್ಲತಂತಿಯ ನಾರಿಗೆ,
ಗುರಿಯಿಲ್ಲದ ಸರಳ ಹೂಡಿ ಹೊಡೆಯಲು
ಬಿಲ್ಲು ಮುರಿದು, ನಾರಿ ಹರಿದು, ಬಾಣ ತಾಗಿ,
ಹಂದಿ ಸತ್ತು ಬಾಣ ಉಳಿಯಿತು.
ಆ ಬಾಣದಿಂದ ಸತ್ತ ಹಂದಿಯ
ಕಾಲು, ಕೊಳಗ, ಹಲ್ಲು, ಕೋರಿ, ಕಣ್ಣು,
ತಲೆ, ಕರಳು, ಮಿದಡು, ಚರ್ಮ, ಕೂದಲ ಮೊದಲಾದವನು ತೆಗೆದು
ಉಳಿದುದನು ಸೀರಿಲ್ಲದೆ ಹೆಸರಿಟ್ಟು,
ಬೆಂಕಿಯಿಲ್ಲದೆ ಸುಟ್ಟು, ಪಾಕವ ಮಾಡಿ,
ಎನ್ನ ನಿರ್ಮಾಯಪ್ರಭುವಿಂಗೆ ಅರ್ಪಿಸಿ,
ಆ ಪ್ರಭುವಿನ ಮಹಾಪ್ರಸಾದವ ಕೊಂಡು
ಕಾಯಕವ ಮಾಡುತಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೨ ॥

೧೬೭

ಇಂತಪ್ಪ ಶಿವಪ್ರಸಾದದ ಮಹಾಘನವನರಿಯದೆ
ಒಬ್ಬರುಂಡು ಮಿಕ್ಕುದ ಬೆಕ್ಕುನಾಯಿಗಳು ತಿಂದಂತೆ
ಒಬ್ಬ ಹೇಸಿಮೋರಿ ಕಾಶಿನಜಂಗಮವು ತಿಂದು
ಮಿಕ್ಕಿದ ರೊಟ್ಟಿ ನುಚ್ಚಿಗೆ ಪ್ರಸಾದವೆಂದು
ತಪ್ಪು ಮಾಡಿದವರಂತೆ ಅಡ್ಡ ಅಡ್ಡ ಬಿದ್ದು
ಅವನ ಎಂಜಲವ ತೆಗೆದು ತಮ್ಮ ಅಗಲಾಗ ನೀಡಿಕೊಂಡು,
ತಿಂಬ ಮೂಳ ಹೊಲೆಮಾದಿಗರಿಗೆ ಶಿವಪ್ರಸಾದಯೆಲ್ಲಿಹುದಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ ? ॥ ೧೬೩ ॥

## ಮಹೇಶ್ವರನ ಪ್ರಾಣಲಿಂಗಿ

೧೬೮

ಪ್ರಾಣಲಿಂಗಿಗೆ ಪದಾರ್ಥಪ್ರೇಮವುಂಟೆ ?
ಪ್ರಾಣಲಿಂಗಿಗೆ ಪ್ರಪಂಚದ ಮೋಹವುಂಟೆ ?
ಪ್ರಾಣಲಿಂಗಿಗೆ ಸ್ಥಲಕುಲದ ಅಭಿಮಾನ,
ಕುಲಗೋತ್ರದ ಹಂಗು ಉಂಟೆ ?
ಪ್ರಾಣಲಿಂಗಿಗೆ ಮಾತಾ-ಪಿತಾ, ಸತಿ-ಸುತ
ಬಂಧುಗಳ ಸ್ನೇಹಿತರ ಮೋಹವುಂಟೆ ?
ಇಂತೀ ಸರ್ವರಲ್ಲಿ ಮಮಕಾರ ಉಳ್ಳಾತ ಅಂಗಪ್ರಾಣಿಯಲ್ಲದೆ
ಲಿಂಗಪ್ರಾಣಿ ಆಗಲರಿಯನು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೮ ॥

೧೬೯

ಅಂಗದ ಮೇಲೆ ಇಷ್ಟಲಿಂಗವ ಧರಿಸಿ
ಪೂಜೋಪಚಾರವ ಮಾಡುವವರು ಲಿಂಗಪ್ರಾಣಿಗಳಲ್ಲ.
ಎನ್ನ ಗುರುವೆಂದು ಭಾವಿಸಿ ಶರಣೆಂದು
ನಮಸ್ಕಾರ ಮಾಡುವವರು ಲಿಂಗಪ್ರಾಣಿಗಳಲ್ಲ.
ಜಂಗಮವೆಂದು ನಂಬಿ, ವಿಶ್ವಾಸ ಬಲಿದು,
ಪಾದಪೂಜೆಯ ಮಾಡಿ
ಪಾದೋದಕ ಪ್ರಸಾದವ ಕೊಂಬುವವರು ಲಿಂಗಪ್ರಾಣಿಗಳಲ್ಲ.
ಇಂತೀ ತ್ರಿಮೂರ್ತಿಗಳ ಪೂಜೆಯನ್ನು ಬಿಟ್ಟು,
ಬಿಡದೆ ಪಿಡಿದು ಪೂಜಿಸುವವರು
ಪ್ರಾಣಲಿಂಗಿಗಳೆಂಬೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೯ ॥

**ಚೆರಿಕೇರಿ ಕಾಮಣ್ಣಂಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೧೭೦

ಒಂದು ಜಡಿಯ ಬಿಚ್ಚಿ ಸಹಸ್ರ ಹುರಿಗೂಡಿದ ಒಂದು ಹಗ್ಗ.
ಮೂರು ಹುರಿಗೂಡಿದ ಒಂದು ಹಗ್ಗ.

ಒಂದು ಹುರಿಗೂಡಿದ ಒಂದು ಹಗ್ಗ.
ನಾಲ್ಕು ಹುರಿಗೂಡಿದ ಒಂದು ಹಗ್ಗ.
ಆರು ಹುರಿಗೂಡಿದ ಒಂದು ಹಗ್ಗ.
ಹತ್ತು ಹುರಿಗೂಡಿದ ಒಂದು ಹಗ್ಗ.
ದ್ವಾದಶ ಹುರಿಗೂಡಿದ ಒಂದು ಹಗ್ಗ.
ಷೋಡಶ ಹುರಿಗೂಡಿದ ಒಂದು ಹಗ್ಗ.
ಎರಡು ಹುರಿಗೂಡಿದ ಒಂದು ಹಗ್ಗ.
ಇಂತೀ ಹುರಿಗೂಡಿದ ಹಗ್ಗ ಮೊದಲಾದ
ಅನೇಕ ಹುರಿಗೂಡಿದ ಒಂದು ಅಖಂಡ ಹಗ್ಗವಮಾಡಿ,
ನಾಲ್ಕು ಹುರಿ ಹಗ್ಗದಿಂ ಬ್ರಹ್ಮನ ಕಟ್ಟಿ,
ಷಡುಹುರಿ ಹಗ್ಗದಿಂ ವಿಷ್ಣುವಿನ ಕಟ್ಟಿ,
ದಶಹುರಿ ಹಗ್ಗದಿಂ ರುದ್ರನ ಕಟ್ಟಿ,
ದ್ವಾದಶಹುರಿ ಹಗ್ಗದಿಂ ಈಶ್ವರನ ಕಟ್ಟಿ,
ಷೋಡಶಹುರಿ ಹಗ್ಗದಿಂ ಸದಾಶಿವನ ಕಟ್ಟಿ,
ದ್ವಿಹುರಿ ಹಗ್ಗದಿಂ ಶಿವನ ಕಟ್ಟಿ,
ಸಹಸ್ರ ಹುರಿಹಗ್ಗದಿಂ ಮರ್ತ್ಯದರಸನ ಕಟ್ಟಿ,
ಮೂರು ಹುರಿಹಗ್ಗದಿಂ ಸ್ವರ್ಗಲೋಕದರಸನ ಕಟ್ಟಿ,
ಒಂದು ಹುರಿಹಗ್ಗದಿಂ ಪಾತಾಳಲೋಕದರಸನ ಕಟ್ಟಿ,
ಅನಂತ ಹುರಿಗೂಡಿದ ಅಖಂಡ ಹಗ್ಗದಿಂ
ಚತುರ್ದಶಭುವನಯುಕ್ತವಾದ ಬ್ರಹ್ಮಾಂಡವ ಕಟ್ಟಿ,
ಕಾಯಕವ ಮಾಡುತಿರ್ದನಯ್ಯ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ.
ಈ ಭೇದವ ಬಲ್ಲವರು ಲಿಂಗಸಂಬಂಧಿಗಳು
ಈ ಭೇದವ ತಿಳಿಯದವರು ಅಂಗಸಂಬಂಧಿಗಳು. ॥ ೧೬೬ ॥

೧೬೧

ಮೇಲುಗಿರಿಯಮೇಲಣ ಪಕ್ಷಿ ಉತ್ಸಾಯವಾಗಿ
ಉಭಯ ರೆಕ್ಕೆಯಿಂದ ಗಗನಕ್ಕೆ ಹಾರಿ,
ತ್ರಿಭುವನ ಮೊದಲಾದ ಚತುರ್ದಶಭುವನದಲ್ಲಿ ಮರಿಯನಿಕ್ಕಲು,
ಆ ಮರಿಯ ವಿಲಾಸದಿಂ
ಹಲಬರು ರೋಧನಂಗೈಯುತ್ತಿಪ್ಪರು.

ಇವರಬ್ಬರವ ಕೇಳಿ ಉತ್ತರದೇಶದ ಕಪ್ಪಿ
ಆರ್ಭಟಿಸಿ ಉರಿಯನುಗುಳಿ,
ಸುನಾದಸ್ವರದಿಂದ ಧ್ವನಿಯಮಾಡಿ,
ಆ ಸುಸ್ವರನಾದವ ಕೇಳಿ ಪೂರ್ವದಿಕ್ಕಿನ
ಕಾಳೋಗರವೆಂಬ ಸರ್ಪನು ಹೊರಟು
ಉರಿಯ ಬೆಳಕಿನಲ್ಲಿ ಮನುಜರ ಕಚ್ಚಿ
ಉರಿಯ ನುಂಗಿ ಸರ್ಪ ಸತ್ತು
ಸತ್ತ ಸರ್ಪನ ಕಪ್ಪಿ ನುಂಗಿ
ಎತ್ತ ಹೋದಿತ್ತೆಂದರಿಯೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೭ ॥

೧೬೨

ಪಂಚವರ್ಣದ ವಟವೃಕ್ಷದ ಘಟ್ಟದಲ್ಲಿ
ಕಿಷ್ಕಿಂದಕೋಣೆಯೊಳಗೆ ಅಡಗಿರ್ದ
ಅಗ್ನಿ ಪುಟವಾಗಿ
ಕೋಣೆ ವಟವೃಕ್ಷದ ಘಟ್ಟವ ದಹಿಸಿ,
ವರ್ಣ ಉಳಿದು ನಿರ್ವರ್ಣವ ಕೂಡಿ ನಿರ್ವಯಲಾಯಿತ್ತು.
ಇದ ತಿಳಿಯಬಲ್ಲರೆ ಪ್ರಾಣಲಿಂಗಿ ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೮ ॥

೧೬೩

ಇಂತೀ ವಿಚಾರವನು ತಿಳಿಯದೆ
ಪ್ರಾಣಲಿಂಗಿ ಪ್ರಾಣಲಿಂಗಿ ಎಂದು ಹೆಸರಿಟ್ಟು,
ಇಷ್ಟಲಿಂಗದಲ್ಲಿ ಅವಿಶ್ವಾಸವ ಮಾಡಿ,
ಕ್ರಿಯಾಚಾರದಲ್ಲಿ ಅನಾಚಾರಿಯಾಗಿ,
ಜೀವಾತ್ಮನೇ ಪರಮಾತ್ಮನೆಂದು ಅಹಂಕರಿಸಿ,
ದೇಹದ ಸಕಲಕರಣವಿಷಯಂಗಳಲ್ಲಿ ಮನಮಗ್ನವಾಗಿ
ತನ್ನ ನಿಜದ ನಿಲವ ಮರೆದು,
ಪರರಿಗೆ ಶಿವಶರಣಂಗಳ ವಚನವ ನೋಡಿ
ಶಿವಾನುಭಾವವ ಹೇಳುವ ಕುನ್ನಿ ಮನುಜರ

ಕೂಗ್ಯಾಡಿ ಕೂಗ್ಯಾಡಿ ನರಕದಲ್ಲಿಕ್ಕೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೬೯ ॥

## ಮಹೇಶ್ವರನ ಶರಣ

೧೭೪

ಶರಣರು ಶರಣರು ಎಂದು ಹೆಸರಿಟ್ಟುಕೊಂಬಿರಿ,
ಶರಣರ ಪರಿಯಾರು ಬಲ್ಲರಯ್ಯಾ ಎಂದಡೆ :
ಕಾಲಿಲ್ಲದ ಹೆಳವ, ಕೈಯಿಲ್ಲದ ಮೋಟ,
ಕಣ್ಣಿಲ್ಲದ ಕುರುಡ, ತಲೆಯಿಲ್ಲದ ಮಂಡೂಕ,
ಈ ನಾಲ್ವರು ಬಲ್ಲರಲ್ಲದೆ,
ಉಳಿದ ಭವಭಾರಿಗಳೆತ್ತ ಬಲ್ಲರಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭೦ ॥

೧೭೫

ನೀರಲ ಫಲ, ಉತ್ತತ್ತಿ, ಮಾವಿನ ಹಣ್ಣಿನಂತೆ
ಇರುವರು ಮರ್ತ್ಯರು.
ಹಲಸು, ತೆಂಗು, ದಾಳಿಂಬರದಂತೆ ಇರುವರು
ಸ್ವರ್ಗದವರು.
ಹಾಲು ಸಕ್ಕರೆ ಬೆಲ್ಲ ತುಪ್ಪದಂತೆ ಇರುವರು ನಿಮ್ಮವರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭೧ ॥

**ಕೊರವರ ಸಂಕಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೧೭೬

ಆರೂ ಇಲ್ಲದ ಅರಣ್ಯಕ್ಕೆ ಪೋಗಿ,
ನಾನಾ ವರ್ಣದ ಕಟ್ಟಿಗೆಯ ತಂದು,
ಸೂರ್ಯವರ್ಣದ ಕಟ್ಟಿಗೆಯಿಂದ ಗಳಿಗೆಯ ಬಂಧಿಸಿ,
ಚಂದ್ರವರ್ಣದ ಕಟ್ಟಿಗೆಯಿಂದ ಗುಮ್ಮಿಯ ಬಂಧಿಸಿ,
ಅಗ್ನಿವರ್ಣದ ಕಟ್ಟಿಗೆಯಿಂದ ಬುಟ್ಟಿಯ ಬಂಧಿಸಿ,
ಉಳಿದ ವರ್ಣದ ಕಟ್ಟಿಗೆಯಿಂದ ತಟ್ಟಿ, ಹೆಡಗಿಯ ಬಂಧಿಸಿ,

ಜ್ಯೋತಿವರ್ಣದ ಕಟ್ಟಿಗೆಯಿಂದ ಊರೆಲ್ಲವ ಬಂಧಿಸಿ,
ಇಂತೀ ಪದಾರ್ಥವ ಮಾರಿ, ಕಾಯಕವ ಮಾಡುತಿರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೭೨ ||

೧೭೩

ನೆಲನಿಲ್ಲದ ಭೂಮಿಯಲ್ಲಿ ಪುಟ್ಟಿದ
ವೃಕ್ಷದ ಬೇರು ತಂದು,
ಆ ಬೇರಿನಿಂದ ಮೂರೆಸಳ ತೆಗೆದು,
ಆರು ಕಾಲು ಹಚ್ಚಿ, ಒಂದು ಬುಟ್ಟಿಯ ಹೆಣೆದು,
ಆ ಬುಟ್ಟಿಯನ್ನು ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರೆಂಬ
ಪಂಚಮೂರ್ತಿಗಳು ಬಂದರೆ ಕೊಡೆನು.
ಕೈಕಾಲು ಕಣ್ಣಿಲ್ಲದ ಅಧಮ ಮೋಟನು ಬಂದರೆ ಕೊಟ್ಟೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೭೩ ||

೧೭೪

ಕತ್ತೆಯ ಕಟ್ಟಲಿಲ್ಲಾ, ಕತ್ತೆಯಿಲ್ಲದೆ ಅರಣ್ಯಕ್ಕೆ ಹೋಗಲಿಲ್ಲ.
ಕತ್ತೆಯ ಕಾಲು ಮುರಿದು ಕಣ್ಣು ಕಳೆದು ಅಡವಿಗೆ ಹೋಗಿ,
ಬೇರಿಲ್ಲದೆ ಪುಟ್ಟಿ, ಪರ್ಣ ಶಾಖೆಯಿಲ್ಲದೆ ಪಲ್ಲವಿಸದ
ವೃಕ್ಷದ ಕಟ್ಟಿಗೆಯ ತಂದು
ಮುಪ್ಪುರದರಸುಗಳಿಗೆ ಕೊಟ್ಟು,
ಭಿಕ್ಷವಕೊಂಡು ಆರಿಗೂ ಕೊಡದೆ ಇರ್ದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೭೪ ||

೧೭೫

ಮೂರಾರು ಬಾಗಿಲಲ್ಲಿ ಹೋಹ ಕರುವ
ಹುರಿಯಿಲ್ಲದ ಕಣ್ಣಿಯಲ್ಲಿ ಬಂಧಿಸಿ,
ಅನ್ನ ಉದಕವಿಲ್ಲದೆ ಬದುಕಿ,
ಕಂಡವರ ನುಂಗಿ, ಅಂಗೈಯಲ್ಲಿ ಅಡಗಿತ್ತು.
ಈ ಭೇದವ ತಿಳಿಯಬಲ್ಲರೆ ಶಿವಶರಣನೆಂಬೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೭೫ ||

೧೮೦

ಅಮ್ಮನ ಮೊಮ್ಮಗಳ ಗಂಡ
ಪುಟ್ಟಿದಲ್ಲಿ ಹೊಂದದೆ, ಹೊಂದಿದವರ ಹಿಂಗದೆ,
ಅಂಗಜನರಮನೆಯ ನಂದಾದೀವಿಗೆಯ ಬೆಳಗು ಕುಂದದೆ
ತಂದೆ - ತಾಯಿಯ ಕೊಂದು
ಕಮಲದಲ್ಲಿ ಸತ್ತು ಎತ್ತ ಹೋದನೆಂದರಿಯೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭೬ ॥

೧೮೧

ಹಗಲಳಿದು ಇರುಳಲ್ಲಿ ಒಂದು ಕತ್ತೆಯನೇರಿ,
ಇಬ್ಬರ ಹೆಂಡರ ಮದುವೆಯಾಗಿ,
ಒಬ್ಬಳು ಕರಾಂಡ, ಒಬ್ಬಳು ಅಜಾಂಡ.
ಕರಾಂಡವೆಂಬ ಸತಿಗೆ ಕತ್ತೆಯ ಕೊಟ್ಟೆ;
ಅಜಾಂಡವೆಂಬ ಸತಿಗೆ ಕಾಂಡವ ಕೊಟ್ಟೆ.
ಒಬ್ಬಳ ಹಿಂದೆ ಒಬ್ಬಳ ಮುಂದೆ ಮಲಗಿ
ಇಬ್ಬರ ಸಂಗದಿಂ ಒಂದು ಶಿಶುವು ಹುಟ್ಟಿ,
ಒಬ್ಬಳ ಬಿಟ್ಟು ಒಬ್ಬಳ ನುಂಗಿ ಶಿಶುವು ಎನ್ನ ನುಂಗಿತ್ತು.
ಆ ಶಿಶುವ ನಾ ನುಂಗಿದೆನೆಂಬುದ ನೀನರಿ ನಾನರಿಯೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭೭ ॥

## ಮಹೇಶ್ವರನ ಐಕ್ಯ

೧೮೨

ಕಾಲಿಲ್ಲದೆ ನೂರಾವಂದುಯೋಜನ ನಡೆದು,
ಕಣ್ಣಿಲ್ಲದೆ ಸಾವಿರದ್ವೈವತ್ತೆರಡು ಕೋಶವ ನೋಡಿ,
ಕೈಯಿಲ್ಲದೆ ಇರುಳು ಬಿಟ್ಟು ಹಗಲು ಹಿಡಿದು,
ನೀರುಸುಟ್ಟು ಬೂದಿಯ ಧರಿಸಬಲ್ಲಾತನೇ ಐಕ್ಯ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭೮ ॥

೧೮೩

ಈರಾರುಮಣೆಯ ಲೆಕ್ಕಕ್ಕೆ ನಿಲುಕದು.
ಮೂರಾರು ವೇಳೆಯಲ್ಲಿ ಮುಳುಗಿದರೆ ನಿಲುಕದು.
ಒಂಬತ್ತು ಬಾಗಿಲವನಿಕ್ಕಿ ಕಣ್ಣುಮುಚ್ಚಿದಡೆ ನಿಲುಕದು.
ಎರಡು ಮೂರುಳ್ಳನ್ನಕ್ಕ ನಿಲುಕದು.
ಇಂತಲ್ಲದೆ ತಾನಳಿದು ನೀನೆಂಬುದ
ಮರೆದವರಿಗೆ ನಿಲುಕುವುದು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭೯ ॥

೧೮೪

ಅರಗಿನ ಭೂಮಿ ಅಗ್ನಿಕುಂಡದ ಉದಕದಲ್ಲಿ
ಬೇರಿಲ್ಲದ ವೃಕ್ಷಪುಟ್ಟಿ, ಶಾಖೆಯಿಲ್ಲದೆ ಪಲ್ಲವಿಸಿ,
ತಳಿರಿಲ್ಲದೆ ಕೊನರಾಗಿ, ಮೊಗ್ಗೆಯಿಲ್ಲದೆ ಹೂವಾಗಿ,
ಹೂವಿಲ್ಲದೆ ಕಾಯಾಗಿ, ಕಾಯಿಲ್ಲದೆ ಹಣ್ಣಾಗಿ,
ಹಣ್ಣಿಲ್ಲದೆ ರಸತುಂಬಿ ತೊಟ್ಟು ಬಿಟ್ಟಿತ್ತು.
ಆ ಹಣ್ಣಗೆ ಕಾಲಿಲ್ಲದೆ ನಡೆದು, ಕಣ್ಣಿಲ್ಲದೆ ನೋಡಿ,
ಕೈಯಿಲ್ಲದೆ ಪಿಡಿದು, ಬಾಯಿಲ್ಲದೆ ಸವಿದು,
ಜಿಹ್ವೆಯಿಲ್ಲದೆ ರುಚಿಸಿ, ತೃಪ್ತಿಯಿಲ್ಲದೆ ಪರಿಣಾಮಿಸಿ,
ಸಂತೋಷವಿಲ್ಲದೆ ನಿಶ್ಚಿಂತನಾದ
ಈ ಭೇದವ ಬಲ್ಲರೆ
ಘನಲಿಂಗಿಯಾಗಿ ನಿಜಲಿಂಗೈಕ್ಯ
ಅನಾದಿ ಶರಣನೆಂದನು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮೦ ॥

೧೮೫

ಮಹಾಮಲೆಯ ವ್ಯಾಘ್ರನ ನೀರ ನಕ್ರ ಕಚ್ಚಿ,
ನಕ್ರನ ಹಂದಿ ಕಚ್ಚಿ, ಹಂದಿಯ ನಾಯಿ ಕಚ್ಚಿ,
ನಾಯಿಯ ಕಾಳೋರಗ ಕಚ್ಚಿ ಹೆಡೆಯೆತ್ತಿ ಆಡಲಾಗಿ,
ಆಕಾಶದ ಹದ್ದು ಕಂಡು ಎರಗಲಾಗಿ,
ಹೆಡೆಯುಡಿಗಿ ಸುಸಿಗಳು ಬಿಟ್ಟು,

ಹಂದಿ ಸತ್ತು, ನಕ್ರ ಬಿದ್ದು, ವ್ಯಾಘ್ರ ಪಲಾಯನವಾಗಿ,
ಹಾವ ಹದ್ದು ಕಚ್ಚಿ, ಹದ್ದು ಹಾವ ಕಚ್ಚಿ,
ಹದ್ದಳಿದು ಹಾವು ಉಳಿದ ಭೇದವ
ತಾನೆ ಬಲ್ಲನಲ್ಲದೆ ಈ ಲೋಕದ ಜಡಜೀವಿಗಳೆತ್ತ ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮೧ ॥

೧೮೬

ಅಷ್ಟಪರ್ವತ ಮೇಲುಗಿರಿಯ ಮೇಲೊಂದು
ಪಕ್ಕವಿಲ್ಲದ ಹಕ್ಕಿ ಮೂರುಗೂಡನಿಕ್ಕಿ,
ತಲೆಯಿಲ್ಲದ ಮರಿಮಾಡಿ,
ಹಾಲು ಹೊಲಸು ಕೂಡಿ ತಿನ್ನಿಸಿ.
ಕಣ್ಣು ಬಂದು ಗೂಡ ಕೆಡಿಸಿ,
ಹಕ್ಕಿಯ ಕೊಂದು, ಪುಚ್ಚ ಬಲಿದು.
ಪಕ್ಕ ಬಂದು ಪರ್ವತವ ಮೆಟ್ಟಿ ಗಗನಕ್ಕೆ ಹಾರಿ
ಎತ್ತ ಹೋಯಿತೆಂಬುದ ಬಲ್ಲರೆ ಐಕ್ಯನೆಂಬುದು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮೨ ॥

೧೮೭

ನಾ ಪುಟ್ಟಿದುದ ಎಲ್ಲರೂ ಬಲ್ಲರು.
ನೀ ಪುಟ್ಟಿದುದನಾರೂ ಅರಿಯರಲ್ಲಾ !
ನನ್ನ ಗುಣಚಾರಿತ್ರ ಎಲ್ಲರೂ ಬಲ್ಲರು ;
ನಿನ್ನ ಗುಣಚಾರಿತ್ರವನಾರೂ ಅರಿಯರಲ್ಲಾ !
ಎನ್ನಾಟ ಸೂಳೆಯರ ಬ್ಯಾಟ
ನಿನ್ನಾಟ ಹೊಲತಿಯರ ಕೂಟ.
ಎನ್ನವರು ನಿನ್ನ ಸೇರರು, ನಿನ್ನವರು ಎನ್ನ ಸೇರರು.
ಇಂತೀ ಉಭಯದ ಸಂದ ತಿಳಿದಾತನೇ ಐಕ್ಯ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮೩ ॥

೧೮೮

ಅಂಗೈಯೊಳಗಿನ ಕೂಸು ಆಕಾಶವ ನುಂಗಿ,
ಮಂಗಳಾಂಗಿಯ ಸಂಗವ ಮಾಡಿ

ಕಂಗಳಿಲ್ಲದವನ ಕೈಪಿಡಿದು,
ಕೋಲ ಮುರಿದು, ಕಾಲ ಕಡಿದು,
ಕಮಲದ ಹಾಲು ಕುಡಿದು,
ಸತ್ತು ಎತ್ತ ಹೋಯಿತೆಂದರಿಯೆನಯ್ಯಾ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೮೪ ||

೧೮೯

ಇಂತಪ್ಪ ಲಿಂಗೈಕ್ಯವಹ ಭೇದವ ತಿಳಿಯದೆ
ಮೂಢಮತಿಯಿಂದ ಕಾಡಲಿಂಗವ ಕೈಯಲ್ಲಿ ಪಿಡಿದು,
ಮೈಯಲ್ಲಿ ಬೂದಿಯ ಧರಿಸಿ,
ಗುಪ್ಪಗಂಹರ ಗುಹೆಗಳಲ್ಲಿ ಕಲ್ಲಪಡಿಯಲ್ಲಿ ಪರ್ಣಶಾಲೆಯ ಬಂಧಿಸಿ,
ಅನ್ನ ಉದಕ ನಿದ್ರೆಯ ತೊರೆದು,
ಪರ್ಣಾಹಾರವ ಭಕ್ಷಿಸಿ,
ತನುವನೊಣಗಿಸಿ, ಮನವ ಬಳಲಿಸಿ,
ಆತ್ಮನ ಸತ್ವಗುಂದಿ, ಚಳಿ ಮಳಿ ಗಾಳಿ ಬಿಸಿಲುಗಳಿಂದ,
ಕಲ್ಲುಮರದಂತೆ ಕಷ್ಟಬಟ್ಟರೆ,
ಇಂತಪ್ಪವರು ಲಿಂಗೈಕ್ಯವಾಗಲರಿಯರು ;
ಕಡೆಯಲ್ಲಿ ಭವಭಾರಿಗಳು.
ಮತ್ತೆಂತೆಂದಡೆ :
ತಮ್ಮ ನಿಲವ ತಾವರಿಯದೆ
ಎಲ್ಲಿ ಕುಳಿತರೂ ಇಲ್ಲ ; ಎಲ್ಲಿ ಹೋದಡೆಯೂ ಇಲ್ಲ.
ಏನು ಮಾಡಿದಡೆಯು ವ್ಯರ್ಥವಲ್ಲದೆ ಸ್ವಾರ್ಥವಿಲ್ಲ.
ಅದೇನು ಕಾರಣವೆಂದಡೆ :
ಸುಜ್ಞಾನೋದಯವಾಗಿ ಶ್ರೀಗುರುಕಾರುಣ್ಯವ ಪಡೆದು
ಲಿಂಗಾಂಗಸಂಬಂಧಿಯಾಗಿ
ಸರ್ವಾಂಗಲಿಂಗಮಯ ತಾನೆಂದು ತಿಳಿದು,
ಆ ಘನಮಹಾ ಇಷ್ಟಬ್ರಹ್ಮದಲ್ಲಿ ಬೇರೆಯಲ್ಲದೆ
ಕೂಡಬಲ್ಲರೆ ಅದೇ ಲಿಂಗೈಕ್ಯ ಎಂದನಯ್ಯ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೮೫ ||

## ಪ್ರಸಾದಿಸ್ಥಲ

ಸೂತ್ರ: ಇಂತು ನೈಷ್ಠಿಕಾಭಕ್ತಿಯಿಂದ ಆಚರಿಸಿದ ಶಿವಶರಣನು, ಅವಧಾನಭಕ್ತಿ ಯಿಂದಾಚರಿಸಿ ಪ್ರಸಾದಿಯಾಗುತ್ತಿರ್ದನಾಗಿ ಮುಂದೆ ಪ್ರಸಾದಿಸ್ಥಲವಾದುದು.

೧೯೦

ಪ್ರಸಾದ ಪ್ರಸಾದವೆಂದು ನುಡಿಯಬಹುದಲ್ಲದೆ,
ಪ್ರಸಾದದ ಘನವನಾರು ಬಲ್ಲರಯ್ಯಾ ?
ಪ್ರಸಾದವೆಂಬುದು ಪರಕ್ಕೆಪರವಾಗಿರ್ಪುದು.
ಪ್ರಸಾದವೆಂಬುದು ಪರತರ ಮುಕ್ತಿದೋರುವುದು.
ಪ್ರಸಾದವೆಂಬುದು ಪರಮಪದವಿಯನೀವುದು.
ಪ್ರಸಾದವೆಂಬುದು ಪರಂಜ್ಯೋತಿಸ್ವರೂಪವನುಳ್ಳುದು.
ಪ್ರಸಾದವೆಂಬುದು ಪರಬ್ರಹ್ಮನಾಮವುಳ್ಳುದು.
ಪ್ರಸಾದವೆಂಬುದು ಮಹಾಜ್ಞಾನಪ್ರಕಾಶವನುಳ್ಳುದು.
ಪ್ರಸಾದವೆಂಬುದು ಸ್ವಾನುಭಾವಸಮ್ಯಜ್ಞಾನ,
ಜ್ಞಾನ, ಸುಜ್ಞಾನ, ಮಹಾಜ್ಞಾನ, ಶಿವಜ್ಞಾನವೆಂಬ
ಷಡ್ವಿಧಜ್ಞಾನಸ್ವರೂಪವಾದ ಕರಕಮಲದಲ್ಲಿ
ಪ್ರಕಾಶಮಯವಾಗಿ ತೋರುವ ಘನಮಹಾಲಿಂಗವು.
ಅಂತಪ್ಪ ಘನಮಹಾ ಇಷ್ಟಬ್ರಹ್ಮದಲ್ಲಿ
ಎರಡಳಿದು ಕೂಡಿ ಬೆರೆದು ಬೇರಿಲ್ಲದೆ ಇರಬಲ್ಲಡೆ
ಆತನೆ ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿ, ಏಕಪ್ರಸಾದಿ
ಇಂತೀ ಚತುರ್ವಿಧಪ್ರಸಾದದೇಕಸ್ವರೂಪಾದ
ಮಹಕ್ಕೆ ಮಹವಾದ, ಘನಕ್ಕೆ ಘನವಾದ
ಪರಶಿವನ ಮಹಾಪ್ರಸಾದಿಯೆಂದನು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೮೬ ||

೧೯೧

ಪ್ರಾಸದವೆಂಬುದು ಪುಣ್ಯಪಾಪವೆಂಬುಭಯ ಕರ್ಮವ
ಸಂಹರಿಸುವುದು.
ಪ್ರಸಾದವೆಂಬುದು ಉತ್ಪತ್ತಿ, ಸ್ಥಿತಿಲಯಂಗಳ
ಸಂಹರಿಸುವುದು.
ಪ್ರಸಾದವೆಂಬುದು ಭವಗಜಕ್ಕೆ ಅಂಕುಶವಾಗಿರ್ಪುದು.

ಪ್ರಸಾದವೆಂಬುದು ಪರತರಮುಕ್ತಿಗೆ ಹಡಗಾಗಿರ್ಪುದು.
ಪ್ರಸಾದವೆಂಬುದು ಎನ್ನ ಮರಿಸಿ ನಿನ್ನರುಹುತೋರುವುದು.
ಪ್ರಸಾದವೆಂಬುದು ಮಾತಾ-ಪಿತ ಸತಿ-ಸುತರ ಬಂಧುಗಳ
ಮೊದಲಾದ ಸಕಲಜನಂಗಳ ಹಂಗುದೊರೆಸಿ
ನಿನ್ನ ಗುರುಲಿಂಗಜಂಗಮದ ಹಂಗಿನಲ್ಲಿರಿಸುವುದು.
ಪ್ರಸಾದವೆಂಬುದು ಪರಮಜ್ಞಾನಿಗಳಾದ ಶಿವಶರಣರಿಗೆ
ಅಮೃತಮಯವಾಗಿ ತೋರುವುದು.
ಪ್ರಸಾದವೆಂಬುದು ಭಿನ್ನಜ್ಞಾನಿಗಳಾದ
ಜೀವಾತ್ಮರಿಗೆ ಮಹಾಕಠಿಣವಾಗಿ ತೋರುವುದು.
ಇಂತಪ್ಪ ಶಿವಪ್ರಸಾದದ ಘನವನರಿಯದೆ
ನುಚ್ಚು ರೊಟ್ಟಿ ಪ್ರಸಾದವೆಂದು ಪಡಕೊಂಡು,
ಲಿಂಗಕ್ಕೆ ತೋರಿ, ತಮ್ಮಂಗಕ್ಕೆ ಹೊಂದಿದಲ್ಲಿ ದುರ್ಗಂಧವಾಗಿ,
ಮಲಮೂತ್ರ ವಿಸರ್ಜಿಸುವ ಮಂಗಮೂಳ ಹೊಲೆಯರಿಗೆ
ಪ್ರಸಾದಿಗಳೆಂದಡೆ ಮೆಚ್ಚರಯ್ಯಾ ನಿಮ್ಮ ಪ್ರಸಾದಪ್ರಮಥರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೧೮೭||

೧೯೨

ಪ್ರಸಾದವೆಂಬುದು ಆಕಾರವಲ್ಲ ನಿರಾಕಾರವಲ್ಲ,
ಸಗುಣವಲ್ಲ, ನಿರ್ಗುಣವಲ್ಲ,
ಶ್ವೇತ, ಪೀತ, ಹರಿತ, ಮಾಂಜಿಷ್ಟ, ಕಪೋತ, ಮಾಣಿಕ್ಯವೆಂಬ
ಷಡ್ವರ್ಣಸ್ವರೂಪ ತಾನಲ್ಲ.
ಇಂತಪ್ಪ ಶಿವಪ್ರಸಾದವನು ಕಂಗಳ ಕಂಡು,
ಕೈಯಿಲ್ಲದವ ಪಿಡಿದು,
ಕೈಕಾಲುಕಣ್ಣುಳ್ಳವರು ಕಾಣದೆ,
ಭವಕ್ಕೆ ಭಾಜನವಾದರು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೧೮೮||

೧೯೩

ಶಿವ ಶಿವಾ, ನಾವು ಗುರುಲಿಂಗಜಂಗಮದ
ಅಚ್ಚಪ್ರಸಾದಿಗಳು ನಿಚ್ಚಪ್ರಸಾದಿಗಳು ಏಕಪ್ರಸಾದಿಗಳೆಂದು
ಸಮಯಪ್ರಸಾದಿಗಳು ನುಡಿದುಕೊಂಬುವ,

ಮತಿಭ್ರಷ್ಟ ಮರುಳಮಾನವರ ನಾನೇನೆಂಬೆನಯ್ಯಾ ?
ಅದೇನು ಕಾರಣವೆಂದಡೆ :
ಪಾತಾಳಾದಿ ಸ್ವರ್ಗಾಂತ್ಯಮಾದ ತ್ರೈಭುವನಂಗಳು
ಉತ್ಪತ್ಯವಾಗುವುದಕ್ಕಿಂತ ಮುನ್ನವೆ,
ನಾನಾರು, ನಾನೆಲ್ಲಿದ್ದೆನೆಂದು ತನ್ನ ತಾನರಿದು
ನಿಲ್ಲಬಲ್ಲಾತನಿಗೆ ಗುರುವುಂಟು,
ಅದಲ್ಲದೆ ಅತಳ, ವಿತಳ, ಸುತಳ, ಮಹಾತಳ,
ರಸಾತಳ, ತಳಾತಳ, ಪಾತಾಳವೆಂಬ ಕೆಳಗೇಳುಲೋಕ.
ಮತ್ತಂ, ಭೂಲೋಕ, ಭುವರ್ಲೋಕ, ಸುವರ್ಲೋಕ, ಜನರ್ಲೋಕ,
ತಪರ್ಲೋಕ, ಸತ್ಯಲೋಕ, ಮಹಾಲೋಕವೆಂಬ ಮೇಲೇಳುಲೋಕ.
ಇಂತೀ ಈರೇಳುಲೋಕವು ಜಲಪ್ರಳಯವಾಗಿ ಮುಳುಗ್ಯಾಡಲು
ರುದ್ರಲೋಕೊಂದು ಉಳಿಯಿತ್ತು.
ಆ ರುದ್ರಲೋಕವು, ಅತಂಪ್ಪ ರುದ್ರಲೋಕದಲ್ಲಿರುವ
ಸನಕಸನಂದಾದಿ ಮುನಿಜನಂಗಳೆಲ್ಲರು,
ಅದಲ್ಲದೆ, ಬ್ರಹ್ಮಾದಿ ಸದಾಶಿವಾಂತ್ಯಮಾದ ದೇವ ದಾನವರು
ಮೊದಲಾದ ತೆತ್ತೀಸಕೋಟಿ ದೇವರ್ಕಳು,
ಆ ರುದ್ರನು ಇಂತಿವರೆಲ್ಲರು
ಉತ್ಪತ್ಯವಾಗದಕ್ಕಿನ್ನ ಮುನ್ನವೆ,
ನಾನಾರು, ನಾನೆಲ್ಲಿದ್ದೆ, ನನ್ನ ಹೆಸರೇನು,
ನಾನಾವ ಕುಲದವನು ನಾನೆಲ್ಲಿಂದ ಹುಟ್ಟಿಬಂದೆ ?
ಆವಾಗ ಎನಗೆ ತಂದಿ-ತಾಯಿಗಳಾರು ?
ಆ ತಾಯಿ-ತಂದೆಗಳ ಹೆಸರೇನು ?
ಎಂದು ವಿಚಾರಿಸಿ,
ತನ್ನ ತಾನರಿದು ನಿಲ್ಲಬಲ್ಲಡೆ,
ಆತನಿಗೆ ಲಿಂಗವುಂಟು ಜಂಗಮವುಂಟು
ತೀರ್ಥಪ್ರಸಾದಿ ಎಂದೆನ್ನಬಹುದಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮೯ ॥

೧೯೦

ಇಂತಪ್ಪ ನಿರ್ಣಯವನು ಸ್ವಾನುಭಾವಜ್ಞಾನದಿಂ ತಿಳಿದು
ಶಿವಜ್ಞಾನಿಗಳಾದ ಶಿವಶರಣರಿಗೆ,

ಅಚ್ಚ, ನಿಚ್ಚ, ಸಮಯ ಪಕಪ್ರಸಾದಿಗಳೆಂದೆನ್ನಬಹುದು.
ಭಕ್ತಾದಿ ಐಕ್ಯಾಂತಮಾದ ಷಟ್‌ಸ್ಥಲಬ್ರಹ್ಮ ಎಂದೆನ್ನಬಹುದು.
ಅಂಗಸ್ಥಲ ೪೪, ಲಿಂಗಸ್ಥಲ ೫೭
ಇಂತೀ ಪಿಂಡಾದಿ ಜ್ಞಾನಶೂನ್ಯಾಂತಮಾದ
ನೂರೊಂದುಸ್ಥಲ ಮೊದಲಾದ
ಸರ್ವಾಚಾರಸಂಪನ್ನನೆಂದೆನ್ನಬಹುದು.
ಇಂತೀ ಭೇದವನರಿಯದೆ ತಮ್ಮ ತಾವಾರೆಂಬುದು
ತಿಳಿಯದಿರ್ದಂಥ ಮತಿಭ್ರಷ್ಟ ಹೊಲೆಮಾದಿಗರಿಗೆ
ಅದೆಲ್ಲಿಯದೊ ಗುರುಲಿಂಗಜಂಗಮದ ತೀಥಪ್ರಸಾದಸಂಬಂಧ ?
ಅದೆಲ್ಲಿಯದೋ ಅಚ್ಚ, ನಿಚ್ಚ, ಸಮಯ ಪಕಪ್ರಸಾದದಸಂಬಂಧ ?
ಇಂತಪ್ಪ ಗುರುಲಿಂಗಜಂಗಮದ ತೀರ್ಥಪ್ರಸಾದಕ್ಕೆ
ಅಂದೇ ಹೊರಗಾಗಿ ಮತ್ತೆ ಮರಳಿ
ಇಂದು ನಾವು ಗುರುಲಿಂಗಜಂಗಮದ
ತೀರ್ಥಪ್ರಸಾದ ಪ್ರೇಮಿಗಳೆಂದು,
ಆ ತ್ರಿಮೂರ್ತಿಗಳ ತಮ್ಮಂಗದಿಂ ಭಿನ್ನವಿಟ್ಟು,
ತ್ರಿಕಾಲಂಗಳಲ್ಲಿ ಸ್ನಾನವ ಮಾಡಿ,
ಜಪ, ತಪ, ಮಂತ್ರ, ಸ್ತೋತ್ರಗಳಿಂದ ಪಾಡಿ,
ಪತ್ರಿ, ಪುಷ್ಪ ಮೊದಲಾದುದರಿಂ
ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಅರ್ಚಿಸಿ,
ನಿತ್ಯನೇಮದಿಂ ಶೀಲ ವ್ರತಾಚಾರಂಗಳಿಂದ
ಸಕಲ ಕ್ರಿಯಗಳನಾಚರಿಸಿ ಭಿನ್ನಫಲಪದವ ಪಡದು,
ಕಡೆಯಲ್ಲಿ ಎಂಬತ್ತುನಾಲ್ಕುಲಕ್ಷ ಯೋನಿದ್ವಾರದಲ್ಲಿ
ರಾಟಣದಂತೆ ತಿರುಗುವ ಭವಭಾರಿಗಳಾದ ಜೀವಾತ್ಮರಿಗೆ
ಪ್ರಸಾದಿಗಳೆಂದಡೆ ಮೆಚ್ಚರಯ್ಯಾ ನಿಮ್ಮ ಶರಣರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೯೦ ॥

೧೯೫

ಅಂತಪ್ಪ ಭವಭಾರಿಗಳಾದ ಜೀವಾತ್ಮರು
ಒಂದುಗೂಡಿ ದಾಸೋಹಮಾಡಿ.
ಅಗ್ನಿಜ್ವಾಲೆಯಲ್ಲಿ ಅರತು ಹೋಗುವ ನೀರಿಗೆ
ಪಾದೋದಕವೆಂದು ಹೆಸರಿಟ್ಟು.

ಪೃಥ್ವಿಯಲ್ಲಿ ಬೆಳೆದ ಹದಿನೆಂಟು ಜೀನಸಿನ ಧಾನ್ಯವ ತಂದು,
ಅಗ್ನಿ ನೀರಿನಿಂದ ಅಟ್ಟು, ಪಾಕ ಮಾಡಿದ ಅನ್ನಕ್ಕೆ
ಪ್ರಸಾದವೆಂದು ಹೆಸರಿಟ್ಟು,
ಅಯ್ಯಾ ಹಸಾದ ಮಹಾಪ್ರಸಾದ ಪಾಲಿಸೆಂದು
ಎಲ್ಲರೂ ಕೈಯ್ಯೊಡ್ಡಿ ಕೈಕೊಂಡು,
ತಮ್ಮ ಕೈಯಲ್ಲಿರ್ದ ಇಷ್ಟಲಿಂಗಕ್ಕೆ ತೋರಿ ತೋರಿ
ಲಿಂಗಕ್ಕೆ ಕೊಟ್ಟೆವೆಂದು ತಮ್ಮ ಉದರಾಗ್ನಿ
ಹಸಿವು ತೃಷೆಯನಡಗಿಸಿಕೊಂಡು,
ಮುಂಜಾವಿನಲ್ಲೆದ್ದು ಮಲಮೂತ್ರ ವಿಸರ್ಜಿಸುವ
ಮೂಳಹೊಲೆಮಾದಿಗರಿಗೆಲ್ಲಿಹುದಯ್ಯಾ
ಆ ಗುರುಲಿಂಗಜಂಗಮದ ತೀರ್ಥಪ್ರಸಾದಸಂಬಂಧ ?
ಇಂತಪ್ಪ ಮತಿಭ್ರಷ್ಟ ಮರುಳಮಾನವರ
ಭಿನ್ನಕ್ರಿಯಾಚಾರವನು ಸುಜ್ಞಾನಿ ಶರಣ ಕಂಡು
ಹೊಟ್ಟೆ ಹುಣ್ಣಾಗುವನ್ನಬರ ನಕ್ಕು
ಶಬ್ದಮುಗ್ಧನಾಗಿ ಸುಮ್ಮನಿದ್ದನು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೧೯೧||

೧೯೨

ಪಾದೋದಕ ಪಾದೋದಕವೆಂದು ಕೊಂಬಿರಿ,
ಎಲ್ಲರಿಗೆ ಎಲ್ಲಿಹುದೋ ಪಾದೋದಕ ?
ಈ ಪಾದೋದಕದ ಭೇದವ ಬಲ್ಲರೆ ಹೇಳಿರಿ,
ಅರಿಯದಿದ್ದರೆ ಕೇಳಿರಿ.
ಪಾದೋದಕವೆಂಬುದು ಪಾತಾಳಾದಿ ಪರಲೋಕಾಂತ್ಯಮಾದ
ಅಖಿಳಕೋಟಿ ಬ್ರಹ್ಮಾಂಡಗಳ ಗರ್ಭೀಕರಿಸಿಕೊಂಡಿರ್ದ
ಪರಿಪೂರ್ಣತ್ವವೇ ಪಾದೋದಕ.
ಪಾದೋದಕವೆಂಬುದು ಶರಣನ ಸರ್ವಾಂಗವನೊಳಕೊಂಡು
ಥಳಥಳಿಸಿ ಹೊಳೆಯುವ ಚಿದ್ರಸವೇ ಪಾದೋದಕ.
ಇಂತಪ್ಪ ಪಾದೋದಕದ ಭೇದ ಬಲ್ಲವರು
ನಿಜಗುಣಸ್ವಾಮಿಗಳು ಅಜಗಣ್ಣ ತಂದೆಗಳು
ನಿಜಮಂಚಣ್ಣ ಮೊದಲಾದ ಅಸಂಖ್ಯಾತ ಮಹಾಪ್ರಮಥಗಣಂಗಳು ಬಲ್ಲರಲ್ಲದೆ,
ಸತ್ತುಹೋಗುವ ಹೇಸಿಮೂಳ ಕತ್ತೆಗಳೆತ್ತ ಬಲ್ಲರಯ್ಯಾ ?

ಇಂತಪ್ಪ ಪರಾಪರ ನಾಮವನುಳ್ಳ
ಪರಂಜ್ಯೋತಿಸ್ವರೂಪವಾದ
ಪರತತ್ವ ಪಾದೋದಕವನರಿದು ಕೊಡಬಲ್ಲರೆ
ಗುರುಲಿಂಗಜಂಗಮವೆಂದೆನ್ನಬಹುದು.
ಇಂತೀ ವಿಚಾರವ ತಿಳಿದುಕೊಳ್ಳಬಲ್ಲರೆ
ಸತ್ಯಸದ್ಭಕ್ತರೆಂದೆನ್ನಬಹುದು.
ಇಂತಪ್ಪ ಭೇದವನರಿಯದೆ ಮತಿಭ್ರಷ್ಟ ಮರುಳಮಾನವರು
ಆಣವಾದಿ ಕಾಮಿಕಾಂತ್ಯಮಾದ
ಮಲತ್ರಯದ ಬಲೆಯಲ್ಲಿ ಶಿಲ್ಕಿ,
ದೇಹಾದಿ ಮನಾಂತ್ಯಮಾದ
ಅರುಪತ್ತಾರುಕೋಟಿ ಕರಣಾದಿ ಗುಣಂಗಳು ಮೊದಲಾದ
ಸಕಲಸಂಸಾರವಿಷಯಲಂಪಟದಲ್ಲಿ ಮಗ್ನರಾಗಿ,
ಮಂದಮತಿ ಅಧಮ ಜಂಗಮದ ಕಾಲ
ತ್ರಿಕಾಲದಲ್ಲಿ ಜಲದಿಂದ ತೊಳೆದು ಪಾದೋದಕವೆಂದು
ಬಟ್ಟಲ ಬಟ್ಟಲ ತುಂಬಿ ನೀರ ಕುಡಿದು
ತಮ್ಮ ದೇಹದ ಪ್ರಾಣಾಗ್ನಿಯ ತೃಷೆಯನಡಗಿಸಿಕೊಂಡು
ಗಳಿಗೆ ತಾಸಿನ ಮೇಲೆ ಮೂತ್ರವಿಸರ್ಜಿಸಿ
ಮಡಿಮೈಲಿಗೆಯೆಂದು ನುಡಿಯುವ ಮಲದೇಹಿಗಳ
ಮೂಗ ತುಟಿತನಕ ಕೊಯ್ದು
ಇಟ್ಟಂಗಿಯಲೊರಸಿ ಕಟಬಾಯಿ ಸೀಳಿ ಕನ್ನಡಿಯತೋರಿ
ಮೇಲಮುಂದಾಗಿ ಅಟ್ಟೆಂದ ಕಾಣಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ
ನಿರ್ಮಾಯಪ್ರಭುವೆ. ||೧೯೨||

೧೯೩

ಪ್ರಸಾದ ಪ್ರಸಾದವೆಂದು ನುಡಿದುಕೊಂಡುಂಬಿರಿ.
ಎಲ್ಲರಿಗೆಲ್ಲಿಹುದೊ ಶಿವಪ್ರಸಾದ ?
ಇಂತಪ್ಪ ಪ್ರಸಾದದ ಘನವಬಲ್ಲರೆ ಹೇಳಿರಿ,
ಅರಿಯದಿದ್ದರೆ ಕೇಳಿರೋ.
ಪ್ರಸಾದವೆಂಬುದು, ಪರಾಪರನಾಮವುಳ್ಳ
ಪರಮಾನಂದವೇ ಪ್ರಸಾದ ಕಾಣಿರೋ.
ಪ್ರಸಾದವೆಂಬುದು, ಪರಮನಿರಂಜನ ಪರಬ್ರಹ್ಮವೇ

ಪ್ರಸಾದ ಕಾಣಿರೋ.
ಪ್ರಸಾದವೆಂಬುದು, ಅಖಿಳಕೋಟಿ ಬ್ರಹ್ಮಾಂಡಗಳ
ಗಮಿಸುವುದಕ್ಕೆ ಲಯಿಸುವುದಕ್ಕೆ ಮಾತೃಸ್ಥಾನವಾದ
ಚಿತ್ಪ್ರಕಾಶವೇ ಪ್ರಸಾದ ಕಾಣಿರೋ.
ಪ್ರಸಾದವೆಂಬುದು, ಪರಶಿವತತ್ವ ಪರಿಪೂರ್ಣತ್ವ
ಪರಂಜ್ಯೋತಿ ಪರಮಪ್ರಕಾಶವೇ ಪ್ರಸಾದ ಕಾಣಿರೋ.
ಇಂತಪ್ಪ ವಿಚಾರವ ತಿಳಿದು ಪ್ರಸಾದವ ಕೊಡಬಲ್ಲರೆ
ಗುರುಲಿಂಗಜಂಗಮರೆಂದೆನ್ನಬಹುದು.
ಇಂತಪ್ಪ ನಿರ್ಣಯವ ತಿಳಿದು ಪ್ರಸಾದವ ಕೊಳಬಲ್ಲಡೆ
ಪ್ರಸಾದಿಗಳೆನ್ನಬಹುದು;
ಪ್ರಳಯವಿರಹಿತರೆಂದೆನ್ನಬಹುದು.
ಸತ್‌ಸದ್ಭಕ್ತರೆಂದೆನ್ನಬಹುದು.
ಇಂತೀ ಭೇದವ ತಿಳಿಯದೆ ನೀರು ಕೂಳಿಗೆ
ಪಾದೋದಕ ಪ್ರಸಾದವೆಂದು
ಒಡಲಹೊರವುದು ಪ್ರಸಾದವಲ್ಲ.
ಅಂತಪ್ಪ ಘನಮಹಾಪ್ರಸಾದದ
ಸಕೀಲಸಂಬಂಧವನರಿದು ನಿರ್ಧರಿಸಿದವರಾರೆಂದರೆ,
ಹಿಂದಕ್ಕೆ ಬಸವಾದಿ ಪ್ರಭುದೇವರಾಂತ್ಯಮಾದ
ಏಳುನೂರಾ ಎಪ್ಪತ್ತು ಪ್ರಮಥಗಣಂಗಳು
ಕೊಂಡುದು ಇದೇ ಪ್ರಸಾದ.
ಇನ್ನು ಮುಂದಿನವರಿಗಾದಡು ಇದೇ ಪ್ರಸಾದ.
ಇಂತಪ್ಪ ಪರತತ್ವಪ್ರಸಾದಕ್ಕೆ
ಸುಜ್ಞಾನಿಗಳಾಗಿ ಸತ್ಕ್ರಿಯಾ ಸಮ್ಯಜ್ಞಾನವೆಂಬ ಎರಡುಕಾಲಿಗೆ
ಷಡ್ವಿಧಭಕ್ತಿ ಎಂಬ ಹಲ್ಲು ಜೋಡಿಸಿ,
ಏಣಿಯ ಹಚ್ಚಿ, ನಿರ್ವಯಲಪದವನೈದಲರಿಯದೆ,
ಅಹಂಕಾರ ಮಮಕಾರವೆಂಬ ಎರಡುಕಾಲಿಗೆ
ಅಷ್ಟಮದವೆಂಬ ಹಲ್ಲುಜೋಡಿಸಿ
ಸಪ್ತವ್ಯಸನಗಳೆಂಬ ಕೀಲುಜಡಿದು
ಷಡ್ವರ್ಗಗಳೆಂಬ ಹಗ್ಗದ ಬಿರಿಯ ಬಂಧಿಸಿ,
ಏಣಿಯ ಯಮಲೋಕಕ್ಕೆ ಹಚ್ಚಿ,
ನರಕವ ಭುಂಜಿಸುವ ನರಕಜೀವಿಗಳಿಗೆ

ಪ್ರಸಾದಿಗಳೆಂದಡೆ ನಿಮ್ಮ ಶರಣ ಚೆನ್ನಬಸವಣ್ಣ ಕಂಡು,
ಇಂತಪ್ಪ ಮೂಳಹೊಲೆಯರ ಮೂಗಕೊಯ್ದು
ಮೆಣಸಿನ ಹಿಟ್ಟು ತುಂಬಿ ಮೂಡಲದಿಕ್ಕಿಗೆ ಅಟ್ಟೆಂದ ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೯೭ ||

೧೯೮

ಕೇಳು ಕೇಳಯ್ಯ ಎನ್ನ ಮತ್ಪ್ರಾಣನಾಥ
ಬಸವಣ್ಣಲಿಂಗತಂದೆ.
ಜಿತೇಂದ್ರಿಯರಲ್ಲಿ ತೀರ್ಥಪ್ರಸಾದ ಇಪ್ಪುದಲ್ಲದೆ
ಕೃತಕೇಂದ್ರಿಗಳಲ್ಲಿ ತೀರ್ಥಪ್ರಸಾದ ಇಪ್ಪುದೇನಯ್ಯಾ?
ಶಿವಜ್ಞಾನೋದಯವಾಗಿ ಶ್ರೀಗುರುಕಾರುಣ್ಯವ ಪಡೆದು
ಲಿಂಗಾಂಗಸಂಬಂಧಿಗಳಾದ ಶಿವಶರಣರಲ್ಲಿ
ಪರಶಿವಲಿಂಗ ಇಪ್ಪುದಲ್ಲದೆ,
ಭಿನ್ನಜ್ಞಾನಿಗಳಾದ ಅಜ್ಞಾನ ನರಕಜೀವಿಗಳಾದ
ಮತಿಭ್ರಷ್ಟಮನುಜರಲ್ಲಿ ಪರಶಿವಲಿಂಗ ಇಪ್ಪುದೇನಯ್ಯ?
ಊರ್ಧ್ವಕುಂಡಲಿಯಲ್ಲಿ ಅಮೃತಕುಂಭ ಇಪ್ಪುದಲ್ಲದೆ,
ಅಧೋಕುಂಡಲಿಯಲ್ಲಿ ಅಮೃತಕುಂಭ ಇಪ್ಪುದೇನಯ್ಯ?
ಚಿತ್ತಸ್ವಸ್ಥಿರವಾದ ಸದ್ಭಕ್ತ ಮಹೇಶ್ವರರ ಹಸ್ತದಲ್ಲಿ
ಚಿದ್ಘನಲಿಂಗವಿಪ್ಪುದಲ್ಲದೆ,
ಕುಚಿತ್ತ ಕುಬುದ್ಧಿ ದುರ್ಭಾವಿಗಳ ಹಸ್ತದಲ್ಲಿ
ಚಿದ್ಘನಲಿಂಗವಿಪ್ಪುದೇನಯ್ಯಾ?
ಉದಯದಲ್ಲಿ ಸೂರ್ಯನು ಹೊರಡುವುನಲ್ಲದೆ,
ಅಸ್ತಮಾನಕ್ಕೆ ಸೂರ್ಯನು ಹೊರಡುವುನೇನಯ್ಯಾ?
ಆಕಾಶದೊಳಗೆ ಮಿಂಚು ಮಿಂಚುವುದಲ್ಲದೆ,
ಭೂಮಿಯೊಳಗೆ ಮಿಂಚು ಮಿಂಚುವುದೇನಯ್ಯ?
ಇಂತೀ ದೃಷ್ಟವಂತೆ ತನ್ನ ತಾನರಿದಂಥ
ಗುರುಹಿರಿಯರಲ್ಲಿ ತೀರ್ಥಪ್ರಸಾದ ಇಪ್ಪುದಲ್ಲದೆ
ತನ್ನ ನಿಜವ ಮರೆದು ಮಲತ್ರಯಯುಕ್ತವಾದ
ದೇಹೋಹಮೆಂದು ಸತಿಯ ಸಂಸಾರದಲ್ಲಿ
ಮನಮಗ್ನವಾಗಿ ಜಡಸಂಸಾರ ಮಾಡುವ
ಜಗಭಂಡ ಹೊಲೆಮಾದಿಗರಲ್ಲಿ ಲಿಂಗವಿಲ್ಲ.

ಲಿಂಗವಿಲ್ಲಾಗಿ ತೀರ್ಥಪ್ರಸಾದವಿಲ್ಲ.
ಇಂತಪ್ಪ ಜಡಮತಿ ನರಕಜೀವಿಗಳ ವಿಸರ್ಜಿಸಿ,
ಸುಜ್ಞಾನೋದಯವಾಗಿ, ಶ್ರೀಗುರುಕಾರುಣ್ಯವ ಪಡೆದು,
ಲಿಂಗಾಂಗಸಮರಸವುಳ್ಳ ಗುರುಲಿಂಗಜಂಗಮದ
ತೀರ್ಥಪ್ರಸಾದವ ಕೊಂಡಡೆ ನರಕ ತಪ್ಪುವದು.
ಮೋಕ್ಷವೆಂಬುದು ಕರತಳಾಮಳಕವಾಗಿ ತೋರುವುದು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೯೪ ॥

೧೯೯

ಶಿವ ಶಿವಾ, ನಾವು ಗುರುಲಿಂಗಜಂಗಮದ
ತೀರ್ಥಪ್ರಸಾದಸಂಬಂಧಿಗಳೆಂದು ನುಡಿದುಕೊಂಬ
ಎಲೆ ಮತಿಭ್ರಷ್ಟ ಮರುಳಮಾನವರಿರಾ,
ನೀವು ಕೇಳಿರೋ, ನಾನು ಹೇಳಲಂಜುವೆನು.
ಹೇಳಿದರೆ ಜಿಗುಪ್ಸೆ, ಹೇಳುವೆನು ಕೇಳಿರೋ.
ಹೊಲಸು ಹಿಡಿಯಬಹುದು, ಪರಸ್ತ್ರೀಗಮನ ಮಾಡಬಾರದು.
ಅದೇನು ಕಾರಣವೆಂದಡೆ:
ಆ ಹೊಲಸಿನ ದೋಷವು ನೀರಿನಿಂದ ತೊಳೆದರೆ
ನಿರ್ಮಲವಾಗಿ ತೋರುವುದು.
ಆ ಹೆಂಗಸಿನ ದೋಷವು ನೀರಿನಿಂದ ತೊಳೆದರೆ ಹೋಗದು,
ಬೆಂಕಿಯಿಂದ ಸುಟ್ಟರೆ ಹೋಗದು.
ಅಂತಪ್ಪ ಹೊಲಸಿಗಿಂತ ಕರಕಷ್ಟವಾದ
ಪೊಂಬಣ್ಣದ ಚರ್ಮದ ಹೆಂಗಸಿನ
ಶೃಂಗಾರದ ಚಲ್ವಿಕೆಯ ಕಂಡು,
ಆಶ್ಚರ್ಯಗೊಂಡು ಬೆಕ್ಕಸ ಬೆರಗಾಗಿ, ಲಿಂಗಕ್ಕೆ ಹೊರಗಾಗಿ
ಆ ಹೆಣ್ಣಿನ ತೊಡೆಯ ಕಣಕಾಲ ಸಂದುಗಳಲ್ಲಿ ಕುಳಿತು,
ಲಿಂಗವ ಹಿಡಿವ ಕರದಲ್ಲಿ ಮಲ ಒಸರುವ ಪುಕಳಿಯ ಹಿಡಿದು,
ಅಮರ್ದಪ್ಪಿ ಗಲ್ಲವ ಕಡಿದು
ಆಕೆಯ ಉಚ್ಚಿ ಪುಚ್ಚಿ, ಹೌಗಿನ ಬಚ್ಚಲಹರಿಗೆ ಮೆಚ್ಚಿ,
ನಿಚ್ಚ ನಿಚ್ಚಕ್ಕೆ ಕಚ್ಚಿ ಕಡಿದಾಡುವ
ಸುಚ್ಚಬಡುಕ ಮರುಳಮಾನವರು,
ಗುರುಹಿರಿಯರು, ಜಂಗಮಲಿಂಗಿಗಳೆಂದು ಕರೆತಂದು,

ನೀರು, ಕೂಳು ನೀಡಿ ತೀರ್ಥಪ್ರಸಾದವೆಂದು ಹೆಸರಿಟ್ಟು,
ದೊಡ್ಡ ದೊಡ್ಡ ಗಡ್ಡದ ಹಿರಿಯರೆಲ್ಲರು ಕೂಡಿ, ದಾಸೋಹ ಮಾಡಿ,
ಎದೆ ದಡ್ಡುಗಟ್ಟುವನ್ನಕ್ಕ ಅಡ್ಡಡ್ಡ ಬಿದ್ದು,
ಅಯ್ಯಾ, ಹಸಾದ ಮಹಾಪ್ರಸಾದ ಪಾಲಿಸೆಂದು ಪಡಕೊಂಡು,
ತಮ್ಮ ಉದರಾಗ್ನಿಯನಡಗಿಸಿಕೊಂಡು,
ಎಂಬತ್ತುನಾಲ್ಕುಲಕ್ಷ ಯೋನಿಯಲ್ಲಿ ತಿರುಗುವ
ಜಗಭಂಡ ಅಚ್ಚಪ್ರತಗೇಡಿ ನಿಜ ಅಪರಾಧಿ
ಕತ್ತೆ ಸೂಳೆಮಕ್ಕಳೆಲ್ಲ
ತೀರ್ಥಪ್ರಸಾದಸಂಬಂಧ, ನಿತ್ಯ ನಿಜಲಿಂಗೈಕ್ಯ
ಸತ್ಯಸದ್ಭಕ್ತರಾಗಬಲ್ಲರೇನಯ್ಯಾ?
ಇಂತಪ್ಪ ಭವಕರ್ಮಿಗಳ ಮುಂದೆ
ಲಿಂಗಾಂಗಸಂಗಸಮರಸದ ಅನುಭಾವವ ನುಡಿಯಲಂಜಿ,
ಶಬ್ದ ಮುಗ್ಧನಾಗಿ ಸುಮ್ಮನಿದ್ದನು ಕಾಣಾ ನಿಮ್ಮ ಶರಣನು
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೯೫ ॥

## ಪ್ರಸಾದಿಯ ಭಕ್ತ

೨೦೦

ಪ್ರಸಾದಗ್ರಾಹಕನಾದ ಸದ್ಭಕ್ತನು
ಭೋಜನಶಾಲೆಯಲ್ಲಿ ಉಣಲಾಗದು.
ರಂಗಮಂಟಪದಲ್ಲಿ ಉಣಲಾಗದು.
ಕೋಣೆಯಲ್ಲಿ ಉಣಲಾಗದು.
ಗೃಹದ ಬಾಗಿಲಲ್ಲಿ ಉಣಲಾಗದು.
ಬಾಹ್ಯದಲ್ಲಿ ಉಣಲಾಗದು, ಒಳಗೆ ಉಣಲಾಗದು.
ಇಂತೀ ಸ್ಥಾನಗಳಲ್ಲಿ ಉಣ್ಣದಾತನೇ
ಶಿವಪ್ರಸಾದಿ ಎಂದೆನಯ್ಯ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೯೬ ॥

೨೦೧

ಗುರುಲಿಂಗಜಂಗಮದ ಪಾದೋದಕ
ಪ್ರಸಾದಪ್ರೇಮಿಗಳೆಂದು,

ನುಡಿದುಕೊಂಬ ನುಡಿಯಜಾಣರಲ್ಲದೆ,
ಆ ತ್ರಿಮೂರ್ತಿಗಳ ಪಾದೋದಕ ಪ್ರಸಾದವ ಸೇವಿಸಿ ಭವಹಿಂಗಿಸಲರಿಯರು.
ಅದೆಂತೆಂದಡೆ :
ಶುದ್ಧಪ್ರಸಾದದಿಂದ ಮರ್ತ್ಯದ ಹಂಗು ಹಿಂಗಿತ್ತು.
ಸಿದ್ಧಪ್ರಸಾದದಿಂದ ಸ್ವರ್ಗದ ಹಂಗು ಹಿಂಗಿತ್ತು.
ಪ್ರಸಿದ್ಧಪ್ರಸಾದದಿಂದ ಪಾತಾಳದ ಹಂಗು ಹಿಂಗಿತ್ತು.
ಮಹಾಪ್ರಸಾದದಿಂದ ಹದಿನಾಲ್ಕುಲೋಕದ ಹಂಗು ಹಿಂಗಿತ್ತು.
ಇಂತೀ ಪ್ರಸಾದದ ಗ್ರಾಹಕದಿಂ
ಗುರು-ಲಿಂಗ-ಜಂಗಮದ ಹಂಗು ಹಿಂಗಿ,
ಸತಿಪತಿಯರು ಸತ್ತು ಅವರೆಲ್ಲಿರ್ದರು ಎಂಬುದನಾರೂ ಅರಿಯರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೯೭ ||

೨೦೨

ಗುರುಲಿಂಗಜಂಗಮದಲ್ಲಿ ಅತ್ಯಂತ ಪ್ರೇಮಿಗಳೆಂದು
ಪರರ ಮುಂದೆ ತಮ್ಮ ಬಿಂಕವ ತೋರುವರು.
ತೋರಿದಂತೆ ಆಚರಣೆಯ ತೋರರು.
ಅದೆಂತೆಂದಡೆ :
ತನ್ನ ದೀಕ್ಷೋಪದೇಶವ ಮಾಡಿದಂಥ ಗುರು
ಮನೆಗೆ ಬಂದರೆ ಮನ್ನಿಸರು.
ನಯನುಡಿಯ ಮಾತನಾಡರು.
ಒಂದು ಹೊನ್ನು ವಸ್ತ್ರವ ಬೇಡಿದರೆ ಇಲ್ಲೆಂಬರಲ್ಲದೆ
ಕೊಟ್ಟು ಸಂತೋಷಪಡಿಸುವವರಿಲ್ಲ.
ಗ್ರಾಮದ ಮಧ್ಯದಲ್ಲಿ ಆವನೊಬ್ಬ
ಜಾತಿಹಾಸ್ಯಕಾರನು ಬಂದು,
ಡೋಲು ಡಮಾಮಿಯ ಹೊಡೆದು,
ಬೊಬ್ಬಿಯ ರವಸದಿಂದ ಮಣ್ಣಾವರಿಸಿ,
ರಟ್ಟೆ ಮಂಡಿಯ ತಿಕ್ಕಿ, ತೊಡೆಯ ಚಪ್ಪರಿಸಿ,
ಕೋ ಎಂದು ಕೂಗಿ,
ಭೂಮಿಗೆ ಕೈ ಹಚ್ಚಿ, ಲಾಗದ ಮೇಲೆ ಲಾಗ ಹೊಡೆದು,
ಅಂತರಪುಟಕಿಯಲ್ಲಿ ಘೂರು ಹೊರಳಿಕೆಯ ಹೊರಳಿ.
ಮುಂದೆ ಬಂದು ನಿಂತು,

ಮಜುರೆಯ ಮೇಲೆ ಮಜುರೆಯ ಹೊಡೆದು,
ಅವರ ಹೆಸರೆತ್ತಿ ಕೊಂಡಾಡಲು,
ಅವರ ಲಾಗಕ್ಕೆ ಮೆಚ್ಚಿ
ಶಾಲು ಶಕಲಾತಿ ಮೊದಲಾದ ವಸ್ತ್ರವ ಕೊಟ್ಟು,
ಕಾಲತೊಡರು ಮುಂಗೈಸರಪಳಿ
ಛತ್ರ ಚಾಮರ ಜಲ್ಲಿ ಮೊದಲಾದ ಚಾಜವ ಕೊಟ್ಟು,
ಸಂತೋಷಪಡಿಸುವರಲ್ಲದೆ ಇಲ್ಲೆಂಬರೇ? ಇಲ್ಲೆನ್ನರಯ್ಯ.
ಮತ್ತಂ,
ಲಿಂಗಪೂಜೆಯ ಮಾಡೆಂದಡೆ ಎನ್ನಿಂದಾಗದೆಂಬರು.
ಲಿಂಗಕ್ಕೆ ಸಕಲಪದಾರ್ಥವನರ್ಪಿಸಿ ಸಲಿಸೆಂದಡೆ ಎನ್ನಿಂದಾಗದೆಂದು,
ಬಂದ ಪದಾರ್ಥವ ಲಿಂಗಕ್ಕೆ ತೋರದೆ
ಬಾಯಿಗೆಬಂದಂತೆ ತಿಂಬುವರು.
ಜಟ್ಟಿಂಗ ಹಿರಿವಡ್ಯಾ ಲಕ್ಕಿ ದುರ್ಗಿ
ಚಂಡಿ ಮಾರಿಯ ಪೂಜಿಸೆಂದಡೆ ತನುಮನವು
ಹೊಳೆಯುಬ್ಬಿದಂತೆ ಉಬ್ಬಿ,
ಹೊತ್ತಾರೆ ಎದ್ದು ಪತ್ರಿ ಪುಷ್ಪವ ತಂದು,
ಒಂದೊತ್ತು ಉಪವಾಸ ಮಾಡಿ,
ಮೈಲಿಗೆಯ ಕಳೆದು ಮಡಿಯನುಟ್ಟು,
ಮನಪೂರ್ವಕದಿಂ ಪೂಜೋಪಚಾರವ ಮಾಡಿ,
ಭೂಮಿಯಲ್ಲಿ ಕಾಯಕಷ್ಟವ ಮಾಡಿ ಬೆಳೆದಂಥ
ಹದಿನೆಂಟು ಜೀನಸಿನ ಧಾನ್ಯವ ತಂದು ಪಾಕ ಮಾಡಿ,
ಆ ದೇವತೆಗಳಿಗೆ ನೈವೇದ್ಯವ ಕೊಟ್ಟು,
ಮರಳಿ ತಾವು ಉಂಬುವರಲ್ಲದೆ,
ಅಂತಪ್ಪ ದೇವತೆಗಳಿಗೆ ಕೊಡದ ಮುನ್ನವೆ
ಸಾಯಂಕಾಲಪರಿಯಂತರವಾದಡೂ
ಒಂದು ಬಿಂದು ಉದಕ ಒಂದಗಳನ್ನವ ಕೊಳ್ಳದೆ,
ತನು-ಮನ ಬಳಲಿಸುವರಯ್ಯಾ.
ಮತ್ತಂ,
ಜಂಗಮಲಿಂಗವು ಹಸಿವು ತೃಷೆ ಆಪ್ಯಾಯನವಾಗಿ
ಮಧ್ಯಾಹ್ನ ಸಾಯಂಕಾಲದೊಳಗೆ ಭಿಕ್ಷಕ್ಕೆ ಬಂದಡೆ,
ಅನುಕೂಲವಿಲ್ಲ, ಮನೆಯೊಳಗೆ ಹಡದಾರ ಗದ್ದಲುಂಟು

ಮನೆಯೊಳಗೆ ಗೃಹಸ್ಥರು ಬಂದಾರೆ,
ಘನಮಾಡಿಕೊಳ್ಳಿರಯ್ಯಾ ಮುಂದಕ್ಕೆ ಎಂಬರಲ್ಲದೆ,
ಅಂತಪ್ಪ ಆಪ್ಯಾಯನವಾದ ಜಂಗಮವ ಕರೆದು
ಅನ್ನೋದಕವ ನೀಡಿ, ತೃಪ್ತಿಯ ಬಡಿಸುವರೆ ? ಬಡಿಸುವದಿಲ್ಲ.
ಊರೊಳಗೆ ಒಬ್ಬ ಪಾರಸ್ತ್ರೀಯಳು ಉಂಡು
ವೀಳ್ಯವಕೊಂಡು ಸಹಜದಲ್ಲಿ ತಮ್ಮ ಗೃಹಕ್ಕೆ ಬಂದಲ್ಲಿ
ಆ ಪಾರಸ್ತ್ರೀಗೆ ಮನೆಯವರೆಲ್ಲರು
ಉಣ್ಣು ಏಳು ಉಂಬೇಳೆಂದು
ಆಕೆಯ ಕರವ ಪಿಡಿದು ಕರೆವರಯ್ಯಾ.
ಅವಳು ಎನಗೆ ಹಸುವಿಲ್ಲೆಂದು ತಮ್ಮ ಗೃಹಕ್ಕೆ ಹೋಗಲು,
ಅವಳು ಹೋದಮೇಲೆ ದೇವರಿಗೆ ಎಡೆಯ ಕಳಿಸಿದಂತೆ ಕಳುಹುವರಯ್ಯ.
ಇಂತಪ್ಪ ತ್ರಿವಿಧಭ್ರಷ್ಟ ಹೊಲೆ ಮಾದಿಗರಿಗೆ
ಗುರು-ಲಿಂಗ-ಜಂಗಮದ ಪ್ರೇಮಿಗಳಾದ ಸದ್ಭಕ್ತರೆಂದಡೆ,
ಶಿವಜ್ಞಾನಿಗಳಾದ ಶಿವಶರಣರು ಕಂಡು ತಮ್ಮೊಳಗೆ ತಾವೇ ನಕ್ಕು
ಅರಿಯದವರಂತೆ ಶಬ್ದಮುಗ್ಧರಾಗಿ ಸುಮ್ಮನೆ ಇರ್ದರು ಕಾಣಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೯೮ ॥

೨೦೩

ಗುರುಪ್ರೇಮಿಯಾದಡೆ ಚತುರ್ವಿಧಭಕ್ತಿಯಿಂದ
ತನುವ ದಂಡಿಸಲಾಗದು.
ಲಿಂಗಪ್ರೇಮಿಗಳಾದಡೆ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ
ಮನವ ಬಳಲಿಸಲಾಗದು.
ಜಂಗಮಪ್ರೇಮಿಗಳಾದಡೆ ಅನ್ನ ವಸ್ತ್ರ ಹದಿನೆಂಟು ಜೀನಸಿನ ಧಾನ್ಯ ಮೊದಲಾದ
ಷೋಡಶಭಕ್ತಿಯಿಂದ ಆತ್ಮನ ಬಳಲಿಸಲಾಗದು.
ಇಂತಪ್ಪ ಭಕ್ತರಿಗೆ ಭವ ಹಿಂಗದು ; ಮುಕ್ತಿಯು ತೋರದು.
ಅದೇನು ಕಾರಣವೆಂದಡೆ :
ತಮ್ಮ ನಿಜವ ಮರೆದು ಕರ್ಮಕಾಂಡಿಗಳಾದ ಕಾರಣ.
ಇಂತಪ್ಪವರ ಭಿನ್ನಕ್ರಿಯಾಚಾರವನು
ಸುಜ್ಞಾನೋದಯವಾದ ಜ್ಞಾನಕಲಾತ್ಮನು
ತನ್ನ ಪರಮಜ್ಞಾನದಿಂ ನಷ್ಟವ ಮಾಡಿ,
ಶ್ರೀಗುರುಕಾರುಣ್ಯವ ಪಡೆದು, ಲಿಂಗಾಂಗಸಂಬಂಧಿಯಾಗಿ,

ಸರ್ವಾಂಗಲಿಂಗಮಯ ತಾನೆಂದು ತಿಳಿದು,
ವಿಚಾರಿಸಿಕೊಂಡು ಪರಶಿವಪರಮೂರ್ತಿಗಳಾದ
ಗುರುಲಿಂಗಜಂಗಮವನ್ನು
ತನ್ನ ತನುಮನದಲ್ಲಿ ಸ್ವಾಯತವಮಾಡಿದ
ಶಿವಶರಣಂಗೆ ಭವ ಹಿಂಗಿ,
ಮುಕ್ತಿ ಎಂಬುದು ಕರತಳಾಮಳಕವಾಗಿ ತೋರುವದು ಕಾಣೆಂದ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೯೯ ॥

೨೦೪

ಇಂದಿನ ಚಿಂತೆಯುಳ್ಳವರೆಲ್ಲ ಹಂದಿಗಳು.
ನಾಳಿನ ಚಿಂತೆಯುಳ್ಳವರೆಲ್ಲ ನಾಯಿಗಳು.
ತನ್ನ ಚಿಂತೆಯುಳ್ಳವರೆಲ್ಲ ಜೋಗಿಗಳು.
ನಿನ್ನ ಚಿಂತೆಯುಳ್ಳವರೆಲ್ಲ ಯೋಗಿಗಳು ನೋಡಾ.
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೦ ॥

೨೦೫

ಉಣ್ಣಬೇಕು, ಉಡಬೇಕು, ಇಡಬೇಕು,
ಭೋಗಿಸಬೇಕೆಂಬರಯ್ಯ.
ಉಂಡದ್ದು ಏನಾಯಿತು ? ಉಟ್ಟಿದ್ದು ಏನಾಯಿತು ?
ಇಟ್ಟಿದ್ದು ಏನಾಯಿತು ? ಭೋಗಿಸಿದ್ದು ಏನಾಯಿತು ?
ಇಂತೀ ವಿಚಾರವ ಬಲ್ಲವರಾದರೆ ಪೇಳಿರಿ,
ಅರಿಯದಿದ್ದರೆ ಕೇಳಿರಿ ಎಲೆ ಮರುಳ ಮನುಜರಿರಾ,
ಅದೆಂತೆಂದಡೆ :
ಮೃಷ್ಟಾನ್ನವಾಗಲಿ, ಕೃಷ್ಣಾನ್ನವಾಗಲಿ ಆವ ಪದಾರ್ಥವಾದಡೇನು
ಉಂಡ ಮೂರು ಘಳಿಗೆಯ ಮೇಲೆ ನರಕವಾಗಿ ತೋರುವದು.
ಆ ಅನ್ನ ಹೆಚ್ಚಾಗಿ ಕೊಂಡಡೆ ಹೊಟ್ಟೆ ಉಬ್ಬಿ
ಕಮರಪರಕಿ ಬಂದು ಕರಸತ್ತ ಮರುವಿನ ಎಮ್ಮೆಯಂತೆ
ಪೃಷ್ಠ ಒದರುವದು.
ಮತ್ತಂ,
ಒಂದು ಹೊನ್ನಾಗಲಿ, ಐದು ಹೊನ್ನಾಗಲಿ,
ಹತ್ತು ಹೊನ್ನಾಗಲಿ, ನೂರು ಹೊನ್ನಾಗಲಿ,

ಇಂತೀ ಹೊನ್ನು ಮೊದಲಾದ
ಹೊನ್ನಿನ ವಸ್ತ್ರ ಶಾಲು ಶಕಲಾತಿ ಮೊದಲಾದ
ಆವ ವಸ್ತ್ರವಾದಡೇನು ಉಟ್ಟು ತೊಟ್ಟು ಪೊದ್ದಗಳಿಗೆಯ ಜಾವದಲ್ಲಿ
ನಿರಿಬಿದ್ದು ದಡಿ ಮಾಸಿ
ಮುಂದೆ ಅವು ವರುಷಾರುತಿಂಗಳಿಗೆ ಸವಮು
ಹಣ್ಣಾಹರದು ಹರಿದು ಹೋಗುವವು.
ಮತ್ತಂ, ಬೆಳ್ಳಿ ಬಂಗಾರ ಮೊದಲಾದ
ವಸ್ತು ಒಡವೆಗಳು ಆವುದಾದರೇನು
ಅಂಗದ ಮೇಲೆ ಇಟ್ಟಲ್ಲಿ
ದಿನಚರ್ಯ ಮಾಸದ ಕಾಲದಲ್ಲಿ
ಸವಸವದು ಸಣ್ಣಾಗಿ ಹೋಗುವವು.
ಮತ್ತಂ, ಕನ್ಯಾಕುಮಾರಿ, ಮಿಂಡಿಹೆಣ್ಣು, ತುಂಟರಂಡಿ,
ಹಲವಾದ ಸ್ತ್ರೀ ಮೊದಲಾದ ಆವಳಾದರೇನು,
ಸಂಗವಾಗದಕ್ಕಿಂತ ಮುನ್ನವೆ ಚಲುವೆ,
ಸಂಗವಾದ ಬಳಿಕ ನೀರಿಲ್ಲದ ವೃಕ್ಷ
ಮೂಲಸಹವಾಗಿ ಕಿತ್ತು ಚೆಲ್ಲಿದಂತೆ.
ಉಭಯ ಸ್ತ್ರೀ ಪುರುಷರ ತನುವು ಜರ್ಜರಿತವಾಗಿ
ಸತ್ವಗುಂದಿ ಕೈಕಾಲ ಲಾಡಿ ಸತ್ತು,
ಕೈಯ್ಯೂರಿ ಏಳುವರು.
ಇಂಥ ಮಾಯಾವಿಲಾಸವ ಶಿವಜ್ಞಾನಿ ಶರಣ ಕಂಡು
ಆರೂ ಅರಿಯದೆ ವಿಸರ್ಜಿಸಿ
ತನ್ನ ಲಿಂಗದ ನೆನಪಿನಲ್ಲಿ ಸ್ವಸ್ಥಿರಚಿತ್ತನಾಗಿರ್ದ ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೧ ॥

೨೦೭

ಉಂಡು ಕಾರುವಾತ ಇಸವ ಕಂಡ.
ಕಾರಿದ್ದು ಉಂಡು ಉಗುಳವಾತ ಹರಳ ಕಂಡ.
ಕಾರಿದ್ದು ಕಂಡು ನುಂಗದೆ ಉಗುಳುವಾತ ಈರಿಸವ ಕಂಡ.
ಕಾರಿದ್ದು ಕಂಡು ಉಗುಳದೆ ನುಂಗುವಾತ ಈರಾಳ ಕಂಡ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೭ ॥

೨೦೭

ಇಂತಪ್ಪ ವಿಚಾರವ ತಿಳಿದು
ಉಪದೇಶವ ಮಾಡಬಲ್ಲಾತನೇ ಗುರುವೆಂಬೆ.
ಇಂತೀ ಭೇದವ ತಿಳಿದು
ಉಪದೇಶವ ಕೊಳಬಲ್ಲಡಾತನೇ ಶಿಷ್ಯನೆಂಬೆ.
ಇಂತಪ್ಪ ನಿರ್ಣಯವ ತಿಳಿದು
ಪಾದೋದಕ ಪ್ರಸಾದವ ಕೊಡಬಲ್ಲಡಾತನೇ
ಜಂಗಮಲಿಂಗಿಯೆಂಬೆ.
ಇಂತೀ ವಿಚಾರವನಳವಡಿಸಿಕೊಂಡು
ಪಾದೋದಕ ಪ್ರಸಾದವ ಕೊಳಬಲ್ಲಡಾತನೇ ಭಕ್ತನೆಂಬೆ.
ಇಂತಪ್ಪ ಶಿವಾಚಾರವ ಬಗೆಯನು ತಿಳಿಯದೆ
ಮಾಡುವ ಮಾಟವೆಲ್ಲಾ ಹೊಳ್ಳುಕುಟ್ಟಿ,
ಕೈ ನೊಂದು ಗಾಳಿಗೆ ತೂರಿದಂತಾಯಿತಯ್ಯಾ.
ಈ ಲೋಕದೊಳಗೆ ಗುರುಶಿಷ್ಯ, ದೇವ ಭಕ್ತರೆಂಬುಭಯರ
ಮೇಳಾಪವ ನೋಡೆಂದ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೦೩ ||

೨೦೮

ಇಂತಪ್ಪ ಗುರುಶಿಷ್ಯರ ಮೇಳಾಪವ ಕಂಡು
ವಿಸರ್ಜಿಸಿದೆನೆಂದು,
ಬಣ್ಣದ ನುಡಿಗಳ ನುಡಿವರಯ್ಯಾ ನಿಮ್ಮ ಶರಣರ ಮುಂದೆ.
ಕೇಳಯ್ಯ ಎನ್ನ ಮತ್ಪ್ರಾಣನಾಥ ಲಿಂಗತಂದೆ.
ತನುವ ಮುಟ್ಟಿದಲ್ಲಿ ಅತ್ತಿಯ ಹಣ್ಣಿನಂತೆ,
ಮನವ ಮುಟ್ಟಿದಲ್ಲಿ ನಸಗುನ್ನಿ ಚುರ್ಚಿಯಂತೆ,
ಧನವ ಮುಟ್ಟಿದಲ್ಲಿ ಉಕ್ಕಿನ ಸಲಾಕೆಯಂತೆ,
ಭಕ್ತರಲ್ಲ ಕತ್ತೆಗಳೆಂಬೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೦೪ ||

೨೦೯

ಎನಗೆ ಭಕ್ತನೆಂಬರು,
ಎನ್ನ ಭಕ್ತಿಚಾರಿತ್ರವ ಪೇಳ್ವೆ ಕೇಳಿರಯ್ಯ.

ಎನ್ನ ಮತ್ಪ್ರಾಣನಾಥಲಿಂಗತಂದೆ
ಗುರುಲಿಂಗಜಂಗಮದ ಭಕ್ತಿಯೆಂದಡೆ
ಎನ್ನ ತನುಮನವು ಕುಗ್ಗುವುದು.
ಮಾರಿ ಮಸಣಿಯ ಭಕ್ತಿಯೆಂದಡೆ ನದಿ ಸರ್ಪನಂತೆ
ಎನ್ನ ತನು-ಮನವು ಉಬ್ಬುವುದು.
ಶಿವಶಾಸ್ತ್ರ, ಶಿವಾನುಭಾವ ಶಿವಮಂತ್ರಬೋಧೆ ಎಂದಡೆ
ಎನ್ನ ಶ್ರೋತ್ರಂಗಳು ಲಾಲಿಸವು.
ಕುಟಿಲ, ಕುಹಕ, ಸಟೆಯ ಶಾಸ್ತ್ರ,
ಕಪಟ ಮಂತ್ರ ಯಂತ್ರ ತಂತ್ರಗಳೆಂದಡೆ
ಎನ್ನುಭಯ ಶ್ರೋತ್ರಂಗಳು ಚೈತ್ರ ವೈಶಾಖ ಮಾಸದಲ್ಲಿ
ಮೊಲ್ಲೆ ಮೊಗ್ಗೆ ಉದಯಕ್ಕೆ ಅರಳಿ
ಹೇಗೆ ಎಸೆಯುವುದು ಹಾಗೆ ವಿಕಸಿತವಾಗಿ,
ಶಬ್ದ ವಿಷಯ ಎಸೆವುದು.
ಹರಪೂಜೆ ಗುರುಪೂಜೆ ಲಿಂಗನಿರೀಕ್ಷಣವೆಂದಡೆ
ಎನ್ನ ನೇತ್ರಂಗಳು ನಿರೀಕ್ಷಿಸವು.
ಆಟ, ನೋಟ, ಸೂಳೆಯರ ಬೇಟ,
ಕನ್ಯಾಸ್ತ್ರೀಯರ ರೂಪಲಾವಣ್ಯವೆಂದಡೆ
ಎನ್ನ ನೇತ್ರದ ರೂಪುವಿಷಯವು
ಬೇಂಟೆಯ ಶ್ವಾನನಂತೆ ಹರಿಯುತಿಪ್ಪುದು.
ಗುರುಲಿಂಗಜಂಗಮದ ತೀರ್ಥಪ್ರಸಾದ ಸೇವಿಸೆಂದಡೆ
ಎನ್ನ ಜಿಹ್ವೆಯು ಸೇವಿಸದು.
ದಾಸಿ ವೇಸಿಯರ ಬಾಯ ತಾಂಬೂಲವೆಂದಡೆ
ಎನ್ನ ಜಿಹ್ವೇಂದ್ರಿಯ ರುಚಿವಿಷಯವು
ಕೀಳುಮಾಂಸಕ್ಕೆ ಮೆಚ್ಚಿ ಹರಿದಂತೆ ಹರಿಯುತ್ತಿಪ್ಪುದು.
ಗುರುಲಿಂಗಜಂಗಮದ ಪಾದಸೇವೆಯೆಂದಡೆ
ಎನ್ನ ತ್ವಕ್ಕು ಜಾಡ್ಯವಾಗಿ ಆಲಿಸದು.
ಸೂಳೆಥಾಳಿಯರ ಅಂಗಸೇವನೆಯೆಂದಡೆ
ಎನ್ನ ತ್ವಕ್ಕು ಉಡ ಉಬ್ಬಿದಂತೆ ಉಬ್ಬುವದು.
ಗುರುಲಿಂಗಜಂಗಮವು ಧರಿಸಿದ ಪುಷ್ಪ ಪತ್ರಿ
ಪರಿಮಳ ಸುಗಂಧ ಚಂದನದ ಸದ್ವಾಸನೆ ಎಂದಡೆ
ಎನ್ನ ಘ್ರಾಣವು ಮುಡಿಯದು.

ವೇಶ್ಯೆ, ದಾಸಿ, ಜಾರಸ್ತ್ರೀಯರು ಧರಿಸಿದ
ಪುಷ್ಪ ಪರಿಮಳ ಗಂಧ ಚಂದನದ
ಸದ್ವಾಸನೆಯೆಂದಡೆ ಎನ್ನ ಘ್ರಾಣವು
ಸಂಪಿಗೆಯರಳಿಗೆ ಭ್ರಮರ ಎರಗಿದಂತೆ ಎರಗುವದು.
ಇಂತಪ್ಪ ಗುಪ್ತಪಾತಕವಾದ ಗುರುದ್ರೋಹಿಗ
ಗುರುಲಿಂಗಜಂಗಮಭಕ್ತನೆಂದಡೆ
ನಗುವರಯ್ಯ ನಿಮ್ಮ ಶರಣರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೦೯ ||

## ಪ್ರಸಾದಿಯ ಮಹೇಶ್ವರ

೨೧೦

ಲಿಂಗನಿಷ್ಠೆಯುಳ್ಳ ವೀರಶೈವ ಮಹೇಶ್ವರರು
ಸಕಲಪದಾರ್ಥವ ಲಿಂಗಕ್ಕೆ ಕೊಡದೆ,
ಎನ್ನಂಗಕ್ಕೆ ಕೊಂಡಡೆ ವ್ರತಕ್ಕೆ ಭಂಗವೆಂದೆಂಬಿರಯ್ಯಾ
ಉದಯಕಾಲದಲ್ಲಿ ಶೌಚಾಚಮನವ ಮಾಡಿ
ಅಗ್ಗಣಿಯ ಬಳಸುವಿರಿ,
ಆವಾಗ ಅವ ಲಿಂಗಕ್ಕೆ ಕೊಡುವಿರಿ.
ಆ ಮೇಲೆ ಹಳ್ಳ ಕೊಳ್ಳ ಕೆರೆ ಬಾವಿ ನದಿಗಳಿಗೆ ಹೋಗಿ,
ಮೃತ್ತಿಕಾದಿಂದ ಹಸ್ತಪಾದಕ್ಕೆ ಮೂರು ವೇಳೆ ಪೂಸಿ
ಮೂರು ವೇಳೆ ತೊಳೆವಿರಿ.
ಆವಾಗ ಅವ ಲಿಂಗಕ್ಕೆ ಕೊಡುವಿರಿ.
ಆ ಮೇಲೆ ಶೌಚಕ್ಕೆ ಒಯ್ವ ಪಾತ್ರೆಯ
ಮೃತ್ತಿಕಾದಿಂದ ತೊಳೆದು,
ತಾ ಉಟ್ಟು, ತೊಟ್ಟ, ಪಾವಡಪಂಕಿಗಳ ನೀರಿನಲ್ಲಿ ಸೆಳೆದು
ಗಾಳಿ ಬಿಸಲಾಗ ಹಾಕುವಿರಿ.
ಆವಾಗ ಅವ ಲಿಂಗಕ್ಕೆ ಕೊಡುವಿರಿ.
ಇಂತೀ ಎಲ್ಲವನು ಶುಚಿ ಮಾಡಿ
ಜ್ಯಾಲಿ ಬೊಬ್ಬುಲಿ ಉತ್ರಾಣಿಕಡ್ಡಿ ಮೊದಲಾದ ಕಡ್ಡಿಗಳ ತಂದು
ಆವಾಗ ತಮ್ಮ ಅಂಗದ ಮೇಲಣ ಲಿಂಗವ ತೆಗೆದು
ಅಂಗೈಯಲ್ಲಿ ಹಿಡಿದು, ಆ ಲಿಂಗಕ್ಕೆ ಮಜ್ಜನ ಮಾಡಿ,

ಮರಳಿ ತಾ ಮುಖಮಜ್ಜನವ ಮಾಡಿ,
ಆ ಮೇಲೆ ತಮ್ಮ ಅಂಗೈಯೊಳಗಿನ
ಇಷ್ಟಲಿಂಗಕ್ಕೆ ಆ ಕಡ್ಡಿಯ ತೋರಿ,
ತೋರಿದಂಥ ಭಾವನೆಯ ಮಾಡುವರು.
ಲಿಂಗದ ಗೊತ್ತು ತಮಗಿಲ್ಲ ;
ತಮ್ಮ ಅಂಗದ ಗೊತ್ತು ಲಿಂಗಕ್ಕಿಲ್ಲ .
ಇಂತಪ್ಪ ಭಿನ್ನವಿಚಾರವನುಳ್ಳ ಮಂಗಮನುಜರಿಗೆ
ಲಿಂಗನೈಷ್ಠೆಯುಳ್ಳ ವೀರಮಹೇಶ್ವರರೆಂದಡೆ
ನಿಮ್ಮ ಶಿವಶರಣರು ಮುಖವೆತ್ತಿ ನೋಡರು.
ಮನದೆರೆದು ಮಾತನಾಡರು,
ತಮ್ಮೊಳಗೆ ತಾವೇ ಮುಗುಳುನಗೆಯ ನಕ್ಕು
ಸುಮ್ಮನಿರುವರು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೬ ॥

೨೧೧

ದಿನಚರಿ ಮಾಸದೊಳಗೆ ಏಳು ವಾರದೊಳಗೆ
ಸೋಮವಾರ ಉಪವಾಸ ಮಾಡಬೇಕೆಂಬಿರಿ.
ದ್ವಾದಶಮಾಸದೊಳಗೆ ಶ್ರಾವಣಸೋಮವಾರ
ಉಪವಾಸಮಾಡಬೇಕೆಂಬಿರಿ.
ಮಾಘಮಾಸದ ಚತುರ್ದಶಿ ಉಪವಾಸ
ರಾತ್ರಿಯಲ್ಲಿ ಜಾಗರಣೆ ಮಾಡಬೇಕೆಂಬಿರಿ.
ಇಂತೀ ವಾರ, ಮಾಸ, ತಿಥಿಯಲ್ಲಿ
ಅನ್ನ ಉದಕವ ತೊರೆದು, ಉಪವಾಸ ಮಾಡಿ,
ಆತ್ಮವ ಬಳಲಿಸಿ, ತನುವನೊಣಗಿಸಿ,
ನೀವು ವ್ರತವನಾಚರಿಸಿದಡೆ
ನಿಮ್ಮ ಆತ್ಮದ್ರೋಹವು ಆ ದೇವತೆಗಳಿಗೆ ತಾಕಿ
ಭವಭವದಲ್ಲಿ ಬೀಳುವರು.
ಇದು ಕಾರಣವಾಗಿ ಉಪವಾಸ ಮಾಡಲಾಗದು.
ಉಪವಾಸ ಮಾಡಿದಲ್ಲಿ ಪ್ರಯೋಜನವಿಲ್ಲ.
ಅದೆಂತೆಂದಡೆ : ಉಂಡುಟ್ಟು ಲಿಂಗವ ಪೂಜಿಸಬೇಕು.
ಉಣಿಸಿ ಉಡಿಸಿ ಜಂಗಮವನರ್ಚಿಸಬೇಕು.

ಕೊಟ್ಟು ಕೊಂಡು ಗುರುವನರ್ಚಿಸಬೇಕು.
ಇಂತೀ ತ್ರಿವಿಧದ ಭೇದ ಬಲ್ಲರೆ
ಉಪವಾಸವ ಮಾಡಬಲ್ಲರೆಂಬೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೦೭ ||

೨೧೩

ಇಂತಪ್ಪ ಲಿಂಗಾಂಗದ ಸಮರಸವ ತಿಳಿಯದೆ,
ಆವ ನೇಮ ವ್ರತವ ಹಿಡಿದು ಆಚರಿಸಿದಡೆ
ಮುಂದೆ ಭವಬಂಧನವೇ ಪ್ರಾಪ್ತಿಯಾಗುವದು.
ಮತ್ತಂ, ವಾರದಫಲ ಬಯಸುವವರಿಗೆ ಗುರುವಿಲ್ಲ.
ಮಾಸದ ಫಲ ಬಯಸುವವರಿಗೆ ಲಿಂಗವಿಲ್ಲ.
ಚತುರ್ದಶಿ ಫಲ ಬಯಸುವವರಿಗೆ ಜಂಗಮವಿಲ್ಲ.
ಆ ಮಾಸದ ಫಲ ಬಯಸುವವರಿಗೆ ಪಾದೋದಕವಿಲ್ಲ.
ಗ್ರಹಣ ಫಲ ಬಯಸುವವರಿಗೆ ಪ್ರಸಾದವಿಲ್ಲ.
ಇಂತಪ್ಪ ಫಲವ ಬಯಸಿ ಮಾಡಬೇಕೆಂಬವರಿಗೆ
ವಿಭೂತಿ, ರುದ್ರಾಕ್ಷಿ, ಮಂತ್ರ ಮೊದಲಾದ ಅಷ್ಟಾವರಣವು ಇಲ್ಲ.
ಇತಂಪ್ಪ ವ್ರತಭ್ರಷ್ಟ ಹೊಲೆಯರಿಗೆ ವೀರಮಹೇಶ್ವರರೆಂದಡೆ
ನಿರ್ಮಾಯಪ್ರಭುವಿನ ಶರಣರು ನರಕದಲ್ಲಿಕ್ಕದೆ ಬಿಡುವರೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ ? || ೨೦೮ ||

೨೧೪

ಈ ಲೌಕಿಕದ ಮಧ್ಯದಲ್ಲಿ ಜೀವಾತ್ಮರು ದಿನಚರಿ,
ವಾರ, ಮಾಸ, ಚತುದರ್ಶಿಯಲ್ಲಿ
ಉಪವಾಸ ಮಾಡುವ ಕ್ರಮವ ಪೇಳ್ವೆ.
ಅದೆಂತೆಂದಡೆ :
ದಿನಚರಿ ವಾರದೊಳಗೆ ಸೋಮವಾರ ವ್ರತವುಳ್ಳವರು
ಆ ದಿವಸ ಉದಯದಿಂ ಮೂರುಪ್ರಹರ ವೇಳೆ ಪರಿಯಂತರವಾಗಿ
ಉಪವಾಸವ ಮಾಡಿ ಆ ದಿವಸಕ್ಕಿಂತು ಆ ವಾರ ದಿವಸ
ಆವ ಪದಾರ್ಥವಾದಡೆಯು ನಿರ್ಮಳ ಪಾಕವ ಮಾಡಿಸಿ
ಕೆರೆ, ಬಾವಿ, ಹಳ್ಳ, ಹೊಳೆಗಳಿಗೆ ಹೋಗಿ,

ಮಜ್ಜನವ ನೀಡಿ ಪತ್ರಿಪುಷ್ಪವ ತಂದು
ತನ್ನ ಲಿಂಗಪೂಜೆಯ ಮಾಡಿ,
ಗ್ರಾಮದ ಹೊರಗೆ ಒಂದು ಸ್ಥಾವರಲಿಂಗದ
ದೇವಾಲಯಕ್ಕೆ ಹೋಗಿ ನಮಸ್ಕಾರವ ಮಾಡಿ,
ಮರಳಿ ತಮ್ಮ ಗ್ರಹಕ್ಕೆ ಬಂದು
ಆ ಸ್ಥಾವರಲಿಂಗಕ್ಕೆ ನೈವೇದ್ಯವ ಕಳಿಸಿ
ಆ ಮೇಲೆ ಜಂಗಮವ ಕರಿಸಿ ಅರ್ಚಿಸಿ,
ಪಾದೋದಕ ಸೇವಿಸಿ,
ಆ ಜಂಗಮಕ್ಕೆ ಉತ್ತಮವಾದ ಪದಾರ್ಥವ ಸ್ವಲ್ಪ ಎಡೆ ಮಾಡಿಸಿ
ತನ್ನ ಹರಿವಾಣದಲ್ಲಿ ಅರಲು ತುಂಬಿದ ಹೆಡಿಗೆಯಂತೆ ಒಟ್ಟೈಸಿಕೊಂಡು
ಮನಬಂದಪರಿಯಲ್ಲಿ ಎರಡು ವೇಳ್ಯದಾಹಾರ
ಒಂದುವೇಳೆಯಲ್ಲಿ ರಣವೀರರಂತೆ
ತಿಂದು ತಿಂದು ಒಡಲ ತುಂಬಿಕೊಂಡು
ನಾವು ಸೋಮವಾರ ಒಂದೊತ್ತು ಉಪವಾಸವ್ರತವುಳ್ಳವರೆಂದು
ಪರರಮುಂದೆ ಬೊಗಳುವರಯ್ಯ.
ಇಂತಪ್ಪ ವ್ರತಭ್ರಷ್ಟವುಳ್ಳ ಮಂಗಮನುಜರಿಗೆ
ವೀರಮಾಹೇಶ್ವರರೆಂಪಡೆ ಮೆಚ್ಚರಯ್ಯಾ
ನಿಮ್ಮ ಶಿವಜ್ಞಾನಿಗಳಾದ ಶಿವಶರಣರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೯ ॥

೨೧೪

ದ್ವಾದಶಮಾಸದೊಳಗೆ ಶ್ರಾವಣಮಾಸದ ಫಲಪುಣ್ಯ ಮಹಾದೊಡ್ಡದೆಂದು,
ವೇದ, ಪುರಾಣ, ಶ್ರುತಿವಾಕ್ಯಗಳಿಂದ ಕೇಳಿ,
ಅಂತಪ್ಪ ಶ್ರಾವಣಮಾಸ ತಿಂಗಳಪರಿಯಂತರವಾಗಿ,
ನಿತ್ಯದಲ್ಲಿ ವ್ರತವನಾಚರಿಸುವರ ಆಚರಣೆಯ ಪೇಳ್ವೆ
ಅದೆಂತೆಂದಡೆ :
ಶ್ರಾವಣಮಾಸ ಪಾಡ್ಯದಿವಸ ಮೊದಲು ಮಾಡಿ
ನಿತ್ಯದಲಿ ಒಬ್ಬ ಜಂಗಮದ ಪಾದವ ಪಿಡಿದು,
ಪತ್ರಿ ಪುಷ್ಪ ನಿತ್ಯದಲ್ಲಿ ತಂದು,
ಪಾದಪೂಜೆಯ ಮಾಡಿ, ಪಾದೋದಕ ಪ್ರಸಾದವ ಕೊಂಡು
ಆ ಜಂಗಮಸಹಿತನಾಗಿ ಮೃಷ್ಟಾನ್ನಭೋಜನವ

ಹಾ ಹಾ ಎಂದು ಒಟ್ಟೈಸಿಕೊಂಡು ಒಡಲತುಂಬಿಸಿಕೊಂಡು,
ಮತ್ತೆ ಮರಳಿ ಸಾಯಂಕಾಲಕ್ಕೆ ಫಲಹಾರವೆಂದು ಮಾಡಿಸಿ ತಿಂದು,
ನಾವು ಶ್ರಾವಣಮಾಸ ಒಂದೊತ್ತು ಉಪವಾಸ,
ನಿತ್ಯದಲ್ಲಿ ಜಂಗಮದ ತೀರ್ಥಪ್ರಸಾದ
ತಪ್ಪದೆ ಕೊಂಬ ವ್ರತವುಳ್ಳವರೆಂದು
ತಮ್ಮ ಬಿಂಕದ ಮಾತ ಮೂಢಾತ್ಮರ ಮುಂದೆ ಬೀರುವರಯ್ಯ.
ಇಂತಪ್ಪ ತಾಮಸಗುಣವುಳ್ಳ ಅಹಂಕಾರಿಗೆ
ವೀರಮಾಹೇಶ್ವರರೆಂದಡೆ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭು ಮೆಚ್ಚುವನೆ ?
ಮೆಚ್ಚನಯ್ಯ ನರಕದಲ್ಲಿಕ್ಕೆಂದ ನೋಡಾ. ॥ ೨೧೦ ॥

೨೧೫

ದ್ವಾದಶಮಾಸ, ಚತುರ್ದಶಿ, ದ್ವಾದಶಿ, ಅಮವಾಸಿಯೊಳಗೆ
ಮಾಘಮಾಸದ ಚತುರ್ದಶಿ,
ಶಿವರಾತ್ರಿ ಅಮವಾಸ್ಯೆ ಫಲಪುಣ್ಯ ಮಹಾದೊಡ್ಡದು ಎಂದು
ಸ್ಕಂದಪುರಾಣ ಬ್ರಹ್ಮೋತ್ತರಕಾಂಡ, ಶ್ರುತಿವಾಕ್ಯಗಳಿಂದ ಕೇಳಿ,
ಅಂತಪ್ಪ ಮಾಘಮಾಸದ ಚತುರ್ದಶಿದಿವಸ
ಒಂದೊತ್ತು ಉಪವಾಸವ ಮಾಡಿ,
ಪತ್ರಿ, ಪುಷ್ಪ. ಕಡ್ಡಿ, ಬತ್ತಿಯ ತಂದು
ಸಾಯಂಕಾಲಕ್ಕೆ ಸ್ನಾನವ ಮಾಡಿ,
ಜಂಗಮವ ಕರತಂದು ಅರ್ಚಿಸಿ,
ಲಿಂಗವ ಪತ್ರಿ, ಪುಷ್ಪ, ಅಭಿಷೇಕ, ಕಡ್ಡಿ, ಬತ್ತಿ,
ಏಕಾರತಿ ಪಂಚಾರತಿಗಳಿಂದ ಪೂಜಿಸಿ,
ಪಾದೋದಕವ ಸೇವಿಸಿ,
ಆ ಮೇಲೆ ತಮ್ಮ ಗೃಹದಲ್ಲಿ ಮಾಡಿದ ಉತ್ತಮವಾದ ಫಲಹಾರ ಜೀನಸುಗಳು
ಅಂಜೂರ, ದ್ರಾಕ್ಷಿ, ಹಲಸು, ತೆಂಗು, ಕಾರಿಕ, ಬಾಳೇಹಣ್ಣು
ಮೊದಲಾದ ಫಲಹಾರ
ಮತ್ತಂ, ಬೆಂಡು, ಬೆತ್ತಾಸ, ಖರ್ಜೂರ, ದೂಮುಪೇಡೆ,
ಬುಂದೆ, ಲಡ್ಡು ಮೊದಲಾದ ಫಲಹಾರ.
ಇಂತಪ್ಪ ಫಲಹಾರ ಜೀನಸು ಎಡೆಮಾಡಿ ಪ್ರಸಾದವೆಂದು ಕೈಕೊಂಡು,
ಲಿಂಗಕ್ಕೆ ತೋರಿ ತೋರಿ ತಮ್ಮ ಮನಬಂದ ಪದಾರ್ಥವ

ಅಂಗಕ್ಕೆ ಗಡಣಿಸಿಕೊಂಡು,
ನಾವು ಇಂದಿನ ದಿವಸ ಉದಯದಿಂ ಸಾಯಂಕಾಲದ ಪರಿಯಂತರವಾಗಿ,
ಒಂದೊತ್ತು ಉಪವಾಸ ಮಾಡಿ ಶಿವಯೋಗ ಮಾಡಿದೆವೆಂದು
ಮೂರ್ಖ ಮಂದಮತಿ ಅಧಮರ ಮುಂದೆ ತಮ್ಮ ಬಿಂಕವ ಪೇಳಿ,
ರಾತ್ರಿಯಲ್ಲಿ ಜಾಗರಣೆ ಮಾಡಬೇಕೆಂದು
ತಮ್ಮ ಅಂಗದ ಮೇಲಣ ಲಿಂಗವ ಬಿಗಿಬಿಗಿದು ಕಟ್ಟಿಕೊಂಡು
ಸ್ಥಾವರಲಿಂಗದ ಗುಡಿಗೆ ಹೋಗಿ ಆ ಲಿಂಗದ ಪೂಜೆಯಿಂದ ಬೆಳಗ ಕಳೆದು
ಉದಯಕ್ಕೆ ಶಿವರಾತ್ರಿ ಅಮವಾಸೆ ದೊಡ್ಡದೆಂದು
ಹಳ್ಳ ಹೊಳೆಗೆ ಹೋಗಿ, ಛಳಿಯಲ್ಲಿ ತಣ್ಣೀರೊಳಗೆ ಮುಳುಗಿ,
ಸ್ನಾನವ ಮಾಡಿ ಬಂದು ಜಂಗಮವ ಕರಿಸಿ,
ಮೃಷ್ಟಾನ್ನವ ಹೊಟ್ಟೆತುಂಬ ಘಟ್ಟಿಸಿ,
ಶಿವರಾತ್ರಿ ಶಿವಯೋಗದ ಪಾರಣೆಯಾಯಿತೆಂದು
ಮಹಾ ಉಲ್ಲಾಸದಿಂ ತಮ್ಮೊಳಗೆ ತಾವೇ ಇಪ್ಪರಯ್ಯಾ.
ಇಂತಪ್ಪ ಅವಿಚಾರಿಗಳಾದ ಅಜ್ಞಾನ ಜೀವಾತ್ಮರಿಗೆ
ವೀರಮಾಹೇಶ್ವರರೆಂದಡೆ ಪರಶಿವಯೋಗಿಗಳಾದ ಶಿವಶರಣರು ನಗುವರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೧೧ ॥

೨೧೬

ಇಂತಪ್ಪ ತ್ರಿವಿಧಾಚರಣೆಯಲ್ಲಿ ಭಿನ್ನಜ್ಞಾನಿಗಳಾಗಿ
ಭಿನ್ನ ಕ್ರಿಯಗಳಾಚರಿಸಿ,
ಭಿನ್ನಭಾವ ಮುಂದುಗೊಂಡು ವ್ರತವನಾಚರಿಸುವ
ಅಜ್ಞಾನಿಗಳಾದ ಜೀವಾತ್ಮರಿಗೆ
ಶಿವನು ಒಲಿ ಒಲಿ ಎಂದರೆ ಎಂತೊಲಿಯುವನಯ್ಯ ?
ಮತ್ತೆಂತೆಂದೊಡೆ :
ಸುಜ್ಞಾನೋದಯವಾಗಿ ಸಕಲಪ್ರಪಂಚ ನಿವೃತ್ತಿಯ ಮಾಡಿ,
ಶ್ರೀಗುರುಕಾರುಣ್ಯವ ಪಡೆದು, ಲಿಂಗಾಂಗಸಮರಸವಾಗಿ
ಸರ್ವಾಂಗಲಿಂಗಮಯ ತಾನೆಂದು ತಿಳಿದುನೋಡಿ,
ಅಂತಪ್ಪ ಘನಮಹಾಲಿಂಗ ಇಷ್ಟಬ್ರಹ್ಮವನು
ತನುವಿನಲ್ಲಿ ಸ್ವಾಯತವ ಮಾಡಿ,
ಆ ತನುಪ್ರಕೃತಿಯನಳಿದು
ಆ ಇಷ್ಟಲಿಂಗದ ಸತ್ಕ್ರೀಯವನಾಚರಿಸುವುದೇ

ದಿನಚರಿ ವಾರ ಸೋಮವಾರವ್ರತವೆಂಬೆ.
ಅಂತಪ್ಪ ಇಷ್ಟಬ್ರಹ್ಮದ ಚಿತ್ಕಲಾಸ್ವರೂಪವಾದ
ನಿಷ್ಕಲಪ್ರಾಣಲಿಂಗವನು ಮನದಲ್ಲಿ ಸ್ವಾಯತವಮಾಡಿ,
ಆ ಮನೋಪ್ರಕೃತಿಯನಳಿದು ಆ ನಿಷ್ಕಲ ಪ್ರಾಣಲಿಂಗದ
ಸುಜ್ಞಾನಕ್ರಿಯಗಳನಾಚರಿಸುವುದೇ
ದ್ವಾದಶಮಾಸದೊಳಗೆ ಶ್ರೇಷ್ಠವಾದ ಶ್ರಾವಣಮಾಸದವ್ರತವೆಂಬೆ.
ಅಂತಪ್ಪ ಇಷ್ಟಬ್ರಹ್ಮಾನಂದಸ್ವರೂಪವಾದ
ನಿರಂಜನಭಾವಲಿಂಗವನು -
ಧನವೆಂದಡೆ ಆತ್ಮ.
ಅಂತಪ್ಪ ಆತ್ಮನಲ್ಲಿ ಸ್ವಾಯತವ ಮಾಡಿ,
ಆ ಆತ್ಮಪ್ರಕೃತಿಯನಳಿದು, ಆ ನಿರಂಜನ ಭಾವಲಿಂಗದ
ಮಹಾಜ್ಞಾನಾಚರಣೆಯನಾಚರಿಸುವುದೇ
ದ್ವಾದಶಮಾಸ, ದ್ವಾದಶ ಚತುರ್ದಶಿ,
ದ್ವಾದಶ ಅಮವಾಸಿಯೊಳಗೆ ಮಾಘಮಾಸದ ಚತುರ್ದಶಿ
ಶಿವರಾತ್ರಿಅಮವಾಸೆಯ ವ್ರತವೆಂಬೆ.
ಇಂತೀ ತ್ರಿವಿಧಲಿಂಗ ಮೊದಲಾದ ಚಿದ್ಘನಲಿಂಗವು
ತನ್ನ ಸರ್ವಾಂಗದಲ್ಲಿ ಸ್ವಾಯತವುಂಟೆಂದು
ಶ್ರೀಗುರುಮುಖದಿಂ ತಿಳಿಯದೆ ಲಿಂಗವಿರಹಿತರಾಗಿ,
ಬಾಹ್ಯದ ಕ್ರಿಯೆಗಳ ಪಿಡಿದು ವ್ರತವನಾಚರಿಸುವುದೆಲ್ಲ
ಮಾಯಾವಿಲಾಸ ಭವದ ಬಟ್ಟೆ ಎಂದು ತಿಳಿಯದೆ
ಭವಭಾರಿಗಳಾಗಿ, ಭವಕ್ಕೆ ಭಾಜನವಾಗಿ ಕೆಟ್ಟು
ಮನು ಮುನಿ ದೇವ ದಾನವರು ಮಾನವರು ಮೊದಲಾದ
ಸಕಲ ಲೋಕಾದಿಲೋಕಂಗಳು ತಮ್ಮ ನಿಲುವು ತಾವಾರೆಂಬುದನ್ನರಿಯದೆ
ಇದಿರಿಟ್ಟು ಕೆಟ್ಟುಪೋದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೧೨ ||

೨೧೭

ಅಷ್ಟಗುಷ್ಟದ ಬೆಟ್ಟವನೊಡೆದು,
ಅರ್ಧಗಜ ಅಷ್ಟಗಲು, ಪೋಣೆಗಜ ನಿಡಿದು ಕಲ್ಲ ತಂದು,
ಅವರ ಮೇಲೆ ಲಿಂಗಾಕಾರ ಚಂದ್ರಸೂರ್ಯರ ಬರೆದು ಕಟಿಸಿ,
ಭೂಮಿಯಲ್ಲಿ ಚೌರಸ ಭೂಮಿಯ ಮಾಡಿ.

ನಾಲ್ಕುಮೂಲೆಯ ಸ್ಥಾನದಲ್ಲಿ
ಭೂಮಿಯೊಳಗೆ ಅರ್ಧಗಜ ಭೂಮಿಯನಗಿದು,
ಆ ಅಗಿದ ಭೂಮಿಯ ಸ್ಥಾನದಲ್ಲಿ ಬೆಳ್ಳಿ ಬಂಗಾರ
ಮೊದಲಾದ ಪಂಚಲೋಹವ ಹಾಕಿ,
ಆ ಲಿಂಗಮುದ್ರೆಯಕಲ್ಲು ತಂದು ಮಜ್ಜನವ ಮಾಡಿ,
ವಿಭೂತಿಯ ಧರಿಸಿ, ಪತ್ರಿ ಪುಷ್ಪದಿಂದ ಪೂಜೆ ಮಾಡಿ,
ಅಗಿದ ಭೂಮಿಯಲ್ಲಿ ನಡಿಸಿ, ಟೆಂಗನೊಡೆದು,
ನಾಲ್ವರು ಕೂಡಿ, ಶ್ಮಶಾನಭೂಮಿಯ ಪೂರ್ವವನಳಿದು
ರುದ್ರಭೂಮಿಯಾಯಿತ್ತು ಎಂದು
ಹೆಸರಿಟ್ಟುಕೊಂಡು ನುಡಿವಿರಿ.
ಅದೆಂತು ಶುದ್ಧವಾಯಿತು ಎನಗೆ ತಿಳಿಯದು,
ನೀವು ಪೇಳಿರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೧೩ ||

೨೧೪

ನವಖಂಡಪೃಥ್ವಿ ಎಂಬುದು ಪಂಚಶತಕೋಟಿ ಯೋಜನ.
ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ
ಮಂಡಲಾಕಾರವಾದ ಭೂಮಂಡಲ ಒಂದೇ
ಅಂತಪ್ಪ ಭೂಮಂಡಲದ ಮಧ್ಯದಲ್ಲಿ
ಸಪ್ತಸಮುದ್ರ, ಸಪ್ತದ್ವೀಪಾಂತರ
ಹಿಮಾಚಲ ಮಹಾಮೇರುಪರ್ವತ ಮೊದಲಾದ
ಅಷ್ಟ ಪರ್ವತಂಗಳು.
ಕಾಶಿ, ರಾಮೇಶ್ವರ ಮೊದಲಾದ
ಮುನ್ನೂರಾ ಅರುವತ್ತು ಕ್ಷೇತ್ರಂಗಳು.
ಕೃಷ್ಣಾ, ಭಾಗೀರಥಿ, ಯಮುನಾ, ಸರಸ್ವತಿ, ಗಂಗಾ
ಮೊದಲಾದ ಅರುವತ್ತಾರುಕೋಟಿ ತೀರ್ಥಂಗಳು
ಇಂತೀ ತೀರ್ಥಕ್ಷೇತ್ರಂಗಳ ತೆತ್ತೀಸಕೋಟಿ ದೇವರ್ಕಳು ಸ್ಥಾಪಿಸಿದರು.
ಮತ್ತಂ, ಮಂದಮತಿಗಳಾದ ಜೀವಾತ್ಮರು ಕೂಡಿ,
ಇದು ದೇವಭೂಮಿ, ಇದು ಹೊಲೆಭೂಮಿ,
ಇದು ಮಠಮಾನ್ಯದ ಭೂಮಿ, ಇದು ಗ್ರಾಮ ಗೃಹದ ಭೂಮಿ,
ಇದು ಲಿಂಗಸ್ಥಾಪನೆಯಾದ ರುದ್ರಭೂಮಿ, ಇದು ಶ್ಮಶಾನ ಭೂಮಿ

ಎಂದು ಹೆಸರಿಟ್ಟು, ಸ್ಥಾಪನೆಯ ಮಾಡುವಿರಿ.
ಎಲಾ ದಡ್ಡ ಪ್ರಾಣಿಗಳಿರಾ,
ಇದಕೊಂದು ದೃಷ್ಟವ ಪೇಳ್ವೆ ಕೇಳಿರಯ್ಯಾ.
ಅದೆಂತೆಂದೊಡೆ :
ಒಂದು ನದಿಯಲ್ಲಿ ಕೋಲು ಹಾಕಿ,
ಗೆರೆಯ ಬರೆದು ಎರಡು ಮಾಡಿ,
ಇದು ಸೀ ಉದಕ, ಇದು ಲವಣೋದಕವೆಂದಡೆ
ಆಗಬಲ್ಲುದೇನಯ್ಯಾ ? ಆಗಲರಿಯದು.
ಮತ್ತಂ,
ಒಂದೇ ಬೇವಿನಮರದೊಳಗೆ
ಒಂದು ಶಾಖೆಗೆ ಮಾವಿನಹಣ್ಣು, ಒಂದು ಶಾಖೆಗೆ ಬೇವಿನಹಣ್ಣು,
ಒಂದು ಶಾಖೆಗೆ ಬಾಳೆಯಹಣ್ಣು,
ಒಂದು ಶಾಖೆಗೆ ಹಸಲು, ನೀರಲಹಣ್ಣು,
ಆಗೆಂದಡೆ ಆಗಬಲ್ಲವೇನಯ್ಯಾ ?
ಆಗಲರಿಯವು ಎಂಬ ಹಾಗೆ.
ಇಂತೀ ದೃಷ್ಟದಂತೆ ಒಂದು ನವಖಂಡಮಂಡಲಭೂಮಿಯೊಳಗೆ,
ಇದು ಮಂಗಲಭೂಮಿ, ಇದು ಅಮಂಗಳಭೂಮಿ,
ಇದು ಶುದ್ಧಭೂಮಿ, ಇದು ಅಶುದ್ಧಭೂಮಿ,
ಎಂದಡೆ ಆಗಬಲ್ಲವೇನಯ್ಯಾ ? ಆಗಲರಿಯವು.
ಅದೇನು ಕಾರಣವೆಂದಡೆ :
ಆದಿ ಅನಾದಿಯಿಂದತ್ತತ್ತಲಾದ ಪರಶಿವನ
ಮಹಾ ಪ್ರಸಾದದಿಂದುದ್ಭವಿಸಿದ ಬ್ರಹ್ಮಾಂಡವು,
ಒಮ್ಮೆ ಶುದ್ಧ ಒಮ್ಮೆ ಅಶುದ್ಧವಾಗಬಲ್ಲುದೆ ಎಲೆ ಮರುಳ ಮನುಜರಿರಾ.
ನಿಮ್ಮ ಮನದ ಸಂಕಲ್ಪ ವಿಕಲ್ಪದಿಂ
ಶುದ್ಧ ಅಶುದ್ಧವಾಗಿ ತೋರುವುದಲ್ಲದೆ.
ನಿಮ್ಮ ಮನದ ಸಂಕಲ್ಪವನಳಿದಡೆ
ಸಕಲಬ್ರಹ್ಮಾಂಡಗಳೆಲ್ಲ ನಿರ್ಮಳವಾಗಿ ತೋರುವವು.
ನಿಮ್ಮ ಮನದ ಸಂಕಲ್ಪವನಳಿಯದಿರ್ದಡೆ
ಸಕಲಬ್ರಹ್ಮಾಂಡಗಳೆಲ್ಲ ಅಮಂಗಳವಾಗಿ ತೋರುವವು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೧೪ ||

೨೧೯

ಭೂಮಿಯಲ್ಲಿ ಲಿಂಗಸ್ಥಾಪನೆಯಿಲ್ಲದೆ
ಶ್ಮಶಾನಭೂಮಿಯಲ್ಲಿ ಶವವ ಸಂಚಗರಿಸಲಾಗದು ಎಂಬಿರಿ.
ಭೂಮಿಯ ಶುದ್ಧಮಾಡಿ ಸಂಚಗರಿಸುವ ಕ್ರಮವಂ ಪೇಳ್ವೆ,
ಅದೆಂತೆಂದೊಡೆ :
ಆರೂ ಇಲ್ಲದ ಅರಣ್ಯದ ಬೆಟ್ಟವನೊಡದು,
ಚಂದ್ರ ಸೂರ್ಯ ಅಗ್ನಿ ಪ್ರಕಾಶವನುಳ್ಳ
ನಾನಾ ವರ್ಣದ ಕಲ್ಲು ತಂದು,
ಸಪ್ತಚರಣದ ಭೂಮಿಯ ಮೂರಾರು ಕೋಣೆಗೆ ಹಾಕಿ,
ಹಂಚು ಹರಳು ಎಲುವು ನೋಡಿ ತೆಗೆದು,
ಹುಲ್ಲುಕೊಯ್ದು ಭೂಮಿಯ ಹಸನ ಮಾಡಿ,
ಕಳ್ಳಿ ಮುಳ್ಳ ಹಚ್ಚದೆ ಬೇಲಿಯ ಬಂಧಿಸಿ,
ಆ ನಿರ್ಮಳವಾದ ಭೂಮಿಯಲ್ಲಿ
ಶವಸಂಚಗರಿಸಿದಾಕ್ಷಣವೇ ಬಯಲಾಗುವದು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೧೫ ॥

೨೨೦

ಇಂತಪ್ಪ ಶಿವಾಚಾರದ ನಿರ್ಣಯವನರಿಯದೆ
ಜಡಭೂಮಿ ಪೃಥ್ವಿಯಲ್ಲಿ ಕಾಡಗಲ್ಲಿನ ಮೇಲೆ
ಲಿಂಗಸ್ವರೂಪವ ಬರೆದು,
ಜಡಭೂಮಿ ಪೃಥ್ವಿಯಲ್ಲಿ ನಡಿಸಿ,
ಮಡ್ಡಜೀವಿಗಳಾದ ಜಡಶವವನ್ನು ನೆಲದಲ್ಲಿ ಹೂಳಿದಡೆ,
ಮೂರು ದಿವಸಕ್ಕೆ ಮಣ್ಣಾಗಿ ಹೋಗುವುದಲ್ಲದೆ
ಬಯಲಾಗಲರಿಯದು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೧೬ ॥

## ಪ್ರಸಾದಿಯ ಪ್ರಾಣಲಿಂಗಿ

೨೨೧

ಪ್ರಾಣಲಿಂಗಿ ಪ್ರಾಣಲಿಂಗಿ ಎಂಬಿರಿ,
ಪ್ರಾಣಲಿಂಗದ ಸ್ವರೂಪವನಾರು ಬಲ್ಲರಯ್ಯಾ ಎಂದಡೆ,

ಆರುಬಟ್ಟೆಯ ಕೆಡಿಸಿ, ಮೂರುಬಟ್ಟೆಯ ಮೆಟ್ಟಿ,
ಉಭಯ ಬಟ್ಟೆಯಲ್ಲಿ ನಿಂದು ಅತ್ತಿತ್ತ ಹರಿಯದೆ,
ಹಿತ್ತಲಬಾಗಿಲಲ್ಲಿ ಪೋಗದೆ ಕಮಲದ ಬಾಗಿಲಲ್ಲಿ ಪೋಗಬಲ್ಲರೆ
ಅಸುಲಿಂಗಿಗಳು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೧೭ ||

೨೨೨

ಮೂರಾರು ಪರ್ವತದ ಮೇಲುಗಿರಿ ಅಗ್ರದ ಕಮಲದೊಳಗೆ,
ಸೂರ್ಯವರ್ಣದ ಶೇಷವು.
ಆ ಶೇಷನ ವಕ್ತ್ರದೊಳಗೆ ಚಂದ್ರವರ್ಣದ ಮಂಡೂಕ.
ಆ ಮಂಡೂಕನ ವಕ್ತ್ರದ ಜೊಲ್ಲು ಭೂಮಿಗೆ ಬೀಳಲು,
ತಲೆಯಿಲ್ಲದ ಶೇಷ, ಸೇವಿಸಲು ತಲೆ ಬಂದು,
ಕಣ್ಣು ತೆರೆದು ನೋಡಿ, ಜೊಲ್ಲಿನ ದಾರಿಯ ಹಿಡಿದು,
ಎಡಬಲದ ಬಟ್ಟೆಯ ಬಿಟ್ಟು, ನಡುವಣ ಬಟ್ಟೆಯಿಂದ
ಊರ್ಧ್ವಮುಖವಾಗಿ ಏರಲು,
ಆ ಏರುವ ಶೇಷನ ರಭಸದಿಂ
ಕತ್ತಲಿಪುರದರಸು ಮಂತ್ರಿ ಮಾರ್ಬಲವೆಲ್ಲ ಬೆದರಿ,
ಶೇಷ ಮಂಡೂಕನ ಕಚ್ಚಿ, ಮಂಡೂಕ ಶೇಷನ ನುಂಗಲು,
ಶೇಷ ಸತ್ತು, ಮಂಡೂಕ ಉಳಿದಿತ್ತು.
ಆ ಉಳಿದ ಉಳುಮೆಯ ತಾನೇನೆಂದು ತಿಳಿದಾತನೇ
ಅಸುಲಿಂಗಸಂಬಂಧಿ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೧೮ ||

೨೨೩

ಬಯಲ ಪಟ್ಟಣದ ರಾಜಕುಮಾರನು
ಮಲೆಯಪುರದಲ್ಲಿ ಶಿಕಾರಿಯ ಮಾಡಲು,
ಆ ಪಟ್ಟಣದ ಬೀದಿಬಾಜಾರದೊಳಗೆ
ಪದ್ಮಜಾತಿಸಿಯೆಂಬ ಸ್ತ್ರೀ ಇರುವಳು.
ಆ ಸ್ತ್ರೀಯ ಕೈಯೊಳಗಿನ ಕೋತಿಯ ವಿಲಾಸವನು,
ಆ ಸ್ತ್ರೀಯ ರೂಪಲಾವಣ್ಯವನು, ರಾಜಕುಮಾರನು ಕಂಡು,
ಬೆರಗಾಗಿ ಮರುಳುಗೊಂಡು,

ಆ ನಾರಿಯ ವಾಸದೊಳಗೆ ಬಹುಕಾಲವಿರ್ದು,
ಪಟ್ಟಣ ಪಾಳೆಯಲ್ಲಿ ಚರಿಸುತ್ತಿರಲು,
ಅತ್ತಳ ಊರಿಂದ ಜೋಗಿ ಬಂದು ಪತ್ರವ ಕೊಡಲಾಗಿ
ಆ ಪಟ್ಟಣ ಬೆದರಿ, ಪಾಳ್ಯ ಅಳಿದು,
ಪಾಳ್ಯದ ನಾಯಕರು ಪಲಾಯನವಾಗಿ,
ನಾರಿಯಮುಖ ವಿಕಾರವಾಗಿ,
ಬಹುವರ್ಣದ ಕೋತಿ ಏಕವರ್ಣವಾಗಿ,
ಆ ಹಸ್ತದೊಳಗಿನ ಪತ್ರವ ಸುಕುಮಾರ ನೋಡಿ,
ಅಗ್ನಿಸ್ಪರ್ಶದ ಬೆಣ್ಣೆಯಂತೆ,
ಜ್ಯೋತಿಯ ಸಂಗದ ಕರ್ಪೂರದಂತೆ,
ಆ ಪತ್ರದಲ್ಲಿ ನಿರ್ವಯಲಾದುದು ಸೋಜಿಗ ಸೋಜಿಗವೆಂದನು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೧೯ ॥

೨೨೪

ನೀರಿಲ್ಲದ ಭೂಮಿಯಲ್ಲೊಂದು ಬೇರಿಲ್ಲದ ವೃಕ್ಷಪುಟ್ಟಿ,
ಆ ವೃಕ್ಷದಗ್ರದಲ್ಲಿ ನವರತ್ನಯುಕ್ತವಾದ
ಶ್ವೇತವರ್ಣದ ಪಟ್ಟಣವಿಹುದು.
ಆ ಪಟ್ಟಣಕ್ಕೆ ದಾಳಿಯನಿಕ್ಕಿ,
ರಾಜನ ಸೆರೆಕೊಂಡೊಯ್ಯಬೇಕೆಂದು
ಮೂರುಲೋಕದ ರಾಜರು ಹವಣಿಸಿ ಹಿಂದಕ್ಕೆ ಬಿದ್ದರು.
ಅದರೊಳೊಬ್ಬ ರಾಜಂಗೆ ತಲೆಯಿಲ್ಲದೆ ಕಣ್ಣು ಬಂದು,
ಕೈಕಾಲಿಲ್ಲದೆ ಪಟ್ಟಣಕ್ಕೆ ದಾಳಿಯನಿಕ್ಕಿ
ರಾಜನ ಕೊಂಡೊಯ್ದು ಭೇದವ ಬಲ್ಲಾದಡೆ ಚಿಲ್ಲಿಂಗಸಂಬಂಧಿ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೨೦ ॥

೨೨೫

ಮಂಡಲತ್ರಯದ ಚಿತ್ತದೊಳಗೆ
ನೀರಮುಖದ ಶೇಷನಿರ್ಪುದು.
ಆ ಶೇಷನ ಮಸ್ತಕದ ಮಾಣಿಕದ ನೆರಳಿನಲ್ಲಿ
ಈರೇಳುಲೋಕ ಇರ್ಪುದು.

ಆ ಮಾಣಿಕದ ಪ್ರಕಾಶದಲ್ಲಿ ತಾನಡಗಿ
ತನ್ನ ಪ್ರಕಾಶದಲ್ಲಿ ಮಾಣಿಕವನಡಗಿಸಿಕೊಳ್ಳಬಲ್ಲಾತನೇ
ಅಸುಲಿಂಗಿ ನೋಡಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೦॥

೨೨೬

ಪಂಚವರ್ಣದ ಚಿತ್ರದ
ಮೂರುಮುಖ ವೃಶ್ಚಿಕನ ಮುಳ್ಳುತಾಗಿ,
ಮುರುಲೋಕವು ಬೇನೆಹತ್ತಿ ಬೇವುತಿದ್ದಿತು.
ಆ ಮುಳ್ಳಿನ ನಂಜೇರಿ ಮೂರುಲೋಕ ಪ್ರಳಯವಾಗಿ
ರಾಜರು ಮಡಿದರು.
ಆ ಶಿವಶರಣ ನೋಡಿ ಕಲ್ಲು ಮರೆಗೊಂಡ ಭೇದವ
ತಿಳಿಯಬಲ್ಲಾತ ಅಸುಲಿಂಗಿ ಎಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೨॥

೨೨೭

ಅವಿದ್ಯಾಪಟ್ಟಣದ ಹೊರಕೇರಿಯಲ್ಲಿ
ಅಂಗವಿಲ್ಲದ ಉರಿಮಾರಿ ಬಿಳಿಯ ಸೀರೆಯನುಟ್ಟು
ಹೆಂಡವ ಹೊತ್ತು ಮಾರುತ್ತಿಹಳು.
ಆ ಹೆಂಡವ ಕುಡಿಯಬೇಕೆಂದು
ಅವಿದ್ಯಾನಗರದ ಅರಸು ಮಂತ್ರಿಗಳು
ಮೊದಲಾದ ಜನಂಗಳು ಪೋಗುತಿರ್ಪರು.
ಹೆಂಡವ ಮಾಡಿ ಕಂಡವ ಕೊಡಳು.
ಹೊನ್ನು ಇದ್ದವರಿಗೆ, ಸತಿಸಂಗದಲ್ಲಿದ್ದವರಿಗೆ,
ಇಬ್ಬರ ಸಂಗದಲ್ಲಿ ವರ್ತಿಸಿದವರಿಗೆ ಸಂಗಮಾಡಳು.
ಹೆಂಡ ಕೊಡಳು, ಕಂಡ ಮಾರಳು.
ಕೈಕಾಲು ಕಣ್ಣು ಇಲ್ಲದ ಬಡವರು ಬಂದರ
ಕಂಡವ ತಿನಿಸಿ, ಹೆಂಡ ಕುಡಿಸಿ,
ಸಂಗಸುಖದಲ್ಲಿ ಅಗಲದೆ ಇರ್ಪಳು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೩॥

## ಪ್ರಸಾದಿಯ ಶರಣ

೨೨೮

ಅತ್ತೆ ಅಳಿಯನ ನೆರೆದು ಮಾವ ಸೊಸೆಯ ಬೆರೆದು,
ಗುರುವಿನ ಸತಿ ಶಿಷ್ಯನ ನೆರೆದು,
ಶಿಷ್ಯನ ಸತಿ ಗುರುವ ಬೆರೆದು,
ಊರೊಳಗೆ ಬೆಳಗಾಯಿತ್ತು.
ಬೆಳಗಿನೊಳಗೆ ಸಮಗಾರನೆದ್ದು ಕಾಳಿಯುಳಿದು
ಅರಸನ ಸತಿಯಸಂಗವ ಮಾಡಿ,
ಮೊಲೆಯುಂಡು ಹಾಲ ನಂಜೇರಿ ಸಮಗಾರ ಸತ್ತು,
ಆವಲ್ಲಿ ಪೋದನೆಂಬುದ ತಿಳಿಯಬಲ್ಲರೆ ಶರಣರೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೮ ॥

**ಚತ್ರಿಯುರ ಮಹಾಲಿಂಗ ಶಬರಿಗಳ ವಚನವ ನಿರೂಪಿಸುವೆ :**

೨೨೯

ಊರ ಬಾರಿಕನ ಬಾಗಿಲಲ್ಲಿ
ತಲೆ ಕೆಳಗಾಗಿ ಕಾಲು ಮೇಲಾಗಿ ಚರಿಸ್ಯಾಡುವ ಮೃಗವ
ಎಡಪಾದ ಮುಂದಿಟ್ಟು, ಬಲಪಾದ ಹಿಂದಿಟ್ಟು,
ವೀರಮಂಡಿಯ ಹೂಡಿ, ಒಳಬಾಗಿಲೊಳಗೆ ಕೂತು
ಒಂದೇ ಬಾಣದೊಳಗೆ ಹತಮಾಡಿ
ನೀರು ಬೆಂಕಿಯಿಲ್ಲದೆ ಪಾಕವ ಮಾಡಿ,
ಬಾಲಹನುಮಗರ್ಪಿಸಿ ಕಾಯಕವ ಮಾಡುವೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೯ ॥

೨೩೦

ಸಂದಿ ಕೇರಿ ಗೊಂದಿ ಪಕ್ಷಿಯ ಕೋಡು ಕಿತ್ತು,
ಕಣ್ಣು ಕಾಲು ಹಲ್ಲು ತೆಗೆದು, ರೆಕ್ಕೆಯ ಮುರಿದು,
ಹೊಟ್ಟೆಯ ಬಿಟ್ಟು, ತಲೆಯ ಬೇಯಿಸಿ ಪಾಕವ ಮಾಡಿ,
ಡೊಂಕಮೋರೆಯ ಹನುಮಗೆ ಕೊಟ್ಟು,
ನಾನುಂಡು ಕಾಯಕವ ಮಾಡಿದೆನಯ್ಯ

ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೭ ॥

೨೩೧

ಮಲೆಯಮಂದಿರದ ವಟವೃಕ್ಷದ ಘಟದಲ್ಲಿ
ಮಕ್ಷಿಕ ಮನೆಯ ಮಾಡಿ ಹಂದಿಯಸೇರಿ,
ಮೂಡಲಗಿರಿಯಲ್ಲಿ ಕೋಳಿ ಕೂಗಿ,
ಪಶ್ಚಿಮಗಿರಿಯಲ್ಲಿ ಬೆಳಗುತೋರಿ,
ವೃಕ್ಷದಡಿಯಲ್ಲಿ ಅಗ್ನಿಪುಟವಾಗಿ ಬೇರುಸುಟ್ಟು,
ವೃಕ್ಷ ಉಳಿದು, ಮಕ್ಷಿಕ ಹಂದಿ ಸತ್ತುಳಿದು,
ಕೂಗಡಗಿದ ಕುಕ್ಕುಟನಲ್ಲಿ ಮಕ್ಷಿಕ ಹಂದಿಯು ಕೂಡಿ
ಕುಕ್ಕುಟನ ಮನೆಯಲ್ಲಿ ಅಡಗಿದರು.
ಅಡಗಿದ ಭೇದವ ನಿಮ್ಮ ಶರಣಬಲ್ಲ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೭ ॥

೨೩೨

ಮನೆಯೊಳಗಣ ಜ್ಯೋತಿ ಮನೆಯ ಸುಟ್ಟು,
ಮನೆ ಉಳಿದಿತ್ತು, ಅರಣ್ಯಸುಟ್ಟು
ಅರಣ್ಯದ ಪಕ್ಷಿಯ ಕಾಲು ಸುಟ್ಟು ನಡೆಯಿತ್ತು,
ತಲೆ ಸುಟ್ಟು ಕಣ್ಣು ಉಳಿದಿತ್ತು.
ಮೈಸುಟ್ಟು ಪ್ರಾಣ ಉಳಿದಿತ್ತು,
ಉಭಯ ರೆಕ್ಕೆ ಸುಟ್ಟು ಉರಿಯ ನುಂಗಿ
ಗಗನಕ್ಕೆ ಹಾರಿ, ಮೇಲುಗಿರಿಯಲ್ಲಿ ಅಡಗಿತ್ತು.
ಅದು ಅಡಗಿದ ಠಾವಿನಲ್ಲಿ ಅಡಗಬಲ್ಲರೆ ಭಕ್ತನೆಂಬೆ.
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೨೮ ॥

ಶಬರಿ ಕಬ್ಬಿನ ಕಾಳಣ್ಣಂಗಳು ಬೇಟೆಯಾಡಿದ ವಚನವ ಪೇಳ್ವೆ :

೨೩೩

ನೆಲಸಿಲ್ಲದ ಭೂಮಿಯ ಪಕ್ಷಿ
ನೆಲದಲ್ಲಿ ಬಂದು ಚರಿಸಲು.

ಆ ನೆಲದೊಡೆಯರು ಚರಿಸ್ಯಾಡುವ ಪಕ್ಷಿಗೆ
ಬಲಿಯ ಬೀಸಿ ಕೊಂಡು ಎಲ್ಲರು ತಿಂದು,
ತಿಂದ ಪಕ್ಷಿಯ ನಾ ಕೊಂದು ಪಾಕವ ಮಾಡಿ
ಬಾಲದಂಡಂಗೆ ಕೊಟ್ಟು ಬೇಟೆಯನಾಡುವೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೨೯ ||

೨೩೪

ಅಂಬರದ ಪಕ್ಷಿಗೆ ಕಾಲಾರು, ತಲೆ ಮೂರು,
ಬಾಲೆರಡು, ಕಣ್ಣೊಂದು, ಕೈ ಆರಾಗಿ,
ನಡೆದರೆ ಹೆಜ್ಜೆಯಿಲ್ಲ, ನುಡಿದರೆ ಶಬ್ದವಿಲ್ಲ.
ಅನ್ನ ಉದಕವನೊಲ್ಲದೆ ಅಗ್ನಿಯ ಸೇವಿಸುವದು.
ಆ ಮೃಗವ ಕಣ್ಣಿಲ್ಲದೆ ನೋಡಿ,
ಕಾಲಿಲ್ಲದೆ ನಡೆದು, ಕೈಯಿಲ್ಲದೆ ಪಿಡಿದು,
ಬಾಯಿಲ್ಲದೆ ನುಂಗಿ ಬೇಟೆಯನಾಡುವೆನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೦ ||

೨೩೫

ರಂಡೆಮುಂಡೆಯ ಮಗ ರಾಜಕುಮಾರ
ಗಗನದಲ್ಲಿ ಪುಟ್ಟಿ, ಭೂಮಿಯಲ್ಲಿ ಬಂದು,
ಆ ಭೂಮಿಯ ರಾಜನಲ್ಲಿ ಯುದ್ಧವ ಮಾಡಿ,
ಆನೆಯ ಹಲ್ಲು ಕಿತ್ತು, ಕುಂಭವನೊಡೆದು,
ಕುದುರೆಯ ಕಾಲ ಮುರಿದು, ನಾಯಿಯ ನಾಲಿಗೆ ಕಿತ್ತು,
ಬೆಕ್ಕಿನ ಕಣ್ಣು ಕಳೆದು ಉಣ್ಣದೆ ಉಪವಾಸ ಮಾಡದೆ
ಯುದ್ಧದಿಂ ತ್ರಿಲೋಕದ ರಾಜರ ಗೆದ್ದು,
ತ್ರಿಲೋಕದ ರಾಜರಲ್ಲಿ ಸತ್ತು ನಿಂದಿತ್ತು.
ಈ ಭೇದವ -
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವಿನ ಶರಣರು ಬಲ್ಲರಲ್ಲದೆ
ಮಿಕ್ಕಿನ ಜೀವಾತ್ಮರು ಅರಿಯರು. || ೨೩೧ ||

## ಪ್ರಸಾದಿಯ ಐಕ್ಯ

೨೩೬

ಭೂಮಿಯಿಲ್ಲದೆ ಊರೊಳಗೆ ಒಂದು ಶಿಶು ಹುಟ್ಟಿ,
ತ್ರಿಲೋಕದ ಸಿದ್ಧ ಕಳ್ಳರ ಗುದ್ದಿ,
ಭೂಮಿ ಆಕಾಶವ ಕೆಡಿಸಿ,
ಪಂಚವಕ್ತ್ರವನುಳ್ಳ ಶೇಷನ ಕೊಂದು,
ಸತ್ತ ಶೇಷನು ಕಪ್ಪೆಯ ನುಂಗಲು, ಸತ್ತ ಕಪ್ಪೆಯು ಶಿಶುವ ನುಂಗಿ
ಬಟ್ಟಬಯಲಲ್ಲಿ ನಿರ್ವಯಲಾಯಿತ್ತು
ಕಾಡಸೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೨ ||

೨೩೭

ಅಂಬರದ ಕೂಸು ಆನೆಯ ನುಂಗಿ,
ಕುಂಭಿನಿಯ ಕೂಸು ಕುದುರೆಯ ನುಂಗಿ,
ಉಭಯರಂಗದ ಕೂಸು ಕುನ್ನಿಯ ನುಂಗಿ,
ಆ ರಂಗದ ಕೂಸು ನಾಡೆಲ್ಲ ನುಂಗಿ ಕಣ್ಣೊಳಡಗಿ,
ಅಡಗಿದ ಕೂಸ ಪಿಡಿದು ನುಂಗಬಲ್ಲಡೆ ಲಿಂಗೈಕ್ಯನೆಂಬೆ
ಕಾಡಸೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೩ ||

೨೩೮

ನೀರಿಲ್ಲದ ಸಮುದ್ರದಲ್ಲಿ ಅಗ್ನಿಯು ಪುಟ್ಟಿ,
ಭೂಮಿಯ ತಳದಲ್ಲಿ ಪ್ರಜ್ವಲಿಸಿ,
ಆಕಾಶವನಡರಿ, ನೀರ ಕುಡಿದು ಭೂಮಿಯ ನುಂಗಿ
ಅಂಗಜನ ಅರಮನೆಯಲ್ಲಿ ಅಂಗಸಹಿತ ನಿರ್ವಯಲಾದ
ಭೇದವ ತಿಳಿಯಬಲ್ಲರೆ ಲಿಂಗೈಕ್ಯನೆಂಬೆ
ಕಾಡಸೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೪ ||

೨೩೯

ಪಂಚಾಗ್ನಿಪುರವೆಂಬ ಪಟ್ಟಣದಲ್ಲಿ
ಮುದ್ದು ಮುಖದ ಒಬ್ಬ ನಾರಿ ಇರ್ಪಳು.

ಆ ನಾರಿಯ ಮಸ್ತಕದಲ್ಲಿ
ಮೂರು ಲೋಕವನೊಳಕೊಂಡ ಮಹಾಪ್ರಕಾಶವಿರ್ಪುದು.
ಆ ಪ್ರಕಾಶದೊಳಗೆ ನಿರ್ವಯಲಾಗಬಲ್ಲಡೆ ಲಿಂಗೈಕ್ಯನೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೫ ||

೨೪೦

ಆಕಾರ ಪ್ರಸಾದ ಅಂಗ್ಯೆ ಸುಂಗಿ,
ನಿರಾಕಾರ ಪ್ರಸಾದ ಮುಂಗ್ಯೆ ಸುಂಗಿ,
ಉಭಯ ಪ್ರಸಾದ ಮೊಳಕ್ಯೆ ಸುಂಗಿ,
ಬಾಹುಭುಜದ ಪ್ರಸಾದ ನಾಸುಂಗಿ,
ಸತ್ತುವ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೬ ||

## ಪ್ರಾಣಲಿಂಗಿಸ್ಥಲ

ಸೂತ್ರ : ಇಂತೀ ಅವಧಾನಭಕ್ತಿಯಿಂದಾಚರಿಸಿದ ಶರಣನು ಅನುಭಾವಭಕ್ತಿಯಿಂದಾಚರಿಸಿ
ಪ್ರಾಣಲಿಂಗಿಯಾಗುತಿರ್ದನಾಗಿ ಮುಂದೆ ಪ್ರಾಣಲಿಂಗಿಸ್ಥಲವಾದುದು.

೨೪೧

ಪ್ರಾಣಲಿಂಗಿ ಪ್ರಾಣಲಿಂಗಿ ಎಂಬರಯ್ಯಾ :
ಪ್ರಾಣಲಿಂಗದ ನಿಲವನಾರು ಬಲ್ಲರಯ್ಯಾ ?
ಪ್ರಾಣಲಿಂಗದ ನಿಲವ ಉರಿಲಿಂಗಪೆದ್ದಯ್ಯಗಳು ಬಲ್ಲರು.
ಪ್ರಾಣಲಿಂಗದ ನಿಲುಕಡೆಯ ಸಿದ್ಧರಾಮಯ್ಯನವರು ಬಲ್ಲರು.
ಪ್ರಾಣಲಿಂಗದ ಸ್ವರೂಪವನು ಹಡಪದಪ್ಪಣ್ಣ ಸತ್ಯಣ್ಣನವರು ಬಲ್ಲರು.
ಪ್ರಾಣಲಿಂಗದ ನಿಲವ ಸುಲಿಯ ಚಂದಯ್ಯ,
ನೀಲಲೋಚನೆಯಮ್ಮನವರು ಮೊದಲಾದ
ಬಸವಾದಿ ಪ್ರಮಥರು ಪ್ರಭುದೇವರಾಂತ್ಯಮಾದ
ಏಳುನೂರಾ ಎಪ್ಪತ್ತು ಪ್ರಮಥಗಣಂಗಳು ಬಲ್ಲರಲ್ಲದೆ
ಮಿಕ್ಕಿನ ಜಡಮತಿ ವೇಷಧಾರಿಗಳಾದ
ಜೀವರುಗಳೆತ್ತ ಬಲ್ಲರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೩೭ ||

೨೪೨

ಪ್ರಾಣಲಿಂಗಿಯ ನಿಲವ ಪೇಳ್ವೆ.
ಬಲ್ಲರೆ ಪೇಳಿರಿ, ಅರಿಯದಿದ್ದರೆ ಕೇಳಿರಯ್ಯಾ.
ಪ್ರಾಣಲಿಂಗಿಗೆ ಪ್ರಪಂಚದ ಪ್ರೇಮವುಂಟೆ ?
ಪ್ರಾಣಲಿಂಗಿಗೆ ಮಾತಾಪಿತ, ಸತಿಸುತರುಗಳು
ಮೊದಲಾದ ಬಂಧುಗಳ ಸ್ನೇಹಿತರ ಪ್ರೇಮವುಂಟೆ ?
ಪ್ರಾಣಲಿಂಗಿಗೆ ಪರದ್ರವ್ಯದ ಪ್ರೇಮವುಂಟೆ ?
ಪ್ರಾಣಲಿಂಗಿಗೆ ದ್ವೈತಿಗಳಾದ ವೇದಾಂತಿ, ಸಿದ್ಧಾಂತಿಗಳು
ಮೊದಲಾದ ಭಿನ್ನಭಾವದ ಜೀವಾತ್ಮರಲ್ಲಿ ಪ್ರೇಮವುಂಟೆ ?
ಪ್ರಾಣಲಿಂಗಿಗೆ ಊಟ ಉಡಿಗೆ ತೊಡಿಗೆ ಮೃಷ್ಟಾನ್ನ ಭೋಜನವ ಸೇವಿಸಿ,
ಸಕಲಪದಾರ್ಥವ ಭೋಗಿಸಬೇಕೆಂಬ ಮಮಕಾರವುಂಟೆ ?
ಇಂತೀ ಮಾಯಾಪ್ರಪಂಚದ ವಿಲಾಸದ ಮೇಲಣ
ಮಮಕಾರವನಳಿದುಳಿದಾತನೇ ಪ್ರಾಣಲಿಂಗಿ. ಇಲ್ಲದಾತನೇ ಅಂಗಲಿಂಗಿ
ಮುಖಭಂಗಿತರಾದ ಜೀವರುಗಳು ಎಂದರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೩೮ ॥

೨೪೩

ಪ್ರಾಣಲಿಂಗಿಗೆ ಚತುರ್ವಿಧಭಕ್ತಿಯಿಂದ
ಗುರುವಿಗೆ ತನುವ ದಂಡಿಸಬೇಕೆಂಬ ಮಮಕಾರವುಂಟೆ ?
ಪ್ರಾಣಲಿಂಗಿಗೆ ಅನ್ನ ವಸ್ತ್ರ ಧನ ಧಾನ್ಯ ಮೊದಲಾದ
ಹದಿನೆಂಟು ಜೀನಸಿನ ಧಾನ್ಯವ ಜಂಗಮಕ್ಕೆ ನೀಡಿ
ತೃಪ್ತಿಯಬಡಿಸಿ ಆತ್ಮನ ಬಳಲಿಸಿ,
ಆ ಜಂಗಮದ ಪಾದೋದಕ ಪ್ರಸಾದವ
ಸೇವಿಸಬೇಕೆಂಬ ಮಮಕಾರವುಂಟೆ ?
ಇಂತೀ ತ್ರಿಮೂರ್ತಿಗಳಲ್ಲಿ ಪಾದೋದಕ, ಪ್ರಸಾದದ ಮೇಲಣ
ಮಮಕಾರವನಳಿದುಳಿದಾತನೇ ಪ್ರಾಣಲಿಂಗಿ.
ಮತ್ತಂ-
ಅಂತಪ್ಪ ತ್ರೈಮೂರ್ತಿಗಳ ಪಾದೋದಕ ಪ್ರಸಾದದ ಮೇಲಣ
ಮಮಕಾರ ನಿಮಿಷ ನಿಮಿಷಾರ್ಧವನಗಲದಿರ್ಪಾತನೇ
ಅಚ್ಚ ಪ್ರಾಣಲಿಂಗಿ ನಿಜಲಿಂಗೈಕ್ಯ.

ಇಂತೀ ಉಭಯದ ಭೇದವ ತಿಳಿಯಬಲ್ಲರೆ
ಶಿವಜ್ಞಾನಿಗಳಾದ ಪರಶಿವಯೋಗಿಗಳೆಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೩೯ ॥

೨೪೪

ಪ್ರಾಣಲಿಂಗಿಗೆ ಪರದೈವ ಪೂಜೆಯುಂಟೆ ?
ಪ್ರಾಣಲಿಂಗಿಗೆ ಪರರ ಸೇವಾವೃತ್ತಿಯುಂಟೆ ?
ಪ್ರಾಣಲಿಂಗಿಗೆ ಪರಲೋಕದ ಬ್ರಹ್ಮ, ವಿಷ್ಣು,
ರುದ್ರ, ಈಶ್ವರ, ಸದಾಶಿವರೆಂಬ ಪಂಚಬ್ರಹ್ಮರು
ಮೊದಲಾದ ಅನೇಕ ದೇವತೆಗಳ
ಚತುರ್ವಿಧಫಲಪದ ಮೊದಲಾದ
ಎಂಬತ್ತೆಂಟುಕೋಟಿ ಫಲಪದದ ಮೇಲಣ ಕಾಂಕ್ಷೆಯುಂಟೆ ?
ಪ್ರಾಣಲಿಂಗಿಗೆ ಮರ್ತ್ಯಲೋಕದ ಅರ್ಥೈಶ್ವರ್ಯ
ಸಕಲಸಂಪದದ ಭೋಗೋಪಭೋಗವನು
ಭೋಗಿಸಬೇಕೆಂಬ ಪುಣ್ಯದಮೇಲಣ ಮಮಕಾರವುಂಟೆ ?
ಇಂತಪ್ಪ ಕರ್ಮದ ಶೇಷವನಳಿದುಳಿದಾತನೇ ಪ್ರಾಣಲಿಂಗಿ ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೦ ॥

೨೪೫

ಮನೆಯ ಕಟ್ಟುವಾತ ಪ್ರಾಣಲಿಂಗಿಯಲ್ಲ :
ಮನೆಯ ಕಟ್ಟುವಾತ ಪ್ರಾಣಲಿಂಗಿ.
ಮನೆಯ ಕೆಡಿಸುವಾತ ಪ್ರಾಣಲಿಂಗಿಯಲ್ಲ :
ಮನೆಯ ಕೆಡಿಸುವಾತ ಪ್ರಾಣಲಿಂಗಿ.
ಬಿಟ್ಟು ಹಿಡಿಯುವಾತ ಪ್ರಾಣಲಿಂಗಿಯಲ್ಲ :
ಬಿಟ್ಟು ಹಿಡಿಯುವಾತ ಪ್ರಾಣಲಿಂಗಿ.
ಇಂತೀ ವಿಚಾರವನು ತಿಳಿಯಬಲ್ಲಾತನೆ
ಚಿಲ್ಲಿಂಗಸಂಬಂಧಿ ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೧ ॥

೨೪೬

ಕಟ್ಟಿದ ಮನೆ ಬಿಚ್ಚದೆ, ಮಾಡಿದ ಮನೆ ಕೆಡವದೆ,
ಅಟ್ಟನ್ನವನುಣ್ಣದೆ, ಅಡದನ್ನವನುಂಡು,
ಇದ್ದವರಿಗೆ ಹೇಳದೆ, ಹೋದವರ ಕೇಳದೆ
ಇರಬಲ್ಲರೆ ಪ್ರಾಣಲಿಂಗಿ ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೨ ॥

೨೪೭

ರಂಜನಿಪುರದಲ್ಲಿ ಕಪಿ ಉಡವ ಕಚ್ಚಿ
ತಿರುಗಾಡುವುದ ಕಂಡೆನಯ್ಯ.
ಆ ಉಡುವಿನ ಬಾಯೊಳಗೆ ಮೂರುಲೋಕವೆಲ್ಲ
ಏಳುತ್ತ ಬೀಳುತ್ತ ಇರ್ಪುದ ಕಂಡೆ.
ಆ ಕೋಡಗದಾಟವ ಕಂಡು ಈರೇಳುಲೋಕದ ಪ್ರಾಣಿಗಳು
ಬೆರಗಾದುದ ಕಂಡೆ.
ಅದಾರಿಗೂ ಸಾಧ್ಯವಲ್ಲ.
ಅಷ್ಟರಲ್ಲಿಯೇ ಅರಸನ ಮನೆಯಲ್ಲಿ ಒಂದು ಎಳೆ ಶಿಶು ಹುಟ್ಟಿ,
ಕಸ ನೀರು ಹೊರುವ ಗಾಡಿಯ ಕೊಂದು, ಕೋತಿಯ ತಿಂದು,
ಉಡವ ನುಂಗಿ, ತ್ರೈಲೋಕದ ಬಂಧನವ ಬಿಡಿಸಿ,
ತಂಗಿಯನೊಡಗೂಡಿ, ಅಕ್ಕನ ಸಂಗವ ಮಾಡಿ,
ಅರಸಿನ ಅರಮನೆಯಲ್ಲಿ ಆರು ಕಾಣದೆ ಅಡಗಿಹೋಯಿತ್ತು.
ಇದರಂದಚಂದವ ನಿಮ್ಮ ಶರಣ ಬಲ್ಲ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೩ ॥

೨೪೮

ಕತ್ತಲಿಪುರದಲ್ಲಿ ಎತ್ತೆಮ್ಮೆ ಮೈಥುನ ಮಾಡುವುದ ಕಂಡೆ.
ಆ ಎಮ್ಮೆಯ ಗರ್ಭದಲ್ಲಿ
ಎಂಬತ್ತುನಾಲ್ಕುಲಕ್ಷ ಎತ್ತು ಪುಟ್ಟುವುದ ಕಂಡೆ.
ಹಾಳೂರ ಕೋಳಿ ಕೂಗಲು ಕತ್ತಲಿಪುರ ಬೆಳಕುದೋರಿತ್ತ ಕಂಡೆ.
ಆ ಬೆಳಗಿನೊಳಗೆ ಎತ್ತೆಮ್ಮೆ ಸತ್ತು
ಎಂಬತ್ತುನಾಲ್ಕುಲಕ್ಷ ಎತ್ತೆತ್ತ ಹೋದವೆಂದರಿಯೆ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೪ ॥

೨೪೯

ಮನೆಯೊಳಗೊಂದು ಮಾಯದ ಕೂಸು ಹುಟ್ಟಿ,
ಮನೆಯ ಮಂದಿಯ ನುಂಗಿ, ಕಮಲದಲ್ಲಿ ಬಂದು,
ಶಾಲಿಕುಪ್ಪುಸವ ಕಳೆದು, ಎನ್ನ ಬತ್ತಲೆ ಮಾಡಿ,
ಮನೆಯ ಸುಟ್ಟು, ಬೂದಿಯ ಮೈಗೆ ಪೂಸಲು
ಯೌವನವಾಯಿತ್ತು ಎನಗೆ ನೋಡಪ್ಪ.
ಆ ಕೂಸಿನಾಟವ ಕಂಡು
ಅವಿರಳಭಕ್ತಿಯಿಂದಪ್ಪಲೊಡನೆ
ಆ ಕೂಸುಸಹಿತವಾಗಿ ನಾನೆತ್ತ ಹೋದೆನೆಂಬುದ
ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೫ ॥

೨೫೦

ವಿರಕ್ತನಾದೆನೆಂಬರು, ವಿರಕ್ತನ ಬಗೆಯ ಪೇಳ್ವೆ.
ವಿರಕ್ತನಾದಡೆ ಮನೆಯ ಹೊಂದಿ ಎಲ್ಲರಲ್ಲಿ ಇರಲಾಗದು.
ವಿರಕ್ತನಾದಡೆ ಊರನಾಶ್ರಯಿಸಿ ಮನೆಮನೆಯ ತಿರುಗಿ
ಭಿಕ್ಷವ ಬೇಡಲಾಗದು.
ವಿರಕ್ತನಾದಡೆ ದೇಶ ಬಿಟ್ಟು ಪರದೇಶಕ್ಕೆ ಹೋಗಲಾಗದು.
ವಿರಕ್ತನಾದಡೆ ಅರಣ್ಯಪರ್ವತದಲ್ಲಿರಲಾಗದು.
ವಿರಕ್ತನಾದಡೆ ಮೇರುಪರ್ವತದ ಕಮಲಸರೋವರದಲ್ಲಿರಲಾಗದು.
ವಿರಕ್ತನಾದಡೆ ಊರೂರು ತಿರುಗಲಾಗದು.
ಪುಣ್ಯದೇಶಕ್ಕೆ ಹೋಗಲಾಗದು.
ಇಂತಿಲ್ಲದಿರಬಲ್ಲರೆ ವಿರಕ್ತನೆಂಬೆನಯ್ಯ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೬ ॥

೨೫೧

ವಿರಕ್ತನಾದಡೆ ಕುಳ್ಳಬೂದಿಯ ಧರಿಸಲಾಗದು.
ವಿರಕ್ತನಾದಡೆ ಮಂಡೆಬೋಳಾಗಿ ಮೈ ಬತ್ತಲೆ ಇರಲಾಗದು.

ವಿರಕ್ತನಾದಡೆ ಅಂಗದಮೇಲೆ ಲಿಂಗವಕಟ್ಟಿ ತಿರುಗಲಾಗದು.
ವಿರಕ್ತನಾದಡೆ ರಂಡೆಯ ಸಂಗವ ಬಿಟ್ಟು
ಕನ್ನೆಯ ಸಂಗವ ಮಾಡದಿರಲಾಗದು.
ವಿರಕ್ತನಾದಡೆ ಕನ್ನೆಯ ಸಂಗವಮಾಡಿ
ಮುಖವ ಮುಚ್ಚಿ ತಲೆತಗ್ಗಿಸಿ ತಿರುಗಲಾಗದು.
ವಿರಕ್ತನಾದಡೆ ಹಿರಿಕಿರಿಯರ ಸಂಗವ ಮಾಡಲಾಗದು.
ವಿರಕ್ತನಾದಡೆ ಕಾಂಚಾಣಕ್ಕೆ ಕೈಯನೊಡ್ಡಲಾಗದು.
ಇಂತೀ ಬಿಟ್ಟಲ್ಲದೆ ವಿರಕ್ತನಾಗಲರಿಯನು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೪೭ ॥

೨೫೦

ವಿರಕ್ತನಾದಡೆ ಮನೆಯ ಹೊಂದಿ ಎಲ್ಲರಲ್ಲಿರಬೇಕು.
ವಿರಕ್ತನಾದಡೆ ಊರನಾಶ್ರಯಿಸಿ
ಮನೆ, ಮನೆ ಭಿಕ್ಷವ ಬೇಡಬೇಕು.
ವಿರಕ್ತನಾದಡೆ ಅರಣ್ಯ ಪರ್ವತ
ಕಮಳಸರೋವರ ನದಿಗಳಲ್ಲಿರಬೇಕು.
ವಿರಕ್ತನಾದಡೆ ದೇಶಬಿಟ್ಟು ಪರದೇಶಕ್ಕೆ ಹೋಗಬೇಕು.
ವಿರಕ್ತನಾದಡೆ ಮಂಡೆಬೋಳಾಗಿ ನೀರ ಬೂದಿಯ ಧರಿಸಿ
ಅಂಗದ ಮೇಲೆ ಲಿಂಗವಕಟ್ಟಿ ತಿರುಗಬೇಕು.
ಇಂತೀ ಭೇದವ ತಿಳಿಯಬಲ್ಲರೆ ವಿರಕ್ತನೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೦ ॥

೨೫೧

ವಿರಕ್ತನಾದಡೆ ರಂಡೆಯ ಸಂಗವಮಾಡಿ,
ಮೂರುಮೊಲೆ ಹಾಲು ಕುಡಿದು ಕನ್ನೆಯ ಸಂಗವಮಾಡಿ,
ಹೆಂಡವ ಕುಡಿದು ಹೊಲೆಮಾದಿಗ
ಸಮಗಾರರಲ್ಲಿ ಕೂಡಿ ಉಂಡು ಕುಲಗೆಟ್ಟು
ಶೀಲವಂತನಾದಾತನೇ ವಿರಕ್ತ.
ಇಂತಪ್ಪ ವಿರಕ್ತರ ನಿಲುಕಡೆಯ
ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು,

ಮಡಿವಾಳ ಮಾಚಯ್ಯ, ಮರುಳಶಂಕರಪ್ರಿಯ,
ಸಿದ್ಧರಾಮಯ್ಯ ಮೊದಲಾದ
ಏಳುನೂರಾಎಪ್ಪತ್ತು ಪ್ರಮಥಗಣಂಗಳು
ಬಲ್ಲರಲ್ಲದೆ ಮಿಕ್ಕಿನ ವೇಷಧಾರಿಗಳೆತ್ತ ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ ? || ೨೪೯ ||

೨೫೪

ಇಂತಪ್ಪ ವಿರಕ್ತನ ನಿಲುಕಡೆಯ
ದೇವ ದಾನವ ಮಾನವರು ಮೊದಲಾದ
ಸಕಲಜೀವಾತ್ಮರು ತಿಳಿಯದೆ
ವೇಷವ ಧರಿಸಿ, ಗ್ರಾಸಕ್ಕೆ ತಿರುಗುವ
ಹೇಸಿಗಳ್ಳರ ನಾನೇನೆಂಬೆನಯ್ಯಾ ?
ಇಂತಪ್ಪ ವಿರಕ್ತನ ನಿಲುಕಡೆಯ ಬಲ್ಲವರು ಆರೆಂದಡೆ
ಸುಜ್ಞಾನೋದಯವಾಗಿ, ಶ್ರೀಗುರುಕಾರುಣ್ಯ ಪಡೆದು
ಲಿಂಗಾಂಗಸಂಬಂಧಿಗಳಾದ ವೀರಮಾಹೇಶ್ವರರಾಗಲಿ
ಅಥವಾ ಭಕ್ತಗಣಂಗಳಾಗಲಿ
ಅಲ್ಲದೆ ವಿಪ್ರಮೊದಲು ಶ್ವಪಚಕಡೆಯಾಗಿ
ಆವ ಜಾತಿಯಲ್ಲಿ ಆವನಾದಡೇನು
ಸುಜ್ಞಾನೋದಯವಾದ ಜ್ಞಾನಕಲಾತ್ಮರು ಬಲ್ಲರಲ್ಲದೆ
ಮಿಕ್ಕಿನ ಭಿನ್ನಭಾವಿಗಳಾದ
ವೇದಾಂತಿ, ಸಿದ್ಧಾಂತಿ ಯೋಗಮಾರ್ಗಿಗಳು ಮೊದಲಾದ
ಕರ್ಮಕಾಂಡಿಗಳಾದ ವೇಷಧಾರಿಗಳೆತ್ತ ಬಲ್ಲರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ ? || ೨೫೦ ||

೨೫೫

ಸಾಣೆಯ ಮೇಲೆ ಶ್ರೀಗಂಧವನಿಟ್ಟು,
ಗಂಧ ಗಂಧವೆಂದಡೆ ಗಂಧವ ಕೊಡಬಲ್ಲುದೆ ?
ಜಡಚಕ್ರದೊಳಗೆ ಧಾನ್ಯವ ನೀಡಿ
ಹಿಟ್ಟೆಂದಡೆ ಹಿಟ್ಟಾಗಬಲ್ಲುದೆ ?
ಗಾಣಕ್ಕೆ ಎಳ್ಳು ನೀಡಿ,
ಎಣ್ಣೆ ಎಣ್ಣೆ ಎಂದಡೆ ಎಣ್ಣೆ ಬೀಳಬಲ್ಲುದೆ ?

ಪಂಚಾಮೃತವ ಪಾಕವ ಮಾಡಿ ಎಡೆಯ ಬಡಿಸಿ
ಮುಂದಿಟ್ಟುಕೊಂಡು, ಹೊಟ್ಟೆ ತುಂಬು ತುಂಬು ಎಂದಡೆ
ಹೊಟ್ಟೆ ತುಂಬಿ ಹಸುವಡಗಬಲ್ಲುದೆ ?
ಹಾಗೆ ಜಡರೂಪವಾದ ಲಿಂಗವ
ಜಡಮತಿಗಳಾದ ಗುರುಮುಖದಿಂ ಪಡಕೊಂಡು
ಅಂಗದ ಮೇಲೆ
ಇಷ್ಟಲಿಂಗವೆಂದು ಧರಿಸಿ
ಆ ಲಿಂಗಕ್ಕೆ ಮುಕ್ತಿಯ ಕೊಡು ಕೊಡು ಎಂದಡೆ,
ಆ ಲಿಂಗವು ಮುಕ್ತಿಯ ಕೊಡಲರಿಯದು.
ಅದೆಂತೆಂದೊಡೆ :
ಚಂದನ, ಧಾನ್ಯ, ತಿಲಪಂಚಪಾಕವನು
'ಮರ್ದನಂ ಗುಣವರ್ಧನಂ' ಎಂದುದಾಗಿ,
ಇಂತೀ ಎಲ್ಲವು ಮರ್ದನವಿಲ್ಲದೆ
ಸ್ವಧರ್ಮಗುಣ ತೋರಲರಿಯವು.
ಹಾಗೆ ಅಂತಪ್ಪ ಜಡಸ್ವರೂಪನಾದ ಲಿಂಗವನು
ಜ್ಞಾನಗುರುಮುಖದಿಂ ಶಿಲಾಲಿಖಿತವ ಕಳೆದು,
ಕಳಾಭೇದವ ತಿಳಿದು, ಆ ಲಿಂಗವೇ ಘನಮಹಾ ಇಷ್ಟಲಿಂಗವೆಂಬ
ವಿಶ್ವಾಸ ಬಲಿದು ತುಂಬಿ
ಅಂತಪ್ಪ ಇಷ್ಟಬ್ರಹ್ಮದಲ್ಲಿ ಅವಿರಳಸಂಬಂಧಿಯಾಗಿ
ಆ ಇಷ್ಟಲಿಂಗದ ಸತ್ಕ್ರೀಯಾಚಾರದಲ್ಲಿ
ಸರ್ವಾಂಗವನು ದಹಿಸಿದಲ್ಲದೆ ಭವಹಿಂಗದು, ಮುಕ್ತಿದೋರದು,
ಮುಕ್ತಿಯ ಪಡೆಯಲರಿಯದೆ ಪ್ರಾಣಲಿಂಗಿಯಾಗಲರಿಯನು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೧ ॥

೨೫೬

ಕಲ್ಲಮರದ ಕೋಡಗದ ತಲೆಯೆಂಟು ಸ್ಥಾನವ ಮೆಟ್ಟಿ
ತಿರಗುವ ತಲೆ ಕಾಲು ಪಕ್ಕವಿಲ್ಲದ ವಿಹಂಗನ ನಡುನೆತ್ತಿ ಸುಳಿಯೊಳು ನಿಲ್ಲಿಸಲು,
ಹಾಲುಬಿಟ್ಟು, ಹಾಲು ಬೇಡುವದು.
ಈ ಭೇದವ ತಿಳಿಯಬಲ್ಲಡೆ ಅವರು ಲಿಂಗಸಂಬಂಧಿ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೨ ॥

೨೫೭

ಆರು ಇಲ್ಲದ ಅರಣ್ಯದಲ್ಲೊಂದು
ಬೀಜವಿಲ್ಲದ ವೃಕ್ಷ ಪುಟ್ಟಿತ್ತು.
ಆ ವೃಕ್ಷಕ್ಕೆ ಹೂವಿಲ್ಲದೆ ಕಾಯಿಯಾಯಿತ್ತು; ಕಾಯಿಯಿಲ್ಲದೆ ಹಣ್ಣಾಗಿತ್ತು.
ಗಾಳಿಯಿಲ್ಲದೆ ಗಂಧವ ತೋರಿತ್ತು.
ಆ ವಾಸನಕ್ಕೆ ಪಕ್ಕವಿದಲ್ಲದ ಹಕ್ಕಿ ಹಾರಿಹೋಗಿ
ಹಣ್ಣನೆ ಕಚ್ಚಿತ್ತು.
ಆ ಹಣ್ಣಿನ ರಸ ಭೂಮಿಯಮೇಲೆ ಸುರಿಯಲು
ಭೂಮಿ ಬೆಂದು, ಸಮುದ್ರ ಬತ್ತಿ,
ಅರಸನ ಮಾರ್ಬಲವೆಲ್ಲ ಪ್ರಳಯವಾಗಿ,
ಅರಸು ಪ್ರಧಾನಿ ಸತ್ತು
ಅರಸಿ ಅರಮನೆಯಲ್ಲಿ ಬಯಲಾಗಿ,
ಎತ್ತ ಹೋದರೆಂದರಿಯಬಲ್ಲರೆ ಗುಹೇಶ್ವರಲಿಂಗವು
ತಾನೆಯೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೩ ॥

೨೫೮

ಮಹಾಮಲೆಯಲ್ಲಿ ಮಕ್ಷಿಕವಿರ್ಪುದು.
ಆ ಮಕ್ಷಿಕನ ಬಾಯೊಳಗೆ ಉಡುವಿರ್ಪುದು.
ಆ ಉಡುವಿನ ಬಾಯೊಳಗೆ ವ್ಯಾಘ್ರವಿರ್ಪುದು.
ಆ ವ್ಯಾಘ್ರನ ಬಾಯೊಳಗೆ ಅರಸಿನ ಶಿಶುವಿರ್ಪುದು.
ಆ ಶಿಶು ಒದರಲು ಮಕ್ಷಿಕ ಬಿಟ್ಟಿತ್ತು,
ಉಡವು ಸತ್ತಿತ್ತು, ವ್ಯಾಘ್ರ ಬಿಟ್ಟಿತ್ತು.
ಆ ಶಿಶು ಮೂರು ಲೋಕವ ನುಂಗಿ ತಾಯಿತಂದೆಯ ಕೊಂದು
ಬಟ್ಟಬಯಲಲ್ಲಿ ನಿರ್ವಯಲಾಯಿತ್ತು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೪ ॥

೨೫೯

ಬೇರಿಲ್ಲದೆ ಭೂಮಿಗೆ ಹೊಂದದೆ
ಒಂದು ಮಾವಿನ ವೃಕ್ಷವು ಪುಟ್ಟಿತ್ತು.

ಆ ವೃಕ್ಷ ನೀರಿಲ್ಲದೆ ಗಾಳಿ ಸೋಂಕದೆ ಪಲ್ಲವಿಸಿತ್ತು.
ಮೂರಾರು ಗಂಟಾಗಿರ್ಪವು.
ತುದಿಗಂಟಿನಲ್ಲಿ ಮೊಳೆದೋರಿ ಎರಡು ಶಾಖೆ ಪುಟ್ಟಿದವು.
ಎರಡು ಶಾಖೆಗೆ ಮೂರು ಕವಲು,
ಮೂರು ಕವಲಿಗೆ ಆರು ಬಗಲು,
ಆರು ಬಗಲಿಗೆ ಮೂವತ್ತಾರು ಪರ್ಣಂಗಳು,
ಇನ್ನೂರಾಹದಿನಾರು ಕುಡಿಗಳು, ಅನೇಕ ಕುಸುಮಂಗಳು.
ಅದರೊಳಗೆ ಅಗ್ನಿವರ್ಣದ ಕುಸುಮ
ಮೂರುಗಂಟಿನ ಮೇಲೆ ಪುಟ್ಟಿ, ತುದಿಯಲ್ಲಿ ಅರಳಿ ಫಲವಾಗಿ,
ಐದು ಗಂಟಿನ ಮೇಲೆ ಹಣ್ಣಾಗಿ,
ಅಮೃತಜೇವಣಿಯೆಂಬ ಹಣ್ಣನು ಕಮಲದಲ್ಲಿ ಕಂಡು
ಸೇವಿಸಿ ವ್ಯಾಧಿಯ ಪರಿಹರಿಸಬಲ್ಲಡೆ
ಅಸುಲಿಂಗಸಂಬಂಧಿಯೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೫ ॥

೨೬೦

ಮೋಟುಗಿಡದಲ್ಲಿ ಹೂವು ಕಾಯಿಲ್ಲದೆ
ಫಲದೋರಿ ಬೇರಿನಲ್ಲಿ ಹಣ್ಣಾಗಿ,
ಆ ಹಣ್ಣಿಗೆ ನಾಲ್ವರು ಹೆಣಗಾಡುತ್ತಿರ್ಪರು.
ಆ ಹಣ್ಣನೇ ಮೂವರು ಸೇವಿಸಿ ಬದುಕಿದರು.
ಅದರೊಳಗೊಬ್ಬ ಸತ್ತಿರ್ಪನು.
ಇದರರ್ಥವ ಹೇಳಬಲ್ಲರೆ ಅನಾದಿಗುರುಲಿಂಗಜಂಗಮವೆಂಬೆ.
ಇಂತೀ ಭೇದವ ತಿಳಿಯಬಲ್ಲರೆ
ಅನಾದಿಶಿಷ್ಯಶರಣ ಭಕ್ತನೆಂಬೆ.
ಇವರಿಂದ ಅಂದಚಂದ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೫೬ ॥

## ಪ್ರಾಣಲಿಂಗಿಯ ಭಕ್ತ

೨೬೧

ವಂದಿಸಿದಲ್ಲಿ ಶತಕೋಟಿ ಯೋಜನವಾಯಿತ್ತು.
ಪೂಜಿಸಿದಲ್ಲಿ ದ್ವಿಶತಕೋಟಿ ಯೋಜನವಾಯಿತ್ತು.

ಪಣೆಮುಟ್ಟಿವಂದಿಸಿದಲ್ಲಿ ತ್ರಿಶತಕೋಟಿ ಯೋಜನವಾಯಿತ್ತು.
ಸೇವಿಸಿದಲ್ಲಿ ನಾಲ್ಕುಕೋಟಿ ಯೋಜನವಾಯಿತ್ತು.
ಕೊಂಡಲ್ಲಿ ಪಂಚಶತಕೋಟಿ ಯೋಜನವಾಯಿತ್ತು.
ಇಂತೀ ಐವರಲ್ಲಿದ್ದವರಿಗೆ ಪಂಚವರ್ಣದ ಕಲ್ಲು
ಷಡ್ವಿಧಶತಕೋಟಿ ಯೋಜನವಾಯಿತ್ತು.
ಇದ ಕಂಡು ನಾ ಬೆರಗಾಗಿ ಮರೆಯಾದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೫೭ ||

೨೬೨

ಗುರುಪೂಜೆ ಮಾಡುವಾತ ಶಿಷ್ಯನಲ್ಲ.
ಲಿಂಗಪೂಜೆ ಮಾಡುವಾತ ಶರಣನಲ್ಲ.
ಜಂಗಮಪೂಜೆ ಮಾಡುವಾತ ಭಕ್ತನಲ್ಲ.
ಇಂತೀ ತ್ರಿಮೂರ್ತಿಗಳ ಪಾದೋದಕ ಪ್ರಸಾದವ
ಕೊಂಬುವಾತ ಪ್ರಸಾದಿಯಲ್ಲ.
ಇಂತೀ ಚತುರ್ವಿಧದ ಹಂಗು ಹಿಂಗದೆ
ಭವಹಿಂಗದು ಮುಕ್ತಿದೋರದು.
ಮತ್ತಂ, ಇಂತೀ ತ್ರಿವಿಧ ಪೂಜೋಪಚಾರಂಗಳಮಾಡಿ
ಪಾದೋದಕ ಪ್ರಸಾದವ ಕೊಳ್ಳದವರಿಗೆ
ಭವಹಿಂಗದು ಮುಕ್ತಿದೋರದು
ಎಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೫೮ ||

೨೬೩

ವೇದವನೋದುವರೆಲ್ಲ ಬಂಜೆಯ ಮಕ್ಕಳು.
ಶಾಸ್ತ್ರವನೋದುವರೆಲ್ಲ ಸೂಳೆಯ ಮಕ್ಕಳು.
ಪುರಾಣವ ಹೇಳುವರೆಲ್ಲ ಕುಂಟಲಗಿತ್ತಿಯ ಮಕ್ಕಳು.
ಆಗಮವ ನೋಡುವರೆಲ್ಲ ಹಾರುತಿಯ ಮಕ್ಕಳು.
ತರ್ಕತಂತ್ರಗಳ ನೋಡಿ ಹೇಳುವರೆಲ್ಲ
ವೈದ್ಯಗಾರತಿಯ ಮಕ್ಕಳು.
ಇಂತೀ ವೇದಾಗಮಶಾಸ್ತ್ರಪುರಾಣ
ತರ್ಕತಂತ್ರಂಗಳೆಲ್ಲ ಕೇಳಿ ಆಚರಿಸುವವರೆಲ್ಲ

ಡೊಂಬಜಾತಕಾರ್ತಿಯ ಮಕ್ಕಳು.
ಇಂತಪ್ಪ ಜಡಮತಿ ವ್ರತಭ್ರಷ್ಟ ಮೂಳಹೊಲೆಯರಿಗೆ
ಭವಬಂಧನ ಎಂದೂ ಹಿಂಗದು, ಮುಕ್ತಿದೋರದು.
ಇಂತಿವರ ಪುಣ್ಯಕ್ಕೆ ಅಧಿಕಾರಿಗಳಾದ ಬ್ರಹ್ಮ ವಿಷ್ಣು ರುದ್ರ
ಮೊದಲಾದ ದೇವತೆಗಳಿಗೆ ಮುನ್ನವೇ ಭವಹಿಂಗದು,
ಮುಕ್ತಿದೋರದು ಎಂದನಯ್ಯಾ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೬೩ ||

೨೬೪

ಮಲವ ಭುಂಜಿಸುವ ಶೂಕರನಿಗೆ ಮದಗಜವ ಹೋಲಿಸಿದರೆ
ಆ ಶೂಕರ ಮದಗಜವಾಗಬಲ್ಲುದೆ ?
ಎಲುಬು ಕಡಿಯುವ ಶುನಿಗಳಿಗೆ ಗಜವೈರಿಯ ಹೋಲಿಸಿದರೆ
ಆ ಶುನಿಗಳು ಗಜವೈರಿಯಾಗಬಲ್ಲುವೆ ?
ಇಲಿಯ ತಿಂಬುವ ಮಾರ್ಜಾಲನಿಗೆ ಮಹಾಘ್ರನ ಹೋಲಿಸಿದರೆ
ಆ ಮಾರ್ಜಾಲ ಮಹಾವ್ಯಾಘ್ರನಾಗಬಲ್ಲುದೆ ?
ಹೊಲಸುತಿಂಬುವ ಕಾಗಿಯ ಮರಿಗೆ ಕೋಗಿಲೆಯ ಹೋಲಿಸಿದರೆ
ಆ ಕಾಗಿಯಮರಿ ಸುನಾದಸ್ವರ ಕೋಗಿಲಮರಿಯಾಗಬಲ್ಲುದೆ ?
ಕಸವ ತಿಂಬುವ ಕತ್ತೆಗೆ ಕುದುರೆಯ ಹೋಲಿಸಿದರೆ
ಆ ಕತ್ತೆ ಮಹಾತೇಜಿಯಾಗಬಲ್ಲುದೆ ?
ಕಸ ನೀರು ಹೊರುವ ದಾಸಿಗೆ ಅರಸಿಯ ಹೋಲಿಸಿದರೆ
ಆ ದಾಸಿಯು ಅರಸಿಯಾಗಬಲ್ಲಳೆ ?
ಈಚಲ ಕಾಡಿನಮರಕ್ಕೆ ಟೆಂಗಿನಮರ ಹೋಲಿಸಿದರೆ
ಆ ಈಚಲ ಕಾಡಿನಮರ ಎಳೆಯ ಟೆಂಗಿನಮರವಾಗಬಲ್ಲುದೆ ?
ನೀರೊಳಗಣ ಕೋಳಿಗೆ ಕೊಳದೊಳಗಣ ಹಂಸನ ಹೋಲಿಸಿದರೆ
ಆ ನೀರಕೋಳಿಯು ರಾಜಹಂಸನಾಗಬಲ್ಲುದೆ ?
ತಿಪ್ಪೆಯೊಳಗಣ ಪುಳವತಿಂಬುವ ಕೋಳಿಗೆ
ಪಂಜರದೊಳಗಣ ಗಿಣಿಯ ಹೋಲಿಸಿದರೆ
ಆ ಕೋಳಿಯು ಅರಗಿಳಿಯಾಗಬಲ್ಲುದೆ ?
ಇಂತೀ ದೃಷ್ಟದ ಹಾಗೆ ಲೌಕಿಕದ ಜಡಮತಿ ಮನುಜರಿಗೆ
ಶಿವಜ್ಞಾನಸಂಪನ್ನರಾದ ಶರಣರ ಹೋಲಿಸಿದರೆ,
ಆ ಮಂದಮತಿ ಜೀವರು ಶಿವಜ್ಞಾನಿಗಳಾದ

ಶಿವಶರಣರಾಗಬಲ್ಲರೆ ?
ಈ ಭೇದವ ತಿಳಿಯಬಲ್ಲರೆ
ಕೂಡಲ ಚನ್ನಸಂಗಯ್ಯನ ಶರಣರೆಂಬೆ.
ಇದ ತಿಳಿಯದಿದ್ದರೆ ಭವಭಾರಿಗಳೆಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೦ ॥

೨೬೫

ಹೆಂಡದ ಹರವಿಗೆ ಹಾಲಹರವಿಯ ಹೋಲಿಸಿದರೆ,
ಆ ಹೆಂಡದ ಹರವಿ ಹಾಲಹರವಿಯಾಗಬಲ್ಲುದೆ ?
ಮದ್ಯಪಾನದ ಘಟಕ್ಕೆ ಘೃತದಘಟ ಹೋಲಿಸಿದರೆ
ಆ ಮದ್ಯಪಾನದ ಘಟ ಘೃತಘಟವಾಗಬಲ್ಲುದೆ ?
ಆಡಿನ ಕೊರಳಮೊಲೆಗೆ ಆಕಳಮೊಲೆಯ ಹೋಲಿಸಿದರೆ
ಆ ಆಡಿನ ಕೊರಳ ಮೊಲೆ ಆಕಳ ಮೊಲೆಯಾಗಬಲ್ಲುದೆ ?
ಗುಲಗಂಜಿಗೆ ಮಾಣಿಕವ ಹೋಲಿಸಿದರೆ
ಆ ಗುಲಗಂಜಿ ಮಾಣಿಕವಾಗಬಲ್ಲುದೆ ?
ವಜ್ರದ ಪಾಷಾಣಕ್ಕೆ ರಂಗೋಲಿಯಕಲ್ಲು ಹೋಲಿಸಿದರೆ,
ಆ ರಂಗೋಲಿಯಕಲ್ಲು ವಜ್ರವಾಗಬಲ್ಲುದೆ ?
ಬಿಳಿಹೂಲಿಗೆ ಮೌಕ್ತಿಕವ ಹೋಲಿಸಿದರೆ
ಆ ಬಿಳಿಹೂಲಿಯ ಹಣ್ಣು ಮುತ್ತಾಗಬಲ್ಲುದೆ ?
ಇಂತೀ ದೃಷ್ಟಾಂತದಂತೆ ಲೋಕಮಧ್ಯದಲ್ಲಿ ಜೀವಾತ್ಮರು
ಪಂಚಭೂತಮಿಶ್ರವಾದ ಮಿಥ್ಯದೇಹವ ಧರಿಸಿರ್ಪರು.
ಹಾಗೆ ಸುಜ್ಞಾನೋದಯವಾಗಿ-
ಶ್ರೀಗುರುಕಾರುಣ್ಯದಿಂ ಸರ್ವಾಂಗಲಿಂಗಸಂಬಂಧಿಗಳಾದ
ಶಿವಶರಣರು ಪಂಚಭೂತಮಿಶ್ರವಾದ ಮಿಥ್ಯದೇಹವ ಧರಿಸಿರ್ಪರು.
ಇದು ಕಾರಣ ಅಂತಪ್ಪ ಭಿನ್ನಜ್ಞಾನಿಗಳಾದ ಜೀವಾತ್ಮರಿಗೆ
ಸುಜ್ಞಾನಿಗಳಾದ ಶಿವಶರಣರ ಹೋಲಿಸಿದರೆ
ಆ ಕಷುಪಾತಕಿ ಜಡಜೀವಿಗಳು ಶಿವಜ್ಞಾನಸಂಪನ್ನರಾದ
ಶರಣಜನಂಗಳಾಗಬಲ್ಲರೆ ?
ಆಗಲರಿಯರು ಎಂದನಯ್ಯಾ ನಿಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೧ ॥

೨೬೬

ಹಾಲುಕುಡಿದ ಶಿಶು ಸತ್ತು
ವಿಷಕುಡಿದ ಶಿಶು ಬದುಕಿದುದ ಕಂಡೆ.
ಬೆಣ್ಣೆಯ ತಿಂದ ಶಿಶು ಸತ್ತು
ಕೆಂಡವ ತಿಂದ ಶಿಶು ಬದುಕಿದುದ ಕಂಡೆ.
ಉಂಡಾಡುವ ಶಿಶು ಸತ್ತು
ಉಣ್ಣದೆ ಓಡಾಡುವ ಶಿಶು ಬದುಕಿದುದ ಕಂಡೆ.
ಅಂಗೈಯೊಳಗಣ ಶಿಶು ಸತ್ತು
ಬೀದಿಬಾಜಾರದಲ್ಲಿರುವ ಶಿಶು ಬದುಕಿದುದ ಕಂಡೆ.
ಬೆಳದಿಂಗಳೊಳಗಿನ ಶಿಶು ಸತ್ತು
ಬಿಸಿಲೊಳಗಿನ ಶಿಶು ಬದುಕಿದುದ ಕಂಡೆ.
ಅರಮನೆಯೊಳಗಣ ಅರಸಿಯ ಶಿಶು ಸತ್ತು
ಊರೊಳಗಣ ದಾಸಿಯ ಶಿಶು ಬದುಕಿದುದ ಕಂಡೆ.
ಹುಟ್ಟಿದ ಶಿಶು ಬೇನೆಯಿಲ್ಲದೆ ಸತ್ತು
ಹುಟ್ಟದೆ ಬೇನೆ ಹತ್ತಿದ ಶಿಶು ಬದುಕಿದುದ ಕಂಡೆ.
ಈ ಉಭಯ ಭೇದವ ಬಲ್ಲ ಶಿಶು ಚನ್ನಮಲ್ಲಯ್ಯನಲ್ಲಿ ಬಯಲಾಯಿತ್ತು.
ಮತ್ತಂ, ಈ ಉಭಯ ನಿರ್ಣಯವನರಿಯದ ಶಿಶು
ಮಹಾಮಲೆಯಲ್ಲಿ ಬಯಲಾಯಿತ್ತು.
ಇದರಂದಚಂದ ನಿಮ್ಮ ಶರಣರೇ ಬಲ್ಲರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೭ ॥

೨೬೭

ಮೃತ್ಯುವೆಂಬ ಪಟ್ಟಣದಲ್ಲಿ ಒಂದು ಚಿತ್ರವ ಕಂಡೆ.
ಆಡು ಆನೆಯ ನುಂಗಿದ ಕಂಡೆ.
ಗುಂಗಾಡಿ ಹುಲಿಯ ನುಂಗಿದ ಕಂಡೆ.
ಹಂದಿ ಶುನಿಗಳ ಕಚ್ಚಿ ಹರಿದಾಡುವದ ಕಂಡೆ.
ಗಗನದೊಳಗಣ ಚಂದ್ರನ
ಭೂಮಿಯೊಳಗಣ ಸರ್ಪ ನುಂಗಿದ್ದ ಕಂಡೆ.
ಕೋತಿ ಕುದುರೆಯನೇರಿ ಹರಿದಾಡುವದ ಕಂಡೆ.
ಅರಸಿನ ಮಗ ಹೊಲತಿಯ ಸಂಗ ಮಾಡುವದ ಕಂಡೆ.
ಅಪ್ಪುರಲ್ಲಿಯೇ ಒಂದು ಇರುವೆ ಹುಟ್ಟಿ,

ಅರಸಿನ ಮಗನ ನುಂಗಿ, ಹೊಲತಿಯ ಕೊಂದು,
ಆನೆ ಆಡಿಗೆ ಕಚ್ಚಿ, ಹುಲಿ ಗುಂಗಾಡಿಯ ನುಂಗಿ,
ಗಗನದ ಚಂದ್ರನಪಗ್ರಹಿಸಿ, ಸರ್ಪನ ಕೊಂದು,
ಹಂದಿ, ನಾಯಿ ಕುದುರೆ, ಕೋತಿಯ ಹತಮಾಡಿ,
ಮೃತ್ಯುವೆಂಬ ಪಟ್ಟಣವ ಸುಟ್ಟು,
ಇರುವೆಯ ಗರ್ಭದಲ್ಲಿ ಇಬ್ಬರು ಹತವಾದರು.
ಇಬ್ಬರು ಹತವಾದಲ್ಲಿ ಹಲಬರು ಹತವಾದರು.
ಈ ಭೇದವ ತಿಳಿಯಬಲ್ಲರೆ ಅಂಗಲಿಂಗಿ
ಪ್ರಾಣಲಿಂಗಿ ಸರ್ವಾಂಗಲಿಂಗಿ ಎಂದೆನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೬೩ ||

೨೬೪

ಮುದುಕಿ ಮುದುಕನ ಸಂಗದಿಂದೊಂದು
ಎಳೆಯ ಶಿಶು ಪುಟ್ಟಿತ್ತು.
ಆ ಶಿಶುವಿನ ಬೆನ್ನಿನಿಂದ ಒಬ್ಬ
ಎಳೆಯ ಕುಮಾರಿ ಪುಟ್ಟಿದಳು.
ಆ ಕುಮಾರಿ ಅಣ್ಣನ ಮದುವೆಯಾಗಿ
ಮುದುಕನ ಒಡಗೂಡಿ ಮನೆಯ ಸುಟ್ಟು,
ಮನೆಯ ಒಡೆಯನ ಕೊಂದು ಒಡತಿಯ ನುಂಗಿ,
ತಾಯಿಯ ಕೊಂದು ಹೊಲಗೇರಿಯ ಹೊಕ್ಕು,
ಕುಲಗೆಟ್ಟು, ಹೊಲೆಯನ ಸಂಗವ ಮಾಡಿ,
ಸತ್ತುಹೋದ ಭೇದವನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವಿನ ಶರಣರು ಬಲ್ಲರಲ್ಲದೆ
ಮಿಕ್ಕಿನ ಜಡಮತಿ ಕುರಿಮನುಜರೆತ್ತ ಬಲ್ಲರಯ್ಯಾ. || ೨೬೪ ||

೨೬೫

ಗುಂಗರಿಯ ಮೂರು ಮುಖದಲ್ಲಿ ಊರು ಇರ್ಪುದು.
ಊರ ಮಧ್ಯದಲ್ಲಿ ಮೂರುಲೋಕವಿರ್ಪುದು.
ಮೂರುಲೋಕದ ಮಧ್ಯದಲ್ಲಿ ಅಗ್ನಿಕೊಂಡ ಇರ್ಪುದು.
ಆ ಕೊಂಡದೊಳಗೆ ವಿಚಿತ್ರದ ಸರ್ಪ ಇರ್ಪುದು.
ಆ ಸರ್ಪದ ತಲೆಯೊಳಗೆ ಅನಂತಕೋಟಿ

ಚಂದ್ರಸೂರ್ಯರ ಬೆಳಗಕೀಳ್ಪಡಿಸುವಂಥ ರತ್ನವಿರ್ಪುದು.
ಗುಂಗರಿಯ ಕೊಂದು ಮೂರುಮುಖ ವಿಕಾರಮಾಡಿ,
ಊರ ಸುಟ್ಟು ಮೂರುಲೋಕವೆಲ್ಲ ಕೆಡಿಸಿ,
ಅಗ್ನಿಯ ನಂದಿಸಿ, ಸರ್ಪನ ಕೊಂದು,
ಆ ರತ್ನವ ತಕ್ಕೊಳ್ಳಬಲ್ಲರೆ ಅನಾದಿಭಕ್ತನೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೫ ॥

೨೭೦

ಅರಸನ ಹೆಂಡತಿಯ ತಂದು
ಹೊಲೆಯಗೆ ಮದುವೆಯ ಮಾಡಿದೆ.
ಹೊಲೆಯನ ಹೆಂಡತಿಯ ತಂದು
ಅರಸಗೆ ಮದುವೆಯ ಮಾಡಿದೆ.
ಅಣ್ಣನ ಹೆಂಡತಿಯ ತಂದು ತಮ್ಮಗೆ ಮದುವೆಯ ಮಾಡಿದೆ.
ತಮ್ಮನ ಹೆಂಡತಿಯ ತಂದು ಅಣ್ಣಗೆ ಮದುವೆಯ ಮಾಡಿದೆ.
ಒಡೆಯನ ಹೆಂಡತಿಯ ತಂದು
ಆಳಿಗೆ ಮದುವೆಯ ಮಾಡಿದೆ.
ಆಳಿನ ಹೆಂಡತಿಯ ತಂದು
ಒಡೆಯಗೆ ಮದುವೆಯ ಮಾಡಿದೆ.
ಇಂತಿವರ ಮದುವೆಯ ಸಂಭ್ರಮದೊಳಗೆ
ಕಂಬ ಸುಟ್ಟು, ಹಂದರ ಉಳಿಯಿತ್ತು.
ಭೂಮಿ ಸುಟ್ಟು, ಹಸಿಜಗುಲಿ ಉಳಿಯಿತ್ತು.
ಐದುಮಂದಿ ಐದಗಿತ್ತೇರು ತಮ್ಮ ಶಾಲಿಯ ಕಳೆದು,
ಕುಪ್ಪಸ ತೆಗೆದು, ಹೆಂಡಗಾರನ ಬೆನ್ನು ಹತ್ತಿ
ಹೋದುದು ಕಂಡು ಬೆರಗಾದೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೬ ॥

## ಪ್ರಾಣಲಿಂಗಿಯ ಮಹೇಶ್ವರ

೨೭೧

ಬೇವಿನಮರಕ್ಕೆ ಬೆಲ್ಲದ ಕಟ್ಟೆಯ ಕಟ್ಟಿ,
ಚಿನ್ನಿ ಸಕ್ಕರೆಯ ಖಾತವ ಹಾಕಿ,

ಜೇನುತುಪ್ಪ ನೊರೆವಾಲೆಂಬ ನೀರೆರೆದರೆ,
ಬೇವಿನಮರವಳಿದು ಬೆಲ್ಲದ ಮರವಾಗಬಲ್ಲುದೆ ?
ಮಾವಿನಮರಕ್ಕೆ ವಿಷದ ಕಟ್ಟೆಯ ಕಟ್ಟಿ,
ಉಪ್ಪಿನ ಖಾತವ ಹಾಕಿ, ಬೇವಿನ ಈಚಲ ತಾಡಿನ ಹಣ್ಣು
ಮೊದಲಾದ ತ್ರಿವಿಧ ಹಣ್ಣಿನ ರಸವೆಂಬ
ನೀರೆರೆದರೆ ಮಾವಿನಮರವಳಿದು
ಬೇವು ಈಚಲ ತಾಡ ಮೊದಲಾದ ತ್ರಿವಿಧ ವೃಕ್ಷವಾಗುವುದೆ ?
ಇಂತೀ ದೃಷ್ಟಾಂತದಂತೆ ಲೋಕದ ಮಧ್ಯದಲ್ಲಿ
ಸಂಸಾರವಿಷಯರಸಪೂರಿತವಾದ ಕಡುಪಾತಕ ಜಡಜೀವಿಗಳಾದ
ಕುರಿಮನುಜರ ತಂದು
ಭಿನ್ನಜ್ಞಾನಿಗಳಾದ ಆಶಾಬದ್ಧ ಗುರುಮೂರ್ತಿಗಳು
ಅಂತಪ್ಪ ಜಡಮತಿಗಳಿಗೆ ವಿಭೂತಿಯ ಪಟ್ಟವಗಟ್ಟಿ,
ರುದ್ರಾಕ್ಷಿಯ ಧರಿಸಿ, ಅವನ ಮಸ್ತಕದ ಮೇಲೆ
ಪತ್ರಿ ಪುಷ್ಪವನಿಟ್ಟು, ಮೂರೇಳು ಪೂಜೆಯ ಮಾಡಿ,
ಇದಕ್ಕೆ ದೃಷ್ಟಾಂತ : ಹಸಿಯ ಕುಳ್ಳಲ್ಲಿ ಬೆಂಕಿಯನಿಟ್ಟು
ಊದಿ ಪುಟಮಾಡುವ ಮರುಳರಂತೆ,
ಬರಡು ಆವಿನ ಹಾಲ ಕರಸಿಹೆನೆಂಬ ಅಧಮನಂತೆ,
ದುಮ್ಮಡಿಯ ಹಚ್ಚಿ ಊದಿ ಕಿವಿಯೊಳಗಣ
ತೊನಸಿ ತೆಗೆವ ಗಂಧಿಗಾರನಂತೆ,
ಅಂತಪ್ಪ ಮಲತ್ರಯಯುಕ್ತವಾದ ಜೀವಾತ್ಮರ
ದಕ್ಷಿಣ ವಾಮಭಾಗದ ಕರ್ಣದಲ್ಲಿ
ತಾರಕಮಂತ್ರದುಪದೇಶವನು
ತಮ್ಮ ನಿಲವ ತಾವರಿಯದ ಭಿನ್ನಭಾವದ ಗುರುಮೂರ್ತಿಗಳು
ಊದಿ ಊದಿ ಬಾಯಾರಿ ಗಂಟಲೊಣಗಿ ಧ್ವನಿಬಿದ್ದು
ದಣಿದು ಹೋದರಲ್ಲದೆ
ಸದ್ಭಕ್ತ ಶರಣಜನಂಗಳು ಮಾಡಲರಿಯರು.
ಮತ್ತಂ, ಚಿದಂಶಿಕನಾದಾತ್ಮನು ಶಿವಕೃಪೆಯಿಂ
ಸುಜ್ಞಾನೋದಯವಾಗಿ,
ಸಕಲಪ್ರಪಂಚವನ್ನೆಲ್ಲ ನಿವೃತ್ತಿಯ ಮಾಡಿ,
ಶ್ರೀಗುರುಕಾರುಣ್ಯವ ಪಡೆದ
ಲಿಂಗಾಂಗಸಂಬಂಧಿಯಾದ

ಸದಾಚಾರಸದ್ಭಕ್ತ ಶರಣಜನಂಗಳಿಗೆ
ವೇದಾಂತಿ, ಸಿದ್ಧಾಂತಿ ಯೋಗಮಾರ್ಗಿಗಳು ಮೊದಲಾದ
ಸಕಲ ಭಿನ್ನಭಾವದ ಜೀವಾತ್ಮರು
ವೇದಾಗಮ ಶಾಸ್ತ್ರ ಪುರಾಣ ತರ್ಕ ತಂತ್ರಗಳೆಲ್ಲವು
ತಮ್ಮ ವೇದಾಗಮ ಬೋಧಿಸಿ
ಶಿವಾಗಮುವನೋದಿದ ಶಿವಶರಣರಿಗೆ
ಹೇಳಿ ಹೇಳಿ ತಾವೇ ಬೇಸತ್ತು ಬಳಲಿ ಬೆಂಡಾಗಿ
ಮುಖಭಂಗಿತರಾಗಿ ಹೋದರಲ್ಲದೆ
ಅವರೇನು ಮರಳಿ ಜಡಮತಿಜೀವರಾಗಲರಿಯರು.
ಅಂತಪ್ಪ ಶಿವಜ್ಞಾನಸಂಪನ್ನರಾದ ಶರಣಜನಂಗಳು
ಎಷ್ಟು ಪ್ರಪಂಚವ ಮಾಡಿದಡೂ ಮಲತ್ರಯಯುಕ್ತವಾದ
ಜೀವರಾಗಲರಿಯರು.
ಅವರು ಎಷ್ಟು ಕ್ರೀಯವನಾಚರಿಸಿದೊಡೆಯು
ಫಲಪದವಿಯ ಪಡೆದು
ಭವಭಾರಕ್ಕೆ ಬರುವ ಜಡಮತಿ
ನರಕಜೀವಿಗಳಾಗಲರಿಯರು ಎಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೬೭ ||

೨೬೨

ಮೋರೆಯಿಲ್ಲದವರಿಗೆ ಕನ್ನಡಿಯ ತೋರಿದಂತೆ,
ಕಿವಿಯಿಲ್ಲದ ಕಿವುಡಗೆ ಶಾಸ್ತ್ರವ ಹೇಳುವಂತೆ,
ಮೂಗಿಲ್ಲದ ಮೂಕಂಗೆ ಮಾತು ಹೇಳುವಂತೆ,
ಬಾಯಿ ಇಲ್ಲದವರಿಗೆ ಪಂಚಾಮೃತವನುಣಿಸಿದಂತೆ,
ಒಲ್ಲದ ಕೂಸಿಗೆ ನೂರೆವಾಲನೆರೆದಂತೆ,
ಕನ್ಯಾಕುಮಾರಿಯ ಸಂಗ ನಪುಂಸಕ ಮಾಡುವಂತೆ,
ಇಂತೀ ದೃಷ್ಟಾಂತದಂತೆ ತ್ರಿವಿಧಮಲವ ಕಚ್ಚಿ,
ಸಂಸಾರವಿಷಯಲಂಪಟರಾದ ತಾಮಸಜೀವಿಗಳಿಗೆ
ಶಿವಾನುಭವಬೋಧೆಯ ಮಾಡಿದುದು ಒಂದೇ ನೋಡಾ.
ಅಂತಪ್ಪ ಮಂಗಮೂಳರ ಮುಂದೆ ಮಾತನಾಡಲಾಗದು.
ಮನದೆರದು ಮಹಾನುಭಾವಬೋಧೆಯ ಬೆಸಗೊಳ್ಳಲಾಗದು.
ತಥಾಪಿ ಬಿಡೆಯಭಾವದಿಂ ಶಿವಾನುಭಾವ ಬೆಸಗೊಂಡಡೆ

ಹಳ್ಳಗೊಂಡ ಹರವಿಯ ನೀರು ತುಂಬಿ ಇರಿಸಿದಂತೆ,
ಹೊಳ್ಳ ಕುಟ್ಟಿ ಗಾಳಿಗೆ ತೂರಿದಂತೆ ಆಯಿತ್ತು.
ಇದು ಕಾರಣ ಶಬ್ದಮುಗ್ಧನಾಗಿ ಕಲ್ಲುಮರದಂತೆ,
ಪರ್ಣ ಉದುರಿದ ವೃಕ್ಷದಂತೆ,
ಸುಮ್ಮನೆ ಇರ್ದನು ಕಾಣಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೮ ॥

### ೨೭೩

ಅಂಗವಿಲ್ಲದ ಪುರುಷನ ಸಂಗವಿಲ್ಲದ ಸ್ತ್ರೀ
ಗರ್ಭವಿಲ್ಲದೆ ಬಸುರಾದುದ ಕಂಡೆ.
ದಿನ ವಾರ ಮಾಸವಿಲ್ಲದೆ ಬೇನೆತೋರದೆ
ಒಂದು ಶಿಶು ಹಡೆದುದ ಕಂಡೆ.
ಆ ಶಿಶು ಮಂಡಲಾಧಿಪತಿಯ ಕೊಂದು
ಮಂಡಲವೆಲ್ಲ ಸುಡುವುದ ಕಂಡೆ.
ಕಂಡವರ ನುಂಗಿ ಸೂಲಗಿತ್ತಿಯ ಕೊಲ್ಲುವದ ಕಂಡೆ.
ತಾಯಿಸಂಗವ ಮಾಡಿ ತಂದೆಯಲ್ಲಿ ಸತ್ತು
ಕೂಡಲಚನ್ನಸಂಗಯ್ಯನ ಪಾದದಲ್ಲಿ ಅಡಗಿ ಬಯಲಾದುದ ಕಂಡೆ.
ಅದು ಅಡಗಿದಲ್ಲಿ ತಾನಡಗಬಲ್ಲರೆ
ಪ್ರಳಯವಿರಹಿತ ಪರಶಿವಮೂರ್ತಿ
ತಾನೆಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೬೯ ॥

### ೨೭೪

ಮೋಟ ಮೂಕಾರ್ತಿಯ ಮದುವೆಗೆ
ಮುಪ್ಪುರದರಸುಗಳು ನಿಬ್ಬಣ ಹೋದುದ ಕಂಡೆ.
ಐವರರಸರ ಸತಿಯರು ಆರತಿಯ ಪಿಡಿದುದ ಕಂಡೆ.
ಮೋಟಂಗೆ ಸೇಸೆಯನಿಕ್ಕಿ ತಾಳಿಯ ಹರಿದು
ತಾಳಿಯ ಕಟ್ಟಿದುದ ಕಂಡೆ.
ಮುಪ್ಪುರದರಸುಗಳು ಸತ್ತು
ಅಷ್ಟಪರ್ವತ ಅಳಿವುದ ಕಂಡೆ.

ಚಂದ್ರಸೂರ್ಯರೊಂದಾಗಿ
ಸಪ್ತಸಮುದ್ರ ಬತ್ತಿದುದ ಕಂಡೆ.
ಭೂಮಿ ಆಕಾಶ ಅಳಿದು
ಕತ್ತಲೆ ಬೆಳಗಾದುದ ಕಂಡೆ.
ಆ ಬೆಳಗಿನೊಳಗೆ ಮೋಟ ಮೂಕಾರ್ತಿಯ ಕೂಟವ ಕಂಡೆ.
ಆ ಕೂಟದ ನಡುವೆ ಒಂದು ತಲೆಯಿಲ್ಲದ ಶಿಶು ಹುಟ್ಟಿದುದ ಕಂಡೆ.
ಆ ಕೂಸಿನ ಕಂಡು ಇಬ್ಬರು ಹತವಾದುದ ಕಂಡೆ.
ಇಬ್ಬರು ಹತವಾದಲ್ಲಿ ಚತುರ್ದಶಭುವನಂಗಳು
ಜಲದಲ್ಲಿ ಪ್ರಳಯವಾದುದ ಕಂಡೆ.
ಇಂತೀ ವಿಚಿತ್ರವ ಶಿಶು ಕಂಡು
ಬಟ್ಟಬಯಲಿನ ಕಲ್ಲು ಮಾಯವಾಯ್ತು,
ಆ ಶಿಶುವಡಗಿದಲ್ಲಿ ಅಡಗಿದಾತನೇ ಪ್ರಳಯವಿರಹಿತನು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೦ ॥

## ಪ್ರಾಣಲಿಂಗಿಯ ಪ್ರಸಾದಿ

೨೭೫

ಪಾದೋದಕ ಪ್ರಸಾದಗಳೆಂದೆಂಬಿರಿ,
ಪಾದೋದಕ ಪ್ರಸಾದದ ಬಗೆಯ ಪೇಳ್ವೆ.
ಗದ್ದುಗೆಯ ಮೇಲೆ ಗದ್ದುಗೆಯ ಹಾಕಿ,
ಜಂಗಮಲಿಂಗಿಗಳ ಕರತಂದು ಕುಳ್ಳಿರಿಸಿ,
ಧೂಪ ದೀಪ ಪತ್ರಿ ಪುಷ್ಪದಿಂದ ಪಾದಪೂಜೆಯ ಮಾಡಿ,
ಕೆರೆ ಬಾವಿ ಹಳ್ಳ ಕೊಳ್ಳ ನದಿ
ಮೊದಲಾದವುಗಳ ನೀರ ತಂದು-
ಬ್ರಹ್ಮರಂಧ್ರದಲ್ಲಿರುವ ಸತ್ಯೋದಕವೆಂದು ಮನದಲ್ಲಿ ಭಾವಿಸಿ,
ಆ ಜಂಗಮದ ಉಭಯಪಾದದ ಮೇಲೆರೆದು,
ಪಾದೋದಕವೇ ಪರಮತೀರ್ಥವೆಂದು
ಲಿಂಗ ಮುಂತಾಗಿ ಸೇವಿಸಿ,
ನವಖಂಡಪೃಥ್ವಿಯಲ್ಲಿ ಬೆಳೆದ
ಹದಿನೆಂಟು ಜೀನಸಿನ ಧಾನ್ಯವ ತಂದು,
ಉದಕದಲ್ಲಿ ಹೆಸರಿಟ್ಟು, ಅಗ್ನಿಯಲ್ಲಿ ಪಾಕವಮಾಡಿ,
ತಂದು ಜಂಗಮಕ್ಕೆ ಎಡೆಮಾಡಿ,

ಜಂಗಮವು ತನ್ನ ಲಿಂಗಕ್ಕೆ ಅರ್ಪಿಸಿ ಸೇವಿಸಿದಬಳಿಕ
ತಾವು ಪ್ರಸಾದವೇ ಪರಬ್ರಹ್ಮವೆಂದು ಭಾವಿಸಿ,
ಕೊಂಡು ಸಲಿಸುವರಯ್ಯ.
ಇಂತೀ ಕ್ರಮದಿಂದ ಕೊಂಬುದು ಪಾದೋದಕಪ್ರಸಾದವಲ್ಲ.
ಇಂತೀ ಉಭಯದ ಹಂಗು ಹಿಂಗದೆ ಭವಹಿಂಗದು,
ಮುಕ್ತಿದೋರದು.
ಮತ್ತಂ, ಹಿಂದಕ್ಕೆ ಪೇಳಿದ ಕ್ರಮದಿಂದಾಚರಿಸಿ,
ಗುರುಲಿಂಗಜಂಗಮದಲ್ಲಿ ಪಾದೋದಕ ಪ್ರಸಾದವ
ಸೇವಿಸಬಲ್ಲವರಿಗೆ ಪ್ರಸಾದಿಗಳೆಂಬೆ.
ಇಂತಪ್ಪವರಿಗೆ ಭವ ಹಿಂಗುವದು,
ಮುಕ್ತಿಯೆಂಬುದು ಕರತಳಾಮಳಕವಾಗಿ ತೋರುವುದು.
ಈ ಪಾದೋದಕದ ಭೇದವ
ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮುಖ್ಯವಾದ
ಏಳುನೂರೆಪ್ಪತ್ತು ಪ್ರಮಥಗಣಂಗಳು ಬಲ್ಲರಲ್ಲದೆ
ಮಿಕ್ಕಿನ ಜಡಮತಿ ಕಡುಪಾತಕರಾದ
ಭಿನ್ನಭಾವ ಜೀವಾತ್ಮರೆತ್ತ ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೧ ॥

### ೨೭೬

ಕರಿಯ ಕಂಬಳಿಯ ಮೇಲೆ ಬಿಳಿಯ ಪಾವಡವ ಹಾಕಿ,
ಮಲತ್ರಯಯುಕ್ತವಾದ ಒಬ್ಬ ಹೊಲಸು ಪೃಷ್ಠದ ನರಮನುಜನ
ಜಂಗಮನೆಂದು ಕರತಂದು ಗದ್ದುಗೆಯ ಮೇಲೆ ಕುಳ್ಳಿರಿಸಿ,
ಅವರ ಎದುರಿಗೆ ತಪ್ಪುತಡಿಯ ಮಾಡಿದ
ಪಾತಕರ ಅಡ್ಡಗೆಡವಿ ಮೂಗಿನ ದಾರಿ ತೆಗೆವರಂತೆ,
ಹೊಟ್ಟೆಗಿಲ್ಲದೆ ಒಬ್ಬ ಬಡವನು
ಧನಿಕನ ಮುಂದೆ ಅಡ್ಡಬಿದ್ದು ಬೇಡಿಕೊಳ್ಳುವಂತೆ,
ಇಂತೀ ದೃಷ್ಟಾಂತದಂತೆ
ಆಶೆ ಆಮಿಷ ತಾಮಸದಿಂದ ಮಗ್ನರಾದ ಭೂತದೇಹಿಗಳ ಮುಂದೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಮಲವ ಕಚ್ಚಿ,
ಸಂಸಾರವಿಷಯದಲ್ಲಿ ಮಗ್ನರಾದ ಪಾತಕ ಮನುಜರು
ಅಡ್ಡಬಿದ್ದು ಪಾದಪೂಜೆಯ ಮಾಡಿ

ಪಾದೋದಕಪ್ರಸಾದ ಕೊಂಬುವರು.
ಇವರು ಭಕ್ತರಲ್ಲ, ಅವನು ಜಂಗಮನಲ್ಲ.
ಇಂತವರು ಕೊಂಬುವದು ಪಾದೋದಕಪ್ರಸಾದವಲ್ಲ.
ಇಂತಪ್ಪ ದೇವಭಕ್ತರ ಆಚರಣೆ ನಡತೆಯೆಂತಾಯಿತೆಂದೊಡೆ
ದೃಷ್ಟಾಂತ: ಒಬ್ಬ ಜಾರಸ್ತ್ರೀ ತನ್ನ ಉದರಪೋಷಣಕ್ಕೆ
ಆಶೆಯ ಮಾಡಿ, ಒಬ್ಬ ವಿಟಪುರುಷನ ಸಂಗವಮಾಡಿದರೆ
ಅವನು ಪರುಷನಾಗಲರಿಯನು,
ಅವಳು ಸತಿಯಾಗಲರಿಯಳು.
ಅದೇನು ಕಾರಣವೆಂದೊಡೆ ಹೊನ್ನಿಗಲ್ಲದೆ.
ಮತ್ತಂ, ಆವನೊಬ್ಬ ಜಾತಿಹಾಸ್ಯಗಾರನು ರಾಜರ ಮುಂದೆ
ತನ್ನ ಜಾತಿಆಟದ ಸೋಗನ್ನೆಲ್ಲ ತೋರಿ
ಆ ರಾಜರ ಮುಂದೆ ನಿಂತು ಮಜುರೆಯ ಮಾಡಿ
ಮಹಾರಾಜಾ ಎನ್ನೊಡೆಯ ಎನ್ನ ತಂದೆಯೇ ಎಂದು ಹೊಗಳಿ
ನಿಮ್ಮ ಹೆಸರು ತಕ್ಕೊಂಡು ದೇಶದಮೇಲೆ ಕೊಂಡಾಡೇನೆಂದು
ಬೇಡಿಕೊಂಡು ಹೋಗುವನಲ್ಲದೆ
ಅವನು ತಂದೆಯಾಗಲರಿಯನು, ಇವನು ಮಗನಾಗಲರಿಯನು.
ಅದೇನು ಕಾರಣವೆಂದೊಡೆ:
ಒಡಲಕಿಚ್ಚಿಗೆ ಬೇಡಿಕೊಳ್ಳುವನಲ್ಲದೆ.
ಇಂತೀ ದೃಷ್ಟಾಂತದಂತೆ ಒಡಲ ಉಪಾಧಿಗೆ ಪೂಜೆಗೊಂಬರು
ವ್ರತನಿಯಮನಿತ್ಯಕ್ಕೆ ಪೂಜೆಯ ಮಾಡುವರು
ಅವರು ದೇವರಲ್ಲ, ಇವರು ಭಕ್ತರಲ್ಲ.
ಅದೇನು ಕಾರಣವೆಂದೊಡೆ-
ಉಪಾಧಿ ನಿಮಿತ್ಯಕಲ್ಲದೆ.
ಇಂತಪ್ಪ ವೇಷಧಾರಿಗಳಾದ
ಭಿನ್ನ ಭಾವದ ಜೀವಾತ್ಮರ ಪ್ರಸಾದವೆಂತಾಯಿತೆಂದಡೆ
ತುರುಕ ಅಂತ್ಯಜರೊಂದುಗೂಡಿ ಸರ್ವರೂ ಒಂದೇ ಆಗಿ
ತೋಳ ಬೆಕ್ಕು ನಾಯಿಗಳ ತಿಂದ ಹಾಗೆ,
ಸರ್ವರೂ ತಿಂದು ಹೋದಂತೆ ಆಯಿತಯ್ಯ.
ಇಂತಪ್ಪವರಿಗೆ ಭವಹಿಂಗದು ಮುಕ್ತಿದೋರದು.
ಮತ್ತಂ, ಅದೆಂತೆಂದೊಡೆ:
ತನುವೆಂಬ ಭೂಮಿಯ ಮೇಲೆ ಮನವೆಂಬ

ಕರಿಕಂಬಳಿಯ ಗದ್ದುಗೆಯ ಹಾಕಿ,
ಅದರ ಮೇಲೆ ಪರಮಶಾಂತಿ ಜ್ಞಾನವೆಂಬ ಮೇಲುಗದ್ದುಗೆಯನಿಕ್ಕಿ,
ಅಂತಪ್ಪ ಪರಮಶಾಂತಿಯೆಂಬ ಮೇಲುಗದ್ದಿಗೆಯ ಮೇಲೆ
ಸತ್ತುಚಿತ್ತಾನಂದ ನಿತ್ಯಪರಿಪೂರ್ಣಭರಿತವಾದ
ಪರಮನಿರಂಜನವೆಂಬ ಜಂಗಮವ ಮೂರ್ತವ ಮಾಡಿಸಿ,
ಪಾದಪೂಜೆಯ ಮಾಡಿ ಪಾದೋದಕ ಪ್ರಸಾದವ ಕೊಳ್ಳಬಲ್ಲರೆ
ಆತ ಅನಾದಿ ಭಕ್ತ.
ಇಂತೀ ಭೇದವ ತಿಳಿದು ಕೊಡಬಲ್ಲರೆ
ಆತ ಅನಾದಿ ಜಂಗಮ.
ಇಂತಪ್ಪವರಿಗೆ ಭವಬಂಧನವಿಲ್ಲ,
ಮುಕ್ತಿಯೆಂಬುದು ಕರತಳಾಮಳಕವಾಗಿ ತೋರುವದು.
ಇಂತಪ್ಪ ವಿಚಾರವನು ಸ್ವಾನುಭಾವಜ್ಞಾನದಿಂ ತಿಳಿಯದೆ
ಅಜ್ಞಾನದಿಂದ ಮಾಡುವ ಮಾಟವೆಲ್ಲ
ಜೊಳ್ಳು ಕುಟ್ಟಿ, ಹೊಳ್ಳು ಗಾಳಿಗೆ ತೂರಿದಂತೆ ಆಯಿತ್ತು
ನೋಡೆಂದ ನಿಮ್ಮ ಶರಣ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೨ ॥

೨೭೭

ಗುರು ಮುನ್ನವೋ ಶಿಷ್ಯ ಮುನ್ನವೋ ಲಿಂಗ ಮುನ್ನವೋ
ಶರಣ ಮುನ್ನವೋ ಜಂಗಮ ಮುನ್ನವೋ ಭಕ್ತ ಮುನ್ನವೋ
ಪಾದೋದಕ-ಪ್ರಸಾದ ಮುನ್ನವೋ ವಿಭೂತಿ-ರುದ್ರಾಕ್ಷಿ ಮುನ್ನವೋ
ಮಂತ್ರ ಮುನ್ನವೋ ಶಿವಾಚಾರ ಮೊದಲಾಗಿ ಆವುದು ಮುನ್ನವೋ
ಎಂದು ತಿಳಿಯಬಲ್ಲರೆ ಗುರುವೆಂಬೆ.
ಭೂಮಿ ಮುನ್ನವೋ ಆಕಾಶ ಮುನ್ನವೋ
ಅಗ್ನಿ ಮುನ್ನವೋ ವಾಯು ಮುನ್ನವೋ
ಚಂದ್ರ ಮುನ್ನವೋ ಸೂರ್ಯ ಮುನ್ನವೋ
ಜ್ಯೋತಿ ಮುನ್ನವೋ ಕಾಳಗತ್ತಲೆ ಮುನ್ನವೋ
ಸಮುದ್ರ ಮುನ್ನವೋ ಆತ್ಮ ಮೊದಲಾಗಿ ಆವುದು ಮುನ್ನವೋ
ಎಂದು ತಿಳಿಯಬಲ್ಲರೆ ಲಿಂಗವೆಂಬೆ.
ಹೆಣ್ಣು ಮುನ್ನವೋ ಗಂಡು ಮುನ್ನವೋ,
ಗರ್ಭ ಮುನ್ನವೋ ಶಿಶು ಮುನ್ನವೋ

ತಾಯಿ ಮುನ್ನವೋ ತಂದೆ ಮುನ್ನವೋ
ಜ್ಞಾನ ಮುನ್ನವೋ ಅಜ್ಞಾನ ಮುನ್ನವೋ
ಗಂಧ ಮುನ್ನವೋ ಘ್ರಾಣ ಮುನ್ನವೋ
ರುಚಿ ಮುನ್ನವೋ ಜಿಹ್ವೆ ಮುನ್ನವೋ
ನೋಟ ಮುನ್ನವೋ ರೂಪ ಮುನ್ನವೋ
ಶ್ರೋತ್ರ ಮುನ್ನವೋ ಶಬ್ದ ಮುನ್ನವೋ
ತ್ವಕ್ ಮುನ್ನವೋ, ಮೃದು ಕಠಿಣ ಮೊದಲಾದ
ಆವುದು ಮುನ್ನವೋ ಎಂದು ತಿಳಿಯಬಲ್ಲರೆ ಜಂಗಮವೆಂಬೆ.
ಅರಿವು ಮುನ್ನವೋ ಮರೆವು ಮುನ್ನವೋ
ಆಚಾರ ಮುನ್ನವೋ ಅನಾಚಾರ ಮುನ್ನವೋ
ಬ್ರಹ್ಮಾಂಡ ಮುನ್ನವೋ ಪಿಂಡಾಂಡ ಮುನ್ನವೋ
ಮನ ಮುನ್ನವೋ ಪ್ರಾಣ ಮುನ್ನವೋ
ಧರ್ಮ ಮುನ್ನವೋ ಕರ್ಮ ಮುನ್ನವೋ
ಇಂತೀ ಸರ್ವರೊಳಗೆ ತಾ ಮೊದಲಾಗಿ
ಆವುದು ಮುನ್ನವೋ ಎಂದು ತಿಳಿಯಬಲ್ಲರೆ
ಪಾದೋದಕ ಪ್ರಸಾದಿಗಳೆಂಬೆ;
ವಿಭೂತಿ ರುದ್ರಾಕ್ಷಿಧಾರಣ ಮಂತ್ರಮೌನಿಗಳೆಂಬೆ.
ಇಂತಪ್ಪ ವಚನದ ತಾತ್ಪರ್ಯ ತಿಳಿಯಬಲ್ಲರೆ
ಲಿಂಗಾಂಗಸಮರಸಾನಂದಸುಖವ ತಿಳಿಯಬಲ್ಲ
ಶಿವಜ್ಞಾನಸಂಪನ್ನರೆಂಬೆ.
ಪರಶಿವಯೋಗಿಗಳೆಂಬೆ, ಷಟ್‌ಸ್ಥಲ ಭಕ್ತರೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೩ ॥

೨೭೪

ಪೃಥ್ವಿಯಲ್ಲಿ ಹುಟ್ಟಿದ ಶಿಲೆಯ ತಂದು
ಕಲ್ಲುಕುಟಿಕನಿಂದ ಕಟಿಸಿ, ಕರಿಯ ಕೆಸರ ಮೆತ್ತಿ,
ಪಾತಕಗುರುವಿನ ಕೈಯಲ್ಲಿ ಪ್ರೇತಲಿಂಗವ ಕೊಟ್ಟು,
ಭೂತದೇಹಿಗಳು ಪಡಕೊಂಡು
ಅಂಗೈಯಲ್ಲಿ ಆ ಲಿಂಗವ ಕುಳ್ಳಿರಿಸಿ,
ಕರುವಿಲ್ಲದ ಎಮ್ಮೆಗೆ ಮುರುವು ಹಾಕಿದಹಾಗೆ,
ಅಡವಿಯೊಳಗಣ ಕಾಡುಮರದ ಹಸರು ತಪ್ಪಲು ತಂದು

ಆ ಲಿಂಗಕ್ಕೆ ಹಾಕಿದರೆ ಸಾಕೆನ್ನದು ಬೇಕೆನ್ನದು.
ಅನ್ನ ನೀರು ತೋರೆದರೆ ಒಂದಗುಳನ್ನ ಸೇವಿಸದು.
ಒಂದು ಹನಿ ಉದಕವ ಮುಟ್ಟದು.
ಇಂತಪ್ಪ ಲಿಂಗವ ಪೂಜಿಸಿ ಮರಣಕ್ಕೆ ಒಳಗಾಗಿ
ಹೋಹಲ್ಲಿ ಪ್ರಾಣಕ್ಕೆ ಲಿಂಗವಾವುದು ಎಂದರಿಯದೆ
ತ್ರಿಲೋಕವೆಲ್ಲ ಪ್ರಳಯವಾಗಿ ಹೋಗುತಿರ್ಪುದು ನೋಡಾ.
ಅದೇನು ಕಾರಣವೆಂದಡೆ :
ತಮ್ಮ ನಿಜವ ಮರೆದ ಕಾರಣ.
ಲಿಂಗದ ಗೊತ್ತು ತಮಗಿಲ್ಲ, ತಮ್ಮ ಗೊತ್ತು ಲಿಂಗಕ್ಕಿಲ್ಲ.
ಇಂತಪ್ಪ ಆಚಾರವೆಲ್ಲ ಶೈವಮಾರ್ಗವಲ್ಲದೆ
ವೀರಶೈವಮಾರ್ಗ ಮುನ್ನವೇ ಅಲ್ಲ.
ಅದೆಂತೆಂದೊಡೆ :
ಆದಿ ಅನಾದಿಯಿಂದತ್ತತ್ತಲಾದ ನಿಃಕಲಚಿದ್ರೂಪಲಿಂಗವನು
ನಿಃಕಲಸದ್ರೂಪಾಚಾರ್ಯನಲ್ಲಿ ಪಡಕೊಂಡು
ಆತ್ಮನೆಂಬ ಅಂಗದ ಮೇಲೆ ಅರುಹೆಂಬ ಲಿಂಗವ ಧರಿಸಿಕೊಂಡು,
ಸದ್ಭಾವವೆಂಬ ಹಸ್ತದಲ್ಲಿ
ಸುಜ್ಞಾನವೆಂಬ ಲಿಂಗವ ಮೂರ್ತಗೊಳಿಸಿ,
ಪರಮಾನಂದವೆಂಬ ಜಂಗಮದ ಜಲದಿಂ ಮಜ್ಜನಕ್ಕೆರದು,
ಮಹಾಜ್ಞಾನ ಕುಸುಮದಿಂ ಪುಷ್ಪವ ಧರಿಸಿ,
ಪೂಜಿಸಬಲ್ಲರೆ ಭವಹಿಂಗುವದು.
ಮುಕ್ತಿಯೆಂಬುವದು ಕರತಳಾಮಳಕವಾಗಿ ತೋರುವದು
ಎಂದನಯ್ಯ ನಿಮ್ಮ ಶರಣ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೭೪ ||

೨೭೯

ತಮ್ಮನ ಪ್ರಸಾದ, ಅಣ್ಣಗಲ್ಲದೆ
ಅಣ್ಣನ ಪ್ರಸಾದ ತಮ್ಮಗಿಲ್ಲ.
ಅಳಿಯನ ಪ್ರಸಾದ ಮಾವಗಲ್ಲದೆ
ಮಾವನ ಪ್ರಸಾದ ಅಳಿಯನಿಗಿಲ್ಲ.
ತಂಗಿಯ ಪ್ರಸಾದ ಅಕ್ಕಗಲ್ಲದೆ
ಅಕ್ಕನ ಪ್ರಸಾದ ತಂಗಿಗಿಲ್ಲ.

ಹೆಂಡತಿಯ ಪ್ರಸಾದ ಗಂಡಗಲ್ಲದೆ
ಗಂಡನ ಪ್ರಸಾದ ಹೆಂಡತಿಗಿಲ್ಲ.
ಮಗನ ಪ್ರಸಾದ ತಂದೆಗಲ್ಲದೆ
ತಂದೆಯ ಪ್ರಸಾದ ಮಗನಿಗಿಲ್ಲ.
ಹೊಲೆಯನ ಪ್ರಸಾದ ಶೀಲವಂತಗಲ್ಲದೆ
ಶೀಲವಂತನ ಪ್ರಸಾದ ಹೊಲೆಯನಿಗಿಲ್ಲ.
ಇಂತಪ್ಪ ಪ್ರಸಾದದ ಭೇದವ ಬಲ್ಲರೆ
ಪ್ರಾಣಲಿಂಗಿ ಪ್ರಸಾದಿಯೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೫ ॥

೨೮೦

ಕಮಲಪ್ರಸಾದ ಬ್ರಹ್ಮನ ನುಂಗಿತ್ತು.
ಕರಳಪ್ರಸಾದ ವಿಷ್ಣುವಿನ ನುಂಗಿತ್ತು.
ಕೋಣೆಪ್ರಸಾದ ರುದ್ರನ ನುಂಗಿತ್ತು.
ಆಕಾಶಪ್ರಸಾದ ಬ್ರಹ್ಮಾಂಡ ನುಂಗಿತ್ತು.
ಈ ನಾಲ್ಕು ಪ್ರಸಾದ ನುಂಗಿದಾತನೇ ಪ್ರಾಣಲಿಂಗಿ ಪ್ರಸಾದಿ.
ಕಾಡನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೬ ॥

## ಪ್ರಾಣಲಿಂಗಿಯ ಶರಣ

೨೮೧

ಒಬ್ಬ ಪುರುಷಂಗೆ ಮೂವರು ಸ್ತ್ರೀಯರು.
ಒಬ್ಬ ಸ್ತ್ರೀಗೆ ಮೂವರು ಪುರುಷರು.
ಒಬ್ಬ ಕಂಗಳ, ಒಬ್ಬ ಮೂಕ, ಒಬ್ಬ ಹೆಳವ,
ಇಂತೀ ಮೂವರ ಗಂಡರ ಆಳಾಪದಿಂದಿರಲು
ಅಷ್ಟರಲ್ಲಿಯೇ ಪೂರ್ವದ ಪುರುಷನು ಬಂದು
ಕಂಗಳಪುರುಷನ ಮರ್ತ್ಯದಲ್ಲಿಟ್ಟು,
ಮೂಕ ಪುರುಷನ ಸ್ವರ್ಗದಲ್ಲಿಟ್ಟು,
ಹೆಳವ ಪುರುಷನ ಪಾತಾಳದಲ್ಲಿಟ್ಟು,
ಶಾಲಿಕುಪ್ಪುಸ ಕಳೆದು ಎನ್ನ ಅಪ್ಪಲೊಡನೆ
ಅವನಂಗದಲ್ಲಿ ಅಡಗಿ ಎತ್ತ ಹೋದೆನೆಂಬುದ

ಪತಿವ್ರತಾಸ್ತ್ರೀಯರು ಬಲ್ಲರಲ್ಲದೆ
ಹಾದರಮಾಡುವ ಸ್ತ್ರೀಯರು ಅರಿಯರು ನೋಡಾ!
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೭೭ ||

೨೭೨

ಮಂಗಳಾಂಗಿ ಮಧುರವಾಣಿ ಕೇಳವ್ವಾ,
ನಿನಗೊಂದು ವಿಚಿತ್ರ ಪೇಳ್ವೆ.
ಎಮ್ಮವರು ಎನಗೆ ಹಳೆಯ ಮುದುಕನ ತಂದು
ಮದುವೆಯ ಮಾಡಿದರು ನೋಡವ್ವಾ!
ನಿನ್ನಿನ ಇರುಳ ಆತನ ಸಂಗಸುಖವನೇನು ಪೇಳ್ವರೆ ಅವ್ವಾ.
ಮೂರು ಮನೆಯೊಳಗಣ ಕೋಣೆಯೊಳಗೆ ಮಂಚದ ಮೇಲೆ
ಆರೂ ಇಲ್ಲದೆ ಎಳೆಯಕುಮಾರಿ ನಾ ಒಬ್ಬಳು ಮಲಗಿರ್ದೆನು ಕೇಳವ್ವಾ.
ಮೆಲ್ಲಮೆಲ್ಲನೆ ಬಂದು ಎನ್ನ ಮುಸುಕು ತೆಗೆಯಲು
ಆ ನಲ್ಲನ ಕಂಡು ಹೆದರಿ ಬೆದರಿ ಎದ್ದುನಿಂತೆನೆ ಅವ್ವಾ.
ನಾ ಬೆದರಿದ ಕಂಡು ಮುದುಕನು ಎಳೆಯಕುಮಾರನಾಗಿ
ಎನ್ನ ಕರವನೆ ಪಿಡಿದನೆ ಅವ್ವಾ.
ಆತನ ಚಲ್ವಿಕೆಯ ಕಂಡು ಮನೆಮಾರು ತೊರೆದು ಮರುಳಾಗಿರ್ದೆನವ್ವಾ.
ಆ ಪುರುಷನ ಚಲ್ವಿಕೆಯ ನೋಡಿ
ಎನಗೆ ಕಾಮ ತೋರಿತ್ತು ನೋಡವ್ವಾ.
ಆ ಕಾಮದಿಂದ ಉಟ್ಟ ಶಾಲಿ ತೊಟ್ಟ ಕುಪ್ಪಸ ಸಡಲಿ
ಮುಡಿ ಬಿಚ್ಚಿದವು ನೋಡವ್ವಾ.
ತನ್ನ ಬಾಯೊಳಗಿನ ತಾಂಬೂಲವ
ಎನ್ನ ಬಾಯೊಳಗೆ ಇಕ್ಕಿದ ನೋಡವ್ವಾ.
ಹತ್ತೆ ಕರೆದು ಬಿಗಿದಪ್ಪಿ ತರ್ಕೈಸಿ
ಎನ್ನಂಗದ ಎಲುವು ಮುರಿದು ನುಗ್ಗುನುಸಿಯ ಮಾಡಿದ ನೋಡವ್ವಾ.
ಈ ಸ್ತ್ರೀ ಪುರುಷರ ಸುಖವ
ಪುರುಷನುಳ್ಳ ಸತಿಯರು ಬಲ್ಲರಲ್ಲದೆ
ಪುರುಷರಿಲ್ಲದ ಸ್ತ್ರೀಯರು ತಿಳಿಯರು ನೋಡವ್ವಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೨೭೮ ||

೨೮೩

ವನಾಂತರದಲ್ಲಿ ಕೋಗಿಲೆ ಸ್ವರಗೈದಿತೆಂದು
ಕುಂಭಿನಿಯ ಮೇಲೆ ಕಾಗಿ ತಾ ಕರೆದಂತೆ,
ಅರಸಿ ಮಂಚವನೇರಿದಳೆಂದು
ಕಸ ನೀರು ಹೊರುವ ದಾಸಿ ತಾ ಹೊರಸನೇರುವಂತೆ,
ಮಹಾರಾಜಕುಮಾರನು ಆನೆಯನೇರಿದನೆಂದು
ಮಣ್ಣು ಹೊರುವ ಉಪ್ಪರಿಗನಮಗ ತಾ ಕೋಣ[ನ]ನೇರುವಂತೆ,
ಮಹಾವೀರಕುಮಾರ ಮಹಾತೇಜಿಯನೇರಿದನೆಂದು
ಮೈಲಿಗೆಯ ತೊಳೆಯುವ ಮಡಿವಾಳನಮಗ ತಾ
ಮೋಳಿಗೆಯ ಹೇರುವ ಕತ್ತೆಯನೇರುವಂತೆ,
ಬಾಲಹನುಮನು ಲಂಕೆಗೆ ಹಾರಿದನೆಂದು
ಒಂದು ಮರುಳಕೋತಿ ತಾ ಪರ್ವತವನೇರಿ ಕೆಳಕ್ಕೆ ಬಿದ್ದಂತೆ,
ಮಹಾಮಲೆಯೊಳಗೆ ಒಂದು ಮಹಾವ್ಯಾಘ್ರನು
ಘುಡುಘುಡಿಸಿ ಲಂಘಿಸಿ ಒಂದು ಪಶುವಿಗೆ ಹಾರಿತೆಂದು
ಮಹಾ ಶೀಗರಿಮೆಳೆಯೊಳಗೊಂದು ಮರುಳ ನರಿ ತಾ
ಒದರಿ ಹಲ್ಲು ಕಿಸಿದು ಕಣ್ಣು ತೆರೆದೊಂದು ಇಲಿಗೆ
ತಾ ಲಂಘಿಸಿ ಹಾರುವಂತೆ.
ಇಂತೀ ದೃಷ್ಟಾಂತದಂತೆ ಆದಿ ಅನಾದಿಯಿಂದತ್ತತ್ತಲಾದ
ಘನಮಹಾಲಿಂಗದೊಳಗೆ ಜ್ಯೋತಿ ಜ್ಯೋತಿ ಕೂಡಿದಂತೆ,
ಬೆರಸದ ಶಿವಶರಣರು ಹಾಡಿದ ವಚನವ
ಶಿವಾಚಿಕರಾದ ಸಜ್ಜೀವಾತ್ಮರು ಹಾಡಿ ನಿರ್ವಯಲಾದರೆಂದು
ತ್ರಿಭುವನ ಮೊದಲಾದ ಚತುರ್ದಶಭುವನದಲ್ಲಿರುವ
ದೇವ ದಾನವ ಮಾನವರು ಮೊದಲಾದ ಜೀವಾತ್ಮರು
ಇಟ್ಟೆಯ ಹಣ್ಣು ನರಿ ತಾ ತಿಂದು ಪಿಟ್ಟೆಸಿಕ್ಕು ಬಾಯಿತೆರೆದು ಒದರುವಂತೆ
ಏಕಲಿಂಗ ನಿಷ್ಠಾಪಾರಿಗಳ ವಚನವ ಮಲತ್ರಯವೆಂಬ ಇಟ್ಟೆಯಹಣ್ಣು ತಿಂದು
ಪಿಟ್ಟೆಸಿಕ್ಕು ಬಾಯಿ ತೆರೆದು ಬೇಸೆಹಾಯ್ದು ಕುರಿಯಂತೆ
ಒದರಿ ಒದರಿ ಸತ್ತು ಭವದತ್ತ ಮುಖವಾಗಿ ಹೋದರಲ್ಲದೆ
ಇವರು ಲಿಂಗೈಕ್ಯಗಳಾಗಲರಿಯರು ನೋಡೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೭೯ ॥

೨೮೪

ವೀರಮಾಹೇಶ್ವರರು ಸರ್ವಾಂಗದಲ್ಲಿ
ವಿಭೂತಿ-ರುದ್ರಾಕ್ಷಿ ಧಾರಣವಾಗಿ, ಶಿವಲಿಂಗವ ಧರಿಸಿ,
ಕಾವಿಲಾಂಛನವ ಪೊದ್ದರೆಂದು
ಈ ಮರ್ತ್ಯಲೋಕದ ಜಡಮತಿ ಮರುಳಮಾನವರು
ತಾವು ಧರಿಸುತ್ತಿರ್ಪರು.
ಇಂತಪ್ಪವರ ನಡತೆ ಎಂತಾಯಿತ್ತೆಂದರೆ,
ಗುರುವನರಿಯದೆ ವಿಭೂತಿಧರಿಸುವರೆಲ್ಲ
ಬೂದಿಯೊಳಗಣ ಕತ್ತೆಗಳೆಂಬೆ.
ತಮ್ಮ ನಿಜವ ತಾವರಿಯದೆ ರುದ್ರಾಕ್ಷಿ ಧರಿಸುವರೆಲ್ಲ
ಕಳವು ಮಾಡಿ ಕೈಯ ಕಟ್ಟಿಸಿಕೊಂಡ ಕಳ್ಳರೆಂಬೆ.
ಲಿಂಗದ ಸ್ವರೂಪವ ತಿಳಿಯದೆ ಕೊರಳಲ್ಲಿ ಲಿಂಗವ ಕಟ್ಟುವರೆಲ್ಲ
ವಾಳೆ ಆವಿಗೆ ಯಳಗುದ್ದಿಯ ಕಟ್ಟುವಂತೆ ಕಟ್ಟುವರೆಂಬೆ.
ಜಂಗಮದ ನಿಲವ ಅರಿಯದೆ
ಕಾವಿಯ ಲಾಂಛನ ಹೊದ್ದವರೆಲ್ಲ
ರಕ್ತಮುಳುಗಿದ ಹಸಿಯ ಚರ್ಮವ ಹೊದ್ದವರೆಂಬೆ.
ಇಂತಿದರನುಭಾವವ ತಿಳಿಯದೆ
ಈಶ್ವರನ ವೇಷವ ಧರಿಸಿ ಉದರಪೋಷಣಕ್ಕೆ ತಿರುಗುವರೆಲ್ಲ
ಜಾತಿಹಾಸ್ಯಗಾರರೆಂಬೆ.
ಇಂತಪ್ಪ ವೇಷಧಾರಿಗಳ ಶಿವಸ್ವರೂಪರೆಂದು ಭಾವಿಸುವವರ
ಶಿವಸ್ವರೂಪರೆಂದು ಹೇಳುವವರ,
ಇಂತಪ್ಪ ಉಭಯ ಮೂಢಾತ್ಮರ ಮುಖದ ಮೇಲೆ
ಲೊಟ್ಟಲೊಟ್ಟನೆ ಉಗುಳಿ ನಿಮ್ಮ ಗಣಂಗಳ ಪಾದರಕ್ಷೆಯಿಂದ
ಘಟ್ಟಿಸಿ ಅಟ್ಟೆಂದ ಕಾಣಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೦ ॥

೨೮೫

ಎರಡಿಲ್ಲದ ಭೂಮಿಯಲ್ಲಿ ಬಯಲ ಪಟ್ಟಣ.
ಆ ಪಟ್ಟಣಕ್ಕೆ ಒಡೆಯನಾದ ನಿರಂಜನನೆಂಬ ರಾಜನು
ಸಂಗವಿಲ್ಲದ ಸ್ತ್ರೀಸಂಯೋಗದಿಂ ಶಿಶುವ ಪಡೆದು,
ಆ ಶಿಶು ತಂಗಿಯನೊಡಗೂಡಿ

ಪಂಚಮುಖವುಳ್ಳಾತನ ಪಡೆದು,
ಆ ಪುತ್ರನ ಮಮಕಾರಶಕ್ತಿಯಿಂದ ಮೂವರು ಪುಟ್ಟಿದರು.
ಆ ಮೂವರು ಮೂರುಪುರವ ನಿರ್ಮಿಸಿದರು.
ಆ ಮೂರುಪುರ ಈರೈದು ನಾಲ್ಕು ದೇಶ,
ಆ ದೇಶದಲ್ಲಿ ಎರಡು ಕುಲ, ಎಂಬತ್ತುನಾಲ್ಕು ಕುಲವಾಯಿತ್ತು.
ಇಂತೀ ಎಲ್ಲವು ಯಾತರಿಂದಾಯಿತ್ತೆಂದರಿದು ಅದ ನುಂಗಿ
ತಾನಳಿದುಳಿದು ಇರ್ಪಾತನೇ ಶರಣ.
ಅಂಗಲಿಂಗಸಂಬಂಧಿ ಸರ್ವಾಂಗಲಿಂಗಿಯೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೧ ॥

೨೮೬

ಕಾಳಿಯ ಉದರದ ಮೂರು ಕೋಣೆ
ಕೋತಿಯ ದಾಡಿಯಲ್ಲಿ ಮೂರು ಲೋಕ ಅಡಗಿರ್ಪುದು.
ಆ ಕೋತಿಯ ಮಸ್ತಕದ ಹಾಲ ಕುಡಿದು
ಸತ್ತಾತನೇ ಪ್ರಳಯವಿರಹಿತನು.
ಕಾಡನೊಳಗಾದ ಶಂಕರಪ್ರಿಯ ಚನ್ನಕಂದಬಲಿಂಗ
ನಿರ್ಮಾಯಪ್ರಭುವೆ. ॥ ೨೮೨ ॥

೨೮೭

ತಾಡಿನಮರದಮೇಲೆ ತೆಂಗಿನಮರವ ಕಂಡೆ.
ಟೆಂಗಿನಮರದಮೇಲೆ ಮಾವಿನಮರವ ಕಂಡೆ.
ಮಾವಿನಮರದಲ್ಲಿ ಮೇಲುದೇಶದ ಪಕ್ಷಿ ಗೂಡನಿಕ್ಕಿಮುದ ಕಂಡೆ.
ಶ್ವೇತವರ್ಣ ಅಗ್ನಿಮುಖ ಕಿಡಿಗಣ್ಣು
ಅಂಡಜಾತಪಕ್ಷಿ ಇರುವುದ ಕಂಡೆ.
ತತ್ತಿಯಲ್ಲಿ ಎರಡು ಪಕ್ಷಿ ಪುಟ್ಟಿದುದ ಕಂಡೆ.
ನಡುವಲ್ಲಿ ಹಲವು ಮರಿಗಳುದಯವಾದುದ ಕಂಡೆ.
ಕಾಗಿಯ ಮರಿಗಳು ನುಂಗಿ ಪಕ್ಷಿಯ ಕೊಂದು
ಉಭಯ ಮರ ಮೆಟ್ಟಿ ಹಾರಿ ಮಾವಿನಮರದ ಗೂಡಿನಲ್ಲಿ ಅಡಗಲು
ಆ ಮರ ಬಯಲಾಯಿತ್ತು.
ಅದಡಗಿದಲ್ಲಿ ಅದಡಗಿದಾತನೇ ಮಾಯಾಕೋಳಾಹಳ ಶರಣನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೩ ॥

೨೮೮

ತ್ರಿಪುರಮಧ್ಯದಲ್ಲಿ ಮೂರಾರು ಮಂಡಲ ಇರ್ಪುದ ಕಂಡೆ.
ಮಂಡಲದ ಮಧ್ಯದಲ್ಲಿ ಅಗ್ನಿಪರ್ವತವ ಕಂಡೆ.
ಪರ್ವತಾಗ್ರದಲ್ಲಿ ಸಾವಿರಕಂಬದ ಮಂಟಪವ ಕಂಡೆ.
ಮಂಟಪದ ಮಧ್ಯದಲ್ಲಿ ಬಿಳಿಯತಾವರೆಯ ಕಮಲವ ಕಂಡೆ.
ಕಮಲದಲ್ಲಿ ಅಗಣಿತಕೋಟಿ ರವಿಶಶಿಕಳೆಯ ನುಂಗಿದ
ನವರತ್ನದ ತಗಡವ ಕಂಡೆ.
ಕಂಡವರು ಹಿಂಗಿ ಕಾಣದವರು ಬಂದು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೪ ॥

೨೮೯

ಪಂಚಶತಕೋಟಿ ಯೋಜನದಾಚೇಲಿ
ನೆಲವಿಲ್ಲದ ಭೂಮಿಯ ಕಂಡೆ.
ಆ ಭೂಮಿಯಲ್ಲಿ ನೀರಿಲ್ಲದೆ ಒಂದು ವೃಕ್ಷ ಪುಟ್ಟಿ
ಬೇರಿಲ್ಲದೆ ಬೆಳೆವುದ ಕಂಡೆ.
ಶಾಖೆ ಪರ್ಣ ಮೊಗ್ಗೆಯಿಲ್ಲದೆ ಕುಸುಮ ತೋರುವುದ ಕಂಡೆ.
ಫಲವಿಲ್ಲದ ಹಣ್ಣು ರಸಪೂರಿತವಾಗಿ
ವೃಕ್ಷದ ಕೊನೆಯಲ್ಲಿರುವುದ ಕಂಡೆ.
ಆ ಹಣ್ಣಿಗೆ ಹಲವರು ಹವಣಿಸಿ
ಕಾಣದೆ ಹಿಂದಕ್ಕೆ ಬಿದ್ದುದ ಕಂಡೆ.
ಆ ಹಣ್ಣನು ಕೈಕಾಲು ಕಣ್ಣು ತಲೆಯಿಲ್ಲದ ಅಧಮನು ಸೇವಿಸಿ
ಸತ್ತುದ ಕಂಡೆ.
ಸತ್ತ ಸುದ್ದಿಯ ಕೇಳಿ ಸತ್ತರು ನಿಮ್ಮವರು.
ಸಾಯದೆ ಬದುಕಿದರು ಎಮ್ಮಡಿಯ ಮಕ್ಕಳು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೫ ॥

## ಪ್ರಾಣಲಿಂಗಿಯ ಐಕ್ಯ

೨೯೦

ಆರುವರ್ಣದ ಭೂಮಿಯ ಮೂರು ಬೆಟ್ಟದ ನಡುವಣ
ಅಷ್ಟಪರ್ವತ ಸರೋವರ ಸಮುದ್ರದ ಹಂಸನು

ಹಾಲನೊಲ್ಲದೆ ಹೊಲಸ ತಿಂದು,
ಆರನಳಿದು, ಮೂರ ಕೆಡಹಿ, ಎಂಟ ಸುಟ್ಟು,
ಸಾಗರ ಬತ್ತಿ, ಹಂಸ ಹಾಲು ಕುಡಿದು ಹಾರಿಹೋಯಿತ್ತು.
ಇದರಂದಚಂದ ನಿಮ್ಮವರು ಬಲ್ಲರಲ್ಲದೆ
ಮತ್ತಾರು ಬಲ್ಲರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೬ ॥

೨೯೧

ಹರಿವ ನೀರ ಉರಿಕೊಂಡದಲ್ಲಿ
ಅರಗಿನ ಭೂಮಿ ಕರಗದಿರುವದ ಕಂಡೆ.
ನವಗೋಪುರಯುಕ್ತವಾದ ಆಕಾಶದಲ್ಲಿ ಒಂದೂರ ಕಂಡೆ.
ಸತಿಪತಿಸಹಿತವಾಗಿ ನವಮುಗ್ಧರಿರುವದ ಕಂಡೆ.
ಊರ ನಡುವೆ ಸಹಸ್ರ ಶತಪಂಚತ್ರಯ
ಏಕಕಾನಿಯ ಪಂಜರವ ಕಂಡೆ.
ಅಗ್ನಿವರ್ಣ ಶ್ವೇತಮುಖದ ಗಿಳಿಯ ಕಂಡೆ.
ಹಲವರು ಗಿಳಿಯ ಕಂಡು ಸಂತೋಷಬಟ್ಟು,
ರಕ್ಷಿಸಿ ಉಣ್ಣದೆ ಉಂಡು ಹೋಗುವದ ಕಂಡೆ.
ನಾನು ಗಿಳಿಯ ಕಂಡು ಸಂತೋಷಬಟ್ಟು,
ರಕ್ಷಿಸಿ ಉಂಡು ಉಣ್ಣದೆ ಹೋಗುವದ ಕಂಡೆ.
ಹಡದವರು ಸತ್ತು, ಹಡಿಯದವರು ಉಳಿದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೭ ॥

**ಕುರುಬರ ಭೀಮಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೨೯೨

ಆಡ ಅಣ್ಣಾ ತಿಂದ, ಕುರಿ ತಮ್ಮಾ ತಿಂದ,
ಹೋತ ಕಿರಿತಮ್ಮಾ ತಿಂದ, ಹಲವು ಮರಿಗಳವರಪ್ಪ ತಿಂದ.
ಅಪ್ಪನ ಎಂಜಲ ಕುರುಬ ತಿಂದು, ಬೀರೇಶ್ವರಲಿಂಗಕ್ಕೆ ಕೊಟ್ಟು,
ಕಾಯಕವ ಮಾಡುತಿರ್ದರು ನಿಮ್ಮವರು
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೮ ॥

೨೯೩

ಮೂರುದಿಬ್ಬದ ಅರಣ್ಯದಲ್ಲಿ ಚರಿಸುವ ಕುರಿತಂಡಸು
ಕೊಳಲ ಧ್ವನಿಯಿಂದ ದ್ವಿದ್ವಿಯ ಹೊಡೆದು
ತಪ್ಪೆಜ್ಜೆಯನಿಕ್ಕಿ ನಡೆಸುತ್ತ ತಂದು,
ಮೂರುಸುತ್ತಿನ ಹಟ್ಟಿಯೊಳಗೆ ತರುಬಿ
ಕುನ್ನಿಯ ಬಿಟ್ಟು, ಜಾವಲಿಯ ಕಟ್ಟಿ,
ವೀರಬೀರೇಶ್ವರಲಿಂಗಕ್ಕೆ ಜಗ್ಗನಿಕ್ಕಿ ಕಾಯಕವ ಮಾಡುತಿರ್ದರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೮೯ ॥

೨೯೪

ಆಡ ಕೊಂದು ಗಡಿಗೆಯಲಿಕ್ಕಿ,
ಕುರಿಯ ಸುಲಿದು ಮಡಿಕೆಯಲಿಕ್ಕಿ,
ಹೋತ ಕೊಯ್ದು ಕುಳ್ಳಿಯಲಿಕ್ಕಿ,
ಬೆಂಕಿಯಿಲ್ಲದೆ ಪಾಕವ ಮಾಡಿ ಬೀರೇಶ್ವರಲಿಂಗಕ್ಕೆ ಕೊಟ್ಟು,
ಕೀಲಿಲ್ಲದ ಕತ್ತರಿಯಿಂದ ಉಣ್ಣೆಯ ಕತ್ತರಿಸಿ,
ಬಿರಿಕಿಲ್ಲದೆ ನೂಲು ಮಾಡಿ ಘಟ್ಟಿಸಿ ನೇದು,
ಘಳಿಗೆಯ ಮಾಡಿ ವೀರಬೀರಗೆ ಹೊಚ್ಚಿ
ಡೊಳ್ಳು ಹೊಡೆದು, ಸತ್ತಿಗೆಯ ನೆರಳಲ್ಲಿ ಪಿರಿಕೆಯ ಹೊಡೆದು,
ಕಾಯಕವ ಮಾಡಿ ಹೋಗಬೇಕಣ್ಣಾ ವೀರಬೀರೇಶ್ವರಲಿಂಗದಲ್ಲಿಗೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೦ ॥

೨೯೫

ಆಡಿನ ಹಾಲ ಹರವಿಯ ತುಂಬಿ,
ಕುರಿಯ ಹಾಲ ಕೊಡವ ತುಂಬಿ,
ಮರಿಯ ಹಾಲ ಮಗಿಯ ತುಂಬಿ,
ಒಂದು ಕಲ್ಲಿನ ಒಲೆಯಮೇಲಿರಿಸಿ,
ಐದೂರ ಬೆಂಕಿಲ್ಲದೆ, ಆರೂರ ಬೆಂಕಿಯಿಂದ ಕಾಸಲು,
ಹಾಲರತು ಘಟ ಉಳಿದು,
ಉಳಿದ ಘಟವ ತಲೆಯಿಂದ ಹೊತ್ತು
ವೀರಬೀರೇಶ್ವರಲಿಂಗಕ್ಕೆ ಕೊಟ್ಟು

ಕಾಯಕವ ಮಾಡುತಿರ್ದರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೧ ॥

೨೯೬

ಮೂರು ಸುತ್ತಿನ ಹಟ್ಟಿಯ ಸುಟ್ಟು,
ಕುರಿಯ ತಂಡನು ಹೊಡೆದು,
ವೀರಬೀರೇಶ್ವರಲಿಂಗಕ್ಕೆ ಹಬ್ಬವಮಾಡಿ,
ಆರು ಸುತ್ತಿನ ಹಟ್ಟಿಯ ಕುರಿ ಕೊಲ್ಲದೆ ಕೊಂದು
ಹಾಲ ಕುಡಿದು ಮಲೆಯೊಳಡಗಿ ಮಲೆಯ ತಿಂದು,
ಮೂರುಮಂದಿ ವೀರಗಾರರ ಕೊಂದು,
ಶಸ್ತ್ರವ ಮುರಿದು ಶಸ್ತ್ರವ ಪಿಡಿದು ಕುಣಿಕುಣಿದಾಡಿ,
ಕಾಯಕವ ಮಾಡಿ ಡೊಳ್ಳುಹೊಡೆದು
ಡಂಗಿಯ ಗೂಡಿಗೆ ಹೋಗಬೇಕಣ್ಣಾ ಬೀರರೆಲ್ಲ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೨ ॥

೨೯೭

ಕುರಿಯ ಹಾಲ ಮರಿಯು ಕುಡಿದು
ಕುರುಬನ ಕೊಂದಿತ್ತು.
ಸತ್ತ ಕುರುಬ ಎದ್ದು ಕೂಗಲು
ಕೂಗಿನೊಡೆಯ ಬಂದು ಮರಿಯ ಕೊಂದು
ಕುರಿಯ ಸುಲಿದು, ಹೋತನ ಕಡಿದು,
ವೀರನೊಳಗೆ ಬೀರ, ಬೀರನೊಳಗೆ ವೀರ.
ಉಭಯಸಂದನರಿಯದ ವೀರರೆಲ್ಲ
ಕಾಡನೊಳಗಾದ ಶಂಕಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೩ ॥

## ಶರಣಸ್ಥಲ

ಸೂತ್ರ : ಇಂತೀ ಅನುಭಾವಭಕ್ತಿಯಿಂದಾಚರಿಸಿದ ಶರಣನು ಮುಂದೆ ಆನಂದಭಕ್ತಿಯಿಂದಾಚರಿಸಿ ಶರಣನಾಗುತಿರ್ದನಾಗಿ ಮುಂದೆ ಶರಣಸ್ಥಲವಾದುದು.

೨೯೮

ಶರಣರು ಶರಣರು ಎಂದೆಂಬಿರಯ್ಯ;
ಶರಣರ ನಿಲುಕಡೆ ದಾರುಬಲ್ಲರಯ್ಯ ?
ಶರಣರ ನಿಲವ ಉರಿಲಿಂಗಪೆದ್ದಯ್ಯಗಳು,
ನುಲಿಯ ಚಂದಯ್ಯಗಳು, ಹಡಪದ ಅಪ್ಪಣ್ಣಗಳು,
ಮ್ಯಾದಾರ ಕೇತಯ್ಯಗಳು, ಗಜೇಶ ಮಸಣಯ್ಯಗಳು,
ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು ಮೊದಲಾದ
ಏಳುನೂರೆಪ್ಪತ್ತು ಪ್ರಮಥಗಣಂಗಳು ಬಲ್ಲರಲ್ಲದೆ
ಮಿಕ್ಕಿನ ಭವಭಾರಿಗಳಾದ ವೇದಾಂತಿ, ಸಿದ್ಧಾಂತಿ,
ಯೋಗಮಾರ್ಗಿಗಳು ಮೊದಲಾದ ಭಿನ್ನಭಾವ ಜೀವಾತ್ಮರೆತ್ತ ಬಲ್ಲರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ ? ॥ ೨೯೮ ॥

೨೯೯

ಶರಣನ ನಿಲವು ಜ್ಯೋತಿಯಂತೆ,
ಶರಣನ ನಿಲವು ಚಂದ್ರನಂತೆ,
ಶರಣನ ನಿಲವು ಸೂರ್ಯನಂತೆ,
ಶರಣನ ನಿಲವು ಮಾಣಿಕದ ದೀಪ್ತಿಯಂತೆ,
ಶರಣನ ನಿಲವು ಅಗ್ನಿಯ ಕಾಂತಿಯಂತೆ,
ಶರಣನ ನಿಲವು ನವರತ್ನಯುಕ್ತವಾದ ಮೌಕ್ತಿಕದ ಮಾಲೆಯಂತೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೯ ॥

೩೦೦

ಶರಣನಾದೊಡೆ ಅಜ್ಯೋತಿದ ಅರಿವಿಯಂತಿರಬೇಕು ಲಿಂಗದಲ್ಲಿ.
ಶರಣನಾದೊಡೆ ಮುರಿದ ಬಂಗಾರ ಬೆಳ್ಳಾರದಲ್ಲಿ
ಬೆಚ್ಚಂತೆ ಇರಬೇಕು ಲಿಂಗದಲ್ಲಿ.
ಶರಣನಾದೊಡೆ ಪುಷ್ಪ-ಪರಿಮಳದಂತೆ,

ಪ್ರಭೆ-ಪಾಷಾಣದಂತೆ, ಜ್ಯೋತಿ-ಪ್ರಕಾಶದಂತೆ
ಇರಬೇಕು ಲಿಂಗದಲ್ಲಿ.
ಶರಣನಾದೊಡೆ ಸೂರ್ಯನ ಕಿರಣದಂತೆ, ಚಂದ್ರನ ಕಾಂತಿಯಂತೆ,
ಗಾಳಿ-ಗಂಧದಂತೆ, ಜಾಗಟೆ-ನಾದದಂತೆ ಇರಬೇಕು ಲಿಂಗದಲ್ಲಿ.
ಇಷ್ಟುಳ್ಳಾತನೇ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೬ ॥

**ಒಡ್ಡರ ತಿಮ್ಮಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೦೧

ಎರಡುಗಾಲಿಯ ಬಂಡಿಯ ಮುರಿದು
ಮೂರುಗಾಲಿಯ ಬಂಡಿಯ ಹೂಡಿ,
ಮೂಗೇಣ ಬಿಟ್ಟು, ಮೂಯೆತ್ತ ಕಟ್ಟಿ,
ಭೂಮಿಲ್ಲದಾರಣ್ಯ ಬೆಟ್ಟದ ಕಲ್ಲ ಬಂಡಿತುಂಬ ತುಂಬಿತಂದು
ಬೇಡಿದವರಿಗೆ ಕಲ್ಲ ಕೊಡೆ, ಬೇಡದವರಿಗೆ ಕಲ್ಲ ಹಾಕಿ,
ಹಾಗದ ರೊಕ್ಕವ ಕೊಂಡು, ಕಾಯಕವ ಮಾಡುತಿರ್ದರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೭ ॥

೩೦೨

ಕೀಲಿಲ್ಲದ ಬಂಡಿಯ ಗಾಲಿಯನುಚ್ಚಿ,
ಈಸಿಲ್ಲದ ನೊಗಕ್ಕೆ ಕಾಲಿಲ್ಲದ ಕೋಣನ ಹೂಡಿ,
ಹಾರಿ ಇಲ್ಲದೆ ಕಲ್ಲನೆಬ್ಬಿಸಿ, ಕೈಯಿಲ್ಲದೆ ಕಲ್ಲಪಿಡಿದು,
ಬಂಡಿಯ ಮೇಲೆ ಹೇರಿ ಊರೆಲ್ಲಾ ಮಾರಿ
ಹಾಗದ ರೊಕ್ಕವ ಕೊಂಡು ಕಾಯಕವ ಮಾಡುತಿರ್ದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೯೮ ॥

೩೦೩

ಕಪ್ಪಿನ ಭೂಮಿಗೆ ಮೂರುಗಜ ಸೂರ್ಯಕಾಂತದ ಕಲ್ಲು ಹಾಕಿ,
ಮೂರು ಹಣವ ಕೊಂಡೆ.
ಕೆಂಪಿನ ಭೂಮಿಗೆ ಆರು ಐದು ಗಜ ಚಂದ್ರಕಾಂತದ ಕಲ್ಲು ಹಾಕಿ,

ಆರೈದು ಹಣವ ಕೊಂಡೆ.
ಬಿಳುಪಿನ ಭೂಮಿಗೆ ಎರಡೆಂಟು ಏಳುಗಜದ ಅಗ್ನಿಕಾಂತದ ಕಲ್ಲು ಹಾಕಿ,
ಎರಡೆಂಟು ಏಳು ಹಣವ ಕೊಂಡೆ.
ಉಳಿದ ವರ್ಣದ ಭೂಮಿಗೆ ಮೂವತ್ತಾರು ಗಜ ಹಲವು ವರ್ಣದ
ಚಿಪ್ಪುಗಲ್ಲುಗಳ ತುಂಬಿ ಈರೈದುಹಣವ ಕೊಂಡೆ.
ಹೀಗೆ ಕಲ್ಲುಮಾರಿ ಹಾಗದ ಹಣವ ಕೊಂಡು
ಕಾಯಕವ ಮಾಡುತಿರ್ದರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಬಲಿಂಗ
ನಿರ್ಮಾಯಪ್ರಭುವೆ. || ೨೯೯ ||

೩೦೪

ಗುರುಪೂಜೆ ಮಾಡುವಣ್ಣಗಳ
ಸೂಳೇರ ಬಾಯಿಲೋಳೆ ನೆಕ್ಕಿಸಿತ್ತು ಮಾಯೆ.
ಲಿಂಗಪೂಜೆ ಮಾಡುವಣ್ಣಗಳ
ಅಂಗನೆಯರ ತೊಡೆಯ ಮೂಸಿನೋಡಿಸಿತ್ತು ಮಾಯೆ.
ಜಂಗಮಪೂಜೆ ಮಾಡುವಣ್ಣಗಳ
ರಂಭೆಯರ ಜಾನು ಜಂಘೆಯಲ್ಲಿರಿಸಿತ್ತು ಮಾಯೆ.
ಪಾದೋದಕ ಪ್ರಸಾದವಕೊಂಬ ಅಣ್ಣಗಳ
ಮದ್ಯಪಾನ ಮಾಂಸವ ತಿನಿಸಿತ್ತು ಮಾಯೆ.
ವಿಭೂತಿ ರುದ್ರಾಕ್ಷಿ ಧರಿಸುವಣ್ಣಗಳ
ತಿದಿಯ ಹಿರಿಸಿ ಮುಸುಕಿಯ ಕಟ್ಟಿಸಿತ್ತು ಮಾಯೆ.
ಮಂತ್ರಧ್ಯಾನಿಗಳೆಲ್ಲರ ಅಂಗನೆಯರ
ಭಗಧ್ಯಾನದಲ್ಲಿರಿಸಿತ್ತು ಮಾಯೆ
ಜಪತಪವ ಮಾಡುವಣ್ಣಗಳ
ಮುಸುಕು ತೆಗೆದು ಸ್ತ್ರೀಯರ ಮುಖವ ನೋಡಿಸಿತ್ತು ಮಾಯೆ.
ಗುರುಹಿರಿಯರೆಂಬಣ್ಣಗಳ
ಹಿರಿಯ ಶೂಲಕ್ಕೆ ಇಕ್ಕಿತ್ತು ಮಾಯೆ.
ವಿರಕ್ತರೆಂಬಣ್ಣಗಳ
ರಂಭೇರ ಮಲ ಒಸರುವ ಪೃಷ್ಠವ ಪಿಡಿಸಿತ್ತು ಮಾಯೆ.
ಪಟ್ಟದಯ್ಯಗಳು ಚರಮೂರ್ತಿ ಹಿರಿಯರು
ಮಾನ್ಯರೆಂಬಣ್ಣಗಳ ರಟ್ಟೆಗೆ ಹಗ್ಗಹಚ್ಚಿ
ಸ್ತ್ರೀಯರ ಮುಂದೆ ಹಿಂಡಗಟ್ಟಿ ಎಳಸಿತ್ತು ಮಾಯೆ.

ವೇದಾಗಮ ಪುರಾಣ ತರ್ಕ ತಂತ್ರಗಳೆಲ್ಲ ನೋಡಿ
ಹಾಡುವಣ್ಣಗಳೆಲ್ಲರ ಹೊಲೆಮಾದಿಗರ ಕಾಲು ಹಿಡಿಸಿತ್ತು ಮಾಯೆ.
ಇಂತೀ ನಾನಾ ಹಾದಿ ಶ್ರುತಿಗಳ ವಾಕ್ಯವ ಕೇಳಿ
ದಾನಧರ್ಮಗಳ ಮಾಡುವಣ್ಣಗಳನೆಲ್ಲರ
ತಲೆಕೆಳಗಾಗಿ ಕಾಲುಮೇಲಾಗಿ
ಎಂಬತ್ತುನಾಲ್ಕುಲಕ್ಷ ಯೋನಿಗಳಲ್ಲಿ
ರಾಟಾಳ ತಿರುಗಿದಂತೆ ತಿರುಗಿಸಿತ್ತು ಮಾಯೆ.
ಇಂತಪ್ಪ ಮಾಯೆಯ ಗೆಲುವರೆ ಆರಿಗೂ ಅಳವಲ್ಲ.
ಶಿವಜ್ಞಾನಸಂಪನ್ನರಾದ ಶಿವಶರಣರೇ ಬಲ್ಲರಲ್ಲದೆ,
ಮಿಕ್ಕಿನ ದೇವ ದಾನವ ಮಾನವರು ಮೊದಲಾದ
ಎಲ್ಲರಿಗೂ ಇಲ್ಲ ಇಲ್ಲ ಎಂದನಯ್ಯ ವೀರಾಧಿವೀರ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೦ ॥

೨೦೧

ಶೀಲಮಾಡುವಣ್ಣಗಳ ಶುಚಿ ಅವಶುಚಿಯೆಂಬ
ಅಂಕುಶದಿಂದಳಿಕಿಸಿ ಕಾಡಿತ್ತು ಮಾಯೆ.
ಕ್ರೀಯ ಮಾಡುವಣ್ಣಗಳ
ಕರ್ಮಕ್ಕೆ ಒಳಗು ಮಾಡಿ ಕಾಡಿತ್ತು ಮಾಯೆ.
ವ್ರತಮಾಡುವಣ್ಣಗಳ ವ್ರತಭ್ರಷ್ಟರ ಮಾಡಿ ಕಾಡಿತ್ತು ಮಾಯೆ.
ನೇಮ ಮಾಡುವಣ್ಣಗಳ ನೇಮವೆಂಬ
ಸಂಕಲ್ಪಶೂಲದಲ್ಲಿ ನೀರಿಲ್ಲದ ವೃಕ್ಷದಂತೆ ಒಣಗಿಸಿ ಕಾಡಿತ್ತು ಮಾಯೆ.
ದಾಸೋಹಮಾಡುವಣ್ಣಗಳ ದೇಶದೇಶಕ್ಕೆ ಯಾಚಕನಮಾಡಿ ತಿರುಗಿಸಿ
ಕಂಡಕಂಡವರಿಗೆ ಬಾಯಿತೆರಿಸಿ ಕಾಡಿ ಬೇಡಿಸಿ ಕಾಡಿತ್ತು ಮಾಯೆ.
ಭಕ್ತಿಮಾಡುವಣ್ಣಗಳ ಹೊನ್ನು ವಸ್ತ್ರ ಹದಿನೆಂಟುಜೀನಸು ಧಾನ್ಯ
ಮೊದಲಾದ ಭತ್ತದ್ರವ್ಯವ ಹಾಳುಮಾಡಿ,
ಲೋಕದ ಜನರ ಮುಂದೆ ನಗೆ ಹಾಸ್ಯ ಅವಮಾನದಿಂ ಕಾಡಿತ್ತು ಮಾಯೆ.
ಧರ್ಮಮಾಡುವಣ್ಣಗಳ ಯುಕ್ತಿ ಮುಂದುದೋರಿ
ಕರ್ಮಕ್ಕೆ ಬೆಳಗುಮಾಡಿ ಕಾಡಿತ್ತು ಮಾಯೆ.
ವೇದಾಗಮಶಾಸ್ತ್ರಪುರಾಣವನೋದಿ ಹಾಡಿ ಹೇಳುವಣ್ಣಗಳ
ಅಂತಪ್ಪ ಪುಣ್ಯಕಥೆ ಕಾವ್ಯವನೋದಿಸಿ ಲಾಲಿಸಿ
ಏಕಚಿತ್ತರಾಗಿ ಕೇಳುವಣ್ಣಗಳ

ಬಾಲೆಯರ ತೋಳು ತೊಡೆಯಲ್ಲಿ ಒರಗಿಸಿ ಕಾಡಿತ್ತು ಮಾಯೆ.
ಇಂತಪ್ಪ ಮಾಯೆಯ ಗೆಲುವರೆ ಆರಿಗೂ ಅಳವಲ್ಲ.
ಸದಾಚಾರಮಾರ್ಗ ಮುನ್ನವೇ ಅಲ್ಲ.
ಅದೆಂತೆಂದೊಡೆ:
ಸುಜ್ಞಾನೋದಯವಾಗಿ ಸಕಲಪ್ರಪಂಚವ ನಿವೃತ್ತಿಯ ಮಾಡಿ
ಶ್ರೀಗುರುಕಾರುಣ್ಯದಿಂ ತ್ರಿವಿಧ ಷಡ್ವಿಧಾಂಗ ಮೊದಲಾದ
ಸರ್ವಾಂಗದಲ್ಲಿ ಘನಮಹಾ ಇಷ್ಟಬ್ರಹ್ಮವನು
ತ್ರಿವಿಧ ಷಡ್ವಿಧಲಿಂಗ ಮೊದಲಾಗಿ
ಅನೇಕ ಲಿಂಗಸ್ವರೂಪಿನಿಂ ಸ್ವಾಯತವ ಮಾಡಿ,
ಅಚ್ಚೊತ್ತಿದ ಅರಿವಿಯಂತೆ, ಕಚ್ಚಾದ ಗಾಯದಂತೆ,
ಬೆಚ್ಚ ಬಂಗಾರದಂತೆ, ಅಂಗಲಿಂಗಕ್ಕೆ ಭಿನ್ನವಿಲ್ಲದೆ
ಅವಿರಳ ಸಮರಸದಿಂ ಏಕಲಿಂಗನಿಷ್ಠಾಪಾರಿಗಳಾದ
ವೀರಮಹೇಶ್ವರರೇ ಸದಾಚಾರ ಸದ್ಭಕ್ತಶರಣಜನಂಗಳು.
ಇಂತಿವರು ಮೊದಲಾದ
ಶಿವಜ್ಞಾನಿಗಳಾದ ಜ್ಞಾನಕಲಾತ್ಮರು
ಮಾಯಾಕೋಲಾಹಲರಲ್ಲದೆ,
ಇಂತಪ್ಪ ಶಿವಾಚಾರ ಧರ್ಮವನು ತಿಳಿಯದೆ
ನೇಮದಿಂದಾಚರಿಸಿ ಇಷ್ಟ, ಶೀಲ ವ್ರತ ಕ್ರಿಯಾ
ದಾನಧರ್ಮವ ಮಾಡಿದರೇನು ವ್ಯರ್ಥವಲ್ಲದೆ
ಸಾರ್ಥಕವಲ್ಲ ಎಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨೦೧ ॥

೨೦೬

ಅರಣ್ಯದೊಳಗಿರುವಣ್ಣಗಳ
ಅಂಗನೆಯರ ಅಂಗಳದಲ್ಲಿರಿಸಿತ್ತು ಮಾಯೆ.
ಅರಮನೆಯೊಳಗೆ ಅಂಗನೆಯರ ಸಂಗಸುಖದಲ್ಲಿರುವಣ್ಣಗಳ
ಅರಣ್ಯದ ಗುಡ್ಡಗಂಹಾರ ಗುಹ್ಯದಲ್ಲಿರಿಸಿತ್ತು ಮಾಯೆ.
ಹೆಣ್ಣುಬಿಟ್ಟೆವೆಂಬಣ್ಣಗಳ ಸ್ತ್ರೀಯರ ಕಣ್ಣ ಮುಂದೆ
ಕಾಲಕಟ್ಟಿ ಕೆಡವಿತ್ತು ಮಾಯೆ.
ಹೊನ್ನು ಬಿಟ್ಟೆವೆಂಬಣ್ಣಗಳ ಕಳವಳದಿಂದ
ಪರದ್ರವ್ಯವ ಅಪಹರಿಸಿತ್ತು ಮಾಯೆ.

ಮಣ್ಣಬಿಟ್ಟೆವೆಂಬಣ್ಣಗಳ ಮಠಮಾನ್ಯಕ್ಕೆ ಹೋರಾಡಿಸಿ
ದೇಶಭ್ರಷ್ಟನಾಗಿ ತಿರುಗಿಸಿತ್ತು ಮಾಯೆ.
ಬುದ್ಧಿವಂತರೆಂಬಣ್ಣಗಳ ಮುದ್ದಿ ನರಕವ ತಿನಿಸಿತ್ತು ಮಾಯೆ.
ಸಕಲವಿದ್ಯೆ ಬಲ್ಲೆವೆಂಬಣ್ಣಗಳ ಬಲ್ಲತನ ನೋಡಾ !
ಬಾಲೆಯರ ಬಾಯ ಲೋಳೆಯ ನೆಕ್ಕಿಸಿತ್ತು ಮಾಯೆ.
ಸ್ತ್ರೀಯರ ಮುಖ ನೋಡಲಾಗದೆಂದು
ಮುಖದಮೇಲೊಂದು ವಸ್ತ್ರವ ಹಾಕಿಕೊಂಡು ತಿರುಗುವಣ್ಣಗಳ
ಬಾಲೆಯರ ಬಾಗಿಲ ಮೋರೆಯಲ್ಲಿರಿಸಿತ್ತು ಮಾಯೆ.
ಸ್ತ್ರೀಯರ ಕಂಡು ನಾಚಿ ಮಾತಾಡದಣ್ಣಗಳ
ನಾಚಿಕೆಯ ಬಿಡಿಸಿ ಮಾತಾಡಿಸಿತ್ತು ಮಾಯೆ.
ವಿರಕ್ತರೆಂಬಣ್ಣಗಳ ಬಾಲೆಯರ ಬಾಯಿತೊಂಬಲ ತಿನಿಸಿತ್ತು ಮಾಯೆ.
ಪಾದಪೂಜೆಯ ಮಾಡಿ ಪಾದೋದಕ ಪ್ರಸಾದ ಕೊಂಬ
ಭಕ್ತಜನಂಗಳ ಪಾದಪೂಜೆಯ ಮಾಡಿಸಿಕೊಂಡು
ಪಾದೋದಕ ಪ್ರಸಾದವ ಪಾಲಿಸುವ ಹಿರಿಯರ
ಇಂತಪ್ಪ ದೇಶಭಕ್ತರೆಂಬುಭಯರ
ಬಾಲೆಯರ ಪಾದಪೂಜೆ ಮಾಡಿಸಿತ್ತು ಮಾಯೆ.
ಸರ್ವಾಂಗ ವಿಭೂತಿ ರುದ್ರಾಕ್ಷಿ ಧರಿಸುವಣ್ಣಗಳ
ಬಾಲೆಯರ ಮನೆಯಲ್ಲಿ ಒಲಿಯ ಬೂದಿಯ ಬಳಿಸಿತ್ತು ಮಾಯೆ.
ಮಂತ್ರವ ನೆನೆವಣ್ಣಗಳ ಬಾಲೆಯರ ನಾಮವ ನೆನಿಸಿ
ಅವರ ಬಾಗಿಲ ಮುಂದೆ ಹೆಳವನಂತೆ ಹೊಗಳಿಸಿತ್ತು ಮಾಯೆ.
ಕರಸ್ಥಲದಲ್ಲಿ ಲಿಂಗವ ಪಿಡಿವಣ್ಣಗಳ
ಬಾಲೆಯ ಕುಚವ ಪಿಡಿಸಿ ಮುಖದ ಮೇಲೆ ಚುಂಬನವ ಕೊಡಿಸಿ
ತೊಡೆಯ ಸಂದಿನಲ್ಲಿರಿಸಿತ್ತು ಮಾಯೆ.
ಪಂಡಿತರೆಂಬಣ್ಣಗಳ ಬಾಲೆಯರ ಮಲವಸರುವ
ಪೃಷ್ಠ ಹಿಡಿಸಿತ್ತು ಮಾಯೆ.
ಇಂತಪ್ಪ ಮಾಯಾಶಕ್ತಿಯ ಗೆಲುವರೆ
ನವಖಂಡಪೃಥ್ವಿಮಧ್ಯದಲ್ಲಿರುವ
ದೇವ ದಾನವ ಮಾನವರು ಮೊದಲಾದವರಿಗೂ ಅಳವಲ್ಲ.
ಶಿವಜ್ಞಾನಸಂಪನ್ನರಾದ ಶಿವಶರಣರಿಗಲ್ಲದೆ
ಇಲ್ಲ ಅಲ್ಲ ಎಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೦೨ ॥

**ಡೋಹಾರ ಕಕ್ಕಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೦೭

ಮೂರಾರು ಕಂಡಿಕಿ ದಂಡಿಗಿಗೆ
ಮೂರಾರು ಬಟ್ಟಗಾಯ ಕಟ್ಟಿ, ಈರೆಂಟು ಮೆಟ್ಟಿ,
ಆರೊಂದು ತಂತಿಯ ಹೂಡಿ, ಕರವ ಕಟ್ಟಿ, ಬಿರಡಿಯ ತಿರುಹಿ,
ಮೂರು ಬೆರಳಿನಲ್ಲಿ ಕಿನ್ನರಿಯ ಹೊಡೆದು
ಬೀದಿಬಾಜಾರದಲ್ಲಿ ತಿರುಗುತ್ತಿರುವಲ್ಲಿ,
ತಿರುಗುವವ ಜೋಗಿ ಕಂಡು
ಕಕ್ಕನ ಕಿನ್ನರಿಯಕಾಯನೊಡೆದು ದಂಡಗಿಯ ಮುರಿದುಹಾಕಿತ್ತು.
ತಂತಿಯ ಹರಿದು, ಬಿರಡಿಯನುಚ್ಚಿ, ಕುದುರಿಯ ಸುಟ್ಟು,
ಬೆರಳ ಮುರಿದು ಡೋಹಾರನ ಕೊಂದು,
ಡೋಹಾರ ಕಕ್ಕಯ್ಯನ ಮನೆಯಲ್ಲಿ ಜೋಗಿ ಅಡಗಲು,
ಅಡಗಿದ ಜೋಗಿಯು ಸತ್ತು, ಡೋಹಾರ ಕಂಡು ಎದ್ದು
ಕಾಯಕವ ಮಾಡುತಿರ್ದರಯ್ಯ ನಿಮ್ಮ ಶರಣರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೦೩ ॥

೩೦೮

ಮೂರುಗಂಟಿನ ದಂಡಿಗಿ,
ಆರು ಕಾಯಿ, ಒಂಬತ್ತು ಮೆಟ್ಟು, ಬಿಳಿಯ ಕುದುರೆ,
ಒಂದೆ ತಂತಿ, ನಾಲ್ಕು ಬಿರಡಿ,
ಮೂರುಬೆರಳಿನಲ್ಲಿ ಡೋಹಾರನ ಕಿನ್ನರಿಯ ಹೊಡೆಯಲು,
ಬ್ರಹ್ಮ ಮರ್ತ್ಯದಲ್ಲಿ ಸತ್ತು, ವಿಷ್ಣು ಸ್ವರ್ಗದಲ್ಲಿ ಸತ್ತು,
ರುದ್ರ ಪಾತಾಳದಲ್ಲಿ ಸತ್ತು,
ಸಕಲ ಪ್ರಾಣಿಗಳು ಬ್ರಹ್ಮಾಂಡದಲ್ಲಿ ಅಳಿದರು.
ಇಂತೀ ವಿಚಿತ್ರವ ನೋಡಿ ಕಿನ್ನರಿಸಹಿತ
ಡೋಹಾರ ಅಂಗೈಯಲ್ಲಿ ಬಯಲಾದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೦೪ ॥

೩೦೯

ಲಿಂಗಪೂಜೆಯುಳ್ಳನ್ನಕ್ಕ ಲಿಂಗವಿಲ್ಲ.
ಲಿಂಗದ ನೆನವು ಉಳ್ಳನ್ನಕ್ಕ ಲಿಂಗವಿಲ್ಲ.
ಲಿಂಗವ ಕೂಡಬೇಕು, ಲಿಂಗವನರಿಯಬೇಕೆಂಬನ್ನಕ್ಕ ಲಿಂಗವಿಲ್ಲ.
ಲಿಂಗವನರಿಯದಿರ್ದು, ಲಿಂಗವನರಿದು, ಲಿಂಗದಲ್ಲಿ ಬೆರೆದು,
ಸುಖಿಯಾದೆನೆಂಬನ್ನಕ್ಕ ಲಿಂಗವಿಲ್ಲ.
ನಾ ನನ್ನ ನಿಜವನರಿದು ಪರಿಣಾಮಿಯಾದೆನೆಂಬನ್ನಕ್ಕ ಲಿಂಗವಿಲ್ಲ.
ಲಿಂಗೈಕ್ಯನಾದೆನೆಂದು ಪರರ ಮುಂದೆ ಬೀರುವನ್ನಕ್ಕ
ಎಂದೆಂದಿಗೂ ಮುನ್ನವೆ ಲಿಂಗವಿಲ್ಲ.
ಮತ್ತಂ, ಲಿಂಗವನರಿಯಬೇಕು, ಲಿಂಗವ ಕೊಡಬೇಕು,
ಭವಬಂಧವ ಕಡಿಯಬೇಕೆಂದು ದೇಶದೇಶವ ತಿರುಗಿದರಿಲ್ಲ.
ಊರಬಿಟ್ಟು ಅರಣ್ಯವ ಸೇರಿದರಿಲ್ಲ,
ಹೊನ್ನು ಹೆಣ್ಣು ಮಣ್ಣು ಮೊದಲಾದ
ಮನೆಮಾರು ತೊರೆದು ಸನ್ಯಾಸಿಯಾಗಿ
ವೈರಾಗ್ಯತೊಟ್ಟು ವನವಾಸಗೈದರಿಲ್ಲ.
ಅಶನ ವ್ಯಸನವ ಬಿಟ್ಟು, ಹಸಿವು ತೃಷೆಗಳ ತೊರೆದು,
ಪರ್ಣಾಹಾರ ಕಂದಮೂಲ ತಿಂದು,
ತನುಮನಧನವನೊಣಗಿಸಿದರಿಲ್ಲ.
ಮಾತನಾಡಿದರಿಲ್ಲ, ಮಾತುಬಿಟ್ಟು ಮೌನದಿಂದಿದ್ದರೂ ಇಲ್ಲ.
ಕ್ರೀಯ ಬಿಟ್ಟರಿಲ್ಲ, ಕ್ರೀಯ ಮಾಡಿದರಿಲ್ಲ.
ಏನು ಮಾಡಿದರೇನು ವ್ಯರ್ಥವಲ್ಲದೆ ಸ್ವಾರ್ಥವಲ್ಲ.
ಅದೇನುಕಾರಣವೆಂದರೆ, ತಮ್ಮ ನಿಲವು ತಾವು ಅರಿಯದ ಕಾರಣ.
ನಮ್ಮ ಗುಹೇಶ್ವರಲಿಂಗವ ಬೆರೆಸಬೇಕಾದರೆ
ಸಕಲಸಂಶಯ ಬಿಟ್ಟು, ಉಪಾಧಿರಹಿತನಾಗಿ,
ಎರಡಳಿದು ಕರಕಮಲದಲ್ಲಿ ಅಡಗಬಲ್ಲರೆ
ಪರಶಿವಲಿಂಗದಲ್ಲಿ ಅಚ್ಚಶರಣ ತಾನೇ ಎಂದನಯ್ಯ ನಮ್ಮ ಶರಣ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೦೯ ॥

೩೧೦

ಹಾಳುಗೋಟೆಯ ಭಿತ್ತಿ ಬೇಲಿಯಲ್ಲಿ
ತಲೆ ಕಣ್ಣು ಕಾಲಿಲ್ಲದ ಮೂರು ಹೆಣವ ಕಟ್ಟಿ,

ಉಡವು ಹರಿದಾಡುವದ ಕಂಡೆ.
ಕಬ್ಬಕ್ಕಿಹಿಂಡಿನಲ್ಲಿ ಕೂಡಿ ಮೇಯುವದ ಕಂಡೆ.
ಆಕಾಶದಲ್ಲಿ ಧೂಮಕೇತು ಮೂಡಲು
ಉಡು ಸತ್ತು, ತಲೆ ಕಾಲು ಕಣ್ಣು ಬಂದು ನೋಡಲು
ಕಬ್ಬಕ್ಕಿಯ ಹಿಂಡು ಕೈಯ ನುಂಗಿತ್ತು,
ಸತ್ತ ಉಡವು ಕೈಯ ನುಂಗಿ, ಎಲ್ಲಿ ಹೋಯಿತ್ತೆಂಬುದ ತಿಳಿಯಬಲ್ಲರೆ,
ಅಚ್ಚಶರಣ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೦೬ ||

**ಚೆನ್ನಯ್ಯನವರ ಶೆಟ್ಟೆಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೧೧

ಅರಸು ಪ್ರಧಾನಿಗಳು ಬಿಟ್ಟಿಯ ಮಾಡಲಿಲ್ಲ.
ಬ್ಯಾಗಾರಿ ಗಂಟ ಹೊರಲಿಲ್ಲ.
ಹೊಲೆ ಮಾದಿಗ ಡೋಹಾರ ಗಂಟು ಹೊತ್ತು
ಕೂಳುಕಾಣದೆ ಬಿಟ್ಟಿಯಮಾಡಿ.
ಹಾಗದ ಕಾಯಕವನುಂಡು
ಕಾಯಕವ ಮಾಡುತಿರ್ದರಯ್ಯ ನಿಮ್ಮವರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೦೭ ||

೩೧೨

ಆನೆಯ ಹಿಂಡು ಹೊಗದೆ, ಕುದುರೆಯ ತೂರ ಹಿಡಿಯದೆ,
ನಾಯಿಗಳ ಕೂಡ ಉಣ್ಣದೆ, ಓಣಿ ಬೀದಿಯ ಉಡುಗಿ,
ನರಕವ ಬಳಿದುಚೆಲ್ಲಿ, ಊರ ನಿರ್ಮಲವ ಮಾಡಿ,
ರಾಜಂಗೆ ಬಿನ್ನೈಸಲು, ಕೊಟ್ಟ ಹಣವ ಕೊಂಡು,
ಕಾಯಕವ ಮಾಡಿ ಸುಖಿಯಾಗಿರ್ದರಯ್ಯ ನಿಮ್ಮವರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೦೮ ||

೩೧೩

ಅಟಮಟವೃಕ್ಷದ ಘಟದಲ್ಲಿ
ಕಂಚುಮಿಂಚಿನ ಸೂಜಿಯ ಪಿನ್ನಿಯಲ್ಲಿ
ಈರೇಳುಲೋಕದ ಎಡೆಯಾಟ.

ಅಗ್ರದಲ್ಲಿ ಪರ್ವತ ಗಜ ತುರಂಗದ
ತಂಡತಂಡಿನ ಒಡೆಯನ ಶಿರವೊಡೆದು
ಕಮಲದಲ್ಲಿ ಬರಲು, ಸರ್ವ ನಷ್ಟವಾಗಿ,
ತಂಡಿನೊಡೆಯ ಕಮಲಪ ನುಂಗಿ ನಿರ್ವಯಲಾದ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೦೯ ||

೩೧೮

ಮರಿದುಂಬಿ ಮರದ ಮೂಲಗೂಡಿನಲ್ಲಿರುವ
ಕರಿಕಾಗಿಪುಚ್ಚದ ಗಾಳಿಯಲ್ಲಿ ಮೂರುಲೋಕ
ಅಳಿಯುವುದ ಕಂಡೆ.
ಗರ್ಭದಲ್ಲಿ ಹಲವು ಲೋಕದ ಪ್ರಾಣಿಗಳ ಶಿರದಲ್ಲಿ
ಮಾಣಿಕ ಇರುವುದ ಕಂಡೆ.
ಗಾಳಿಯ ನಿಲ್ಲಿಸಿ ಪುಚ್ಚತೆರೆದು, ಹೊಟ್ಟೆಯೊಡೆದು,
ಹಕ್ಕಿಯ ಕೊಂದು ಶಿರವ ಭೇದಿಸಿದಲ್ಲದೆ,
ಆ ಮಾಣಿಕವು ಆರಿಗೂ ಸಾಧ್ಯವಾಗದು.
ಆ ಮಾಣಿಕವು ಸಾಧ್ಯವಾಗದಿರ್ದಡೆ
ಭವಹಿಂಗದು ಮುಕ್ತಿದೋರದು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೧೦ ||

೩೧೫

ಗಜಿಬಿಜಿಯೆಂಬ ಪಟ್ಟಣದ ಗುಜ್ಜದೇವಿ ಎಂಬ ಸ್ತ್ರೀಯಳ
ಕೋತಿವಿಲಾಸವ ಕಂಡು,
ಶಿಕಾರಿಗೆ ಬಂದ ರಾಜಕುಮಾರನು ಮರುಳಾಗಿರುವದ
ಅರಸು ಕಂಡು ಬಂದು ಮೂರು ಕಲ್ಲಾರು ಕೋಲಿನಿಂದ ಹೊಡೆದು,
ಪುತ್ರನ ಕೊಂದು ತಾ ಸಾಯಲು,
ಗಜಿಬಿಜಿಪಟ್ಟಣ ಸುಟ್ಟು, ಗುಜ್ಜದೇವಿಯಳಿದು,
ಕೋತಿವಿಲಾಸವಡಗಿತ್ತು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೧೧ ||

**ಹರಳಯ್ಯನವರ ಮಾಸಣ್ಣಂಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೧೭

ಎಮ್ಮ ಕೋಣನ ಚರ್ಮವ ತೆಗೆದು,
ಸುಣ್ಣವಿಲ್ಲದೆ ಆಕಾಶದ ರಂಜಣಿಗೆಯಲಿಕ್ಕಲು
ಮೂರಾರಕ್ಕೆ ಹದ ಬಂದು,
ಒಳ ಅಟ್ಟೆಗೆ ಮೂರುಹೊಲಿಗೆ, ಹೊರ ಅಟ್ಟೆಗೆ ಆರುಹೊಲಿಗೆ,
ಉಂಗುಷ್ಟಕ್ಕೆ ಸೂರ್ಯನ ಹೊಲಿಗೆ,
ಚಂಡಿಕೆಗೆ ಚಂದ್ರನಹೊಲಿಗೆ, ಹಿಮ್ಮಡಕ್ಕೆ ಅಗ್ನಿಯಹೊಲಿಗೆ,
ಶತವೊಂದು ಬಾರ ಬಂಧಿಸಿದ ಮೆಟ್ಟು,
ಹಣವ ಕೊಟ್ಟೊಡೆ ಕೊಡೆ, ಮಲವ ಕೊಟ್ಟೊಡೆ ಕೊಟ್ಟು
ಕಾಯಕವ ಮಾಡುತಿರ್ದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೭ ॥

೩೧೮

ಹಾಳುಬಾವಿ ಹಿಡಿಮೊಟ್ಟೆಗೆ
ತೊಗಲಿಲ್ಲದೆ, ಉಳಿಮುಟ್ಟದೆ, ಎಳಿಯನಿಕ್ಕಿ ನೀರುತುಂಬಲು,
ಕುಡಿದವರು ಒಳಗಾದರು.
ಕುಡಿಯದವರು ಹೊರಗಾದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೮ ॥

೩೧೯

ಮೂರು ಜರಿಬಾವಿಯ ನೀರಿನಲ್ಲಿ
ಕುರಿತೊಗಲು ಹದಮಾಡಿ,
ಕರಿಯಿಲ್ಲದ ತೊಗಲ ಹುರಿಗೂಡದ ಮಿಣಿಯ
ಊರ ಸುತ್ತ ಬಿಗಿಯಲು,
ಊರ ಜನರು ಕುಲಗೆಟ್ಟು ಭ್ರಷ್ಟರಾದರು.
ಮಾತಾಡುವವರನಾರನು ಕಾಣೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೯ ॥

೩೧೯

ಕನ್ಯಾಸ್ತ್ರೀಯಳ ಕುಚವ ಪಿಡಿದು,
ಚುಂಬನವ ಮಾಡಿ ಭೋಗಿಸಬಲ್ಲರೆ
ಪರಮಾನಂದಜಂಗಮವೆಂಬೆ.
ಇಲ್ಲಾದರೆ ವೇಷಧಾರಿ ಜಾತಿಕಾರ ಸೂಳೆಮಕ್ಕಳೆಂಬೆ.
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಕೆಡಿಸಿ
ಧೂಪವ ಸುಟ್ಟು, ಪತ್ರಿ ಪುಷ್ಪವ ತಿಂದು,
ಜ್ಯೋತಿಯ ನುಂಗಿ, ಸತ್ತ ಕರವ ತಿಂದು,
ನೀರು ಕುಡಿಯಬಲ್ಲರೆ ಪರಮಚಿದ್ಘನಲಿಂಗವೆಂಬೆ.
ಇಲ್ಲಾದರೆ ತಕ್ಕಡಿಯ ಕಾಣಿಕಲ್ಲು ಕಂಡು ತೂಗುವ ಸೇರುಗಲ್ಲೆಂಬೆ.
ಮಾದಿಗರ ಮನೆಯ ಪದ್ಮಜಾತಿನಿಯೆಂಬ ಕನ್ಯೆಕುಮಾರಿಯ
ಕಳಸ ಕುಚವ ಪಿಡಿದು
ಮುದ್ದುಕೊಟ್ಟು ಕಂಡವ ತಿಂದು ಹೆಂಡವ ಕುಡಿದು ಭೋಗಿಸಿ
ಸಂಗಸುಖದೊಳಗಿರಬಲ್ಲರೆ
ಪರಮಸದ್ರೂಪವಾದಾಚಾರ್ಯನೆಂಬೆ.
ಇಲ್ಲವಾದರೆ ಮೂಕಾರ್ತಿಮೂಳೆಯ ಮಕ್ಕಳೆಂಬೆ.
ಹದ್ದು ಗೂಗಿ ಕಪ್ಪಿ ಇರಿವಿ ಮೊದಲಾದ
ಈ ನಾಲ್ಕು ತಿಂದು ಈಚಲಸೆರೆಯ ಕುಡಿದು,
ಮದವೇರಿದ ಮದಗಜದ ಹಾಗಿರಬಲ್ಲರೆ,
ಪಾದೋದಕ ಪ್ರಸಾದಿಗಳೆಂಬೆ.
ಇಲ್ಲಾದರೆ ಕುಟಿಲ ಕುಹಕ ವೇಷಧಾರಿ ಡೊಂಬತಿಯ ಮಕ್ಕಳೆಂಬೆ.
ಇಂತೀ ಪಂಚಬ್ರಹ್ಮತತ್ವದ ಭೇದವ
ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರಾಂತ್ಯಮಾದ
ಏಳನೂರೆಪ್ಪತ್ತು ಪ್ರಮಥಗಣಂಗಳು ಬಲ್ಲರು.
ಮತ್ತಂ, ಅಂತಪ್ಪ ಪ್ರಮಥಗಣಂಗಳ ಪ್ರಸಾದದಿಂದುದ್ಭವಿಸಿದ
ಚಿದಾತ್ಮರುಗಳಾದ ಜ್ಞಾನಕಲಾತ್ಮರು ಬಲ್ಲರಲ್ಲದೆ,
ಮಿಕ್ಕಿನ ಜಡಮತಿ ವೇಷಧಾರಿಗಳಾದ
ಕುರಿಮನುಜರೆತ್ತ ಬಲ್ಲರೆಂದನಯ್ಯ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೯ ॥

೩೨೦

ಪಂಕದೊಳಗಿನ ಪಶುವಿಗೆ ಒಬ್ಬ ಪುರುಷನಿಂದ ಚೈತನ್ಯವಲ್ಲದೆ
ಆ ಪಂಕದೊಳಗಿನ ಪಶುವಿಗೆ ಬೇರೆ ಚೈತನ್ಯ ಉಂಟೆ ಹೇಳಾ ?
ಅರಣ್ಯದೊಳಗೆ ಅಜಗರನೆಂಬ ಸರ್ಪನು
ಆಹಾರವಿಲ್ಲದೆ ಇರಲು ಅದಕ್ಕೆ ಪರಶಿವನು
ತಾವೇ ತಮ್ಮ ಕರುಣ ಕೃಪೆಯಿಂದೊಂದು ಮೃಗಪಕ್ಷಿಯ
ಅನಾಯಾಸದಿಂದ ಮುಂದೆ ಹಾಯಿಸಿದೊಡೆ,
ಆ ಅಜಗರನೆಂಬ ಸರ್ಪನು ಭಕ್ಷಿಸಿ ಇರುವುದಲ್ಲದೆ,
ತಾ ಬೇರೆ ಮೃಗಪಕ್ಷಿಗಳ ಭಕ್ಷಿಸುವ ಚೈತನ್ಯವುಂಟೆ ಹೇಳಾ?
ಎಷ್ಟು ದಿವಸವಾದಡೆಯೂ ಬಿದ್ದಲ್ಲಿ ಬಿದ್ದಿರ್ಪುದು ನೋಡಾ.
ಬೇಡಿ ಬಂದೀಖಾನೆ ಕೊಳ್ಳದೊಳಗೆ ಇರುವ ಪ್ರಾಣಿಗಳಿಗೆ
ಒಬ್ಬ ರಾಜನ ದಯದಿಂದ ಅನ್ನಪಾನ ಉಂಟಲ್ಲದೆ,
ಅವರಿಗೆ ಬೇರೆ ತಮ್ಮ ಸ್ವತಂತ್ರದಿಂದ ತಾವೇ
ಅನ್ನೋದಕವ ಕೊಂಬ ಚೈತನ್ಯ ಉಂಟೆ ಹೇಳಾ?
ಅವರು ಎಷ್ಟು ಕಾಲವಾದಡೆಯು ಇದ್ದಲ್ಲಿ ಇರುವರು ನೋಡಾ.
ತೊಟ್ಟಿಲೊಳಗಿನ ಶಿಶು ಹೊಟ್ಟೆಹಸಿದು ಒದರಿದರೆ
ಆ ಶಿಶುವಿನ ತಾಯಿ ಬಂದು ಮೊಲೆವಾಲ ಕೊಟ್ಟು ರಕ್ಷಣಮಾಡುವದಲ್ಲದೆ
ಆ ಶಿಶುವಿಗೆ ಬೇರೆ ಸ್ವತಂತ್ರಚೈತನ್ಯ ಉಂಟೆ ಹೇಳಾ?
ಎಷ್ಟೊತ್ತಾದಡೆಯೂ ಆ ಶಿಶುವು ಇದ್ದಲ್ಲಿ ಇರುವದು ನೋಡಾ.
ಇಂತೀ ದೃಷ್ಟದಂತೆ ಇರುವೆ ಮೊದಲು ಆನೆ ಕಡೆ
ಎಂಬತ್ತುನಾಲ್ಕುಲಕ್ಷ ಜೀವರಾಶಿ ಯೋನಿಯಲ್ಲಿ
ಸುಖದುಃಖದಿಂದ ನೊಂದು ಬೆಂದು ಅಳಲಿ ಬಳಲಿ
ಭವಜಾಲದಲ್ಲಿ ತಿರುಗುವ ಜೀವಾತ್ಮರಿಗೆ ಪರಕ್ಕೆ ಪರವಾದ
ಪರಶಿವನು ತಾನೆ ತನ್ನ ಕರುಣಕೃಪೆಯಿಂದ
ಆ ಜೀವಾತ್ಮರ ಹೃದಯದಲ್ಲಿ ಶಿವಜ್ಞಾನೋದಯವನಿತ್ತು
ಸಂಸಾರಪ್ರಪಂಚವ ನಿವೃತ್ತಿಯ ಮಾಡಿ ಬಹಿಷ್ಕರಿಸಿ
ಕ್ರಿಯಾಘನಗುರುವಾಗಿ ಬಂದು
ಲಿಂಗಾಂಗಸಮರಸವ ತೋರಿ ಭವಬಂಧನವೆಂಬ ಭವಪಾಶವ ಛೇದಿಸಿ
ಆ ಜೀವಾತ್ಮರ ಜೀವಭಾವವನಳಿದು
ಸಜ್ಜೀವಾತ್ಮರುಗಳ ಮಾಡಿ, ರಕ್ಷಿಸುವನಲ್ಲದೆ,
ಆ ಜೀವಾತ್ಮರು ತಮ್ಮಾತ್ಮಜ್ಞಾನದಿಂದ

ಅಷ್ಟಾಂಗಯೋಗ ಅನುಪಾನ ಕ್ರಿಯೆಗಳಿಂದ ಸಾಧಿಸಿ ಭವಹಿಂಗಿಸಿ
ಪರಶಿವಲಿಂಗದಲ್ಲಿ ಬೆರಸಿದನೆಂದಡೆ ಎಂದಿಗೂ ಸಾಧ್ಯವಾಗದು.
ಅದೇನು ಕಾರಣವೆಂದೊಡೆ,
ತಮ್ಮ ನಿಜವ ತಾವರಿಯದ ಕಾರಣ.
ಎಷ್ಟು ಯುಗಾಂತರದಲ್ಲಿ ಭವಭವದಲ್ಲಿ
ಘಾಸಿಯಾಗುತ್ತಿರ್ಪರು ನೋಡೆಂದ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ३०೬ ||

३೨೧

ಭವಬಂಧನಂಗಳ ಹಿಂಗಿಸಬೇಕೆಂಬಣ್ಣಗಳು
ನೀವು ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ.
ಶ್ರೀಗುರುಪುತ್ರನಾಗಿ ಅವರು ತಮ್ಮ ಅಂತಃಕರಣ ಕೃಪೆಯಿಂದ ಪೇಳಿದ
ಪ್ರಸಾದವಾಕ್ಯವನು ಅವರ ದಯದಿಂದ ಪೇಳುತಿರ್ದೆನು ಕೇಳಿರಯ್ಯ.
ಅದೆಂತೆಂದಡೆ :
ಆಶೆ ಆಮಿಷ ತಾಮಸದೊಡನೆ ಕೂಡಿ ಕ್ಲೇಶಪಡುತಿರ್ದಂತೆ
ಗುರುಗಳಲ್ಲಿ ಅಥವಾ ಜಂಗಮಲಿಂಗಿಗಳಲ್ಲಿ
ಇಂತೀ ಉಭಯ ಪಾಶಬದ್ಧರ ಕೈಯಿಂದ
ಅಹಂಕಾರ ಮಮಕಾರದಲ್ಲಿ ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ
ಮಲತ್ರಯಂಗಳ ಕಟ್ಟಿ, ಸಂಸಾರವಿಷಯದಲ್ಲಿ ಲಂಪಟರಾದ
ಭಕ್ತಜನಂಗಳು ಅಥವಾ ಶಿಷ್ಯೋತ್ತಮನಾದಂಥವರು
ಇಂತಪ್ಪವರು ಲಿಂಗವ ಪಡೆದು, ಉಪದೇಶವ ಹಡದು,
ಆಚರಿಸುವರ ಆಚರಣೆಯೆಂತಾಯಿತ್ತೆಂದಡೆ,
ತಲೆಯಿಲ್ಲದ ಪುರುಷನ ಸಂಗ, ಕಣ್ಣಿಲ್ಲದ ಸ್ತ್ರೀ ಸಂಯೋಗವ ಮಾಡಿ,
ಜೀವವಿಲ್ಲದೊಂದು ಮಗನ ಹಡದಂತಾಯಿತ್ತಯ್ಯ.
ಅಂತಪ್ಪ ದೇವ ಭಕ್ತ ಗುರು ಶಿಷ್ಯರೆಂಬ
ಈ ಚತುರ್ವಿಧ ಪುರುಷರಿಗೆ ಭವಹಿಂಗದು, ಮುಕ್ತಿ ಎಂದಿಗೂ ತೋರದು.
ಅದೇನು ಕಾರಣವೆಂದಡೆ :
ತಾವ್ಯಾರು, ತಮ್ಮ ಸ್ವರೂಪವಾವುದು ಎಂಬ
ನಿಲುಕಡೆಯ ತಿಳಿಯದ ಕಾರಣ.
ಮತ್ತಂ ಪೇಳ್ವೆ : ತಮ್ಮ ನಿಜವ ತಾವರಿದು, ಸರ್ವಾಚಾರಸಂಪತ್ತು ಅಳವಟ್ಟು,
ಸರ್ವಾಂಗಲಿಂಗಮಯವಾಗಿರುವಂಥ

ನಿಃಕಲ ಸದ್ರೂಪಸ್ವರೂಪರಾದ ಆಚಾರ್ಯಂಗಳಲ್ಲಾಗಲಿ,
ಅಥವಾ ಸತ್ತುಚಿತ್ತಾನಂದ ನಿತ್ಯಪರಿಪೂರ್ಣಭರಿತನಾದ
ನಿಃಕಲಪರಮಾನಂದಸ್ವರೂಪರಾದ ನಿರಂಜನಜಂಗಮದಲ್ಲಾಗಲಿ
ಇಂತೀ ಉಭಯ ಪರಮೂರ್ತಿಗಳ ಕರುಣಕೃಪೆಯಿಂದ
ಶಿವಜ್ಞಾನೋದಯವಾಗಿ ಸಕಲಪ್ರಪಂಚವನೆಲ್ಲವ ನಿವೃತ್ತಿಯ ಮಾಡಿ
ಲಿಂಗಾಂಗಸಮರಸದನುಭವವಳವಟ್ಟು ತ್ರಿವಿಧ ವಂಚನೆಯಿಲ್ಲದೆ
ಕ್ಷಮೆ, ದಮೆ, ಶಾಂತಿ, ಸೈರಣೆ ಗುಣವುಳ್ಳಂಥ ಸದ್ಭಕ್ತ ಶರಣಜನಂಗಳಲ್ಲಾಗಲಿ
ಅಥವಾ ಶಿಷ್ಯೋತ್ತಮನಾದಂಥವರುಗಳಲ್ಲಾಗಲಿ
ಇಂತೀ ಉಭಯ ಭಕ್ತಗಣಂಗಳು
ಚಿದ್ಘನಮಹಾಲಿಂಗವೆಂಬ ಇಷ್ಟಲಿಂಗವ ಕರಸ್ಥಲಕ್ಕೆ ಪಡಕೊಂಡು,
ತಾರಕಮಂತ್ರವೆಂಬ ಮಂತ್ರೋಪದೇಶವ ಹಡಕೊಂಡು,
ಆಚರಿಸುವ ಸದ್ಭಕ್ತ ಶರಣಜನಂಗಳ ಆಚರಣೆಯೆಂತಾಯಿತ್ತಯ್ಯಯೆಂದಡೆ :
ಸೂರ್ಯಪ್ರಕಾಶವನುಳ್ಳಂಥ ಕನ್ಯಕುಮಾರ ರಾಜನಸಂಗ
ಚಂದ್ರಕಾಂತಿಪ್ರಕಾಶವನುಳ್ಳಂಥ ಕನ್ಯಸ್ತ್ರೀಯಳು ಸಂಯೋಗವ ಮಾಡಿ
ಅಗ್ನಿಕಾಂತಿಪ್ರಕಾಶವನುಳ್ಳಂಥ ಪುತ್ರನ ಹಡೆದಂತಾಯಿತ್ತಯ್ಯ.
ಇಂತಪ್ಪ ಆಚಾರವನುಳ್ಳ ಗುರು ಶಿಷ್ಯರು ದೇವ ಭಕ್ತರೆಂಬ
ಈ ನಾಲ್ಕು ಪರಪುರುಷರಿಗೆ ಭವಹಿಂಗುವುದು.
ಮುಕ್ತಿಯೆಂಬುದು ಕರತಳಾಮಳಕವಾಗಿ ತೋರುವುದು.
ಮತ್ತಂ, ಲಿಂಗಾಂಗಸಂಬಂಧಿಯಾಗಿ ಸರ್ವಾಚಾರ ನೆಲೆಗೊಂಡು
ಸರ್ವಾಂಗಲಿಂಗಿಯಾದಂಥ ವೀರಮಾಹೇಶ್ವರರಾಗಲಿ,
ಅಥವಾ ಗುರುಗಳಾಗಲಿ, ಸದ್ಭಕ್ತ ಶರಣಜನಂಗಳಾಗಲಿ,
ಇಂತಪ್ಪ ತ್ರಿವಿಧಶಿವಜ್ಞಾನಿಗಳ ಚರಣಕಮಲಕ್ಕೆ
ದೀರ್ಘದಂಡನಮಸ್ಕಾರಮಂ ಮಾಡಿ
ಸುಜ್ಞಾನೋದಯವಾಗಿ ಮೋಕ್ಷವ ಹಡೆಯಬೇಕೆಂಬ ಜ್ಞಾನಕಲಾತ್ಮರಾದಂಥವರು
ಲಿಂಗಾಂಗಸಮರಸದನುಭಾವವ ವಿಚಾರಿಸಿಕೊಳ್ಳಬೇಕು.
ಅಂತಪ್ಪ ಪರಶಿವಮೂರ್ತಿಗಳಾದ ಗುರುಗಳಲ್ಲಾಗಲಿ,
ಅಥವಾ ಜಂಗಮಲಿಂಗಿಗಳಲ್ಲಾಗಲಿ,
ಅಥವಾ ಇಂತಹ ಶಿವಜ್ಞಾನಿಗಳಾದ ಭಕ್ತರಲ್ಲಾಗಲಿ, ಶಿಷ್ಯೋತ್ತಮರಲ್ಲಾಗಲಿ,
ಇಂತಪ್ಪವರಿಗೆ ಲಿಂಗಾಂಗಸಮರಸವ ತೋರಬೇಕು,
ತೋರದಿದ್ದರೆ ಪ್ರಮಥರು ಮೆಚ್ಚರು.
ಇಂತಪ್ಪ ತ್ರಿಮೂರ್ತಿಗಳು ಹೇಳಿದ ಹಾಂಗೆ ಕೇಳಿ

ವಿಶ್ವಾಸದಿಂದ ಆಚರಿಸದಿದ್ದರೆ ಭವಹಿಂಗದು
ಮುಕ್ತಿಯೆಂಬುದು ಎಂದೆಂದಿಗೂ ತೋರದು ಎಂದನಯ್ಯಾ ನಿಮ್ಮ ಶರಣ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೭ ॥

**ಸಮಗಾರ ಸಾಬಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೨೨

ಕುರಿತೊಗಲು ಬಿಸಿಲಿಗೆ ಹದಮಾಡಿ,
ಮರಿತೊಗಲು ಬೆಳದಿಂಗಳಿಗೆ ಹದಮಾಡಿ,
ಹೋತಿನ ತೊಗಲು ಅಗ್ನಿಗೆ ಹದಮಾಡಿ,
ಉಳಿಮುಟ್ಟದೆ ಎಳೆಯಿಂದ ಮೂರು ಮಚ್ಚೆಯ ಹೊಲಿದು
ಕೊಡ್ಡ ಹಾಕಿ ತಿದ್ದಿ,
ಕೈ ಕಾಲಿದ್ದವರಿಗೆ ಕೊಡೆ, ಕಣ್ಣು ತಲೆಯುಳ್ಳವರಿಗೆ ಕೊಟ್ಟು,
ಕಾಯಕವ ಮಾಡುತಿರ್ದರಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೮ ॥

೩೨೩

ಹಸಿತೊಗಲಿಗೆ ಬಿಸಿಯೆಳಿಯನಿಕ್ಕಿ,
ಮಚ್ಚೆಯ ಮಾಡಲು,
ಮೆಟ್ಟಿದವ ಸತ್ತ, ಮೆಟ್ಟದವ ಉಳಿದ,
ಉಳಿದವರು ಬಹುಮಚ್ಚೆಯ ಮೆಟ್ಟಿದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೧೯ ॥

೩೨೪

ಕಾಶಿಗೆ ಹೋಗಬೇಕೆಂಬಣ್ಣಗಳು
ತಲೆಕೆಳಗಾಗಿ ಕಾಲುಮೇಲಾಗಿ ನಡೆವರು.
ಕೇದಾರಕ್ಕ ಹೋಗಬೇಕೆಂಬಣ್ಣಗಳು
ಕಣ್ಣು ಹಿಂದಾಗಿ ಕಾಲುಮುಂದಾಗಿ ನಡೆವರು.
ಶ್ರೀಶೈಲಕ್ಕೆ ಪೋಗಬೇಕೆಂಬಣ್ಣಗಳು
ತಲೆಯಿಲ್ಲದೆ ಕಾವಡಿಯ ಹೊತ್ತು ನಡೆಯುವರು.
ಇಂತೀ ತ್ರಿವಿಧ ಪುರುಷರಿಗೆ ತ್ರಿಲಿಂಗದ ದರುಶನವಾಗದು.

ಮೂರು ಬಿಟ್ಟು, ಅಷ್ಟ ಕುಟ್ಟಿ, ಮೂರು ಪರ್ವತ ಸುಟ್ಟು,
ಈರಾರು ಬಿಟ್ಟು, ಮೂರುಗೂಡಿದ ಬಟ್ಟೆಯ ಪಿಡಿದು
ಹೊಗುವಣ್ಣಗಳಿಗೆ
ತ್ರಿವಿಧ ಕ್ಷೇತ್ರದಲ್ಲಿರುವ ಲಿಂಗದರುಶನವಾಗುವದು,
ಪರಿಣಾಮದೋರುವದು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೨೦ ॥

೩೨೫

ಕರಿಚರ್ಮದ ಮಚ್ಚಿ ಮೆಟ್ಟಿದವರು ಕೆಳಗಾದರು.
ಎರಡುವರ್ಣದ ಮಚ್ಚಿ ಮೆಟ್ಟಿದವರು ಮೇಲಾದರು.
ಮೂರುಗೂಡಿದ ವರ್ಣದ ಮಚ್ಚಿಯ ಮೆಟ್ಟಿದವರು
ತಳಮೇಲು ಅವಸ್ಥಾನದಲ್ಲಿರದೆ
ಕಮಲ ಭ್ರಮರದಲ್ಲಿ ಸತ್ತುಪೋದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೨೧ ॥

೩೨೬

ಚಮ್ಮಾರನಲ್ಲಿ ಮಚ್ಚೆಯ ಕೊಂಡು
ಆರಿಗೂ ಸಿಕ್ಕದೆ ಪೋದರು ಕೆಲವರು.
ಮಚ್ಚೆಯ ಕೊಂಡು ಮೆಟ್ಟದೆ ಕರದಲ್ಲಿ ಪಿಡಿದು
ಕನ್ನಡಿಯಂತೆ ನೋಡಿ ಮರುಳಾಗಿ ಸಿಕ್ಕಿ ಪೋದರು ಕೆಲವರು.
ಕೊಳ್ಳದೆ ಪಿಡಿಯದೆ ಮಚ್ಚೆಯ ಮೆಟ್ಟಿ
ಪೋದರು ಹಲಪಕೊಬ್ಬರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೨೨ ॥

೩೨೭

ಇಹವ ತಿಳಿಯದೆ, ಮೂರಿಟ್ಟು ಕಮಲವ ಕಾಣದೆ
ಬೆಟ್ಟದಲ್ಲಿ ಕೂಡಿ ಹಳ್ಳದಲ್ಲಿ ಬಿದ್ದು ಸಮುದ್ರವ ಕೂಡಿದವರಿಗೆ
ಇನ್ನೆತ್ತಣ ಮುಕ್ತಿ ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೨೩ ॥

## ಶರಣನ ಭಕ್ತಿ

**ಕೊಮಟಿಗರ ಕಾಳಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೨೮

ಮೂರು ಹೊನ್ನಿಗೆ ಹಚ್ಚಡವ ಮಾರಿದೆ.
ಆರು ವರಹಕ್ಕೆ ಶಾಲ್ಯವ ಮಾರಿದೆ.
ಒಂದು ಮೋಹರಕ್ಕೆ ಮುಂಡಾಸವ ಮಾರಿದೆ.
ಇಂತೀ ಕಪ್ಪಡವ ಮಾರಿ ಹಲವು ಹಣವ ಕೊಟ್ಟು,
ಶಾಲ ಕೊಂಡು, ಹೊತ್ತು ಕಾಯಕವ ಮಾಡುತಿರ್ದರಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೨೪ ||

೩೨೯

ಶಕಲಾತಿ ಬ್ರಹ್ಮಂಗೆ ಕೊಟ್ಟು,
ಕಿನಕಾಪು ವಿಷ್ಣುವಿಂಗೆ ಕೊಟ್ಟು,
ಸುಳುಹು ರುದ್ರಂಗೆ ಕೊಟ್ಟು,
ಕೊಟ್ಟ ಕಪ್ಪಡದ ಹಣವ ಕೊಳ್ಳದೆ
ಕಾಯಕವ ಮಾಡುತ್ತಿರ್ದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೨೫ ||

೩೩೦

ಶ್ವೇತವರ್ಣದ ವಸ್ತ್ರವನೆಲ್ಲ ಭಕ್ತಂಗೆ ಕೊಟ್ಟು,
ಪೀತವರ್ಣದ ವಸ್ತ್ರವನೆಲ್ಲ ಮಾಹೇಶ್ವರಂಗೆ ಕೊಟ್ಟು,
ಹರಿತವರ್ಣದ ವಸ್ತ್ರವನೆಲ್ಲ ಪ್ರಸಾದಿಗೆ ಕೊಟ್ಟು,
ಮಾಂಜಿಷ್ಟವರ್ಣದ ವಸ್ತ್ರವನೆಲ್ಲ ಪ್ರಾಣಲಿಂಗಿಗೆ ಕೊಟ್ಟು,
ಕಪೋತವರ್ಣದ ವಸ್ತ್ರವನೆಲ್ಲ ಶರಣಂಗೆ ಕೊಟ್ಟು,
ಮಾಣಿಕ್ಯವರ್ಣದ ವಸ್ತ್ರವನೆಲ್ಲ ಐಕ್ಯಂಗೆ ಕೊಟ್ಟು,
ಇಂತೀ ವಸ್ತ್ರದ ಹಣವ ಕೊಳ್ಳದೆ ಕೊಂಡು ಸುಂಗಿ
ಕಾಯಕವ ಮಾಡುತ್ತಿರ್ದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೨೬ ||

೩೩೧

ಕೊಟ್ಟ ಹಣವ ಮುಟ್ಟದೆ,
ಒಂದು ಕೊಟ್ಟು ಎರಡು ಪಡೆಯದೆ,
ತಮ್ಮ ಮಾತಾಪಿತರು ಗಳಿಸಿದ ದ್ರವ್ಯವನುಂಡು
ಸುಖದಿಂದ ಕಾಯಕವ ಮಾಡುತ್ತಿರ್ದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೨೭ ||

೩೩೨

ಪುರುಷ ಸತ್ತ ಬಳಿಕ ಗಂಧ ಅಕ್ಷತೆ ಧರಿಸಿ
ಒಗತನವ ಮಾಡಲಿಲ್ಲ.
ಸತಿಯಳ ಕೊಂದು, ಸತ್ತ ಪುರಷನ ಸತಿಯಳ ಕೂಡಿ
ಒಗತನವ ಮಾಡುತ್ತಿರ್ಪರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೨೮ ||

**ಬಡಿಗೇರ ಬಾಬಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೩೩

ಹಿಡಿಯಿಲ್ಲದ ಉಳಿ, ಕಾವಿಲ್ಲದ ಬಾಚಿ, ಹಲ್ಲಿಲ್ಲದ ಕರಗಸ
ಇಂತೀ ಆಯುಧದಿಂದ ಕಟ್ಟಿದಮನೆ ಕೆಡವಿ,
ತೊಲೆ ಕಂಬವ ಕಡಿದು ಸುಟ್ಟು, ತೊಲೆ ಕಂಬವಿಲ್ಲದೆ
ದಾರದಿಂ ಮನೆಯ ಕಟ್ಟಿಕೊಟ್ಟು ಹಣವ ಕೊಂಡುಂಡು
ಕಾಯಕವ ಮಾಡುತ್ತಿರ್ದರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೨೯ ||

೩೩೪

ಮಲೆಯ ಕಡಿದು ಒಂದು ವೃಕ್ಷವ ತಂದು,
ಕೊರೆದು ಅನೇಕ ತೊಲಿ ಕಂಬ
ಬೋದುಗೆಗಳು ಚಿಲುಕಿ ಮೊದಲಾದ ಎಲ್ಲವನು ಕೆತ್ತಿ
ಉಣ್ಣದೆ ಉಂಡು, ಮನೆಯ ಕಟ್ಟಿ, ಒಗತನವಿಲ್ಲದೆ ಸತ್ತು
ಕಾಯಕವ ಮಾಡುತ್ತಿರ್ಪರು ನೋಡೆಂದ

ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೦ ॥

೩೩೪

ಪರ್ಣ ಉದುರಿದ ವೃಕ್ಷ ಕಡಿದು, ಕೊಂಗೆಯ ಸವರದೆ ಮನೆಯ ಕಟ್ಟಿ,
ಪಾತಾಳದ ಬೇತಾಳಂಗೆ ರುದ್ರನನಾಹುತಿಯ ಕೊಟ್ಟು,
ಸ್ವರ್ಗಲೋಕದ ಮಾರೇಶ್ವರಂಗೆ ವಿಷ್ಣುವಿನ ಆಹುತಿ ಕೊಟ್ಟು,
ಮರ್ತ್ಯಲೋಕದ ಜಗಜಟ್ಟಿಗೆ ಬ್ರಹ್ಮನ ಆಹುತಿ ಕೊಟ್ಟು,
ಉಳಿದಲೋಕದ ಭೂತಂಗಳಿಗೆ ಷಟ್‌ಸ್ಥಲದ ಭವಿಗಳ ಕೊಟ್ಟು,
ಜನಿವಾರ ಹರಿದು ಗಂಧವ ಧರಿಸದೆ,
ಜಳಕವ ಮಾಡದೆ, ಮಡಿ ಉಡದೆ, ಮೈಲಿಗೆಯನುಟ್ಟು,
ಉಣ್ಣದ ಆಹಾರವನುಂಡು
ಕಾಯಕವ ಮಾಡುತ್ತಿರ್ಪರು ನೋಡೆಂದ,
ಕಾಡಸೋಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೧ ॥

**ಕಮ್ಮಾರ ಕಾಶಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೩೬

ಪಂಚಲೋಹದ ಕಬ್ಬಿಣವ ಬೆಂಕಿಯಿಲ್ಲದೆ
ಇದ್ದಲಿಯ ಹಾಕಿ ತಿದಿಯಿಲ್ಲದೆ ಊದಿ, ಕಬ್ಬಿಣವಕಾಸಿ,
ಅಡಗಲ್ಲಿನ ಮೇಲಿಟ್ಟು ಹೊಡೆಯಲು
ಲೋಹವಳಿದು ಚಿನ್ನವಾಯಿತ್ತು.
ಚಿನ್ನ ಚಿನ್ಮಯಂಗೆ ಮಾರಿ ಕೊಟ್ಟು ಪಡಿಯ ಕೊಂಡುಂಡು
ಕಾಯಕವ ಮಾಡುತ್ತಿರ್ಪರು ನೋಡೆಂದ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೨ ॥

೩೩೭

ಮಣ್ಣಿಲ್ಲದ ಮುಶಿಯೊಳಗೆ ಪಂಚರಸದ ಲೋಹವ ಹಾಕಿ
ಮೂರು ಬೆಂಕಿಯ ಕುಕ್ಕಿ, ಜೋಡು ತಿದಿ ಕೂಡಿ ಊದಲು,
ಆರುವರ್ಣದ ಲೋಹವಾಯಿತ್ತು.
ಆ ಲೋಹಕ್ಕೆ ಮೂರು ನವಿಗೂಡಿದ ಉದಕವ ಕುಡಿಸಲು,

ಉಭಯವು ಬಯಲಾದ ಬಯಲವನು ನುಂಗಿ ಹಿಂಗದೆ
ಕಾಯಕವ ಮಾಡುತ್ತಿರ್ಪರು ನೋಡೆಂದ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೭ ॥

## ಶರಣನ ಮಹೇಶ್ವರ

**ವೀರಘಂಟೆ ಮಡಿವಾಳಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೩೮

ಭವಿಗಳ ಕಪ್ಪಡ ಕವುದಿ ಕಂಬಳಿ ಕರಿಯಶಾಲಿಯ ತೊಳೆಯದೆ
ಲಿಂಗವಂತರಾದವರ ಕಪ್ಪಡ ಶಾಲು ಶಕಲಾತಿ ಜರತಾರವ ತೊಳೆದು,
ಮಡಿಯ ತೊಳೆಯದೆ, ಮೈಲಿಗೆಯ ತೊಳೆದು,
ಮಡಿ ಉಡದೆ ಮೈಲಿಗೆಯನುಟ್ಟು, ಕಳೆಯದೆ
ಕಾಯಕವ ಮಾಡುತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೮ ॥

೩೩೯

ಕತ್ತೆಯ ಕಟ್ಟದೆ, ಮಡಿಯ ಮುಟ್ಟದೆ,
ಬಿಜ್ಜಳನ ಕಪ್ಪಡದ ಹಣವಕೊಂಡುಣ್ಣದೆ,
ನಾಯಿಯ ಕಟ್ಟಿ, ಮೈಲಿಗೆಯ ಮುಟ್ಟಿ,
ಬಸವನ ಕಪ್ಪಡದ ಹಣವಕೊಂಡುಂಡು,
ಸೂರ್ಯನ ನುಂಗಿ ಸೊಪ್ಪೆಯ ಸುಟ್ಟು,
ಚಂದ್ರನ ನುಂಗಿ ನಪುರಂಗವ ಸುಟ್ಟು,
ಅಗ್ನಿಯ ನುಂಗಿ ಕೋಣೆಯ ಸುಟ್ಟು, ಭಸ್ಮವ ಧರಿಸಿ,
ಕಾಯಕವ ಮಾಡುತಿರ್ಪರು ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೯ ॥

೩೪೦

ಎಡಭಾಗದ ಮುರಗಿಂದ ಬ್ರಹ್ಮನ ಹೊಡೆದು ಕೊಂದೆ,
ಬಲಭಾಗದ ಮುರಗಿಂದ ವಿಷ್ಣುವಿನ ಕೊಂದೆ,
ಹಿಂಭಾಗದ ಮುರಗಿಂದ ರುದ್ರನ ಕೊಂದೆ.

ಒಂಟಿಮುರಗಿಯ ಹನಿಗಳಿಂದ ಶುನಿಗಳ ಕೊಂದೆ,
ಮೈಲಿಗಿ ಮೋಳಗಿಯ ಸುಂಗಿ ಸತ್ತು
ಕಾಯಕವ ಮಾಡುತಿರ್ದನು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೩೬ ||

೩೪೧

ಕಲ್ಯಾಣಪುರದೊಳಗೆ ಬಿಜ್ಜಳಾಂಕನೆಂಬ ರಾಜನು
ಅಷ್ಟವಿಧಪ್ರಧಾನರ ಸಮೂಹದಲ್ಲಿ
ಶಿವಭಕ್ತಿ ಇಲ್ಲದೆ ರಾಜ್ಯವನಾಳುತಿರ್ಪನು.
ಇಂಗಳೇಶ್ವರನೆಂಬ ಪುರದ ವಿಪ್ರರ ಸಂದಣಿಯಲ್ಲಿ
ಬಸವೇಶ್ವರನುದ್ಭವಿಸಿ ಕಲ್ಯಾಣಕ್ಕೆ ಬಂದು
ಬಿಜ್ಜಳನ ಅಷ್ಟವಿಧಪ್ರಧಾನರ ನಷ್ಟವಮಾಡಿ,
ನವಮಪ್ರಧಾನನಾಗಿ, ಬಿಜ್ಜಳನ ರಾಜ್ಯವನ್ನಾಳುತ್ತ
ನಿತ್ಯದಲ್ಲಿ ಹಲವು ಜಂಗಮಕ್ಕೆ ಭೋಜನವ ಮಾಡುತ್ತ
ಬಸವಣ್ಣ ಇರ್ಪನು ಕಲ್ಯಾಣಪುರದಲ್ಲಿ ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೩೭ ||

**ಕುಂಬಾರ ಗುಂಡಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೪೨

ನೆಲವಿಲ್ಲದ ಭೂಮಿಯ ಮಣ್ಣನ್ನು ತಂದು,
ಲದ್ದಿ ಉಸುಕವ ಬೆರೆಸದೆ ಮಡಿಕೆಯ ಮಾಡಿ,
ಸುಡದೆ ಮಾರಿ ಹಣವಕೊಂಡು ಯಾರಿಗೂ ಕೊಡದೆ
ಉಂಡು ಸುಖದಿಂದ ಕಾಯಕವ ಮಾಡುತಿರ್ಪರು ನೋಡೆಂದ ಶ್ರೀಗುರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೩೮ ||

೩೪೩

ಮಣ್ಣ ತುಳಿದು ಮಡಿಕೆಯ ಮಾಡಿ
ಆವಿಗೆಯನೊಟ್ಟಿ ಸುಡುವಲ್ಲಿ,
ಅಗ್ನಿ ಸುಟ್ಟು, ಮಡಿಕೆ ಉಳಿಯಿತ್ತು.
ಹರವಿಯ ಉಪಚಾರುಳ್ಳವಂಗೆಕೊಟ್ಟು.

ಉಪಚಾರಿಲ್ಲದವನ ಕೊಂದು,
ಗುಡುಮಿಯ ಉಪಚಾರ ಇಲ್ಲದವಂಗೆ ಕೊಟ್ಟು,
ಉಪಚಾರುಳ್ಳವನ ಕೊಂದು,
ಕಿಡಿಕಿಯ ಕುಲಗೇಡಿಗೆ ಕೊಟ್ಟು, ಭವಗೇಡಿಯ ಕೊಂದು,
ಮೂರೆರಡು ಮಡಕಿಯ ಆರೂರವರಿಗೆ ಕೊಟ್ಟು,
ಈರಾರು ಈರೆಂಟು ಕೊಂದು, ಉಳಿದ ಮಡಕಿಯ ಊರೆಲ್ಲ ಮಾರಲು,
ಊರು ಸುಟ್ಟು ಜನರೆಲ್ಲ ಸತ್ತು, ಸತ್ತವರ ಹೊತ್ತು
ಸತ್ತು ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೩೯ ॥

೩೪೪

ಅಟ್ಟುಂಬ ಜನರಿಗೆ ಮಡಿಕೆಯ ಕೊಡಲಿಲ್ಲ;
ಅಟ್ಟುಣ್ಣದೆ ಉಂಬ ಜನರಿಗೆ ಮಡಿಕೆಯ ಮಾರುವನು.
ಹಣವ ತಂದವರಿಗೆ ಮಡಿಕೆಯ ಕೊಡಲಿಲ್ಲ;
ಹಣವ ತಾರದವರಿಗೆ ಮಡಿಕೆಯ ಮಾರುವನು.
ಉಭಯದ ಸಂದನರಿದವರಿಗೆ ಮಡಿಕೆಯ ಮಾರುವನು.
ಅರಿಯದವರಿಗೆ ಮಡಿಕೆಯ ತೋರನು
ನೋಡೆಂದ ವೀರಮಾಹೇಶ್ವರನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೦ ॥

೩೪೫

ರಂಜಣಿಗೆಯ ಉದಕವ ಕುಡಿದವರು ಸಾಯಲಿಲ್ಲ.
ಕುಳ್ಳಿಯುದಕವ ಕುಡಿದವರು ಸಾಯುವರು ನೋಡೆಂದ.
ಕುಳ್ಳಿಯುದಕವ ರಂಜಣಿಗಿಯ ತುಂಬಲು
ರಂಜಣಿಗಿ ಒಡೆದು ಕುಳ್ಳಿಯಾಯಿತ್ತು.
ಕುಳ್ಳಿಯ ಕೊಂಬವನಾರನು ಕಾಣೆ ನೋಡೆಂದ ದಮ್ಮಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೧ ॥

**ಪತ್ತಾರ ಬಾಳಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೪೬

ಕಾಳಮ್ಮನ ಪೂಜಿಸದೆ, ಕಾಳಿಶಾಲಿಯನುಡದೆ
ಕಾವಿಶಾಲಿಯನುಟ್ಟು ಹೆಂಡಗಾರರ ಗುಂಡವ ಪೂಜಿಸಿ,
ಸುಂಗಿ ಉಗುಳದೆ ಹಿಂಗಿ ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೨ ॥

೩೪೭

ಕುಬಟಗಿಯನೊಡೆದು ಇದ್ದಲಿಯ ಹಾಕದೆ,
ಬೆಂಕಿಯ ಕಳದು ಕಲ್ಲು ಕರಗಿ ರಸಹಿಂಡಿ,
ಚಿನ್ನವಮಾಡಿ ಹಣವಿಲ್ಲದವರಿಗೆ ಕೊಟ್ಟು,
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೩ ॥

## ಶರಣನ ಪ್ರಸಾದಿ

**ಬಳಿಗಾರ ಬಸವಂತಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೪೮

ಮನುಜರಿಲ್ಲದ ಊರ ಬಳೆಯ ತಂದು,
ಗಂಡನಿಲ್ಲದ ಸತಿಯಳಿಗೆ ಇಡಿಸಿ ಮದುವೆಯ ಮಾಡಲು
ಉಭಯತರು ಸತ್ತು ಪದಾರ್ಥವ ನೀಡಿ,
ಭೂಮವನುಂಡು ಕಾರದೆ, ಕಾಯಕವ ಮಾಡುತ್ತಿರ್ಪರು
ನೋಡೆಂದ ಬಳಿಗಾರ ಬಸವಂತ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೪ ॥

೩೪೯

ಹಡಿಯದವರಿಗೆ ಬಳೆಯನಿಡಿಸುವೆ,
ಹಡದವರಿಗೆ ಬಳೆಯನಿಡಿಸದೆ.
ರಂಡಿಗೆ ಬಳೆಯನಿಡಿಸುವೆ,
ಮುತ್ತೈದೆಗೆ ಬಳೆಯನಿಡಿಸದೆ.

ಸಣ್ಣವರಿಗೆ ಬಳೆಯನಿಡಿಸುವೆ,
ದೊಡ್ಡವರಿಗೆ ಬಳೆಯನಿಡಿಸದೆ.
ನೀಲಬಳೆಯನಳಿದು ಬಿಳಿಬಳೆಯನಿಟ್ಟು ಒಡೆಯದೆ
ಕಾಯಕವ ಮಾಪುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೪೫ ||

೩೫೦

ಪ್ರಪಂಚ ಪಾರಮಾರ್ಥ, ಲೌಕಿಕ ಪಾರಮಾರ್ಥ
ಇಂತೀ ಉಭಯವನು ನಡೆಸುವಾತನೇ ಜಾಣನೆಂಬರು.
ಪ್ರಪಂಚ ಪಾರಮಾರ್ಥ ಎಂದೊಡೆ ಆವುದು,
ಲೌಕಿಕ ಪಾರಮಾರ್ಥ ಎಂದೊಡೆ ಆವುದು,
ಬಲ್ಲಾದರೆ ಪೇಳಿರಿ, ಅರಿಯದಿದ್ದರೆ
ನಮ್ಮ ನಿರ್ಮಾಯಪ್ರಭುವಿನ ಶರಣರ ಕೇಳಿರಿ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೪೬ ||

೩೫೧

ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧವನಳಿದಲ್ಲದೆ
ಭವ ಹಿಂಗದೆಂಬರು ಭಿನ್ನ ಭಾವದಜ್ಞಾನಕಲಾತ್ಮರು.
ಅವೇನು ತಮ್ಮ ಸಂಬಂಧವೆ? ಸಂಬಂಧವಲ್ಲ.
ತಮ್ಮ ಸಂಬಂಧವಾದ ಮಲತ್ರಯವ ಪೇಳ್ವೆ.
ತನುವೇ ಮಣ್ಣು, ಮನವೇ ಹೆಣ್ಣು, ಆತ್ಮವೇ ಹೊನ್ನು.
ಇಂತೀ ಹೊನ್ನು ಹೆಣ್ಣು ಮಣ್ಣೆಂಬ
ತ್ರಿವಿಧವನೊಳಗಿಟ್ಟುಕೊಂಡು
ಬಾಹ್ಯದ ಮಲತ್ರಯಂಗಳ ವಿಸರ್ಜಿಸಿ
ಭವಹಿಂಗಿಸಬೇಕೆಂದು ಗುಡ್ಡ ಗಂಹರವ ಸೇರುವರು.
ಅವರಿಗೆ ಎಂದಿಗೂ ಭವಹಿಂಗದು.
ಮತ್ತಂತೆಂದೊಡೆ :
ಸುಜ್ಞಾನೋದಯವಾಗಿ ಶ್ರೀಗುರುಕಾರುಣ್ಯವ ಹಡೆದು
ಅಂಗದ ಮೇಲೆ ಇಷ್ಟಲಿಂಗವ ಸ್ವಾಯತವ ಮಾಡಿಕೊಂಡು
ಆ ಇಷ್ಟಬ್ರಹ್ಮವನು ತನುಮನಧನದಲ್ಲಿ ಸ್ವಾಯತವ ಮಾಡಿ,

ಆ ತ್ರಿವಿಧ ಲಿಂಗದ ಸತ್ಕ್ರಿಯಾ ಸಮ್ಯಜ್ಞಾನ ಸ್ವಾನುಭಾವದಾಚರಣೆಯಿಂದ
ಆ ತನುತ್ರಯದ ಪ್ರಕೃತಿಯನಳಿದು,
ಆ ಮಾಯಾಮಲಸಂಬಂಧವೆಂಬ ಸತಿಸುತರು
ಮಾತಾಪಿತೃಗಳ ಸಂಬಂಧವಿಡಿದು,
ಆಚರಿಸಿಪಡೆಯು ಅದಕ್ಕೇನು ಚಿಂತೆಯಿಲ್ಲ,
ಇಷ್ಟುಳ್ಳವರಿಗೆ ಭವ ಹಿಂಗಿ ಮುಕ್ತಿಯಾಗುವದು.
ಪ್ರಮಥಗಣಂಗಳ ಸಮ್ಮತ ಶಿವಜ್ಞಾನಿಗಳು ಮೆಚ್ಚುವರು.
ಅದೇನು ಕಾರಣವೆಂದಡೆ :
ಈ ಮಲಸಂಬಂಧ ಜೀವಾತ್ಮರೆಲ್ಲ
ದೇಹ ಇರುವ ಪರ್ಯಂತರವಲ್ಲದೆ
ಲಿಂಗಾಂಗಿಗೆ ಇದ್ದೂ ಇಲ್ಲದಂತೆ ನೋಡೆಂದನಯ್ಯಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೭ ॥

**ಜೋಯಿಸರ ಗೋವಿಂದಭಟ್ಟರು ಕಾಯಕವ ಮಾಡಿದ ವಚನವ ಪೇಳ್ವೆ :**

೩೫೦

ಮದುವೆಯಿಲ್ಲದವರಿಗೆ ಮುಹೂರ್ತವ ಪೇಳಲಿಲ್ಲ.
ಮದುವೆಯಾದವರಿಗೆ ಮುಹೂರ್ತವ ಪೇಳ್ವೆ.
ಎನ್ನ ಮುಹೂರ್ತವ ಕೇಳಿದವರ ಬಾಗಿಲಿಕ್ಕಿ ಮನೆಯ ಸುಡುವೆ.
ಸುಟ್ಟ ಮನೆಯವರು ಸತ್ತವನ ಮನೆಯಲ್ಲಿರ್ದು
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ ಗೋವಿಂದಭಟ್ಟನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೮ ॥

೩೫೩

ಪಂಚಾಂಗವ ಬರೆದು ಓದಿ
ಮುಹೂರ್ತವ ಹೇಳುವರ ಕಂಡೆ.
ಪಂಚಾಂಗವ ಪಿಡಿದು ಮುಹೂರ್ತವ ಕೇಳುವರ ಕಂಡೆ.
ಪಂಚಾಂಗದ ಅಕ್ಷರವ ಕಲಿತು ಹೇಳುವರ ಕಂಡೆ.
ಆ ಅಕ್ಷರವ ಕಲಿತು ಎಣಿಸುವರ ಕಂಡೆ.
ಪಂಚಾಂಗದ ಭೇದವನು ಆರೂ ಅರಿಯರು.
ಅರಿಯದೆ ನುಂಗಿ ಅಕ್ಷರವನಡಗಿಸಿ

ಮರುಳನಂತೆ ಕಾಯಕವ ಮಾಡುತ್ತಿರ್ಪರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೪೯ ॥

೩೫೪

ಲಿಂಗವಂತರಿಗೆ ಮುಹೂರ್ತವ ಪೇಳಿ
ಪಂಚಾಂಗವ ತೋರಬೇಕಲ್ಲದೆ
ಭವಿಗಳಿಗೆ ಮುಹೂರ್ತವ ಪೇಳಿ ಪಂಚಾಂಗವ ತೋರಲಾಗದು.
ಅದೇನು ಕಾರಣವೆಂದಡೆ :
ಕೈಯೊಳಗಿನ ಪಂಚಾಂಗ ಹೃದಯದೊಳಗಣ ಮುಹೂರ್ತ
ತನಗೆ ಸಾಧ್ಯವಾಗದಾಗಿ.
ಪೇಳಿದರೆ ಪೇಳಬಹುದು.
ಹಣವ ಕೊಡವುಳ್ಳವರ ಕಂಡರೆ
ಪಂಚಾಂಗದ ಮುಹೂರ್ತವ ನೋಡೆಂದನಯ್ಯಾ ಗೋವಿಂದಭಟ್ಟ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೫೦ ॥

೩೫೫

ಮೂರಳಿದು ಮೂರುಳಿದು ಮೂರೊಂದುಗೂಡಿದವರ
ಕೂಡಬೇಕೆಂಬವರಿಗೆ ಪಂಚಾಂಗವ ಬಿಚ್ಚಿ ಮುಹೂರ್ತವ ಪೇಳಬೇಕು.
ಆರಳಿದು ಆರುಳಿದು ಆರುಗೂಡಿದವರ ಕೂಡಬೇಕೆಂಬವರಿಗೆ
ಪಂಚಾಂಗವ ಬಿಚ್ಚಿ ಮುಹೂರ್ತವ ಪೇಳಬೇಕು.
ಎಂಟಳಿದು ಎಂಟುಳಿದು ಎಂಟುಗೂಡಿದವರ ಕೂಡಿ
ಕಂಟಕವ ಗೆಲೆಯಬೇಕೆಂಬವರಿಗೆ ಪಂಚಾಂಗವ ಬಿಚ್ಚಿ
ಮುಹೂರ್ತವ ಪೇಳಬೇಕು ನೋಡೆಂದನಯ್ಯಾ ಗೋವಿಂದಭಟ್ಟ,
ಕಾಡನೊಳಗಾದ ಶಂಕಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೫೧ ॥

೩೫೬

ಆಶೆಯುಳ್ಳವರಿಗೆ ವೇಷವ ಧರಿಸಿ
ಮುಹೂರ್ತವ ಪೇಳಲಿಬೇಕು.
ಪೇಳದಿದ್ದರೆ ಹೆಂಡಗಾರರು ಮೆಚ್ಚರು.
ಆಶೆಯಿಲ್ಲದವರಿಗೆ ಆಶೆ ಮಾಡಿ ವೇಷವ ಧರಿಸಿ

ಮುಹೂರ್ತವ ಪೇಳಿದವರಿಗೆ
ಮೂರು ಮಲದ ಕೊಂಡದಲ್ಲಿರಿಸುವರು ನೋಡೆಂದನಯ್ಯಾ ಗೋವಿಂದಭಟ್ಟ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೫೨ ||

೩೫೭

ಪಂಚಾಂಗವ ಸುಟ್ಟವರಿಗೆ ಪಂಚಾಂಗವ ಕೊಟ್ಟು,
ಮುಹೂರ್ತವ ಪೇಳಲಿಬೇಕು.
ಪಂಚಾಂಗವ ಪಿಡಿದು ಪಂಚಪದಾರ್ಥವ ಸೇವಿಸುವವರಿಗೆ
ಪಂಚಾಂಗವ ಕೊಟ್ಟು, ಮುಹೂರ್ತವ ಪೇಳಲಾಗದು.
ಪೇಳಿದವರಿಗೆ ಎರಡಳಿಯವು ನೋಡೆಂದನಯ್ಯಾ ಗೋವಿಂದಭಟ್ಟ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೫೩ ||

## ಶರಣನ ಪ್ರಾಣಲಿಂಗಿ

**ಶಾನಭೋಗ ರಾಮಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೫೪

ಮೂರು ಹೊನ್ನು ಕೊಟ್ಟು, ಮೂರಾರು ಹೊನ್ನಿನ ಊರಕೊಂಡು
ರೈತರ ಕಾಡದೆ ಪಟ್ಟಿಯನೊಡೆದು ಧಣಿಯಂಗೆ ಕೊಟ್ಟು,
ಊರ ಸುಖದಲ್ಲಿಟ್ಟು, ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೫೪ ||

೩೫೫

ತನ್ನ ಗ್ರಾಮವಬಿಟ್ಟು ಅನ್ಯಗ್ರಾಮದಲ್ಲಿರಲು,
ಒಡೆಯರು ನವಮುಗ್ಧರ ಕಳುಹಲು
ನವಮುಗ್ಧರ ನವಹಳ್ಳಿಗೆ ಕಳುಹಿ,
ಹಣವ ಧಣಿಯಂಗೆ ಮುಟ್ಟಿಸಿ
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೫೫ ||

೩೬೦

ಅರಸು ಪ್ರಧಾನಿ ಗೌಡರಿಗೆ ಅಂಜದೆ,
ಬಂಟಂಗೆ ಅಳುಕದೆ ಊರನಾಳಿ
ದಾಳಿಹೋದರು ಚಿಲ್ಲಿಂಗಸಂಬಂಧಿಗಳು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೫೬ ॥

೩೬೧

ಭೂಮಿ ಬಿಟ್ಟವರಿಗೆ ಭೂಮಿಕೊಟ್ಟು ಹಣವ ಕೊಂಬುವರು ;
ಭೂಮಿ ಹಿಡಿದವರಿಗೆ ಭೂಮಿಕೊಟ್ಟು ಹಣವ ಕೊಳಲಿಲ್ಲ.
ಅನ್ನೋದಕ ಉಂಬವರಿಗೆ ವಿಷ ಅಮೃತವನುಣಿಸಲಿಲ್ಲ;
ಅನ್ನೋದಕ ಬಿಟ್ಟವರಿಗೆ ವಿಷ ಅಮೃತವನುಣಿಸುವರು
ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೫೭ ॥

೩೬೨

ಇಬ್ಬರಿಗೆ ಮೂರು, ಮೂರಿಟ್ಟವರು
ಹಲವು ಮನೆಯಲ್ಲಿ ಚರಿಸುವರು.
ಒಬ್ಬಂಗೆ ಒಂದು, ಒಂದಿಟ್ಟವರು ಮನೆಯಿಲ್ಲದೆ
ಬಯಲಲ್ಲಿ ಚರಿಸುವರು.
ಬಯಲ ಹೊತ್ತವರೆ ಅಸುಲಿಂಗಿಗಳು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೫೮ ॥

೩೬೩

ಬಯಲ ಹೊತ್ತವರು ಅಳಲಿಲ್ಲ;
ಆಕಾಶ ಹೊತ್ತವರು ಅಳುತ್ತಿರ್ಪರು.
ಅತ್ತವರು ಇತ್ತಾದರು, ಅಳದವರು ಅತ್ತಾದರು
ನೋಡೆಂದನಯ್ಯಾ ಪ್ರಾಣಲಿಂಗಿ
ಕಾಡನೊಳಗಾದ ಶಂಕರಪರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೫೯ ॥

೩೬೪

ಮನೆ ಸುಟ್ಟು ಸತಿಸುತರು ಸತ್ತು
ಅರಸನಿಗೆ ಹಣವ ಕೊಟ್ಟವರು ಅಳಲಿಲ್ಲ,
ಇಷ್ಟುಳ್ಳವರು ಅಳುತ್ತಿರ್ಪರು.
ಅಳುವರ ಕೈಯೊಳಗೆ ಕನ್ನಡಿಯ ಕೊಡಲು
ಅಳುವಡಗಿ ಕನ್ನಡಿಯ ನೋಡಿ ಹಲ್ಲುಕಿಸಿದು ನಕ್ಕು
ಸತ್ತು ಬದುಕಿ ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೬೦ ॥

**ಸಿಂಪಿಗೇರ ಸಂಗಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೬೫

ಕರಿಶಾಲಿಯ ಹರಕ ಬಿಡಿಹೊಲಿಗೆಯ ಕರಿಕುಪ್ಪಸ,
ಕರಿಗೊಂಗಡಿ ಕುಂಚಿಗೆ-
ಇಂತೀ ಮೂರುಜೀನಸು ಹೊಲಿಯದೆ
ಶಾಲು ಶಕಲಾತಿ ಸುಳುಹು ಮೊದಲಾದ
ಬಣ್ಣದ ಕಪ್ಪಡವ ಹೊಲಿವರು.
ಆ ಕಪ್ಪಡವ ಕೊಂಡು ಕಾಯಕವ ಮಾಡುತ್ತಿರ್ಪರು
ನೋಡೆಂದನಯ್ಯಾ ಆಚಾರ್ಯನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೬೧ ॥

೩೬೬

ಅನೇಕ ಹೊಲಿಗೆಯ ಕಪ್ಪಡವ ಬಿಚ್ಚಿ,
ಮೂರೆಳಿದಾರದ ಕಪ್ಪಡವ ಹೊಲಿದು,
ನಾಲ್ಕು ಗಳಿಗೆಯ ಜೋಡಿಸಿ
ಬೇಡಿದವರಿಗೆ ಕೊಡರು, ಬೇಡದವರಿಗೆ ಕೊಡುವರು
ನೋಡೆಂದನಯ್ಯಾ ಲಿಂಗಿಗಳು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಂಲಿಂಗ
ನಿರ್ಮಾಯಪ್ರಭುವೆ. ॥ ೩೬೨ ॥

**೩೬೭**

ಕೀಲಿಲ್ಲದ ಕತ್ತರಿ, ಹಿನ್ನಿಯಿಲ್ಲದ ಸೂಜಿ, ನೂಲಿಲ್ಲದ ದಾರ.
ಕತ್ತರಿಯ ಬ್ರಹ್ಮನುಂಗಿದ, ಸೂಜಿಯ ವಿಷ್ಣುನುಂಗಿದ, ದಾರವ ರುದ್ರನುಂಗಿದ.
ಗಜಕಟ್ಟಿಗೆ ಸಿಂಪಿಗೇರ ಸಂಗಣ್ಣ ನುಂಗಿ
ಕಾಯಕವ ಮಾಡುತ್ತಿರ್ಪರು ನೋಡೆಂದನಾಚಾರ್ಯನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೩೬೩||

**೩೬೮**

ಸೂಜಿಯ ಹಿನ್ನಿಯ ಹರಿದು ದಾರವ ಪೋಣಿಸಿ,
ಮೂರುಮೂಲಿ ಆರೇಣಿಗೆ ಹಲವು ವರ್ಣದ ಮಣಿಗಳ ಹೊಲಿದು
ಸಂದುಸಂದಿಗೆ ಯಂತ್ರವ ಹೊಲಿದು ಕಾಂತಿಯ ಮಾಡಿ
ಕೈಕಾಲು ಕಣ್ಣು ಕರುಳಿಲ್ಲದ ಪರದೇಶದ ಪರದೇಶಿಯಾದ
ಶಿಶುವಿಂಗೆ ತೊಡಿಸುವರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೩೬೪||

**೩೬೯**

ಲೋಡಿಗೆ ಮೂರು ಹಣವ ಕೊಂಬರು.
ತಿಬ್ಬಿಗೆ ಐದು ಹಣವ ಕೊಂಬರು.
ಎಳೆಗೆ ಎಂಟಾರು ಹಣವ ಕೊಂಬರು.
ಬೆನ್ನಿಗೆ ಹೀಗೆ ಕೊಂಬರು, ಉದರಕ್ಕೆ ಹೀಗೆ ಕೊಂಬರು
ನೋಡೆಂದನಯ್ಯಾ ಅಸುಲಿಂಗಿ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ||೩೬೫||

**೩೭೦**

ಹರಕರವಿಯ ಹುರಿಯಿಲ್ಲದ ದಾರದಲ್ಲಿ ಹೊಲಿದು,
ಹೊಲಿದ ಕೂಲಿಯ ಕೊಡುವರು.
ಊರನಾಶ್ರಯಿಸಿ ಅರಣ್ಯದಲ್ಲಿ ಚರಿಸುವರು.
ಹರಕರವಿಯ ಹೊಲಿಯದೆ ಹುರಿಗೂಡಿದ ದಾರವ ಬಿಚ್ಚದೆ
ಹರಿಯದೆ ಹೊಸ ಅರಿವೆಯ ಹೊಲಿದು,
ಹೊಲಿದ ಕೂಲಿಯ ಕೊಳ್ಳದವರು

ಊರನಾಶ್ರಯಿಸಿ ಅರಣ್ಯದಲ್ಲಿ ಚರಿಸದೆ
ಬಯಲುಭೂಮಿಯಲ್ಲಿ ಚರಿಸಿ ಆರಿಗೂ ಸಿಕ್ಕದೆ
ಇರ್ಪರು ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೬೬ ||

**ಚಿತ್ರಗಾರ ಸೋಮಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

**೩೭೧**

ಗಿಲಾಯದ ಮಣ್ಣಿನ ಗೋಡೆಗೆ,
ಕಟೆದ ಕಲ್ಲಿನ ಗಚ್ಚಿನ ಶಿವಾಲಯಕ್ಕೆ, ಎರಕದ ದೇಗುಲಕ್ಕೆ,
ಇಂತೀ ತ್ರಿವಿಧಭಿತ್ತಿಗಳಿಗೆ ಚಿತ್ರವ
ಬರೆದವರು ಬರೆಸಿದವರು ಇತ್ತಾಗಿ ಬಹುಕಾಲ ಇರ್ಪರು.
ಇಂತೀ ಭಿತ್ತಿಗಳಲ್ಲಿ ಚಿತ್ರವ ಬರೆಯದವರು
ಅತ್ತಾಗಿ ಬಹು ಕಾಲ ಇರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೬೭ ||

**೩೭೨**

ಹಸಿಯ ಗೋಡೆಗೆ ಚಿತ್ರವ ಬರೆಯದೆ
ಒಣಗೋಡೆಗೆ ಆರುವರ್ಣಗೂಡಿದ ಬಣ್ಣದ ಚಿತ್ರವ ಬರೆಯಲು,
ಚಿತ್ರ ಗೋಡೆಯ ನುಂಗಿ, ಗೋಡೆ ಚಿತ್ರವ ನುಂಗಿ,
ಚಿತ್ರದ ಮನೆಯವರು ಚಿತ್ರಕನ ಕೊಂದು ಕಾಯಕವ ಮಾಡುತ್ತಿರ್ಪರು.
ಇದ ಬಲ್ಲವರು ಕಾಯಕವ ಮಾಡಬೇಕು.
ಅರಿಯದವರು ಕಾಯಕ ಬಿಟ್ಟು,
ಚಿತ್ರಕರು ಇದ್ದೆಡೆಗೆ ಪೋಗಿ ಚಿತ್ರವ ಬರಿಸಿ
ತಿಳಿಯಬೇಕು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೬೮ ||

**೩೭೩**

ಅಗ್ನಿವರ್ಣದ ಚಿತ್ರ ಆಕಾಶವ ನುಂಗಿತ್ತು.
ಚಂದ್ರವರ್ಣದ ಚಿತ್ರ ಜಲವ ನುಂಗಿತ್ತು.
ಸೂರ್ಯವರ್ಣದ ಚಿತ್ರ ಪೃಥ್ವಿಯ ನುಂಗಿತ್ತು.

ಉಳಿದ ವರ್ಣದ ಚಿತ್ರವು ಪಂಚವರ್ಣದ ಭೂಮಿಯ ನುಂಗಿದವು,
ಈ ಚಿತ್ರದ ಭೇದವ ಬಲ್ಲವರು
ಅಸುಲಿಂಗಿಗಳು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೬೯ ||

೩೭೪

ಚಿತ್ರವನರಿಯದವರು
ಕೋಟಲೆಯಗೊಂಡು ಬರುವರು.
ಚಿತ್ರವನರಿದು ನುಂಗಿದವರು
ಕೋಟಲೆಯನಳಿದು ಬಾರದೆ ಪೋದರು.
ಈ ಉಭಯದ ಭೇದವನರಿದು ನುಂಗಿದವರು
ಹಾಂಗಾದರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೦ ||

೩೭೫

ಮೂದೇವಿಯ ಮಕ್ಕಳೆಲ್ಲಾ ಚಿತ್ರವ ಪೂಜಿಸಿ
ಅನಂತ ವೇಷವ ಧರಿಸಿರ್ಪರು.
ಹೊಲತಿಯ ಮಕ್ಕಳೆಲ್ಲ ಚಿತ್ರವ ಪೂಜಿಸಿ ಚಿನಿಪಾಲವ ಮಾಡಿ
ಹಲವು ವೇಷವ ಧರಿಸದೆ ಇರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೧ ||

**ಸುಣಗಾರ ಕೇತಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೭೬

ಕರ್ಲಭೂಮಿಯ ಹರಳ
ಅಶ್ವಪತಿ ಕಿರಣದಿಂದ ದಹಿಸಿ,
ನೀರಭೂಮಿಯ ಹರಳ
ಯರಳಪತಿ ಕಾಯಿಂದ ದಹಿಸಿ,
ಬೆಟ್ಟದ ಭೂಮಿಯ ಹರಳ
ಟೆಗರಪತಿ ಕಾಂತಿಯಿಂದ ದಹಿಸಿ,
ಉಳಿದ ಭೂಮಿಯ ಹರಳ

ದಗಡಲೋಹದ ಕಿಡಿಗಳಿಂದ ದಹಿಸಿ,
ಸುಣ್ಣವ ಮಾಡಿ ಮೂರು ಮುಖದಪ್ಪಿಗೆ ಕೊಟ್ಟು
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೨ ||

೩೭೭

ನೀರಿಲ್ಲದ ಭೂಮಿಯ ಹರಳು ತಂದು
ಊರ ಮಧ್ಯದ ನಡುವೆ ಬೆಂಕಿಯಿಲ್ಲದೆ ಸುಡಲು,
ಊರ ಸುಟ್ಟು, ಹರಳುಳಿದು
ಉಳಿದ ಹರಳ ಕಂಗಳು ನುಂಗಿ ಹಿಂಗದೆ
ಹಿಂಗಿಸುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೩ ||

೩೭೮

ಸುಟ್ಟ ಸುಣ್ಣವ ಹಸಿಮಡಕೆಗೆ ತುಂಬದೆ,
ಹಸಿಗೋಡೆಗೆ ಸಾರಿಸದೆ, ಬಿಸಿಮಡಕೆಗೆ ತುಂಬದೆ,
ಬಿಸಿಲಿಗೆ ಒಣಗಿಸಿ ಬಿಸಿನೀರೊಳಗೆ ಕಲಿಸಿ,
ಒಣಗೋಡೆಗೆ ಸಾರಿಸುವರು.
ಬಯಸಿ ಹಿಂಗದವರು ಈ ಸುಣ್ಣವ ಕೊಳ್ಳಿರಿ.
ಇಲ್ಲಾದರೆ ಇರುವಿರಿ ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೪ ||

೩೭೯

ಇರುವ ಮನೆಯ ವಿಸರ್ಜಿಸಿ ನೆರೆಮನೆಯಲ್ಲಿ ಚರಿಸಿ,
ಜನ್ಮವ ನೀಗಿ ಸತ್ತನೆಂಬವರಿಗೆ ಜನರು ಮೆಚ್ಚರು.
ಅದೇನು ಕಾರಣವೆಂದಡೆ :
ನೆರೆಮನೆಗೆ ಪೋಗದೆ, ಇರುವಮನೆ ವಿಸರ್ಜಿಸದೆ
ಹುಟ್ಟಿ ಆಚರಿಸಿ ಸತ್ತವರಿಗೆ
ಜನರು ಮೆಚ್ಚುವರು ನೋಡೆಂದನಯ್ಯಾ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೫ ||

೩೮೦

ಒಮ್ಮನದ ಯೋನಿಯಲ್ಲಿ ಪುಟ್ಟಿದವರು
ಮನೆಯೊಳಗೆ ಕಂಡು ಲಯವಾದರು ಹೊರಗೆ ಕಾಣಲಿಲ್ಲ.
ಇಮ್ಮನದ ಯೋನಿಯಲ್ಲಿ ಹುಟ್ಟಿದವರು
ಮನೆಯೊಳಗೆ ಕಾಣದೆ ಬಾಹ್ಯದಲ್ಲಿ ಕಂಡು
ಲಯವಾಗಿ ಪೋದರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೬ ||

**ಗಾಣಿಗೇರ ಕಲ್ಲಪ್ಪಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೮೧

ಪಂಚವರ್ಣದ ಗಾಣಕ್ಕೆ ಎಂಟೇಣಿನ ಕಣೆಯನಿಕ್ಕಿ,
ಮೂರೆತ್ತ ಹೂಡಿ, ಎಳ್ಳು ಅಗಸಿ ಔಡಲ ಎಣ್ಣೆಯ ತೆಗೆದು ಉಂಡವರು
ಕೈಯೊಳಗಿನ ಕಂಡವ ತಿನ್ನದೆ ಕಾಣದವರ ಮುಂದೆ ಕಾರಿಕೊಂಡು
ಕಾಣದೆ ಎಡೆಯಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೭ ||

೩೮೨

ಪಂಚವರ್ಣದ ಗಾಣ, ಆರೇಣಿನ ಕಣೆ,
ಎರಡೆತ್ತು ಹೂಡಿ, ಹುರಿದ ಬೀಜದ ಎಣ್ಣೆಯ ತೆಗೆದು,
ಉಂಡವರು ಕೈಕಂಡವ ಆರಿಗೂ ತೋರಿ ಉಸುರದೆ ನುಂಗಿ,
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೮ ||

೩೮೩

ಬುದ್ದಲಿಕಿ ಎಣ್ಣೆಯ ಊರೊಳಗಿನ ಶೀಲವಂತರಿಗೆ ಮಾರುವಳು.
ಮಣ್ಣ ಕೊಡದಿಣ್ಣೆಯ ಹೊರಕೇರಿ ಹೊಲೆಮಾದಿಗರಿಗೆ ಮಾರುವಳು.
ಕೊಡದೆಣ್ಣೆಯ ಕುಡಿದವರು ಲಯವಾದರು.

ಬುದ್ದಲಿಕಿ ಎಣ್ಣೆಯ ಕುಡಿದವರು ಎರವಾದರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೭೯ ||

೩೮೪

ಸೌಟೆಣ್ಣೆಯ ಪ್ರೇಮಿಗಳು ಘನ ಎಣ್ಣೆಯ ಪ್ರೇಮವನೆತ್ತಬಲ್ಲರು?
ಕೊಡದೆಣ್ಣೆಯ ಧಾರೆಯ ಕೊಳ್ಳದವರು
ಕೊಡ ಎಣ್ಣೆಯ ಕೊಂಡೇವೆಂಬರು.
ಇಂತಪ್ಪ ವ್ಯವಹಾರಿಗಳ ಕೂಡ ಗಾಣಿಗೇರ
ಕಲ್ಲಪ್ಪನು ಮಾತಾಡನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮೦ ||

೩೮೫

ಆನೆ ಕುದುರೆ ವೈಲಿ ಪಾಲಿಕಿ ರೂಢರಾದವರು,
ಮನೆಯ ಪುರುಷನ ಉಪಚಾರಮಾಡುವ ಸತಿಯರಿಗೆ
ಎಣ್ಣೆಯ ತೋರಿ ಮಾರರು.
ಎಣ್ಣೆಯ ಕಾಣದೆ, ಎಣ್ಣೆಯ ನಾತಿಗೆ
ಮಣ್ಣು ಮುಕ್ಕುವರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮೧ ||

**ಬಿಳಿಮಗ್ಗದ ಗುರುಬಸಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೮೬

ಭವಿಗಳ ನೂಲಪಿಡಿದು ನೆಯ್ದು ವಸ್ತ್ರವ ಮಾರಿ
ಕಾಯಕವ ಮಾಡುತ್ತಿರ್ಪರು.
ಶೀಲವಂತರ ನೂಲಪಿಡಿದು ನೆಯ್ದು ಮಾರಿ
ಕಾಯಕವ ಮಾಡಲಿಲ್ಲ ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮೨ ||

೩೮೭

ಕರಿಹಾಸ ಆರುಮಳ ಹೂಡಿ,
ಬಣ್ಣದ ಕುಂಚಗಿಯಲ್ಲಿ ಮೂರೆಳೆಯ ನೆಯ್ಯಲು

ಆರುಮಳ ಕರಿಹಾಸ ಅಳಿದು, ಮೂರುಮಳ ಬಿಳಿಹಾಸನೊಳಕೊಂಡು
ಒಂದು ಮೊಳದ ರೇಷ್ಮೆ ಹಾಸನುಳಿಯಿತ್ತು.
ಉಳಿದ ಹಾಸಿನ ಎಳೆ ಒಂಬತ್ತು ಬಣ್ಣದ ಲಾಳಿಯ ನುಂಗಿ,
ನುಂಗಿದ ಎಳೆಯ ನೆಯ್ವಣ್ಣನು
ಸರ್ವಾಂಗದಲ್ಲಿ ಸುತ್ತಿ ಸತ್ತಿರ್ಪನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮೩ ||

### ಶರಣನ ಐಕ್ಯ

**ಪಿಂಜಾರ ಮಹಮ್ಮದಖಾನಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೮೮

ಆರೇಣಿನ ಬೆಸೆ, ಒಂಬತ್ತು ಹುರಿ ಬೇಪ,
ಎರಡು ಪಿಡಿಕಿಯ ಕೊಡತಿ ಹೆಣಕಿಲ್ಲದ ತಟ್ಟೆ,
ಇಂತೀ ಆಯುಧದಿಂದ ಕೆಂಪಡಿ ಮಸಬ ಭೂಮಿಯ
ಹತ್ತಿ ಅರಳಿಯ ಪಿಡಿದು ಝಾಡಿಸದೆ
ಎರಿನೀರು ಕಲ್ಲಭೂಮಿಯ ಹತ್ತಿ ಅರಳಿಯ ಪಿಡಿದು ಝಾಡಿಸಿ,
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮೮ ||

೩೮೯

ಒಮ್ಮನದವರಿಗೆ ಹಣವಿಲ್ಲ ;
ಇಮ್ಮನದವರಿಗೆ ಹಣವುಂಟು.
ಇಮ್ಮನ ಸುಟ್ಟು, ಒಮ್ಮನ ನುಂಗಿ ಬಂದವರು
ಮರಳಿಬಾರದೆ ಪೋದರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೮೯ ||

**ವಲ್ಲೀ ಪೀರಣ್ಣಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೩೯೦

ಹುಟ್ಟಿದ ಶಿಶುವಿಂಗೆ ಸುನತಿ ಇಲ್ಲ;
ಹುಟ್ಟದ ಶಿಶುವಿಂಗೆ ಸುನತಿಯುಂಟು.
ಸುನತಿಯಿಲ್ಲದವರು ಸತ್ತು

ಸುನತ್ಯಾದವರು ಸಾಯದೆ ಇರ್ಪರು.
ಇದ ಕಂಡು ಬಯಲ ಬೋದನದಲ್ಲಿ ಜೆರಗಾಗಿ
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೮೬ ॥

೩೯೧

ಬಯಲಭೂಮಿಯಲ್ಲಿ ನಿಂತು ನಮಾಜ ಮಾಡಲು
ಸಹೀದಪಾಶ್ಚಾ ಬಂದು ಪಾತಿಯ ಕೊಟ್ಟು,
ಮಸೂತಿಯ ಸುಟ್ಟು,
ಪೀರಜಾಜಿಯರ ಕೊಂದು, ವಲ್ಲಿಯ ಸಹೀದ ಕೊಂದು,
ಸಹೀದನ ವಲ್ಲಿ ನುಂಗಿರ್ಪನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೮೭ ॥

೩೯೨

ಸಹೀದರ ಖುರಾನವ ನೋಡಿ ದಾಡಿ ಜವನ ಲೋಚವ ಬಿಟ್ಟು
ದಿಗಂಬರವಾಗುವರು.
ಆ ಖುರಾನವ ನೋಡಿ ದಾಡಿ ಜವನ ಲೋಚವ ಬೋಳಿಸಿ
ಸಹೀದನಾಗುವನಾರನು ಕಾಣೆ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೮೮ ॥

೩೯೩

ಸಹೀದರು ಕೊಟ್ಟ ಖುರಾನವ ಮುಂದಿಟ್ಟು,
ಅರ್ಚಿಸಿ ನಮಾಜ ಮಾಡುವರು.
ಮಾಟವಳಿದು ಕೂಟ ನಿಂದು ಶಬ್ದವಡಗಿ
ಬಯಲ ಖುದಾನಾಗಿರಬಲ್ಲಡೆ ಸಹೀದರೆಂಬೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೮೯ ॥

೩೯೪

ಅಲ್ಲಂಗೆ ದ್ವಯಜ್ಯೋತಿ ಬೆಳಗಿಲ್ಲ.
ಮಸೂತಿಯ ನಮಾಜದಿಂ ಎಡೆಯಾಟವಿಲ್ಲ.

ಹಲವಕ್ಕೆ ಹರಿದು ತಿಳಿಯಲಿಲ್ಲ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೦ ॥

೩೯೧

ತೀಸಹಿದರು ಆ ಕರ್ ಬಚ್ಚ್ಯಾಕು ಘರ್‌ಮೇ
ಆಗಮೇ ಜಲ್ಕು ಸಾಹೇಬಕು ಘರ್‌ಮೇ ಕರ್‌ಕರ್
ಸುಂತಿ ದಿಯಾತೋ ವೋ ಜಾಕರ್ ಪಾಚ್ಬಾಮೇ ಮರಗಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೧ ॥

೩೯೭

ಖುದಾ ಜಾತಕು ಬಮ್ಮನ ಆದ್ಮಿಕು ಗರಕಾ ದಂದೇಗನ್ಯೆ
ಆಖು ಬಮ್ಮನ ಬಡಾವಲ್ಲಿ ಆದ್ಮಿಕು
ದಿವಾರಾತ್ ರೋಯಿ ವಖತ್ ಅಲ್ಲಾಕು
ಬಗರ ದುಸರಾಕು ಖಬರ್ ನಯಿ
ಇದ್ರೋ ಇಕುಬಾತ್ ಖಬರ್ ಅಲ್ಲಾಕು ಜಾತ ಬಡಾ ವಲ್ಲಿಕು
ಮಾಲುಮ್ ಸುನೋ ಬಲಾ ಆದ್ಮಿ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೨ ॥

೩೯೭

ಏಕ ಪಾವುಮೇ ಶತಯೇಕ ಪಾವು ಗಈಬಾ.
ಏಕ ಪಾಣಿಮೆ ಛೇ ದಸ್ ಕೋಟಿ ಪಾಣಿ ಗಈಬಾ.
ಏಕ ಪಾವು ಜಾಗಾಮೇ ತೇಶತ ಛೇ ದಸ್ ಕೋಟಿ ಪುನ್ ಜಾಗಾ ಗಈಬಾ.
ಅಲ್ಲಾಕು ಖಬರ ಸಹಿದರ ಸುಂತಿಕು ಬಂಮನ ಬಲಾ ಆದ್ಮಿಕು ಜಾನತಾಹ್ಯೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೩ ॥

ಜೇರ ಸಂಕಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :

೩೯೪

ಅರಳಿ ಅತ್ತಿ ಆಲದ ಮರವೆಂಬ
ವೃಕ್ಷಪರ್ಣದ ಪಾತ್ರೆಯಲ್ಲಿ ಭೋಜನವ ಮಾಡದೆ
ಟೆಂಗು ಮಾವು ಬಾಳೆ ವೃಕ್ಷ ಪಾನಪಾತ್ರೆಯಲ್ಲಿ

ಭೋಜನವ ಮಾಡಿ ಬಲಭೀಮನಾಗಿ
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೪ ॥

೩೯೯

ಭೂಲೋಕದಲ್ಲಿ ಪುಟ್ಟಿದ ವೃಕ್ಷ ಪರ್ಣಪಾತ್ರೆಯಲ್ಲಿ
ಮೂರು ಕೂಳನುಂಬುವರು,
ಇಮ್ಮಡಿ ಮಕ್ಕಳಾಗಿ ಕಾಲನ ಪುರದಲ್ಲಿರ್ಪರು.
ಸ್ವರ್ಗಲೋಕದಲ್ಲಿ ಪುಟ್ಟಿದ ವೃಕ್ಷಪರ್ಣಪಾತ್ರೆಯಲ್ಲಿ
ಮೂರು ಶೇಷನುಂಬುವರು,
ಮುಮ್ಮಡಿ ಮಕ್ಕಳು ಕಾಲಸಂಹರನಪುರದಲ್ಲಿರುವರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೫ ॥

೪೦೦

ಮೋಟಮರದ ಹಾಟ ಕುಡಿದವರು
ದೊನ್ನಿ ತುಪ್ಪವನುಣಲಿಲ್ಲ.
ಉಂಡವರು ಹಾಟ ಧಾರೆ ಹನಿಯ ಕಾಣದೆ
ತಲೆಕೆಳಗಾಗಿ ಕಾಲುಮೇಲಾಗಿ ನಡೆವರು.
ಹಾಟ ಕುಡಿದು ಸತ್ತವರು ಜೀರರ ಸಂಕಣ್ಣನ ಕುಲದವರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೬ ॥

೪೦೧

ಮದನಂಗದ ಗುಹ್ಯದ ಮುದಿಕೋಡಗದ ಹಾಲು
ಭೂಮಿಗೆ ಇಳಿಯಲು,
ಭೂಮಿಯ ಒಡೆಯರು ಹಾಲು ಕುಡಿಯದೆ,
ಹೇಸಿಕೆಯ ಕುಡಿದು, ನರಕ ತಿಂದು ಬದುಕಾಲಿರ್ಪರು.
ಹೇಸಿಕೆ ನರಕ ನಿಃಕರಿಸಿ ಹಾಲು ಕುಡಿದವರು
ಗಡಿಗೆಯನೊಡೆದು ಮನೆಗೆ ಬಾರದೆ ಪೋದರು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೩೯೭ ॥

ಮೇದಾರ ಕೇತಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :

೪೦೨

ಆರೂ ಇಲ್ಲದ ಅರಣ್ಯದ ಹುಲ್ಲತಂದು,
ಮೂರು ಚಾಪೆಯ ಹೆಣೆದು, ಮುಪ್ಪುರದರಸಿಂಗೆ ಕೊಟ್ಟು,
ಮೂವರ ತಲೆ ಹೊಡೆದು,
ಕೈಕಾಲು ಕಡಿದು, ಕಣ್ಣು ಕಳೆದು,
ಪರದ್ರವ್ಯ ಕೊಳ್ಳದೆ ಹರದ್ರವ್ಯ ಕಳೆಯದೆ
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೯೮ ||

೪೦೩

ಸೂರ್ಯವರ್ಣದ ಚಾಪಿ ಬ್ರಹ್ಮಲೋಕವ ನುಂಗಿತ್ತು.
ಚಂದ್ರವರ್ಣದ ಚಾಪಿ ವಿಷ್ಣುಲೋಕವ ನುಂಗಿತ್ತು.
ಅಗ್ನಿವರ್ಣದ ಚಾಪಿ ರುದ್ರಲೋಕವ ನುಂಗಿತ್ತು.
ಉಳಿದ ವರ್ಣದ ಚಾಪಿ ಹಲವು ಲೋಕ ಬ್ರಹ್ಮಾಂಡವ ನುಂಗಿತ್ತು.
ನುಂಗದೆ ಹಿಂಗದಿರಬಲ್ಲಡೆ ಕಾಯಕದಲ್ಲಿರಬೇಕು.
ಹಿಂಗಿದಡೆ ಭಂಗ, ಅಂತಕನವರ ಮನೆವಾಸ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೩೯೯ ||

೪೦೪

ಕರಿಭೂಮಿಯ ಬಿದಿರ ಬೊಂಬವ ಕಡಿದು
ಬಿಳಿಭೂಮಿಯ ಬಿದಿರ ಅಗ್ನಿಯಿಂದ ದಹಿಸಿ ಭಸ್ಮ ಮಾಡಿ ಧರಿಸಿ
ಕಾಯಕದಲ್ಲಿರ್ದು ಕಾಯಕಕ್ಕೆ ಸಿಕ್ಕದೆ
ಮೇದಾರ ಕೇತಯ್ಯನೊಳಗಾದರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦೦ ||

೪೦೫

ಭೂಮಿಯ ಬೆಳೆ ಕಳೆಯದೆ,
ಪಂಚಪದಾರ್ಥವ ಬಿಡದೆ, ಪಂಚಾಗ್ನಿಯ ಸುಡದೆ,
ಷೋಡಶ ಮದಕರಿ ಬೆಟ್ಟವನಳಿಯದೆ,

ಇವನಳಿಯದೆ ಗೊಲ್ಲನೆಂದಡೆ ಹಾಸನಗ್ಯೆವರು ನಿಮ್ಮವರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೦೧ ॥

೪೦೬

ಗೊಲ್ಲಂಗೆ ಕಲ್ಲಿನ ಕಷ್ಟ, ಅಗ್ನಿಯ ತಪದ್ಯೋಗಿಗಳ
ಸ್ತುತಿ ನಿಂದ್ಯ ಆವ ಪ್ರೇಮದ ಉಲ್ಲಾಸ
ಸಂದುಸಂಶಯ ನಿಮಿಷಾರ್ಧವಿಲ್ಲ ನೋಡೆಂದ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೦೨ ॥

೪೦೭

ಬೆಳ್ಳನ್ನವರ ಭಾಷೆಯ ಹಿಂಗಿ
ಕಂಬಳಿಯವರ ಭಾಷೆಯ ನುಂಗಿ
ತೃಷೆಯಾದ ವ್ಯಾಘ್ರನಂತೆ ತೋರುವರ ಗೊಲ್ಲನೆಂದೆನ್ನೆ.
ಬೆಳ್ಳನ್ನವರ ಭಾಷೆಯ ನುಂಗಿ
ಕಂಬಳಿಯವರ ಭಾಷೆಯ ಹಿಂಗಿ
ತೃಷೆಯಾದ ತುರುಕನಂತೆ ತೋರುವರ ಗೊಲ್ಲನೆಂದೆನ್ನೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೦೩ ॥

**ಸುಂಕದ ಸೋಮಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೦೮

ಪಶ್ಚಿಮದೇಶದ ಧಾನ್ಯಕ್ಕೆ ಒಂದು ಸುಂಕ.
ಉತ್ತರದೇಶದ ಧಾನ್ಯಕ್ಕೆ ಹಲವು ಸುಂಕ.
ಒಮ್ಮನಕ್ಕೆ ಸುಂಕಿಲ್ಲ; ಇಮ್ಮನಕ್ಕೆ ಸುಂಕುಂಟು.
ಒಮ್ಮನಸುಂಕದ ಹಣವ ಕೊಂಡು
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೦೪ ॥

೪೦೯

ಆನೆ ಕುದುರೆ ಒಂಟೆ ನಾಯಿ ಕೋತಿಗಳು
ಮೊದಲಾದ ಪಂಚವಾಹನಾರೂಢರಾಗಿ ಚರಿಸುವವರಿಗೆ ಸುಂಕ.

ಮನೆಯ ಕೆಡಿಸಿ ಮನೆಯ ಕಟ್ಟುವವರಿಗೆ ಸುಂಕ.
ಹಾದರನಾಡುವವರಿಗೆ ಸುಂಕ.
ತಳಮೇಲು ನಡುಮಧ್ಯ ಚತುದರ್ಶದಲ್ಲಿರುವವರಿಗೆ ಸುಂಕ.
ಕಾಮಧೇನುವಿನ ಹಾಲ ಕರದು ಕುಡಿದವರಿಗೆ ಸುಂಕಿಲ್ಲ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦೫ ||

೪೧೦

ಇರುವೆ ಕುಕ್ಕುಟ ವಿಹಂಗ ಮರ್ಕಟ ಗಜ ಶ್ವಾನವೆಂಬ
ಇಂತೀ ಷಡ್ವಿಧವ ಪಿಡಿದು
ಕಾಯಕವ ಮಾಡುವವರಿಗೆ ಮೂರೆಡೆಯಲ್ಲಿ ಸುಂಕವಿಲ್ಲ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦೬ ||

**ಗೊಲ್ಲರ ನಾಗಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೧೧

ನೆಲವಿಲ್ಲದ ಭೂಮಿಯಲ್ಲಿ ಪುಟ್ಟಿದ ವೃಕ್ಷದ ಬೇರ ತಂದು
ನೀರಿಲ್ಲದೆ ಅರದು ಗುಳಿಗೆಯ ಕಟ್ಟಿ,
ಕಣ್ಣು ತಲೆಯಿಲ್ಲದವರಿಗೆ ಒಂದು ಗುಳಿಗಿ,
ಕೈಕಾಲು ಇಲ್ಲದವಂಗೆ ಎರಡು ಗುಳಿಗಿ,
ಸೂಲದವಂಗೆ ಮೂರು ಗುಳಿಗಿ,
ಹಿರಿರೋಗದವರಿಗೆ ಆರು ಗುಳಿಗಿ,
ಈ ವೈದ್ಯಕ್ಕೆ ನಿದ್ರೆಯ ತೊರದು
ತಣ್ಣೀರು ತಂಗಳನ್ನವನುಣ್ಣದೆ
ಬಿಸಿನೀರು ಬಿಸಿ ಅನ್ನವ ಸೇವಿಸಬೇಕು.
ಈ ಪಥ್ಯವ ಪಾಲಿಸಿದವರಿಗೆ ಗುಳಿಗಿ ಸಾಧ್ಯವಾಗಿ
ಸರ್ವಸಿದ್ಧಿಸುವುದು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦೭ ||

೪೧೨

ಔಷಧಿಯ ಕೊಂಡು ಬಿಸಿಹಾಲು ಕುಡಿಯದೆ
ಹಸಿಹಾಲವ ಕುಡಿದು ಮಹಿಷಾಸುರನ ಮಗನಾಗಿರ್ಪರು,

ನಾನು ಔಷಧಿಯ ಕೊಂಡು ಹಸಿಹಾಲು ಕುಡಿಯದೆ
ಬಿಸಿಹಾಲು ಕುಡಿದು ಹಿಂಗಿ ನುಂಗಿ
ಉಸುರದೆ ಕಾಯಕವ ಮಾಡುತ್ತಿರ್ದೆನು
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦೮ ||

೪೧೩

ಹಿರಿಬೇನೆಯನಳಿಯಬೇಕೆಂಬಣ್ಣಗಳು
ಲಾಲಿಸಿರಯ್ಯಾ.
ಆನೆಯ ತಲೆ ಒಡದು ಹಲ್ಲುಕಿತ್ತು,
ಕೋತಿಯ ಕೊಂದು, ಕೋತಿಯ ಕಂಡವ ಹೆಂಡದ ಕುಡಕಿಯಲ್ಲಿ
ಅಟ್ಟು, ತಿಂದವರು ಹಿರಿರೋಗವ ಕಳವರು ನೋಡೆಂದನಯ್ಯಾ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೦೯ ||

೪೧೪

ಶಿಕಾರಿಯ ಹೋದಲ್ಲಿ ಶುನಿಗಳ ಕೊಂದು
ಕಾಡಬೆಕ್ಕಿನ ಬೇಟೆಯನಾಡಿ
ನರಿಯ ಕೊಲ್ಲದೆ ಗುದ್ದ ಹೊಕ್ಕ ಇಲಿಯಕೊಂದು
ರಾತ್ರಿಯ ಕಳೆದು ಹಗಲಳಿದು ಕಾಯಕವ ಮಾಡುತ್ತಿರ್ಪರು
ನೋಡೆಂದನಯ್ಯಾ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೦ ||

೪೧೫

ಕರೆಯದೆ ಬಂದವರು ಕೆಲಬರು,
ಹೇಳದೆ ಹೋದವರು ಕೆಲಬರು,
ಬಾರದೆ ಹೋಗದೆ ಬಹುಕಾಲಿರ್ಪರು ಕೆಲಬರು.
ಈ ಮಾತು ಕಣ್ಣದ್ದವ ಬಲ್ಲ, ಕಂಗಳರಿಯ
ಕಾಡಸೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೧ ||

ಮಜೂರಿ ಸಂಗಣ್ಣಗಳು ನೀರ ಕಾಯಕವ ಮಾಡಿದ ವಚನವ ಪೇಳ್ವೆ :

೪೧೭

ಕೊಂಬಿಲ್ಲದ ಪಶುವಿನ ಮೇಲೆ
ನಾಲ್ಕು ಘಟದ ಮಂಕಣಿಯ ಬಿಗಿದು,
ಗದ್ದಲದ ಉದಕವ ತುಂಬಿತಾರದೆ,
ಗದ್ದಲಿಲ್ಲದ ಉದಕವ ತುಂಬಿತಂದು,
ಅರಸು ಮೊದಲಾದ ಪ್ರಜೆಗಳೆಲ್ಲರಿಗೆ ಕುಡಿಸಿ ಕೊಂದು
ನಾ ಕುಡಿದು ಸತ್ತು ಬದುಕಿ
ಕಾಯಕವ ಮಾಡುತ್ತಿರ್ಪೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೧೨ ॥

೪೧೭

ಉದಯದ ಉದಕವ
ನಾಲ್ಕು ಮುಖದ ರಾಜಂಗೆ ಕುಡಿಸಿ ಕೊಂದು,
ಮಧ್ಯಾಹ್ನದ ಉದಕವ
ವಿಟಪುರುಷನೆಂಬ ರಾಜಂಗೆ ಕುಡಿಸಿ ಕೊಂದು,
ಅಸ್ತಮಾನದ ಉದಕವ
ಉಭಯ ಸತಿಪುರುಷನೆಂಬ ರಾಜಂಗೆ ಕುಡಿಸಿ ಕೊಂದು,
ಮೂರುಕಾಲದುದಕವ ಕುಡಿದವರು
ಮರಳಿ ಮನೆಗೆ ಬಾರದೆ ಪೋದರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೧೩ ॥

೪೧೪

ಸರ್ಪನ ಧ್ವನಿಗೆ ಆಕಾಶದ ಟೆಂಗಿನುದಕ ಉಕ್ಕಿ
ಭೂಮಿಗೆ ಬೀಳಲು, ಭೂಮಿ ಕರಗಿ,
ಸಮುದ್ರ ಬತ್ತಿ, ಸತ್ತವರು ಬದುಕಿದವರ ಹೊತ್ತು
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೧೪ ॥

## ಐಕ್ಯಸ್ಥಲ

ಸೂತ್ರ : ಇಂತೀ ಆನಂದಭಕ್ತಿಯಿಂದ ಆಚರಿಸಿದ ಶರಣನು ಮುಂದೆ ಸಮರಸಭಕ್ತಿಯಿಂದಾಚರಿಸಿ ಐಕ್ಯನಾಗುತ್ತಿರ್ದನಾಗಿ ಮುಂದೆ ಐಕ್ಯಸ್ಥಲವಾದುದು.

೪೧೯

ಲಿಂಗೈಕ್ಯರು ಲಿಂಗೈಕ್ಯರು ಎಂದೆಂಬಿರಿ.
ಲಿಂಗೈಕ್ಯರ ನಿಲವ ಆರು ಬಲ್ಲರಯ್ಯ ಎಂದಡೆ,
ಅಜಗಣ್ಣತಂದೆ, ಮೋಳಿಗೆ ಮಾರಿತಂದೆ, ಕೂಗಿನ ಮಾರಿತಂದೆ,
ನುಲಿಯಚಂದಯ್ಯ, ಹಡಪದ ಅಪ್ಪಣ್ಣ, ಮುಗ್ಧಸಂಗಯ್ಯನವರು,
ಘಟ್ಟಿವಾಳತಂದೆ ಮೊದಲಾದ ಪ್ರಮಥಗಣಂಗಳು,
ಶಿವಜ್ಞಾನೋದಯವಾದಂಥ ಜ್ಞಾನಕಲಾತ್ಮರು ಬಲ್ಲರಲ್ಲದೆ
ಮಿಕ್ಕಿನ ಜಡಮತಿ ಕುರಿಮನುಜರೆತ್ತ ಬಲ್ಲರು
ನೋಡೆಂದನಯ್ಯ ನಿಮ್ಮ ಲಿಂಗೈಕ್ಯನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೫ ||

೪೨೦

ಲಿಂಗೈಕ್ಯಂಗೆ ಕಾಮವಿಲ್ಲ, ಕ್ರೋಧವಿಲ್ಲ,
ಲೋಭವಿಲ್ಲ, ಮೋಹವಿಲ್ಲ, ಮದವಿಲ್ಲ, ಮತ್ಸರವಿಲ್ಲ.
ಷಡೂರ್ಮಿಗಳು ಮೊದಲಾದ ಆವ ಕಾರಣವಿಷಯವು ಇಲ್ಲ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೬ ||

೪೨೧

ಶಶಿರವಿಕಿರಣಕೋಟಿ ಮಾಣಿಕದ ದೀಪ್ತಿಯಂತೆ,
ಚಂದ್ರಕಾಂತಿ ಪ್ರಕಾಶದಂತೆ, ಮಿಂಚಿನ ಲತೆಯಂತೆ ಲಿಂಗೈಕ್ಯನ ನಿಲವು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೭ ||

**ಹಾದರದ ಬ್ರಹ್ಮಯ್ಯನವರು ಕಾಯಕವ ಮಾಡಿದ ವಚನವ ಪೇಳ್ವೆ :**

೪೨೨

ಬ್ರಹ್ಮಯ್ಯನವರು ನಿತ್ಯದಲ್ಲಿ ಹಾದರವನಾಡಿ
ಹಾಗದ ಕಾಯಕದ ಹಣವ ತಂದು,

ಜಂಗಮಾರ್ಚನೆಯ ಮಾಡುವರು.
ಅದರೊಳಗೆ ಒಂದು ದಿವಸ ಬ್ರಹ್ಮಯ್ಯನವರು
ಹಾದರಕಾಯಕವ ತಡೆಯಲು,
ಆತನ ಸತಿಯಳು ಪುರುಷನ ಅಪ್ಪಣೆಯಕೊಂಡು ಪೋಗಿ
ಹಾದರವನಾಡಿ ಹಾಗದ ಕಾಯಕವ ತಂದು,
ಜಂಗಮಾರ್ಚನೆ ಮಾಡುವರೆಂದು
ವೇದ ಶ್ರುತಿ ಪುರಾಣ ವಾಕ್ಯದಲ್ಲಿ ಪೇಳುವರು.
ಇದರ ಅನುಭಾವವನು ಬಲ್ಲಿದರೆ ಪೇಳಿ,
ಅರಿಯದಿದ್ದರೆ ಕೇಳಿ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೮ ||

೪೨೩

ಹಾದರವನಾಡುವರಿಗೆ ಹನ್ನೆರಡು ಮಂದಿ,
ಹಾದರ ಇಲ್ಲದವರಿಗೆ ಒಬ್ಬ ಪುರುಷನು.
ಎನಗೆ ಹನ್ನೆರಡೂ ಇಲ್ಲ, ಒಂದೂ ಇಲ್ಲ ನೋಡೆಂದನಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೧೯ ||

೪೨೪

ಹಾದರದಲ್ಲಿ ಹುಟ್ಟಿದ ಕೂಸಿಂಗೆ
ಹಲವು ವೇಷ, ಹಲವು ಕಾಯಕ.
ಹಾದರ ಇಲ್ಲದೆ ಪುಟ್ಟಿದ ಕೂಸಿಂಗೆ
ಹಲವು ಕಾಯಕವಿಲ್ಲದೆ ಒಂದು ವೇಷ, ಒಂದು ಕಾಯಕ.
ಎನಗೆ ಆವ ವೇಷ ಆವ ಕಾಯಕವಿಲ್ಲ ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೦ ||

೪೨೫

ಹಾದರಗಿತ್ತಿಗೆ ಹಲವು ಶಬ್ದ,
ಪುರುಷನುಳ್ಳವರಿಗೆ ಅರೆನಾಲಿಗೆ,
ನಾನು ಹಲವು ಶಬ್ದವನಳಿದು ಅರೆನಾಲಿಗೆಯನುಡುಗಿಸಿ,
ಹಾದರವನಾಡಿ ಸರ್ವಕಾಯಕವ ಮಾಡುತ್ತಿರ್ಪೆನಯ್ಯಾ,

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೧ ||

**ಮರುಳಶಂಕರದೇವರು ಕಾಯಕವ ಮಾಡಿದ ವಚನವ ಪೇಳ್ವೆ :**

೪೨೬

ಕಲ್ಯಾಣನಗರದ ಬಸವೇಶ್ವರನ ಪ್ರಮಥಗಣಂಗಳ
ಮಿಕ್ಕಪ್ರಸಾದಕೊಂಡದಲ್ಲಿ ಮರುಳಶಂಕರದೇವರು
ಹನ್ನೆರಡುವರ್ಷ ಅಡಗಿರ್ದನೆಂದು
ವೇದಾಂತಿ ಸಿದ್ಧಾಂತಿ ಯೋಗಮಾರ್ಗಿಗಳು ಮೊದಲಾದ
ಭಿನ್ನಭಾವದ ಶಾಸ್ತ್ರಸಂಧಿಗಳು ಪೇಳುತಿರ್ಪರು.
ಇದರ ಭೇದವ ತಿಳಿಯಬಲ್ಲ ಜ್ಞಾನಿಗಳು ಎನಗೆ ಪೇಳಿರಿ,
ಇಲ್ಲದ ಅಜ್ಞಾನಿಗಳು ನಮ್ಮ ನಿರ್ಮಾಯಪ್ರಭುವಿನ ಶರಣರ ಕೇಳಿರಿ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೨ ||

೪೨೭

ಪ್ರಮಥಗಣಂಗಳ ಪ್ರಸಾದಕೊಂಡದಲ್ಲಿ
ಅಡಗಿದ ಗೊತ್ತ ಆರೂ ಅರಿಯರಲ್ಲ,
ಬಸವಣ್ಣಂಗೆ ಪ್ರಭುದೇವರು ತೋರಿ ಕೊಟ್ಟನು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೩ ||

೪೨೮

ಅರಸಿಯ ಪುತ್ರನು ಶಿರವಿಲ್ಲದೆ ಐದರಲ್ಲಿರಲು,
ಕೋತಿಯ ತಲೆಯಲ್ಲಿ ಇರುವೆ ಪುಟ್ಟಲು,
ಇಬ್ಬರು ಸತ್ತು ಶಿರ ಚಿಗಿದು,
ಅರಸಿಯ ನೆರದು ಅರಸಿನಲ್ಲಿ ಅಡಗಿತ್ತು.
ಅದು ಅಡಗಿದ ಸ್ಥಾನದಲ್ಲಿ ಅಡಗಿದವರು ಲಿಂಗೈಕ್ಯರು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೪ ||

ಬೋಗಾರ ಕಾಶಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :

೪೨೯

ಪಂಚಲೋಹವ ಕರಗಿಸಿ ರಸ ಬೆರೆಸಲು
ಚಿನ್ನದಲೋಹವಾಯಿತ್ತು.
ಆ ಚಿನ್ನದ ಲೋಹಭಾಂಡದಲ್ಲಿ
ತಣ್ಣೀರು ತುಂಬದೆ ಬಿಸಿನೀರ ತುಂಬಿ
ಬಿಸಿಲಲ್ಲಿ ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೨೫ ॥

೪೩೦

ಲೌಕಿಕ ಪಾರಮಾರ್ಥವೆಂಬುಭಯವನು ಪಿಡಿದು
ಆಚರಿಸಿ ಮುಕ್ತನಾಗುವಾತ ಜಾಣನೆಂದೆಂಬರು.
ಲೌಕಿಕಕ್ಕೆ ಮುಕ್ತಿದೋರದು, ಪಾರಮಾರ್ಥಕ್ಕೆ ಮುಕ್ತಿದೋರುವದು.
ಅದೆಂತೆಂದೊಡೆ: ಲೌಕಿಕವೆಂದಡೆ ಆವುದು,
ಪಾರಮಾರ್ಥವೆಂದಡೆ ಆವುದು, ಬಲ್ಲಾದರೆ ಪೇಳಿ,
ಇಲ್ಲಾದರೆ ನಮ್ಮ ಪ್ರಭುವಿನ ಶರಣರ ಕೇಳಿ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೨೬ ॥

೪೩೧

ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಮಲವ ಪಿಡಿದು
ಆಚರಿಸುವದು ಲೌಕಿಕವಲ್ಲ.
ಸತಿಸುತರ ಪಿಡಿದು ಮನಿಮಾರು ಕಟ್ಟಿ
ಪ್ರಪಂಚಮಾಡುವದು ಲೌಕಿಕವಲ್ಲ.
ಸಕಲ ಪ್ರಪಂಚಿನ ವ್ಯವಹಾರದಲ್ಲಿ ಇರ್ದಡೆಯು ಲೌಕಿಕವಲ್ಲ.
ಇನ್ನಾವುದು ಲೌಕಿಕವೆಂದಡೆ,
ತನ್ನ ಸ್ವಸ್ವರೂಪ ಪರಂಜ್ಯೋತಿಸ್ವರೂಪವೆಂಬುದ ಮರದು
ಪಂಚಭೂತದೇಹಸ್ವರೂಪ ನಾನೆಂದು ಇರುವುದೇ ಲೌಕಿಕ.
ತನ್ನ ಸ್ವಯಾತ್ಮಜ್ಞಾನವೆಂಬ ಸ್ವಾನುಭಾವಜ್ಞಾನದ
ಎಚ್ಚರವ ಮರತು ಅಜ್ಞಾನಜೀವನಾಗಿ
ಮಾಯಾಪ್ರಪಂಚಿನ ಮರವೆಯಲ್ಲಿರುವುದೇ ಲೌಕಿಕ.

ಶ್ರೀಗುರುಕರುಣದಿಂ ಪಡಕೊಂಡ ಕರಕಮಲದ
ಲಿಂಗಾಂಗದ ಸಮರಸವನರಿಯದೆ
ಅಂಗಮುಖದಲ್ಲಿ ಸಂಚರಿಸುವದು ಲೌಕಿಕ.
ಈ ವಚನದ ತಾತ್ಪರ್ಯಾರ್ಥವನರಿಯದವರು
ಲೌಕಿಕರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೭ ||

೪೩೨

ಅಂಗಭಾವ ಹಿಂಗಿ, ಲಿಂಗಭಾವ ಮುಂದುಗೊಂಡಿರುವುದೇ
ಪಾರಮಾರ್ಥ.
ಪಂಚೇಂದ್ರಿಯ ವಿಷಯಸುಖವನಳಿದು
ಪಂಚಲಿಂಗದ ಸಮರಸದಲ್ಲಿರುವುದೇ ಪಾರಮಾರ್ಥ.
ಅಹಂಕಾರವಳಿದು ನಿರಹಂಕಾರದಲ್ಲಿರುವುದೇ ಪಾರಮಾರ್ಥ.
ಶಬ್ದಜಾಲಂಗಳನಳಿದು ನಿಶ್ಯಬ್ದವೇದಿಯಾಗಿರುವುದೇ
ಪಾರಮಾರ್ಥ.
ಈ ವಚನದ ತಾತ್ಪರ್ಯಾರ್ಥವನರಿದವರೆ
ಗುರುಲಿಂಗಜಂಗಮವೆಂಬೆ.
ಅರಿಯದಿರ್ದಡೆ ಭವಭಾರಿಗಳೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೨೮ ||

೪೩೩

ಹಿತ್ತಾಳಿಯ ಭಾಂಡಕ್ಕೆ ಹೊನ್ನು ಕೊಟ್ಟು
ಮೂರು ಕಳೆವೆ.
ಕಂಚಿನ ಭಾಂಡಕ್ಕೆ ವರಹಕೊಟ್ಟು
ಐದು ಕಳೆವೆ.
ತಾಮ್ರಭಾಂಡಕ್ಕೆ ಮೋಹರಕೊಟ್ಟು
ಹದಿನಾರು ಕಳೆವೆ.
ಕಿರುಕಳಭಾಂಡಕ್ಕೆ ಮುತ್ತು ಮಾಣಿಕ ವಜ್ರದ ಕಿರಣಂಗಳ ಕೊಟ್ಟು
ಪಂಚವಿಂಶತಿಯ ಕಳೆವೆ.
ಇಂತಿಲ್ಲದೆ ಕಾಯಕವ ಮಾಡಿ

ಕಾಳಮ್ಮನ ಉದರದಲ್ಲಿ ಸತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೨೯ ॥

೪೩೪

ಎರಕದ ಭಾಂಡಕ್ಕೆ ತೂಕಿಲ್ಲ, ಹಣವಿಲ್ಲ.
ಚಕ್ಕಿಯ ಭಾಂಡಕ್ಕೆ ತೂಕುಂಟು ಹಣವುಂಟು.
ಎರಕದ ಭಾಂಡವ ಕೊಂಡವರು ಹೊರಕೇರಿಯವರು.
ಮಿಕ್ಕಾದ ಚಕ್ಕಿಯ ಭಾಂಡವ ಕೊಂಡವರು ಗ್ರಾಮದವರು.
ಎರಡಿಲ್ಲದೆ ಕೊಂಬವರು ಲಿಂಗೈಕ್ಯರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೩೦ ॥

೪೩೫

ಜ್ಯೋತಿ ಉದಕದಂತೆ ಲಿಂಗೈಕ್ಯರು.
ಭೂಮಿ ಆಕಾಶದಂತೆ ಲಿಂಗೈಕ್ಯರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೩೧ ॥

## ಐಕ್ಯನ ಭಕ್ತಿ

**ಉಪ್ಪಣಿಗ ಭರಮಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೩೬

ಕರ್ಲಭೂಮಿ, ನೀರಭೂಮಿ, ಹಾಳಭೂಮಿ
ಈ ಮೂರು ಭೂಮಿಯ ಸವಳು ತಾರದೆ,
ಕೆಂಪು ಮಸಬು ಬಿಳುಪೆಂಬ ತ್ರಿಭೂಮಿಯ ಸವಳ ತಂದು,
ನೀರಿಲ್ಲದ ಮಾಳ ಉಪ್ಪ ಸೇವಿಸಿ
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೩೨ ॥

೪೩೭

ಮಾಳಿಯ ಉಪ್ಪ ಬಡವರು ಉಣ್ಣಲಾಗದು.
ಘಟ್ಟದ ಉಪ್ಪ ಧನಿಕರು ಉಣ್ಣಲಾಗದು.

ಮಾಳಿಯ ಉಪ್ಪಿಗೆ ಹಣವುಂಟು;
ಘಟ್ಟದ ಉಪ್ಪಿಗೆ ಹಣವಿಲ್ಲ.
ಹಣವಿಲ್ಲದೆ ಉಪ್ಪ ಕೊಂಡುಂಬುವರು ಬಯಲದೇಶದವರು.
ಹಣವುಳ್ಳ ಉಪ್ಪ ಕೊಂಡುಂಬುವರು ಮಲೆಯಾಳದೇಶದವರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೩ ||

೪೩೮

ಮಾಳಿ ಮೂರಳಿದು, ಕಾವಲಿ ಆರಳಿದು,
ಕಟ್ಟೆ ಎಂಟಳಿದು, ಬೆಂಕಿಲ್ಲದೆ ಉಪ್ಪನಟ್ಟು ಉಂಬರೆ
ಉಪ್ಪುಣಿಗ ಭರಮಣ್ಣನ ಪುತ್ರರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೪ ||

**ತೋಟಗರ ಮಲ್ಲಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೩೯

ನೆಲವಿಲ್ಲದ ಭೂಮಿ ಭಾಗವ ಮಾಡಿ
ಕಳ್ಳಿ ಮುಳ್ಳ ಹಚ್ಚದೆ ಶೀಗರೀ ಗಜಗ ಹಚ್ಚಿ,
ಉಳ್ಳಿ ಮೂಲಂಗಿ ಬಳ್ಳೊಳ್ಳಿ ಸಬ್ಬಸಗಿ ನಾರಗಡ್ಡೆ
ಮೊದಲಾದ ಕಿರುಕುಳ ಬಾಡವ ಬಿತ್ತದೆ,
ತೆಂಗು ಹಲಸು ಮಾವು ಮೊದಲಾದ
ಅಮೃತಫಲದ ವೃಕ್ಷವ ಬಿತ್ತಿ,
ನೀರಿಲ್ಲದೆ ಫಲವಡ್ಡಿ ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೫ ||

೪೪೦

ನೆಲೆಯಿಲ್ಲದ ಬಾವಿಗೆ ಕಾವಲಿಲ್ಲದ ಯಾತ,
ಹುರಿಯಿಲ್ಲದ ಹಗ್ಗ, ಎತ್ತಿಲ್ಲದೆ ನೀರು ಜಗ್ಗಿ,
ಫಲಪಡ್ಡಿ ಅರಸು ಪ್ರಧಾನಿಗೆ ಕೊಡದೆ,
ಸಮಗಾರ ಹೊಲೆಮಾದಿಗರು ಮೊದಲಾದ
ಕುರುಡ ಕುಂಟರಾದ ಅಧಮರಿಗೆ ಕೊಟ್ಟು, ಕಾಯಕವಳಿದು
ಕಾಯಕದಲ್ಲಿರ್ದರು ನೋಡೆಂದನಯ್ಯಾ

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೬ ||

೪೪೧

ಸವುಳಭೂಮಿಯ ಉಳ್ಳಿ, ಮೂಲಂಗಿ ಬಳ್ಳೊಳ್ಳಿ
ಸಬ್ಬಸಗಿ ನಾರುಗಡ್ಡೆಯ ತಿಂದವರಿಗೆ
ರೋಗ ಪ್ರಾಪ್ತಿಯಾಗುವದು.
ಕೆಂಪುಭೂಮಿಯ ಉಳ್ಳಿ ಮೂಲಂಗಿ ಬಳ್ಳೊಳ್ಳಿ
ಸಬ್ಬಸಗಿ ನಾರುಗಡ್ಡೆಯ ತಿಂಬವರಿಗೆ
ರೋಗ ಪರಿಹಾರವಾಗುವದು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೭ ||

೪೪೨

ಕೆಚ್ಚಿಲ್ಲದ ವೃಕ್ಷಕ್ಕೆ ಫಲವಾದುದೆ ಕಡೆ.
ನಾರಿಯ ಕುಚ ಇಳಿದುದೆ ಕಡೆ.
ವಿಷದ ಪುಳುವಿಂಗೆ ಗರ್ಭವಾದುದೆ ಕಡೆ.
ತೃಣದ ಸಸಿಗೆ ತೆನೆಯಾದುದೆ ಕಡೆ.
ಎನ್ನ ಕರಕ್ಕೆ ನೀ ಬಂದುದೆ ಕಡೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೮ ||

**ಬಣ್ಣಗಾರ ಬಸಯ್ಯನವರು ಕಾಯಕವ ಮಾಡಿದ ವಚನವ ಪೇಳ್ವೆ :**

೪೪೩

ಶೀಲವಂತರ ಶೀಳ ಕೊಳ್ಳದೆ, ಭವಿಗಳ ಶೀಳ ಕೊಂಬುವರು.
ಅದೇನುಕಾರಣವೆಂದಡೆ,
ಶೀಲವಂತರ ಶೀಳಿಗೆ ಹಣವುಂಟು,
ಭವಿಗಳ ಶೀಳಿಗೆ ಹಣವಿಲ್ಲ.
ಭವಿಗಳ ಶೀಳ ಕೊಂಬುವರು ಕಲ್ಲಿನ ಕೇತನೊಳಗಾಗಿ
ಕಾಯಕದಲ್ಲಿದ್ದರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೩೯ ||

೪೪೪

ಕರಿದು ಕೆಂಪು ಬಿಳಿದು ಮೊದಲಾದ ಬಣ್ಣವನೆದ್ದಡೆ
ಹಳದಿ ಬಣ್ಣವನೆದ್ದಿ ವ್ಯಾಪಾರವ ಮಾಡುತ್ತಿರ್ಪರು.
ಅದೇನುಕಾರಣವೆಂದಡೆ,
ಆ ತ್ರಿಬಣ್ಣ ಮೊದಲಾದ ಅನೇಕ ಬಣ್ಣಕ್ಕೆ ಮೇಲುಂಟು,
ಹಳದಿಬಣ್ಣಕ್ಕೆ ಮೇಲಿಲ್ಲ.
ಹಳದಿಬಣ್ಣದ ವ್ಯಾಪಾರವನುಳ್ಳವರು ಬಣ್ಣಗಾರನೊಳಗಾದರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೦ ||

೪೪೫

ಕರಿಯಬಣ್ಣದ ನೂಲು ಉತ್ಪತ್ಯದವನ ನುಂಗಿತ್ತು.
ಬಿಳಿಯಬಣ್ಣದ ನೂಲು ಸ್ಥಿತಿಯುಳ್ಳವನ ನುಂಗಿತ್ತು.
ಅಗ್ನಿ ಬಣ್ಣದ ನೂಲು ಲಯವುಳ್ಳವನ ನುಂಗಿತ್ತು.
ಉಳಿದ ವರ್ಣದ ನೂಲು ಬ್ರಹ್ಮಾಂಡವ ನುಂಗಿತ್ತು.
ಇಂತೀ ಬಣ್ಣದ ನೂಲು ಕಮಲ ನುಂಗಿದವರು ಹಿಂಗಿ ಕಾಣದೆ ಪೋದರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೧ ||

೪೪೬

ದೇವರು ದೇವರು ಎಂದು ಬಳಲುತ್ತಿರ್ಪರು
ಬ್ರಹ್ಮಾಂಡದ ಜನರೆಲ್ಲರು.
ಅದೇನು ಕಾರಣವೆಂದಡೆ-
ತಾವೇ ದೇವರೆಂಬ ನಿಲುಕಡೆಯನರಿಯದೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೨ ||

೪೪೭

ಆಯತಲಿಂಗ ಮರ್ತ್ಯವ ನುಂಗಿತ್ತು.
ಸ್ವಾಯತಲಿಂಗ ಸ್ವರ್ಗವ ನುಂಗಿತ್ತು.
ಸನ್ನಹಿತಲಿಂಗ ಪಾತಾಳವ ನುಂಗಿತ್ತು.
ತ್ರಿಣೇಶ್ವರಲಿಂಗ ಬ್ರಹ್ಮಾಂಡವ ನುಂಗಿತ್ತು.
ನುಂಗಿದವರ ನುಂಗಿ ಬಾರದೆ ಪೋದರು.

ಆದವರು ಪೋದರು, ಆಗದವರು ಪೋದರು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೪೩ ॥

## ಐಕ್ಯನ ಮಹೇಶ್ವರ

೪೪೪

ದೇವರಿಗೆ ಅಗ್ನಿಯಿಲ್ಲ, ಪೂಜಾರಿಗೆ ಜಲವಿಲ್ಲ.
ಜನರಿಗೆ ಜೀವವಿಲ್ಲ, ಎನಗೆ ನೀವಿಲ್ಲ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೪೪ ॥

೪೪೫

ದೇವನಾದಡೆ ಅಗ್ನಿಯ ನುಂಗಬೇಕು.
ಭಕ್ತನಾದಡೆ ಮೂರು ನುಂಗಬೇಕು.
ದೇವರಿಗೆ ಎರಡಿಲ್ಲ; ಎರಡುಳ್ಳನ್ನಕ್ಕ ದೇವರಲ್ಲ.
ಅಗ್ನಿಯುಳ್ಳನ್ನಕ್ಕ ದೇವರಲ್ಲ.
ಕ್ರಿಯಕ್ಕೆ ಹೊರತಾದವರು ದೇವರಲ್ಲ.
ಇಂತಿಲ್ಲದೆ ದೇವರೆಂಬವರ ದರುಶನಕ್ಕೆ ಭವಬಂಧನವುಂಟು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೪೫ ॥

೪೫೦

ಗುರು ಗುರುವೆಂದು ಬೊಗಳುತ್ತಿರ್ಪರು
ಗುರುಸ್ವರೂಪವೆಂತಾದರಯ್ಯ?
ಗುರುವಿನ ಸ್ವರೂಪ ಗುರುವಿನ ಲಕ್ಷಣವ ಪೇಳ್ವೆ.
ಅದೆಂತೆಂದಡೆ:
ಗುರುವಿನ ನಿಲವು ಸ್ವಯಂಜ್ಯೋತಿ,
ಸ್ವಯಂ ಪ್ರಕಾಶ ಪರಂಜ್ಯೋತಿ.
ಅಂತಪ್ಪ ಗುರುಸ್ವರೂಪರಾದ ಶಿವಜ್ಞಾನಿಗಳು
ಭಕ್ತರಾಗಲಿ ಮಹೇಶ್ವರರಾಗಲಿ
ಇಂತೀ ಆಶ್ರಮವನುಳ್ಳ ಪರದೇಶಿಗಳಾಗಲಿ
ಆರಾದಡೇನು ಅಂತಪ್ಪವರಿಗೆ

ಷಡೂರ್ಮಿ-ಷಡ್ವರ್ಗ-ಸಪ್ತವ್ಯಸನ-ಅಷ್ಟಮದ-
ಪಂಚಕರಣಂಗಳು ಮೊದಲಾದ
ಅರುವತ್ತಾರುಕೋಟಿ ಕರಣಂಗಳು ಅಳಿದು ಅಳಿಯದ ಹಾಂಗೆ
ಲಿಂಗಕಿರಣಂಗಳ ಮಾಡಿ ಧರಿಸಿದವರೇ
ಅನಾದಿಗುರುವೆಂದೆನುತ್ತಿರ್ಪೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೬ ||

**ಆವಟಿಗರ ಮಲ್ಲಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೫೧

ಪಂಚರಸದ ಪಡಿಗೆ
ಮೂರು ಮುದ್ರೆ ಸುಂಕದ ಧಾನ್ಯವನಳೆಯದೆ
ಸುಂಕಿಲ್ಲದ ಧಾನ್ಯವನಳದು, ಕೊಟ್ಟು, ಪಡಿಯನುಂಡು,
ಕಾಯಕ ಮಾಡುತಿರ್ಪರು ನೋಡೆಂದನಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೭ ||

೪೫೨

ಮಣ್ಣಪಡಿಯಿಂದ ಮರ್ತ್ಯವನಳದು,
ಸಣ್ಣಪಡಿಯಿಂದ ನೀರನಳದು,
ಹಿರಿಯ ಪಡಿಯಿಂದ ಹಣವನಳದು,
ಮೂರು ಪಡಿಯನೊಡದು,
ಬಣ್ಣದ ಪಡಿಯಿಂದ ಹಿರಿಖಂಡುಗದ ಬತ್ತವನಳದು,
ಖಂಡುಗ ಪಡಿಯನುಂಡು,
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೮ ||

೪೫೩

ತುಡುಗುವ್ಯಾಪಾರದವರಿಗೆ, ಶೀಲವಂತರಿಗೆ
ಕಾಷ್ಠಲೋಹದ ಪಡಿಯಲ್ಲದೆ ಬಣ್ಣದ ಪಡಿಯ ಕೊಡರು.
ಅಧಮ, ಅಂಧಕ, ಹೇಳವರಾದ ಹೊಲೆಮಾದಿಗರಿಗೆ
ಬಣ್ಣದ ಪಡಿಯ ಕೊಟ್ಟು

ಕಾಯಕವ ಮಾಡುತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೪೯ ||

೪೫೪

ಕೊಟ್ಟ ಪಡಿಯನುಣ್ಣದೆ
ಕೊಡದ ಪಡಿಗೆ ಹವಣಿಸುವರು.
ನಿಶ್ಯಬ್ದವಾಕ್ಯವ ನುಡಿಯದೆ
ಶಬ್ದವಾಕ್ಯವ ನುಡಿವರು.
ಇವರಿಗೆ ಸ್ಥಿತಿ ಉತ್ಪತ್ತ್ಯದ ಮಾರ್ಗ
ನಷ್ಟವಾಗದು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೦ ||

**ಗಾಳವ ಕಣ್ಣಪ್ಪನವರು ಕಾಯಕವ ಮಾಡಿದ ವಚನವ ಪೇಳ್ವೆ :**

೪೫೫

ನೀರಿಲ್ಲದ ಸಾಗರದಲ್ಲಿರ್ಪ ಮತ್ಸ್ಯಕ್ಕೆ
ಮುಳ್ಳಿಲ್ಲದ ಗಾಳವ ಹಾಕಿ,
ನೂಲಿಲ್ಲದ ದಾರವ ಹಚ್ಚಿ ಎಳೆದು
ಕೊಲ್ಲುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೧ ||

೪೫೬

ಸೆಳವು ನೆಲೆಯಿಲ್ಲದ ಮಡುವಿನ
ಏಡಿ ಮಂಡೂಕವ ಬಲೆಯಿಲ್ಲದೆ ಪಿಡಿದು,
ಕರುಳನೆಲ್ಲವ ತೆಗೆದು ಮಾರಿ,
ಮಾರಾಂಕನ ಕಾಯಕವ ಮಾಡುತ್ತಿರ್ಪನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೨ ||

೪೫೭

ಸೆಳವಿನ ಮಡವ ಮತ್ಸ್ಯವು ವ್ಯಾಧಂಗೆ ವಶ.
ತಿರುಗಣೆಯ ಮಡುವಿನ ಮತ್ಸ್ಯವು

ವ್ಯಾಧಂಗೆ ವಶವಾಗದೆ ಪೋದವು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೭ ||

೪೫೮

ಒಂದನೆಯ ಗಾಳಕ್ಕೆ ಬ್ರಹ್ಮನ ಕೆಡವಿದೆ.
ಎರಡನೆಯ ಗಾಳಕ್ಕೆ ವಿಷ್ಣುವಿನ ಕೆಡವಿದೆ.
ಮೂರನೆಯ ಗಾಳಕ್ಕೆ ರುದ್ರನ ಕೆಡವಿದೆ.
ಮಿಕ್ಕಾದ ಗಾಳದಿಂ ಹಲವು ದೇವತೆಗಳ ಕೆಡವಿದೆ.
ಒಂದು ಗಾಳದಿಂದ ನಾ ಸತ್ತು
ಕಾಯಕವ ಮಾಡುತ್ತಿರ್ಪೆನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೮ ||

೪೫೯

ಕುರುಡ, ಕುಂಟ, ಅಧಮರು ಹಾಕಿದ
ಗಾಳಕ್ಕೆ ಬಿದ್ದ ಮತ್ಸ್ಯವು ಸತ್ತಿರ್ಪವು.
ಅರಸು, ಪ್ರಧಾನಿ, ಮಹಾವೀರರು ಹಾಕಿದ
ಗಾಳಕ್ಕೆ ಬಿದ್ದ ಮತ್ಸ್ಯವು ಸಾಯದೆ ಇರ್ಪವು
ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೯ ||

**ಹೊಡೆಹುಲ್ಲ ಬಂಕಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೬೦

ಕರ್ಲಭೂಮಿ ಸವುಳ ಭೂಮಿ ಕಲ್ಲು ಭೂಮಿ
ಈ ಮೂರು ಭೂಮಿಯ ಹುಲ್ಲಿನ ಹೊಡೆಯ ರಸವ ಸೇವಿಸದೆ,
ಕೆಂಪು ಬಿಳುಪು ಮಸಬು ಎಂಬ ಭೂಮಿಯ
ಹುಲ್ಲಹೊಡೆಯ ರಸವ ಸೇವಿಸಿ,
ಗುರುಕೊಟ್ಟ ಕಾಯಕದಲ್ಲಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೦ ||

೪೬೧

ಹಸಿಹುಲ್ಲಿನ ರಸವ ಕುಡಿದವರು ಬರುವರು.
ಒಣಹುಲ್ಲಿನ ರಸವ ಕುಡಿದವರು ಬಾರದೆ ಪೋದರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೭ ||

## ಐಕ್ಯನ ಪ್ರಸಾದಿ

೪೬೨

ಪುಲ್ಲ ಕೊಯ್ಯದೆ ಹೊಡೆಯ ಹಿರಿದು
ರಸವ ಹಿಂಡಿ ಪಾಕವ ಮಾಡಿ,
ಹೊಡೆಹುಲ್ಲ ಬಂಕೇಶ್ವರಲಿಂಗಕ್ಕೆ ಕೊಟ್ಟು
ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೮ ||

**ಸೂಳೆ ಚೋಳಕ್ಕನವರು ಕಾಯಕವ ಮಾಡಿದ ವಚನವ ಪೇಳ್ವೆ :**

೪೬೩

ಅರಸು ಪ್ರಧಾನಿ ಬಂಟರು ವೀರರು
ಮೊದಲಾದ ಸಕಲ ಪ್ರಜೆಗಳ ಸಂಗವ ಮಾಡದೆ,
ಕುರುಡರು ಕುಂಟರು ಅಧಮರು
ಮೊದಲಾದ ಬಡವರ ಸಂಗವ ಮಾಡಿ,
ಅವರು ಕೊಟ್ಟ ಪಡಿಯ ಕೊಂಡುಂಡು
ಸುಖದಲ್ಲಿ ಕಾಯಕವ ಮಾಡುತ್ತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೫೯ ||

೪೬೪

ಗಂಡನಿಲ್ಲದ ಸ್ತ್ರೀಯರು ಗಂಡನ ಮದುವೆಯಾಗಿ,
ಮನೆಯ ಗಂಡನ ಕೂಡ ಒಗತನವ ಮಾಡದೆ,
ಪರಪುರುಷನ ಸಂಗವಮಾಡಿ ಬಹುಕಾಲಿರ್ಪರು.
ಎನಗೆ ಗಂಡರಿಲ್ಲ.
ಬಂದಲ್ಲಿ ಗಂಡರು ಮದುವೆಯಾಗಿ ಒಗತನವ ಮಾಡಿ
ಗಂಡನ ಕೊಂದು ರಂಡೆಯಾಗಿ

ಸೋಮೇಶ್ವರಲಿಂಗಕ್ಕೆ ಅರ್ಪಿತಮಾಡಿ
ಕಾಯಕದಲ್ಲಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೦ ||

೪೬೫

ಪುರುಷನನಗಲಿ ಪರಪುರುಷನ ನೆನೆದರೆ
ಹಾದರ ಎಂಬರು.
ಅದರಿಂದ ದೋಷಪ್ರಾಪ್ತಿಯಾಗುವುದು.
ನಾನು ಪುರುಷನ ಅಗಲಿ ಹಾದರವ ಮಾಡಿ
ದೋಷವ ಕಳೆದು ಪುರುಷನ ಕೊಂದು
ಒಗತನವ ಮಾಡಿಕೊಟ್ಟು, ಕಾಯಕವ ಮಾಡುತ್ತಿರ್ಪೆನು ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೧ ||

**ಸೂಳೆ ನಿಂಬೆವ್ವನವರು ಕಾಯಕವ ಮಾಡಿದ ವಚನವ ಪೇಳ್ವೆ :**

೪೬೬

ಬ್ರಹ್ಮಂಗೆ ಕಾಲಕೊಟ್ಟು, ವಿಷ್ಣುವಿಂಗೆ ಕೈಯಕೊಟ್ಟು,
ರುದ್ರಂಗೆ ತಲೆಯಕೊಟ್ಟು,
ಉಳಿದ ಪುರುಷರಿಗೆ ಸರ್ವಾಂಗವನು ಕೊಟ್ಟು,
ಹಾದರ ಮಾಡಿ ಕಾಯಕವ ಮಾಡುತ್ತಿರ್ಪೆನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೨ ||

೪೬೭

ಒಬ್ಬನ ಮಾತಕೊಟ್ಟು ಬಾಹ್ಯದಲ್ಲಿಟ್ಟು ಕೊಂದೆ.
ಒಬ್ಬನ ಗುಪ್ತಭಾಷೆಯಕೊಟ್ಟು ಅಂತರಂಗದಲ್ಲಿಟ್ಟು ಕೊಂದೆ.
ಒಬ್ಬನ ಮೌನಭಾಷೆಯಕೊಟ್ಟು ಆಕಾಶದಲ್ಲಿಟ್ಟು ಕೊಂದೆ.
ಒಬ್ಬ ಅಧಮನಿಗೆ ತಪ್ಪದೆ ಭಾಷೆಯಕೊಟ್ಟು ಒಳಗಾಗಿ
ಹಾದರವನಾಡಿ ಕಾಯಕದಲ್ಲಿರ್ಪೆನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೩ ||

೪೬೮

ಒಳ್ಳೆಯವರ ಸಂಗವ ಮಾಡಿ
ಅವರ ಬಾಯ ತಾಂಬೂಲವ ಸೇವಿಸದೆ,
ಭವಿಗಳ ಸಂಗವ ಮಾಡಿ
ಅವರ ಬಾಯ ತಾಂಬೂಲವ ಸೇವಿಸಿ
ಕಾಯಕದಲ್ಲಿರ್ಪನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೪ ||

## ಐಕ್ಯನ ಪ್ರಾಣಲಿಂಗಿ

೪೬೯

ಹುಟ್ಟಲಿಲ್ಲದ ಮರದಲ್ಲಿ ಹಾರದ ಪಕ್ಷಿ ಗೂಡನಿಕ್ಕಿ,
ಬ್ರಹ್ಮಾಂಡವನು ಉಭಯ ರೆಕ್ಕೆಯಿಂದ ಆವರಿಸಿಕೊಂಡು,
ಆರೂ ಇಲ್ಲದ ದೇಶಕ್ಕೆ ಹಾರಿಹೋಯಿತ್ತು.
ಆ ಪಕ್ಷಿಯನು ಕೊಲ್ಲದೆ ತಿಂದವನೇ ಚಿಲ್ಲಿಂಗಸಂಬಂಧಿ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೫ ||

೪೭೦

ಅಣ್ಣಗಳು ಅಕ್ಕನ ಕೂಡ
ಹನ್ನೆರಡುವರ್ಷ ಮಾತನಾಡದೆ
ಶಬ್ದಮುಗ್ಧನಾಗಿ ಲಿಂಗೈಕ್ಯರಾದರೆಂದು
ಪುರಾಣವಾಕ್ಯವ ಕೇಳಿ,
ಮರ್ತ್ಯಲೋಕದ ಶಿವಗಣಂಗಳು ಪೇಳುತ್ತಿರ್ಪರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೬ ||

೪೭೧

ಅರಣ್ಯದ ಬೆಟ್ಟದಲ್ಲಿ ಮೂವರು ಕಳ್ಳರು ಮನೆಮಾಡಿ
ಲೆಕ್ಕವಿಲ್ಲದೆ ನರರ ಕೊಲ್ಲುತ್ತಿರ್ಪರು,
ಅರಣ್ಯದ ಬೆಟ್ಟವ ಸುಟ್ಟು ಮನೆಯ ಸುಡದೆ
ಕಳ್ಳರಕೊಂದಾತನೆ ಪ್ರಾಣಲಿಂಗೈಕ್ಯನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೬೭ ||

೪೭೨

ಅಕ್ಕನಪುರುಷನ ಬಲದಿಂದ
ಬ್ರಹ್ಮನ ತಲೆ ಹೊಡೆದು,
ತಂಗಿಯಪುರುಷನ ಬಲದಿಂದ
ವಿಷ್ಣುವಿನ ಹಸ್ತವ ಕಡಿದು,
ತಾಯಿಯ ಗಂಡನ ಬಲದಿಂದ
ರುದ್ರನ ಎದೆಯ ಹೊಡೆದು ಇರ್ಪಾತನೆ
ಚಿಲ್ಲಿಂಗಸಂಬಂಧಿ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೬೮ ॥

**ಇಂಗಳಗಿ ವೈಜಕವ್ವೆಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೭೩

ಪಶುವಿಗೆ ಕರುವಿನ ಮಮಕಾರ,
ಜಾರಸ್ತ್ರೀಗೆ ವಿಟನ ಮಮಕಾರ,
ದಾಸಿಗೆ ಶಿಶುವಿನ ಮಮಕಾರ,
ವೈಜಕವ್ವೆಗಳು ನಿಮ್ಮ ಮಮಕಾರದಲ್ಲಿರ್ದು
ಕಾಯಕವ ಮಾಡುತಿರ್ಪಳು ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೬೯ ॥

೪೭೪

ನಿನ್ನಿನವರೂ ಇಂದಿನವರೂ ನಾಳಿನವರೂ ಹೋದ ದಾರಿ
ಒಂದಲ್ಲದೆ ಎರಡಿಲ್ಲ ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೭೦ ॥

## ಐಕ್ಯನ ಶರಣ

೪೭೫

ಆಳಿಂಗೆ ವರುಷದ ಚಿಂತೆ.
ಬಂಟರಿಗೆ ಮೋಸದ ಚಿಂತೆ.
ಮಜೂರಿ ಮಾನವರಿಗೆ ದಿವಸದ ಚಿಂತೆ.

ನೆರೆದ ಹಿರಿಕಿರಿಯರಿಗೆ ಅಶನದ ಚಿಂತೆ.
ಲಿಂಗೈಕ್ಯನಾದ ಶರಣನಿಗೆ ತನ್ನ ದೇಹದ ಚಿಂತೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ४೭೧ ॥

**ನಪೂರಿ ಸಂಗಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

४೭೬

ಎನ್ನ ಕಾಳಿಯ ಧ್ವನಿಕೇಳಿ ಬ್ರಹ್ಮ ಬೆದರಿದ,
ವಿಷ್ಣು ಹೆದರಿದ, ರುದ್ರ ಲೆಕ್ಕಮರೆದು ಸುಮ್ಮನಿರ್ದ,
ದೇವತೆಗಳು ನೇಮದ ಕಟ್ಟಳೆಯನಳಿದು ಭ್ರಷ್ಟರಾದರು.
ಈ ಪರಿಯಲ್ಲಿ ಕಾಯಕವ ಮಾಪುತ್ತಿರ್ಪೆನು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ४೭೨ ॥

४೭೭

ಕಾಳಿಯ ಧ್ವನಿ ಒಳ್ಳೆಯವರು ಕೇಳರು, ಬಡವರು ಕೇಳ್ವರು.
ಕೇಳಿದವರು ಸತ್ತು, ವಂಶ ನಿರ್ವಂಶವಾಗುವರು.
ಕೇಳದವರು ಸಾಯದೆ ಬಳಗದಲ್ಲಿರುವರು ನೋಡೆಂದನಯ್ಯ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ४೭೩ ॥

४೭೮

ಗೊಲ್ಲನ ಕೊಳಲಧ್ವನಿ ಕೇಳಿ
ಹಂದಿ ನಾಯಿ ಎಮ್ಮೆ ಕೋಣ ಸರಳ ಕೊಂಬಿನಪಶುಗಳು
ಸಾಯದೇ ಇರ್ಪವು.
ಕೊಂಬಿಲ್ಲದ ಪಶುಪು ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು
ಮೊದಲಾದ ಏಳುನೂರೆಪ್ಪತ್ತು ಪ್ರಮಥಗಣಂಗಳು ಸತ್ತಿರ್ಪರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ४೭४ ॥

४೭೯

ಆರುಕಾಲವನ ಸುದ್ದಿ ಉಭಯ ಜಿಹ್ವೆಯನುಳ್ಳವರಿಗೆ ಹೇಳಿದಡೆ
ಕೇಳಬಲ್ಲರೆ? ಮೋಟಮರಕ್ಕೆ ಪೇಳಿದಡೆ ಕೇಳಬಹುದು.

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೭೫ ॥

**ಗೌಳಿಗೇರ ನಾಗಣ್ಣಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೮೦

ಪಂಚವರ್ಣದ ಗೋವಿನ ಹಾಲ ಕರದು
ಬಿಸಿಲಿಗೆ ಕಾಸಿ ಹಾಲು ಬೆಣ್ಣೆ ತುಪ್ಪವ ಮಾರಿ,
ಮೊಸರು ಮಜ್ಜಿಗೆ ಮಾರದೆ
ಕಾಯಕ ಮಾಡುತ್ತಿರ್ದ್ದೆ ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೭೬ ॥

೪೮೧

ಎಮ್ಮೆಯ ಕೊಂದು ಹಾಲು ಕರದು,
ಗಡಿಗೆಯನೊಡೆದು ಹಾಲು ತುಂಬಿ,
ಮಾರಬಲ್ಲಾತನೇ ಗೊಲ್ಲರ ನಾಗಣ್ಣನೆಂಬೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೭೭ ॥

೪೮೨

ನೀರಿಲ್ಲದೆ ಬೆಳೆದ ಹುಲ್ಲು ಮೆಯ್ದು
ಪಶುವಿನ ಹಾಲು ಸಣ್ಣವರಿಗಲ್ಲದೆ ದೊಡ್ಡವರಿಗೆ ಇಲ್ಲ.
ಒಣಹುಲ್ಲು ಮೆಯ್ದು ಪಶುವಿನ ಹಾಲು
ಬಡವರಿಗಲ್ಲದೆ ಬಲ್ಲಿದರಿಗಿಲ್ಲ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೭೮ ॥

೪೮೩

ಹಸಿಹುಲ್ಲು ಮೆಯ್ದು ಪಶುವಿಗೆ
ಹಾಲುಂಟು, ಬೆಣ್ಣೆಯಿಲ್ಲ.
ಒಣಹುಲ್ಲು ಮೆಯ್ದು ಪಶುವಿಗೆ
ಹಾಲಿಲ್ಲ, ಬೆಣ್ಣೆಯುಂಟು.
ಸರ್ವರು ಪಶುವಿಂಗೆ ರಸದ ಹುಲ್ಲು ಮೆಯ಼್ಿ

ಹಾಲ ಕರೆದುಂಬರು.
ಅವರೊಳೊಬ್ಬ ಅಧಮ ಕರಡವ ಪಶುವಿಗೆ ಮೆಚ್ಚಿ
ಹಾಲ ಕರೆದುಂಬನು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೭೯ ||

೪೮೪

ಸಾಯದ ಪಶುವಿಂಗೆ ಒಂದು ಗೂಟ,
ಸಾಯುವ ಪಶುವಿಂಗೆ ಮೂರು ಗೂಟ,
ಸತ್ತ ಪಶುವಿಂಗೆ ಆರು ಗೂಟ.
ಸತ್ತ ಕರವ ಹೊತ್ತವರಿಗೆ ಅನೇಕ ಗೂಟ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೮೦ ||

೪೮೫

ಸಾಯದವರು ಸತ್ತವರ ಸುದ್ದಿಯ ಕೇಳಿ,
ಇದ್ದವರಿಗೆ ಹೇಳಿ ಸಾಯೆಂಬರು.
ಹೇಳದವರು ಸಾಯದೆ, ಕೇಳದವರು ಸಾಯದೆ,
ಇವರ ಸುದ್ದಿಯ ನೆರೆಮನೆಯವರು ಕೇಳಿ ಸತ್ತುಹೋದರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೮೧ ||

**ಸುಪ್ಪಿ ಶಿವಯ್ಯಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೮೬

ಹಗಲೋದಿ ಬ್ರಹ್ಮಂಗೆ ಪೇಳಿದೆ,
ಇರುಳೋದಿ ವಿಷ್ಣುವಿಂಗೆ ಪೇಳಿದೆ,
ಉಭಯವಿಲ್ಲದ ವೇಳೆಯಲ್ಲಿ ಓದಿ ರುದ್ರಂಗೆ ಪೇಳಿದೆ,
ಎನ್ನ ಓದು ಕೇಳಿ ನಿದ್ರೆಯ ಕಳೆದು
ಜಾಗ್ರದಲ್ಲಿ ಕುಳಿತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೮೨ ||

೪೮೭

ಆಧಾರ, ಸ್ವಾಧಿಷ್ಠಾನ, ಮಣಿಪೂರಕ,
ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮರಂಧ್ರ,
ಶಿಖಾ, ಪಶ್ಚಿಮವೆಂಬ ನವಚಕ್ರಸ್ಥಾನವ
ಗುದ ಗುಹ್ಯ ನಾಭಿ ಹೃದಯ ಕಂಠ ಉತ್ತಮಾಂಗ
ಅಳ್ಳನೆತ್ತಿ ನಡುನೆತ್ತಿ ಹಿಂಭಾಗದ ಕಳ್ಳಕುಣಿಕೆಯೆಂದು ಪೇಳುವಿರಿ.
ಇಂತಪ್ಪ ಸ್ಥಾನದಲ್ಲಿ ಪರಶಿವಲಿಂಗ ಇರ್ಪುದೇ? ಇಲ್ಲ.
ಮತ್ತಂ, ಬಲ್ಲಾದರೆ ಪೇಳಿರಿ,
ಇಲ್ಲವಾದರೆ ನಮ್ಮ ಶಿವಗಣಂಗಳ ಕೇಳಿರಿ.
ಅದೆಂತೆಂದಡೆ :
ಆಧಾರಚಕ್ರವೆಂಬುದೇ ಘ್ರಾಣ.
ಸ್ವಾಧಿಷ್ಠಾನಚಕ್ರವೆಂಬುದೇ ಜಿಹ್ವೆಸ್ಥಾನ.
ಮಣಿಪೂರಕಚಕ್ರವೆಂಬುದೇ ನೇತ್ರಸ್ಥಾನ.
ಅನಾಹತಚಕ್ರವೆಂಬುದೇ ತ್ವಕ್ಕಿನಸ್ಥಾನ.
ವಿಶುದ್ಧಿಚಕ್ರವೆಂಬುದೇ ಕರ್ಣಸ್ಥಾನ.
ಆಜ್ಞಾಚಕ್ರವೆಂಬುದೇ ಹೃದಯಸ್ಥಾನ.
ಬ್ರಹ್ಮಸ್ಥಾನವೆಂಬುದೇ ಕರಸ್ಥಲ.
ಶಿಖಾಸ್ಥಾನವೆಂಬುದೇ ಮನಸ್ಥಲ.
ಪಶ್ಚಿಮಸ್ಥಾನವೆಂಬುದೇ ಪ್ರಾಣಸ್ಥಲ.
ಇಂತಪ್ಪ ಸ್ಥಾನದಲ್ಲಿ ಪರಶಿವಲಿಂಗವು ಸಂಬಂಧವಾಗಿರುವುದಲ್ಲದೆ
ಅಂತಪ್ಪ ಜಡದೇಹಿ ನವಸ್ಥಾನದ
ಮಾಂಸರಕ್ತದಲ್ಲಿ ಪರಶಿವಲಿಂಗವು ಇರ್ಪುದೆ? ಇಲ್ಲ.
ಅದೇನು ಕಾರಣವೆಂದಡೆ :
ಘ್ರಾಣದಲ್ಲಿ ಆಚಾರಲಿಂಗಸ್ವಾಯತವಿಲ್ಲದೆ
ಗಂಧ ದುರ್ಗಂಧ ಮೊದಲಾದ
ಆವ ಗಂಧದ ವಾಸನೆಯು ತಿಳಿಯದು.
ಜಿಹ್ವೆಯಲ್ಲಿ ಗುರುಲಿಂಗಸ್ವಾಯತವಿಲ್ಲದೆ
ಸವಿ ಕಹಿ ಮೊದಲಾದ ಆವ ರುಚಿಸ್ವಾದವು ತಿಳಿಯದು.
ನೇತ್ರದಲ್ಲಿ ಶಿವಲಿಂಗಸ್ವಾಯತವಿಲ್ಲದೆ
ಶ್ವೇತ ಪೀತ ಹರಿತ ಮಾಂಜಿಷ್ಟ, ಕಪೋತ ಮಾಣಿಕ್ಯ ಮೊದಲಾದ
ಷಡ್ವರ್ಗದ ರೂಪು ಲಕ್ಷಣ ತಿಳಿಯದು.

ತ್ವಕ್ಕಿನಲ್ಲಿ ಜಂಗಮಲಿಂಗಸ್ವಾಯತವಿಲ್ಲದೆ
ಮೃದು ಕಠಿಣ ಮೊದಲಾದ ಆವ ಸುಖವು ತಿಳಿಯದು.
ಶ್ರೋತ್ರದಲ್ಲಿ ಪ್ರಸಾದಲಿಂಗಸ್ವಾಯತವಿಲ್ಲದೆ
ಸುಸ್ವರ ಅಪಸ್ವರ ಮೊದಲಾದ ಆವ ಸ್ವರಲಕ್ಷಣವು ತಿಳಿಯದು.
ಹೃದಯದಲ್ಲಿ ಮಹಾಲಿಂಗಸ್ವಾಯತವಿಲ್ಲದೆ
ಷಡಿಂದ್ರಿಸುಖತೃಪ್ತಿ ಮೊದಲಾದ ಸಕಲೇಂದ್ರಿಯ ಸುಖತೃಪ್ತಿ
ಸಂತೋಷವು ತಿಳಿಯದು.
ಕರಸ್ಥಲದಲ್ಲಿ ನಿರಾಕಾರವಾದ ನಿಷ್ಕಲಲಿಂಗವೆಂಬ
ಇಷ್ಟಲಿಂಗ ಸ್ವಾಯತವಿಲ್ಲದೆ
ಷಡ್ವಿಧಾಂಗದಲ್ಲಿ ಷಡ್ವಿಧಲಿಂಗಸ್ವಾಯತವಾಗಿರುವ ಭೇದವು ತಿಳಿಯದು.
ಮನದಲ್ಲಿ ಶೂನ್ಯಲಿಂಗವೆಂಬ ಪ್ರಾಣಲಿಂಗಸ್ವಾಯತವಿಲ್ಲದೆ
ಸರ್ವೇಂದ್ರಿಯಲ್ಲಿ ಲಿಂಗಸ್ವಾಯತವಾಗಿರುವ ಭೇದವು ತಿಳಿಯದು.
ಪ್ರಾಣವೆಂಬಾತ್ಮನಲ್ಲಿ ಭಾವಲಿಂಗಸ್ವಾಯತವಿಲ್ಲದೆ
ಸರ್ವಾಂಗಲಿಂಗಮಯ ಪರವಸ್ತುಸ್ವರೂಪ ತಾನೆಂದು ತಿಳಿಯದು.
ಇಂತಪ್ಪ ವಿಚಾರವನು ತಿಳಿಯಬಲ್ಲಾತನೇ ಅನಾದಿಶರಣನು.
ಅಂತಪ್ಪ ಪರಶಿವಲಿಂಗದ ಸ್ವಾಯತಸಂಬಂಧವಾದ ಭೇದವ ತಿಳಿಯದೆ
ಅಂಗಭಾವ ಮುಂದುಗೊಂಡು ಇರ್ಪಾತನೇ
ಭವಭಾರಿಕನು ನೋಡಾ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೮೩ ||

೪೮೮

ಓದಿದರೆ ಓದಬಹುದು ಅಧಮ ಮೂಢರಮುಂದೆ ;
ಅರಸು ಪ್ರಧಾನಿಗಳಾದ ಪುರುಷರ ಮುಂದೆ ಓದಲಾಗದು.
ಕುರುಡನ ಕೈಯೊಳಗೆ ಕನ್ನಡಿಯ ಕೊಟ್ಟರೆ
ನೋಡಬಲ್ಲನೇ ಕಣ್ಣುಳ್ಳವನಲ್ಲದೆ?
ಹುಟ್ಟಿದವರು ಬಲ್ಲರು, ಹುಟ್ಟದವರು ಅರಿಯರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೮೪ ||

೪೮೯

ಮುಡಿಮೂಡದ ಮುನ್ನ ಪುರುಷನ ಹುಡುಕಲೇಕೆ ?
ಮುಟ್ಟಿಬಂದು ಪುರುಷನ ನೆರೆದ ಬಳಿಕ ಇನ್ನಾವ ಚಿಂತೆ ಏತಕ್ಕೆ?

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೮೫ ॥

೪೯೦

ಪುರುಷನ ಮರೆದು ಮಾವನ ಪೇಳುವರು.
ತಂದೆಯ ಮರೆದು ಮುತ್ಯನ ಪೇಳುವರು.
ಇದ್ದುದ ಮರೆದು ಇಲ್ಲದುದ ಪೇಳುವರು,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೮೬ ॥

೪೯೧

ಪಾಕವಾದನ್ನವನುಣ್ಣದೆ ಪಾಕವ ಮಾಡುಂಬೆವೆಂಬರು.
ಕೊಟ್ಟ ಫಲವ ಬಿಚ್ಚಿಟ್ಟು ತಿನ್ನಲರಿಯದೆ
ವೃಕ್ಷದ ಕೊನೆಯೊಳಗಣ ಫಲವ ತಿಂದೇವೆಂಬರು.
ಇದ್ದವರನರಿಯದೆ ಸತ್ತವರ ಬಲ್ಲೆವೆಂಬರು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೮೭ ॥

೪೯೨

ಹುಟ್ಟಿ ಸಾಯಬೇಕೆಂಬಾತ ಶರಣನಲ್ಲ.
ಸತ್ತು ಸ್ವರ್ಗದಲ್ಲಿರಬೇಕೆಂಬಾತ ಶರಣನಲ್ಲ.
ಎರಡಿಲ್ಲದೆ ಇರುವಾತ ಅಚ್ಚಶರಣ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೮೮ ॥

**ಕಲಕೇತ ಮುರಗಿಸ್ವಾಮಿಗಳು ಕಾಯಕವ ಮಾಡಿದ ವಚನವ ಪೇಳ್ವೆ :**

೪೯೩

ತೊಟ್ಟ ಕಾಶಿಯ ಕಳೆಯದೆ ಸುಟ್ಟು,
ಕಟ್ಟಿದ ವೀರಕಂಕಣ ಬಿಚ್ಚದೆ ಕಳೆದು,
ಮೂರುಲೋಕದ ಗಂಡನೆಂದು ಮುಂಡಿಗೆಯ ಹಾಕಿ
ಕಾಯಕವ ಮಾಡುತ್ತಿರ್ದೆನು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೮೯ ॥

೪೯೪

ಒಂದು ಟಗರು ಮೂರು ಸೊನ್ನಿಗೆ ಹತವಾಗಿ,
ಒಂದು ಟಗರು ಆರು ಸೊನ್ನಿಗೆ ಹತವಾಗಿ,
ಒಂದು ಟಗರು ಅನೇಕ ಸೊನ್ನಿಗೆ ಹತವಾಗಿ,
ನಾ ಸತ್ತು ಟಗರ ಸೊನ್ನೆಯನುಳ್ಳವರು
ಅತ್ತಯಿಲ್ಲದವರು ಇತ್ತೆಂದು ಮುಂಡಿಗೆಯ ಹಾಕಿದೆನು
ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೦ ॥

೪೯೫

ಸತ್ತವರ ಸಂಗ ಸಾಯದವರು ಮಾಡಿ
ಸತ್ತು ಪೋದರು.
ಸಾಯದವರ ಸಂಗ ಸತ್ತವರು ಮಾಡಿ
ಸಾಯದವರು ಆಗಲಿಲ್ಲ ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೧ ॥

೪೯೬

ಒಕ್ಕಲಿಗನ ಸಂಗದಲ್ಲಿದ್ದವರಿಗೆ ಬಡತನವಿಲ್ಲ.
ಕೂಲಿಮನುಜರ ಸಂಗದಲ್ಲಿದ್ದವರಿಗೆ ದ್ರವ್ಯ ತಾನಿಲ್ಲ.
ಒಕ್ಕಲಿಗನ ಸಂಗದಲ್ಲಿದ್ದವರಿಗೆ ಸಾವಿಲ್ಲ.
ಕೂಲಿಮನುಜರ ಸಂಗದಲ್ಲಿದ್ದವರಿಗೆ ಸಾವುಂಟು
ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೨ ॥

೪೯೭

ಮುದ್ರಿಕಿಪಶುವಿಂಗೆ ಭಯವಿಲ್ಲ.
ಮುದ್ರಿಕಿಲ್ಲದ ಪಶುವಿಂಗೆ ಭಯವುಂಟು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೩ ॥

೪೯೮

ಸತ್ತವರ ಸುದ್ದಿ ಇದ್ದವರು ಕೇಳಿ
ಸಾಯಬೇಕೆಂಬರು.
ಸತ್ತವರ ಸುದ್ದಿ ಹೊಲೆಯರು ಬಲ್ಲರು
ಉತ್ತಮರರಿಯರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೪ ॥

೪೯೯

ಹೊಲತಿ ಹೊಲೆಯನು ಕೂಡಿ
ಕರುಳಿಲ್ಲದ ಮಗನ ಪಡೆದು
ಮಗನ ಮದುವೆಯಾಗಿ, ಮಗನ ಕೊಂದು,
ತನ್ನ ಕೈಕಾಲು ಕಡಿದು ತಾ ಸತ್ತು ಪೋದಳು
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೫ ॥

೫೦೦

ಸತ್ತವರು ಸಾಯದವರ ನುಂಗಿ, ಸಾಯದವರು ಸತ್ತವರ ನುಂಗಿ,
ಈ ಉಭಯರು ಎತ್ತಹೋದರೆಂಬುದ ನೀ ಬಲ್ಲೆ, ನಾನರಿಯೆ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೬ ॥

೫೦೧

ಕಂಡವರಿಗೆ ಒಂದು, ಕಾಣದವರಿಗೆ ಎರಡು.
ಎರಡಿಲ್ಲದವರಿಗೆ ಆವುದೂ ಇಲ್ಲ.
ಎರಡುಳ್ಳವರಿಗೆ ಹಲವು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪೯೭ ॥

೫೦೨

ಸತ್ತ ಹೆಣದ ಮುಂದೆ ಅತ್ತವರು
ಅತ್ತಲೇ ಸುರಚಾಪವಂತೆ ಇರ್ಪರು.
ಅಳದವರು ಬಹುಕಾಲಿರುವರು.

ಆ ಹೆಣದ ಮುಂದೆ ಮಾಯವಿಲ್ಲದೆ,
ಅತ್ತವರು ಆರಿಗೂ ಸಿಕ್ಕದೆ ಎತ್ತ ಹೋದರೆಂಬುದ
ಬಡವರು ಬಲ್ಲರು, ಬಲ್ಲಿದರು ಅರಿಯರು.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೯೮ ||

೫೦೩

ಕರೆದವರಿಗೆ ಕೊಡುವರು:
ಕರೆಯದವರಿಗೆ ಕೊಡರು.
ಎರಡಿಲ್ಲದವರಿಗೆ ತನ್ನಂತೆ ಮಾಡುವರು.
ಹಿಂದಿನವರಿಗೆ ಮುಂದಿನವರಿಗೆ
ಇದೇ ಆಚಾರಪ್ರಮಾಣ.
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೪೯೯ ||

೫೦೪

ಸತ್ತವರ ಮನೆಗೆ ಸಾಯದವರು ಪೋಗಿ
ತಮ್ಮ ಅಳುವ ಮಾಣಿಸಿ,
ಸತ್ತವನ ಸತಿಯಳ ಸಂಗವ ಮಾಡಿ
ಕುಲಗೆಟ್ಟು, ಹೊಲೆಗೇರಿಯ ಪೊಕ್ಕು
ಎತ್ತ ಹೋದರೆಂಬುದು ತಿಳಿಯಬಲ್ಲರೆ ಅಚ್ಚಶರಣನೆಂಬೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೫೦೦ ||

■ ■

## ಕುಷ್ಟಗಿ ಕರಿಬಸವೇಶ್ವರನ ಚಿತ್ತಸದ್ಗತಿಯ ವಚನ

೫೦೫

ಭವಿಜನ್ಮವ ಕಳದು ಭಕ್ತನ ಮಾಡಿದರಯ್ಯ.
ಪಂಚಭೂತದ ಪ್ರಕೃತಿಯ ಕಳದು ಪ್ರಸಾದಕಾಯವ ಮಾಡಿದರಯ್ಯ.
ಅಂಗೇಂದ್ರಿಯಂಗಳ ಕಳದು ಲಿಂಗೇಂದ್ರಿಯಂಗಳ ಮಾಡಿದರಯ್ಯ.
ಅಂಗವಿಷಯಭ್ರಮೆಯಂ ಕಳದು
ಲಿಂಗವಿಷಯಭ್ರಾಂತನ ಮಾಡಿದರಯ್ಯ.
ಅಂಗಕರಣಂಗಳ ಕಳದು
ಲಿಂಗಕರಣಂಗಳ ಬೆಸಸುವಂತೆ ಮಾಡಿದರಯ್ಯ.
ಕುಲಸೂತಕ ಛಲಸೂತಕ ತನುಸೂತಕ ನೆನವುಸೂತಕ ಭಾವಸೂತಕ
ಇಂತೀ ಸೂತಕವೆಂಬ ಭ್ರಾಂತನು ಬಿಡಿಸಿ
ನಿಭ್ರಾಂತನ ಮಾಡಿ ರಕ್ಷಿಸಿದ ಶ್ರೀಗುರುದೇವಂಗೆ
ನಮೋ ನಮೋ ಎಂಬೆನಯ್ಯ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೧ ॥

೫೦೬

ಭವತಿಮಿರಜ್ಞಾನದಿಂದ ಮುಸುಕಿಕೊಂಡು
ಕಣ್ಗಾಣದಿದ್ದವಂಗೆ ಜ್ಞಾನವೆಂಬಂಜನವನೆ ಹಚ್ಚಿ

ಶಿವಪ್ರತಾಪವಿದೆಯೆಂದು ತೋರಿಸಿದ
ಸದ್ಗುರುದೇವಂಗೆ ನಮೋ ನಮೋ ಎಂಬೆನಯ್ಯ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೨ ॥

೫೦೭

ಭವಾರಣ್ಯದಲ್ಲಿ ಪ್ರವೇಶಿಸುತ್ತಿಪ್ಪವಂಗೆ,
ಬೆಂದಜ್ಞಾನದಿಂದ ಸುತ್ತುತ್ತ
ಹಿಂದು ಮುಂದು ಎಡ ಬಲ ಆದಿ ಆಕಾಶ
ನಡುಮಧ್ಯ ಆವುದೆಂದರಿಯದವಂಗೆ,
ಇರುವುದಕ್ಕೆ ಇಂಬುಗಾಣದವಂಗೆ,
ಶಿವತತ್ವವೆ ಆಶ್ರಯ ಇದೆಯೆಂದು ತೋರಿದ
ಸದ್ಗುರುದೇವಂಗೆ ನಮೋ ನಮೋ ಎಂಬೆನಯ್ಯ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೩ ॥

೫೦೮

ಹಲವು ಜಲ್ಮಂಗಳಲ್ಲಿ ತೊಳಲಿ ಸಂಕಲ್ಪ ಕಟ್ಟಿ
ಪಾಪಗಳೆಂಬ ಕರ್ಮಂಗಳ ಸುಟ್ಟು ಶುದ್ಧಿಸಿ ಪ್ರಕಟಿಸಿ ತೋರಿದ
ಸದ್ಗುರುವಿಂಗೆ ನಮೋ ನಮೋ ಎಂಬೆನಯ್ಯ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೪ ॥

೫೦೯

ಗುರುವೆ ಪರಮೇಶ್ವರನೆಂದು ಭಾವಿಸಬೇಕು ನೋಡಾ.
ಎರಡೆಂದು ಪ್ರಕೃತಿಯ ತೋರಿದರೆ ಅದು ಅಜ್ಞಾನ ನೋಡಾ.
ಇದು ಕಾರಣ, ಆವನಾನೊರ್ವನು ಎರಡೆಂದು ಭಾವಿಸಿದಡೆ
ಅವನಿಗೆ ಅನೇಕಕಾಲ ನರಕದ ಕುಳಿಯೊಳಗೆಯಿಪ್ಪುದು ತಪ್ಪದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೫ ॥

೫೧೦

ಶಿವಾಶ್ರಯದಲ್ಲಿ ಜನಿಸಿ ಭವಾಶ್ರಯವ ನೆನೆವ
ಭಂಡರ ಮುಖವ ನೋಡೆ ನೋಡೆ.

ಶಿವಾಶ್ರಯವೆ ಶ್ರೀಗುರುನಾಥನ ಕರಕಮಲವೆಂಬ ಪರಿ.
ಭವಾಶ್ರಯವೆ ತನ್ನ ಹಿಂದಣ ಪೂರ್ವದ ಭವಿ
ತಾಯಿ ತಂದೆ ಬಂಧು ಬಳಗವೆಂಬ ಪರಿ.
ಇದು ಕಾರಣ ಗುರುಕರಜಾತನಾಗಿ ನರರ ಹೆಸರ ಹೇಳಿ
ಹಾಡಿ ಹೊಗಳಿಸುವ ನರಕಿ ಭವಿಯ ಎನಗೊಮ್ಮೆ ತೋರದಿರಾ.
ಆ ಕುಲಗೆಟ್ಟ ಹೊಲೆಯರ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೬ ॥

೫೧೧

ಗುರೂಪದೇಶವ ಪಡೆದು ಗುರುಪುತ್ರನೆನಿಸಿಕೊಂಡ ಬಳಿಕ
ಹಿಂದಣ ತಾಯಿ ತಂದೆ ಬಂಧು ಬಳಗವ ನೆನೆಯದಿರಿರೋ.
ಕುಲಗೆಟ್ಟ ಹೊಲೆಯರಿರ ನೆನೆದರೆ ನಿಮಗೆ ಶಿವದ್ರೋಹ ತಪ್ಪದು.
ನಿಮಗೆ ತಂದೆ ತಾಯಿ ಬಂಧು ಬಳಗವ ಹೇಳಿಹೆನು ಕೇಳಿರೊ.
'ಗುರುದೈವಾತ್ ಪರಂ ನಾಸ್ತಿ' ಎಂದುದಾಗಿ,
ಗುರುವೇ ತಾಯಿ, ಗುರುವೇ ತಂದೆ, ಗುರುವೇ ಬಂಧುಬಳಗವೆಂದು
ನಂಬಬಲ್ಲಡೆ ಆತನೆ ಶಿಷ್ಯನೆಂಬೆ, ಆತನೆ ಭಕ್ತನೆಂಬೆ.
ಅಲ್ಲದಿರ್ದಡೆ ಭವಿಯೆಂಬೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭ ॥

೫೧೨

*ಸುರತರು ತರುಗಳೊಳಗಲ್ಲ.
ಸುರಧೇನುವದು ಪಶುವಿನೊಳಗಲ್ಲ.
ಪರುಷ ಪಾಷಾಣದೊಳಗಲ್ಲ.
ಶಿಷ್ಯನ ಭಾವಕ್ಕೆ ಗುರು ನರನಲ್ಲ.
ನರನೆಂದರೆ ನರಕ ತಪ್ಪದು.
ಗುರುವೆ ಪರಶಿವನೆಂದು ಭಾವಿಸಬಲ್ಲಡೆ ಆತನೆ ಶಿಷ್ಯನೆಂಬೆ,
ಆತನೆ ಭಕ್ತನೆಂಬೆ, ಅಲ್ಲದಿರ್ದಡೆ ಭವಿಯೆಂಬೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮ ॥

---

* ಆರಂಭದ ನಾಲ್ಕು ಸಾಲು ತೋಂಟದ ಸಿದ್ಧಲಿಂಗರ ವಚನ(೧೬೧)ದಲ್ಲೂ ಬಂದಿವೆ.

೫೧೩

ಗಂಡನಿಂದ ಹೆಂಡತಿ ಮೊದಲು ಹುಟ್ಟಿದಳು,
ಆ ಗಂಡನಿಂದ ಕಿರಿಯಳಲ್ಲದೆ ಹಿರಿಯಳಲ್ಲವಯ್ಯ.
ಗುರುವಿನಿಂದ ಈ ಶಿಷ್ಯ ಅರಿವುಳ್ಳವನಾದರೆ
ಭೃತ್ಯನಲ್ಲದೆ ಕರ್ತನಲ್ಲವಯ್ಯ.
ಕುದುರೆಯ ಹಿಡಿವಂತ ಡಾಣಕ
ರಾವುತಿಕೆಯ ಮಾಡಿದರೊಪ್ಪುವರೆ ?
ಆಳಾಗಿದ್ದವನು ಅರಸಾಗಿದ್ದರೊಪ್ಪುವರೆ ?
ತಂದೆಗೆ ಮಗ ದೊಡ್ಡವನಾಗಬಲ್ಲನೆ ?
ಇದು ಕಾರಣ ಶಿಷ್ಯರಿಗೆ ಭಯಭಕ್ತಿ ಕಿಂಕುರ್ವಾಣವಿರಬೇಕು.
ಇಲ್ಲದಿರ್ದಡೆ ಅವ ಶಿಷ್ಯನಲ್ಲ, ಶಿವಭಕ್ತನಲ್ಲ.
ಅವ ಭವಿಯೆಂಬೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೯ ॥

೫೧೪

ಆದಿಯ ಪರಮೇಶ್ವರ ತನ್ನ ವಿನೋದಾರ್ಥಕಾರಣಕ್ಕಾಗಿ
ಮರ್ತ್ಯಲೋಕದೊಳು ರೂಪಾಗಿ ಸುಳಿದರೆ
ಭೇದವ ಮಾಡಿ ನುಡಿವ ದರುಶನ ಪರವಾದಿಗಳ ಬಾಯಲ್ಲಿ
ಪಾದರಕ್ಷೆಯನಿಕ್ಕುವೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೧೦ ॥

೫೧೫

ಲಿಂಗದ ನೆಲೆಯನರಿಯದವಂಗೆ,
ಜಂಗಮವ ಜಡನೆಂದವಂಗೆ,
ಗುರುವ ನರನೆಂದವಂಗೆ,
ಪರಮಪ್ರಸಾದ ಎಂಜಲೆಂದವಂಗೆ
ಕುಂಭೀನರಕ ತಪ್ಪದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೧೧ ॥

೫೧೬

ಗುರುಮುಖದಲ್ಲಿ ಕೊಂಬುದು ಗುರುಪ್ರಸಾದ.
ಲಿಂಗಮುಖದಲ್ಲಿ ಕೊಂಬುದು ನಿತ್ಯಪ್ರಸಾದ.
ಜಂಗಮಮುಖದಲ್ಲಿ ಕೊಂಬುದು ಜ್ಞಾನಪ್ರಸಾದ.
ಜ್ಞಾನಮುಖದಲ್ಲಿ ಕೊಂಬುದು ಸಿದ್ಧಪ್ರಸಾದ.
ಇಂತೀ ಪ್ರಸಾದ ನಾಲ್ಕು ಸ್ಥಿರಸಲ್ಲದೆ ಭ್ರಾಂತುಗೊಂಡ
ಬ್ರಹ್ಮರಾಕ್ಷಸನಂತೆ ಉಂಡುಂಡುಳುಹಿಬಿಟ್ಟು ಹೋಗುವ
ಭಂಡರ ಭಕ್ತಿಯ ಯಮಗುಂಡದೊಳಗಿಕ್ಕುವೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೨ ||

೫೧೭

ತ್ರಿವಿಧ ತೀರ್ಥ, ತ್ರಿವಿಧ ಪ್ರಸಾದ,
ತ್ರಿವಿಧ ಲಿಂಗ, ತ್ರಿವಿಧ ಪೂಜೆ,
ತ್ರಿವಿಧ ಮಾಟ, ತ್ರಿವಿಧ ಕೂಟವಲ್ಲದೆ
ಅನ್ಯರೊಳಾಡುವ ಆಟ ನೋಟ ಮಾಟ ಕಾಳಕೂಟ
ಗಿರಿಯಕ್ಕೆ ನಿಘಾಟ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೩ ||

೫೧೮

ಪ್ರಣಮದ ಮಂತ್ರ, ಪ್ರಣಮದ ಯಂತ್ರ,
ಪ್ರಣಮದ ತಂತ್ರ, ಪ್ರಣಮದ ಕಾರ್ಯ,
ಪ್ರಣಮದ ಕರಣ, ಪ್ರಣಮದ ಭಕ್ತಿ,
ಪ್ರಣಮವಲ್ಲದೆ ಅನ್ಯಮಂತ್ರ ತಂತ್ರ ಯಂತ್ರ ನಿಜಕ್ಕೆ ಸ್ವತಂತ್ರವಿಲ್ಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೪ ||

೫೧೯

ಕಾಲನ ಸುಟ್ಟ ಭಸಿತವಲ್ಲ.
ಕ್ರಮದಿಂದ ಕಾಮನ ಸುಟ್ಟ ಭಸಿತವಲ್ಲ.
ತ್ರಿಶೂಲಧರ ತ್ರಿಪುರವ ಸುಟ್ಟ ಭಸಿತವಲ್ಲ.
ತ್ರಿಜಗವ ನಿರ್ಮಿಸಿದ ಭಸಿತವ ತಿಳಿದು

ಲಲಾಟಕ್ಕೆ ಧರಿಸಲು ತ್ರಿಯಂಬಕ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೫ ||

೫೨೦

ಕ್ಷುದ್ರ ಕುಚೇಷ್ಟೆ ಕುಟಿಲವ ಛಿದ್ರವೀತವಮಾಡುವ
ಭದ್ರಬಲವ ಕೊಡುವ ರುದ್ರಾಕ್ಷಿಯ ಧರಿಸಿದ ಭಕ್ತರ
ನಿದ್ರೆ ಸುಷುಪ್ತಿ ಜಾಗ್ರದಲ್ಲಿ [ಕಂಡರೆ] ಹೊದ್ದೇರಿದ ಪಾಪ
ಹೋಗುವುದು ಕಾಣಾ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೬ ||

೫೨೧

ಆಜ್ಞೆ ಸಹಿತೆ ಗುರು, ಆಜ್ಞೆ ಸಹಿತೆ ಲಿಂಗ,
ಆಜ್ಞೆ ಸಹಿತೆ ಜಂಗಮ, ಆಜ್ಞೆ ಸಹಿತೆ ಭಕ್ತ,
ಆಜ್ಞೆ ಸಹಿತೆ ದಾಸೋಹಿ,
ಆಜ್ಞೆ ಸಹಿತೆ ಅರುವತ್ತಾರು ಶೀಲ.
ಆಜ್ಞೆ ಸಹಿತೆ ವ್ರತ ನೇಮ ನಿತ್ಯ,
ಆಜ್ಞೆ ಯನತಿಗಳೆದವ ಅನಾಚಾರಿ,
ಅವನ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೭ ||

೫೨೨

ಕುಲವೆಣ್ಣ ಬಿಟ್ಟು ಬೆಲೆವೆಣ್ಣಿಗೆ ಮನವನಿಟ್ಟ
ಆ ಹೊಲೆಯನ ತಲೆಯೆತ್ತಿ ನೋಡದಿರಾ ಮನವೆ.
ಅವ ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿ,
ಪ್ರಸಾದದ್ರೋಹಿ, ಶಿವದ್ರೋಹಿ.
ಅವ ಪಂಚಮಹಾಪಾತಕಿ ಪಾಷಂಡಿ.
ಅವನ ಮುಖವ ನೋಡಲಾಗದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೮ ||

೫೨೩

ಮಲಮೂತ್ರದ ಬಿಲದಲ್ಲಿ ಕೆಲಗಯ್ಯನಿಕ್ಕಿ,
ಮಾಂಸದ ಮೊಟ್ಟೆಯ ಬಲಗೈಯೊಳಿಡಿದು,
ಎಲುವಿನ ಮೇಲಣ ಚರ್ಮವ ಅಧರ ಮಧುರವೆಂದು
ನಿತ್ಯ ಕಡಿತಿಂಬ ಹೊಲೆಯರಿಗೆ ಎಲ್ಲಿಯದೊ ಶಿವಾಚಾರ ಕುಲಾಚಾರ ?
ಶೀಲ ವ್ರತ ನೇಮ ನಿತ್ಯ ಶಿವದ್ರೋಹಿಗೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೧೯ ||

೫೨೪

ಪಾಕುಳದ ಆಗರದ ಮೂತ್ರದ ಕುಳಿಯೊಳು
ಮುಳುಗಾಡುವವಂಗೆ ಸ್ತೋತ್ರ ಮಂತ್ರ ಜಪ ತಪ
ಹೋಮ ನೇಮ ಧ್ಯಾನ ಸಮಾಧಿ ಅಷ್ಟವಿಧಾರ್ಚನೆಯೇಕೊ?
ಛೈತ್ರಕ್ಕೆ ಗುಂಡನಿಕ್ಕಿದಂತಿರಬೇಕು ಬಲ್ಲವರು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೦ ||

೫೨೫

ತಸ್ಮದ ಮೇಲಣ ಕಿಸುಕುಳದ ಕುಳಿಯೊಳು ಬಿದ್ದು
ನಿರ್ಧರವಿಲ್ಲದೆ ದೆಸೆಗಾಣದೆ ಜೀವದಭ್ಯಸಕ್ಕಾಗಿ
ಹುಸಿಯ ನುಡಿವ ಹುಸಿಯ ಹೊಲೆಯಂಗೆ
ಬಸವಭಕ್ತಿಯೆಲ್ಲಿಯದೊ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗ ಗುರುಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೧ ||

೫೨೬

ಬಚ್ಚಲಕುಳಿಯೊಳು ನಿಚ್ಚ ಮುಳುಗಾಡುವಂಗೆ
ಉಚ್ಚೆಯಮುಖದೊಳು ಮುಖವಿಟ್ಟು,
ಮುಸುಡೆಯ ಕಚ್ಚಿ ಕಡಿವ ಹುಚ್ಚು ಹುಳಿತ
ನಾಯಿಗೆಲ್ಲಿಯದೊ? ಇಲ್ಲ.
ಅಚ್ಚಪ್ರಸಾದ, ನಿಚ್ಚಪ್ರಸಾದ ಆಚಾರ-ವಿಚಾರ
ಅನಾಚಾರಿಗೆಲ್ಲಿಯದೊ? ಇಲ್ಲ.

ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೨ ||

೫೨೭

ಆಗಸಗಿತ್ತಿ, ನಾಯಿದಗಿತ್ತಿ, ಬಸ್ತಿಯ ಜೈನಗಿತ್ತಿ,
ಬೆಸ್ತ ಬೇಡತಿ ಹೊಸಮಾದಗಿತ್ತಿ,
ಹೊಲತಿ ಡೊಂಬತಿ ಹಸಲಗಿತ್ತಿ
ಹದಿನೆಂಟು ಜಾತಿಯ ಎಂಜಲವ ಭುಂಜಿಸುವ
ತೊಂಬಲಗಳ್ಳರಿಗೆ ಗುರುಲಿಂಗಜಂಗಮದ
ಪಾದೋದಕ ಪ್ರಸಾದವೆಲ್ಲಿಯದೊ? ಇಲ್ಲ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೩ ||

೫೨೮

ಕುಗ್ಗಿನ ಕುಳಿ, ಸಿಳ್ಳಿನ ಗುಳ್ಳೆ, ಸೀಳ್ಳಿನ ಕೋವಿ,
ನಾರು ಹೋಮ ಬುಗ್ಗಿಚ್ಚುಗುಟ್ಟಿ
ತಗ್ಗಿನ ಡೊಗರಿನೊಳು ಬಿದ್ದು
ಸಿಗ್ಗಡಿಯದೆ ಸಿಕ್ಕದ ಶಿಖಂಡಿ ಮುಗ್ಗುಲಮುದಿ
ಮೂಕೊರೆಯನ ಮುಖವ ನೋಡಲಾಗದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೪ ||

೫೨೯

ಹೇಲುಚ್ಚೆಯ ಕೊಂಡ ಜೋಲುವ ಕಂಡ
ಮೇಲೆ ನಾರುವ ಬಾಯಿ
ಇವು ಮೂರು ಹೇಹವೆಂದರಿಯದೆ
ಹೆಚ್ಚುನುಡಿ ಬಣ್ಣವಿಟ್ಟುಕೊಂಬ
ಉಚ್ಚೆಯ ಕುಡಿವವರ ಬಾಳು
ಕೆಚ್ಚಲ ಕಚ್ಚಿದ ಉಣ್ಣೆಯ ತೆರಸಂತೆ.
ನಚ್ಚದಿರು ನಾರಿಯರ ಮೋಹವ.
ಕರ್ಮದ ಕಾಳಕಿಚ್ಚು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೫ ||

೫೩೦

ಮಿಥ್ಯಾದೇವತೆಯ ಸೂಳೆ ಅತ್ತಿಗೆ ನಾದಿನಿ ಅತ್ತೆ
ತೊತ್ತು ಅಕ್ಕ ತಂಗಿ ಹೆತ್ತತಾಯೆಂದರಿಯದೆ
ತರ್ಕೈಸಿಕೊಂಬ ತೊತ್ತಿನ ಮಕ್ಕಳಿಗೆ
ನಿರ್ವಾಣಲಿಂಗದ ಪಾದಸೇವೆಯೆಲ್ಲಿಯದೊ? ಇಲ್ಲ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೬ ||

೫೩೧

ಅತ್ತ ಬರುವ ಹಾದರಗಿತ್ತಿ, ಕೊಂತದ ಗೊರವಿತಿ,
ಬಟ್ಟೆಯ ಬಸವಿ, ಚಾಮರಗಿತ್ತಿ, ಸಂತೆಯ ಸೂಳೆ,
ಕಪ್ಪುಚವಸರಿಯದ ಹಲುಗಿತ್ತಿಯರ ಸಂಗವ ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೭ ||

೫೩೨

ಹದಿರಿನ ಹಗರಣಗಿತ್ತಿ, ಚದುರಿನ ತಿಗುಳತಿ,
ಕುದುರೆ ಗೋವನ ಸತಿಯ ಸಂಗವ ಮಾಡುವ
ಸದರದ ಸೂಳೆಯಮಕ್ಕಳ ಮುಖವ ನೋಡಲಾಗದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೮ ||

೫೩೩

ಭವಿತನಕ್ಕೆ ಹೇಸಿ ಭಕ್ತನಾಗಿ
ಭವ ಸಲ್ಲದೆ ಮತ್ತೆಯೂ ಭವಿಯ ಮನೆಯ ಹೊಕ್ಕು
ಹೋಗಿ ಉಂಡನಾದರೆ ತಿಂಗಳು ಸತ್ತ ಕತ್ತೆಯ ಮಾಂಸವ
ತುತ್ತು ತುತ್ತಿಂಗೆ ಗದ್ಯಾಣ ತೂಕವ ತೂಗಿ ತಿಂದ ಸಮಾನ.
ಅವನನು ಭಕ್ತನೆನಲಾಗದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೨೯ ||

೫೩೪

ಊರೆಲ್ಲ ಹೇತ ಹೆಲ ಹಂದಿ ತಿಂದು ತನ್ನೊಡಲ ಹೊರೆವುದು.
ತಾ ಹೇತ ಹೇಲ ತಾ ಮುಟ್ಟದು.
ಮತ್ತೆ ಆ ಭವಿಯ ತಂದೆ-ತಾಯಿ ಬಂಧು-ಬಳಗವೆಂದು
ಅವರಲ್ಲಿ ಹೊಕ್ಕು ಹೋಗಿ ಉಂಡವರ ಭಕ್ತಿ
ಹಂದಿಗಿಂದ ಕರಕಷ್ಟ.
ಅವನ ಭಕ್ತನೆನಲಾಗದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೩೦ ||

೫೩೫

ಚಿತ್ರದಬೊಂಬೆ ರೂಪಾಗಿದ್ದರೇನು?
ಚೈತನ್ಯವಿಲ್ಲದ ಕಾರಣ ಪ್ರಯೋಜನವಾದುದಿಲ್ಲ.
ಹಾವುಮೆಕ್ಕೆಯ ಹಣ್ಣು ನುಣ್ಣಾಗಿದ್ದರೇನು ?
ಕಹಿ ಬಿಡದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ಹತ್ತಿಯ ಹಣ್ಣು ಕಳಿತಿದ್ದರೇನು ?
ಕ್ರಿಮಿ ಬಿಡದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ತಿಪ್ಪೆಯಗುಂಡಿಯ ನೀರು ತಿಳಿದಿದ್ದರೇನು?
ಅಮೇಧ್ಯ ಬೆರೆದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ಭಕ್ತನಾದೆನೆಂಬ ಸಂತವ ತಾಳಿದರೇನು?
ತೊತ್ತಿಗೆ ಸಿರಿಬಂದರೇನು?
ಹಿತ್ತಲಿಗೆ ತಳೆಯ ಹಿಡಿಸುವಂತೆ.
ಕರ್ತೃ ಕ್ರೀಯವಿಲ್ಲದವನ ಭಕ್ತಿ ಕತ್ತೆ ನಾಯಂತೆ.
ಅವನಿಗೆ ಸತ್ಯವಿಲ್ಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೩೧ ||

೫೩೬

ಜೇನುತುಪ್ಪದೊಳು ಬಿದ್ದ ನೊಣವಿನಂತೆ,
ಕಾನನದೊಳು ಕಣ್ಣಕಟ್ಟಿ ಬಿಟ್ಟ ಮರುಳನಂತೆ,
ಎಲುವ ಕಡಿವ ಶ್ವಾನನಂತೆ, ಮಲವ ಭುಂಜಿಸುವ ಸೂಕರನಂತೆ,
ಮಾನಿನಿಯರಿಗೆ ಮೆಚ್ಚಿ ಕೆಡದಿರು ಮನವೆ: ಅಭಿಮಾನಹಾನಿ.

ಲಿಂಗ ಅಭಿಮಾನಿಯಾಗಿರು ಕಂಡ್ಯಾ ಮನವೆ
ನಿತ್ಯ ಮುಕ್ತಿ ಬೇಕಾದಡೆ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೩೨ ||

೫೩೭

ಪುರಜನಂಗಳ ಮೆಚ್ಚಿಸುವರೆ ಪುರಪತಿಯೆ ಶರಣು ?
ಪರಿಜನಂಗಳ ಮೆಚ್ಚಿಸುವರೆ ಹಾದರಗಿತ್ತಿಯೆ ಶರಣು ?
ಸರ್ವಜನಂಗಳ ಮೆಚ್ಚಿಸುವರೆ ಸಂತೆಯ ಸೂಳೆಯೆ ಶರಣು ?
ತನ್ನ ಲಿಂಗವ ನಚ್ಚಿ ಮೆಚ್ಚಿ ಮುಕ್ತಿಗೆ ಇದೊಂದಚ್ಚು.
ಮುಂದೆ ನಿಂದಕರೆದೆಯ ಸುಡುವ ಕಿಚ್ಚು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೩೩ ||

೫೩೮

ಕಾಲ ಕಾಮನ ಗೆಲುವುದಕ್ಕೆ
ಉಪಾಯವಿದೇನೆಂದು ಆಲೋಚನೆಯ ಮಾಡುವೆಯ ಮನವೆ ?
ನರಿ ನಾಯ ಜಗಳಕ್ಕೆ ಆನೆಯ ಪವುಜನವಕಿಕ್ಕುವರೆ ಮನವೆ ?
ಸುಜ್ಞಾನವೆಂಬ ಆನೆಯನೇರಿ
ಅಜ್ಞಾನವೆಂಬ ನಾಯಿಗಳಿಗೆ ಅಂಜದಿರು ಮನವೆ,
ಅಳುಕದಿರು ಮನವೆ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೩೪ ||

೫೩೯

ಹಂದಿಗೆ ಅಂದಳವನಿಕ್ಕಿದರೆ ಅರಸಾಗಬಲ್ಲುದೆ ಅದು ?
ಕುನ್ನಿಗೆ ರನ್ನದ ಹಲ್ಲಣವ ಹಾಕಿದರೆ
ಕುದುರೆಯಾಗಬಲ್ಲುದೆ ಅದು ?
ಕನ್ನೆವೆಣ್ಣು ಕಲೆಯಸೂಳೆಯಾಗಬಲ್ಲಳೆ ಅವಳು ?
ಹೊನ್ನು ಕಬ್ಬುನವಾಗಬಲ್ಲುದೆ ?
ಬಿನ್ನಣವ ಭಕ್ತಿಯ ಮಾಡಿ ತಪ್ಪುವ
ಅನ್ಯಕಾರಿಗಳ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೩೫ ||

೫೪೦

ಒಬ್ಬರುತ್ತಮರೆಂಬರು.
ಒಬ್ಬರು ಕನಿಷ್ಠರೆಂಬರು.
ಒಬ್ಬರು ಅಧಮರೆಂಬರು.
ಒಬ್ಬರು ಕಷ್ಟನಿಷ್ಠೂರಿಯೆಂಬರು.
ಅಂದರವಕೇನು ಯೋಗ್ಯ?
ವಿನಯಕಂಪಿತ ಪರಮಾರ್ಥಕ್ಕೂ ಲೌಕಿಕಕ್ಕೂ ವಿರುದ್ಧ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೩೬ ॥

೫೪೧

ಗುರುಕೊಟ್ಟ ಕುರುಹ ಬಿಟ್ಟು
ನರರು ನಟ್ಟಕಲ್ಲಿಂಗೆ, ಒಟ್ಟಿದ ಮಣ್ಣಿಂಗೆ
ನಿಷ್ಠೆವೆರದು ನುಡಿವ ಭ್ರಷ್ಟ ಕನಿಷ್ಠ ಕರ್ಮಿಗಳ
ಮುಖವ ನೋಡಲಾಗದು.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೩೭ ॥

೫೪೨

ಉಡಿಯಲಿಂಗವ ಬಿಟ್ಟು, ಗುಡಿಯಲಿಂಗದ ಮುಂದೆ ನಿಂದು
ನುಡಿಗಳ ಗಡಣವ ಮಾಡುವ
ತುಡುಗುಣಿ ಕಳ್ಳಗುಡಿ ಹೊಲೆಯರ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೩೮ ॥

೫೪೩

ಮಿಂಡಂಗಯಿದರೆಡೆಯ ತೋರುವಳಲ್ಲದೆ ಸೂಳೆ,
ಗಂಡಂಗಯಿದರೆಡೆಯ ತೋರುವಳೆ ಹೆಂಡತಿ ?
ಆ ಕಳ್ಳಂಡ ಷಂಡ ಸವುಂಡ ಅಂಡರಂತೆ
ಕಂಡಕಂಡುದ ಪೂಜಿಸುವ ಭಂಡ ಮುಂಡೆ
ಮೂಕೊರೆಯನ ಮುಖವ ನೋಡಲಾಗದು,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೩೯ ॥

೫೪೪

ಒತ್ತೆಯ ಸೂಳೆ[ಗೆ] ಒತ್ತೆಯ ತೋರುವಂತೆ,
ಹೆತ್ತ ತಾಯಿಗೆ ಮಲತಾಯ ತೋರುವಂತೆ,
ಸತ್ಯಕ್ಕೆ ಅಸತ್ಯವ ತೋರುವ ಭಕ್ತಿಹೀನ
ತೊತ್ತುಗುಲವರಿದು ಸತ್ತಹಾಗೆ ಸುಮ್ಮನಿರಿರೆ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೦ ||

೫೪೫

ಮಾಳಿಗೆಯ ಮಣ್ಣು ಮಂಟಪಕ್ಕೆ ಸರಿಯೆ ?
ಆಳಿಂಗೆ ಅರಸು ಸರಿಯೆ ?
ಸೂಳೆಗೆ ಪತಿವ್ರತೆ ಸರಿಯೆ ?
ನಿವಾಳಿಸಿ ಬಿಟ್ಟ, ವಾಳಿಮಾನವರಿಗೆ
ಮೇಳವಾಡಿ ಮುಕರಿದರೆ ಭಕ್ತಿಬೆಳವಿಗೆ ಸರಿಯೆ ?
ಅಗ್ಗ ಕೂಗಳಿಗೂಳರ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೧ ||

೫೪೬

ಅಂದಿನಕಾಲದ ಹನುಮ ಲಂಕೆಯ ಹಾರಿದನೆಂದು
ಇಂದಿನಕಾಲದ ಕಪಿ ಕಟ್ಟೆಯ ಹಾರುವಂತೆ,
ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು
ತೊತ್ತು ತಿಪ್ಪೆಯನೇರುವಂತೆ,
ಕೊಮಾರ ಕುದುರೆಯನೇರಿದನೆಂದು
ಕೋಡಗ ಕುನ್ನಿಯನೇರುವಂತೆ,
ಆನೆ ಮದಸೊಕ್ಕಿ ಸೋಮಬೀದಿಯ ಸೂರೆಮಾಡಿತೆಂದು
ಆಡು ಮದಸೊಕ್ಕಿ ಬೇಡಗೇರಿಯ ಹೊಕ್ಕು ಕೊರಳ ಮುರಿಸಿಕೊಂಬಂತೆ,
ಉರದಮೇಲಣ ಗಂಡನ ಬಿಟ್ಟು
ಪರವೂರ ಮಿಂಡನ ಕೊಂಡಾಡುವ ಮಿಂಡನಾರಿಯಂತೆ
ಕಂಡಕಂಡುದ ಪೂಜಿಸುವ ಭಂಡಮುಂಡೆ
ಮೂಕೊರೆಯರ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೨ ||

೫೪೭

ತೊರೆಯೊಳಗಣ ಶಂಖು ಘೋರು ಘುಗಿಲೆಂದಿತೆಂದು
ಕೆರೆಯೊಳಗಣ ಗುಳ್ಳೆ ಕಿರಿಕಿರಿಯೆಂಬಂತೆ,
ಚಂದನ ಗಂಧ ಕಸ್ತೂರಿ ಕರ್ಪೂರ ಪುನಗು ಜವಾದಿ-
ಗಂಡನುಳ್ಳ ಹೆಂಡತಿಗೆ ಯೋಗ್ಯವಲ್ಲದೆ
ಮುಂಡೆಗೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೩ ||

೫೪೮

ನಾಟ್ಯಸಾಲೆಯೊಳು ನಾಟ್ಯವನಾಡುವ ಹೆಣ್ಣು
ಝಣಝಣ ಕಿಣಿಕಿಣಿಯೆಂದರೆ
ಮುಸುರೆಯ ಮಡಕೆಯನು ತೊಳವುತ್ತ
ಮೂಕೊರೆಯ ತೊತ್ತು ಗುಣುಗುಣುಯೆಂಬಂತೆ,
ನವಿಲಾಡಿತೆಂದು ನಾಯಿ ಬಾಲವ ಬಡಕೊಂಬಂತೆ,
ಕೋಗಿಲೆ ಕೂಗಿತ್ತೆಂದು ಕುಕ್ಕುಟ ಪುಚ್ಚವ ತರಕೊಂಡಂತೆ,
ನಿಶ್ಚಯವಿಲ್ಲದವನ ಭಕ್ತಿ ಬಚ್ಚಲಬಾಲ್ವುಳುವಿನಂತೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೪ ||

೫೪೯

ಪುರಾತರ ಗೀತವನೋದಿ ಪುರಾತರ ಮಕ್ಕಳಾದಬಳಿಕ-
ಕಿರಾತರ ಮಕ್ಕಳಂತೆ ಹೊತ್ತಿಗೊಂದು ಬಗೆ
ದಿನಕ್ಕೊಂದು ಗುಣವ ನಡೆವುದಲ್ಲ,
ಭಕ್ತನೇನು ಮುಗಿಲಬೊಂಬೆಯೆ ?
[ಮೊಲೆ]ನಾಗರಕಾಟವೆ ? ಸುರಚಾಪವೆ ?
ಗೋಸುಂಬೆಯೆ ?
ನೋಡಿರ್ಯ-ಕಡೆದು ಕಂಡಿಸಿದರೆ
ಕುಂದಣದ ಪುತ್ಥಳಿಯಂತೆ ನಿಜಗುಂದದಿರುವುದೀಗಲೇ ಭಕ್ತಸ್ಥಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೫ ||

೫೫೦

ಕಾಲವಗಂಡ, ಕರ್ಮದಗಂಡ, ವಿಧಿಯಗಂಡ,
ವಿಶಸನದಗಂಡ, ಇಹದಗಂಡ, ಪರದಗಂಡ,
ಅಂಗದ ಮೇಲೆ ಲಿಂಗವ ಧರಿಸಿ ಸಾವಿಗಂಜುವರೆ ?
ಸಂದೇಹಿಯಗಂಡ, ಸಂದೇಹ ನಿರ್ಲೇಪಕ್ಕೆ ಶರಣೈಕ್ಯ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೬ ||

೫೫೧

ಎಲ್ಲರು ಅಹುದೆಂಬ ಪ್ರಮಾಣವ ಕಾಣೆರೊ.
ಎಲ್ಲರು ಅಲ್ಲವೆಂಬ ಪ್ರಣಮ ಕಾಣೆರೊ.
ಇದು ಕಾರಣ ಶಿವಶರಣರ ಹೃದಯದ ಸ್ಥಾನವನರಿಯದ
ಶಿವದ್ರೋಹಿಗಳು ಅರಿಯದರಾಗಿ
ಎನ್ನ ಅಹುದಲ್ಲವೆಂಬುದ ಶ್ರೀ ಗುರುನಾಥನೆ ಬಲ್ಲ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೭ ||

೫೫೨*

ಸಟ್ಟುಗ ಸವಿಯ ಬಲ್ಲುದೆ ?
ಅಟ್ಟ ಮಡಕೆ ಉಣ್ಣಬಲ್ಲುದೆ ?
ಕನಿಷ್ಠ ಹೀನ ಲಿಂಗದ ಕಟ್ಟಳೆಗೆ ಬರಬಲ್ಲನೆ ?
ಕರಕಷ್ಟ ಹೀನರಿರಾ ಸುಮ್ಮನಿರಿರೊ.
ಸೂಳೆಯ ಮಕ್ಕಳಿರ ಕಟ್ಟಳೆಗೆ ಬರದೆ,
ಘನದಲ್ಲಿ ಮನಮುಟ್ಟಿ ಹಿಮ್ಮೆಟ್ಟದೆ
ಆವನಿದ್ದಾತನೆ ಅಚ್ಚ ಭಕ್ತನೆಂಬೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೮ ||

೫೫೩

ನೀರಮಡಿಯ ಕಟ್ಟಿ, ಬಯಲಿಗೆ ಬಲೆಯ ಬೀಸಬಹುದೆ ?
ಪರಿಗೆ ಅರಗ ತೋರಿ ಗಾಳಿಗೆ ಸೂಡರ ಹಿಡಿಯಬಹುದೆ ?

---

* ಈ ನಾಲ್ಕು ವಚನಗಳು ತೋಂಟದ ಸಿದ್ಧಲಿಂಗರಲ್ಲಿಯೂ ಇವೆ. ಅಂಕಿತ ಮಾತ್ರ ಭಿನ್ನ. (ನೋಡಿ ತೋಂ.ಸಿ. ಸಂಪುಟ. ಪ್ರ.ಆ. ವಚನಸಂಖ್ಯೆ ೬೪೩, ೬೪೫, ೬೪೬, ೬೪೭).

ಮಳಲಗೋಡೆಯನಿಕ್ಕಿ ಮಂಜಿನಮನೆಯ ಕಟ್ಟಿದರೆ
ಅದು ಅಸ್ಥಿರವಾಗುವಲ್ಲದೆ ಸ್ಥಿರವಾಗಬಲ್ಲುದೆ ?
ಹಲವು ಮುಖದಲ್ಲಿ ಜಿನುಗುವ ಭವಭಾರಿ ಮನುಜರಿಗೆ
ಶಿವಾಚಾರ ಅಳವಡದು ನೋಡಾ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೪೯ ||

೫೫೪*

ಕೊರಡು ಕೊನರಬಲ್ಲುದೆ ?
ಬರಡು ಹಯನಾಗಬಲ್ಲುದೆ ?
ಕುರುಡಗೆ ಕನ್ನಡಿಯ ತೋರಿಸಿದರೆ ನೋಡಬಲ್ಲನೆ ?
ಮೂಕಂಗೆ ರಾಗವು ಹೊಳೆದರೆ ಹಾಡಬಲ್ಲನೆ ?
ಹೆಗ್ಗ ಬುದ್ಧಿಯ ಬಲ್ಲನೆ ?
ಲೋಗರಿಗೆ ಉಪದೇಶವ ಕೊಟ್ಟರೆ ಶಿವಭಕ್ತರಾಗಬಲ್ಲರೆ ?
ಶಿವಸತ್ವದಸಂಪನ್ನರಾಗಲಲ್ಲದೆ
ಶಿವಾಚಾರ ಆಳವಡದು ನೋಡಾ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೦ ||

೫೫೫*

ಕೆರೆಯನೊಡೆದ ಬಳಿಕ ತೂಬು ತಡೆಯಬಲ್ಲುದೆ ?
ಒಡಕ ಮಡಕೆಗೆ ಒತ್ತಿ ಮಣ್ಣ ಕೊಟ್ಟರೆ ನಿಲ್ಲಬಲ್ಲುದೆ ?
ಮುತ್ತೊಡೆದರೆ ಬೆಚ್ಚಬಲ್ಲುದೆ ?
ಚಿತ್ತ ಒಡೆದರೆ ಭಕ್ತಿ ಬೀಸರವಲ್ಲದೆ ಮುಕ್ತಿಯೆಲ್ಲಿಯದೊ ?
ಕತ್ತೆಯ ಸೂಳೆಯ ಮಕ್ಕಳಿರಾ ಸತ್ತಹಾಗೆ ಸುಮ್ಮನಿರಿರೊ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೧ ||

೫೫೬*

ಮಲದ ಕುಳಿವೊಂದು ಮುಖ.
ಜಲದ ಕುಳಿವೊಂದು ಮುಖ.
ರಕ್ತದ ಕುಳಿವೊಂದು ಮುಖ.
ಕೀವು ಕ್ರಿಮಿ ಕೀಟಕ ಜಂತು ತುಂಬಿಪ್ಪ ಕುಳಿವೊಂದು ಮುಖ.

ವಾತ ಪಿತ್ತ ಶ್ಲೇಷ್ಮ ಸಂಯೋಗದಲ್ಲಿ
ಸರ್ವದೋಕುಳಿ ಮುಖವಾಗಿದೆ ನೋಡಾ.
ಕಿವಿಯಲ್ಲಿ ಕುಗ್ಗಿ, ಕಣ್ಣಿನಲ್ಲಿ ಜುರಿ,
ಮೂಗಿನಲ್ಲಿ ಸಿಂಬಳ, ಹಲ್ಲಿನಲ್ಲಿ ಕಿಣಿ,
ಉರದಲ್ಲಿ ಮಾಂಸದ ಗ್ರಂಥಿ, ಅಮೇಧ್ಯದ ಹುತ್ತ,
ಒಳಗೆ ಕರುಳ ಚಪ್ಪಳಿಗೆ
ಹೊರಗೆ ಚರ್ಮದ ಹೊದಿಕೆ.
ಈ ಹೆಣ್ಣು ರೂಪಿನ ಬಣ್ಣದ ಕಾಯವ ಕಂಡು
ಕಣ್ಣನಟ್ಟಿ ಮನಮುಟ್ಟಿ ಮರುಳಾದರಣ್ಣಗಳು.
ಮುಕ್ಕಣ್ಣ ನಿಮ್ಮನರಿಯದೆ ಬಣ್ಣದ ಹಿರಿಯರು
ಭಕ್ತರು ಭ್ರಮೆಗೊಂಡರೆ
ನಾನು ನೋಡಿ ಹೇಸಿ ನಾಚಿ ಕಡೆಗೆ ತೊಲಗಿದೆನಯ್ಯ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೨ ||

೫೫೭

ಪಾದರಗಿತ್ತಿ ಪಾದಲುಂಬಿಮರನ
ಪರಪುರುಷನೆಂದು ಪ್ರತಿಜ್ಞೆಯ ಮಾಡಿ ದೃಢವ ನುಡಿವಂತೆ,
ಸಾಧಕ ಸರ್ವಜನರು ಶಿಷ್ಯ ಶಿವಭಕ್ತರೆಂದು
ಗುರುವಿನ ಕೂಡೆ ಭೇದವ ಮಾಡಿ ವಾದಿಸಿ ನುಡಿವ
ಮಾದಿಗ ಹೊಲೆಯರ ಮುಖವ ನೋಡಬಾರದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೩ ||

೫೫೮

ಶೀಲ ಶೀಲವೆಂದೇನೊ ?
ಶೀಲವಂಥಾ ಸೂಲವೆ ?
ಶುದ್ಧ ಹರಿವ ನೀರನು ನೂಲರಿವೆ ಸುತ್ತಿಯದ ಕಟ್ಟಿ
ತಂದದ್ದು ಶೀಲವೆ ? ಅದಲ್ಲ ನಿಲ್ಲು ಮಾಣು.
ಜ್ವಾಲೆಯಂದದಿ ಹರಿವ ಮನವನು
ಖತಿ ಹೋಗದ ಹಾಗೆ ಕಟ್ಟಿ ನಿಲಿಸಿಮುದೆ ಶೀಲ.
ಬಾಲೆಯರ ಬಣ್ಣದ ಬಗೆಗೆ ಭ್ರಮೆಗೊಳ್ಳದುದೆ ಶೀಲ.

ಕಾಲಕರ್ಮಂಗಳ ಗೆದ್ದುದೆ ಶೀಲ.
ಇಂತಲ್ಲದೆ ಉಳಿದುವೆಲ್ಲ ದುಶ್ಶೀಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೫೮ ||

೫೫೯

ಕೆರೆ ತೊರೆಯ ಮುಳುಗುವ
ಅರೆಮರುಳುಗಳು ನೀವು ಕೇಳಿರೊ.
ತೊರೆಯಿರೊ ಗುರುಲಿಂಗ ಜಂಗಮದ ನಿಂದ್ಯವ.
ತೊರೆಯಿರೊ ಕೊಲೆ ಹುಸಿ ಕಳವು ಪಾರದ್ವಾರ ಅತಿಕಾಂಕ್ಷವ.
ತೊರೆಯಿರೊ ಅಷ್ಟಮದ ಅರಿಷಡ್ವರ್ಗವ.
ಇವ ತೊರೆಯದೆ ಕೆರೆ ತೊರೆಯ ಮುಳುಗುವ
ಬರಿ ಮೂಕೊರೆಯರಿಗೆ ಭಕ್ತಿ ಮುಕ್ತಿಯೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೫೯ ||

೫೬೦

ಉದಯದಲೆದ್ದು ಗಡಗಡನೆ ನಡುಗುತ ಹೋಗಿ
ಹೂ ಗಿಡು ಪತ್ರೆಯ ಕಡಿವ ದೃಢಗೇಡಿಗಳು ನೀವು ಕೇಳಿರೊ.
ಅದು ಕಡುಪಾಪವಲ್ಲವೆ ನಿಮಗೆ ?
ನಡುಗಿರೊ ಪರಧನ ಪರಸ್ತ್ರೀಯರಿಗೆ.
ನಡುಗಿರೊ ಕೊಲೆ ಹುಸಿ ಕಳವು ಪಾರದ್ವಾರ ಅತಿಕಾಂಕ್ಷಕ್ಕೆ.
ನಡುಗಿರೊ ಹರನಿಂದ್ಯ ಗುರುನಿಂದ್ಯ ಅನಾಚಾರಕ್ಕೆ,
ಇದಕ್ಕೆ ನಡುಗದೆ ಮಳಿ ಛಳಿ ಗಾಳಿಗೆ ನಡುಗಿ
ಹೂ ಗಿಡ ಪತ್ರೆಯ ಕಡಿವ ಕಡುಪಾಪಿಗಳಿಗೆ
ನಿಮಗೆ ಮೃಡಪೂಜೆಯೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೬೦ ||

೫೬೧

ಒರತೆಯಾಯತವೆಂಬ ಮರ್ತ್ಯದ ಶೀಲವಂತರು
ನೀವು ಕೇಳಿರೊ.
ತನುಕರಗಿ ಮನಕರಗಿ ಕಂಗಳವರತು

ಲಿಂಗಕ್ಕೆ ಮಜ್ಜನಕ್ಕೆರಮದೆ ಒರತೆ.
ಇಂತಲ್ಲದೆ ಒರತೆ ತೆರದು ಬಂದ ನೀರ
ಭಾಂಡಕ್ಕೆ ಭರತಿ ಮಾಡಿ, ಬರುವ ಒರತಿಯೊಳಗೆ
ಕಲ್ಲು ಮುಳ್ಳು ಹಾಕಿ ಮುಚ್ಚುವ
ನರಕಿ ನಾಯಿಗಳಿಗೆ ಶೀಲವೆಲ್ಲಿಯದೊ ? ಇಲ್ಲ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೭ ||

೫೬೨

ಉಪ್ಪು ಹುಳಿಯನು ಬಿಟ್ಟು
ಸಪ್ಪೆ ಆಯತವೆಂಬ ಹಿಪ್ಪೆಗಳ್ಳರು ನೀವು ಕೇಳಿರೊ.
ಉಪ್ಪಲ್ಲವೆ ನಿಮ್ಮುದರದಾಸೆ ?
ಹುಳಿಯಲ್ಲವೆ ನಿಮ್ಮುದರದಾಸೆ ?
ತುಪ್ಪವಲ್ಲವೆ ನಿಮ್ಮ ತುದಿನಾಲಿಗೆಯ ಸವಿಯು ?
ಇಂತಪ್ಪ ಉಪ್ಪು ಹುಳಿಯನು ಬಿಟ್ಟು
ತಪ್ಪದು ಸಪ್ಪೆಯ ಶೀಲ
ನೀವಿಪ್ಪುದು ಗುರುಪಾದದಲ್ಲಿ
ಸರ್ಪಭೂಷಣ ನಿಮಗೊಲಿವ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೮ ||

೫೬೩

ಉಳ್ಳಿ ಇಂಗು ಬೆಲ್ಲ ಮೆಣಸು
ಇವ ಕೊಳ್ಳಬಾರದುಯೆಂಬ ಒಳ್ಳೆ ವ್ರತಿಗಳು ನೀವು ಕೇಳಿರೊ.
ಸುಳ್ಳು ಸಟೆಯ ಬಿಟ್ಟು ತಳ್ಳಿಬಳ್ಳಿಯ ಬಿಟ್ಟು
ಒಳ್ಳಿತಾಗಿ ನಡೆಯಬಲ್ಲಡೆ ಬಳ್ಳೇಶ್ವರನ ಭಕ್ತರೆಂಬೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೫೯ ||

೫೬೪

ಶೀಲ ವ್ರತ ನೇಮ ನಿತ್ಯವ ಹಿಡಿದು ಬಿಡುವ
ಕಳ್ಳುಗುಡಿಗಳಿರಾ ನೀವು ಕೇಳಿರೊ.
ಹಿಡಿದು ಬಿಡಲಿಕ್ಕೆ ವಿಶ್ವಕರ್ಮನ ಕೈಯ ಇಕ್ಕುಳವೆ ವ್ರತ ?

ಬ್ರಹ್ಮಪಿಶಾಚಿಯೆ ಹಿಡಿದು ಬಿಡಲಿಕ್ಕೆ ವ್ರತ ?
ರವಿ ಶಶಿಯ ಗ್ರಹಣವೆ ಹಿಡಿದು ಬಿಡಲಿಕ್ಕೆ ವ್ರತ ?
ಕಲೆವಿದಿಯೆ ಹಿಡಿದುಬಿಡಲಿಕ್ಕೆ ವ್ರತ ?
ಇವಲ್ಲ ನಿಲ್ಲು ನಿಲ್ಲು ಮಾಣು.
ಹಿಡಿಯಬೇಕಾದರೆ ಸರ್ಪ ವೃಶ್ಚಿಕ ಅನಲ
ಅಸಿಯಾದರೆಯು ಹಿಡಿದಹರೆ ಹಿಡಿಯಬೇಕು,
ದೃಢಭಕ್ತಿಯಿದಲ್ಲಾ.
ಕಳ್ಳುಗುಡಿ ಕುಡಿದು ಕುಣಿಕುಣಿದಾಡಿ ಬಿಡುವ ಹಾಗೆ
ಬಿಡುವ ತುಡುಗುಣಿ ಹೊಲೆಯರ ಮುಖವ ನೋಡಬಾರದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೬೦ ॥

೫೬೫

ಪರದೈವ ಪತಿಪೂಜೆಯ ಬಿಟ್ಟು,
ಇಷ್ಟವನರಿಯದೆ ಹೊಟ್ಟೆಯ ಹೊರಕೊಂಬ
ಭ್ರಷ್ಟಬಂಟರು ನೀವು ಕೇಳಿರೊ.
ಪಂಚಮಾಪಾತಕವಬಿಟ್ಟಡೆ ಬಿಟ್ಟುದು.
ಪ್ರಪಂಚ ಬಿಟ್ಟಡೆ ಪತಿಪೂಜೆಯ ಬಿಟ್ಟುದು.
ನುಡಿ ಎರಡಿಲ್ಲದೆ ನಡೆಯಬಲ್ಲಡೆ ಒಡೆಯನ ಕಟ್ಟಳೆ.
ನಂಬಿಸಿ ಒಡಲ ಹೊರೆಯದಿರ್ದುದೆ ಒಡೆಯನ ಕಟ್ಟಳೆ.
ಪಾತ್ರ ಸತ್ಪಾತ್ರವರಿತು ಕೊಡಬಲ್ಲಡೆ ಬಿಡುಗಡೆ.
ಇಂತಲ್ಲದೆ ವಾರ್ತೆಕೀರ್ತಿಗೆ ಕೊಂಡಾಡಿಸಿಕೊಂಡು
ಕೊಡುವ ಧೂರ್ತ ಹೊಲೆಯರ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೬೧ ॥

೫೬೬

ಧೂಳಿಪಾವುಡ, ಸರ್ವಾಂಗಪಾವುಡ,
ಸಮಯಾಚಾರ, ಸಹಭೋಜನವೆಂಬ
ಶೀಲವಂತರು ನೀವು ಕೇಳಿರೊ.
ಗಾಳಿಗೂಳಿತನವ ಬಿಟ್ಟುದೆ ಧೂಳಿಪಾವುಡ.
ಸರ್ವ ಗರ್ವವನಳಿದು ನಿಗರ್ವವಾದುದೆ ಸರ್ವಾಂಗಪಾವುಡ.

ಸಮತೆ ಸೈರಣೆ ಉಳ್ಳುದೆ ಸಮಯಾಚಾರ.
ಶರಣಸತಿ ಲಿಂಗಪತಿಯಾದುದೆ ಸಹಭೋಜನ.
ಇಂತಲ್ಲದೆ ಸಂತೆಯ ಸೂಳೆಯಂತೆ
ಬಂದವರ ಸಂತವಿಟ್ಟು, ತಾವು ಮುನ್ನಿನಂತೆ ಇರುವ
ಭ್ರಾಂತು ಭ್ರಮಿತ ವ್ರತಿ ಗಿತಿಗಳಿಗೆ ಶೀಲವೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೬೨ ॥

೫೬೭

ಹಡಪ ಚಾಮರ ಸುರಗಿ ರಜಬೋವರಿಗೆ
ಧೂಪ ವಚನ ಕನ್ನಡಿ ಗುಂಡಿನಕಾಯಕವೆಂಬ
ಮಂದಚಾರಿಗಳು ನೀವು ಕೇಳಿರೊ.
ಒಡಲಾಸೆಯಳಿದುದೆ ಹಡಪದಕಾಯಕ.
ಚಂಚು ವಂಚನೆಯ ಬಿಟ್ಟುದೆ ಚಾಮರದಕಾಯಕ.
ಪರವನಿತೆಯರ ಆಸೆಯಳಿದುದೆ ಸುರಗಿಯಕಾಯಕ.
ಋಣ ರುಚೆಯಿಲ್ಲದುದೆ ರಜಬೋವರಿಗೆಕಾಯಕ.
ದುಸ್ಸಂಗ ದುಸ್ವಪ್ನ ದುರ್ವಾಸನೆಯಳಿದುದೆ ಧೂಪದಕಾಯಕ.
ರಚ್ಚೆ ರಚನೆಯಳಿದುದೆ ವಚನಕಾಯಕ.
ಪರವಧುವ ನೋಡದಿಪ್ಪುದೆ ಕನ್ನಡಿಯಕಾಯಕ.
ತೊಂಡು ತೊಳಸು ಮುಂಡು ಮುರುಹು ಭಂಡ ಬೂತು
ದಿಂಡೆಯತನ ಕೊಂಡೆಯವಳಿದುದೆ ಗುಂಡಿಗೆಯಕಾಯಕ.
ಇಂತಲ್ಲದೆ ಕಂಡಕಂಡವರ ಕೊಂಡಾಡದೆ ಇಪ್ಪರೆ
ಬಂಡುಗೆಲವ ಮಂಡ ಮೂಕೊರೆಯ ಭಂಡ ಬಹುಕಳ್ಳರಿಗೆ
ಕಾಯಕ ಸಲ್ಲದು.
ಭಕ್ತಿ ಮುಕ್ತಿಯಿಲ್ಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೬೩ ॥

೫೬೮

ಹಾಲು ಹಣ್ಣು ಬೇಳೆ ಬೆಲ್ಲದ ನೇಮಸ್ತರು ನೀವು ಕೇಳಿರೊ.
ಬಾಲೆಯರ ಮೇಲಣ ಭ್ರಾಂತು ಬಿಟ್ಟುದೆ ಹಾಲನೇಮ.
ಶಿವಯುಕ್ತವಲ್ಲದ ಪರಹೆಣ್ಣು ಹೊನ್ನು ಮಣ್ಣು ಬಿಟ್ಟುದೆ

ಹಣ್ಣಿನ ನೇಮ.
ತಾರ ತಮ್ಮುಸ ಗರಗಳು ಪಿಶಾಚಿಗಳಿದ್ದುವೆ ವೇಳೆಯನೇಮ.
ಇಂತಲ್ಲಿ ಸಲ್ಲ, ಇಲ್ಲಿ ಉಂಟುಯೆಂಬ
ತಳ್ಳಿ ಬಳ್ಳಿಯ ಬಿಟ್ಟುದೆ ವೆಲ್ಲದ ನೇಮ.
ಇಂತಲ್ಲದೆ ಉಳಿದಾದ ಭ್ರಾಂತುನೇಮದವರಿಗೆ
ಭಕ್ತಿ ಯುಕ್ತಿ ಮುಕ್ತಿಯೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೬೪ ||

೫೬೯

ತನಗೆ ಹುಟ್ಟಿದ ಮಕ್ಕಳಿಗೆ ತನ್ನ ಗುರುವ ಬಿಟ್ಟು
ತನ್ನ ಮಕ್ಕಳಿಗೆ ತಾನಟ್ಟಣೆಯ ಗುರುವಾಗಿ
ಲಿಂಗವ ಕಟ್ಟುವ ಆ ಕುಲಗೆಟ್ಟ ಹೊಲೆಯರ ಮುಖವ ನೋಡಲಾಗದು.
ಅದೇನು ಕಾರಣವೆಂದರೆ ಅವರಿಗೆ
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವಿಲ್ಲ.
ಅವರಿಗೆ ಪಾದೋದಕ ಪ್ರಸಾದವಿಲ್ಲ.
ಅವ ಪರವಾದಿ ; ಅವ ಪಂಚಮಹಾಪಾತಕಿ ಪಾಷಂಡಿ.
ಅವನ ಮುಖವ ನೋಡಲಾಗದು.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೬೫ ||

೫೭೦

ಒಂದೂರೊಳಗೆ ಗುರುವಿದ್ದು ವಂದಿಸಿ
ಬಿನ್ನಹ ಬಿಡುಗಡೆಯ ಮಾಡಿಕೊಳ್ಳದೆ
ಒಡಲ ಹೊರವ ಮಾನವರು ಮುಂದೆ
ಹಂದಿಯ ಜಲ್ಮದಲ್ಲಿ ಅನೇಕಕಾಲ ಬಪ್ಪುದು ತಪ್ಪದು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೬೬ ||

೫೭೧

ಇದ್ದೂರೊಳಗೆ ಗುರುವಿದ್ದು ಬುದ್ಧಿಯ ಕೇಳದೆ
ಕದ್ದ ಕಳ್ಳನಂತೆ ಕಂಡಕಡೆಯಲ್ಲಿ ತಿರುಗುವ
ಉದ್ರೇಕ ಹೊಲೆಯರ ಮುಖವ ನೋಡಲಾಗದು

ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೬೭ ||

೫೭೨

ಇದ್ದೂರಲ್ಲಿ ಗುರುವಿದ್ದು ದರುಶನ ಪರುಷನವಿಲ್ಲದೆ
ದೂರದಲೆ ನೆನದುಕೊಂಡಿದ್ದೇನೆಂಬವಿಚಾರಿ
ಹಾದರಗಿತ್ತಿಯಂತೆ ಹೊಲೆಯರು ನೀವು ಕೇಳಿರೊ.
ಬೇರೂರಿಗೆ ಹೋಗಿ ಸತಿಯರ ನೆನೆದರೆ
ಇರವೆ ಮಾಡಿದ ಹಾಂಗೆ ಆಗುವುದೆ ? ಇಲ್ಲ.
ಅದೇನು ಕಾರಣವೆಂದರೆ,
ಗುರುಲಿಂಗಜಂಗಮದ ಪಾದಸೇವೆಯ ನೆರೆನಂಬಿ
ಹೆರೆಹಿಂಗದೆ ಮಾಡುವುದೆ ಮಾಟಕೂಟ ಭಕ್ತಿಮುಕ್ತಿ.
ಇಂತಲ್ಲದೆ ಉಳಿದಾದ ಮಾಟಕೂಟವೆಲ್ಲ ಬಗುಳಾಟ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೬೮ ||

೫೭೩

ಒಂದು ಮನೆಯೊಳಗೆ ಗಂಡಗೊಬ್ಬ ಗುರು,
ಹೆಂಡತಿಗೊಬ್ಬ ಗುರು, ಮಕ್ಕಳಿಗೊಬ್ಬ ಗುರು,
ತಂದೆಗೊಬ್ಬ ಗುರು, ತಾಯಿಗೊಬ್ಬ ಗುರು.
ಈ ರೀತಿಯಲ್ಲು ಗುರುಭೇದವ ಮಾಡಿಕೊಂಡು
ನಾವು ಭಕ್ತರುಯೆಂದು ಬೆರೆವರು.
ಇಂಥ ನೀಚ ಹೊಲೆಯರಿಗೆ ಭಕ್ತಿಮುಕ್ತಿ ಎಲ್ಲಿಯದೊ ?
ಏಕೋ ಗುರುವೊಬ್ಬನಲ್ಲದೆ ಎರಡುಂಟೆ ?
ಇದಲ್ಲದೆ ಗುರುಭೇದವ ಮಾಡಿದ ಹೊಲೆಯರ ಮುಖವ ನೋಡಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೬೯ ||

೫೭೪

ಮತವಲ್ಲ, ಹೆಣ್ಣ ಹಿಡಿದು ತನ್ನ ಮುನ್ನಿನ ಗುರುವಂ ಬಿಟ್ಟ
ಕುನ್ನಿಗಳಿರ ನೀವು ಕೇಳಿರೊ.
ನಿಮಗೆ ಗುರುವಿಲ್ಲ.
ಅದೇನು ಕಾರಣವೆಂದರೆ, ಅವಳಿಗೆ ಪಾದೋದಕ ಪ್ರಸಾದವಿಲ್ಲ :

ಅವಳಿಗೆ ಮತವಿಲ್ಲ : ಧರ್ಮದ ದಾರಿಯೆಲ್ಲಾ ದುರ್ಧರ.
ಆ ದುರಾಚಾರಿಯನಾಳುವ ಹೊಲೆಯರಿಗೆ
ಗುರುಲಿಂಗಜಂಗಮದ ಪಾದೋದಕ ಪ್ರಸಾದವಿಲ್ಲ.
ಅವನಿಗೆ ಆ ಹೆಂಡತಿಯೆ ತನ್ನ ಗುರುವೆಂದು
ಮುನ್ನಿನ ತನ್ನ ಗುರುವ ಬಿಡುವ ಗನ್ನಘಾತಕ
ಕುನ್ನಿ ಕುಲಹೀನರಿಗೆ ಭಕ್ತಿಮುಕ್ತಿಯೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭೦ ॥

೫೭೫

ಶಿವಭಕ್ತರಿಗೆ ಭವಿ ಸರಿಯೆಂಬ ಭ್ರಷ್ಟ ಭಂಡರು ನೀವು ಕೇಳಿರೊ.
ಅದೇನು ಕಾರಣವೆಂದರೆ ಕತ್ತೆಗೆ ಕುದುರೆ ಸರಿಯೆ ?
ಗರತಿಗೆ ತೊತ್ತು ಸರಿಯೆ ? ಭಿತ್ತಿಗೆ ಕೇರು ಸರಿಯೆ ?
ವಿರಕ್ತಿಗೆ ಪಿರಿತಿ ಸರಿಯೆ ? ಕತ್ತಲೆಗೆ ಬೆಳಗು ಸರಿಯೆ ?
ಕರ್ತಗೆ ಭೃತ್ಯ ಸರಿಯೆಂಬ ದುರುಕ್ತಿಯ ದುರಾಚಾರಿ
ದೂಷಕ ಹೊಲೆಯರಿಗೆ ಭಕ್ತಿ ಮುಕ್ತಿಯೆಲ್ಲಿಯದೊ ?
ವಿರಕ್ತಿ ವೀರಶೈವ ವಿಚಾರ ಅವನಿಗೆಲ್ಲಿಯದೊ ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭೧ ॥

೫೭೬

ಗುರುವಿನಲ್ಲಿ ಕುಲ ವಿದ್ಯೆ ಗುಣ ಅವಗುಣವ
ನೋಡುವವ ಒಂದನೆಯ ಪಾತಕ.
ತೀರ್ಥಲಿಂಗದ ನಿಜನಿಲುಕಡೆ ನಿತ್ಯ ಅನಿತ್ಯವ
ನೋಡುವವ ಎರಡನೆಯ ಪಾತಕ.
ತೀರ್ಥದಲ್ಲಿ ತಿಳಿ ಕಲಕ ನೋಡುವವ ಮೂರನೆಯ ಪಾತಕ.
ಪ್ರಸಾದದಲ್ಲಿ ರುಚಿಯರುಚಿಯ ನೋಡುವವ ನಾಲ್ಕನೆಯ ಪಾತಕ.
ಜಂಗಮದಲ್ಲಿ ಜಾತಿ -ಅಜಾತಿಯ ನೋಡುವವ ಪಂಚಮಹಾಪಾತಕರುಗಳು
ಕುಂಭೀಮಯ ನರಕದಲ್ಲಿ ಕುಲಕೋಟಿ ಬೀಳುವರು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭೨ ॥

೫೭೭

ಪಾದೋದಕ ಪ್ರಸಾದವ ಕೊಂಡು ಪ್ರಪಂಚವ ಮಾಡುವ
ಪರಸತಿಯರ ಸಂಗವ ಮಾಡುವ ಪಂಚಮಹಾಪಾತಕರು
ನೀವು ಕೇಳಿರೊ.
ಪಂಚಮಹಾಪಾತಕವ ಬಿಟ್ಟದ್ದೇ ಪಾದೋದಕ.
ಅಲ್ಲದಿದ್ದಡೆ ಮುಂದೆ ನಿಮ್ಮ ಬಾಧಿಸುವದಕ್ಕೆ ಕಾದಸೀಸ.
ಪ್ರಸಾದವೆ ಮುಂದೆ ನಿಮ್ಮ ಪೊರೆವುದಕ್ಕೆ ಪರುಷ.
ಪ್ರಪಂಚ ಮುಂದೆ ನಿಮ್ಮ ಪಾಕುಳಕ್ಕೆ ಹಾಕುವುದು.
ಪರಸ್ತ್ರೀಯರ ಸಂಗವೆ ಮುಂದೆ ನಿಮಗೆ ಉರಿಗಿಚ್ಚು, ಇರಿವ ಸುರಗಿ.
ಇಂತಿವ ಬಿಟ್ಟು ಭಕ್ತ ವಿರಕ್ತನಾಗಿ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವ ನಂಬಿದರೆ
ಪರಶಿವ ನಮಗೊಲಿವ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭೩ ॥

೫೭೮

ರಂಡೆಪೆಂಡಿರ ಮಾತ ಕೇಳಿ, ಕಂಡ ಕಂಡ ದೈವವ ಹಿಡಿದು ಬಿಡುವ
ಭಂಡ ಮುಂಡ ಮೂಕೊರತಿ ಮೂಕೊರೆಯರಿರಾ ನೀವು ಕೇಳಿರೊ.
ಖಂಡೇಂದುಧರನ ನಂಬಿ ಕರ್ಮಂಗಳನೀಡಾಡಿ,
ಮಂಡಲದೊಳು ಪವಾಡವ ಮೆರವನ ಕೊಂಡಾಡಿ
ಬದುಕಿರೊ ಬಲ್ಲವರು.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭೪ ॥

೫೭೯

ತಿಥಿ ಮತಿ [ಹಾಳ] ಮಹಳವ ಮಾಡುವ
ಮತಿಗೇಡಿ ಮೂಳಿಗಳು ನೀವು ಕೇಳಿರೊ.
ತಿಥಿಯಲ್ಲಿ ತಿಂಬನೆ ನಿಮ್ಮ ದೇವ ?
ಮತಿಯಲ್ಲಿ ಉಂಬನೆ ನಿಮ್ಮ ದೇವ ?
[ಹಾಳ] ಮಹಳವ ಮಾಡ ಹೇಳುವನೆ ನಿಮ್ಮ ದೇವ ?
ಗುರುಲಿಂಗಜಂಗಮದ ಪಾದಸೇವೆಯಮಾಡಿ
ಬದುಕಿರೊ ಬಲ್ಲವರು

ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೨೫ ॥

೫೮೦

ಕಿರುಕುಳ ದೈವದ ಹರಕೆ ಹಲ್ಲಣೆಯ ಮಾಡುವ
ಕಿವಿಹರಕುಮುರಿಕೆಯ ಮನೆಯ ಅನ್ನ
ನರಕದಾಯಿಡೆಗೆಂದು ಅರಿತು ಭುಂಜಿಸದೆ
ನಿರುತ ವೀರಶೈವ ಭಕ್ತರನು ಬೆರೆತು ಬೆರೆತು
ಬಾಳುವರು ದೇವರ್ಕಚಂದ್ರನುಳ್ಳನಕ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೨೬ ॥

೫೮೧

ಜೆಟ್ಟಿಗ ಬೀರ ಮೈಲಾರನೂ ರೊಟ್ಟಿಯ ಹಬ್ಬ,
ನಾಗರಪಂಚಮಿಯ ಮಾಡುವ ಹೊಲತಿ ಹೊಲೆಯನ ಮನೆಯ ಅನ್ನ
ಕೆರನಟ್ಟಿಗೆ ಸರಿಯೆಂದು ಮುಟ್ಟರು
ನಿಷ್ಠೆ ನಿರ್ವಾಣದ ಬಸವಭಕ್ತರು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೨೭ ॥

೫೮೨

ಗುರು ಬಡವನೆಂದು ಶಿರ ಮಣಿಯದು.
ತಲೆವಾಗದ ನೆರೆ ಪರವಾದಿ ಪಾತಕರ ಮನೆಯ ಅನ್ನ
ಸುರೆಯ ಮಾಂಸದ ಸಮಾನವೆಂದು ಜರೆವರು ಗುರುಹಿರಿಯರು.
ಪರಶಿವ ನಿಮಗೊಲಿಯ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೨೮ ॥

೫೮೩

ಗುರುವು ಉಂಡು ಉಟ್ಟನು, ಇಟ್ಟು, ತೊಟ್ಟನು,
ಕೊಟ್ಟು, ಕೊಂಡಾಡುತಾನೆಂದು ಹೊಟ್ಟೆಯ ಹೊಟ್ಟೆಯ ಹೊಸಕೊಂಬ
ಕೆಟ್ಟ ಹೊಲೆಯರ ಮನೆಯ ಅನ್ನ
ಸುಟ್ಟ ಸುಡುಗಾಡೊಳಗಣ ಅರೆವೆಣ ಕೊರೆವೆಣನೆಂದು
ಮುಟ್ಟರು ಗುರುಪಾದನಿಷ್ಠೆವುಳ್ಳವರು

ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೭೯ ||

೫೮೪

ಕುಲಗೇಡಿ ಖೂಳರಿಗೆ ದೀಕ್ಷವ ಕೊಟ್ಟರೆ ಫಲ ವ್ರತವಿಲ್ಲ.
ಬಲುಕುಂಬಳದ ಕಾಯಿಗೆ ಕಟ್ಟಿ ಹಾಕಿದರೆ
ಕೊಳತಂತಾಯಿತ್ತು ಸಲೆಯವನ ಮನೆಯ ಅನ್ನ.
ಹಲಬರಿಗೆ ಉರುಳುವ ಹದಿನೆಂಟು ಜಾತಿಯ ಸೂಳೆಯಮಗ
ಮಹಳವ ಮಾಡಿದರೆ ಅದು ಗಂಡಗಲ್ಲ ಮಿಂಡಗಲ್ಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೮೦ ||

೫೮೫

ನಚ್ಚು ಮೆಚ್ಚಿಗೆ ಇಚ್ಛೆಯನಾಡಿ
ಉಚ್ಚೆಯ ಕುಡಿವ ಉಪಾಧಿ ಉತ್ತರವು ಪಾತಕರ ನಾಲಗೆ.
ಹಿತ್ತಿಲ ಕಡೆ ಕತ್ತೆ ನಾಯಿ ಬಾಲವ ಬಡಿಕೊಂಬ ಹಾಂಗೆ
ಬಡಿಕೊಂಬವ ಭಕ್ತನಲ್ಲ ವಿರಕ್ತನಲ್ಲ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೮೧ ||

೫೮೬

ಗುರುಹಿರಿಯರ ದರುಶನ ಸ್ಪರುಷನದಲ್ಲಿ
ಇರುವ ಕಟ್ಟಳೆಯ ಕೇಳಿರೊ.
ಭಕ್ತರು ಆಡದ ಆಚಾರ ಗಂಟುಹಾಕಲಾಗದು.
ಗಡ್ಡ ಮೀಸೆಯ ತಿದ್ದಲಾಗದು.
ಮಡ್ಡಮಾತು ಗೀತವನಾಡಲಾಗದು.
ಅಥವ ಆಡಿದರೆ ಅವರ ಸಿರದ ಗುಡ್ಡದ ಬೋಳರ
ಸಮಾನವೆಂದು ಕಂಡು ಸಡ್ಡೆಮಾಡದೆ ಇರುವರು
ಸತ್ಪುರುಷರು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೮೨ ||

೫೮೭

ಗುರುಹಿರಿಯರ ಪಾದಸೇವೆಯ
ನೆರೆ ಮಾಡುವ ಪರಿಯ ಕೇಳಿರೊ ಭಕ್ತರು.

ಮಾಡಿ ನೀಡುವಲ್ಲಿ ಸೊರಗಿ ಸೊಕ್ಕಿ
ಕೆಕ್ಕಸಗೆಲವೃತ್ತ ಮಾಡಲಾಗದು.
ಸಲೆ ಪಂಕ್ತಿಯಲ್ಲಿ ಸಂಚು ವಂಚನೆ
ಸನ್ನೆ ಸಟೆ ಮೈಸಂಜ್ಞೆಯಲುಂಬುದ ಬಿಟ್ಟು
ಪನ್ನಗಧರನ ಶರಣರಿಗೆ ಬಿನ್ನಹವಮಾಡಿ
ಬಿಜಯಂಗೆಯಿಸಿ ತಂದು
ಪರಮಾನ್ನ ಪರಿಮಳದಗ್ಘಣೆಯ ನೀಡುವ ಭಕ್ತರಿಗೆ
ಮುಕ್ತಿ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೮೩ ||

೫೮೮

ಹಲುಬಿ ದಯದ ದಾಸೋಹವ ಮಾಡುವ
ನಿರಾಸ್ಕರರು ನೀವು ಕೇಳಿರೊ.
ಕೇಶ ಜಡೆ ಬೋಳಿನವರ ಕಂಡು
ಓಸರಿಸದೆ ಮಾಡುವುದು ದಾಸೋಹ.
ಅವರಲ್ಲಿ ಆಸೆ ನಿರಾಸೆಯ ನೋಡದೆ
ಸರ್ವೇಶ್ವರನ ಶರಣರಿಗೆ ಮಾಡುವುದೆ ದಾಸೋಹ.
ಇಂತಲ್ಲದಿರ್ದಡೆ ಅವನ ಮನೆಯ
ವೇಶಿಯ ಮನೆಯಹೊಕ್ಕು ಹೊರಟಂತಾಯಿತ್ತು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೮೪ ||

೫೮೯

ಸದಾವರ್ತೆಯಕೊಡುವ ಸದಾವರ್ತಿಗಳು
ನೀವು ಕೇಳಿರೊ.
ಉದಯಾಸ್ತಮಾನದೊಳು ಬಂದವರ
ಸದನದ ಮುಂದೆ ನಿಲಿಸಿಕೊಂಡು
ಹದವಿಗೆ ಹಾಕಿ ಮಾಡುವ ಮಾಟ ಸದಾವರ್ತೆಯೆ ? ಅಲ್ಲ.
ಇದು ಕಾರಣ ಬಂದ ಬರವ
ನಿಂದ ನಿಲುಕಡೆಯನರಿತು ಮಾಡುವುದೆ ಸದಾವರ್ತೆ.
ಇಂತಲ್ಲದಿದ್ದರೆ ಅದು ಸದಾವರ್ತೆಯಲ್ಲ.

ಅವನ ಮನೆಯ ಅನ್ನ ಸೆದೆ ಸೊಪ್ಪು ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮೫ ॥

೫೯೦

ಮಂಡಲದೊಳಿರ್ದು ಪರಸಮಯವ ಗೆದ್ದು,
ಕೈಲಾಸದೊಳಿದ್ದ ಶರಣರ ಕೊಂಡಾಡಿ
ಕುಣಿಕುಣಿದಾಡಿ ಸುಖದೊಳು ಮುಳುಗಾಡಿ
ಬಾಳುವ ಭಕ್ತರು ನೀವು ಕೇಳಿರೊ.
ಖಂಡೇಂದುಧರನು ಕದ್ದು ಮರೆಹೊಕ್ಕರೆ ಕೊಡದೆ
ಮಡದಿ ಮಕ್ಕಳು ಮಂಡೆಯ ಹಂಗಿಲ್ಲದೆ
ಸೂಲಕೆ ಬಿದ್ದು ಚಿಗುರಿಸಿ ಮೆರದರು
ನಮ್ಮ ಗುಂಡಬ್ರಹ್ಮಯ್ಯಗಳಿಗೆ ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮೬ ॥

೫೯೧

ಧರೆಯನಾಳುವ ಪರವಾದಿ ಬಿಜ್ಜಳನು
ಮಡಿವಾಳಯ್ಯಗಳು ಕರೆಯಕಳುಹಿದರೆ
ಬಾರದಿರಲು ಪಟ್ಟದಾನೆಯ ಮೇಲೆ
ಪರಿಪರಿಬಣ್ಣ ಸಣ್ಣವಸ್ತ್ರವ ಹೇರಿಸಿ
ಶರಧಿಯ ಮುಂದೆ ನೀ ನೂಕಿ ಬಾಯೆಂದು ಕಳುಹಲು,
ಬರುವ ಪಟ್ಟದಾನೆಯ ಕಂಡು ಕಂಗೆಡದೆ
ಕಡೆಗೋಡದೆ ತಟ್ಟನೆ ಸೀಳಿ ನಿಟ್ಟೆಲುವ ಮುರಿದು
ಹೊದಕೆಯ ಮುರಿಗಿ ಮಾಡಿ ತಲೆಯ ಹರಿಯಲಿಟ್ಟು
ಮಕೂಲವ ಸುಟ್ಟು ಪರಿಚಾರರ ನೆರೆಯಟ್ಟಿ
ತಲೆಗಳ ಕುಟ್ಟುವದ ಕೇಳಿ ಕಂಗೆಟ್ಟು ಕಾಲಿಗೆರಗಲು
ಕರುಣವ ಪಡೆದ ನಿಷ್ಠೆಯ ವೀರಮಡಿವಾಳಯ್ಯಗಳಿಗೆ
ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮೭ ॥

೫೯೨

ಕಂದನಕೊಂದು ಶಿವಗುಣಲಿಕ್ಕಿ ಕರುಣವ ಪಡದು
ಕಂಚಿಯಪುರವ ಕೈಲಾಸಕೊಯಿದ ಸಿರಿಯಾಳ-ಚಂಗಳೆ.
ಸಿಂಧುಬಲ್ಲಾಳ ಶಿವಗೆ ಸತಿಯಕೊಟ್ಟರೆ ಶಿವ ಶಿಶುವಾದ,
ಬಲ್ಲಿದ ಗಣಪತಿಯಾದ.
ತಂದೆಯ ತಲೆಯ ಹೊಡೆದು ತಡೆಯದೆ
ರಜತಗಿರಿಗೆಯಿದಿದ ಗೊಲ್ಲಾಳ, ಸಿರಿಯಾಳ ಸಿಂಧುಬಲ್ಲಾಳಂಗೆ
ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮೮ ॥

೫೯೩

ಕಾಳಗದೊಳು ಜೆಡೆವಲೆಗೆ ಮುಡಿವಲೆಯಕೊಟ್ಟ.
ಫಾಳಾಂಬಕನ ಪಾದವ ಕಂಡು ಚೋಳರಾಯ,
ಏಳುನೂರುಯೆಪ್ಪತ್ತೇಳು ಚಿನ್ನದ ಹರಿವಾಣದಲ್ಲಿ
ಮೇಳೈಸಿ ಪಂಚಪಾಯಸ ಪಂಚಕಜ್ಜಾಯ
ಪರಿಪರಿ ಪದಾರ್ಥ ಭಕ್ಷ್ಯನ್ನವನೆಡೆ ಮಾಡಿ
ಘೃತವ ನೀಡಿ ಕಣ್ಣುತುಂಬಿ ನೋಡಿ
ಹಮ್ಮನಾಡಿದರೆ ಅವನ ಜರದು
ಮಾದಾರ ಚೆನ್ನಯ್ಯನಲ್ಲಿಗೆ ಹೋಗಿ
ಜುರುಜುರುತ ಅಂಬಲಿ ಸೊಂಡಿಲಿಕ್ಕನೆ
ಸುರುಕು ಸುರುಕು ಸುರುಕೆನೆ ಸುರಿದು
ಅಮೃತಕ್ಕೆ ಸರಿಯೆಂದು ಪರಿಶಿವನೊಲಿದುಕೊಂಡಾಡಿದ
ಮಾದಾರ ಚೆನ್ನಯ್ಯಂಗೆ ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮೯ ॥

೫೯೪

ಸೃಷ್ಟಿಯೊಳು ಘೋರಿಟ್ಟು ಹರಿವ ಶರಧಿಯ ಕಂಡು
ಅಂಗದಟ್ಟವ ಹಾಕಿ ದಾಟಿ
ಸರ್ಪರಿಗೆ ಲಿಂಗವ ಕಟ್ಟಿ
ಪ್ರವುಡನ ಪಟ್ಟದಾನೆಗೆ ಭಸಿತವನಿಟ್ಟು ನಿಲಿಸಿದ

ಕರಸ್ಥಲದದೇವರಿಗೆ ಮಿಡಿಬೀರದೆ ಲಿಂಗವಕಟ್ಟಿ
ಕಡೆಗಿಟ್ಟರೆ ಪ್ರಾಣಹೋದ ಬಳಿಕ ಆ ಲಿಂಗವ ಕಟ್ಟಿದರೆ
ಬದುಕುವ ಪ್ರಾಣಲಿಂಗಾಂಗಿ ಮರುಳಶಂಕರದೇವರಿಗೆ
ಶರಣು ಶರಣಾರ್ಥಿ
ಅಖಂಡಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೯೦ ॥

೫೯೫

ಕತ್ತಿಯ ಕಟ್ಟಿ ಗರ್ದ್ವಿಸಿ ಕಾಳಗದೊಳು ಕುಳಿಯ ಗೆದ್ದು
ಪ್ರಾಣವ ತುಂಬಿ ಕೈಲಾಸಕಟ್ಟುವ
ಕೂಳಿಯ ಮರುಳಶಂಕರದೇವರಿಗೆ
ಬಿಟ್ಟಮಂಡೆಯ ಗಂಗಾಧರದೇವರಿಗೆ
ಪಟ್ಟವ ತೊರದು ಗಂಡನ ಜರದ ಅಕ್ಕಮಹಾದೇವಿಗೆ
ನಿಷ್ಠೆ ನಿರ್ವಾಣ ಬೋಳೇಶ್ವರದೇವರಿಗೆ
ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೯೧ ॥

೫೯೬

ಚೆನ್ನಯ್ಯ ನನ್ನಯ್ಯ ಸುಜ್ಞಾನ ಅನ್ನದದೇವರಿಗೆ
ಚೆನ್ನಬಸವಣ್ಣ ಚೇರಮರಾಯ ನಂಬೆಣ್ಣಗೆ
ಅಲ್ಲಮ ಅಜಗಣ್ಣ ಜಗದೇವಯ್ಯ ಮಲುಹಣ ಮಲುಹಣಿಗೆ
ಮಹಾದೇವನೊಲಿದ ಮಹಿಮ ಮಹಾತ್ಮರಿಗೆ
ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೯೨ ॥

೫೯೭

ದಂಡನಾಯಕ, ದಾಸಿಮಯ್ಯಗೆ
ಶ್ರೀಪಂಡಿತರಿಗೆ ಕೊಂಡಗುಳಿ ಕೇಶಿರಾಜ ಕೊಮಾರದೇವರಿಗೆ
ಕಲಿಗಣನಾಥ ಮಳೆಯರಾಜ
ಹಲಾಯುಧ ಸಾಮವೇದಿ ಶ್ವಪಚಯ್ಯಗಳಿಗೆ
ಶರಣು ಶರಣಾರ್ಥಿ

ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೩ ||

೫೯೮

ಶಂಕರದಾಸಿಮಯ್ಯಗೆ ಸುಂಕದಬಂಕಯ್ಯಗೆ
ಶಿವಲೆಂಕಮಂಚಣ್ಣಗೆ ಶಿವರಾತ್ರಿಯಯ್ಯಗಳಿಗೆ
ಸಿದ್ಧರಾಮಯ್ಯಗಳಿಗೆ ಚಿಮ್ಮುಲಿಗೆಯ ಚಂದಯ್ಯ
ಚಿಕ್ಕಯ್ಯ ಡೋಹರ ಕಕ್ಕಯ್ಯ
ಒಕ್ಕುಮಿಕ್ಕ ಪ್ರಸಾದವಯಿಕ್ಕೆಯ್ಯಲ್ಲಿ ಕೊಂಬ ಅಕ್ಕನಾಗಾಯಿಗೆ
ಹರಳಯ್ಯ ಮಧುವಯ್ಯ ಬಳ್ಳೇಶ್ವರಯ್ಯಗಳಿಗೆ
ಹಾವಿನಾಳ ಕಲ್ಲಯ್ಯಗಳಿಗೆ ಸರವೂರ ಬಂಕಯ್ಯಗೆ
ಸುರಗಿಯ ಚೌಡಯ್ಯಗೆ ಪರಿಪರಿಯ ಶರಣರಿಗೆ
ಶರಣು ಶರಣಾರ್ಥಿ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೪ ||

೫೯೯

ಸೆರಗೊಡ್ಡಿ ಬೇಡಿಕೊಂಬೆನು
ಸರಿದಪ್ಪನು ಪೇಳದೆ ನೆರೆಬಲ್ಲ ಗುರುಹಿರಿಯರು
ಭಕ್ತ ವಿರಕ್ತರುವೊಪ್ಪುವುದು.
ಅಮ್ಮವ್ವೆ ರೆಮ್ಮವ್ವೆ ವೈಜವ್ವೆ ನಿಂಬವ್ವೆ
ಮುಗ್ಗಳವ್ವೆ ಮಾಂಗಾಯಕ್ಕರಸಿಗಳು
ನೀಲಲೋಚನೆ ಕೋಳೂರ ಕೊಡಗೂಸು
ಹೇರೂರ ಹೆಣ್ಣು ಕದಿರರೆಬ್ಬವ್ವೆ ಪಿಟ್ಟವ್ವೆ ಸತ್ಯಕ್ಕ
ಇಂತೀ ತೆತ್ತೀಸಕೋಟಿ ಸತ್ಯಶರಣರು
ಈ ವಚನದ ಅರ್ಥವ ಮಾಡಿ ಅನುಭವಿಸಿ
ನಿಮ್ಮ ಶಿಶುವೆಂದು ಕರಿಯಬಸವನ ಎತ್ತಿಕೊಂಬುದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೫ ||

೬೦೦

ಅಷ್ಟವಿಧಾರ್ಚನೆ ಷೋಡಶೋಪಚಾರವು
ಮನದೊಳಗೆ ಮಾಡುವ ಲಿಂಗಾಂಗಿಯ ನೋಡಿ.
ಆತನ ಸಮತೆ ಸಜ್ಜನವೆ ಸಮ್ಮಾರ್ಜನೆ,

ಅಂತರಂಗದ ಶುದ್ಧವೆ ರಂಗವಾಲಿ,
ಮನವ ನಿಲಿಸಿದ್ದೆ ಮಜ್ಜನ, ತನುವ ಮರ್ದಿಸಿದ್ದೆ ಗಂಧ,
ಅಹಂಕಾರವಳಿದುದೆ ಅಕ್ಷತೆ, ಪೂರ್ವವಳಿದುದೆ ಪುಷ್ಪ,
ಪ್ರಪಂಚನಳಿದುದೆ ಪತ್ರೆ, ದುರ್ಗುಣವಳಿದುದೆ ಧೂಪ,
ಸುಗುಣವುಳಿದುದೆ ದೀಪ, ಅಷ್ಟಮದವಳಿದುದೆ ಆರೋಗಣೆ,
ಅರಿಷಡುವರ್ಗವನಳಿದುದೆ ಆ ಹಸ್ತಕ್ಕೆ ಅಗ್ಘಣೆ,
ವಿಷಯವಿಕಾರವನಳಿದುದೆ ಕರ್ಪುರ ವೀಳ್ಯ,
ಸಪ್ತವ್ಯಸನವನಳಿದುದೆ ಆ ಸಹಭೋಜನ,
ದಶವಾಯುವ ದೆಸೆಗೆಡಿಸಿದುದೆ ದಾನ -ಧರ್ಮ,
ಹಸಿವು ತೃಷೆ ನಿದ್ರೆ ನೀರಡಿಕೆ ಜಾಡ್ಯ ಸ್ತ್ರೀಸಂಯೋಗ
ಕಳವಳವಿಲ್ಲದಿದ್ದುದೆ ಜಪತಪ.
ಪಂಚೇಂದ್ರಿಯ ಪ್ರಪಂಚು ಹೊದ್ದದಿದ್ದುದೆ ಪಂಚಮಹಾವಾದ್ಯ,
ಪ್ರಕೃತಿ ಪಲ್ಲಟವಾದುದೆ ಪಾತ್ರಭೋಗ,
ಗೀತ ಪ್ರಬಂಧ ಕರಣವೆ ಸಿಂಹಾಸನ ಏರುವ ಸುಖ,
ವ್ಯಸನ ಚಂಚಲತೆಯನಳಿದುದೆ ಛತ್ರಚಾಮರ,
ಶೀರ್ಷಶಿವಾಲ್ಯದೊಳಿಪ್ಪ ಪರಮಗುರು
ಪರಂಜ್ಯೋತಿ ಪರಶಿವ ಪರಕ್ಕೆ ಪರವಾದ
ಶ್ರೀ ಪಟ್ಟುಕಂಥೆಯ ಚೆನ್ನಬಸವೇಶ್ವರದೇವರ
ಶ್ರೀಪಾದಾಂಗುಲಿಗೆ ಈ ವಚನವ,
ಪುಣ್ಯಪುಷ್ಪವಮಾಡಿ ಅರ್ಪಿಸುವ
ಕುಷ್ಟಗಿಯ ನಿರ್ವಾಣ ಕರಿಬಸವರಾಜದೇವರು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೬ ||

೬೦೧

ಚಿತ್ತಸದ್ಗತಿಯ ವಚನವ ಬರೆದೋದಿ ಕೇಳಿದವರಿಗೆ
ಮತಿಯ ಕೊಡುವ ಮಹೇಶ ಗುರುಬಸವೇಶ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೭ ||

೬೦೨

ಚಿತ್ತಸದ್ಗತಿಯ ವಚನವ
ನೂರೊಂದು ಸಾರಿ ಪೇಳಿದ ವೀರ ವಿಜೇಯ

ಕರಿಬಸವರಾಜದೇವರು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೮ ||

## ಪರಿಶಿಷ್ಟ :

೬೦೩

ಪಾದಪೂಜೆಯೆಂಬುವುದು ಅಗಮ್ಯ-ಅಗೋಚರ- ಅಪ್ರಮಾಣ !
ಶ್ರೀಗುರುಬಸವೇಶ್ವರದೇವರು ತಮ್ಮ ಅಂತರಂಗದಲ್ಲಿರ್ದ
ತೀರ್ಥಪ್ರಸಾದಮಂ ಗಣಸಮೂಹಕ್ಕೆ ಸಲ್ಲಲೆಂದು ನಿರ್ಮಿಸಿ
ಭಕ್ತಿ ತೊಟ್ಟು ಮೆರದರು.
ಇಂತಪ್ಪ ತೀರ್ಥಪ್ರಸಾದವ ಸೇವಿಸುವ ಕ್ರಮವೆಂತೆಂದಡೆ-
ಗ್ರಾಮದ ಮಠದಯ್ಯ, ಮಠಪತಿ, ಓದಿಸುವ ಜಂಗಮ,
ಹಾಡುವ ಜಂಗಮ, ಆಡುವ ಜಂಗಮ, ಬಾರಿಸುವ ಜಂಗಮ,
ಅಗಹೀನ, ಅನಾಚಾರಿ, ಕಂಬಿಕಾರ, ಓಲೆಕಾರನಾಗಿಹ,
ವಾದಿಸುವನು, ಗರ್ವಿಸುವವನು, ಅಹಂಕಾರಿ, ದಲ್ಲಾಲ,
ವೈದಿಕ, ಧನಪಾಲ, ಉದ್ಯೋಗಿ, ನಾನಾ ವಿಚಾರವ ಹೊತ್ತು,
ಕಾಣಿಕಿಗೆ ಒಡೆಯರಾಗಿ ಚೆಂಗಿತನದವರು, ಪರಿಹಾಸಕದವರು,
ಮರುಳು ಮಂಕುತನ ಮಾಡುವ[ವರು],
ಪಟ್ಟಾಧಿಪತಿಯೆಂದೆನಿಸಿ, ಚರಮೂರ್ತಿಯೆಂದೆನಿಸಿ, ವಿರಕ್ತರೆಂದೆನಿಸಿ,
ನಾಸಿ, ತೊಂಬಾಕ, ಭಂಗಿ, ಮಾಜೂಮ,
ಗಂಜಿ ಅರವಿ, ಅಪು ಹೊದಿಕೆ[ಯವರು],
ಹಲ್ಲುಮುರುಕ, ಉದ್ದೇಶಹೀನ, ಬೆಚ್ಚಿದವ, ಚುಚ್ಚಿದವ, ಕಚ್ಚಿದವ,
ಬೆಳ್ಳಿಬಂಗಾರ ಹಲ್ಲಣಿಸಿಕೊಂಡ ಭವಿಸಂಗ, ಕರ್ಣಹೀನ, ಮೂಕ, ನಪುಂಸಕ,
ವೀರಣ್ಣ, ಬಸವಣ್ಣ, ಸ್ಥಾವರದೈವಂಗಳಿಗೆ ತೀರ್ಥಕುಡುವ, ಉಡಕಿ, ಸೋಹಿ
ಬಯಲಾದ ಜಂಗಮಕ್ಕೆ ಕಟಕಟೆಯಿಟ್ಟು ಹಾವಿಗೆಯಿಟ್ಟು
ಧೂಳತಿಟ್ಟು ಗೊರವನಂತೆ ಪೂಜೆ ಮಾಡಿಸುವ-
ಇಂತಿಪ್ಪ ಅಜ್ಞಾನಿಜಂಗಮರಲ್ಲಿ ಪಾದೋದಕ ಪ್ರಸಾದವ ಕೊಳಲಾಗದು !
ಅಥವಾ ಕೊಂಡಡೆ ಕೊಟ್ಟಾತಂಗೆ ದೋಷ, ಕೊಂಡಾತಂಗೆ ಪಾಪ !
ತ್ರಿನೇತ್ರಪಿರ್ದಡು ಕೊಳಲಾಗದು
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. || ೯೯ ||

■■

## ಕೂಡಲಸಂಗಮೇಶ್ವರನ ವಚನ

೬೦೪

ಎಲಾ ಶಿವಭಕ್ತನೇ ನೀ ಕೇಳು :
ಬರಿದೆ 'ನಾ ಶಿವಭಕ್ತ' 'ನೀ ಶಿವಭಕ್ತನೆ'ಂದು ತಿರುಗುವಿರಲ್ಲ
ಶಿವಭಕ್ತಿಯ ನೆಲೆಯ ಬಲ್ಲಿರೇನಯ್ಯಾ ?
ಅದು ಎಂತೆಂದರೆ :
ಶಿವಭಕ್ತನಾದ ಬಳಿಕ
ತ್ರಿವಿಧ ಪದಾರ್ಥವನ್ನು ತ್ರಿವಿಧರಿಗೆ ದಾನವ ಕೊಡಬೇಕು :
ತನುವ ಕೊಡಬೇಕು ಗುರುವಿಗೆ ;
ಮನವ ಕೊಡಬೇಕು ಲಿಂಗಕ್ಕೆ :
[ಧನವ ಕೊಡಬೇಕು ಜಂಗಮಕ್ಕೆ].
ತ್ರಿವಿಧ ಪದಾರ್ಥವನ್ನು ತ್ರಿವಿಧರಿಗೆ ದಾನವ ಕೊಟ್ಟು,
ನಿಷ್ಕಳಂಕವೇ ತಾನಾಗಿ, ಆರು ಚಕ್ರವ ಹತ್ತಿ,
ಮೀರಿದ ಸ್ಥಲದೊಳಗಿರ್ಪ ಲಿಂಗಮಂ ಪೂಜಿಸಿ,
ಮೋಕ್ಷಮಂ ಪಡೆದಡೆ,
ಶಿವಭಕ್ತನೆಂದು ನಮೋ ಎಂಬುವೆನಯ್ಯಾ.
ಬರಿದೆ 'ನಾ ಶಿವಭಕ್ತ' 'ನೀ ಶಿವಭಕ್ತನೆ'ಂದು ತಿರುಗುವ,

ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚೆನ್ನಸಂಗಮದೇವಾ ! ॥ ೧ ॥

೬೦೫

ಎಲಾ ಬ್ರಾಹ್ಮಣಾ ನೀ ಕೇಳು :
ಬರಿದೆ 'ನಾ ಬ್ರಾಹ್ಮಣ' 'ನೀ ಬ್ರಾಹ್ಮಣನೆ'ಂದು ತಿರುಗುವಿರಲ್ಲದೆ,
ಬ್ರಹ್ಮದ ನೆಲೆಯ ಬಲ್ಲಿರೇನಯ್ಯಾ?
ಅದು ಎಂತೆಂದಡೆ :
ವೇದಮಯವಾಗಿರ್ಪುದೇ ಬ್ರಹ್ಮ;
ಬ್ರಹ್ಮಮಯವಾಗಿರ್ಪುದೇ ವೇದ.
ಇಂತೀ ಚತುರ್ವೇದ ಪ್ರಕರಣಮಂ ಓದಿ
ಹಾದಿಯಂ ತಪ್ಪಿ
ಬೀದಿಯ ಸೂಳೆ[ಯ] ಹಿಂದೆ ತಿರುಗಿದ ಬಳಿಕ
ನಿನಗೆ ಬ್ರಹ್ಮತ್ವವು ಎಲ್ಲೈತೆಲಾ?
ಬ್ರಹ್ಮತ್ವವು ದಾವುದೆಂದಡೆ ಪೇಳುವೆನು ಕೇಳೆಲಾ:
ವೇದದೊಳಗಣ ತತ್ತ್ವಸಾರವನು ತೆಗೆದು,
ಗುರುಪಥವು ಅನುಸರಣೆಯಾಗಿ,
ನಿಜಮಾರ್ಗವ ಕಂಡು ನಿತ್ಯತ್ವ ನೀನಾಗಿ,
ನಿರುಪಮ ನಿರ್ಮಾಯ ನಿರ್ವೇದ ವಸ್ತುವ ತಿಳಿದು,
ಸಾಧುಸಜ್ಜನರೊಡನಾಡಿ ಸಾಕ್ಷಾತ್ಕಾರವಾಗಿ,
ಸಾಯುಜ್ಯ ಸಾಮಿಪ್ಯ ಪಥಮಂ ಕಂಡುಳಿದು,
ಆರು ಚಕ್ರವ ಹತ್ತಿ,
ಮೀರಿದ ಸ್ಥಲದೊಳಗಿರ್ಪ ಲಿಂಗಮಂ ಪೂಜಿಸಿ,
ಮೋಕ್ಷಮಂ ಪಡೆದಡೆ,
ಬ್ರಾಹ್ಮಣನೆಂದು ನಮೋ ಎಂಬುವೆನಯ್ಯಾ.
ಬರಿದೆ ಬಡಿವಾರಕ್ಕೆ ಮಿಂದುಟ್ಟು
'ನಾ ಬ್ರಾಹ್ಮಣ' 'ನೀ ಬ್ರಾಹ್ಮಣನೆ'ಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ,
ಕೂಡಲಾದಿ ಚೆನ್ನಸಂಗಮದೇವಾ ! ॥ ೨ ॥

೬೦೬

ಸೂಳೆಯ ತನುಮನದ ಕೊನೆಯಲ್ಲಿ
ವಿಟಗಾರನೇ ಪ್ರಾಣಲಿಂಗ:

ಶೀಲವಂತನ ತನುಮನದ ಕೊನೆಯಲ್ಲಿ
ಭವಿಯೇ ಪ್ರಾಣಲಿಂಗ ;
ನಿತ್ಯ ಪ್ರಸಾದಿಯ ತನುಮನದ ಕೊನೆಯಲ್ಲಿ
ಬೆಕ್ಕೇ ಪ್ರಾಣಲಿಂಗ ;
ಬ್ರಾಹ್ಮಣರ ತನುಮನದ ಕೊನೆಯಲ್ಲಿ
ಸೂತಕವೇ ಪ್ರಾಣಲಿಂಗ;
ಇಂಥವರಿಗೆಲ್ಲಾ ಇಂತಾಯಿತು!
ದೇವರಗುಡಿಯೆಂದು ದೇಗುಲವ ಪೊಕ್ಕು
ನಮಸ್ಕಾರವ ಮಾಡುವಂಗೆ
ಹೊರಗೆ ಕಳೆದ ಪಾದರಕ್ಷೆಯೆ ಪ್ರಾಣಲಿಂಗ.
ಅದು ಎಂತೆಂದಡೆ :
ಸೂಳೆಗೆ ವಿಟನ ಹಂಬಲು;
ಶೀಲವಂತನಿಗೆ ಭವಿಯ ಹಂಬಲು;
ನಿತ್ಯಪ್ರಸಾದಿಗೆ ಬೆಕ್ಕಿನ ಹಂಬಲು ;
ಬ್ರಾಹ್ಮಣನಿಗೆ ಸೂತಕದ ಹಂಬಲು ;
ಇವರು ಭಕ್ತಿಶೂನ್ಯರು ಕಾಣಿರಯ್ಯಾ !
ಇವಂ ಬಿಟ್ಟು,
ಪರಸ್ತ್ರೀಯರ ಮುಟ್ಟದಿರ್ಪುದೇ ಶೀಲ ;
ಪರದ್ರವ್ಯ[ವ] ಅಪಹರಿಸದಿರುವುದೇ ಆಚಾರ ;
ಪರನಿಂದೆ[ಯ] ಕರ್ಣದಿಂ ಕೇಳದಿರ್ಪುದೇ ನಿತ್ಯಪ್ರಸಾದತ್ವ ;
ಪರರಂ ದೂಷಿಸದಿರ್ಪುದೇ ಬ್ರಹ್ಮತ್ವ.
ಇಂತಿದರಲ್ಲಿ ನಡೆದು,
ದೇವರಿಗೆ ನಮಸ್ಕಾರವ ಮಾಡುವುದೇ ನಮಸ್ಕಾರ.
ಹಿಂದಿನ ಪುರಾತನರು ನಡೆದರೆಂಬೋ ಶಾಸ್ತ್ರವಂ ಕೇಳಿ,
ಈಗಿನ ಕಿರಾತರು 'ನಾವು ಶೀಲವಂತರು'
'ನಾವು ಆಚಾರವಂತರು', 'ನಾವು ನಿತ್ಯಪ್ರಸಾದಿಗಳು',
'ನಾವು ೧['ಪೂಜಸ್ಥರು']೧, 'ನಾವು ಬ್ರಾಹ್ಮಣರು'. ಎಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ ! ॥ ೩ ॥

೧. 'ಪೂಜ್ಯಸ್ಥಲ' (ಮೂ)

೬೦೭

ಎಲಾ, ಸೂಳೆಮಗನೇನ ಬಲ್ಲನಯ್ಯಾ
ಕುದುರೆಯಾ ಕುರುಹನು ?
ಶೀಲವಂತನೇನ ಬಲ್ಲನಯ್ಯಾ
ಗುರುಲಿಂಗ ಜಂಗಮದ ಕುರುಹನು ?
ಗುರುಲಿಂಗ ಜಂಗಮವು ಮನೆಗೆ ಬಂದು
ಬೀಯೆಂಬೋ ಪಾಪವು ಕ್ಷಯವಾಗಲೆಂದು
'ಭಿಕ್ಷಾ' ಎಂದು ನಿಂದಡೆ
'ಅಯ್ಯಾ ನಮ್ಮ ಹಿರಿಯರು ಬಂದಿಲ್ಲಾ'
'ನಮ್ಮ ಕಟ್ಟುಬಿನ್ನದ ಜಂಗಮವು ಬಂದಿಲ್ಲಾ'
'ಇನ್ನೂ ಶೀಲವು ತೀರಿಲ್ಲಾ, ತಿರುಗಿ ಬಾ'
ಎಂದು ಹಿಂದಕ್ಕೆ ಕಳುಹಿದಡೆ
ಜಂಗಮದ ನೆಲೆ ಯಾವುದೆಲಾ ?
ಶೀಲವಂತನಿಗೆ ಶೀಲ ಯಾವುದೆಂದಡೆ,
ಅದಂ ಪೇಳ್ವೆ ಕೇಳು :
ಪರಕ್ರೂರತ್ವವ ಮರೆದು,
ಪರಭೋಗದಭಿಲಾಷೆಯ ಬಿಟ್ಟು,
ಪರಮ ವಿರಕ್ತಿಯಂ ಅಂಗೀಕರಿಸಿ,
ಪಾಪಮಂ ಮುಟ್ಟಿನೋಡದೆ ಕಾಣದೆ ಕೇಳದೆ
ನಿರ್ಲಿಪ್ತನಾಗಿ ನಿಜವಸ್ತುವಾದಾ
ಶಿವಲಿಂಗ ಜಂಗಮವು ಮನೆಗೆ ಬಂದಡೆ
ಅನ್ನ ಅಗ್ಗಣಿಯ ಕೊಟ್ಟು ತೃಪ್ತಿಯ ಬಡಿಸಿ
ನಿತ್ಯತ್ವನಾಗಿ ಮೋಕ್ಷವ ಕಂಡಡೆ,
ಶೀಲವಂತನೆಂದು ನಮೋ ಎಂಬುವೆನಯ್ಯಾ.
ಬರಿದೆ, 'ನಾ ಶೀಲವಂತ' 'ನೀ ಶೀಲವಂತ'ನೆಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ ! || ೪ ||

೬೦೮

ಎಲಾ, ಪರಮ ಪಾವನಚರಿತ
ಪಾರ್ವತೀಶ ಪಾಪನಾಶ ಪರಮೇಶ ಈಶ.
ಇಂತಪ್ಪ ಈಶನು ಭಕ್ತನಾ ಕರಸ್ಥಲದಲ್ಲಿ ಬಂದ ಬಳಿಕ

ಭಕ್ತನೇ ದೊಡ್ಡಿತ್ತು ಕಾಣೆಲಾ !
ಇಂತಪ್ಪ ಭಕ್ತನಾ ಶರೀರಕ್ಕೆ ರೋಗ ಬಂದರೆ,
ಬಳಿಕ ವೈದ್ಯನಾ ಕರೆಸಿ, ಮಹಾವೈದ್ಯವಾ ಮಾಡಿಸಿ,
ವೈದ್ಯ ಭಾಗವ ತೆಗೆದು, ವೈದ್ಯ ಸೇವಿಸಿ,
ಮಿಕ್ಕ ಎಂಜಲ ತಿಂದು ಬದುಕೇನೆಂಬೋ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ ! ॥ ೫ ॥

೬೦೯

ಅಯ್ಯಾ, ಯತಿಯತ್ವವ ಪಡೆದೆನೆಂಬೋ ಮನುಜನೇ, ನೀ ಕೇಳು :
ನಿನ್ನ [1]ಯತಿಯತ್ವ[1]ದ ಬಗೆ ಎಂತೆಲಾ ?
ಬರಿದೆ ದ್ರವ್ಯಕ್ಕೆ ಆಶೆಮಾಡಿ,
ಪರರ ಕಾರ್ಪಣ್ಯದಿಂದ ಕಾಡಿ ಬೇಡಿ,
ದ್ರವ್ಯವ ಗಳಿಸಿಕೊಂಡು, ಜನರ ಕಟ್ಟಿಕೊಂಡು
ಬಡಿವಾರದಿಂದ ತಿರುಗಿದ ಬಳಿಕ,
ನಿನಗೆ ಯತಿಯತ್ವವು ಎಲ್ಲೈತೆಲಾ ?
ಅದು ಎಂತೆಂದರೆ, ಯತಿಯತ್ವವ ಪೇಳುವೆನು ಕೇಳೆಲಾ :
ಯತಿ ನೀನಾದ ಬಳಿಕ
ತನುವಿನ ಹಂಗು ಹರಿಯಬೇಕು :
ಮನವ ಘನಲಿಂಗಕ್ಕೆ ಕಟ್ಟಿಹಾಕಬೇಕು :
ಧನವ ಸ್ವಪ್ನದಲ್ಲಿ ಮುಟ್ಟಲಾಗದು :
ಅನ್ನದ ಆಸೆಯ ಬಿಡಬೇಕು ;
ಚಿನ್ಮಯನಾಗಿ ನಡೆಯಬೇಕು ;
ಚಿಂತೆಯ ಮರೆತು ವೈರಾಗ್ಯದಿಂದಿರಬೇಕು ;
ಕಾಮದ ಹಂಗ ಕಳೆಯಬೇಕು :
ಕರ್ಮೇಂದ್ರಿಯಂಗಳ ಸುಡಬೇಕು ;
ಲಿಂಗದಲ್ಲಿ ಕರುಣ ಇರಬೇಕು.
ಸ್ಫಟಿಕದಂತೆ ನಿರ್ಮಳ ಕಾಯನಾಗಿ, ನಿಶ್ಚಿಂತನಾಗಿ, ಮೋಕ್ಷವ ಕಂಡವ
ಯತಿವರನೆಂದು ನಮೋ ಎಂಬುವೆನಯ್ಯಾ !
ಬರಿದೆ ಯತಿ ಎನಿಸಿಕೊಂಡು

೧-೧ ಇದರ ಸರಿಯಾದ ಪಾಠ 'ಯತಿತ್ವ' ಎಂದಿರಬೇಕು.

ಕೋಪಾಟೋಪದೊಳು ಬಿದ್ದು ಹೊರಳಾಡುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ. ॥ ೬ ॥

೬೧೦

'ಷಟುಸ್ಥಲದ ಬ್ರಹ್ಮಿಗಳೆ'ಂದು ಹೇಳಿಕೊಂಬಿರಿ,
ನೀವು ಕೇಳಿರಯ್ಯಾ :
ನಿಮ್ಮ ಷಟುಸ್ಥಲದ ಬ್ರಹ್ಮಿಗಳ ಲಕ್ಷಣ ದಾವುದೆಂದಡೆ,
ಅಂಗಲಿಂಗ ಸಂಬಂಧವಾದುದೇ ಷಟುಸ್ಥಲ.
ಅಂಗ ಲಿಂಗವಾದ ಪರಿ ಎಂತೆಂದಡೆ,
ಲಿಂಗ ಪೋದುದೇ ಷಟುಸ್ಥಲ:
ಗ್ರಂಥ ॥ ಅನಾದಿ ಸಂಸಿದ್ಧಸ್ಯ ಆತ್ಮಪರೀಕ್ಷಣಂ ಜಗತಾರಾ[ಧ್ಯಸ್ಯ] ।
ಸತ್ಯಂ ಜನನಮರಣವಿರಹಿತಂ [ಇತಿ]ಷಟ್‌ಸ್ಥಲಂ ॥
ಇಂತೀ ಸಾಕ್ಷಿ ಉಂಟಾಗಿ,
ಪರಾನ್ನ ಅಪೇಕ್ಷಿತನಾಗದೆ,
ಪರಸ್ತ್ರೀಯಂ ನೋಡದೆ,
ಪರರೊಡವೆಯ ಹಂಗು ಹಚ್ಚದೆ,
ಪರಾತ್ಪರವಾಗಿಪ್ಪುದೆ ಜಂಗಮ ಲಿಂಗ.
ಪರಮ ಹರುಷದಿಂದ ಪಾತಕವನೀಡಾಡಿ,
ಪರ[ಮ] ಪುರುಷಾರ್ಥವನೇ ಗ್ರಹಿಸಿ,
ಪಾವನಚರಿತನಾಗಿ, ಭಕ್ತನ ಮನೆಗೆ ನಡೆದು ಬಂದು
ಬೀಯೆಂಬೋ ಪಾಪವು ಕ್ಷಯವಾಗಲೆಂದು
'ಭಿಕ್ಷಾ' ಎಂದು ನಿಂದಡೆ,
ಅರಿದ ಭಕ್ತ ನೀಡಿದರೂ ಸಂತೋಷ
ಅರಿಯದಿದ್ದ ಭಕ್ತ ನೀಡದಿದ್ದರೂ ಸಂತುಷ್ಟನಾಗಿ
'ಹಳ್ಳಿಗೇಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ'
ಸಂಚರಿಸುತಿರ್ಪುದೇ ಷಟುಸ್ಥಲದ ಬ್ರಹ್ಮಿ ಎಂದು
ನಮೋ ಎಂಬುವೆನಯ್ಯಾ
ಬರಿದೆ 'ನಾ ಷಟುಸ್ಥಲದ ಬ್ರಹ್ಮಿ' 'ನೀ ಷಟುಸ್ಥಲದ ಬ್ರಹ್ಮಿ' ಎಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ. ॥ ೭ ॥

೬೧೧

ಶಿವನಿಂದಧಿಕ ದೈವ ಇಲ್ಲ,
ಶಿವಭಕ್ತಂಗಧಿಕ ಕುಲಜನಿಲ್ಲವೆಂದು
ಹೇಳುವುವು ಆಗಮ ಶ್ರುತಿ.
ಅದು ಎಂತೆಂದಡೆ :
ಸರ್ವ ಅಪ್ಸರರು ಸರ್ವ ಗಂಧರ್ವರು
ಸರ್ವ ಯತಿಗಳು ಸರ್ವ ಜತಿಗಳು
ಎಲ್ಲಾರು, ಎಲಾ ಈ ಶಿವಲಿಂಗಮಂ ಪೂಜಿಸಿ
ಮೋಕ್ಷವ ಪಡೆದೆನೆಂಬೋ ಭಕ್ತರು ನೀವು ಕೇಳಿರಯ್ಯಾ :
ಈ ಶಿವಲಿಂಗಮಂ ಬ್ರಹ್ಮ ಪೂಜಿಸಿ ಭವ ಹಿಂಗಿಸಿದ ;
ವಿಷ್ಣು ಪೂಜಿಸಿ ಹತ್ತು ಅವತಾರದ ದೋಷವನೀಡಾಡಿದ :
ಇಂದ್ರ ಪೂಜಿಸಿ ಅಯಿಶ್ವರ್ಯಮಂ ಪಡೆದ ;
ಋಷಿಗಳು ಪೂಜಿಸಿ ಕುಲವಂ ಕಳೆದು
ಬ್ರಹ್ಮರೆನಿಸಿ ನಿಶ್ಚಿಂತರಾದರು ;
ಮಹಾಗಣಾಧೀಶ್ವರರೂ ಪೂಜಿಸಿ
ಕೈಲಾಸಕ್ಕೆ ಸೋಪಾನವ ಕಟ್ಟಿದರು ;
ಮಿಕ್ಕ ನರರು ಪೂಜಿಸಿ [ಸು]ರಲೋಕವನೈದಿದರೆಂಬೋ
ಶಾಸ್ತ್ರವಂ ಕೇಳಿ, ಓದಿ, ಹಾಡಿ, ತಿಳಿದು,
ಪರಮ ವಿರಕ್ತಿಯ ನಿಟ್ಟಿಸಲಾರದೆ
ಪರದೈವಕಷ್ಟ ಬಿದ್ದು
ಹಿಂದೆ ಅವ ಕಟ್ಟಿದ ಲಿಂಗವು
ಕೋಣನ ಕೊರಳಿಗೆ ಗುದಿಗೆ ಕಟ್ಟಿದಂತಾಯಿತು ಕಾಣಾ
ಕೂಡಲಾದಿ ಚನ್ನಸಂಗಮದೇವಾ. || ೮ ||

೬೧೨

ಜ್ಯೋತಿಷ್ಯ ಘನವೆಂಬೋ ನೀತಿಗಾರನೇ ನೀ ಕೇಳು :
ಅಷ್ಟಗ್ರಹಂಗಳ ಬಲವು ದೊಡ್ಡಿತೆಂದು ನೀ ಪೇಳುವೆ.
ಗ್ರಹಂಗಳಿಗೆ ವಿಪತ್ತು ಬಂದಡೆ, ಆರೂ ತಿದ್ದಿಕೊಳಲರಿಯರು !
ಸೂರ್ಯನೇ ಘನವೆಂಬುವೆ,
ಚಕ್ರದಂತೆ ತಿರುಗುವನೇಕೆ ?
ಚಂದ್ರನೇ ಘನವೆಂಬುವೆ,
ಕ್ಷಯರೋಗದಿಂದ ಹೊರಳುವನೇಕೆ ?

ಬುಧನೇ ಘನವೆಂಬುವೆ,
ಬುದ್ಧಿಯಿಲ್ಲದನೆನಿಸಿಕೊಂಬನೇಕೆ ?
ಬೃಹಸ್ಪತಿಯೇ ಘನವೆಂಬುವೆ,
ತನ್ನ ಸ್ವಪತ್ನಿಯ ಕಳಕೊಂಡನೇಕೆ ?
ಶುಕ್ರನೇ ಘನವೆಂಬುವೆ,
ಕೊಡುವ ದಾನಕ್ಕಡ್ಡಲಾದನೇಕೆ ?
ಕಣ್ಣ ಕಳಕೊಂಡನೇಕೆ ?
ಶನಿಯೇ ಘನವೆಂಬುವೆ,
ಸಂಕೋಲೆಯೊಳಗಿರುವನೇಕೆ ?
ರಾಹು ಘನವೆಂಬುವೆ,
ಸೆರೆಮನೆಯೊಳು ಬಿದ್ದಿಹನೇಕೆ ?
ಇಂಥಾ ಜ್ಯೋತಿಷ್ಯ ಮುಖ್ಯವೇ ? ಮುಖ್ಯವಲ್ಲಾ !
ಮುಖ್ಯವು ದಾವುದೆಂದಡೆ,
ನಮ್ಮ ಪ್ರಮಥ ಗಣಾಧೀಶ್ವರರ ಪ್ರಸಾದ ವಾಕ್ಯವೇ
ಸರ್ವಸಿದ್ಧ ಎಂದು ನಂಬುವೆ ಕಾಣಾ
ಕೂಡಲಾದಿ ಚನ್ನಸಂಗಮದೇವಾ. || ೯ ||

೬೧೩

ಎಲೆ ಎಲೆ, ಭಕ್ತ ಭವಿ ಎಂಬೋ ನೀತಿಯಂ ಕೇಳು :
ಭಕ್ತ ದಾರು ? ಭವಿ ದಾರು ? ಎಂದಡೆ,
ಎಲಾ, ಯಾವ ಕುಲ[ದವ]ನಾದಡೆ ಸರಿಯೋ ?
ಯಾವ ದೇವರು ಆದರೆ ಸರಿಯೋ ?
ಎಲ್ಲಾ ದೇವರಿಗೂ ಆತ್ಮಲಿಂಗವಾಗಿಪ್ಪನೇ ಮಹಾದೇವನೆಂದು
ಹೇಳುವುದು ಶ್ರುತಿವಾಕ್ಯ.
ಇದರೊಳಗೆ ಏಕದೈವವನು ಪಿಡಿದು
ಪೂಜಿಸಿ, ಧ್ಯಾನಿಸಿ, ನಮಸ್ಕರಿಸಿ,
ಕ್ರಿಯಾಚಾರದಿಂ ನಡೆದು,
ನೀತಿಗಳನೋದಿ,
ನಿರ್ಮಳಚಿತ್ತನಾದಡೆ ಭಕ್ತ.
ಇದಂ ಮರೆದು, ಹಲವು ಕಾಲ ಲಿಂಗಧ್ಯಾನ,
ಹಲವು ಕಾಲ ಹರಿಧ್ಯಾನ, ಹಲವು ಕಾಲ ಬ್ರಹ್ಮಧ್ಯಾನ,
ಹಲವು ಕಾಲ ಎಲ್ಲಮ್ಮ, ಎಕನಾತಿ, ಶಾಕಿನಿ, ಡಾಕಿನಿ

ಕಲ್ಲು ಮರದೊಳಗಿಪ್ಪ ದೇವರ ಪೂಜಿಸಿದಡೆ,
ಎಲ್ಲಾರ ಎಂಜಲ ತಿಂಬೋರ ಎಂಜಲ [ತಿಂದು],
ಭಕ್ತನೆಂದರಿಯದೆ, ಪ್ರಸಾದದ ಮಹಾತ್ಮೆಯ ತಿಳಿವ ತಿಳಿಯದೆ,
ಧನದ ಪಿಶಾಚಿ ಎಂದು ಧರ್ಮ ಪರಹಿತಾರ್ಥವನು ಮರೆದು,
ನಿತ್ಯ ನಿತ್ಯ ಅನ್ನಕ್ಲೇಶದಲ್ಲಿ ಹೊರಳುವ[ವ]
ಲಿಂಗದೇಹಿಕನಾದಡೆಯು
ಬ್ರಾಹ್ಮಣನಾದಡೆಯು,
ಇವನೇ ಭವಿ.
ಇಂತಾ ಭಕ್ತ ಭವಿಗಳ ನೆಲೆಯ ತಿಳಿದು
ನಮ್ಮ ಶರಣರು ನಿರ್ಲೇಪ ದೇಹಮಂ ಅಂಗೀಕರಿಸಿ ಪೋದರು ಕಾಣಾ
ಕೂಡಲಾದಿ ಚನ್ನಸಂಗಮದೇವಾ. ॥ ೧೦ ॥

೬೧೪

ಎಲಾ, ಶೈವ ವೀರಶೈವ ಎಂಬುವವು
ಉಭಯ ಮತಗಳುಂಟು.
ಅವು ಎಂತೆಂದಡೆ,
ಸ್ಥಾಪ್ಯಲಿಂಗವ ಪೂಜೆಮಾಡುವುದೇ ಶೈವ;
ಗುರುವು ಕೊಟ್ಟ ಇಷ್ಟಲಿಂಗವ ಪೂಜೆಮಾಡುವುದೇ ವೀರಶೈವ.
ಅದರೊಳಗೆ ಲಿಪ್ತವಾಗಿರ್ಪರೇ ಭಕ್ತರು, ನೀವು ಕೇಳಿರಯ್ಯಾ :
ಸ್ಥಾಪ್ಯಲಿಂಗವ ಪೂಜಿಸಿದ ಕರ ಪೋಗಿ
ಪರಸ್ತ್ರೀಯರ ಕುಚಂಗಳ ಪಿಡಿಯಬಹುದೆ ?
ಈಗ ಯತಿಯ ನುಡಿದ ಜಿಹ್ವೆ ಪೋಗಿ
ಪರಸ್ತ್ರೀಯರ ಅಧರಪಾನ ಮಾಡಬಹುದೆ ?
ಮಹಾಮಂತ್ರವ ಕೇಳಿದ ಕರ್ಣ ಪೋಗಿ
ಪರತಂತ್ರವ ಕೇಳಬಹುದೆ ?
ಲಿಂಗಪೂಜಕರ ಅಂಗ ಪೋಗಿ
ಪರರಂಗವನಪ್ಪಬಹುದೆ ?
ಇವನು ಶೈವ ಭಕ್ತನಲ್ಲಾ !
ಶೈವನಾಗಲಿ ವೀರಶೈವನಾಗಲಿ
ಏಕಲಿಂಗನಿಷ್ಠಾಪರನಾಗಿ,
ಅಷ್ಟಮದಂಗಳೊಳ್ಳಗೊಂಡು ಸಂಹರಿಸಿ,
ಪಂಚಕ್ಲೇಶ ದುರಿತ ದುರ್ಗುಣಗಳ ಕಳೆದುಳಿದು,

ಆರು ಚಕ್ರವ ಹತ್ತಿ
ಮೀರಿದ ಸ್ಥಲದೊಳಗಿಪ್ಪ ಲಿಂಗಮಂ ಪೂಜಿಸಿ,
ಮೋಕ್ಷಮಂ ಪಡೆದಡೆ,
ವೀರಶೈವನೆಂದು ನಮೋ ಎಂಬುವೆನಯ್ಯಾ
ಬರಿದೆ ವೀರಶೈವನೆಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣಾ
ಕೂಡಲಾದಿ ಚನ್ನಸಂಗಮದೇವಾ. ॥ ೧೧ ॥

೬೧೫

ಎಲಾ, ದೇವರು ಹಿಡಿಯಿತೆಂಬೋ ನಾಯಿಮಗನೇ ನೀ ಕೇಳು :
ಎಲಾ, ಹಿಂದಕ್ಕೆ ಅನಂತ ಋಷಿಗಳು ದೇವರ ಕುರಿತು ತಪಸ್ಸುಮಾಡಿ
ದೇವರ ಕಾಣದೆ ಪೋದರು.
ತ್ರಿಕಾಲದಲ್ಲಿ ಮಹಾಪುರುಷರು ಶಿವಪೂಜೆ ಅಂಗೀಕರಿಸಿ,
ಕೋಟ್ಯಾಂತರ ದ್ರವ್ಯವನ್ನು ಜಂಗಮಕ್ಕೆ ನೀಡಿ, ಮಾಡಿ,
ಸ್ವಪ್ನದಲ್ಲಿ ದೇವರ ಪಾದವ ಕಾಣದೆ ಹೋದರು.
ಈಗಿನವರು ಮಹಾಮಲಿನವಾದ ಕಾಯಕೂಷ್ಣವೂಷ್ಣವು (?).
ಬಿಷ್ಣದ (?) ದೇಹ, ಕನಿಷ್ಟದ ನಡತೆ, ಕಾರ್ಕೋಟಕ ಬುದ್ಧಿ
ಕರ್ಮೇಂದ್ರಿಯಂಗಳಲ್ಲಿ ಹೊರಳಾಡುವ ಹೊಲೆಯ[ರಿ]ಂಗೆ ದೇವರೆಲ್ಲೈತೆಲಾ ?
ಆದರೂ ಚಿಂತೆಯಿಲ್ಲ.
ಎಲಾ, ಹನುಮಂತ ದೇವರು ಹಿಡೀತು ಎಂಬವನೇ ನೀ ಕೇಳು :
ಹಿಂದಕ್ಕೆ ಹನುಮಂತದೇವರು ಸಂಜೀವನಕ್ಕೆ ಪೋಗಿ
ಅರ್ಧಬೆಟ್ಟವನ್ನು ಕಿತ್ತುಕೊಂಡು ಬಂದಿರ್ದ.
ಅಂಥ ಹನುಮಂತದೇವರು ನಿನ್ನ ದೇಹದಲ್ಲಿ ಇದ್ದ ಬಳಿಕ
ಈಗ ಹನ್ನೆರಡು ಮಣವು ಕಲ್ಲನಾದರು
ಎತ್ತಿ ನೆತ್ತಿಮೇಲೆ ಇಟ್ಟುಕೊಂಡರೆ ದೇವರೆನಬಹುದು !
ಎಲಾ, ವೀರಭದ್ರದೇವರು ಹಿಡೀತು ಎಂಬುವನೇ ನೀ ಕೇಳು :
ಹಿಂದಕ್ಕೆ ವೀರಭದ್ರದೇವರು ಮುನ್ನೂರು ಮೂರು ಕೋಟಿ
ರಾಕ್ಷಸರನ್ನು ಸಂಹರಿಸಿದ.
ಅಂತಪ್ಪ ವೀರಭದ್ರದೇವರು ನಿನ್ನ ದೇಹದಲ್ಲಿ ಇದ್ದ ಬಳಿಕ
ಕತ್ತಿ ಕಿತ್ತುಕೊಂಡು ಒಬ್ಬ ಇಬ್ಬರನಾದಡೆ ಸಂಹರಿಸಿದಡೆ
ದೇವರೆನಬಹುದು!
ಇದಂ ಬಿಟ್ಟು, ನೀನು ದೇವರುಹಿಡೀತು ಎಂದು ಕೂಗುವಾಗ,

ಗಟ್ಟಿಯುಳ್ಳವ ಬಂದು ತೆಕ್ಕೆಯೊಳಗೆ ಪಿಡಿದರೆ,
ತೆಕ್ಕೆಯೊಳಗೆ ಸೇರಿಕೊಂ[ಬೆಯ]ಲ್ಲದೆ
ತೆಕ್ಕೆ ಬಿಡಿಸಿಕೊಂ[ಬ]ಸಾಮರ್ಥ್ಯ ನಿನಗಿಲ್ಲಾ !
ನಿಮಗೆ ಹಿಡಿವುದು ಪಿಶಾಚಿ, ಪಿಶಾಚಿ ವಡವದೇ (?) ಪಾದರಕ್ಷೆ
ಇಂಥಾ ದೇವರ ಮಹಾತ್ಮೆಯಂ ತಿಳಿದು,
[ತ]ಮ್ಮ ಸುಜ್ಞಾನವಂ, ಮರೆದು,
'ಇವರೇ ದೇವರೆ'ಂದು ಅಡ್ಡಬೀಳುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ. ॥ ೧೨ ॥

೬೧೬

ಎಲಾ, ಶಿವಪೂಜೆಯ ಮಾಡುವ ಶಿವಪೂಜಕರು ನೀವು ಕೇಳಿರಯ್ಯಾ :
ನಿಮ್ಮ ಶಿವಪೂಜೆ[ಯ]ವಿಧ ಯಾವುದೆಲಾ ?
ಜಲದಿಂದ ಮಜ್ಜನವ ನೀಡುವಿರಿ :
ಜಲ ಮೀನಿನೆಂಜಲು.
ಅಡವಿಯಂ ತಿರುಗಿ, ಪುಷ್ಪವಂ ತಂದು, ಶಿವಗಂ ಅರ್ಪಿ[ಸುವಿರಿ];
ಪುಷ್ಪ ಭೃಂಗದೆಂಜಲು.
ಪಂಚಾಭಿಷೇಕ[ವ]ಮಾಡುವಿರಿ;
ಕ್ಷೀರ ಕರುವಿನೆಂಜಲು.
ಮಧು[ವ] ಅಭಿಷೇಕವ ಮಾಡುವಿರಿ;
[ಮಧು] ಮಧು[ಕ]ರಮಯಂ.
[ಇಂ]ತೀ ನೈವೇದ್ಯವಂ ಮಾಡುವೆಯಲ್ಲದೆ
ಶಿವಪೂಜೆಯ ವಿಧವ ಬಲ್ಲೆ ಏನಯ್ಯಾ ?
ಅದು ಎಂತೆಂದಡೆ:
ಮಾನಸ ಪೂ[ಜಕ]ಸ್ಯ ಸರ್ವಪಾಪಃ [ಪರಿಹರತಿ] ।
ಸಾ[ಮೀ]ಪ್ಯ[ಂ] ಸದ್ಗು[ರೋಃ] ಪ್ರಾ[ಪ್ಯ] ಪುನರ್ಭವ ವಿನಶ್ಯತಿ ॥
ಇಂತೀ ಆಗಮ ಗ್ರಂಥವುಂಟಲ್ಲಾ ಇದನ್ನರಿತು
ಮಾನಸವೆಂಬೋ ಕಲ್ಲಿನ ಮೇಲೆ
ಮದಮತ್ಸರವೆಂಬೋ ಗಂಧ ಕೊರಡಿನಿಂದ ತೇಯ್ದು,
ಸತ್ಯವೆಂಬೋ ಗಂಧವಂ ಹಚ್ಚಿ,
ನಿತ್ಯತ್ವ ಎಂಬೋ ಅಕ್ಷತೆಯನಿಟ್ಟು,
ಗುರುಕೀಲೆಂಬೋ ಒರಳಿನಲ್ಲಿ

ಮದಮಚ್ಚರವೆಂಬೋ ತಂಡಿಲಂ ಕುಟ್ಟಿ,
ಬುದ್ಧಿಯೆಂಬೋ ಮೊರದಿಂದ ಝಾಡಿಸಿ ಕೇರಿ,
ನಿಜವೆಂಬೋ ಅನ್ನವಂ ಮಾಡಿ,
ನಿರ್ಮಳ ಚಿತ್ತವೆಂಬೋ ತುಪ್ಪವಂ ನೀಡಿ,
ನಿರುಪಮ ಅವಸ್ಥೆಗಳಿಂದ ನೈವೇದ್ಯವಂ ಕೊಟ್ಟು,
ಕಾಮಕ್ರೋಧವೆಂಬೋ ಬತ್ತಿಯ ಹೊಸೆದು,
ಗುರುಪ್ರಣುತವೆಂಬೋ ಪಣತಿಯೊಳಗೆ
ನಿರ್ಮಳವೆಂಬೋ ತೈಲವಂ ಎರೆದು
ಜ್ಯೋತಿಯ ಮುಟ್ಟಿಸಿ,
ನಿರ್ಮಳ ಲಿಂಗಕ್ಕಂ ಅರ್ಪಿಸಿ
ಮೋಕ್ಷವ ಕಂಡಡೆ
ಶಿವಪೂಜಕನೆಂದು ನಮೋ ಎಂಬುವೆನಯ್ಯಾ
ಬರಿದೆ 'ನಾ ಶಿವಪೂಜೆ' 'ನೀ ಶಿವಪೂಜಕ'ನೆಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣಾ
ಕೂಡಲಾದಿ ಚನ್ನಸಂಗಮದೇವಾ. ॥ ೧೩ ॥

೬೧೭

ಎಲಾ, ಓದಿದವರಿಗೆ ಮೋಕ್ಷವಿಲ್ಲಾ!
ಅದು ಎಂತೆಂದಡೆ,
ಒಂದು ಶಾಸ್ತ್ರವನೋದಿ ಮನಸು ನಿಲುಕಡೆಯಿಲ್ಲದೆ
ಮತ್ತೊಂದು ನೋಡುವೆ.
ಮತ್ತೊಂದು ಮತ್ತೊಂದು [ಎಂದು] ನೋಡುವರೆ
ದಿವಸ ಸಮೀಪಿಸಿತ್ತು.
ಸಮೀಪಿಸಿದ ಬಳಿಕ ಯಮದೂತರು ಬಂದು
ವಿಪ್ಲವ[ವ] ಮಾಡುವರು.
ಏನು ಕಾರಣವೆಂದಡೆ, ಓದಿದವರಿಗೆ ಮೋಕ್ಷವಿಲ್ಲಾ !
ಅದು ಎಂತೆಂದಡೆ,
ಬಿಳಿಯ ವಸ್ತ್ರವ ಹೊದ್ದುಕೊಂಡ ತಿರುಕಗೆ
ಎಲ್ಲರ ಮನ್ನಣೆಯುಂಟು.
ಮಾಸಿದರೆ ಅದಕೆ ಶುದ್ಧ ಮಾಡುವನು ರಜಕ.
ಇದರಂತೆ, ಓದಿನ '[ಮರ್ಮವು]' ತಿಳಿಯಲಿಲ್ಲ.
ಇದಂ ಬಿಟ್ಟು, ಬಿಳಿಯ ವಸ್ತ್ರವು

ಹೊಡೆಸಿಕೊಂಡು ಹೊಡೆಸಿಕೊಂಡು ಮುಪ್ಪಾದ ಬಳಿಕ
ಕೂಸುಗಳ ಗುದಕ್ಕೆ ಒರಸಿ ಬಿಸುಡುವರಲ್ಲದೆ,
ಅದಕ್ಕೆ ಅಧಿಕವುಂಟೇ ?
ಇದರಂತೆ ಓದಿಸ [ಮರ್ಮವು] ತಿಳಿಯಲಿಲ್ಲ.
ಇದಂ ಬಿಟ್ಟು, ಮೂಢಭಾವದಿಂದ ಶಿವಲಿಂಗವ ಪೂಜಿಸಿದವರು
ಮೋಕ್ಷಕರಲ್ಲದೆ ಮಿಕ್ಕವರಿಗುಂಟೇನಲ್ಲ.
ಅದೇನು ಕಾರಣವೆಂದಡೆ,
ಮೂಢ ಭಕ್ತನೇ ಕಂಬಳಿಯೆಂದು ತಿಳಿಯೆಲಾ !
ಕಂಬಳಿಗೆ ಮನ್ನಣೆಯುಂಟೆ ?
ಹಾಸಿದರೆ ಮಾಸುವುದೆ ?
ಹೊದ್ದರೆ ಚಳಿಯ ತೋರುವುದೆ ?
ರಜಕನ ಮನೆಯ ಕಂಡುಬಲ್ಲುದೆ ?
ಮುಪ್ಪಾದ ಕಾಲಕ್ಕೆ ಕೃಮಿಶಳಿಗಶ್ವರ (?) ದೇವರಿಗೆ ಜೇಷ್ಟ(?)
ಎಲ್ಲಾ ಬರವಾಗಿ
ಭಕ್ತ ಪೋಷಿಸುವದಲ್ಲದೆ ಕೊರತೆಯುಂಟೆ ?
ಇದರಂತೆ ಮೂಢಭಕ್ತಂಗೆ ಮೋಕ್ಷವೆಂದು ತಿಳಿ.
ಇದಂ ಬಿಟ್ಟು, ಮಾತು ಕಲಿತ ಭೂತಗಳಂತೆ,
ಬರಿದೆ ಶಾಸ್ತ್ರವನೋದಿ,
ಕಂಡಕಂಡವರಲ್ಲಿ ಬಗುಳಿ,
ಕಾಲಕ್ಷೇಪವ ಕಳೆವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣಾ
ಕೂಡಲಾದಿ ಚನ್ನಸಂಗಮದೇವಾ. ॥ ೧೪ ॥

೬೧೮

ಅಯ್ಯಾ, ಜೀವಾತ್ಮ ಭೇದವಾದಮಂ ಪೇಳ್ವೆನಯ್ಯಾ :
ಜೀವ ಬೇರೆ, ಆತ್ಮ ಬೇರೆ ಎಂದು ಹೇಳುವ[ವು] ಹಲವು ಶಾಸ್ತ್ರ :
ಜೀವಾತ್ಮ ಐಕ್ಯ ಹೇ[ಳುವವು] ಹಲವು ಶಾಸ್ತ್ರ.
ಅ[ದು] ಎಂತೆಂದಡೆ:
ಸರ್ವ ಚೇತನವಲ್ಲಿಯು ಉಂಟು ಎಂದು ಹೇಳುವವು ಜೀವವು.
ಶಿವಶಾಸ್ತ್ರ ಇದಕ್ಕೆ ಸಾಕ್ಷಿ :

---

೧-೧ ಮರಣವು (ಮೂ)

"ಅಣೋರಣೀಯಾ[ನ್] ಮಹತೋ ಮಹೀಯಾ[ನ್]"
ಎಂದು ಶ್ರುತಿಯುಂಟಾಗಿ, ಇದಂ ತಿಳಿದು, ಭೇದವಾದಿಗಳು
ಸರ್ವಜೀವರಲ್ಲಿಯು ಆತ್ಮವುಂಟಾದಡೆಯು
ಪಶುಜೀವಜಂತುಗಳಿಗೆ ನಮಸ್ಕಾರವ ಮಾಡಬಾರದೆ ? ಎಂದು
ಹೇಳುವ ಮಾಯಾವಾದಿಗಳು ನೀವು ಕೇಳಿ ;
ಅದು ಎಂತೆಂದಡೆ :
ಎಲಾ ಎಲಾ, ಉಚ್ಛಿಷ್ಟದಲ್ಲಿಯು ಅರ್ಕನ ಪ್ರಭೆ ಬಿದ್ದು ರಸ ಬತ್ತುವದು.
ಅದರ ರಸಾಸ್ವಾದವು ಅರ್ಕಂಗೆ ಮುಟ್ಟುವುದೆ ?
ಎಲಾ ಎಲಾ, ಸಿಲಹದಲ್ಲಿಯು ಸೂರ್ಯಪ್ರಭೆಯುಂಟು.
ಅಲ್ಲಿ ವಹ್ನಿಯು ಪುಟ್ಟುವು[ದೆ?]
ಇದರಂತೆ, ಸರ್ವ ಜೀವಜಂತುಗಳಲ್ಲಿ
ಮಾಯಾವಾದಿಗಳಲ್ಲಿ
ಆತ್ಮಪರೀಕ್ಷೆಯಿಲ್ಲದವರಲ್ಲಿ
[ದು]ಷ್ಟ ದುರ್ಜನರಲ್ಲಿ
ಶಿವಭಕ್ತರಾಗಿ ಲಿಂಗವ ಧರಿಸಿ
ದೇವರಾದರು ಸರಿಯೆ,
[ಬ್ರಾ]ಹ್ಮರಾಗಿ ಯಜ್ಞೋಪವೀತವ
ಹಾಕಿಕೊಂಡಿದ್ದರು ಸರಿಯೆ,
ಯತಿಗಳಾಗಿ ಮಂಡೆ ಬೋಳಿಸಿಕೊಂಡಿದ್ದರು ಸರಿಯೆ,
ಮಾರ್ಗ ತಪ್ಪಿ ನಡೆವ ಜೀವಜಂತುಗಳಲ್ಲಿ
ಸಿಲಹ ಉಚ್ಛಿಷ್ಟದ ಮೇಲೆ ಸೂರ್ಯನ ಪ್ರಭೆ ಬಿದ್ದಂತೆ
ಆತ್ಮ ಇದ್ದ ಕಾರಣ ಇವರಿಗೆ ಕೈಮುಗಿಯಲಾಗದು ಕಾಣಿರಯ್ಯಾ !
ಇ[ವ]ರೊಳಗೆ ಶಿವಯೋಗಿಗಳು ದಾರೆಂದು ಕೇಳುವ
ಮಾಯಾವಾದಿ ಕೇಳಲಾ.
ಅದು ಎಂತೆಂದಡೆ:
ಸೂರ್ಯನ ಪ್ರಕಾಶಕ್ಕೆ ಬಿಲದ್ವಾರವ ಸಿಲಹಂ ಪಿಡಿಯೆ
ಅರ್ಕನ ಪ್ರಕಾಶಕ್ಕೆ ವಹ್ನಿ ಪುಟ್ಟೆ
ಸರ್ವಕಾಷ್ಠವನು ಸುಡುವದು ಕಾಣೆಲಾ.
ಶಿವಾತ್ಮ ಐಕ್ಯವ ಮಾಡಿದಾ ಶಿವಯೋಗಿಗಳಲ್ಲಿ
ಸರ್ವಕರ್ಮೇಂದ್ರಿಯ ಈ ತೆರದಲ್ಲಿ ಸುಟ್ಟ ಕಾರಣ
ನಿರ್ಮಳಕಾಯರಾದರು.

ಇಂತಪ್ಪ ಜೀವಾತ್ಮವ ಐಕ್ಯವ ಮಾಡಿದ ಶಿವಯೋಗಿಗಳಲ್ಲಿ
ನಮಸ್ಕರಿಸಬಹುದು.
ಇಂತಾ ಜೀವಾತ್ಮ ವೇದವ ತಿಳಿಯದೆ
'ನಾ ಬ್ರಾಹ್ಮಣ' 'ನಾ ಶಿವಭಕ್ತ'ನೆಂದು ಹೇಳಿಕೊಂಡು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ ! || ೧೫ ||

೬೧೯

ಲಿಂಗಾಂಗಿಯೆಂದು ಪೇಳುವ[ವ]ನೇ ನೀ ಕೇಳು :
ಬರಿದೆ ಲಿಂಗಮಂ ಕಟ್ಟಿ, ಅಂಗದಲ್ಲಿ ಧರಿಸಿ,
ಮಂಗದೈವಂಗಳಿಗೆ ಅಡ್ಡ ಬಿದ್ದ ಬಳಿಕ
ನಿನಗೆ ಲಿಂಗಾಂಗದೇಹವೆಲ್ಲೈತೆಲಾ ?
ಲಿಂಗಾಂಗದೇಹದ ಲಕ್ಷಣವ ಪೇಳುವೆನು ಕೇಳೆಲಾ :
ಲಿಂಗಾಂಗದೇಹಿಯಾದ ಬಳಿಕ,
ಲಿಂಗ ಪೋದಡೆ ಅಂಗ ಬಹಿಷ್ಕೆ ;
ಅದರಿಂದ ಪೋಗಬೇಕು.
ಎಲ್ಲಾ ದೇವರಿಗೊಲ್ಲಭನಾದ ದೇವರು ಲಿಂಗವು.
ಅಂತಪ್ಪ ಲಿಂಗವು ನಿನ್ನ ಕರಸ್ಥಲ[ಕೆ] ಉರಸ್ಥಲಕೆ ಬಂದ ಬಳಿಕ
ಪರದೈವದ ಹಂಗೇಕಲಾ ?
ಮನೆಯಲ್ಲಿ ಪರುಷವ ಇಟ್ಟುಕೊಂಡು
ಹೆರರ ಪದಾರ್ಥಕ್ಕೆ ಹಲ್ಲು ತೆರೆವಸಂದದಿ
ಗುರುವು ಕೊಟ್ಟ ಲಿಂಗವು ಅಂಗದಲ್ಲಿ ಇದ್ದ ಬಳಿಕ
ಗುರುಮಂತ್ರವು ಶ್ರವಣದಲ್ಲಿ ಉಪದೇಶವಾದ ಬಳಿಕ,
ಗುರುವಾಕ್ಯ ಜಿಹ್ವೆಯಲ್ಲಿ ಉದ್ಭವಿಸಿದ ಬಳಿಕ,
ಗುರುಪ್ರಣುತವು ಪಣೆಗೆ ಲಿಪ್ತವಾದ ಬಳಿಕ,
ಇದಂ ಮರೆದು ಮಾಯಾ ಮೋಹಕೊಳಗಾಗಿ,
ಅನಂತ ಪ್ರಪಂಚದೊಳು ತೇಲಾಡಿ,
ತನಗೆ ವಿಪತ್ತು ಬಂದಡೆ ಕೋಟಿ ಶೀಲವಂ ಕೇಳುವ ಹೇಳುವ
ತಾಟಕ ಹೊಲೆಯರ ಮುಖವ ನೋಡಲಾಗದು ಕಾಣಾ
ಕೂಡಲಾದಿ ಚನ್ನಸಂಗಮದೇವಾ. || ೧೬ ||

### ೬೨೦

ಅಯ್ಯಾ, 'ಬ್ರಹ್ಮಲಿಖಿತವೇ ದೊಡ್ಡಿತ್ತು' ಎಂದು ಪೇಳುವಿರಿ,
'ಬ್ರಹ್ಮಲಿಖಿತಕ್ಕೆ [ಇದಿರು] ಯಾರಾರು ಇಲ್ಲ' ವೆಂದು ಹೇಳುವಿರಿ,
ನೀವು ಕೇಳಿರಯ್ಯಾ:
ಇಂಥ ಬ್ರಹ್ಮಲಿಖಿತವ ಗೆದ್ದವರು ನಮ್ಮ ಶಿವಗಣಾಧೀಶ್ವರರಲ್ಲದೆ
ಮಿಕ್ಕಿನವರು ಗೆದ್ದದ್ದು ಇಲ್ಲಾ ಕಾಣಿರಯ್ಯಾ!
ಅದು ಎಂತೆಂದಡೆ:
ಎಲೆ, ಬ್ರಹ್ಮನು ಶಿವನಂ ಕಾಣಲರಿಯದೆ
ತತ್ತ್ವಸಾರವ ತಿಳಿಯಲರಿಯದೆ
ಶಿರವ ಛೇದಿಸಿಕೊಂಡ.
ಇಂಥ ಬ್ರಹ್ಮಮುಖವಾದ ವೇದಗಳು
ರಥಕ್ಕೆ ವಾಜಿಯಾಗಿ ಹೋದವು.
ಇಂಥಾ ಬ್ರಹ್ಮನು ತತ್ತ್ವಸಾರವ ತಿಳಿಯದೆ, ಅರಿಯದೆ,
ನಿಜವಸ್ತುವಾದ ಲಿಂಗಮಂ ಮರೆದು,
ಶಿರವ ಛೇದಿಸಿಕೊಂಡ.
ಅವ ನಮ್ಮ ಪ್ರಮಥ ಗಣಾಧೀಶ್ವರರಿಗೆ
ಅದೃಷ್ಟವ ಬರೆವುದಕ್ಕೆ ಕಾರಣಕರ್ತನೆ ?
ಅಥವಾ ಆ ಕ್ಷಣ ಮಾತ್ರದಲ್ಲಿ ಪುತ್ರಜನನವಾದ ಕಾಲದಲ್ಲಿಯು
ಬ್ರಹ್ಮನ ಬರ [ಹ ಹೋ]ಹಾಗಾಗಲಿಯೆಂದು,
ಮಹಾಗುರುವು ಬಂದು ತ್ರಿಪುಂಡ್ರವಾದ ಮೂರು ಬೆರಳಿಂದ
ಬ್ರಹ್ಮಲಿಖಿತವಂ ದಟ್ಟಿಸಿ ಪಣೆಗಿಟ್ಟು,
ಮಾಂಸಪಿಂಡವಂ ಪೋಗಿ[ಸಿ] ಮಂತ್ರಪಿಂಡವ ಮಾಡುವರಲ್ಲದೆ
ಮಿಕ್ಕವರಿಂದಾಗದು ಕಾಣಿರಯ್ಯಾ.
ಆ ಪ್ರಮಥ ಗಣಾಧೀಶ್ವರರು ನಡೆದರೆಂದು ಈಗ ಮನುಜರು
'ನಾನೂ ನಡೆದೇನು' 'ನೀನೂ ನಡೆದೇನು' ಎಂದು ತಿರುಗುವ
ಮೂಳ ಹೊಲೆಯರ ಮುಖವ ನೋಡಲಾಗದು ಕಾಣಾ
ಕೂಡಲಾದಿ ಚನ್ನಸಂಗಮದೇವಾ. || ೧೭ ||

### ೬೨೧

ಈರೇಳು ಭವನ ಹದಿನಾಲ್ಕು ಲೋಕಕ್ಕೆ
ಶ್ರೀ ಮಹಾ ಸಾಂಬಶಿವನೇ ಘನವೆಂದು

ನಾಲ್ಕು ವೇದಗಳು ಸಾರುತ್ತಿರ್ದವು.
ಅಂತಪ್ಪ ಸಾಂಬಶಿವನು ತನ್ನ ಭಕ್ತನ ಏನೆನುತ್ತಿರ್ದನಯ್ಯಾ ?
'ಭಕ್ತಂ ಮಹೇಶಗಿನ್ನಧಿಕ',
'ನನಗಿಂತಾ ನನ್ನ ಭಕ್ತನೇ ದೊಡ್ಡವನೆ'ಂದು
ಸಾಂಬಶಿವನು ಹೇಳುತ್ತಿಹನು.
'ಭಕ್ತಂ ಮಹೇಶಗಿನ್ನಧಿಕ'ವೆಂಬ ನಾಮಾಂಕಿತ
ಎಂತಪ್ಪ ಭಕ್ತಂಗೆ ಸಲುವದೆಂದರೆ :
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಇಂತೀ ಆರು ಗುಣಂಗಳಳಿದು,
ಅಷ್ಟಮದಂಗಳ ತುಳಿದು,
ತ್ರಿವಿಧ ಪದಾರ್ಥವನ್ನು ತ್ರೈಮೂರ್ತಿಗಳಿಗೆ ಕೊಟ್ಟು,
ಇಷ್ಟಲಿಂಗನಿಷ್ಠಾಪರರಾಗಿ,
ಜಂಗಮವೇ ಮತ್ಪ್ರಾಣವೆಂದು ನಂಬಿ,
ಪೂಜಿಸುವ ಸದ್ಭಕ್ತಂಗೆ
'ಭಕ್ತಂ ಮಹೇಶಗಿನ್ನಧಿಕ'ವೆಂಬ
ನಾಮಾಂಕಿತ ಸಲುವದು.
ಬರಿದೆ ಡಂಬಾಚಾರಕ್ಕೆ ಪ್ರಾತಃಕಾಲಕ್ಕೆ ಎದ್ದು,
ಮೇಕೆ ಹೋತಿನ ಬಂಧುಗಳಾಗಿ
ಆಡಿನ ಬೀಗಪ್ಪಗಳಾಗಿ
ಪತ್ರೆಗಿಡಕೆ ಹಿಡಿಯ ತೊಪ್ಪಲನ ತೆರಕೊಂಡು ಬಂದು
ಲಿಂಗದ ಮಸ್ತಕದ ಮೇಲೆ ಇಟ್ಟು,
ಮಧ್ಯಾಹ್ನ ಕಾಲದಲ್ಲಿ ಒಂದು ಶಿವಜಂಗಮಮೂರ್ತಿ
ಹಸಿದು ಬಂದು 'ಭಿಕ್ಷಾಂದೇಹಿ' ಎಂದರೆ
'ಅಯ್ಯ ಕೈಯಿ ಅನುವು ಆಗಿಯಿಲ್ಲ',
'ಮನೆಯಲ್ಲಿ ಹಿರಿಯರು ಇಲ್ಲ',
'ಮುಂದಲಮನೆಗೆ ದಯಮಾಡಿರಿ' ಎಂಬ
ಹಂದಿಮುಂಡೇಮಕ್ಕಳಿಗೆ
'ಭಕ್ತಂ ಮಹೇಶನಿಂದಧಿಕ'ವೆಂಬ ನಾಮಾಂಕಿತ
ಸಲ್ಲದೆಂದಾತನಾರು ?–
ನಮ್ಮ ಕೂಡಲಾದಿ ಚನ್ನಸಂಗಮದೇವ. ॥ ೧೮ ॥

೬೨೨

ಒಂದು, ಎರಡು, ಮೂರು, ನಾಲಕ್ಕು,
ಅಯಿದು, ಆರು, ಏಳು, ಎಂಟು
ಒಂಬತ್ತು, ಹತ್ತು, ಹನ್ನೊಂದು ಹನ್ನೆರಡು.
ಹದಿಮೂರು, ಹದಿನಾಲಕ್ಕು, ಹದಿನೈದು, ಹದಿನಾರು,
ಹದಿನೇಳು, ಹದಿನೆಂಟು, ಹತ್ತೊಂಬತ್ತು, ಇಪ್ಪತ್ತು,
ಇಪ್ಪತ್ತೊಂದು, ಇಪ್ಪತ್ತೆರಡು, ಇಪ್ಪತ್ತಮೂರು, ಇಪ್ಪತ್ತನಾಲಕ್ಕು.

ಇಪ್ಪತ್ತನಾಲಕ್ಕು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಇಪ್ಪತ್ತನಾಲಕ್ಕು ಎಂದರೆ ಚಕ್ರವರ್ತಿಗಳು.
ಅದು ಎಂತೆಂದಡೆ:
ಗ್ರಂಥ ॥ "ಯುದಿಷ್ಠಿರೋ ವಿಕ್ರ[ಮೋ]ಶಾಲಿವಾಹನ[ಃ]
ತ[ಪಸಾ] ಧ್ರುವಶ್ಚ [ದಿವಿ]ಜರಾಜನಂದನಃ
ನಾಗಾಂತಕೋ ಭೂಪತಿ [ಷಷ್ಠಮಃ]
ಕಲಿಯುಗೇ ಷಟ್‌ಚಕ್ರವರ್ತಿ[ನಃ]"
ಈ ಆರು ಮಂದಿ ಕಲಿಯುಗದ ಚಕ್ರವರ್ತಿಗಳು.

ಇಪ್ಪತ್ತಮೂರು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಇಪ್ಪತ್ತಮೂರು ಎಂದರೆ ಚಕ್ರವರ್ತಿಗಳು.
ಅದು ಎಂತೆಂದಡೆ:
ಗ್ರಂಥ ॥ "ಯಯಾತಿ ನಹುಷ[ಶ್ಶಂತನುಃ]
ಚಿತ್ರವೀರ್ಯಶ್ಚ ಪಾಂಡವಃ
ರಾಜಾ ದುರ್ಯೋಧನ[ಶ್ಚೈ]ವ
ದ್ವಾಪರೇ ಷ[ಟ್] ಚಕ್ರವರ್ತಿ[ನಃ]"
ಆ ಆರು ಮಂದಿ ದ್ವಾಪರದ ಚಕ್ರವರ್ತಿಗಳು.

ಇಪ್ಪತ್ತೆರಡು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಇಪ್ಪತ್ತೆರಡು ಎಂದರೆ ಚಕ್ರವರ್ತಿಗಳು.
ಅದು ಎಂತೆಂದಡೆ:
ಗ್ರಂಥ ॥ "ವೈವ[ಸ್ವ]ತೋ ದಿಲೀಪಶ್ಚ
ರಘು ಚಕ್ರೇಶ್ವರೋ ಅ[ಜಃ]
ದಶರಥೋ ರಾಮಚಂದ್ರ[ಶ್ಚ]
ಷಡ್ಯೆತೇ ಚಕ್ರವರ್ತಿ[ನಃ]"

ಈ ಆರು ಮಂದಿ ತ್ರೇತಾಯುಗದ ಚಕ್ರವರ್ತಿಗಳು.
ಅದು ಎಂತೆಂದಡೆ:
ಗ್ರಂಥ || "ಹರಿಶ್ಚಂ[ದ್ರೋ] ನ[ಳ]ರಾಜ[ಃ]
ಪುರುಕು[ತ್ಸ]ಶ್ಚ ಪುರೂರವಃ
ಸಗರಃ ಕಾರ್ತವೀರ್ಯಶ್ಚ
ಷಡೈತೇ ಚಕ್ರವರ್ತಿ[ನಃ]"
ಈ ಆರು ಮಂದಿ ಕೃತಯುಗದ ಚಕ್ರವರ್ತಿಗಳು.
ಅಂತೂ ಇಪ್ಪತ್ತನಾಲ್ಕು ಮಂದಿ ಚಕ್ರವರ್ತಿಗಳು.

ಇಪ್ಪತ್ತು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಇಪ್ಪತ್ತು ಎಂದರೆ ಪ್ರಪಂಚ ನಿರ್ಮಾಣ ಸಹಾಯ[ದ]ವರು.
ಅದು ಎಂತೆಂದಡೆ:
ಆಂಗೀರಸ, ಪುಲಸ್ತ್ಯ, ಪುಲಹ, ಶಾಂತ,
ದಕ್ಷ, ವಸಿಷ್ಠ, ವಾಮದೇವ, ನವಬ್ರಹ್ಮ, ಕೌಶಿಕ,
ಶೌನಕ, ಸ್ವಯಂಭು, ಸ್ವಾರೋಚಿಷ, ಉತ್ತಮ,
ತಾಮಸ, ರೈವತ, ಚಾಕ್ಷುಷ, ವೈವಸ್ವತ,
ಸೂರ್ಯಸಾವರ್ಣಿ, ಚಂದ್ರಸಾವರ್ಣಿ,
ಬ್ರಹ್ಮಸಾವರ್ಣಿ, ಇಂದ್ರ ಸಾವರ್ಣಿ–
ಇವರು ಇಪ್ಪತ್ತು ಮಂದಿ ಪ್ರಪಂಚ ನಿರ್ಮಾಣ ಸಹಾಯ[ದ]ವರು.

ಹತ್ತೊಂಬತ್ತು ಎಂದರೆ ಪುಣ್ಯನದಿಗಳು.
ಅದು ಎಂತೆಂದಡೆ:
ಗ್ರಂಥ || "ಗಂಗಾ ಪುಷ್ಕ[ರಿಣೀ] ನರ್ಮದಾ ಚ
ಯಮುನಾ ಗೋದಾವರೀ ಗೋಮತೀ
ಗಂಗಾದ್ವಾರ ಗಯಾ ಪ್ರಯಾಗ
ಬದರೀ ವಾರಾಣಸೀ ಸ್ಯೆಯಿಂಧವೀ
ಇವು ಹತ್ತೊಂಬತ್ತು ಪುಣ್ಯನದಿಗಳು.

ಹದಿನೆಂಟು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಹದಿನೆಂಟು ಎಂದರೆ..........
ಅದು ಎಂತೆಂದಡೆ:
...........................
ಹದಿನೇಳು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?

ಹದಿನೇಳು ಎಂದರೆ................
ಅದು ಎಂತೆಂದಡೆ:
....................
ಹದಿನಾರು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಹದಿನಾರು ಎಂದರೆ [ಅ]ರಸುಗಳು
ಅದು ಎಂತೆಂದಡೆ:
ಗ್ರಂಥ || "ಗಯಾಂಬರೀ[ಷ] ಶ[ಶ]ಬಿಂದುರಂಗದೋ
ಪೃಥು[ರ್ಮ]ರು[ತ್] ಭರತ[ಸ್ಸು]ಹೋತ್ರಃ
ರಾಮೋ ದಿಲೀಪೋ ಸಗರ ರಂತಿ ರಾಮ[ಃ]
ಯಯಾತಿ ಮಾಂಧಾತ ಭಗೀರಥ[ಶ್ಚ]"
ಎಂದುದಾಗಿ,
ಗಯ, ಅಂಬರೀಷ, ಶಶಬಿಂದು, ಪೃಥು,
ಮರುತ್, ಭರತ, ಸುಹೋತ್ರ, ಪರಶುರಾಮ,
ದಿಲೀಪ, ಸಗರ, ರಂತಿ, ರಾಮಚಂದ್ರ,
ಯಯಾತಿ, ಮಾಂಧಾತ, ಭಗೀರಥ, ಅ[ಂಗದ]–
ಇವರು ಹದಿನಾರು ಮಂದಿ ಅರಸುಗಳು.

ಹದಿನೈದು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಹದಿನೈದು ಎಂದರೆ ತಿಥಿಗಳು.
ಅದು ಎಂತೆಂದಡೆ:
ಪಾಡ್ಯ, ಬಿದಿಗೆ, ತದಿಗೆ, ಚವುತಿ, [ಪಂಚಮಿ],
ಷಷ್ಠಿ, ಸಪ್ತಮಿ, ಅಷ್ಟಮಿ, ನವಮಿ, ದಶಮಿ,
ಏಕಾದಶಿ, ದ್ವಾದಶಿ, ತ್ರಯೋದಶಿ, ಅಮಾವಾಸ್ಯೆ
ಇವು ಹದಿನೈದು ತಿಥಿಗಳು.

ಹದಿನಾಲಕ್ಕು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಹದಿನಾಲಕ್ಕು ಎಂದರೆ ಲೋಕಂಗಳು.
ಅದು ಎಂತೆಂದಡೆ:
ಅತಲ ವಿತಲ ಸುತಲ ತಲಾತಲ
ಮಹಾತಲ ರಸಾತಲ ಪಾತಾಳ
ಭೂಲೋಕ ಭುವರ್ಲೋಕ ಸುರ್ವರ್ಲೋಕ ಮಹರ್ಲೋಕ
ತಪೋಲೋಕ ಜನೋಲೋಕ ಸತ್ಯಲೋಕ–
ಇವು ಹದಿನಾಲ್ಕು ಲೋಕಂಗಳು.

ಹದಿಮೂರು ಎಂದರೆ ನೋಡಿದ್ದೇನಪ್ಪ, ಕೇಳಿದ್ದೆನಪ್ಪ ?
ಹದಿಮೂರು ಎಂದರೆ ಚಕ್ರಂಗಳು.
ಅದು ಎಂತೆಂದಡೆ,
ಆಧಾರಚಕ್ರ, ಸ್ವಾಷ್ಠಾನಚಕ್ರ, ಮಣಿಪೂರಕಚಕ್ರ,
ಅನಾಹಚಕ್ರ, ವಿಶುದ್ಧಿಚಕ್ರ, ಆಜ್ಞಾಚಕ್ರ,
ಶಿಖಾಚಕ್ರ, ಬ್ರಹ್ಮಚಕ್ರ, ಘಟಚಕ್ರ, ಕಾಲಚಕ್ರ,
ಮೇಘಚಕ್ರ, ಭೂಚಕ್ರ, ಅಪಗಡಚಕ್ರ–
ಇವು ಹದಿಮೂರು ಚಕ್ರಂಗಳು.

ಹನ್ನೆರಡು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಹನ್ನೆರಡು ಎಂದರೆ ಮಾಸಂಗಳು.
ಅದು ಎಂತೆಂದರೆ,
ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ,
ಆಶ್ವೀಜ, ಕಾರ್ತೀಕ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ–
ಇವು ಹನ್ನೆರಡು ಮಾಸಂಗಳು.

ಹನ್ನೊಂದು ಎಂದರೆ ನೋಡಿದ್ದೇನಪ್ಪ ? ಕೇಳಿದ್ದೇನಪ್ಪ ?
ಹನ್ನೊಂದು ಎಂದರೆ ಭಾರತಂಗಳು.
ಅದು ಎಂತೆಂದಡೆ:
ಆದಿಭಾರತ, ಕೈಲಾಸಭಾರತ, ಶ್ರೀರುದ್ರಭಾರತ, ನಂದಿಭಾರತ,
ನಾರ[ದ]ಭಾರ[ತ], ಭೃಗುಭಾರತ, ಮನುಭಾರತ, ಉಮಾಭಾರತ,
ಪ್ರಸಿದ್ಧಭಾರತ, ಸಿದ್ಧೋರಗಭಾರತ, ಶ್ರೀರಂಗಭಾರತ–
ಇವು ಹನ್ನೊಂದು ಭಾರತಂಗಳು.

ಹತ್ತು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಹತ್ತು ಎಂದರೆ, ದಶಾವತಾರಂಗಳು.
ಅದು ಎಂತೆಂದರೆ,
ಗ್ರಂಥ ॥ "ಮತ್ಸ್ಯಃ ಕೂರ್ಮಃ ವರಾಹಶ್ಚ
ನಾರಸಿಂಹಶ್ಚ ವಾಮನಃ
ರಾಮೋ ರಾಮಶ್ಚ [ಕೃಷ್ಣ]ಶ್ಚ
ಬೌದ್ಧಃ ಕಲ್ಕಿ[ರೇ]ವ ಚ"
ಎಂದುದಾಗಿ, ಈ ದಶಾವತಾರಂಗಳಲ್ಲಿ ಯಾರಾರು ಸಂಹಾರ ಎಂದರೆ,
ಮತ್ಸ್ಯಾವತಾರದಲ್ಲಿ ಅಮೃತಮಥನೇ ಸೋಮಕಾಸುರನ ಸಂಹಾರ.

ಕೂರ್ಮಾವತಾರದಲ್ಲಿ ಮಂದರಪರ್ವತಕ್ಕೆ ಆಧಾರ.
ವರಾಹಾವತಾರದಲ್ಲಿ ಹಿರಣ್ಯಾಕ್ಷನ ಸಂಹಾರ.
ನರಸಿಂಹಾವತಾರದಲ್ಲಿ ಹಿರಣ್ಯಕಶ್ಯಪ ಸಂಹಾರ.
ವಾಮನಾವತಾರದಲ್ಲಿ ಪಂಚಮೇಢ್ರಾಸುರ ಎಂಬ ರಾಕ್ಷಸನ ಸಂಹಾರ.
ಪರಶುರಾಮಾವತಾರದಲ್ಲಿ ಕಾರ್ತವೀರ್ಯರ ಸಂಹಾರ.
ರಘುರಾಮಾವತಾರದಲ್ಲಿ ರಾವಣಕುಂಭಕರ್ಣರ ಸಂಹಾರ.
[1]ಬಲಭದ್ರ[1]ನವತಾರದಲ್ಲಿ ಪ್ರಲಂಬಕವಾದ ಅಸುರರ ಸಂಹಾರ.
ಬೌದ್ಧಾವತಾರದಲ್ಲಿ ತ್ರಿಪುರದಾನವಸತಿಯರ ಕೆಡಿಸಿದ.
ಕಲ್ಕ್ಯವತಾರದಲ್ಲಿ [2]ಕಂಸಾಸುರ, ನರಕಾಸುರ, ಬಾಣಾಸುರರ[2] ಸಂಹಾರ,
ಇವು ಹತ್ತು ದಶಾವತಾರಗಳು.

ಒಂಬತ್ತು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಒಂಬತ್ತು ಎಂದರೆ ನವಗ್ರಹಂಗಳು.
ಅದು ಎಂತೆಂದರೆ:
ಆದಿತ್ಯ, ಸೋಮ, ಮಂಗಳ, ಬುಧ, ಬೃಹಸ್ಪತಿ,
ಶುಕ್ರ, ಶನಿ, ರಾಹು, ಕೇತು-
ಇವು ಒಂಬತ್ತು ನವಗ್ರಹಂಗಳು.

ಎಂಟು ಎಂದರೆ ನೋಡಿದ್ದೇನಪ್ಪ ಕೇಳಿದ್ದೇನಪ್ಪ ?
ಎಂಟು ಎಂದರೆ ಅಷ್ಟದಿಕ್ಪಾಲಕರು.
ಅದು ಎಂತೆಂದರೆ:
ಇಂದ್ರ, ಅಗ್ನಿ, ಯಮ, ನೈರುತಿ,
ವರುಣ, ವಾಯುವ್ಯ, ಕುಬೇರ, ಈಶಾನ್ಯ–
ಎಂಟು ಮಂದಿ ಅಷ್ಟದಿಕ್ಪಾಲಕರು.

ಏಳು ಎಂದರೆ ನೋಡಿದ್ದೇನಪ್ಪ ಕೇಳಿದ್ದೇನಪ್ಪ ?
ಏಳು ಎಂದರೆ ಸಪ್ತಋಷಿಗಳು.
ಅದು ಎಂತೆಂದರೆ:
ಗ್ರಂಥ ॥ "ಕಶ್ಯಪಾತ್ರಿ ಭರದ್ವಾಜ[ಃ]
ವಿಶ್ವಾಮಿ[ತ್ರಶ್ಚ] ಗೌತಮ[ಃ]
ಜಮದಗ್ನಿ[ಃ] ವಸಿಷ್ಠ[ಶ್ಚ]

---

೧-೧ ಇಲ್ಲಿ 'ಕೃಷ್ಣ' ಎಂದಿರಬೇಕಿತ್ತು,
೨-೨ ಇವರು ಕಲ್ಕಿ ಕಾಲದವರಲ್ಲ, ಕೃಷ್ಣನ ಕಾಲದವರು.

ಸಪ್ತೈತೇ ಋಷಯ[ಃ ಸ್ಮೃತಾಃ]''
ಎಂದುದಾಗಿ,
ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ,
ಗೌತಮ, ಜಮದಗ್ನಿ, ವಸಿಷ್ಠ–
ಇವರು ಏಳುಮಂದಿ ಸಪ್ತ ಋಷಿಗಳು.

ಆರು ಎಂದರೆ ನೋಡಿದ್ದೇನಪ್ಪ ಕೇಳಿದ್ದೇನಪ್ಪ ?
ಆರು ಎಂದರೆ ಶಾಸ್ತ್ರಂಗಳು.
ಅದು ಎಂತೆಂದರೆ:
ಶಿಲ್ಪಶಾಸ್ತ್ರ, ಭರತಶಾಸ್ತ್ರ, ತರ್ಕಶಾಸ್ತ್ರ, ಶಬ್ದಶಾಸ್ತ್ರ,
ಆ[ನ್ವೀಕ್ಷಕೀ]ಶಾಸ್ತ್ರ, ಜ್ಯೋತಿಷ್ಯಶಾಸ್ತ್ರ-
ಇವು ಆರು ಶಾಸ್ತ್ರಂಗಳು.

ಐದು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಐದು ಎಂದರೆ ಈಶ್ವರನ ಪಂಚ ಮುಖಂಗಳು
ಅದು ಎಂತೆಂದರೆ,
ಗ್ರಂಥ ॥ "ಸದ್ಯೋಜಾ[ತೋ]ದ್ಭವೋಭೂರ್ಮಿಃ]
ವಾಮದೇವೋದ್ಭ[ವಂ ಜಲಂ]
ಅಘೋ[ರಾದ್ವಹ್ನಿ]ರು[ದ್ಭೂತಂ]
ತತ್ಪರು[ಷಾದ್ವಾಯುರ್ಭವೇತ್
ಈಶಾನಾದ್ಗಗನಂ ಜಾತಂ]''
ಎಂದುದಾಗಿ,
ಸದ್ಯೋಜಾತಮುಖ, ವಾಮದೇವಮುಖ, ಅಘೋರಮುಖ,
ತತ್ಪುರುಷಮುಖ, ಈಶಾನ್ಯಮುಖ–
ಇವು ಐದು ಪಂಚಮುಖಂಗಳು.

ನಾಲಕ್ಕು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ನಾಲಕ್ಕು ಎಂದರೆ ವೇದಂಗಳು.
ಅದು ಎಂತೆಂದರೆ:
ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ-
ಇವು ನಾಲ್ಕು ವೇದಂಗಳು.

ಮೂರು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಮೂರು ಎಂದರೆ ತ್ರಿಮೂರ್ತಿಗಳು.

ಅದು ಎಂತೆಂದರೆ:
ಬ್ರಹ್ಮ, ವಿಷ್ಣು, ಈಶ್ವರ–
ಇವರು ಮೂವರು ತ್ರಿಮೂರ್ತಿಗಳು.

ಎರಡು ಎಂದರೆ ನೋಡಿದ್ದೇನಪ್ಪ, ಕೇಳಿದ್ದೇನಪ್ಪ ?
ಎರಡು ಎಂದರೆ ಭಾನು ಶಶಿ.
ಅದು ಎಂತೆಂದರೆ:
ಸೂರ್ಯ, ಚಂದ್ರ–
ಇವರಿಬ್ಬರು ಸೂರ್ಯಚಂದ್ರಾದಿಗಳು.

ಒಂದು ಎಂದರೆ ನೋಡಿದ್ದೇನಪ್ಪ ಕೇಳಿದ್ದೇನಪ್ಪ ?
ಒಂದು ಎಂದರೆ ಏಕೋ[ಏವ]ದೇವಃ
ಅದು ಎಂತೆಂದರೆ:
ದೇವನು ಒಬ್ಬನೇ.
ದೇವನು] ಒಬ್ಬನೇ ಅಲ್ಲದೆ ಇಬ್ಬರೆಂದು ಬಗುಳುವನ
ಮುಖವ ನೋಡಲಾಗದು ಕಾಣೋ
ಕೂಡಲಾದಿ ಚನ್ನಸಂಗಮದೇವಾ. ॥ ೧೯ ॥

■■

## ಗಣದಾಸಿ ವೀರಣ್ಣನ ವಚನ

೬೨೩

ಗುರುವೇ ಪರಶಿವನು.
ಗುರುವೇ ಸಕಲಾಗಮಮೂರ್ತಿ.
ಗುರುವೇ ಸಕಲ ವಿದ್ಯಾಸ್ವರೂಪನು.
ಗುರುವೇ ಸಕಲ ಮಂತ್ರಸ್ವರೂಪನು.
ಗುರುವೇ ಕಲ್ಪವೃಕ್ಷವು, ಕಾಮಧೇನುವು.
ಗುರುವೇ ಪರುಷದ ಖಣಿ, ತವನಿಧಿ.
ಗುರುವೇ ಕರುಣರಸಾಬ್ಧಿ.
ಗುರುವಿನಿಂದಧಿಕ ದೈವವಿಲ್ಲ.
ಸರ್ವಧ್ಯಾನಕ್ಕೆ ಗುರುಧ್ಯಾನವೇ ಅಧಿಕ.
ಸರ್ವಪೂಜೆಗೆ ಗುರುವಿನ ಪಾದಪೂಜೆಯೇ ಅಧಿಕ.
ಸರ್ವಮಂತ್ರಕ್ಕೆ ಗುರುವಿನ ವಾಕ್ಯವೇ ಅಧಿಕ.
ಸರ್ವಮುಕ್ತಿಗೆ ಗುರುವಿನ ಕರುಣಕೃಪೆಯೇ ಅಧಿಕ.
ಸಾಕ್ಷಿ :
"ಧ್ಯಾನಮೂಲಂ ಗುರೋರ್ಮೂರ್ತಿಃ
ಪೂಜಾಮೂಲಂ ಗುರೋಃ ಪದಂ ।

ಮಂತ್ರಮೂಲಂ ಗುರೋರ್ವಾಕ್ಯಂ
ಮುಕ್ತಿಮೂಲಂ ಗುರೋಃ ಕೃಪಾ ||"
ಎಂಬುದಾಗಿ, ಇಂತಿವನೆಲ್ಲವನೊಳಕೊಂಡು
ಎನ್ನ ಕರಸ್ಥಲಕ್ಕೆ ಇಷ್ಟಲಿಂಗಸ್ವರೂಪವಾಗಿ
ಮತ್ತೆ ಮನಸ್ಥಲಕ್ಕೆ ಪ್ರಾಣಲಿಂಗಸ್ವರೂಪವಾಗಿ
ಮತ್ತೆ ಭಾವಸ್ಥಲಕ್ಕೆ ಭಾವಲಿಂಗಸ್ವರೂಪವಾಗಿ
ಈ ತ್ರಿವಿಧಮೂರ್ತಿಯೇ ಅಷ್ಟಾವರಣಸ್ವರೂಪವಾಗಿ
ಎನ್ನ ಅಱುಹಿನಲ್ಲಿ ಗುರು
ಎನ್ನ ಪ್ರಾಣದಲ್ಲಿ ಲಿಂಗ
ಎನ್ನ ಜ್ಞಾನದಲ್ಲಿ ಜಂಗಮ
ಎನ್ನ ಜಿಹ್ವೆಯಲ್ಲಿ ಪಾದೋದಕ
ಎನ್ನ ನಾಸಿಕದಲ್ಲಿ ಪ್ರಸಾದ
ಎನ್ನ ತ್ವಕ್ಕಿನಲ್ಲಿ ವಿಭೂತಿ
ಎನ್ನ ನೇತ್ರದಲ್ಲಿ ರುದ್ರಾಕ್ಷಿ
ಎನ್ನ ಶ್ರೋತ್ರದಲ್ಲಿ ಪಂಚಾಕ್ಷರಿ
ಇಂತಿವು ಅಷ್ಟಾವರಣಸ್ವರೂಪವಾಗಿ
ಎನ್ನೊಳು ತನ್ನ ಕರುಣಕೃಪೆಯ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ||೧||

೬೨೪

ಪಾದಪೂಜೆಯ ಮಾಡಿ ಪಾದತೀರ್ಥವ ಪಡೆದುಕೊಂಬ
ಕ್ರಮವು ಎಂತೆಂದಡೆ :
"ದೇಶಿಕಸ್ಯ ಪದಾಂಗುಷ್ಠೇ ಲಿಖಿತಾ ಪ್ರಣವಂ ತತಃ |
ಪಾದಪೂಜಾವಿಧಿಂ ಕೃತ್ವಾ ವಿಶೇಷಂ ಶೃಣು ಪಾರ್ವತಿ ||"
ಎಂದುದಾಗಿ, ಭಯಭಕ್ತಿ ಕಿಂಕುರ್ವಾಣದಿಂದೆ
ಜಂಗಮಕ್ಕೆ ಪಾದಾರ್ಚನೆಯಂ ಮಾಡಿ
ಗದ್ದುಗೆಯನಿಕ್ಕಿ ಮೂರ್ತವ ಮಾಡಿಸಿ
ತನ್ನ ಕರಕಮಲವಂ ಮುಗಿದು
ಅಯ್ಯಾ, ಹಸಾದ ಮಹಾಪ್ರಸಾದ ಪೂರ್ವಜನ್ಮ ನಿವಾರಣಂ
ದೀಕ್ಷಾಗುರು ಶಿಕ್ಷಾಗುರು ಮೋಕ್ಷಗುರು
ಗುರುವಿನಗುರು ಪರಮಗುರು ಪರಮಾರಾಧ್ಯ
ಶ್ರೀಪಾದಗಳಿಗೆ ಶರಣು ಶರಣಾರ್ಥಿಯೆಂದು

"ಪ್ರಣಮ್ಯ ದಂಡವದ್ಭೂಮೌ ಇಷ್ಟಮಂತ್ರಂ [ಸದಾಜಪೇತ್]
ಶ್ರೀ ಗುರೋಃ ಪಾದಪದ್ಮಂ ಚ ಗಂಧಪುಷ್ಪಾಕ್ಷತಾದಿಭಿಃ ||"
ಎಂದುದಾಗಿ,
ದೀರ್ಘದಂಡ ನಮಸ್ಕಾರವಂ ಮಾಡಿ
ಪಾದಪೂಜೆಗೆ ಅಪ್ಪಣೆಯಂ ತಕ್ಕೊಂಡು
ಮೂರ್ತವಂ ಮಾಡಿ ಲಿಂಗವ ನಿರೀಕ್ಷಿಸಿ
ತನ್ನ ಅಂಗೈಯಲ್ಲಿ ಓಂಕಾರ ಪ್ರಣವಮಂ
ವಿಭೂತಿಯಲ್ಲಿ ಬರೆದು
ಆ ಜಂಗಮದ ಎರಡು ಪಾದಗಳ ತನ್ನ ಕರಕಮಲದಲ್ಲಿ
ಲಿಂಗೋಪಾದಿಯಲ್ಲಿ ಪಿಡಿದುಕೊಂಡು
ಎರಡು ಅಂಗುಷ್ಠಗಳಲ್ಲಿ ಪ್ರಣವಮಂ ಬರೆದು,
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ ನಮಸ್ಕರಿಸಿ,
ಆ ಪೂಜೆಯಂ ಇಳುಹಿ ಬಟ್ಟಲೊಳಗೆ ಪ್ರಣವಮಂ ಬರೆದು
ಬ್ರಹ್ಮರಂಧ್ರದಲ್ಲಿರ್ದ ಸತ್ತ್ಯೋದಕವೆಂದು ಭಾವಿಸಿ,
ಆ ಉದಕವ ಬಲದಂಗುಷ್ಠದ ಮೇಲೆ ನೀಡುವಾಗ
ಆಱುವೇಳೆ ಷಡಕ್ಷರವ ನುಡಿದು
ಇಷ್ಟಲಿಂಗವೆಂದು ಭಾವಿಸಿ,
ಎಡದಂಗುಷ್ಠದ ಮೇಲೆ ನೀಡುವಾಗ
ಐದುವೇಳೆ ಪಂಚಾಕ್ಷರವ ನುಡಿದು ಪ್ರಾಣಲಿಂಗವೆಂದು ಭಾವಿಸಿ,
ಎರಡಂಗುಷ್ಠದ ಮಧ್ಯದಲ್ಲಿ ಉದಕವ ನೀಡುವಾಗ
ಒಂದು ವೇಳೆ 'ಓಂ ಬಸವಲಿಂಗಾಯನಮಃ' ಎಂದು ಸ್ಮರಿಸಿ,
ಭಾವಲಿಂಗವೆಂದು ಭಾವಿಸಿ ದ್ರವನೆಲ್ಲವ ತೆಗೆದು
ಮತ್ತೆ ಪೂಜೆಯ ಮಾಡಿ ನಮಸ್ಕರಿಸಿ ಶರಣಾರ್ಥಿಯೆಂದು
ಆ ಜಂಗಮವು ಸಲ್ಲಿಸಿದ ಮೇಲೆ ತಾನು ಪಾದತೀರ್ಥವ ಸಲ್ಲಿಸುವುದು.
ಪಂಚಾಂಗುಲಿ ಪಂಚಾಕ್ಷರಿಯಿಂದಲಿ ಲಿಂಗಕರ್ಪಿಸಿ
ಆ ಪಂಚಾಂಗುಲಿಯುತ ಜಿಹ್ವೆಯಿಂದ ಸ್ವೀಕರಿಸುವುದು
ಗುರುಪಾದೋದಕ.
ಲಿಂಗವನೆತ್ತಿ ಅಂಗೈಯಲ್ಲಿರ್ದ ತೀರ್ಥವ ಸಲ್ಲಿಸಿದುದು
ಲಿಂಗಪಾದೋದಕ.
ಬಟ್ಟಲೊಳಗಿರ್ದ ತೀರ್ಥವ ಸಲಿಸಿದುದು ಜಂಗಮಪಾದೋದಕ.
ಈ ತ್ರಿವಿಧ ಪಾದೋದಕ ಒಂದೇ ಎಂದರಿವುದು.

ಹೀಗೆ ಕ್ರಮವರಿದು ಸಲಿಸುವರ್ಗೆ
ಮುಕ್ತಿಯಾಗುವುದಕ್ಕೆ ತಡವಿಲ್ಲವೆಂದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೨ ॥

೬೨೫

ಲಿಂಗಾರ್ಚನೆಯ ಮಾಡುವಾಗ
ಪಾದಪೂಜೆಯ ಮಾಡುವಾಗ
ಪಾದೋದಕ ಪ್ರಸಾದ ಕೊಂಬುವಾಗ
ಭವಿಶಬ್ದ ಕುಶಬ್ದ ಹಿಂಸಾಶಬ್ದ ಹೊಲೆಶಬ್ದ ಹುಸಿಶಬ್ದ
ಹೇಸಿಕೆಶಬ್ದ ವಾಕರಿಕೆಶಬ್ದ
ಇವೆಲ್ಲವ ಪ್ರಸಾದಿಗಳು ವರ್ಜಿಸುವುದು.
ವರ್ಜಿಸದಿರ್ದಡೆ,
ಲಿಂಗಾರ್ಚನೆ ಪಾದಪೂಜೆ ಪಾದೋದಕ ಪ್ರಸಾದ ನಿಷ್ಫಲ.
ಸಾಕ್ಷಿ :
"ಭವಿಶಬ್ದಂ ಕುಶಬ್ದಂ ಚ ಹಿಂಸಾಶಬ್ದಂ ಸತಾಪಕಂ ।
ಶ್ವಪಚಾಽನೃತಶಬ್ದಂ ಚ ಕರ್ಕಶೋ ಭಾಂಡಿಕೋಪಿ ವಾ ।
ಬೀಭತ್ಸಕಂ ಮಹಾದೇವಿ ಪ್ರಸಾದಂ ಚ ವಿವರ್ಜಯೇತ್ ॥"
ಎಂದುದಾಗಿ,
ಪ್ರಸಾದ ಮುಗಿಯುವತನಕ ಭೋಜ್ಯ ಭೋಜ್ಯಕ್ಕೆ
ಪಂಚಾಕ್ಷರಿಯ ಸ್ಮರಿಸುತ್ತ ಸಲಿಸುವುದು.
ಶಿವಸ್ಮರಣೆಯಿಂದ ಸ್ವೀಕರಿಸಿದ್ದು ಮುನ್ನೂರರುವತ್ತು
ವ್ಯಾಧಿ ನಿಲ್ಲದೆ ಓಡುವವು.
ಹೀಗೆ ನಂಬಿಗೆಯುಳ್ಳಡೆ ಪ್ರಸಾದಸಿದ್ಧಿಯಪ್ಪುದು ನೋಡಾ !
ನಮ್ಮ ಬಿಬ್ಬಬಾಚಯ್ಯನವರು ನಂಬಿದ ಕಾರಣದಿಂದ
ಓಗರ ಪ್ರಸಾದವಾಗಿ,
ಎಂಜಲವೆಂದ ವಿಪ್ರರ ಮಂಡೆಯಮೇಲೆ ತಳೆಯಲು ಕೆಂಡವಾಗಿ
ಸುಟ್ಟುದಿಲ್ಲವೆ ಗ್ರಾಮಸಹಿತವಾಗಿ ?
ಮತ್ತೆ, ಮರುಳಶಂಕರದೇವರು ಪ್ರಸಾದದ ಕುಂಡದೊಳಗೆ
ಹನ್ನೆರಡು ವರ್ಷವಿದ್ದು ನಿಜೈಕ್ಯವಾದುದಿಲ್ಲವೆ ?
ಇಂತಪ್ಪ ದೃಷ್ಟವ ಕಂಡು ನಂಬದಿರ್ದಡೆ ಕರ್ಮದ ಫಲವು :
ನಂಬಿದವರಿಗಿಂಬಾಗಿಪ್ಪನು ನಮ್ಮ ಶಾಂತಕೂಡಸಂಗಮದೇವ. ॥ ೩ ॥

೬೨೬

ಪ್ರಸಾದಿ ಪ್ರಸಾದಿಗಳೆಂದು ನುಡಿದುಕೊಂಡು ನಡೆಯಬಹುದಲ್ಲದೆ
ಪ್ರಸಾದವ ಕೊಂಬ ಭೇದವನರಿಯರು.
ಕರುಣಿಸು ಮದ್ಗುರುವೆ,
ಕೇಳಯ್ಯ ಮಗನೆ :
ಗುರುವಿನಲ್ಲಿ ತನುವಂಚನೆಯಿಲ್ಲದೆ ಕೊಂಬುದು ಶುದ್ಧಪ್ರಸಾದ :
ಲಿಂಗದಲ್ಲಿ ಮನವಂಚನೆಯಿಲ್ಲದೆ ಕೊಂಬುದು ಸಿದ್ಧಪ್ರಸಾದ :
ಜಂಗಮದಲ್ಲಿ ಧನವಂಚನೆಯಿಲ್ಲದೆ ಕೊಂಬುದು ಪ್ರಸಿದ್ಧಪ್ರಸಾದ.
ಈ ತ್ರಿವಿಧಲಿಂಗದಲ್ಲಿ ತ್ರಿವಿಧ ವಂಚನೆಯಿಲ್ಲದೆ
ಅವರ ಕರುಣಪ್ರಸಾದವ ಕೊಂಬ ಪ್ರಸಾದಕಾಯಕ್ಕೆ
ಪ್ರಳಯಬಾಧೆಗಳು ಬಾಧಿಸಲಮ್ಮವು :
ಕರಿ ಉರಗ ವೃಶ್ಚಿಕ-ಇವು ಹೊದ್ದಲಮ್ಮವು :
ಇರುವೆ ಕೆಂಡವು ಹೊದ್ದಲಮ್ಮವು.
ಹೊದ್ದುವ ಪರಿ ಎಂತೆಂದೊಡೆ :
ಲಿಂಗದಲ್ಲಿ ನಿಷ್ಠೆಯಿಲ್ಲ ; ಜಂಗಮದಲ್ಲಿ ಪ್ರೇಮ-ಭಕ್ತಿಯಿಲ್ಲ ;
ವಿಭೂತಿ–ರುದ್ರಾಕ್ಷಿಯಲ್ಲಿ ವಿಶ್ವಾಸವಿಲ್ಲ ;
ಶಿವಾಚಾರದಲ್ಲಿ ದೃಢವಿಲ್ಲದ ಕಾರಣ
ತಾಪತ್ರಯಂಗಳು ಕಾಡುವವು ಎಂದಿರಿ ಸ್ವಾಮಿ,
'ಮತ್ತೆ ನಂಬುಗೆಯುಳ್ಳ ಪ್ರಸಾದಿಗಳಿಗೆ ವ್ಯಾಧಿಯೇಕೆ ಕಾಡುವವು ?
ಸದ್ಗುರುಮೂರ್ತಿಯೆ ಕರುಣಿಸು ಎನ್ನ ತಂದೆ'.
ಕೇಳೈ ಮಗನೆ :
ಭಕ್ತಗಣಂಗಳಿಗೆ ವಂದಿಸಿ ನಿಂದಿಸಿ
ಹಾಸ್ಯ ದೂಷಣವ ಮಾಡಿದಡೆ
ಅದೇ ವ್ಯಾಧಿರೂಪಾಗಿ ಕಾಡುವದು :
ತಲೆಶೂಲೆ ಹೊಟ್ಟೆಶೂಲೆ ನಾನಾತರದ ಬೇನೆಯಾಗಿ ಕಾಡುವವು.
ಆ ಭಕ್ತಗಣಂಗಳಿಗೆ ತಾನು ನಿಂದಿಸಿದುದ ತಿಳಿದು,
ಅವರಿಗೆ ತ್ರಿಕರಣಶುದ್ಧವಾಗಿ ಸೇವೆಯ ಮಾಡಿ,
ಅವರ ಕರುಣವ ಹಡೆದಡೆ
ಆಗ ಅವರಿಗೆ ವ್ಯಾಧಿ ಬಿಟ್ಟು ಹೋಗುವವು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೪ ॥

೬೨೭

ಗುರುಲಿಂಗಜಂಗಮಾರ್ಚನೆಯ ಕ್ರಮವ
ದಯೆಯಿಂದ ಕರುಣಿಪುದು ಸ್ವಾಮಿ.
ಕೇಳ್ಳೆ ಮಗನೆ :
ತಾನಿದ್ದ ಊರಲ್ಲಿ ಗುರುವು ಇದ್ದಡೆ
ನಿತ್ಯ ತಪ್ಪದೆ ದರುಶನವ ಮಾಡುವುದು.
ಗುರುಪೂಜೆಯ ಮಾಡುವಾಗ ಆ ಗುರುವಿನೊಳಗೆ
ಲಿಂಗ-ಜಂಗಮವುಂಟೆಂದು ಭಾವಿಸಿ
ತನು-ಮನ-ಧನವನೊಪ್ಪಿಸಿ ಅರ್ಚಿಸಿದ್ದುದೆ ಗುರುಪೂಜೆ.
ಲಿಂಗಪೂಜೆಯ ಮಾಡುವಾಗ ಆ ಲಿಂಗದೊಳಗೆ
ಜಂಗಮ-ಗುರುವುಂಟೆಂದುಭಾವಿಸಿ
ತನು-ಮನ-ಧನವನೊಪ್ಪಿಸಿ ಅರ್ಚಿಸಿದ್ದುದೆ ಲಿಂಗಪೂಜೆ.
ಇನ್ನು ಜಂಗಮದ ಪೂಜೆ ಮಾಡುವಾಗ
ಆ ಜಂಗಮದೊಳಗೆ ಗುರು-ಲಿಂಗವುಂಟೆಂದು ಭಾವಿಸಿ
ತನು-ಮನ-ಧನವನೊಪ್ಪಿಸಿ ಅರ್ಚಿಸಿದ್ದುದೆ ಜಂಗಮಪೂಜೆ.
ಈ ತ್ರಿವಿಧಮೂರ್ತಿ ಭಕ್ತನ ತ್ರಿವಿಧ ತನುವಿಗೋಸ್ಕರವಾಗಿ
ಇಷ್ಟ ಪ್ರಾಣ ಭಾವಲಿಂಗಸ್ವರೂಪವಾಗಿಹರೆಂದು ನಿರೂಪಿಸಿದಿರಿ ಸ್ವಾಮಿ.
ಆ ತ್ರಿವಿಧಲಿಂಗದ ಪೂಜೆಯ [ಕ್ರಮವ] ಕರುಣಿಪುದು ಎನ್ನ ಶ್ರೀಗುರುವೇ.
ಕೇಳ್ಳೆ ಮಗನೆ :
ಇಷ್ಟಲಿಂಗದ ಪೂಜೆಯ ಮಾಡುವಾಗ ಆ ಇಷ್ಟಲಿಂಗದೊಳಗೆ
ಪ್ರಾಣಲಿಂಗ ಭಾವಲಿಂಗವುಂಟೆಂದು ಭಾವಿಸಿ
ಕರ-ಮನ-ಭಾವದೊಳಗಿರಿಸಿ ಪೂಜಿಸುವುದು ಇಷ್ಟಲಿಂಗದಪೂಜೆ.
ಪ್ರಾಣಲಿಂಗದ ಪೂಜೆಯ ಮಾಡುವಾಗ ಆ ಪ್ರಾಣಲಿಂಗದೊಳಗೆ
ಇಷ್ಟಲಿಂಗ ಭಾವಲಿಂಗವುಂಟೆಂದು ಭಾವಿಸಿ
ಭಾವ-ಮನ-ಕರದೊಳಗಿರಿಸಿ ಪೂಜಿಸುವುದು ಪ್ರಾಣಲಿಂಗದಪೂಜೆ.
ಭಾವಲಿಂಗದ ಪೂಜೆಯ ಮಾಡುವಾಗ ಆ ಭಾವಲಿಂಗದೊಳಗೆ
ಇಷ್ಟಲಿಂಗ ಪ್ರಾಣಲಿಂಗವುಂಟೆಂದು ಭಾವಿಸಿ
ಕರ-ಮನ-ಭಾವದೊಳಗಿರಿಸಿ ಪೂಜಿಸುವುದು ಭಾವಲಿಂಗದಪೂಜೆ.
ಸಾಕ್ಷಿ :
"ಏಕಮೂರ್ತಿಸ್ತ್ರಯೋ ಭಾಗಾಃ ಗುರುರ್ಲಿಂಗಂತು ಜಂಗಮಃ ।
ಜಂಗಮಶ್ಚ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೇ ॥"

ಎಂದುದಾಗಿ, ತ್ರಿವಿಧವು ಒಂದೇ ಎಂದರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೫ ॥

೬೨೮

ಲಿಂಗಾಂಗಸಂಗಸಮರಸದ ವಿವರವ ಕರುಣಿಸು ಸ್ವಾಮಿ.
ಕೇಳೈ ಮಗನೆ :
ಮುಖಪ್ರಕ್ಷಾಲನ ಮಾಡುವಾಗ
ಲಿಂಗಕ್ಕೆ ಮಜ್ಜನವ ನೀಡಿದುದು
ಇಷ್ಟಲಿಂಗದ ಮಜ್ಜನ.
ಲಿಂಗಾರ್ಚನೆ ಮಾಡುವಾಗ
ಕ್ರಿಯೆಯಿಟ್ಟು ಲಿಂಗಕ್ಕೆ ಮಜ್ಜನವ ನೀಡಿದುದು
ಪ್ರಾಣಲಿಂಗದ ಮಜ್ಜನ.
ಲಿಂಗಾರ್ಚನೆ ಮುಗಿದ ಬಳಿಕ
ಮಜ್ಜನ ನೀಡಿದುದು
ಭಾವಲಿಂಗದ ಮಜ್ಜನವೆಂದರಿವುದು.
ಇನ್ನು ವಿಭೂತಿಯ ಧರಿಸುವ ಕ್ರಮವು :
ಸ್ನಾನ ಧೂಳನ ಧಾರಣ.
ಸ್ನಾನ ಮಾಡಿದುದು ಇಷ್ಟಲಿಂಗದಲ್ಲಿ ;
ಧೂಳನವ ಮಾಡಿದುದು ಪ್ರಾಣಲಿಂಗದಲ್ಲಿ ;
ಧಾರಣವ ಮಾಡಿದುದು ಭಾವಲಿಂಗದಲ್ಲಿ.
ಇನ್ನು ಲಿಂಗಪೂಜೆ ;
ಹೊರಗಣ ಪುಷ್ಪ ಇಷ್ಟಲಿಂಗಕ್ಕೆ :
ಒಳಗಣ ಕಮಲದ ಪುಷ್ಪ ಪ್ರಾಣಲಿಂಗಕ್ಕೆ ;
ಬಯಲ ಪುಷ್ಪ ಭಾವಲಿಂಗಕ್ಕೆಂದರಿವುದು.
ಇನ್ನು ಜಪದ ಕ್ರಮ :
ಹನ್ನೆರಡು ಪ್ರಣವ ಮಾಡಲಾಗಿ
ಪಂಚತತ್ತ್ವಪಡೆದ ಜಪ ಇಷ್ಟಲಿಂಗಕ್ಕೆ ;
ಒಳಗಣ ಜಪ ಇಪ್ಪತ್ತೊಂದು ಸಾವಿರದಾರುನೂರು
ಪ್ರಾಣಲಿಂಗಕ್ಕೆ :
ಬಯಲ ಜಪ ಭಾವಲಿಂಗಕ್ಕೆಂದರಿವುದು.
ಇನ್ನು ತ್ರಿಕಾಲಪೂಜೆ :
ಉದಯಕಾಲದ ಪೂಜೆ ಇಷ್ಟಲಿಂಗಕ್ಕೆ :

ಮಧ್ಯಾಹ್ನದ ಪೂಜೆ ಪ್ರಾಣಲಿಂಗಕ್ಕೆ :
ಸಾಯಂಕಾಲದ ಪೂಜೆ ಭಾವಲಿಂಗಕ್ಕೆಂದರಿವುದು.
ಇನ್ನು ಪ್ರಸಾದತ್ರಯದ ವಿವರ :
ಶುದ್ಧಪ್ರಸಾದ ಇಷ್ಟಲಿಂಗಕ್ಕೆ :
ಸಿದ್ಧಪ್ರಸಾದ ಪ್ರಾಣಲಿಂಗಕ್ಕೆ ;
ಪ್ರಸಿದ್ಧಪ್ರಸಾದ ಭಾವಲಿಂಗಕ್ಕೆಂದರಿವುದು.
ಇನ್ನು ಭೋಗತ್ರಯದ ವಿವರ :
ಭೋಜನಸುಖವು ಇಷ್ಟಲಿಂಗಕ್ಕೆ ;
ತನ್ನ ಸ್ತ್ರೀಸಂಗದಸುಖವು ಪ್ರಾಣಲಿಂಗಕ್ಕೆ ;
ವಸ್ತ್ರಾಭರಣದ ಸುಖವು ಭಾವಲಿಂಗಕ್ಕೆಂದರಿವುದು.
ಲಿಂಗಾಂಗಿಯ ಚರಿತ್ರದ ವಿವರ ;
ನಿಂತಿರ್ದುದು ಇಷ್ಟಲಿಂಗಕ್ಕೆ ;
ಕುಂತಿರ್ದುದು ಪ್ರಾಣಲಿಂಗಕ್ಕೆ
ಮಲಗಿರ್ದುದು ಭಾವಲಿಂಗಕ್ಕೆಂದರಿವುದು.
ಇನ್ನು ನಡೆವುದು ಇಷ್ಟಲಿಂಗವು ;
ನುಡಿವುದು ಪ್ರಾಣಲಿಂಗವು ;
ಪಿಡಿದುನೋಡುವ ಸುಖವು ಭಾವಲಿಂಗವು ಎಂದರಿವುದು.
ಇನ್ನು ಇಷ್ಟಲಿಂಗದ ಗರ್ಭದಲ್ಲಿ ತನ್ನ ಶರೀರವನಿಟ್ಟು
ಬ್ರಹ್ಮರಂಧ್ರದಲ್ಲಿರ್ದ ಸಹಸ್ರದಳ ಕಮಲದೊಳಗೆ
ಆ ಇಷ್ಟಲಿಂಗವ ಮುಳುಗಿಸುವುದೀಗ ಲಿಂಗಾಂಗವು.
ಇನ್ನು ನೇತ್ರಸ್ಥಾನದಲ್ಲಿರ್ದ ವಿಶ್ವಜೀವನ ಜಾಗ್ರಾವಸ್ಥೆ
ಸ್ಥೂಲತನುವಿನ ವ್ಯವಹರಣೆ ಇಷ್ಟಲಿಂಗವೆಂದರಿವುದು.
ಕಂಠಸ್ಥಾನದಲ್ಲಿರ್ದ ತೈಜಸಜೀವನ ಸ್ವಪ್ನಾವಸ್ಥೆ
ಸೂಕ್ಷ್ಮತನುವಿನ ವ್ಯವಹರಣೆ ಪ್ರಾಣಲಿಂಗವೆಂದರಿವುದು.
ಹೃದಯಸ್ಥಾನದಲ್ಲಿರ್ದ ಪ್ರಾಜ್ಞಜೀವನ ಸುಷುಪ್ತಾವಸ್ಥೆ
ಕಾರಣತನುವಿನ ವ್ಯವಹರಣೆ ಭಾವಲಿಂಗವೆಂದರಿವುದು.
ಇನ್ನು ಆಯತ ಇಷ್ಟಲಿಂಗವು ಸ್ವಾಯತ ಪ್ರಾಣಲಿಂಗವು
ಸನ್ನಹಿತ ಭಾವಲಿಂಗವು ಎಂದರಿವುದು.
ಇನ್ನು ಪಾತಾಳಲೋಕವನೊಳಕೊಂಡದ್ದು ಇಷ್ಟಲಿಂಗವಹುದು ;
ಮರ್ತ್ಯಲೋಕವನೊಳಕೊಂಡದ್ದು ಪ್ರಾಣಲಿಂಗವಹುದು ;
ಸ್ವರ್ಗಲೋಕವನೊಳಕೊಂಡದ್ದು ಭಾವಲಿಂಗವಹುದು.

ಈರೇಳುಲೋಕವನೊಳಕೊಂಡದ್ದು ಪ್ರಾಣಲಿಂಗವು ;
ಚರ್ಮಚಕ್ಷುವಿಗೆ ಅಗೋಚರವು,
ಮನೋನೇತ್ರಕ್ಕೆ ಒಂದೆರಡಾಗಿ ಕಾಣಲ್ಪಟ್ಟುದೀಗ ಪ್ರಾಣಲಿಂಗವು.
ಆ ಪ್ರಾಣಲಿಂಗಕ್ಕೆ ಎರಡು ನೇತ್ರಂಗಳು ಪುಷ್ಪವಾಗಿಪ್ಪುದೆ ಲಿಂಗಾಂಗಸಂಗವು.
ಇನ್ನು ರೂಪಾಗಿ ಬಂದ ಪದಾರ್ಥವನು ಭೋಗಿಸುವದು
ಇಷ್ಟಲಿಂಗವು ತಾನೆ.
ರುಚಿಯಾಗಿ ಬಂದ ಪದಾರ್ಥವನು ಭೋಗಿಸುವದು
ಪ್ರಾಣಲಿಂಗವು ತಾನೆ.
ತೃಪ್ತಿಯಾಗಿ ಬಂದ ಪದಾರ್ಥವನು ಭೋಗಿಸುವದು
ಭಾವಲಿಂಗವು ತಾನೆ.
ಸಾಕ್ಷಿ :
"ಇಷ್ಟಲಿಂಗಾರ್ಪಿತಂ ಅಂಗಂ ಪ್ರಾಣಲಿಂಗಾರ್ಪಿತಂ ಮನಂ |
ಭಾವಲಿಂಗಾರ್ಪಿತಂ ತೃಪ್ತಿರಿತಿ ಭೇದೋ ವರಾನನೇ ||"
ಎಂದುದಾಗಿ,
ಅಂಗವೆಂದರೆ ರೂಪು, ಮನವೆಂದರೆ ರುಚಿ,
ಸಂತೋಷವೆಂದರೆ ತೃಪ್ತಿ ಎಂದರಿವುದು.
ಕ್ರಿಯೆವಿಡಿದು ಕಾಯಾರ್ಪಣ ಮಾಡುವ
ಷಡ್ವಿಧಲಿಂಗದಸುಖವ ಭೋಗಿಸುವಾತ ಇಷ್ಟಲಿಂಗವು ತಾನೆ.
ಜ್ಞಾನವಿಡಿದು ಕರಣಾರ್ಪಣವ ಮಾಡುವ
ಛತ್ತೀಸಲಿಂಗದ ಸುಖವ ಭೋಗಿಸುವಾತ ಪ್ರಾಣಲಿಂಗ ತಾನೆ.
ಭಾವವಿಡಿದು ಪರಿಣಾಮಾರ್ಪಣ ಮಾಡುವ
ಇನ್ನೂರ ಹದಿನಾರು ಲಿಂಗದ ಸುಖವ ಭೋಗಿಸುವಾತ ಭಾವಲಿಂಗವು ತಾನೆ.
ಸಾವಿರದ ಇನ್ನೂರಾ ತೊಂಬತ್ತಾರು ಲಿಂಗ
ಇಂತಪ್ಪ ಬಯಲಲಿಂಗವು ಲೆಕ್ಕಕ್ಕೆ ನಿಲುಕದು.
ಬಯಲ ಹಸ್ತದಿಂದ ಪೂಜಿಸಿ
ಆ ಬಯಲಲಿಂಗದೊಳಗೆ ತಾನಾಗಿ
ತನ್ನೊಳಗೆ ಬಯಲ ಲಿಂಗವು ಬೆರದುದು
ಇದು ಲಿಂಗಾಂಗಸಂಗ ಸಮರಸವು.
ಇದು 'ಶರಣಸತಿ ಲಿಂಗಪತಿ' ನ್ಯಾಯವು.
ಇದು ತ್ರಿವಿಧ ತನುವ ತ್ರಿಲಿಂಗಕ್ಕೆ ಅರ್ಪಿಸುವ ಕ್ರಮವು.
ಇಂತಿವೆಲ್ಲ ಕ್ರಮವನೊಳಕೊಂಡು

ಇಷ್ಟಬ್ರಹ್ಮವು ತಾನೆಯೆಂದರಿದಾತ
ನಮ್ಮ ಶಾಂತಕೂಡಲಸಂಗಮದೇವ
ಬಲ್ಲನಲ್ಲದೆ ಅಂಗಸಂಗಿಗಳೆತ್ತಬಲ್ಲರು ನೋಡಾ. ||೬||

೬೨೯

ಈರೇಳು ಲೋಕವನೊಳಕೊಂಡ ಮಹಾಘನಲಿಂಗವು
ಭಕ್ತನ ಕರಸ್ಥಲಕ್ಕೆ ಬಂದು ಪೂಜೆಗೊಂಬ ಪರಿಯ ನೋಡಾ.
ಅಗಮ್ಯ ಅಗೋಚರ ಅಪ್ರಮಾಣ ಲಿಂಗಸಂಗದಲ್ಲಿ
ಇರಬಲ್ಲಾತನೇ ಭಕ್ತನು.
ಹೀಗಲ್ಲದೆ ಕೇಡಿಲ್ಲದೆ ಲಿಂಗಕ್ಕೆ ಕೇಡ ಕಟ್ಟಿ
ಹೋದೀತೋ ಇದ್ದೀತೋ ಅಳಿದೀತೋ
ಹೇಗೋ ಎಂತೋ ಎಂದು ಚಿಂತಿಸಿ ನುಡಿವರು ಭಿನ್ನವಿಜ್ಞಾನಿಗಳು.
ಆ ಲಿಂಗದೊಳಗೆ ಅಖಿಳಾಂಡಕೋಟಿ ಬ್ರಹ್ಮಾಂಡಗಳಡಗಿದವು.
ಸಾಕ್ಷಿ :
"ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ |
ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್ ||"
ಎಂದುದಾಗಿ,
ಇಂತಪ್ಪ ಘನಲಿಂಗವ ಶ್ರೀಗುರು ಭಕ್ತಂಗೆ
ಕರ-ಮನ-ಭಾವಕ್ಕೆ ಪ್ರತ್ಯಕ್ಷವಾಗಿ ಮಾಡಿಕೊಟ್ಟ ಬಳಿಕ
ಎಂದಿಗೂ ಅಗಲಬೇಡಿಯೆಂದು ಗಣಸಾಕ್ಷಿಯಾಗಿ
ಮಾಡಿಕೊಟ್ಟ ಬಳಿಕ ಅಗಲಲುಂಟೆ ? ಅಗಲಿದಡೆ ಲಿಂಗವು ಗುರುತಲ್ಪಕವೆ ಸರಿ.
ಆವ ಶಾಸ್ತ್ರ ಆವ ಆಗಮ ಆವ ವಚನ ಹೇಳಿಲ್ಲವಾಗಿ,
ಮತ್ತಂ, ಸಂಪಿಗೆಯ ಪುಷ್ಪದ ಪರಿಮಳ ಬೇರೆ ಆಗಲುಂಟೆ ?
ಇಂತಪ್ಪ ಮಹಾಘನಲಿಂಗವು ಹೇಗಿಪ್ಪುದೆಂದಡೆ :
ಅವರವರ ಮನ ಭಾವ ಹೇಗಿಪ್ಪುದೊ ಹಾಗಿಪ್ಪುದು.
ಇದಕ್ಕೆ ದೃಷ್ಟಾಂತ :
ಉದಕ ಒಂದೇ, ಹಲವು ವೃಕ್ಷದ ಹಣ್ಣು
ಮಧುರ ಒಗರು ಖಾರ ಹುಳಿ ಕಹಿ ಸವಿ.
ಉದಕ ಒಂದೇ, ಶ್ವೇತ ಪೀತ ಹರಿತ ಮಾಂಜಿಷ್ಟ ಕಪೋತ ಮಾಣಿಕ್ಯ.
ಈ ಆರು ವರ್ಣಂಗಳಲ್ಲಿ ಬೆರೆದುದು ಅಭ್ರಕ ಒಂದೇ!
ಈ ಅಭ್ರಕ ಹೇಗೊ ಹಾಗೆ ಮನ, ಹಾಗೆ ಮಹಾಲಿಂಗ.

ಹೀಗೆಂದರಿದಾತ ನಮ್ಮ ಶಾಂತಕೂಡಲಸಂಗಮದೇವ
ಬಲ್ಲನಲ್ಲದೆ ಭಿನ್ನಜ್ಞಾನಿಗಳು ಎತ್ತ ಬಲ್ಲರು ನೋಡಾ! ॥ ೭ ॥

೬೩೦

ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣ ಮಹಾಘನಲಿಂಗವು
ಭಕ್ತಂಗೆ ಸಾಕಾರವಾಗಿ ತನುತ್ರಯಕ್ಕೆ ಇಷ್ಟ-ಪ್ರಾಣ-ಭಾವಲಿಂಗ
ಸ್ವರೂಪವಾಗಿರ್ದ ಕಾರಣ,
ನಡೆವುತ್ತ ನುಡಿವುತ್ತ ಸರ್ವಾವಸ್ಥೆಯಲ್ಲಿ ಲಿಂಗದೊಳಗಿಪ್ಪಾತನೆ ಭಕ್ತ.
ಹೀಗಲ್ಲದೆ ನಿತ್ಯವಾದ ಲಿಂಗಕ್ಕೆ ಕೇಡ ಬಯಸುವ
ತನ್ನ ಸಂಕಲ್ಪ ವಿಕಲ್ಪ ಸಂದೇಹದಿಂದ ನುಡಿದಡೆ
ತನ್ನ ಭಾವಕ್ಕಲ್ಲದೆ ಆ ಮಹಾಘನಲಿಂಗವ ನಂಬಿದವರಿಗೆ
ಇಂಬಾಗಿಪ್ಪನು ವಿಶ್ವಾಸದಿಂದ.
ವಿಶ್ವಾಸದಿಂದ ಗೊಲ್ಲಾಳಯ್ಯಂಗೆ ಕುರಿಯ ಹಿಕ್ಕೆ ಲಿಂಗವಾದುದಿಲ್ಲವೆ ?
ಸದ್ಭಾವದಿಂದ ಬಳ್ಳೇಶಮಲ್ಲಯ್ಯಂಗೆ ಬಳ್ಳ ಲಿಂಗವಾದುದಿಲ್ಲವೆ ?
ಭಾವದಿಂದ ನಂಬೆಣ್ಣಂಗೆ ಅಂಗನೆಯ ಕುಚ ಲಿಂಗವಾದುದಿಲ್ಲವೆ ?
ವಿಶ್ವಾಸದಿಂದ ಕೆಂಬಾವಿ ಭೋಗಣ್ಣಂಗೆ ಲಿಂಗ ಒಡನೆ ಹೋದುದಿಲ್ಲವೆ ?
ಮತ್ತೆ ಇಷ್ಟಲಿಂಗದೊಳಗೆ ನೀಲಲೋಚನೆಯಮ್ಮನವರ
ಶರೀರವೆ ಏಕಾಕಾರವಾಗಲಿಲ್ಲವೆ ?
ಸಾಕ್ಷಿ:
"ಕರ್ಪೂರಮನಲಗ್ರಾಹ್ಯಂ ರೂಪಂ ನಾಸ್ತಿ ನಿರಂತರಂ ।
ತಥಾ ಲಿಂಗಾಂಗಸಂಯೋಗೇ ಅಂಗೋ ನಿರ್ವಯಲಂ ಗತಃ ॥"
ಎಂದುದಾಗಿ,
ಇಂತಪ್ಪ ದೃಷ್ಟವ ಕಂಡು ನಂಬದಿರ್ದಡೆ ಕರ್ಮದ ಫಲವು.
ಇಂತಪ್ಪ ಮಹಾಲಿಂಗದ ನಿಲವ ಅರಿದಾತ
ನಮ್ಮ ಶಾಂತಕೂಡಲಸಂಗಮದೇವ ಬಲ್ಲನಲ್ಲದೆ
ದುರ್ಭಾವಕರು ಎತ್ತ ಬಲ್ಲರು ನೋಡಾ ! ॥ ೮ ॥

೬೩೧

ಶಿವನು ಗುರುಭಕ್ತರ ಮನವ ನೋಡುವುದಕ್ಕೆ
ಕಂಟಕವನೊಡ್ಡುವನು, ಅಪರಾಧಗೊಡುವನು,
ಭಾಗ್ಯವೆಲ್ಲ ಬಯಲುಮಾಡುವನು.
ಬಂಧುಗಳೆಲ್ಲರ ವೈರಿಗಳ ಮಾಡುವನು,

ದೇಶತ್ಯಾಗವ ಮಾಡಿಸುವನು,
ಭಯಭೀತಿಯನೊಡ್ಡುವನು,
ಮನಕ್ಕೆ ಅಧೈರ್ಯವ ತೋರುವನು.
ಸಾಕ್ಷಿ:
"ಪುಣ್ಯಮೇಕೋ ಮಹಾಬಂಧುಃ ಪಾಪಮೇಕೋ ಮಹಾರಿಪುಃ ।
ಅಸಂತೋಷೋ ಮಹಾವ್ಯಾಧಿಃ ಧೈರ್ಯಂ ಸರ್ವತ್ರಸಾಧನಂ ॥ "
ಎಂದುದಾಗಿ,
"ಅಪರಾಧೋಽರ್ಥನಾಶಂ ಚ ವಿರೋಧೋ ಬಾಂಧವೇಷು ಚ ।
ದೇಶತ್ಯಾಗೋ ಮಹಾವ್ಯಾಧಿಃ ಮದ್ಭಕ್ತಸ್ಯ ಸುಲಕ್ಷಣಂ ॥ "
ಇಂತೀ ದುಃಖವೆಲ್ಲವು
ಶಿವನ ಅನುಜ್ಞೆಯಿಂದ ಬಂದವೆಂದು ತಿಳಿದು,
ಗುರುಲಿಂಗಜಂಗಮಕ್ಕೆ ಬಲಗೊಂಡು
ನೀವೇ ಗತಿಯೆಂದು ನೀವೇ ಮತಿಯೆಂದು,
ನೀವು ಹಾಲಲದ್ದಿರಿ ನೀರಲದ್ದಿರಿ
ಎಂಬ ಭಾವದಲ್ಲಿದ್ದಡೆ
ಅವರ ಶಿವನು ತನ್ನ ಗರ್ಭದಲ್ಲಿ ಇಂಬಿಟ್ಟುಕೊಂಬನು.
ನಮ್ಮ ಶಾಂತಕೂಡಲಸಂಗಮದೇವ
ತನ್ನ ನಂಬಿದವರ ಹೃದಯದಲ್ಲಿಪ್ಪನು. ॥ ೯ ॥

೬೩೨

ಅಂದಿನವರಿಗೆ ಅಷ್ಟಾವರಣವು ಸಾಧ್ಯವಪ್ಪುದಲ್ಲದೆ
ಇಂದಿನವರಿಗೆ ಅಷ್ಟಾವರಣವು ಸಾಧ್ಯವಾಗದೆಂಬರು.
ಅದೇನು ಕಾರಣ ಸಾಧ್ಯವಿಲ್ಲ ಶ್ರೀಗುರುವೆ ?
ಅಂದಿನ ಸೂರ್ಯ ಚಂದ್ರ ಆತ್ಮ ಆಕಾಶ ವಾಯು
ಅಗ್ನಿ ಅಪ್ಪು ಪೃಥ್ವಿ ಎಂಬ ಅಷ್ಟತನುಮೂರ್ತಿಗಳು
ಅಂದುಂಟು ಇಂದುಂಟು.
ಅಂದು ಬೆಳೆವ ಹದಿನೆಂಟು ಜೀನಸಿನ ಧಾನ್ಯಗಳು
ಇಂದು ಬಿತ್ತಿದರೆ ಬೆಳೆವವು.
ಅಂದು ವಾರ ತಿಥಿ ನಕ್ಷತ್ರ ಸಂವತ್ಸರಗಳು ನಡೆದುದುಂಟು.
ಇಂದು ವಾರ ತಿಥಿ ನಕ್ಷತ್ರ ಸಂವತ್ಸರಗಳು ನಡೆವುದುಂಟು.
ಅಂದಿನ ಅಷ್ಟಾವರಣಸ್ವರೂಪ ಇಂದುಂಟು.
ಅಂದು ಇಂದೆಂಬ ಸಂದೇಹದ ಕೀಲವ ಕಳೆದು ನಿಂದರೆ ಸಾಕು

ದಯಮಾಡು ಸದ್ಗುರುವೆ.
ಕೇಳೈ ಮಗನೆ :
ದೃಢವಿಡಿದು ಏಕಚಿತ್ತದಲ್ಲಿ ನಂಬಿಗೆಯುಳ್ಳ
ಶಿವಭಕ್ತಂಗೆ ಅಂದೇನು, ಇಂದೇನು ?
ಗುರುಲಿಂಗಜಂಗಮದಲ್ಲಿ ಪ್ರೇಮ ಭಕ್ತಿ ಇದ್ದವರಿಗೆ,
ವಿಭೂತಿ ರುದ್ರಾಕ್ಷಿಯಲ್ಲಿ ವಿಶ್ವಾಸ ಇದ್ದವರಿಗೆ.
ಶಿವಮಂತ್ರವಲ್ಲದೆ ಎನಗೆ ಬೇರೆ ಮಂತ್ರವಿಲ್ಲವೆಂಬವರಿಗೆ
ಅಂದೇನೊ, ಇಂದೇನೊ ?
ಗುರುಲಿಂಗಜಂಗಮಕ್ಕೋಸ್ಕರವಾಗಿ ಕಾಯಕ ಮಾಡುವವರಿಗೆ
ಪಂಚಾಚಾರವೇ ಪ್ರಾಣವಾಗಿ, ಅಷ್ಟಾವರಣವೇ ಅಂಗವಾಗಿಪ್ಪವರಿಗೆ
ಅಂದೇನೊ, ಇಂದೇನೊ ?
ಪುರಾತರ ವಚನವಿಡಿದು ಆರಾಧಿಸುವವರಿಗೆ,
ಆದಿ ಮಧ್ಯ ಅವಸಾನ ತಿಳಿದವರಿಗೆ,
ಅಂದು ಇಂದೆಂಬ ಸಂದೇಹವಿಲ್ಲವೆಂದು ಹೇಳಿದಿರಿ ಸ್ವಾಮಿ
ಎನ್ನಲ್ಲಿ ನೋಡಿದರೆ ಹುರಿಳಿಲ್ಲ, ಹುರುಳಿಲ್ಲ.
ಎನ್ನ ತಪ್ಪಿಂಗೇನೂ ಎಣೆಯಿಲ್ಲ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ.
ಮೇರುಗುಣವನರಸುವುದೆ ಕಾಗೆಯಲ್ಲಿ ?
ಪರುಷಗುಣವನರಸುವುದೆ ಕಬ್ಬುನದಲ್ಲಿ ?
ನೀವು ಎನ್ನ ಗುಣವನರಸಿದರೆ ಎಂತು ಜೀವಿಸುವೆನಯ್ಯಾ,
ಶಾಂತಕೂಡಲಸಂಗಮದೇವ,
ನಿಮ್ಮ ಧರ್ಮ, ನಿಮ್ಮ ಧರ್ಮ. ॥ ೧೦ ॥

೬೩೩

ಗುರುಲಿಂಗ ಶಿವಭಕ್ತ ಇವರು ಒಂದೆ ವಸ್ತು; ಎಂಟಕ್ಷರಾದವು.
ಆ ಎಂಟಕ್ಷರವೆ ಅಷ್ಟಾವರಣವಾದವು.
ಆ ಅಷ್ಟಾವರಣವೆ ಇಪ್ಪತ್ತುನಾಲ್ಕು ಅಕ್ಷರಾದವು.
ಆ ಇಪ್ಪತ್ತುನಾಲ್ಕು ಅಕ್ಷರವೆ ಚತುರ್ವಿಂಶತಿತತ್ವಂಗಳಾದವು.
ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಇವೈದು ಒಂದೇ ವಸ್ತು;
ಹದಿನಾಲ್ಕು ಅಕ್ಷರಾದವು.
ಆ ಹದಿನಾಲ್ಕು ಅಕ್ಷರಂಗಳೇ ಹದಿನಾಲ್ಕು ಭುವನಂಗಳಾದವು.
ವಿಭೂತಿ ರುದ್ರಾಕ್ಷಿ ಪಂಚಾಕ್ಷರಿ ಇವು ಮೂರು ಒಂದೇ ವಸ್ತು;
ಹತ್ತು ಅಕ್ಷರವಾದವು.

ಆ ಹತ್ತಕ್ಷರವೇ ದಶದಿಕ್ಕುಗಳಾದವು.
ಆ ದಶಾಕ್ಷರವೇ ದಶಗಂಗೆಗಳಾದವು.
ಆ ದಶಾಕ್ಷರವೇ ದಶವಿಧ ಪಾದೋದಕವಾದವು.
ಇಂತಿವನೊಳಕೊಂಡು ಎನ್ನ ಕರಸ್ಥಳಕ್ಕೆ ಬಂದು ನಿಂದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೧೧ ॥

೬೩೪

ಎನ್ನ ಪಶ್ಚಿಮದಲ್ಲಿ
ನಿರಂಜನಪ್ರಣಮವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಶಿಖೆಯಲ್ಲಿ
ಬಸವತ್ರಯಾಕ್ಷರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಬ್ರಹ್ಮರಂಧ್ರದಲ್ಲಿ
ಅಉಮಾಕ್ಷರ ಪ್ರಸಾದ ಪಂಚಾಕ್ಷರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಆಜ್ಞಾಚಕ್ರದಲ್ಲಿ
ಓಂಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ವಿಶುದ್ಧಿಯಲ್ಲಿ
ಯಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಅನಾಹತದಲ್ಲಿ
ವಾಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಮಣಿಪೂರಕದಲ್ಲಿ
ಶಿಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಸ್ವಾಧಿಷ್ಠಾನದಲ್ಲಿ
ಮಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಆಧಾರದಲ್ಲಿ
ನಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಮತ್ತಂ, ಮಸ್ತಕದಲ್ಲಿ ಹಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಬಲದ ಬದಿಯಲ್ಲಿ ಓಂಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಎಡದ ಬದಿಯಲ್ಲಿ ಅಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಹೃದಯದಲ್ಲಿ ಉಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಎನ್ನ ಬೆನ್ನಿನಲ್ಲಿ ಮಕಾರವಾಗಿ ನಿಂದಾತ ನಮ್ಮ ಬಸವಣ್ಣ.
ಸಾಕ್ಷಿ :
"ಅಕಾರಂ ವಾಮಭಾಗಂ ಚ ಉಕಾರಂ ಪೂರ್ವಮೇವ ಚ ।

ಮಕಾರಂ ಪಶ್ಚಿಮಶ್ಚೈವ ಓಂಕಾರಂ ದಕ್ಷಿಣಸ್ತಥಾ ।
ಹಕಾರಂ ಊರ್ಧ್ವಭಾಗಂ ಚ ಪಂಚ ಪ್ರಣವ ಕೀರ್ತಿತಾ ॥"
ಎಂದುದಾಗಿ,
ಎನ್ನ ಲಲಾಟದಲ್ಲಿ ಓಂಕಾರವಾಗಿ ನಿಂದಾತ ಬಸವಣ್ಣ.
ಎನ್ನ ಬಲದ ಭುಜದಲ್ಲಿ ನಕಾರವಾಗಿ ನಿಂದಾತ ಬಸವಣ್ಣ.
ಎನ್ನ ಎಡದ ಭುಜದಲ್ಲಿ ಮಕಾರವಾಗಿ ನಿಂದಾತ ಬಸವಣ್ಣ.
ಎನ್ನ ನಾಭಿಯಲ್ಲಿ ಶಿಕಾರವಾಗಿ ನಿಂದಾತ ಬಸವಣ್ಣ.
ಎನ್ನ ಬಲದ ತೊಡೆಯಲ್ಲಿ ವಕಾರವಾಗಿ ನಿಂದಾತ ಬಸವಣ್ಣ.
ಎನ್ನ ಎಡದ ತೊಡೆಯಲ್ಲಿ ಯಕಾರವಾಗಿ ನಿಂದಾತ ಬಸವಣ್ಣ.
ಸಾಕ್ಷಿ :
"ಓಂಕಾರಂ ವದನಂ ದೇವಿ ನಮಸ್ಕಾರಂ ಭುಜದ್ವಯಂ ।
ಶಿಕಾರಂ ದೇಹಮಧ್ಯಸ್ತು ವಾಕಾರಂ ಚ ಪದದ್ವಯಂ ॥"
ಎಂದುದಾಗಿ,
ಎನ್ನ ಪಂಚಭೂತಾತ್ಮದಲ್ಲಿ ಓಂಕಾರವಾಗಿ ನಿಂದಾತ ಬಸವಣ್ಣ.
ಎನ್ನ ದಶ ಇಂದ್ರಿಯದಲ್ಲಿ ನಕಾರವಾಗಿ ನಿಂದಾತ ಬಸವಣ್ಣ.
ಎನ್ನ ಮನಪಂಚಕದಲ್ಲಿ ಮಕಾರವಾಗಿ ನಿಂದಾತ ಬಸವಣ್ಣ.
ಎನ್ನ ಪ್ರಾಣದಲ್ಲಿ ಶಿಕಾರವಾಗಿ ನಿಂದಾತ ಬಸವಣ್ಣ.
ಎನ್ನ ದಶವಾಯುಗಳಲ್ಲಿ ವಾಕಾರವಾಗಿ ನಿಂದಾತ ಬಸವಣ್ಣ.
ಎನ್ನ ತ್ರಿಗುಣದಲ್ಲಿ ಯಕಾರವಾಗಿ ನಿಂದಾತ ಬಸವಣ್ಣ.
"ಓಂಕಾರಂ ಪಂಚಭೂತಾತ್ಮಕಂ ನಕಾರಂ ದಶ ಇಂದ್ರಿಯಂ ।
ಮಕಾರಂ ಮನಪಂಚಕಂ ಶಿಕಾರಂ ಪ್ರಾಣನಾಯಕಂ ।
ವಾಕಾರಂ ದಶವಾಯೂನಾಂ ಯಕಾರಂ ತ್ರಿಗುಣಂ ಭವೇತ್ ॥"
ಎಂದುದಾಗಿ,
ಶಿವನ ಆರು ಮುಖದಿಂದ ಆರು ಪ್ರಣವಂಗಳು ಪುಟ್ಟಿದವು.
ಈ ಆರು ಪ್ರಣವಂಗಳನರಿಯದೆ ಪೂಜೆಯ ಮಾಡಿದಡೆ
ಆ ಪೂಜೆ ನಿಷ್ಫಲಂ.
ಸಾಕ್ಷಿ :
"ಷಡಕ್ಷರ ಸಮಾಖ್ಯಾತಂ ಷಡಾನನ ಸಮನ್ವಿತಂ ।
ಷಡ್ಭೇದಂ ಯೋ ನ ಜಾನಾತಿ ಪೂಜಾ [ಸಾ] ನಿಷ್ಫಲಂ ಭವೇತ್ ॥"
ಎಂದುದಾಗಿ,
ಎನ್ನ ಸರ್ವಾಂಗದಲ್ಲಿ ಸರ್ವಮಯ ಮಂತ್ರಮೂರ್ತಿಯಾಗಿ

ನಿಂದಾತ ನಮ್ಮ ಬಸವಣ್ಣನೆಂದು ಎನ್ನೊಳಗೆ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೧೨ ॥

೬೩೫

ಬಸವ ನೀಲಲೋಚನೆ ಇಬ್ಬರ ನಾಮಾಕ್ಷರ ಕೂಡಲು
ಎಂಟಕ್ಷರಗಳಾದವು.
ಆ ಎಂಟಕ್ಷರಗಳೇ ಮಾಯಾಖ್ಯ ಪಂಚಾಕ್ಷರವಾದವು,
ಮಾಯಾಖ್ಯ ಪಂಚಾಕ್ಷರ ಎಂತೆಂದಡೆ :
ಓಂ ಹ್ರಾಂ ಹ್ರೀಂ ನಮಃಶಿವಾಯ.
ಸಾಕ್ಷಿ:
"ಬಕಾರಂ ಗುರುರೂಪಂ ಚ ಸಕಾರಂ ಲಿಂಗಮೇವ ಚ ।
ವಕಾರಂ ಪರಮಾಖ್ಯಾತಂ ತ್ರಿವಿಧಂ ತತ್ತ್ವನಿರ್ಣಯಂ॥
ನೀಲಲೋಚನೆ ಯಸ್ತು ನಾಮಾಕ್ಷರಂ ಪಂಚಕಂ ।
ಸ್ತೋತ್ರಂ ವೇತ್ತಿ ತ್ರಿಸಂಧ್ಯಾಂ ಚ ಭಕ್ತಸ್ಸರ್ವಂ ಕಾಮಮೋಕ್ಷದಂ॥"
ಎಂದುದಾಗಿ,
ಈ ಎಂಟಕ್ಷರವೇ ಎನ್ನ ಅಷ್ಟದಳಕಮಲದೊಳಗೆ
ಇಷ್ಟಲಿಂಗವಾಗಿ ನಿಂದ ನಿಲವ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೧೩ ॥

೬೩೬

ನಮ್ಮ ಗಣಂಗಳ ಸಹವಾಸದಿಂದೆ
ಏನೇನು ಫಲಪದವಿಯಾಯಿತ್ತೆಂದಡೆ,
ಅಷ್ಟಾವರಣಂಗಳು ಸಾಧ್ಯವಾದವು.
ಸಾಧ್ಯವಾದ ಕಾರಣ,
ಶ್ರೀಗುರುವು ಎನ್ನ ಕರಸ್ಥಲಕ್ಕೆ ಲಿಂಗವ ಕೊಟ್ಟು,
ಎಂದೆಂದಿಗೂ ಸತಿ-ಪತಿ ಭಾವ ತಪ್ಪಬೇಡವೆಂದು
ಗಣಂಗಳ ಸಾಕ್ಷಿಯ ಮಾಡಿ,
ನೀನು ಅಂಗವಾಗಿ ಲಿಂಗವೇ ಪ್ರಾಣವಾಗಿರಿಯೆಂದು
ಇಬ್ಬರಿಗೂ ಆಜ್ಞೆಯ ಮಾಡಿದ ಕಾರಣ
ಎನ್ನಂಗವೇ ನಿನ್ನಂಗ, ಎನ್ನ ಪ್ರಾಣವೇ ನಿನ್ನ ಪ್ರಾಣ.
ನಿನ್ನ ಪ್ರಾಣವೇ ಎನ್ನ ಪ್ರಾಣವಾದ ಮೇಲೆ
ಎನ್ನ ಮಾನಾಪಮಾನ ನಿಮ್ಮದಯ್ಯಾ,

ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ.
ನೀವು ಈರೇಳು ಲೋಕದ ಒಡೆಯರೆಂಬುದ
ನಾನು ಬಲ್ಲೆನಯ್ಯಾ.
ಬಲ್ಲೆನಾಗಿ, ಪುರುಷರ ದೊರೆತನ ಹೆಂಡರಿಗಲ್ಲದೆ ಬೇರುಂಟೆ?
ಎನ್ನ ಸುಖದುಃಖವೆ ನಿನ್ನದಯ್ಯ,
ನಿನ್ನ ಸುಖದುಃಖವೆ ಎನ್ನದಯ್ಯ,
ಅದಕ್ಕೆ ಎನ್ನ ತನುಮನಧನವ ಸೂಸಲೀಯದೆ
ನಿಮ್ಮೊಡವೆ ನೀವು ಜೋಕೆಯ ಮಾಡಿಕೊಳ್ಳಿರಿ.
ಜೋಕೆಯ ಮಾಡದಿದ್ದಡೆ ಗಣಂಗಳಿಗೆ ಹೇಳುವೆ,
ಏಕೆಂದರೆ ಗಣಂಗಳು ಸಾಕ್ಷಿಯಾಗಿದ್ದ ಕಾರಣ.
ಆಗ ಆ[ಣೆ]ಯ ಮಾತು ಹೇಳಬಹುದೆಯೆಂದಡೆ
ಆಗ ಎನಗೆ ಪ್ರತ್ಯುತ್ತರವಿಲ್ಲ ಸ್ವಾಮಿ.
ನಿಮ್ಮ ಒಡವೆ ನಿಮಗೆ ಒಪ್ಪಿಸುವೆನೆಂದರುಹಿದನು
ನಮ್ಮ ಶಾಂತಕೂಡಲಸಂಗಮದೇವ. || ೧೪ ||

೬೩೭

ಲಿಂಗವ ಪೂಜಿಸಿ ಅಂಗವ ಬೇಡಬಾರದಯ್ಯಾ.
ಅದೇಕೆಂದಡೆ ಶಿವನು ದೀನನು.
ಅದು ಹೇಗೆಂದಡೆ:
ದ್ರವ್ಯವೆಲ್ಲವು ಕುಬೇರನ ವಾಸಮಾಡಿ ದೀನವಾಯಿತು.
ಹದಿನಾಲ್ಕು ಲೋಕಗೋಸ್ಕರವಾಗಿ ಆ ದ್ರವ್ಯವಿದ್ದು,
ಹದಿನಾಲ್ಕು ಲೋಕಕ್ಕೆ ಹೇಗೆ ಮಾಡಲಿ ಎಂದು ಚಿಂತಿಸಿ
ಒಂದು ಕೌಪವ ತಂದು ನಮ್ಮ ಗಣಂಗಳ ಮನೆಯಲಿಟ್ಟು
ಮಾಯವಾಗಿ, ನ್ಯಾಯಕಿಕ್ಕಿ, ಅಮರನೀತಿಗಳ ಮನೆಯ
ಭಂಡಾರವೆಲ್ಲವ ಅವರು ಸಹಜವಾಗಿ ಒಯ್ದರು.
ಅದು ಸಾಲದೆ, ನಮ್ಮ ಗಜಪತಿರಾಯನ ಮನೆಯ
ಕನ್ನವನಿಕ್ಕಿ ಒಯ್ದು,
ಈರೇಳು ಲೋಕವನೆ ಪ್ರತಿಪಾಲನೆಯ ಮಾಡಿ,
ಅವರೆಲ್ಲ ಉಂಡ ಮೇಲೆ ನೀವು ಉಂಬಿರಿ.
ದಿನದಿನಕ್ಕೆ ಇದೇ ಚಿಂತೆ ನಿಮಗೆ.
ನಮ್ಮ ಗಣಂಗಳು ನಿಶ್ಚಿಂತೆಯಲ್ಲಿಪ್ಪರು.
ಅದು ಹೇಗೆಂದಡೆ:

ದಿನದಿನದ ಈ ಕಾಯಕವ ದಿನದಿನಕೆ ಸರಿಮಾಡಿ
ಇಂದಿನ ಕಾಸು ಉದಯಕ್ಕೆ ತಂಗಳೆಂಬರು.
ನಾಳಿನ ಚಿಂತೆ ನಮಗೇಕೆಂಬರು.
ನೀವು ನಾಳಿಗೆ ಬೇಕೆಂದು ಇಟ್ಟುಕೊಂಡು,
ನಮ್ಮ ಕರಿಕಾಲಚೋಳನ ಮನೆಯಲ್ಲಿ
ಅಡಿಗೆಯ ಮಾಡಿಸಿ ಉಂಡು, ಅದು ಸಾಲದೆ ?
ನಮ್ಮ ಮಾದಾರ ಚೆನ್ನಯ್ಯನ ಮನೆಯಲ್ಲಿ ಅಂಬಲಿಯನುಂಡಿರಿ,
ಆಗ ಈರೇಳು ಲೋಕಕ್ಕೆ ತೃಪ್ತಿಯಾಯಿತ್ತು.
ಇಂತಪ್ಪ ನಮ್ಮ ಗಣಂಗಳ ಉದಾರತ್ವ ಹೇಳಲಿಕ್ಕೆ ಅಸಾಧ್ಯವು.
ಇದ ನೀವು ಬಲ್ಲಿರಿಯಾಗಿ,
ನಮ್ಮ ಗಣಂಗಳ ಹೃದಯದಲ್ಲಿ ಮನೆಯ ಮಾಡಿಕೊಂಡಿಪ್ಪಿರಿ
ಎಂದಾತ ನಮ್ಮ ಶಾಂತಕೂಡಲಸಂಗಮದೇವ. ॥ ೧೫ ॥

೬೩೮

ಆದಿ ಮಧ್ಯ ಅವಸಾನ ಹೇಗೆಂದಡೆ:
ಗುರುವಿನ ಕರಕಮಲದಲ್ಲಿ ಹುಟ್ಟಿದುದೇ ಆದಿ.
ಗುರುಲಿಂಗಜಂಗಮ ಪ್ರಸಾದ ಕೊಂಬುದೇ ಮಧ್ಯ.
ಜಂಗಮದಲ್ಲಿ ಲಯವಾದುದೇ ಅವಸಾನ.
ಇದ ತಿಳಿದು ಎಲ್ಲ ಗಣಂಗಳು ಎನಗೆ
ಮರ್ತ್ಯಲೋಕಕ್ಕೆ ಹೋಗಿ ಭಕ್ತಗಣಂಗಳ ಕೈಯಲ್ಲಿ
ಹೊಯಿಸಿಕೊಂಡು, ಬೈಸಿಕೊಂಡು
ಅವರೊಕ್ಕು ಮಿಕ್ಕ ಪ್ರಸಾದವ ಹಾರೈಸಿಕೊಂಡು
ಅವರ ನೆರಮನೆಯ ಅವರವರ ಹೊರ ಮನೆಯಲ್ಲಿರ್ದ
ಅವರ ಕರುಣಪ್ರಸಾದವ ಕೊಂಡು ಬಾಯೆಂದು
ಆಜ್ಞೆಯನಿತ್ತ ಭೇದವ ಗುರು ಅರುಹಿದನಾಗಿ,
ಗಣದಾಸಿ ವೀರಣ್ಣನೆಂಬ ನಾಮವಾಯಿತ್ತೆನಗೆ.
ಸತ್ಯಜ್ಞಾನ ಮನೆಯ ಬಂಟ ನಾನಯ್ಯ.
ನನ್ನನು ತಮ್ಮ ಗಣಂಗಳು ಸಲಹಿ
ಕೃತಾರ್ಥನ ಮಾಡಿದರಯ್ಯಾ.
ಅವರಿಗೇನೆಂದುಪಮಿಸುವೆನಯ್ಯಾ,
ಅವರು ಮಹಾದೇವನಲ್ಲದೆ ಬೇರುಂಟೆ?
ಅವರ ಮನೆಯ ದಾಸಾನುದಾಸ ನಾನು.

ಅವರ ಮನೆಯ ಹೂವಾಡಿಗನು.
ನೂತನ ಗಣಂಗಳೆಲ್ಲರನು ಎನ್ನ
ಇಷ್ಟಲಿಂಗದೊಳಗೆ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೧೬ ॥

### ೬೩೯

ತಮಂಧಕಾರದೊಳು ಮೋಡವಿಲ್ಲದ ನಿರ್ಮಲಾಕಾಶದಂತೆ,
ಎಲೆಯಿಲ್ಲದ ವೃಕ್ಷದಂತೆ, ರೆಕ್ಕೆಯಿಲ್ಲದ ಪಕ್ಷಿಯಂತೆ,
ಗಾಳಿಯಿಲ್ಲದ ದೀಪದಂತೆ,
ನೊರೆ ತೆರೆ ಬುದ್ಬುದಾಕಾರವಿಲ್ಲದ ಸಮುದ್ರದಂತೆ,
ಇದು ಸಹಜಜ್ಞಾನವು ಎಂದು ಎನ್ನೊಳಗೆ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೧೭ ॥

### ೬೪೦

ಓಂಕಾರನಾದವು ಪಿಂಡಬ್ರಹ್ಮಾಂಡ ತುಂಬಿಕೊಂಡಿಪ್ಪುದು.
ಮಹಾಜ್ಞಾನಿಗಳಿಗೆ ಪ್ರತ್ಯಕ್ಷವಾಗಿಪ್ಪುದು.
ಆ ನಾದವಿಲ್ಲದಿರ್ದಡೆ ನಿರ್ಜೀವಿಗಳು ಹೇಗೆ ನುಡಿವವು?
ನಿರ್ಜೀವಿ ಯಾವು ಯಾವುವೆಂದಡೆ:
ಕಡುವಿಡಿದ ಶಬ್ದ– ಚರ್ಮವಿದ್ಯೆ ಭೇರಿ ತಮ್ಮಟ;
ಲೋಹವಿಡಿದ ಶಬ್ದ– ತಾಳ ಕಂಸಾಳ
ಗಂಟೆ ಕಾಳೆ ಕರ್ನೆ ಸಪೂರಿ ಸನಾಯಿ;
ತಂತಿವಿಡಿದ ಶಬ್ದ– ಕಿನ್ನರಿ ವೀಣೆ
ಕಾಮಾಕ್ಷಿ ತಂಬೂರಿ ರುದ್ರವೀಣೆ.
ಇನ್ನು ಆಕಾಶದೊಳಗೆ ಶಬ್ದವನಿಕ್ಕಿದಡೆ
ಪ್ರತಿಶಬ್ದವ ಕೊಡುವುದು.
ದೇಗುಲದೊಳಗೆ ಹೇಗೆ ನುಡಿದಡೆ ಹಾಗೆ ನುಡಿವುದು.
ಪರಿಪೂರ್ಣವಸ್ತುವಿಲ್ಲದಿರ್ದಡೆ
ಈ ನಿರ್ಜೀವಿಗಳು ಹೇಗೆ ನುಡಿವವು?
ಈ ನಾದ ಶಬ್ದವು ಆವಾವ ಘಟದೊಳಗೆ ಹೊಕ್ಕು,
ಆ ಘಟಶಬ್ದವ ಕೊಡುತ್ತಿಹುದು
ಆ ಘಟದ ಗುಣವೆಂದು ತಿಳಿವುದು.
ನಮ್ಮ ಗಣಂಗಳು ಆ ಘಟವ ಗುಣಮಂ ಬಿಟ್ಟು

ಪಿಂಡಬ್ರಹ್ಮಾಂಡದೊಳಗಿಪ್ಪ ಪರಿಪೂರ್ಣ ವಸ್ತುವಿನೊಳಗೆ
ಬೆರೆದುದ ಎನ್ನೊಳರುಹಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೧೮ ॥

೬೪೧

ಭಕ್ತಗಣಂಗಳು ನಮಸ್ಕಾರವ ಮಾಡುವ ಕ್ರಮವು:
ಗುರುವಿಗೆ ದೀರ್ಘದಂಡ ನಮಸ್ಕಾರವ ಮಾಡಿದಡೆ
ಹಿಂದಣ ಜನ್ಮದ ಪಾತಕದ ಪರಿಹಾರವು.
ಲಿಂಗಕ್ಕೆ ಕರಮುಟ್ಟಿ ನಮಸ್ಕಾರವ ಮಾಡಿದಡೆ
ಉರಿಯುಂಡ ಕರ್ಪುರದ ಹಾಗೆ ಆಗುವುದು.
ಜಂಗಮಕ್ಕೆ ತಲಮುಟ್ಟಿ ನಮಸ್ಕಾರವ ಮಾಡಿದಡೆ
ನಿಜಮುಕ್ತಿಯಾಗುವುದು.
ಭಕ್ತಂಗೆ ಸಾಷ್ಟಾಂಗ ನಮಸ್ಕಾರವು.
ಅಭಯಂಗೆ ಸಾಷ್ಟಾಂಗ ನಮಸ್ಕಾರವು.
ಏಕೆಂದಡೆ, ಆ ಭಕ್ತನ ಹೃದಯದಲ್ಲಿ
ಅಷ್ಟಾವರಣಮೂರ್ತಿಗಳಿಹರು.
ಅದಕ್ಕೆ ಭಕ್ತಂಗೆ ಅಷ್ಟಾಂಗಭೂಮಿಗೆ ಹೊಂದಿ
ನಮಸ್ಕಾರವ ಮಾಡಿದಡೆ ಗಣಪದವಿಯಪ್ಪುದು.
ಇದಕ್ಕೆ ತ್ರಿಕರಣಶುದ್ಧವಾಗಿ ವಂಚನೆಯಿಲ್ಲದೆ
ತನು-ಮನ-ಧನವನೊಪ್ಪಿಸಿ
ಈ ಚತುರ್ವಿಧಮೂರ್ತಿಗಳಿಗೆ
ನಮಸ್ಕಾರವ ಮಾಡಿದಡೆ ನಾಲ್ಕು ಪದವಿ
ಸಿದ್ಧವಪ್ಪುದು ತಪ್ಪದು ಶಾಶ್ವತ
ಎಂದಾತ ನಮ್ಮ ಶಾಂತಕೂಡಲಸಂಗಮದೇವ. ॥ ೧೯ ॥

೬೪೨

ಗುರುಭಕ್ತರು ವಾರ ತಿಥಿ ನಕ್ಷತ್ರ ವ್ಯತಿಪಾತ
ಯೋಗ ಕರಣ ಶುಭಾಶುಭವ ನೋಡಲಾಗದು, ಕೇಳಲಾಗದು.
ಅವರ ಮನೆಯಲ್ಲಿ ಬಾಲರಂಡೆ ಇಪ್ಪ ಕಾರಣ ಕೇಳಲಾಗದು.
ವಾರ ತಿಥಿ ನಕ್ಷತ್ರ ಆರೈದು ಕೇಳಿದವರಿಗೆ ಗುರುವಿಲ್ಲ, ಶಿವನಿಲ್ಲ.
ಅವರಿಗೆ ವಾರಗಳೇ ದೈವವಾಗಿಪ್ಪವು.
ಇದಕ್ಕೆ ದೃಷ್ಟಾಂತ:

ವಸಿಷ್ಠಮುನಿ ರಾಮ ಲಕ್ಷ್ಮಣರಿಗೆ ಒಳ್ಳೆ ಶುಭವೇಳೆಯ
ಲಗ್ನವ ನೋಡಿ ತೆಗೆದುಕೊಟ್ಟನು.
ಲಗ್ನವಾದ ಮೇಲೆ ಹೆಂಡತಿ ಸೀತೆಯನ್ನು ರಾವಣನೇಕೆ ಒಯ್ದ?
ಮತ್ತೆ ಅವರು ದೇಶತ್ಯಾಗಿಯಾಗಿ ವನವಾಸವೇಕೆ ಹೋದರು?
ಸಾಕ್ಷಿ:
"ಕರ್ಮಣಾಂ ಹಿ ಪ್ರಧಾನತ್ವಂ ಕಿಂ ಕರೋತಿ ಶುಭಗ್ರಹಃ ।
ವಸಿಷ್ಠಾದಿ ಕೃತೇ ಲಗ್ನೇ ರಾಮಃ ಕಿಂ ಭ್ರಮತೇ ವನಂ॥"
ಎಂದುದಾಗಿ,
ಈ ನಡತೆ ಭಕ್ತಗಣಂಗಳಿಗೆ ಸಮ್ಮತವಲ್ಲ.
ಸಮ್ಮತ ಹೇಗೆಂದಡೆ :
ಮದುವೆಯ ಮಾಡುವಲ್ಲಿ, ಊರು ಕೇರಿಗೆ ಹೋಗುವಲ್ಲಿ,
ಪ್ರಸ್ಥವ ಮಾಡುವಲ್ಲಿ, ಕೆರೆ ಬಾವಿ ಅಗಿಸುವಲ್ಲಿ,
ಸಮಸ್ತ ಕಾರ್ಯಕ್ಕೆ ಗುರುಲಿಂಗಜಂಗಮ ಭಕ್ತಗಣಂಗಳ ಕೇಳಿ,
ಅವರು ಹೇಳಿದ ಹಾಗೆ ಕೇಳಿ ಅಪ್ಪಣೆಯ ತಕ್ಕೊಂಡು
ಸಮಸ್ತ ಕಾರ್ಯವ ಮಾಡುವುದು.
ಹೀಗೆ ನಂಬಿದವರಿಗೆ ಸಿದ್ಧಿಯಾಗುವುದು.
ಅದು ಹೇಗೆಂದಡೆ :
ನಕ್ಷತ್ರಫಲವ ಕೇಳಿಹೆನೆಂದಡೆ,
ನಮ್ಮ ಗಣಂಗಳಾದ ರಾಜೇಂದ್ರಚೋಳ, ಚೇರಮರಾಯ, ಸೌಂದರ ಪಾಂಡ್ಯ
ಈ ಮೂವರ ಸೀಮೆಯ ಮೇಲೆ ಮಳೆ ಬೀಳದಿದ್ದಡೆ
ಆಗ ಮೂವರು ಕೂಡಿ ಸ್ವರ್ಗಕ್ಕೆ ಹೋಗಿ
ಆ ಇಪ್ಪತ್ತೇಳು ನಕ್ಷತ್ರಗಳ ಮುಂಗೈ ಕಟ್ಟಿ
ತಮ್ಮ ಊರಿಗೆ ತಂದು
ಸೆರೆಮನೆಯೊಳಗೆ ಹಾಕಿದುದ ಜಗವೆಲ್ಲ ಬಲ್ಲುದು.
ಅಂದಿನ ಗಣಂಗಳು ಇಂದಿದ್ದಾರೆಂದು ನಂಬಿದವರಿಗೆ
ಬೇಡಿದ್ದನೀವ ನಮ್ಮ ಶಾಂತಕೂಡಲಸಂಗಮದೇವ. || ೨೦ ||

೬೪೩

ನಿರಾಕಾರ ಪರವಸ್ತು ತನ್ನ ಲೀಲಾವಿನೋದದಿಂದ
ಎರಡು ಮುಖದಿಂದ ಎರಡು ಸೃಷ್ಟಿಯ ಮಾಡಿದರು.
ಒಂದು ಊರ್ಧ್ವಸೃಷ್ಟಿ, ಒಂದು ಅಧೋಸೃಷ್ಟಿ.
ಅಧೋಸೃಷ್ಟಿ ಯಾವುದೆಂದಡೆ :

ಅಂಡಜ ಪಿಂಡಜ ಜರಾಯುಜ ಉದ್ಭಿಜ ಇವು ನಾಲ್ಕು ಕೂಡಿ
ಎಂಬತ್ತುನಾಲ್ಕು ಜೀವರಾಶಿಯ ಮಾಡಿದರು.
ಸ್ವರ್ಗ ನರಕ ಇಹ ಪರ ಪುಣ್ಯ ಪಾಪ ಧರ್ಮ ಕರ್ಮ
ಸತ್ಯ ಅಸತ್ಯ ಜ್ಞಾನ ಅಜ್ಞಾನ ಹೆಣ್ಣು ಗಂಡು ಹಿರಿದು ಕಿರಿದು
ಉತ್ಪತ್ತಿ-ಸ್ಥಿತಿ-ಲಯಕ್ಕೆ ಅಧಿಕಾರಿಗಳಾದ
ಬ್ರಹ್ಮ-ವಿಷ್ಣು-ರುದ್ರರು ಮಾಡಿಟ್ಟರು.
ಇನ್ನು ಊರ್ಧ್ವಸೃಷ್ಟಿ ಹೇಗೆಂದಡೆ :
ಅಸಂಖ್ಯಾತ ಮಹಾಪ್ರಮಥಗಣಂಗಳು,
ಇವರಿಗೆ ಸ್ವರ್ಗ-ನರಕವಿಲ್ಲ,
ಇಹ-ಪರವಿಲ್ಲ, ಪುಣ್ಯ-ಪಾಪವಿಲ್ಲ,
ಧರ್ಮ-ಕರ್ಮವಿಲ್ಲ, ಹುಸಿ-ಖರೆಯಿಲ್ಲ, ಜ್ಞಾನ-ಅಜ್ಞಾನವಿಲ್ಲ,
ಹೆಣ್ಣು-ಗಂಡುವಿಲ್ಲ, ಓರಿದು-ಕಿರಿದುವಿಲ್ಲ,
ಉತ್ಪತ್ತಿ-ಸ್ಥಿತಿ-ಲಯವಿಲ್ಲ,
ಅವರಿಗೆ ಬ್ರಹ್ಮ-ವಿಷ್ಣು ರುದ್ರರು ಇಲ್ಲ.
ಅವರಿಗೆ ಮತ್ತಂ,
ಆ ನಿರಾಕಾರ ಪರವಸ್ತು ತಾನೆ ಗುರು-ಲಿಂಗ-ಜಂಗಮವಾಗಿ
ಗುರುವಿನಲ್ಲಿ ಉತ್ಪತ್ತಿ, ಲಿಂಗದಲ್ಲಿ ಸ್ಥಿತಿ,
ಜಂಗಮದಲ್ಲಿ ನಿಜೈಕ್ಯರು.
ಮತ್ತೆ ಪರಶಿವಮೂರ್ತಿ ತನ್ನ ವಿನೋದಕ್ಕೆ ಆಟವ ಆಡಬೇಕಾಗಿ
ಮಹದಾಕಾಶವ ಮಂಟಪವ ಮಾಡಿ, ಆಕಾಶವ ಪರದೆಯ ಕಟ್ಟಿ,
ಅಸಂಖ್ಯಾತ ಪ್ರಮಥಗಣಂಗಳಿಗೆ ಮೂರ್ತವ ಮಾಡಿಸಿ
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳನೆ ಸೂತ್ರವ ಮಾಡಿ
ತಮ್ಮ ಕೈಯಲ್ಲಿ ಪಿಡಿದು, ಚಿತ್ರವಿಚಿತ್ರದಾಟವ
ಆಡಿಸುತ್ತಿಹುದಕ್ಕೆ ಲೆಕ್ಕವಿಲ್ಲ, ಹೇಳುವುದಕ್ಕೆ ಅಸಾಧ್ಯ.
ಆ ಪ್ರಮಥಗಣಂಗಳು ನೋಡಿ, ಆ ಬೊಂಬೆಗಳೇನು ಆಡಿಹವು ?
ಸೂತ್ರಿಕನು ಆಡಿಸಿದ ಹಾಂಗೆ ಆಡ್ಯಾವು.
ಆ ಗೊಂಬೆಗೆ ಸೂತ್ರವಲ್ಲದೆ ಶಿವನಿಲ್ಲ.
ಆ ಗೊಂಬೆಯೊಳಗೆ ಶಿವನಿದ್ದರೆ, ಆಡಿಸುವುದು ಹ್ಯಾಂಗೆ ?
ಇವೆಲ್ಲವು ಅನಿತ್ಯವೆಂದು ತಿಳಿದು ಪ್ರಮಥಗಣಂಗಳು
ತಮ್ಮ ಲಿಂಗದಲ್ಲಿ ನಿಜ ಮೋಕ್ಷಿಗಳಾಗಿ ಶಾಂಭವಪುರಕ್ಕೆ

ಹೋದ ಭೇದವ ಎನ್ನೊಳರುಹಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೨೦ ॥

೬೪೪

ವಸ್ತುವೆಂದಡೆ ಪರಬ್ರಹ್ಮದ ನಾಮವು.
ಅದು ಹೇಗೆಂದಡೆ :
ಹರಿ ಸುರ ಬ್ರಹ್ಮಾದಿಗಳಿಗೆ ಅಗೋಚರವಾಗಿಪ್ಪುದು.
ಸಾಧ್ಯಕ್ಕಸಾಧ್ಯವಾಗಿಪ್ಪುದು.
ಭೇದ್ಯಕ್ಕಭೇದ್ಯವಾಗಿಪ್ಪುದು.
ಕೋಟಿ ಸೂರ್ಯ ಕೋಟಿ ಸೋಮಪ್ರಕಾಶಕ್ಕೆ
ಮಿಗಿಲಾಗಿಪ್ಪುದು.
ಈರೇಳು ಭುವನವ ತುಂಬಿಕೊಂಡಿಪ್ಪುದು.
ಅಪ್ರಮಾಣ ಅಗೋಚರವಾದ ವಸ್ತು
ಎನ್ನ ಕರ ಮನ ಭಾವದೊಳಗಿಪ್ಪ ಭೇದವ ತಿಳುಹಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೨೨ ॥

೬೪೫

ಅಂದಿನವರಿಗೆ ಪರುಷವಿಪ್ಪುದು
ಇಂದಿನವರಿಗೆ ಪರುಷವೇಕಿಲ್ಲ ?
ದಯದಿಂದ ಕರುಣಿಸಿ ಸ್ವಾಮಿ.
ಕೇಳಯ್ಯ ಮಗನೆ :
ಲಾಂಛನಧಾರಿಗಳು ಸ್ವಯಪಾಕ ಭಿಕ್ಷಕ್ಕೆ ಬಂದ ವೇಳೆಯಲ್ಲಿ
ಗೋದಿಯ ಬೀಸುವಗೆ ಆ ಹಿಟ್ಟು ಬಿಟ್ಟು
ಕಡೆಯಲಿದ್ದ ಹಿಟ್ಟು ನೀಡುವವರಿಗೆ ಎಲ್ಲಿಹುದೊ ಪರುಷ ?
ಲಾಂಛನಧಾರಿಗಳು ಧಾನ್ಯ ಭಿಕ್ಷಕ್ಕೆ ಬಂದಡೆ
ಘನವ ಮಾಡಿಕೊಳ್ಳಿರಿ ಎಂಬವರಿಗೆ ಎಲ್ಲಿಹುದೊ ಪರುಷ ?
ಶಿವಯೋಗಿ ಲಿಂಗಾರ್ಪಿತ ಭಿಕ್ಷಕ್ಕೆ ಬಂದಡೆ ಸುಮ್ಮನಿಹರು.
ಇದು ಭಿಕ್ಷವೇಳೆಯೆ ? ಎಂಬವರಿಗೆ ಎಲ್ಲಿಹುದೊ ಪರುಷ ?
ಮತ್ತಂ, ಹಬ್ಬವ ಮಾಡುವಾಗ ಭಿಕ್ಷಕ್ಕೆ ಬಂದಡೆ
ತಂಗಳ ನೀಡಿ ಕಳಿಸುವವರಿಗೆ ಎಲ್ಲಿಹುದೊ ಪರುಷ ?
ಪರುಷ ಎಲ್ಲಿಹುದು ಎಂದಡೆ :
ಜಂಗಮವು ಮನೆಗೆ ಬಂದಡೆ ಬಂದ ಬರವ, ನಿಂದ ನಿಲವ

ಅರಿತವರಿಗೆ ಅದೇ ಪರುಷ.
ಯಾವ ವೇಳೆಯಾಗಲಿ, ಯಾವ ಹೊತ್ತಾಗಲಿ
ಜಂಗಮವು ಭಿಕ್ಷಕ್ಕೆ ಬರಲು
ಹಿಂದಕ್ಕೆ ತಿರುಗಗೊಡ[ದ]ವರನ್ನೆಲ್ಲ ಸುಖಿವಬಡಿಸುವುದೇ ಪರುಷ.
ಸಮಸ್ತ ಒಡವೆಯೆಲ್ಲವನು
ಎನ್ನ ಒಡವೆಯಲ್ಲವೆಂದವರಲ್ಲಿ ಅದೇ ಪರುಷ.
ತನ್ನ ಪ್ರಪಂಚಿನ ಪುತ್ರ ಮಿತ್ರ ಕಳತ್ರರಿಗೆ ಮಾಡುವ ಹಾಗೆ
ಗುರು-ಲಿಂಗ-ಜಂಗಮಕ್ಕೆ, ಕೇವಲ ಸದ್ಭಕ್ತಿಗೆ
ಭಕ್ತಿಯ ಮಾಡಿದವರಿಗೆ ಅದೇ ಪರುಷ.
ಹೀಗೆ ಮಾಡಿದವರಿಗೆ ಅಂದೇನು ಇಂದೇನು
ಎಂದರುಹಿದಾತ ನಮ್ಮ ಶಾಂತಕೂಡಲಸಂಗಮದೇವ || ೨೩ ||

೬೪೬

ಲಿಂಗವೆ ನಿಮ್ಮ ನೆನೆವ ಮನಕ್ಕೆ ಹೊನ್ನ ತೋರಿ,
ನಿಮ್ಮ ನೋಡುವ ನೋಟಕ್ಕೆ ಹೆಣ್ಣ ತೋರಿ,
ನಿಮ್ಮ ಪೂಜಿಸುವ ಕೈಗೆ ಮಣ್ಣ ತೋರಿ,
ಮತ್ತೆ ಗಣಂಗಳ ಸಾಕ್ಷಿಯಾಗಿದ್ದುದ ತಿಳಿದು
ಅವರಿಗೆ ಅಂಜಿ ಮನದ ಕೊನೆಯಲ್ಲಿ
ಮಂತ್ರರೂಪಾಗಿ ನಿಂದ ಕಾರಣ
ಹೊನ್ನಿನ ನೆನಹು ಕೆಟ್ಟಿತ್ತು ನೋಡಾ !
ಪರಶಿವಮೂರ್ತಿಯ ಮುದ್ದುಮೊಗದ ತುಟಿಯಲ್ಲಿ
ಹುಟ್ಟಿದ ಓಂಕಾರನಾದಾಮೃತವ ಚುಂಬನವ ಮಾಡಲಿಕ್ಕೆ
ಹೆಣ್ಣಿನ ನೋಟ ಕೆಟ್ಟಿತ್ತು.
ಕರಕಮಲ ಗದ್ದುಗೆಯ ಮಾಡಿದ ಕಾರಣ
ಮಣ್ಣಿನ ಧಾವತಿ ಬಿಟ್ಟುಹೋಯಿತ್ತು.
ಇಂತು ಮಾಡಿದಿರಿ ಲಿಂಗವೆ, ಮತ್ತೆ ನಿಮ್ಮ ಬೇಡಿದಡೆ
ಅಷ್ಟೈಶ್ವರ್ಯ ಚತುರ್ವಿಧಪದಗಳನು ಕೊಡುವಿರಿ.
ಇವೆಲ್ಲ ಅಲ್ಪಸುಖ, ತಾಮಸಕಿಕ್ಕುವವು.
ಮತ್ತೆ ನಮ್ಮ ಗಣಂಗಳ ಮನೆಯಲ್ಲಿ ಕೇಡಿಲ್ಲದಂತಹ
ನಿತ್ಯವಾದ ವಸ್ತು ಅಷ್ಟೈಶ್ವರ್ಯಗಳುಂಟು, ನಿಧಿ ನಿಧಾನಗಳುಂಟು,
ಇದಕ್ಕೆ ನಾವು ನೀವು ಬೇಡಿಕೊಂಬುವ ಬನ್ನಿರಿ.
ಅವರಿರುವ ಸ್ಥಲವ ತೋರಿಕೊಡಿ ಎಲೆ ಲಿಂಗವೆ.

ಅವರು ಎಲ್ಲಿ ಐದಾರೆಯೆಂದಡೆ :
ಏಳುಪ್ಪರಿಗೆಯೊಳಗಿಪ್ಪರು.
ಅವರ ನಾಮವ ಪೇಳ್ವೆನು–
ಪಶ್ಚಿಮಚಕ್ರದಲ್ಲಿ ನಿರಂಜನ ಜಂಗಮವು,
ಗುರು-ಹಿರಿಯರು ಅಸಂಖ್ಯಾತ ಮಹಾಗಣಂಗಳು ಸಹವಾಗಿಪ್ಪರು.
ಅವರ ಮಧ್ಯದಲ್ಲಿ ನೀವೆ ನಾವಾಗಿ ಬೇಡಿಕೊಂಬೆವು.
ಬೇಡಿಕೊಂಡ ಮೇಲೆ ಅವರು ಕೊಟ್ಟ ವಸ್ತುವ
ಹೇಳಿಹೆನು ಕೇಳಿರೆ ಲಿಂಗವೆ.
ಅವು ಯಾವುವೆಂದಡೆ :
ಜೀವಾತ್ಮ ಅಂತರಾತ್ಮ ಪರಮಾತ್ಮರೆಂಬ ಆತ್ಮತ್ರಯರು,
ಹೇಮಾದ್ರಿ ರಜತಾದ್ರಿ ಮಂದರಾದ್ರಿಯೆಂಬ ಮೇರುಗಳ
ಸೆಜ್ಜೆಯ ಮಾಡಿ, ವಾಯುವನೆ ಶಿವದಾರವ ಮಾಡಿ,
ತನುತ್ರಯವನೆ ವಸ್ತ್ರವ ಮಾಡಿ,
ಇವುಗಳನೆ ಅವರು ನಮಗೆ ಕೊಟ್ಟರು.
ಅಲ್ಲದೆ ಪರಸ್ತ್ರೀಯರ ಅಪ್ಪದ ಹಾಗೆ ನಿಃಕಾಮವೆಂಬ
ಉಡುಗೊರೆಯ ಮಾಡಿ ಕಟ್ಟಿನಲ್ಲಿಟ್ಟರು.
ಕುಶಬ್ದವ ಕೇಳದ ಹಾಗೆ ಬಲದ ಕರ್ಣದಲ್ಲಿ
ಷಡಕ್ಷರವೆಂಬ ವಸ್ತುವ ಮಾಡಿಯಿಟ್ಟರು.
ಪಂಚಾಂಗುಲಿಗೆ ಪಂಚಾಕ್ಷರವೆ ಐದುಂಗುರವ ಮಾಡಿಯಿಟ್ಟರು.
ನೂರೆಂಟು ನಾಮ ಹರಗಣ ಕೊರಳಲಿ ಹಾಕಿದರು.
ಆಪತ್ತಿಗೆ ಅಂಜಬೇಡೆಂದು ವಿಭೂತಿಧೂಳನ ಧಾರಣವಮಾಡಿ
ಜೋಡಂಗಿಯ ಮಾಡಿ ತೊಡಿಸಿದರು.
ಗಣಂಗಳು ಹೋದ ಹಾದಿಯನೆ ಮುಂಡಾಸವ ಮಾಡಿ ತಲೆಗೆ ಸುತ್ತಿದರು.
ಆವ ಕಂಟಕವು ಬಾರದ ಹಾಗೆ
ಗಣಂಗಳ ಪಾದಧೂಳನವ ಸೆಲ್ಲೆಯ ಮಾಡಿ ಹೊದಿಸಿದರು.
ಭಕ್ತಿಯೆಂಬ ನಿಧಾನವ ಕೊಟ್ಟು,
ಭಾವದಲ್ಲಿ ಬಚ್ಚಿಟ್ಟುಕೊಳ್ಳಿರಿ ಎಂದರು.
ಅಷ್ಟಾವರಣವ ನಿಧಿನಿಧಾನವೆಂದು ಹೇಳಿದರು.
ಇವೆಲ್ಲ ವಸ್ತುಗಳ ನಿಮ್ಮ ನೋಡಿ ಕೊಟ್ಟರಲ್ಲದೆ ಬೇರಿಲ್ಲ.
ನಿಮ್ಮ ದಾಸಾನುದಾಸಯೆಂದು ನಿಮ್ಮೊಡವೆಯ ನಿಮಗೊಪ್ಪಿಸು
ಎಂದರುಹಿದಾತ ನಮ್ಮ ಶಾಂತಕೂಡಲಸಂಗಮದೇವ. || ೨೪ ||

೬೪೭

ಅಷ್ಟಾವರಣಗಳು ಯಾರಿಗೆ ಸಾಧ್ಯವಾಯಿತ್ತೆಂದಡೆ
ಹೇಳಿಹೆ ಕೇಳಿರಣ್ಣ :
ಗುರು ಸಾಧ್ಯವಾಯಿತ್ತು ಗುರುಭಕ್ತಂಗೆ ;
ಲಿಂಗ ಸಾಧ್ಯವಾಯಿತ್ತು ನೀಲಲೋಚನೆತಾಯಿಗೆ ;
ಜಂಗಮವು ಸಾಧ್ಯವಾಯಿತ್ತು ಬಸವೇಶ್ವರದೇವರಿಗೆ ;
ಪಾದೋದಕ ಸಾಧ್ಯವಾಯಿತ್ತು ವೇಮನಾರಾಧ್ಯಂಗೆ ;
ಪ್ರಸಾದ ಸಾಧ್ಯವಾಯಿತ್ತು ಬಿಬ್ಬಿಬಾಚಯ್ಯಂಗೆ ;
ವಿಭೂತಿ ಸಾಧ್ಯವಾಯಿತ್ತು ಓಹಿಲಯ್ಯಗಳಿಗೆ ;
ರುದ್ರಾಕ್ಷಿ ಸಾಧ್ಯವಾಯಿತ್ತು ಚೇರಮರಾಯಗೆ ;
ಪಂಚಾಕ್ಷರಿ ಸಾಧ್ಯವಾಯಿತ್ತು ಅಜಗಣ್ಣಂಗೆ.
ಇನ್ನು ಷಟ್‌ಸ್ಥಲದ ನಿರ್ಣಯವ ಕೇಳಿ :
ಭಕ್ತಸ್ಥಲ ಬಸವಣ್ಣಂಗಾಯಿತ್ತು ;
ಮಾಹೇಶ್ವರಸ್ಥಲ ಮಡಿವಾಳಯ್ಯಂಗಾಯಿತ್ತು ;
ಪ್ರಸಾದಿಸ್ಥಲ ಚೆನ್ನಬಸವಣ್ಣಂಗಾಯಿತ್ತು ;
ಪ್ರಾಣಲಿಂಗಿಸ್ಥಲ ಸಿದ್ಧರಾಮಯ್ಯಂಗಾಯಿತ್ತು ;
ಶರಣಸ್ಥಲ ಪ್ರಭುದೇವರಿಗಾಯಿತ್ತು;
ಐಕ್ಯಸ್ಥಲ ಅಜಗಣ್ಣಂಗಾಯಿತ್ತು.
ಇನ್ನು ಷಡುಸ್ಥಲದ ವಿವರವಂ ಪೇಳ್ವೆನು.-
ಭಕ್ತಸ್ಥಲದ ವಿವರವು :
ಗುರುಲಿಂಗಜಂಗಮವು ಒಂದೆಯೆಂದು ಕಂಡು
ಸದಾಚಾರದಲ್ಲಿ ನಡೆವನು,
ತ್ರಿಕಾಲ ಮಜ್ಜನವ ನೀಡುವನು.
ಲಾಂಛನಧಾರಿಗಳ ಕಂಡಡೆ ವಂದನೆಯ ಮಾಡುವನು,
ಆಪ್ಯಾಯನಕ್ಕೆ ಅನ್ನವ ನೀಡುವನು,
ಜಂಗಮಕ್ಕೆ ಪ್ರತಿ ಉತ್ತರವ ಕೊಡನು.
ಪೃಥ್ವಿ ಅಂಗವಾಗಿಪ್ಪುದೆ ಭಕ್ತಿಸ್ಥಲವು.
ಸಾಕ್ಷಿ :
"ಮಜ್ಜನಂ ತು ತ್ರಿಕಾಲೇಷು ಶುಚಿಪಾಕಸಮರ್ಪಿತಂ ।
ಭವಿಸಂಗಪರಿತ್ಯಾಗಂ ಇತ್ಯೇತೇ ಭಕ್ತಿಕಾರಣಂ ॥
ಸದಾಚಾರೇ ಶಿವಭಕ್ತಿಃ ಲಿಂಗಜಂಗಮೇಕಾಧಿಕಂ ।

ಲಾಂಛನೇನ ಶರಣ್ಯಂ ಚ ಭಕ್ತಿಸ್ಥಲಂ ಮಹೋತ್ತಮಂ ||"
ಇನ್ನು ಮಾಹೇಶ್ವರಸ್ಥಲದ ವಿವರವು :
ಪರಸ್ತ್ರೀ ಪರನಿಂದೆ ಪರದ್ರವ್ಯ ಪರಹಿಂಸೆ ಅನೃತ
ಇವು ಪಂಚಮಹಾಪಾತಕವು,
ಇವ ಬಿಟ್ಟು, ಲಿಂಗನಿಷ್ಠೆಯಲ್ಲಿ ಇರ್ದು
ಜಲವೆ ಅಂಗವಾಗಿಪ್ಪುದೆ ಮಾಹೇಶ್ವರಸ್ಥಲವು.
ಸಾಕ್ಷಿ :
"ಪರಸ್ತ್ರೀಯಂ ಪರಾರ್ಥಂ ಚ  ವರ್ಜಿತೋ ಭಾವಶುದ್ಧಿಮಾನ್ |
ಲಿಂಗನಿಸ್ಸಂಗಿಯುಕ್ತಾತ್ಮಾ ಮಹೇಶಸ್ಥಲಮುತ್ತಮಂ ||"
ಇನ್ನು ಪ್ರಸಾದಿಸ್ಥಲದ ವಿವರ :
ಲಿಂಗಕ್ಕೆ ಅರ್ಪಿಸಿದುದ ಲಿಂಗಸೆಸಹಿನಿಂದೆ ಸ್ವೀಕರಿಸುವುದು,
ಅನರ್ಪಿತವ ವರ್ಜಿಸುವುದು, ಲಿಂಗದೊಡನೆ ಉಂಬುವುದು,
ಅಗ್ನಿಯೆ ಅಂಗವಾಗಿಪ್ಪುದೆ ಪ್ರಸಾದಿಸ್ಥಲ.
ಇನ್ನು ಪ್ರಾಣಲಿಂಗಿಸ್ಥಲದ ವಿವರವು :
ಸುಗುಣ ದುರ್ಗುಣ ಉಭಯವನತಿಗಳೆದು
ಸುಖ ದುಃಖ ಸ್ತುತಿ ನಿಂದೆ ಶತ್ರು ಮಿತ್ರಾದಿಗಳೆಲ್ಲರಂ ಸಮಾನಂಗಂಡು
ವಾಯುವೆ ಅಂಗವಾಗಿಪ್ಪುದೆ ಪ್ರಾಣಲಿಂಗಿಸ್ಥಲ.
ಇನ್ನು ಶರಣಸ್ಥಲದ ವಿವರವು :
ಸತಿಪತಿಭಾವ ಅಂಗಲಿಂಗವಾಗಿಪ್ಪುದು,
ಪಂಚೇಂದ್ರಿಯಸುಖ ನಾಸ್ತಿಯಾಗಿಪ್ಪುದು,
ಆಕಾಶವೆ ಅಂಗವಾಗಿಪ್ಪುದು, ಇದು ಶರಣಸ್ಥಲವು.
ಸಾಕ್ಷಿ :
"ಪತಿರ್ಲಿಂಗಂ ಸತೀ ಚಾಹಂ ಇತಿ ಯುಕ್ತಂ ಸನಾತನಃ |
ಪಂಚೇಂದ್ರಿಯಸುಖಂ ನಾಸ್ತಿ ಶರಣಸ್ಥಲಮುತ್ತಮಂ ||"
ಇನ್ನು ಐಕ್ಯಸ್ಥಲದ ವಿವರವು :
ಅರಿಷಡ್ವರ್ಗಂಗಳಿಲ್ಲದಿಹರು, ನಿರ್ಭಾವದಲ್ಲಿಹರು,
ಷಡೂರ್ಮಿಗಳಿಲ್ಲದಿಹರು, ಅಷ್ಟವಿಧಾರ್ಚನೆ ಇಲ್ಲದಿಹರು,
ಉರಿಯುಂಡ ಕರ್ಪುರದ ಹಾಗೆ ಇಹರು,
ಆತ್ಮನೆ ಅಂಗವಾಗಿಪ್ಪುದು ಐಕ್ಯಸ್ಥಲವು.
ಸಾಕ್ಷಿ :
"ಷಡೂರ್ಮಿಯೋಗಷಡ್ವರ್ಗಂ  ನಾಸ್ತಿ ಚಾಷ್ಟವಿಧಾರ್ಚನಂ |

ನಿರ್ಭಾವಂ ಶಿವಲಿಂಗೈಕ್ಯಂ ಶಿಖಿಕರ್ಪೂರಸಯೋಗವತ್‌॥"
ಹೀಗೆ ಗಣಂಗಳು ನಡೆದ ಮಾರ್ಗದಲ್ಲಿ ನಡೆದಡೆ
ಅಂದೇನೊ ಇಂದೇನೊ ?
ಇಂತೀ ಅಷ್ಟಾವರಣಗಳ, ಷಡುಸ್ಥಲದ ಮಾರ್ಗವನು
ಎನ್ನೊಳು ಅರುಹಿದಾತ, ನಮ್ಮ ಶಾಂತಕೂಡಲಸಂಗಮದೇವ. ॥ ೨೫ ॥

೬೪೪

ಘಟಾಕಾಶ ಮಹಾಕಾಶ ಮಹದಾಕಾಶ ಆವುವೆಂದಡೆ :
ಘಟಾಕಾಶವೆ ಇಷ್ಟಲಿಂಗಕ್ಕೆ ಮನೆಯಾಗಿಪ್ಪುದು,
ಜಿಹ್ವೆಯೆ ತಾಯಾಗಿಪ್ಪುದು, ನೇತ್ರವೆ ತಂದೆಯಾಗಿಪ್ಪುದು,
ದ್ವಿಕರ್ಣಂಗಳೆ ಅಣ್ಣತಮ್ಮಂದಿರಾಗಿಪ್ಪವು,
ಹಸ್ತಪಾದಂಗಳೆ ಕುಟುಂಬವಾಗಿಪ್ಪವು,
ಚಿತ್ತಶುದ್ಧವೆ ಅರಮನೆಯಾಗಿಪ್ಪುದು.
ಇವರು ಇಷ್ಟಲಿಂಗಕ್ಕೆ ಉಪಚಾರವ ಮಾಡುತ್ತಿಹರು.
ಸಾಕ್ಷಿ :
" ಮಾತಾ ಜಿಹ್ವಾ ಪಿತಾ ಚಕ್ಷುಃ ದ್ವಿಕರ್ಣಶ್ಚ ಸಹೋದರಂ ।
ಹಸ್ತಪಾದ ಕುಟುಂಬೇನ ಚಿತ್ತಶುದ್ಧೋ ಯಥಾ ಮಠಃ ॥"
ಇನ್ನು ಮಠಾಕಾಶವೆ ಪ್ರಾಣಲಿಂಗಕ್ಕೆ ಮನೆಯಾಗಿಪ್ಪುದು,
ಸತ್ಯವೆ ತಾಯಾಗಿಪ್ಪುದು,
ಜ್ಞಾನವೆ ತಂದೆಯಾಗಿಪ್ಪುದು,
ಧರ್ಮವೇ ಅಣ್ಣತಮ್ಮಂದಿರಾಗಿಪ್ಪರು,
ದಯವೆ ಗೆಳೆಯನಾಗಿಪ್ಪನು,
ಶಾಂತಿಯೆ ಸ್ತ್ರೀಯಾಗಿಪ್ಪಳು,
ಕ್ಷಮೆಯೇ ಪುತ್ರರಾಗಿಪ್ಪರು,
ಇವರು ಬಂಧುಗಳಾಗಿ ಪ್ರಾಣಲಿಂಗಕ್ಕೆ ಉಪಚರಿಸುತ್ತಿಹರು.
ಸಾಕ್ಷಿ :
"ಸತ್ಯಂ ಮಾತಾ ಪಿತಾ ಜ್ಞಾನಂ ಧರ್ಮೋ ಭ್ರಾತಾ ದಯಾ ಸಖಾ ।
ಶಾಂತಿಃ ಪತ್ನೀ ಕ್ಷಮಾ ಪುತ್ರಾಃ ಷಡೇತೇ ಮಮ ಬಾಂಧವಾಃ ॥"
ಮಹದಾಕಾಶವೆ ಭಾವಲಿಂಗಕ್ಕೆ ಮನೆಯಾಗಿಪ್ಪುದು,
ತೃಪ್ತಿಯೆ ತಾಯಾಗಿಪ್ಪಳು, ಆನಂದವೆ ತಂದೆಯಾಗಿಪ್ಪನು,
ಸಂತೋಷವೆ ಅಣ್ಣತಮ್ಮಂದಿರಾಗಿಪ್ಪರು,
ಹರುಷಾಬ್ಧಿಯೆ ಸ್ತ್ರೀಯಾಗಿಪ್ಪಳು,

ಸದ್ಭಾವವೆ ಮಕ್ಕಳಾಗಿಪ್ಪರು,
ಇವರು ಭಾವಲಿಂಗಕ್ಕೆ ಉಪಚರಿಸುತ್ತಿಹರು.
ಘಟಾಕಾಶವೆಂದಡೆ ಜೀವಾತ್ಮ,
ಮಠಾಕಾಶವೆಂದಡೆ ಅಂತರಾತ್ಮ,
ಮಹದಾಕಾಶವೆಂದಡೆ ಪರಮಾತ್ಮ,
ಚೆನ್ನಂಗಿಬೇಳೆಗಿಂದ ಸಣ್ಣನಾಗಿಪ್ಪ ನೇತ್ರವು ತ್ರಿವಿಧಲಿಂಗವು.
ಈ ತ್ರಿವಿಧಾಕಾಶವನೊಳಕೊಂಡ ಭೇದವ
ನಮ್ಮ ಶಾಂತಕೂಡಲಸಂಗಮದೇವ ಬಲ್ಲನಲ್ಲದೆ
ಕಣ್ಣುಗೆಟ್ಟಣ್ಣಗಳೆತ್ತ ಬಲ್ಲರು ನೋಡಾ ! || ೨೬ ||

೬೪೯

ಗುರುಭಕ್ತರಾದವರು ಶಿವಭಕ್ತರಾದವರ ವಣೆವ ಕಂಡು
ಸುಮ್ಮನಿರಲಾಗದು.
ಅದೇನು ಕಾರಣವೆಂದಡೆ :
ಒಬ್ಬ ಗುರುವಿನ ಮಕ್ಕಳಾದ ಮೇಲೆ
ತನಗೆ ಗುರುವು ಕೊಟ್ಟ ದ್ರವ್ಯವ ಸವೆಸಲೇಬೇಕು.
ಮತ್ತೆ ಪ್ರಪಂಚಿನ ತಂದೆ ಒಬ್ಬನಿಗೆ ಮಕ್ಕಳೈವರು.
ಅವರು ತಂದೆಯ ಬದುಕು ನ್ಯಾಯದಿಂದ ಸರಿಮಾಡಿಕೊಂಬರು.
ಈ ದೃಷ್ಟವ ಕಂಡು ನಮಗೆ ಭಕ್ತಿಪಕ್ಷವಾಗದಿದ್ದಡೆ
ಈ ಪ್ರಪಂಚರಿಗಿಂತ ಕಡಿಮೆಯಾಯಿತಲ್ಲಾ ಗುರುವೆ ಎನ್ನ ಬಾಳುವೆ.
ಒಂದಗಳ ಕಂಡರೆ ಕಾಗೆ ಕರೆಯದೆ ತನ್ನ ಬಳಗವನೆಲ್ಲವ ?
ಒಂದು ಗುಟುಕ ಕಂಡರೆ ಕೋಳಿ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಇಂತಪ್ಪ ದೃಷ್ಟವ ಕಂಡು ನೋಡಿ
ಆ ಭಕ್ತರಿಗೆ ಭಕ್ತಿಪಕ್ಷವಾಗದಿದ್ದಡೆ
ಆ ಕಾಗೆ ಕೋಳಿಗಿಂದ ಕರಕಷ್ಟವಾಯಿತಲ್ಲಾ ಎನ್ನ ಬಾಳುವೆ.
ಭಕ್ತರಿಗೆ ಕಡಬಡ್ಡಿ ಕೊಟ್ಟ ಮೇಲೆ
ಕೊಟ್ಟರೆ ಲೇಸು, ಕೊಡದಿರ್ದಡೆ ಲೇಸು.
ಬೇಡಲಾಗದು, ಅದೇನು ಕಾರಣವೆಂದಡೆ
ಅವರಲ್ಲಿ ಗುರು-ಲಿಂಗ-ಜಂಗಮವು ಇಪ್ಪರಾಗಿ.
ಗುರುವಿನ ದ್ರವ್ಯ ಗುರುವಿಗೆ ಮುಟ್ಟಿತಲ್ಲದೆ.
ಮತ್ತೆ ನ್ಯಾಯಕಿಕ್ಕಿ ಅನ್ಯರಿಗೆ ಹೇಳಿ

ಅವರ ಭಂಗವ ಮಾಡಿಸಿದರೆ ಗುರುಹಿರಿಯರೆಂಬರು,
ನಮ್ಮ ಮನೆಯ ಬೆಕ್ಕು ನಾಯಿಗೆ ಮನ್ನಿಸಬೇಕಲ್ಲದೆ,
ಮನ್ನಿಸದಿದ್ದಡೆ ಅವರಿಗೆ ಅವರ ತಕ್ಕ ಶಿಕ್ಷೆಯಾದೀತು.
ಮತ್ತೆ ಭಕ್ತಾಭಕ್ತರಿಗೆ ಕೊಟ್ಟು ಕೊಂಬ ಉದ್ಯೋಗವಾಗಲಿ
ಆಚಾರ-ವಿಚಾರವಾಗಲಿ, ಬೈದರಾಗಲಿ, ಹೊಯ್ದರಾಗಲಿ
ಮತ್ತೆ ಏನಾದರು ತೊಡಕು ಬರಲಿ
ತಮ್ಮ ಮನೆಯೊಳಗೆ ಸುಮ್ಮನೆ ಇರುವುದು ಲೇಸು.
ಮತ್ತೆ ಭಕ್ತಗಣಂಗಳು ಇದ್ದಲ್ಲಿಗೆ ಇಬ್ಬರೂ ಹೋಗಿ
ತಮ್ಮಲ್ಲಿ ಇರುವ ಸ್ಥಿತಿಯ ಹೇಳಿ,
ಅವರು ಹೇಳಿದ ಹಾಗೆ ಕೇಳಿಕೊಂಡು ಇಪ್ಪುದೇ ಲೇಸು.
ಇಲ್ಲಿ ಭಕ್ತಗಣಂಗಳು ಒಪ್ಪಿದರೆ ಅಲ್ಲಿ ಒಪ್ಪುವರು.
ಕಡ ಒಯ್ದುದ್ದು ಕೊಡದಿದ್ದಡೆ,
ಮತ್ತೆ ಭಕ್ತರು ಬೈದರೆ ನಮಗೆ ದುಮ್ಮಾನವಾಗುವದು ಸ್ವಾಮಿ.
ಅನ್ಯರು ಒಯ್ದ ದ್ರವ್ಯ ಮುಳುಗಿದಡೆ ಚಿಂತೆಯಿಲ್ಲವು,
ಭವಿಜನಾತ್ಮರು ಬೈದಡೆ ಎಳ್ಳಷ್ಟು ಸಿಟ್ಟಿಲ್ಲವು.
ಇಂಥ ಬುದ್ಧಿಯ ಕೊಡಬಹುದೆ ಲಿಂಗವೆ !
ನೀವು ಬೇಡಿದುದನೀವೆನೆಂಬ
ನಿಮ್ಮ ತಮ್ಮಟ ಬಿರಿದನು ಕೇಳಿ ಬೇಡಿಕೊಂಬೆನು.
ಏನೆಂದಡೆ :
ಉದ್ಯೋಗ ವ್ಯಾಪಾರ ಮಾಡುವಲ್ಲಿ
ಹುಸಿ [ಬರೆಹವ] ಮಾಡಿ ಒಬ್ಬರ ಮನೆಯ ದ್ರವ್ಯವ
ಒಬ್ಬರ ಮನೆಗೆ ಹಾಕಿ,
ಅಹುದಲ್ಲದ ಮಾಡುವದ ಬಿಡಿಸು.
ನಿಮ್ಮ ನೆನಹಿನೊಳಗೆ ಇಟ್ಟ ಮೇಲೆ ಮತ್ತೆ ರೊಕ್ಕ ಕೊಟ್ಟು
ಉದ್ಯೋಗವ ಮಾಡದಿರಯ್ಯ.
ಈ ರೊಕ್ಕವು ತಂದೆ-ಮಕ್ಕಳಿಗೆ ವಿರೋಧ.
ಕೊಂಬಲ್ಲಿ ವಿರೋಧ, ಕೊಟ್ಟಲ್ಲಿ ವಿರೋಧ.
ಇಂತಿದ ತಿಳಿದ ಮೇಲೆ ಹೇಸಿಕೆಯಾಯಿತ್ತು.
ರೊಕ್ಕವ ಕೊಡಬೇಡ, ಸಿರಿತನ ಬೇಡ,
ಬಡತನ ಕೊಡಿರಯ್ಯ.
ಹಿರಿತನ ಬೇಡ ಕಿರಿತನ ಕೊಡಿರಯ್ಯ.

ಒಡೆತನ ಬೇಡ ಬಂಟತನ ಕೊಡಿರಯ್ಯ.
ಭಕ್ತಗಣಂಗಳ ಸೇವೆಯ ಕೊಡಿರಯ್ಯ.
ಭಕ್ತರ ನೆರೆಯಲ್ಲಿ ಇರಿಸಯ್ಯ.
ಅವರು ಒಕ್ಕುಮಿಕ್ಕ ಪ್ರಸಾದವ ಕೊಡಿಸಯ್ಯ.
ಅವರು ತೊಟ್ಟ ಮೈಲಿಗೆಯ ಕೊಡಿಸಯ್ಯ.
ಅವರ ಬಾಗಿಲ ಕಾಯಿಸಯ್ಯ.
ಅವರ ಬಂಟತನ ಮಾಡಿಸಯ್ಯ.
ಅವರ ಸಂಗ ಎಂದೆಂದಿಗೂ ಅಗಲಿಸದಿರಯ್ಯ.
ನಾಲಗೆಯಲ್ಲಿ ಪಂಚಾಕ್ಷರವ ನಿಲಿಸಯ್ಯ.
ನೇತ್ರದೊಳಗೆ ನಿಮ್ಮ ರೂಪವ ನಿಲಿಸಯ್ಯ.
ಇಷ್ಟನು ಕೊಡದಿರ್ದಡೆ ನೀವು ಬೇಡಿದ್ದನೀವನೆಂಬ
ನಿಮ್ಮ ತಮ್ಮಟ ಬಿರಿದು ಕೇಳಿ ನಮ್ಮ ಗಣಂಗಳು
ಹಿಡಿತಿಯ ಹಿಡಿದಾರಯ್ಯ !
ಎಂದಾತ ನಮ್ಮ ಶಾಂತಕೂಡಲಸಂಗಮದೇವ. ॥ ೨೭ ॥

೭೫೦

ಕುಲ ಎಷ್ಟು ಎಂದಡೆ, ಎರಡು ಕುಲ.
ಅವಾವೆಂದಡೆ : ಭವಿ ಒಂದು ಕುಲ, ಭಕ್ತ ಒಂದು ಕುಲ.
ಅಷ್ಟಾವರಣವೇ ಅಂಗವಾಗಿ,
ಪಂಚಾಚಾರವೇ ಪ್ರಾಣವಾಗಿಪ್ಪ
ಭಕ್ತರ ಕುಲವನರಸಿದಡೆ
ಬಾರದ ಭವಂಗಳಲ್ಲಿ ಬಪ್ಪುದು ತಪ್ಪದು.
ನೀರಿಂದಾದ ಮುತ್ತು ಮರಳಿ ಉದಕವಪ್ಪುದೆ ?
ಆಕಾಶಕ್ಕೆ ಹೋದ ಹೊಗೆ ಹಿಂದಕ್ಕೆ ಬಪ್ಪುದೆ ?
ಮಣ್ಣಿಂದಾದ ಮಡಕೆ ಮತ್ತೆ ಮಣ್ಣಪ್ಪುದೆ ?
ಮತ್ತೆ ವಾಮನಮುನಿ ಹಿರಿಯ ಭಕ್ತರ ಮನೆಯ
ಬಿನ್ನಹವ ಕೈಕೊಂಡು
ಕುಲಕಂಜಿ ಉಣಲೊಲ್ಲದೆ ಹೋದ ನಿಮಿತ್ತದಿಂದ,
ಹಾವಿನಹಾಳ ಕಲ್ಲಯ್ಯಗಳ ಮನೆಯ
ಶ್ವಾನನಾಗಿ ಹುಟ್ಟಲಿಲ್ಲವೆ ?
ಅದು ಕಾರಣ, ಶಿವಭಕ್ತರ ಒಕ್ಕುಮಿಕ್ಕ

ಪ್ರಸಾದವ ಕೊಳಬೇಕು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೨೮ ॥

೬೫೧

ಶಿವಭಕ್ತ ಆವ ಊರೊಳಗಿದ್ದರೇನು ?
ಆವ ಕೇರಿಯಲಿದ್ದರೇನು ?
ಹೊಲಗೇರಿಯೊಳಗಿದ್ದರೇನು ?
ಶಿವಭಕ್ತನಿದ್ದುದೇ ಕೈಲಾಸ !
ಆತನ ಮನೆಯೇ ಶಿವನ ಅರಮನೆ !
ಆತನ ಮನೆಯ ಸುತ್ತಮುತ್ತಲಿದ್ದ ಲೋಕವೆಲ್ಲ ಶಿವಲೋಕ !
ಸಾಕ್ಷಿ :
"ಚಾಂಡಾಲವಾಟಿಕಾಯಾಂ ಚ ಶಿವಭಕ್ತಃ ಸ್ಥಿತೋ ಯದಿ ।
ಅತ್ರಾಽಪಿ ಶಿವಲೋಕಃ ಸ್ಯಾತ್ ತದ್ಗೃಹಂ ಶಿವಮಂದಿರಂ ॥"
ಎಂದುದಾಗಿ,
ಇಂತಪ್ಪ ಶಿವಭಕ್ತನ ಅಂಗಳವ ಕಂಡಡೆ
ಕೋಟಿ ಬ್ರಹ್ಮಹತ್ಯ ಕೋಟಿ ಶಿಶುಹತ್ಯ
ಇವೆಲ್ಲ ಅಳಿದುಹೋಗುವವು.
ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದವರಿಗೆ
ಅಷ್ಟೈಶ್ವರ್ಯ ಅಷ್ಟಮಹಾಸಿದ್ಧಿ ಫಲವು ತಪ್ಪದು.
ಅವರ ಒಕ್ಕುಮಿಕ್ಕ ಪ್ರಸಾದವ ಕೊಂಡಡೆ
ಸದ್ಯೋನ್ಮುಕ್ತರಪ್ಪುದು ತಪ್ಪದು.
ಇಂತಪ್ಪ ಶಿವಭಕ್ತರಿಗೆ ಏನೆಂದು ಉಪಮಿಸುವೆನಯ್ಯ
ಆತನು ಮಹಾದೇವನಲ್ಲದೆ ಬೇರುಂಟೆ ?
ಆತ ಅಗಮ್ಯ ಅಗೋಚರ ಅಪ್ರಮಾಣ ಆನಂದಮಹಿಮನು.
ಅಂತಪ್ಪ ಸದ್ಭಕ್ತನ ಶ್ರೀಚರಣವ ಎನ್ನೊಳಗೆ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೨೯ ॥

೬೫೨

ಸಹಜ ಶಿವಭಕ್ತರಾದವರು ತಟ್ಟೆ ಬಟ್ಟಲೊಳಗುಂಡದ್ದು
ಇಷ್ಟಲಿಂಗದ ಪ್ರಸಾದ.
ಕರಕಮಲದೊಳಗುಂಡದ್ದು ಪ್ರಾಣಲಿಂಗದ ಪ್ರಸಾದ.
ಪಾವಡ ಪರ್ಣದೊಳಗುಂಡದ್ದು ಭಾವಲಿಂಗದ ಪ್ರಸಾದ.

ಲಿಂಗದಲ್ಲಿ ಮನ ನೋಟ ನಿಲಿಸಿಕೊಂಬುವುದು ಲಿಂಗಪ್ರಸಾದ.
ಲಿಂಗದಲ್ಲಿ ಮನ ನೋಟವಿಲ್ಲದೆ ಕೊಂಬುದು ಅನರ್ಪಿತವು.
ಅದು ಕಾರಣ, ಲಿಂಗ ನೆನಹಿನಿಂದಲೆ ಸ್ವೀಕರಿಸುವುದು
ಎಂದರುಹಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೩೦ ॥

೬೫೩

ಅಖಂಡ ಗೋಳಕಾಕಾರ ಮಹಾಲಿಂಗದ ಪೂಜೆ ಎಂತೆಂದಡೆ :
ಸದ್ಯೋಜಾತಮುಖದಿಂದಾದ ಪೃಥ್ವಿ
ಲಿಂಗಕ್ಕೆ ಪತ್ರಿ ಪುಷ್ಪ ಬೇಕೆಂದು
ಅನಂತ ಪತ್ರಿ ಪುಷ್ಪಗಳಿಂದ ಅರ್ಚಿಸುತ್ತಿಹುದು.
ವಾಮದೇವಮುಖದಿಂದಾದಪ್ಪು
ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂದು
ಸಪ್ತಸಮುದ್ರ ದಶಗಂಗೆಗಳ ಕುಂಭವ ಮಾಡಿ,
ಕೆರೆ ಬಾವಿಗಳ ಪಂಚಪಾತ್ರೆಯ ಮಾಡಿ,
ಮಜ್ಜನ ನೀಡಿಸುತ್ತಿಹುದು.
ಅಘೋರಮುಖದಿಂದಾದ ಅಗ್ನಿ
ಲಿಂಗಕ್ಕೆ ಧೂಪ ದೀಪ ಆರತಿಗಳಾಗಬೇಕೆಂದು,
ಕಾಷ್ಠದಲ್ಲಿ ಪಾಷಾಣದಲ್ಲಿ ಬೆಳಗುತ್ತಿಹುದು.
ತತ್ಪುರುಷಮುಖದಿಂದಾದ ವಾಯು
ಲಿಂಗಕ್ಕೆ ಜಪವ ಮಾಡುತ್ತಿಹುದು.
ಈಶಾನ್ಯ ಮುಖದಿಂದಾದ ಆಕಾಶ
ಲಿಂಗಕ್ಕೆ ಭೇರಿ ಮೊದಲಾದ ನಾದಂಗಳ ಬಾರಿಸುತ್ತಿಹುದು.
ಗೋಪ್ಯಮುಖದಿಂದಾದ ಆತ್ಮನು ಲಿಂಗಕ್ಕೆ ಸಿಂಹಾಸನವಾಗಿರ್ಪುದು.
ಮನ ಚಕ್ಷುವಿನಿಂದಾದ ಚಂದ್ರ-ಸೂರ್ಯರು ದೀವಿಗೆಯಾಗಿಹರು.
ಇಂತಪ್ಪ ಘನವಸ್ತು ಎರಡಾಗಿ
ತನ್ನ ವಿನೋದಕ್ಕೆ ಅರ್ಪಿಸಿಕೊಂಬಾತನು ತಾನೇ,
ಅರ್ಪಿಸುವಾತನು ತಾನೇ.
ಇಂತಪ್ಪ ಘನಲಿಂಗವು ಕರಸ್ಥಲದೊಳಗೆ
ಚುಳುಕಾಗಿ ನಿಂದ ನಿಲವ ಎನ್ನೊಳರುಹಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೩೧ ॥

೬೫೪

ದೇಹದೊಡನೆ ತ್ರಿದೋಷಗಳು,
ವಾತ ಪಿತ್ತ ಶ್ಲೇಷ್ಮ-ಇವು ಮೂರುಕೂಡಿ ದೇಹ ಹುಟ್ಟಿತು.
ಇದರ ವಿವರವು :
ವಾತ ೮೧, ಪಿತ್ತ ೬೪, ಶ್ಲೇಷ ೨೧೫.
ಇವು ಕೂಡಿ ೩೬೦ ವ್ಯಾಧಿಗಳಾದವು.
ಇವು ಶಿವನ ಅಪ್ಪಣೆಯಿಂದ ಬಂದುವಲ್ಲದೆ,
ಮನುಷ್ಯನ ಯತ್ನವಿಲ್ಲವು.
ಅದಕ್ಕೆ ಮನುಷ್ಯರು ವೈದ್ಯವ ಮಾಡಿವಡೆ
ಲೋಕ ಏಕೆ ಸಾವುದು ?
ಅದಕ್ಕೆ ಸೊಕ್ಕಿದವರಿಗೆ, ಗುರುತಲ್ಪಕರಿಗೆ,
ಭಕ್ತರ ನಿಂದ್ಯವ ಮಾಡಿದವರಿಗೆ,
ತಂದೆಗೆ ಮಗ ಬೈದರೆ, ಅತ್ತೆಗೆ ಸೊಸೆ ಸೊಕ್ಕಿ ನುಡಿದಡೆ,
ಅನಾಚಾರಿಗಳಿಗೆ, ಆಸೆಯ ಕೊಟ್ಟು ಭಾಷೆಗೆ ತಪ್ಪಿದವರಿಗೆ,
ಶಿವಸದ್ವರ್ತನೆ ಸದ್ಧರ್ಮ ಸದಾಚಾರವಿಲ್ಲದವರಿಗೆ
ಈ ವ್ಯಾಧಿಗಳು ಕಾಡುತ್ತಿಹವು.
ತಲೆಶೂಲೆ, ಪಕ್ಕಶೂಲೆ, ಜ್ವರ, ಉರಿ
-ಇವು ಕಣ್ಣಿಗೆ ಕಾಣಿಸದೆ ಬಂದಂಥ ವ್ಯಾಧಿಗಳು :
ಶಿವನ ಅಂಶಿಕವು.
ತದ್ದು ತುರಿ ಕೆಮ್ಮು ಭಗದಳ ಕುಷ್ಠ ಗಂಡಮಾಲೆ
ಕುರು ಬಾವು ಹುಣ್ಣುಗಳು
ಕಣ್ಣಿಗೆ ಕಾಣಿಸುವಂಥ ಬೇನೆಗಳು ;
ಪಾರ್ವತಿಯ ಅಂಶಿಕವು.
ಇವು ಎಲ್ಲ ವ್ಯಾಧಿಗಳು ಅವರಿಗೆ ತಕ್ಕಷ್ಟು
ಶಿಕ್ಷೆ ಮಾಡಿಸುತ್ತಿಹವು.
ಮತ್ತೆ ಗುರುಮಾರ್ಗಾಚಾರವಿಡಿದು ಆಚರಿಸುವ ಪ್ರಸಾದಿಗಳಿಗೆ
ಅವೇ ವ್ಯಾಧಿಗಳು ಹಿತವಾಗಿಹವು.
ಮತ್ತೆ ಸರ್ಪ ಕಚ್ಚಿವಡೆ, ಸ್ತ್ರೀಯು ಹಡೆಯಲಾರದಿದ್ದಡೆ,
ಯಾವ ಕುಲದವನಾಗಲಿ ವಿಚಾರಿಸದೆ
ಅವರು ಮಂತ್ರಿಸಿದ ಉದಕವ ಕುಡಿವುದು.
ಮತ್ತೆ ಅವರ ಕುಲಕ್ಕೆ ಭಕ್ತರ ಕುಲಕ್ಕೆ ಹೇಸುವುದು.

ಅನ್ಯಕುಲದ ವೈದ್ಯನ ಕೈಯಲ್ಲಿ ಮದ್ದು ಮಾಡಿಸಿಕೊಂಬರು.
ಭಕ್ತರು ಅಡುಗೆಯ ಮಾಡಿದಡೆ, ಯಾವ ಕುಲವೆಂಬರು ?
ಅವರಿಗೆ ಎಂದೆಂದಿಗೂ ಮುಕ್ತಿಯಿಲ್ಲವಯ್ಯಾ.
ಮತ್ತೆ ಪ್ರಸಾದವ ಕೊಂಬುವರು ಮದ್ದು ಕೇಳಲಾಗದು.
ಅದೇನುಕಾರಣವೆಂದಡೆ-
ಪ್ರಸಾದಕ್ಕಿಂತ ಮದ್ದು ಹಿತವಾಯಿತಲ್ಲ !
ಶಿವಮಂತ್ರ ಕಾಯಕ್ಕೆ
ಅನ್ಯರ ಕೈಯಲ್ಲಿ ಮಂತ್ರಿಸಿ ಕೇಳಲಾಗದು.
ಅದೇನು ಕಾರಣವೆಂದಡೆ -
ಶಿವಮಂತ್ರಕ್ಕಿಂತ ಅನ್ಯರ ಮಂತ್ರ ಅಧಿಕವಾಯಿತ್ತಲ್ಲ !
ಮತ್ತೆ ವೈದ್ಯಕಾರನಿಂದ ಮಂತ್ರಗಾರನಿಂದ
ಮನುಷ್ಯರ ಪ್ರಾಣ ಉಳಿವುದೆಂದು
ಯಾವ ಶಾಸ್ತ್ರ ಹೇಳುತ್ತದೆ ?
ಯಾವ ಆಗಮ ಸಾರುತ್ತದೆ ? ಹೇಳಿರಿ.
ಅರಿಯದಿದ್ದಡೆ ಕೇಳಿರಿ :
ಭಕ್ತಗಣಂಗಳು ಪಾದೋದಕ ಪ್ರಸಾದ
ವಿಭೂತಿ ಶಿವಮಂತ್ರಗಳಿಂದೆ
ಲೆಕ್ಕವಿಲ್ಲದೆ ಹೋಹ ಪ್ರಾಣವ ಪಡೆದರು -
ಎಂದು ಬಸವೇಶ್ವರ ಪುರಾಣದಲ್ಲಿ ಕೂಗ್ಯಾಡುತ್ತದೆ.
ಇಂತಪ್ಪ ದೃಷ್ಟವ ಕಂಡು ನಂಬದಿರ್ದಡೆ
ಆವಿನ ಕೆಚ್ಚಲೊಳಗೆ ಉಣ್ಣೆಯಿದ್ದು
ಹಾಲು ಬಿಟ್ಟು ರಕ್ತವ ಸೇವಿಸುವಂತಾಯಿತ್ತು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೩೨ ॥

೬೫೫

ಜೀವನ್ಮುಕ್ತಿ ಯಾವುದೆಂದಡೆ
ಹೇಳಿಹೆ ಕೇಳಿರಯ್ಯಾ.
ಜೀವನ ಬುದ್ಧಿಯ ಬಿಟ್ಟುದು ಜೀವನ್ಮುಕ್ತಿ.
ಜೀವನ ಬುದ್ಧಿ ಯಾವುದೆಂದಡೆ :
ಜ್ಞಾನಗುರುಗಳಿಂದ ಜ್ಞಾನವ ಪಡೆದು
ಅಂಗಲಿಂಗಸಂಗ ಸಮರಸವಾದುದೇ ಜೀವನ್ಮುಕ್ತಿ.
ಇಂಥವ ಬಿಟ್ಟು ತಾನು ಮಂಗಬುದ್ಧಿಯಿಂದ ನಡೆದು

ಜ್ಞಾನಪ್ರಕಾಶವ ಕಾಣಲಿಲ್ಲವೆಂದು
ಮತ್ತೊಬ್ಬ ಗುರುಗಳಲ್ಲಿ ತಿಳಿಯಬೇಕೆಂಬರು.
ಅವರಲ್ಲಿ ಏನು ಇದ್ದಿತೊ !
ಹೀಗೆಂಬುದೇ ಜೀವನ ಬುದ್ಧಿಯು.
ಹೊಲವ ಬಿತ್ತುವ ಒಕ್ಕಲಿಗ ಯಾವನಾದಡೆ ಆಗಲಿ
ಬೀಜವ ಬಿತ್ತುವ ಪರಿ ಒಂದೇ.
ಮತ್ತೆ ಗೊಲ್ಲಾಳಯ್ಯಂಗೆ ಕುರಿಯ ಹಿಕ್ಕೆಯ ದೃಢದಿಂದ ಪೂಜಿಸಿ
ಗುರು ಪ್ರಸನ್ನತೆಯ ಹಡೆದುದಿಲ್ಲವೆ ?
ಅವಿಶ್ವಾಸದಿಂದೆ, ಅಂಗಬುದ್ಧಿಯಿಂದೆ
ಹಲವು ಗುರು, ಹಲವು ಲಿಂಗ ಅರ್ಚಿಸಿ ಪೂಜಿಸಿ
ಹಲವು ಭವದಲ್ಲಿ ಬಂದರು ನೋಡಾ !
ಜೀವನ ಬುದ್ಧಿ ಎಂತೆಂದಡೆ :
ಆಶೆ ರೋಷ ಅಹಂಕಾರ ಅರಿಷಡ್ವರ್ಗಂಗಳು
ಅಷ್ಟಮದಂಗಳು, ಅನೃತ,
ಪರಧನ, ಪರಸ್ತ್ರೀ, ಪರನಿಂದೆ, ಪರಹಿಂಸೆ
ಇವೆಲ್ಲವೂ ಜೀವನಬುದ್ಧಿ.
ಇಂತಿವೆಲ್ಲವ ಒಳಗಿಟ್ಟುಕೊಂಡು
ನಾವು ಜೀವನ್ಮುಕ್ತರೆಂಬರು ಎಂತಹರೋ ನೋಡಾ!
ದೀಪವೆಂದಡೆ ಕತ್ತಲೆ ಹೋಯಿತ್ತೆ ?
ಅಮೃತವೆಂದಡೆ ಹಸಿವು ಹೋಯಿತ್ತೆ ?
ಉದಕವೆಂದಡೆ ತೃಷೆ ಹೋಯಿತ್ತೆ ?
ಇಂಥವರಿಗೆ ಮುಕ್ತಿಯಿಲ್ಲವಯ್ಯಾ.
ಮತ್ತೆ ಜೀವನ್ಮುಕ್ತಿ ಹೇಗೆಂದಡೆ -
ಶರಣಸತಿ ಲಿಂಗಪತಿಯೆಂಬ
ಭೇದವ ತಿಳಿದಡೆ ಜೀವನ್ಮುಕ್ತಿ.
ಈ ತ್ರಿವಿಧತನವು ಮೀಸಲಾಗಿ
ತ್ರಿವಿಧಲಿಂಗಕ್ಕೆ ಅರ್ಪಿಸಬಲ್ಲಾತನೆ ಜೀವನ್ಮುಕ್ತನು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೩೩ ॥

೬೫೬

ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣ,
ಇಪ್ಪತ್ತೆಂಟು ದಿವ್ಯಾಗಮಂಗಳು

ಇವು ಯಾಕೆ ನಿರ್ಮಾಣ ಮಾಡಿದಿರಿ ಸ್ವಾಮಿ ?
ದಯದಿಂದ ಕರುಣಿಪುದು.
ಕೇಳಯ್ಯ ಮಗನೆ :
ಹರಿ ಸುರ ಬ್ರಹ್ಮಾದಿಗಳು
ದೇವ ದಾನವ ಮಾನವರುಗಳು
ಎಂಬತ್ತೆಂಟು ಕೋಟಿ ಮುನಿಗಳು
ಇವರೆಲ್ಲರು ಮನವ ನಿಲಿಸಿಹೆವೆಂದು ಬಿನ್ನಹ ಮಾಡಿಕೊಳ್ಳಲು
ಶಿವನು ಸರ್ವ ಶ್ರುತಿ ಸ್ಮೃತಿ ಶಾಸ್ತ್ರವ ನಿರ್ಮಾಣ ಮಾಡಿದನು.
'ವೇದಾಂತತತ್ತ್ವಮಧಿಕಂ ನವನೀತಸಾರಂ' ಎಂಬುದಾಗಿ,
ವೇದ ಮೊದಲಾದುವೆಲ್ಲವು ಮಜ್ಜಿಗೆ ಹಾಗೆ,
ಪುರಾತನರ ವಚನಗಳು ಗುರುವಾಕ್ಯವೆಲ್ಲವು ಬೆಣ್ಣೆ ಹಾಗೆ.
ಈ ಗುರುವಾಕ್ಯವಿಡಿದು ಲಿಂಗದಲ್ಲಿ ಮನವ ನಿಲಿಸಿದಡೆ
ಸರ್ವ ಶಾಸ್ತ್ರವೇಕೆ ?
ಮನವು ಲಿಂಗದಲ್ಲಿ ನಿಲ್ಲದಿರ್ದಡೆ, ಏನು ಮಾಡಿದಡೂ ನಿಷ್ಫಲ.
ಇದನು ಮಹಾಜ್ಞಾನಿಗಳು ತಿಳಿದು
ಗುರುವಿನ ಕರುಣೆಯ ಕೃಪೆಯಿಂದ ಲಿಂಗದಲ್ಲಿ ಬೆರೆದು
ಲಿಂಗವೇ ತಾನು ತಾನಾಗಿ,
ಜ್ಯೋತಿಗೆ ಜ್ಯೋತಿ ಕೂಡಿದಂತೆ ನಿಜಲಿಂಗೈಕ್ಯರಾದರು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. || ೩೪ ||

೬೫೭

ಧ್ಯಾನ ಧಾರಣ ಸಮಾಧಿಯೆಂತೆಂದಡೆ ಸದ್ಗುರುವೆ ಕರುಣಿಪುದು.
ಕೇಳಯ್ಯ ಮಗನೆ :
ಧ್ಯಾನ ಯೋಗವೆಂತೆಂದಡೆ :
ಷಡಾಧಾರಚಕ್ರದೊಳಗೆ ಆಧಾರ ಮೊದಲಾಗಿ ಆಜ್ಞೆ ಕಡೆತನಕ
ಇಷ್ಟಲಿಂಗವ ಧ್ಯಾನಿಸಿ ಅರ್ಚಿಸಿ ಪೂಜಿಸಿ
ಅಲ್ಲಿ ತ್ರಿಕೂಟ ಸಂಗಮದಲ್ಲಿ
ಗಂಗಾ ಯಮುನಾ ಸರಸ್ವತಿ ನದಿಗಳು ಕೂಡಿದ ಠಾವಿನಲ್ಲಿ
ಪ್ರಮಥಗಣಂಗಳು ಮೊದಲಾಗಿ ಅಲ್ಲಿ ಮಜ್ಜನವ ನೀಡುತ್ತಿಹರು.
ಅಲ್ಲಿ ಸೂರ್ಯಪೀಠದ ಮೇಲೆ ಗುರುವು ಮೂರ್ತವ ಮಾಡಿರಲು
ಅವರ ಪಾದಾರ್ಚನೆಯಂ ಮಾಡಿ,
ಪಾದೋದಕದ ನದಿಗಳಲ್ಲಿ ಸ್ನಾನವ ಮಾಡಿ

ಅವರ ಸಂಗಡ ಏಳನೆಯ ಮಂಟಪಕ್ಕೆ ಹೋಗಿ
ಅಲ್ಲಿ ಪಶ್ಚಿಮಚಕ್ರದಿಂದ ನಿರಂಜನಜಂಗಮಪ್ಪ
ಶಿಖಾಚಕ್ರದಲ್ಲಿರ್ದ ಬಸವಾದಿ ಪ್ರಮಥರು ಮೊದಲಾದವರು ಬಿಜಯಮಾಡಿ,
ಅಲ್ಲಿ ಅಸಂಖ್ಯಾತ ಪ್ರಮಥರು, ನೂತನ ಗಣಂಗಳು
ಸಹವಾಗಿ ಲಿಂಗಾರ್ಚನೆಯ ಮಾಡುತ್ತಿಹರು.
ಆ ಲಿಂಗಾರ್ಚನೆ ಎಂತೆಂದಡೆ :
ಮೊದಲು ಚಿದ್ಭಸ್ಮವನೆ ಧರಿಸಿ,
ಆನಂದೋದಕದಿಂದ ಲಿಂಗಕ್ಕೆ ಕ್ರಿಯಾಮಜ್ಜನವ ನೀಡಿ,
ಅಷ್ಟತನುವಿನ ಅಷ್ಟಸುಗಂಧವ ಧರಿಸಿ,
ಕರಣಂಗಳ ಸಂಚಲವಿಲ್ಲದ ಗುಣತ್ರಯವಕ್ಷತೆಯ ಧರಿಸಿ,
ಸಾವಿರದ್ವೆವತ್ತು ಪ್ರಣವದ ಪರಿಮಳ ತುಂಬಿರ್ದ ಪುಷ್ಪವ ಧರಿಸಿ,
ದಶವಾಯುಗಳ ಗುಣಧರ್ಮಂಗಳ ಜ್ಞಾನಾಗ್ನಿಯೊಳು ನೀಡಿ,
ದಶಾಂಗದ ಸದ್ವಾಸನೆಯ ಧೂಪವ ಧರಿಸಿ,
ಹೃದಯವೆಂಬ ಪ್ರಣತಿಯಲ್ಲಿ
ದೃಢಚಿತ್ತವೆಂಬ ಬತ್ತಿಯನಿರಿಸಿ,
ಅರುಹೆಂಬ ತೈಲವನೆರದು,
ಮಹಾಜ್ಞಾನವೆಂಬ ಜ್ಯೋತಿಯ ಮುಟ್ಟಿಸಿ
ಅದರಿಂದೊದಗಿದ ಏಕಾರತಿ ತ್ರಿಯಾರತಿ ಪಂಚಾರತಿ
ಕಡ್ಡಿ ಬತ್ತಿ ಮೊದಲಾದ ಮಹಾಪ್ರಕಾಶದ ದೀಪವ ಧರಿಸಿ,
ಕ್ರಿಯಾ ಜ್ಞಾನ ಇಚ್ಛಾ ಆದಿ ಪರ ಚಿತ್‌ಶಕ್ತಿ
ಮೊದಲಾದವರು ಆರತಿಯ ಪಿಡಿದಿಹರು.
ಆ ಮೇಲೆ ಪಾದತೀರ್ಥವ ಸಲಿಸಿ,
ಮತ್ತೆ ಐವತ್ತು ದಳದಲ್ಲಿರ್ದ
ಐವತ್ತು ರುದ್ರಕನ್ನಿಕೆಯರು ಅಡುಗೆಯ ಮಾಡಿ,
ಅವರಿಗೆ ಇಚ್ಛಾಪದಾರ್ಥವ ನೀಡುತ್ತಿಹರು.
ಅವರ ಒಕ್ಕುಮಿಕ್ಕ ಪ್ರಸಾದವನುಂಡು
ಫಲದಾಕಾಂಕ್ಷೆಗಳಿಲ್ಲದೆ
ಉಲುಹಡಗಿದ ನಿಜ ಪ್ರಭಾಲತೆ ಪರ್ಣದ ವೀಳ್ಯವನಿತ್ತು
ಅವರ ತಾಂಬೂಲ ಪ್ರಸಾದವ ಕೊಂಡು ಪರಿಣಾಮಿಸಿ
ಮನ ಭಾವಂಗಳಿಂದ ಪ್ರತ್ಯಕ್ಷವಾಗಿ ಕಂಡು,
ಧ್ಯಾನಿಸುವುದೇ ಧ್ಯಾನ ಯೋಗ.

ಇನ್ನು ಧಾರಣಯೋಗದ ವಿವರ :
ಕರದೊಳಗೆ ಇಷ್ಟಲಿಂಗವ ಮೂರ್ತವ ಮಾಡಿಸಿ
ಮನದೊಳಗೆ ಪ್ರಾಣಲಿಂಗವ ಮೂರ್ತವ ಮಾಡಿಸಿ
ಭಾವದೊಳಗೆ ತೃಪ್ತಿಲಿಂಗವ ಮೂರ್ತವ ಮಾಡಿಸಿ
ಕರ ಮನ ಭಾವದೊಳಗೆ ಪ್ರತ್ಯಕ್ಷವಾಗಿ ಕಂಡು
ಧರಿಸಿಕೊಂಡಿಪ್ಪುದೀಗ ಧಾರಣಯೋಗ.
ಇನ್ನು ಸಮಾಧಿಯೋಗದ ವಿವರ :
ಆ ಇಷ್ಟ, ಪ್ರಾಣ ಭಾವಲಿಂಗವ ಏಕವ ಮಾಡಿ,
ಅಲ್ಲಿ ಐಕ್ಯವಾಗಿಪ್ಪುದೀಗ ಸಮಾಧಿಯೋಗ ಎಂದರುಹಿದಾತ
ನಮ್ಮ ಶಾಂತಕೂಡಲಸಂಗಮದೇವ. || ೨೫ ||

**೬೫೮**

ಲಿಂಗದೊಳಗೆ ಅಖಿಳಾಂಡಕೋಟಿ ಬ್ರಹ್ಮಾಂಡಗಳಡಗಿಹವು.
ಲಿಂಗವು ತಾನು ಬ್ರಹ್ಮಾಂಡದೊಳಡಗಿ
ಆ ಬ್ರಹ್ಮಾಂಡವು ಲಿಂಗವು ತನ್ನೊಳಡಗಿದ ಭೇದವು
ಶಾಸ್ತ್ರವ ಬಲ್ಲವರಿಗೆ ಕಾಣಿಸದು,
ಆಗಮಯುಕ್ತರಿಗೆ ತಿಳಿಯದು ;
ಕರ್ಮ ಭೂಭಾರಿಗಳಿಗೆ ಸಲ್ಲದು.
ಇದನ್ನು ಭಕ್ತಗಣಂಗಳಿಗೆ ಗುರು ಪ್ರತ್ಯಕ್ಷಮಂ ಮಾಡಿ
ತೋರಿಸಿದ ಭೇದವು ಎಂತೆಂದಡೆ :
ಕರಿ ಕನ್ನಡಿಯೊಳಡಗಿದ ಹಾಗೆ ;
ಮುಗಿಲ ಮರೆಯ ಸೂರ್ಯನ ಹಾಗೆ
ನೇತ್ರದ ಕೊನೆಯೊಳಗೆ ಆಕಾಶವಡಗಿದ ಹಾಗೆ,
ನೆಲದ ಮರೆಯ ನಿಧಾನದ ಹಾಗೆ
ಬೀಜದೊಳಡಗಿದ ವೃಕ್ಷದ ಹಾಗೆ.
ಈ ಭೇದವು ಗುರುಭಕ್ತರಂಶಿಕರಾದವರಿಗೆ ಸಾಧ್ಯವಲ್ಲದೆ
ಉಳಿದ ಭಿನ್ನ ಜ್ಞಾನಿಗಳೆತ್ತ ಬಲ್ಲರು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. || ೨೬ ||

**೬೫೯**

ನಿರಾಕಾರ ಪರವಸ್ತು ಹೇಗೆಂದಡೆ :
ಹೆಣ್ಣಲ್ಲ ಗಂಡಲ್ಲ, ಬೀಜವಲ್ಲ ವೃಕ್ಷವಲ್ಲ,

ಆಕಾರವಲ್ಲ ನಿರಾಕಾರವಲ್ಲ, ಶ್ವೇತವಲ್ಲ ಪೀತವಲ್ಲ,
ಹರಿತವಲ್ಲ ಮಾಂಜಿಷ್ಟವಲ್ಲ, ಕಪೋತವಲ್ಲ, ಮಾಣಿಕ್ಯವಲ್ಲ.
ಆತನು ವರ್ಣಾತೀತನು, ವಾಙ್ಮನಕ್ಕಗೋಚರನು.
ಇಂತಪ್ಪ ವಸ್ತುವಿನೊಳಗೆ ಬೆರೆವ ಪರಿಯೆಂತೆಂದಡೆ :
ಗುರುವಿನ ವಾಕ್ಯವಿಡಿದು ಆಚರಿಸಿದವನು ಐಕ್ಯನು.
ಹೇಗೆಂದಡೆ : ಎಲೆಯಿಲ್ಲದ ವೃಕ್ಷದಂತೆ,
ಸಮುದ್ರದೊಳಗೆ ನೊರೆ ತೆರೆ ಬುದ್ಬುದಾಕಾರ ಅಡಗಿದ ಹಾಗೆ
ಭಕ್ತನು ಮಹೇಶ್ವರನೊಳಡಗಿ,
ಆ ಮಹೇಶ್ವರನು ಪ್ರಸಾದಿಯೊಳಡಗಿ,
ಆ ಪ್ರಸಾದಿಯು ಪ್ರಾಣಲಿಂಗಿಯೊಳಡಗಿ,
ಆ ಪ್ರಾಣಲಿಂಗಿಯು ಶರಣನೊಳಡಗಿ,
ಆ ಶರಣ ಐಕ್ಯನೊಳಡಗಿ,
ಆ ಐಕ್ಯನು ನಿರವಯದೊಳು ಕೂಡಿ
ಕ್ಷೀರವು ಕ್ಷೀರವ ಕೂಡಿದಂತೆ
ನೀರು ನೀರ ಕೂಡಿದಂತೆ
ಜ್ಯೋತಿ ಜ್ಯೋತಿಯ ಕೂಡಿದಂತೆ
ಬಯಲು ಬಯಲ ಕೂಡಿ
ಚಿದ್ಬಯಲುವಾಗಿ ನಿಂದ ನಿಲವ ಲಿಂಗದೊಳರುಹಿ
ಮೂವತ್ತಾರುಲಿಂಗದ ಮುಖದಿಂದಾದ
ಮೂವತ್ತಾರು ವಚನವ ಓದಿದವರು ಕೇಳಿದವರು
ಸದ್ಯೋನ್ಮುಕ್ತರಪ್ಪುದು ತಪ್ಪದು ಎಂದಾತ
ನಮ್ಮ ಶಾಂತಕೂಡಲಸಂಗಮದೇವ. || ೩೭ ||

**ಪರಿಶಿಷ್ಟ** :

**೬೬೦**

ಇಷ್ಟಲಿಂಗಕ್ಕೆ ಅರ್ಪಿಸುವಾಗ, ಇಷ್ಟಲಿಂಗದಲ್ಲಿ ಮೂಲಮಂತ್ರವ ಧ್ಯಾನಿಸುವ ಕ್ರಮವು:
ಓಂ ಹ್ರಾಂ ನಾಂ ಸದ್ಯೋಜಾತ ಆಚಾರಲಿಂಗಾಯನಮಃ
ಇಷ್ಟಲಿಂಗದ ಶಕ್ತಿ ಪೀಠದ ಹಿಂದೆಸೆಯಲ್ಲಿ ಸಂಬಂಧ.
ಓಂ ಹ್ರೀಂ ಮಾಂ ವಾಮದೇವ ಗುರುಲಿಂಗಾಯನಮಃ
ಇಷ್ಟಲಿಂಗದ ಎಡದ ಕೈಯಲ್ಲಿ ಸಂಬಂಧ.

ಓಂ ಹ್ರೂಂ ಸಿಂ ಅಘೋರ ಶಿವಲಿಂಗಾಯನಮಃ
ಇಷ್ಟಲಿಂಗದ ಬಲಭಾಗದ ವರ್ತುಳದ ಸಂಧಿಲಿ ಸಂಬಂಧ.
ಓಂ ಹ್ರೈಂ ವಾಂ ತತ್ಪುರುಷ ಜಂಗಮಲಿಂಗಾಯನಮಃ
ಇಷ್ಟಲಿಂಗದ ಎಡದ ಭಾಗದ ಗೋಮುಖದಲ್ಲಿ ಸಂಬಂಧ.
ಓಂ ಹ್ರೌಂ ಯಾಂ ಈಶಾನ್ಯ ಪ್ರಸಾದಲಿಂಗಾಯನಮಃ
ಇಷ್ಟಲಿಂಗದ ನಾಳದಲ್ಲಿ ಸಂಬಂಧ.
ಓಂ ಹ್ರಃ ಓಂ ಗೋಪ್ಯಮುಖ ಮಹಾಲಿಂಗಾಯನಮಃ
ಇಷ್ಟಲಿಂಗದ ಗೋಳಕದಲ್ಲಿ ಸಂಬಂಧ.
ಓಂ ಬಾಂ ಅಂ ಇಷ್ಟಲಿಂಗಾಯನಮಃ
ಇಷ್ಟಲಿಂಗದ ಮಸ್ತಕದಲ್ಲಿ ಸಂಬಂಧ.
ಓಂ ಸಾಂ ಉಂ ಪ್ರಾಣಲಿಂಗಾಯ ನಮಃ
ಇಷ್ಟಲಿಂಗದ ಬಲಭಾಗದ ವರ್ತುಳದಲ್ಲಿ ಸಂಬಂಧ.
ಓಂ ವಾಂ ಮಾಂ ಭಾವಲಿಂಗಾಯ ನಮಃ
ಇಷ್ಟಲಿಂಗದ ಬಲಭಾಗದ ಗೋಮುಖದ ತುದಿಯಲ್ಲಿ ಸಂಬಂಧ
ಶಾಂತಕೂಡಲಸಂಗಮದೇವಾ. || ೩೮ ||

ಓ೭೧

ಇನ್ನು ಲಿಂಗಕ್ಕೆ ಪ್ರಸಾದ ಅರ್ಪಿಸುವ ಕ್ರಮವು.
ಓಂ ಬಸವಲಿಂಗಾಯ ನಮಃ
ಹ್ರಾಂ ಹ್ರೀಂ ಸದ್ಯೋಜಾತ, ವಾಮದೇವ
ಶುದ್ಧಪ್ರಸಾದ, ಆಚಾರಲಿಂಗ, ಗುರುಲಿಂಗ,
ಇಷ್ಟಲಿಂಗಕ್ಕೆ ರೂಪು ಅರ್ಪಿತ.
ಓಂ ಬಸವಲಿಂಗಾಯ ನಮಃ
ಹ್ರಾಂ ಹ್ರೈಂ ಅಘೋರ, ತತ್ಪುರುಷ,
ಸಿದ್ಧಪ್ರಸಾದ, ಶಿವಲಿಂಗ, ಜಂಗಮಲಿಂಗ,
ಪ್ರಾಣಲಿಂಗಕ್ಕೆ ರುಚಿ ಅರ್ಪಿತ.
ಓಂ ಬಸವಲಿಂಗಾಯ ನಮಃ
ಹ್ರೌಂ ಹ್ರಃ ಈಶಾನ್ಯ ಗೋಮುಖ,
ಪ್ರಸಿದ್ಧಪ್ರಸಾದ, ಪ್ರಸಾದಲಿಂಗ, ಮಹಾಲಿಂಗ,
ಭಾವಲಿಂಗಕ್ಕೆ ತೃಪ್ತಿ ಅರ್ಪಿತ.
ಈ ಕ್ರಮವ ಅರಿದಾತ ಬಲ್ಲನಲ್ಲದೆ

ಅಂಗಭೋಗಿಗಳೆತ್ತ ಬಲ್ಲರು
ನಮ್ಮ ಶಾಂತಕೂಡಲಸಂಗಮದೇವಾ. || ೩೯ ||

೬೬೨

ಇನ್ನು ಇಷ್ಟಲಿಂಗದ ಸಿಂಹಾಸನ ಗದ್ದಿಗೆ ಉದ್ಧರಣೆ:
ಕರಕಮಲದೊಳಗೆ ಷಟ್ಕೋಣೆಯಂ ಬರದು
ಇಪ್ಪತ್ತು ಮೂರು ಪ್ರಣಮಮಂ ವಿಭೂತಿಯಲ್ಲಿ ಬರದು
ಲಿಂಗವ ಮೂರ್ತವ ಮಾಡಿಸಿ,
ತ್ರಿಕಾಲದಲ್ಲಿ ಅರ್ಚಿಸಿ ಪೂಜಿಸಿದವರಿಗೆ
ರಾಜಭಯ, ಚೋರಭಯ, ಮೃತ್ಯುಭಯ,
ಸಿಡಿಲುಭಯ, ಗ್ರಹ ಭಯ, ಕುಟಿಲ ಭಯ,
ವ್ಯಾಧಿ ಭಯ, ಉರಗ ಭಯ, ವೃಶ್ಚಿಕ ಭಯ,
ಮೃಗಭಯ, ನೂರೆಂಟು ವ್ಯಾಧಿ ಭಯ,
ಸರ್ವವ್ಯಾಧಿ ಮೊದಲಾದ ಎಲ್ಲವನು
ಪರಿಹರವಪ್ಪುದು ತಪ್ಪದು ಎಂದಾತ
ನಮ್ಮ ಶಾಂತಕೂಡಲಸಂಗಮದೇವ || ೪೦ ||

■■

# ಗುರುಸಿದ್ಧದೇವರ ವಚನ

೬೬೩

ಹರಹರ, ಶಿವಶಿವ, ಜಯಜಯ
ಶ್ರೀಗುರುಲಿಂಗಜಂಗಮ ಶರಣಗಣಂಗಳಲ್ಲಿ
ಕಿಂಕರ ಭೃತ್ಯಭಾವಸದ್ಭಕ್ತಿಯೆ ನಿಜಶಿವಯೋಗವಯ್ಯ.
ಸದ್ಭಕ್ತಿಯೆ ನಿಜಕೈವಲ್ಯಪದವಯ್ಯ.
ಸದ್ಭಕ್ತಿಯೆ ಪರಮಕೈಲಾಸವಯ್ಯ.
ಸದ್ಭಕ್ತಿಯೆ ನಿಜಮೋಕ್ಷಮಂದಿರವಯ್ಯ.
ಸದ್ಭಕ್ತಿಯೆ ರುದ್ರಲೋಕವಯ್ಯ.
ಸದ್ಭಕ್ತಿಯೆ ಶಿವಲೋಕ ಶಾಂಭವಲೋಕವಯ್ಯ.
ಸದ್ಭಕ್ತಿಯೆ ನಾಗಲೋಕ ದೇವಲೋಕವಯ್ಯ.
ಸದ್ಭಕ್ತಿಯೆ ಕಾಮಧೇನು - ಕಲ್ಪವೃಕ್ಷ - ಚಿಂತಾಮಣಿಯಯ್ಯ.
ಸದ್ಭಕ್ತಿಯೆ ಸಂಜೀವನ ಪರಮಾಮೃತವಯ್ಯ.
ಸದ್ಭಕ್ತಿಯೆ ನಿತ್ಯತ್ವ ಪರಮಪದವಯ್ಯ.
ಸದ್ಭಕ್ತಿಯೆ ಚಿದೈಶ್ವರ್ಯ ಚಿದಾಭರಣವಯ್ಯ.
ಸದ್ಭಕ್ತಿಯೆ ಮಹಾತೀರ್ಥವಯ್ಯ.
ಸದ್ಭಕ್ತಿಯೆ ಮಹಾಶಿವಕ್ಷೇತ್ರವಯ್ಯ.

ಸದ್ಭಕ್ತಿಯಿಂದ ಮಹಾಪಾಪಂಗಳು ಕುಸಿದು ಹೋಹವಯ್ಯ.
ಸದ್ಭಕ್ತಿಯಿಂದ ಸಕಲಲೋಕಪಾವನವಯ್ಯ.
ಸದ್ಭಕ್ತಿಯಿಂದ ಸದ್ಯೋನ್ಮುಕ್ತಿಯಯ್ಯ.
ಸದ್ಭಕ್ತಿಯಿಂದ ಅನಂತರು ಮುಕ್ತರಾದರಯ್ಯ.
ಸದ್ಭಕ್ತಿಯೆ ಮಹಾಜ್ಞಾನದರ್ಪಣ ನೋಡ ಸಂಗನಬಸವೇಶ್ವರ. ||೧||

೬೬೪

ಕಿಂಕರತ್ವದಿಂದ ಬಹುಜನ್ಮದ ಪಾಪದಲತೆ ಕಡಿವುದಯ್ಯ.
ಕಿಂಕರತ್ವದಿಂದ ಬಹುಜನ್ಮದ ನಿಂದ್ಯಕುಂದ್ಯಗಳು
ಹರಿದು ಹೋಗುವವಯ್ಯ.
ಕಿಂಕರತ್ವದಿಂದ ಬಹುಜನ್ಮದ ಭ್ರೂಣಹತ್ಯ ಮೊದಲಾಗಿ
ಮಹಾದ್ರೋಹಂಗಳು ದಗ್ಧವಾಗುವವಯ್ಯ.
ಕಿಂಕರತ್ವದಿಂದ ಮಹಾಪದವಾಗುವುದಯ್ಯ.
ಕಿಂಕರತ್ವದಿಂದ ಮಹಾಪಾಪದಗ್ಧವಾಗುವುದಯ್ಯ.
ಕಿಂಕರತ್ವದಿಂದ ಸತ್ಕಾಯಕ ದೊರವುದಯ್ಯ.
ಕಿಂಕರತ್ವದಿಂದ ಸತ್ಕರ ಸಂಗದೊರವುದಯ್ಯ.
ಕಿಂಕರತ್ವದಿಂದ ಬಹುರಾಜಮನ್ನಣೆಯಾಗುವುದಯ್ಯ.
ಕಿಂಕರತ್ವದಿಂದ ಅಷ್ಟಾವರಣ ಪ್ರತ್ಯಕ್ಷವಾಗುವುದಯ್ಯ.
ಕಿಂಕರತ್ವದಿಂದ ಪಂಚಪರುಷ ದೊರವುದಯ್ಯ.
ಕಿಂಕರತ್ವದಿಂದ ನಡೆನುಡಿ ಶುದ್ಧಸಿದ್ಧವಾಗುವುದಯ್ಯ.
ಕಿಂಕರತ್ವದಿಂದ ಸಮಸ್ತರು ಗಣಪದಕ್ಕೆ ಯೋಗ್ಯವಾದರು ನೋಡ.
ಕಿಂಕರನೆ ಸದ್ಗುರುಶಂಕರ ನೋಡ ಸಂಗನಬಸವೇಶ್ವರ. ||೨||

೬೬೫

ಭೃತ್ಯತ್ವದಿಂದ ಕಾಯ ಶುದ್ಧವಾಗುವುದಯ್ಯ.
ಭೃತ್ಯತ್ವದಿಂದ ಮನ ಸಿದ್ಧವಾಗುವುದಯ್ಯ.
ಭೃತ್ಯತ್ವದಿಂದ ಭಾವ ಪ್ರಸಿದ್ಧವಾಗುವುದಯ್ಯ.
ಭೃತ್ಯತ್ವದಿಂದ ಪ್ರಾಣ ಪರಬ್ರಹ್ಮವನೊಡಗೂಡುವುದಯ್ಯ.
ಭೃತ್ಯತ್ವದಿಂದ ಕಾಮ ನಿಷ್ಕಾಮವಾಗುವುದಯ್ಯ.
ಭೃತ್ಯತ್ವದಿಂದ ಕ್ರೋಧ ನಿಷ್ಕ್ರೋಧವಾಗುವುದಯ್ಯ.
ಭೃತ್ಯತ್ವದಿಂದ ಲೋಭ ನಿರ್ಲೋಭವಾಗುವುದಯ್ಯ.
ಭೃತ್ಯತ್ವದಿಂದ ಮೋಹ ನಿರ್ಮೋಹವಾಗುವುದಯ್ಯ.

ಭೃತ್ಯತ್ವದಿಂದ ಮದ ನಿರ್ಮದವಾಗುವುದಯ್ಯ.
ಭೃತ್ಯತ್ವದಿಂದ ಮತ್ಸರ ನಿರ್ಮತ್ಸರವಾಗುವುದಯ್ಯ.
ಭೃತ್ಯತ್ವದಿಂದ ಆಸೆ ನಿರಾಸೆಯಾಗುವುದಯ್ಯ.
ಭೃತ್ಯತ್ವದಿಂದ ಕುಚಿತ್ತ ಸುಚಿತ್ತವಾಗುವುದಯ್ಯ.
ಭೃತ್ಯತ್ವದಿಂದ ಕುಬುದ್ಧಿ ಸುಬುದ್ಧಿಯಾಗುವುದಯ್ಯ.
ಭೃತ್ಯತ್ವದಿಂದ ಅಹಂಕಾರ ನಿರಹಂಕಾರವಾಗುವುದಯ್ಯ.
ಭೃತ್ಯತ್ವದಿಂದ ಕುಮನ ಸುಮನವಾಗುವುದಯ್ಯ.
ಭೃತ್ಯತ್ವದಿಂದ ಅಜ್ಞಾನ ಸುಜ್ಞಾನವಾಗುವುದಯ್ಯ.
ಭೃತ್ಯತ್ವದಿಂದ ದುರ್ಭಾವ ಸದ್ಭಾವವಾಗುವುದಯ್ಯ.
ಭೃತ್ಯತ್ವದಿಂದ ನಿಜನೈಷ್ಠೆ ದೊರವುದು ನೋಡ
ಗುರುಹಿರಿಯರಲ್ಲಿ ಭೃತ್ಯತ್ವವುಳ್ಳಾತನೆ
ಸಾಕ್ಷಾತ್ಪರತತ್ವಲಿಂಗ ನೋಡ, ಸಂಗನಬಸವೇಶ್ವರ. ॥ ೩ ॥

೬೬೬

ಹರಹರ, ಶಿವಶಿವ, ಜಯಜಯ, ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುವೆ ನಿಷ್ಕಲ ಪರಶಿವತತ್ವವಯ್ಯ.
ಗುರುವೆ ಸಕಲಾಗಮಂಗಳ ಮೂರ್ತಿಯಯ್ಯ.
ಗುರುವೆ ಅಜ್ಞಾನವೆಂಬ ಕಾವಳಕ್ಕೆ ಚಿತ್ಸೂರ್ಯನಯ್ಯ.
ಗುರುವೆ ನಂಬಿದ ಭಕ್ತರ ವಿಷಯವೆಂಬ ವನಾಂತರಕ್ಕೆ ಚಿಚ್ಚಂದ್ರನಯ್ಯ.
ಗುರುವೆ ಆಸೆಯೆಂಬ ಪಾಶವ ದಹಿಸುವುದಕ್ಕೆ ಚಿದಗ್ನಿಯಯ್ಯ.
ಗುರುವೆ ಪರಾತ್ಪರಮೂರ್ತಿಯಯ್ಯ.
ಗುರುವೆ ಸಕಲಾಧಾರಮೂರ್ತಿಯಯ್ಯ.
ಗುರುವೆ ಸಚ್ಚಿದಾನಂದಮೂರ್ತಿಯಯ್ಯ.
ಗುರುವೆ ಸರ್ವಲೋಕ ಸೂತ್ರಾಧಾರಮೂರ್ತಿಯಯ್ಯ.
ಗುರುವೆ ಪರಬ್ರಹ್ಮವಸ್ತುವಯ್ಯ.
ಗುರುವೆ ನಿತ್ಯನಿರುಪಮನಯ್ಯ.
ಗುರುವೆ ನಿಷ್ಕಳಂಕ ನಿಷ್ಪ್ರಪಂಚನಯ್ಯ
ಗುರುವೆ ನಿರುಪಾಧಿಕ ನಿಶ್ಚಿಂತನಯ್ಯ
ಗುರುವೆ ಆದಿ ಅನಾದಿಯಿಂದತ್ತತ್ತಲಾದ ನಿರವಯಮೂರ್ತಿಯಯ್ಯ.
ಗುರುವೆ ಶಾಂತ ಸರ್ವಜ್ಞಸ್ವರೂಪನಯ್ಯ.
ಗುರುವೆ ನಿರಾಳ ನಿಷ್ಕಾಮ ನೋಡ.

ಶ್ರೀಗುರುವೆ ಸಗುಣಾನಂದಮೂರ್ತಿ ನೋಡ !
ಸಂಗನಬಸವೇಶ್ವರ. || ೪ ||

೬೬೭

ಗುರುವೆ ಸರ್ವಲೋಕಜನಕನಯ್ಯ.
ಗುರುವೆ ಸರ್ವಲೋಕ ಜನನಿಯಯ್ಯ.
ಗುರುವೆ ಸಮಸ್ತ ಕುಟುಂಬಿಯಯ್ಯ.
ಗುರುವೆ ಸ್ವತಂತ್ರನಯ್ಯ.
ಗುರುವೆ ಘನಮಹಿಮನಯ್ಯ.
ಗುರುವೆ ಮುಕ್ತಿಗೆ ಮೂಲಾಧಾರನಯ್ಯ.
ಗುರುವೆ ಸುರಚಿರಭೇದ್ಯನಯ್ಯ.
ಗುರುವೆ ಸತ್ಕ್ರಿಯಾಜ್ಞಾನಕ್ಕೆ ಮಂದಿರನಯ್ಯ.
ಗುರುವೆ ಕಾಲಹರನಯ್ಯ.
ಗುರುವೆ ಕರ್ಮಹರನಯ್ಯ.
ಗುರುವೆ ದುರಿತಹರನಯ್ಯ.
ಗುರುವೆ ಪಾಪಹರನಯ್ಯ.
ಗುರುವೆ ದೀಕ್ಷಾಕಾರಣನಯ್ಯ.
ಗುರುವೆ ಶಿಕ್ಷಾಕಾರಣನಯ್ಯ.
ಗುರುವೆ ಮೋಕ್ಷಕಾರಣನಯ್ಯ.
ಗುರುವೆ ಪರಮಾಮೃತ ಸುಧಾರಸನಯ್ಯ.
ಗುರುವೆ ಭಕ್ತಿಗೆ ಬೀಜಾಂಕುರನಯ್ಯ.
ಗುರುವೆ ಅನಾಚಾರಸಂಹಾರನಯ್ಯ.
ಗುರುವೆ ದುಷ್ಟನಿಗ್ರಹನಯ್ಯ.
ಗುರುವೆ ಶಿಷ್ಟಪ್ರತಿಪಾದಕನಯ್ಯ.
ಗುರುವೆ ಸ್ತುತಿನಿಂದ್ಯರಹಿತನಯ್ಯ.
ಗುರುವೆ ಅಪ್ರಮಾಣನಯ್ಯ.
ಗುರುವೆ ಅಗಮ್ಯನಯ್ಯ; ಗುರುವೆ ಅಗೋಚರನಯ್ಯ.
ಗುರುವೆ ಕಾಮಧೇನು - ಕಲ್ಪವೃಕ್ಷ ನೋಡ !
ಗುರುವಿಂದ ಪೆರತೊಂದಧಿಕ ವಸ್ತುವಿಲ್ಲ ನೋಡ
ಸಂಗನಬಸವೇಶ್ವರ. || ೫ ||

೬೬೮

ಗುರುವೆ ಸುಜ್ಞಾನಮೂರ್ತಿಯಯ್ಯ.
ಗುರುವೆ ಮಹಾಜ್ಞಾನಮೂರ್ತಿಯಯ್ಯ.
ಗುರುವೆ ಪರಿಪೂರ್ಣಜ್ಞಾನಮೂರ್ತಿಯಯ್ಯ.
ಗುರುವೆ ಅಂತರಂಗಪರಿಪೂರ್ಣನಯ್ಯ.
ಗುರುವೆ ಬಹಿರಂಗಪರಿಪೂರ್ಣನಯ್ಯ.
ಗುರುವೆ ಮಾಯಾರಹಿತನಯ್ಯ.
ಗುರುವೆ ನಿತ್ಯತೃಪ್ತನಯ್ಯ.
ಗುರುವೆ ಆದಿಮಧ್ಯಾಂತರಹಿತನಯ್ಯ.
ಗುರುವೆ ಭವರೋಗವೈದ್ಯನಯ್ಯ.
ಗುರುವೆ ಸಕಲಶಾಸ್ತ್ರಾತೀತನಯ್ಯ.
ಗುರುವೆ ನಿಜಾನಂದಮೂರ್ತಿಯಯ್ಯ.
ಗುರುವೆ ಪರತರಪರಬ್ರಹ್ಮವಯ್ಯ.
ಗುರುಭಕ್ತಿಯಿಂದ ಮಿಗಿಲು ಸುಖವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ಮೋಕ್ಷವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ನಿಜವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ಐಶ್ವರ್ಯವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ಪರಿಣಾಮವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ಕೈವಲ್ಯವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ಧರ್ಮವಿಲ್ಲವಯ್ಯ.
ಗುರುಭಕ್ತಿಯಿಂದ ಮಿಗಿಲು ಪುಣ್ಯವಿಲ್ಲವಯ್ಯ.
ಗುರುಭಕ್ತಿಯಿಂದ ಗುರುಭಕ್ತಯ್ಯ ಮೊದಲಾದವರು
ನಿಜನೈಷ್ಠೆಯಿಂದ ಸಮರಸೈಕ್ಯರಾದರಯ್ಯ.
ಗುರುವಿನಿಂದಧಿಕ ಪರವಿಲ್ಲ ನೋಡ!
ಸಮಸ್ತ ಪದಕ್ಕೆ ಶ್ರೀಗುರುವೆ ಕಾರಣ ನೋಡ,
ಸಂಗನಬಸವೇಶ್ವರ. ॥ ೬ ॥

೬೬೯

ಶ್ರೀಗುರುವಿನ ಕರ ಕಂಗಳು ಹೃದಯಮಧ್ಯದಲ್ಲಿ
ಉದಯವಾದ ಇಷ್ಟಮಹಾಲಿಂಗವೆ ಪರಮಪಾವನವಯ್ಯ.
ಆ ಮಹಾಲಿಂಗವೆ ಪರಮಪ್ರಕಾಶವಯ್ಯ.
ಆ ಮಹಾಲಿಂಗವೆ ಪರಂಜ್ಯೋತಿಸ್ವರೂಪನಯ್ಯ.

ಆ ಮಹಾಲಿಂಗವೆ ಪರತತ್ವಬ್ರಹ್ಮವಯ್ಯ.
ಆ ಮಹಾಲಿಂಗವೆ ಪರಮಾಚಾರಸ್ವರೂಪನಯ್ಯ.
ಆ ಮಹಾಲಿಂಗವೆ ಪರಮನಿಷ್ಕಳಂಕನಯ್ಯ.
ಆ ಮಹಾಲಿಂಗವೆ ಚಿದ್ಘನವಸ್ತುವಯ್ಯ.
ಆ ಮಹಾಲಿಂಗವೆ ಚಿನ್ಮಯಸ್ವರೂಪನಯ್ಯ
ಆ ಮಹಾಲಿಂಗವೆ ಚಿದಾನಂದಮೂರ್ತಿಯಯ್ಯ
ಆ ಮಹಾಲಿಂಗವೆ ಚಿತ್ಪ್ರಕಾಶಮೂರ್ತಿಯಯ್ಯ.
ಆ ಮಹಾಲಿಂಗವೆ ಚಿದ್ರೂಪಮೂರ್ತಿಯಯ್ಯ.
ಆ ಮಹಾಲಿಂಗವೆ ಸಹಜಸನ್ಮಾರ್ಗಸ್ವರೂಪನಯ್ಯ.
ಆ ಮಹಾಲಿಂಗವೆ ಸತ್ತುಚಿತ್ತಾನಂದಮೂರ್ತಿಯಯ್ಯ.
ಆ ಮಹಾಲಿಂಗವೆ ಸರ್ವಸಾಕ್ಷಿಕಮೂರ್ತಿಯಯ್ಯ.
ಆ ಮಹಾಲಿಂಗವೆ ಸರ್ವಚೈತನ್ಯಮೂರ್ತಿಯಯ್ಯ.
ಆ ಮಹಾಲಿಂಗವೆ ಸರ್ವಾಂತರ್ಯಾಮಿ ನೋಡ!
ಇಷ್ಟಮಹಾಚಿದ್ಘನಲಿಂಗವೆ ಸರ್ವತತ್ವಂಗಳಿಗೆ
ಮೂಲಾಧಾರಮೂರ್ತಿ ನೋಡ, ಸಂಗನಬಸವೇಶ್ವರ! ॥ ೭ ॥

೬೭೦

ಆ ಮಹಾಲಿಂಗವೆ ಚಿನ್ನಾದಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪರನಾದಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪ್ರಣಮನಾದಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಮಹಾನಾದಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಚಿದ್ಬಿಂದುಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪರಬಿಂದುಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪ್ರಣಮಬಿಂದುಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಮಹಾಬಿಂದುಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಚಿತ್ಕಳಾಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪರಕಳಾಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪ್ರಣಮಕಳಾಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಪೂರ್ಣಕಳಾಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಮಹಾಕಳಾಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಗೋಳಕಾಕಾರಪ್ರಣಮಮೂರ್ತಿ ನೋಡಯ್ಯ.
ಆ ಮಹಾಲಿಂಗವೆ ಅಖಂಡಗೋಳಕಾಕಾರ ಪ್ರಣಮಮೂರ್ತಿ ನೋಡಯ್ಯ.

ಆ ಮಹಾಲಿಂಗವೆ ಅಖಂಡ ಮಹಾಗೋಳಕಾಕಾರಪ್ರಣಮಮೂರ್ತಿ ನೋಡಯ್ಯ.
ಆ ಮಹಾಲಿಂಗದ ಮಹಿಮೆ ಗಣಿತಕ್ಕಗಣಿತ ನೋಡ !
ಆ ಚಿದ್ಘನಮಹಾಲಿಂಗವೆ ಮಂತ್ರಮೂರ್ತಿ ನೋಡ, ಸಂಗನಬಸವೇಶ್ವರ ॥ ೮ ॥

೬೭೧

ಆ ಇಷ್ಟಮಹಾಲಿಂಗವೆ ಅನಾದಿಶರಣನ ಆಧಾರಚಕ್ರದಲ್ಲಿ
ನಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಆ ಮಹಾಲಿಂಗವೆ ಸ್ವಾಧಿಷ್ಠಾನಚಕ್ರದಲ್ಲಿ
ಮಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಆ ಮಹಾಲಿಂಗವೆ ಮಣಿಪೂರಕಚಕ್ರದಲ್ಲಿ
ಶಿಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಅನಾಹತಚಕ್ರದಲ್ಲಿ ವಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ವಿಶುದ್ಧಿಚಕ್ರದಲ್ಲಿ ಯಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಆಜ್ಞಾಚಕ್ರದಲ್ಲಿ ಓಂಕಾರಮಂತ್ರಮೂರ್ತಿಯಾಗಿ ನೆಲಸಿರ್ಪುರು ನೋಡ!
ಬ್ರಹ್ಮರಂಧ್ರದಲ್ಲಿ ಬಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಶಿಖಾಚಕ್ರದಲ್ಲಿ ಕ್ಷಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಪಶ್ಚಿಮಚಕ್ರದಲ್ಲಿ ವ್ಯಂಜನ ಹಕಾರಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡ!
ಈ ಪ್ರಕಾರದಿಂದ ಅನಾದಿಶರಣನ ಸರ್ವಾಂಗದಲ್ಲಿ
ಕಿಷ್ಕಿಂದಮಯವಾಗಿ ತುಂಬಿಕೊಂಡಿರ್ಪುದು.
ಇಂತಪ್ಪ ಪರಂಜ್ಯೋತಿ ಚಿದ್ಘನ ಮಹಾಲಿಂಗ
ಪ್ರಮಾಣಿಸಿ ನೋಡೆನೆಂದವರಿಗೆ ಅತ್ಯತಿಷ್ಠದ್ದಶಾಂಗುಲವಾಗಿರ್ಪುದು
ನೋಡ ಸಂಗನಬಸವೇಶ್ವರ. ॥ ೯ ॥

೬೭೨

ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಪ್ರಭು
ಜಂಗಮವೆ ಸರ್ವಾಧಾರಪರಬ್ರಹ್ಮ ಘನಗಂಭೀರ ಪರತತ್ವಮೂರ್ತಿ ನೋಡ.
ಜಂಗಮವೆ ನಿರುಪಮ ನಿರಾವಯವಸ್ತು ನೋಡ.
ಜಂಗಮವೆ ನಿಷ್ಕಳಂಕ ನಿಶ್ಚಿಂತ ನೋಡಯ್ಯ.
ಜಂಗಮವೆ ಸ್ವಯಚರಪರವಸ್ತು ನೋಡಯ್ಯ.
ಜಂಗಮವೆ ಘೋರರುದ್ರಮೂರ್ತಿ ನೋಡಯ್ಯ.

ಜಂಗಮವೆ ಸತ್ಯಸದಾಚಾರಮೂರ್ತಿ ನೋಡಯ್ಯ.
ಜಂಗಮವೆ ಸತ್ಕ್ರಿಯಾಸಮ್ಯಜ್ಞಾನಮೂರ್ತಿ ನೋಡಯ್ಯ.
ಜಂಗಮವೆ ಸದ್ಭಕ್ತಿಪ್ರಿಯ ನೋಡಯ್ಯ.
ಜಂಗಮವೆ ಗುರುಲಿಂಗಭಕ್ತರಿಗೆ ಹರಣಕಿರಣ ಚೈತನ್ಯಮೂರ್ತಿ ನೋಡಯ್ಯ.
ಜಂಗಮವೆ ಪರಮಾನಂದ ಪರಿಣಾಮಿ ನೋಡಯ್ಯ.
ಜಂಗಮವೆ ಸಚ್ಚಿದಾನಂದಭರಿತ ನೋಡಯ್ಯ.
ಜಂಗಮವೆ ಜಗತ್ಪಾವನಮೂರ್ತಿ ನೋಡಯ್ಯ.
ಜಂಗಮವೆ ಕಾರಣಾವತಾರಮೂರ್ತಿ ನೋಡಯ್ಯ.
ಜಂಗಮವೆ ಅಂಗಲಿಂಗವೆರಡಕ್ಕೆ ಹರಣಕಿರಣ ಚೈತನ್ಯಮೂರ್ತಿ ನೋಡಯ್ಯ.
ಜಂಗಮವೆ ಸದ್ಭಕ್ತ ಮಾಹೇಶ್ವರರ ಸದ್ಧರ್ಮಸರ್ವಾಚಾರ ಸಂಪತ್ತಿನಾಚರಣೆಗೆ
ಕಾರಣಕರ್ತ ನೋಡ ಸಂಗನಬಸವೇಶ್ವರ. ॥ ೧೦ ॥

೬೭೩

ಜಂಗಮವೆ ಮಹಾರುದ್ರಸ್ವರೂಪ ನೋಡಯ್ಯ.
ಜಂಗಮವೆ ಪರಮಪಾವನ ಕರ್ತ ನೋಡಯ್ಯ.
ಜಂಗಮವೆ ಷಟ್ಸ್ಥಲಬ್ರಹ್ಮ ನೋಡಯ್ಯ.
ಜಂಗಮವೆ ಶರಣಚಿಂತಾಮಣಿ ಸಂಜೀವನ ನೋಡಯ್ಯ.
ಜಂಗಮವೆ ಭವರೋಗವೈದ್ಯ ನೋಡಯ್ಯ
ಜಂಗಮವೆ ಸಕಲೈಶ್ವರ್ಯ ನೋಡಯ್ಯ.
ಜಂಗಮವೆ ಸಮರಸ ಸುಖಭೋಗಮೂರ್ತಿ ನೋಡಯ್ಯ.
ಜಂಗಮವೆ ಕಾಯಾನುಗ್ರಹಮೂರ್ತಿ ನೋಡಯ್ಯ.
ಜಂಗಮವೆ ಇಂದ್ರಿಯಾನುಗ್ರಹಮೂರ್ತಿ ನೋಡಯ್ಯ.
ಜಂಗಮವೆ ಪ್ರಾಣಾನುಗ್ರಹಮೂರ್ತಿ ನೋಡಯ್ಯ.
ಜಂಗಮವೆ ಸರ್ವಾನುಗ್ರಹಮೂರ್ತಿ ನೋಡಯ್ಯ.
ಜಂಗಮವೆ ಪಾಪಪುಣ್ಯ ದೋಷರಹಿತ ನೋಡಯ್ಯ.
ಜಂಗಮವೆ ಪರಿಪೂರ್ಣಚಿದೈಶ್ವರ್ಯ ನೋಡಯ್ಯಾ.
ಜಂಗಮವೆ ನಿತ್ಯತ್ವಮೂರ್ತಿ ನೋಡಯ್ಯಾ.
ಜಂಗಮವೆ ಜಯಮಂಗಳಸ್ವರೂಪ ನೋಡಯ್ಯ.
ಜಂಗಮವೆ ಶುಭಮಂಗಳ ಸ್ವರೂಪ ನೋಡಯ್ಯ.
ಜಂಗಮವೆ ಪಾವನಮೂರ್ತಿ ನೋಡಯ್ಯ.
ಜಂಗಮವೆ ಪರುಷದ ಕಣಿ ನೋಡಯ್ಯ.
ಜಂಗಮವೆ ನಿಜವಸ್ತು ನೋಡಯ್ಯ.

ಜಂಗಮವೆ ಚಿತ್ಕಾರಣಾವತರ್ಯಮೂರ್ತಿ ನೋಡ
ಸಂಗನಬಸವೇಶ್ವರ. ॥ ೧೧ ॥

೬೭೪

ಜಂಗಮವೆ ಮಂತ್ರಮೂರ್ತಿ ನೋಡಯ್ಯ.
ಜಂಗಮವೆ ಮೂಲಪ್ರಣವಸ್ವರೂಪಮೂರ್ತಿ ನೋಡಯ್ಯ.
ಜಂಗಮವೆ ತ್ರಿಯಾಕ್ಷರ-ಪಂಚಾಕ್ಷರ-ಷಡಕ್ಷರಂಗಳಿಗೆ
ಮೂಲಾಧಾರಮೂರ್ತಿ ನೋಡಯ್ಯ.
ಜಂಗಮವೆ ಸಪ್ತಕೋಟಿ ಮಹಾಮಂತ್ರಂಗಳಿಗೆ ಜನನಿಜನಕ ನೋಡಯ್ಯ.
ಜಂಗಮವೆ ಆದಿಪುರಾತನಗಣ ತಿಂಥಿಣಿಗೆ ಪರಮಾಮೃತಸುಧೆ ನೋಡಯ್ಯ.
ಜಂಗಮವೆ ಅನಾದಿ ಪುರಾತನಗಣಸಮೂಹಕ್ಕೆ
ಮಹಾಪರುಷಸ್ವರೂಪ ನೋಡಯ್ಯ.
ಜಂಗಮವೆ ನೂತನ ಪುರಾತನ ಗಣಂಗಳಿಗೆ
ಮಹಾಕಲ್ಯಾಣಸ್ವರೂಪ ನೋಡಯ್ಯ.
ಜಂಗಮವೆ ಶಿವಲಾಂಛನ ಪಂಚಮುದ್ರಾಂಕಿತ ನೋಡಯ್ಯ.
ಜಂಗಮವೆ ಕೃಪಾಸಮುದ್ರ ನೋಡಯ್ಯ.
ಜಂಗಮವೆ ಬತ್ತೀಸ ಕಳಾಭರಿತಮೂರ್ತಿ ನೋಡಯ್ಯ.
ಜಂಗಮವೆ ಷಡ್ವಿಧಶೀಲವ್ರತಾಚಾರಪೂರಿತ ನೋಡಯ್ಯ.
ಜಂಗಮವೆ ಬಸವ ಚನ್ನಬಸವ ನೀಲಲೋಚನೆ
ಅಕ್ಕಮಹಾದೇವಿ ಮೊದಲಾದ
ಪ್ರಮಥಗಣಂಗಳ ಪ್ರಾಣಲಿಂಗಮೂರ್ತಿ ನೋಡಯ್ಯ.
ಜಂಗಮವೆ ದಿಗಂಬರ ನಿರಾವಯಮೂರ್ತಿ ನೋಡಯ್ಯ.
ಜಂಗಮವೆ ನಿಷ್ಪ್ರಪಂಚ ನಿರಾಲಂಬ ನಿರ್ಗುಣ ನಿರಾತಂಕ
ನಿಶ್ಚಿಂತ ನಿಷ್ಕಾಮ ನಿಶ್ಶೂನ್ಯ ನಿರಂಗ ನಿರಂಜನಮೂರ್ತಿ
ಪರಮಾನಂದ ಪರಿಪೂರ್ಣ ಮಹಾಂತ ತಾನೆ ನೋಡ
ಸಂಗನಬಸವೇಶ್ವರ. ॥ ೧೨ ॥

೬೭೫

ಹರಹರ ಶಿವಶಿವ ಜಯಜಯ ಕರುಣಾಕರ ಮತ್ಪ್ರಾಣನಾಥ
ಸರ್ವಲೋಕಪಾವನಾವರ್ತಯ ಪರಬ್ರಹ್ಮ ಮಹಾಪ್ರಭು
ಅನಾದಿ ಶ್ರೀಗುರುಲಿಂಗಜಂಗಮದ ಚರಣಸೋಂಕಿನಿಂ ಪವಿತ್ರವಾದ
ಪರಮಪಾದೋದಕವೆ ಪರಿಪೂರ್ಣಪಾವನಸ್ವರೂಪು ನೋಡಯ್ಯ.

ಶ್ರೀಗುರುಲಿಂಗಜಂಗಮದ ಪಾದೋದಕವೆ ಪರಮಾನಂದ ಪರಿಪೂರ್ಣ
ಅಷ್ಟಾಷಷ್ಠಿ ತೀರ್ಥಂಗಳಿಗೆ ಮೂಲಚೈತನ್ಯಸ್ವರೂಪ ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕವೆ ಸರ್ವಲೋಕಪಾವನವಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕವೆ
ಪರಮಾನಂದ ಪರಿಪೂರ್ಣ ಪರಬ್ರಹ್ಮಾಮೃತ ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕವೆ
ಸಕಲಪ್ರಮಥಗಣಂಗಳಿಗೆ ಆಚಾರಶುದ್ಧಿ ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕವೆ
ಶ್ರೀಗುರುಲಿಂಗಜಂಗಮದ ಪಾದೋದಕವೆ
ಚಿದೈಶ್ವರ್ಯ ಸಂಪತ್ತು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಪರಮ ಕೈವಲ್ಯಪದ ಸೋಡ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಸದ್ಭಕ್ತಿ ಸದಾಚಾರ ದೊರವುದು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಸತ್ಕ್ರಿಯಾ ಸಮ್ಯಜ್ಞಾನ ದೊರವುದು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಸದ್ವರ್ತನೆ ಸತ್ಪಥ ದೊರವುದು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ನಿಜಮೋಕ್ಷವಾಗುವುದು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕವೆ
ಚಿತ್ಸುಧಾರಸ ನೋಡ ಸಂಗನಬಸವೇಶ್ವರ. || ೧೩ ||

೬೭೬

ಶ್ರೀ ಗುರುಲಿಂಗಜಂಗಮದ ಪಾದೋದಕದಿಂದ
ತನುವಿನ ಜಡತ್ವವಳಿದು ಶಿವಭಕ್ತಿಯ ಪಥವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಇಂದ್ರಿಯಂಗಳ ಜಡತ್ವವಳಿದು ಲಿಂಗೇಂದ್ರಿಯಂಗಳ ಮಾಡುವುದಯ್ಯಾ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಕರಣಂಗಳ ಕಾಮವಿಕಾರವಳಿದು
ಲಿಂಗನಡೆ, ಲಿಂಗನುಡಿ, ಲಿಂಗನೋಟ, ಲಿಂಗಕೂಟ,
ಲಿಂಗಭೋಗ, ಲಿಂಗಾಚಾರವ ತೋರುವುದಯ್ಯ.

ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಪ್ರಾಣನ ಪ್ರಪಂಚು ಸಂಚಲಗುಣವಳಿದು ಮಂತ್ರಧ್ಯಾನದಲ್ಲಿ ನಿಲಿಸುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಅಜ್ಞಾನದ ಜಡತ್ವವಳಿದು ಸುಜ್ಞಾನಸುಖವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ದುರ್ವರ್ತನೆ ಗುಣವಳಿದು ಸದ್ವರ್ತನೆಗುಣವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ದುರಾಚಾರ ದುರ್ಮಾರ್ಗವ ಹರಿದು
ಸದಾಚಾರ ಸಂಪತ್ತಿನಾಚರಣೆಯ ಮಾರ್ಗವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಬಹುಜನ್ಮದ ಪರಮಪಾತಕದ ಮಹಾಪಾಪವ ತೊಳದು
ನಿರ್ಮಲ ಲಿಂಗಶರೀರವೆನಿಸುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಜೀವನ ಜಡತ್ವವಳಿದು ಅಜಡಸ್ವರೂಪವ ಮಾಡಿ,
ಗಣ ಸಮ್ಮೇಳನದಲ್ಲಿರಿಸುವುದಯ್ಯ.
ಶ್ರೀಗುರುಲಿಂಗಜಂಗಮದ ಪಾದೋದಕದಿಂದ
ಮಲ ಮಾಯಾ ಕರ್ಮಪಾಶವ ಹರಿದು
ನಿರ್ಮಲ ನಿರ್ಮಾಯ ನಿಷ್ಕರ್ಮ ಸ್ವರೂಪವ ಮಾಡಿ,
ಚಿಜ್ಯೋತಿಸ್ವರೂಪವೆಂದೆನಿಸುವುದು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕವೆ
ಪರಾತ್ಪರ ದೇವಲೋಕದ ದೇವಗಂಗಾಜಲ,
ಶಿವಲೋಕದ ಶಿವಗಂಗಾಜಲ, ಶಾಂಭವಲೋಕದ
ಪರಮಗಂಗಾಜಲವಾಗಿ ನೆಲಸಿರ್ಪುದು ನೋಡ
ಸಂಗನಬಸವೇಶ್ವರ. || ೧೪ ||

೬೭೭

ಶ್ರೀಗುರುಲಿಂಗಜಂಗಮದ ಘೂಳಪಾದೋದಕದಿಂದ
ಸಮಸ್ತಲೋಕದ ಪ್ರಾಣಿಗಳನೆಲ್ಲವ ಭವತ್ವವಳಿದು
ಭೃತ್ಯಭಕ್ತಿಮಾರ್ಗವ ತೋರುವುದಯ್ಯ,
ಶ್ರೀಗುರುಲಿಂಗಜಂಗಮದ ದೀಕ್ಷಾಪಾದೋದಕದಿಂದ
ಸಮಸ್ತ ಪದಾರ್ಥಂಗಳೆಲ್ಲವ ಶಿವಗಣಪದಕ್ಕೆ
ಯೋಗ್ಯವಾಗುವಂತೆ ಮಾಡುವುದಯ್ಯ.

ಶ್ರೀಗುರುಲಿಂಗಜಂಗಮದ ಶಿಕ್ಷಾಪಾದೋದಕದಿಂದ
ಬ್ರಹ್ಮನ ಉತ್ಪತ್ಯ, ವಿಷ್ಣುವಿನ ಸ್ಥಿತಿ, ರುದ್ರನ ಲಯ,
ಈಶ್ವರನ ತಿರೋಧಾನ, ಸದಾಶಿವನ ಅನುಗ್ರಹ ತೊಡದು
ಶಿವಶರಣಗಣಂಗಳ ನಿಜನಿವಾಸವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಮಹಾಜ್ಞಾನ ಪಾದೋದಕದಿಂದ
ಷಡ್ವಿಧ ದೀಕ್ಷಾತ್ರಯವ ಕರುಣಿಸಿ, ಷಟ್ಸ್ಥಲಮಾರ್ಗವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಸ್ಪರ್ಶನೋದಕ, ಅವಧಾನೋದಕ,
ಆಪ್ಯಾಯನೋದಕದಿಂದ ತ್ರಿವಿಧಲಿಂಗಾಂಗ ಸಮರಸದ
ಸನ್ಮಾರ್ಗಾಚಾರಕ್ರಿಯಾಜ್ಞಾನವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಹಸ್ತೋದಕ-ಪರಿಣಾಮೋದಕ-ನಿರ್ನಾಮೋದಕದಿಂದ
ಷಡ್ವಿಧಲಿಂಗಾಂಗ ಸಮರಸಾಚರಣೆಯ ಮಾರ್ಗದ,
ಮೀರಿದ ಕ್ರಿಯಾಜ್ಞಾನವ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ಸತ್ಯೋದಕ-ಕರುಣಜಲ-
ವಿನಯಜಲ-ಸಮತಾಜಲದಿಂದ
ಸಮಸ್ತಪ್ರಮಥಗಣಂಗಳೆಲ್ಲ ಜ್ಯೋತಿರ್ಮಯವಾದರು ನೋಡ.
ಶ್ರೀಗುರುಲಿಂಗಜಂಗಮದ ಪಾದೋದಕವೆ
ಪರಮಾರಾಧ್ಯ ಶರಣಗಣಂಗಳಾಚಾರಸಂಪದಕ್ಕೆ
ಪರಬ್ರಹ್ಮ ಜ್ಯೋತಿರ್ಮಯವಸ್ತು ನೋಡ
ಸಂಗನಬಸವೇಶ್ವರ. ॥ ೧೫ ॥

೬೭೮

ಹರಹರ ಶಿವಶಿವ ಜಯಜ ಕರುಣಾಕರ
ಮತ್ಪ್ರಾಣಕಳಾಚೈತನ್ಯಸ್ವರೂಪ ಮಹಾಪ್ರಭು
ಶ್ರೀಗುರುಲಿಂಗಜಂಗಮದ ಮಹಾಪ್ರಸಾದವೆ
ಪರಬ್ರಹ್ಮ ಪರಮಕಳಾಚೈತನ್ಯ ಚಿತ್ಸ್ವರೂಪ
ಅನಾದಿ ನಿಷ್ಕಲ ಪರಶಿವಲಿಂಗಸ್ವರೂಪ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿಜಚೈತನ್ಯಸ್ವರೂಪು ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ಶಿವಾನುಭಾವದ ಶುದ್ಧಿ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿರುಪಮ ನಿರಾಲಂಬ ನೋಡ.

ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿತ್ಯ ಚಿದೈಶ್ವರ್ಯ ಚಿತ್ಕಾಂತಿ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿಜಮೋಕ್ಷದ ಕಣಿ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ಭವರೋಗವೈದ್ಯ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿರ್ಗುಣ ನಿಷ್ಕಳಂಕ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ಅಪ್ರಮಾಣ ಅಗೋಚರ ನಿಜಚಿನ್ಮಯರೂಪು ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ಅಗಣಿತ ನಿರಾತಂಕ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿರಾವಯ ನಿಶ್ಶೂನ್ಯ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿರ್ಮಾಯ ನಿಷ್ಕಾಮ್ಯ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ಚಿದ್ಬೆಳಗು ತಾನೆ ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ಚಿದ್ಘನಮಹಾಲಿಂಗ ತಾನೆ ನೋಡ ಸಂಗನಬಸವೇಶ್ವರ. ॥ ೧೬ ॥

೬೭೯

ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ನಿಜವೀರಪರಾಕ್ರಮ ಉಂಟಾಗುವುದಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಪ್ರಮಥಗಣಂಗಳ ಸದ್ಭಕ್ತಿ ದಾಸೋಹ ದೊರವುದಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಸದಾಚಾರ ಲಿಂಗನಡೆ-ಲಿಂಗನುಡಿ ದೊರವುದಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಕಾಲ ಕಾಮರು ಹೊದ್ದಲಮ್ಮರಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಉರಗ ವೃಶ್ಚಿಕ ವ್ಯಾಘ್ರ ಭಲ್ಲೂಕ ಗಜ ಗರುಡ

ಸಿಂಹ ಶಾರ್ದೂಲ ಸೋಂಕಲಮ್ಮವಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಕುಷ್ಠರೋಗ ಮೊದಲಾಗಿ ಸಮಸ್ತವ್ಯಾಧಿಗಳು
ಪಾವನಸ್ವರೂಪವಾಗುವವಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಸತ್ಕ್ರಿಯಾ ಸಮ್ಯಜ್ಞಾನದ ಚಿತ್ಕಾಂತಿ ಹೆಚ್ಚುವುದಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಮಹಾಪಾತಕಂಗಳು ಬಿಟ್ಟೋಡುವವಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ರುದ್ರಲೋಕದ ರುದ್ರಗಣಂಗಳೆಲ್ಲ ಶಿಖಿಕರ್ಪೂರ ಬೆರೆದಂತಾದರಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಶಿವಲೋಕದ ಶಿವಗಣಂಗಳೆಲ್ಲ ಕ್ಷೀರ ಕ್ಷೀರ ಬೆರೆದಂತಾದರಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ದೇವಲೋಕದ ಶಿವಗಣಂಗಳು, ನಾಗಲೋಕದ ನಾಗಗಣಂಗಳು,
ಶಾಂಭವಲೋಕದ ಶಾಂಭವಗಣಂಗಳೆಲ್ಲ
ಜ್ಯೋತಿ ಜ್ಯೋತಿ ಬೆರದಂತಾದರಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದದಿಂದ
ಮರ್ತ್ಯಲೋಕದ ಮಹಾಗಣಂಗಳೆಲ್ಲ ನಿಶ್ಚಿಂತ-ನಿಷ್ಕಾಮ-ನಿಷ್ಪ್ರಪಂಚಿಗಳಾಗಿ
ಬಯಲು ಬಯಲು ಬೆರೆದಂತಾದರಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದವೆ
ನಿತ್ಯನಿಷ್ಕಲಲಿಂಗ ತಾನೆ ನೋಡ ಸಂಗನಬಸವೇಶ್ವರ. ॥ ೧೭ ॥

೬೮೦

ಶ್ರೀಗುರುಲಿಂಗಜಂಗಮದ ನೋಟಪರುಷ ಪ್ರಸಾದದಿಂದ
ಸಮಸ್ತಲೋಕದ ಮನು-ಮುನಿ-ಋಷಿಗಳೆಲ್ಲ ಪರಮ ಸುಖಿಗಳಾದರಯ್ಯ.
ಶ್ರೀಗುರುಲಿಂಗಜಂಗಮದ ಹಸ್ತಪರುಷದಿಂದ ಪವಿತ್ರವಾದ
ಶುದ್ಧಪ್ರಸಾದದಿಂದ ತನುವಿನ ಕಾಮವಿಕಾರವಳಿವುದಯ್ಯ.
ಶ್ರೀಗುರುಲಿಂಗಜಂಗಮದ ಸಿದ್ಧಪ್ರಸಾದದಿಂದ ಮನದಕಾಂಕ್ಷೆ ಹರಿವುದಯ್ಯ,
ಶ್ರೀಗುರುಲಿಂಗಜಂಗಮದ ಪ್ರಸಿದ್ಧ ಪ್ರಸಾದದಿಂದ
ಭಾವದ ಭ್ರಮೆಯಳಿದು ಕೆಡುವುದಯ್ಯ.
ಶ್ರೀಗುರುಲಿಂಗಜಂಗಮದ ಪ್ರಸಾದಿ ಪ್ರಸಾದದಿಂದ
ಪ್ರಾಣದ ಪ್ರಪಂಚು ನಷ್ಟವಾಗುವುದಯ್ಯ.

ಶ್ರೀಗುರುಲಿಂಗಜಂಗಮದ ಘನಾಪ್ಯಾಯನ ಪ್ರಸಾದದಿಂದ
ಇಂದ್ರಿಯಂಗಳೆಲ್ಲ ಲಿಂಗೇಂದ್ರಿಯಂಗಳಾಗುವವಯ್ಯ.
ಶ್ರೀಗುರುಲಿಂಗಜಂಗಮದ ಸಮಯಪ್ರಸಾದದಿಂದ
ವಿಷಯಂಗಳೆಲ್ಲ ಲಿಂಗವಿಷಯಂಗಳಾಗುವವಯ್ಯ.
ಶ್ರೀಗುರುಲಿಂಗಜಂಗಮದ ಪಂಚೇಂದ್ರಿಯವಿರಹಿತಪ್ರಸಾದದಿಂದ
ಕರಣಂಗಳೆಲ್ಲ ಲಿಂಗಕರಣಂಗಳಾಗುವವಯ್ಯ.
ಶ್ರೀಗುರುಲಿಂಗಜಂಗಮದ ಕರಣಚತುಷ್ಟಯವಿರಹಿತಪ್ರಸಾದ,
ಸಮತಾಪ್ರಸಾದ, ಸದ್ಭಾವಪ್ರಸಾದ, ಜ್ಞಾನಪ್ರಸಾದದಿಂದ
ಸರ್ವಸಂಗ ಪರಿತ್ಯಾಗರಾಗಿ, ಬಯಲನೆ ಹಾಸಿ, ಬಯಲನೆ ಹೊದ್ದು,
ಬಯಲನೆ ಅರ್ಚಿಸಿ, ಬಯಲನೆ ಭೋಗಿಸಿ
ಬಸವ ಮೊದಲಾದ ಪ್ರಮಥಗಣಂಗಳೆಲ್ಲ
ಬಯಲೊಳಗೆ ಮಹಾಬಯಲಾದರು ನೋಡ.
ಶ್ರೀಗುರುಲಿಂಗಜಂಗಮದ ಪ್ರಸಾದವೆ ಪರಮಾಮೃತಸುಧೆ
ಜ್ಯೋತಿರ್ಮಯಲಿಂಗ ನೋಡ, ಸಂಗನಬಸವೇಶ್ವರ. || ೧೮ ||

೭೮೧

ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಅನಾದಿ ಮಹಾಪ್ರಭು
ಶ್ರೀಗುರುಲಿಂಗಜಂಗಮದ ಚರಣೋದ್ಧೂಳನವೆ
ಚಿದ್ಬ್ರಹ್ಮ ಚಿದೈಶ್ವರ್ಯ ನೋಡ.
ಶ್ರೀಗುರುಲಿಂಗಜಂಗಮದ ಕ್ರಿಯಾಚಕ್ಷುವಿನ
ಕ್ರಿಯಾ ಪ್ರಕಾಶವೆ ಕ್ರಿಯಾಭಸಿತವಾಗಿರ್ಪುದಯ್ಯ.
ಶ್ರೀಗುರುಲಿಂಗಜಂಗಮದ ಜ್ಞಾನಚಕ್ಷುವಿನ
ಜ್ಞಾನಪ್ರಕಾಶವೆ ಜ್ಞಾನಭಸಿತವಾಗಿರ್ಪುದಯ್ಯ.
ಶ್ರೀಗುರುಲಿಂಗಜಂಗಮದ ಮಹಾಜ್ಞಾನ ಚಕ್ಷುವಿನ
ಮಹಾಜ್ಞಾನಪ್ರಕಾಶವೆ ಮಹಾಜ್ಞಾನಭಸಿತವಾಗಿರ್ಪುದಯ್ಯ.
ಇಂಥ ಚಿತ್ಪ್ರಕಾಶಸ್ವರೂಪವಾದ ಚಿದ್ಭಸಿತವ ಅನಾದಿ ಬಸವದಂಡಪ್ರಮಥರು
ತಮ್ಮ ಗೋಪ್ಯಮುಖದಲ್ಲಿ ಸಕಲಕ್ರಿಯೆಗಳ ಆಚರಿಸುತ್ತಿರಲು
ಆಗ ಶಿವನು ತನ್ನ ಪಂಚಮುಖದಿಂದ ಪಂಚವರ್ಣದ ಗೋವ ನಿರ್ಮಿಸಿ,
'ಎಲೈ ಎನ್ನ ಚಿಚ್ಚೈತನ್ಯಮೂರ್ತಿ ಬಸವದಂಡನಾಯಕರೆ
ಈ ಪಂಚಗೋವುಗಳ ಈರೇಳುಲೋಕಕ್ಕೆ ಪಾವನಸ್ವರೂಪವ ಮಾಡಿ,
ನಿಮ್ಮ ಶರಣಗಣಂಗಳಿಗರ್ಪಿತವಾಗುವಂತೆ ಮಾಡಿರಯ್ಯ.'

ಎಂದು ಅಭಿವಂದಿಸಲು,
ಆಗ ಬಸವದಂಡಪ್ರಮಥರು ಆ ಗೋವಿನ ಸಗಣವ ಕ್ರಿಯಾಗ್ನಿಯಿಂದ ದಹಿಸಿ,
ಶ್ರೀಗುರುಲಿಂಗಜಂಗಮದ ಚಿತ್ಪ್ರಭೆಯ ವೇಧಿಸಿ
ಸಕಲಲೋಕಂಗಳಿಗೆ ಸಕಲ ಮುನಿಜನಕ್ಕೆಲ್ಲ
ಕಾಲಹರಭಸಿತ, ಕರ್ಮಹರಭಸಿತ, ದುರಿತಹರಭಸಿತ,
ಪಾಪಹರಭಸಿತವೆನಿಸಿಕೊಟ್ಟರು ನೋಡ.
ಆ ಗೋವಿನ ಜಲಮಲ ವೀರ್ಯದಿಂದ ಭೂಮಿಯ ಸಮ್ಮಾರ್ಜನೆಗೆ
ಯೋಗ್ಯವೆಂದೆನಿಸಿದರಯ್ಯ.
ಆ ಗೋವಿನ ಕುಚಕ್ಷೀರವ ಸರ್ವಲೋಕಂಗಳಿಗೆ
ಪಂಚಾಮೃತವೆಂದೆನಿಸಿದರಯ್ಯ.
ಆ ಗೋವಿನ ಪುತ್ರನಿಂದ ಸಕಲಪ್ರಾಣಿಗಳು ಬದುಕುವಂತೆ ಮಾಡಿದರಯ್ಯ.
ಆ ಗೋವಿನ ಮಾಂಸವ ದುರಾಚಾರಭವಿಜನ್ಮಾತ್ಮರು
ಭುಂಜಿಸುವಂತೆ ಮಾಡಿದರಯ್ಯ.
ಆ ಗೋವಿನ ಚರ್ಮವ ಶಿವಗಣಂಗಳ ಪಾದರಕ್ಷೆಯೆಂದೆನಿಸಿದರು ನೋಡಯ್ಯ.
ಇತ್ತಲಾಗಿ ಸಕಲಪ್ರಮಥಗಣಂಗಳೆಲ್ಲ
ಶ್ರೀ ಬಸವೇಶ್ವರಸ್ವಾಮಿಗಳ ಚಿತ್ಪ್ರಕಾಶಭಸಿತವ ಬೆಸಗೊಂಡು
ಆ ವಿಭೂತಿಯ ಶ್ರೀ ಗುರುಲಿಂಗಜಂಗಮದ
ದೀಕ್ಷಾಜಲ-ಶಿಕ್ಷಾಜಲದಿಂದ ಸಮ್ಮಿಶ್ರವ ಮಾಡಿ,
ಇಪ್ಪತ್ತೊಂದು ದೀಕ್ಷಾಸ್ವರೂಪವಾದ ಮಹಾಪ್ರಣಮವ ಸ್ಥಾಪಿಸಿ,
ಸಕಲಾಚಾರಕ್ರಿಯೆಗಳಿಗೆ ಶುಭತಿಲಕವಿದೆ
ಚಿದ್ವಿಭೂತಿಯಿದೆಂದು ನಿರಂತರ
ಸ್ನಾನ ಧೂಳನ-ಧಾರಣವ ಮಾಡಿದರು ನೋಡ.
ಅದರಿಂ ಮೇಲೆ ಆ ಗೋವಿನ ಕುಚಕ್ಷೀರವ
ಈ ಭಸಿತದಿಂದ ಪಾವನವ ಮಾಡಿ, ಪರಮಾಮೃತವೆನಿಸಿ,
ಶ್ರೀಗುರುಲಿಂಗಜಂಗಮಕ್ಕೆ ಸಮರ್ಪಿಸಿ,
ಅವರೊಕ್ಕುಮಿಕ್ಕ ಪರಮಾಮೃತ ಶೇಷಪ್ರಸಾದವ
ನಿಜನಿಷ್ಠೆಯಿಂದ ಲಿಂಗಾರ್ಪಿತವ ಮಾಡಿದರು ನೋಡ.
ಶ್ರೀಗುರುಲಿಂಗಜಂಗಮದ ಚಿತ್ಪ್ರಕಾಶಭಸಿತವ ಬಹಿಷ್ಕರಿಸಿ
ಸಕಲಪ್ರಮಥಗಣಂಗಳಿಗೆ ಪರಮಪದ ಮೋಕ್ಷದ ಕಣಿಯೆಂದು
ಬೋಧಿಸಿದಂಥ ಬಸವದಂಡನಾಥನ ಚರಣಕ್ಕೆ
ನಮೋ ನಮೋ ಎಂಬೆ ನೋಡ ಸಂಗನಬಸವೇಶ್ವರ. || ೧೯ ||

೬೮೨

ಶ್ರೀಗುರುಲಿಂಗಜಂಗಮದ ಚರಣ ಸೋಂಕಿನಿಂ ಪವಿತ್ರವಾದ
ಚಿದ್ಭಸಿತವ ಧರಿಸಿದವರಿಗೆ ಬಹುಜನ್ಮ ಪಾಪದೋಷವ ತೊಡವುದಯ್ಯ.
ಶ್ರೀ ವಿಭೂತಿಯ ಧರಿಸಿದವರಿಗೆ ಅಜ್ಞಾನದ ಪಾಶವ ಹರಿವುದಯ್ಯ.
ಶ್ರೀ ವಿಭೂತಿಯ ಧರಿಸಿದವರಿಗೆ
ಸಮಸ್ತ ಜನವಶ್ಯ ರಾಜವಶ್ಯವ ಕೊಡುವುದಯ್ಯ.
ಶ್ರೀ ವಿಭೂತಿಯ ಧರಿಸಿದವರಿಗೆ
ಸದಾಚಾರ ಸದ್ಭಕ್ತಿಸಾರದುನ್ನತಿಯ ಬೆಳಗ ತೋರುವುದಯ್ಯ.
ಶ್ರೀ ವಿಭೂತಿಯ ಧರಿಸಿದವರಿಗೆ
ಜನನ-ಮರಣದ ಭಯವ ತೊಡವುದಯ್ಯ.
ಶಿವನಿಂದ ಅಗಸ್ತ್ಯ, ಕಸ್ಯಪ, ಜಮದಗ್ನಿ, ಗೌತಮ, ವಶಿಷ್ಠ
ಮೊದಲಾದ ಋಷಿ ಸಮೂಹಗಳೆಲ್ಲ ಶ್ರೀ ವಿಭೂತಿಯ ಪಡೆದು ಧರಿಸಿ,
ಸದ್ಭಕ್ತಿಪಥವ ಸೇರಿದರಯ್ಯ.
ನಮ್ಮ ಶರಣಗಣಂಗಳು ಆ ಶಿವನ ಚಿತ್ಕಾಂತಿಯ ಬಹಿಷ್ಕರಿಸಿ,
ಶ್ರೀಗುರುಲಿಂಗಜಂಗಮದ ಚಿದ್ಬೆಳಗನೆ ಹೆಪ್ಪಹಾಕಿ,
ಚಿದಾಂಡವೆಂಬ ಘಟ್ಟಿಯ ಮಾಡಿ,
ನಿಷ್ಕಲ ನಿಶ್ಶೂನ್ಯಮೂರ್ತಿಯ ಚರಣಜಲವ ವೇಧಿಸಿ,
ಮಹಾಮಂತ್ರವ ಸ್ಥಾಪಿಸಿ,
ಶ್ರೀಗುರುಲಿಂಗಜಂಗಮದ ಸ್ಪರ್ಶದಿಂದ ತತ್ವಸ್ಥಾನಂಗಳಲ್ಲಿ
ಶಿವಲೋಕದ ಶಿವಗಣಂಗಳು, ರುದ್ರಲೋಕದ ರುದ್ರಗಣಂಗಳು,
ನಾಗಲೋಕದ ನಾಗಗಣಂಗಳು, ದೇವಲೋಕದ ದೇವಗಣಂಗಳು,
ಶಾಂಭವಲೋಕದ ಶಾಂಭವಗಣಂಗಳು,
ಮರ್ತ್ಯಲೋಕದ ಮಹಾಗಣಂಗಳೆಲ್ಲ ಧರಿಸಿ
ಜ್ಯೋತಿರ್ಮಯವಾದರು ನೋಡ.
ಶ್ರೀಗುರುಲಿಂಗಜಂಗಮದ ಚಿತ್ಪ್ರಭಾಭೂತಿಯೆ
ಸರ್ವಾಚಾರಸಂಪದಕ್ಕೆ ಮೋಕ್ಷದ ಕಣೆ ನೋಡ
ಸಂಗನಬಸವೇಶ್ವರ. ॥ ೨೦ ॥

೬೮೩

ಶ್ರೀಗುರುಲಿಂಗಜಂಗಮದ ದೀಕ್ಷಾಭಸಿತವ ಸಂಬುಗೆಯಿಂದ
ಅಷ್ಟೈಶ್ವರ್ಯವಿದೆಂದು ಶ್ರೀಗುರುಸ್ಮರಣೆಯಿಂದ ಲಲಾಟದಲ್ಲಿ ಧರಿಸಿದಾಕ್ಷಣವೆ

ಬ್ರಹ್ಮನ ಆಜ್ಞೆಯಿಂದ ವಿಧಿಬರೆದ ಲಿಖಿತವ ತೊಡದು
ಶಿವಲಿಖಿತವ ಲಿಖಿಸುವುದಯ್ಯ.
ಶ್ರೀಗುರುಲಿಂಗಜಂಗಮದ ದೀಕ್ಷಾಭಸಿತವ
ಅಷ್ಟವಿಧಸ್ಥಾನ, ಷೋಡಶಸ್ಥಾನ, ಇಪ್ಪತ್ತುನಾಲ್ಕು ಸ್ಥಾನಂಗಳಲ್ಲಿ ಧರಿಸಿದವರಿಗೆ
ಗುರುತ್ವವ ಕೊಟ್ಟು ಲಿಂಗನಿಷ್ಠಾಪರಭಕ್ತಿಯ ತೋರುವುದಯ್ಯ.
ಶ್ರೀಗುರುಲಿಂಗಜಂಗಮದ ದೀಕ್ಷಾ-ಶಿಕ್ಷಾ-ಜ್ಞಾನಭಸಿತವ
ಸರ್ವಾಂಗದಲ್ಲಿ ಸ್ನಾನಧೂಳನವ ಮಾಡಿ
ನಾಲ್ವತ್ತೆಂಟು ತತ್ವಸ್ಥಾನಂಗಳಲ್ಲಿ ಮಂತ್ರಸ್ಮರಣೆಯಿಂದ ಧರಿಸಿದ
ಲಿಂಗಶರಣರಿಗೆ ಸರ್ವಾಚಾರಸಂಪತ್ತಿನ
ಜಂಗಮಾನುಭಾವವ ತೋರುವುದಯ್ಯ.
ಸಕಲಕ್ರಿಯೆಗಳಿಗೆ ಈ ಕ್ರಿಯಾಚಿದ್ಭಸಿತವೆ ಕಾರಣಸ್ವರೂಪವಯ್ಯ.
ಸಕಲಾಚಾರಂಗಳಿಗೆ ಈ ಕ್ರಿಯಾ ಚಿದ್ಭಸಿತವೆ ಶುಭತಿಲಕವಯ್ಯ.
ಇಂಥ ಶ್ರೀಗುರುಲಿಂಗಜಂಗಮದ ಪಾದೋದಕ ಪ್ರಸಾದ
ಕ್ರಿಯಾ ಚಿದ್ಭಸಿತಕಿಂದ ಪರವಸ್ತುವಿಲ್ಲ ನೋಡ.
ಶ್ರೀಗುರುಲಿಂಗಜಂಗಮದ ಚಿತ್ಪ್ರಕಾಶ ಚಿದ್ಭಸಿತವೆ
ಪರಾತ್ಪರವಸ್ತು ನೋಡಾ, ಸಂಗನಬಸವೇಶ್ವರ. ॥ ೨೧ ॥

೬೮೪

ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಪರಾತ್ಪರಬ್ರಹ್ಮ ಪ್ರಭು
ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದ
ಹರನ ತ್ರಿವಿಧನೇತ್ರದಿಂದುದಯವಾದ ತ್ರಿವಿಧವರ್ಣದ ಬಿಂದುಗಳ
ಅನಾದಿಚಿತ್ಪ್ರಭು ಬಸವೇಶ್ವರಸ್ವಾಮಿಗಳು,
ಆ ಬಿಂದುಗಳ ತಮ್ಮ ಅನಿಮಿಷದೃಷ್ಟಿಯಿಂದ ನಿರೀಕ್ಷಿಸಿ
ಚಿದ್ಬಿಂದು ಚಿನ್ಮಂತ್ರ ಮಣಿಮಾಲಿಕೆಯೆಂದು ತತ್ವಸ್ಥಾನಂಗಳಲ್ಲಿ ಧರಿಸಿ,
ಮಹಾಪ್ರಭು ನಿರಂಜನ ಜಂಗಮಕ್ಕೆ ಇಪ್ಪತ್ತೊಂದು ಲಕ್ಷ ಮಣಿಗಳಿಂದ
ಶೂನ್ಯಸಿಂಹಾಸನಮಂಟಪವ ರಚಿಸಿ, ಆ ಸಿಂಹಾಸನದ ಮೇಲೆ
ಮಹಾಪ್ರಭುನಿರಂಜನಜಂಗಮವ ಮೂರ್ತವ ಮಾಡಿಸಿ,
ಮಹಾವೈಭವದಿಂದ ಸಕಲಮಹಾಪ್ರಮಥಗಣಂಗಳಿಗೆ
ಆ ಚಿದ್ಬಿಂದುಗಳಮಲದಲ್ಲಿ ಅನಾದಿಗುರು,
ಅನಾದಿಪ್ರಣಮವ ಸಂಬಂಧವ ಮಾಡಿ,
ಮುಖಂಗಳಲ್ಲಿ ಅನಾದಿಲಿಂಗ ಪಾದೋದಕ ಪ್ರಸಾದವ ಸಂಬಂಧವ ಮಾಡಿ,

ನಾಳದಲ್ಲಿ ಅನಾದಿಜಂಗಮು ಚಿತ್ರಕಾಶ ಚಿದ್ಭಸಿತವ ಸಂಬಂಧವ ಮಾಡಿ,
ಮಹಾ ಸಂತೋಷವೆಂಬ ಹರುಷಾನಂದ ಜಲವುಕ್ಕಿ,
ಕಡಗ-ಕಂಠಮಾಲೆ-ಕರ್ಣಾಭರಣ-ಹಾರ-ಹೀರಾವಳಿಗಳ ಮಾಡಿ ಧರಿಸಿ,
ಚಿಂತಾಮಣಿಯೆಂದು ಪ್ರಮಥಗಣ, ರುದ್ರಗಣ,
ಷೋಡಶಗಣ, ತೇರಸಗಣ, ದಶಗಣ,
ಮರ್ತ್ಯಲೋಕದ ಮಹಾಗಣ ಸಮೂಹಕ್ಕೆಲ್ಲ
ಒರದು ಬೋಧಿಸಿದರು ನೋಡ.
ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದುದಯವಾದ
ಚಿನ್ಮಂತ್ರ ಮಾಲಿಕೆ ಪರಮಚಿಂತಾಮಣಿ ನೋಡ
ಸಂಗನಬಸವೇಶ್ವರ. ॥ ೨೨ ॥

೬೮೫

ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದುದಯವಾದ
ಮಂತ್ರಮಣಿಯೆ ಶ್ರೀಮಹದೈಶ್ವರ್ಯ ಸ್ವರೂಪ ನೋಡ.
ಶ್ರೀ ಮಹದೈಶ್ವರ್ಯ ಮಹಾರುದ್ರಾಕ್ಷಿಯ ಸಂಗದಿಂದ
ಪರಮಚಿದೈಶ್ವರ್ಯ ದೊರವುದಯ್ಯ.
ಶ್ರೀ ಮಹಾರುದ್ರಾಕ್ಷಿಯ ಸಂಗದಿಂದ ಶಿವಗಣಂಗಳ
ಭೃತ್ಯಾಚಾರ ಸದ್ಭಕ್ತಿ ದೊರವುದಯ್ಯ.
ಶ್ರೀ ಮಹಾರುದ್ರಾಕ್ಷಿಯ ಸಂಗದಿಂದ
ನಿಷ್ಕಲಮಹಾಲಿಂಗದ ರತಿಸಂಯೋಗ ದೊರವುದಯ್ಯ.
ಶ್ರೀ ಮಹಾರುದ್ರಾಕ್ಷಿಯ ಸಂಗದಿಂದ
ಚತುರ್ವಿಧ, ಷಡ್ವಿಧ, ದಶವಿಧ, ದ್ವಾದಶವಿಧ,
ಷೋಡಶ ತೆರದ ಭಕ್ತಿ ಮೊದಲಾಗಿ
ನಾಲ್ವತ್ತೆಂಟು ತೆರದ ಸದ್ಭಕ್ತಿ ದೊರವುದಯ್ಯ.
ಶ್ರೀ ಮಹಾರುದ್ರಾಕ್ಷಿಯ ಸಂಗದಿಂದ ನಿಜಕೈವಲ್ಯಪದ ದೊರವುದಯ್ಯ.
ಶ್ರೀ ಮಹಾರುದ್ರಾಕ್ಷಿಯ ಸಂಗದಿಂದ ನಿಜಮೋಕ್ಷದೊರವುದಯ್ಯ.
ಶ್ರೀ ಮಹಾರುದ್ರಾಕ್ಷಿಯ ಸಂಗದಿಂದ
ರುದ್ರಲೋಕದ ರುದ್ರಗಣಂಗಳು, ಶಿವಲೋಕದ ಶಿವಗಣಂಗಳು
ಶಾಂಭವಲೋಕದ ಶಾಂಭವಗಣಂಗಳು, ನಾಗಲೋಕದ ನಾಗಗಣಂಗಳು,
ದೇವಲೋಕದ ದೇವಗಣಂಗಳು,
ಮರ್ತ್ಯಲೋಕದ ಮಹಾಗಣಂಗಳು ಪ್ರತ್ಯಕ್ಷವಾಗಿ
ಅವರ ಪಾದೋದಕ ಪ್ರಸಾದಕ್ಕೆ ಯೋಗ್ಯವೆಂದೆನಿಸುವುದಯ್ಯ.

ಶ್ರೀ ಮಹಾರುದ್ರಾಕ್ಷಿಯೇ ಘನಕ್ಕೆ ಘನ ಮಹದೈಶ್ವರ್ಯ ನೋಡ
ಶ್ರೀ ಗುರುಲಿಂಗಜಂಗಮದ ಕರುಣ ಕಟಾಕ್ಷಮಣಿಯೆ
ಪರಮಚಿದಾಭರಣ ನೋಡ, ಸಂಗಬಸವೇಶ್ವರ. ॥ ೨೩ ॥

೬೮೬

ಶ್ರೀ ಮಹಾಚಿನ್ಮಯ ಚಿಂತಾಮಣಿ ಮಂತ್ರಮಾಲಿಕೆಯ
ಶ್ರೀಗುರುಲಿಂಗಜಂಗಮದ ಸ್ಪರ್ಶದಿಂದ ಧರಿಸಿದಾತಂಗೆ
ಬ್ರಹ್ಮಹತ್ಯ, ಪುಶುಹತ್ಯ, ಶಿಶುಹತ್ಯ, ಸ್ತ್ರೀಹತ್ಯ
ಭ್ರೂಣಹತ್ಯ, ಮಾತೃದ್ರೋಹ, ಪಿತೃದ್ರೋಹ ಮೊದಲಾದ
ಮಹಾಪರಮಪಾತಕಂಗಳು ದೂರವಾಗುವವಯ್ಯ.
ಶ್ರೀ ಮಹಾರುದ್ರಾಕ್ಷಿಯ ಶ್ರೀಗುರುಲಿಂಗಜಂಗಮಕ್ಕೆ
ಅರ್ಥಪ್ರಾಣಾಭಿಮಾನಗಳ ಸಮರ್ಪಿಸಿ,
ಅವರ ಕರುಣಕಟಾಕ್ಷ ನಿರ್ಮಾಲ್ಯ ಮಂತ್ರಮಾಲಿಕೆ
ಪ್ರಸಾದ ರುದ್ರಾಕ್ಷಿಯ ಬೆಸಗೊಂಡಾತಂಗೆ
ಇಹಲೋಕದಲ್ಲಿ ಪರಶಿವಲಿಂಗಭೋಗಿಯಾಗಿ
ಪರಲೋಕದಲ್ಲಿ ಪರಶಿವಜಂಗಮದೊಳಗೆ ಐಕ್ಯತ್ವ ದೊರವುದು ನೋಡ.
ಶ್ರೀ ಮಹಾರುದ್ರಾಕ್ಷಿಯ ಗುರುವಚನೋಕ್ತಿಯಿಂದ
ಅದರಾದಿ ಅಂತ್ಯವ ತಿಳಿದು,
ಆಯಾಯ ಸ್ಥಾನಂಗಳಲ್ಲಿ ಆಯಾಯ ಮಂತ್ರಸ್ಮರಣೆಗಳಿಂದ
ಆಯಾಯ ಮುಖಗಳ ಆಯಾಯ ವರ್ಣಗಳ ತಿಳಿದು
ಹೆರೆಹಿಂಗದೆ ಧರಿಸಿದ ಮಹಾಭಕ್ತಜಂಗಮಶರಣಗಣಂಗಳೆಲ್ಲ
ಜ್ಯೋತಿಮಯವಪ್ಪುದು ತಪ್ಪದು ನೋಡ.
ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷ ಚಿತ್ಪ್ರಭಾಪುಂಜರಂಜಿತವಾದ
ಶ್ರೀ ಮಹಾರುದ್ರಾಕ್ಷಿಯೆ ಪರಮ ಚಿದೈಶ್ವರ್ಯ ನೋಡ
ಸಂಗನಬಸವೇಶ್ವರ. ॥ ೨೪ ॥

೬೮೭

ಪರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಮಂತ್ರಸ್ವರೂಪ ಅನಾದಿ ಮಹಾಪ್ರಭು
ಶ್ರೀ ಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದುದಯವಾದ
ಮಹಾಪ್ರಣಮವೆ ನಿಜವಸ್ತು ನೋಡ.
ಆ ಮಹಾಪ್ರಣಮದಿಂದುದಯವಾದ

ತ್ರಿಯಕ್ಷರ-ಪಂಚಾಕ್ಷರ-ಷಡಕ್ಷರಂಗಳೆ ಮಹಾಮಂತ್ರಂಗಳು ನೋಡ.
ಆ ಮಹಾಮಂತ್ರಂಗಳೆ ಸಕಲ ಉಪಮಂತ್ರಂಗಳಿಗೆ ಮಾತೆಪಿತ ನೋಡ.
ಆ ಮಹಾಮಂತ್ರಂಗಳೆ ಸಕಲ ಶಾಸ್ತ್ರಾಗಮ ಪುರಾಣಂಗಳಿಗೆ ಜನನಿ ಜನಕ ನೋಡ.
ಆ ಮಹಾಮಂತ್ರವೆ ನಿಷ್ಕಲ ನಿಶ್ಶೂನ್ಯ ನಿರಂಜನ,
ಗುರು-ಲಿಂಗ-ಜಂಗಮ, ಪಾದೋದಕ-ಪ್ರಸಾದ,
ಚಿದ್ವಿಭೂತಿ ರುದ್ರಾಕ್ಷಿಗಳಿಗೆಲ್ಲ ಮೂಲಬೀಜಾಂಕುರ ನೋಡ.
ಆ ಮಹಾಮಂತ್ರವೆ ಅನಾದಿ ಶರಣನ ಚಿದೈಶ್ವರ್ಯ ಚಿದಾಭರಣ ನೋಡ.
ಆ ಮಹಾಮಂತ್ರವೆ ಸಕಲಾಚಾರ ಕ್ರಿಯಾಜ್ಞಾನಂಗಳಿಗೆ
ಸಂಜೀವನ ನೋಡ, ಸಂಗನಬಸವೇಶ್ವರ. || ೨೫ ||

೬೮೮

ಶ್ರೀ ಮಹಾಮಂತ್ರವ ಜಪಿಸಿದಾತಂಗೆ ಮರ್ತ್ಯಲೋಕ ಮೊದಲಾಗಿ
ಆವ ಲೋಕದಲ್ಲಿ ಹೋದರು ಸಮಸ್ತಲಿಂಗಭೋಗ ದೊರವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ ಸಮಸ್ತಲೋಕದಲ್ಲಿ
ಸತ್ಯ ಸಾತ್ವಿಕ ಪರೋಪಕಾರ ಸುಗುಣ ದೊರವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ ಪರಮವಿರಕ್ತಿ ದೊರವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ ಸಾರಸದ್ಭಕ್ತಿ ದೊರವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ
ಶಮೆ ದಮೆ ಶಾಂತಿ ಸೈರಣೆ ಸತ್ಕ್ರಿಯಾ ಸಮ್ಯಜ್ಞಾನ
ಸದಾಚಾರ ದೊರವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ ನಿಜಶಿವಯೋಗ ದೊರವುದು ನೋಡ.
ಶ್ರೀ ಮಹಾಮಂತ್ರವೆ ಸಕಲಕಾರಣಕ್ಕೆ ಮೂಲಚೈತನ್ಯ ನೋಡ
ಸಂಗನಬಸವೇಶ್ವರ. || ೨೬ ||

೬೮೯

ಶ್ರೀ ಮಹಾಮಂತ್ರವ ಜಪಿಸಿದಾತಂಗೆ
ಕಾಯದ ಕಾಮವಿಕಾರವಳಿದು ಲಿಂಗಕಾಯವೆನಿಸುವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ
ಮನದ ಮರವೆಯಳಿದು ಲಿಂಗಮನವಾಗುವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ
ಪ್ರಾಣನ ಪ್ರಪಂಚಳಿದು ಲಿಂಗಪ್ರಾಣವೆಂದೆನಿಸುವುದಯ್ಯ.

ಶ್ರೀ ಮಹಾಮಂತ್ರವ ಜಪಿಸಿದಾತಂಗೆ
ಭಾವದ ಭ್ರಮೆಯಳಿದು ಲಿಂಗಭಾವವೆಂದೆನಿಸುವುದಯ್ಯ.
ಶ್ರಿ ಮಹಾಮಂತ್ರವ ಜಪಿಸಿದಾತಂಗೆ
ಕಾಲ-ಕಾಮ-ಮಾಯಾ-ಮರವೆಗಳೆಲ್ಲ ದಗ್ಧವಾಗಿ ಹೋಗುವುದಯ್ಯ.
ಶ್ರೀ ಮಹಾಮಂತ್ರವ ಜಪಿಸಿದಾತಂಗೆ
ಸತ್ವರಜತಮೋಗುಣವಳಿದು
ಸಗುಣ ನಿರ್ಗುಣ ನಿಜಗುಣ ಶಿವಯೋಗ ದೊರವುದಯ್ಯ.
ಆ ಮಹಾಮಂತ್ರವ ತೆರಹಿಲ್ಲದೆ ಜಪಿಸಿದ ಭಕ್ತಗಣಂಗಳೆಲ್ಲ
ಚಿನ್ನಾದ-ಪರನಾದ-ಮಹಾನಾದಂಗಳ ಮೀರಿ ತೋರುವ
ನಿಷ್ಕಲ-ನಿಶ್ಶಬ್ದ-ನಿಷ್ಪ್ರಪಂಚ-ನಿರಾಲಂಬ ಇಷ್ಟ ಮಹಾಚಿದ್ಘನಲಿಂಗದಲ್ಲಿ
ಕ್ಷೀರ ಕ್ಷೀರ ಬೆರದಂತೆ ಅವಿರಳಾನಂದದಿಂದ ಬೆರದು
ಮಹಾ ಬಯಲಪ್ಪುದು ತಪ್ಪದು ನೋಡ.
ಸರ್ವಾಚಾರ ಸಂಪದಕ್ಕೆ ಶ್ರೀ ಮಹಾಮಂತ್ರವೆ
ಪರಮಾಮೃತಸುಧೆ ನೋಡ, ಸಂಗನಬಸವೇಶ್ವರ. ॥ ೨೭ ॥

೬೯೦

ಹರಹರ ಶಿವಶಿವ ಜಯಜಯ ಕರುಣಾಕರ
'ಮತ್ಪ್ರಾಣನಾಥ ಮಹಾಪ್ರಭು ಚಿದ್ಘನ ಶ್ರೀಗುರುಲಿಂಗಜಂಗಮವೆ,
ನಿಮ್ಮ ಶರಣಗಣಂಗಳೆಲ್ಲ ನಿರವಯಸಮಾಧಿಯಲ್ಲಿ ಹೋದ ಮಾರ್ಗವ
ನಿಮ್ಮ ಕರುಣಕಟಾಕ್ಷೆಯಿಂದ ದಯವಿಟ್ಟು ರಕ್ಷಿಸಯ್ಯ ತಂದೆ,
ಕೇಳಯ್ಯ ವರಕುಮಾರದೇಶಿಕೇಂದ್ರನೆ
ಶಿವಗಣಂಗಳೆಲ್ಲ ಪರಶಿವಲಿಂಗಕ್ಕು ತಮಗು ಭಿನ್ನವಿಲ್ಲದೆ
ಅಭಿನ್ನಸ್ವರೂಪದಿಂದ ಎರಡಳಿದು ಏಕರಸವಾಗಿ
ಪುಷ್ಪ ಪರಿಮಳದಂತೆ, ಬಾವನ್ನಕೋಶ ಬಂಗಾರದ ತೆರದಿ,
ಪಂಚಾಗ್ನಿಗಳ ಮೂಲ ಚಿತ್ಸ್ವರೂಪವಾದ ಚಿದಗ್ನಿಯಲ್ಲಿ ಸಮರಸವ ಮಾಡಿ,
ಸರ್ವಾಚಾರಸತ್ಕಾಯಕ ಸತ್ಕ್ರಿಯಾ ಸಮ್ಯಜ್ಞಾನ ಸದ್ಭಕ್ತಿಯೆ
ದ್ವಿತೀಯ ಕೈಲಾಸವೆಂದು, ಸತ್ಯ ನಡೆನುಡಿಯೆ ನಿಜಶಿವಮಂದಿರವೆಂದು,
ತನ್ನ ದೀಕ್ಷಾಕರ್ತುವಾದ ಗುರು ಮೊದಲಾಗಿ ಸಮಸ್ತರೆಲ್ಲ
ಶಿವಪಥಕ್ಕೆ ಯೋಗ್ಯವಾಗಿ ಬಂದಡೆ ಒಡಗೂಡಿ ಕೊಂಡು,
ಶಿವಪಥಕ್ಕೆ ಅಯೋಗ್ಯವಾದಡೆ ತ್ಯಜಿಸಿ,
ಪರಿಪೂರ್ಣ ಪರಂಜ್ಯೋತಿ ಸ್ತಂಭಾಕಾರವೆಂಬ
ನಿಷ್ಕಲ ಪರಶಿವಬಿಂದುಸ್ವರೂಪವಾದ

ಷೋಡಶವರ್ಣದ ಚಿದ್ಬೆಳಗಿನೊಳಗೆ ಉರಿ-ಕರ್ಪೂರಂದವತೆ
ನಿಜಶಿವಸಮಾಧಿಯಲ್ಲಿ ಬೆರೆದು ಹೋದರು ನೋಡ.
ಇಂತೀ ಪ್ರಕಾರದಿಂದ ರಾಜಹಂಸನೋಪಾಯದಿಯಲ್ಲಿ
ಒಳಗು ಹೊರಗು ಅನಾಚಾರವ ತ್ಯಜಿಸಿ,
ಶಿವಾಚಾರಸಮರತಿಯಿಂದ ಕೂಡಿದರು ನೋಡ.
ಆಚಾರವೆಪ್ರಾಣವಾಗಿ ಸಕಲಪ್ರಮಥಗಣವೆಲ್ಲ
ಚಿದ್ಘನಮಹಾಲಿಂಗದಲ್ಲಿ ಕೂಟಸ್ಥರಾದರು ನೋಡ
ಸಂಗನಬಸವೇಶ್ವರ. || ೨೮ ||

೬೯೧

ಹೀಂಗೆ ಪೂರ್ವಪುರಾತನರು ಸದ್ಗುರು ವಚನೋಕ್ತಿಯಿಂದ ತಿಳಿದು
ರೇವಣಸಿದ್ಧೇಶ್ವರ, ಮರುಳಸಿದ್ಧೇಶ್ವರ, ತೋಂಟದಸಿದ್ಧೇಶ್ವರ
ನೂರೊಂದು ವಿರಕ್ತರು ಮೊದಲಾದ ಮರ್ತ್ಯಲೋಕದ ಮಹಾಗಣಂಗಳೆಲ್ಲ
ಸರ್ವಾಚಾರ ಸತ್ಕಾಯಕ ಸತ್ಕ್ರಿಯಾ ಸಮ್ಯಜ್ಞಾನ
ಸದ್ಭಕ್ತಿಯ ಸದ್ಗುರುಮುಖದಿಂದ ಬೆಸಗೊಂಡು
ನಿಜಪ್ರಸಾದವೆಂದು ಸದ್ಭಾವದಿಂದ ಭಾವಿಸಿ
ನಡೆದಂತೆ ನುಡಿದು, ನುಡಿದಂತೆ ನಡೆದು, ಹರುಕಿಲ್ಲದೆ
ಹರಿ ಅಜ ಸುರ ಮನು ಮುನಿ ದೇವ ದಾನವ ಮಾನವರೆಲ್ಲ ಮುಳುಗಿಹೋದ
ಹೊನ್ನು-ಹೆಣ್ಣು-ಮಣ್ಣು-ಅನ್ನ-ನೀರು-ವಸ್ತ್ರ-ಆಭರಣ-ವಾಹನವೆಂಬ
ಮಾಯಾಪಾಶ ಕಡವರವ ದಾಂಟಿದರು ನೋಡ.
ಮಾಯಾಭೋಗವಿರಹಿತರಾಗಿ ಲಿಂಗಭೋಗಸಂಪನ್ನರಾದರು ನೋಡ
ಸಂಗನಬಸವೇಶ್ವರ. || ೨೯ ||

೬೯೨

ಹರಹರ ಶಿವಶಿವ ಜಯಜಯ
ಹರಗಣಂಗಳಾಚರಿಸಿದ ಸತ್ಕಾಯಕದಿಂದ
ಬಹುಜನ್ಮದ ದೋಷ ತೊಲಗುವುದಯ್ಯ.
ಸತ್ಕ್ರಿಯದಿಂದ ಕಾಲಕಾಮರ ಭಯ ಹರಿವುದಯ್ಯ.
ಸಮ್ಯಜ್ಞಾನದಿಂದ ಮಾಯಾಪಾಶ ಹಿಂದಾಗುವುದಯ್ಯ.
ಸದ್ಭಕ್ತಿಯಿಂದ ಪಾವನಸ್ವರೂಪರಾಗುವುರಯ್ಯ.
ಲಿಂಗಾಚಾರದಿಂದ ತನು ಶುದ್ಧವಾಗುವುದಯ್ಯ.
ಸದಾಚಾರದಿಂದ ಮನ ಸಿದ್ಧವಾಗುವುದಯ್ಯ.

ಶಿವಾಚಾರದಿಂದ ಧನ ಪ್ರಸಿದ್ಧವಾಗುವುದಯ್ಯ.
ಗಣಾಚಾರದಿಂದ ನಡೆ ಪರುಷವಾಗುವುದಯ್ಯ.
ಭೃತ್ಯಾಚಾರದಿಂದ ನುಡಿ ಪರುಷವಾಗುವುದಯ್ಯ.
ಕ್ರಿಯಾಚಾರದಿಂದ ಕರ್ಮೇಂದ್ರಿಯಂಗಳು ಪವಿತ್ರವಾಗುವವಯ್ಯ.
ಜ್ಞಾನಾಚಾರದಿಂದ ಜ್ಞಾನೇಂದ್ರಿಯಂಗಳು ಪಾವನವಾಗುವವಯ್ಯ.
ಭಾವಾಚಾರದಿಂದ ಕರಣಂಗಳು ನಿಜಸ್ವರೂಪವಾಗುವವಯ್ಯ.
ಸತ್ಯಾಚಾರದಿಂದ ವಿಷಯಂಗಳು ಲಿಂಗಮುಖವಾಗುವವಯ್ಯ.
ನಿತ್ಯಾಚಾರದಿಂದ ವಾಯುಗಳು ಮಹಾಪ್ರಸಾದವಾಗುವವಯ್ಯ.
ಧರ್ಮಾಚಾರದಿಂದ ಲಿಂಗಾಂಗ ಏಕವಾಗುವುದಯ್ಯ.
ಸರ್ವಾಚಾರದಿಂದ ಸರ್ವಾಂಗ ಜ್ಞಾನಜ್ಯೋತಿಯಪ್ಪುದು ತಪ್ಪದು ನೋಡ.
ಸತ್ಕಾಯಕ ಮೊದಲಾದ ಷೋಡಶ ಕಲೆನೆಲೆಗಳೆ
ಸದ್ಗುರುಮುಖದಿಂ ಚಿದಂಗವ ಮಾಡಿಕೊಂಡು,
ಷೋಡಶವರ್ಣವೆ ಸದ್ಗುರುಮುಖದಿಂ ಚಿದ್ಘನಲಿಂಗವ ಮಾಡಿಕೊಂಡು
ಸದ್ಗುರುಮುಖದಿಂ ಎರಡಳಿದು ಏಕಸ್ವರೂಪದಿಂದ
ಜ್ಯೋತಿಜ್ಯೋತಿ ಬೆರದಂತೆ ಬಸವ ಮೊದಲಾದ
ಪ್ರಮಥಗಣಂಗಳೆಲ್ಲ ಬಯಲೊಳಗೆ ಮಹಾಬಯಲಾದರು ನೋಡ,
ಸಂಗನಬಸವೇಶ್ವರ. ॥ ೩೦ ॥

೬೯೩

ತನುತ್ರಯಂಗಳಲ್ಲಿ
ಕ್ರಿಯಾಗುರು-ಜ್ಞಾನಗುರು-ಮಹಾಜ್ಞಾನಗುರುವ
ಸಂಬಂಧವ ಮಾಡಿಕೊಂಡು,
ಮನತ್ರಯಂಗಳಲ್ಲಿ
ಕ್ರಿಯಾಲಿಂಗ-ಜ್ಞಾನಲಿಂಗ-ಮಹಾಜ್ಞಾನಲಿಂಗವ
ಸಂಬಂಧವ ಮಾಡಿಕೊಂಡು,
ಭಾವತ್ರಯಂಗಳಲ್ಲಿ
ಕ್ರಿಯಾಜಂಗಮ-ಜ್ಞಾನಜಂಗಮ-ಮಹಾಜ್ಞಾನಜಂಗಮವ
ಸಂಬಂಧವ ಮಾಡಿಕೊಂಡು
ಆತ್ಮತ್ರಯಂಗಳಲ್ಲಿ
ಕ್ರಿಯಾಪಾದೋದಕ-ಜ್ಞಾನಪಾದೋದಕ-ಮಹಾಜ್ಞಾನಪಾದೋದಕವ
ಸಂಬಂಧವ ಮಾಡಿಕೊಂಡು,
ಅವಸ್ಥಾತ್ರಯಂಗಳಲ್ಲಿ

ಕ್ರಿಯಾಪ್ರಸಾದ-ಜ್ಞಾನಪ್ರಸಾದ-ಮಹಾಜ್ಞಾನಪ್ರಸಾದವ
ಸಂಬಂಧವ ಮಾಡಿಕೊಂಡು,
ಕರಣತ್ರಯಂಗಳಲ್ಲಿ
ಕ್ರಿಯಾಭಸಿತ-ಜ್ಞಾನಭಸಿತ-ಮಹಾಜ್ಞಾನಭಸಿತವ
ಸಂಬಂಧವ ಮಾಡಿಕೊಂಡು,
ಜೀವತ್ರಯಂಗಳಲ್ಲಿ
ಕ್ರಿಯಾರುದ್ರಾಕ್ಷಿ-ಜ್ಞಾನರುದ್ರಾಕ್ಷಿ-ಮಹಾಜ್ಞಾನರುದ್ರಾಕ್ಷಿಗಳ
ಸಂಬಂಧವ ಮಾಡಿಕೊಂಡು,
ಗುಣತ್ರಯಂಗಳಲ್ಲಿ
ಕ್ರಿಯಾಮಂತ್ರ-ಜ್ಞಾನಮಂತ್ರ-ಮಹಾಜ್ಞಾನಮಂತ್ರವ
ಸಂಬಂಧವ ಮಾಡಿಕೊಂಡರು ನೋಡ.
ಕಾರಣ ಕಂಥೆಯ ಧರಿಸಿ ತ್ರಿವಿಧವಿಚಾರವಿಡಿದು ಆಚರಿಸುವರೆ
ಅನಾದಿಸದ್ಭಕ್ತ ಶಿವಶರಣಗಣಂಗಳು ನೋಡ
ಸಂಗನಬಸವೇಶ್ವರ. ॥ ೩೧ ॥

೬೯೪

ಆಚಾರ-ಅರುಹಿನಲ್ಲಿ ಸತ್ಕ್ರಿಯಾಸುಜ್ಞಾನ ಗುರುವ
ಸಂಬಂಧವ ಮಾಡಿಕೊಂಡು,
ಪಾಣಿ-ಪ್ರಾಣದಲ್ಲಿ ಸತ್ಕ್ರಿಯಾಸುಜ್ಞಾನಲಿಂಗವ
ಸಂಬಂಧವ ಮಾಡಿಕೊಂಡು,
ಆಚರಣೆ-ಸಂಬಂಧಂಗಳಲ್ಲಿ ಸತ್ಕ್ರಿಯಾಸುಜ್ಞಾನಜಂಗಮವ
ಸಂಬಂಧವ ಮಾಡಿಕೊಂಡು,
ನಡೆ-ನುಡಿಗಳಲ್ಲಿ ಸತ್ಕ್ರಿಯಾಸುಜ್ಞಾನ ಪಾದೋದಕವ
ಸಂಬಂಧವ ಮಾಡಿಕೊಂಡು,
ಜಿಹ್ವೆ-ನಾಸಿಕಂಗಳಲ್ಲಿ ಸತ್ಕ್ರಿಯಾಸುಜ್ಞಾನ ಪ್ರಸಾದವ
ಸಂಬಂಧವ ಮಾಡಿಕೊಂಡು,
ಸರ್ವಾಂಗ-ಸುಮನದಲ್ಲಿ ಸತ್ಕ್ರಿಯಾಸುಜ್ಞಾನ ಚಿದ್ವಿಭೂತಿಯ
ಸಂಬಂಧವ ಮಾಡಿಕೊಂಡು,
ತತ್ಜ್ಞಾನ-ಚಿದ್ವೃಕ್ಕಿನಲ್ಲಿ ಸತ್ಕ್ರಿಯಾಸುಜ್ಞಾನ ಚಿದ್ರುದ್ರಾಕ್ಷಿಯ
ಸಂಬಂಧವ ಮಾಡಿಕೊಂಡು,
ಕ್ರಿಯಾಕಾಶ-ಜ್ಞಾನಾಕಾಶಂಗಳಲ್ಲಿ ಸತ್ಕ್ರಿಯಾಸುಜ್ಞಾನ ಚಿನ್ಮಂತ್ರವ
ಸಂಬಂಧವ ಮಾಡಿಕೊಂಡರು ನೋಡ-

ಸೂಕ್ಷ್ಮಕಂಥೆಯ ಧರಿಸಿ, ಸಚ್ಚಿದಾನಂದ ಲೀಲಾಮೂರ್ತಿಗಳಾಗಿ
ಇಂತು ಉಭಯ ವಿಚಾರವಿಡಿದು ಆಚರಿಸುವರೆ
ಆದಿಸದ್ಭಕ್ತ ಶಿವಶರಣಗಣಂಗಳು ನೋಡ
ಸಂಗನಬಸವೇಶ್ವರ. ॥ ೩೨ ॥

೬೮೫

ದೀಕ್ಷಾತ್ರಯಂಗಳಲ್ಲಿ ನಿಜಗುರುವ ಸಂಬಂಧವ ಮಾಡಿಕೊಂಡು,
ಪೂಜಾತ್ರಯಂಗಳಲ್ಲಿ ನಿಜಲಿಂಗವ ಸಂಬಂಧವ ಮಾಡಿಕೊಂಡು,
ಭೋಗತ್ರಯಂಗಳಲ್ಲಿ ನಿಜಜಂಗಮವ ಸಂಬಂಧವ ಮಾಡಿಕೊಂಡು,
ಕ್ರಿಯಾತ್ರಯಂಗಳಲ್ಲಿ ನಿಜಪಾದೋದಕವ ಸಂಬಂಧವ ಮಾಡಿಕೊಂಡು,
ಜ್ಞಾನತ್ರಯಂಗಳಲ್ಲಿ ನಿಜಪ್ರಸಾದವ ಸಂಬಂಧವ ಮಾಡಿಕೊಂಡು,
ಆಚಾರತ್ರಯಂಗಳಲ್ಲಿ ನಿಜಚಿದ್ಭಸಿತವ ಸಂಬಂಧವ ಮಾಡಿಕೊಂಡು,
ಸರ್ವಾಂಗದಲ್ಲಿ ನಿಜರುದ್ರಾಕ್ಷಿಗಳ ಸಂಬಂಧವ ಮಾಡಿಕೊಂಡು,
ಪಂಚಾಕ್ಷರ ಷಡಕ್ಷರಂಗಳೆ ನಡೆನುಡಿಯಾಗಿ.
ಸಕಲ ಶಾಸ್ತ್ರಾಗಮ ಪುರಾಣಂಗಳೆ ಹಸ್ತಪಾದಂಗಳಾಗಿ,
ಎರಡೆಂಬತ್ತೆಂಟು ಕೋಟಿ ವಚನಂಗಳೆ ಮಹಾಮಂತ್ರಂಗಳಾಗಿ
ಸಂಬಂಧವ ಮಾಡಿಕೊಂಡರು ನೋಡ.
ಪರಹಿತಾರ್ಥಕ್ಕೋಸ್ಕರವಾಗಿ ಸ್ಥೂಲಕಂಥೆಯ ಧರಿಸಿ
ನಿರ್ವಂಚಕಲೀಲಾಮೂರ್ತಿಗಳಾಗಿ,
ಇಂತೀ ಏಕಲಿಂಗನಿಷ್ಠಾಪರತ್ವದಿಂದ ಅರಿದಾಚರಿಸುವರೆ
ನೂತನ ಸದ್ಭಕ್ತ ಶಿವಶರಣಗಣಂಗಳು ನೋಡ
ಸಂಗನಬಸವೇಶ್ವರ. ॥ ೩೩ ॥

೬೮೬

ಇಂತೀ ಅಷ್ಟಾವರಣವ ಸದ್ಗುರುಮುಖದಿಂ
ಚಿದಂಗಚಿದ್ಘನಲಿಂಗದ ಮಧ್ಯದಲ್ಲಿ ಸಂಬಂಧವಿಟ್ಟು,
ಏಕಲಿಂಗನಿಷ್ಠಾಪರತ್ವದಿಂದ ಸ್ಥೂಲಕಂಥೆಯ ಧರಿಸಿ
ಸತ್ಕಾಯಕ-ಸತ್ಕ್ರಿಯಾ-ಸಮ್ಯಜ್ಞಾನ-ಸದ್ಭಕ್ತಿ-
ಸದಾಚಾರಸನ್ನಿಹಿತರೆ ನೂತನಗಣಂಗಳೆನಿಸುವರು ನೋಡ.
ಅದರಿಂ ಮೇಲೆ ಚಿದಂಗ-ಚಿತ್ಪ್ರಾಣಾಂಗದ ಮಧ್ಯದಲ್ಲಿ
ಚಿದ್ಘನಲಿಂಗ-ಚಿತ್ಪ್ರಾಣಲಿಂಗವ
ಸದ್ಗುರುಮುಖದಿಂ ಸಂಬಂಧವಿಟ್ಟು ಆ ಲಿಂಗದ ಮಧ್ಯದಲ್ಲಿ

ಸಾಕಾರ-ನಿರಾಕಾರವಾದ ಷೋಡಶಾವರಣವ
ಸಂಪೂರ್ಣವಮಾಡಿಕೊಂಡು, ಸೂಕ್ಷ್ಮತನುವೆಂಬ ಕಂಥೆಯ ಧರಿಸಿ
ಕಂಗಳಾಲಯದ ಜ್ಯೋತಿರ್ಲಿಂಗದ ಮಧ್ಯದಲ್ಲಿ ಮನವ ಮುಳುಗಿಸುವರೆ
ಆದಿಗಣಂಗಳೆನಿಸುವರು ನೋಡ.
ಅದರಿಂ ಮೇಲೆ, ಚಿದ್ಘನ ತ್ರಿವಿಧಾಂಗ-ಚಿದ್ಘನ ತ್ರಿವಿಧಲಿಂಗವ
ಸದ್ಗುರುಮುಖದಿಂ ಸಂಬಂಧಿಸಿಕೊಂಡು
ಆ ಲಿಂಗಾಂಗದ ಮಧ್ಯದಲ್ಲಿ
ಕ್ರಿಯಾಷ್ಟಾವರಣ-ಜ್ಞಾನಾಷ್ಟಾವರಣ-ಮಹಾಜ್ಞಾನಾಷ್ಟಾವರಣವ
ಸಂಬಂಧವಿಟ್ಟು, ಕಾರಣತನುವೆಂಬ ಕಂಥೆಯ ಧರಿಸಿ,
ಹೃತ್ಕಮಲಮಧ್ಯದಲ್ಲಿ ಬೆಳಗುವ ಪರಂಜ್ಯೋತಿರ್ಲಿಂಗಮಧ್ಯದಲ್ಲಿ
ಭಾವವ ಮುಳುಗಿಸಿ ಬಚ್ಚಬರಿಯಾನಂದದಲ್ಲಿ
ಪರಿಪೂರ್ಣಾನಂದದಿಂದಾಚರಿಸುವರೆ ಅನಾದಿಗಣಂಗಳೆನಿಸುವರು ನೋಡ.
ಅದರಿಂ ಮೇಲೆ, ಚಿದ್ಘನ ಅಷ್ಟಾಂಗದ ಮಧ್ಯದಲ್ಲಿ
ಚಿದ್ಘನ ಅಷ್ಟಲಿಂಗಂಗಳ ಸದ್ಗುರುಮುಖದಿಂ ಧರಿಸಿ,
ಆ ಲಿಂಗಾಂಗದ ಮಧ್ಯದಲ್ಲಿ
ಅರುವತ್ತುನಾಲ್ಕು ತೆರದಾವರಣವ ಸಂಬಂಧಿಸಿಕೊಂಡು
ತಮ್ಮ ಸರ್ವಾಂಗದಲ್ಲಿ ಅಷ್ಟವಿಧಕಮಲಂಗಳ ಕಂಡು,
ಆ ಕಮಲಮಧ್ಯದಲ್ಲಿ ನೆಲಸಿರ್ಪ
ಚತುರ್ವಿಧ ಬಿಂದುಲಿಂಗ, ಷಡ್ವಿಧ ಧಾತುಲಿಂಗ,
ದಶವಿಧ ಕ್ಷೇತ್ರಲಿಂಗ, ದ್ವಾದಶ ವಿಕೃತಿಲಿಂಗ,
ಷೋಡಶ ಕಳಾಲಿಂಗ, ದ್ವಿವಿಧ ವಿದ್ಯಾಲಿಂಗ,
ಸಹಸ್ರ ಶಿವಕಳಾಲಿಂಗ, ತ್ರಿವಿಧ ವಿವೇಕಲಿಂಗ
ಇಂತೀ ಅಷ್ಟವಿಧಕಮಲಂಗಳ ಮಧ್ಯದಲ್ಲಿ ನೆಲಸಿರ್ಪ
ಅಷ್ಟವಿಧಲಿಂಗಗಳ ಅಷ್ಟವಿಧ ಹಸ್ತಗಳಿಂದ,
ಅಷ್ಟವಿಧಾರ್ಚನೆ, ಷೋಡಶೋಪಚಾರಂಗಳ ಮಾಡಿ,
ಎರಡಳಿದು ಏಕರೂಪವಾಗಿ ನಿರಾವಯ ಕಂಥೆಯ ಧರಿಸಿ,
ಪರತತ್ವ ಜ್ಯೋತಿರ್ಮಯಲಿಂಗದೊಳಗೆ
ಉರಿಯುಂಡ ಕರ್ಪುರದಂತೆ ಸಮರಸವಾದರು ನೋಡ.
ಅವರಾರೆಂದಡೆ :
ರುದ್ರಲೋಕದ ರುದ್ರಗಣಂಗಳು, ಶಿವಲೋಕದ ಶಿವಗಣಂಗಳು,
ದೇವಲೋಕದ ದೇವಗಣಂಗಳು, ನಾಗಲೋಕದ ನಾಗಗಣಂಗಳು,

ಶಾಂಭವಲೋಕದ ಶಾಂಭವಗಣಂಗಳು ಮುಂತಾದವರು
ಬಯಲೊಳಗೆ ಮಹಾಬಯಲು ಬೆರದಂತಾದರು ನೋಡ.
ಇಂತೀ ಸರ್ವಾಚಾರಸಂಪತ್ತಿನಾಚರಣೆಯನಾಚರಿಸುವರೆ
ನಿರಾವಯಗಣಂಗಳೆನಿಸುವರು ನೋಡ, ಸಂಗನಬಸವೇಶ್ವರ. ॥ ೩೪ ॥

೬೮೭

ಅಯ್ಯ, ನಿಷ್ಕಲ ಪರಶಿವತತ್ವ ಮಹಾಘನಚಿದಾವರಣಸ್ವರೂಪ
ಮಹಾಘನಪರಶಿವಲಿಂಗವ ಸದ್ಗುರುಮುಖದಿಂ
ತಮ್ಮ ಭಾವ-ಮನ-ಹೃದಯ-ಶ್ರೋತ್ರ-ತ್ವಕ್ಕು-ನೇತ್ರ-
ಜಿಹ್ವೆ-ಘ್ರಾಣ-ಕರಕಂಜಮಧ್ಯದಲ್ಲಿರಿಸಿ ಪರಿಪರಿಯಿಂದರ್ಚಿಸಿ,
ನಿರ್ವಂಚಕತ್ವದಿಂದ ಅರ್ಥ ಪ್ರಾಣಾಭಿಮಾನಂಗಳಂ ಸಮರ್ಪಿಸಿ,
ಸರ್ವಾಚಾರಸಂಪತ್ತಿನಾಚರಣೆಯಲ್ಲಿ ದೃಢಚಿತ್ತದಿಂದ ನಿಂದ
ಮಹಾ ಸದ್ಭಕ್ತ ಶಿವಶರಣನಿರ್ದ ಲೋಕವೆ
ರುದ್ರಲೋಕ, ಶಿವಲೋಕ, ದೇವಲೋಕ, ನಾಗಲೋಕ,
ಶಾಂಭವಲೋಕವಯ್ಯ.
ಆತನ ಭಕ್ತಿಪ್ರಿಯರೆ ರುದ್ರಗಣಂಗಳು, ಶಿವಗಣಂಗಳು,
ದೇವಗಣಂಗಳು, ನಾಗಗಣಂಗಳು, ಶಾಂಭವಗಣಂಗಳು ನೋಡ.
ಆತನಿರ್ದ ಊರೇ ಶಾಂಭವಪುರ, ಉಳುವೆ, ಮಹಾಕಲ್ಯಾಣವಯ್ಯ.
ಆತನ ಗೃಹವೆ ಶಿವಮಂದಿರ-ಶಿವಾಲಯ-ಶಿವಕ್ಷೇತ್ರವಯ್ಯ.
ಆತನ ನಡೆ-ನುಡಿ-ಸತ್ಕ್ರಿಯಾಚಾರದಲ್ಲೊಡವೆರೆದ
ಸತ್ಕ್ರಿಯಾಶಕ್ತಿಯೆ ನಾಗಕನ್ನೆ, ದೇವಕನ್ನೆ, ರುದ್ರಕನ್ನೆಯಯ್ಯ.
ಆತನ ಅರ್ಚನಾರ್ಪಣಸ್ಥಲವೆ ಮಹಾಘನಶೂನ್ಯ ಸಿಂಹಾಸನ ನೋಡ.
ಆತನಾಚರಣೆ ಸೋಂಕಿನಿಂದಡಿಯಿಟ್ಟ, ಜಲವೆ
ದೇವಗಂಗಾ, ಶಿವಗಂಗಾ, ಪರಮಗಂಗಾ, ನಿಜಪಾವನಗಂಗಾ,
ಪರಿಪೂರ್ಣಗಂಗಾಸ್ವರೂಪಾದ ಮಹಾಗಂಗಾತೀರ್ಥ ನೋಡ.
ಆತನು ದಯವಿಟ್ಟು ಪರುಷದೃಷ್ಟಿಯಿಂದ ನೋಡಿದ್ದು,
ತಟ್ಟು, ಮುಟ್ಟು, ಸೋಂಕುಗಳೆಲ್ಲ ನಿಜಮೋಕ್ಷ ಸ್ವರೂಪ ನೋಡ.
ಸದ್ಭಕ್ತ ಶಿವಶರಣನ ಅಂಗಳವೆ ನನಗೂ ನಿನಗೂ
ನಿಜಮೋಕ್ಷ ನೋಡ ಸಂಗನಬಸವೇಶ್ವರ. ॥ ೩೫ ॥

೬೮೮

ಎಲೆ ವರಕುಮಾರದೇಶಿಕೇಂದ್ರನೆ,
ನನಗೂ ನಿನಗೂ ಚಿನ್ನ-ಬಣ್ಣ, ಪುಷ್ಪ-ಪರಿಮಳದೋಪಾದಿಯಲ್ಲಿ

ಭಿನ್ನವಿಲ್ಲವಯ್ಯ.
ನಾನು-ನೀನು ಒಂದೇ ವಸ್ತು ನೋಡ!
ನನಗೂ ನಿನಗೂ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುವೆ
ಸದ್ಗುರು ಬಸವೇಶ್ವರಸ್ವಾಮಿಗಳಯ್ಯ.
ನನಗೂ ನಿನಗೂ ಕ್ರಿಯಾಲಿಂಗ, ಜ್ಞಾನಲಿಂಗ, ಮಹಾಜ್ಞಾನಲಿಂಗವೆ
ಚೆನ್ನಬಸವೇಶ್ವರಸ್ವಾಮಿಗಳಯ್ಯ.
ನನಗೂ ನಿನಗೂ ಕ್ರಿಯಾಜಂಗಮ-ಜ್ಞಾನಜಂಗಮ-ಮಹಾಜ್ಞಾನಜಂಗಮವೆ
ಮಹಾಪ್ರಭುಸ್ವಾಮಿಗಳಯ್ಯ.
ನನಗೂ ನಿನಗೂ ದೀಕ್ಷಾಗುರು ಪಾದೋದಕ, ಶಿಕ್ಷಾಗುರು ಪಾದೋದಕ,
ಜ್ಞಾನಗುರು ಪಾದೋದಕವೆ ನೀಲಲೋಚನೆ ತಾಯಿಗಳಯ್ಯ.
ನನಗೂ ನಿನಗೂ ಶುದ್ಧಪ್ರಸಾದ, ಸಿದ್ಧಪ್ರಸಾದ, ಪ್ರಸಿದ್ಧಪ್ರಸಾದವೆ
ಮರುಳಶಂಕರದೇವರಯ್ಯ.
ನನಗೂ ನಿನಗೂ ಕಾಲಹರಭಸಿತ, ಕರ್ಮಹರಭಸಿತ, ದುರಿತಹರಭಸಿತವೆ
ಮಹಾದೇವಿಯಕ್ಕಗಳಯ್ಯ.
ನನಗೂ ನಿನಗೂ ತ್ರಿವಿಧವರ್ಣದ ರುದ್ರಾಕ್ಷಿಯೆ
ಮಡಿವಾಳಸ್ವಾಮಿಗಳಯ್ಯ.
ನನಗೂ ನಿನಗೂ ತ್ರ್ಯಕ್ಷರ-ಪಂಚಾಕ್ಷರ-ಷಡಕ್ಷರ ಮಂತ್ರವೆ
ಸಿದ್ಧರಾಮಸ್ವಾಮಿಗಳಯ್ಯ.
ನನಗೂ ನಿನಗೂ ಸಮಸ್ತ ಪ್ರಮಥಗಣಂಗಳ ಸ್ಮರಣೆಯೆ
ಸರ್ವಾಚಾರಸಂಪತ್ತಿನಾಚರಣೆಯಯ್ಯ.
ನನಗೂ ನಿನಗೂ ಘನಗುರುಶಾಂತಮಲ್ಲೇಶ್ವರ,
ಚೆನ್ನಸಂಜೇಶ್ವರ, ಸ್ವತಂತ್ರಸಿದ್ಧಲಿಂಗೇಶ್ವರನ ಕೃಪೆಯೆ
ಮಹಾಪ್ರಸಾದ ನೋಡ, ಸಂಗನಬಸವೇಶ್ವರ. || ೩೬ ||

೬೯೯

ಅಯ್ಯ, ಸದ್ಗುರು ಬಸವಣ್ಣನೆ ಜಗತ್ಪಾವನ ನಿಮಿತ್ಯಾರ್ಥವಾಗಿ
ಮಾದಲಾಂಬಿಕೆಯ ಪ್ರಸ್ಮಂದಿರದಲ್ಲಿ ನೆಲಸಿರುವ
ನಿಷ್ಕಲ ಕೂಡಲಸಂಗಮೇಶ್ವರಲಿಂಗದ ಚಿದ್ಗರ್ಭದಿಂದ
ಸ್ವಾನುಭಾವ ಸದ್ವಾಸನೆಯನೆ ಬೀರುತ್ತ
ದವನದ ವೃಕ್ಷದೋಪಾದಿಯಲ್ಲಿ
ಬಾಲಬ್ರಹ್ಮತ್ವದಿಂದ ಮರ್ತ್ಯಕ್ಕೆ ಬಂದರಯ್ಯ.
ಅಯ್ಯ, ಚೆನ್ನಬಸವರಾಜದೇವನೆ ಪ್ರಮಥಗಣನಿಮಿತ್ಯಾರ್ಥವಾಗಿ

ಅಕ್ಕನಾಗಲೆದೇವಿಯ ಚಿದಾಕಾಶದ ವರಚೌಕಮಧ್ಯದಲ್ಲಿ ನೆಲಸಿರ್ಪ
ನಿಶ್ಶೂನ್ಯ ಕೂಡಲಚೆನ್ನಸಂಗನ ಚಿದ್ಗರ್ಭದಿಂದ
ಸ್ವಾನುಭಾವಸದ್ವಾಸನೆಯನೆ ಬೀರುತ್ತ
ಮರುಗದ ವೃಕ್ಷದೋಪಾದಿಯಲ್ಲಿ
ಬಾಲಬ್ರಹ್ಮತ್ವದಿಂದ ಮರ್ತ್ಯಕ್ಕೆ ಬಂದರಯ್ಯ.
ಅಯ್ಯ, ಪ್ರಭುಸ್ವಾಮಿಗಳೆ ಇವರಿಬ್ಬರ ಪರಿಣಾಮಕ್ಕೋಸ್ಕರವಾಗಿ
ಕರವೂರ ಸುಜ್ಞಾನಿಗಳ ಪಶ್ಚಿಮಸ್ಥಾನದಲ್ಲಿ ನೆಲಸಿರುವ
ನಿರಂಜನ ಗುರುಗುಹೇಶ್ವರನ ಚಿದ್ಗರ್ಭದಿಂದ
ಸ್ವಾನುಭಾವ ಸದ್ವಾಸನೆಯನೆ ಬೀರುತ್ತ
ಪಚ್ಚೇದ ವೃಕ್ಷದೋಪಾದಿಯಲ್ಲಿ
ಬಾಲಬ್ರಹ್ಮತ್ವದಿಂದ ಮರ್ತ್ಯಕ್ಕೆ ಬಂದರಯ್ಯ.
ಅಯ್ಯ, ನೀಲಲೋಚನೆ, ಮುಕ್ತಾಯಕ್ಕಗಳು,
ಮಹಾದೇವಿಯಕ್ಕಗಳು ಮರ್ತ್ಯಲೋಕದ ಮಹಾಗಣಂಗಳಿಗೆ
ಭಕ್ತಿಜ್ಞಾನವೈರಾಗ್ಯ ಸತ್ಕ್ರಿಯಾ ಸದಾಚಾರದ
ಪರಿವರ್ತನೆಯ ತೋರಬೇಕೆಂದು ಪರಶಿವಲಿಂಗದ ಚಿದ್ಗರ್ಭದಿಂದ
ಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ
ಸ್ವಾನುಭಾವ ಸದ್ವಾಸನೆಯನೆ ಬೀರುತ್ತ
ಕಸ್ತೂರಿ ವೃಕ್ಷದೋಪಾದಿಯಲ್ಲಿ
ಬಾಲಬ್ರಹ್ಮದ ಲೀಲೆಯಿಂದ ಮರ್ತ್ಯಕ್ಕವತರಿಸಿದರು ನೋಡಾ.
ಅಯ್ಯ, ಸಿದ್ಧರಾಮೇಶ್ವರ, ಘಟ್ಟಿವಾಳ ಶರಣ,
ಮೋಳಿಗೆಮಾರಯ್ಯ ಶರಣ ಮೊದಲಾದ
ಸಮಸ್ತ ಪ್ರಮಥಗಣಂಗಳೂ ಜಗತ್ಪಾವನಾರ್ಥ
ಮಹಿಮಾ ಷಟ್ಸ್ಥಲಮಾರ್ಗ ನಿಮಿತ್ಯಾರ್ಥವಾಗಿ,
ಬಸವೇಶ್ವರಸ್ವಾಮಿಗಳ ಆಜ್ಞಾಮಂಟಪ
ತ್ರಿಕೂಟಸಂಗಮ ಸಿಂಹಾಸನದ ಮಧ್ಯದಲ್ಲಿ ನೆಲಸಿರ್ದ
ಚಿದ್ಘನಮಹಾಲಿಂಗದ ಚಿದ್ಬೆಳಗಿನೊಳಗೆ
ಅನಂತಕೋಟಿ ಬರಸಿಡಿಲೊಗೆದೋಪಾದಿಯಲ್ಲಿ
ಸ್ವಾನುಭಾವ ಸದ್ವಾಸನೆಯ ಪ್ರಕಾಶದಿಂದ
ಸಂಪಿಗೆ, ಮೊಲ್ಲೆ, ಮಲ್ಲಿಗೆ, ಜಾಜಿ, ಬಕುಳ,
ಕರವೀರ, ಸುರಹೊನ್ನೆ, ಪಾರಿಜಾತ, ತಾವರೆ, ನೈದಿಲು
ಮೊದಲಾದ ಸಮಸ್ತ ಪುಷ್ಪಂಗಳುದಯದಂತೆ, ಬಳಸಿ ಬ್ರಹ್ಮವಾಗಿ

ಪರಶಿವನಪ್ಪಣೆವಿಡಿದು ಮರ್ತ್ಯಲೋಕಕ್ಕವತರಿಸಿದರು ನೋಡ.
ಅಯ್ಯ, ವರಕುಮಾರದೇಶಿಕೇಂದ್ರನೆ, ಗುರುಬಸವೇಶ್ವರಸ್ವಾಮಿಗಳೆ
ನಿಮ್ಮ ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಚುಳಕದಿಂದ ನೆಲಸಿರ್ಪರು ನೋಡ.
ಅಯ್ಯ, ಚೆನ್ನಬಸವಸ್ವಾಮಿಗಳೆ ನಿಮ್ಮ ಮನಸ್ಥಲದಲ್ಲಿ
ಪ್ರಾಣಲಿಂಗವಾಗಿ ಚುಳಕದಿಂದ ನೆಲಸಿರ್ಪರು ನೋಡ.
ಅಯ್ಯ, ಅಲ್ಲಮಪ್ರಭುವೆ ನಿಮ್ಮ ಭಾವಸ್ಥಲದಲ್ಲಿ
ಭಾವಲಿಂಗವಾಗಿ ಚುಳಕದಿಂದ ನೆಲಸಿರ್ಪರು ನೋಡ.
ಅಯ್ಯ, ನೀಲಾಂಬಿಕೆ-ಮುಕ್ತಾಯಕ್ಕ-ಮಹಾದೇವಿಯಕ್ಕಗಳೆ
ನಿಮ್ಮ ತ್ರಿವಿಧಚಕ್ಷುವಿನಲ್ಲಿ ಕರುಣಾಜಲ-ವಿನಯಜಲ-ಸಮತಾಜಲ
ಮೊದಲಾದ ಹತ್ತುತೆರದಿಂದ ಪರಮಗಂಗಾತೀರ್ಥವಾಗಿ
ಚುಳಕದಿಂದ ನೆಲಸಿರ್ಪರು ನೋಡ.
ಅಯ್ಯ, ಸಿದ್ಧರಾಮೇಶ್ವರ, ಘಟ್ಟಿವಾಳಯ್ಯ, ಶರಣ ಮೋಳಿಗಪ್ಪ
ಮೊದಲಾದ ಸಮಸ್ತ ಪ್ರಮಥಗಣಂಗಳೆಲ್ಲ
ನಿನ್ನ ಹೃದಯಕಮಲ ಮಧ್ಯದಲ್ಲಿ ಶುದ್ಧ-ಸಿದ್ಧ-ಪ್ರಸಿದ್ಧ
ಮೊದಲಾದ ಹನ್ನೊಂದು ತೆರದಿಂದ ಮಹಾಚಿದ್ಘನ ಪ್ರಸಾದವಾಗಿ
ಚುಳಕಮಾತ್ರದಿಂದ ನೆಲಪಿರ್ಪರು ನೋಡ
ಸಂಗನಬಸವೇಶ್ವರ. ॥ ೩೭ ॥

೭೦೦

ಅಯ್ಯ, ಒಂದು ಜೀವಾತ್ಮನೆ ನಾಲ್ಕು ತೆರನಾಗಿರ್ಪುದಯ್ಯ.
ಅದೆಂತೆಂದಡೆ :
ಒಂದು ಜೀವನೆ ಅಂಡಜಪ್ರಾಣಿಯಾಗಿರ್ಪುದಯ್ಯ.
ಮತ್ತೊಂದು ಜೀವನೆ ಪಿಂಡಜಪ್ರಾಣಿಯಾಗಿರ್ಪುದಯ್ಯ.
ಮಿಗಿಲೊಂದು ಜೀವನೆ ಉದ್ಭಿಜಪ್ರಾಣಿಯಾಗಿರ್ಪುದಯ್ಯ.
ಮತ್ತೊಂದು ಜೀವನೆ ಜರಾಯುಜಪ್ರಾಣಿಯಾಗಿರ್ಪುದಯ್ಯ.
ಈ ಚತುರ್ವಿಧ ಜೀವನೊಳಗೆ ಏಳುಲಕ್ಷ ಮಲಜೀವನಯ್ಯ,
ಏಳುಲಕ್ಷ ಜಡಜೀವನಯ್ಯ, ಏಳುಲಕ್ಷ ಕುಜೀವನಯ್ಯ,
ಏಳುಲಕ್ಷ ದುರ್ಜೀವನಯ್ಯ, ಏಳುಲಕ್ಷ ಕಪಟಜೀವನಯ್ಯ,
ಏಳುಲಕ್ಷ ಸಂಚಲಜೀವನಯ್ಯ, ಏಳುಲಕ್ಷ ವಂಚಕಜೀವನಯ್ಯ,
ಏಳುಲಕ್ಷ ನಿರ್ಮಲಜೀವನಯ್ಯ, ಏಳುಲಕ್ಷ ಅಜಡಜೀವನಯ್ಯ,
ಏಳುಲಕ್ಷ ಸುಜೀವನಯ್ಯ, ಏಳುಲಕ್ಷ ಸಂಜೀವನಯ್ಯ,
ಏಳುಲಕ್ಷ ಪರಮಜೀವನಯ್ಯ.

ಈ ತೆರನಾಗಿ ಎಂಬತ್ತುನಾಲ್ಕುಲಕ್ಷ ಜೀವಪ್ರಾಣಿಗಳೆಲ್ಲ
ಶಿವನ ಪೂರ್ವಭಾಗದ ಪ್ರವೃತ್ತಿಮಾರ್ಗದ ಕರ್ಮೇಂದ್ರಿಯ,
ಜ್ಞಾನೇಂದ್ರಿಯವೆಂಬ ದ್ವಾದಶೇಂದ್ರಿಯಂಗಳಲ್ಲಿ ಜೀವಿಸುತಿರ್ಪವಯ್ಯ.
ಆ ದ್ವಾದಶ ಜೀವನ ವರ್ತನಾಭೇದದಿಂದ
ಒಂದು ಜೀವನೆ ಹನ್ನೆರಡು ತೆರನಾಗಿರ್ಪುದಯ್ಯ.
ಅದರ ಗುಣಭೇದವೆಂತೆಂದಡೆ :
ಉಚ್ಛಿಷ್ಟವ ತಿಂದು ಬದುಕುವ ಜೀವನೆ ಮಲಜೀವನೆನಿಸುವುದಯ್ಯ.
ಮಾಂಸಭಕ್ಷಣೆಯಿಂದ ಬದುಕುವ ಜೀವನೆ ಜಡಜೀವನೆನಿಸುವುದಯ್ಯ.
ಚಾಡಿ ಕ್ಷುದ್ರತನದಿಂದ ಒಡಲ ಹೊರವ ಜೀವನೆ ದುರ್ಜೀವನೆನಿಸುವುದಯ್ಯ.
ಕಡಿದು, ಹೊಡದು, ಬಡಿದು, ಬಂಧಿಸಿ ಒಡಲ ಹೊರವ ಜೀವನೆ
ಕಪಟಜೀವನೆನಿಸುವುದಯ್ಯ.
ಗಾರುಡಿಗವಿದ್ಯದಿಂದ ಒಡಲಹೊರವಜೀವನೆ
ಸಂಚಲಜೀವನೆನಿಸುವುದಯ್ಯ.
ದೇಶಕ್ಕೊಂದು ಭಾಷೆ, ದೇಶಕ್ಕೊಂದು ವೇಷವ ಧರಿಸಿ,
ಅಜಾತತನದಿಂದ ಒಡಲ ಹೊರವ ಜೀವನೆ
ವಂಚಕಜೀವನೆನಿಸುವುದಯ್ಯ.
ಷಟ್ಕೃಷಿ ವ್ಯಾಪಾರದೊಳಗೆ ಆವುದಾದರೂ ಒಂದು ವ್ಯವಹಾರವ ಮಾಡಿ,
ಸತ್ಯದಿಂದ ಬಾಳುವವನೆ ನಿರ್ಮಲಜೀವನೆನಿಸುವುದಯ್ಯ.
ಆವ ಮತವಾದರೇನು ? ಆವ ಜಾತಿಯಾದರೇನು ?
ಮಲಮಾಯಾ ಸಂಸಾರಬಂಧಮಂ ತ್ಯಜಿಸಿದ
ಅಷ್ಟಾಂಗಯೋಗಾಭ್ಯಾಸಿಯೆ ಅಜಡಜೀವನೆನಿಸುವುದಯ್ಯ.
ಅಷ್ಟಾಂಗಯೋಗವ ತ್ಯಜಿಸಿ ಶ್ರೀಗುರುಪರಮಾರಾಧ್ಯನ
ಉಪಾವಸ್ತೆಯಂ ಮಾಡುವವನೆ ಸುಜೀವನೆನಿಸುವುದಯ್ಯ.
ಮಹಾಚಿದ್ಘನ ಗುರುದೇವನ ಪ್ರತ್ಯಕ್ಷವಮಾಡಿಕೊಂಡು
ಘನಗುರುಭಕ್ತಿಯಲ್ಲಿ ನಿಷ್ಠೆಯುಳ್ಳಾತನೆ ಸಜ್ಜೀವನೆನಿಸುವುದಯ್ಯ.
ಶ್ರೀಮದ್ಘನ ಗುರುವ ಮೆಚ್ಚಿಸಿ ಇಷ್ಟ-ಪ್ರಾಣ-ಭಾವಲಿಂಗವ
ಪಡದಾತನೆ ಪರಾತ್ಪರಮಜೀವನೆನಿಸುವುದಯ್ಯ.
ಇಂತೀ ಜೀವನ ಬುದ್ಧಿಯ ಗುರುಕಟಾಕ್ಷದಿಂದ ನಿವೃತ್ತಿಯಮಾಡಿ,
ತ್ರಿವಿಧಾಂಗವೆಲ್ಲ ದೀಕ್ಷಾತ್ರಯಂಗಳಿಂದ ಶುದ್ಧಪ್ರಸಾದವಾಗಿ,
ಭಾವತ್ರಯಂಗಳೆಲ್ಲ ಮೋಕ್ಷತ್ರಯಂಗಳಿಂದ ಪ್ರಸಿದ್ಧಪ್ರಸಾದವಾಗಿ,
ಸತ್ಯವಾಣಿ, ಸತ್ಯಪ್ರಾಣ, ಸತ್ಯಮಾಣಿ, ಉಳಿದವಯವಂಗಳೆಲ್ಲ
ಸತ್ಯವನೆ ಹಾಸಿ, ಸತ್ಯವನೆ ಹೊದ್ದು,

ಸತ್ಯಕಾಯಕವ ಮಾಡಿ, ಸತ್ಯ ಭಿಕ್ಷವ ಬೇಡಿ,
ಮರ್ತ್ಯದಲ್ಲಿ ಬಂದು ಬಾರದಂತೆ,
ಸತ್ಯಸದಾಚಾರದಿಂದ ನಡೆ ನುಡಿ ಸಂಪನ್ನರೆ
ಕೇವಲ ಪರಶಿವಗಣಂಗಳು ನೋಡ ಸಂಗನಬಸವೇಶ್ವರ. || ೩೮ ||

೨೦೧

ಇಂತು ಸದ್ಗುರುಕರಜಾತರು
ಪಂಚಪಾತಕ, ಪಂಚಸೂತಕವ ಹೊದ್ದಲಾಗದು ;
ಶೈವಮಾರ್ಗವ ಮೆಟ್ಟಲಾಗದು;
ಪ್ರಮಥರಾಚರಿಸಿದ ಸನ್ಮಾರ್ಗವನುಳಿದು ಶೈವ ಜಡಜೀವಿಗಳ ಮಾರ್ಗದ
ಸೋಂಕಿನಲ್ಲಿ ಅರ್ಚನಾರ್ಪಣಕ್ರಿಯಗಳನಾಚರಿಸಲಾಗದು.
ದಾಕ್ಷಿಣ್ಯದಿಂದ ಅನಾಚಾರ ದುರ್ಜೀವಿಗಳ ಸಮುಪಙ್ತಿಯಲ್ಲಿ
ಅರ್ಪಿತವ ಮಾಡಲಾಗದು.
ಷಡ್ವಿಧ ಶೀಲವ್ರತಾಚಾರಹೀನರಲ್ಲಿ
ಪಾದೋದಕ-ಪ್ರಸಾದವ ಕೊಳಲಾಗದು.
ಪ್ರಮಥರಾಚರಿಸಿದ ಪೂಜಾಪೂಜಕತ್ವದಲ್ಲಿ ತಿಳಿದಾತನೆ
ತ್ರಿಕೂಟಗಿರಿಸಂಗಮದಲ್ಲಿ ನೆಲಸಿರ್ಪ ಮಹಾಪ್ರಭು ತಾನೆ ನೋಡ
ಸಂಗನಬಸವೇಶ್ವರ. || ೩೯ ||

೨೦೨

ಕಾಳಿಕಾದೇವಿ, ಚಾಮುಂಡಿ, ಗಂಗೆ, ಗೌರಿ, ಬನಶಂಕರಿ, ಎಲ್ಲಿ,
ಏಕಲಾತಿ, ಹುಲಗಿ, ಹೊಸೂರಿ, ಸತ್ತವರು, ಹೆತ್ತವರು
ಇಂತೀ ಹಲವು ಪಿಶಾಚಿಗಳ ಹೆಸರಿಂದ ಇದಿರಿಟ್ಟು ಆರಾಧಿಸಿ,
ಅದರ ನೈವೇದ್ಯವೆಂದು ಶ್ರೀಗುರುವಿತ್ತ ಲಿಂಗಕ್ಕೆ ತೋರಿ
ಭುಂಜಿಸುವ ಶಿವದ್ರೋಹಿಗೆ ಗುರುವಿಲ್ಲ, ಲಿಂಗವಿಲ್ಲ,
ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ ಕಾಣಾ
ಸಂಗನಬಸವೇಶ್ವರ. || ೪೦ ||

೨೦೩

ಅಂಗದಮೇಲೆ ಲಿಂಗವ ಧರಿಸಿ,
ಶಿವಭಕ್ತರೆಂದು ಹೇಳಿ, ಶಿವಾಚಾರಮಾರ್ಗವ ಬಿಟ್ಟು,
ಭವಿಶೈವದೈವಗಳಿಗೆ ಲಿಂಗವಡಿಯಾಗಿ ಅಡ್ಡಬಿದ್ದು
ಶರಣೆಂಬ ಹೊಲೆಯರಿಗೆ ಶಿವಭಕ್ತಜನ್ಮ ತೀರಿ.

ಚಂದ್ರಸೂರ್ಯರುಳ್ಳನ್ನಕ್ಕರ ಇಪ್ಪತ್ತೆಂಟುಕೋಟಿ ನರಕ ತಪ್ಪದು.
ಆ ನರಕ ತೀರಿದ ಬಳಿಕ ಶ್ವಾನ ಸೂಕರಜನ್ಮ ತಪ್ಪದು.
ಆ ಜನ್ಮ ತೀರಿದ ಬಳಿಕ ರುದ್ರಪ್ರಳಯ ತಪ್ಪದೆಂದ ಕಾಣಾ
ಸಂಗನಬಸವೇಶ್ವರ. || ೪೧ ||

೭೦೪

ಅಯ್ಯ, ಪರಕುಮಾರದೇಶಿಕೇಂದ್ರನೆ,
ನೀನು ಅಷ್ಟಭೋಗಂಗಳಂ ತ್ಯಜಿಸಿ,
ನಿನ್ನ ನಿಜದಿಂದ ನಿನ್ನಾದಿಮಧ್ಯಾವಸಾನವ ತಿಳಿದು ನೋಡಿದಡೆ
ನಿನ್ನ ಕಣ್ಣಮುಂದೆ ಬಂದಿರ್ಪುದು ನೋಡ ಮಹಾಪ್ರಸಾದವು.
ಅದೆಂತೆಂದಡೆ : ಮಹಾಜ್ಞಾನ ತಲೆದೋರಿ
ಸರ್ವಸಂಗ ಪರಿತ್ಯಾಗವ ಮಾಡಿ,
ಗುರೂಪಾವಸ್ತೆಯಂ ಮಾಡಿದ ಶಿಷ್ಯೋತ್ತಮಂಗೆ
ಶ್ರೀಗುರುಲಿಂಗಜಂಗಮವು ಪ್ರತ್ಯಕ್ಷವಾಗಿ
ನಾಲ್ವರಾರಾಧ್ಯ ಭಕ್ತ ಮಾಹೇಶ್ವರರೊಡಗೂಡಿ,
ಅಂಗಲಿಂಗದ ಪೂರ್ವಾಶ್ರಯವ ಕಳೆದು,
ಕುಮಾರ ಶಾಪ ಮಾಡಿಸಿ, ಸೇವಾಭೃತ್ಯರಿಂದ ಪಂಚಕಲಶಂಗಳ ಸ್ಥಾಪಿಸಿ,
ಸೂತ್ರವ ಹಾಕಿಸಿ, ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿಸಿ,
ತಮ್ಮ ಕೃಪಾಹಸ್ತವನಿಟ್ಟು,
ಜಂಗಮಮೂರ್ತಿಗಳ ಸಿಂಹಾಸನದ ಮೇಲೆ ಮೂರ್ತವ ಮಾಡಿಸಿ,
ಶ್ರೀಗುರುಲಿಂಗವು ಎದ್ದು ಪ್ರಮಥರೊಡಗೂಡಿ,
ಕುಮಾರ ಶಾಪಮಾಡಿದಂಗಲಿಂಗವ ತನ್ನ ಚರಣತಳಕ್ಕೆ ಸೂತ್ರವ ಹಿಡಿಸಿ,
ಗುರು-ಶಿಷ್ಯತ್ವವೆಂಬ ಉಭಯಭೇದವಳಿದು ಏಕರೂಪವಾಗಿ,
ನಿರಂಜನಜಂಗಮಮೂರ್ತಿಗೆ ಅಭಿವಂದಿಸಿ
ಅಷ್ಟಾಂಗಪ್ರಣತರಾಗಿ, ಅಪ್ಪಣೆಯ ಬೆಸಗೊಂಡು,
ಆ ನಿರಂಜನ ಜಂಗಮಮೂರ್ತಿಗೆ ಪ್ರತಿಸಿಂಹಾಸನವ ಮಾಡಿಸಿ,
ಮೂರ್ತಗೊಳಿಸಿ, ಗುರುಶಿಷ್ಯರಭಿಮುಖರಾಗಿ,
ಗುರುವಿನ ದೃಕ್ಕು ಶಿಷ್ಯನಮಸ್ತಕದ ಮೇಲೆ ಸೂಸಿ,
ಶಿಷ್ಯನ ದೃಕ್ಕು ಗುರುವಿನ ಚರಣಕಮಲದಲ್ಲಿ ಸೂಸಿ,
ಏಕಲಿಂಗನೈಷ್ಠೆಯಿಂದ ಸಾವಧಾನಭಕ್ತಿ ಕರಿಗೊಂಡು,
ಆ ಲಿಂಗಾಂಗದ ಭಾಳದ ಪೂರ್ವಲಿಖಿತವ
ಜಂಗಮದ ಚರಣೋದ್ಧೂಳನದಿಂದ ತೊಡದು,

ಲಿಂಗಾಂಗಕ್ಕೆ ಇಪ್ಪತ್ತೊಂದು ಪೂಜೆಯ ಮಾಡಿಸಿ,
ಲಿಂಗಕ್ಕೆ ಅಂಗವ ತೋರಿ, ಅಂಗಕ್ಕೆ ಲಿಂಗವ ತೋರಿ,
ಪಾಣಿಗ್ರಹಣವ ಮಾಡಿ, ಕರ್ಣದಲ್ಲಿ ಮಂತ್ರವನುಸುರಿ,
ಪ್ರಮಥರೊಡಗೂಡಿ ಶಾಸೆಯನೆರದು, ಕಂಕಣವಕಟ್ಟಿ,
ನಿಮಿಷಾರ್ಧವಗಲಬೇಡವೆಂದು ಅಭಯಹಸ್ತವನಿತ್ತು,
ಸರ್ವಾಂಗದಲ್ಲಿ ಚಿದ್ಘನಲಿಂಗವನಿತ್ತುದೆ ಪ್ರಥಮದಲ್ಲಿ ಗುರುಪ್ರಸಾದ ನೋಡ.
ಅದರಿಂ ಮೇಲೆ ಕ್ರಿಯಾಮಂತ್ರವ ಹೇಳಿ,
ದಶವಿಧ ಪಾದೋದಕವ ಏಕಾದಶಪ್ರಸಾದವ ಕರುಣಿಸಿದ್ದುದೆ
ದ್ವಿತೀಯದಲ್ಲಿ ಲಿಂಗಪ್ರಸಾದ ನೋಡ.
ಅದರಿಂ ಮುಂದೆ ಲಿಂಗಾಂಗದ ಷಟ್ಸ್ಥಾನಂಗಳಲ್ಲಿ
ಅಷ್ಟವಿಧಸಕೀಲು ಮೊದಲಾಗಿ ಸಮಸ್ತ ಸಕೀಲವರ್ಮವ ಕರುಣಿಸಿದ್ದುದೆ
ತೃತೀಯದಲ್ಲಿ ಜಂಗಮಪ್ರಸಾದ ನೋಡ.
ಅದರಿಂದತ್ತ ಲಿಂಗಾಂಗವೆರಡಳಿದು,
ಸರ್ವಾಚಾರಸಂಪತ್ತಿನಾಚರಣೆಯ ತೋರಿ,
ಮಹಾಪ್ರಸಾದ ಶಿವಾನುಭಾವಸ್ವರೂಪವ ಬೋಧಿಸೆ,
ಶ್ರೀಗುರುಲಿಂಗಜಂಗಮದಂತರಂಗದಲ್ಲಿ ಬೆಳಗುವ ಚಿಜ್ಜ್ಯೋತಿಶರಣನೆ
ಚತುರ್ಥದಲ್ಲಿ ನಿಜಪ್ರಸಾದ ನೋಡ.
ಈ ಚತುರ್ವಿಧ ಪ್ರಸಾದ ಸ್ವರೂಪವೆ ನೀನೆಂದರಿದು,
ಇನ್ನಾವ ಭಯಕ್ಕೆ ಹೆದರಬೇಡಯ್ಯ !
ಪ್ರಮಥರಾಚರಿಸಿದ ಆಚಾರಕ್ರಿಯಾಜ್ಞಾನಾಚರಣೆ ಸಂಬಂಧಕ್ಕೆ,
ಬಂದುದ ಕೊಂಡು, ಬಾರದುದನುಳಿದು
ಚಿದ್ಘನಮಹಾಲಿಂಗದಲ್ಲೇಕವಾಗಿ ಬಾರಾ ಸಂಗನಬಸವೇಶ್ವರ. ॥ ೬೨ ॥

೭೦೫

ನಿಚ್ಚಪ್ರಸಾದ ಅಚಲನಿರ್ವಯಲಕ್ಕೆ ಪೆಸರು.
ಅಚ್ಚಪ್ರಸಾದ ಅಚಲ-ಅದ್ವಯ-ಅಭಿನ್ನ-ಅಪ್ರಮಾಣಕ್ಕೆ ಪೆಸರು.
ಈ ಉಭಯಸಂಬಂಧವೆ ಸಮಯವೆನಿಸುವುದು.
ಆ ಸಮಯಪ್ರಸಾದವೆ ಸಚ್ಚಿದಾನಂದ, ಸಮ್ಯಜ್ಞಾನ.
ಸತ್ಕ್ರಿಯಾ ಸದಮಲಾನಂದಕ್ಕೆ ಪೆಸರು.
ಈ ವಿಚಾರವ ಶ್ರುತಿ-ಗುರು-ಸ್ವಾನುಭಾವದಿಂದರಿದು
ಈ ತ್ರಿವಿಧಪ್ರಸಾದವ ಭೋಗಿಸುವ ಶರಣನೆ ನಿಜಪ್ರಸಾದ ನೋಡ.
ಈ ಚತುರ್ವಿಧಪ್ರಸಾದವ ಭೋಗಿಸಬಲ್ಲಾತನೆ

ಸದ್ಗುರುಲಿಂಗಜಂಗಮ ಸ್ವರೂಪು.
ಈ ಸ್ವಸ್ವರೂಪದಿಂದ ಪಡದನುಭವಿಸಬಲ್ಲಾತನೆ
ಆದಿಪ್ರಸಾದಿ, ಅಂತ್ಯಪ್ರಾದಿ, ಸೇವ್ಯಪ್ರಸಾದಿ, ಮಹಾನಿಜಪ್ರಸಾದಿ ನೋಡ.
ಈತನೆ ಪಿಂಡಬ್ರಹ್ಮಾಂಡ ಸಕಲಲೋಕಂಗಳಿಗೆ, ಸಕಲತತ್ವಂಗಳಿಗೆ
ಸಕಲಾಗಮಶಾಸ್ತ್ರಂಗಳಿಗೆ, ಏಕಮೇವಪರಬ್ರಹ್ಮಸ್ವರೂಪ ನೋಡ.
ಅವರಾರಾರೆಂದಡೆ : ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು,
ಮರುಳಶಂಕರ, ಸಿದ್ಧರಾಮಯ್ಯ, ಅಜಗಣ್ಣ ಮುಖ್ಯವಾದ
ಅಸಂಖ್ಯಾತಮಹಾಗಣಂಗಳು ನೋಡಾ, ಸಂಗನಬಸವೇಶ್ವರ. ॥ ೪೩ ॥

೭೦೬

ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮರುಳಶಂಕರ,
ಸಿದ್ಧರಾಮಯ್ಯ, ಅಜಗಣ್ಣ, ಅಕ್ಕನಾಗಲೆ, ನೀಲಲೋಚನೆ, ಮುಕ್ತಾಂಗನೆ,
ಮಹಾದೇವಿಯಕ್ಕ ಮೊದಲಾದ ಮಹಾಪ್ರಮಥಗಣಂಗಳೆಲ್ಲ.
ಸುಗಂಧದೊಳಗಣ ಮಹಾಗಂಧಪ್ರಸಾದವ ಕೊಂಡರಯ್ಯ.
ಸುರಸದೊಳಗಣ ಮಹಾರಸಪ್ರಸಾದವ ಕೊಂಡರಯ್ಯ.
ಸುರೂಪಿನೊಳಗಣ ಮಹಾರೂಪಪ್ರಸಾದವ ಕೊಂಡರಯ್ಯ.
ಸುಸ್ಪರ್ಶನದೊಳಗಣ ಮಹಾಸ್ಪರ್ಶನಪ್ರಸಾದವ ಕೊಂಡರಯ್ಯ,
ಸುಶಬ್ದದೊಳಗಣ ಮಹಾಶಬ್ದಪ್ರಸಾದವ ಕೊಂಡರಯ್ಯ.
ಇಂತೀ ಸುಗಂಧ, ಸುರಸ, ಸುರೂಪು, ಸುಸ್ಪರ್ಶನ, ಸುಶಬ್ದವ
ಸತ್ತುಚಿತ್ತಾನಂದಮೂರ್ತಿ ಶ್ರೀಗುರುಲಿಂಗಜಂಗಮಕ್ಕೆ
ಪವಿತ್ರಮುಖದಿಂದ ಸಮರ್ಪಿಸಿ,
ಅಪರೊಕ್ಕುಮಿಕ್ಕ ಮಹಾಪ್ರಸಾದವ ಹಾರೈಸಿ,
ಪರತತ್ವಲಿಂಗಮುಖದಲ್ಲಿ ನಿಜಪ್ರಸಾದವೆಂದು ಸಂಬಂಧಿಸಿ,
ನಿರಾವಯ ಸಮಾಧ್ಯಸ್ತರಾದರು ನೋಡ.
ಅಂದಿನ ಮಹಾಗಣಂಗಳ ಚಿತ್ತಭೆಯೆ
ಇಂದಿನ ಗುರುಲಿಂಗಜಂಗಮ ಪಾದೋದಕ ಪ್ರಸಾದವೆಂದು
ನಿರ್ವಂಚಕತ್ವದಿಂದ ಪ್ರಸಾದದೊಳಗಣ ಮಹಾಪ್ರಸಾದವೆಂದರಿದು
ಆಚರಿಸುವ ನಿತ್ಯತೃಪ್ತಿಯೆ ಘನಪ್ರಸಾದ !
ಆ ಪ್ರಸಾದವೆ ಪರಮಾನಂದ !
ಈ ವಿಚಾರವನರಿದು ಕೊಂಡು ಕೊಡಬಲ್ಲಾತನೆ
ಸದ್ಗುರುಲಿಂಗ-ಜಂಗಮ-ಪಾದೋದಕ-ಪ್ರಸಾದ !
ಈ ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದವನರಿದು,

ಕೊಳಬಲ್ಲಾತನೆ ಸದ್ಭಕ್ತ-ಪ್ರಸಾದಿ-ಶಿವಶರಣ ನೋಡ.
ಈ ವಿಚಾರವನರಿಯದೆ ಕೊಟ್ಟು ಕೊಂಬ ಭ್ರಷ್ಟರನೇನೆಂಬೆನಯ್ಯ !
ಆದಿ-ಅನಾದಿಯಿಂದತ್ತತ್ತ ಮೀರಿ ತೋರುವ ಸದ್ಗುರುಲಿಂಗಜಂಗಮದಿಂದ
ಸದ್ಗುರು, ಲಿಂಗ, ಜಂಗಮ, ಭಕ್ತ, ಪ್ರಸಾದಿ, ಶರಣತ್ವದ ವಿಚಾರವ ತಿಳಿದ
ಮಹಾಗಣಂಗಳಿಗೆ ಸೂತಕ, ಪಾತಕ, ದರಿದ್ರ, ದುಃಖಂಗಳು ಬಂದು ತಟ್ಟಲುಂಟೆ?
ಅಗ್ನಿಯಲ್ಲಿ ದಗ್ಧವಾದ ಕಾಷ್ಠಂಗಳಿಗೆ ಮರಳಿ ಅಗ್ನಿ ಉಂಟೆ ?
ಕ್ಷೀರವಳಿದು ಘೃತವಾದ ಮೇಲೆ ಮರಳಿ ಕ್ಷೀರವಪ್ಪುದೆ ?
ಜ್ಯೋತಿಯಲ್ಲಿ ಬಯಲಾದ ಘನಸಾರ ಮರಳಿ ಸಾಕಾರವಪ್ಪುದೆ ?
ಸರ್ವಾವಸ್ಥೆಯಲ್ಲಿ ಪರತತ್ವಮೂರ್ತಿಯಲ್ಲಿ ಕೂಡಿದ
ಸದ್ಭಕ್ತನು ಮರಳಿ ಭವಿಯಪ್ಪನೆ ?
ಜಾತಿ-ಸೂತಕ-ಪಾತಕವಳಿದ ಸದ್ಭಕ್ತಶರಣಗಣಂಗಳ
ಭಾವ-ಮನ-ದೃಷ್ಟಿ-ಅವಸ್ಥೆಗಳೆಲ್ಲ ಪರಶಿವಲಿಂಗಪ್ರಕಾಶ ನೋಡ.
ಅಂದು-ಇಂದು ಎಂಬ ಸಂದೇಹವನಳಿದು,
ಶ್ರುತಿ-ಗುರು-ಸ್ವಾನುಭಾವದಿಂದ
ಅಂಗಲಿಂಗವೆಂಬ ಉಭಯಭಾವವಳಿದು,
ತ್ರಿವಿಧದೀಕ್ಷೆ, ತ್ರಿವಿಧಸ್ವಸ್ವರೂಪು ನಿಲುಗಡೆ,
ತ್ರಿವಿಧ-ಗುರು-ಲಿಂಗ-ಜಂಗಮ, ತ್ರಿವಿಧ ಪಾದೋದಕ-ಪ್ರಸಾದ,
ತ್ರಿವಿಧಿ ಚಿದ್ವಿಭೂತಿ-ರುದ್ರಾಕ್ಷಿ-ಮಂತ್ರ,
ತ್ರಿವಿಧಾಚಾರ ಭಕ್ತಿ-ಜ್ಞಾನ-ವೈರಾಗ್ಯವಿಡಿದಾಚರಿಸುವ
ಭಕ್ತಗಣಂಗಳ ಕಾಯವೆ ಚಿತ್ಕಾಯ.
ಅವರಂಗ-ಮನ-ಪ್ರಾಣ-ಭಾವಂಗಳೆ
ಮಹಾಘನನಿಜಪ್ರಸಾದ ಪಾದೋದಕ ನೋಡಾ, ಸಂಗನಬಸವೇಶ್ವರ. ॥ ೪೪ ॥

೨೦೭

ಇಂದ್ರಿಯಂಗಳ ದುರ್ವರ್ತನಾಗುಣಂಗಳ ಜಯಿಸಿದಾತಂಗೆ
ಬ್ರಹ್ಮನುತ್ಪತ್ಯಕ್ಕೆ ಹೊರಗಾಗಿ
ಶ್ರೀಗುರುವಿನಿಂದ ಸರ್ವಾಂಗವೆಲ್ಲ ಶುದ್ಧಪ್ರಸಾದವಾಗುವುದಯ್ಯ.
ಸಮಸ್ತವಿಷಯಂಗಳ ದುರ್ವರ್ತನಾಗುಣಂಗಳ ಜಯಿಸಿದಾತಂಗೆ
ವಿಷ್ಣುವಿನ ಸ್ಥಿತಿಗೆ ಹೊರಗಾಗಿ
ಚಿದ್ಘನಮಹಾಲಿಂಗದಿಂದ ಸರ್ವಾಂಗವೆಲ್ಲ ಸಿದ್ಧಪ್ರಸಾದವಾಗುವುದಯ್ಯ.
ಸಮಸ್ತಕರಣಂಗಳ ದುರ್ವರ್ತನಾಗುಣಂಗಳ ಜಯಿಸಿದಾತಂಗೆ
ರುದ್ರನ ಲಯಕ್ಕೆ ಹೊರಗಾಗಿ

ನಿರಾಲಂಬ ನಿಷ್ಕಳಂಕ ಜಂಗಮದಿಂದ
ಸರ್ವಾಂಗೆಲ್ಲ ಪ್ರಸಿದ್ಧಪ್ರಸಾದವಾಗುಪುದಯ್ಯ.
ಇಂತು ಇಂದ್ರಿಯ ವಿಷಯ ಕರಣಗುಣಧರ್ಮಗಳಳಿದು,
ಲಿಂಗೇಂದ್ರಿಯ ವಿಷಯ ಕರಣಂಗಳಾಗಿ,
ಬ್ರಹ್ಮನುತ್ಪತ್ಯ, ವಿಷ್ಣುವಿನ ಸ್ಥಿತಿ, ರುದ್ರನ ಲಯಕ್ಕೆ ಹೊರಗಾದಲ್ಲದೆ
ಮಹಾಪ್ರಸಾದಿಸ್ಥಲದೊಳಗಣ ಷಟ್ಸ್ಥಲ ದೊರೆಯದು ನೋಡ
ಸಂಗನಬಸವೇಶ್ವರ ! ॥ ೨೦೭ ॥

೨೦೮

ಅಯ್ಯ, ಎನ್ನ ಕರ-ಮನ-ಭಾವ-ಕಂಗಳ ಕೊನೆಯಲ್ಲಿ
ಬೆಳಗುವ ಪರಂಜ್ಯೋತಿಮೂರ್ತಿ ಕೇಳ !
ನಿತ್ಯನಿಜಾನಂದ ಪರಿಪೂರ್ಣದರಿವೆ !
ಆದಿಯಲ್ಲಿ ಪ್ರಸಾದವಯ್ಯ, ಅಂತ್ಯದಲ್ಲಿ ಪ್ರಸಾದವಯ್ಯ,
ಮಧ್ಯದಲ್ಲಿ ಪದಾರ್ಥವಯ್ಯ.
ಈ ಪ್ರಸಾದ-ಪದಾರ್ಥವನರಿಯದವರೆಲ್ಲ ಹುಟ್ಟಂಧಕರೆಂಬೆನಯ್ಯ.
ಈ ಪ್ರಸಾದ-ಪದಾರ್ಥವ ಭೇದಿಸಿ ಬಸವಣ್ಣ ಬಯಲಾದ.
ಚೆನ್ನಬಸವಣ್ಣ, ಪ್ರಭು, ಸಿದ್ಧರಾಮ, ಅಜಗಣ್ಣ, ಮರುಳಶಂಕರ,
ನೀಲಲೋಚನೆ, ಅಕ್ಕಮಹಾದೇವಿ, ಮುಕ್ತಾಯಕ್ಕ ಮೊದಲಾದ
ಮಹಾಚಿದ್ಘನಗಣಂಗಳೆಲ್ಲ ಜ್ಯೋತಿರ್ಮಯವಾದರು ನೋಡ.
ಮತ್ತಂ, ಸಚ್ಚಿದಾನಂದನಿಜದಿಂದ ಭೇದಿಸಿ,
ಹರುಷಾನಂದಜಲವುಕ್ಕಿ, ಅತಿಮೋಹದಿಂದ
ಪದವನೆ ನೂರೆಂಟೆಳೆಯದಾರವ ಮಾಡಿ,
ಅರ್ಥವನೆ ನವವರ್ಣಯುಕ್ತವಾದ ಮಣಿಯ ಮಾಡಿ,
ಮಹಾಪರಿಪೂರ್ಣಜ್ಞಾನವೆಂಬ ರಂಧ್ರವ ರಚಿಸಿ,
ಮಹಾಚಿದ್ಘನಪ್ರಕಾಶವೆಂಬ ಬಣ್ಣವನಿಟ್ಟು,
ಒಂದು ದಾರದಲ್ಲಿ ಹನ್ನೆರಡು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಮೂವತ್ತಾರು ಮಣಿಯ ಪವಣಿಸಿದರಯ್ಯ.
ಮಿಗಿಲೊಂದು ದಾರದಲ್ಲಿ ನಾಲ್ವತ್ತೆಂಟು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಅರುವತ್ತು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಎಪ್ಪತ್ತೆರಡು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಎಂಬತ್ತುನಾಲ್ಕು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ತೊಂಬತ್ತಾರು ಮಣಿಯ ಪವಣಿಸಿದರಯ್ಯ.

ಮತ್ತೊಂದು ದಾರದಲ್ಲಿ ನೂರೆಂಟು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಇನ್ನೂರಹದಿನಾರು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ನಾಲ್ಕುನೂರಮೂವತ್ತೆರಡು ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಎಂಟುನೂರ ಅರುವತ್ತುನಾಲ್ಕು
ಮಣಿಯ ಪವಣಿಸಿದರಯ್ಯ.
ಮತ್ತೊಂದು ದಾರದಲ್ಲಿ ಸಾವಿರದಎಳೂನೂರ
ಇಪ್ಪತ್ತೆಂಟು ಮಣಿಯ ಪವಣಿಸಿದರಯ್ಯ.
ಈ ಪ್ರಕಾರದಿಂದ ಹದಿಮೂರೆಳೆಯ ಮಣಿಗಳ ಸರಗೋಳಿಸಿ,
ಆಯಾಯ ಸರದ ಎಸಳುಗಳ ಮಧ್ಯದಲ್ಲಿ
ಮುತ್ತು ಮಾಣಿಕ್ಯ ನವರತ್ನಪ್ರಕಾಶಕ್ಕೆ ಮಿಗಿಲಾದ
ಮಹಾಜ್ಯೋತಿರ್ಮಯ ಶ್ರೀಗುರುಲಿಂಗಜಂಗಮವೆಂಬ
ಮಹಾಪ್ರಸಾದವ ಪದಕವ ಮಾಡಿ ರಚಿಸಿ,
ಅಂಗ-ಲಿಂಗ, ಪ್ರಾಣ-ಲಿಂಗ, ಭಾವ-ಲಿಂಗವೆಂಬ ಉಭಯಚಿಹ್ನವಳಿದು
ಮಹಾಬೆಳಗಿನೊಳಗೆ ನಿಂದು, ಸರ್ವಾವಸ್ಥೆಗಳಿಲ್ಲದೆ ಕಂಠಾಭರಣವ ಮಾಡಿ ಧರಿಸಿ
ಮಹಾಪರಿಪೂರ್ಣಪ್ರಕಾಶವೆಂಬ ಮಹಾಚಿದ್ಘನ
ಪ್ರಸಾದಭಾಜನದಲ್ಲಿ ಪರಿಪೂರ್ಣರಾಗಿ,
ಸತ್ಯ ಸದಾಚಾರ ಸತ್ಕಾಯಕ ಸದ್ಭಕ್ತಿಯಾನಂದ ಸತ್ಕ್ರಿಯಾ ಸಮ್ಯಜ್ಞಾನದ
ಬೆಳಗಿನೊಳಗಣ ಮಹಾಬೆಳಗ ಸಾಧಿಸಿ,
ಅನಾದಿಬಯಲೊಳಗಣ ಮಹಾಬಯಲೊಳಗೆ ಜನಿತರಾಗಿ,
ಚತುರ್ಮುಖನ ಜಡಸಂಸಾರಕ್ಕೊಳಗಾಗದೆ,
'ಯದೃಷ್ಟಂ ತನ್ನಷ್ಟಂ' ಎಂದುದಾಗಿ,
ಮತ್ತಂ ಮರಳಿ ಬಯಲೊಳಗಣ ಮಹಾಬಯಲಾದರು ನೋಡ,
ಸಂಗನಬಸವೇಶ್ವರ. || ೪೬ ||

೭೦೯

ಅಯ್ಯ, ವರಕುಮಾರದೇಶಿಕೇಂದ್ರನೆ ಕೇಳಾ,
ಚಿದ್ಘನಶರಣ ಪ್ರಸಾದಲಿಂಗವಾಗಿ ನಿಂದ ನಿಜಾಚರಣೆಯ ಸಿಲುಕಡೆಯ,
ಕಲ್ಯಾಣಪಟ್ಟಣದ ಅನುಭಾವ ಮಂಟಪದ ಶೂನ್ಯಸಿಂಹಾಸನದಲ್ಲಿ,
ಬಸವ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ನೀಲಲೋಚನೆ
ಮೊದಲಾದ ಸಕಲಮಹಾಪ್ರಮಥಗಣಂಗಳೆಲ್ಲ
ಮಹಾಪ್ರಭುಸ್ವಾಮಿಗಳಿಗೆ ಅಭಿವಂದಿಸಿ ಹಸ್ತಾಂಜಲಿತರಾಗಿ
"ಎಲೆ ಮಹಾಪ್ರಭುವೆ ನಿನ್ನ

ಅನಾದಿ ಷಟ್ಸ್ಥಲ ನಿರಾಭಾರಿವೀರಶೈವಶರಣನ ನಿಜಾಚರಣೆಯ ನಿಲುಕಡೆಯ
ದಯವಿಟ್ಟು ಕರುಣಿಸಬೇಕಯ್ಯ ಮಹಾಗುರುವೆ"
ಎಂದು ಬೆಸಗೊಂಡಲ್ಲಿ ಆಗ ಮಹಾಪ್ರಭುವು
ಲಿಂಗಾಂಗಕ್ಕೆ ಭಿನ್ನವಿಲ್ಲದೆ ಹಸ್ತಮಸ್ತಕಸಂಯೋಗವ ಮಾಡಿ,
ವೇಧಾ-ಮಂತ್ರ-ಕ್ರಿಯಾದೀಕ್ಷೆಯನಿತ್ತು,
ಇಪ್ಪತ್ತೊಂದು ತೆರದ ವಿಚಾರವನರುಪಿ,
ನೂರೊಂದುಸ್ಥಲದಾಚರಣೆಯ, ಇನ್ನೂರಹದಿನಾರು ಸ್ಥಲದ ಸಂಬಂಧವ ತೋರಿ,
ಸರ್ವಾಚಾರ ಸಂಪತ್ತಿನಾವರಣದ ಸ್ವಸ್ವರೂಪು ನಿಲುಕಡೆಯ ತೋರಿಸಿ,
ಸಾಕಾರನಿರಾಕಾರದ ನಿಜದ ನಿಲುಕಡೆಯನರುಪಿ,
ನಿಜಶಿವಯೋಗದ ನಿರ್ಣಯವ ಕರುಣಿಸಿ,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಸ್ವರೂಪ
ತಾವೆಂದರುಪಿದ ನೋಡ.
ಇಂತು ಚೆನ್ನಬಸವೇಶ್ವರಸ್ವಾಮಿಗಳು ಬೆಸಗೊಂಡು
ತಮ್ಮ ಚಿದಂಗಸ್ವರೂಪರಾದ ಚಿದ್ಘನಶರಣ
ನಿರ್ಲಜ್ಜಶಾಂತಯ್ಯನೆಂಬ ಶಿವಶರಣನ ಮುಖದಲ್ಲಿ
ಮೋಳಿಗಯ್ಯ ಮೊದಲಾದ ಸಕಲಪ್ರಮಥರ್ಗೆ ಬೋಧಿಸಿದರು ನೋಡ.
ಅದೇ ಪ್ರಸಾದವನ್ನೆ ನಿರ್ಲಜ್ಜಶಾಂತಯ್ಯನೆಂಬ ದೇಶಿಕೇಂದ್ರನು
ಚಂಗಣಗಿಲಮಂಟಪದ ರೇವಣಸಿದ್ಧೇಶ್ವರಂಗೆ ಬೋಧಿಸಿದರು ನೋಡ.
ಅದೇ ಪ್ರಸಾದವನ್ನೆ ರೇವಣಸಿದ್ಧೇಶ್ವರನೆಂಬ ದೇಶಿಕೇಂದ್ರನು
ಜ್ಞಾನೋದಯರಾಗಿ ತಮ್ಮಡಿಗೆರಗಿ ಬಂದ ಶಿಷ್ಯೋತ್ತಮ ಶಿವಶರಣರ್ಗೆ
ಸ್ವಾನುಭಾವಸೂತ್ರವ ಬೋಧಿಸುತ್ತಿರ್ದರು ನೋಡ.
ಅದೇ ಮಹಾಪ್ರಸಾದವ ನಿನ್ನ ಶ್ರೋತ್ರಮುಖದಲ್ಲಿ
ಮಹಾಮಂತ್ರಮೂರ್ತಿಯಾಗಿ ನೆಲೆಗೊಂಡಿರ್ಪ
ಪ್ರಸಾದಲಿಂಗಮುಖದಲ್ಲಿ ಅರುಹಿಸಿ ಕೊಟ್ಟೆವು ಕೇಳಿ,
ಮಹಾಲಿಂಗಮುಖದಲ್ಲಿ ಸಂತೃಪ್ತನಾಗಿ,
ಪರಿಣಾಮಪ್ರಸಾದದಲ್ಲಿ ಲೋಲುಪ್ತನಾಗಿ,
ಎನ್ನ ಜ್ಞಾನಮಂಟಪದಲ್ಲಿ ಮೂರ್ತಿಗೊಂಡಿರುವ ಸಂಗನಬಸವೇಶ್ವರ. ॥ ೪೭ ॥

೭೧೦

ಅಯ್ಯ, ಪ್ರಥಮದಲ್ಲಿ ಇಪ್ಪತ್ತೊಂದು ತೆರದ ದೀಕ್ಷೆಯ
ಕರುಣಿಸೇವು ನೋಡ.
ಅದರ ವಿಚಾರವೆಂತೆಂದಡೆ :

ಅಷ್ಟತನು, ಅಷ್ಟಭೋಗಂಗಳ ಅಭಿಲಾಷೆಯ ನೀಗಿ,
ಸರ್ವಸಂಗ ಪರಿತ್ಯಾಗತ್ವದಿಂದ ನಿಜನೈಷ್ಠೆ ಕರಿಗೊಂಡು
ಸಚ್ಚಿದಾನಂದದಿಂದ ನಿಂದ ನಿಜೋತ್ತಮಂಗೆ
ಶ್ರೀಗುರುಲಿಂಗಜಂಗಮವು ಕೃಪಾದೃಷ್ಟಿಯಿಂದ ನೋಡಿ
ಜನ್ಮ-ಜರೆ-ಮರಣಂಗಳಿಗಂಜಬೇಡವೆಂದು
ಅಂಗ ಮನ ಪ್ರಾಣಂಗಳ ಮೇಲೆ ಅಭಯಹಸ್ತವಿತ್ತು,
ಸಂಸಾರಪ್ರಪಂಚಿಗೊಳಗಾದ ಪಂಚಮಹಾಪಾತಕರಂತೆ
ನಡೆಯಬೇಡವೆಂದು ಪಾದಕ್ಕೆ ಆಜ್ಞೆಯ ಮಾಡಿದರಯ್ಯ.
ಜಡಮರ್ತ್ಯರು ನುಡಿದಂತೆ, ನುಡಿಯಬೇಡವೆಂದು ವಾಣಿಗೆ
ಆಜ್ಞೆಯ ಮಾಡಿದರಯ್ಯ.
ಪರದೈವ-ಪರದ್ರವ್ಯ-ಪರಸ್ತ್ರೀಯರ ಮುಟ್ಟಬೇಡವೆಂದು
ಪಾಣಿಗೆ ಆಜ್ಞೆಯ ಮಾಡಿದರಯ್ಯ.
ಯೋನಿದ್ವಾರವ ಹೊಕ್ಕಡೆ ಅದರಲ್ಲಿ ಜನಿತ ತಪ್ಪದೆಂದು
ಅದರಿಂದ ಬಿಟ್ಟು ಹುಳುಗೊಂಡವಿಲ್ಲವೆಂದು
ಮಾಣಿಗೆ ಆಜ್ಞೆಯ ಮಾಡಿದರಯ್ಯ.
ಇಂತು ಭವಿಮಾರ್ಗವನುಳಿದು
ಸತ್ಯನಡೆ, ಸತ್ಯನುಡಿ, ಸತ್ಯಪಾಣಿ, ಸತ್ಯಮಾಣಿಯಾದಡೆ
ನಿನ್ನ ಪಾದ ಮೊದಲಾಗಿ ಮಾಣಿಯೆ ಅಂತ್ಯವಾದ ಸರ್ವಾಂಗದಲ್ಲಿ
ಚತುರ್ವಿಧ ಸಾರಾಯಸ್ವರೂಪ ಗುರುಲಿಂಗಜಂಗಮಪ್ರಸಾದವಾಗಿ
ಕ್ಷೀರದೊಳಗೆ ಘೃತಪಡಗಿದಂತೆ ಏಕಸ್ವರೂಪಿನಿಂದ
ನಿಮಿಷಾರ್ಧವಗಲದೆ ನಿಜವಸ್ತು ಬೆರದಿರ್ಪುದು ನೋಡ.
ಎಂದು ಅನುಭಾವಮಂಟಪದಲ್ಲಿ
ಶ್ರೀಗುರು ನಿಷ್ಕಳಂಕ ಚೆನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ಗಣಸಾಕ್ಷಿಯಾಗಿ
ಆಜ್ಞೋಪದೀಕ್ಷೆಯ ಮಾಡಿದರು ಸಂಗನಬಸವೇಶ್ವರ. ॥ ೪೮ ॥

೭೧೧

ಅಯ್ಯ, ನಿನ್ನ ಅಷ್ಟತನುವಿನ ಮಧ್ಯದಲ್ಲಿ
ಆ ಪರಬ್ರಹ್ಮನಿಜವಸ್ತುವೆ ನಿನ್ನ ಪಾವನ ನಿಮಿತ್ಯಾರ್ಥವಾಗಿ
ಅಷ್ಟಾವರಣಸ್ವರೂಪಿನಿಂದ ನೆರದಿರ್ಪುದು ನೋಡ.
ಅದರ ವಿಚಾರವೆಂತೆಂದಡೆ :
ನಿನ್ನ ಸ್ಥೂಲತನುವಿನ ಮಧ್ಯದಲ್ಲಿ

ಅರುಹೆ ಗುರುವಾಗಿ ನೆಲಸಿರ್ಪರು ನೋಡ.
ನಿನ್ನ ಸೂಕ್ಷ್ಮತನುವಿನ ಮಧ್ಯದಲ್ಲಿ
ಸುಜ್ಞಾನವೆ ಲಿಂಗವಾಗಿ ನೆಲಸಿರ್ಪರು ನೋಡ.
ನಿನ್ನ ಕಾರಣತನುವಿನ ಮಧ್ಯದಲ್ಲಿ
ಸ್ವಾನುಭಾವಜಂಗಮವಾಗಿ ನೆಲಸಿರ್ಪರು ನೋಡ.
ನಿನ್ನ ನಿರ್ಮಲತನುವಿನ ಮಧ್ಯದಲ್ಲಿ
ಕರುಣಾಮೃತ ಪಾದೋದಕವಾಗಿ ನೆಲಸಿರ್ಪರು ನೋಡ.
ನಿನ್ನ ಆನಂದತನುವಿನ ಮಧ್ಯದಲ್ಲಿ
ಕೃಪಾಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಚಿದ್ರೂಪತನುವಿನ ಮಧ್ಯದಲ್ಲಿ
ಚಿತ್ಪ್ರಕಾಶಭಸಿತವಾಗಿ ನೆಲಸಿರ್ಪರು ನೋಡ.
ನಿನ್ನ ಚಿನ್ಮಯತನುವಿನ ಮಧ್ಯದಲ್ಲಿ
ಚಿತ್ಕಾಂತೆ ರುದ್ರಾಕ್ಷಿಯಾಗಿ ನೆಲಸಿರ್ಪರು ನೋಡ.
ನಿನ್ನ ಚಿತ್ಪ್ರಕಾಶತನುವಿನ ಮಧ್ಯದಲ್ಲಿ
ಚಿದಾನಂದಮಂತ್ರವಾಗಿ ನೆಲಸಿರ್ಪರು ನೋಡ.
ಇಂತು ನಿನ್ನ ಸರ್ವಾಂಗದಲ್ಲಿ ಅಷ್ಟಾವರಣಸ್ವರೂಪಿನಿಂದ
ಪರಾತ್ಪರ ನಿಜವಸ್ತು ನೆರದಿರ್ಪುದು ನೋಡ.
ನಿನ್ನ ನಿರ್ಮಾಯಚಿತ್ತ ಮಹಾಜ್ಞಾನ ನಿಜದೃಷ್ಟಿಯಿಂದ
ನಿನ್ನ ನೀ ತಿಳಿದು ನೋಡ.
ಎಂದು ಗಣಸಾಕ್ಷಿಯಾಗಿ ಶ್ರೀಗುರು ನಿಷ್ಕಳಂಕ ಚೆನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ಉಪಮಾದೀಕ್ಷೆ ಇಂತುಂಟೆಂದು ನಿರೂಪಂ ಕೊಡುತ್ತಿರ್ದರು ನೋಡ
ಸಂಗನಬಸವೇಶ್ವರ. || ೪೯ ||

೭೧೨

ಅಯ್ಯ, ಶ್ರೀಗುರುಲಿಂಗಜಂಗಮವೆ
ರುದ್ರಲೋಕದ ರುದ್ರಗಣಂಗಳಿಗೆ, ಶಾಂಭವಲೋಕದ ಶಾಂಭವಗಣಂಗಳಿಗೆ,
ನಾಗಲೋಕದ ನಾಗಗಣಂಗಳಿಗೆ, ದೇವಲೋಕದ ದೇವಗಣಂಗಳಿಗೆ,
ಮರ್ತ್ಯಲೋಕದ ಮಹಾಗಣಂಗಳಿಗೆ
ಅವರವರ ಮನ-ಭಾವ-ಕರಣಂಗಳು ಹೇಗುಂಟೊ ಹಾಂಗೆ
ಆಯಾಯ ಪ್ರಸನ್ನೇತಿ ಪ್ರಸಾದವಾಗಿರ್ಪರು ನೋಡ.
ಸ್ವರ್ಗ-ಮರ್ತ್ಯ-ಪಾತಾಳಲೋಕದಲ್ಲಿ ಚರಿಸುವ

ಹರಿಸುರಬ್ರಹ್ಮಾದಿ ದೇವದಾನವಮಾನವ ಮನುಮುನಿಗಳೆಲ್ಲ
ಅತ್ಯತಿಷ್ಠದ್ದಶಾಂಗುಲವೆಂದು ಹೊಗಳುವ ಶ್ರುತಿಯೆಂತೋ ಹಾಂಗೆ
ಅವರವರ ಮನದಂತೆ ಮಹಾದೇವನಾಗಿ ಫಲಪದಂಗಳ ಕೊಟ್ಟು,
ದುಷ್ಟನಿಗ್ರಹ ಶಿಷ್ಟಪ್ರತಿಪಾಲಕತ್ವದಿಂದ ಸರ್ವಲೋಕಂಗಳಿಗೆಲ್ಲ
ಸೂತ್ರಧಾರಿಗಳಾಗಿರ್ಪರು ನೋಡ.
ಇಂತು ಏಕಮೇವ ಪರಬ್ರಹ್ಮವೆಂಬ ಶ್ರುತಿಯ ದಿಟವಮಾಡಿ
ಪರಮಸ್ವಸ್ಥಿರದ ಮಂಡಲದ ಮೇಲೆ ಶಿವ-ಶಕ್ತಿ, ಅಂಗ-ಲಿಂಗವೆಂಬ
ಉಭಯನಾಮವಳಿದು ಶಿಷ್ಯರೂಪಿನಿಂದ ಕುಳ್ಳಿರಿಸಿ
ದೀಕ್ಷಾಪಾದೋದಕ ಮಿಶ್ರವಾದ ಗೋಮೂತ್ರದಿಂದ
ಸಪ್ತವ್ಯಸನ ಸಂಬಂಧವಾದಂಗ, ಸಪ್ತಧಾತುಸಂಬಂಧವಾದ ಲಿಂಗ,
ಇಂತು ಅಂಗದ ಮಲಿನಭಾವ, ಲಿಂಗದ ಶಿವಭಾವವ ಕಳದು,
ಕ್ಷೀರ, ಘೃತ, ರಂಭಾ, ಇಕ್ಷು, ಮಧುಯುಕ್ತವಾದ ರಸಪಂಚಾಮೃತವ
ಜಂಗಮಚರಣೋದಕ ಮಿಶ್ರದಿಂದ ಅಭಿಷೇಕವಮಾಡಿಸಿ,
ಅದರಿಂ ಮೇಲೆ ಗುರುಪಾದೋದಕದಲ್ಲಿ ಶರಣಗಣಂಗಳು
ಹಸ್ತೋದಕ, ಮಂತ್ರೋದಕ, ಶುದ್ಧೋದಕ, ಗಂಧೋದಕ,
ಪುಷ್ಪೋದಕವೆಂಬ ಪಂಚಪರಮಾನಂದ ಜಲದಿಂದ ಅಭ್ಯಂಗಸ್ನಾನ ಮಾಡಿಸಿ,
ಹಿಂದು-ಮುಂದಣ ಕಾಲಕಾಮರ ಭಯಕ್ಕೆ ಅಂಜಬೇಡವೆಂದು
ತ್ರಿವಿಧಂಗುಲಪ್ರಮಾಣವಾದ ದರ್ಭೆಯ ಅಂತು ಮಾಡಿ
ತ್ರಿವಿಧಮಂತ್ರಸ್ಮರಣೆಯಿಂದ ಕಟಿಯಲ್ಲಿ ಧರಿಸಿದರಯ್ಯ.
ಆರುವೈರಿಗಳಿಗೆ ಒಳಗಾಗಬೇಡವೆಂದು ಷಡಂಗುಲಪ್ರಮಾಣವಾದ
ರಂಭಾಪಟ್ಟೆಯ ಕೌಪೀನವ ಮಾಡಿ ಷಡಕ್ಷರಮಂತ್ರಸ್ಮರಣೆಯಿಂದ
ಹರಿಯಜದ್ವಾರಗಳ ಬಂಧಿಸಿದರಯ್ಯ.
ಅದರಿಂದಮೇಲೆ ನಾರಂಗಶಾಟಿಯ ಪವಿತ್ರತೆಯಿಂ ಹೊದ್ದಿಸಿ,
ಶ್ರೀ ಗುರುದೇವನ ಚರಣಕಮಲಕ್ಕೆ ಅಷ್ಟಾಂಗಪ್ರಣತನ ಮಾಡಿಸಿ,
ಶಿವಶರಣ ಭಕ್ತ ಮಾಹೇಶ್ವರರುಗಳಿಗೆ ಹುಸಿಯ ನುಡಿಯದೆ, ದಿಟವ ಬಿಡದೆ,
ಆಪ್ತತ್ವದಿಂದ ನಡೆ-ನುಡಿ, ಕೊಟ್ಟುಕೊಂಬ ವಿಚಾರಂಗಳ ಛ್ರುತಮಾಡಿದಲ್ಲಿ
ಶ್ರೀ ಗುರುದೇವನು ಶರಣಗಣ ಒಪ್ಪಿಗೆಯಿಂದ
ಶಿಷ್ಯನ ಮಸ್ತಕದ ಮೇಲೆ ಅಭಯಹಸ್ತವನಿಟ್ಟು, ಗುರುಶಿಷ್ಯಭಾವವಳಿದು,
ಗುರುವಿನ ಸೂತ್ರವ ಶಿಷ್ಯಹಿಡಿದು, ಶಿಷ್ಯನ ಸೂತ್ರವ ಗುರುವು ಹಿಡಿದು,
ಅಂತರಂಗಬಹಿರಂಗದಲ್ಲಿ ಶಿವಯೋಗಾನುಸಂಧಾನದಿಂದ ಏಕರೂಪವಾಗಿ
ಭೃತ್ಯರಿಂದ ಕಳಸಾರ್ಚನೆಯ ರಚಿಸಿ.

ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಡಗೂಡಿ ನವರತ್ನಖಚಿತವಾದ
ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡಿರುವಂಥ ಮಂತ್ರಮೂರ್ತಿ
ನಿರಂಜನಜಂಗಮಕ್ಕೆ ವಿಭೂತಿ ವೀಳ್ಯ, ಸುವರ್ಣಕಾಣಿಕೆ,
ದಶಾಂಗಘನಸಾರ, ಪುಷ್ಪದಮಾಲೆ, ವಸ್ತ್ರಾಭರಣ ಮೊದಲಾಗಿ
ಸಪ್ತಪದಾರ್ಥಂಗಳ ಪ್ರಮಥಗಣಾರಾಧ್ಯ
ಭಕ್ತಮಾಹೇಶ್ವರರ ಮಧ್ಯದಲ್ಲಿ ಇಟ್ಟು,
ಅಷ್ಟಾಂಗಯುಕ್ತರಾಗಿ ಸ್ವಸ್ಥದೃಢಚಿತ್ತದಿಂದ
'ಬಹು ಪರಾಕು ಭವರೋಗ ವೈದ್ಯನೆ'
ಎಂದು ತ್ರಿಕರಣಶುದ್ಧತಿಯಿಂದ ಅಭಿವಂದಿಸುವಂಥಾದ್ದೆ
ಸ್ವಸ್ತಿಕಾರೋಹಣದೀಕ್ಷೆ.
ಇಂತುಟೆಂದು ಶ್ರೀ ಗುರುನಿಷ್ಕಳಂಕಮೂರ್ತಿ ಚೆನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. || ೫೦ ||

೭೧೩

ಅಯ್ಯ, ಪರಮಸಚ್ಚಿದಾನಂದಮಂತ್ರಮೂರ್ತಿ ಜಂಗಮದೇವನು
ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಪ್ಪಿಗೆಯಿಂದ
ನಿರಂಜನಜಂಗಮಕ್ಕೆ ಉಪರಿಸಿಂಹಾಸನವ ಮಾಡಿ,
ಮುಹೂರ್ತಮಾಡಿದ ಮೇಲೆ ಷಡಕ್ಷರಮಂತ್ರಸ್ವರೂಪವಾದ
ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮಧ್ಯದಲ್ಲಿ ಮೂರ್ತಿಗೊಂಡಿರುವ
ಈಶಾನ್ಯಕಲಶ ಮೊದಲಾಗಿ ಪಂಚಕಲಶಂಗಳಿಗೆ
ಜಂಗಮದೀಕ್ಷಾಪಾದೋದಕವ ತುಂಬಿ,
ಮಂಟಪಷಟ್ಸಮ್ಮಾರ್ಜನೆ, ಷಡ್ವಿಧ ವರ್ಣದ ರಂಗವಾಲೆ,
ನವಧಾನ್ಯ, ನವಸೂತ್ರ, ವಿಭೂತಿವೀಳ್ಯೆ,
ಸುವರ್ಣಕಾಣಿಕೆ, ಪಂಚಮುದ್ರೆ, ಅಷ್ಟವಿಧ
ಷೋಡಶೋಪಚಾರಂಗಳಿಂದೊಪ್ಪುವ
ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ
ಕಲಶಮೂರ್ತಿಗಳ ಪಶ್ಚಿಮಭಾಗದಲ್ಲಿ
ಜಂಗಮಪಾದ ಸೋಂಕುವಂತೆ ಗುರುವು ಮುಹೂರ್ತಮಾಡಿ,
ಆ ಕಲಶಂಗಳ ಸೂತ್ರವ ತನ್ನ ಪಾದಕ್ಕೆ ಹಾಕಿ,
ತನ್ನ ಚಿದ್ಬೆಳಗಿನ ಮುಂದೆ ಮೂರ್ತಿಗೊಂಡಿರುವ ಕಲಶಂಗಳ
ಪೂರ್ವಭಾಗದಲ್ಲಿ ಕರಿಯಕಂಬಳಿಯ ಗರ್ದುಗೆಯ ಮಾಡಿಸಿ,

ಹಸೆಯ ರಚಿಸಿ, ಆ ಗರ್ದುಗೆಯ ಮೇಲೆ
ಶಿಷ್ಯೋತ್ತಮನ ಮುಹೂರ್ತವ ಮಾಡಿಸಿ, ಆತನಂಗಕ್ಕೆ ಗುರುಸೂತ್ರವ ಹಾಕಿ,
ಶಿಷ್ಯನಂಗದ ಮೇಲೆ ಮೂರ್ತಿಗೊಂಡಿರುವ ಪರಶಿವಲಿಂಗವ
ಗಣಸಾಕ್ಷಿಯಾಗಿ ಶ್ರೀ ಗುರುದೇವನು
ತನ್ನ ಕರಸ್ಥಲದಲ್ಲಿ ಮುಹೂರ್ತವ ಮಾಡಿಸಿ,
ಆ ಲಿಂಗದ ಮಸ್ತಕದ ಮೇಲೆ ನಿರಂಜನಜಂಗಮದ ಪಾದವಿಡಿಸಿ,
ಆ ಪಂಚಕಲಶಂಗಳಲ್ಲಿ ಶೋಭಿಸುವಂಥ ದೇವಗಂಗಾಜಲಸ್ವರೂಪವಾದ
ಗುರುಪಾದೋದಕವನ್ನು ಒಂದು ಪಾತ್ರೆಯಲ್ಲಿ
ಆ ಕಲಶಂಗಳೈದರಲ್ಲಿ ತೆಗೆದುಕೊಂಡು
ಗುರುವಿನ ದಕ್ಷಿಣಭಾಗದಲ್ಲಿ ಮೂರ್ತಿಗೊಂಡಿರುವ ಪಾದೋದಕ ಕುಂಭದಲ್ಲಿ
ಒಂದು ಬಿಂದುವ ತೆಗೆದುಕೊಂಡು ಆ ಪಾತ್ರೆಯಲ್ಲಿ ಹಾಕಿ,
ಇವಾರುತೆರದ ಅರ್ಘ್ಯೋದಕಂಗಳ ಪ್ರಮಥಗಣಾರಾಧ್ಯ ಭಕ್ತಮಹೇಶ್ವರರೆಲ್ಲ
ಆ ಗುರುವಿನ ಹಸ್ತಕಮಲದಲ್ಲಿರುವಂಥ ಉದಕವನ್ನು ತೆಗೆದುಕೊಂಡು,
ಆ ಶರಣಸತಿ ಲಿಂಗಪತಿಯಾಗಿ ಒಪ್ಪುವ ಶಿಷ್ಯೋತ್ತಮನ
ಮಸ್ತಕದಮೇಲೆ ಮಂತ್ರಧ್ಯಾನದಿಂದ ಸಂಪ್ರೋಕ್ಷಣೆಯ
ಮಾಡುವಂಥಾದೆ ಕಲಶಾಭಿಷೇಕದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಚನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. || ೫೧ ||

೭೧೪

ಅಯ್ಯ, ಶ್ರೀಗುರುದೇವನು ಪ್ರಮಥಗಣಾರಾಧ್ಯ ಭಕ್ತಮಹೇಶ್ವರರೊಡಗೂಡಿ
ಪಂಚಾಭಿಷೇಕ ಮೊದಲಾಗಿ ಪಾದೋದಕವೆ ಕಡೆಯಾಗಿ,
ಅಷ್ಟವಿಧಾರ್ಚನೆ, ಷೋಡಶೋಪಚಾರದಿಂದ
ಇಷ್ಟಲಿಂಗದೇವಂಗೆ ಸಪ್ತವಿಧಾರ್ಚನೆಯಮಾಡಿ,
ತಮ್ಮ ಕುಮಾರಮೂರ್ತಿಯೆಂದು ಮಹಾಸಂತೋಷದಿಂದ
ತೊಡೆಯ ಮೇಲೆ ಮುಹೂರ್ತ ಮಾಡಿಸಿಕೊಂಡು,
ಆಮೇಲೆ ಪ್ರಾಣಲಿಂಗಸ್ವರೂಪವಾದ ಉಭಯ ಹಸ್ತವನ್ನು
ಸಪ್ತವಿಧಾರ್ಚನೆಯ ಮಾಡಿ,
ದಶಾಂಗುಲಮಧ್ಯದಲ್ಲಿ ದ್ವಾದಶಮೂಲಪ್ರಣಮವ ಲಿಖಿಸಿ,
ಕುಮಾರತಾವ ಮಾಡಿ, ಆಮೇಲೆ ಭಾವಲಿಂಗಸ್ವರೂಪ
ಗೋಳಕಸ್ಥಾನವಾದ ಮಸ್ತಕವನ್ನು ಸಪ್ತವಿಧಾರ್ಚನೆಯ ಮಾಡಿ,

ದ್ವಾದಶಮಹಾಪ್ರಣವ ಲಿಖಿಸಿ,
ಸರ್ವಾಂಗದಲ್ಲಿ ಕ್ರಿಯಾಪಾದೋದಕಸ್ವರೂಪವಾದ ಚಿದ್ಭಸಿತವ
ಮಹಾಮಂತ್ರಸ್ಮರಣೆಯಿಂದ ಸ್ನಾನ-ಧೂಳನ-ಧಾರಣವ ಮಾಡಿ,
ಲಲಾಟದಲ್ಲಿ ಅನಾದಿಪರಶಿವಲಿಖಿತವ ಲಿಖಿಸಿ,
ಸರ್ವಾಚಾರಸಂಪನ್ನನಾಗೆಂದು
ಆಶೀರ್ವಚನವ ನೀಡುವಂಥಾದೆ ವಿಭೂತಿಪಟ್ಟದೀಕ್ಷೆ !
ಇಂತುಟೆಂದು ಶ್ರೀಗುರುನಿಷ್ಕಳಂಕ ಚನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. ॥ ೫೨ ॥

೭೦೫

ಅಯ್ಯ, ಪರವೀರಶೈವ ಷಟ್ಸ್ಥಲಾಚಾರ್ಯ-
ಘನಲಿಂಗಚಕ್ರವರ್ತಿಯಪ್ಪ ಶ್ರೀ ಗುರುಲಿಂಗದೇವನು
ತನ್ನ ತೊಡೆಯಮೇಲೆ ಮೂರ್ತಿಗೊಂಡಿರುವ
ಕುಮಾರ ಇಷ್ಟಲಿಂಗದೇವಂಗೆ ಪ್ರಾಣಲಿಂಗ-ಭಾವಲಿಂಗಸ್ವರೂಪವಾದ
ಶರಣನ ಚಿದಂಗವೆ ನಿನಗೆ ನಿಜಮೋಕ್ಷಮಂದಿರವೆಂದು
ಅರುಹಿದ ಮೇಲೆ ನಿಮಿಷಾರ್ಧವಗಲಿರದೆ
ನಮ್ಮ ಪ್ರಮಥಗಣಾಚಾರಕ್ಕೆ ಹೊರಗುಮಾಡಿ,
ಭವಕ್ಕೆ ನೂಂಕೇವೆಂದು ಪ್ರತಿಜ್ಞೆಯನಿಟ್ಟು,
ಆ ಶರಣನ ಕರಸ್ಥಲಕ್ಕೆ ಪ್ರಾಣಕಳಾಚೈತನ್ಯಮೂರ್ತಿಲಿಂಗದೇವನ
ಮುಹೂರ್ತವ ಮಾಡಿಸಿ,
ಆ ಲಿಂಗದೇವಂಗೆ ಪ್ರಮಥಗಣಾರಾಧ್ಯ-
ಭಕ್ತಮಹೇಶ್ವರರೆಲ್ಲ ಅಭಯಹಸ್ತವಿತ್ತು,
ಆ ಮೇಲೆ ಚಿದಂಗಸ್ವರೂಪವಾದ ಶರಣಂಗೆ
ಈ ಲಿಂಗದೇವನ ನಿಮಿಷಾರ್ಧವಗಲಿರದೆ
ನಿನಗೂ ಅದೇ ಪ್ರತಿಜ್ಞೆ ಬಂದೀತೆಂದು ಆಜ್ಞಾಪನವ ಮಾಡಿ,
ಹೃದಯಕಮಲಮಧ್ಯದಲ್ಲಾಡುವ
ಸಹಸ್ರಹೆಡೆಯ ಕುಂಡಲೀಸರ್ಪಂಗೆ ಮುಸುಕಿರುವ
ಅಜ್ಞಾನ ಮಾಯಾಮರವೆಯನ್ನು
ಅನಾಹತದ್ವಾರದಿಂದ ಅನಾದಿಮೂಲಮಂತ್ರವನ್ನು ಉಸುರಿ
ಕುಂಡಲೀಸರ್ಪನ ಹೆಡೆಯ ಎತ್ತಿಸಿ,
ಚಿದಗ್ನಿಯ ಪುಟವ ಮಾಡುವಂಥಾದೆ ಲಿಂಗಾಯತದೀಕ್ಷೆ.

ಇಂತುಟೆಂದು ಶ್ರೀ ಗುರುನಿಷ್ಕಳಂಕ ಚೆನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. ॥ ೫೩ ॥

೭೧೬

ಅಯ್ಯ, ಘನಮಹಾ ಇಷ್ಟಲಿಂಗವೆ
ನಿನ್ನ ನಾದ-ಬಿಂದು-ಕಳೆಗಳಿಗೆ ಚೈತನ್ಯಸ್ವರೂಪು ನೋಡ.
ಈ ಲಿಂಗದ ವೃತ್ತದಲ್ಲಿ ಸಕಲಲೋಕಂಗಳು,
ಸಕಲಮನುಗಳು ಅಡಗಿರ್ಪವು ನೋಡ.
ಈ ಲಿಂಗವೆ ನಿನ್ನ ಹರಕಿರಣ ಚೈತನ್ಯಸ್ವರೂಪು ನೋಡ.
ಈ ಲಿಂಗವೆ ನಿನ್ನ ಸಂಜೀವನ-ಕಾಮಧೇನು-ಕಲ್ಪವೃಕ್ಷ ನೋಡ.
ಇಂತು ನಿನ್ನ ಕರಸ್ಥಲದಲ್ಲಿ ರಾಜಿಸುವ ಪರಶಿವಲಿಂಗದೇವಂಗೆ
ಜಂಗಮದ ಪಾದೋದಕ ಪ್ರಸಾದವೆ ಪರಮಚಿದೈಶ್ವರ್ಯ ನೋಡ.
ಇಂತು ಜಂಗಮಕ್ಕೆ ಭೃತ್ಯಾಚಾರಮೂರ್ತಿಲಿಂಗದೇವನ
ಒಕ್ಕು ಮಿಕ್ಕ ಕರುಣಜಲ ಕರುಣಪ್ರಸಾದವೆ ನಿನಗರ್ಪಿತವಯ್ಯ.
ನಿನ್ನ ಪರಿಣಾಮ ಸಂತೋಷವೆ ಲಿಂಗಾರ್ಪಿತವಯ್ಯ.
ಇಂತಪ್ಪ ಲಿಂಗದೇವನ ನಿನ್ನ ಷಟ್ಸ್ಥಾನಂಗಳಲ್ಲಿ ಧರಿಸಿ,
ಲಿಂಗವೆ ನಿನಗೆ ಪ್ರಾಣವಾಗಿ, ನೀನೆ ಲಿಂಗಕ್ಕೆ ಪ್ರಾಣವಾಗಿ,
ಸತ್ಯದಿಂದ ಬಂದ ಪದಾರ್ಥವ ದಾಸೋಹಂ ಭಾವದಿಂದ
ಸಮುದ್ರುದಕವ ಸಮುದ್ರಕ್ಕೆ ಅರ್ಪಿಸಿದಂತೆ,
ಧಾನ್ಯದ ರಾಶಿಯ ಒಳಗಣ ಧಾನ್ಯವ ತಂದು ಪಾಕವಮಾಡಿ
ಮತ್ತಾ ರಾಶಿಗೆ ಅರ್ಪಿಸಿದಂತೆ.
ಆ ಲಿಂಗಜಂಗಮದ ಪಾದೋದಕ ಪ್ರಸಾದವ
ಮತ್ತಾ ಲಿಂಗಜಂಗಮಕ್ಕೆ ಸಮರ್ಪಿಸಿ,
ಆ ಲಿಂಗಜಂಗಮದ ಪರಿಣಾಮ ಮಹಾಪ್ರಸಾದದಲ್ಲಿ
ನಿತ್ಯ ಸಂತೃಪ್ತನಾಗಿರುವಂಥಾದೆ ಲಿಂಗಸ್ವಾಯತದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಚೆನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ ಸಂಗನಬಸವೇಶ್ವರ ॥ ೫೪ ॥

೭೧೭

ಅಯ್ಯ, ಬಸವ ಮೊದಲಾದ ಪ್ರಮಥಗಣಾರಾಧ್ಯರ
ಸನ್ಮಾರ್ಗಾಚಾರಕ್ಕೆ ದೃಢಚಿತ್ತದಿಂದ ನಿಂದು.

ನಿರಾಭಾರಿವೀರಶೈವ ಷಟ್ಸ್ಥಲಮಾರ್ಗದಲ್ಲಿ ಆಚರಿಸುವ
ಶರಣಗಣಂಗಳಲ್ಲಿ ಪಂಚಸೂತಕಂಗಳ ಕಲ್ಪಿಸದೆ,
ಭೃತ್ಯಾಚಾರ ಮುಂದುಗೊಂಡು, ಅವರೊಕ್ಕುಮಿಕ್ಕುದ ಹಾರೈಸಿ,
ನಿಜಭಕ್ತಿಯಲ್ಲಿ ನಿಂದು, ದೃಢಚಿತ್ತನಾಗಿ,
ಸನ್ಮಾರ್ಗಾಚಾರಕ್ಕೆ ಬಾರದಂಥ ಗುರು-ಚರ-ಪರ-ಭಕ್ತ-ಗಣ
ಬಂಧು-ಬಳಗ, ತಂದೆ-ತಾಯಿ, ಪುತ್ರ. ಮಿತ್ರ, ಕಳತ್ರ, ಶಿಷ್ಯ ಮೊದಲಾಗಿ,
ತೃಣಕ್ಕೆ ಸಮಮಾಡಿ ತ್ಯಜಿಸಿ, ಮನದ ಮಧ್ಯದಲ್ಲಿ ಹುಟ್ಟಿದ
ಕಾಮ, ಕ್ರೋಧ, [ಲೋಭ] ಮೋಹ, ಮದ, ಮತ್ಸರಂಗಳ ಬಲೆಗೆ ಸಿಲ್ಕದೆ,
ತ್ರಿಕರಣದ ಪವಿತ್ರತೆಯಿಂದ ಅಷ್ಟಾವರಣದ ಸ್ತೋತ್ರವ
ಮಾಡುವಂಥಾದೆ ಸಮಯದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ನಿರಾಲಂಬ ಚೆನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು
ನೋಡ ಸಂಗನಬಸವೇಶ್ವರ. || ೭೧೩ ||

೭೧೪

ಅಯ್ಯ, ನಿನ್ನ ಸ್ವಾತ್ಮಜ್ಞಾನದಿಂದ
ಶ್ರುತಿಗುರುಸ್ವಾನುಭಾವವಿಡಿದು,
ನಿನ್ನ ತನು-ಮನ-ಕರಣ-ಇಂದ್ರಿಯಂಗಳ ಪರಿಪಕ್ವವ ಮಾಡಿ,
ಆ ತನು-ಮನ-ಕರಣ-ಇಂದ್ರಿಯಂಗಳ ಆಶ್ರೈಸಿದ
ಅರ್ಥಪ್ರಾಣಾಭಿಮಾನಂಗಳ
ಶ್ರೀಗುರುಲಿಂಗಜಂಗಮ ಭಕ್ತಮಾಹೇಶ್ವರ ಶರಗಣಂಗಳಿಗರ್ಪಿತವಮಾಡಿ,
ನಿರ್ವಂಚಕಬುದ್ಧಿ ಮುಂದುಗೊಂಡು,
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದ ಇಷ್ಟಲಿಂಗವ ತೃಪ್ತಿಮಾಡಿ,
ಮಂತ್ರ ಧ್ಯಾನ ಜಪಸ್ತೋತ್ರಂಗಳಿಂದ ಪ್ರಾಣಲಿಂಗವ ತೃಪ್ತಿಮಾಡಿ,
ಮನೋಲಯ ನಿರಂಜನ ಪೂಜಾಕ್ರಿಯೆಗಳಿಂದ ಭಾವಲಿಂಗವ ತೃಪ್ತಿಮಾಡಿ,
ಗುರುಲಿಂಗಜಂಗಮದ ಪಾದೋದಕ ಪ್ರಸಾದದಿಂದ ಮತ್ತಾ
ಗುರುಲಿಂಗಜಂಗಮದ ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ಮೊದಲಾದ ಮಹಾಪ್ರಮಥಗಣಂಗಳ ತೃಪ್ತಿಮಾಡಿ,
ತನಗೊಂದಾಶ್ರಯಂಗಳಿಲ್ಲದೆ,
ಚಿದ್ಘನಲಿಂಗದಲ್ಲಿ ಅವಿರಳಾನಂದದಿಂದ ಕೂಟಸ್ಥನಾಗಿರುವಂದೆ ನಿಸ್ಸಂಸಾರದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ನಿಷ್ಪ್ರಪಂಚ
ನಿರಾಲಂಬ ನಿಷ್ಕಾಮ ಚೆನ್ನಬಸವರಾಜೇಂದ್ರನು

ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು
ನೋಡ ಸಂಗನಬಸವೇಶ್ವರ. || ೫೬ ||

೨೧೯

ಅಯ್ಯ, ಮರ್ತ್ಯದ ಮಧ್ಯದಲ್ಲಿ ಶ್ರೀಗುರುಕರಜಾತನಾದ ಮೇಲೆ
ಹೊನ್ನು, ಹೆಣ್ಣು, ಮಣ್ಣು, ಅನ್ನ, ನೀರು, ವಸ್ತ್ರ, ಆಭರಣ, ವಾಹನ,
ಪುತ್ರ, ಮಿತ್ರ, ಅನಾಚಾರ, ದುಸ್ಸಂಗವೆಂಬ
ದ್ವಾದಶಮಲಂಗಳ ಬಲೆಗೆ ಸಿಲ್ಕದೆ,
ಇಹಲೋಕದ ಭೋಗ, ಪರಲೋಕದ ಮೋಕ್ಷಂಗಳಿಗೆ ಇಚ್ಛೈಸದೆ,
ಸಿರಿ-ಹರುಷ-ಮಿತ್ರ-ದರಿದ್ರ-ಚಿಂತೆ-ಶತ್ರುತ್ವಂಗಳ ಸಮಾನಂಗೊಂಡು
ಲಿಂಗಾಣತಿಯಿಂದ ಉಪವಾಸ-ತೃಪ್ತಿಗಳು ಬಂದು ತಟ್ಟಿದಲ್ಲಿ ಸಂತೃಪ್ತನಾಗಿ,
ಆಧಿ ವ್ಯಾಧಿಗಳು ಬಂದು ತಟ್ಟಿದಲ್ಲಿ ಪಾದೋದಕ-ಪ್ರಸಾದದಲ್ಲಿ ಕೂಡಿಸಿ,
ಸಮಭಾಜನವ ಮಾಡಿ, ಲಿಂಗಭೋಗೋಪಭೋಗಿಯಾಗಿ,
ಅವಿರಳಾನಂದದಿಂದ ಹಿಂದಣ ಪಾಪ, ಮುಂದಣ ಪುಣ್ಯಗಳಿಗೆ ಹೊರತಾಗಿ,
ಅವ ತನ್ನೊಳಗೆಮಾಡಿಕೊಂಡು, ಮನದ ಬಯಕೆಯ ನೀಗಿ,
ಕಾಲಹರ-ಕರ್ಮಹರ-ದುರಿತಹರ-ಪಾಪಹರಲೀಲೆಯಿಂದ
ಮರ್ತ್ಯದಲ್ಲಿ ಇದ್ದು ಇಲ್ಲದಂತೆ ಸಚ್ಚಿದಾನಂದನಾಗಿ ಆಚರಿಸುವಂಥ
ನಿಜನೈಷ್ಠೆಯೇ ನಿರ್ವಾಣದೀಕ್ಷೆ.
ಇಂತುಟೆಂದು ಶ್ರೀಗುರುನಿಷ್ಕಳಂಕ ಪರಮಾನಂದಮೂರ್ತಿ
ಚಿಕ್ಕದಂಡನಾಥ ಚನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ
ಕೊಡುತಿರ್ದರು ನೋಡ ಸಂಗನಬವೇಶ್ವರಾ. || ೫೭ ||

೨೨೦

ಅಯ್ಯಾ, ಒಂದು ಅನಾದಿ ಮೂಲಪ್ರಣಮವೆ
ಸಾಕಾರಲೀಲೆಯಧರಿಸಿ, ಚಿದಂಗ-ಚಿದ್ಘನಲಿಂಗವಾಗಿ,
ಆ ಒಂದಂಗ-ಲಿಂಗವೆ ತ್ರಿವಿಧಾಂಗ ತ್ರಿವಿಧಲಿಂಗವಾಗಿ,
ಆ ತ್ರಿವಿಧಲಿಂಗಾಂಗವೆ ಷಡ್ವಿಧಲಿಂಗಾಂಗವಾಗಿ,
ಆ ಷಡ್ವಿಧಲಿಂಗಾಂಗವೆ ಛತ್ತೀಸಲಿಂಗಾಂಗವಾಗಿ,
ಆ ಛತ್ತೀಸ ಲಿಂಗಂಗಳನೆ ಶ್ರದ್ಧಾದಿ ಛತ್ತೀಸಭಕ್ತಿಗಳಲ್ಲಿ
ಕೂಟವ ಮಾಡಿ,
ಇಂತು ಲಿಂಗಾಂಗ ಭಕ್ತಿಗಳನೆ ಸತ್ಕ್ರಿಯಾ, ಸಮ್ಯಜ್ಞಾನ,

ಸತ್ಕಾಯಕ, ಸತ್ಪಾತ್ರಭಿಕ್ಷದಲ್ಲಿ ಸಮರಸವ ಮಾಡಿ,
ಆ ಮಹಾಜ್ಞಾನವ ಸಾಧಿಸಿ, ಆ ಮಹಾಜ್ಞಾನದ ಬಲದಿಂದ
ಪೃಥ್ವೀತತ್ವಸಂಬಂಧವಾದ ಕರ್ಮೇಂದ್ರಿಯಂಗಳು,
ಅಪ್ಪುತತ್ವಸಂಬಂಧವಾದ ಜ್ಞಾನೇಂದ್ರಿಯಂಗಳು,
ಅಗ್ನಿತತ್ವಸಂಬಂಧವಾದ ವಿಷಯಂಗಳು.
ವಾಯುತತ್ವಸಂಬಂಧವಾದ ಪ್ರಾಣವಾಯುಗಳು,
ಆಕಾಶತತ್ವಸಂಬಂಧವಾದ ಕರಣಂಗಳು,
ಭಾನುತತ್ವಸಂಬಂಧವಾದ ಉದರವೆಂಬ ಭೂತಂಗಳು,
ಶಶಿತತ್ವಸಂಬಂಧವಾದ ಶ್ವೇತವರ್ಣ ಮೊದಲಾದ ವರ್ಣಂಗಳು,
ಆತ್ಮತತ್ವಸಂಬಂಧವಾದ ಸಮಸ್ತನಾದಂಗಳು
ಇಂತು ಸಮಸ್ತತತ್ವಂಗಳು ಕೂಡಲಾಗಿ ನಾಲ್ವತ್ತುತತ್ವವೆನಿಸುವವು.
ಈ ತತ್ವಂಗಳ ಶಿವತತ್ವ, ಅನಾದಿಶಿವತತ್ವ,
ಅನಾದಿನಿಷ್ಕಲಪರಶಿವತತ್ವ, ಅನಾದಿ ನಿಷ್ಕಲಪರಾತ್ಪರಶಿವತತ್ವವೆಂಬ,
ಚತುರ್ವಿಧತತ್ವಸ್ವರೂಪ ಗುರು-ಲಿಂಗ-ಜಂಗಮ-ಪ್ರಸಾದವ ಕೂಡಿಸಿ,
ಆ ಮಹಾಜ್ಞಾನದಿಂ ನೋಡಿದಲ್ಲಿ ನಾಲ್ವತ್ತುನಾಲ್ಕು ತತ್ವಸ್ವರೂಪಿನಿಂದ
ಒಂದು ಚಿದಂಗವೆನಿಸುವುದಯ್ಯ.
ಆ ಚಿದಂಗದ ಷಟ್ಚಕ್ರಂಗಳಲ್ಲಿ ಶ್ರೀಗುರುಲಿಂಗಜಂಗಮ ಕೃಪೆಯಿಂದ
ಮೂರ್ತಿಗೊಂಡಿರುವ ಐವತ್ತಾರು ಪ್ರಣಮಂಗಳೆ
ಸಾಕಾರಲೀಲೆಯಧರಿಸಿ, ನವಕೃತಿಸಂಬಂಧವಾದ
ಅನಾದಿಮೂಲಪ್ರಣಮವ ಕೂಡಿ ಏಕಸ್ವರೂಪಿನಿಂದ
ಐವತ್ತೇಳುಲಿಂಗಸ್ವರೂಪಪ್ರಣಮವನೊಳಕೊಂಡು
ಒಂದು ಚಿದ್ಘನಲಿಂಗವೆನಿಸುವುದಯ್ಯ.
ಇಂತು ಅಂಗಲಿಂಗವೆಂಬ ನೂರೊಂದು ಸ್ಥಲಕುಳಂಗಳ ವಿಚಾರಿಸಿ,
ಶರಣರೂಪಿನಿಂದ ತನ್ನಾದಿ ಮಧ್ಯಾವಸಾನವ ತಿಳಿದು,
ಕರ್ತುಭೃತ್ಯತ್ವದ ಸದ್ಭಕ್ತಿಯ ವಿಚಾರವನರಿದು,
ದ್ವಾದಶಾಚಾರದ ವರ್ಮವನರಿದು,
ಕರ್ತುಭೃತ್ಯತ್ವಾಚಾರ ಸದ್ಭಕ್ತಿಯೆಂಬ ನಿಜಸಮಾಧಿಯಲ್ಲಿ ನಿಂದು,
ಸಿರವಯಲ ಕೂಡುವಂಥಾದೆ ತತ್ತ್ವದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ನಿಜಚೈತನ್ಯಮೂರ್ತಿ
ಚೆನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡತಿರ್ದರು ನೋಡ ಸಂಗನಬಸವೇಶ್ವರಾ. || ೫೮ ||

೭೨೧

ಅಯ್ಯ, ನಿನ್ನ ಷಟ್ಚಕ್ರಂಗಳಲ್ಲಿ ಅನಾದಿ ನಿಷ್ಕಳಂಕ
ಚಿದ್ಘನ ಇಷ್ಟಮಹಾಲಿಂಗವೆ ಷಡ್ವಿಧಲಿಂಗವಾಗಿ ನೆಲಸಿರ್ಪರು ನೋಡ,
ಅದೆಂತೆಂದಡೆ:
ಆಧಾರಚಕ್ರದ ನಾಲ್ಕೆಸಳಮಧ್ಯದಲ್ಲಿ ನಕಾರಮಂತ್ರಮೂರ್ತಿ
ಆಚಾರಲಿಂಗವಾಗಿ ನೆಲಸಿರ್ಪರು ನೋಡ.
ಸ್ವಾಧಿಷ್ಠಾನಚಕ್ರದ ಆರೆಸಳಮಧ್ಯದಲ್ಲಿ ಮಕಾರಮಂತ್ರಮೂರ್ತಿ
ಗುರುಲಿಂಗವಾಗಿ ನೆಲಸಿರ್ಪರು ನೋಡ.
ಮಣಿಪೂರಕಚಕ್ರದ ಹತ್ತೆಸಳಮಧ್ಯದಲ್ಲಿ ಶಿಕಾರಮಂತ್ರಮೂರ್ತಿ
ಶಿವಲಿಂಗವಾಗಿ ನೆಲಸಿರ್ಪರು ನೋಡ.
ಅನಾಹತಚಕ್ರದ ಹನ್ನೆರಡೆಸಳಮಧ್ಯದಲ್ಲಿ ವಕಾರಮಂತ್ರಮೂರ್ತಿ
ಚರಲಿಂಗವಾಗಿ ನೆಲಸಿರ್ಪರು ನೋಡ.
ವಿಶುದ್ಧಿಚಕ್ರದ ಹದಿನಾರೆಸಳಮಧ್ಯದಲ್ಲಿ ಯಕಾರಮಂತ್ರಮೂರ್ತಿ
ಪ್ರಸಾದಲಿಂಗವಾಗಿ ನೆಲಸಿರ್ಪರು ನೋಡ.
ಆಜ್ಞಾಚಕ್ರದ ಎರಡೆಸಳ ಮಧ್ಯದಲ್ಲಿ ಓಂಕಾರಮಂತ್ರಮೂರ್ತಿ
ಮಹಾಲಿಂಗವಾಗಿ ನೆಲಸಿರ್ಪರು ನೋಡ.
ಇಂತು ಷಟ್ಚಕ್ರಂಗಳಮಧ್ಯದಲ್ಲಿ ನೆಲಸಿ,
ನಿನ್ನ ಷಡ್ವಿಧಭೋಗಂಗಳ ಕೈಕೊಂಡು,
ಆ ಪರಿಣಾಮವ ನಿನಗೆ ಸಂತೃಪ್ತಿಯ ಮಾಡಿ,
ಶರಣಸತಿ ಲಿಂಗಪತಿ ಭಾವದಿಂದ
ಮೇಲುಗಿರಿಮಂಟಪದ ನವರತ್ನ ಖಚಿತ ಸಹಸ್ರದಳ ಪದ್ಮಯುಕ್ತವಾದ
ಪರಿಯಂಕದ ಮೇಲೆ ಲಿಂಗಾನುಭಾವರತಿಸುಖಾನಂದದಿಂದ
ಶೋಭಿಸುವಂಥದೆ ಆಧ್ಯಾತ್ಮದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕಮೂರ್ತಿ
ಚೆನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ, ಸಂಗನಬಸವೇಶ್ವರ. ॥ ೨೯ ॥

೭೨೨

ಅಯ್ಯ, ನಿನ್ನ ಜಿಡಂಗದ ಷಟ್ಸ್ಥಾನಂಗಳಲ್ಲಿ
ಎಪ್ಪತ್ತೈದು ತತ್ತ್ವಂಗಳು ಅಡಗಿರ್ಪವಯ್ಯ.
ಚಿದ್ಘನಲಿಂಗದ ಷಟ್ಸ್ಥಾನಂಗಳಲ್ಲಿ
ಹದಿನೆಂಟು ತತ್ತ್ವಂಗಳು ಅಡಗಿರ್ಪವಯ್ಯ.

ಆ ಚಿದಂಗ ಚಿದ್ಘನಲಿಂಗದ ಮಧ್ಯದಲ್ಲಿ ಬೆಳಗುವ
ಅಖಂಡ ಮಹಾಜ್ಯೋತಿಪ್ರಣಮದ ಷಟ್ಸ್ಥಾನಂಗಳಲ್ಲಿ
ಅಷ್ಟವಿಧತತ್ವಂಗಳು ಅಡಗಿರ್ಪವಯ್ಯ.
ಆ ತತ್ವಂಗಳ ವಿಭಾಗೆಯೆಂತೆಂದಡೆ:
ಪೃಥ್ವೀತತ್ತ್ವ ಇಪ್ಪತ್ತೈದು, ಅಪ್ಪುತತ್ತ್ವ ಇಪ್ಪತ್ತು,
ಅಗ್ನಿತತ್ವ ಹದಿನೈದು, ವಾಯುತತ್ವ ಹತ್ತು, ಆಕಾಶತತ್ತ್ವ ಐದು.
ಇಂತು ಎಪ್ಪತ್ತೈದು ತತ್ತ್ವಂಗಳು ಆತ್ಮತತ್ವ ಒಂದರಲ್ಲಿ ಅಡಗಿ,
ಇಂಥ ಅನಂತ ಅನಂತ ಆತ್ಮರು ಔದುಂಬರ ವೃಕ್ಷಕ್ಕೆ
ಫಲ ತೊಂತಿದೋಪಾದಿಯಲ್ಲಿ
ಆ ಚಿದಂಗಕ್ಕೆ ಅನಂತ ಆತ್ಮತತ್ವಂಗಳು ತೊಂತಿಕೊಂಡಿರ್ಪವು ನೋಡ.
ಅಂಥ ಚಿದಂಗ ಹದಿನೆಂಟು ಪ್ರಣಮರೂಪಿನಿಂದ
ಚಿದ್ಘನಲಿಂಗವನಾಶ್ರೈಸಿರ್ಪುದು ನೋಡ.
ಆ ಚಿದ್ಘನಲಿಂಗವು ಅಷ್ಟವಿಧಸಕೀಲಂಗಳಿಂದ
ಅಖಂಡ ಮಹಾಜ್ಯೋತಿಪ್ರಣಮವನಾಶ್ರೈಸಿರ್ಪುದು ನೋಡ.
ಇಂತು ನೂರೊಂದು ಸಕೀಲಂಗಳ ತತ್ವರೂಪಿನಿಂದ ತಿಳಿದು
ಅಂತು ಅಂಗಲಿಂಗಸಂಗದಲ್ಲಿ ಅಡಗಿರುವ
ನೂರೊಂದುತತ್ತ್ವ ಸಕೀಲಂಗಳ ನೂರೊಂದುಸ್ಥಲದಲ್ಲಿ ನೆಲೆಗೊಳಿಸಿ
ಪರತತ್ತ್ವ ಲಿಂಗಲೀಲೆಯಿಂದ ನಿಂದ ನಿಲುಕಡೆಯೆ ಅನುಗ್ರಹದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಸ್ವತಂತ್ರಮೂರ್ತಿ
ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ ಸಂಗನಬಸವೇಶ್ವರ. ॥ ೬೦ ॥

೭೨೩

ಅಯ್ಯ, ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ
ಪಂಚಾಂಗವನಂಗೀಕರಿಸಿಕೊಂಡಿರುತ್ತಿಹ ಪರಬ್ರಹ್ಮಲಿಂಗದಲ್ಲಿ
ಸಮರಸಸಂಗದಿಂದ ಕೂಟವ ಕೂಡಿದ
ಅವಿರಳ ಪರಂಜ್ಯೋತಿಸ್ವರೂಪ ಶರಣನ ನಿಲುಕಡೆ ಎಂತೆಂದಡೆ:
ಅಣುಮಾತ್ರ ಸತ್ಯ ನಡೆ ನುಡಿಗಳ ತೊಲಗನಯ್ಯ.
ದೃಢಚಿತ್ತದಿಂದ ಕೊಟ್ಟ ಭಾಷೆಗಳ ಬಡಮನದ ಸಂಗವಮಾಡಿ
ಹುಸಿ ನುಡಿಯ ನುಡಿಯನಯ್ಯ.
ನಿಜನೈಷ್ಠಾಪರತ್ವದಿಂದ ಸತ್ಕಾಯಕ, ಸತ್ಪಾತ್ರಭಕ್ತಿ,
ಸತ್ಕ್ರಿಯಾಜ್ಞಾನಾಚಾರಂಗಳ ಅವಾಂತರದಲ್ಲಿ

ನಿಂದ್ಯ ಕುಂದು ದರಿದ್ರ ರೋಗ ರುಜೆ ವಿಪತ್ತು
ಹಾಸ್ಯ ರೋಷಂಗಳು ಬಂದು ತಟ್ಟಿದಲ್ಲಿ
ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದ
ಬಂಮುದ ಮಹಾಪ್ರಸಾದವೆಂದು ಲಿಂಗಭೋಗಿಯಾಗಿರುವನಲ್ಲದೆ
ಶೈವ ಜಡಕರ್ಮಭೂತಪ್ರಾಣಿಗಳಂತೆ
ಸತ್ಕಾಯಕ, ಸತ್ಪಾತ್ರಭಕ್ತಿ, ಸತ್ಕ್ರಿಯಾ, ಜ್ಞಾನ ಆಚಾರಂಗಳ
ನಿಮಿಷಾರ್ಧವಗಲುವನಲ್ಲ ನೋಡ.
ಕುಲಛಲಕ್ಕಾಡದೆ, ಶಿವಶರಣರಲ್ಲಿ ಜಾತಿ ಸೂತಕವ ಬಳಸದೆ,
ದುಷ್ಕಾಯಕ, ಅಕ್ರಿಯಾ, ಅಜ್ಞಾನ,
ಅನಾಚಾರಂಗಳನನುಕರಿಸಿ, ಉದರಪೋಷಣಕ್ಕೆ,
ಲಾಂಛನದಿಚ್ಫೆಗೆ ನುಡಿದು, ಸಮಪಙ್ತಿಯ ಮಾಡದೆ,
ಪರಮಾನಂದ ಸುಖಾಬ್ಧಿಯಲ್ಲಿ ಮುಳುಗಿ, ಅಷ್ಟಾವಧಾನ ಎಚ್ಚರಗುಂದದೆ,
ಮನಪ್ರಾಣಲಿಂಗವಾಮುದೀಗ ಸತ್ಯಶುದ್ಧದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ನಿಜಾನಂದಮೂರ್ತಿ
ಚನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ ಸಂಗನಬಸವೇಶ್ವರ. ॥ ೬೧ ॥

೭೨೪

ಅಯ್ಯ, ಪರಮ ಪತಿವ್ರತೆಗೆ
ಹರಗಣ ಸಾಕ್ಷಿಯಾಗಿ ಕಂಕಣವ ಕಟ್ಟಿದ ಪುರುಷಂಗೆ
ತನ್ನ ತನುಮನವ ಮೀಸಲ ಮಾಡಿ,
ತನ್ನ ಪಿತ-ಮಾತೆ-ಪುತ್ರ-ಮಿತ್ರರ ಸಂಗವ ಸೋಂಕದೆ,
ಅವರೊಡವೆಗಿಚ್ಛೈಸಿ ನಡೆನುಡಿಗಳಾಲಿಸದೆ,
ತನ್ನ ರಮಣನ ದ್ರವ್ಯಾಭರಣವ ಹಾರೈಸಿ,
ಆತನ ನುಡಿಯೆ ಮಹಾಪ್ರಸಾದವೆಂದು ಪ್ರತಿನುಡಿಯ ನುಡಿಯದೆ,
ಸರ್ವಾವಸ್ಥೆಯಲ್ಲಿ ಆ ರಮಣನ ರತಿಸಂಯೋಗಾನುಸಂಧಾನದಿಂದ
ಎರಡಳಿದಿರುವ ಸತ್ಯಾಂಗನೆಯಂತೆ
ಶ್ರೀಗುರುವಿನ ಕರಗರ್ಭಮಧ್ಯದಲ್ಲಿ ಜನಿತವಾದ ಲಿಂಗಭಕ್ತಗಣ
ಸತಿ ಸುತ ಪಿತ ಮಾತೆ ಬಂಧು ಬಳಗ ಒಡಹುಟ್ಟಿದರು ಮೊದಲಾಗಿ
ಪರಶಿವಲಿಂಗ ಜಂಗಮತೀರ್ಥಪ್ರಸಾದ ಮಂತ್ರದಲ್ಲಿ ಮುಳುಗಿ,
ಲೋಕದ ಶೈವಮಾರ್ಗಿಗಳಂತೆ
ಹಲವು ಕ್ಷೇತ್ರ, ಹಲವು ತೀರ್ಥ, ಹಲವು ನೇಮ ವ್ರತಗಳಿಗೆ ಅಡಿಯಿಡದೆ

ವಾಚಕ-ಮಾನಸ-ಕಾಯಕ ಮೊದಲಾದ ಸಮಸ್ತತತ್ವಂಗಳ
ಸ್ವಪಾಕವ ಮಾಡಿ ನಿಷ್ಕಳಂಕ ಪರಶಿವಲಿಂಗಜಂಗಮಕ್ಕೆ ಸಮರ್ಪಿಸಿ,
ಅವರೊಕ್ಕುಮಿಕ್ಕ ಹರುಷಾನಂದ ಮಹಾಪ್ರಸಾದದಲ್ಲಿ ಸಂತೃಪ್ತನಾಗಿ,
ಇಷ್ಟಲಿಂಗಬಾಹ್ಯವಾದ ಜಡಶೈವ ನಡೆನುಡಿಗಳ
ಆಲಿಸದಿಪ್ಪುದೆ ಏಕಾಗ್ರಚಿತ್ತದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಷಟ್ಸ್ಥಲನಾಯಕ
ಚನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ ಸಂಗನಬಸವೇಶ್ವರ. ॥ ೬೨ ॥

೭೨೫

ಅಯ್ಯ, ಸತ್ಯಸದಾಚಾರಲಿಂಗ ಧರಿಸಿದ ಲಿಂಗಭಕ್ತಂಗೆ
ದೀಕ್ಷಾಗುರುವೆ ಕುಲದೈವ, ಶಿಕ್ಷಾಗುರುವೆ ಮನೆದೈವ,
ಜ್ಞಾನಗುರುವೆ ಮನದ ಮಧ್ಯದಲ್ಲಿ ಬೆಳಗುವ ಪರಂಜ್ಯೋತಿರ್ಲಿಂಗವೆಂದು
ಕುಲಮುಂಬಿ, ಮನೆಮುಂಬಿ, ಮನದುಂಬಿ, ಮತ್ತೊಂದು ಇತರ ವಾದಿಗಳಂತೆ,
ಅನ್ಯಾರ್ಚನೆ, ಅನ್ಯಶಾಸ್ತ್ರ, ಅನ್ಯಮಂತ್ರ, ಅನ್ಯಪಾಕವ ಮುಟ್ಟದೆ,
ಸ್ವಪಾಕವ ಮಾಡಿ ಹರಗಣಗುರುಚರಪರಕ್ಕೆ ಸಮರ್ಪಿಸಿ,
ಬಂದ ಬರವ, ನಿಂದ ನಿಲುಕಡೆಯ ತಿಳಿದು,
ತನುವೆಲ್ಲ ದೀಕ್ಷಾಗುರುವಿನ ದೀಕ್ಷಾಪಾದೋದಕ
ಶುದ್ಧಪ್ರಸಾದವೆಂದರಿದ ನಿಜವೆ ಆದಿಪ್ರಸಾದಿಸ್ಥಲ ನೋಡ.
ಮನವೆಲ್ಲ ಶಿಕ್ಷಾಗುರುವಿನ ಶಿಕ್ಷಾಪಾದೋದಕ
ಸಿದ್ಧಪ್ರಸಾದವೆಂದರಿದ ನಿಜವೆ ಅಂತ್ಯಪ್ರಸಾದಿಸ್ಥಲ ನೋಡ.
ಭಾವವೆಲ್ಲ ಜ್ಞಾನಗುರುವಿನ ಜ್ಞಾನಪಾದೋದಕ
ಪ್ರಸಿದ್ಧಪ್ರಸಾದವೆಂದರಿದ ನಿಜವೆ ಸೇವ್ಯಪ್ರಸಾದಿಸ್ಥಲ ನೋಡ.
ಇಂತು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುಸ್ವರೂಪವಾದ
ಲಿಂಗಜಂಗಮದ ಪಾದೋದಕ ಪ್ರಸಾದ
ಒದವಿದಲ್ಲಿ ಆಚರಣೆ, ಸಾಮಾನ್ಯದಲ್ಲಿ ಸಂಬಂಧವಿಟ್ಟುಕೊಂಡು
ಕೊಟ್ಟು ಕೊಳಬಲ್ಲಾತನೆ ನಿಚ್ಚಪ್ರಸಾದಿಯಯ್ಯ.
ಲಿಂಗಜಂಗಮದ ಪಾದೋದಕ ಪ್ರಸಾದವನುಳಿದು
ಜಂಗಮಲಿಂಗದ ಪ್ರಸಾದ ಪಾದೋದಕ ಪ್ರಸನ್ನ ಪ್ರಸಾದವ
ದಿವಾರಾತ್ರಿಗಳೆನ್ನದೆ ಆಚರಣೆಯೆ ಪ್ರಾಣವಾಗಿ
ಕೊಟ್ಟು ಕೊಳಬಲ್ಲಾತನೆ ಅಚ್ಚಪ್ರಸಾದಿಯಯ್ಯ.
ಇವರಿಬ್ಬರಲ್ಲಿ ಅತಿಭೃತ್ಯನಾಗಿ,

ಇವರಿಬ್ಬರಾಚರಣೆಯಲ್ಲಿ ದೃಢಚಿತ್ತದಿಂದ
ಕೊಟ್ಟು ಕೊಳಬಲ್ಲಾತನೆ ಸಮಯಪ್ರಸಾದಿ ನೋಡ.
ಇಂತು ಸರ್ವಾಚಾರ ಸಂಪತ್ತಿನಾಚರಣೆಯ ಸಾಕಾರಲೀಲೆ,
ಅರ್ಪಿತಾವಧಾನ, ಚೇತನಪರಿಯಂತರವು
ಆಚರಿಸುವಂಥದೆ ದೃಢವ್ರತದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಚನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ ಸಂಗನಬಸವೇಶ್ವರ. || ೬೩ ||

೭೨೬

ಅಯ್ಯ, ಶರಣಸತಿ-ಲಿಂಗಪತಿ ಭಾವದಿಂದ
ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ,
ನಿರುಪಾಧಿಕ, ನಿಷ್ಕಳಂಕ, ನಿರಾಳವೆಂಬ ನವವಿಧ ಹಸ್ತಂಗಳಿಂದ
ನವವಿಧ ಪದಾರ್ಥವನ್ನು ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗ-
ಆಚಾರಲಿಂಗ-ಗುರುಲಿಂಗ-ಶಿವಲಿಂಗ-ಜಂಗಮಲಿಂಗ
ಪ್ರಸಾದಲಿಂಗ-ಮಹಾಲಿಂಗವೆಂಬ ನವವಿಧಲಿಂಗಂಗಳಿಗೆ
ಶ್ರದ್ಧಾಭಕ್ತಿ ಮೊದಲಾಗಿ ನವವಿಧ ಭಕ್ತಿಗಳಿಂದ
ಸಮರ್ಪಿಸುವ ಕ್ರಮವೆಂತೆಂದಡೆ :
ತನುಸಂಬಂಧವಾದ ರೂಪುಪದಾರ್ಥವನ್ನು
ಇಷ್ಟಲಿಂಗಕ್ಕೆ ಸಮರ್ಪಿಸಿ,
ಮನಸಂಬಂಧವಾದ ರುಚಿಪದಾರ್ಥವನ್ನು
ಪ್ರಾಣಲಿಂಗಕ್ಕೆ ಸಮರ್ಪಿಸಿ,
ಧನಸಂಬಂಧವಾದ ತೃಪ್ತಿ ಪದಾರ್ಥವನ್ನು
ಭಾವಲಿಂಗಕ್ಕೆ ಸಮರ್ಪಿಸಿ,
ಸುಗಂಧಪದಾರ್ಥವನ್ನು ಆಚಾರಲಿಂಗಕ್ಕೆ ಸಮರ್ಪಿಸಿ,
ಸುರಸಪದಾರ್ಥವನ್ನು ಗುರುಲಿಂಗಕ್ಕೆ ಸಮರ್ಪಿಸಿ,
ಸುರೂಪುಪದಾರ್ಥವನ್ನು ಶಿವಲಿಂಗಕ್ಕೆ ಸಮರ್ಪಿಸಿ,
ಸ್ಪರ್ಶನಪದಾರ್ಥವನ್ನು ಜಂಗಮಲಿಂಗಕ್ಕೆ ಸಮರ್ಪಿಸಿ,
ಸುಶಬ್ದಪದಾರ್ಥವನ್ನು ಪ್ರಸಾದಲಿಂಗಕ್ಕೆ ಸಮರ್ಪಿಸಿ,
ಸುತೃಪ್ತಿಪದಾರ್ಥವನ್ನು ಮಹಾಲಿಂಗಕ್ಕೆ ಸಮರ್ಪಿಸಿ,
ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯಂಗಳು ಮೊದಲಾದ
ಸಮಸ್ತ ಮುಖಂಗಳಲ್ಲಿ ಬರುವ ಪದಾರ್ಥಂಗಳ ಸಮಸ್ತಲಿಂಗಂಗಳಿಗೆ

ಮಿಶ್ರಾಮಿಶ್ರಂಗಳೊಡನೆ ಸಮರ್ಪಿಸಿ,
ಆ ಲಿಂಗಂಗಳ ಸಂತೃಪ್ತಿ ಪರಿಣಾಮಪ್ರಸಾದದಲ್ಲಿ
ಲೋಲುಪ್ತವಾಗಿರುವಂಥಾದೆ ಪಂಚೇಂದ್ರಿಯಾರ್ಪಿತದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ನಿಷ್ಪ್ರಪಂಚ ನಿರಾಲಂಬ
ಚನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ ಸಂಗನಬಸವೇಶ್ವರ. ॥ ೭೬ ॥

೭೨೭

ಅಯ್ಯ, ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದ
ಉತ್ಪತ್ಯವಾಗಿ ನಿರ್ಮಾಯಕಂಥೆಯ ಧರಿಸಿದ ಶಿವಶರಣಂಗೆ
ಅನಂತ ಲೀಲೆಯಲ್ಲಿ ಬೆಂಬತ್ತಿ ಬಂದ ಮಹಾಪಾಪವೆ ಒಂದುರೂಪಾಗಿ,
ಮಾಯಾಜಡಜೀವಿಶರೀರವ ಧರಿಸಿ ಪರಿಪರಿಯಿಂದ
ನಿಂದ್ಯ ಕುಂದು ಅಪಮೃತ್ಯುಗಳು ಬಂದು ತಟ್ಟಿದಲ್ಲಿ
ಅರ್ಪಿತಾವಧಾನ ಸುಖದುಃಖಂಗಳು ಬಂದು ಸೋಂಕಲೊಡನೆ
ಶಿವಶರಣನು ತನ್ನ ಸ್ವಾತ್ಮಜ್ಞಾನದಿಂದರಿದು ನೋಡಿದಲ್ಲಿ
ಈ ಮಾಯಾಜಡಜೀವಾತ್ಮರಿಗೆ ಸೂತ್ರಧಾರಿ ಶಿವನು
ಕಪಟನಾಟಕ ಲೀಲೆಯ ಧರಿಸಿ ಸಕಲಜೀವಾತ್ಮರ ಮಧ್ಯದಲ್ಲಿ
ಅಣುವಿಂಗೆ ಅಣುವಾಗಿ, ಮಹತ್ತಿಂಗೆ ಮಹತ್ತಾಗಿ,
ಆ ಜೀವನೆಂಬ ವಿಧಿಗೆ ಸ್ತುತಿ-ನಿಂದ್ಯ, ಪುಣ್ಯ ಪಾಪ,
ಸಂಕಲ್ಪ-ವಿಕಲ್ಪವೆಂಬ ಕುಟಿಲವ್ಯವಹಾರವ ಕಲ್ಪಿಸಿ,
ಆ ಜೀವನಿಂದ ಭಕ್ತಗಣಂಗಳಲ್ಲಿ
ಅಷ್ಟಾವರಣದ ನಿಷ್ಠಾಪರತ್ವವ ನೋಡಬೇಕೆಂದು
ಅನಂತ ಬಾಧೆಗಳಿಂದ ಬಾಧಿಸಿದಲ್ಲಿ
ಶಿವಶರಣಗಣಂಗಳು ಆ ಬಾಧೆಗೆ ಅಳುಕದೆ
ಚಿಂತಿಸದೆ ಅಷ್ಟಾವರಣಭರಿತರಾಗಿ
ದೇಹಾಭಿಮಾನದ ಹಸಿವು, ತೃಷೆ, ನಿದ್ರೆ, ಆಲಸ್ಯ, ಕುಸಂಗವೆಂಬ
ಕಾಲ-ಕಾಮರ ಪಾಶದಲ್ಲಿ ಬೀಳದೆ,
ಭವಿ ಭಕ್ತನೆಂಬ ವಿಚಾರವನರಿಯದ ದುಷ್ಟರ ಕಂಡರೆ ದೂರದಲ್ಲಿರಬೇಕೆಂಬ
ಗುರುವಾಕ್ಯವ ತಿಳಿದು ಅವರ ಸಂಭಾಷಣೆ-ಸಂಸರ್ಗವಮಾಡದೆ
ಅವರ ಸ್ತುತಿ ನಿಂದ್ಯಾದಿಗಳನಾಲಿಸದೆ,
ನಿಷ್ಕಳಂಕ ಪರಬ್ರಹ್ಮ ಪರಶಿವಲಿಂಗದಲ್ಲಿ
ಸದಾಚಾರಿ-ಸನ್ಮಾರ್ಗಿ-ಸುಸಂಗಿಗಳಿಂದ ಶ್ರದ್ಧಾತುರ ಪರಿಣಾಮದಲ್ಲಿ

ಬಂದು ತಟ್ಟಿದ ಪರಿಣಾಮ ಪಾದೋದಕ ಪ್ರಸಾದದಲ್ಲಿ ಲೋಲುಪ್ತರಾಗಿ,
ತಮ್ಮ ನಡೆನುಡಿಗಳ ಸ್ವಾತ್ಮಜ್ಞಾನದಿಂದ ವಿಚಾರಿಸಿ,
ಪಕ್ವವ ಮಾಡುವಂಥ ನಿಂದ ನಿಲುಕಡೆಯೆ ಅಹಿಂಸೆದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಸಚ್ಚಿದಾನಂದಮೂರ್ತಿ
ಚೆನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. || ೬೫ ||

೭೨೮

ಅಯ್ಯ, ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣ
ಅವಿರಳ ಪರಂಜ್ಯೋತಿ ಸ್ವರೂಪ ಪರಮಾರಾಧ್ಯ
ವೀರಶೈವಾಚಾರ ಷಟ್ಸ್ಥಲ ಪ್ರತಿಪಾದಕ ಶ್ರೀಗುರುಲಿಂಗಜಂಗಮದ
ಕರುಣಕಟಾಕ್ಷೆಯಿಂದ ಅಂಗ-ಮನ-ಭಾವಗಳೆಲ್ಲ
ಶುದ್ಧಸಿದ್ಧಪ್ರಸಿದ್ಧಪ್ರಸಾದದ ಸ್ವರೂಪವಾದ
ಇಷ್ಟ, ಪ್ರಾಣ ಭಾವಲಿಂಗವಾದ ಮೇಲೆ
ಭೃಂಗ ಕೀಡಿಯೋಪಾದಿಯಲ್ಲಿ
ಗುರುಲಿಂಗಜಂಗಮ ಬೇರೆ, ನಾ ಬೇರೆಂಬ ಭಿನ್ನಭೇದವನಳಿದು
ಗುರುಮಾರ್ಗಾಚಾರದಲ್ಲಿ ಪ್ರೇಮವುಳ್ಳಾತನಾಗಿ
ಜ್ಞಾತೃ-ಜ್ಞಾನ-ಜ್ಞೇಯವೆಂಬ ಅಷ್ಟಾಂಗಯೋಗಭ್ರಮಿತರ
ಜಡಕರ್ಮ ಶೈವಮಾರ್ಗದಲ್ಲಿ ಸಾಕ್ಷಾತ್ ಶಿವನೆ ಇಷ್ಟಲಿಂಗಧಾರಕನಾಗಿ,
ಗುರುರೂಪ ಧರಿಸಿ, ಶಿವಭಕ್ತಮಾರ್ಗವ ತೋರದೆ
ಇಚ್ಛೆಯ ನುಡಿದು, ಉದರವ ಹೊರೆವ ವೇಷವ ಕಂಡು,
ಶರಣೆಂದು ಮನ್ನಣೆಯ ಕೊಡದೆ,
ಘೂತಸೋಂಕಿದ ಮನುಜನೋಪಾದಿಯಲ್ಲಿ
ತನ್ನ ಪವಿತ್ರ ಸ್ವರೂಪ ಪರತತ್ವಮೂರ್ತಿಧ್ಯಾನದಿಂದ
ಚಿದ್ಘನಲಿಂಗದೊಳಗೆ ತಾನಾಗಿ, ತನ್ನೊಳಗೆ ಚಿದ್ಘನಲಿಂಗವಾಗಿ,
ಸಪ್ತಧಾತು, ಸಪ್ತವ್ಯಸನಂಗಳಲ್ಲಿ ಕೂಡದೆ
ಲಿಂಗವೆ ತಾನಾದ ಸ್ವಸ್ವರೂಪು ನಿಲುಕಡೆಯೆ ಲಿಂಗನಿಷ್ಠೆದೀಕ್ಷೆ.
ಇಂತುಟೆಂದು ಶ್ರೀಗುರುಲಿಂಗಜಂಗಮಸ್ವರೂಪ ನಿಷ್ಕಳಂಕಮೂರ್ತಿ
ಚೆನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. || ೬೬ ||

೨೨೯

ಅಯ್ಯ, ಸತ್ಯ ಸದಾಚಾರ ಸದ್ಭಕ್ತಿ ಜ್ಞಾನ ವೈರಾಗ್ಯ
ಸತ್ಕ್ರಿಯಾ ಸತ್ಕಾಯಕ ಸತ್ಪಾತ್ರಭಿಕ್ಷ ಲೀಲೆಯ ಧರಿಸಿ,
ಲೋಕಪಾವನಾರ್ಥವಾಗಿ ಇಚ್ಛೆಯ ನುಡಿಯದೆ,
ನಡೆನುಡಿ ಹೀನವಾದ ಸೂತಕ ಪಾತಕರ ಸಂಗವ ಹೊದ್ದದೆ,
ಗುರುಮಾರ್ಗಾಚಾರಕ್ಕೆ ಕುಂದು ಕೊರತೆಗಳ ತಾರದೆ,
ಸನ್ಮಾರ್ಗದಲ್ಲಾಚರಿಸುವ ಗುರುಲಿಂಗಜಂಗಮ ಸದ್ಭಕ್ತಿ ಚಾರಿತ್ರವನುಳ್ಳ
ಶಿವಶರಣ ಗಣಂಗಳಲ್ಲಿ ಕುಂದು ನಿಂದ್ಯಗಳ ಕಲ್ಪಿಸದೆ
ಎಚ್ಚರದಪ್ಪಿದಲ್ಲಿ ಬಹುಪರಾಕು ಸ್ವಾಮಿ
ಶರಣಗಣಂಗಳು ಹೋದ ಮಾರ್ಗವಿದಲ್ಲವೆಂದು
ಭೃತ್ಯಭಕ್ತಿಯಿಂದ ಹೇಳಿ, ಅಜ್ಞಾನ-ಅಕ್ರಿಯ-ಅನಾಚಾರವೆಂಬ
ಮಾಯಾಶರಧಿಯಲ್ಲಿ ಮುಳುಗಿ ಹೋಗುವ
ಇಷ್ಟಲಿಂಗಧಾರಕ ಭಕ್ತಗಣಂಗಳ ಕಂಡು
ಅಗಸ ತನ್ನ ಮಡಿ ಮೈಲಿಗೆ ಹೊರುವ ಕತ್ತೆಯು
ಜಿಹ್ವಾಲಂಪಟ ಗುಹ್ಯಲಂಪಟದಿಚ್ಛೆಗೆ ಹೋಗಿ
ಹಳ್ಳ ಕೊಳ್ಳ ಕೆರೆ ಬಾವಿಯೊಳಗೆ ಬಿದ್ದು ಹೋಗುವದ ಕಂಡು
ಕಿವಿಯ ಹಿಡಿದು ಎಳದುಕೊಂಡೋಪಾದಿಯಲ್ಲಿ
ಹಸ್ತ-ಪಾದವ ಹಿಡಿದು ಕಡೆಗೆಳೆದು
ಶ್ರುತಿ-ಗುರು-ಸ್ವಾನುಭಾವವ ತೋರಿ,
ಮತ್ತವರ ಕರುಣವ ಹಡದು, ಏಕಮಾರ್ಗದಲ್ಲಿ ಆಚರಿಸಿ,
ನಿಷ್ಕಲಪರಶಿವಲಿಂಗದಲ್ಲಿ ಶಿಖಿ-ಕರ್ಪುರದಂತೆ
ರತಿ ಸಂಯೋಗವುಳ್ಳಂಥಾದೆ ಮನೋರ್ಲಯದೀಕ್ಷೆ.
ಇಂತುಟೆಂದು ಶ್ರೀಗುರು ನಿರಾಲಂಭಮೂರ್ತಿ
ಚೆನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ. || ೬೭ ||

೨೩೦

ಅಯ್ಯ, ಶ್ರೀಗುರುಲಿಂಗಜಂಗಮ ಕರುಣ ಕಟಾಕ್ಷೆಯಿಂದ
ಶ್ರುತಿ ಗುರು ಶ್ವಾನುಭಾವವಿಡಿದು ಹಿಡಿದಂಥ
ಸನ್ಮಾರ್ಗಾಚಾರಕ್ರಿಯೆಗಳ ಅಪಮೃತ್ಯು ಬಂದು ತಟ್ಟಿ
ಪ್ರಾಣತ್ಯಾಗವ ಮಾಡಿದಡು ಅಂಜಿ ಅಳುಕದೆ,

ಪರಮ ಪತಿವ್ರತತ್ವದಿಂದ ಹಿಂದು ಮುಂದಣ ಪುಣ್ಯಪಾಪವನೆಣಿಸದೆ,
ಇಂತು ಶ್ರೀಗುರುವಾಕ್ಯದ ನಿಜನೈಷ್ಠೆಯಿಂದರಿದು,
ನಿಜವೀರಶೈವ ಸದ್ಭಕ್ತಾಚಾರಲಿಂಗಮುಖದಿಂದ ಬಂದ
ಸ್ವಪಾಕವಾದಡು ಸರಿಯೆ,
ಷಣ್ಮತದಿಂದ ಧನ-ಧಾನ್ಯರೂಪಿನಿಂದ ಬಂದ
ಪದಾರ್ಥವಾದಡು ಸರಿಯೆ,
ಭಕ್ತಾಶ್ರಯದಲ್ಲಿ ಸ್ವಪಾಕವ ಮಾಡಿ,
ಸಂಬಂಧಾಚರಣೆಗಳಿಂದ ಪವಿತ್ರಸ್ವರೂಪ ಪಾದೋದಕ ಪ್ರಸಾದವೆನಿಸಿ,
ನಿರ್ವಂಚಕತ್ವದಿಂದ ಸಂಚಲಚಿತ್ತವನುಳಿದು,
ಮಂತ್ರಸ್ಮರಣೆಯಿಂದ ಸರ್ವಾಚಾರ ಸಂಪತ್ತಿನಾಚರಣೆಯನೊಳಕೊಂಡು,
ಸಮಸ್ತಲೋಕ ಪಾವನಮೂರ್ತಿ ನಿಷ್ಕಲ ಪರಶಿವಲಿಂಗಜಂಗಮಕ್ಕೆ
ಕೊಟ್ಟುಕೊಂಬ ಸದ್ಭಕ್ತ ಜಂಗಮದ ಚರಣಕಮಲಧೂಳನವೆ
ದ್ವಿತೀಯ ಕೈಲಾಸ ಶಿವಮಂದಿರವೆಂದು
ಹಿಂದು-ಮುಂದಣ ಆಶೆ-ಆಮಿಷದ ಭ್ರಾಂತು-ಭ್ರಮೆಗಳನುಳಿದು,
ಧ್ಯಾನ-ಮೌನ-ನೇಮ-ನಿತ್ಯ-ಸತ್ಯ-ಸದ್ಭಾವವೆಂಬ
ಷಡ್ಗುಣೈಶ್ವರ್ಯ ಸಂಪದವ ನಿಷ್ಕಲಪರತತ್ವಲಿಂಗದಿಂ ಪಡದು,
ಆ ಲಿಂಗದೊಡನೆ ಭೋಗಿಸಿ, ನಿಷ್ಕಲ ಪರತತ್ವಮೂರ್ತಿ ತಾನಾದ
ನಿಜಮೋಕ್ಷದಿರವೆ ಸದ್ಯೋನ್ಮುಕ್ತಿದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಚೆನ್ನಬಸವರಾಜೇಂದ್ರನು
ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡ,
ಸಂಗನಬಸವೇಶ್ವರ. || ೬೮ ||

೭೩೧

ಅಯ್ಯ, ಕೇಳ, ಪ್ರಮಥಗಣಂಗಳೆಲ್ಲ
ಷಡ್ವಿಧಭಕ್ತಿಯೆಂಬ ಪರಮಾಮೃತವ ಸೇವಿಸಿ,
ಪ್ರವೃತ್ತಿಮಾರ್ಗದಲ್ಲಿ ಚರಿಸುವ ಆರು ವೈರಿಗಳ ಸಂಗವ ತ್ಯಜಿಸಿ,
ನಿವೃತ್ತಿ ಮಾರ್ಗದಲ್ಲಿ ಚರಿಸುವ ಷಡ್ಗುಣಗಳ ಸಂಗವ ಸಾಧಿಸಿ,
ಜಂಗಮದ ಆಚಾರ ವಿಚಾರವ ತಿಳಿದು,
ಷಟ್‌ಸ್ಥಲಮಾರ್ಗದಲ್ಲಿ ನಿಂದು,
ಭಕ್ತಿ-ಜ್ಞಾನ-ವೈರಾಗ್ಯದಲ್ಲಾಚರಿಸಿದ ವಿಚಾರವೆಂತೆಂದಡೆ :
ಅನಾದಿನಿರಂಜನ-ಅಕಾಯಚರಿತ್ರ-ನಿರಾಲಂಬ-ಪರಶಿವಮೂರ್ತಿ
ಸಾಕ್ಷಾತ್ ಶ್ರೀಗುರುದೇವನಿಂದ

ಏಕವಿಂಶತಿ ವೇಧಾ-ಮಂತ್ರ-ಕ್ರಿಯಾದೀಕ್ಷೆಯ ಪಡೆದು,
ತನ್ನ ತಾನರ್ಚಿಸಿ, ಆ ಶ್ರೀಗುರುದೇವನ
ಲಿಂಗಜಂಗಮಲೀಲೆ ಹೇಂಗುಂಟೊ ಹಾಂಗೆ,
ಭಕ್ತಿಯ ಮಾಡಿ, ಆ ಶ್ರೀಗುರು-ಲಿಂಗ-ಜಂಗಮದಂತಃಕರಣವೆಂಬ
ಪರಮಾಮೃತಸುಧೆಯೊಳಗೆ ಲೋಲುಪ್ತರಾಗಿ,
ನಿರಾವಯ ಸಮಾಧಿಯಲ್ಲಿ ಬಯಲಾದರು ನೋಡ.
ಅದರ ವಿಚಾರವೆಂತೆಂದಡೆ :
ಭಕ್ತಿಸ್ಥಲಕ್ಕೆ ಕಾರಣವಾದ ಬಸವಣ್ಣನೆ ಲಿಂಗಲಾಂಛನಗಳ ನೋಡಿ,
ತನು-ಮನ-ಧನವನೊಪ್ಪಿಸಿ ಶರಣೆಂದರಯ್ಯ !
ಮಹೇಶಸ್ಥಲಕ್ಕೆ ಕಾರಣವಾದ ಮಡಿವಾಳದೇಶಿಕೇಂದ್ರನೆ
ಲಿಂಗಲಾಂಛನ-ವಿಭೂತಿ-ರುದ್ರಾಕ್ಷೆ-ಪಂಚಾಚಾರವ ನೋಡಿ
ತನುಮನಧನವನೊಪ್ಪಿಸಿ ಶರಣೆಂದರಯ್ಯ.
ಪ್ರಸಾದಿಸ್ಥಲಕ್ಕೆ ಕಾರಣವಾದ ಮರುಳಶಂಕರದೇವನೆ
ಲಿಂಗಲಾಂಛನ-ವಿಭೂತಿ-ರುದ್ರಾಕ್ಷೆ-ಮಂತ್ರ
ಪಂಚಾಚಾರದಾಚರಣೆ, ಸಪ್ತಾಚಾರದ ಸಂಬಂಧದ ನಡೆನುಡಿಯ ವಿಚಾರಿಸಿ,
ತನುಮನಧನವನೊಪ್ಪಿಸಿ ಶರಣೆಂದರಯ್ಯ.
ಪ್ರಾಣಲಿಂಗಿಸ್ಥಲಕ್ಕೆ ಕಾರಣವಾದ ಸಿದ್ಧರಾಮೇಶ್ವರನೆ
ಲಿಂಗಲಾಂಛನ, ಶ್ರೀವಿಭೂತಿ, ರುದ್ರಾಕ್ಷೆ, ಪಂಚಮಂತ್ರ,
ದ್ವಾದಶಾಚಾರ ಮೊದಲಾದ ಸರ್ವಾಚಾರ ಸಂಪತ್ತಿನಾಚರಣೆ
ಸರ್ವಾಂಗದಲ್ಲಿ ಸೂನು ಕೂನುಗಳಿಲ್ಲದೆ, ನಡೆನುಡಿಗಳು ಹೊಪ್ಪಲ್ಲದೆ,
ನಿರಾಭಾರಿ ವೀರಶೈವವ ನೋಡಿ ಇದೆ ಪರವಸ್ತುವೆಂದು
ತನುಮನಧನವನೊಪ್ಪಿಸಿ ಶರಣೆಂದರಯ್ಯ.
ಶರಣಸ್ಥಲಕ್ಕೆ ಕಾರಣವಾದ ಚೆನ್ನಬಸವೇಶ್ವರನೆ
ಇಂತು ಚತುರ್ವಿಧಮೂರ್ತಿಗಳು ವಿಚಾರಿಸಿದ ಆಚರಣೆಯ ನೋಡಿ,
ಗುರು-ಸೂತ್ರ-ಗೋತ್ರ-ಸಂಪ್ರದ ದೀಕ್ಷೆಯ ವಿಚಾರಿಸಿ,
ಲಿಂಗಾಂಗ ಷಟ್ಸ್ಥಾನಂಗಳ ನೋಡಿ,
ಗುರುಮಾರ್ಗಾಚಾರ ನಡೆನುಡಿಗಳ ವಿಚಾರಿಸಿ,
ಸ್ವಾನುಭಾವ ಸಕೀಲದ ಗೊತ್ತ ತಿಳಿದು,
ಲಾಂಛನವ ನೋಡಿ ಮನ್ನಿಸಿ,
ತನುಮನಧನವನೊಪ್ಪಿಸಿ ಶರಣೆಂದರಯ್ಯ.
ಐಕ್ಯಸ್ಥಲಕ್ಕೆ ಕಾರಣವಾದ ಅಜಗಣ್ಣಗಳೆ

ಬಸವ, ಮಡಿವಾಳ, ಮರುಳಶಂಕರ, ಸಿದ್ಧರಾಮ, ಚೆನ್ನಬಸವ
ಮೊದಲಾದ ಮಹಾಗಣಂಗಳು
ಅರ್ತಿ-ಉತ್ಸಾಹದಿಂದ ಭಕ್ತಿಯ ಮಾಡಿದ ಜಂಗಮವೆ
ನನಗೆ ಮಹಾಪ್ರಸಾದವೆಂದು ಅವರಡಿಗಳಿಗೆ ವಂದಿಸಿ,
ತನು-ಮನ-ಧನವನೊಪ್ಪಿಸಿ ಶರಣೆಂದರಯ್ಯ.
ನಿರವಯಸ್ಥಲಕ್ಕೆ ಕಾರಣವಾದ ಪ್ರಭುದೇವನೆ
ಆವ ಮತವೆಂದು ನೋಡದೆ,
ಬಾಲಬ್ರಹ್ಮಿ-ಬಳಸಿಬ್ರಹ್ಮಿಯೆಂಬ ಸಂಸಾರ ಸಂಕಲ್ಪಸೂತಕವನೆಣಿಸದೆ,
ಸರ್ವಾಂಗದವಯವಂಗಳ ನೋಡಿ, ಸರ್ವಸಂಗಪರಿತ್ಯಾಗದಿಂದ,
ದ್ವಾದಶ ಮಲಂಗಳ ತ್ಯಜಿಸಿ, ಭಕ್ತಿ-ಜ್ಞಾನ-ವೈರಾಗ್ಯದಿಂದ
ಸಮಸ್ತವಾದ ಭೋಗಯೋಗಾದಿಗಳಿಗೆ ಹೇವರಿಸಿ,
ನಿರಾಸಕತ್ವದಿಂದ ಶಿವಧೋ ಎಂದು ಗುರೂಪಾವಸ್ಥೆಯಂ ಮಾಡುವ
ಜ್ಞಾನಕಲಾತ್ಮಂಗೆ ಜಂಗಮಾಕೃತಿಯಿಂದ ಪ್ರತ್ಯಕ್ಷವಾಗಿ,
ಆ ಜ್ಞಾನಕಲಾತ್ಮನ ಉಪಾವಸ್ಥೆಯನೊಂದಿಸಿ,
ಆತಂಗೆ ಅಂಜಬೇಡವೆಂದು ಅಭಯಹಸ್ತವನಿತ್ತು,
ರೇವಣಸಿದ್ಧೇಶ್ವರ ಮೊದಲಾದ ಗಣಾಚಾರ್ಯರ ಮಧ್ಯದಲ್ಲಿ
ಈ ಜ್ಞಾನಕಲಾತ್ಮನನೊಪ್ಪಿಸಿ, ಅವರಿಂದ ನಿರಾಕಾರವಾದ
ಪ್ರಾಣಲಿಂಗವ ಬಹಿಷ್ಕರಿಸಿ, ಪಂಚಕಲಶಸೂತ್ರದಿಂದ
ಪ್ರಮಥಗಣ ಸಾಕ್ಷಿಯಾಗಿ ಆತನ ಷಡ್ವಿಧಸ್ಥಾನದಲ್ಲಿ ಸ್ಥಿರಗೊಳಿಸಿ,
ಅಂತರಂಗ ಬಹಿರಂಗದಲ್ಲಿ ಅಷ್ಟವಿಧಾರ್ಚನೆ, ಷೋಡಶೋಪಚಾರ
ಭಕ್ತಿಗಳನರುಪಿ, ಆ ಪರಶಿವಲಿಂಗದಲ್ಲಿ ನೈಷ್ಠೆಯ ನೋಡಿ,
ಪ್ರಮಥಗಣಾರಾಧ್ಯ ಭಕ್ತ ಮಹೇಶ್ವರರೊಡಗೂಡಿ,
ಏಕವಿಂಶತಿ ದೀಕ್ಷೆ ಮೊದಲಾಗಿ, ಪ್ರಮಥರು ನುಡಿದ
ಎರಡೆಂಬತ್ತು ಕೋಟಿ ವಚನಾನುಭಾವದ
ಉದಾಹರಣೆಯ ಬೋಧಿಸಿ, ಸ್ವಸ್ವರೂಪು ನಿಲುಕಡೆಯ ಬೋಧಿಸಿ,
ನಾನು ನೀನು ಎಂಬ ಭಿನ್ನಭಾವವನಳಿದು,
ಏಕಸ್ವರೂಪವೆಂಬ ಅಭಿನ್ನಲೀಲೆಯಿಂದ
ಪಾದೋದಕ ಪ್ರಸಾದದಲ್ಲಿ ಏಕಭಾಜನವ ಮಾಡಿದಮೇಲೆ,
ಶ್ರೀಗುರು ಬಸವ ಮೊದಲಾದ ಸಕಲಪ್ರಮಥಗಣಾರಾಧ್ಯರ ಕರದು,
ಇಲ್ಲೊಂದು ನಿಜವಸ್ತು ಉಂಟೆಂದು ಹೇಳಿ,
ತಾವು ಮೊದಲು ಶರಣು ಹೊಕ್ಕು.

ತಮ್ಮ ಹಿಂದೆ ಶರಣಗಣಂಗಳೆಲ್ಲ ಶರಣುಹೊಕ್ಕು,
ಅಡಿ ಮುಡಿಯಿಂದ ವಸ್ತುವ ಬೆಸಗೊಂಡು
ಆ ಲಿಂಗಜಂಗಮದೇವರೊಡಗೂಡಿ
ಬಯಲೊಳಗೆ ಮಹಾಬಯಲಾದರು ನೋಡ
ಸಂಗನಬಸವೇಶ್ವರ. ॥ ೬೯ ॥

೭೩೨

'ಅಯ್ಯ, ಷೋಡಶಕಮಲಂಗಳಲ್ಲಿ ನೆಲಸಿರ್ಪ
ಲಿಂಗಂಗಳಭಿಧಾನವ ಕರುಣಿಸಬೇಕಯ್ಯ ಶ್ರೀಗುರುನಾಥನೆ'
'ಕೇಳಯ್ಯ, ಎನ್ನ ಕಂಗಳ ಹೃದಯದಲ್ಲಿ ನೆಲಸಿರ್ಪ
ವರಕುಮಾರ ಶಿಷ್ಯೋತ್ತಮನೆ'
ಸುಚಿತ್ತಕಮಲದಲ್ಲಿ ಆಚಾರಲಿಂಗವಾಗಿ ನೆಲಸಿರ್ಪರಯ್ಯ.
ಸುಬುದ್ಧಿಕಮಲದಲ್ಲಿ ಗುರುಲಿಂಗವಾಗಿ ನೆಲಸಿರ್ಪರಯ್ಯ.
ನಿರಹಂಕಾರಕಮಲದಲ್ಲಿ ಶಿವಲಿಂಗವಾಗಿ ನೆಲಸಿರ್ಪರಯ್ಯ.
ಸುಮನಕಮಲದಲ್ಲಿ ಜಂಗಮಲಿಂಗವಾಗಿ ನೆಲಸಿರ್ಪರಯ್ಯ.
ಸುಜ್ಞಾನಕಮಲದಲ್ಲಿ ಪ್ರಸಾದಲಿಂಗವಾಗಿ ನೆಲಸಿರ್ಪರಯ್ಯ.
ಸದ್ಭಾವಕಮಲದಲ್ಲಿ ಮಹಾಲಿಂಗವಾಗಿ ನೆಲಸಿರ್ಪರಯ್ಯ.
ನಿರುಪಾಧಿಕಕಮಲದಲ್ಲಿ ಚಿದ್ಘನಲಿಂಗವಾಗಿ ನೆಲಸಿರ್ಪರಯ್ಯ.
ನಿಷ್ಪ್ರಪಂಚಕಮಲದಲ್ಲಿ ಚಿತ್ಪ್ರಾಣಲಿಂಗವಾಗಿ ನೆಲಸಿರ್ಪರಯ್ಯ.
ಇಂತೀ ಸಾಕಾರವಾದ ಅಷ್ಟದಳಕಮಲದಲ್ಲಿ
ಅಷ್ಟವಿಧಲಿಂಗಂಗಳಾಗಿ ನೆಲಸಿರ್ಪಾತನು ತಾನೆ ನೋಡ.
ಇನ್ನು ನಿರಾಕಾರವಾದ ಅಷ್ಟದಳಕಮಲಂಗಳಲ್ಲಿ ನೆಲಸಿರ್ಪ
ಲಿಂಗಂಗಳಾವಾವೆಂದಡೆ :
ನಿರಾಲಂಬಕಮಲದಲ್ಲಿ ನಿಷ್ಕಳಂಕಲಿಂಗವಾಗಿ ನೆಲಸಿರ್ಪರಯ್ಯ.
ನಿರಾತಂಕಕಮಲದಲ್ಲಿ ನಿಶ್ಶೂನ್ಯಲಿಂಗವಾಗಿ ನೆಲಸಿರ್ಪರಯ್ಯ.
ನಿಷ್ಕಾಮಕಮಲದಲ್ಲಿ ನಿರಂಜನಲಿಂಗವಾಗಿ ನೆಲಸಿರ್ಪರಯ್ಯ.
ನಿಷ್ಪ್ರಪಂಚಕಮಲದಲ್ಲಿ ನಿಷ್ಪ್ರಪಂಚಲಿಂಗವಾಗಿ ನೆಲಸಿರ್ಪರಯ್ಯ.
ಸಚ್ಚಿದಾನಂದಕಮಲದಲ್ಲಿ ಸಚ್ಚಿದಾನಂದಲಿಂಗವಾಗಿ ನೆಲಸಿರ್ಪರಯ್ಯ.
ನಿರ್ನಾಮಕಮಲದಲ್ಲಿ ನಿರ್ನಾಮಲಿಂಗವಾಗಿ ನೆಲಸಿರ್ಪರಯ್ಯ.
ನಿರಾಳಕಮಲದಲ್ಲಿ ನಿರಾಳಲಿಂಗವಾಗಿ ನೆಲಸಿರ್ಪರಯ್ಯ.
ಸುರಾಳಕಮಲದಲ್ಲಿ ಸುರಾಳಲಿಂಗವಾಗಿ ನೆಲಸಿರ್ಪರು ನೋಡ.
ಇಂತು ಸಾಕಾರ-ನಿರಾಕಾರಲೀಲೆಯಿಂದ

ತಿಳಿದುಪ್ಪ ಹೆರೆದುಪ್ಪದೋಪಾದಿಯಲ್ಲಿ
ಷೋಡಶಕಮಲದಲ್ಲಿ ಷೋಡಶಲಿಂಗಂಗಳಾಗಿ ನೆಲಸಿರ್ಪ
ಅನಾದಿ ನಿಷ್ಕಳಂಕ ಜ್ಯೋತಿರ್ಮಯ ಪರಶಿವಲಿಂಗಪ್ರಭು ತಾನೆ ನೋಡ
ಸಂಗನಬಸವೇಶ್ವರ. || ೭೦ ||

೭೩೩

ಅಯ್ಯ, ಪ್ರವೃತ್ತಿಮಾರ್ಗದಲ್ಲಿ ಚರಿಸುವ
ಅಧೋ ಕುಂಡಲಿ ಭೇದವೆಂತೆಂದಡೆ :
ದ್ವಾದಶಮಲಂಗಳೆ ಅಂಗವಾಗಿರ್ಪುದಯ್ಯ.
ಷೋಡಶಮದಂಗಳೆ ಪ್ರಾಣವಾಗಿರ್ಪುದಯ್ಯ.
ಸಪ್ತವ್ಯಸನಂಗಳೆ ಸಂಗವಾಗಿರ್ಪುದಯ್ಯ.
ದುರ್ಗುಣಂಗಳೆ ವಸ್ತ್ರಾಭರಣವಾಗಿರ್ಪುದಯ್ಯ.
ಅನಾಚಾರಂಗಳೆ ನಡೆನುಡಿಯಾಗಿರ್ಪುದಯ್ಯ.
ಅಸತ್ಯವೆ ವಾಹನವಾಗಿರ್ಪುದಯ್ಯ.
ಕುಭಾವಂಗಳೆ ಪಿತಮಾತೆಯಾಗಿರ್ಪುದಯ್ಯ.
ಕುಚಿತ್ತಗಳೆ ಬಂಧುಬಳಗವಾಗಿರ್ಪುದಯ್ಯ.
ಕುಬುದ್ಧಿಗಳೆ ಒಡಹುಟ್ಟಿದರಾಗಿರ್ಪುದಯ್ಯ.
ದುರಹಂಕಾರಗಳೆ ನೆಂಟರಾಗಿರ್ಪುದಯ್ಯ.
ಕುಮನವೆ ಸ್ತ್ರೀಯಳಾಗಿರ್ಪುದಯ್ಯ.
ಅಜ್ಞಾನವೆ ಮಂದಿರವಾಗಿರ್ಪುದಯ್ಯ.
ದುರ್ಭಾವವೆ ಆಹಾರವಾಗಿರ್ಪುದಯ್ಯ.
ಅರಿಷಡ್ವರ್ಗವೆ ದೈವವಾಗಿರ್ಪುದಯ್ಯ.
ಷಡ್ಭಾವವಿಕಾರಂಗಳೆ ಅವಯವಂಗಳಾಗಿರ್ಪುದಯ್ಯ.
ಆಸೆಯೆ ಧನಧಾನ್ಯವಾಗಿರ್ಪುದಯ್ಯ.
ಇಂತು ಸಂಸಾರವೆಂಬ ಪಾಶದಲ್ಲಿ
ಜನ್ಮ-ಜರೆ-ಮರಣಂಗಳಿಂದ ತಿರುಗುವ ಜೀವನೆ
ಅಧೋಕುಂಡಲಿಸರ್ಪನೆನಿಸುವುದಯ್ಯ.
ಆ ಸರ್ಪನೆ ಮೂಲಹಂಕಾರವೆಂಬ ಪಟ್ಟಣವ ರಚಿಸಿ
ಜಿಹ್ವಾಲಂಪಟ-ಗುಹ್ಯಲಂಪಟದಲ್ಲಿ ಮುಳುಮುಳುಗಿ ತೇಲುತ್ತಿರ್ಪುದು ನೋಡ
ಸಂಗನಬಸವೇಶ್ವರ. || ೭೧ ||

೭೩೪

ಅಯ್ಯ, ನಿವೃತ್ತಿಮಾರ್ಗದಲ್ಲಿ ಚರಿಸುವ
ಊರ್ಧ್ವಕುಂಡಲಿ ಭೇದವೆಂತೆಂದಡೆ :
ಕಿಂಕುರ್ವಾಣಭಕ್ತಿಯೆ ಅಂಗವಾಗಿರ್ಪುದಯ್ಯ.
ಸದ್ಗುಣವೆ ಪ್ರಾಣವಾಗಿರ್ಪುದಯ್ಯ.
ಸದ್ಧರ್ಮವೆ ಸಂಗವಾಗಿರ್ಪುದಯ್ಯ.
ಸಚ್ಚಿದಾನಂದವೆ ವಸ್ತ್ರಾಭರಣವಾಗಿರ್ಪುದಯ್ಯ.
ಸನ್ಮಾರ್ಗಾಚಾರಂಗಳೆ ನಡೆನುಡಿಯಾಗಿರ್ಪುದಯ್ಯ.
ಸುಸತ್ಯವೆ ವಾಹನವಾಗಿರ್ಪುದಯ್ಯ.
ದಯಾಂತಃಕರಣವೆ ಪಿತಮಾತೆಯಾಗಿರ್ಪುದಯ್ಯ.
ಸುಚಿತ್ತಂಗಳೆ ಬಂಧುಬಳಗವಾಗಿರ್ಪುದಯ್ಯ.
ಸುಬುದ್ಧಿಗಳೆ ಒಡಹುಟ್ಟಿದರಾಗಿರ್ಪುದಯ್ಯ.
ನಿರಹಂಕಾರಂಗಳೆ ನಂಟರಾಗಿರ್ಪುದಯ್ಯ.
ಸುಮನವೆ ಸ್ತ್ರೀಯಳಾಗಿರ್ಪುದಯ್ಯ.
ಸುಜ್ಞಾನವೆ ಮಂದಿರವಾಗಿರ್ಪುದಯ್ಯ.
ಸದ್ಭಾವವೆ ಆಹಾರವಾಗಿರ್ಪುದಯ್ಯ.
ನಿತ್ಯನಿಜವೇ ದೈವವಾಗಿರ್ಪುದಯ್ಯ.
ನಿರಾಸೆಯೆ ಅವಯವಂಗಳಾಗಿರ್ಪುದಯ್ಯ.
ನಿಷ್ಕಾಮಂಗಳೆ ಧನಧಾನ್ಯಂಗಳಾಗಿರ್ಪುದಯ್ಯ.
ಇಂತು ನಿಸ್ಸಂಸಾರವೆಂಬ ಅವಿರಳಾನಂದದಿಂದ
ಸದ್ಗುರು ಉಪಾವಸ್ಥೆಯ ಮಾಡುವ ಸಜ್ಜೀವನೆ
ಊರ್ಧ್ವಕುಂಡಲಿಸರ್ಪನೆನಿಸುವುದಯ್ಯ.
ಆ ಸರ್ಪನೆ ಮಾಯಾಪ್ರಪಂಚ ಹೇವರಿಸಿ ಅನಂತಮುಖದಿಂದ
ನಿರ್ಮಾಯಸ್ವರೂಪವಾದ ಮಹಾಪ್ರಮಥಗಣಂಗಳತ್ತ ಅಭಿಮುಖವಾಗಿರ್ಪುದಯ್ಯ.
ಈ ಸರ್ಪಂಗೆ ಬೇಕುಬೇಡವೆಂಬ ಜೀಹ್ವಾಲಂಪಟ-ಗುಹ್ಯಲಂಪಟವಿಲ್ಲ ನೋಡ,
ಸಂಗನಬಸವೇಶ್ವರ. || ೭೨ ||

೭೩೫

ಅಯ್ಯ, ಇಷ್ಟು ಪ್ರವೃತ್ತಿ-ನಿವೃತ್ತಿ, ಅಧೋಕುಂಡಲಿ-ಊರ್ಧ್ವಕುಂಡಲಿಗಳೆಂಬ
ಉಭಯಮಾರ್ಗವ ಶಿವಾಜ್ಞೆಯಿಂದ ತೀರ್ಚಿಸಿ,
ಶಿವಯೋಗ, ಶಿವಾಚಾರ, ಶಿವಭಕ್ತಿ, ಶಿವಾನಂದಪರಿಣಾಮದಲ್ಲಿ ಚರಿಸುವ
ಮಧ್ಯಕುಂಡಲಿಸ್ವರೂಪವಾದ ಮಹಾಶೇಷನ ಭೇದವೆಂತೆಂದಡೆ :

ಷೋಡಶ ವರ್ಣವೆ ಅಂಗವಾಗಿರ್ಪುದಯ್ಯ.
ಸರ್ವಾಚಾರಸಂಪತ್ತಿನಾಚರಣೆಯೆ ಪ್ರಾಣವಾಗಿರ್ಪುದಯ್ಯ.
ಚತುರ್ದಶಪ್ರಣಮಂಗಳೆ ತತ್ಸಂಗವಾಗಿರ್ಪುದಯ್ಯ.
ಭಕ್ತಿ-ಜ್ಞಾನ-ವೈರಾಗ್ಯ-ಷಟ್ಸ್ಥಲವೆ ವಸ್ತ್ರಾಭರಣವಾಗಿರ್ಪುದಯ್ಯ.
ಹರಗುರುವಾಕ್ಯವೆ ನಡೆನುಡಿಯಾಗಿರ್ಪುದಯ್ಯ.
ಪಂಚಾಚಾರಂಗಳೆ ವಾಹನವಾಗಿರ್ಪುದಯ್ಯ.
ಕರುಣ-ವಿನಯ-ಸಮತಾ-ಶುದ್ಧ-ಸಿದ್ಧ-ಪ್ರಸಿದ್ಧವೆ
ಪಿತಮಾತೆಯಾಗಿರ್ಪುದಯ್ಯ.
ಚತುರ್ವರ್ಣ ಮೊದಲಾಗಿ ಬಾವನ್ನವರ್ಣಂಗಳೆ
ಬಂಧುಬಳಗವಾಗಿರ್ಪುದಯ್ಯ.
ಷಡಕ್ಷರಮಂತ್ರ ಮೊದಲಾಗಿ ನೂರೆಂಟು ಮಂತ್ರಮಾಲಿಕೆಯೆ
ಒಡಹುಟ್ಟಿದರಾಗಿರ್ಪುದಯ್ಯ.
ಸಪ್ತಕೋಟಿ ಮಹಾಮಂತ್ರಂಗಳೆ ನಂಟರಾಗಿರ್ಪುದಯ್ಯ.
ಷೋಡಶಭಕ್ತಿಗಳೆ ಅರ್ಧಾಂಗಿಯಾಗಿರ್ಪುದಯ್ಯ.
ನೂರೆಂಟು ಸಕೀಲು ಮೊದಲಾಗಿ ಸಮಸ್ತಸಕೀಲಂಗಳೆ
ಮಂದಿರವಾಗಿರ್ಪುದಯ್ಯ.
ಸ್ವಾನುಭಾವಸೂತ್ರವೆ ನಿತ್ಯತೃಪ್ತಿಯಾಗಿರ್ಪುದಯ್ಯ.
ಮಹಾಪ್ರಕಾಶಸ್ವರೂಪವಾದ ಚಿದ್ಬೆಳಗೆ ದೈವವಾಗಿರ್ಪುದಯ್ಯ.
ಷೋಡಶಾವಧಾನಂಗಳೆ ಅವಯವಂಗಳಾಗಿರ್ಪುದಯ್ಯ.
ನಿಜನೈಷ್ಠೆ, ನಿರ್ಲಜ್ಜೆ, ನಿರಾಸೆಯೆಂಬ ನಿಷ್ಪ್ರಪಂಚವೆ
ಧನಧಾನ್ಯವಾಗಿರ್ಪುದಯ್ಯ.
ಇಂತು ನಿಷ್ಕಳಂಕ ಪರಮಾನಂದವೆಂಬ
ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಸ್ವರೂಪದಿಂದ
ಕನ್ನಡಿಯ ಪ್ರತಿಬಿಂಬದಂತೆ, ಇಹಪರಂಗಳೆಂಬ
ಅಧೋಕುಂಡಲಿ ಊರ್ಧ್ವಕುಂಡಲಿಯೆಂಬ
ಉಭಯಮಧ್ಯದಲ್ಲಿ ನೆಲಸಿರ್ಪ ಪರತತ್ವವೆ
ಶಿವಭಕ್ತನೆಂಬ ಮಧ್ಯನಾಮವುಳ್ಳ ಮಹಾಶೇಷ ನೋಡ
ಸಂಗನಬಸವೇಶ್ವರ. || ೭೩ ||

೭೩೬

ಅಯ್ಯ, ಇನ್ನು ಹಠಯೋಗವ ಮರದು
ಶಿವಯೋಗದಲ್ಲಿ ನಿಂತ ಭೇದವೆಂತೆಂದಡೆ :

ಆ ನಿಲುಕಡೆಯ ಶ್ರೀಗುರುಕರುಣಕಟಾಕ್ಷೆಯಿಂದ ನಿರೂಪಿಸೇವು
ಕೇಳಯ್ಯ, ಪರಕುಮಾರದೇಶಿಕೋತ್ತಮನೆ.
ವಾಮಭಾಗದ ಚಂದ್ರನಾಳ, ಚಂದ್ರನೇತ್ರ, ವಾಮಕರ್ಣದ್ವಾರಂಗಳು
ಇವು ಮೂರು ಈಡನಾಡಿಯೆನಿಸುವುದಯ್ಯ.
ದಕ್ಷಿಣಭಾಗದ ಸೂರ್ಯನಾಳ, ಸೂರ್ಯನೇತ್ರ, ದಕ್ಷಿಣ ಕರ್ಣದ್ವಾರಂಗಳು
ಇವು ಮೂರು ಪಿಂಗಳನಾಡಿಯೆನಿಸುವುದಯ್ಯ.
ಅಧೋದ್ವಾರ, ಗುಹ್ಯದ್ವಾರ, ಜೀಹ್ವಾದ್ವಾರ
ಇವು ಮೂರು ಸುಷುಮ್ನನಾಡಿಯೆನಿಸುವುದಯ್ಯ.
ಮಣಿಪೂರಕನಾಭಿ, ವಿಶುದ್ಧಿನಾಭಿ, ಬ್ರಹ್ಮನಾಭಿ
ಇವು ಮೂರು ಇಪ್ಪತ್ತೆರಡುಸಾವಿರನಾಡಿಗಳಿಗೆ ಮೂಲಸೂತ್ರವಾದ
ಮಧ್ಯನಾಡಿಯೆನಿಸುವುದಯ್ಯ.
ಇಂತೀ ದ್ವಾದಶದ್ವಾರಂಗಳಲ್ಲಿ ಚರಿಸುವ ಮಸ್ತಕಫವಿಕಾರಮಂ
ಗುರೂಪಾವಸ್ಥೆಯಿಂದ ಹಿಂದುಮಾಡಿ, ತನ್ನ ಸತ್ಕವೆ ಮುಂದಾಗಿ,
ತನ್ನ ನಡೆನುಡಿಗಳ ತನ್ನ ತಾನೆ ವಿಚಾರಿಸಿ,
ಸದ್ಗುರುಲಿಂಗಜಂಗಮದಿಂದ ಶಿವದೀಕ್ಷೆಯ ಪಡದು
ಲಿಂಗಾಂಗಸಂಬಂಧಿಯಾಗಿ,
ಆ ಲಿಂಗಾಂಗಚೈತನ್ಯಸ್ವರೂಪವಾದ ಪಾದೋದಕ ಪ್ರಸಾದ ಮಂತ್ರದಿಂದ
ಆ ತ್ರಿವಿಧನಾಡಿಗಳು ಮೊದಲಾಗಿ ದ್ವಾದಶನಾಡಿಗಳೆ ಕಡೆಯಾದ
ಸಮಸ್ತನಾಡಿಗಳೆಲ್ಲ ಪವಿತ್ರಸ್ವರೂಪವಾಗಿ,
ಸರ್ವಾವಸ್ಥೆಯಲ್ಲಿ ಚಿದ್ಘನಮಹಾಲಿಂಗವ
ಅಷ್ಟವಿಧಾರ್ಚನೆ, ಷೋಡಶೋಪಚಾರವನೊಡಗೂಡಿ,
ಪರಿಪರಿಯಿಂದರ್ಚಿಸಿ, ಆಚಾರಭ್ರಷ್ಟರ ತ್ರಿಕರಣಂಗಳಿಂದ ಸೋಂಕದೆ,
ಅಂಗ ಕರಣಂಗಳೆಲ್ಲ ಲಿಂಗಕಿರಣಂಗಳಾಗಿ,
ಸತ್ಕ್ರಿಯಾಜ್ಞಾನಾನಂದವೆ ಪ್ರಭಾವಿಸಿ,
ಶ್ರೀಗುರು ಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ
ಸದಾಚಾರ ಸದ್ಭಕ್ತಿ ಸತ್ಕ್ರಿಯಾ ಸಮ್ಯಜ್ಞಾನ ಸದ್ವರ್ತನೆಯೆಂಬ
ಚಿದೈಶ್ವರ್ಯದಲ್ಲಿ ಸಂತೃಪ್ತರಾಗಿ, ನಿಂದ ನಿಲುಕಡೆಯಲ್ಲಿ
ಪೂರ್ಣಸ್ವರೂಪ ನಿಜಶಿವಯೋಗಿಗಳು ನಿಮ್ಮ ಶರಣರು ನೋಡ
ಸಂಗನಬಸವೇಶ್ವರ. || ೭೪ ||

೭೩೭

ಅಯ್ಯ, ಚಿದ್ಘನತೀರ್ಥವ
ಇಷ್ಟಲಿಂಗಾರ್ಪಿತವ ಮಾಡುವ ವಿಚಾರವೆಂತೆಂದಡೆ :

ಗುರುಲಿಂಗಮುಖದಲ್ಲಿ ಅಚ್ಚಪ್ರಸಾದಸ್ವರೂಪವಾದ
ಇಷ್ಟಲಿಂಗಕ್ಕೆ ಅರ್ಪಿತವಯ್ಯ.
ಗುರುಲಿಂಗ-ಶಿವಲಿಂಗಮುಖದಲ್ಲಿ ಆಚರಣೆಸಂಬಂಧದಿಂದ
ನಿಚ್ಚಪ್ರಸಾದ-ಸಮಯಪ್ರಸಾದಸ್ವರೂಪವಾದ
ಇಷ್ಟಲಿಂಗಕ್ಕೆ ಅರ್ಪಿತವಯ್ಯ.
ಗುರುಲಿಂಗ-ಶಿವಲಿಂಗ-ಜಂಗಮಲಿಂಗಮುಖದಲ್ಲಿ
ತ್ರಿವಿಧಾಚರಣೆಯ ಕರ್ತುವಾದುದರಿಂ ಸ್ವಯಚರಪರ ಗುರುಚರಮೂರ್ತಿ
ಚಿತ್ಕಲಾಪ್ರಸಾದಸ್ವರೂಪವಾದ ಇಷ್ಟಲಿಂಗದೇವಂಗರ್ಪಿತವಯ್ಯ.
ಆ ನಿಲುಕಡೆಯೆಂತೆಂದಡೆ :
ಶ್ರೀಗುರುಲಿಂಗಜಂಗಮವು ಹಸ್ತಮಸ್ತಕಸಂಯೋಗವಮಾಡಿ,
ವೇಧಾ-ಮಂತ್ರ-ಕ್ರಿಯಾದೀಕ್ಷೆಯ ಕರುಣಿಸುವಲ್ಲಿ,
ಕರಕಮಲದ ದಶಾಂಗುಲ ಮಧ್ಯ ಮೊದಲಾಗಿ
ದ್ವಾದಶಪ್ರಣಮಲಿಂಗಮೂರ್ತಿಗಳ
ಛತ್ತೀಶಪ್ರಣಮರೂಪಿನಿಂದ ಸಂಬಂಧಿಸಿರ್ಪರಯ್ಯ.
ಇಂತು ಸಂಬಂಧವ ಗುರುಕಟಾಕ್ಷೆಯಿಂ ತಿಳಿದು
ಷಡಾಕ್ಷರ ಮಂತ್ರಸ್ವರೂಪವಾದ ದಕ್ಷಿಣಹಸ್ತದಿಂದ
ಷಡಾಕ್ಷರ ಮಂತ್ರಸ್ವರೂಪವಾದ ವಾಮಹಸ್ತಕಮಲಮಧ್ಯದಲ್ಲಿ ನೆಲಸಿರ್ಪ
ಚಿದ್ಘನಮಹಾ ಇಷ್ಟಲಿಂಗದೇವಂಗೆ ಆಯಾಯಸ್ಥಲ ಬಂದು ಒದಗಿದಲ್ಲಿ
ಮಕಾರ-ಶಿಕಾರ-ವಕಾರ ; ಅನಾಮಿಕ-ಮಧ್ಯಾಂಗುಲ-ತರ್ಜನಿ
ಮೊದಲಾದ ತ್ರಿವಿಧಂಗುಲಿಗಳಲ್ಲಿ, ತ್ರಿವಿಧಲಿಂಗಮಂತ್ರಗಳಿಂದ
ಇಷ್ಟಮಹಾಲಿಂಗಾರೋಪಿತವ ಮಾಡಿ ಭೋಗಿಸಬಲ್ಲಡೆ
ಅಚ್ಚ ಸ್ವಯಂಭು ಪ್ರಸಾದಲಿಂಗ ಶರಣರೆಂಬೆ ನೋಡ
ಸಂಗನಬಸವೇಶ್ವರ. || ೭೩ ||

೭೪

ಅಯ್ಯ, ನಿರ್ವಂಚಕತ್ವದಿಂದ ದಶವಿಧಲಿಂಗಗಳಿಗೆ
ಏಕವಿಂಶತಿ ಮಂತ್ರಸ್ಮರಣೆಯಿಂದ ದಶವಿಧಪಾದೋದಕವನರ್ಪಿಸಿ,
ಸಂತೃಪ್ತಾನಂದಜಲದಲ್ಲಿ ಪರಿಣಾಮಿಸಬಲ್ಲಡೆ ನಿಜಪ್ರಸಾದಿಯೆಂಬೆನಯ್ಯ.
ಅದರ ವಿಚಾರವೆಂತೆಂದಡೆ :
ಏಕವಿಂಶತಿ ಪ್ರಣಮದೊಳಗೆ ಷಡ್ವಿಧಪ್ರಣಮಸ್ಮರಣೆಯಿಂದ
ಸ್ಪರ್ಶನೋದಕ-ಅವಧಾರೋದಕ-ಗುರುಪಾದೋದಕವ
ಆಚಾರಲಿಂಗ-ಗುರುಲಿಂಗ-ಇಷ್ಟಲಿಂಗದೇವಂಗೆ ಅರ್ಪಿಸಿ,

ತಾನಾ ಪರಿಣಾಮದಲ್ಲಿ ಲೋಲುಪ್ತನಾದಡೆ
ಅನಾದಿಗುರುಲಿಂಗಸ್ವರೂಪ ಬಸವಣ್ಣನೆಂಬೆ ನೋಡ.
ದಶಪಂಚಪ್ರಣಮದೊಳಗೆ ಷಡ್ವಿಧಪ್ರಣಮಸ್ಮರಣೆಯಿಂದ
ಆಪ್ಯಾಯನೋದಕ-ಹಸ್ತೋದಕ-ಲಿಂಗಪಾದೋದಕವ
ಶಿವಲಿಂಗ-ಜಂಗಮಲಿಂಗ-ಪ್ರಾಣಲಿಂಗದೇವಂಗೆ ಸಮರ್ಪಿಸಿ
ತಾನಾ ಪರಿಣಾಮದಲ್ಲಿ ಲೋಲುಪ್ತನಾದಡೆ
ಅನಾದಿಲಿಂಗಸ್ವರೂಪ ಚೆನ್ನಬಸವಣ್ಣನೆಂಬೆ ನೋಡ.
ನವವಿಧಪ್ರಣಮದೊಳಗೆ ಷಡ್ವಿಧಪ್ರಣಮಸ್ಮರಣೆಯಿಂದ
ಪರಿಣಾಮೋದಕ-ನಿರ್ನಾಮೋದಕ-ಜಂಗಮಪಾದೋದಕವ
ಪ್ರಸಾದಲಿಂಗ-ಮಹಾಲಿಂಗ ಭಾವಲಿಂಗದೇವಂಗೆ ಸಮರ್ಪಿಸಿ,
ತಾನಾ ಸಂತೃಪ್ತಿಯಲ್ಲಿ ಲೋಲುಪ್ತನಾದಡೆ
ಅನಾದಿಜಂಗಮಸ್ವರೂಪ ಅಲ್ಲಮಪ್ರಭುರಾಯನೆಂಬೆ ನೋಡಾ.
ಇನ್ನು ಉಳಿದ ತ್ರಿವಿಧಪ್ರಣಮಸ್ಮರಣೆಯಿಂದ
ನವವಿಧೋದಕವನೊಳಕೊಂಡ ಸತ್ಯೋದಕವ
ನವವಿಧಲಿಂಗಕ್ಕೆ ಮಾತೃಸ್ವರೂಪವಾದ ನಿಃಕಲಪರತತ್ವಲಿಂಗದೇವಂಗೆ ಸಮರ್ಪಿಸಿ,
ನಿತ್ಯತೃಪ್ತತ್ವದಿಂದ ಸರ್ವಾವಸ್ಥೆಯ ನೀಗಬಲ್ಲಡೆ
ಅನಾದಿಶರಣಪ್ರಸನ್ನ ಮೂರ್ತಿಯೆಂಬೆ ನೋಡ
ಸಂಗನಬಸವೇಶ್ವರ. ॥ ೭೬ ॥

೭೪೯

ಅಯ್ಯ, ನಿರಾಲಂಬ ನಿಃಕಳಂಕ ನಿಃಪ್ರಪಂಚತ್ವದಿಂದ
ನಾಲ್ವತ್ತೆಂಟು ಪ್ರಣಮಸ್ಮರಣೆಯಿಂದ
ಏಕಾದಶಲಿಂಗಂಗಳಿಗೆ ಏಕಾದಶಪ್ರಸಾದವ ಸಮರ್ಪಿಸಿ,
ತಾನಾ ಸಂತೃಪ್ತಿಮಹಾಪ್ರಸಾದದಲ್ಲಿ ಲೋಲುಪ್ತನಾದಡೆ
ನಿಜಪ್ರಸಾದಿಯೆಂಬೆ ನೋಡ.
ಅದರ ವಿಚಾರವೆಂತೆಂದಡೆ :
ನಾಲ್ವತ್ತೆಂಟು ಪ್ರಣವದೊಳಗೆ ದ್ವಾದಶಪ್ರಣಮಸ್ಮರಣೆಯಿಂದ
ಆಪ್ಯಾಯನಪ್ರಸಾದ, ಸಮಯಪ್ರಸಾದ, ಗುರುಪ್ರಸಾದವ
ಆಚಾರಲಿಂಗ-ಗುರುಲಿಂಗ-ಇಷ್ಟಲಿಂಗದೇವಂಗೆ
ಸುಚಿತ್ತ, ಸುಬುದ್ಧಿ, ನಿರುಪಾಧಿಕಹಸ್ತದಿಂದ ಸಮರ್ಪಿಸಿ,
ಆ ತೃಪ್ತಿಯ ಲೋಲುಪ್ತಿಯಲ್ಲಿ ತಾನಾದಡೆ
ಅನಾದಿನಿಃಕಳಂಕ ಗುರುಬಸವರಾಜನೆಂಬೆ ನೋಡ.

ಛತ್ತೀಶಪ್ರಣಮದೊಳಗೆ ದ್ವಾದಶಪ್ರಣಮಸ್ಮರಣೆಯಿಂದ
ಪಂಚೇಂದ್ರಿಯವಿರಹಿತಪ್ರಸಾದ, ಕರಣಚತುಷ್ಟಯವಿರಹಿತಪ್ರಸಾದ,
ಲಿಂಗಪ್ರಸಾದವ ಶಿವಲಿಂಗ-ಜಂಗಮಲಿಂಗ-ಪ್ರಾಣಲಿಂಗದೇವಂಗೆ
ನಿರಹಂಕಾರ, ಸುಮನ, ನಿರಾಲಂಬಹಸ್ತದಿಂದ ಸಮರ್ಪಿಸಿ,
ಆ ತೃಪ್ತಿಯ ಲೋಲುಪ್ತಿಯಲ್ಲಿ ತಾನಾದಡೆ
ಅನಾದಿ ನಿಃಕಾಮ ಶೂನ್ಯಲಿಂಗಸ್ವರೂಪ ಚೆನ್ನಬಸವರಾಜನೆಂಬೆ ನೋಡ !
ಇಪ್ಪತ್ತುನಾಲ್ಕು ಪ್ರಣಮದೊಳಗೆ ದ್ವಾದಶಪ್ರಣಮಸ್ಮರಣೆಯಿಂದ
ಸಮತಾಪ್ರಸಾದ-ಪ್ರಸಾದಿಯಪ್ರಸಾದ-ಜಂಗಮಪ್ರಸಾದವ
ಪ್ರಸಾದಲಿಂಗ-ಮಹಾಲಿಂಗ-ಭಾವಲಿಂಗದೇವಂಗೆ
ಸುಜ್ಞಾನ, ಸದ್ಭಾವ, ನಿಃಪ್ರಪಂಚಹಸ್ತದಿಂದ ಸಮರ್ಪಿಸಿ,
ಆ ಪರಿಣಾಮಲೋಲುಪ್ತಿಯಲ್ಲಿ ತಾನಾದಡೆ
ಅನಾದಿ ನಿರಂಜನ ಜಂಗಮ ಸ್ವರೂಪ ಪ್ರಭುದೇವರೆಂಬೆ ನೋಡ.
ಇನ್ನು ಉಳಿದ ದ್ವಾದಶಪ್ರಣಮಸ್ಮರಣೆಯಿಂದ
ಸದ್ಭಾವಪ್ರಸಾದ-ಜ್ಞಾನಪ್ರಸಾದವ
ಇಂತು ನವಲಿಂಗಪ್ರಸಾದ ಪಾದೋದಕಂಗಳ
ಸಂತೃಪ್ತಿಯಲ್ಲಿ ಸಾಕಾರ ನಿರಾಕಾರನಾದ
ಪರತತ್ವಜ್ಯೋತಿರ್ಮಯಲಿಂಗದೇವಂಗೆ
ನಿಜಾನಂದಹಸ್ತದಿಂದ ಸಮರ್ಪಿಸಿ,
ಮತ್ತಾ ಅನಾದಿಕುಳಸನ್ಮತವಾದ ದಶವಿಧಪಾದೋದಕ,
ಏಕಾದಶಪ್ರಸಾದದಲ್ಲಿ ಕೂಡಿ, ಘನಸಾರದಂತಾದಡೆ
ಅನಾದಿಪೂರ್ಣಮಯ ನಿಜವಸ್ತು ತಾನೆ ನೋಡ,
ಸಂಗನಬಸವೇಶ್ವರ. || ೭೭ ||

೭೪೦

ಅಯ್ಯ, ಆಚರಣೆಯಲ್ಲಿ ಇಷ್ಟ-ಪ್ರಾಣ-ಭಾವಲಿಂಗಗಳಿಗೆ
ಗುರು-ಚರ-ಭಕ್ತರ ಮೂಲಚೈತನ್ಯಮೂರ್ತಿ
ಅನಾದಿ ಚಿದ್ಘನ ಪಾದೋದಕ ಪ್ರಸಾದ ಮಂತ್ರಸ್ವರೂಪ ನೋಡ.
ಅಯ್ಯ, ಸಂಬಂಧದಲ್ಲಿ ಗುರು-ಚರ-ಭಕ್ತಂಗೆ
ಇಷ್ಟ-ಪ್ರಾಣ-ಭಾವಲಿಂಗಂಗಳೆ ಮೂಲಚೈತನ್ಯಮೂರ್ತಿ
ಅನಾದಿ ಚಿದ್ಘನ ಪಾದೋದಕ ಪ್ರಸಾದ ಮಂತ್ರಸ್ವರೂಪ ನೋಡ.
ಈ ವಿಚಾರವ ನಿನ್ನ ನೀನರಿದಡೆ
ಅನಾದಿ ಗುರು-ಚರ-ಭಕ್ತ-ಇಷ್ಟ-ಪ್ರಾಣ-ಭಾವ-

ಪಾದೋದಕ-ಪ್ರಸಾದ-ಮಂತ್ರ
ನಿನ್ನ ಸರ್ವಾಂಗದಲ್ಲಿ ಉಂಟು ನೋಡ
ಸಂಗನಬಸವೇಶ್ವರ. || ೭೮ ||

೭೪೧

ಅಯ್ಯ, ಗುರು ಜಂಗಮದ ಪಾದೋದಕ ಪ್ರಸಾದವ
ಚಿಧ್ಘನಲಿಂಗಕ್ಕೆ ಅರ್ಪಿತವ ಮಾಡಿಕೊಂಬಲ್ಲಿ
ಆ ಲಿಂಗ ಮೊದಲೊ ? ಗುರುಚರ ಮೊದಲೊ ?
ಆ ವಿಚಾರವೆಂತೆಂದಡೆ : ಅನಾದಿಬೀಜಲಿಂಗ ಆದಿಬೀಜ ಗುರುಚರ,
ಇಂತೀ ಉಭಯವನರಿತಲ್ಲಿ ಗುರುಚರಕ್ಕೆ ಚಿಧ್ಘನಲಿಂಗವೆ ಆದಿಯನಾದಿ,
ಚಿಧ್ಘನಲಿಂಗಕ್ಕೆ ಗುರುಚರವೆ ಆದಿ ಅನಾದಿ.
ಇಂತೀ ವಿಚಾರವ ತಿಳಿದಲ್ಲಿ ಚಿಧ್ಘನಲಿಂಗವ ಬಿಟ್ಟು, ಗುರುಚರವುಂಟೆ ?
ಗುರುಚರವ ಬಿಟ್ಟು, ಚಿಧ್ಘನಲಿಂಗವುಂಟೆ ?
ಇವು ಮೂರು ಒಂದೆ ವಸ್ತುವಯ್ಯ.
ಅದರಿಂದ ಆಚರಣೆಗೋಸ್ಕರ ಗುರುಭಕ್ತನಾಗಿ ಪೂಜೆಗೆ ನಿಂತಿರ್ಪುದಯ್ಯ.
ಲಿಂಗಜಂಗಮವಾಗಿ ಪೂಜ್ಯಕ್ಕೆ ನಿಂತಿರ್ಪುದಯ್ಯ.
ಗುರುಭಕ್ತನಾಗಿರ್ಪುದಯ್ಯ ; ಲಿಂಗಜಂಗಮವಾಗಿರ್ಪುದಯ್ಯ.
ಇಚ್ಛೆ-ಅನಿಚ್ಛೆ, ಬೇಕು-ಬೇಡೆಂಬುದೆ ಗುರುಭಕ್ತರೂಪು.
ಇಚ್ಛೆ-ಅನಿಚ್ಛೆ, ಬೇಕು-ಬೇಡೆನ್ನದೆ
ಗುರುಭಕ್ತರಿಂದ ಬಂದುದ ಕೈಕೊಂಡು
ಸಂತೃಪ್ತಿಯಲ್ಲಿರ್ಪುದೆ ಲಿಂಗಜಂಗಮ.
ಇದನರಿದ ಮೇಲೆ ಮತ್ತೊಂದು ಪ್ರಕಾರ
ಚಿಕ್ಕದಂಡನ ಪ್ರಸಾದವಾಕ್ಯವುಂಟು !
ಅದರ ವಿಚಾರವೆಂತೆಂದಡೆ-ಗುರು ಮುಟ್ಟಿದ್ದು ಪ್ರಸಾದವೆಂಬೆನೆ ? ಅಲ್ಲಲ್ಲ.
ಅದೇನು ಕಾರಣವೆಂದಡೆ, ಅನಾದಿಲಿಂಗವ ತೋರಲರಿಯನಾಗಿ,
ಲಿಂಗ ಮುಟ್ಟಿದ್ದು ಪ್ರಸಾದವೆಂಬೆನೆ ? ಅಲ್ಲಲ್ಲ.
ಅದೇನು ಕಾರಣವೆಂದಡೆ,
ಅಷ್ಟವಿಧಾರ್ಚನೆ, ಷೋಡಶೋಪಚಾರಕ್ಕೆ ಒಳಗಾಯಿತ್ತಾಗಿ.
ಮತ್ತೆಂತುಂಟು ಗುರುಲಿಂಗ ಜಂಗಮಪ್ರಸಾದ ?
ಅನಾದಿಲಿಂಗವನರಿತು ಅಷ್ಟತನುವೆ ಅಷ್ಟವಿಧಾರ್ಚನೆಯಾಗಿ,
ಮಲಮಾಯಾಪಾಶದಾಸೆಯ ನೀಗಿ ನಿಂದಡೆ ಗುರು-ಲಿಂಗ-ಜಂಗಮ !
ಆತ ತಟ್ಟಿದ್ದು ಮುಟ್ಟಿದ್ದೆಲ್ಲ ಮಹಾಪ್ರಸಾದ ನೋಡ.

ಲಿಂಗವಿಲ್ಲದ ಜಂಗಮ, ಜಂಗಮವಿಲ್ಲದ ಲಿಂಗ ;
ಈ ಲಿಂಗಜಂಗಮ ಜಂಗಮಲಿಂಗವೆಂಬ
ವಿಚಾರವನರಿಯದೆ ಗುರುಭಕ್ತರೆಂತಹುದೊ ? ಮರುಳೆ !
ಲಿಂಗಜಂಗಮದಲ್ಲಿ ಚಿದ್ಘನತೀರ್ಥವ ಕೊಂಡು,
ಜಂಗಮಲಿಂಗದಲ್ಲಿ ಚಿದ್ಘನಪ್ರಸಾದವ ಮುಗಿಯಬಲ್ಲಾತನೆ
ಆದಿ ಅನಾದಿಯಿಂದತ್ತತ್ತ ಮೀರಿ ತೋರುವ ಗುರುಭಕ್ತಶರಣ.
ಪ್ರಸಾದಲಿಂಗಮೂರ್ತಿ ತಾನೆ ನೋಡ ಸಂಗನಬಸವೇಶ್ವರ. || ೭೯ ||

೭೪೨

ಅಯ್ಯ, ಏಕವಿಂಶತಿದೀಕ್ಷೆಯ ನಿಲುಕಡೆ,
ದ್ವಾದಶಾಚಾರ ಮೊದಲಾಗಿ ಸರ್ವಾಚಾರಸಂಪತ್ತಿನಾಚರಣೆಯ
ಅರ್ಪಿತಾವಧಾನವನರಿದಾಚರಿಸಿದಡೆ
ನಿನ್ನ ಸರ್ವಾಂಗವೆಲ್ಲ ಪಾದೋದಕಪ್ರಸಾದ ಮಂತ್ರಮಯ
ಪರಬ್ರಹ್ಮಸ್ವರೂಪು ನೋಡ.
ಅದರ ವಿಚಾರವೆಂತೆಂದಡೆ :
ನಿನ್ನ ಕಾಯದ ಮಧ್ಯದಲ್ಲಿ ಅನಾದಿಗುರು ಬಸವೇಶ್ವರಸ್ವಾಮಿಗಳೆ
ಇಷ್ಟಲಿಂಗಮಂತ್ರ, ಚಿದ್ವಿಭೂತಿ, ರುದ್ರಾಕ್ಷಿ,
ದೀಕ್ಷಾಪಾದೋದಕ, ಸುದ್ಧಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಮನದ ಮಧ್ಯದಲ್ಲಿ ಅನಾದಿಚರರೂಪ ಚನ್ನಬಸವೇಶ್ವರಸ್ವಾಮಿಗಳೆ
ಪ್ರಾಣಲಿಂಗ, ಸಪ್ತಕೋಟಿ ಮಹಾಮಂತ್ರ,
ಶಿಕ್ಷಾಪಾದೋದಕ, ಸಿದ್ಧಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಭಾವದ ಮಧ್ಯದಲ್ಲಿ ಅನಾದಿಪರಶಿವಸ್ವರೂಪ ಅಲ್ಲಮಪ್ರಭುಸ್ವಾಮಿಗಳೆ
ಭಾವಲಿಂಗ, ಅಗಣಿತಮಂತ್ರ,
ಜ್ಞಾನಪಾದೋದಕ, ಪ್ರಸಿದ್ಧಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಆಧಾರಚಕ್ರದ ಮಧ್ಯದಲ್ಲಿ
ಆಚಾರಮೂರ್ತಿ ಮಡಿವಾಳಸ್ವಾಮಿಗಳೆ
ಪಂಚಾಚಾರಮೂರ್ತಿ, ಆಚಾರಲಿಂಗಮಂತ್ರ,
ಸ್ಪರ್ಶನೋದಕ, ಆಪ್ಯಾಯನಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಸ್ವಾಧಿಷ್ಠಾನಚಕ್ರದ ಮಧ್ಯದಲ್ಲಿ
ಸತ್ಕ್ರಿಯಾಮೂರ್ತಿ ಮರುಳಶಂಕಸ್ವಾಮಿಗಳೆ
ಮಂತ್ರಮೂರ್ತಿ, ಗುರುಲಿಂಗಮಂತ್ರ,
ಅವಧಾರೋದಕ, ಸಮಯಪ್ರಸಾದವಾಗಿ ನೆಲಸಿರ್ಪರು ನೋಡ.

ನಿನ್ನ ಮಣಿಪೂರಕಚಕ್ರದಮಧ್ಯದಲ್ಲಿ
ಸಮ್ಯಜ್ಞಾನಮೂರ್ತಿ ಸಿದ್ಧರಾಮೇಶ್ವರಸ್ವಾಮಿಗಳೆ
ನಿರೀಕ್ಷಣಮೂರ್ತಿ, ಶಿವಲಿಂಗಮಂತ್ರ,
ಆಪ್ಯಾಯನೋದಕ, ಪ್ರಸಾದಿಯ ಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಅನಾಹತಚಕ್ರದಮಧ್ಯದಲ್ಲಿ
ಷಡ್ಗುಣೈಶ್ವರ್ಯ ಸಂಪನ್ನೆ ನೀಲಲೋಚನೆತಾಯಿಗಳೆ
ಯಜನ ಸ್ವರೂಪಮೂರ್ತಿ, ಜಂಗಮಲಿಂಗಮಂತ್ರ,
ಹಸ್ತೋದಕ, ಪಂಚೇಂದ್ರಿಯವಿರಹಿತಪ್ರಸಾದವಾಗಿ ನೆಲಸಿರ್ಪರು, ನೋಡ.
ನಿನ್ನ ವಿಶುದ್ಧಿಚಕ್ರದಮಧ್ಯದಲ್ಲಿ ಪರಮವಿರಾಗತವನ್ನುಳ್ಳ
ಮಹಾದೇವಿತಾಯಿಗಳೆ ಈಳನಾಸ್ವರೂಪವಾದ ಪ್ರಸಾದಲಿಂಗಮಂತ್ರ,
ಪರಿಣಾಮೋದಕ, ಕರಣಚತುಷ್ಟಯವಿರಹಿತ ಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಆಜ್ಞಾಚಕ್ರದ ಮಧ್ಯದಲ್ಲಿ ಷಟ್ಸ್ಥಲ ಸಂಪನ್ನೆಯಾದಂಥ
ಅಕ್ಕನಾಗಲಾಂಬಿಕೆ ತಾಯಿಗಳೆ ವೇಧಾಸ್ವರೂಪವಾದ ಮಹಾಲಿಂಗಮಂತ್ರ,
ನಿರ್ನಾಮೋದಕ, ಸಮತಾಪ್ರಸಾದವಾಗಿ, ನೆಲಸಿರ್ಪರು ನೋಡ.
ನಿನ್ನ ಬ್ರಹ್ಮರಂಧ್ರಚಕ್ರದ ಮಧ್ಯದಲ್ಲಿ ಸರ್ವಾಚಾರಸಂಪನ್ನೆಯಾದಂಥ
ಮುಕ್ತಾಯಕ್ಕಗಳೆ ನಿರಾಲಂಬಮೂರ್ತಿಯಾದಂಥ, ನಿಃಕಳಲಿಂಗಮಂತ್ರ,
ಸತ್ಯೋದಕ, ಸದ್ಭಾವಪ್ರಸಾದ-ಜ್ಞಾನಪ್ರಸಾದವಾಗಿ ನೆಲಸಿರ್ಪರು ನೋಡ.
ನಿನ್ನ ಶಿಖಾಪಶ್ಚಿಮಚಕ್ರದಮಧ್ಯದಲ್ಲಿ ಪರಿಪೂರ್ಣಾನಂದಮೂರ್ತಿ
ಅಜಗಣ್ಣತಂದೆಗಳೆ ನಿಃಪ್ರಪಂಚಮೂರ್ತಿ ಶೂನ್ಯನಿರಂಜನಲಿಂಗಮಂತ್ರ,
ಕರುಣಜಲ-ವಿನಯಜಲ-ಸಮತಾಜಲ,
ಚಿತ್ಕಲಾಪ್ರಸಾದ-ನಿಜಪ್ರಸಾದ-ಚಿದ್ರೂಪಪ್ರಸಾದವಾಗಿ ನೆಲಸಿರ್ಪರು ನೋಡ.
ಇಂತು ನಿನ್ನ ಪ್ರಾಣಕಳಾಚೈತನ್ಯವಾಗಿ ನಿನ್ನ ಸರ್ವಾಂಗವೆಲ್ಲ
ಪ್ರಮಥಗಣ ಪಾದೋದಕ ಪ್ರಸಾದಲಿಂಗ ಮಂತ್ರವಾಗಿರ್ಪುದು ನೋಡ
ಸಂಗನಬಸವೇಶ್ವರ. || ೮೦ ||

೭೪೩

ಅಯ್ಯ, ವರಕುಮಾರ ದೇಶಿಕೋತ್ತಮನೆ ಕೇಳ !
ಕಲ್ಯಾಣಪಟ್ಟಣದ ಅನುಭಾವಮಂಟಪದಲ್ಲಿ
ಬಸವ ಮೊದಲಾದ ಪ್ರಮಥರೆಲ್ಲ
ಚೆನ್ನಬಸವರಾಜೇಂದ್ರಂಗೆ ಅಭಿವಂದಿಸಿ,
ಮಹಾಲಿಂಗೈಕ್ಯಾನುಭಾವವ ಬೆಸಗೊಳಲು

ಅದೇ ಪ್ರಸಾದವ ನಿನಗೆ ಅರುಹಿಸಿ ಕೊಟ್ಟೆವು ಕೇಳಾ ನಂದೀಶ,
ಸಂಗನಬಸವೇಶ್ವರ. || ೮೧ ||

೭೪೪

ಅಯ್ಯ, ಗುರುಕರಜಾತನಾಗಿ
ಪ್ರಮಥರಾಚರಿಸಿದ ಸನ್ಮಾರ್ಗದಲ್ಲಾಚರಿಸಿ,
ಮಹಾಲಿಂಗೈಕ್ಯಾನುಭಾವಿಯಾದ ಮೇಲೆ
'ಆಯುಃ ಕರ್ಮ [ಚ] ವಿತ್ತಂ ಚ' ಎಂದು
ಇದಕ್ಕಂಜಿ ಉಮ್ಮಳಿಸುವ ಮಾಯಾಪ್ರಸೂತಿ ಮನವ ನೋಡ.
ಆಯುಷ್ಯವೆ ಚಿದ್ಘನಮಹಾಲಿಂಗ, ಶ್ರೀಯೆ ಚಿದ್ಘನಮಹಾಜಂಗಮ,
ನಿಧಿನಿಧಾನವೆ ಚಿದ್ಘನ ಮಹಾಪ್ರಮಥಗಣ ಶರಣರ ಭೃತ್ಯಭಕ್ತಿ
ವಿದ್ಯವೆ ಪಂಚಾಕ್ಷರ-ಷಡಾಕ್ಷರ ಮೊದಲಾದ ಮಹಾಶಿವಮಂತ್ರ.
ದೇಹವೆ ಗುರುಚರಪರಕ್ಕೆ ಅಷ್ಟವಿಧಾರ್ಚನೆ-ಷೋಡಶೋಪಚಾರವಾಗಲೆಂದು
ಶ್ರೀಗುರುಬಸವಲಿಂಗ ಬರದನಾಗಿ ಹೊಟ್ಟೆಯ ಶಿಶುವಿಂಗೆ
ಬೇರೆ ನೈವೇದ್ಯವುಂಟೇನೋ ? ಶಾಂತಚಿದ್ಘನಮಹಾಲಿಂಗದಲ್ಲಿ
ಸಂತೃಪ್ತನಾದ ಅಯೋನಿಸಂಭವ ನಿಜಶರಣ ನಿತ್ಯಮುಕ್ತಂಗೆ ನೋಡ
ಸಂಗನಬಸವೇಶ್ವರ. || ೮೨ ||

೭೪೫

ಅಯ್ಯ, ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷೆಯಿಂದ
ಮತ್ತಾ ಗುರುಲಿಂಗಜಂಗಮಸ್ವರೂಪವಾಗಿ,
ನಿಜಾಚರಣೆಯಲ್ಲಿ ನಿಂದು, ಅಸತ್ಯವನಳಿದು ಸುಸತ್ಯದಲ್ಲಿ ನಿಂದು,
ಅನಾಚಾರವನುಳಿದು ಶಿವಾಚಾರಸನ್ಮಾರ್ಗದಲ್ಲಿ ನಿಂದು,
ಭವಿ ನಡೆನುಡಿಗಳನುಳಿದು ಭಕ್ತನ ನಡೆನುಡಿಗಳಲ್ಲಿ ನಿಂದು,
ಅಯೋಗ್ಯವಾದ ಭೋಗವನುಳಿದು
ಯೋಗ್ಯವಾದ ಭೋಗದಲ್ಲಿ ನಿಂದು,
ತನ್ನಾದಿ ಮಧ್ಯಾವಸಾನವ ತಿಳಿದು,
ತನ್ನ ನಿಜಾಚರಣೆ ಲೀಲಾವಿನೋದದಿಂದ
ತನ್ನ ತಾನರ್ಚಿಸುವ ನಿಲುಕಡೆಯ ವಿಚಾರವ ನೋಡ
ಸಂಗನಬಸವೇಶ್ವರ. || ೮೩ ||

೭೪೬

ಅಯ್ಯ, ನಾದ ನಾಳಂಗಳು ಬಲಿದು
ಪರಿಪೂರ್ಣ ಚಿಜ್ಯೋತಿರ್ಲಿಂಗಧ್ಯಾನದಲ್ಲಿ ನಿಂದು

ನಿಜಹೃದಯ ಚಿದ್ಭಾವದೃಕ್ಕಿನಿಂದ ನವಲಿಂಗಂಗಳ ನಿರೀಕ್ಷಿಸಿ,
ಸುಚಿತ್ತ-ಸುಬುದ್ಧಿ-ನಿರಹಂಕಾರ-ಸುಮನ-ಸುಜ್ಞಾನ-ಸದ್ಭಾವ
ನಿರುಪಾಧಿಕ-ನಿಃಕಳಂಕ -ನಿರಾಲಂಬ ಹಸ್ತದಿಂದ ಅರ್ಚಿಸಿ
ಎರಡಳಿದು ನಿರಾವಯಸಮಾಧಿಯಲ್ಲಿ ಕೂಡುವ ನಿಜದಿರವ ನೋಡ
ಸಂಗನಬಸವೇಶ್ವರ. || ೮೪ ||

೭೪೭

ಅಯ್ಯ, ತಾರಕಾಕೃತಿ, ನಕಾರಪ್ರಣಮ, ವೇಣುನಾದ,
ಆಧಾರಚಕ್ರ, ಪೀತವರ್ಣ, ಭಕ್ತಿಸ್ಥಲ, ಸ್ಥೂಲತನು, ಸುಚಿತ್ತಹಸ್ತ,
ಆಚಾರಲಿಂಗ, ಘ್ರಾಣಮುಖ, ಶ್ರದ್ಧಾಭಕ್ತಿ, ಸುಗಂಧ ಪದಾರ್ಥ,
ಸುಗಂಧಪ್ರಸಾದ, ಬ್ರಹ್ಮಪೂಜಾರಿ, ಬ್ರಹ್ಮನಧಿದೇವತೆ,
ಕರ್ಮಸಾದಾಖ್ಯ, ಸತ್ತುವೆಂಬ ಲಕ್ಷಣ, ಪರವೆಂಬ ಸಂಜ್ಞೆ,
ಪೂರ್ವದಿಕ್ಕು, ಋಗ್ವೇದ, ಪೃಥ್ವಿಯ ಅಂಗ, ಜೀವಾತ್ಮ,
ಕ್ರಿಯಾಶಕ್ತಿ, ನಿವೃತ್ತಿಕಲೆ -
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು
ಎನ್ನಾಧಾರಚಕ್ರವೆಂಬ ಶ್ರೀಶೈಲಪರ್ವತ ಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ ಪಂಚಾಚಾರಸ್ವರೂಪವಾದ
ಆಚಾರಲಿಂಗವೆ ಮಲ್ಲಿಕಾರ್ಜುನಲಿಂಗವೆಂದು
ತನುತ್ರಯವ ಮಡಿಮಾಡಿ, ಶಿವಾನಂದವೆಂಬ ಜಲದಿಂ ಮಜ್ಜನಕ್ಕೆರದು,
ಪೃಥ್ವಿ ನಿವೃತ್ತಿಯಾದ ಗಂಧವ ಧರಿಸಿ ಚಿತ್ತಸುಚಿತ್ತವಾದಕ್ಷತೆಯನಿಟ್ಟು,
ಅಲ್ಲಿಹ ಚತುರ್ದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಪೀತವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ಜಾಗ್ರವಸ್ಥೆಯೆಂಬ ನವೀನ ವಸ್ತ್ರವ ಹೊದ್ದಿಸಿ,
ನಿಃಕಾಮವೆಂಬಾಭರಣವ ತೊಡಿಸಿ,
ಸುಗಂಧವೆಂಬ ನೈವೇದ್ಯವನರ್ಪಿಸಿ,
ಶ್ರದ್ಧೆಯೆಂಬ ತಾಂಬೂಲವನಿತ್ತು,
ಇಂತು ಆಚಾರಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ಕೋಟಿ ಸೂರ್ಯನ ಪ್ರಭೆಯಂತೆ ಬೆಳಗುವ ಆಚಾರಲಿಂಗವನ್ನು
ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು,
ಆ ಆಚಾರಲಿಂಗದ ಪೂಜೆಯ ಸಮಾಪ್ತವ ಮಾಡಿ,
ಓಂ ನಂ ನಂ ನಂ ನಂ ನಂ ನಂ ಎಂಬ ನಕಾರ ಷಡ್ವಿಧಮಂತ್ರಗಳಿಂದ

ನಮಸ್ಕರಿಸಿ,
ಆ ಲಿಂಗವೆ ತಾನೆಂದರಿದು ಕೂಡಿ ಎರಡಳಿದು
ನಿಬ್ಬೆರಗಿನಿಂದ ಆಚರಿಸಬಲ್ಲಾತನೆ ಶ್ರದ್ಧಾಭಕ್ತಿಯನುಳ್ಳ ಸದ್ಭಕ್ತ ನೋಡ,
ಸಂಗನಬಸವೇಶ್ವರ. || ೬೫ ||

೭೪೮

ಅಯ್ಯ, ದಂಡಾಕೃತಿ, ಮಕಾರಪ್ರಣಮ, ಘಂಟಾನಾದ,
ಸ್ವಾಧಿಷ್ಠಾನಚಕ್ರ, ಶ್ವೇತವರ್ಣ, ಮಹೇಶ್ವರಸ್ಥಲ, ಸ್ಥೂಲತನು,
ಸುಬುದ್ಧಿಹಸ್ತ, ಗುರುಲಿಂಗ, ಜಿಹ್ವೆಮುಖ, ನೈಷ್ಠಿಕಾಭಕ್ತಿ,
ಸುರಸಪದಾರ್ಥ, ಸುರಸಪ್ರಸಾದ, ವಿಷ್ಣುಪೂಜಾರಿ, ವಿಷ್ಣುವಧಿದೇವತೆ,
ಕರ್ತೃಸಾದಾಖ್ಯ, ಚಿತ್ತವೆಂಬ ಲಕ್ಷಣ, ಗೂಢವೆಂಬ ಸಂಜ್ಞೆ,
ಪಶ್ಚಿಮದಿಕ್ಕು, ಯಜುರ್ವೇದ, ಅಪ್ಪುವೆ ಅಂಗ, ಅಂತರಾತ್ಮ,
ಜ್ಞಾನಶಕ್ತಿ, ಪ್ರತಿಷ್ಠೆಕಲೆ -
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು
ಎನ್ನ ಸ್ವಾಧಿಷ್ಠಾನಚಕ್ರವೆಂಬ ಸೇತುಬಂಧಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ ಮಂತ್ರಮೂರ್ತಿಸ್ವರೂಪವಾದ
ಗುರುಲಿಂಗವೆ ರಾಮೇಶ್ವರಲಿಂಗವೆಂದು
ತನುತ್ರಯವ ಮಡಿಮಾಡಿ, ಪರಿಣಾಮವೆಂಬ ಜಲದಿಂ ಮಜ್ಜನಕ್ಕೆರದು,
ಅಪ್ಪು ನಿವೃತ್ತಿಯಾದ ಗಂಧವ ಧರಿಸಿ,
ಬುದ್ಧಿ ಸುಬುದ್ಧಿಯಾದಕ್ಷತೆಯನಿಟ್ಟು,
ಅಲ್ಲಿಹ ಷಡ್ದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಶ್ವೇತವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ಸ್ವಪ್ನಾವಸ್ಥೆಯೆಂಬ ನವೀನ ವಸ್ತ್ರವ ಹೊದ್ದಿಸಿ,
ನಿಃಕ್ರೋಧವೆಂಬಾಭರಣವ ತೊಡಿಸಿ,
ಸುರುಚಿಯೆಂಬ ನೈವೇದ್ಯವನರ್ಪಿಸಿ,
ನೈಷ್ಠೆಯೆಂಬ ತಾಂಬೂಲವನಿತ್ತು,
ಇಂತು ಗುರುಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ಕೋಟಿ ಸೂರ್ಯನ ಪ್ರಭೆಯಂತೆ ಬೆಳಗುವ ಗುರುಲಿಂಗಮೂರ್ತಿಯನ್ನು
ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು
ಆ ಗುರುಲಿಂಗ ಪೂಜೆಯ ಸಮಾಪ್ತವ ಮಾಡಿ
ಓಂ ಮಂ ಮಂ ಮಂ ಮಂ ಮಂ ಮಂ ಎಂಬ

ಮಕಾರ ಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಲಿಂಗವೆ ತಾನೆಂದರಿದು ಕೂಡಿ ಎರಡಳಿದು ನಿಶ್ಚಿಂತದಿಂದ
ಬೆರಸಬಲ್ಲಾತನೆ ನೈಷ್ಠಾಭಕ್ತಿಯನುಳ್ಳ ವೀರಮಾಹೇಶ್ವರ ನೋಡ
ಸಂಗನಬಸವೇಶ್ವರ. || ೮೬ ||

೨೪೯

ಅಯ್ಯ, ಕುಂಡಲಾಕೃತಿ, ಶಿಕಾರಪ್ರಣಮ, ಭೇರಿನಾದ,
ಮಣಿಪೂರಕಚಕ್ರ, ಹರಿತವರ್ಣ, ಪ್ರಸಾದಿಸ್ಥಲ, ಕಾರಣತನು,
ನಿರಹಂಕಾರಹಸ್ತ, ಶಿವಲಿಂಗ, ನೇತ್ರಮುಖ, ಸಾವಧಾನಭಕ್ತಿ,
ಸುರೂಪುಪದಾರ್ಥ, ಸುರೂಪುಪ್ರಸಾದ, ರುದ್ರಪೂಜಾರಿ, ರುದ್ರನಧಿದೇವತೆ,
ಮೂರ್ತಿಸಾದಾಖ್ಯ, ಆನಂದವೆಂಬ ಲಕ್ಷಣ,
ಶರೀರಸ್ಥವೆಂಬ ಸಂಜ್ಞೆ, ಉತ್ತರದಿಕ್ಕು, ಸಾಮವೇದ, ಅಗ್ನಿಯೆ ಅಂಗ,
ಪರಮಾತ್ಮ, ಇಚ್ಛಾಶಕ್ತಿ, ವಿದ್ಯಾಕಲೆ -
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು
ಎನ್ನ ಮಣಿಪೂರಕಚಕ್ರವೆಂಬ ಪಂಪಾಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ
ನಿರೀಕ್ಷಣಸ್ವರೂಪವಾದ ಶಿವಲಿಂಗವೆ ಶ್ರೀವಿರೂಪಾಕ್ಷಲಿಂಗವೆಂದು
ಆತ್ಮತ್ರಯವ ಮಡಿಮಾಡಿ, ಪರಮಾನಂದವೆಂಬ ಜಲದಿಂ ಮಜ್ಜನಕ್ಕೆರದು,
ಅಗ್ನಿ ನಿವೃತ್ತಿಯಾದ ಗಂಧವ ಧರಿಸಿ,
ಅಹಂಕಾರ ನಿರಹಂಕಾರವಾದಕ್ಷತೆಯನಿಟ್ಟು,
ಅಲ್ಲಿಹ ದಶದಳಂಗಳನೆ ಪುಷ್ಪದಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಹರಿತವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ಸುಷುಪ್ತಾವಸ್ಥೆಯೆಂಬ ನವೀನವಸ್ತ್ರವ ಹೊದ್ದಿಸಿ,
ನಿರ್ಲೋಭವೆಂಬಾಭರಣವ ತೊಡಿಸಿ,
ಸುರೂಪವೆಂಬ ನೈವೇದ್ಯವನರ್ಪಿಸಿ,
ಸಾವಧಾನವೆಂಬ ತಾಂಬೂಲವನಿತ್ತು,
ಇಂತು ಶಿವಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ಕೋಟಿಸೂರ್ಯನ ಪ್ರಭೆಯಂತೆ ಬೆಳಗುವ ಶಿವಲಿಂಗವನ್ನು
ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು,
ಆ ಶಿವಲಿಂಗದ ಪೂಜೆಯ ಸಮಾಪ್ತವ ಮಾಡಿ,
ಓಂ ಶಿಂ ಶಿಂ ಶಿಂ ಶಿಂ ಶಿಂ ಶಿಂ ಎಂಬ
ಶಿಕಾರ ಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,

ಆ ಶಿವಲಿಂಗವೆ ತಾನೆಂದರಿದು ಕೂಡಿ ಎರಡಳಿದು
ನಿಃಕಳಂಕನಾಗಿ ಆಚರಿಸಬಲ್ಲಾತನೆ
ಸಾವಧಾನಭಕ್ತಿಯನುಳ್ಳ ಶಿವಪ್ರಸಾದಿ ನೋಡ
ಸಂಗನಬಸವೇಶ್ವರ. || ೮೭ ||

೭೫೦

ಅಯ್ಯ, ಅರ್ಧಚಂದ್ರಾಕೃತಿ, ವಕಾರಪ್ರಣಮ, ಮೇಘನಾದ,
ಅನಾಹತಚಕ್ರ, ಮಾಂಜಿಷ್ಟವರ್ಣ, ಪ್ರಾಣಲಿಂಗಿಸ್ಥಲ,
ನಿರ್ಮಲತನು, ಸುಮನಹಸ್ತ, ಜಂಗಮಲಿಂಗ,
ತ್ವಕ್ಕೆಂಬ ಮುಖ, ಅನುಭಾವಭಕ್ತಿ, ಸುಸ್ಪರ್ಶನ ಪದಾರ್ಥ,
ಸುಸ್ಪರ್ಶನ ಪ್ರಸಾದ, ಈಶ್ವರ ಪೂಜಾರಿ, ಈಶ್ವರನಧಿದೇವತೆ,
ಅಮೂರ್ತಿಸಾದಾಖ್ಯ, ನಿತ್ಯವೆಂಬ ಲಕ್ಷಣ, ನಿರ್ಮಲಾತ್ಮ,
ಆದಿಶಕ್ತಿ, ಶಾಂತಿಕಲೆ-ಇಂತು ಇಪ್ಪತ್ತುನಾಲ್ಕು ಸಂಕೀಲಂಗಳನೊಳಕೊಂಡು,
ಎನ್ನ ಅನಾಹತಚಕ್ರವೆಂಬ ಹಿಮವತ್ಕೇತಾರಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ ಯಜನಸ್ವರೂಪವಾದ ಜಂಗಮಲಿಂಗವೆ
ಹಿಮಗಿರೀಶ್ವರಲಿಂಗವೆಂದು, ಪ್ರಾಣತ್ರಯವ ಮಡಿಮಾಡಿ,
ಶಾಂತಿಯೆಂಬ ಜಲದಿಂ ಮಜ್ಜನಕ್ಕೆರದು,
ವಾಯು ನಿವೃತ್ತಿಯಾದ ಗಂಧವ ಧರಿಸಿ,
ಮನ ಸುಮನವಾದಕ್ಷತೆಯನಿಟ್ಟು
ಅಲ್ಲಿಹ ದ್ವಾದಶದಳಂಗಳನೆ ಪುಷ್ಪದಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಮಾಂಜಿಷ್ಟವರ್ಣವೆ ಕರ್ಪೂರದ ಜ್ಯೋತಿಯೆಂದು, ಬೆಳಗಿ,
ಅಲ್ಲಿಹ ತೂರ್ಯಾವಸ್ಥೆಯೆಂಬ ನವೀನವಸ್ತ್ರವ ಹೊದ್ದಿಸಿ,
ನಿರ್ಲೇಪವೆಂಬಾಭರಣವ ತೊಡಿಸಿ,
ಸುಸ್ಪರ್ಶನವೆಂಬ ನೈವೇದ್ಯವನರ್ಪಿಸಿ,
ಅನುಭಾವವೆಂಬ ತಾಂಬೂಲವನಿತ್ತು
ಇಂತು ಜಂಗಮಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ಕೋಟಿಸೂರ್ಯನ ಪ್ರಭೆಯಂತೆ ಬೆಳಗುವ ಜಂಗಮಲಿಂಗವನ್ನು
ಕಂಗಳುತುಂಬಿ ನೋಡಿ, ಮನವಲ್ಲಿ ಸಂತೋಷಂಗೊಂಡು,
ಆ ಜಂಗಮಲಿಂಗದ ಪೂಜೆಯ ಸಮಾಪ್ತವ ಮಾಡಿ,
ಓಂ ವಾಂ ವಾಂ ವಾಂ ವಾಂ ವಾಂ ವಾಂ ಎಂಬ
ವಾಕಾರಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ,

ಆ ಜಂಗಮಲಿಂಗವೆ ತಾನೆಂದರಿದು ಕೂಡಿ
ಎರಡಳಿದು ನಿಃಪ್ರಪಂಚಿಯಾಗಿ ಆಚರಿಸಬಲ್ಲಾತನೆ
ಅನುಭಾವಭಕ್ತಿಯನುಳ್ಳ ಲಿಂಗಪ್ರಾಣಿ ನೋಡ
ಸಂಗನಬಸವೇಶ್ವರ. ॥ ೮೮ ॥

೭೫೧

ಅಯ್ಯ, ದರ್ಪಣಾಕೃತಿ, ಯಕಾರಪ್ರಣಮ, ಪ್ರಣವನಾಮ,
ವಿಶುದ್ಧಿಚಕ್ರ, ಕಪೋತವರ್ಣ, ಶರಣಸ್ಥಲ, ಆನಂದತನು,
ಸುಜ್ಞಾನಹಸ್ತ, ಪ್ರಸಾದಲಿಂಗ, ಶ್ರೋತ್ರವೆಂಬ ಮುಖ,
ಆನಂದಭಕ್ತಿ, ಸುಶಬ್ದಪದಾರ್ಥ, ಸುಶಬ್ದ ಪ್ರಸಾದ,
ಸದಾಶಿವ ಪೂಜಾರಿ, ಸದಾಶಿವನಧಿದೇವತೆ, ಶಿವಸಾದಾಖ್ಯ,
ಪರಿಪೂರ್ಣವೆಂಬ ಲಕ್ಷಣ, ಅನಾದಿವತುವೆಂಬ ಸಂಜ್ಞೆ,
ಊರ್ಧ್ವದಿಕ್ಕು, ಅಜಪವೇದ, ಆಕಾಶವೆ ಅಂಗ,
ಶುದ್ಧಾತ್ಮ, ಪರಾಶಕ್ತಿ, ಶಾಂತ್ಯತೀತಕಲೆ-
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು,
ಎನ್ನ ವಿಶುದ್ಧಿಚಕ್ರವೆಂಬ ಐಮುಕ್ತಿಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ ಈಳನಾಸ್ವರೂಪವಾದ
ಪ್ರಸಾದಲಿಂಗವೆ ವಿಶ್ವನಾಥಲಿಂಗವೆಂದು
ಭಾವತ್ರಯವ ಮಡಿಮಾಡಿ, ಕ್ಷಮೆಯೆಂಬ ಜಲದಿಂ ಮಜ್ಜನಕ್ಕೆರೆದು,
ಗಗನನಿವೃತ್ತಿಯಾದ ಗಂಧವ ಧರಿಸಿ,
ಜ್ಞಾನ ಸುಜ್ಞಾನವಾದಕ್ಷತೆಯನಿಟ್ಟು,
ಅಲ್ಲಿಹ ಷೋಡಶದಳಂಗಳನೆ ಪುಷ್ಪದಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಕಪೋತವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ತುರ್ಯಾತೀತಾವಸ್ಥೆಯೆಂಬ ನವೀನವಸ್ತ್ರವ ಹೊದ್ದಿಸಿ,
ನಿರ್ಮದವೆಂಬಾಭರಣವ ತೊಡಿಸಿ,
ಸುಶಬ್ದವೆಂಬ ನೈವೇದ್ಯವನರ್ಪಿಸಿ,
ಆನಂದವೆಂಬ ತಾಂಬೂಲವನಿತ್ತು,
ಇಂತು ಪ್ರಸಾದಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ
ಕೋಟಿಸೂರ್ಯನ ಪ್ರಭೆಯಂತೆ ಬೆಳಗುವ ಪ್ರಸಾದಲಿಂಗವನ್ನು
ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು
ಆ ಪ್ರಸಾದಲಿಂಗದ ಪೂಜೆಯ ಸಮಾಪ್ತವ ಮಾಡಿ,

ಓಂ ಯಂ ಯಂ ಯಂ ಯಂ ಯಂ ಯಂ ಎಂಬ
ಯಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ,
ಆ ಪ್ರಸಾದಲಿಂಗವೆ ತಾನೆಂದರಿದು ಕೂಡಿ ಎರಡಳಿದು
ನಿರ್ಮೋಹಿಯಾಗಿ ಆಚರಿಸಬಲ್ಲಾತನೆ ಆನಂದಭಕ್ತಿಯುಳ್ಳ ಶಿವಶರಣ ನೋಡ
ಸಂಗನಬಸವೇಶ್ವರ. || ೮೯ ||

೭೫೨

ಅಯ್ಯ, ಜ್ಯೋತಿರಾಕೃತಿ, ಓಂಕಾರ ಪ್ರಣಮ, ಸಿಂಹನಾದ,
ಆಜ್ಞಾಚಕ್ರ, ಮಾಣಿಕ್ಯವರ್ಣ, ಐಕ್ಯಸ್ಥಲ, ಶುದ್ಧತನು,
ಸದ್ಭಾವಹಸ್ತ, ಮಹಾಲಿಂಗ, ಹೃದಯವೆಂಬ ಮುಖ, ಸಮರಸಭಕ್ತಿ,
ಸುತೃಪ್ತಿಪದಾರ್ಥ, ಸುತೃಪ್ತಿಪ್ರಸಾದ, ಮಹಾದೇವ ಪೂಜಾರಿ,
ಮಹಾದೇವನಧಿದೇವತೆ, ಮಹಾಸಾದಾಖ್ಯ,
ಅಖಂಡವೆಂಬ ಲಕ್ಷಣ, ಮಹವೆಂಬ ಸಂಜ್ಞೆ, ಪಾತಾಳದಿಕ್ಕು,
ಗಾಯತ್ರಿವೇದ, ಆತ್ಮನೆ ಅಂಗ, ಜ್ಞಾನಾತ್ಮ,
ಚಿಚ್ಛಕ್ತಿ, ಶಾಂತ್ಯತೀತೋತ್ತರ ಕಲೆ-
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು
ಎನ್ನ ಆಜ್ಞಾಚಕ್ರವೆಂಬ ತ್ರಿಕೂಟಸಂಗಮಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ, ಬೋಧಾಸ್ವರೂಪವಾದ
ಮಹಾಲಿಂಗವೆ ಸಂಗಮೇಶ್ವರಲಿಂಗವೆಂದು,
ಅವಸ್ಥಾತ್ರಯವ ಮಡಿಮಾಡಿ,
ಸಂತೋಷವೆಂಬ ಜಲದಿಂ ಮಜ್ಜನಕ್ಕೆರದು,
ಆತ್ಮನಿವೃತ್ತಿಯಾದ ಗಂಧವ ಧರಿಸಿ,
ಭಾವ ಸದ್ಭಾವವಾದಕ್ಷತೆಯನಿಟ್ಟು,
ಅಲ್ಲಿಹ ದ್ವಿದಳಂಗಳನೆ ಪುಷ್ಪದಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಮಾಣಿಕ್ಯ ವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ನಿರಾವಸ್ಥೆಯೆಂಬ ನವೀನ ವಸ್ತ್ರವ ಹೊದ್ದಿಸಿ,
ನಿರ್ಮಲವೆಂಬಾಭರಣವ ತೊಡಿಸಿ,
ಸುತೃಪ್ತಿಯೆಂಬ ನೈವೇದ್ಯವನರ್ಪಿಸಿ,
ಸಮರಸವೆಂಬ ತಾಂಬೂಲವನಿತ್ತು,
ಇಂತು ಮಹಾಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ.
ಕೋಟಿಸೂರ್ಯನ ಪ್ರಭೆಯಂತೆ ಬೆಳಗುವ ಮಹಾಲಿಂಗವನ್ನು

ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಗೊಂಡು,
ಆ ಮಹಾಲಿಂಗದ ಪೂಜೆಯ ಸಮಾಪ್ತವ ಮಾಡಿ,
ಓಂ ಓಂ ಓಂ ಓಂ ಓಂ ಓಂ ಎಂಬ
ಓಂಕಾರ ಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಮಹಾಲಿಂಗವೆ ತಾನೆಂದರಿದು ಕೂಡಿ ಎರಡಳಿದು
ನಿತ್ಯತೃಪ್ತನಾಗಿ ಆಚರಿಸಬಲ್ಲಾತನೆ
ಸಮರಸಭಕ್ತಿಯನುಳ್ಳ ಲಿಂಗೈಕ್ಯ ನೋಡ
ಸಂಗನಬಸವೇಶ್ವರ. ||೯೦||

೭೫೩

ಅಯ್ಯ, ನಿಃಕಲಾಕೃತಿ, ಓಂಕಾರಪ್ರಣಮ, ಭ್ರಮರನಾದ,
ಬ್ರಹ್ಮಚಕ್ರ, ಜ್ಯೋತಿವರ್ಣ, ನಿಃಕಳಂಕಸ್ಥಲ, ಚಿದ್ರೂಪತನು,
ಸ್ವತಂತ್ರಹಸ್ತ, ನಿಃಕಳಂಕಲಿಂಗ, ಬ್ರಹ್ಮರಂಧ್ರಮುಖ,
ಸದ್ಭಾವಭಕ್ತಿ, ಪರಮಾನಂದಪದಾರ್ಥ, ಪರಮಾನಂದಪ್ರಸಾದ,
ಶ್ರೀಗುರು ಪೂಜಾರಿ, ಶ್ರೀಗುರು ಅಧಿದೇವತೆ, [?ಸಾದಾಖ್ಯ]
ಅಗಮ್ಯವೆಂಬ ಲಕ್ಷಣ, ಅಪ್ರಮಾಣವೆಂಬ ಸಂಜ್ಞೆ,
ಹೃತ್ಕಮಲದಿಕ್ಕು, ಧನುರ್ವೇದ, ಚಿತ್ಸೂರ್ಯನೆ ಅಂಗ, ಮಹಾ ಆತ್ಮ,
ಅನಾಮಯಶಕ್ತಿ, ನಿರ್ವಂಚಕ ಕಲೆ -
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು
ಎನ್ನ ಬ್ರಹ್ಮರಂಧ್ರಚಕ್ರವೆಂಬ ರಜತಾದ್ರಿಪರ್ವತಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ ಶಿವದೀಕ್ಷಾಸ್ವರೂಪವಾದ
ನಿಃಕಲಲಿಂಗವೆ ರಜತೇಶ್ವರಲಿಂಗವೆಂದು
ಗುಣತ್ರಯವ ಮಡಿಮಾಡಿ, ಸ್ವತಂತ್ರವೆಂಬ ಜಲದಿಂ ಮಜ್ಜನಕ್ಕೆರದು,
ಸೂರ್ಯ ನಿವೃತ್ತಿಯಾದ ಗಂಧವ ಧರಿಸಿ,
ಪರತಂತ್ರ ಸ್ವತಂತ್ರವಾದಕ್ಷತೆಯನಿಟ್ಟು,
ಅಲ್ಲಿಹ ಸಹಸ್ರದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಜ್ಯೋತಿವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ನಿಃಕಳಾವಸ್ಥೆಯೆಂಬ ನವೀನ ವಸ್ತ್ರವ ಹೊದ್ದಿಸಿ,
ನಿರಾಭಾರವೆಂಬಾಭರಣವ ತೊಡಿಸಿ,
ಪರಮಾನಂದವೆಂಬ ನೈವೇದ್ಯವನರ್ಪಿಸಿ,
ಸದ್ಭಾವವೆಂಬ ತಾಂಬೂಲವನಿತ್ತು,

ಅಂತು ನಿಃಕಳಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ದಶಕೋಟಿಸೂರ್ಯನ ಪ್ರಭೆಯಂತೆ ಬೆಳಗುವ ನಿಃಕಳಲಿಂಗವನ್ನು
ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು,
ಆ ನಿಃಕಳಲಿಂಗದ ಪೂಜೆಯ ಸಮಾಪ್ತವ ಮಾಡಿ,
ಕ್ರಿಯಾಜಪವೆಂಬ ದ್ವಾದಶಪ್ರಣವಮಂತ್ರಂಗಳಿಂದೆ ನಮಸ್ಕರಿಸಿ,
ಆ ನಿಃಕಳಲಿಂಗವೆ ತಾನೆಂದರಿದು ಕೂಡಿ ಎರಡಳಿದು ಸ್ವತಂತ್ರನಾಗಿ
ಆಚರಿಸಬಲ್ಲಾತನೆ ಸದ್ಭಾವಭಕ್ತಿಯನುಳ್ಳ ನಿಃಕಳಂಕ ನೋಡ
ಸಂಗನಬಸವೇಶ್ವರ. ॥ ೬೧ ॥

೭೫೪

ಅಯ್ಯ, ನಿಃಶೂನ್ಯಾಕೃತಿ, ಕ್ಷಕಾರ ಪ್ರಣಮ,
ದಿವ್ಯನಾದ, ಶಿಖಾಚಕ್ರ, ಮಹಾಜ್ಯೋತಿವರ್ಣ, ನಿರಾಲಂಬಸ್ಥಲ,
ಚಿನುಮಯ ತನು, ನಿರಾಳ ಹಸ್ತ, ಶೂನ್ಯಲಿಂಗ,
ಉನ್ಮನಿಮುಖ, ನಿರಹಂಕಾರ ಭಕ್ತಿ, ಪರಿಪೂರ್ಣಪದಾರ್ಥ,
ಪರಿಪೂರ್ಣಪ್ರಸಾದ, ಪರಶಿವ ಪೂಜಾರಿ, ಪರಶಿವನಧಿದೇವತೆ,
ಅವಿರಳ ಸಾದಾಖ್ಯ, ಆಗಮವೆಂಬ ಲಕ್ಷಣ,
ನಿರ್ಮಾಯವೆಂಬ ಸಂಜ್ಞೆ, ದಿವ್ಯನಾದ, ಘೋಷದಿಕ್ಕು,
ಮನೋಲ್ಲಯ ವೇದ, ಚಿಚ್ಚಂದ್ರನೆ ಅಂಗ, ದಿವ್ಯಾತ್ಮ,
ನಿಭ್ರಾಂತಿ ಶಕ್ತಿ, ಅನಂತಕಲೆ -
ಇಂತು ಇಪ್ಪತ್ತುನಾಲ್ಕು ಸಂಕೀಲಂಗಳನೊಳಕೊಂಡು
ಎನ್ನ ಶಿಖಾಚಕ್ರವೆಂಬ ಹೇಮಾದ್ರಿಪರ್ವತಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ
ಶಿವಮಂತ್ರ ಶಿಕ್ಷಾಕರ್ತೃಸ್ವರೂಪವಾದ ಶೂನ್ಯಲಿಂಗವೆ
ಹಿರಣ್ಯೇಶ್ವರಲಿಂಗವೆಂದು ಕರಣತ್ರಯವ ಮಡಿಮಾಡಿ,
ಅನುಪಮವೆಂಬ ಜಲದಿಂ ಮಜ್ಜನಕ್ಕೆರದು,
ಚಂದ್ರ ನಿವೃತ್ತಿಯಾದ ಗಂಧವ ಧರಿಸಿ,
ವಿರಳ ಅವಿರಳವಾದಕ್ಷತೆಯನಿಟ್ಟು,
ಅಲ್ಲಿಹ ತ್ರಿದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಹ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಹ ಮಹಾಜ್ಯೋತಿವರ್ಣವೆ ಕರ್ಪೂರದ ಜ್ಯೋತಿಯೆಂದು ಬೆಳಗಿ,
ಅಲ್ಲಿಹ ನಿಃಸಂಸಾರಾವಸ್ಥೆಯೆಂಬ ನವೀನ ವಸ್ತ್ರವ ಹೊದ್ದಿಸಿ,
ಸದಾನಂದವೆಂಬಾಭರಣವ ತೊಡಿಸಿ,
ಪರಿಪೂರ್ಣವೆಂಬ ನೈವೇದ್ಯವನರ್ಪಿಸಿ,

ನಿರಹಂಕಾರವೆಂಬ ತಾಂಬೂಲವನಿತ್ತು,
ಇಂತು ಶೂನ್ಯಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ಶತಕೋಟಿ ಸೂರ್ಯನ ಪ್ರಭೆಯಂತೆ ಬೆಳಗುವ ಶೂನ್ಯಲಿಂಗವನ್ನು
ಕಂಗಳುತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು,
ಆ ಶೂನ್ಯಲಿಂಗದ ಪೂಜೆಯ ಸಮಾಪ್ತವ ಮಾಡಿ,
ಜ್ಞಾನ ಜಪವೆಂಬ ದ್ವಾದಶ ಪ್ರಣಮ ಮಂತ್ರಗಳಿಂದೆ ನಮಸ್ಕರಿಸಿ,
ಆ ಶೂನ್ಯಲಿಂಗದ ತಾನೆಂದರಿದು,
ಕೂಡಿ ಎರಡಳಿದು ನಿಸ್ಸಂಸಾರಿಯಾಗಿ ಆಚರಿಸಬಲ್ಲಾತನೆ
ನಿರಹಂಕಾರ ಭಕ್ತಿಯನುಳ್ಳ ನಿರಾತಂಕ ನೋಡ
ಸಂಗನಬಸವೇಶ್ವರ. ॥ ೯೨ ॥

೭೫೫

ಅಯ್ಯ, ನಿರಂಜನಾಕೃತಿ, ವ್ಯಂಜನ ಹಕಾರಪ್ರಣಮ,
ಮಹಾನಾದ, ಪಶ್ಚಿಮಚಕ್ರ, ಅಖಂಡಮಹಾಜ್ಯೋತಿವರ್ಣ,
ನಿರಾತಂಕಸ್ಥಲ, ನಿರ್ಮುಕ್ತಿತನು, ನಿರ್ಮಾಯಹಸ್ತ,
ನಿರಂಜನ ಲಿಂಗ, ಪಶ್ಚಿಮವೆಂಬ ಮುಖ, ಅಪ್ರಮಾಣ ಭಕ್ತಿ,
ಅವಿರಳ ಪದಾರ್ಥ, ಅವಿರಳ ಪ್ರಸಾದ, ಪರಮೇಶ್ವರ ಪೂಜಾರಿ,
ಪರಮೇಶ್ವರನಧಿದೇವತೆ, ನಿಷ್ಕಲಸಾದಾಖ್ಯ,
ನಿರ್ವಂಚಕವೆಂಬ ಲಕ್ಷಣ, ಅವಿರಳವೆಂಬ ಸಂಜ್ಞೆ,
ನಿರಾಳದಿಕ್ಕು, ಅಗಮ್ಯವೇದ, ಶಿವಯೋಗಿಯೆ ಅಂಗ,
ಚಿನ್ಮಯಾತ್ಮ, ನಿರ್ವಯಶಕ್ತಿ, ಅನಂತಕಲೆ-
ಇಂತು ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು,
ಎನ್ನ ಪಶ್ಚಿಮಚಕ್ರವೆಂಬ ಮಹಾ ಮೇರುಪರ್ವತಕ್ಷೇತ್ರದಲ್ಲಿ
ಮೂರ್ತಿಗೊಂಡಿರ್ದ ನಿಜಮೋಕ್ಷ ಕರ್ತೃಸ್ವರೂಪವಾದ
ನಿರಂಜನಲಿಂಗವೆ ಶಾಂಭವಮೂರ್ತಿಲಿಂಗವೆಂದು
ಹಂಸತ್ರಯವ ಮಡಿಮಾಡಿ, ನಿರ್ಭಾವವೆಂಬ ಜಲದಿಂ ಮಜ್ಜನಕ್ಕೆರದು,
ನಿರ್ಜಾತವೆಂಬ ಗಂಧವ ಧರಿಸಿ, ನಿರ್ಜಡವೆಂಬಕ್ಷತೆಯನಿಟ್ಟು,
ನಿರ್ದ್ವಂದ್ವವೆಂಬ ಪುಷ್ಪದ ಮಾಲೆಯಂ ಧರಿಸಿ,
ನಿರ್ಲಜ್ಜವೆಂಬ ಧೂಪವ ಬೀಸಿ,
ನಿರಾಲಂಬವೆಂಬ ಜ್ಯೋತಿಯ ಬೆಳಗಿ,
ನಿರಾಮಯವೆಂಬ ವಸ್ತ್ರವ ಹೊದ್ದಿಸಿ,
ನಿಸ್ಪೃಹವೆಂಬಾಭರಣವ ತೊಡಿಸಿ,

ನಿರಾಳವೆಂಬ ನೈವೇದ್ಯವನರ್ಪಿಸಿ, ನಿರಾವರಣವೆಂಬ ತಾಂಬೂಲವನಿತ್ತು,
ಇಂತು ನಿರಂಜನಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ,
ಸಹಸ್ರಕೋಟಿ ಸೂರ್ಯನ ಪ್ರಭೆಯಂತೆ ಬೆಳಗುವ ನಿರಂಜನಲಿಂಗವನ್ನು
ಕಂಗಳುತುಂಬಿ ನೋಡಿ, ಮನದಲ್ಲಿ ಸಂತೋಷಗೊಂಡು,
ಆ ನಿರಂಜನಲಿಂಗದ ಪೂಜೆಯ ಸಮಾಪ್ತವ ಮಾಡಿ,
ಮಹಾಜ್ಞಾನಜಪವೆಂಬ ದ್ವಾದಶಪ್ರಣಮಮಂತ್ರಂಗಳಿಂದೆ ನಮಸ್ಕರಿಸಿ,
ಆ ನಿರಂಜನಲಿಂಗವೆ ತಾನೆಂದರಿದು ಕೂಡಿ
ಎರಡಳಿದು ನಿಜಾಂತರ್ಯಾಮಿಯಾಗಿ ಆಚರಿಸಬಲ್ಲಾತನೆ
ಅಪ್ರಮಾಣಭಕ್ತಿಯನ್ನುಳ್ಳ ನಿಜಮೋಕ್ಷಸ್ವರೂಪ ನೋಡ
ಸಂಗನಬಸವೇಶ್ವರ. || ೯೩ ||

೭೫೬

ಅಯ್ಯ, ತಾರಕಾಕೃತಿ ಮೊದಲಾಗಿ ನವಾಕೃತಿಗಳು,
ಅಯ್ಯ, ನಕಾರಪ್ರಣಮ ಮೊದಲಾಗಿ ನವಪ್ರಣಮಗಳು,
ಅಯ್ಯ, ಭ್ರಮರನಾದ ಮೊದಲಾಗಿ ನವನಾದಗಳು,
ಆಧಾರಚಕ್ರ ಮೊದಲಾಗಿ ನವಚಕ್ರಗಳು,
ಪೀತವರ್ಣ ಮೊದಲಾಗಿ ನವವರ್ಣಗಳು,
ಭಕ್ತಸ್ಥಲ ಮೊದಲಾಗಿ ನವಸ್ಥಲಗಳು,
ಸ್ಥೂಲತನು ಮೊದಲಾಗಿ ನವತನುಗಳು,
ಸುಚಿತ್ತಹಸ್ತ ಮೊದಲಾಗಿ ನವಹಸ್ತಗಳು,
ಆಚಾರಲಿಂಗ ಮೊದಲಾಗಿ ನವಲಿಂಗಗಳು,
ಘ್ರಾಣಮುಖ ಮೊದಲಾಗಿ ನವಮುಖಗಳು,
ಶ್ರದ್ಧಾಭಕ್ತಿ ಮೊದಲಾಗಿ ನವಭಕ್ತಿಗಳು,
ಸುಗಂಧಪದಾರ್ಥ ಮೊದಲಾಗಿ ನವಪದಾರ್ಥಗಳು,
ಸುಗಂಧಪ್ರಸಾದ ಮೊದಲಾಗಿ ನವಪ್ರಸಾದಗಳು,
ಬ್ರಹ್ಮಪೂಜಾರಿ ಮೊದಲಾಗಿ ನವಪೂಜಾರಿಗಳು,
ಬ್ರಹ್ಮ ಅಧಿದೇವತೆ ಮೊದಲಾಗಿ ನವ ಅಧಿದೇವತೆಗಳು,
ಕರ್ಮಸಾದಾಖ್ಯ ಮೊದಲಾಗಿ ನವಸಾದಾಖ್ಯಗಳು,
ಸತ್ತುವೆಂಬ ಲಕ್ಷಣ ಮೊದಲಾಗಿ ನವಲಕ್ಷಣಗಳು,
ಪರವೆಂಬ ಸಂಜ್ಞೆ ಮೊದಲಾಗಿ ನವಸಂಜ್ಞೆಗಳು,
ಪೂರ್ವದಿಕ್ಕು ಮೊದಲಾಗಿ ನವದಿಕ್ಕುಗಳು,
ಋಗ್ವೇದ ಮೊದಲಾಗಿ ನವವೇದಗಳು,

ಚಿತ್ಶುದ್ಧಿ ಮೊದಲಾಗಿ ನವ ಅಂಗಗಳು,
ಜೀವಾತ್ಮ ಮೊದಲಾಗಿ ನವ ಆತ್ಮರು,
ಕ್ರಿಯಾಶಕ್ತಿ ಮೊದಲಾಗಿ ನವಶಕ್ತಿಯರು,
ನಿವೃತ್ತಿಕಲೆ ಮೊದಲಾಗಿ ನವಕಲೆಗಳು,
ಇಂತು ಇಪ್ಪತ್ತುನಾಲ್ಕು ಸಕೀಲಂಗಳು
ನವವಿಧ ತೆರದಿಂದ ಇನ್ನೂರ ಹದಿನಾರು ಸಕೀಲು ಮೊದಲಾದ
ಸಮಸ್ತ ಕ್ಷೇತ್ರಂಗಳನೊಳಕೊಂಡು
ಎನ್ನ ಅಣುಚಕ್ರವೆಂಬ ಪರಮಕೈಲಾಸ ಚಿದಾಕಾಶಮಂಡಲದ
ವರ ಚೌಕಮಂಟಪ ನವರತ್ನ ಖಚಿತ ಶೂನ್ಯಸಿಂಹಾಸನಪೀಠದಲ್ಲಿ
ಮೂರ್ತಿಗೊಂಡಿರ್ದ ಪರಾತ್ಪರ ನಿಜಜಂಗಮಲಿಂಗಸ್ವರೂಪ
ಸರ್ವಚೈತನ್ಯಾಧಾರಸ್ವರೂಪವಾದ ಅಣುಲಿಂಗಜಂಗಮವೆ
ಪರತತ್ವ ನಿಃಕಲಪರಬ್ರಹ್ಮಮೂರ್ತಿ ಲಿಂಗಜಂಗಮಪ್ರಸಾದವೆಂದು
ತನುತ್ರಯ. ಮನತ್ರಯ, ಭಾವತ್ರಯ, ಆತ್ಮತ್ರಯ.
ಪ್ರಾಣತ್ರಯ, ಗುಣತ್ರಯ, ಅವಸ್ಥಾತ್ರಯ, ತತ್ವತ್ರಯ,
ಕರಣತ್ರಯ, ಹಂಸತ್ರಯಂಗಳ ಪೂರ್ಣ ಮಡಿಮಾಡಿ,
ನಿರ್ನಾಮವೆಂಬ ಜಲದಿಂ ಮಜ್ಜನಕ್ಕೆರದು,
ನಿಃಕರಣವೆಂಬ ಗಂಧವ ಧರಿಸಿ, ನಿಃಸಂಗವೆಂಬಕ್ಷತೆಯನಿಟ್ಟು,
ನಿಃಪರಿಪೂರ್ಣವೆಂಬ ಪುಷ್ಪದಮಾಲೆಯ ಧರಿಸಿ,
ನಿರುಪಾಧಿಕವೆಂಬ ಧೂಪವ ಬೀಸಿ, ನಿಃಕಳೆಯೆಂಬ ಜ್ಯೋತಿಯ ಬೆಳಗಿ,
ನಿಶ್ಚಲವೆಂಬ ವಸ್ತ್ರವ ಹೊದ್ದಿಸಿ, ಪರಮನಿಜಾಭರಣವ ತೊಡಿಸಿ,
ನಿಃಶೂನ್ಯವೆಂಬ ನೈವೇದ್ಯವನರ್ಪಿಸಿ,
ನಿರಾವಯವೆಂಬ ತಾಂಬೂಲವನಿತ್ತು,
ಇಂತೀ ಅಣುಲಿಂಗಜಂಗಮಪ್ರಸಾದಕ್ಕೆ
ಅಷ್ಟವಿಧಾರ್ಚನೆಯಂ ಮಾಡಿ,
ಅನಂತಕೋಟಿ ಸೂರ್ಯಚಂದ್ರಾಗ್ನಿಪ್ರಭೆಯಂತೆ ಬೆಳಗುವ,
ಅಣುಲಿಂಗಜಂಗಮಪ್ರಸಾದವನ್ನು ಅನುಮಿಷದೃಷ್ಟಿಯಿಂ ನಿರೀಕ್ಷಿಸಿ,
ಉನ್ಮನಾಗ್ರದಲ್ಲಿ ಸಂತೋಷಂಗೊಂಡು
ಆ ಅಣುಲಿಂಗಜಂಗಮಪ್ರಸಾದಪೂಜೆಯ ಸಮಾಪ್ತವ ಮಾಡಿ,
ಅನಂತಕೋಟಿ ಮಹಾಮಂತ್ರಂಗಳಿಂದ ನಮಸ್ಕರಿಸಿ,
ಆ ಅಣುಲಿಂಗಜಂಗಮಪ್ರಸಾದವೆ ತಾನೆಂದರಿದು ಏಕತ್ವದಿಂ.
ನಿಶ್ಚಲಚಿತ್ತದೊಳ್ ಕೂಡಿ ಉಭಯುವಳಿದು ಇಹಪರಂಗಳ ಹೊದ್ದದೆ,

ಕನ್ನಡಿಯ ಪ್ರತಿಬಿಂಬದಂತೆ ಸರ್ವಸಂಗಪರಿತ್ಯಾಗನಾಗಿ,
ನಿಜಾಚರಣೆಯಲ್ಲಿ ಆಚರಿಸಬಲ್ಲಾತನೆ ದಶವಿಧಲಿಂಗಜಂಗಮಸಂಗ
ಭಕ್ತಿಪ್ರಸಾದವುಳ್ಳ ಅನಾದಿ ಅಖಂಡ ಚಿಜ್ಯೋತಿ ಸದ್ಭಕ್ತ ಜಂಗಮ ನೋಡ
ಸಂಗನಬಸವೇಶ್ವರ. ॥ ೯೪ ॥

೭೫೭

ಅಯ್ಯ, ಇಂತು ಶಿಖಿ ಕರ್ಪೂರಸಂಯೋಗದಂತೆ
ನಿಜಶಿವಯೋಗಾಚಾರನುಸಂಧಾನವ
ಕಪಿಲಸಿದ್ಧಮಲ್ಲಿಕಾರ್ಜುನಲಿಂಗದೊಡನೆ
ಚನ್ನಬಸವ ಪ್ರಮಥಗಣಸಾಕ್ಷಿಯಿಂದ ಮಹಾಪ್ರಭುಸ್ವಾಮಿಗಳ
ಕರುಣಕಟಾಕ್ಷೆಯಿಂದ ಬೆಸಗೊಂಡು
ಸರ್ವಾಂಗಲಿಂಗಸಂಧಾನದಿಂದ ಬೆರದು
ಬಯಲಾದರು ಸಿದ್ಧರಾಮದೇಶಿಕೇಂದ್ರನು ನೋಡ
ಸಂಗನಬಸವೇಶ್ವರ. ॥೯೫॥

೭೫೮

ಅಯ್ಯ, ಇದೆ ಮಹಾಪ್ರಭುವಿನ
ಮಹಾಪ್ರಸಾದನುಸಂಧಾನದಿಂದ
ಶಾಂಭವಲೋಕದ ಶಾಂಭವಗಣಂಗಳು,
ಶಿವಲೋಕದ ಶಿವಗಣಂಗಳು,
ರುದ್ರಲೋಕದ ರುದ್ರಗಣಂಗಳು,
ನಾಗಲೋಕದ ನಾಗಗಣಂಗಳು,
ದೇವಲೋಕದ ದೇವಗಣಂಗಳು,
ಮರ್ತ್ಯಲೋಕದ ಮಹಾಗಣಂಗಳು
ಮುಂತಾಗಿ ನಿಜಾಚರಣೆ ಲಿಂಗಲೋಲುಪ್ತರಾಗಿ,
ಬಯಲೊಳಗೆ ಮಹಾಬಯಲಾದರು ನೋಡ
ಸಂಗನಬಸವೇಶ್ವರ. ॥ ೯೬ ॥

೭೫೯

ಅಯ್ಯ, ಇಂತು ನಿರಾವಯ ಶೂನ್ಯಲಿಂಗಾನುಭಾವ
ಸ್ಥಲಾಚರಣೆಯ ಕರ್ತೃ ಗುರುಬಸವೇಶ್ವರಸ್ವಾಮಿಗಳ
ಪಾದೋದಕ ಪ್ರಸಾದದ ಬೆಳಗಿನೊಳಗೆ ಬೆಳಗಾದರು ನೋಡ ಪ್ರಭುಸ್ವಾಮಿಗಳು.
ಪ್ರಭುಸ್ವಾಮಿಗಳ ಪಾದೋದಕ-ಪ್ರಸಾದದ

ನಿಜಚಿದ್ಬೆಳಗಿನೊಳಗೆ ಬೆಳಗಾದರು ನೋಡ
ಗುರುಬಸವೇಶ್ವರಸ್ವಾಮಿಗಳು.
ಇವರಿಬ್ಬರ ಪಾದೋದಕ-ಪ್ರಸಾದದ ಚಿದ್ಬೆಳಗಿನೊಳಗೆ
ಚನ್ನಬಸವಣ್ಣ, ನಿರ್ಲಜ್ಜಶಾಂತಲಿಂಗೇಶ್ವರ, ಸಿದ್ಧರಾಮ
ಮೊದಲಾದ ಸಕಲಪ್ರಮಥಗಣಂಗಳೆಲ್ಲ
ಬಯಲೊಳಗೆ ಮಹಾಬಯಲಾದರು ನೋಡ.
ಇಂತು ಜೋಗೈಸಿ ಏಕಸಮರಸವಾದ
ಬಸವ-ಪ್ರಭು-ಚನ್ನಬಸವಣ್ಣ-ಪ್ರಮಥಗಣಂಗಳ
ಪಾದೋದಕ-ಪ್ರಸಾದವೆ ರೂಪಾಗಿ,
ಗುರುಸಿದ್ಧ-ಸಂಗನಬಸವಣ್ಣನೆಂಬಭಿಧಾನದಿಂದವತರಿಸಿ
ಚಿದ್ಘನ ಮಹಾಂತ ಪ್ರಮಥಗಣಂಗಳ ಕೃಪಾದೃಷ್ಟಿಯಿಂದ
ಸರ್ವಸಂಗಪರಿತ್ಯಾಗಸ್ಥಲ ಮೊದಲಾಗಿ
ನಿರಾವಯ ಶೂನ್ಯಲಿಂಗಾನುಭಾವಸ್ಥಲ ಕಡೆಯಾದ
ನವಸ್ಥಲಂಗಳೊಳಗೆ ಎರಡೆಂಬತ್ತೆಂಟುಕೋಟಿ ವಚನಾನುಭಾವದ
ಸುಧಾರಸಸ್ವಾನುಭಾವ ಸೂತ್ರಕ್ಕೆ ಬೆಟ್ಟದ ನೆಲ್ಲಿ ಘಟ್ಟದ ಉಪ್ಪು
ಕೂಡಿದೋಪಾದಿಯಲ್ಲಿ ಯೋಗ್ಯವಾದೇವು ನೋಡ
ಸಂಗನಬಸವೇಶ್ವರ. ॥ ೯೭ ॥

೭೬೦

ಅಯ್ಯ, ಇಂತು ಕಲ್ಯಾಣಪಟ್ಟಣದ ಅನುಭಾವಮಂಟಪದ
ಶೂನ್ಯಸಿಂಹಾಸನದಲ್ಲಿ ಪ್ರಭುಸ್ವಾಮಿಗಳು
ಬಸವರಾಜೇಂದ್ರ ಮುಖ್ಯವಾದ ಸಕಲಪ್ರಮಥಗಣಂಗಳು ಕೂಡಿ,
ಚಿಕ್ಕದಂಡನಾಯಕ ಮುಖವಚನದಿಂದೆ
ಶಿವಯೋಗಿ ಸಿದ್ಧರಾಮೇಶ್ವರನ ಉಪದೇಶಕಾರಣಾರ್ಥವಾಗಿ,
ನವರತ್ನ ಖಚಿತ ಮಂಟಪವ ರಚಿಸಿ,
ಶುಚಿ, ರುಚಿ, ಪರುಷ, ನಿಜ, ಸದ್ಭಕ್ತಿ, ಜ್ಞಾನ, ವೈರಾಗ್ಯ,
ಸತ್ಕ್ರಿಯಾಚಾರ ಷಟ್ಸ್ಥಲಮಾರ್ಗವ
ಚೆನ್ನಬಸವಣ್ಣನ ಮುಖವಚನದಿಂದೆ ಸಿದ್ಧರಾಮದೇಶಿಕೇಂದ್ರನಿಗೆ
ಬೋಧಿಸಿದ ನಿಲುಕಡೆಯ ಸೂತ್ರವದೆಂತೆಂದಡೆ:
ಅಯ್ಯ, ಮೂವತ್ತಾರು ತತ್ವಂಗಳಲ್ಲಿ ಸಂಬಂಧವಾದ
ಅಷ್ಟಾವರಣಂಗಳ ಕೂಡಿ ನಾಲ್ವತ್ತುನಾಲ್ಕು ಚಿದಂಗತತ್ವಂಗಳೆಂದೆನಿಸಿ,
ಅಯ್ಯ, ಇಷ್ಟಲಿಂಗಜಪಪ್ರದಕ್ಷಿಣ ಪ್ರಣಾಮ ಹತ್ತೊಂಬತ್ತು,

ಪ್ರಾಣಲಿಂಗಜಪಪ್ರದಕ್ಷಿಣ ಪ್ರಣಮ ಹತ್ತೊಂಬತ್ತು,
ಭಾವಲಿಂಗಜಪಪ್ರದಕ್ಷಿಣ ಪ್ರಣಮ ಹತ್ತೊಂಬತ್ತು
ಕೂಡಲಾಗಿ ಐವತ್ತೇಳು ಮಹಾಪ್ರಣಮಂಗಳೆ ಚಿದ್ಘನಲಿಂಗಸ್ಥಲಂಗಳಾಗಿ
ಶೋಭಿಸುವಂಥ ಚಿದಂಗ-ಚಿದ್ಘನಲಿಂಗವ
ಉಭಯಭಾವವಳಿದು ನೂರೊಂದುಸ್ಥಲವ ಸಂಬಂಧವಮಾಡಿ,
ಮಾರ್ಗಾಚರಣೆಯ ಕುರುಹ ತೋರಿ,
ಅಂತರಂಗದಲ್ಲಿ ಶೋಭಿಸುವ ಲೋಮವಿಲೋಮದಳಂಗಳೆ
ನೂರೆಂಟು ತೆರದ ಚಿದಂಗಂಗಳಾಗಿ,
ಆ ದಳಂಗಳಲ್ಲಿ ಝಗಝಗಾಯಮಾನವಾಗಿ ಪ್ರಕಾಶಿಸುವ ಪ್ರಣಮಂಗಳೆ
ನೂರೆಂಟು ತೆರದ ಚಿದ್ಘನಲಿಂಗಂಗಳಾಗಿ,
ಒಳಗು-ಹೊರಗು ಎಂಬ ಉಭಯ ನಾಮ ರೂಪು ಕ್ರಿಯವನಳಿದು
ಇನ್ನೂರಹದಿನಾರು ಸ್ಥಲವ ಸಂಬಂಧವ ಮಾಡಿ
ಮೀರಿದ ಕ್ರಿಯಾಚರಣೆಯ ಕುರುಹ ತೋರಿ
ಅನಾದಿಗುರು ಬಸವರಾಜೇಂದ್ರನ ಪ್ರಸಿದ್ಧಪ್ರಸಾದವೆ
ಮಾರ್ಗಕ್ರಿಯಾರೂಪವಾದ ನೂರೊಂದುಸ್ಥಲಂಗಳಾಗಿ,
ಅನಾದಿಜಂಗಮ ಪ್ರಭುರಾಜೇಂದ್ರನ ಶುದ್ಧಪ್ರಸಾದವೆ
ಮೀರಿದ ಕ್ರಿಯಾರೂಪವಾದ ಇನ್ನೂರ ಹದಿನಾರುಸ್ಥಲಂಗಳಾಗಿ,
ಇವರಿಬ್ಬರ ಮಹಾಪ್ರಸಾದವೆ ಘಟ್ಟಿಗೊಂಡು
ಅನಾದಿಶರಣರೂಪವ ತಾಳಿ ಚೆನ್ನಬಸವಣ್ಣನೆಂಬಭಿಧಾನದಿಂದ
ಮಾರ್ಗಕ್ರಿಯಾಸ್ವರೂಪ ನೂರೊಂದುಸ್ಥಲವೆ ಆಚರಣೆಯಾಗಿ
ಮೀರಿದ ಕ್ರಿಯಾಸ್ವರೂಪ ಇನ್ನೂರ ಹದಿನಾರುಸ್ಥಲವೆ ಸಂಬಂಧವಾಗಿ
ಅನಾದಿಪರಶಿವರೂಪ ಶಿವಯೋಗಿಸಿದ್ಧರಾಮನ
ಕರ-ಮನ-ಭಾವಂಗಳಲ್ಲಿ ಮಿಶ್ರಾಮಿಶ್ರಂಗಳೊಡನೆ
ಅಗಣಿತ ಸೂರ್ಯಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ
ತ್ಯಾಗ-ಭೋಗ-ಯೋಗಾನುಸಂಧಾನದಿಂದ ಸಿದ್ಧರಾಮನ
ಕರಸ್ಥಲದಲ್ಲಿ 'ಶುದ್ಧಪ್ರಸಾದ'-ಇಷ್ಟಲಿಂಗವಾಗಿ
ಅಷ್ಟವಿಧಾರ್ಚನೆ-ಷೋಡಶೋಪಚಾರವ ಕೈಕೊಂಡು ಒಪ್ಪುತ್ತಿರ್ಪರು ನೋಡ.
ಮನಸ್ಥಲದಲ್ಲಿ 'ಸಿದ್ಧಪ್ರಸಾದ'-ಪ್ರಾಣಲಿಂಗವಾಗಿ
ಮಂತ್ರ-ಧ್ಯಾನ-ಜಪ-ಸ್ತೋತ್ರಂಗಳ ಕೈಕೊಂಡು ಒಪ್ಪುತ್ತಿರ್ಪರು ನೋಡ.
ಭಾವಸ್ಥಲದಲ್ಲಿ 'ಪ್ರಸಿದ್ಧಪ್ರಸಾದ'-ಭಾವಲಿಂಗವಾಗಿ
ಮನೋರ್ಲಯ ನಿರಂಜನ ಪೂಜಾಕ್ರಿಯಾನಂದ ಕೂಟವ

ಕೈಕೊಂಡು ಒಪ್ಪುತ್ತಿರ್ಪರು ನೋಡ.
ಇಂತು ಸಂಬಂಧಾಚರಣೆಯ ಸ್ಥಲಕುಳಂಗಳ ಚಿದ್ಬೆಳಗಿನಲ್ಲಿ ಶೋಭಿಸುವ
ಬಸವಣ್ಣ, ಚೆನ್ನಬಸವಣ್ಣ, ಪ್ರಭು, ಸಿದ್ಧರಾಮ
ಪ್ರಮಥಗಣಂಗಳ ಮಹಾಪ್ರಸಾದ ಬೆಳಗಿಗೆ ಯೋಗ್ಯರಾಗಿ
ದಗ್ಧಪಟನ್ಯಾಯ, ಉರಿವುಂಡ ಕರ್ಪೂರದಂತಾದೆವು ನೋಡ
ಸಂಗನಬಸವೇಶ್ವರ. ॥ ೯೮ ॥

೭೬೧

ಅಯ್ಯ, ಇಂತು ಅನಾದಿ ಮಹಾಂತ ಚಿದ್ಘನ ಶರಣನ
ಸ್ವರೂಪು ನಿಲುಕಡೆಯ ನಿನ್ನ ನಿಜಚಿದ್ಬೆಳಗಿನ ಅರುಹಿನಿಂದರಿದು
ಮಾರ್ಗಕ್ರಿಯಾ-ಮೀರಿದಕ್ರಿಯಾ, ಆಚರಣೆ-ಸಂಬಂಧವ
ಉಲುಹದಗಿ ನೀನೆಂದಿನಂತೆ ನಿರಂಜನ ನಿರಾವಯಮೂರ್ತಿ ನೋಡ
ಸಂಗನಬಸವೇಶ್ವರ. ॥ ೯೯ ॥

೭೬೨

ಅಯ್ಯ, ಇಂತು ಮಹಾಪ್ರಮಥಗಣಂಗಳ
ಚಿದ್ಘನಪ್ರಸಾದವಚನಾಮೃತದ ಅನುಭಾವಸೂತ್ರವ
ಮರ್ತ್ಯಲೋಕದ ಮಹಾಗಣಂಗಳು ಅರಿದಾನಂದಿಸುವ ವಿಚಾರವೆಂತೆಂದಡೆ:
ಈ ವಚನಾರ್ಥವ ಶೈವ-ವೀರಶೈವ ಉಭಯಮಾರ್ಗದ
ಅಪಶೈವರಿಗೆ ತೋರಿ ಅನುಭಾವವ ಮಾಡಲಾಗದು.
ಪಂಚಮಹಾಪಾತಕ ಸೂತಕರಿಗೆ ಬೋಧಿಸಲಾಗದು.
ಋಣಪಾತಕ, ಆಚಾರಭ್ರಷ್ಟ, ಗುರುದೀಕ್ಷಾಹೀನ,
ಗುರುಲಿಂಗಜಂಗಮದ್ರೋಹಿಗಳಿಗೆ ಹೇಳಲಾಗದು.
ಸ್ತ್ರೀಹತ್ಯ, ಶಿಶುಹತ್ಯ, ಮಾತೃಪಿತೃದ್ರೋಹಿಗಳೊಡನೆ ಪ್ರಸಂಗಿಸಲಾಗದು.
ಇಷ್ಟಲಿಂಗಬಾಹ್ಯರು ಕೇಳುವಂತೆ ಓದಿ
ಅರ್ಥ-ಅನ್ವಯ-ಆಕಾಂಕ್ಷೆಗಳ ಮಾಡಿ
ಸ್ವರೂಪಾರ್ಥ-ಸಂಬಂಧಾರ್ಥ-ನಿಶ್ಚಯಾರ್ಥಂಗಳಿಂದ
ಶರಣಗಣಂಗಳ ನಡೆ-ನುಡಿಯ ಪ್ರಕಟಿಸಲಾಗದು.
ಇಂತು ಗುರುವಾಕ್ಯವ ಮೀರಿ
ಮಹಾನುಭಾವ ಮಂತ್ರಾರ್ಥವ ಬಹಿಷ್ಕರಿಸಿದವರು
ಜನ್ಮ-ಜರೆ-ಮರಣಕ್ಕೊಳಗಾಗಿ, ಭವಪಾಶದಲ್ಲಿ ಬಿದ್ದು
ಶುನಿ-ಸೂಕರಾದಿ ಜನಿತರಾಗಿ ಪ್ರಳಯಾದಿಗಳಿಗೆ ಒಳಗು ನೋಡ
ಸಂಗನಬಸವೇಶ್ವರ. ॥ ೧೦೦ ॥

೭೬೩

ಅಯ್ಯ, ಇಂತು ನಿರಂಜನ ಮಹಾಲಿಂಗಾನುಭಾವಸೂತ್ರವ
ಎರಡೆಂಬತ್ತೆಂಟುಕೋಟಿ ಹರಗುರು ವಾಕ್ಯಪ್ರಮಾಣವಚನಾನುಭಾವವ
ಪ್ರಕಟಿಸಿ ಈ ಒಂದು ವಚನಾರ್ಥದಲ್ಲಿ ಅತಿಗೋಪ್ಯದಿಂದ
ಅನಾದಿ ನಿಃಕಳಂಕ ನಿಶ್ಶೂನ್ಯ ನಿರಂಜನ ನಿರಾವಯ
ಶರಣಸೂತ್ರವಿಡಿದು ನಿರಾಯಾಸಂ ಆಯಾಸಂಗಳೇನು ತೋರದೆ
ಈ ವಚನಾರ್ಥದ ಆದಿ-ಅಂತ್ಯವನರುಹಿಸಿಕೊಟ್ಟೆವು ನೋಡ.
ಆ ವಿಚಾರವೆಂತೆಂದಡೆ:
ಶ್ರೀ ಮದ್ಗುರು ಕಾರುಣ್ಯವೇದ್ಯನು, ವಿಭೂತಿ- ರುದ್ರಾಕ್ಷಧಾರಕನು,
ಪಂಚಾಕ್ಷರೀ ಭಾಷಾಸಮೇತನು, ಲಿಂಗಾಂಗಸಂಬಂಧಿ,
ನಿತ್ಯಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ,
ಪಾದೋದಕ-ಪ್ರಸಾದಗ್ರಾಹಕನು, ಗುರುಭಕ್ತಿ ಸಂಪನ್ನನು,
ಏಕಲಿಂಗ ನಿಷ್ಠಾಪರನು, ಚರಲಿಂಗ ಲೋಲುಪ್ತನು,
ಶರಣ ಸಂಗಮೈಶ್ವರ್ಯನು, ತ್ರಿವಿಧಕ್ಕಾಯತನು, ತ್ರಿಕರಣಶುದ್ಧನು,
ತ್ರಿವಿಧ ಲಿಂಗಾಂಗಸಂಬಂಧಿ, ಅನ್ಯದೈವದ ಸ್ಮರಣೆಯ ಹೊದ್ದ,
ಭವಿಸಂಗವ ಮಾಡ, ಭವಿಪಾಕವ ಕೊಳ್ಳ, ಪರಸ್ತ್ರೀಯರ ಬೆರಸ,
ಪರಧನವನೊಲ್ಲ, ಪರನಿಂದ್ಯವನಾಡ, ಅನೃತವ ನುಡಿಯ,
ಹಿಂಸೆಯ ಮಾಡ, ತಾಮಸಭಕ್ತರ ಸಂಗವಮಾಡ,
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದವೆಲ್ಲವ
ಸಮರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ,
ಜಂಗಮನಿಂದ್ಯವ ಸೈರಿಸ, ಪ್ರಸಾದನಿಂದ್ಯವ ಕೇಳ,
ಅನ್ಯರನಾಸೆಗೈಯ್ಯ, ಪಾತ್ರಾಪಾತ್ರವನರಿದೀವ, ಚತುರ್ವಿಧಪದವಿಯ ಹಾರೈಸ,
ಅರಿಷಡ್ವರ್ಗಕ್ಕೆ ಅಳುಕ, ಕುಲಾದಿಮದಂಗಳ ಬಗೆಗೊಳ್ಳ,
ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ-ವಿಕಲ್ಪವ ಮಾಡುವನಲ್ಲ,
ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ ಷಟ್‌ಸ್ಥಲಭರಿತ,
ಸರ್ವಾಂಗಲಿಂಗಿ, ದಾಸೋಹಂ ಸಂಪನ್ನ-
ಇಂತೀ ಭಾವನ್ನದಿರವ ಅಂತರಂಗದಲ್ಲಿ ಒಳಕೊಂಡು
ಬಹಿರಂಗದಲ್ಲಿ ನಡೆದಂತೆ ನುಡಿದು, ನುಡಿದಂತೆ ನಡದು,
ಸದ್ಭಕ್ತಿ-ಜ್ಞಾನ-ವೈರಾಗ್ಯ ಸಂಪನ್ನತ್ವದಿಂದ
ಸಕಲಪ್ರಮಥಗಣಂಗಳಿಂದ ಕೀರ್ತಿಸಿಕೊಳ್ಳುತ್ತ,
ಆ ಆದಿಪ್ರಮಥರ ಕೀರ್ತನೆ ವಿಚಾರವೆಂತೆಂದಡೆ:

ಶ್ರೀಮದನೇಕಲೋಕ-ವಿಸ್ತಾರಕ ಕಾರಣರೂಪ,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿಸ್ವರೂಪ,
ಪರತರ ಪರಬ್ರಹ್ಮಾನುಭಾವ ಸಾರ್ವಭೌಮ,
ಷಟ್ಸ್ಥಲಸ್ಥಾಪನಾಚಾರ್ಯ, ಪಂಚಾಚಾರ ಪ್ರಮಥನಾಯಕ
ಸರ್ವಾಚಾರ ನಿಷ್ಠಾಗರಿಷ್ಠ, ಲಿಂಗಲೋಲುಪ್ತ,
ಲಿಂಗಭೋಗೋಪಭೋಗಿ, ಜಂಗಮಾನುಭಾವ,
ಸದ್ಭಕ್ತ ಹೃನ್ಮಂದಿರವಾಸ, ನಿತ್ಯ ಕಲ್ಯಾಣೋತ್ಸಹಪೂರ್ಣಾವತರ್ಯ,
ಲಿಂಗಲೀಲಾನಂದ, ಏಕವಿಂಶತಿಯುಗಸ್ಥಾಪನಾಚಾರ್ಯವರ್ಯ,
ಮಂಜುಳಾಂತರಂಗ, ಮನುಮುನಿವಂದ್ಯ, ಪ್ರದಾಯಕ
ತ್ರೈದಶಪರ್ವತಾಧೀಶ್ವರ, ಮದನಮರ್ದನ, ಮಾಯಾಕೋಲಾಹಲ,
ಅಷ್ಟಾವರಣ ಸ್ವರೂಪ, ತ್ರಿವಿಧಾನುಗ್ರಹ ಪ್ರತಿಪಾದಕ,
ತ್ರಿವಿಧ ಪಾದೋದಕ ಪ್ರಸಾದಲೋಲುಪ್ತ,
ತ್ರಿವಿಧಾಚಾರಸನ್ಮೋಹಿ, ತ್ರಿಗುಣಾನಂದಭರಿತ, ತ್ರಿಮಲದೂರ,
ನಿರ್ಮಲ-ನಿಃಕಳಂಕ-ನಿಃಶೂನ್ಯ-ನಿರಂಜನ, ಅನುಮಿಷಾರಾಧ್ಯ,
ತ್ರಿವಿಧ ಲಿಂಗಾನುಭಾವ ಅಖಿಳಾಂಡ ಪ್ರತಿಷ್ಠಾಪ್ರದಾಯಕ,
ಸದ್ಧರ್ಮಸ್ವರೂಪ, ಸತ್ಕ್ರಿಯಾ ಸಮ್ಯಜ್ಞಾನ ಸದಾಭರಿತ,
ನಿತ್ಯ ತೃಪ್ತಾನಂದಮಂತ್ರಸ್ವರೂಪ,
ಅನಂತಸೂರ್ಯಚಂದ್ರಾಗ್ನಿಪ್ರಕಾಶ, ಅಜ್ಞಾನ ತಿಮಿರಾಂಧಸ್ಯ,
ಕಾರಣಾವತಾರ ಸರ್ವಜ್ಞ
ಪ್ರದಾಯಕ, ಕಾಮಧೇನು-ಕಲ್ಪವೃಕ್ಷ,
ಚಿಂತಾಮಣಿಗೆ ಮಾತೃಸ್ವರೂಪ,
ವಾಚಾತೀತ-ವರ್ಣಾತೀತ-ಭಾವಾತೀತ- ಜ್ಞಾನಾತೀತ,
ಚಿತ್ಕಲಾಸ್ವರೂಪ, ಅಯೋನಿಸಂಭವ, ಅಜಡಸ್ವರೂಪ,
ಬತ್ತೀಶಕಳಾಮೂರ್ತಿ, ಜರೆಮರಣ ಸಂಸ್ಕೃತಿದೂರ,
ವರವೀರಶೈವಮತ ಸ್ಥಾಪನಾಚಾರ್ಯ,
ನಿಜ ಶಿವಯೋಗಭರಿತಾನಂದಮೂರ್ತಿ,
ಗುರುಮಾರ್ಗಾಚಾರ ಪ್ರತಿಷ್ಠಾಪ್ರದಾಯಕ,
ಅನಾಚಾರ ಸಂಹಾರ, ಮಹಿಮಾಸ್ವರೂಪ,
ಸದ್ಭಕ್ತಜಿಹ್ವಾಗ್ರ ಹೃನ್ಮಂದಿರಾವಾಸ.
ಏಕವಿಂಶತಿ ದೀಕ್ಷಾಬೋಧಸ್ವರೂಪ,
ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳ ಮುಕ್ತಿಪ್ರದಾಯಕ,

ಮೂಲಮಂತ್ರಮೂರ್ತಿ
ಲೋಕಪಾವನಾರ್ಥ ಕೂಡಲಸಂಗಮೇಶ್ವರನ ಚಿದ್ಗರ್ಭೋದಯ
ಬಸವದಂಡನಾಥ ಪ್ರಮಥಗಣಂಗಳ ಭಕ್ತಿಹಿತಾರ್ಥವಾಗಿ,
ಅವತರಿಸಿದಂಥ ವಿರಾಣ್ಮೂರ್ತಿ!
ಅನಾದಿಗಣೇಶ್ವರ,
ಅನಾದಿಗಣೇಶ್ವರನ ಶಿಷ್ಯರು ಆದಿಗಣೇಶ್ವರ,
ಆದಿಗಣೇಶ್ವರನ ಶಿಷ್ಯರು ನಿರ್ಮಾಯನೆಂಬ ಗಣೇಶ್ವರ,
ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ,
ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರ,
ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯರು ಆತ್ಮಗಣೇಶ್ವರ,
ಆತ್ಮಗಣೇಶ್ವರನ ಶಿಷ್ಯರು ಆಧ್ಯಾತ್ಮಗಣೇಶ್ವರ,
ಆಧ್ಯಾತ್ಮಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರ,
ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವಪ್ರಭುದೇವರು,
ಬಸವಪ್ರಭುದೇವರ ಶಿಷ್ಯರು ಆದಿಲಿಂಗದೇವರು,
ಆದಿಲಿಂಗದೇವರ ಶಿಷ್ಯರು ಚೆನ್ನವೀರೇಶ್ವರದೇವರು,
ಚೆನ್ನವೀರೇಶ್ವರದೇವರ ಶಿಷ್ಯರು ಹರದನಹಳ್ಳಿ ಗೋಸಲದೇವರು,
ಹರದನಹಳ್ಳಿ ಗೋಸಲದೇವರ ಶಿಷ್ಯರು ಶಂಕರದೇವರು,
ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು,
ದಿವ್ಯಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರದೇವರು,
ಚೆನ್ನಬಸವೇಶ್ವರದೇವರ ಶಿಷ್ಯರು ತೋಂಟದ ಸಿದ್ಧೇಶ್ವರಸ್ವಾಮಿಗಳು,
ತೋಂಟದ ಸಿದ್ಧೇಶ್ವರಸ್ವಾಮಿಗಳ ಶಿಷ್ಯರು ಮರುಳಸಿದ್ಧೇಶ್ವರಸ್ವಾಮಿಗಳು,
ಮರುಳಸಿದ್ಧೇಶ್ವರಸ್ವಾಮಿಗಳ ಶಿಷ್ಯರು ರೇವಣಸಿದ್ಧೇಶ್ವರಸ್ವಾಮಿಗಳು,
ರೇವಣಸಿದ್ಧೇಶ್ವರಸ್ವಾಮಿಗಳ ಶಿಷ್ಯರು ಶಿವಲಿಂಗೇಶ್ವರಸ್ವಾಮಿಗಳು,
ಶಿವಲಿಂಗೇಶ್ವರಸ್ವಾಮಿಗಳ ಶಿಷ್ಯರು ನಿರಂಜನೇಶ್ವರಸ್ವಾಮಿಗಳು,
ನಿರಂರನೇಶ್ವರಸ್ವಾಮಿಗಳ ಶಿಷ್ಯರು ಮರಿಬಸವಲಿಂಗೇಶ್ವರಸ್ವಾಮಿಗಳು,
ಮರಿಬಸವಲಿಂಗೇಶ್ವರಸ್ವಾಮಿಗಳ ಶಿಷ್ಯರು ಸ್ವತಂತ್ರಸಿದ್ಧಲಿಂಗೇಶ್ವರಸ್ವಾಮಿಗಳು,
ಸ್ವತಂತ್ರಸಿದ್ಧಲಿಂಗೇಶ್ವರಸ್ವಾಮಿಗಳ ಶಿಷ್ಯರು ಚೆನ್ನಮಲ್ಲೇಶ್ವರಸ್ವಾಮಿಗಳು
ಚೆನ್ನಮಲ್ಲೇಶ್ವರಸ್ವಾಮಿಗಳ ಶಿಷ್ಯರು ಚೆನ್ನಂಜೇಶ್ವರಸ್ವಾಮಿಗಳು,
ಚೆನ್ನಂಜೇಶ್ವರಸ್ವಾಮಿಗಳ ಶಿಷ್ಯರು ಗುರುಶಾಂತೇಶ್ವರಸ್ವಾಮಿಗಳು,
ಗುರುಶಾಂತೇಶ್ವರಸ್ವಾಮಿಗಳ ಶಿಷ್ಯರು ಶಾಂತಮಲ್ಲಸ್ವಾಮಿಗಳು
ಶಾಂತಮಲ್ಲಸ್ವಾಮಿಗಳ ಕರ-ಮನ-ಭಾವದಲ್ಲುದಯವಾದ

ಗುರುಸಿದ್ಧಲಿಂಗ ನಾನಯ್ಯ.
ಆ ಗುರುಸಿದ್ಧಲಿಂಗನ ಕರ-ಮನ-ಸುಭಾವದಲ್ಲಿ
ಶರಣಗಣಂಗಳ ಶುದ್ಧಸಿದ್ಧಪ್ರಸಿದ್ಧ ಪ್ರಸಾದವಾಗಿ
ಅಷ್ಟವಿಧಾರ್ಚನೆ-ಷೋಡಶೋಪಚಾರ- ಮಂತ್ರ– ಧ್ಯಾನ–
ಜಪ-ಸ್ತೋತ್ರ-ಮನೋರ್ಲಯ-ನಿರಂಜನ ಪೂಜೆಯ ಕೈಕೊಂಡು
ಪ್ರಮಥಗಣಂಗಳ ಸ್ವಾನುಭಾವಸೂತ್ರವನೊಳಕೊಂಡು
ಒಳಗು ಬೆಳಗನೆ ನುಂಗಿ ಬೆಳಗು ಒಳಗನೆ ನುಂಗಿ,
ಛಳಿ ಮೋಹಕದ ಮಂಜು ನುಂಗಿದಂತೆ
ಹಲವು ದೀಪವ ಬಯಲ ಗಾಳಿ ನುಂಗಿದ ತೆರದಿ
ಕಳೆಯಳಿದ ಕೂಡಲಚೆನ್ನಸಂಗಯ್ಯನು.
ಇಂತು ಚಿಕ್ಕದಂಡನಾಥ ಚೆನ್ನಬಸವೇಶ್ವರಸ್ವಾಮಿಗಳ
ಪ್ರಸನ್ನಪ್ರಸಾದಕ್ಕೆ ಒಪ್ಪಿಗೆಯಾಗಿ
ಈ ವಚನಾನುಭಾವಶಾಸ್ತ್ರವ ಕೈಕೊಂಡು
ಸದ್ಭಕ್ತಶರಣಗಣಂಗಳಿಗೆ ಬೋಧಿಸಿ ಸಂಪೂರ್ಣವಮಾಡುವುದಕ್ಕೆ
ಕರ್ತುಗಳಾಗಿ ಒಪ್ಪುತಿರ್ಪಿರಿ ನೋಡ
ಸಂಗನಬಸವೇಶ್ವರ. ॥ ೧೦೧ ॥

■■

# ಗುಹೇಶ್ವರಯ್ಯನ ವಚನ

೭೬೪

ಆರುಸ್ಥಲದಲ್ಲಿ ಅರತೆನೆಂದು ಸಹಭೋಜನದಲ್ಲಿ
ಉಂಬುವ ಅಣ್ಣಗಳು ನೀವು ಕೇಳಿರೋ.
ಅಂಗದ ಮೇಲೆ ಲಿಂಗವಿರ್ದಡೇನಯ್ಯಾ,
ಲಿಂಗವ ಪ್ರಾಣಕ್ಕೆ ಅವಧರಿಸದನ್ನಕ್ಕ?
ಲಿಂಗದ ಅಷ್ಟವಿಧಾರ್ಚನೆಯ ಬಲ್ಲ[ರೇ]ನಯ್ಯಾ,
ಅಷ್ಟ [ಮದಂಗಳ] ನಷ್ಟವ ಮಾಡಿ,
ಪಂಚೇಂದ್ರಿಯಂ[ಗಳ ಬಂಧಿಸಿ],
ಲಿಂಗದಮುಖ ನೋಡದನ್ನಕ್ಕ?
ಇಂತಪ್ಪ ವರ್ಮಾದಿವರ್ಮಂಗಳ ಭೇದವನರಿಯದೆ,
ಕರಸ್ಥಲದಿ ಲಿಂಗವ ಪಿಡಿದು ಸಹಭೋಜನವೆಂದು
ಒಂದಾಗಿ ಉಂಬುವ ಆ ಲಿಂಗದ್ರೋಹಿಗಳ ನೋಡಿ,
ನಗುತಿರ್ದ, ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥೧॥

೭೬೫

ನಾನು ಭಕ್ತ, ನಾನು ಶರಣ, ನಾನು ಐಕ್ಯನೆಂದು
ಹೆಸರಿಟ್ಟುಕೊಂಬುವ ಅಣ್ಣಗಳು ನೀವು ಕೇಳಿರೋ.

ತನ್ನಲ್ಲಿದ್ದ ಮೂಲಚಕ್ರದ ಮೂಲಭೇದವನರಿಯಬಲ್ಲಡೆ,
ಭಕ್ತನೆಂದೆನಿಸಬಹುದು.
ಅಷ್ಟದಳಕಮಲದಲ್ಲಿ ನಿಟ್ಟಿಸಿದ್ದ
ಪ್ರಾಣದ ನೆಲೆಯನರಿಯಬಲ್ಲಡೆ,
ಶರಣ[ನೆಂ]ದೆನಿಸಬಹುದು.
ಇಡಾ ಪಿಂಗಳ ಸುಷುಮ್ನ ತ್ರಿವಿಧವನೊಂದುಗೂಡಿ,
ಏಕನಾಳದೊ[ಳು] ತುಂಬಿ.
ಯಜ್ಞಯಿಲ್ಲದ ಮಣಿಯ ಆ ಹುರಿಯಲ್ಲಿ ಪೋಣಿಸಿ,
ಊರ್ಧ್ವಮುಖದಲ್ಲಿ ಎತ್ತಿ, ಪಂಚದ್ವಾರದ ಕದವ ತೆರದು,
ತ್ರಿಕೂಟದಲ್ಲಿರ್ದ ಮಹಾಲಿಂಗವ ನಿರೀಕ್ಷಣವಮಾಡಬಲ್ಲಡೆ,
ಐಕ್ಯನೆಂದೆನಿಸಬಹುದು.
ಇಂತಪ್ಪ ಭೇದಂಗಳನರಿಯದೆ,
ನಾನು ಭಕ್ತ, ನಾನು ಶರಣ, ನಾನು ಐಕ್ಯನೆಂದು
ಹುಸಿಯ ನುಡಿವವರ ನೋಡಿ ಬೆರಗಾದ,
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨ ॥

೭೬೬

ಇದಕ್ಕೆ ಸಾಕ್ಷಿ-ಶ್ಲೋಕ:
"ಅಷ್ಟವಿಧಾರ್ಚನಂ [ಕೃತ್ವಾ] ಅಷ್ಟಲಿಂಗಸ್ಯ ಪೂಜನಂ"
ಎಂದುದಾಗಿ, ಚಪಳೆ ಕೊಡನ ಹೊತ್ತು,
ಕೈಯ ಮರದಿರ್ದಡೇನಯ್ಯ!
ಆ ಚಿತ್ತ ಕೊಡನೊಳು ಜಡಿಗಿಡಿತವಾಗಿ ಇರದನ್ನಕ್ಕ?
ಇದು ಕಾರಣ, ಪ್ರಾಣಲಿಂಗವನರಿದ ಶರಣರು
ಇಷ್ಟಲಿಂಗದ ಕ್ರೀಯವನರಿ[ಯ]ದಿರ್ದರೇನಯ್ಯ
ಗೊಹೇಶ್ವರಪ್ರಿಯ ನಿರಾಳಲಿಂಗ? ॥ ೩ ॥

೭೬೭

ತಾರಿ ತಂಡಸಿ ತೇಗು ಬೊಬ್ಬುಲಿಯ ಕೊರಡು
ಶ್ರೀಗಂಧವಾಗಬಲ್ಲುದೆ?
ಅದೆಂತೆಂದಡೆ:
ಆರುಸ್ಥಲದಲ್ಲಿ ಐಕ್ಯವನರಿತು,
ಮೂರುಲಿಂಗದಲ್ಲಿ ತೃಪ್ತಿಯನೈದಿಸಿ,

ಪ್ರಸಾದವ ಸವಿವ ಸುಸಂಗವಾದ ಶರಣರ
ಚರಣದೊಳೆನ್ನನಿಟ್ಟು ಸಲಹಯ್ಯಾ,
ಗೊಹೇಶ್ವರಪ್ರಿಯ ನಿರಾಳಲಿಂಗ. || ೪ ||

೭೭೮

ಆಕಾಶದಲ್ಲಿ ಹಾರಿಹೋಹ ಪಕ್ಷಿಯ ಮಾರ್ಗವನು
ಹಿಂದೆ ಬಪ್ಪ ಪಕ್ಷಿ ಬಲ್ಲುದಲ್ಲದೆ, ಕೆಳಗಾಡುವ ಕುಕ್ಕುಟ ಬಲ್ಲುದೆ?
ಆ ಲಿಂಗದ ಸಂಗದ ಸುಖವನು ಪ್ರಾಣಲಿಂಗಿಗಳೆ ಬಲ್ಲರಲ್ಲದೆ,
ಮರವೆಯಲ್ಲಿ ಮಾತಾಡುವ ನರಗುರಿಗಳು
ನಿಮ್ಮ ಹೊಲಬನವರೆತ್ತ ಬಲ್ಲರಯ್ಯ
ಗೊಹೇಶ್ವರಪ್ರಿಯ ನಿರಾಳಲಿಂಗ ? || ೫ ||

೭೭೯

ಓಡು ಗುಂಡುಗಳಿಗೆ ರೂಢೀಶ ಶಿವನೆಂದು
ಓಡಾಡುವ ನರಗುರಿಗಳು ನೀವು ಕೇಳಿರೊ.
ಕಾಡ ಹೊಗದಿರಿ ನೀವು, ಮೃಡನಿದ್ದ ನೆಲೆಯನರಿಯದೆ.
ಬಟ್ಟೆ ತಪ್ಪಿ ಕಾನನದೊಳು ಬಿದ್ದು,
ನಾನು ನೀನೆಂಬ ವ್ಯಾಘ್ರನಿಪ್ಪ ಗಟ್ಟಿತ್ತಯ್ಯ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಸಿಂಹ ಘರ್ಜಿಸಿತ್ತಯ್ಯ.
ರೂಪು ರುಚಿ ಸ್ಪರ್ಶ ಶಬ್ದ ಗಂಧ ಈ ಐದು ಮೊರೆದೆದ್ದವಯ್ಯ.
ಕಾಲ ಕರ್ಮ ಗುಣದೋಷವೆಂಬ ಮಾರಿ
ಬಾಯಿದೆರದು ನುಂಗಿತಯ್ಯ.
ಇಡಾ ಪಿಂಗಳ ಸುಷುಮ್ನನೆಂಬ ಪಿಶಾಚಿಯು
ಮದವ ಮಾಡುವದ ಕಂಡೆನಯ್ಯ.
ಇಂತರಿತು ಪಾಪಿಯ ಮಗನೆಂದು ಕರವಿಡಿದು,
ಗುರುವಿನ ವಾಕ್ಯವ ಕೇಳದೆ, ಪತಿವ್ರತತನದಲ್ಲಿದ್ದ ಸತಿ
ಜಾರತನಮಾಡಿರ್ದುದ ಕಂಡು,
ಪುರುಷನು ಮೂಗನರಿದಂತೆ ಆಯಿತ್ತು ಕಾಣಾ,
ಗೊಹೇಶ್ವರಪ್ರಿಯ ನಿರಾಳಲಿಂಗಾ. || ೬ ||

೭೮೦

ಲಿಂಗದ ನಡೆ, ಲಿಂಗದ ನುಡಿ,
ಲಿಂಗದ ಸಂಗ ಮಾಡುವ ಶರಣರ ಅಂಗಳವ ಕಾಯ್ದು,

ಎನ್ನನು ಹಿಂಗದೆ ಸಲಹಯ್ಯ,
ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೭ ॥

೭೭೧

ಅರಿವಿನ ನಡೆ, ಅರಿವಿನ ನುಡಿ,
ಅರಿವಿನ ಮೂಲವನರಿತ ಶರಣರ ಚರಣದೊಳೆನ್ನನಿಟ್ಟು
ಸಲಹಯ್ಯ, ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೮ ॥

೭೭೨

ಭಕ್ತಿಯ ನಡೆ, ಭಕ್ತಿಯ ನುಡಿ,
ಭಕ್ತಿಯ ಮೂಲವನರಿತ ಶರಣರ ಒತ್ತಿಲಿ ಎನ್ನನ್ನಿಟ್ಟು
ಚಿತ್ತದಲ್ಲಿ ಸಲಹೊ, ಗುರುವೆ [ಗೊಹೇಶ್ವರಪ್ರಿಯ]ನಿರಾಳಲಿಂಗ. ॥ ೯ ॥

೭೭೩

ಕಲಿಯುಗ ಮೊದಲಾದ ಇಪ್ಪತ್ತೊಂದು ಯುಗದಲ್ಲಿ
ದಾಪರೂಪವಾಗಿ ಇದ್ದನಯ್ಯ ಬಸವಣ್ಣ!
ಬಲ್ಲರೆ ಹೇಳಿ, ಅರಿಯದಿದ್ದರೆ ನೀವು ಕೇಳಿ.
ಅದು ಎಂತೆಂದಡೆ:
ಆದಿಯುಗದಲ್ಲಿ ಶರಣನೆಂಬ ಬಸವಣ್ಣ;
ಜಂಗಮನೆಂಬ ನಿರಂಜನ.
ಅನಾದಿಯೆಂಬ ಯುಗದಲ್ಲಿ ಬಸವಣ್ಣನೆ ಭಕ್ತ;
ಜಂಗಮವೆ ಸದಾಶಿವಲಿಂಗ.
ಅವ್ಯಕ್ತನೆಂಬ ಯುಗದಲ್ಲಿ ಬಸವನೆ ಅಲ್ಲಮ;
ಜಂಗಮವೆ ಪೀಠಾಧಾರವೆಂಬಲಿಂಗ.
ವ್ಯಕ್ತನೆಂಬ ಯುಗದಲ್ಲಿ ಬಸವನೆ ಬೊಮ್ಮಣ್ಣ;
ಜಂಗಮವೆ ಭೂತೇಶ್ವರಲಿಂಗ.
ಮಣಿರಣನೆಂಬ ಯುಗದಲ್ಲಿ ಬಸವನೆ ಆರೋಗ್ಯಕ್ಕೆ ವೈದ್ಯನಾದ;
ಜಂಗಮವೆ ಪ್ರುಂಚವಕ್ತ್ರನೆಂಬಲಿಂಗ.
ವಿಶ್ವಾರಣನೆಂಬ ಯುಗದಲ್ಲಿ ಬಸವನೆ ಪೀತಶಂಭು;
ಜಂಗಮವೆ ಏಕಭರಿತನೆಂಬಲಿಂಗ.
ಅಲಂಕೃತನೆಂಬ ಯುಗದಲ್ಲಿ ಬಸವನೆ ಪ್ರಭುದೇವರು;
ಜಂಗಮವೆ ಸರ್ವೇಶ್ವರಲಿಂಗ.
ಕೃತಯುಗದಲ್ಲಿ ಬಸವನೆ ಗಜ್ಜಯ್ಯನಾದ;

ಜಂಗಮವೆ ತ್ರಿಪುರಾಂತಕಲಿಂಗ.
ತ್ರೇತಾಯುಗದಲ್ಲಿ ಬಸವನೆ ಬ್ರಾಹ್ಮಣನಾದ;
ಜಂಗಮನೆ ಲೋಕೇಶ್ವರನೆಂಬಲಿಂಗ.
ದ್ವಾಪರಯುಗದಲ್ಲಿ ಬಸವನೆ ಶ್ರೀಧರಪಂಡಿತನಾದ:
ಜಂಗಮವೆ ಶ್ರೀಶೈಲ ಮಲ್ಲಿಕಾರ್ಜುನನಾದ.
.......ಕರುಣ ಬಸವನೆಂಬ ವೃಷಭ,
ಜಂಗಮವೆ ಗೊಹೇಶ್ವರ.
ಪ್ರಾಳಿಯೆಂಬ ಯುಗದಲ್ಲಿ ಬಸವನೆ ಭೃಂಗೀಶ್ವರ;
ಜಂಗಮವೆ ಸದಾಶಿವ.
ಅಭೂರ್ತನೆಂಬ ಯುಗದಲ್ಲಿ ಬಸವನೆ ರಾಮಚಂದ್ರ:
ಜಂಗಮವೆ ಅನಾದಿಲಿಂಗ.
ತಮಂಧನೆಂಬ ಯುಗದಲ್ಲಿ ಬಸವನೆ ಕಾಲರುದ್ರ;
ಜಂಗಮವೆ ಊರ್ಧ್ವಪೀಠೇಶ್ವರ.
ತಂಡಜನೆಂಬ ಯುಗದಲ್ಲಿ ಬಸವನೆ ಶಂಕರ;
ಜಂಗಮವೆ ಸರ್ವೇಶ್ವರಲಿಂಗ.
ಭಿನ್ನಜನೆಂಬ ಯುಗದಲ್ಲಿ ಬಸವನೆ ಪಶುಪತಿ;
ಜಂಗಮವೆ ಮೂಕೇಶ್ವರಲಿಂಗ.
ಇಂತೀ ಬಸವನೆಂಬ ರೂಪೇ ಭಕ್ತ.
ಭಕ್ತನ ಮನದ ಕೊನೆಯ ಮೇಲೆ ಸೋಂಕಿ ಸುಳಿವಾತನೆ ಜಂಗಮ.
ಇಂತೀ ಉಭಯವ ಏಕವಂ ಮಾಡುವ
ನಂದಿನಿಯನಿದಿರಿಟ್ಟು ಪೂಜೆಯ ಮಾಡುವ
ದ್ರೋಹಿಗಳಿಗೆ ನಾನೇನೆಂಬೆನಯ್ಯಾ
ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೧೦ ॥

೭೭೪

ಮನಹೀನ ಬಂಟನ ಕೈಯಲ್ಲಿ ಬತ್ತೀಸಾಯುಧವಿದ್ದರೇನಯ್ಯ?
ಜಾರಸ್ತ್ರೀ ಸರ್ವಾಭರಣವನಿಟ್ಟಿದ್ದರೇನಯ್ಯ ?
ಕುರುಡನ ಕೈಯಲ್ಲಿ ದರ್ಪಣವಿದ್ದರೇನಯ್ಯ ?
ಧರ್ಮವನರಿಯದವನ ಕೈಯಲ್ಲಿ ಹಣವಿದ್ದರೇನಯ್ಯ ?
ಜ್ಞಾನಹೀನ ರೂಪಧರಿಸಿದ್ದರೇನಯ್ಯ ?
ಪ್ರಾಣಲಿಂಗವನರಿಯದ ನರಗುರಿಗಳು ಅಂಗದ ಮೇಲೆ
ಲಿಂಗವ ಕಟ್ಟಿದ್ದರೇನಯ್ಯ ?

ಇಂತೀ ಷಡ್ವಿಧ ಭೇದವನರಿಯದ ಭವಿಗಳು
ನಿಮ್ಮ ಹೊಲಬನವರೆತ್ತಬಲ್ಲರಯ್ಯ ?
ಇಟ್ಟು ಪೂಜೆಯ ಮಾಡುವ ಆ ದ್ರೋಹಿಗಳಿಗೆ
ನಾನೇನೆಂಬೆನಯ್ಯ ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೧೧ ॥

೭೭೫

ಗುರುಲಿಂಗಜಂಗಮವೆಂದು ನುಡಿವ
ಬಹುವಾಕ್ಯರು ನೀವು ಕೇಳಿರೊ.
ಗುರುವಾವುದು ? ಲಿಂಗವಾವುದು ? ಜಂಗಮವಾವುದು ?
ಲಿಂಗವೆಂದವರ ಕರಸ್ಥಲದಲ್ಲಿ ಜಂಗಮವೊಂದೆಂದರಿಯದಿರವೆ ಚರಿಸಿದ
ಗುರುಸ್ಥಲದ ಹೊಲಬನರಿಯದೆ ಗುರುಭಕ್ತರೆನ್ನಿಸುವ
ಗುರುದ್ರೋಹಿಗಳ ಮಾತ ಕೇಳಲಾಗದಯ್ಯ
ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೧೨ ॥

೭೭೬

ನಾನು ಭಕ್ತ, ನಾನು ಶರಣ, ನಾನು ಐಕ್ಯನೆಂಬೊ
ಅಣ್ಣಗಳು ನೀವು ಕೇಳಿರೊ.
ಒಂದೇ ಮರದಲ್ಲಿ ಒಂಬತ್ತು ಪ್ರಮಾಣದ ಹಣ್ಣು ;
ಆ ಹಣ್ಣನು ಅರಿವ ಪರಿಯೆಂತೆಂದಡೆ :
ಆಧಾರಚಕ್ರಮಂ ಬಲಿದು, ಇಡಾ ಪಿಂಗಳ ಸುಷುಮ್ನನಾಳವ ಒಂದುಗೂಡಿ
ಊರ್ಧ್ವಮುಖದಲ್ಲಿ ಎತ್ತಿ ನಿಂದು, ಆ ಹಣ್ಣ ಸವಿಯಬಲ್ಲಡೆ ಆತನೇ ಭಕ್ತ,
ಆತನೇ ಶರಣ, ಆತನೇ ಐಕ್ಯ.
ಇದನರಿಯದೆ ಹುಸಿಯ ನುಡಿವವರ ಕಂಡು ನಗುತಿರ್ದ
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೧೩ ॥

೭೭೭

ಈಶ್ವರಂಗೆ ಗುಹೇಶ್ವರದೇವರು ಹೇಳುತಿರ್ದ, ಸಾಕ್ಷಿ :
ಶ್ಲೋಕ- "ಏಕವೃಕ್ಷ ತವೇವರ್ಣಥಾ ನವೇಫಲ ಸೇವಿತಂ ।
ಮುಖ ಪದ್ಮದೃಷ್ಟಂ ದೇವ ಸರ್ವಪಾಪಂ ವಿನಶ್ಯತಿ (?) ॥ "
ಇನ್ನು ಈಶ್ವರ ಲಿಂಗಾರ್ಪಿತವಂ ಮಾಡಬೇಕೆಂದು ಕೇಳಲು
ಹೇಳಿದ ಪ್ರಸ್ತಾವದ ವಚನ :
ಷಡುವರ್ಗವೆಂಬ ಸಮ್ಮಾರ್ಜನೆಯಂ ಮಾಡಿ,
ಅಷ್ಟಮದಂಗಳ ಹಿಟ್ಟುಗುಟ್ಟಿ ರಂಗವಾಲಿಯನಿಕ್ಕಿ,

ಸಪ್ತವ್ಯಸನಂಗಳೆಂಬ ಉಪಕರಣಂಗಳ ಲಿಂಗಸೋಹಕ್ಕೆ ತಂದು,
ತನುವೆಂಬ ಅಟ್ಟಣೆಯಲ್ಲಿ
ಮನವೆಂಬ ಹಸ್ತದಿಂದ ಮಜ್ಜನಕ್ಕೆರೆದು
ಮೂಲಗುಂಡಿಗೆಯೊಳಗಣ ಜ್ಯೋತಿಯನೆಬ್ಬಿಸಿ
ಸಗುಣವೆಂಬ ಶ್ರೀಗಂಧವನಿಟ್ಟು,
ಪ್ರಣಮಮೂಲವೆಂಬ ಅಕ್ಷತೆಯ ಧರಿಸಿ
ಅಷ್ಟದಳದಲ್ಲಿ ಪೂಜೆಯ ಮಾಡಿ,
ಸುಖಸದ್ವ್ಯಸನವೆಂಬ ಧೂಪವನ್ನು ಅಳವಡಿಸಿ
ಪಂಚತತ್ವಗಳೆಂಬ ಪಂಚಾರತಿಯ ಬೆಳಗಿ
ಸುಷುಮ್ನವೆಂಬ ಹರಿವಾಣದಲ್ಲಿ ಪರಮಭೋಜನವೆಂಬ
ಬೋನವಂ ಗಡಣಿಸಿ,
ಸರ್ವಶುದ್ಧವೆಂಬ ತುಪ್ಪವಂ ನೀಡಿ,
ನಿರ್ಮಳಾತ್ಮಕವೆಂಬ ಬೆಳ್ಳಿಯ ನಿರ್ಮಿಸಿ,
ಶುಚಿರ್ಭೂತವೆಂಬ ಹಸ್ತದಲ್ಲಿ
ಮಹಾಲಿಂಗಕ್ಕೆ ನೈವೇದ್ಯವಂ ಕೊಟ್ಟು,
ಅರಿವು ಮರವೆಂಬ ಅಡಕೆಯನೊಡದು,
ಶತಶಾಂತವೆಂಬ ಎಲೆಯಂ ಕೊಯಿದು,
ನಿರ್ಗುಣವೆಂಬ ಸುಣ್ಣವಂ ನೀಡಿ, ಲಿಂಗಾರ್ಪಿತವಂ ಮಾಡಿ,
ಪ್ರಸಾದವ ಸವಿವ ಲಿಂಗಾರ್ಚಕರ ಚರಣವ ತೋರಿ
ಎನ್ನ ಸಲಹಯ್ಯ ಗೊಹೇಶ್ವರಪ್ರಿಯ ನಿರಾಳಲಿಂಗಾ. || ೧೪ ||

೭೭೮

ಬ್ರಹ್ಮ ಗುರು, ವಿಷ್ಣು ಲಿಂಗ, ರುದ್ರ ಜಂಗಮವೆಂಬ
ವ್ರತಗೇಡಿಗಳು ನೀವು ಕೇಳಿರೊ.
ಬ್ರಹ್ಮನ ಶಿರ ಹೋಯಿತ್ತು.
ವಿಷ್ಣುವಿಗೆ ಹತ್ತು ಪ್ರಳಯವಾಯಿತ್ತು.
ರುದ್ರನು ಧ್ಯಾನಾರೂಢನಾದ.
ಆ ರುದ್ರಂಗೆ ಪರತ್ರಯ, ಈಶ್ವರಂಗೆ ಪರತ್ರಯ,
ಸದಾಶಿವಂಗೆ ಪರತ್ರಯ, ಪರಶಿವಂಗೆ ಪರತ್ರಯ,
ಇಂತಿವರು ಆರುಮಂದಿ ಕೂಡಿ
ಗುರುವಿನ ಧ್ಯಾನದಲ್ಲಿ ಪರವಶವಾಗಿ,
ಆ ಶ್ರೀಗುರುವಿದ್ದ ನೆಲೆ ಎಂತೆಂದಡೆ :

ಸಪ್ತಸ್ಥಾನ ಸಹಸ್ರದಳಕಮಲದ ಜ್ಯೋತಿರ್ವರ್ಣದ ಗುರು.
ಆ ಗುರುವಿಂಗೆ ಪರತ್ರಯಲಿಂಗ, ಆ ಲಿಂಗಕ್ಕೆ ಪರತ್ರಯಜಂಗಮ.
ಇಂತೀ [ಅ]ನೂನಸ್ಥಳದಲ್ಲಿದ್ದ ಜಂಗಮವ
ಮಣಿಪೂರಕದಲ್ಲಿದ್ದ ರುದ್ರಂಗೆ ಸರಿಯೆಂಬ
ಜಂಗಮದ್ರೋಹಿಗಳ ಮಾತ ಕೇಳಲಾಗದು ಕಾಣಾ
ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೧೫ ॥

೭೭೯

ಆರುಲಿಂಗದಲ್ಲಿ ಅರತೆನೆಂಬ ಅರಿವುಗೇಡಿಗಳು ನೀವು ಕೇಳಿರೊ.
ಆರುಲಿಂಗ ನಿಮಗೆಂತಪ್ಪವು ?
ಆಚಾರಲಿಂಗ ಬ್ರಹ್ಮಂಗೆ ಸಂಬಂಧವಾಯಿತ್ತು.
ಗುರುಲಿಂಗ ವಿಷ್ಣುವಿಂಗೆ ಸಂಬಂಧವಾಯಿತ್ತು.
ಶಿವಲಿಂಗ ರುದ್ರಂಗೆ ಸಂಬಂಧವಾಯಿತ್ತು.
ಜಂಗಮಲಿಂಗ ಈಶ್ವರಂಗೆ ಸಂಬಂಧವಾಯಿತ್ತು.
ಪ್ರಸಾದಲಿಂಗ ಸದಾಶಿವಂಗೆ ಸಂಬಂಧವಾಯಿತ್ತು.
ಮಹಾಲಿಂಗ ಪರಶಿವಂಗೆ ಸಂಬಂಧವಾಯಿತ್ತು.
ಇಂತೀ ಆರುದರುಶನಕ್ಕೆ ಸಂಬಂಧವಾಯಿತ್ತು.
ನಿಮ್ಮ ಸಂಬಂಧವ ಬಲ್ಲರೆ ಹೇಳಿರೊ ?
ಗುರುಲಿಂಗಜಂಗಮವೆಂಬ ತ್ರಿವಿಧಸಂಬಂಧ ;
ಆರು ಪರಿಯ ಶಿಲೆಯ ಮೆಟ್ಟಿ ಮುಂಬಾಗಿಲವ ತೆರೆದು
ಶ್ರೀಗುರುವಿನ ಪ್ರಸಾದವ ಸವಿದು
ಮುಂದಿರ್ದ ಲಿಂಗಸಂಗದ ಅರ್ಪಿತ ದರುಶನವೆಂಬೊ
ಜಂಗಮವ ನೋಡುತ್ತ ನೋಡುತ್ತ
ನಿಬ್ಬೆರಗಾದರು ನೋಡಾ.
ಆರನು ಮೀರಿ, ಮೂರನು ಮೆಟ್ಟಿ,ತಟ್ಟುಮುಟ್ಟುಗಳೆಂಬ
ಭ್ರಮೆಗಳನೊಲ್ಲದೆ ಐವತ್ತೆರಡರೊಳಗಾಗಿ
ಅರಿಯಲಾರದೆ ಮೀರಿಹೋದರು
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೧೬ ॥

೭೮೦

ಮಕರತರ್ಕದ ಪ್ರಸ್ತಾವದ ವಚನ :

ಅರಿಷಡ್ವರ್ಗವೆಂಬ ಆರು ನಾಯಿಗಳು ಬೊಗಳುತ್ತಿರೆ,
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ನರಿ ಕೂಗುತ್ತಿರೆ,

ಹಸಿವು ತೃಷೆ ನಿದ್ರೆ ಜಾಡ್ಯವೆಂಬ
ನಾಲ್ಕು ಸೂಕರ ಮುತ್ತಿಕೊಂಡಿರೆ,
ಸಪ್ತವ್ಯಸನಗಳೆಂಬ ಏಳು ಬೆಕ್ಕು ಸುಳಿವುತ್ತಿರೆ,
ಪಂಚೇಂದ್ರಿಯವೆಂಬ ಐದು ವರ್ಣದ ಹುಲಿ ಸುಂಗುತ್ತಿರೆ,
ಸಪ್ತಧಾತುಗಳೆಂಬ ಏಳುಮಂದಿ ಹೊಲೆಯರು ಮುಟ್ಟಿ
ತನ್ನಂಗದೊಳು ನಾನು ನೀನೆಂಬ ಅಹಂಕಾರದ ಜಾಗಟೆಯ ಪಿಡಿದು
ಅಜ್ಞಾನವೆಂಬ ಕುಡಿಯಲ್ಲಿ ಬಾರಿಸಿ,
ಇಂತಪ್ಪ ಪರಿಯಲ್ಲಿದ್ದ ಸೂತಕಂಗಳ ಪರಿಯದೆ
ಹೊರಮಾತ ಕೇಳಬಾರದೆಂದು ಜಾಗಟೆಯ ಹೊಯ್ವ
ನಾದದ ಮರೆಯಲ್ಲಿ ಆಹಾರವ ಕೊಂಬ ಸೇವಕರ ನೋಡಿ
ನಗುತಿರ್ದ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೧೭ ॥

೭೮೧

**ಇದಕ್ಕೆ ನಿರ್ವಚನ :**

ಅರಿಷಡ್ವರ್ಗವೆಂಬ ಆರು ನಾಯಿಗಳ ಮರ್ದಿಸಿ,
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ನರಿಯ ಸೂರೆಗೊಂಡು,
ಸಪ್ತವ್ಯಸನಂಗಳೆಂಬ ಏಳುಬೆಕ್ಕಿನ ಮೂಲವಂ ಕೆಡಿಸಿ,
ಹಸಿವು ತೃಷೆ ನಿದ್ರೆ ಜಾಡ್ಯವೆಂಬ ಸೂಕರಂಗಳ ಕೊಂದು,
ಪಂಚವರ್ಣದ ಹುಲಿಯ ಆರ್ಭಟವಂ ಮುರಿದು,
ಸಪ್ತಧಾತುಗಳೆಂಬ ಏಳುಮಂದಿ ಹೊಲೆಯರ ಸೂತಕವಂ ಕಳೆದು,
ನಾನು ನೀನೆಂಬ ಅಹಂಕಾರವ ನಷ್ಟವ ಮಾಡಿ,
ಸುಜ್ಞಾನವೆಂಬ ಜಾಗಟೆಯ ಪಿಡಿದು
ಅರಿವೆಂಬ ಕುಡಿಯಲ್ಲಿ ನುಡಿಸಿ, ಪರಮ ಪರಿಣಾಮವೆಂಬ
ನಾದದ ಮರೆಯಲ್ಲಿ ಪ್ರಸಾದವಂ ಕೊಂಡು ಸುಖಿಸುವ
ಸರ್ವಕಾರರ ನೋಡಿ ಅಹುದಹುದೆಂದು
ಅಭಯಹಸ್ತವ ಕೊಡುತ್ತಿದ್ದ
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೧೮ ॥

೭೮೨

ಇಂದ್ರದಳದಲ್ಲಿ ಪುಣ್ಯ, ಅಗ್ನಿದಳದಲ್ಲಿ ಪಾಪ,
ಯಮದಳದಲ್ಲಿ ಗಮನ, ನೈರುತ್ಯದಳದಲ್ಲಿ ನಿರ್ಗಮನ,
ವರುಣದಳದಲ್ಲಿ ಅಸನ, ವಾಯುವ್ಯದಳದಲ್ಲಿ ವ್ಯಸನ,
ಕುಬೇರದಳದಲ್ಲಿ ವಿಷಯ, ಈಶಾನ್ಯದಳದಲ್ಲಿ ನಿದ್ರೆ,

ಮಧ್ಯದಳದಲ್ಲಿ ಗುಣಭರಿತನಾಗಿಹನು.
ಊರ್ಧ್ವದಳದಲ್ಲಿ ಸುಜ್ಞಾನಭರಿತನು
ತಾನೆ [ಗೊಹೇಶ್ವರ]ಪ್ರಿಯ ನಿರಾಳಲಿಂಗ. ॥ ೧೯ ॥

೭೮೩

**ಜ್ಯೋಗಿಯ ತರ್ಕದ ಪ್ರಸ್ತಾವದ ವಚನ :**

ಬಿದಿರ ಲಳಿಗೆಯ ತಂದು, ಮೂಸೋರೆಯ ಕಾಯಂ ಕಟ್ಟಿ,
ಮೇಣದ ಮೆಟ್ಟನಿಕ್ಕಿ, ಕಬ್ಬಿಣದ ಸರಿಗಿಯ ತಂದು
ಕಟ್ಟಿಗೆಗೆ ಸುತ್ತಿ ಬಿಗಿದು ಶುದ್ಧೈಸಿ
ತ್ರಿವಿಧಗತಿಯಲ್ಲಿ ಹರಿತವಿಕ್ಕಿ, ರಾಜವೀಥಿಯೊಳು
ಆ ಕಿನ್ನರಿಯ ನುಡಿಸುತ್ತ ಬೆರೆದಾಡುವ ಜೋಗಿಯ ಕಂಡು
ಕೆಟ್ಟು ಹೋದರು ನೋಡಾ ಎಂದು ಬೆರಗಾದ
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨೦ ॥

೭೮೪

**ಇದರ ನಿರ್ವಚನ :**

ಬ್ರಹ್ಮೇಶ್ವರಿ ವಿಷ್ಣೇಶ್ವರಿ ರುದ್ರೇಶ್ವರಿ
ಮಹೇಶ್ವರಿಯೆಂಬ ಆ ರುದ್ರಶಕ್ತಿಸಹ
ಸಪ್ತವ್ಯಸನಂಗಳೆಂಬ ಮೆಟ್ಟನಿಕ್ಕಿ,
ಪ್ರಣಮವೆಂಬ ವೀಣೆಯ ವಿಸ್ತರಿಸಿ,
ಸಪ್ತಸ್ಥಾನದಲ್ಲಿ ಎಳೆಯಂ ಬಿಗಿದು,
ಹಂಸ ಹಂಸವೆಂಬ ಬೆರಳಲ್ಲಿ ನುಡಿಸುತ್ತ
ಗೊಹೇಶ್ವರನಾಳಾಪದಲ್ಲಿ ಮಹಾ ಮಹಾತ್ಮನೆಂಬ
ವಚನವ ಪಾಡುತ್ತ ಉರಿಗೆಂಡದ ಕಣ್ಣತೆರೆದು,
ವಕ್ರಂಗಳ ವಿಸರ್ಜಿಸಿ, ಕಂಗಳ ಮುಚ್ಚಿ,
ಸದ್ಯೆಶ್ವರಿಯ ಸರವಿಗ್ಯೆದು ಪರಸ್ಥಾನದಲ್ಲಿ
ಒಲದಾಡುತಿರ್ದ ಜೋಗಿಯಂ ಕಂಡು, ಸಾರಾಯ ಸಂತೋಷಮಂ
ಮಾಡುತ್ತಿರ್ದ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨೧ ॥

೭೮೫

**ಇನ್ನು ಗುರುಸ್ಥಲದ ವಚನ :**

ಗುರುಹೃದಯ ಚಿನ್ಮಯಯೆನಲಂಜುವೆನಯ್ಯ !
ಗುರುವೆನ್ನ ಆತ್ಮದಿಂದ ಮೊಳೆಯದೋರಿದನಾಗಿ.

ನಾನು ಪಾವನವೆಂಬೆನಯ್ಯ, ಎನ್ನ ಪಾಪಕಂಜುವೆನಯ್ಯ,
ಆ ಗುರುವಿನ ಕರಸ್ಥಳದಿಂದ ಉದುಭವಿಸಿದೆನಾಗಿ.
ಇಂತೀ ಉಭಯದ ಉತ್ಪತ್ಯ ಸಂಗನ ಶರಣ
ಬಸವಣ್ಣನ ಸಂತತಿಗಳಿಗಲ್ಲದೆ ಶಬ್ದಪಾತಕರಿಗೆ
ಅರಿಯಬಾರದಯ್ಯ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨೨ ॥

೭೮೬

ಇನ್ನು ಪ್ರಾಣಲಿಂಗಿಸ್ಥಲದ ವಚನ :

ಪ್ರಾಣಲಿಂಗವ ಬಲ್ಲೆವೆಂಬ ಅಣ್ಣಗಳು ನೀವು ಕೇಳಿರೊ.
ಪವನದ ಮೂಲವನರಿಯಬಲ್ಲರೆ ಭಕ್ತನೆಂದೆನಿಸಬಹುದು.
ಪ್ರಾಣನಿದ್ದ ನೆಲೆಯನರಿತು
ಪ್ರಣಮದ ಸಂಬಂಧವ ಮಾಡಬಲ್ಲರೆ
ಪ್ರಾಣಲಿಂಗಿಯೆಂದೆನಿಸಬಹುದು.
ಹಿಂದಣ ದ್ವಾರವಂ ತೆರೆದು, ಮುಂದಣ ಮುಪ್ಪುರದ ಬಟ್ಟೆಯಂ ಮೆಟ್ಟಿ,
ತ್ರಿಕೂಟವೆಂಬ ಸಂದಿಯಲ್ಲಿ ಹೊಕ್ಕು,
ಮಹಾಲಿಂಗವ ನಿರೀಕ್ಷಣವ ಮಾಡಿ,
ಶ್ರೀಗುರುವಿನ ಚರಣಾಂಬುಜವ ನೋಡಲಿಕ್ಕಾಗಿ
ಮಹಾಜ್ಯೋತಿರ್ಮಯವೆಂಬ ಜಂಗಮವು ಸಿಕ್ಕಿತಯ್ಯಾ.
ಆ ಜಂಗಮದ ಒಕ್ಕುಮಿಕ್ಕ ಪ್ರಸಾದವಂ ಸವಿದು
ನಿತ್ಯಶರಣರ ಚರಣಕ್ಕೆ ವಮೋ ನಮೋ ಎನುತಿರ್ದೆ ಕಾಣಾ
ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨೩ ॥

೭೮೭

ಫಲವನಳಿದವಂಗೆ ಕುಲದ ಹಂಗೇತಕಯ್ಯಾ ?
ಗುರುಭಕ್ತನಾದ ಮೇಲೆ ಜಂಗಮದ ಹಂಗೇತಕಯ್ಯಾ ?
ಪ್ರಾಣಲಿಂಗದ ಹೊಲಬನರಿತವಂಗೆ ಇಷ್ಟಲಿಂಗದ ಹಂಗೇತಕಯ್ಯಾ ?
ಇಂತೀ ಕರಣಂಗಳನರಿಯದೆ ಉದಾಸೀನವೆಂದು ಚರಿಸುವ
ಬೂಟಕರ ನೋಡಿ ನಗುತಿರ್ದ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨೪ ॥

೭೮೮

ಇಷ್ಟಲಿಂಗವೆಂಬ ಭ್ರಾಂತಿಗೇಡಿಗಳು ನೀವು ಕೇಳಿರೋ.
ಇಷ್ಟಲಿಂಗದ ಪೂಜೆಯ ನಿಷ್ಠೆಯಲ್ಲಿ ಮಾಡಿದರೆ

ಅಷ್ಟೈಶ್ವರ್ಯ ದೊರಕೊಂಬುದೇನಯ್ಯ ?
ಪ್ರಾಣಲಿಂಗದ ನೆಲೆಯನರಿತು ಪೂಜೆಯಂ ಮಾಡಲು
ಸಕಲ ಭವಬಂಧನಗಳು ಬಿಟ್ಟು, ಚತುರ್ವಿಧ ಫಲಂಗಳು
ಆ ಶರಣನ ಬಟ್ಟೆಯ ಸೋಂಕಲೊಲ್ಲವು.
ಇದು ಕಾರಣ ಅಂಗಸಂಗವಾಗಿರ್ದ ಪ್ರಾಣ ಬಿಟ್ಟುಹೋಗುವಾಗ
ಅಂಗವೊಂದೆಸೆಯಾಗಿ ಪ್ರಾಣವೊಂದೆಸೆಯಾಗಿ ಬಿದ್ದು
ಹೋಗುವುದ ಕಂಡು ನಾಚಿತ್ತು ಎನ್ನ ಮನವು.
ಇದು ಕಾರಣ ಪ್ರಾಣಲಿಂಗದ ಸಂಬಂಧದ ಭೇದವ
ನಮ್ಮ ಪೂರ್ವಾಚಾರ್ಯ ಸಂಗನಬಸವಣ್ಣನ ಸಂತತಿಗಳಿಗಲ್ಲದೆ
ಉಳಿದಂಥ ತಾಮಸದೇಹಿಗಳಿಗೆ ಅರಿಯಬಾರದಯ್ಯ
ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೨೫ ॥

೨೮

ಗುರುಲಿಂಗಜಂಗಮದ ತ್ರಿವಿಧಭಕ್ತನೆನಿಸಿಕೊಂಬ
ಅಣ್ಣಗಳು ನೀವು ಕೇಳಿರೋ.
ಸ್ಥೂಲ ಸೂಕ್ಷ್ಮ ಕಾರಣವೆಂಬ ತ್ರಿವಿಧವ ತಿಳಿಯಬಲ್ಲರೆ
ತ್ರಿವಿಧಭಕ್ತನೆಂದೆನಿಸಬಹುದು.
ಸ್ಥೂಲ ಸೂಕ್ಷ್ಮ ಕಾರಣದಲ್ಲಿ ದಶವಾಯುಗಳುಂಟು.
ಅಲ್ಲಿದ್ದ ತ್ರಿವಿಧಪತಿಗಳಿಗೆ ನಾಲ್ಕು ಮುಖಂಗಳುಂಟು.
ಉತ್ತರ ದಕ್ಷಿಣ ಪೂರ್ವ ಪಶ್ಚಿಮವುಂಟು.
ಪವನ ನಾಲ್ಕು ಮೂಲವುಂಟು.
ಅಲ್ಲಿ ಸಕಲ ಆಚಾರ್ಯರ ಕ್ರೀಯ ಸಂಬಂಧವುಂಟು(?)
ಇಂತೀ ಸ್ಥಳದಲ್ಲಿ ಸಂಬಂಧವನರಿಯಬಲ್ಲರೆ
ಭಕ್ತನೆಂದೆನಿಸಬಹುದು.
ನಿಷ್ಠೆ ನಿಜ ಸತ್ಯ ಸದಾಚಾರ ಸದ್ಭಾವ ಜೀವನವಿದ್ದ ಬಿಡಾರವ ನೋಡಿ :
ಅಲ್ಲಿದ್ದ ಅಧಿಪತಿಗೆ ಮುಖವುಂಟು.
ಸಕಲ ವೈಪತಿಗಳ ಮರದು ಜಂಗಮಲಿಂಗವ
ನಿರೀಕ್ಷಣವ ಮಾಡಬಲ್ಲರೆ ಸೂಕ್ಷ್ಮ ಶರಣನೆಂದೆನಿಸಬಹುದು.
ಪುರದ ಜನರುಗಳೆಲ್ಲರನು ಮೈಮರೆಸಿ
ನಿರ್ಭವಿಗಳಂ ಮಾಡಿ ಕೆಡಹಿ,
ಚಿತ್ರಮಂಟಪದ ಬಾಗಿಲೊಳು ಹೊಕ್ಕು
ಎರಡು ಮುಖದ ಅಧಿಪತಿಯ ನಿರೀಕ್ಷಣವಂ ಮಾಡಿ

ಆದಿಪುರದ ಸುಖಂಗಳ ಹಿಂದುಗಳೆದು
ಬಾರದ ಬಟ್ಟೆಯಂ ಮೆಟ್ಟಿ, ಸೋಸದ ಜಲವ ಕೊಳಬಲ್ಲಡೆ
ಕಾರಣೈಕ್ಯನೆಂದೆನಿಸಬಹುದು.
ಇದನರಿಯದೆ ಸ್ಥೂಲ ಸೂಕ್ಷ್ಮ ಕಾರಣವೆಂದು ನುಡಿವ
ಮರವಿಯ ಮರಳುಗಳ ನೋಡಿ ನಗುತಿರ್ದ
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೨೬ ॥

೬೯೦

ಅಕ್ಷರದ ಆದಿಮೂಲವನರಿಯಬಲ್ಲರೆ
ಪ್ರಾಣಲಿಂಗದ ಅಕ್ಷರದ ಹುಟ್ಟಾವಳಿಯು ಸ್ಥೂಲದಲ್ಲಿಹುದು.
ಅಕ್ಷರದ ನಿಲವು ಸೂಕ್ಷ್ಮದಲ್ಲಿಹುದು.
ಮಾತಿಗೆ ಮೊದಲು ಶಬ್ದ ಮುಗ್ಧವಾಗಿರಲು
ಕಾರಣದಲ್ಲಿಹುದು.
ಇಂತೀ ತ್ರಿವಿಧಪರಿಯ ಭೇದಾಭೇದಂಗಳ ಸಂಬಂಧಿಸಿಕೊಂಡು
ಪ್ರಾಣಲಿಂಗಸಾಹಿತ್ಯವಾದ ಕಾರಣ ಭಕ್ತರ ಶ್ರೀಚರಣಕ್ಕೆ
ನಮೋ ನಮೋ ಎನುತಿರ್ದೆ ಕಾಣಾ
ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೨೭ ॥

೬೯೧

**ಇನ್ನು ಭಕ್ತಸ್ಥಲದ ವಚನ :**

ಪೃಥ್ವಿಯ ಮೂಲವನಳಿದು
ಅಪ್ಪುವಿನೊಳು ಕೂಡಬಲ್ಲರೆ ಭಕ್ತ.
ಅಪ್ಪುವಿನ ಭಯವ ನಿಲ್ಲಿಸಿ
ಅಗ್ನಿಯ ಕೂಡಬಲ್ಲರೆ ಮಾಹೇಶ್ವರ.
ಅಗ್ನಿಯ ಆರ್ಭಟವನಳಿದು
ವಾಯುವ ಕೂಡಬಲ್ಲರೆ ಪ್ರಸಾದಿ.
ವಾಯುವಿನ ಚಂಚಲವ ನಿಲ್ಲಿಸಿ
ಆಕಾಶವ ಕೂಡಬಲ್ಲರೆ ಪ್ರಾಣಲಿಂಗಿ,
ಆಕಾಶದ ಅಂಕವನಳಿದು
ನಿರಂಕಸ್ಥಳದಲ್ಲಿ ಕೂಡಬಲ್ಲರೆ ಶರಣ.
ಆಕಾಶದಹಂಕೃತಿಯನಳಿದು
ನಿತ್ಯಸ್ಥೂಲವ ಕೂಡಬಲ್ಲರೆ ಐಕ್ಯ.

ಇಂತೀ ಆರು ಆರುಪರಿಯ ಬಣ್ಣದ ಪರತತ್ವದೊಳು ಕೂಡಿ
ಸಂಬಂಧವಾದ ನಿಜಸಾಹಿತ್ಯವುಳ್ಳ
ಭಕ್ತನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆ ಕಾಣಾ
ಗೊಹೇಶ್ವರಪ್ರಿಯ ನಿರಾಳಲಿಂಗಾ. || ೨೮ ||

೭೯೨

**ಕವಿಗಳ ತರ್ಕದ ಪ್ರಸ್ತಾವದ ವಚನ :**

ಪಾದ ಪ್ರಾಸ ಗಣವ ಬಲ್ಲೆನೆಂಬ ಅಣ್ಣಗಳು ನೀವು ಕೇಳಿರೊ.
ತನ್ನಂಗಪಥದಲ್ಲಿದ್ದ ಪೃಥ್ವಿಯ ಮೂಲವನಳಿದು
ಆ ನಾಗಲೋಕದ ಸರ್ಪನ ಎಬ್ಬಿಸಿ,
ಆಕಾಶಮೂಲಕ್ಕೆ ನಡೆಸಬಲ್ಲಡೆ
ಆತ ಪಾದಕಾರುಣ್ಯವ ಬಲ್ಲನೆಂದೆನಿಸಬಹುದು.
ಅಷ್ಟದಳಕಮಲದ ಹುಗುಲ ಹಿಡಿದು ಮೆಟ್ಟಿ
ಒಂಬತ್ತು ಪರಿಯಲ್ಲಿ ಸುತ್ತಿ ಆಡುವ ಅಗ್ರವ ನಿಲ್ಲಿಸಿ,
ನಾಲ್ಕು ಮುಖದ ಬಿರಡದಲ್ಲಿ ಸಿಂಹಾಸನವನಿಕ್ಕಿದ
ಮಹಾರಾಯನ ನಿರೀಕ್ಷಣವ ಮಾಡಬಲ್ಲರೆ
ಆತ ಪ್ರಾಸವ ಬಲ್ಲವನೆಂದೆನಿಸಬಹುದು.
ಹತ್ತುಮುಖದಲ್ಲಿ ಹರಿದಾಡುವ ವಾಯುವ ಏಕವ ಮಾಡಬಲ್ಲರೆ,
ಮೂರು ಪವನವೊಂದರೊಳು ಕೂಡಿ ಪಂಚದ್ವಾರದಲ್ಲಿ ತುಂಬಿ
ಮೇಲ್ಗಿರಿಗೆ ನಡಸಿ ಪರಮಾಮೃತದ ಹೊಳೆಯ ನಿಲ್ಲಿಸಬಲ್ಲರೆ
ಆತ ಗಣವ ಬಲ್ಲವನೆಂದೆನಿಸಬಹುದು.
ಇದನರಿಯದೆ ಛಂದ ನಿಘಂಟು ಅಸಿ ವ್ಯಾಕರಣಂಗಳು
ಪಂಚಮಹಾಕಾವ್ಯಂಗಳುಯೆಂಬ ಮಡಕಿಯ
ಅಟ್ಟುಂಡ ಹಂಚಮಾಡಿ ಬಿಟ್ಟುಹೋಹುದನರಿಯದೆ
ಆ ಹಂಚನೆ ಹಿಡಿದು ಕವಿಯೆಂದು ತಿರಿದುಂಬ
ದೀಕ್ಷವಿಲ್ಲದ ತಿರುಕರಿಗೆ ಕವಿಗಳೆನುವವರ ಕಂಡು
ನಗುತಿರ್ದ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. || ೨೯ ||

೭೯೩

ಕವಿಗಳುಯೆಂದು ಹೆಸರಿಟ್ಟುಕೊಂಡು ನುಡಿವ
ಅಣ್ಣಗಳು ನೀವು ಕೇಳಿರೊ.
ಪ್ರಥಮ ಶಿವಾಲ್ಯದಲ್ಲಿ ಮೂಲಸ್ಥಾನದ ಲಿಂಗವನರಿದು

ಅಲ್ಲಿದ್ದ ವಿಮಳವಾದ ಗಂಟ ಕೊಯಿದು,
ಸಕಲ ಪರಿಮಳ ದ್ರವ್ಯಂಗಳ ಆ ಮೂಲಲಿಂಗಕ್ಕೆ ಕೊಡಬಲ್ಲಡೆ
'ಕ' ಎಂಬ ಅಕ್ಷರದ ಭೇದವ ಬಲ್ಲನೆಂದೆನ್ನಬಹುದು.
ಪರಬ್ರಹ್ಮವ ಆಶ್ರೈಸಬಲ್ಲಡೆ 'ವಿ' ಎಂಬ
ಅಕ್ಷರದ ಭೇದವ ಬಲ್ಲನೆಂದೆನಿಸಬಹುದು.
ಇಂತೀ ಭೇದವ ಬಲ್ಲಡೆ ನಿಮ್ಮ ಹೆಸರ ನೀವೇ ಇಟ್ಟುಕೊಂಡು,
ಕವಿಯೆಂಬ ಎರಡಕ್ಷರದ ಭೇದವನರಿಯದೆ ವಾದ ತರ್ಕವ ಮಾಡಿ
ಗುರುಗುಡುವುದು ಕಾರಣವಲ್ಲ.
ಬಲ್ಲರೆ ಹೇಳಿ, ಅರಿಯದಿದ್ದರೆ ಕೇಳಿ.
ಕವಿಯೆಂಬ ಎರಡು ಐವತ್ತೆರಡು ಅಕ್ಷರದ ಭೇದವ
ಅಷ್ಟದಳಕಮಲವ ವಿಚಾರಿಸುವುದು, ಅಲ್ಲದ ಕಾರಣ (?)
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೩೦ ॥

೭೯೪

ಗುರುಲಿಂಗ ಉಪದೇಶ ಲಿಂಗಧಾರಣವೆಂದು
ಹೆಸರಿಟ್ಟುಕೊಂಡು ನುಡಿವ ಅಣ್ಣಗಳು ನೀವು ಕೇಳಿರೊ.
ಸರ್ವಾಂಗಭೇದವನು ಕಮಲಪ್ರಕಾಶವನರಿದು ನುಡಿವಿರಿ.
ಪದ್ಮಸ್ಥಾನದಲ್ಲಿ ಕಮಲಕ್ಕೆ ನಾಲ್ಕು ಎಸಳು,
ಅದಕ್ಕೆ ಶ್ವೇತ ಕಪೋತ ಹರಿತ ಮಾಂಜಿಷ್ಟ ನೀಲವರ್ಣವೆಂಬಿರಿ.
ಈ ನಾಲ್ಕರ ಭೇದವ ಬಲ್ಲರೆ ಭಕ್ತನೆಂದೆನಿಸಬಹುದು.
ಈ ನಾಲ್ಕು ಎಸಳನು ಒಂದುಮಾಡಿ
ಅದರೊಳು ಕೂಡಬಲ್ಲರೆ ಮಾಹೇಶ್ವರನೆಂದೆನಿಸಬಹುದು.
ಪೃಥ್ವಿ ಅಪ್ಪುವಿನ ಗುಣಂಗಳನಳಿದು ದಶಕಮಲದಲ್ಲಿ
ಬೆರೆಸಬಲ್ಲರೆ ಪ್ರಸಾದಿಯೆಂದೆನಿಸಬಹುದು.
ಈ ತ್ರಿವಿಧ ಗುಣಂಗಳ ಶಕ್ತಿಯ ನಿಲ್ಲಿಸಿ
ಅಂತರಂಗದ ಹೃದಯಕಮಲದಿ ನಿಂತಿಹ ರಾಜನ
ಸಂದರುಶನವ ಮಾಡಿ,
ಮನ ಬುದ್ಧಿ ಚಿತ್ತ ಅಹಂಕಾರವೆಂಬ
ಚತುರ್ವಿಧ ಪ್ರಧಾನಿಗಳ ಬುದ್ಧಿಯ ಮೀರಿ
ಹದಿನಾರು ಎಸಳಲ್ಲಿ ನಿಂದು,
ಆಕಾಶ ತತ್ವವ ನಿರೀಕ್ಷಿಸಿ
ಪಂಚತತ್ವದ ಪರಿಯ ನೋಡುತ್ತ ಬಂದು.

ಆ ಮುಂದಿರ್ದ ಮುಪ್ಪುರದ ಹೆಬ್ಬಾಗಿಲ ಪೊಕ್ಕು
ಶ್ರೀ ಗುರುವಿನ ಶ್ರೀಪಾದವೆಂಬ
ಉಭಯಕಮಲವ ನಿರೀಕ್ಷಣವ ಮಾಡಿ,
ಶ್ರೀಗುರುವಿನ ಶ್ರೀಪಾದಪದ್ಮಕಾರುಣ್ಯ ಜ್ಞಾನವ ಪಡದು,
ಮುಂದೆ ನೋಡಲಾಗಿ ಸಹಸ್ರದಳದ ಕಮಲವ ಕಂಡೆನಯ್ಯ.
ಆ ಕಮಲದ ಅಗ್ರದ ತುದಿಯಲ್ಲಿ ಇರುವ ಲಿಂಗವ ಕಂಡು
ತನ್ನ ಸಂಬಂಧವಾಗಬೇಕೆಂದು ಮೇಲಕ್ಕೆ ನೋಡಲು
ಏಕದಳದ ಪದ್ಮವ ಕಂಡೆನಯ್ಯ.
ಆ ಪದ್ಮಸಿಂಹಾಸನದ ಮೇಲೆ
ನಿರಂಜನನೆಂಬ ಜಂಗಮವ ಕಂಡೆ.
ಆ ಜಂಗಮದ ಚರಣಾಂಬುಜಕ್ಕೆ ಎರಗಿದ ಕಾರಣ
ಆ ಚಿತ್ಕಳೆಯೆಂಬ ಲಿಂಗ ಎನ್ನ ಸಂಬಂಧವಾಯಿತ್ತಲ್ಲಯ್ಯ.
ಇಂತೆಸವಂಗಭೇದವನರಿಯದೆ ಉಪದೇಶವೆಂದು ನುಡಿವ
ನರಗುರಿಗಳ ನೋಡಿ ನಗುವ
ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೩೧ ॥

೭೯೫

ಆರು ಚಕ್ರದಲ್ಲಿ ಅರತೆನೆಂದು ನುಡಿವ
ಅರಿವುಗೇಡಿಗಳು ನೀವು ಕೇಳಿರೋ.
ಆಧಾರಚಕ್ರ ಪೃಥ್ವಿಗೆ ಸಂಬಂಧ ;
ಅಲ್ಲಿಗೆ ಬ್ರಹ್ಮ ಅಧಿದೇವತೆ,
ಆಚಾರಲಿಂಗವಿಡಿದು ಯೋಗಿಯಾಗಿ ಸುಳಿದ.
ಸ್ವಾಧಿಷ್ಠಾನಚಕ್ರ ಅಪ್ಪುವಿಗೆ ಸಂಬಂಧ :
ಅಲ್ಲಿಗೆ ವಿಷ್ಣು ಅಧಿದೇವತೆ,
ಶ್ರೀಗುರುಲಿಂಗವ ಪಿಡಿದು ಜೋಗಿಯಾಗಿ ಸುಳಿದ.
ಮಣಿಪೂರಕ ಚಕ್ರ ಅಗ್ನಿಗೆ ಸಂಬಂಧ ;
ಅಲ್ಲಿಗೆ ರುದ್ರನಧಿದೇವತೆ,
ಜಂಗಮಲಿಂಗವ ಪಿಡಿದು ಶ್ರಾವಣೆಯಾಗಿ ಸುಳಿದ.
ವಿಶುದ್ಧಿಚಕ್ರ ವಾಯುವಿಗೆ ಸಂಬಂಧ ;
ಅಲ್ಲಿಗೆ ಸದಾಶಿವನಧಿದೇವತೆ,
ಪ್ರಸಾದಲಿಂಗವ ಪಿಡಿದು ಕಾಳಾಮುಖಿಯಾಗಿ ಸುಳಿದ.
ಆಜ್ಞಾಚಕ್ರಕ್ಕೆ ಪರತತ್ವದ ಸಂಬಂಧ ;

ಅಲ್ಲಿಗೆ ಪರಶಿವನಧಿದೇವತೆ,
ಮಹಾಲಿಂಗವಪಿಡಿದು ಪಶುಪತಿಯಾಗಿ ಸುಳಿದ.
ಇಂತೀ ಆರು ದರುಶನಕ್ಕೆ ಬಂದರೆ ಅಂಗಳ ಪೊಗಿಸಿರಿ.
ಆ ಲಿಂಗವು ನಿಮಗೆ ತಪ್ಪಿದವು,
ಮುಂದಿರ್ದ ಗುರುಲಿಂಗಜಂಗಮದ ಭೇದವನರಿಯದೆ
ಆರು ಸ್ಥಲದಲ್ಲಿ ತೃಪ್ತಿಯಾಯಿತ್ತೆಂಬವರ ಕಂಡು
ನಾಚಿತ್ತು ಎನ್ನ ಮನವು
ಗೂಹೇಶ್ವರಪ್ರಿಯ ನಿರಾಳಲಿಂಗಾ. ॥ ೩೨ ॥

೭೯೬

ಪೃಥ್ವಿಯ ಮಧ್ಯದಲ್ಲೊಂದು
ಬೀಜವಿಲ್ಲದ ವೃಕ್ಷ ಹುಟ್ಟಿತ್ತು.
ಆ ವೃಕ್ಷಕ್ಕೆ ಒಂದು ಪೂರ್ವಭಾಗವೆಂಬ ಗೊನೆ ಹುಟ್ಟಿತ್ತು.
ಆ ಗೊನೆಗೆ ತಲೆಕೆಳಗಾಗಿ ಒಂದು ಕಮಲ ಹುಟ್ಟಿತ್ತು.
ಆ ಕಮಲದ ಎಸಳು ಮರ್ತ್ಯಮುಖ :
ಅದರ ಪೂರ್ವಮುಖವೇ ಆಕಾಶ.
ಆ ಕಮಲಕ್ಕೆ ನವಪರಿ ಕಾಯಿ ನಾಲ್ಕರಲಿ
ರಸತುಂಬಿ ಹಣ್ಣಾಯಿತ್ತು.
ನಾಲ್ಕು ಆರು ಹತ್ತು ಹನ್ನೆರಡು ಹದಿನಾರು
ಇಂತೀ ನಾಲ್ವತ್ತೆಂಟು ಮಂದಿ ಆ ಹಣ್ಣಿನ ಗ್ರಾಹಕರು.
ಆ ಹಣ್ಣ ಮಾರುವವರು ಸಾವಿರಾಳಿನ ನಾಯಕರು.
ಆ ಹಣ್ಣಿನ ಗ್ರಾಹಕರು,
ಆ ಹಣ್ಣ ಮೂರು ರತ್ನಕ್ಕೆ ಬೆಲೆಯನಿಟ್ಟರು.
ಮೂರು ರತ್ನಕ್ಕೆ ಕೊಡಬಹುದೆ ?
ಎಂದು ಆ ಸಾವಿರಾಳಿನ ನಾಯಕರು
ಹಿಡಿದು ಶಿಕ್ಷೆಯ ಮಾಡಿದರು.
ಮೂರುಪುರದ ಅರಸು ಅಶ್ವಾರೋಹಿ
ಸಾವಿರಾಳಿನ ನಾಯಕರು ಆ ಹಣ್ಣ ಕೊಂಡು
ಮೇಲುಗಿರಿಯ ಕೈಲಾಸದ ಅರಸನ ಸಂದರುಶನವ ಮಾಡಿದರು.
ಆ ಗಿರಿರಾಜನು ಆ ಹಣ್ಣ ಕಂಡು ಬೆರಗಾದ.
ಆ ಹಣ್ಣಿನ ಸವಿಯ ಬಲ್ಲವರ ತೋರಿಸಯ್ಯ
ಗೂಹೇಶ್ವರಪ್ರಿಯ ನಿರಾಳಲಿಂಗಾ. ॥ ೩೩ ॥

೭೯೭

ಆರು ಗುಣವೆಂಬೊ ಅರಿಕೆಯನ್ನೆದೆವೆಂಬ
ಅರುಹಿರಿಯರು ನೀವು ಕೇಳಿರೋ.
ಅರುವೆಂಬುದನೆ ಅರಿದು,
ಮರವೆಂಬುದನೆ ಮರದು,
ಪರಶಿವಗುರುಮೂರ್ತಿಯೆಂದು ಗುರುವ ಕೊಂಡಾಡುತ್ತ
ಆ ಗುರುಮೂರ್ತಿ ಗುರುದೀಕ್ಷವನೆ
ಶಿರದಮೇಲಿಹ ಹಸ್ತವನು
ಆ ತತ್‌ಕ್ಷಣದಲ್ಲಿ ಕಾರುಣ್ಯದಿಂದಲಿ
ಪರಮಪ್ರಸಾದ ಸಾರಾಯವ ಕೊಂಡದನು ಅರಿತು,
ಮನದಲ್ಲಿ ಆಧಾರಚಕ್ರವಂ ಬಲಿದು
ಇಡಾ ಪಿಂಗಳ ಸುಷುಮ್ನವೆಂಬ ಸಂದೇಹವನಳಿದು,
ಏಕನಾಳವ ಕೂಡುತ್ತ ಮೂರುಪುರದ ಬಾಗಿಲಂಗಳ ಪೊಕ್ಕು
ಪರಮಪ್ರಸಾದವ ಕೊಡುತಿರ್ದ ಘನಲಿಂಗವ ಕೊಡಬಲ್ಲರೆ
ಅದೇ ಅರುವು ಹಿರಿಯತನ.
ಇದನರಿಯದೆ ಅರುಹಿರಿಯರೆಂದು ತಿರುಗುವ
ಬೂಟಕರಿಗೆ ನಾನೇನೆಂಬೆನಯ್ಯಾ
ಗೊಹೇಶ್ವರಪ್ರಿಯ ನಿರಾಳಲಿಂಗಾ ! ॥ ೩೪ ॥

೭೯೮

ಭಕ್ತಿ ಜ್ಞಾನ ವೈರಾಗ್ಯವೆಂದು ಹೆಸರಿಟ್ಟು
ನುಡಿವ ಅಣ್ಣಾಗಳು ನೀವು ಕೇಳಿರೊ.
ಪವನದ ಉತ್ಪತ್ಯದಲ್ಲಿದ್ದ ಮೂಲವನರಿದು
ಆ ನಾಲ್ಕು ಪವನ ಒಂದುಗೂಡಿ
ಪೃಥ್ವಿಯ ಗುಣವನರಿಯಬಲ್ಲರೆ
ಭಕ್ತಯೆಂದೆನಿಸಬಹುದು.
ಎಂಟೆಸಳ ಕಮಲದಲ್ಲಿ ಮೆಟ್ಟಿ ಆಡುವ
ಹಂಸನ ಸ್ಥಳವನರಿಯದೆ
ಪಟ್ಟಗಟ್ಟಿದರಸನ ಸಂದರುಶನವ ಮಾಡಬಲ್ಲರೆ
ಜ್ಞಾನಿಯೆಂದೆನಿಸಬಹುದು.
ಮಾರ್ಗ ಇಲ್ಲದೆ ಹಾದಿಯ ನಡದು
ಇಪ್ಪತ್ತೊಂದುಮಣಿಯ ಯಜ್ಞವಮಾಡಿ ಪೋಣಿಸಿ

ಸುಮಾರ್ಗದಲ್ಲಿ ಬೆರಸ್ಯಾಡುತಿರ್ದ
ತ್ರಿವಿಧಮಣಿಯ ಮೇರುವೆಯಂ ಕಟ್ಟಿ
ಜಪವ ಮಾಡಬಲ್ಲರೆ, ಜಪವು ಬಲಿದು
ಸ್ಥೂಲಕರ್ಮವೆಂಬ ಜಾಡ್ಯವನಳಿದುದು
ವೈರಾಗ್ಯವಲ್ಲದೆ, ಇಂತೀ ಭೇದಂಗಳನರಿಯದೆ
ಕುಲಮದ, ಧನಮದ, ವಿದ್ಯಾಮದ,
ಪ್ರಾಯಮದವೆಂಬ ಮದಂಗಳೊಳು ಮುಳುಗಿ
ಕ್ರೋಧ, ಇಂದ್ರಿಯ ಕಪಟ, ವ್ಯಸನದಲ್ಲಿ
ವೈರಾಗ್ಯವೆಂದೆನಿಸುವ ದ್ರೋಹಿಗಳಿಗೆ ನೋಡಿ
ನಗುತಿರ್ದ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. || ೩೫ ||

೨೯೯

ಮೇರುಗಿರಿ ಉದಯಗಿರಿ ನೀಲಗಿರಿ ಹೇಮಗಿರಿ ರಜತಗಿರಿ
ಇಂತೀ ಗಿರಿಗಳಿಗೆ ಛಳಿಯಾದರೆ
ಹೊದ್ದಿಸುವರುಂಟೇನಯ್ಯಾ ?
ಆ ಗಿರಿಯ ಕೆಳಗೆ ಗಗನವುಂಟು ;
ಆ ಗಗನಕ್ಕೆ ಗವಸಣಿಗೆಯಿಕ್ಕುವರುಂಟೇನಯ್ಯಾ ?
ಆ ಗಗನದ ಕೆಳಗೆ ಸಪ್ತಸಮುದ್ರಗಳುಂಟು.
ಅವುಗಳ ನೀರುಡುಗಿದರೆ
ಆ ನೀರ ಕೂಡಿಸುವರುಂಟೇನಯ್ಯಾ ?
ಆ ಸಮುದ್ರಂಗಳ ಕೆಳಗೆ ಒಂದು ಮದಸೊಕ್ಕಿದ ಇಲಿ,
ಆ ಇಲಿಯ ತಿಂದೆನೆಂದು ಒಂದು ಮಾರ್ಜಾಲ ಬರಲು,
ಆ ಮಾರ್ಜಾಲನು ಆ ಇಲಿಯ ಕಂಡು ನಿಬ್ಬೆರಗಾಯಿತ್ತು.
ಆ ಇಲಿಯು ಬಂದು ಆ ಮಾರ್ಜಾಲನ ಕಿವಿಯ ತಿಂಬೋದು.
ಅದ ಕಂಡು ಬೆರಗಾದ ನಮ್ಮ
ಗೊಹೇಶ್ವರಪ್ರಿಯ ನಿರಾಳಲಿಂಗ. || ೩೬ ||

೩೦೦

ಗುಹೇಶ್ವರ ಎಂಬ ಅಕ್ಷರದ ಭೇದವು :
ವರಕಂಬವೆ ಕಾಲು, ತೊಡಿಯೇ ಜೋದಿಗೆ,
ಸಾರಣಿ ಚರ್ಮ, ಕರಯೆರಡು ಮದನಧ್ವಜಯೆರಡು,
ಸ್ತುತಿವಾಯಿ ಬಾಗಿಲು,

ಎರಡು ಶ್ರೋತ್ರವೇ ಬೆಳಕಂಡಿಯು,
ಮೂಗೇ ಜಾಳಿಂದ್ರ, ಆಲಿಗಳೆ ಸೋಪಾನ,
ಶಿರವೇ ಕಲಶ, ಭಸಿತವೆ ಪತಾಕೆ।
ಇಂತೀ ಪಂಚಗುಹೇಶ್ವರನೆಂಬ ದೇಗುಲ.
ಇನ್ನು ಅದಕ್ಕೆ ಸ್ವರವಾವುದೆಂದಡೆ :
ಗುಹೇಶ್ವರನೆ ಸ್ವರ,
ಆ ದೇಗುಲಕ್ಕೆ ಲಿಂಗವೇ ಪೀಠ.
ಪಂಚವಿಷಯವೆಂಬ ಪೂಜೆ,
ಜ್ಞಾನವೆಂಬುದ ಹಿಡಿದು ಅಜ್ಞಾನವ ದೂಡಿ,
ತಾನೆ ತನ್ನೊಳು ತಿಳಿದುದೆ ಭಂಡಾರ.
ಅದಕ್ಕೆ ಮನವೆ ಕಿವಿ,
ನಿರ್ಮನವೆಂಬ ಕದವ ತೆರೆದು
ಸುಖವೆಂಬುದೆ ನೈವೇದ್ಯ;
ಜಿಹ್ವೆಯೇ ಪೂಜಾರಿ,
ನಿತ್ಯವೇ ಪ್ರಸಾದ, ಮನದಿಚ್ಛೆಗೆ ಪೊಸಪಂಚಾಕ್ಷರಿಯ ಗಸಣೆ,
ಷಡಾಕ್ಷರವೆ ಶ್ರೀಗಂಧ, ಜ್ವಾಲೆಯೇ ಧೂಪ, ಸ್ಥಳವೇ ಹರಿವಾಣ,
ಬೋನವು ತಾನೆ, ಪೂಜಿಸುವಾತನು ತಾನೆ, ಪೂಜೆಗೊಂಬಾತನು ತಾನೆ.
ಇಂತೀ ಪರಮಾನಂದವೆಂಬ ಸಂಗಗಳ ಕೂಡಲಂದೆ
ಚಿತ್ಸೂರ್ಯರ ಕೋಟಿಪ್ರಕಾಶವಾಗಿ ತೋರುತ್ತಿಹ
ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೩೭ ॥

೮೦೧

ಆದಿ ಅನಾದಿಗಳಿಲ್ಲದಂದಿನ ಕೂಗು,
ನಾದಬಿಂದುಕಳೆಗಳಿಲ್ಲದಂದಿನ ಕೂಗು,
ಇಡಾ ಪಿಂಗಳ ಸುಷಮ್ನನಾಳದ ಮಧ್ಯದ ಕೂಗು,
ಕಂಡು ಕೂಗಿದೆ, ಅರಸು ಬಾರಯ್ಯ
ಕಡಿಯ ಹೊಲಕೆ ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೩೮ ॥

೮೦೨

ಕಳ್ಳಆಡಿನ ಕಾಲ ಕಡಿದು, ಕೋಡಗನ ಹಲ್ಕುಕಿತ್ತು,
ಓಡ್ಯಾಡುವ ಎರಳೆಯ ತಿರುಳ ತಿಂದು,
ಉಡುವಿನ ಕುಡಿನಾಲಗೆಯ ಕೂಡೆವೆಡವರಿದು ತಿಂದು,

ದಿನವ ಕಳಿದುಳಿದಾತ ಎನ್ನ ಗುರುವು.
ಯಾತಕೆಂದರೆ ಅರಿಕೇಶ್ವರಲಿಂಗವನರಿಪುದಕ್ಕೆ ತೆರಪಾಗಿರಣ್ಣಾ
ಗೊಹೇಶ್ವರಪ್ರಿಯ ನಿರಾಳಲಿಂಗಾ. || ೩೯ ||

೮೦೩

ಅರುಹಿನ ಕುರುಹ ಕಾಣದೆ ಗಿರಿ ಕೋಡಗಲ್ಲ ಮೇಲೆ
ತಲೆಕೆಳಗೆ ಮಾಡಿ ತಪಸ್ಸವ ಮಾಡಿದಡಿಲ್ಲ,
ಕಾಲಕರ್ಮಂಗಳ ದಂಡಿಸಿದಡಿಲ್ಲ,
ಪೃಥ್ವಿ ತಿರುಗಿ, ತೀರ್ಥಂಗಳ ಮಿಂದು, ನಿತ್ಯನೇಮಂಗಳ ಮಾಡಿದಡಿಲ್ಲ,
ಜಲಸಮಾಧಿಯಲ್ಲಿ ಕುಳಿತಡಿಲ್ಲ.
ಇದಕ್ಕೆ ಶ್ಲೋಕ :
"ಪೂಜಾಕೋಟಿಸಮಂ ಸ್ತೋತ್ರಂ ಸ್ತೋತ್ರಕೋಟಿಸಮಂ ಜಪಃ ।
ಜಪಕೋಟಿಸಮಂ ಧ್ಯಾನಂ ಧ್ಯಾನಕೋಟಿಮನೋಲಯಂ ॥"
ಇಂತೆಂದುದಾಗಿ, ಸುತ್ತಿಸುಳಿವ ಮನವನು ಚಿತ್ತದಲ್ಲಿರಿಸಿ
ನಿಶ್ಚಿಂತವಾದಡೆ ನಿತ್ಯಪ್ರಕಾಶ ಗುರು ಗುಹೇಶ್ವರಲಿಂಗವು
ಮತ್ತೆ ಅರಸಲುಂಟೇನಯ್ಯಾ ?
ಮಠವ್ಯಾಕೊ, ಪರ್ವತವ್ಯಾಕೊ, ಜನವ್ಯಾಕೋ ನಿರ್ಜನವ್ಯಾಕೊ
ಚಿತ್ತ ಸಮಾಧಾನವುಳ್ಳ ಪುರುಷಂಗೆ ?
ಹೊರಗಣ ಧ್ಯಾನ ಮೌನ ಜಪತಪ ನಿತ್ಯನೇಮಂಗಳ್ಯಾಕೊ
ತನ್ನ ತಾನರಿದ ಶರಣಂಗೆ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ ? || ೪೦ ||

೮೦೪

ಅಂಗಗರಡಿಯೊಳು ನಿಜಲಿಂಗದ ಸಾಧನವ ಬಲ್ಲಡೆ
ಹಂಗಿನ ಮನುಜಂಗೆ ಅರಿವುಂಟೆ ?
ಡಂಗುರದೊಳು ಸ್ವಯವಿಲ್ಲದೆ ಕೆಟ್ಟಿತ್ತು.
ಡಿಂಗರಿಗನೆಂದಲ್ಲಿ ಮುಕ್ತಿ ಕಂಡಿತ್ತು
ಗೊಹೇಶ್ವರಪ್ರಿಯ ನಿರಾಳಲಿಂಗಾ. || ೪೧ ||

೮೦೫

ದಾನಿಯಾದಡೇನು ?
ಅವನ ಬೇಡಿದಲ್ಲದೆ ಅರಿಯಬಾರದು.
ರಣರಂಗ ಧೀರನಾದಡೇನು ?
ಅಲಗು ಅಲಗು ಹಳಚಿದಲ್ಲದೆ ಅರಿಯಬಾರದು.

ಗೆಳೆಯನಾದಡೇನು ?
ಅಗಲಿದಲ್ಲದೆ ಅರಿಯಬಾರದು.
ಹೇಮವಾದಡೇನು ?
ಒರೆಗಲ್ಲುಯಿಲ್ಲದೆ ಅರಿಯಬಾರದು.
ನಿನ್ನನರಿದೆಹೆನೆಂದಡೆ :
ಸಂಸಾರ ಸಾಗರವ ದಾಟಿದಲ್ಲದೆ ಅರಿಯಬಾರದು ಕಾಣಾ
ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೪೨ ॥

೮೦೬

ಬರಿದೆ ಶಿವಶಿವಯೆಂದಡೆ ಭವಹಿಂಗಿತೆಂಬುವ
ಅರಿವುಗೇಡಿಯ ಮಾತ ಕೇಳಲಾಗದು.
ಅದೇನು ಕಾರಣವೆಂದಡೆ :
ಕತ್ತಲಮನೆಯಲ್ಲಿ ಜ್ಯೋತಿಯ ನೆನೆದರೆ
ಪ್ರಕಾಶವಾಗಬಲ್ಲುದೆ ?
ಕಾಮಜ್ವರದವರು ರಂಭೆಯ ನೆನೆದರೆ
ಕಾಮಜ್ವರ ತಂಬಿಸಬಲ್ಲುದೆ ?
ಇಂತೀ ನರಗುರಿಗಳಾಡಿದುದ ಕಂಡು
ನಗುತಿರ್ದ ನಮ್ಮ ಗೊಹೇಶ್ವರಪ್ರಿಯ ನಿಶಾಳಲಿಂಗ. ॥ ೪೩ ॥

■■

## ಗೋಣಿ ಮಾರಯ್ಯನ ವಚನ

೮೦೭

ಕಾಯದ ಕಂಥೆಯ ಹಿಡಿದು
ಅಕಾಯಚರಿತ್ರ ಪರಮನೆಂಬ ಜಂಗಮ ಬಂದು,
ಕರ ಖರ್ಪರವನಳವಡಿಸಿಕೊಂಡು
ಭಿಕ್ಷೆಕ್ಕೆ ನಡೆಯಲು ಕೇಳಿದ.
ಇಂದ್ರಿಯಂಗಳು ನಿಲಲಮ್ಮದೆ
ಕಡೆಯ ಬಾಗಿಲಲ್ಲಿ ನಿಲಿಕಿ ನೋಡುತಿರ್ದವಯ್ಯಾ !
ದಶೇಂದ್ರಿಯಂಗಳು ಪ್ರದಕ್ಷಿಣ ಬಂದು
ತಮಗೆ ತಾವೇ ಅಂಜಿ ಓಡಿ[ದವು]
ಕೇಟೇಶ್ವರಲಿಂಗನ ಶರಣನಿರವ ಕೇಳಿದಾಕ್ಷಣ. ॥ ೧ ॥

೮೦೮

ಕುರುಹಿನ ಸಾಕಾರವಿಡಿದಾಡುವರೆಲ್ಲರೂ
ಕಾಲಕಂಧರನ ಹಂಗಿನಲ್ಲಿಪ್ಪರು.
ಅರಿವಿನ ಆಕಾರದಲ್ಲಿ ಅರಿವೆನೆಂಬವರೆಲ್ಲರೂ
ನೀಲಮೇಘನ ಹಂಗಿನ ಕೋಲದಲ್ಲಿಪ್ಪರು.
ಇವೆಲ್ಲವನರಿದು ಕಂಡಿಹೆನೆಂಬವರೆಲ್ಲರೂ

ಇಲ್ಲವೆಯ ಆಜ್ಞೆಗೊಳಗಾಗಿಪ್ಪರು.
ಕಾಲಕಂಧರನ ಕಾಲಮುರಿದು,
ನೀಲಮೇಘನೆಂಬವನ ಕೈಯ ಕೊಯ್ದು,
ಎಲ್ಲರಿಗೆ ಮಾರಾಂತೆನು ಇನ್ನು ನಿಲ್ಲಿ ಸಾಕು.
ಎನ್ನ ಗೋಣಿಯಮರೆಯಲ್ಲಿ ಇಪ್ಪರೆಲ್ಲರೂ
ಎನ್ನ ಗೋವರಾದುದ ನೀ ಮರೆದೆಯಾ
ಕೇಟೇಶ್ವರಲಿಂಗವೆ ! || ೨ ||

೮೦೯

ಕ್ಷಮೆ ದಮೆ ಶಾಂತಿ ಸೈರಣೆ ಭಕ್ತಿ ಜ್ಞಾನ
ವೈರಾಗ್ಯಸಂಪನ್ನರಾದ ವೀರಮಾಹೇಶ್ವರರು,
ಜಗದ್ಧಿತಾರ್ಥವಾಗಿ ಮರ್ತ್ಯಲೋಕದೊಳು ಬಂದು,
ನಡೆನಡೆಗೆ ನುಡಿನುಡಿಗೆ ಅಡಿಗಡಿಗೆ ಹೆಜ್ಜೆಹೆಜ್ಜೆಗೆ
'ಓಂ ನಮಃ ಶಿವಾಯ, ಓಂ ನಮಃ ಶಿವಾಯ
ಓಂ ನಮಃ ಶಿವಾಯ' - ಎಂಬ ಮಂತ್ರಮೂರ್ತಿಗಳಾಗಿ,
ಲಿಂಗದ ನೆನಹಿಂದ ಲಿಂಗಾರ್ಪಿತಕ್ಕೆ ಹೋಗಿ,
ನಿಂದು 'ಲಿಂಗಾರ್ಪಿತ ಭಿಕ್ಷಾ' ಎಂದಲ್ಲಿ,
ಗುರುವಾಜ್ಞೆಯಿಂದ ಬಂದ ಭಿಕ್ಷ ಅಮೃತಾನ್ನವೆಂದು ಕೈಕೊಂಡು
ಭೋಜ್ಯ ಭೋಜ್ಯಗೆ
'ಓಂ ನಮಃ ಶಿವಾಯ, ಓಂ ನಮಃ ಶಿವಾಯ
ಓಂ ನಮಃ ಶಿವಾಯ' ಎಂಬ ನುಡಿಯಿಂದ ಸೇವಿಸಿ,
ನಿತ್ಯತೃಪ್ತರಾಗಿ, ಸುಳುಹು ಪಾವನರಾಗಿ ಚರಿಸುವ
ಮಹಾಮಹಿಮ ಶರಣರ ನಡೆ ಪರುಷ, ನುಡಿ ಪರುಷ,
ಮುಟ್ಟಿದ್ದು, ನೋಡಿ ಸೋಂಕಿದ್ದೆಲ್ಲಾ ಪಾವನ,
ಹಾದ ಜಲವೆಲ್ಲ ಪುಣ್ಯತೀರ್ಥ,
ಏರಿದ ಬೆಟ್ಟವೆಲ್ಲ ಶ್ರೀಪರ್ವತಂಗಳಾದವು.
ಇಂತಪ್ಪ ನಿರಾಳ ನಿಜೈಕ್ಯ ನಿರಾಮಯ ನಿರ್ದೇಹಿಗಳಾದ ಶರಣರ
ಅರೆಪಾದ ಧೂಮ್ರ ಮಲಿನವಾಗಿರುವಂತೆ ಮಾಡಯ್ಯ.
[ಕೇಟೇಶ್ವರಲಿಂಗದಲ್ಲಿ] ಧನ್ಯ ನಾನಯ್ಯ. || ೩ ||

೮೧೦

ತನುಗುಣವುಳ್ಳನ್ನಕ್ಕ, ಗುರುವಿನಲ್ಲಿ
ಪರತತ್ತ್ವಬೋಧವುಂಟೆಂದು ಬೆಸಗೊಳ್ಳಲಿಲ್ಲ.

ಮನವುಳ್ಳನ್ನಕ್ಕ, ಲಿಂಗದಲ್ಲಿ ಏಕನಿಷ್ಠೆ
ನಿಚ್ಚಟವುಂಟೆಂದು ಕಂಡೆಹೆನೆಂಬ ಭ್ರಮೆಯಿಲ್ಲ.
ಆತ್ಮ ಮಥನವುಳ್ಳನ್ನಕ್ಕ, ಕರಣ ಮಠಕ್ಕೆ
ಬರುವ ಹೋಗುವ ಬೃಹದ್ ನಿಲುಗಡೆ.
ಈ ತೆರನ ಬಲ್ಲಡೆ ಮರದು ಹಿಡಿಯಲಿಲ್ಲ :
ಅರಿದು ಕೂಡಲಿಲ್ಲ.
ಕುರುಹಿನ ಸಾಕಾರವಿಡಿದಾಡುವ ಕುತ್ತದ ಕೂಳು
ಮೂರಲೊಂದು ಕೊರೆಗೊಂಡಿತ್ತು.
ಈ ಮೂರಲೊಂದ ನಿನ್ನ ಗೋಣಿಯ ಮೂಲೆಯಲ್ಲಿ
ತೋರದಿರಾ ಕೇಟೇಶ್ವರಲಿಂಗವೆ. ॥ ೪ ॥

೮೧೧

ಭಿಕ್ಷೆ ನಿರತರು ಭಿಕ್ಷಕ್ಕೆ ಹೋಗಿ
ಅಕ್ಷ[ಯ] ಪಾತ್ರೆ ಗಿಡತರು.
ಭಿಕ್ಷ ಏಳು ವಿಧವಾಗಿಪ್ಪುದು ;
ಭಿಕ್ಷ ಒಂಬತ್ತು ವಿಧವಾಗಿಪ್ಪುದು.
[ನಿಚ್ಚ] ಭಿಕ್ಷ ಪಂಚಾಪ್ತರಲ್ಲಿ ಪಂಚ ಭಿಕ್ಷವನುಂಡು,
ಕರಪಾತ್ರ ನಿರುತನಾದಾತನಿಗೆ
ದಿನವೊಂದಕ್ಕೆ ಭಿಕ್ಷ ಲಿಂಗಾರ್ಪಿತಕ್ಕೆ,
ಭುವನದ ಎಲ್ಲರಿಗೆಯೂ ಒಡೆಯ !
ನಿಚ್ಚ ಹಿಡಿತಡೆಯಿಲ್ಲ.
ರಕ್ಷಾರಕ್ಷಕನ ಇಚ್ಛೆಯನರಿದು, ಭಿಕ್ಷಕ್ಕೆ ಹೋಗಿ,
ಗೋಣಿಯ ಮರೆಯ ಕೋಟೆಯ ಹರಿಮಾಡಿ....
ಕೇಟೇಶ್ವರಲಿಂಗದಲ್ಲಿ ಗೋಣಿ ಹರಿಯಿತ್ತು. ॥ ೫ ॥

೮೧೨

ಶರಣ ಸಂಜೆ ಮುಂಜಾವದ ಕತ್ತಲೆಯನಳಿದುಳಿದನಾಗಿ
ಕಾಲೋಚಿತವನರಿದು ಕೊಂಬ.
ಗೋಣಿಯ ತೆರೆಯ ಹರಿದು
ವಂಕ ಮೂರ ಹರಿದು ದಾಂಟಿ,
ಜಾತಿ-ವಿಜಾತಿಯನರಿದು,
ಕರಣೇಂದ್ರಿಯಂಗಳಲ್ಲಾಳದೆ,

ತೆರಣಿಯ ಕರಣವನರಿತು ಗೂಡನಿಕ್ಕಿರೆ,
ಧಾರೆ ಸುರಿವುದು ಕಂಡು
ವೀರಧಾರುಣಿಯ ಮೇಲೆ ಎರೆದುದ
ನಿ....ಯ ಬೆಂಬಳಿಯನರಿತು ಮುಸುಕಿಕ್ಕಿಕೊಂಡು
ಭಿಕ್ಷಕ್ಕೆ ಹೋಗಿ [ಕೇಳಲು] ಚಾಟಿ ಹರಿಯಿತ್ತು
ಕೇಟೇಶ್ವರಲಿಂಗದಲ್ಲಿ. ॥ ೬ ॥

೮೧೩

ಸಂಗಕ್ಕೆ ಶರಣರ ಸಂಗವೇ ಲೇಸಯ್ಯ,
ಜಂಗಮದರಿವು ಲಿಂಗದ ನಿಲವ ತೋರುವುದಾಗಿ,
ಲಿಂಗದ ನಿಲವಾವುದೆಂದಡೆ :
ಮೂರ ನಿಲಿಸಿ, ಆರ ಮೀರಿ, ಹದಿನೆಂಟ ಕಳೆದು,
ಏಳನುಳಿದು, ಒಂಬತ್ತು ಮೀರಿ,
ನಿಜಜಂಗಮದ ನಿಜಲಿಂಗದ ನಿಜಶರಣರ ಅರಿವು.
ಈ ತ್ರಿವಿಧದ ನಿರುಗೆ ಎಂತೆಂದಡೆ :
ತತ್ತ್ವಜ್ಞಾನದ ನುಡಿಯಲ್ಲಿ ಹೊಗದು.
ಅದೆಂತೆಂದಡೆ : ನಿಮ್ಮ ಭಿಕ್ಷದ ಭಿತ್ತಿಯ ಹೇಳುವೆ.
ಭಿಕ್ಷೆ ಮೂರು ವಿಧವಾಗಿಪ್ಪುದು.
ಭಿಕ್ಷೆ ಏಳುವಿಧವಾಗಿಪ್ಪುದು.
ಭಿಕ್ಷೆ ಹನ್ನೆರಡುವಿಧವಾಗಿಪ್ಪುದು.
ಭಿಕ್ಷದ ನಿರುಗೆಯ ಬಲ್ಲ ನಿಜವೀರದೇವಯ್ಯ.
ಆತನ ಅರಿವನುಂಟುಮಾಡಿಕೊಂಡು
ಆಚರಿಸುವ ಚರಜಂಗಮದ ಅರಿವಿನ
ತೃಪ್ತಿಯಾವುದೆಂದಡೆ :
ಕ್ಷಾರವ ಕಂಡು ವಿಭ್ರಮಣನಂತಿರಬೇಕು
ಇದು ಕ್ರೀಗಾಗದೆಂದು ಕಂಗೆಡಲೇಕೆ ?
ಚತುರ್ದಿವಸದಲ್ಲಿಯೂ ಶರಣನೊಬ್ಬನೇ
ಚರಿಸುವ ಕೇಟೇಶ್ವರನ ಕರುಣದಲ್ಲಿ.
ಆ ಚತುರ್ದಿವಸದಲ್ಲಿಯೂ ಆಚರಿಸುವ
ಶರಣನ ನಿಲವ ಕಂಡು ಮತ್ತೆ ಗೋಣಿಯ ಮರೆಯಿಲ್ಲ :
ಇವ ಕುರಿತು ಅನುಸರಿಸದೆ ಆಚರಿಸುತಿಪ್ಪನು. ॥ ೭ ॥

೮೧೪

ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ವಸ್ತು
ತನ್ನ ವಿನೋದಕ್ಕೆ ತಾನೆ ಕರ್ತೃ ಭೃತ್ಯನಾದ
ಭೇದಮಂ ಪೇಳ್ವೆ, ಅದೆಂತೆಂದಡೆ :
ಒಂದು ಎರಡಾದ ಭೇದಮಂ ತಿಳುಹುವೆ.
ಅದು ತಾನೆ ಸಂಗನಬಸವಣ್ಣನೆಂದು, ಚೆನ್ನಬಸವಣ್ಣನೆಂದು
ಎರಡು ನಾಮ ಅಂಗ-ಪ್ರಾಣದ ಹಾಂಗೆ.
ಚೆನ್ನಬಸವಣ್ಣನಿಂದ ಸಂಗನಬಸವಣ್ಣ ಧನ್ಯನಪ್ಪನು.
ಈ ಎರಡು ವಸ್ತುವನೊಳಕೊಂಡು ಆಚರಿಸುವ
ಜ್ಞಾನಿಜಂಗಮದ ನಿಲವೆಂತೆಂದೊಡೆ :
ಆವನಾನೊಬ್ಬನು ಭಸಿತಮಂ ಪಿಡಿದು
'ಅಯ್ಯಾ ಶರಣಾರ್ಥಿ' ಎಂದು ಕರೆಯಲು,
ಒಯ್ಯನೆ ನಿರೀಕ್ಷಿಸುವುದೆ ಜ್ಞಾನಿಜಂಗಮಕ್ಕೆ ಕರ್ತೃತ್ವ.
ಇದಲ್ಲದೆ, ನಡೆಯದೆ ಜಂಗಮ ಎಲವೋ ಎಂದು ಕರೆವುತ್ತಿರಲು
ನಸುಗೆಂಪಿನ ಭಾವವೇರಿ ಹೋದರೆ ಭಸಿತಕ್ಕೆ ದೂರ.
ಸಾಕ್ಷಿ :
"ವರ್ಣೆ ವಕಾಪೋಸೋವಾಸಿ ಶೂದ್ರೋಽಪಿ ಯದಿ ಭೂತಿದಃ ।
ಸಾ ಭೂತಿಃ ಸರ್ವಥಾ ಗ್ರಾಹ್ಯಾ ನೋ ಚೇದ್ರ್ರೋಹಿ ಮಮೈವ ನಃ ॥"
ದುರಾಯ ಲೆಕ್ಕಕ್ಕೆ ಹರಣವ ಕೊಟ್ಟವರುಂಟು.
ವಿಶ್ವಾಸಕ್ಕೆ ಅಂಗಕ್ಕೆ ಅರಿವನರಸುವ ಪರಿಯಂತರ ಇದೇ ದೃಷ್ಟ.
ಲಿಂಗದೇವನು ಮನವ ನೋಡಬೇಕೆಂದು
ಭಕ್ತಿಯೆಂಬ ಬಿನ್ನಹಕ್ಕೆ ಅವಿಶ್ವಾಸದಿಂದ ಅಡ್ಡಬರಲು
ಇದರ ವಿಶ್ವಾಸವನರಿದು ವಿಚಾರಿಸಬೇಕು.
ಕಿಚ್ಚು ಹತ್ತಿದಲ್ಲಿ ಊರಡವಿ ಕಾಡಡವಿಯೆಂದುಂಟೆ ?
ಚಿದಗ್ನಿಸ್ವರೂಪಮಪ್ಪ ಶ್ರೀಭಸಿತವ ಕಂಡಲ್ಲಿ ಹೋಗಲಮ್ಮೆನು,
ಆವನಾದರಾಗಲಿ ಶ್ರೀ ಮಹಾದೇವನ ನೆನವನೆ ದೇವನೆಂದುದಾಗಿ,
ಭವಿಯಾದರಾಗಲಿ ಹೋಗಲಮ್ಮೆನು.
ಇದು ಎನಗೆ ಚೆನ್ನಬಸವಣ್ಣನಿಕ್ಕಿದ ಕಟ್ಟು.
ಭವಿಯಾದರೆ ಕರೆದು ಒಡಂಬಡಿಸೂದು.
ಭಕ್ತನಾದರೆ ಬಿನ್ನಹವ ಕೈಕೊಂಬುದು.
ಆವನಾದರಾಗಲಿ ಶ್ರೀ ಮಹಾದೇವನ ನೆನವವನೆ ದೇವನೆಂದುದಾಗಿ,

ಭವಿಯಾದರೆ ಹಾಲು ಹಣ್ಣು ಕಾಯಿ ವಸ್ತ್ರವ ಕೈಕೊಂಬುದು.
ಮತ್ತಾ ಭಸಿತಕ್ಕೆ ಶರಣೆಂದು ಅವನ ಕಳುಹುವುದು.
ಭಕ್ತನಾದರೆ ಬಿನ್ನಹವ ಕೈಕೊಂಡು
ಆತನ ತ್ರಿವಿಧಕ್ಕೆ ತಾ ಕರ್ತನಾಗಿ
ಆತನ ತನ್ನೊಳಗೆ ಇಂಬಿಟ್ಟುಕೊಂಬುದು
ಜ್ಞಾನಜಂಗಮದ ಲಕ್ಷಣ.
ಇನ್ನು ಕ್ರಿಯಾಮಾಹೇಶ್ವರ ಭೇದಮಂ ಪೇಳ್ವೆ:
ಶಿವಭಕ್ತರು ಬಂದು ಬಿನ್ನಹವ ಕೈಕೊಳ್ಳಿಯೆಂದು
ಉದಾಹರಣೆಯಿಂದ ಬಿನ್ನವಿಸುತ್ತಿರಲು
ಅದಕ್ಕೆ ಒಡಂಬಟ್ಟು, ಕೈಕೊಂಬುದು ; ಅಲ್ಲದಿರ್ದಡೆ ಕಳುಹುವುದು.
ಇದಲ್ಲದೆ ಬಾಯಿಗೆ ಬಂದಂತೆ ನುಡಿದು
ಅಷ್ಟ ಮೋರೆಯ ಹಾಕೋದು ಜಂಗಮಕ್ಕೆ ಕರ್ತೃತ್ವವಲ್ಲ.
ಜ್ಞಾನಿಜಂಗಮ ತ್ರಿವಿಧಪದಾರ್ಥವ ಕೈಕೊಂಬುದು.
ಕ್ರಿಯಾಜಂಗಮ ಎರಡು ಪದಾರ್ಥವಂ ಬಿಟ್ಟು
ಒಂದು ಪದಾರ್ಥವ ಕೈಕೊಂಬುದು.
ಭಾವಜಂಗಮ ಇಂತೆರಡ ಮೀರಿ
ತ್ರಿವಿಧವಿರಹಿತವಾಗಿ ತೋರ್ಪುದು.
ಗೋಣಿಯ ಮರೆಯ ಕೇಟೇಶ್ವರಲಿಂಗವು
ತ್ರಿವಿಧಜಂಗಮದ ನಿಲವಿನ ನಿರುಗೆಯ ನಿರೂಪಿಸಿದರು. ॥ ೮ ॥

೮೧೫

ಸುರಗಿಯಲ್ಲಿ ತಟ್ಟುಬೆಟ್ಟಿರಿದ ಮತ್ತೆ
ಧಾರೆ ಮೊನೆತಾಗಿತಲ್ಲಾ ಎಂಬೀ ಹೆಡ್ಡರ ಮಾತ ಕೇಳಲಾಗದು.
ಅರಿವ ಗ್ರಹಿಸಿದ ಚಿತ್ತಕ್ಕೆ ಮರವೆಗೆ ತೆರಸುಂಟೆ ?
ನಿಷ್ಠೆಯಲ್ಲಿ ನಿಷ್ಠೆ ಹುಟ್ಟಿದ ಮತ್ತೆ
ನಿಷ್ಠೆಯಾಚರಣೆ ಘಟ್ಟಿಸದು.
ಎಲ್ಲಕ್ಕೆ ಶರಣೆಂದು ಎಲ್ಲರಾಲಯದಲ್ಲಿ
ಭಿಕ್ಷವ ತೆಗೆದುಕೊಂಡು,
ಸಲ್ಲಲಿತ ಭಾವದಲ್ಲಿಪ್ಪ ಶರಣಂಗೆ
ಗೋಣಿಯ ಮರೆಯ ಸಿಕ್ಕುದೊಡಕಿಲ್ಲ.
ಕೇಟೇಶ್ವರಲಿಂಗವು ತಾನು ತಾನಾದ ಶರಣ. ॥ ೯ ॥

# ಘನಲಿಂಗದಯ್ಯನ ಮುಕ್ತಿಯ ವಚನ

೮೧೬

ಭೂಲೋಕದ ನಚ್ಚನೆ ಮೀರಿ
ನಿಶ್ಚಟನಾಗಿ ಜ್ಞಾನ ಕ್ರೀಗಳಿಂದ ಆಚರಿಸಿ
ಅಂಗಲಿಂಗ ಸಂಬಂಧಿಗಳಾದ ಶಿವಲಿಂಗ ಮೋಹಿಗಳು ಕೇಳಿರಯ್ಯ.
ಶರಣರು ಮುಕ್ತಿಪುರಕ್ಕೆ ಹೋಗುವ ಹಾದಿಯಲ್ಲಿ
ಒಂದು ಪಂಚವರ್ಣದ ಹಣ್ಣು,
ಮನವೇಟದ ಮಹಾಪಟ್ಟಣವೊಂದು.
ಆ ಪಟ್ಟಣದ ಕಡೆ ಮೊದಲಾಗಿಯೂ ಹಾಳಾಗಿಪ್ಪುದು.
ಆ ಪಟ್ಟಣದ ನಡುವೆ ಹೋಗುತ್ತಿಪ್ಪ ಹಾದಿಯಲ್ಲಿ
ಅಹಂಕಾರ ಮಮಕಾರಗಳೆರಡು ಪಟ್ಟಣಗಳು ತುಂಬಿ ತುಳುಕುತವೆ.
ಆ ಎರಡು ಪಟ್ಟಣಕ್ಕೆ ಹೋಹಾದಿ ಹೆಬ್ಬೆಟ್ಟಗಳಾಗಿಪ್ಪವು.
ಆ ಎರಡು ಪಟ್ಟಣದ ದಿಕ್ಕಿನಲ್ಲಿ ಒಂದು ಭಕ್ತಿಯ ಪುರವಿದೆ.
ಆ ಭಕ್ತಿ ಪುರಕ್ಕೆ ಹಾದಿಯಿಲ್ಲ.
ಆ ಭಕ್ತಿಪುರಕ್ಕೆ ಹೋದಲ್ಲದೆ ಮುಂದಳ ಮುಕ್ತಿಪುರದ ಬಟ್ಟೆ ಕಾಣಬಾರದು.
ಮುಂದಳ ಪಯಣ ಗತಿಯ ಸಂಚದೋಪರಿಯ
ಸಂಚಮಾಕರಣ ಮಸ ಎಂಬತ್ತು ನಾಲ್ಕು ಲಕ್ಷದ ಪ್ರಕಾರದಲ್ಲಿಪ್ಪರಾ

ಮಂಡಲದಲ್ಲಿ ಸುಳಿವುದು ತಪ್ಪದೆಂದು
ಅದಕ್ಕೆ ಹೇಹಮಂ ಮಾಡಿ,
ತಮ್ಮವರು ಹೋದ ನಸುದೋಯಲ (?)
ಬೆಂಬಳಿವಿಡಿದು ಹೋಗಿ ಭಕ್ತಿಪುರಮಂ ಕಂಡು
ಆ ಭಕ್ತಿಪುರದಿ ನಡುವೆ ಹೋಗುತ್ತಿದ್ದ ಹಾದಿಯಲ್ಲಿ
ಹೆಬ್ಬುಲಿ ಕರಡಿ ಕಾಳರಕ್ಕಸಿ ಕರಿಘಟೆಯಿಪ್ಪ
ಮಹಾಸರೋವರದ ಅರಣ್ಯವಿದೆ.
ಆ ಸರೋವರದ ಅರಣ್ಯಮಧ್ಯದಲ್ಲಿ
ಎಂಟು ಕಳಸದ ಚೌಕಮಂಟಪದ ಸುವರ್ಣದ ದೇಗುಲವಿದೆ.
ಆ ದೇಗುಲದಲ್ಲಿ ಮುಕ್ತಿರಾಜ್ಯಕ್ಕೆ ಪಟ್ಟವಕಟ್ಟುವ
ಸಮರ್ಥಿಕೆಯನ್ನುಳ್ಳ ಜಂಗಮಲಿಂಗವದೆ.
ಆ ಲಿಂಗಜಂಗಮಮಂ ಶರಣ ಕಂಡು
ಹರ್ಷಗೊಂಡ ಭಾವದಲ್ಲಿ ಷೋಡಶೋಪಚಾರ
ಅಷ್ಟವಿಧಾರ್ಚನೆಗಳಿಂದ ಪೂಜೆಯಂ ಮಾಡಿ
ತನ್ನ ಮನದ ಅಭೀಷ್ಟೆಯಂ ಮನ ನೆನದಂತೆ ಮನದಲ್ಲಿ ಭೇದಿಸಿ
ದೇಹ ಮನ ಪ್ರಾಣಕುಳ ಸಮಸ್ತ ಶರಣಾದಿಗಳ
ಗುಣಕಂಗಳೆಲ್ಲವೂ ಸುಟ್ಟು ಬೊಟ್ಟಿಕ್ಕಿ
ನಿರ್ಮಲದ ರೂಪನಾಗಿ ಅಲ್ಲಿಂದ ಮುಂದೆ ನಡೆಸುತ್ತಿದ್ದಾಗ
ಉತ್ತರ ದಿಕ್ಕಿನ ಆಕಾಶದಲ್ಲಿ ಅನೇಕ ಚೋದ್ಯವನೊಳಕೊಂಡಿಪ್ಪ
ತ್ರಿಪುರಮಂ ಕಂಡು,
ಆ ತ್ರಿಪುರದ ಮೇಲೆ ಬ್ರಹ್ಮರಂಧ್ರವೆಂಬ
ಕೈಲಾಸದ ಕಡೆಯ ಬಾಗಿಲೊಳಿಪ್ಪ
ಐಕ್ಯಸ್ಥಲವೆನಿಸುವ ಅಣುನೆಲೆಯ ಮಾಣಿಕ್ಯವರ್ಣದ
ಉಪ್ಪರಿಗೆಯ ತಳಮಂ ಕಂಡು
ಪತಿಯಿದ್ದ ಮನೆಯ ಬಾಗಿಲ ಸತಿಸಾರುವಂತೆ
ಶರಣ ಉಪ್ಪರಿಗೆಯ ಬಾಗಿಲಂ ಸಾರಿ
ಬಾಗಿಲಲ್ಲಿ ಡಾಕಿಣಿ, ರಾಕಿಣಿ, ಲಾಕಿಣಿ,
ಕಾಕಿಣಿ, ಸಾಕಿಣಿ, ಹಾಕಿಣಿಯರೆಂಬ
ಷಡ್ವಿಧಶಕ್ತಿಗಳಿಗೆ ಆದಿನಾಯಕಿಯಾಗಿಪ್ಪಳು.
ಅರ್ಧಕುಂಡಲಿ ಎಂಬ ಜ್ಞಾನಶಕ್ತಿ,
ಆ ಶಕ್ತಿಯ ಬಾಗಿಲಿಗೆ ದ್ವಾರಪಾಲಕಿಯಾಗಿಪ್ಪಳು.

ಅವಳು ಅಂಗರಂ ತಡವಳು, ನಿರಂಗರಂ ಬಿಡುವಳು
ಎಂಬುದ ಶರಣ ತನ್ನ ಮನದಲ್ಲಿ ತಾನೆ ತಿಳಿದು
ಅಲ್ಲಿಪ್ಪ ಮಹಾಲಿಂಗಮಂ ಶರಣ ಮಂತ್ರಮಾಲೆಯಂ ಮಾಡಿ
ಮನದಲ್ಲಿ ಧರಿಸಿ, ಸೋಮಸೂರ್ಯರ ಕಾಲಾಟಮಂ ನಿಲ್ಲಿಸಿ,
ಕುಂಭಕಮಂ ಇಂಬುಗೊಳಿಸಿ,
ಝುಂ ಝುಂ ಎಂದು ಝೇಂಕರಿಸುತ್ತಿದ್ದ
ಪೆಣ್ದುಂಬಿಯ ನಾದಮಂ
ಚಿಣಿಮಿಣಿಯೆಂದು ಸಣ್ಣರಾಗದಿ
ಘನವ ಸೋಂಕುತಿಪ್ಪ ವೀಣಾನಾದಮಂ
ಲಿಂಗಲಿಂಗ ಎಂದು ಕರವುತಿಪ್ಪ ಘಂಟಾನಾದಮಂ
ಢಂ ಢಂ ಎನುತಿಪ್ಪ ಪೂರಿತವಾದ ಭೇರಿನಾದಮಂ
ಚಿಟಪಟಲು ಭುಗಿಲು ಭುಗಿಲೆನುತಿಪ್ಪ ಮೇಘನಾದಮಂ
ಝುಂ ಝುಂ ಎಂದು ಎಡವಿಡದೆ ಬಲಿವುತಿಪ್ಪ ಪ್ರಣಮನಾದಮಂ
ಓಂ ಹ್ರಾಂ ಹ್ರೀಂ ಹ್ರೂಂ ಹ್ರೀಂ ಎಂದು
ಬೆಳಗಿ ಬೀರುತಿಪ್ಪ ದಿವ್ಯ ನಾದಮಂ,
ಆರಣ್ಯ ಘೀಳಿಡುವಂತೆ ಹೂಂಕರಿಸುತಿಪ್ಪ ಸಿಂಹನಾದಮಂ
ಈ ಪ್ರಕಾರ ನಾದಂಗಳ ಶರಣ ಕೇಳಿ ಮನಂ ದಣಿದು
ಹರುಷಂ ಮಿಕ್ಕು ಆ ಬಾಗಿಲ ದಾಟಿ
ಪಶ್ಚಿಮ ದಿಕ್ಕಿಗೆ ಮುಖವಾಗಲೊಡನೆ
ಚೌಕಮಧ್ಯದಲ್ಲಿ ವಜ್ರ ವೈಢೂರ್ಯ ಪುಷ್ಯರಾಗ ಗೋಮೇಧಿಕ
ಇಂತಿವರೊಳಗಾದ ನವರತ್ನಂಗಳ
ಕಂಬ ಬೋದಿಗೆ ಹಲಗೆಗಳಿಂದ ಅನುಗೈದು ತೀರಿಸಿದ
ಮಹಾಶ್ರೀಗುರುವಿನ ಒಡ್ಡೋಲಗದ ಪ್ರಭೆ
ಆಕಾಶಮಂ ಸಲವುತಿಪ್ಪುದ ಕಂಡು
ಬಹಿರಾವರಣದಿ ಎಸೆವ ಪ್ರಾಕಾರದಕೋಟೆ
ಎರಡು ಹದಿನಾರು ಕೊತ್ತಳಗಳಲ್ಲಿ ಈಶಾನ್ಯ ಪರ್ಜನ್ಯ
ಜಯಂತರೊಳಗಾದಿ ಮೂವತ್ತೆರಡು ತಂಡದ
ಅನಂತ ವಸ್ತು ದೇವತೆಗಳ ಕಾವಲ ಅತ್ಯುಗ್ರಮಂ ಕಂಡು
ಶರಣರ್ಗೆ ತಡಹಿಲ್ಲವೆಂಬುದಂ ತನ್ನ
ಮನೋವೇಗದಿಂದ ಅರಿದು ಕಾವಲಾಗಿಪ್ಪ ವಸ್ತುದೇವತೆಯ
ಕೃಪಾದೃಷ್ಟಿಯಿಂದ ಸಂತೈಸಿ ಮುಕ್ತಿಪುರಕೆ ಮೂಲಸೂತ್ರವಾದ

ಬ್ರಹ್ಮರಂಧ್ರದ ಪೂರ್ವದಿಕ್ಕಿನ ಚಂದ್ರಮಂಡಲದಲ್ಲಿಪ್ಪ
ಬಾಗಿಲ ಬೀಗಮಂ ತೆಗೆದು
ಶರಣ ಒಳಹೊಗಲೊಡನೆ ಬಹಿರಾವರಣದ ವೀದಿಯ
ಓಲಗದೊಳಿಪ್ಪ ಹರಿಸುರ ಬ್ರಹ್ಮಾದಿ ದೇವತೆಗಳು
ಮನು ಮುನಿ ಗರುಡ ಗಂಧರ್ವ ಇಂದ್ರ ಚಂದ್ರರೊಳಗಾದ
ಅನಂತರೆಲ್ಲಾ ಅಂಜಿ ಕೆಲಸಾರೆ,
ಸೋಮವೀದಿಯೊಳಿಪ್ಪ ಅನಂತ ರುದ್ರರೊಳಗಾದ
ಇಪ್ಪತ್ತುನಾಲ್ಕು ತಂಡದ ಅನಂತರು,
ಶಿವನ ಒಡ್ಡೋಲಗವ ನಡೆಸುವ ಪರಿಚಾರಕರು,
ಅವರು ಬಂದು, ಶರಣಲಿಂಗದ ದೃಷ್ಟಿಸಂಧಾನವಾಗಲೆಂದು
ಮುಖವಂ ಮಾಡಿ,
ಸೂರ್ಯವೀದಿಯೊಳಿಪ್ಪ ಉಮಾಚಂಡಿಕೇಶ್ವರ ನಂದಿಕೇಶ್ವರರೊಳಗಾದ
ಹದಿನಾರು ತಂಡದ ಅನಂತ ರುದ್ರರು ಬಂದು
ಶರಣನ ಸನ್ಮಾನವಂ ಮಾಡಿ,
ಅಗ್ನಿವೀದಿಯೊಳಿಪ್ಪ ಉಮೆ ಜೇಷ್ಠೆಯರೊಳಗಾದ
ಎಂಟು ತಂಡದ ಅನಂತ ಶಕ್ತಿಯರು
[ಕರ್ಪೂ]ರದ ಪುತ್ಥಳಿ ಬಂದು ಉರಿಯ ಪುತ್ಥಳಿಯ ಆಲಂಗಿಸಿದಂತೆ
ಶರಣ ಬಂದು ಆ ಘನಲಿಂಗಮಂ ಅಮರ್ದಪ್ಪಿ
ಪುಷ್ಪ ಪರಿಮಳದಂತೆ ಏಕವಾಗಿ,
ಆ ಘನಲಿಂಗ[ವೆ] ತಾನೆಯಾದ
ಮಹಾಗುರು ಸಿದ್ಧೇಶ್ವರನ ಶ್ರೀ ಚರಣಮಂ ನಾನು
ಕರಸ್ಥಳದಲ್ಲಿ ಪಿಡಿದು ಪೂಜೆಯಂ ಮಾಡಲೊಡನೆ
ಎನ್ನ ತನುವೆ ಪಂಚಬ್ರಹ್ಮ, ಪ್ರಾಣವೆ ಪರಬ್ರಹ್ಮವಾಯಿತ್ತು. ||೧೦||

■■

## ಚೆನ್ನಯ್ಯನ ಕಂಡಿತದ ವಚನ

೮೧೭

ಜಲವಂ ತೊಳೆದು ಕುಡಿವ ಮಲದೇಹಿಗಳ
ಮುಖವ ನೋಡಲಾಗದು ಎಂಬುದಕ್ಕೆ
"ಪಾಕಾರಂ ಪರಮಜ್ಞಾನಂ ದೋಕಾರಂ ದೋಷನಾಶನಂ ।
ದಕಾರಂ ದಹ್ಯತೇ ಜನ್ಮ ಕಕಾರಂ ಕರ್ಮಭೇದನಂ ॥"
ಎಂದುದು ಚೆನ್ನಯ್ಯಪ್ರಿಯ ನಿರ್ಮಾಯಪ್ರಭು[ವಿನ ವಚನವು]. ॥ ೧ ॥

೮೧೮

"ಯಥಾ ಪಾದೋದಕಂ ಭಾವ್ಯಂ ತಥಾ ಪ್ರಸಾದಃ ಕ್ರೀಯತೇ।
ತೀರ್ಥ ಪ್ರಸಾದ ಸಮಾಯುಕ್ತ ಉತ್ತಮೋತ್ತಮ ಲಿಂಗಾರ್ಪಣಂ ॥ "
ಜಂಗಮದಲ್ಲಿ ಪಾದತೀರ್ಥವಾದ ಮೇಲೆ
ತಾನು ಸವಿದು ಲಿಂಗಕ್ಕೆ ಅರ್ಪಿಸುವದು
ಅದೀಗ ಉತ್ತಮೋತ್ತಮ ಲಿಂಗಾರ್ಪಣವೆಂದುದು
ನಿಮ್ಮ ಶರಣ ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨ ॥

೮೧೯

"ತೀರ್ಥಃ ಜಂಗಮಾನಾಂ ಲಿಂಗಪ್ರಸಾದಂ ಕ್ರೀಯತೇ ।
ಲಿಂಗ ಜಂಗಮಾದ್ವಯೋಭಾವ ತೀರ್ಥಂ ನಾಸ್ತಿ ಸುರಾಪಾನಂ ॥"

ಜಂಗಮದಲ್ಲಿ ಪಾದತೀರ್ಥವ ಪಡೆದುಕೊಂಡು
ಲಿಂಗಮುಖದಲ್ಲಿ ಕೊಡಬೇಕೆಂದು
ಲಿಂಗಕ್ಕೆ ಕೊಟ್ಟು ಕೊಂಬುವದು
ತೀರ್ಥವಲ್ಲ ಅದು ಸುರಾಪಾನ.
ಅವರಿಗೆ ಗುರುವಿಲ್ಲ, ಲಿಂಗವಿಲ್ಲ. ಜಂಗಮವಿಲ್ಲ,
ತೀರ್ಥವಿಲ್ಲ, ಪ್ರಸಾದವಿಲ್ಲ.
ಅವರಿಗೆ ರೌರವ ನರಕ ತಪ್ಪದೆಂದನು,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೩ ||

೮೨೦

ಅಚ್ಚಪ್ರಸಾದ ನಿಚ್ಚಪ್ರಸಾದ ಸಮಯಪ್ರಸಾದ ನಿಜಪ್ರಸಾದವೆಂಬ
[ಈ ಚತುರ್ವಿಧಪ್ರಸಾದದ] ನಿರ್ಣಯ[ವ]ನರಿದು
[ಕೊಂಡು] ಕೊಡಬಲ್ಲಾತನೆ ಗುರು,
ತಿಳಿದು ಕೊಳಬಲ್ಲಾತನೆ ಸದ್ಭಕ್ತ.
ಈ ಭೇದವನರಿಯದೆ ಅಚ್ಚ ನಿಚ್ಚ ಪ್ರಸಾದವೆಂದು ನೀರಕೂಳನುಂಬುವ
ಉಚ್ಛಿಷ್ಟ ಮುದಿಹೊಲೆಯರ ಮೂಗು ಕೊಯ್ಯದೆ ಮಾಣ್ಬನೆ
[ನಿಮ್ಮ ಶರಣ] ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೪ ||

೮೨೧

ಅಚ್ಚಪ್ರಸಾದವೆಂಬುದೆ ನಿಶ್ಚಲ ನಿರ್ವಯಲಕ್ಕೆ ನಾಮವು.
ಅಚಲ ಅದ್ವಯ ಅಭಿನ್ನವೆಂಬುದೆ [ಅಚ್ಚಪ್ರಸಾದ ].
ಗುರುಸ್ವಾನುಭಾವದಿಂದರಿದು ನಿಶ್ಚಯವಾದುದೆ ನಿಚ್ಚಪ್ರಸಾದ.
ಅಷ್ಟಮೂರ್ತಿಗಳ ಸಮಯವನರಿದುದೆ ಸಮಯಪ್ರಸಾದ.
ಏಕಪ್ರಸಾದವೆಂಬುದೆ ಅಂಡಪಿಂಡ ಬ್ರಹ್ಮಾಂಡಗಳಿಗೆ ಏಕರಸಮಯವಾಗಿ
ತತ್ವಮಸಿಯಾದಿ ವಾಕ್ಯಂಗಳನರಿತು
ಸರ್ವಕಲ್ಪಿತಬ್ರಹ್ಮವೆಂದು ಅರಿತುಕೊಳ್ಳಬಲ್ಲರೆ
ಏಕಮೇವನದ್ವಿತೀಯವೆಂದು ವಾಕ್ಯಂಗಳಿಗೆಡೆಗೊಡದೆ ಏಕಪ್ರಸಾದವ
ಕೊಂಡವರು ಬಸವ ಚನ್ನಬಸವ [ಪ್ರಭುದೇವ] ಮುಖ್ಯವಾದ
ಅಸಂಖ್ಯಾತ ಗಣಂಗಳು.
[ಕೊಂಡವರ ಏಕ] ಪ್ರಸಾದದಿಂದ
ಮುಂದಾದವರಿಗೂ ಇದೇ ಪ್ರಸಾದ
ಹಿಂದಾದವರಿಗೂ ಇದೇ ಪ್ರಸಾದ

ಇಂದಾದವರಿಗೂ ಇದೇ ಪ್ರಸಾದ.
ಈ ಪ್ರಸಾದವಲ್ಲದೆ ನಿತ್ಯಾನಿತ್ಯ ಹಸಿವು ತೃಷೆಗೆ ಕೊಂಬುವದು
ಪಾದೋದಕಪ್ರಸಾದವಲ್ಲ.
ನೀರಕೂಳನುಂಡು ಜಲಮಲವೆಂಬುದು
ಪಾದೋದಕ ಪ್ರಸಾದವಲ್ಲ.
ನಿತ್ಯ ನಿತ್ಯ ತೃಪ್ತಿಯೇ ಪ್ರಸಾದವೆಂಬುವದು ಪರಮಾನಂದವು.
ಈ ಭೇದವನರಿದುಕೊಳ್ಳಬಲ್ಲಾತನೆ ಭಕ್ತ, ಕೊಡಬಲ್ಲಾತನೆ ಗುರುವು.
ಪಾದೋದಕ ಪ್ರಸಾದವ ಕೊಳ್ಳಬೇಕೆಂಬಾತ ಭಕ್ತನಲ್ಲ, ಬದ್ಧಭವಿ.
ಉರಿಕೊಂಡ ಕರ್ಪುರವ ಮರಳಿ ಸುಡುವರೆ ?
ಪರುಷ ಮುಟ್ಟಲು ಲೋಹ ಹೊನ್ನಾದ ಮೇಲೆ ಮರಳಿ ಮರಳಿ
ಪರುಷವ ಮುಟ್ಟಿಸುವರೆ ?
ಜ್ಯೋತಿ ಮುಟ್ಟಿದ ಮನೆಗೆ ಕತ್ತಲುಂಟೆ ?
ಪಾದೋದಕ ಪ್ರಸಾದ ಸೋಂಕಿದ ಕಾಯ ಪ್ರಸಾದವಲ್ಲದೆ
ಪ್ರಸಾದಕ್ಕೆ ಪ್ರಸಾದವುಂಟೆ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ ? ||೫||

೮೨೨

ಪ್ರಸಾದವೆಂಬುದು ನಿರ್ಮಳಮುಖದಿಂದ ಉದ್ಭವವಾದದ್ದು.
ಚಿತ್‌ಶಕ್ತಿಯಿಂದ ಮಹಾಲಿಂಗರೂಪವಾಯಿತು.
ಮಹಾಲಿಂಗಪ್ರಸಾದದಿಂದ ಪ್ರಸಾದಲಿಂಗ ಉದ್ಭವವಾಯಿತು.
ಪ್ರಸಾದಲಿಂಗದಿಂದ ಜಂಗಮಲಿಂಗ ಉದ್ಭವವಾಯಿತು.
ಜಂಗಮಲಿಂಗಪ್ರಸಾದದಿಂದ ಶಿವಲಿಂಗ ಉದ್ಭವವಾಯಿತು.
ಶಿವಲಿಂಗಪ್ರಸಾದದಿಂದ ಗುರುಲಿಂಗಪ್ರಸಾದ ಉದ್ಭವವಾಯಿತು.
ಗುರುಲಿಂಗಪ್ರಸಾದದಿಂದ ಆಚಾರಲಿಂಗ ಉದ್ಭವವಾಯಿತು.
ಇಂತೀ ಷಡ್ವಿಧಲಿಂಗವು ಪ್ರಸಾದದಿಂದ ಉದ್ಭವಿಸಿದವು.
ಲಿಂಗದಿಂದ ಜಗತ್ತು ಉದ್ಭವಿಸಿದವು.
"ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಲಿಂಗ ಬಾಹ್ಯಾತ್ ಪರಂ ನಾಸ್ತಿ [ತಸ್ಮಾತ್] ಲಿಂಗಂ ಪ್ರಪೂಜಯೇತ್ ||
ಲೀಯಾಲೀಯ ಸಂಪ್ರೋಕ್ತಂ ಸಕಾರಂ ಸ್ಫಟಿಕಮುಚ್ಯತೇ ।
ಲಯರ್ನಾಗಮಶ್ಯನಂ ಲಿಂಗಶಬ್ದಮೇವಚೇತ್ ||
ಲೀಯತೇ ಗಮ್ಯತೇ ಯತ್ರಯೋನಿಃ ಸರ್ವಚರಾಚರಂ ।
ತದೀಯಂ ಲಿಂಗಮಿತ್ಯುಕ್ತಂ ಲಿಂಗತತ್ವಪರಾಯಣ್ಯೈಃ ||"

ಸರ್ವ ಸಚರಾಚರವೇ ಪ್ರಸಾದರೂಪ.
ಅನಂತಕೋಟಿ ಬ್ರಹ್ಮಾಂಡಗಳಿಗೆ
ಪ್ರಸಾದವೆ ಕಾಯ ಜೀವ ಪ್ರಾಣವಾಯಿತು,
ಕಾಯ ಇಷ್ಟಲಿಂಗವಾಯಿತು,
ಜೀವ ಪ್ರಾಣಲಿಂಗವಾಯಿತು, ಭಾವವೇ ತೃಪ್ತಿಲಿಂಗವಾಯಿತು.
ಪೃಥ್ವಿ ಅಪ್ಪುಗಳೆರಡು ಕಾಯವಾಯಿತು.
ಅಗ್ನಿ ವಾಯುಗಳೆರಡು ಪ್ರಾಣಲಿಂಗವಾಯಿತು.
ಅಕಾರ ಓಂಕಾರವೇ ಭಾವವಾಯಿತು.
ಇಂತೀ ಪಂಚತತ್ವಪ್ರಸಾದವೆನಿಸಿದ ಪ್ರಣಮವು
[ಹೀಗೆ ಕಾಯ ಜೀವ ಪ್ರಾಣ ಪ್ರಸಾದವಾಯಿತ್ತು]
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೬ ||

೮೨೩

ಪ್ರಸಾದದಿಂದ ತೋರಿತ್ತು ಷಡ್ವಿಧಹಸ್ತವು.
ಪ್ರಸಾದದಿಂದ ತೋರಿತ್ತು ಷಡ್ವಿಧಚಕ್ರಂಗಳು
ಷಡ್ವಿಧಸಾದಾಖ್ಯ, ಷಡ್ವಿಧಬೀಜಾಕ್ಷರವೆ ಷಡ್ವಿಧಲಿಂಗವಾಯಿತ್ತು.
ಷಡ್ವಿಧಹಸ್ತವೆ ಷಡ್ವಿಧ ಕೈಗಳು ಪ್ರಸಾದಕಲೆ ಎನಿಸಿತ್ತು.
ಷಡ್ವಿಧಸಾದಾಖ್ಯವೆ ಷಡ್ವಿಧಮುಖವೆನಿಸಿತ್ತು.
ಷಡ್ವಿಧಹಸ್ತಮುಖವೆ ಷಡ್ವಿಧಲಿಂಗವೆನಿಸಿತ್ತು.
ಷಡ್ವಿಧದ್ರವ್ಯವೇ ಷಡ್ವಿಧಪ್ರಸಾದ.
ಷಡ್ವಿಧಪ್ರಸಾದವೆ ಷಡ್ವಿಧತೃಪ್ತಿ ಎನಿಸಿತ್ತು.
ಷಡ್ವಿಧತೃಪ್ತಿಯನರಿದಾತ
ಷಡ್ವಿಧದ್ರವ್ಯವೇ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೭ ||

೮೨೪

ಪ್ರಸಾದವ ಕೊಂಡ ಶರಣನ ಸರ್ವಾಂಗವೆಲ್ಲ ಪ್ರಸಾದ ತಾನಾಯಿತ್ತು.
ಕಾರಣ ಅಸ್ಥಿ ಸೌಮ್ಯವಾಯಿತ್ತು.
ಮಾಂಸ[ಪಿಂಡ] ಮಂತ್ರರೂಪವಾಯಿತ್ತು.
ಚರ್ಮ ಚಿದ್ರೂಪವಾಯಿತ್ತು, ನಾಡಿ ನಿರಂಜನವಾಯಿತ್ತು,
ರೋಮ ಓಂ ರೂಪವಾಯಿತ್ತು.
ಇಂತೀ ಪಂಚಭೂತಕಾಯ ಪ್ರಸಾದ[ಕಾಯ]ವಾಯಿತ್ತು.

ಮಾಂಸಪಿಂಡ ಮಂತ್ರಪಿಂಡವಾಯಿತ್ತು.
ವಾಯು ಪ್ರಾಣಲಿಂಗ ಪ್ರಾಣವಾಯಿತ್ತು.
ನರರೂಪ ಹರರೂಪವಾಯಿತ್ತು.
ಹರರೂಪ ಗುರು ಚರ ಪರಮ ಪ್ರಸಾದವಾಯಿತ್ತು.
ದೇವಭಕ್ತನ ಪ್ರಸಾದವೆ ಭಕ್ತಿ ಮುಕ್ತಿಪ್ರಸಾದ ತಾನೆ,
ನಿಮ್ಮ ಶರಣ ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೮ ||

೮೨೫

ಪ್ರಸಾದವ ಕೊಂಡ ಶರಣನ ಸರ್ವಾಂಗವೆಲ್ಲ ಪ್ರಸಾದವು.
ಪ್ರಸಾದವೆ ಕೋಟಿಲಿಂಗವೆಂದರಿವುದು.
ಪ್ರಸಾದಮೂರ್ತಿಯಾದ ಶರಣನ ರೋಮ ರೋಮಂಗಳು
ಕೋಟಿಲಿಂಗವೆಂದುಚ್ಚರಿಸುವರಲ್ಲಾ !
ಘ್ರಾಣಮುಖ ನಾಸಿಕ ಆಚಾರಲಿಂಗವಾಗಿ,
ಗಂಧದ್ರವ್ಯವ ಗ್ರಹಿಸಿ ಗಂಧವಾದ ಪ್ರಸಾದವೆ ಬಿಂದು,
ಸರ್ವಾಂಗಮಯವಾದ ಮಹೇಶ್ವರನ ಷಡುರಸವ
ಭುಂಜಿಸುವ ಜಿಹ್ವೆಯೆ ಗುರುಲಿಂಗ.
ಷಡಕ್ಷರಿಮಂತ್ರನಾದ ಪ್ರಸಾದಿ, ಅಗ್ನಿಯೇ ಚರ್ಮ ಸ್ವರ
ಸರ್ವಾಂಗಮೂರ್ತಿ ಶಿವಲಿಂಗ.
ದೃಶ್ಯಾದೃಶ್ಯ ದೃಕ್ಕು ಜಾತಿ ಜ್ಯೋತಿಸ್ವರೂಪು ತಾನಾದ ಪ್ರಸಾದಿ.
ಸ್ಥಾವರ ಜಂಗಮ ಪ್ರಣಮಸ್ವರೂಪು
ತ್ವಕ್ಕು ಸರ್ವಾಂಗ ಸ್ಪರ್ಶನ ಜಂಗಮಲಿಂಗನಾದ ಪ್ರಸಾದಿ.
ಆಕಾಶ, ಘಟಾಕಾಶ, ಮಠಾಕಾಶ, ಬಿಂದ್ವಾಕಾಶ, ಚಿದಾಕಾಶ,
ವ್ಯೋಮಾಕಾಶ ಗೋತ್ರ ಸಹಲಿಂಗನಾದ ಪ್ರಸಾದಿ.
ಜೀವಾತ್ಮ ಅಂತರಾತ್ಮ ಪರಮಾತ್ಮ
ಸರ್ವೇಂದ್ರಿಯ ತೃಪ್ತಿಯಾದ ಮಹಾಲಿಂಗನಾದ
ಪ್ರಸಾದಮೂರ್ತಿ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೯ ||

೮೨೬

ಪ್ರಸಾದವ ಕೊಂಡ ಶರಣನ ಸರ್ವಾಂಗವೆಲ್ಲ ಪ್ರಸಾದ.
ಆತ ಘ್ರಾಣಿಸಿದ್ದು ಆಚಾರಲಿಂಗಪ್ರಸಾದ.
ಆತ ರುಚಿಸಿದ್ದೆಲ್ಲ ಗುರುಲಿಂಗಪ್ರಸಾದ.

ಆತ ನೋಡಿದ್ದೆಲ್ಲ ಶಿವಲಿಂಗಪ್ರಸಾದ.
ಆತ ಸ್ಪರ್ಶನಮಾಡಿದ್ದೆಲ್ಲ ಜಂಗಮಲಿಂಗಪ್ರಸಾದ.
ಆತ ಕೇಳಿದ್ದೆಲ್ಲ ಪ್ರಸಾದಲಿಂಗಪ್ರಸಾದ.
ಆತನ ಸರ್ವೇಂದ್ರಿಯವೆಲ್ಲ ಪರಿಪೂರ್ಣವಾದದ್ದೆಲ್ಲ ಮಹಾಲಿಂಗಪ್ರಸಾದ.
ಇಂತೀ ಪ್ರಸಾದವೆಲ್ಲವ ಕೊಂಡ ಸರ್ವಾಂಗಪ್ರಸಾದಿ
ನಿಮ್ಮ ಶರಣ, ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೦ ॥

೮೨೭

ಪ್ರಸಾದ ಸೋಂಕಿದ ತನುವೆಲ್ಲ ಲಿಂಗಮಯ,
ರೋಮರೋಮವೆಲ್ಲ ಲಿಂಗ.
ಆ ಭಕ್ತಂಗೆ ಆಧಾರಸ್ಥಾನವೆ ನಿಜಸ್ಥಾನ.
ಆಧಾರಚಕ್ರದಲ್ಲಿ ನಾಲ್ಕೆಸಳಿನ ತಾವರೆ ಕಮಲದ ಮಧ್ಯದಲ್ಲಿ
ಬಾಲಾರ್ಕಕೋಟಿ ಸೂರ್ಯಪ್ರಕಾಶನುಳ್ಳುದು ಆಚಾರಲಿಂಗ.
ಆ ಭಕ್ತನ ಗುಹ್ಯದಲ್ಲಿ ಗುರುಲಿಂಗ, ಆ ಭಕ್ತನ ಮಣಿಪೂರಕದಲ್ಲಿ ಶಿವಲಿಂಗ.
ಆ ಭಕ್ತನ ಅನಾಹತದಲ್ಲಿ ಜಂಗಮಲಿಂಗವಿಹುದು.
ಆ ಭಕ್ತನ ವಿಶುದ್ಧಿಚಕ್ರದಲ್ಲಿ ಪ್ರಸಾದಲಿಂಗವಿಹುದು.
ಆ ಭಕ್ತನ ಭ್ರೂಮಧ್ಯದಲ್ಲಿ ಮಹಾಲಿಂಗವಿಹುದು.
ಆ ಭಕ್ತನ ಆಧಾರದಲ್ಲಿ ನಕಾರ ಪ್ರಣಮದ ಜನನವು.
ಆಣವಮಲ, ಮಾಯಾಮಲ, ಕಾರ್ಮಿಕಮಲ ಅನಂತಕೋಟಿಗಳಿಗೆ
ನಕಾರವೇ ಮೂಲ.
ಇನ್ನೂರು ಹದಿನಾರು ಭುವನಂಗಳು ಆ ಭಕ್ತನ ಗುದದಲ್ಲಿ ಬಿದ್ದಿದ್ದವಪ್ಪು
ಹದಿನೆಂಟುಧಾನ್ಯಕ್ಕೆ ಶಾಕಪತ್ರ
ಕಂದಮೂಲ ಫಲಾದಿಗಳಿಗೆ ಭೂಮಿ ಎಂದುದಾಗಿ.
ಉಂಬುವದು ಅಗ್ನಿ, ಉಡುವದು ಪೃಥ್ವಿ ಎಂದುದಾಗಿ.
ಈ ಜಗವೆಲ್ಲ ಮಲವನೆ ಭುಂಜಿಸಿ ಮಲವನೆ ವಿಸರ್ಜನೆಯಂ ಮಾಡುವರು.
ಇದು ಕಾರಣ ಇದ ಕೊಂಬುವದು ಪ್ರಸಾದವಲ್ಲ.
ಕೊಟ್ಟಾತ ಗುರುವಲ್ಲ, ಕೊಂಡಾತ ಸದ್ಭಕ್ತನಲ್ಲ.
ಈ ಪ್ರಸಾದವ ಕೊಳ್ಳಬಲ್ಲರು ನಮ್ಮ ಶರಣರು.
ಪ್ರಸಾದವೆಂತೆಂದಡೆ : ಅವರ್ಣ, ಆದಿ, ಅವ್ಯಕ್ತ.
ಆ ನಾಮವು, ಭರ್ಗೋದೇವಾದಿ
ಪಂಚಮೂರ್ತಿಗಳಿಗೆ ಆಶ್ರಯವಾಯಿತು.
ಕರಣಚತುಷ್ಟಯಂಗಳಿಗೆ ನಿಲುಕದು.

ಪ್ರಾಣಾದಿ ವಾಯುಗಳಿಗೆ,
ಶ್ರೋತ್ರಾದಿ ಜ್ಞಾನೇಂದ್ರಿಯಂಗಳಿಗೆ ಅಗಮ್ಯ.
ವಾಕ್ಕಾದಿ ಕರ್ಮೇಂದ್ರಿಯಗಳಿಗೆ ತೋರದು.
ನಿಜಾನಂದ ನಿತ್ಯಪರಿಪೂರ್ಣ ಪ್ರಸಾದವು
ಚೆನ್ನಯ್ಯಪ್ರಿಯ ನಿರ್ಮಾಯ ಪ್ರಭುವೆ,
ನಿಮ್ಮ ಶರಣರಿಗಲ್ಲದೆ ಉಳಿದ ಜಡಜೀವಿಗಳಿಗೆ ಅಸಾಧ್ಯ. ॥ ೧೧ ॥

ಲ೨ಲ

ಪ್ರಸಾದವೆಂದು ನುಡಿವಿರಿ, ಪ್ರಸಾದದ ಭೇದವ ಬಲ್ಲವರಾರು,
ಈ ಪ್ರಸಾದದ ಭೇದವ ತಿಳಿದವರಾರು.
ಪ್ರಸಾದವೆಂಬ ಮೂರಕ್ಷರದ ಭೇದವ ಬಲ್ಲವರಾರು.
ಆಕಾರ ನಿರಾಕಾರ ಸಾಕಾರ ಈ ಮೂರು ಪ್ರಕಾರವಾಯಿತ್ತು.
ಈ 'ಪ್ರ'ಕಾರದ ಭೇದವ ಬಲ್ಲವರಾರು.
ಸಕಲ ನಿಃಕಲ ನಿರಂಜನನಾದ ಭೇದವ ಬಲ್ಲರೆ
'ಸಾ'ಕಾರದ ಭೇದವ ಬಲ್ಲವರೆ, 'ದ'ಕಾರದ ಭೇದವನರಿದವರೆ,
ಆದಿ ಆಧಾರ ಅನಾದಿ ಈ ತ್ರಿವಿಧವ ಬಲ್ಲವರು.
ಇಂತೀ ಪ್ರಸಾದವೆಂಬ ಸದ್ಭಾವದ ನಿರ್ಣಯವನರಿಯದೆ
ಪ್ರಸಾದವ ಕೊಟ್ಟಾತನು ಕೊಂಡಾತನು ಇವರಿಬ್ಬರ ಭೇದವೆಂತೆಂದರೆ :
ಹುಟ್ಟುಗುರುಡನ ಕೈಯ ತೊಟ್ಟಿಗುರುಡ ಹಿಡದಂತಾಯಿತು.
ಈ ಭೇದವೆಂತೆಂದರೆ : ಇಷ್ಟ ಪ್ರಾಣ ಭಾವ 'ಪ್ರ'ಕಾರವಾಯಿತು.
'ಸಾ'ಕಾರವೆ ಜಂಗಮಲಿಂಗ ಪ್ರಸಾದಲಿಂಗ ಸೋಂಕಿ ನವಪೀಠಗಳಾಗಿ
ನವಲಿಂಗ ಸೋಂಕಿ ನವಪೀಠ ಪ್ರಸಾದವಾಯಿತು.
ನವಪ್ರಸಾದ ನವಪ್ರಣಮವೆ ನವಬೀಜವಾಯಿತು.
ನವಹಸ್ತಗಳ ನೆಲೆಗೊಳಿಸಿ ಶಿವಲಿಂಗಧಾರಣಮಂ ಮಾಡಿ
ನವಲಿಂಗಮುಖವನರಿದು ನವನೈವೇದ್ಯವಂ ಮಾಡಿ
ನವಮುಖಕ್ಕಿತ್ತ ನವಪ್ರಸಾದಿಯಾದ ಶರಣನು
ನವಚಕ್ರಗಳೆಲ್ಲ ನವಜಪ ಪ್ರಸಾದವೆ ತಾನೆ ಆಗಿ
ನವರತ್ನಪ್ರಭೆ ಏಕರವಿರಶ್ಮಿಯಾದಂತೆ,
ನವಕೋಟಿ ಸೋಮಸೂರ್ಯರ ಪ್ರಭೆ ಒಂದಾಗಿ
ದಿವ್ಯಜ್ಯೋತಿರ್ಲಿಂಗ ತಾನಾದ ಶರಣನು.
ಅರಿವೆ ಶಿವಲಿಂಗ, ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ತಾನೆ ಆಯಿತು.
ನವ ಅಸ್ಥಿಗಳಡಗಿ ನವಲಿಂಗ ಒಂದೆ ಅಂಗವಾಗಿ ಬೆಳಗುತಿಹ ಶರಣಂಗೆ

ಇಹಲೋಕವೇನು, ಪರಾತ್ಪರಲೋಕವೇನು ?
ಸಗುಣವೇನು ನಿರ್ಗುಣವೇನು ?
ನಿರಂಜನವೇನು, ನಿಷ್ಕಳವೇನು, ನಿರ್ಮಾಯವೇನು ?
ಆತಂಗೆ ಭಕ್ಷವಿಲ್ಲ ಅಭ್ಯಕ್ಷವಿಲ್ಲ ಅರ್ಪಿತವಿಲ್ಲ ಅನರ್ಪಿತವಿಲ್ಲ.
ಆತ ರುಚಿಸಿದ್ದೆಲ್ಲ ಪ್ರಸಾದ, ಆತ ಸೋಂಕಿದ್ದೇ ಪಾವನ.
ಆತ ಮೆಟ್ಟಿದ ಭೂಮಿಯೆಲ್ಲ ಪುಣ್ಯಕ್ಷೇತ್ರಂಗಳಾದವು.
ಆತ ಜಲಮಲವ ಬಿಟ್ಟು ಬಂದ, ಸಂಚಮನವ ಮಾಡಿದ
ಸ್ಥಾನಾದಿಗಳೆಲ್ಲ ಪುಣ್ಯತೀರ್ಥಂಗಳಾದವು.
ಇಂತೀ ನಿಮ್ಮ ಶರಣನ ಸರ್ವಾಂಗವೆಲ್ಲ ಶಿವಮಂದಿರವು
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೨ ॥

೬೨೯

ಪಂಚತತ್ತ್ವದೊಳು ಪಂಚಕೃತಿಯೊಳು ಪಂಚತತ್ತ್ವ.
ಶರಣನ ಪಂಚೇಂದ್ರಿಯ ಶಿವನ ಪಂಚಮುಖವೆಂದರಿಯದೆ
ಹಂಚು ಹಿಡಿದು ಹಲ್ಲು ತೆರೆವಂತೆ ಕಲ್ಲು ಹಿಡಿದು.
ತನ್ನ ಕಂಡೆನೆಂಬ ಖಿಲ್ಲದೇಹಿಗಳಿಗೆ
ಶಿವಲಿಂಗ ಮುನ್ನವೆ ಇಲ್ಲವೆಂದ
ನಿಮ್ಮ ಶರಣ ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೩ ॥

೬೩೦

ಪಂಚಮೂರ್ತಿಯ ತತ್ವಶರಣ
ತಾನೇ ಇಷ್ಟಲಿಂಗವೆಂದರಿಯದೆ,
ಸೃಷ್ಟಿಯೆ ಇಷ್ಟಲಿಂಗವೆಂದರಿದು
ತಮ್ಮ ಹುಸಿ ಮಾಡುವ ಭ್ರಷ್ಟರಿಗೆ ಶಿವಲಿಂಗ ಇಲ್ಲವೆಂದ
ನಿಮ್ಮ ಶರಣ ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೪ ॥

೬೩೧

ಇಷ್ಟ, ಪ್ರಾಣ, ಭಾವ ತ್ರಿವಿಧಾತ್ಮ ಕಾರಣ
ತಾನೆ ಶಿವಲಿಂಗವೆಂದರಿಯದೆ
ಲಿಂಗ ಬೇರೆ ಶರಣ ಬೇರೆಯೆಂಬ ಭಂಗಿತರಿಗೆ
ಶಿವಲಿಂಗ ಮುನ್ನವಿಲ್ಲವೆಂದ.
'ಏಕಮೂರ್ತಿಸ್ತ್ರಯೋಭಾಗಾ ತ್ರಿವಿಧಂ ಲಿಂಗಮುಚ್ಯತೇ
ಕಾರ್ಯಭಿನ್ನ ಮೃಡಭಾವಂ' ಎಂದುದು ನಿಮ್ಮ ಶ್ರುತಿ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೫ ॥

೮೩೨

ಇಷ್ಟಲಿಂಗ ಇನ್ನೂರಹದಿನಾರು ಮುಖದಿಂದ ತೃಪ್ತಿಗೊಳ್ಳುತಿಹುದು.
ಪ್ರಾಣಲಿಂಗ ನೂರಾಹನ್ನೊಂದು ಮುಖವಾಗಿ ತೃಪ್ತಿಗೊಳ್ಳುತಿಹುದು.
ಭಾವಲಿಂಗ ಷಡ್ವಿಧಮುಖದಿಂದ ತೃಪ್ತಿಗೊಳ್ಳುತಿಹುದು.
ಈ ತ್ರಿವಿಧಲಿಂಗವು ಒಂದಾಗಿ, ವಿಶ್ವತೋಮುಖವಾಗಿ
ಶರಣನ ಅಂಗದಲ್ಲಿ ಶಿವಲಿಂಗವೆ ತೃಪ್ತಿಗೊಳ್ಳುತಿಹುದು.
ಈ ಭೇದವ ತಿಳಿಯದೆ ಭಿನ್ನವಿಟ್ಟು ಕೊಟ್ಟು ಕೊಂಬೆನೆಂಬ ಕುನ್ನಿಗಳಿಗೆ
ಶಿವಲಿಂಗ ಮುನ್ನವಿಲ್ಲವೆಂದ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೬ ॥

೮೩೩

ವೃಕ್ಷಕ್ಕೆ ಭೂಮಿ ಮುಖವೋ ? ಭೂಮಿಗೆ ವೃಕ್ಷ ಮುಖವೋ ?
ಶರಣಂಗೆ ಅಂಗ ಮುಖವೋ? ಲಿಂಗಕ್ಕೆ ಶರಣ ಮುಖವೋ ?
ಈ ಭೇದವ ಬಲ್ಲರೆ ಹೇಳಿರಿ.
ವೃಕ್ಷಕ್ಕೆ ನೀರು ಎರೆದರೆ ಭೂಮಿಯಲ್ಲಿ ಫಲವಹುದು,
ಭೂಮಿಯಲ್ಲಿ ನೀರೆರೆದರೆ ವೃಕ್ಷಕ್ಕೆ ಫಲವಹುದು.
ಶರಣನ ಮುಖದಲ್ಲಿ ಲಿಂಗ ತೃಪ್ತಿಯಹುದು,
ಲಿಂಗದ ಮುಖದಲ್ಲಿ ಶರಣನ ತೃಪ್ತಿಯಹುದು.
ಆ ಲಿಂಗಮುಖ ಶರಣನೆಂದು ಅರಿಯದ ಭಂಗಿತರಿಗೆ
ಶಿವಲಿಂಗ ಮುನ್ನವಿಲ್ಲವೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೭ ॥

೮೩೪

ಇಷ್ಟಲಿಂಗಕ್ಕೆ ತೋರಿ ಮೃಷ್ಟಾನ್ನ ಹೊಡದೆನೆಂಬುದೇನು
ಆ ಇಷ್ಟಲಿಂಗ ಮುಖದಲ್ಲಿ ನಿಮಗೆ ತೃಪ್ತಿ ಆಗಲಿಲ್ಲವೆ.
ಆ ಶರಣನ ಮುಖದಲ್ಲಿ ಲಿಂಗತೃಪ್ತಿ ಅಹುದಲ್ಲದೆ
ಅಂಗಮುಖದಲ್ಲಿ ಶರಣತೃಪ್ತಿ ಆಗಲರಿಯದು.
"ವೃಕ್ಷಸ್ಯ ವದನಂ ಭೂಮಿಃ ಲಿಂಗಸ್ಯ ವದನಂ ಜಂಗಮಂ"
ಎಂಬ ಶ್ರುತಿ ನೋಡಿ ಮರುಳಾದ ಭಂಗಿತರಿಗೆ
ಶಿವಲಿಂಗ ಮುನ್ನವಿಲ್ಲವೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೮ ॥

೮೩೫

ಅಂಗವೆ ಶರಣನಾದ ನಿಮಿತ್ಯದಲ್ಲಿ
ಶರಣನ ಸರ್ವೇಂದ್ರಿಯಂಗಳೆಲ್ಲ
ಲಿಂಗಮುಖ ಗುಟಕಿಯ[ಲ್ಲದೆ ಅನ್ಯ ಗುಟಕಿಯ ಕೊಂಡರೆ]
ಅಲ್ಲಿಯ ಹೀನ ಹುಯ್ಯಲಂಗಳ ಗುಟಕಿಯ ತೆಗೆದುಕೊಂಡಂತೆ,
ಶರಣನ ಅಂಗದಲ್ಲಿ ಸೋಂಕಿದ ಸುಖಂಗಳೆಲ್ಲ ಲಿಂಗಮಯವೆಂದರಿಯದೆ
ಲಿಂಗವ ಬೇರೆ ಇಟ್ಟು ಕೊಟ್ಟುಕೊಂಬೆನೆಂಬ ಕುನ್ನಿಗಳಿಗೆ
ಶಿವಲಿಂಗ ಮುನ್ನವಿಲ್ಲವೆಂದ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೧೯ ॥

೮೩೬

ಶಿವಲಿಂಗ ಸಂಸಾರಸಂಪನ್ನ ಶರಣನು
ಲಿಂಗಮುಖದಲ್ಲಿ ಭೋಗಿಸುತ್ತಿಹನು ಮುಟ್ಟಿದ ಸುಖಂಗಳನೆಲ್ಲ.
ಲಿಂಗ ಬೇರೆ ಶರಣ ಬೇರೆ ಎಂದು ನುಡಿವ
ಅಸಂಸ್ಕಾರಿ ಭೂತದೇಹಿಗಳು
ಭಕ್ತ ಜಂಗಮರೆಂದು ಮುಖವ ನೋಡಿದರೆ
ಹಂದಿಯ ಜನ್ಮ ತಪ್ಪದೆಂದು ಶ್ರುತಿ ಸಾರುತಿದೆ :
"ಪ್ರೇತಲಿಂಗ ಸಂಸ್ಕಾರಿಣಾಂ ಭೂತಪ್ರಾಣಿ ನಜಾಯತೇ ।
ಪ್ರಭುತೇ ಮುಖಂ ದೃಷ್ಟ್ವಾ ಕೋಟಿಜನ್ಮನಿ ಸೂಕರಃ॥"
ಇಂತು ಪ್ರೇತಲಿಂಗ ಸವಳು ಭುಂಜಿಸುವುದಲ್ಲದೆ
ದ್ವಯವಲ್ಲದೆ ಪ್ರಸಾದವಲ್ಲವೆಂದ
ನಿಮ್ಮ ಶರಣ ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೦ ॥

೮೩೭

ಮಲದೇಹಿಗಳ ಅಂಗದ ಮೇಲೆ ಲಿಂಗವಿದ್ದರೇನು ಅದು ಲಿಂಗವಲ್ಲ.
ಅದೇನು ಕಾರಣವೆಂದರೆ, ಅವನು ಪ್ರಸಾದದೇಹಿ ಸಂಸ್ಕಾರಿದೇಹಿಯಲ್ಲ.
ಅವನ ಸೋಂಕಿದ ಲಿಂಗವು ಕೆರೆಯ ಕಟ್ಟೆಯ ಶಿಲೆಯಂತಾಯಿತು.
ಅವನು ಲಿಂಗಾಂಗಿ ಲಿಂಗಪ್ರಾಣಿಯಾಗದೆ
ಅವನು ಮುಟ್ಟಿದ ಭಾಂಡ ಭಾಜನಂಗಳೆಲ್ಲ ಹೊರಮನೆ
ಊರ ಅಗ್ಗವಣಿ ಎಂದೆನಿಸುವವು.
ಅವನು ಮಲದೇಹಿ.
ಅವನಂಗದಲ್ಲಿ ಗುರುವಿಲ್ಲ ಜಂಗಮವಿಲ್ಲ,

ಪಾದೋದಕವಿಲ್ಲ ಪ್ರಸಾದವಿಲ್ಲ.
ಅವನು ಅಶುದ್ಧ ಮಲದೇಹಿ.
ಅವನ ಪೂಜಿಸಿದವಂಗೆ ರೌರವ ನರಕ ತಪ್ಪದೆಂದಾತ
ನಿಮ್ಮ ಶರಣ ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೨೧ ||

೮೩೮

'ನರದೇಹಿನಾಂ ನಾಸ್ತಿ ಲಿಂಗಂ'
ಅವನು ಅಶುದ್ಧ ದೇಹಿ ಸೂತಕದೇಹಿ,
'ಲಿಂಗಶುದ್ಧ ಜ್ಯೋತಿಸ್ತಥಾ ಶುದ್ಧ ಸಂಶುದ್ಧ ಲಿಂಗಾಂಗೀ'
ಲಿಂಗಪ್ರಾಣಿ ಪ್ರಸಾದದೇಹಿಯಾದ ಶರಣನು
ಮುಟ್ಟಿದುದೆಲ್ಲ ಪವಿತ್ರ.
ಆತನು ನುಡಿದುದೆಲ್ಲ ಶಿವಮಂತ್ರ.
ಆತ ನಿಂತ ಭುವನಂಗಳೆಲ್ಲ ಕೈಲಾಸ.
ಆತ ಸೋಂಕಿದ ಶಿಲೆಗಳೆಲ್ಲ ಪರಂಜ್ಯೋತಿಲಿಂಗಗಳಾದವು.
ಆತ ಸಂಚಾರ ಮಾಡಿದ ಜಲಗಳೆಲ್ಲ ಪುಣ್ಯತೀರ್ಥಂಗಳಾದವು.
ಆತನ ಪೂಜಿಸಿ ಪಾದೋದಕ ಪ್ರಸಾದವ ಪಡಕೊಂಡ ಭಕ್ತರೆಲ್ಲ
ರುದ್ರಗಣ ಅಮರಗಣಂಗಳಾದರು.
ಇಂತು ಶಿವಲಿಂಗಸಂಬಂಧಿಯಾದ ಈ ಜಂಗಮಕ್ಕೆ
ನಮೋ ನಮೋ ಎನುತಿದ್ದನಯ್ಯ, ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೨೨ ||

೮೩೯

ಶಿವಲಿಂಗಾಂಗಿ ಲಿಂಗಪ್ರೇಮಿ ನಡೆಲಿಂಗ ನುಡಿಲಿಂಗ
ಮುಖಲಿಂಗ ಭಾವಲಿಂಗ ಸರ್ವಾಂಗಲಿಂಗ ಚೈತನ್ಯಾತ್ಮಕ
ಶರಣನರಿಯದೆ ವೇಷಧಾರಿಗಳು ನುಡಿವರು.
ಲಿಂಗ ಬೇರೆ ಅಂಗ ಬೇರೆ ಇಂತೆಂದು ನುಡಿವ ಚಾರ್ವಾಕರ
ಅಂಗದ ಮೇಲೆ ಹೊಂದಿದ ಲಿಂಗವೆಲ್ಲ ಶಿಲೆಯು.
ಅವನು ನುಡಿಯುವ ಮಾತು ಹೆಂಡ ಕುಡಿವವರ ಬೊಗಳಾಟ.
ಅವರು ಕೊಂಬುವುದೆಲ್ಲ ಅಶುದ್ಧವಲ್ಲದೆ ಪ್ರಸಾದವಲ್ಲ.
ಅವರು ವಿಭೂತಿ ರುದ್ರಾಕ್ಷಿ ಲಿಂಗವ ಧರಿಸಿದರೇನು
ಯಮದರ್ಶನ ಚೋರದರ್ಶನ.
ಲಿಂಗಾಂಗಿ ಲಿಂಗಪ್ರಾಣಿಗಳ ನಿಂದಿಸುವ ವೇಷಧಾರಿಗಳು

ಜಂಗಮವೆಂದು ಪೂಜಿಸುವ ಭಕ್ತಂಗೆ ಎಕ್ಕಲಜನ್ಮ ಬಿಡದೆಂದ
ನಿಮ್ಮ ಶರಣ, ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೩ ॥

ಅ೪೦

ಗುರು ಹಸ್ತಮಸ್ತಕಸಂಯೋಗ ಲಿಂಗಶರಣನಾದ ಬಳಿಕ
ಮಲದೇಹಿ ಮಾಂಸಪಿಂಡ ವಾಯುಪ್ರಾಣಿಯು ಹೋಗಿ
ಪ್ರಸಾದಕಾಯ ಮಂತ್ರಪಿಂಡ ಲಿಂಗಪ್ರಾಣಿಯಾಯಿತು.
ಇಂತೀ ಸರ್ವಾಂಗಪ್ರಸಾದಮಂತ್ರಮೂರ್ತಿಯಾದ ಶರಣನ
ನಿಲವನರಿಯದೆ ವೇಷಧಾರಿಗಳು ನಿಂದಿಸಿ ನುಡಿಯುತಿಹಿರಿ.
ನಿಮ್ಮ ಅಂಗದ ಮೇಲೆ ಲಿಂಗ ಸೋಂಕಲು ಲಿಂಗಾಂಗವಾದುದಿಲ್ಲವೆ ?
ನೀವು ಪ್ರಸಾದಕೊಂಡ ಕಾಯವೆಲ್ಲ ಪ್ರಸಾದಕಾಯ ಆದುದಿಲ್ಲವೆ ?
ನೀವು ಮಂತ್ರಮೂರ್ತಿ ಆದುದಿಲ್ಲವೆ ?
ಈ ತ್ರಿವಿಧ ಪೂರ್ವವ ಕಳೆದು ಪುನರ್ಜಾತನ ಮಾಡಿದಾತ
ಅವಗೆ ಗುರುವಿಲ್ಲ,
ಅವನು ಶಿಲೆಯ ಮಾರಿ ಹೊಟ್ಟೆಹೊರಕೊಂಬುವ ಭೂತದೇಹಿ.
ಅವನು ಗುರುವೆಂದು ಪೂಜಿಸುವ ವೇಷಧಾರಿ,
ಅವರಿಬ್ಬರಿಗೂ ಪಾದೋದಕ ಪ್ರಸಾದ ವಿಷವಾಗಿ
ಹೊಟ್ಟೆ ಹೊರೆದುಕೊಂಬ ಜಂಗಮ
ತುತ್ತು ಬುತ್ತಿಯನಾಯ್ದುಕೊಂಡು ತಿಂಬ ಪಿಶಾಚಿ.
ಇಂತೀ ಲಿಂಗಾಂಗಿ ಲಿಂಗಪ್ರಾಣಿಯಾದ ಶರಣರ ನಿಂದಿಸುವ ಲಾಂಛನಧಾರಿಗಳಿಗೆ
ಶಿವಲಿಂಗ ಸಂಬಂಧವಿಲ್ಲವೆಂದ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೪ ॥

ಅ೪೧

ಲಿಂಗಸೋಂಕಿ ಲಿಂಗವಾಗದಿದ್ದರೆ ಅದು ಲಿಂಗವಲ್ಲ.
ಪ್ರಸಾದಸೋಂಕಿ ಪ್ರಸಾದವಾಗದಿದ್ದರೆ ಅದು ಪ್ರಸಾದವಲ್ಲ,
ಅದು ಅಶುದ್ಧ.
ಮಂತ್ರಸೋಂಕಿ ಮಂತ್ರಮೂರ್ತಿಯಾಗದಿದ್ದರೆ ಅದು ಮಂತ್ರವಲ್ಲ,
ಅದರ ಭಾವ ಬೇರೆ.
ಈ ತ್ರಿವಿಧ ಭೇದವನರಿಯದ ವೇಷಧಾರಿಗಳು ಭಕ್ತರಲ್ಲ.
ದೇವಭಕ್ತರಾದರೇನು, ಮಲದೇಹಿ ಮಾಂಸಪಿಂಡ ಇರುವದು.
ತಮ್ಮ ದೇಹ ಕಲ್ಲುಸೋಂಕಿ ಹಸ್ತ ಸುಚಿತ್ತವಾಯಿತೆಂದು

ಪುಕಳಿಯನೊರೆಸುವ ಅರಿವೆಯಲ್ಲಿ ಮಗಿ ಹಿಡಿದು
ನೀರು ಹೊಯ್ದುಕೊಂಡು ಶುದ್ಧವಾಯಿತೆಂಬವರು,
ಅವರು ಮಲದೇಹಿ, ಅವನ ಹಸ್ತ ಶುದ್ಧವಲ್ಲ, ಅದು ಅಶುದ್ಧ.
ಆ ಕೈಯಲಿ ಲಿಂಗವ ಹಿಡಿದುದು ಲಿಂಗವಲ್ಲ, ಅದು ಪ್ರೇತಲಿಂಗ.
"ಸಂಸಾರೀ ಭೂತಃ ಪ್ರಾಣೇನ ಜಾಯತೇ ಪ್ರಾತಃಕಾಲೇ ।
ಮುಖಂ ದೃಷ್ಟ್ವಾ ಕೋಟಿ ಜನ್ಮನಿ ಸೂಕರಃ॥"
ಇಂತಪ್ಪ ತಮ್ಮ ಅಂಗದ ಅಶುದ್ಧವ ಕಳೆಯಲಾರದೆ
ಲಿಂಗಾಂಗಿ ಲಿಂಗಪ್ರಾಣಿಗಳೆಂದೆನಿಸುವ ವೇಷಧಾರಿಗಳಿಗೆ
ಹಂದಿಯ ಜನ್ಮ ತಪ್ಪದೆಂದ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೫ ॥

೮೪೨

ಲಿಂಗಾಂಗಿ ಲಿಂಗಪ್ರಾಣಿ ಲಿಂಗಾತ್ಮಕ ಲಿಂಗಚೈತನ್ಯ ಶರಣನ
ಇಂಗಿತವನರಿಯದೆ ದೂಷಿಸುವ ವೇಷಧಾರಿಗಳೆ ಕೇಳಿರೊ.
ಲಿಂಗವ ಪೂಜಿಸಿ ಲಿಂಗಾಂಗಿಗಳ ದೂಷಿಸಿದರೆ
ಆ ಲಿಂಗ ನಿಮಗೆ ಕಾಲಾಗ್ನಿರುದ್ರನು.
ನಿಮ್ಮ ನಾಲಿಗೆ ಹೆಡದಲೆಯಲ್ಲಿ ತೆಗೆದು ಭುಂಜಿಸುವನು.
ಎಚ್ಚತ್ತು ನುಡಿಯಿರಿ ದೋಷಕಾರಿಗಳೆಂದ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೬ ॥

೮೪೩

ಭವಿಮಿಶ್ರವೆಂಬಿರಿ, ಅಚ್ಚಲಿಂಗಾಂಗಿಗಳೆ ಕೇಳಿರಿ.
ಅಚ್ಚಲಿಂಗಾಂಗಿಗಳಾದರೆ ನಿಮ್ಮ ಸರ್ವೇಂದ್ರಿಯವೆಂಬ ಭವಿಯ
ಉಚ್ಛಿಷ್ಟವ ಭುಂಜಿಸಿ ತಮ್ಮೊಳಗೆ ಭವಿಯ ವಿಚಾರಿಸದ
ಕುನ್ನಿಗಳಿಗೆ ಮೆಚ್ಚ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೭ ॥

೮೪೪

ಭವಿ ಮಾಡಿದುದನುಂಡರೆ ಪಾಕ ಕಿಲ್ಬಿಷವೆಂಬಿರಿ.
ಶಿವಭಕ್ತರು ಪಾದೋದಕ ಪ್ರಸಾದವ ಕೊಂಬುವಲ್ಲಿ
ಭವಿಮಿಶ್ರವೆಂದು ವಿಚಾರಿಸಿ ಕೇಳುವಿರಿ.
ಬೆಲ್ಲ, ಸಕ್ಕರೆ, ಉಪ್ಪು, ತೈಲ, ತುಪ್ಪ, ಭವಿಪಾಕವ ಭುಂಜಿಸುವಿರಿ.
'ಯಥಾ ದೇಹಂ ತಥಾಹಂ ಚ ಲಿಂಗವಾಯತೆ'

ಭವಿಪಾಕ ಕಿಲ್ಬಿಷವೆಂದು ಕಿಲ್ಬಿಷವ ಭುಂಜಿಸಿದ ಬಳಿಕ
ಅಚ್ಚಲಿಂಗಾಗವೆಲ್ಲಿಹುದೊ ವ್ರತಗೇಡಿಗಳಿರಾ ?
ನಿಮ್ಮ ದೇವಭಕ್ತರೆಂದು ಪೂಜಿಸಿದವರಿಗೆ ಭವ ತಪ್ಪದು.
ನಮ್ಮ ಶಿವಗಣಂಗಳು ಅಚ್ಚಲಿಂಗೈಕ್ಯರು.
ಅವರು ಅನಾದಿ ಪಾದೋದಕ ಪ್ರಸಾದವ ಕೊಂಬುವರು.
ಅವರು ಅನಾದಿಲಿಂಗಾಂಗಿಗಳು.
ಅವರು ಮುಟ್ಟಿದ್ದೆಲ್ಲ ಪಾವನ
ಅವರು ನೋಡಿದ್ದೆಲ್ಲ ಪವಿತ್ರವೆಂದ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೮ ॥

೮೮೫

ಲಿಂಗಾಂಗಿ ಲಿಂಗಪ್ರಾಣಿಗಳು ಪ್ರಸಾದಕಾಯ ಮಂತ್ರಮೂರ್ತಿಗಳು.
ಅವರು ನೋಡಿದುದೆಲ್ಲ ಲಿಂಗದೃಷ್ಟಿ,
ಅವರು ಕೇಳಿದುದೆಲ್ಲ ಲಿಂಗಸ್ತೋತ್ರ.
ಅವರು ಮುಟ್ಟಿದುದೆಲ್ಲ ಲಿಂಗಹಸ್ತ,
ಅವರು ಘ್ರಾಣಿಸುವುದೆಲ್ಲ ಲಿಂಗಘ್ರಾಣ.
ಅವರು ರುಚಿಸುವುದೆಲ್ಲ ಲಿಂಗಜಿಹ್ವೆ.
ಅವರ ಸರ್ವೇಂದ್ರಿಯಮುಖದಲ್ಲಿ ಪರಿಣಮಿಸುವುದು ಲಿಂಗ ತಾನೆ.
ಇಂತು ಶರಣಗಣಂಗಳಿಗೆ ಲಿಂಗಕ್ಕೆ
ಕೊಟ್ಟು ಕೊಡಲಿಲ್ಲವೆಂಬ ಭಂಗಿತರುಗಳಿಗೆ
ಶಿವಲಿಂಗ ಮುನ್ನವಿಲ್ಲವೆಂದ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨೯ ॥

೮೮೬

ಅಂಗದ ಮೇಲೆ ಲಿಂಗವ ಧರಿಸಿದ ಬಳಿಕ ಸರ್ವಾಂಗಲಿಂಗವಾಗದಿದ್ದರೆ
ಆ ಲಿಂಗವ ಏತಕ್ಕೆ ಧರಿಸಲಿ ?
ಪ್ರಸಾದ ಕೊಂಡ ಕಾಯ ಪ್ರಸಾದವಾಗದಿದ್ದರೆ
ಆ ಪ್ರಸಾದ ಏತಕ್ಕೆ ಕೊಳ್ಳಲಿ ?
ಇದು ಕೊಟ್ಟವನ ಗುಣದಿಂದಾದುದು.
ಅದನ್ನು ವಿಚಾರಿಸದೆ ಏತಕ್ಕೆ ಲಿಂಗವ ಧರಿಸಿದಿರಿ ?
ಏತಕ್ಕೆ ಪ್ರಸಾದವ ಕೊಂಬುವಿರಿ ?

ಇದಕ್ಕೆ ಸಾಕ್ಷಿ:
'ಸರ್ವದ್ರವ್ಯವಂಚ ವೇದಯಂ ತದ್ವಾಹಾನ ವಿಖವತೆ'
ಇಂತಪ್ಪ ಶ್ರುತಿ ಹುಸಿ ಎನ್ನಿರೊ ವೇಷಧಾರಿಗಳಿರಾ.
ನಿಮಗೆ ಪಂಚಾಕ್ಷರ ಸಂಯುಕ್ತವ ಮಾಡಿದ ಗುರುವಿನ ನಡೆಯಲ್ಲಿ
ನಿಮ್ಮ ನಡೆ ಎಂತೆಂದಡೆ:
ಸಾಕ್ಷಿ:
"ನಾಮಧಾರಕ ಗುರು ನಾಮಧಾರಕಃ ಶಿಷ್ಯಃ ।
ಅಂಧ ಅಂಧಕಯುಕ್ತಾಃ ದ್ವಿವಿಧಂ ಪಾತಕಂ ಭವೇತ್ ॥"
ಎಂದುದಾಗಿ, ನಮ್ಮ ಶಿವಗಣಂಗಳ ಸುವಾಚ್ಯ ಸಾಹಿತ್ಯವೆಂದರೆ
ಉರಿಕರ್ಪುರ ಸಂಯೋಗವಾದಂತೆ, ವಾಯು ಗಂಧವನಪ್ಪಿದಂತೆ
ಶಿವಗಣಂಗಳ ಪಂಚೇಂದ್ರಿಯ ಶಿವನ ಪಂಚಮುಖವಾಗಿದ್ದಿತು.
ಪಂಚಾಚಾರವೆ ಪಂಚಬ್ರಹ್ಮ ಪರಿಪೂರ್ಣ ತಾನೆ.
ಗುರು, ಲಿಂಗ, ಜಂಗಮ, ತೀರ್ಥಪ್ರಸಾದ
ಪಂಚಬ್ರಹ್ಮಮೂರ್ತಿ ನಿಮ್ಮ ಶರಣ.
ಇಂತೀ ಶರಣನ ನಿಲವನರಿಯದೆ ನುಡಿವ ವೇಷಧಾರಿಗಳ
ಷಡುಸ್ಥಲಬ್ರಹ್ಮಜ್ಞಾನಿಗಳೆಂದರೆ
ಕೆಡೆಹಾಕಿ ಮೂಗ ಕೊಯ್ದು, ಇಟ್ಟಂಗಿಯ ತಿಕ್ಕಿ,
ಸಾಸಿವೆಯ ಪುಡಿ ತಳೆದು, ನಿಂಬಿಹಣ್ಣು ಹಿಂಡಿ,
ಕೈಯಲ್ಲಿ ಕನ್ನಡಿಯ ಕೊಟ್ಟು, ನಿಮ್ಮ ನಿಲವ ನೋಡೆಂದು
ಮೂಡಲ ಮುಂದಾಗಿ ಅಟ್ಟದೆ ಬಿಡುವನೆ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೩೦ ॥

೮೪೭

ಆತನ ಅಗಲೊಳಗೆ ಕಪ್ಪು ಬಿದ್ದಿಹುದು,
ಅನ್ಯರ ಎಡೆಯೊಳಗೆ ಕಪ್ಪು ಇದ್ದಿತು ನೋಡೆಂಬ ಅಂಧಕಗಳಿರಾ.
ತಮ್ಮ ಕಾಣದೆ ಅನ್ಯರ ಧಿಕ್ಕರಿಸಿ ನುಡಿವ ಕುನ್ನಿಗಳಿಗೆ
ಶಿವಲಿಂಗ ಮುನ್ನವೇ ಇಲ್ಲ[ವೆಂದ] ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೩೧ ॥

೮೪೮

ನಾನಾವೇಳೆಯಲ್ಲಿ ಸಹಸ್ರವೇಳೆಯಲ್ಲಿ ಬರುವದು ದುರ್ಲಾಭ.
ಬಂದ ಬಳಿಕ ಶಿವಭಕ್ತಜನ್ಮ ಸಾಧ್ಯವಾಯಿತು.
ಶಿವಭಕ್ತ ಜನ್ಮದಲ್ಲಿ ಬಂದು

ಶಿವಲಿಂಗೈಕ್ಯರ ನಿಂದೆಮಾಡಿ ಕೆಡದಿರು ಕೆಡದಿರು.
ಎಲೋ ವೇಷಧಾರಿಗಳಿರಾ, ಶಿವಭಕ್ತ ಬ್ರಹ್ಮವೆಂಬುದು,
ಶಿವನ ಸಾಕಾರವೆ ಜಂಗಮದೇವ.
ಇಂತೆಂಬ ಉಭಯಭೇದ ನಿಮಗೆ ತಿಳಿಯದು.
ವೇಷಾಧಾರಿಗಳು ನೀವು ಕೇಳಿರೋ, ಶುನಕ ಬೆಟ್ಟಕ್ಕೆ ಬೊಗಳಿದಂತೆ
ಭಕ್ತಂಗೆ ಜಾತಿಸೂತಕವುಂಟೆ ಎಂದ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೩೭ ॥

೮೪೯

ಏನೂ ಏನೂ ಇಲ್ಲದೆ ತಾನೆ ತಾನಾಗಿರ್ದ
ಭಾನುಕೋಟಿಪ್ರಭೆ ಒಂದಾದ ಪ್ರಸಾದ.
ವರ್ಣ ವಸ್ತು ನಾದ ಬಿಂದು ಕಳೆಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು
ಪಿಂಡಾಂಡ ಬ್ರಹ್ಮಾಂಡಂಗಳು ಮೊಳೆದೋರದಂದು
ಪಂಚಮೂರ್ತಿಗಳ ನಾಮವಿಲ್ಲದಂದು
ಪಂಚಪ್ರಣಮದ ಘೋಷಧ್ವನಿದೋರದಂದು
ಮಹಾಪ್ರಸಾದ ಆಕಾಶವೆ ತಾನೆಯಾದ ಚಿತ್ಪ್ರಸಾದದ ಪ್ರಕಾಶವೆ
ಅನಂತಕೋಟಿ ಸೋಮಸೂರ್ಯಪ್ರಭೆಯನೊಳಕೊಂಡಿತ್ತು.
ಸಾಕಾರವೆ ಚಿಚ್ಛಕ್ತಿ[ಗೆ] ಆದಿಯಾಗಿ ಅನಂತಕೋಟಿಶಕ್ತಿಗಳಿಗೆ
ಆಶ್ರಯಸ್ಥಾನವಾಗಿದ್ದಿತ್ತು.
ದಕಾರವೆ ದಶದಿಶಭರಿತಪೂರ್ಣಾಕಾರ ಲಿಂಗವಾಗಿ
ಸತ್ತುಚಿತ್ತಾನಂದ ನಿತ್ಯಪರಿಪೂರ್ಣನಾಮವೆಂದುದಾ ಪ್ರಸಾದ ಶಬ್ದ.
ಈ ಭೇದವನರಿದು ಕೊಡಬಲ್ಲರೆ ಗುರುಲಿಂಗಜಂಗಮವೆನಬಹುದು.
ಈ ಭೇದವನರಿದು ಕೊಳಬಲ್ಲರೆ
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆನಬಹುದು.
ಇದನರಿಯದೆ ಕೊಟ್ಟ ಜಂಗಮಕ್ಕೆ, ಕೊಂಡ ಭಕ್ತಂಗೆ
ರೌರವ ನರಕವೆಂದುದು ನೋಡಾ.
ಇದಕ್ಕೆ ಸಾಕ್ಷಿ:
"ಜ್ಞಾನಹೀನಂ ಗುರುಂ ಪ್ರಾಪ್ಯ ಶಿಷ್ಯೋ ಜ್ಞಾನವಿವರ್ಜಿತಃ ।
ಅಂಧೋಽಂಧಕರಯುಕ್ತಶ್ಚದ್ವಿವಿಧಂ ಪಾತಕಂ ಭವೇತ್ ॥"
ಎಂದುದಾಗಿ, ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವು
ಶ್ರುತಿ ಸಾಕ್ಷಿಯಾಗಿ ಛೀ ಎನ್ನದೆ ಮಾಣ್ಬನೆ ನಿಮ್ಮ ಶರಣನು ? ॥ ೩೩ ॥

೮೫೦

ಪ್ರಸಾದ ಪ್ರಸಾದವೆಂದು ಒಪ್ಪಕ್ಕೆ ಕೊಂಬ ಬೊಪ್ಪಗಳು ನೀವು ಕೇಳಿರೊ.
ಕಾಯಪ್ರಸಾದವನರಿದು, ಕರಣಪ್ರಸಾದವನರಿದು,
ಜೀವಪ್ರಸಾದವನರಿದು, ನಿಜಪ್ರಸಾದವನರಿದು ಕೊಳಬಲ್ಲರೆ ಪ್ರಸಾದಿ.
ಕೊಂಬವರ ಕಂಡು ಪ್ರಸಾದವ ಕೈಕೊಂಡರೆ
ಕಂಡವರ ಕಂಡು ಕೌದಿಯ ಹೊಲಿಯ ಹೋದರೆ ಕುಂಟೆಳೆ ಬಿದ್ದಂತೆ.
ನವಿಲು ಕುಣಿಯಿತ್ತೆಂದು ಶಾಬಕ ಕುಣಿದು ಪುಚ್ಚವ ಕಳಕೊಂಡಂತೆ.
ಸಿಂಹ ಲಂಘಣಿಸಿತ್ತೆಂದು ಸೀಳನಾಯಿ [ಲಂಘಣಿಸಿ]
ಸೊಂಟವ ಕಳಕೊಂಡಂತೆ.
ಸದ್ಭಕ್ತರ ಕಂಡು ನಾನು ಸದ್ಭಕ್ತನೆಂದು ಒಗರವ ನೀಡಿಸಿಕೊಂಡು
ಅಯ್ಯಾ, ಹಸಾದ, ಮಹಾಪ್ರಸಾದವ ಪಾಲಿಸಿರೆಂದು
ತನ್ನಾದಿ ಕ್ರಿಯಾದೀಕ್ಷೆ, ತನ್ನ ಮಧ್ಯೆ ಜ್ಞಾನದೀಕ್ಷೆ,
ತನ್ನವಸಾನ ಮಹಾಜ್ಞಾನ ದೀಕ್ಷೆಯ ತಿಳಿಯದೆ
ತನ್ನ ಪೂರ್ವಾಪರ, ತನ್ನ ಉದಯಾಸ್ತಮಾನವರಿಯದೆ,
ಅರ್ಪಿತಾವಧಾನಭಕ್ತಿಯನರಿಯದೆ,
ಗುರು ಲಿಂಗ ಜಂಗಮದ ನಿಲುಕಡೆಯನರಿಯದೆ,
ಕಾಂಚನವ ಕೊಟ್ಟು, ಕೈಯಾಂತು ಪಡಕೊಂಬ
ಭಕ್ತನ ಅಂಗವಿಕಾರವು ಮುನ್ನಿನಂತೆ.
ಆ ಭಕ್ತನ ಆಚಾರ ವಿಚಾರ ನಡೆ ನುಡಿ ದೀಕ್ಷಾತ್ರಯಂಗಳ ವಿಚಾರಿಸದೆ
ಪ್ರಸಾದವ ಕೊಟ್ಟ ಗುರುವಿನ ವಿಚಾರವು ಮುನ್ನಿನಂತೆ.
ಈ ಉಭಯತರು, ಬಟ್ಟೆಗುರುಡನ ಕೈಯ ಬಟ್ಟೆಗುರುಡ ಹಿಡಿದು
ಹಳ್ಳವ ಬಿದ್ದಂತೆ ಕಾಣಾ, ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೩೪ ॥

೮೫೧

ಪ್ರಸಾದ ಪ್ರಸಾದವೆಂದು ನುಡಿವಿರಿ;
ಎಲ್ಲರಿಗೆಲ್ಲಿಹದೊ ಪ್ರಸಾದ ?
ಈ ಪ್ರಸಾದದ ಭೇದವ ಬಲ್ಲರೆ ಚನ್ನಬಸವಣ್ಣ.
ಈ ಪ್ರಸಾದದ ಭೇದವ ಬಲ್ಲರೆ ಬಸವಣ್ಣ.
ಈ ಪ್ರಸಾದದ ಭೇದವ ಬಲ್ಲರೆ ಪ್ರಭುದೇವರು.
ಈ ಪ್ರಸಾದದ ಭೇದವ ಬಲ್ಲರೆ ಮರುಳಶಂಕರದೇವ
ಸಿದ್ಧರಾಮ ಅಜಗಣ್ಣ ಮುಕ್ತಾಂಗನೆ ಅಕ್ಕಮಹಾದೇವಿ.
ಮಿಕ್ಕಿನ ಜಡಜೀವಜಾಳುಗಳಿಗೆಲ್ಲಿಹದೊ ಪ್ರಸಾದ ?

ಗಡಿಗೆಯೊಳಗಿದ್ದಾಗ ಬೋನ, ಹರಿವಾಣಕ್ಕೆ ಬಂದಾಗ ನೈವೇದ್ಯ,
ಜಂಗಮ ಮುಟ್ಟಿ ಗ್ರಹಿಸಿದಾಗಳೆ ಪ್ರಸಾದವೆಂದು ಕೊಂಡು,
ತಮ್ಮ ಉದರಕ್ಕೆ ಹೊಂದಿದಲ್ಲಿಯೆ ದುರ್ಗಧವಾಯಿತ್ತೆಂದು,
ಜಲ ಮಲವ ಬಿಟ್ಟುಬಂದೆವು ಹೊರಗಗ್ಘಣೆಯ ತನ್ನಿಯೆಂಬ ಹೊಲೆಮಾದಿಗರ
ಮೂಗ ಕೊಯ್ದು, ಸಿಂಬೆಹುಳಿಯ ಹಿಂಡದೆ ಮಾಣ್ಬನೆ
[ನಿಮ್ಮ ಶರಣ] ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ ? || ೩೫ ||

೮೫೨

ಪ್ರಸಾದ ಪ್ರಸಾದವೆಂಬುವುದು ಎಲ್ಲರಿಗೆಲ್ಲಿಹದೊ?
ಪ್ರಸಾದವೆಂಬುವುದು ಅಚಲಾನಂದ ಅವಿನಾಶನ
ಅವಿರಳ ದ್ವಂದ್ವಾತೀತ ಬಂಧಮೋಕ್ಷಕ್ಕೆ ಅತೀತವು ನೋಡಾ.
ಓಗರ ಪ್ರಸಾದವಲ್ಲ.
ಓಗರ ಪ್ರಸಾದವೆಂದು ಕೊಟ್ಟಾತ ಗುರುವಲ್ಲ, ಕೊಂಡಾತ ಶಿಷ್ಯನಲ್ಲ.
ಓಗರ ಪ್ರಸಾದವೆಂದು ಕೊಂಡು, ಮಲಮೂತ್ರ ಮಾಡಿಬಿಡುವ
ಹೊಲೆ ಮಾದಿಗರ ಮೂಗ ಕೊಯ್ಯದೆ ಮಾಣ್ಬನೆ [ನಿಮ್ಮ ಶರಣ]
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ? || ೩೬ ||

೮೫೩

ಪ್ರಸಾದ[ವ ಕೊಂಡೆ] ಪ್ರಸಾದ[ವ ಕೊಂಡೆ]ನೆಂಬಿರಿ
ಪ್ರಸಾದ ಕೆಡುವುದೆ?
ಪ್ರಸಾದ ಒಮ್ಮೆ ಸುಗಂಧ, ಒಮ್ಮೆ ದುರ್ಗಂಧವೆ ?
ಪ್ರಸಾದವು ಶಬ್ದ ಸ್ಪರ್ಶನ ರೂಪು ರಸ ಗಂಧಕ್ಕೆ ಅತೀತವು.
ಓಗರ ಪ್ರಸಾದವೆಂದು ಕೊಂಡು
ರೋಗ ಬಂದಿತ್ತೆಂದು ವೈದ್ಯಕಾರರ ಬಳಿಗೆ ಹೋಗಿ
ವೈದ್ಯವ ಕೊಂಡು, ಮಲಬದ್ಧ ಭಾಂಡವ ತೊಳೆದು
ರೋಗವು ಹೋಯಿತ್ತೆಂದು ನಲಿನಲಿದಾಡಿ
ಭಕ್ತ ಜಂಗಮರು ತಾವೆಂದು ನುಡಿವ ಮುಚ್ಚಟ ಮುದಿನಾಯಿಗಳ
ಮೂಗ ಕೊಯ್ಯದೆ ಮಾಣ್ಬನೆ ನಿಮ್ಮ ಶರಣ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೩೭ ||

೮೫೪

ಪಾದೋದಕ ಪಾದೋದಕವೆಂದು ಒಪ್ಪವಿಟ್ಟು ನುಡಿವಿರಿ.
ಪಾದೋದಕದ ಭೇದವ ಬಲ್ಲರೆ ಹೇಳಿರಿ, ಅರಿಯದಿರ್ದರೆ ಕೇಳಿರಿ.

ಪಾದೋದಕವೆ ಪರಾತ್ಪರಾನಂದವು.
ಆ ಆನಂದವೆ ಚಿದ್ಬಿಂದು; ಆ ಚಿದ್ಬಿಂದುವೆ ಪಾದೋದಕ.
ಆ ಪಾದೋದಕವ ಶ್ರೀಗುರು ಲಿಂಗ ಜಂಗಮದ ದ್ವಿಪಾದದ
ಭ್ರೂಮಧ್ಯಸ್ಥಾನದಲ್ಲಿರ್ದುದನರಿದರ್ಚಿಸಿದ ಪರಿಣಾಮವೆ
ಚಿದಾನಂದಬಿಂದು ತೊಟ್ಟಿಟ್ಟುದೆ ಪಾದೋದಕವು.
ಈ ಭೇದವನರಿದು ಕೊಳಬಲ್ಲರೆ ಪಾದೋದಕವೆನಬಹುದು.
ಇದನರಿಯದೆ ಕೆರೆ ಬಾವಿ ಹಳ್ಳ ಹೊಳೆ ಚಿಲುಮೆ ನೀರ ತಂದು
ಮನೆಗೆ ಬಂದಲ್ಲಿ ಅಗ್ಗಣಿಯೆಂಬಿರಿ.
ಜಂಗಮದ ಪಾದದ ಮೇಲೆರದರೆ ತೀರ್ಥವೆಂಬಿರಿ.
ತೀರ್ಥವೆಂದುಕೊಂಡು ತೃಷೆಯನಡಗಿಸಿ,
ಕಡೆಯಲ್ಲಿ ಮೂತ್ರವ ಬಿಟ್ಟುಬಂದೆವು ಹೊರಗಗ್ಗಣಿಯ ತನ್ನಿ
ಎಂಬ ಜಲವು ತೀರ್ಥವಲ್ಲ.
ಕೊಟ್ಟಾತ ಗುರುವಲ್ಲ, ಕೊಂಡಾತ ಭಕ್ತನಲ್ಲ.
ಇವರಿಬ್ಬರ ನಡತೆ ಎಂತಾಯಿತ್ತೆಂದಡೆ:
ಎಕ್ಕಲ ಅಮೇಧ್ಯವ ತಿಂದು
ಒಂದರ ಮೋರಿಯ ಒಂದು ಮೂಸಿ
ನೋಡಿದಂತಾಯಿತ್ತೆಂದಾತ, ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೩೮ ||

೮೫೫

ಪಾದೋದಕವ ಕೊಂಡೆವೆಂಬ ಅಣ್ಣಗಳಿರಾ, ನೀವು ಕೇಳಿರೊ.
ಪಾದೋದಕದ ನಿಲವ ನೀವು ಬಲ್ಲರೆ ಹೇಳಿರೊ.
ಅರಿಯದಿರ್ದರೆ ಕೇಳಿರೊ.
ಅದೆಂತೆಂದಡೆ:
'ಪಾ'ಕಾರವೆ ಪರಾತ್ಪರ ನಾಮವುಳ್ಳುದು,
ಪರಬ್ರಹ್ಮವು ಪರಮಾನಂದ ಸ್ವರೂಪವು.
'ದೋ'ಕಾರವೆ ದಯದೋರಿತ್ತುವೆಂಬ
ನಾಮವನ್ನುಳ್ಳ ದುರಿತ ವಿನಾಶನವು.
'ದ'ಕಾರವೆ ದಶದಿಶಭರಿತ ಪೂರ್ಣಚಿದಾಂಬುಧಿಯ ಪರಮಜ್ಞಾನವ ತೋರಿತ್ತು.
'ಕ'ಕಾರವೆ ಕರ್ಮವಿನಾಶನವೆನಿಸಿತ್ತು.
ಇಂತಪ್ಪ ಪಾದೋದಕವ ನೀಡಿದಾತನೆ
ಗುರುಲಿಂಗಜಂಗಮವೆನಿಸಬಹುದು; ಕೊಂಡಾತ[ನೆ] ಸದ್ಭಕ್ತನೆನಬಹುದು.

ಇಂತೀ ಭೇದಾಭೇದವನರಿದು ಕೊಟ್ಟು ಕೊಂಡುದುದಕ್ಕೆ
ಕಾಯಶುದ್ಧ, ಕರಣಶುದ್ಧ, ಜೀವಶುದ್ಧ, ಭಾವಶುದ್ಧ.
ಈ ಚತುರ್ವಿಧ ಶುದ್ಧವಾಯಿತ್ತೆಂದಡೆ,
ಕಾಯ ಸುದ್ಧಪ್ರಸಾದವಾಯಿತ್ತು, ಕರಣ ಸಿದ್ಧಪ್ರಸಾದವಾಯಿತ್ತು.
ಜೀವ ಪ್ರಸಿದ್ಧಪ್ರಸಾದವಾಯಿತ್ತು, ಭಾವ ಪರಾತ್ಪರಪ್ರಸಾದವಾಯಿತ್ತು.
ಈ ಚತುರ್ವಿಧ ಶುದ್ಧವ ಮಾಡಿದಾತ ನಿಮ್ಮ ಶರಣ.
ಹೀಗಲ್ಲದೆ ಜಲವ ತೊಳೆದು ಕುಡಿವ ಮಲದೇಹಿಗಳ
ಮುಖವ ನೋಡಲಾಗದಯ್ಯಾ.
ಇದಕ್ಕೆ ಸಾಕ್ಷಿ:
"ಪಾಕಾರಂ ಪರಮಾನಂದಂ ದೋಕಾರಂ ದೋಷನಾಶನಂ ।
ದಕಾರಂ ದಹತೇ ಜನ್ಮ ಕಕಾರಂ ಕರ್ಮಭೇದನಂ ॥"
ಎಂದುದು, ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವಿನ ವಚನವು. ॥ ೩೯ ॥

೮೫೬

ಶ್ರೀ ಗುರುಲಿಂಗಜಂಗಮದ ಚರಣೋದಕವ ಭೇದಿಸಲರಿಯದೆ,
ಬರಿದೆ ಶಿವಭಕ್ತರೆಂದು ಹೊಗಳಿ,
ಮಡು ಹೊಂಡ ಹಳ್ಳ ಹೊಳೆ ಕೆರೆ ಬಾವಿ ಮೊದಲಾದ ಜಡ ಜಲವ ಕುಡಿದು,
ಶಿವಭಕ್ತಿಯ ಬೊಗಳುವ ಮಲದೇಹಿಗಳ ಮುಖವ ನೋಡಲಾಗದು.
ಪಾದೋದಕದ ನೆಲೆಕಲೆಯನರಿಯದ ಗೂಗೆಗಳ ಮುಖವ
ನೋಡಲಾಗದೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭು ನಿಷ್ಕಳಲಿಂಗವು. ॥ ೪೦ ॥

೮೫೭

ಪಾದೋದಕ ಪ್ರಸಾದ ಅರ್ಪಿತ ಅವಧಾನವ ತಿಳಿದು,
ತಾ ಕೊಂಡು, ಕೊಡಬಲ್ಲಾತನೆ ಗುರುಲಿಂಗಜಂಗಮವು.
ಅಂತಪ್ಪ ಗುರುಲಿಂಗಜಂಗಮವ ಭೇದಿಸಿ
ಕೊಳಬಲ್ಲಾತನೆ ಸದ್ಭಕ್ತಪ್ರಸಾದಿಶರಣ.
ಗುರುಲಿಂಗಜಂಗಮದ ಪಾದತೀರ್ಥವಾದ ಮೇಲೆ
ತಾ ಸವಿದು ಲಿಂಗಕ್ಕರ್ಪಿಸಿ, ಲಿಂಗ ಸವಿದು,
ತಾ ತೃಪ್ತನಾಗಿ ಆಚರಿಸುವುದೆ
ಅದೇ ಉತ್ತಮೋತ್ತಮ ಲಿಂಗಾರ್ಪಣ
ಶರಣಸಂತೃಪ್ತಿಯೆಂದಾತ ನಿಮ್ಮ ಶರಣ.
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ, ನೀವೆ ಬಲ್ಲಿರಿ. ॥ ೪೧ ॥

೮೫೮

ಇಷ್ಟಲಿಂಗವೆ ಅನಾದಿಯು, ಪ್ರಾಣಲಿಂಗವೆ ಆದಿಯು.
ಇದು ಮಾರ್ಗಕ್ರೀಯೆನಿಸುವುದು.
ಪ್ರಾಣಲಿಂಗವೆ ಅನಾದಿಯು, ಇಷ್ಟಲಿಂಗವೆ ಆದಿಯು.
ಇದು ಮೀರಿದ ಕ್ರಿಯಾಮಾರ್ಗವೆನಿಸುವುದು.
ಈ ಉಭಯದ ಭೇದವ ಸದ್ಗುರು ಮುಖದಿಂ ತಿಳಿದು,
ಆದಿ ಅನಾದಿಯೆಂಬ ಉಭಯವನುಳಿದು,
ಒಂದೇಪರಾತ್ಪರವಸ್ತುವೆಂದು ಅರಿದು,
ಸಮಭಾಜನದಿಂದ ಪ್ರಸಾದಕ್ಕೆ ಪ್ರಸಾದವನರ್ಪಿಸಿ,
ಪಾದೋದಕಕ್ಕೆ ಪಾದೋದಕವನರ್ಪಿಸಿ,
ತಾನುಭಯಮಧ್ಯದಲ್ಲಿ ಭಾವಲಿಂಗರೂಪದಿಂದ
ಪರಿಣಾಮಪಾದೋದಕ ಪ್ರಸಾದವನಪ್ಪಿ ಅಗಲದಿಪ್ಪಾತನೆ
ಮಹಾಶಿವಕಲಾಚೈತನ್ಯ ನಿಜಪ್ರಸಾದಿ ನೋಡಾ.
ಭಕ್ತ ಜಂಗಮವೆಂಬ ಉಭಯಭಾವವಳಿದು,
ದುರ್ಮಾರ್ಗ ಅನಾಚಾರ ಅಜ್ಞಾನವ ತ್ಯಜಿಸಿ,
ಶರಣಗಣಂಗಳು ಹೋದ ಮಾರ್ಗವನರಿದು,
ಉಭಯಭಾವವಳಿದು,
ಸತ್ಕ್ರಿಯಾ ಸಮ್ಯಜ್ಞಾನ ಸಮರಸಾನಂದವನರಿದು,
ಜಂಗಮದ ತೀರ್ಥಪ್ರಸಾದವ ಜಂಗಮಕ್ಕರ್ಪಿಸಿ,
ಲಿಂಗತೀರ್ಥಪ್ರಸಾದವ ಲಿಂಗಕ್ಕರ್ಪಿಸಿ,
ಉಭಯಸಂಬಂಧದಾಚರಣೆಯ ತಿಳಿದು,
ಅಂಗಲಿಂಗವೆಂಬ ಉಭಯವನಳಿದು,
ಅಂಗಲಿಂಗವಾದುದೊಂದೆ ವಸ್ತುವೆಂದರಿದು,
ಕೊಟ್ಟು ಕೊಳಬಲ್ಲಾತನೆ ಮಹಾಪ್ರಸಾದಿ ನೋಡಾ.
ಇದನರಿಯದೆ ಕೊಟ್ಟು, ಕೊಂಡು ಪಾದೋದಕ ಪ್ರಸಾದವ
ಬಹಿರಂಗಕ್ಕಿಕ್ಕಿ ಅಹಂಕರಿಸುವ ಮೂಳರಿಗೆ
ಮಹಾಪ್ರಸಾದವಿಲ್ಲ ಕಾಣಾ.
ಅವರಿಗೆ ರೌರವನರಕ ತಪ್ಪದು ನೋಡಾ.
ಅದರಿಂದ ನಿನ್ನ ನೀನರಿದು, ನಿನ್ನ ನಿಜವ ನೀ ತಿಳಿದು,
ಭೋಗಿಸೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೪೨ ॥

■■

## ಜಕ್ಕಣಯ್ಯನ ನಿರಾಳ ಮಂತ್ರಗೋಪ್ಯ

### ನಿಷ್ಕಲಲಿಂಗಸ್ಥಲ

ಅರ್ಜಿ

ಷಡ್ವಿಧ ಚಕ್ರಂಗಳಿಲ್ಲದಂದು,
ಷಡ್ವಿಧ ಮೂರ್ತಿಗಳಿಲ್ಲದಂದು,
ಷಡ್ವಿಧ ಲಿಂಗಂಗಳಿಲ್ಲದಂದು,
ಷಡ್ವಿಧ ಶಕ್ತಿಗಳಿಲ್ಲದಂದು,
ಷಡ್ವಿಧ ಭಕ್ತಿಯಿಲ್ಲದಂದು,
ಷಡ್ವಿಧ ಹಸ್ತಂಗಳಿಲ್ಲದಂದು,
ಷಡ್ವಿಧ ಕಲೆಗಳಿಲ್ಲದಂದು,
ಇವೇನೇನೂ ಇಲ್ಲದಂದು, ಅತ್ತತ್ತಲೆ.
ಅಕಾರ ಉಕಾರ ಮಕಾರಗಳಿಲ್ಲದಂದು,
ನಾದ ಬಿಂದು ಕಲೆಗಳಿಲ್ಲದಂದು,
ಗುರು ಲಿಂಗ ಜಂಗಮವಿಲ್ಲದಂದು,
ಇಷ್ಟ ಪ್ರಾಣ ಭಾವಂಗಳಿಲ್ಲದಂದು,
ಧ್ಯಾನ ಧಾರಣ ಸಮಾಧಿಗಳಿಲ್ಲದಂದು,
ನಾಮ ರೂಪ ಕ್ರಿಯೆಗಳಿಲ್ಲದಂದು,

ಇವೇನೇನೂ ಇಲ್ಲದಂದು, ಅತ್ತತ್ತಲೆ.
ಮನ ನಿರ್ಮನಂಗಳಿಲ್ಲದಂದು,
ಭಾವ ನಿರ್ಭಾವಂಗಳಿಲ್ಲದಂದು,
ಜ್ಞಾನ ಮಹಾಜ್ಞಾನಂಗಳಿಲ್ಲದಂದು,
ಶಬ್ದ ನಿಃಶಬ್ದಂಗಳಿಲ್ಲದಂದು,
ಆತ್ಮ ನಿರಾತ್ಮಂಗಳಿಲ್ಲದಂದು,
ನಾನು ನೀನಿಲ್ಲದಂದು, ಅತ್ತತ್ತಲೆ.
ಮಹಾಘನ ಅಗಮ್ಯ ಅಗೋಚರ ಅಪ್ರಮಾಣ
ನಿರಾಕುಳ ನಿರಂಜನ ನಿರ್ಭರಿತ ನಿಃಶೂನ್ಯ
ಅಪರಂಪರ ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ||೧||

೮೬೦

ಪೃಥ್ವಿ ಅಪ್ಪುಗಳಿಲ್ಲದಂದು,
ತೇಜ ವಾಯುಗಳಿಲ್ಲದಂದು,
ಆಕಾಶ ಆತ್ಮವಿಲ್ಲದಂದು,
ರವಿ ಶಶಿಗಳಿಲ್ಲದಂದು,
ಸಪ್ತೇಳುಸಾಗರವಿಲ್ಲದಂದು,
ಅಷ್ಟಕುಲಪರ್ವತಂಗಳಿಲ್ಲದಂದು,
ಇವೇನೇನೂ ಇಲ್ಲದಂದು, ಅತ್ತತ್ತಲೆ.
ನಿಶ್ಚಿಂತ ನಿರಾಕುಳ ನಿರಂಜನ ನಿರ್ಭರಿತ
ನಿಃಶೂನ್ಯ ನಿರಾಳ ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ||೨||

೮೬೧

ಅಹಂಕಾರಗಳಿಲ್ಲದಂದು,
ಹಮ್ಮು ಬಿಮ್ಮುಗಳಿಲ್ಲದಂದು,
ಸತ್ವ ರಜ ತಮಗಳಿಲ್ಲದಂದು,
ಅಂತಃಕರಣಚತುಷ್ಟಯಂಗಳಿಲ್ಲದಂದು,
ಪಂಚೇಂದ್ರಿಯಂಗಳಿಲ್ಲದಂದು,
ಅರಿಷಡ್ವರ್ಗಂಗಳಿಲ್ಲದಂದು,
ಸಪ್ತವ್ಯಸನಂಗಳಿಲ್ಲದಂದು, ಅಷ್ಟಮದಂಗಳಿಲ್ಲದಂದು,

ದಶವಾಯುಗಳಿಲ್ಲದಂದು,
ಇವೇನೇನೂ ಇಲ್ಲದಂದು, ಅತ್ತತ್ತಲೆ.
ನಿರುಪಮ ಮಹಾಘನ ಅಘಟಿತಘಟಿತ ಅಪರಂಪರ ವಿಶ್ವಂಭರಿತ
ನಿರಾಳ ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩ ||

೮೬೨

ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆಂಬ ಐದಂಗವಿಲ್ಲದಂದು,
ತಾರಕಾಕೃತಿ ದಂಡಕಾಕೃತಿ ಕುಂಡಲಾಕೃತಿ ಅರ್ಧಚಂದ್ರಾಕೃತಿ ಬಿಂದ್ವಾಕೃತಿಯೆಂಬ
ಪಂಚಕೃತಿಗಳಿಲ್ಲದಂದು,
ಮನಜ್ಞಾನ ಸುಜ್ಞಾನ ಪರಮಜ್ಞಾನ ಮಹಾಜ್ಞಾನ ಸ್ವಯಜ್ಞಾನವೆಂಬ
ಪಂಚಜ್ಞಾನವಿಲ್ಲದಂದು ಅತ್ತತ್ತಲೆ,
ನಿಃಶೂನ್ಯ ನಿರಾಮಯ ನಿರಾಳ ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪ ||

೮೬೩

ರೇಚಕ ಪೂರಕಂಗಳಿಲ್ಲದಂದು,
ನೋಟ ಬೇಟಂಗಳಿಲ್ಲದಂದು,
ಮಾಟ ಕೂಟಂಗಳಿಲ್ಲದಂದು,
ಶಬ್ದ ನಿಃಶಬ್ದಂಗಳಿಲ್ಲದಂದು,
ಭಾವ ನಿರ್ಭಾವಗಳಿಲ್ಲದಂದು,
ತತ್ವ ಪರತತ್ವಂಗಳಿಲ್ಲದಂದು,
ಇವೇನೇನೂ ಇಲ್ಲದಂದು, ಅತ್ತತ್ತಲೆ.
ಸ್ವಯಂಭೂ ಅಖಂಡತೇಜೋಮಯ
ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫ ||

೮೬೪

ಬದ್ಧಜ್ಞಾನಿಗಳು ಇಲ್ಲದಂದು,
ಶುದ್ಧಜ್ಞಾನಿಗಳು ಇಲ್ಲದಂದು,
ನಿರ್ಮಳಜ್ಞಾನಿಗಳು ಇಲ್ಲದಂದು,
ಮನಜ್ಞಾನಿಗಳು ಇಲ್ಲದಂದು,
ಸುಜ್ಞಾನಿಗಳಿಲ್ಲದಂದು,

ಪರಮಜ್ಞಾನಿಗಳಿಲ್ಲದಂದು,
ಮಹಾಜ್ಞಾನಿಗಳಿಲ್ಲದಂದು,
ಸ್ವಯಜ್ಞಾನಿಗಳಿಲ್ಲದಂದು, ಅತ್ತತ್ತಲೆ.
ನಿರಾಕುಳ ನಿರಂಜನ ನಿರ್ಭರಿತ ನಿಃಶೂನ್ಯ
ನಿರಾಮಯ ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬ ||

೮೬೫

ನಕಾರ ಮಕಾರಗಳಿಲ್ಲದಂದು,
ಶಿಕಾರ ವಕಾರಗಳಿಲ್ಲದಂದು,
ಯಕಾರ ಓಂಕಾರಗಳಿಲ್ಲದಂದು,
ಪ್ರಣವ ನಿಃಪ್ರಣವಂಗಳಿಲ್ಲದಂದು,
ಇವೇನೇನೂ ಇಲ್ಲದಂದು, ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭ ||

೮೬೬

ಲೋಕ ಲೌಕಿಕಂಗಳಿಲ್ಲದಂದು,
ಕುಲ ಛಲಂಗಳಿಲ್ಲದಂದು,
ಹಮ್ಮು ಬಿಮ್ಮುಗಳಿಲ್ಲದಂದು,
ದೇಹ ನಿರ್ದೇಹಗಳಿಲ್ಲದಂದು,
ಪ್ರಾಣ ನಿಃಪ್ರಾಣಂಗಳಿಲ್ಲದಂದು,
ಇವೇನೇನೂ ಇಲ್ಲದಂದು, ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೮ ||

೮೬೭

ಬ್ರಹ್ಮ ವಿಷ್ಣುಗಳಿಲ್ಲದಂದು,
ರುದ್ರ ಈಶ್ವರ ಇಲ್ಲದಂದು,
ಸದಾಶಿವ ಪರಶಿವ ಇಲ್ಲದಂದು,
ಚಿಲ್ಲಿಂಗ ಚಿದಾನಂದಲಿಂಗವಿಲ್ಲದಂದು,
ಚಿನ್ಮಯಲಿಂಗ ಚಿತ್ಪ್ರಕಾಶಲಿಂಗವಿಲ್ಲದಂದು,
ಇವೇನೇನೂ ಇಲ್ಲದಂದು, ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೯ ||

೮೩೮

ಮಹಾಘನ ಅಪರಂಪರ ಅಗಮ್ಯ ಅಗೋಚರ
ಅಪ್ರಮಾಣ ನಿಶ್ಚಿಂತ ನಿರಾಕುಳ ನಿರ್ಭರಿತ ನಿರಂಜನ
ನಿರಪೇಕ್ಷ ನಿರಾಮಯ ನಿಃಶೂನ್ಯ ನಿರಾಧಾರ
ನಿಷ್ಪತಿ ನಿರಾಳ ನಿಷ್ಕಲಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೦ ||

೮೩೯

ಪರಮಚಿತ್ಕಲೆಯಲ್ಲಿ ಪರಿಣಾಮವನೆಯ್ದಿದ ಮಹಾಶರಣನು,
ಅವಿರಳಸ್ವಾನುಭಾವಸಿದ್ಧಾಂತವನರಿತು,
ಅಲ್ಲಿಂದತ್ತತ್ತ ಪರಮಜ್ಞಾನ ಮಹಾಘನ ಅಗಮ್ಯ ಅಗೋಚರ ಅಪ್ರಮಾಣ
ನಿರಾಕುಳ ನಿಜಂಜನ ನಿರ್ಭರಿತ ನಿಃಶೂನ್ಯ ನಿರಪೇಕ್ಷ ನಿಷ್ಕಲಲಿಂಗ
ತಾನೇ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೧೧ ||

## ಮಹಾಮಹಿಮಲಿಂಗಸ್ಥಲ

೮೭೦

ನಾದಬಿಂದುಕಳಾತೀತಲಿಂಗವನು,
ಒಬ್ಬ ಪುರುಷನು ಉನ್ಮನಿಯ ಬಾಗಿಲ ಮುಂದೆ ನಿಂದು
ಜಂಗಮರೂಪಿನಿಂದ ಲಿಂಗಧ್ಯಾನ ಮಹಾಧ್ಯಾನಮಂ ಮಾಡಿ,
ಪಶ್ಚಿಮದಿಕ್ಕಿನಲ್ಲಿ ನಿಂದು ಚಿತ್ರಿಕನಾಗಿ ಎರಡು ಕಮಲಂಗಳ ರಚಿಸಿ,
ಅಷ್ಟಕುಳಪರ್ವತದ ಮೇಲೆ ಲಿಂಗಾರ್ಚನೆಯಂ ಮಾಡಿ,
ನವಸ್ಥಲದ ಗುಡಿಯ ಶಿಖರವಿಡಿದಿರಲು,
ಒಸರುವ ಕೆರೆಬಾವಿಗಳು ಬತ್ತಿದವು ನೋಡಾ!
ಸಪ್ತದ್ವೀಪಂಗಳ ರಚಿಸಿದ ನಿಶ್ಚಿಂತ ನಿರಾಕುಳವೆಂಬ ಸಿಂಹಾಸನದ ಮೇಲೆ
ಪರಂಜ್ಯೋತಿಯೆಂಬ ಲಿಂಗವು ತೊಳಗಿ ಬೆಳಗುತಿರ್ಪುದು ನೋಡಾ!
ಆ ಲಿಂಗದ ಬೆಳಗಿನೊಳಗೆ ಅನಂತಕೋಟಿ
ಸೋಮಸೂರ್ಯರ ಬೆಳಗು ನೋಡಾ!
ಆ ಲಿಂಗಕ್ಕೆ ಸಜ್ಜನವೆಂಬ ಮಜ್ಜನವ ನೀಡಿ,
ಅಂತರಂಗದ ಬೆಳಗಿನ ಮಹಾಚಿದ್ವಿಭೂತಿಯಂ ಧರಿಸಿ,
ನಿರ್ಮಲವೆಂಬ ಗಂಧವನೊರೆದು, ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ, ನಿರ್ದ್ವಂದ್ವವೆಂಬ ಧೂಪವ ತೋರಿ,

ಭಕ್ತನೆಂಬ ಅಡ್ಡಣಿಗೆ,ಮಹೇಶ್ವರನೆಂಬ ಹರಿವಾಣ,
ಪ್ರಸಾದಿಯೆಂಬ ನೈವೇದ್ಯ, ಪ್ರಾಣಲಿಂಗಿಯೆಂಬ ತೈಲ,
ಶರಣನೆಂಬ ಮೇಲೋಗರ, ಐಕ್ಯನೆಂಬ ಭೋಜಿಯನು
ಆ ಲಿಂಗಕ್ಕೆ ತೃಪ್ತಿಯನೆಯ್ದಿಸಿ,
ಮನಜ್ಞಾನವೆ ವೀಳ್ಯೆಯ, ಸುಜ್ಞಾನವೆ ಅಡಕಿ,
ಪರಮಜ್ಞಾನವೆ ಸುಣ್ಣ, ಮಹಾಜ್ಞಾನವೆ ತಾಂಬೂಲ,
ಅಜಾಂಡಬ್ರಹಾಂಡ್ಮವೆ ಕುಕ್ಷಿ, ಅಲ್ಲಿಂದತ್ತ ಮಹಾಲಿಂಗದ ಬೆಳಗು,
ಸ್ವಯಾನಂದದ ತಂಪು, ನಿರಂಜನದ ಸುಖ,
ಪರಿಪೂರ್ಣವೆಂಬ ಆಶ್ರಮದಲ್ಲಿ ತೊಳಗಿ ಬೆಳಗುವ ಮಹಾಮಹಿಮಂಗೆ
ಓಂ ನಮಃ ಓಂ ನಮಃ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೨ ॥

೮೭೧

ಸಪ್ತದ್ವೀಪಂಗಳ ರಚಿಸಿದ ಸಾವಿರೆಸಳಮುತ್ತಿನಮಂಟಪದೊಳಗೆ
ಒಬ್ಬ ಸತಿಯಳು ನಿಂದು ಚಿಲ್ಲಿಂಗಾರ್ಚನೆಯ ಮಾಡುತಿರ್ಪಳು ನೋಡಾ!
ಅದು ಹೇಗೆಂದಡೆ:
ಸತ್ತುಚಿತ್ತಾನಂದನಿತ್ಯಪರಿಪೂರ್ಣವೆಂಬ ಐದಂಗವನಂಗೀಕರಿಸಿಕೊಂಡು,
ಪರವಶದಲ್ಲಿ ನಿಂದು,
ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ,
ಅರ್ಧಚಂದ್ರಾಕೃತಿ, ಬಿಂದ್ವಾಕೃತಿಯೆಂಬ ಪಂಚಕೃತಿಗಳನಂಗೀಕರಿಸಿಕೊಂಡು,
ನಿರಂಜನದೇಶಕೆ ಹೋಗಿ,
ಮನಜ್ಞಾನ ಸುಜ್ಞಾನ ಪರಮಜ್ಞಾನ ಮಹಾಜ್ಞಾನ
ಸ್ವಯಜ್ಞಾನವೆಂಬ ಪಂಚಜ್ಞಾನವನ್ನಂಗೀಕರಿಸಿಕೊಂಡು,
ಪರಿಪೂರ್ಣವೆಂಬ ಆಶ್ರಮದಲ್ಲಿ ತೊಳಗಿ ಬೆಳಗುವ ಮಹಾಮಹಿಮಂಗೆ
ಓಂ ನಮಃ ಓಂ ನಮಃ ಎನುತಿರ್ದೆನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩ ॥

೮೭೨

ಆದಿ ಅನಾದಿಗಳಿಲ್ಲದಂದು,
ಸುರಾಳ ನಿರಾಳಗಳಿಲ್ಲದಂದು,
ಶೂನ್ಯ ನಿಃಶೂನ್ಯಗಳಿಲ್ಲದಂದು,
ನಾದ ಬಿಂದು ಕಲೆಗಳಿಲ್ಲದಂದು,

ನಾಮರೂಪಕ್ರಿಯೆಗಳಿಲ್ಲದಂದು,
ಇವೇನೇನೂ ಇಲ್ಲದಂದು, ಅತ್ತತ್ತಲೆ.
ಅಪರಂಪರ ನಿಷ್ಕಲಲಿಂಗ ತಾನೇ ನೋಡಾ!
ಆ ಲಿಂಗದ ಚಿದ್ವಿಲಾಸದಿಂದ ಉದಯವಾದ ಜಂಗಮಕ್ಕೆ
ಆದಿ ಅನಾದಿಯೆ ಹಾವುಗೆ, ಶುದ್ಧಸಿದ್ಧವೆ ಪಾದದ ಜಂಗು,
ಪ್ರಸಿದ್ಧವೆ ಗಮನ, ಮನೋಹರವೆ ಕಟಿ, ಸದಾಸನ್ನಹಿತವೆ ಕೌಪ,
ನಿಶ್ಚಿಂತವೆ ಯೋಗವಟ್ಟಿಗೆ, ನಿರಾಕುಳವೆ ಜೋಳಿಗೆ,
ನಿರ್ಭರಿತವೆ ದಂಡಕೋಲು, ಅಖಿಳಕೋಟಿ ಬ್ರಹ್ಮಾಂಡವೆ ಬಟ್ಟಲು,
ಪರಮಶಾಂತಿಯೆ ವಿಭೂತಿ, ನಿರಂಜನವೇ ರುದ್ರಾಕ್ಷಿ,
ಸುರಾಳ ನಿರಾಳವೆ ಕರ್ಣಕುಂಡಲ, ನಿಃಶೂನ್ಯವೆ ಕರಪಾತ್ರೆ, ನಿರಪೇಕ್ಷವೇ ಭಿಕ್ಷ,
ನಿರವಯವೆಂಬ ಮಠದಲ್ಲಿ ನಟಿಸಿಪ್ಪ ಜಂಗಮಕೆ
ಓಂ ನಮಃ ಓಂ ನಮಃ ಓಂ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪ ॥

೮೭೩

ಪರಮಾನಂದಪ್ರಭೆಯಲ್ಲಿ ನಿರ್ಮಲವಾದ ಶರಣನು,
ನಿತ್ಯನಿರಂಜನದೇಶಕೆ ಹೋಗಿ ನಿರ್ವಿಕಲ್ಪ ನಿತ್ಯನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫ ॥

೮೭೪

ದೇಶದ ಮುಂದೆ ನಿರ್ದೇಶವ ಕಂಡೆನಯ್ಯ.
ಆ ನಿರ್ದೇಶನದ ಮುಂದೆ ಒಬ್ಬ ಮರುಳ ನಿಂದು,
ಸತ್ತುಚಿತ್ತಾನಂದನಿತ್ಯಪರಿಪೂರ್ಣವೆಂಬ ಐದಂಗವನಂಗೀಕರಿಸಿಕೊಂಡು,
ಪರಿಪೂರ್ಣವೆಂಬ ಆಶ್ರಮಕ್ಕೆ ಹೋಗಿ,
ತಾನು ತಾನಾಗಿಪ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೬ ॥

೮೭೫

ಮಂಡಲವನಳಿದು ನಿರ್ಮಂಡಲವಾದ ಶರಣನು,
ಅಖಂಡತೇಜೋಮಯಲಿಂಗದಲ್ಲಿ ಕೂಡಿ,
ನಿಶ್ಚಿಂತ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭ ॥

೮೭೬

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಶಿವರೆಂಬ
ಷಡ್ವಿಧಮೂರ್ತಿಗಳನು ಮಹಾಜ್ಞಾನದಿಂದ ತಿಳಿದು,
ನಿರಪೇಕ್ಷಲಿಂಗದಲ್ಲಿ ಕೂಡಿ ನಿಃಸಂಗಿ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೮ ||

೮೭೭

ಸತ್ಯಜ್ಞಾನದಿಂದ ನಿರ್ಮಲವಾದ ಮಹಾಶರಣನು,
ನಿತ್ಯನಿಜದಾರಂಭಕೆ ಹೋಗಿ, ನಿಷ್ಕಲಪರಶಿವತತ್ವದಲ್ಲಿ ಕೂಡಿ
ಪರಾಪರಂ ನಾಸ್ತಿಯಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೯ ||

೮೭೮

ಅಂಬರದ ಮನೆಯೊಳಗೆ ಸಾವಿರೆಸಳಮಂಟಪವ ಕಂಡೆನಯ್ಯ!
ಆ ಮಂಟಪದೊಳಗೆ ಒಬ್ಬ ಸತಿಯಳು ನಿಂದು,
ಐವರ ಕೂಡಿಕೊಂಡು, ನಿರಂಜನದೇಶಕೆ ಹೋಗಿ
ನಿರ್ವಿಕಲ್ಪ ನಿತ್ಯನಿರಾಳವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ ! || ೨೦ ||

೮೭೯

ಸದಾಸನ್ನಹಿತವಾದ ಶರಣನು ನಿತ್ಯನಿಜದಾರಂಭಕೆ ಹೋಗಿ
ಸಕಲಕರ್ಮಂಗಳಿಗೆ ವಿರಹಿತವಾಗಿಪ್ಪನಯ್ಯಾ.
ಸಕಲದೋಷಂಗಳಿಗೆ ವಿರಹಿತನಾಗಿಪ್ಪನಯ್ಯಾ.
ಸಕಲಪ್ರಪಂಚಗಳಿಗೆ ವಿರಹಿತನಾಗಿಪ್ಪನಯ್ಯಾ.
ಸಕಲವಾಸನೆಗಳಿಗೆ ವಿರಹಿತನಾಗಿಪ್ಪನಯ್ಯಾ.
ಸಕಲಭ್ರಮೆಯಂಗಳಿಗೆ ವಿರಹಿತನಾಗಿಪ್ಪನಯ್ಯಾ.
ಸಕಲನಿಷ್ಕಲದಲ್ಲಿ ಎಯ್ದಿದ ಸದಾಸನ್ನಹಿತವಾದ ಶರಣನ
ಅಂತರಂಗವ ಪೊಕ್ಕು ನಾನು ಬದುಕಿದೆನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. || ೨೧ ||

೮೮೦

ಚಿದ್ರೂಪ ಚಿದಾನಂದ ನಿರಾಮಯ
ನಿಶ್ಚಿಂತ ನಿರಾಕುಳ ನಿರ್ಭರಿತವಾದ ಶರಣನು,

ನಿತ್ಯನಿರಾಳದಲ್ಲಿ ನಿಂದು,
ನನ್ನನೂ ಅರಿಯದೆ, ನಿನ್ನನೂ ಅರಿಯದೆ,
ತಾನು ತಾನೆಂಬುದನರಿಯದೆ
ಅತ್ತತ್ತ ನಿರಾಮಯನೆನಿಸಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨ ॥

೮೮೧

ಬ್ರಹ್ಮರಂಧ್ರದಲ್ಲಿಪ್ಪ ಮಹಾಘನಲಿಂಗವನು
ಸಹಜಸಮ್ಯಕ್‌ಜ್ಞಾನದಿಂದ ತಿಳಿದು,
ನಿರಪೇಕ್ಷಲಿಂಗದೊಳು ಕೂಡ್ರಿಸಿ,
ನಿಸ್ಸಂಗ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩ ॥

೮೮೨

ತನುಮನದ ಕೊನೆಯ ಮೇಲೆ ಅಘಟಿತಲಿಂಗವಿಪ್ಪುದು ನೋಡಾ!
ಆ ಲಿಂಗದ ಕಿರಣದೊಳಗೆ ಅನಂತಕೋಟಿ
ಸೋಮ ಸೂರ್ಯರ ಬೆಳಗು ನೋಡಾ!
ಆ ಬೆಳಗ ನೋಡ ಹೋಗದಮುನ್ನ
ಅದು ಎನ್ನ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪ ॥

೮೮೩

ಆರು ಮೂರ್ತಿಗಳ ಮೇಲೆ ಮೂರು ದೇವರ ಕಂಡೆನಯ್ಯ!
ಆ ಮೂರು ದೇವರ ಸಂಗದಿಂದ ನಿರಂಜನಗಣೇಶ್ವರನ ಕಂಡೆನಯ್ಯ!
ಆ ನಿರಂಜನಗಣೇಶ್ವರನ ಸಂಗದಿಂದ ಮಹಾನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥೨೫ ॥

೮೮೪

ನಿತ್ಯನಿರಾಳದಲ್ಲಿ ಪರಿಪೂರ್ಣವನ್ನೈದಿದ ಮಹಾಶರಣಂಗೆ
ಇಹಲೋಕವೆಂದಡೇನಯ್ಯ? ಪರಲೋಕವೆಂದಡೇನಯ್ಯಾ?
ಇಹಪರಗಳಿಂದತ್ತತ್ತ ಅಪರಂಪರ ಮಹಾಘನ ಚಿತ್ಪ್ರಕಾಶಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೬ ॥

೮೮೫

ಚಿತ್ಪ್ರಕಾಶಲಿಂಗದಲ್ಲಿ ಚಿದಾನಂದವಾದ ಶರಣನು
ಅನಂತಕೋಟಿ ಬ್ರಹ್ಮರ, ಅನಂತ ಕೋಟಿ ವಿಷ್ಣುಗಳ,
ಅನಂತಕೋಟಿ ರುದ್ರರ ಗರ್ಭೀಕರಿಸಿಕೊಂಡು
ನಿಶ್ಚಿಂತ ನಿರಾಕುಳವೆಂಬ ಸಿಂಹಾಸನದಲ್ಲಿ ನಿಂದು
ಪರಕೆ ಪರವನೈದಿದನಯ್ಯಾ, ಝೇಂಕಾರ ನಿಜಲಿಂಗಪ್ರಭುವೆ. ॥ ೨೭ ॥

೮೮೬

ಪರತತ್ವದಲ್ಲಿ ಬೆರಸಿಪ್ಪ ಭೇದವನು ಸಹಜ ಸಮ್ಯಕ್‌ಜ್ಞಾನದಿಂದ ತಿಳಿದು,
ನಿರಂಜನದೇಶಕೆ ಹೋಗಿ, ನಿರಪೇಕ್ಷಲಿಂಗದಲ್ಲಿ ಕೂಡಿ
ನಿಃಸಂಗ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮ ॥

೮೮೭

ಪರಮಾನಂದಪ್ರಭೆಯಲ್ಲಿ ಅಖಂಡವಾದ ಶರಣನು,
ಸಕಲ ಬ್ರಹ್ಮಾಂಡವನು, ಸಕಲಮಾಯವನು ಗರ್ಭೀಕರಿಸಿಕೊಂಡು
ತಾನು ತಾನಾಗಿಪ್ಪನಯ್ಯ, ಝೇಂಕಾರ ನಿಜಲಿಂಗಪ್ರಭುವೆ. ॥ ೨೯ ॥

೮೮೮

ಭಾವನಿಬ್ಬೆರಗಿನೊಳು ಐಕ್ಯವಾದ ಮಹಾಜ್ಞಾನಿಗಳ ಸಂಗದಿಂದ
ವಾಙ್ಮನಕ್ಕೆ ಅಗೋಚರನಾದಂಥ ಮಹಾಲಿಂಗದಲ್ಲಿ
ಪರಿಪೂರ್ಣವಾದ ಭೇದವ ನೀವೇ ಬಲ್ಲಿರಿ ಅಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೦ ॥

೮೮೯

ಕಿಚ್ಚಿನ ಮನೆಯೊಳಗೆ ಒಬ್ಬ ಮಚ್ಚಗಾರ ಕುಳಿತು,
ಇಚ್ಚೆ ಇಚ್ಚೆಯಲ್ಲಿ ಹರಿದಾಡುವರನೆಲ್ಲ ಕೆಡಿಸಿ,
ಸುಟ್ಟು ಭಸ್ಮವ ಮಾಡಿ, ನಿಶ್ಚಿಂತನಿರಾಳದಲ್ಲಿ ನಿಂದು,
ಬಚ್ಚಬರಿಯ ಬಯಲಿಂಗೆ ಬಯಲಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧ ॥

೮೯೦

ಸಪ್ತದ್ವೀಪಂಗಳಲ್ಲಿ ಸಪ್ತ ಋುಷಿಗಳ ಕಂಡೆನಯ್ಯಾ!
ಆ ಸಪ್ತ ಋುಷಿಗಳನು ಒಂದು ಇರುವೆ ನುಂಗಿ,

ಬರಿಯ ಬಯಲಿಂಗೆ ಹೋಗಿ, ಬರಿದಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩.೨ ||

೬೯೧

ಬರಿಯಬಯಲಲ್ಲಿ ಬರಿದಾದ ಸತಿಯಳ ಕಂಡೆನಯ್ಯಾ!
ಆ ಸತಿಯಳ ಸಂಗದಿಂದ ನಾನು ನೀನೆಂಬುದ ಮರೆದು,
ತಾನು ತಾನಾದ ಭೇದವ ತಾನೇ ಬಲ್ಲನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. || ೩.೩ ||

೬೯೨

ತಾನು ತಾನಾದ ಭೇದವ ಮಹಾಜ್ಞಾನದಿಂದ ತಿಳಿದು,
ನಿರಂಜನಲಿಂಗದಲ್ಲಿ ಕೂಡಿ ನಿರ್ವಿಕಲ್ಪ ನಿತ್ಯನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩.೪ ||

೬೯೩

ನಿರಂಜನಲಿಂಗದಲ್ಲಿ ನಿರಪೇಕ್ಷವಾದ ಶರಣನು,
ಅನಂತಕೋಟಿ ಸೋಮಸೂರ್ಯರ ಬೆಳಗನೊಳಕೊಂಡು
ವಿಶ್ವಂಭರಿತನಾದನಯ್ಯಾ ಝೇಂಕಾರ ನಿಜಲಿಂಗಪ್ರಭುವೆ. || ೩.೫ ||

೬೯೪

ಚಿತ್ಪ್ರಕಾಶವಾದ ಲಿಂಗದಲ್ಲಿ ಚಿನ್ಮಯವಾದ ಶರಣನು
ಅನಂತಕೋಟಿಬ್ರಹ್ಮಾಂಡಗಳ ಗರ್ಭೀಕರಿಸಿಕೊಂಡು
ತಾನುತಾನಾಗಿರ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩.೬ ||

೬೯೫

ವಿಮಲಜ್ಞಾನದಿಂದ ಮಹಾಮಹಿಮನಾಗಿ ಪರಕೆ ಪರವನಾಚರಿಸಿ,
ನಿಶ್ಚಿಂತ ನಿರಾಕುಳ ನಿರ್ಭರಿತನಾದನಯ್ಯಾ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೩.೭ ||

## ನಿರಂಜನಲಿಂಗಸ್ಥಲ

೬೯೬

ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗದಲ್ಲಿ ಪರಿಪೂರ್ಣವಾದ ಶರಣನು,
ಮನೋತೀತ ಅಗೋಚರ ಅಪ್ರಮಾಣ ನಿರ್ನಾಮ ನಿರ್ಗುಣ

ನಿರಾಮಯ ನಿತ್ಯ ನಿರಂಜನಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೮ ||

೮೯೭

ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯರೆಂಬ
ಷಡ್ವಿಧಮೂರ್ತಿಗಳಿಗೂ ಷಡ್ವಿಧಲಿಂಗವ ಕಂಡೆನಯ್ಯ
ಅದು ಹೇಗೆಂದಡೆ:
ಭಕ್ತಂಗೆ ಆಚಾರಲಿಂಗ, ಮಹೇಶ್ವರಂಗೆ ಗುರುಲಿಂಗ,
ಪ್ರಸಾದಿಗೆ ಶಿವಲಿಂಗ, ಪ್ರಾಣಲಿಂಗಿಗೆ ಜಂಗಮಲಿಂಗ,
ಶರಣಂಗೆ ಪ್ರಸಾದಲಿಂಗ, ಐಕ್ಯಂಗೆ ಮಹಾಲಿಂಗ.
ಈ ಷಡ್ವಿಧಲಿಂಗಕೂ ಷಡ್ವಿಧಶಕ್ತಿಯ ಕಂಡೆನಯ್ಯ
ಅದು ಹೇಗೆಂದಡೆ:
ಆಚಾರಲಿಂಗಕ್ಕೆ ಕ್ರಿಯಾಶಕ್ತಿ, ಗುರುಲಿಂಗಕ್ಕೆ ಜ್ಞಾನಶಕ್ತಿ,
ಶಿವಲಿಂಗಕ್ಕೆ ಇಚ್ಛಾಶಕ್ತಿ, ಜಂಗಮಲಿಂಗಕ್ಕೆ ಆದಿಶಕ್ತಿ,
ಪ್ರಸಾದಲಿಂಗಕ್ಕೆ ಪರಾಶಕ್ತಿ, ಮಹಾಲಿಂಗಕ್ಕೆ ಚಿಚ್ಛಕ್ತಿ.
ಈ ಷಡ್ವಿಧಶಕ್ತಿಯರಿಗೂ ಷಡ್ವಿಧಭಕ್ತಿಯ ಕಂಡೆನಯ್ಯ.
ಅದು ಹೇಗೆಂದಡೆ:
ಕ್ರಿಯಾಶಕ್ತಿಗೆ ಸದ್ಭಕ್ತಿ, ಜ್ಞಾನಶಕ್ತಿಗೆ ನೈಷ್ಠಿಕಭಕ್ತಿ,
ಇಚ್ಛಾಶಕ್ತಿಗೆ ಸಾವಧಾನ ಭಕ್ತಿ, ಆದಿಶಕ್ತಿಗೆ ಅನುಭಾವಭಕ್ತಿ,
ಪರಾಶಕ್ತಿಗೆ ಸಮರತಿಭಕ್ತಿ, ಚಿತ್‌ಶಕ್ತಿಗೆ ಸಮರಸಭಕ್ತಿ.
ಈ ಷಡ್ವಿಧ ಭಕ್ತಿಗೆ ಷಡ್ವಿಧಹಸ್ತವ ಕಂಡೆನಯ್ಯ.
ಅದು ಹೇಗೆಂದಡೆ:
ಸದ್ಭಕ್ತಿಗೆ ಸುಚಿತ್ತಹಸ್ತ, ನೈಷ್ಠಿಕಭಕ್ತಿಗೆ ಸುಬುದ್ಧಿಹಸ್ತ,
ಸಾವಧಾನಭಕ್ತಿಗೆ ನಿರಹಂಕಾರಹಸ್ತ, ಅನುಭಾವ ಭಕ್ತಿಗೆ ಸುಮನಹಸ್ತ,
ಸಮರತಿಭಕ್ತಿಗೆ ಸುಜ್ಞಾನಹಸ್ತ, ಸಮರಸಭಕ್ತಿಗೆ ನಿರ್ಭಾವಹಸ್ತ.
ಈ ಷಡ್ವಿಧ ಹಸ್ತಂಗಳಿಗೂ ಷಡ್ವಿಧಕಲೆಗಳ ಕಂಡೆನಯ್ಯ.
ಅದು ಹೇಗೆಂದಡೆ:
ಸುಚಿತ್ತಹಸ್ತಕ್ಕೆ ನಿವೃತ್ತಿಕಲೆ, ಸುಬುದ್ಧಿ ಹಸ್ತಕ್ಕೆ ಪ್ರತಿಷ್ಠಾಕಲೆ,
ನಿರಹಂಕಾರಹಸ್ತಕ್ಕೆ ವಿದ್ಯಾಕಲೆ, ಸುಮನಹಸ್ತಕ್ಕೆ ಶಾಂತಿಕಲೆ,
ಸುಜ್ಞಾನಹಸ್ತಕ್ಕೆ ಶಾಂತ್ಯತೀತಕಲೆ,
ನಿರ್ಭಾವಹಸ್ತಕ್ಕೆ ಶಾಂತ್ಯತೀತೋತ್ತರಕಲೆ,
ಈ ಷಡ್ವಿಧಕಲೆಗಳಿಗೂ ಷಡ್ವಿಧ[ಜ್ಞಾನ]ಸಂಬಂಧವ ಕಂಡೆನಯ್ಯ.

ಅದು ಹೇಗೆಂದಡೆ:
ನಿವೃತ್ತಿಕಲೆಗೆ ಶುದ್ಧಜ್ಞಾನವೇ ಸಂಬಂಧ,
ಪ್ರತಿಷ್ಠಾಕಲೆಗೆ ಬದ್ಧಜ್ಞಾನವೇ ಸಂಬಂಧ,
ವಿದ್ಯಾಕಲೆಗೆ ನಿರ್ಮಲಜ್ಞಾನವೇ ಸಂಬಂಧ,
ಶಾಂತಿಕಲೆಗೆ ಮನಜ್ಞಾನವೇ ಸಂಬಂಧ,
ಶಾಂತ್ಯತೀತಕಲೆಗೆ ಸುಜ್ಞಾನವೇ ಸಂಬಂಧ,
ಶಾಂತ್ಯತೀತೋತ್ತರಕಲೆಗೆ ಪರಮಜ್ಞಾನವೇ ಸಂಬಂಧ.
ಈ ಷಡ್ವಿಧಸಂಬಂಧಗಳಿಂದತ್ತ ಮಹಾಘನ
ಅಗಮ್ಯ ಅಗೋಚರ ಅಪ್ರಮಾಣ
ನಿರಾಕುಳ ನಿರಂಜನಲಿಂಗ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೯ ||

೫೯೮

ಪರಮಾನಂದದ ಪ್ರಭೆಯಲ್ಲಿ ನಿರ್ಮಲವಾದ ಶರಣನ ಸಂಗದಿಂದ
ಅವಿರಳಸ್ವಾನುಭವಸಿದ್ಧಾಂತವನರಿತು,
ಪರಕೆಪರವಾದ ಲಿಂಗವನಾಚರಿಸಿ,
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೦ ||

೫೯೯

ಮಹಾಜ್ಞಾನಿಗಳ ಸಂಗದಿಂದ ವಾಸನಾಧರ್ಮಂಗಳನಳಿದು,
ನಿರ್ವಾಸನಾಧರ್ಮಿಯಾಗಿ,
ಪರಂಜ್ಯೋತಿಯೆಂಬ ಲಿಂಗವ ನೋಡಿ
ಪರಿಣಾಮಿತನಾಗಿರ್ದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೪೧ ||

೬೦೦

ನಿಟಿಲತಟದಲ್ಲಿ ಮಠವ ಮಾಡಿಕೊಂಡು,
ಘಟವ ಸಟೆಮಾಡಿ, ದಿಟವ ಪಿಡಿದು ನಟಿಸಿ
ನಿರಂಜನಲಿಂಗದಲ್ಲಿ ಘಟೋತ್ತರವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೨ ||

೬೦೧

ಬಟ್ಟಬಯಲಲಿ ಘಟಿತವಾದ ಲಿಂಗವನು
ತನ್ನ ಜ್ಞಾನನೇತ್ರದಿಂದ ತಿಳಿದು,

ಅಪರಂಪರ ಮಹಾಮಹಿಮನಾದ ಭೇದವನು
ನಿಮ್ಮ ನಿರಂಜನಗಣೇಶ್ವರನೇ ಬಲ್ಲ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೩ ||

೯೦೨

ತುಟ್ಟತುದಿಯಲೊಂದು ಬಟ್ಟಬಯಲಾದ ಹಣ್ಣ
ಮುಟ್ಟಿ ನೋಡುವವರ ನಾನಾರನೂ ಕಾಣೆನಯ್ಯ.
ವೇದ ಶಾಸ್ತ್ರ ಪುರಾಣದಲ್ಲೂ ಕಂಡ ಕಾಣಿಕೆಯಿಲ್ಲ,
ಅದು ಶ್ರುತಜ್ಞಾನಸಮ್ಮತ.
ಹೇಗೆಂದರೆ: ಗುರು ನಿರೂಪಣದಿಂದ ಕಂಡದುದೆ ಕಾಣಿಕೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೪ ||

೯೦೩

ನಾದಬಿಂದುಕಳಾತೀತವನು ಗರ್ಭೀಕರಿಸಿಕೊಂಡು ಇರಲ್ಪಟ್ಟಂಥಾ
ನಿಷ್ಕಲಲಿಂಗದಲ್ಲಿ ಪರಿಪೂರ್ಣವಾದ ಭಕ್ತನ ತೋರಿಸಯ್ಯ.
ಪರಿಪೂರ್ಣವಾದ ಮಹೇಶ್ವರನ ತೋರಿಸಯ್ಯ.
ಪರಿಪೂರ್ಣವಾದ ಪ್ರಸಾದಿಯ ತೋರಿಸಯ್ಯ.
ಪರಿಪೂರ್ಣವಾದ ಪ್ರಾಣಲಿಂಗಿಯ ತೋರಿಸಯ್ಯ.
ಪರಿಪೂರ್ಣವಾದ ಶರಣನ ತೋರಿಸಯ್ಯ.
ಪರಿಪೂರ್ಣವಾದ ಐಕ್ಯನ ತೋರಿಸಯ್ಯ.
ಪರಿಪೂರ್ಣವಾದ ಮಹಾಜ್ಞಾನಿಯ ತೋರಿಸಯ್ಯ.
ನಿಮ್ಮ ನೀವೇ ತೋರಿಸಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೪೫ ||

೯೦೪

ಆಟವ ಮೀರಿದ, ನೀರಾಟವನಾಡಿದ,
ಘಾಟಿಸಿದ ಲಿಂಗಾಂಗಸಮರಸವ,
ಘಟತರವಾದ ಶರಣನು ಘಟೋತ್ಕರವಾದುದ ನಾನೇನೆಂಬೆನಯ್ಯ.
ಝೇಂಕಾರ ನಿಜಲಿಂಗಪ್ರಭುವೆ. || ೪೬ ||

೯೦೫

ಲಕ್ಷವ ನೋಡಿದರೇನಯ್ಯ? ಲಕ್ಷವ ಹೇಳಿದರೇನಯ್ಯ?
ಲಕ್ಷವ ಕೇಳಿದರೇನಯ್ಯ? ಲಕ್ಷವ ಮಾಡಿದರೇನಯ್ಯ?
ಲಕ್ಷ ನಿರ್ಲಕ್ಷ ತಾನಾದ ಮೇಲೆ ಸಾಕ್ಷಾತ ವಸ್ತುಮಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭ ||

೯೦೬

ವೇದವ ನೋಡುವಣ್ಣಗಳ ವಾದಿಸಿತ್ತು ಮಾಯೆ.
ಶಾಸ್ತ್ರವ ನೋಡುವಣ್ಣಗಳ ಗತಿಗೆಡಿಸಿತ್ತು ಮಾಯೆ.
ಆಗಮ ನೋಡುವಣ್ಣಗಳ ಮರುಳಮಾಡಿತ್ತು ಮಾಯೆ.
ಪುರಾಣವ ನೋಡುವಣ್ಣಗಳ ಭ್ರಮಿತರ ಮಾಡಿತ್ತು ಮಾಯೆ.
ಜ್ಯೋತಿಷ್ಯವ ನೋಡುವಣ್ಣಗಳ ಆಶ್ಚರ್ಯವ ಮಾಡಿತ್ತು ಮಾಯೆ.
ಹರಹರಾ ಶಿವಶಿವಾ ಮಾಯೆ ಇದ್ದೆಡೆಯ ನೋಡಾ!
ಬ್ರಹ್ಮ ವಿಷ್ಣು ರುದ್ರಾದಿಗಳು ದೇವ ದಾನವ ಮಾನವರು
ಗಂಗೆವಾಲುಕರು ಭೃಂಗಿಪ್ರಿಯರು ಪಂಚಮುಖರು ಚತುರ್ಮುಖರು
ಏಕಾದಶರುದ್ರರು
ಎಂಬತ್ತೆಂಟುಕೋಟಿ ಋಷೀಶ್ವರರು ನವಕೋಟಿಬ್ರಹ್ಮರು
ಮಾಯಾಬಲೆಗೆ ಸಿಲ್ಕಿದರು ನೋಡಾ।
ಹರಹರಾ ಶಿವಶಿವಾ ಇದು ಕಾರಣ ನಿಮ್ಮ ಪ್ರಮಥರು
ಆ ಮಾಯೆವಿಡಿದು ತಿಂದು ತೇಗಿದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೮ ॥

೯೦೭

ಆಕಾಶದ ಮೇಲೆ ಏಕಾಂತ ಸೂಳೆಯ ಕಂಡೆನಯ್ಯ!
ಆ ಸೂಳೆಯ ಬಸುರಲಿ ಪಿಂಡಬ್ರಹ್ಮಾಂಡಗಳಿಪ್ಪವು ನೋಡಾ!
ಆ ಪಿಂಡಬ್ರಹ್ಮಾಂಡಗಳೊಳಗೆ ಒಂದು ಹಂಸನಿರ್ಪುದ ಕಂಡೆನಯ್ಯ!
ಆ ಹಂಸನು ಸಕಲ ಬಲೆಯಂಗಳ ಹರಿದು
ನಿಶ್ಚಿಂತ ನಿರಾಕುಳವೆಂಬ ಸಿಂಹಾಸನದಲ್ಲಿ ಇರುವುದು.
ಹಂಸನ ಕಾಣಬಲ್ಲಾತನೆ ನಿರ್ಮುಕ್ತಗಣೇಶ್ವರ
ಝೇಂಕಾರ ನಿಜಲಿಂಗಪ್ರಭುವೆ. ॥ ೪೯ ॥

೯೦೮

ಆದಿಯಲ್ಲಿ ಉದಯವಾದ ದೇವನು,
ಮೂರಾರು ದೇಶವ ನೋಡಿ,
ಆರು ದೇಶದಲ್ಲಿ ಅಂಗವ ಸಂಬಂಧಿಸಿ,
ಮೂರು ದೇಶದಲ್ಲಿ ಲಿಂಗವ ಸಂಬಂಧಿಸಿ,
ಅಂಗಲಿಂಗಸಂಬಂಧವ ಗರ್ಭೀಕರಿಸಿಕೊಂಡು
ಪರವಶದಲ್ಲಿ ನಿಂದು, ಪರಕೆಪರವನ್ನೈದ ಮಹಾಬ್ರಹ್ಮವೆನಿಸಿದನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೦ ॥

೯೦೯

ಆರು ಕಂಬದ ಶಿವಾಲಯದ ಮೇಲೆ
ಮೂರು ಮಂಟಪವ ಕಂಡೆನಯ್ಯ!
ಆ ಮೂರು ಮಂಟಪದ ತುದಿಯಲ್ಲಿ
ಪರಂಜ್ಯೋತಿಯೆಂಬ ಲಿಂಗವು ತೊಳಗಿ ಬೆಳಗುತಿರ್ಪುದು ನೋಡಾ!
ಆ ಲಿಂಗವ ನೋಡ ಹೋಗದ ಮುನ್ನ
ಅದು ಎನ್ನ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ! ॥ ೫೧ ॥

೯೧೦

ದೇಶದ ಮೇಲೆ ಒಂದು ಪರಿಪರಿಯ ಬಣ್ಣದ ಪಕ್ಷಿಯ ಕಂಡೆನಯ್ಯ.
ಆ ಪಕ್ಷಿ ಬ್ರಹ್ಮ ವಿಷ್ಣು ರುದ್ರಾದಿಗಳ ನುಂಗಿತ್ತು ನೋಡಾ!
ಇದು ಕಾರಣ, ನಿಮ್ಮ ಶಿವಶರಣರು
ಆ ಮಾಯೆಯ ಹಿಡಿದು ತಿಂದು ತೇಗಿದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೨ ॥

೯೧೧

ಊರೊಳಗೊಬ್ಬ ನಾರಿಯ ಕಂಡೆನಯ್ಯ!
ಆ ನಾರಿಯ ಬಸುರಲಿ ಐವರು ಮಕ್ಕಳು ಹುಟ್ಟಿ,
ತಮ್ಮ ನಿಜವ ತಾವೇ ತಿಳಿದು,
ಪರಂಜ್ಯೋತಿಯೆಂಬ ಲಿಂಗಾರ್ಚನೆಯ ಮಾಡಿ,
ನಿಷ್ಕ್ರಿಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೩ ॥

೯೧೨

ಪ್ರಥಮಕಾಲದಲ್ಲಿ ನಿರಂಜನಗಣೇಶ್ವರನ ಸಂಗದಿಂದ
ಒಬ್ಬ ಸತಿಯಳು ಹುಟ್ಟಿದಳು ನೋಡಾ!
ಆ ಸತಿಯ ಗರ್ಭದೊಳಗೆ ಒಂಬತ್ತು ದೇಶವಿರ್ಪವು ನೋಡಾ!
ಆ ದೇಶವ ನೋಡಿ, ಸಾವಿರೆಸಳಮಂಟಪವ ಪೊಕ್ಕು
ಆ ನಿರಂಜನಗಣೇಶ್ವರನ ಪೂಜಿಸಬಲ್ಲ ಶರಣರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪ ॥

೯೧೩

ಪರಮಾನಂದಸುಖದಲ್ಲಿ ಪರಿಣಾಮವನೆಯ್ದಿದ
ಮಹಾಜ್ಞಾನಿಗಳ ಸಂಗದಿಂದ
ನಿಶ್ಚಿಂದ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫ ॥

೯೧೪

ಲಿಂಗಸೌಖ್ಯದಲ್ಲಿ ಪರಿಪೂರ್ಣವಾದ ಶರಣನ ಅಂತರಂಗದಲ್ಲಿ
ಕಾಮಮೋಹಾದಿಗಳುಂಟೇನಯ್ಯ?
ಭ್ರಾಂತಿಸೂತಕ ಉಂಟೇನಯ್ಯ?
ಹಮ್ಮು ಬಿಮ್ಮುಗಳುಂಟೇನಯ್ಯ ?
ತಾಮಸ ತಮಂಧಗಳುಂಟೇನಯ್ಯ ?
ಇಂತಿವಕ್ಕೆ ಸಿಲ್ಕದೆ ನಿತ್ಯನಿರಾಳಲಿಂಗದಲ್ಲಿ
ಸುಖಿಯಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೬ ॥

೯೧೫

ಲೋಕ ಲೌಕಿಕದ ರಂಜನೆಗಳಿಲ್ಲದ
ನಿರಂಜನಲಿಂಗದಲ್ಲಿ ಸನ್ಮತನಾಗಿ ಇರಬಲ್ಲ ಮಹಾತ್ಮಂಗೆ,
ಇಹಲೋಕವೆಂದಡೇನಯ್ಯ?
ಪರಲೋಕವೆಂದಡೇನಯ್ಯ?
ಅಲ್ಲಿದ್ದಂಥ ಅಪರಂಪರ ಮಹಾಮಹಿಮ
ನಿತ್ಯ ನಿರಾಕುಳ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೭ ॥

೯೧೬

ಅಮಲಬ್ರಹ್ಮದಲ್ಲಿ ಸಕಲ ಬ್ರಹ್ಮಾಂಡಂಗಳು ಅಡಗಿಪ್ಪವಯ್ಯ.
ಆ ಸಕಲ ಬ್ರಹ್ಮಾಂಡಕೆ ಒಂದೇ ಲಿಂಗ ನೋಡಾ!
ಆ ಲಿಂಗವನು ಮಹಾಜ್ಞಾನದಿಂದ ತಿಳಿದು
ಪರಿಣಾಮಿಸಬಲ್ಲ ಹಿರಿಯರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೫೮ ॥

೯೧೭

ಪಿಂಡ ಬ್ರಹ್ಮಾಂಡಕೆ ನಿವಾಸವಾದ ಅಪರಂಪರಲಿಂಗದಲ್ಲಿ
ಮಹಾಸುಖಿಯಾಗಿರ್ದೆನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೯ ॥

೯೧೮

ಪರಶಿವತತ್ವದಲ್ಲಿ ಪರಿಪೂರ್ಣವಾದ ಮಹಾಶರಣನು,
ಮನೋತೀತ ವಾಚಾತೀತ ಭಾವಾತೀತ
ಅಗೋಚರ ಅಪ್ರಮಾಣ ನಿರ್ಲೇಪ ನಿರಂಜನ
ನಿರ್ಭರಿತ ನಿಃಶೂನ್ಯ ನಿರಾಮಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೦ ॥

೯೧೯

ಶಿವಾನುಭಾವಿಗಳ ಸಂಗದಿಂದ ಮಹಾಸುಖಿಯಾಗಿರ್ದೆನಯ್ಯ.
ಶಿವಶರಣರ ಸಂಗದಿಂದ ನಿರ್ಲೇಪಕನಾಗಿರ್ದೆನಯ್ಯ.
ಲಿಂಗೈಕ್ಯರ ಸಂಗದಿಂದ ನಿರಾಳನಾಗಿರ್ದೆನಯ್ಯ.
ನಿಮ್ಮ ಸಂಗದಿಂದ ನಾನೇ ನೀನಾಗಿ ಇದ್ದೆನಯ್ಯ, ನೀನೇ ನಾನಾಗಿದ್ದೆಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧ ॥

೯೨೦

ಪಂಚತತ್ವದ ಮೇಲೆ ನಿತ್ಯಪರತತ್ವವ ಕಂಡು ನಿರ್ಲೇಪಕನಾದ ಶರಣನು
ಕಾಲನ ಬಾಧೆಗಳ ನೀಗಿ, ಸೀಮೆಯ ದಾಂಟಿ,
ನಿಸ್ಸೀಮನಾಗಿರ್ದು, ಕೇವಲ ಸ್ವಯಂಜ್ಯೋತಿಯಲ್ಲಿ ಕೂಡಿ
ತಾನು ತಾನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨ ॥

೯೨೧

ಅಖಿಳಕೋಟಿ ಬ್ರಹ್ಮಾಂಡಗಳಲ್ಲಿ ಪರಾತ್ಪರೈಕ್ಯವಾದ ಲಿಂಗವು
ತಾನೊಂದೆ ನೋಡಿರಯ್ಯ.
ಆ ಲಿಂಗವನು ತನ್ಮಾರ್ಗದಿಂದ ಕಂಡು ನಿಶ್ಚೈಸಿ
ಆ ಲಿಂಗದಲ್ಲಿ ಕೂಡಿ, ಪರಿಪೂರ್ಣವಾದ ಮಹಾಶರಣಂಗೆ
ಇಹಲೊಕವೆಂದಡೇನಯ್ಯ? ಪರಲೋಕವೆಂದಡೇನಯ್ಯ?
ಇಹಪರಗಳಿಂದತ್ತತ್ತ ತಾನು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೩ ॥

೯೨೨

ಮೊರಡಿಯ ಮೇಲೆ, ಹಾರುವ ಗರುಡನ ಕಂಡೆ ನೋಡಾ!
ಆ ಗರುಡನ ಎಚ್ಚ ಬೇಂಟೆಕಾರನು
ಮೊರಡಿಯ ಬಿಟ್ಟು, ಗರುಡನ ಹಿಡಿದು,
ಶಿವಾಗಮಪಟ್ಟಣಕ್ಕೆ ಹೋಗಿ
ನಿರ್ವಿಕಲ್ಪನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪ ॥

೯೨೩

ಬೆಟ್ಟದ ತುದಿಯ ಮೇಲೆ ಉರಿವ ಕಂಬವ ಕಂಡೆ ನೋಡಾ!
ಆ ಕಂಬದ ಮೇಲೊಂದು ಕೋಗಿಲೆ ಕುಳಿತು ಕೂಗುತಿದೆ ನೋಡಾ!
ಆ ಕೋಗಿಲೆಯ ಹಿಡಿದು ನಿಶ್ಚೈಸಬಲ್ಲ ಹಿರಿಯರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೫ ॥

೯೨೪

ತನ್ನಂತರಂಗದಲ್ಲಿ ಸಹಜ ಸಮ್ಯಕ್‌ಜ್ಞಾನವನರಿತು
ನಿತ್ಯ ಪರತತ್ವದಲ್ಲಿ ಕೂಡಿ ಪರಿಪೂರ್ಣವಾದ ಶರಣನು
ಅಖಂಡ ತೇಜೋಮಯಲಿಂಗ ತಾನೇ
ಝೇಂಕಾರ ನಿಜಲಿಂಗಪ್ರಭುವೆ. ॥ ೬೬ ॥

೯೨೫

ಅಂಬರದ ಮನೆಯೊಳಗೆ ಸ್ವಯಂಭೂಲಿಂಗವ ಕಂಡೆ ನೋಡಾ!
ಆ ಲಿಂಗದೊಳಗೆ ಅನಂತಕೋಟಿ ಸೋಮಸೂರ್ಯರ ಬೆಳಗು ನೋಡಾ!
ಆ ಬೆಳಗಿನೊಳು ಕೂಡಿ ತಾನು ತಾನಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೬೭ ॥

೯೨೬

ಪರಮಚಿದಂಶಿಕದಲ್ಲಿ ತತ್ಪರನಾದ ಶರಣನು,
ಮಹಾಘನ ಅಗಮ್ಯ ಅಗೋಚರ ಅಪ್ರಮಾಣ
ನಿರಾಕುಳ ನಿರ್ಭರಿತ ನಿಃಶೂನ್ಯ ನಿರಾಮಯನೆನಿಸಿದ ಶರಣನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೮ ॥

೯೨೭

ಚಿತ್ತಸುಖದಲ್ಲಿ ಪರಿಣಾಮವನ್ನೈದಿ
ಅಘಟಿತವಾದ ಭೇದವ ನೀವೇ ಬಲ್ಲಿರಿ ನೋಡಯ್ಯ!
ಅಂತಪ್ಪ ಪರಮಸ್ವರೂಪದಲ್ಲಿ ತಾನುತಾನಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೧೯ ॥

೯೨೮

ಓಂಕಾರವೆಂಬ ಮೂಲಮಂತ್ರದಲ್ಲಿ
ಲಿಂಗಸಂಗಿಯಾದ ಶರಣನು ಅನುಪಮ ಲಿಂಗೈಕ್ಯನು ನೋಡಾ.
ಅಂತಪ್ಪ ಲಿಂಗೈಕ್ಯಂಗೆ
ಓಂ ನಮೋ ಓಂ ನಮೋ ಎನುತಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೦ ॥

೯೨೯

ಐದು ಮೇರುವೆಯ ಮೇಲೆ ಪರಮಲಿಂಗವ ಕಂಡೆನಯ್ಯ!
ಆ ಲಿಂಗದಲ್ಲಿ ಕೂಡಿ ನಿರ್ಲೇಪಕನಾದ ಶರಣನು,
ಸಕಲ ಭ್ರಮೆಯಂಗಳನಳಿದು ತಾನುತಾನಾಗಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧ ॥

೯೩೦

ಹೃದಯಕಮಲದಲ್ಲಿಪ್ಪ ಲಿಂಗವ ಸುಮನಜ್ಞಾನದಿಂದ ತಿಳಿದು,
ಅವಿರಳಸ್ವಾನುಭವಸಿದ್ಧಾಂತವನರಿತು, ಪ್ರಕಾಶಿಸಿಕೊಂಡು,
ತಾನುತಾನಾಗಿರ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨ ॥

೯೩೧

ಸಾವಿರಕಂಬದ ಮುತ್ತಿನ ಗದ್ದುಗೆಯ ಮೇಲೆ
ನಿಶ್ಚಿಂತ ನಿರಾಕುಳವೆಂಬ ಲಿಂಗವ ಕಂಡೆನಯ್ಯ!
ಆ ಲಿಂಗವ ನೋಡಹೋಗದ ಮುನ್ನ
ಅದು ಎನ್ನ ನುಂಗಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩ ॥

೯೩೨

ನವನಾಳಪಟ್ಟಣದೊಳಗೆ ನವಸ್ಥಳವ ಕಂಡೆನಯ್ಯ!
ನವಸ್ಥಳಂಗಳಲ್ಲಿ ನವಲಿಂಗವ ಕಂಡೆನಯ್ಯ!
ನವಲಿಂಗದಲ್ಲಿ ನವಪೂಜೆ ನವಜಪ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೭೪ ||

೯೩೩

ಮೂಲಪ್ರಣವದಲ್ಲಿ ಅಮೃತಸಾರಲಿಂಗವ ಕಂಡೆನಯ್ಯ!
ಆ ಲಿಂಗದಲ್ಲಿ ಪರಿಪೂರ್ಣವಾದ ಶರಣನು
ಅಖಂಡ ತೇಜೋಮಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೫ ||

೯೩೪

ನಾದಬಿಂದುಕಳಾತೀತಲಿಂಗವನು ಮಹಜ್ಞಾನದಿಂದ ತಿಳಿದು,
ವಿಶ್ವಂಭರಿತವಾದ ನಿರಪೇಕ್ಷಲಿಂಗದಲ್ಲಿ ಕೂಡಿ
ನಿಸ್ಸಂಗ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬ ||

## ನಿಷ್ಪತ್ತಿಲಿಂಗಸ್ಥಲ

೯೩೫

ಆದಿ ಅನಾದಿ ಇಲ್ಲದಂದು, ಸುರಾಳ ನಿರಾಳ ಇಲ್ಲದಂದು,
ಶೂನ್ಯ ನಿಃಶೂನ್ಯ ಇಲ್ಲದಂದು,
ನಾದ ಬಿಂದು ಕಲೆಗಳಿಲ್ಲದಂದು,
ನಾಮ ರೂಪ ಕ್ರಿಯೆಗಳಿಲ್ಲದಂದು,
ಇವೇನೇನೂ ಇಲ್ಲದಂದು, ಅತ್ತತ್ತಲೆ.
ನಿರವಯಲಿಂಗವು ತಾನೇ ನೋಡಾ.
ಆ ಲಿಂಗದ ಚಿದ್ವಿಲಾಸದಿಂದ ನಿರಂಜನನಾದ.
ಆ ನಿರಂಜನನ ಸಂಗದಿಂದ ನಿರಾಕುಳನಾದ.
ಆ ನಿರಾಕುಳವೆ ಚಿದ್ಬ್ರಹ್ಮವೆನಿಸಿತ್ತು.
ಆ ಚಿದ್ಬ್ರಹ್ಮ ಒಂದೇ ಮೂರು ತೆರನಾಯಿತ್ತು.
ಆ ಮೂರೇ ಆರು ತೆರನಾಯಿತ್ತು.
ಆರೇ ಮೂವತ್ತಾರು ತೆರನಾಯಿತ್ತು.

ಚಿದ್ಬ್ರಹ್ಮವೆ ಚಿತ್ತವೆನಿಸಿತ್ತು.
ಆ ಚಿತ್ತವೆ ಸತ್ತು ಚಿತ್ತಾನಂದನಿತ್ಯಪರಿಪೂರ್ಣವೆಂಬ
ಐದಂಗವನಂಗೀಕರಿಸಿಕೊಂಡು
ಪರವಶದಲ್ಲಿ ನಿಂದು, ಪರಕೆ ಪರವನೆಯ್ದಿದ
ಮಹಾಬ್ರಹ್ಮವೆನಿಸಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨ ॥

೯೩೬

ಬ್ರಹ್ಮವಿಷ್ಣುರುದ್ರಾದಿಗಳಿಲ್ಲದಂದು,
ಈಶ್ವರಸದಾಶಿವ ಪರಶಿವರಿಲ್ಲದಂದು,
ನಾದಬಿಂದುಕಲಾತೀತವಿಲ್ಲದಂದು,
ಇಂತಿರ್ದ ಬ್ರಹ್ಮವು ತಾನೇ ನೋಡಾ!
ಆ ಬ್ರಹ್ಮದ ಚಿದ್ವಿಲಾಸದಿಂದ ಒಬ್ಬ ಶಿವನಾದ.
ಆ ಶಿವನಿಂಗೆ ವದನ ಒಂದು, ನಯನ ಮೂರು,
ಹಸ್ತ ಆರು, ಮೂವತ್ತಾರು ಪಾದಂಗಳು.
ಒಂಬತ್ತು ಬಾಗಿಲ ಮನೆಯೊಳಗೆ ಸುಳಿದಾಡುವ ಗಾರುಡಿಗನು.
ಕಡೆಯ ಬಾಗಿಲ ಮುಂದೆ ನಿಂದು ನಾಗಸ್ವರದ ನಾದವ ಮಾಡಲು
ಆ ನಾಗಸ್ವರವ ಕೇಳಿ ನಾಭಿಮಂಡಲದಿಂದ ಎದ್ದ ಸರ್ಪನು,
ಸಪ್ತೇಳು ಸಾಗರಂಗಳ ದಾಂಟಿ, ಅಷ್ಟಕುಲಪರ್ವತಂಗಳ ದಾಂಟಿ,
ಚತುರ್ದಶ ಭುವನಂಗಳ ಮೀರಿ ನಿಂದ.
ಸರ್ಪನ ತಲೆಯ ಮೇಲೆ ಒಂದು ರತ್ನವಿಹುದು ನೋಡಾ!
ಆ ರತ್ನದ ಬೆಳಗಿನೊಳಗೆ ಅನಂತಕೋಟಿ ಸೋಮಸೂರ್ಯರ ಬೆಳಗು ನೋಡಾ!
ಒಂದು ಶಿವಾಲಯಕ್ಕೆ ಆರು ಕಂಬ, ಮೂರು ಮೇರುವೆ,
ನಿಃಶೂನ್ಯವೆಂಬ ಕಳಸವನಿಕ್ಕಿ
ಆ ಶಿವಾಲಯವ ನಿಜಬ್ರಹ್ಮಲಿಂಗವು ಕಾಯ್ದುಕೊಂಡಿರ್ಪುದು ನೋಡಾ!
ಇದೇನು ವಿಚಿತ್ರವೆಂದು ನಿಶ್ಚಿಂತ ನಿರಾಳವಾಸಿಯಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೨೮ ॥

೯೩೭

ನಾಮರೂಪಕ್ರಿಯೆಯಿಲ್ಲದ ಮೂರ್ತಿಯೊಬ್ಬ.
ಚಿದಂಗನೆಯು ಉನ್ಮನಿಯ ಬಾಗಿಲಮುಂದೆ ನಿಂದು,
ಓಂ ಎಂಬ ಶ್ರುತಿವಿಡಿದು ಪವನಧ್ಯಾನ ಲಿಂಗಧ್ಯಾನವ ಮಾಡುತಿರ್ಪಳು ನೋಡಾ!

ಇದು ಕಾರಣ ಇಪ್ಪತ್ತೈದು ಕಂಬದ ಶಿವಾಲಯದೊಳಗೆ
ಸುಳಿದಾಡುವ ಜಂಗಮವ ಕಂಡೆನಯ್ಯ.
ಆ ಜಂಗಮವು ಸಪ್ತೇಳುಸಾಗರಂಗಳ ದಾಂಟಿ,
ಅಷ್ಟಕುಲಪರ್ವತಂಗಳ ಮೆಟ್ಟಿ, ಒಂಬತ್ತು ಬಾಗಿಲ ಮುಂದೆ ನಿಂದು,
ತಲೆಯೋಡಿನಲಿ ತಿರಿದುಂಬ ಜಂಗಮದ ಪರಿಯೆಂತು ನೋಡಾ!
ಇದು ಕಾರಣ ಆ ಚಿದಂಗನೆಯ ಕೈವಿಡಿದು, ಪರಬ್ರಹ್ಮವಂ ಪೊಕ್ಕು
ನಿಷ್ಪತಿಲಿಂಗವೆ ನಿಮ್ಮ ಶರಣಸಂತತಿಗಳಲ್ಲದೆ ಉಳಿದಾದ ಮತ್ತಜ್ಞಾನಿಗಳು
ಇವರೆತ್ತ ಬಲ್ಲರಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೭೯ ॥

೯೩೮

ಪ್ರಥಮಕಾಲದಲ್ಲಿ ಅನಾದಿ ಜಂಗಮವು
ಸಾವಿರೆಸಳಮಂಟಪದಲ್ಲಿ ನಿಂದು,
ವಿಶ್ವತೋಮುಖವಾಗಿ ತೋರುತಿಪ್ಪನು ನೋಡಾ!
ಆ ಜಂಗಮದ ಚಿದ್ವಿಲಾಸದಿಂದ, ಭಕ್ತಾಂಗನೆ ಉದಯವಾದಳು ನೋಡಾ!
ಆ ಭಕ್ತಾಂಗನೆಯು ಒಂದಗಲನಿಡಲೊಡನೆ
ಆ ಜಂಗಮ ಉಂಡು ಒಕ್ಕುದ ನಾನುಂಡು ಮಹಾಧನ್ಯನಾದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೮೦ ॥

೯೩೯

ಒಬ್ಬ ಸಹಜಗಳ್ಳನು ನಿಟಿಲಮುಂದಳ ಚಾವಡಿಯಲ್ಲಿ ನಿಂದು
ರಾಜಿಸುತಿಪ್ಪನು ನೋಡಾ!
ಆ ಕಳ್ಳನ ಹೆಜ್ಜೆಯ ಒಬ್ಬ ತಳವಾರ ಎತ್ತಿ ನೋಡಲು ಹೆಜ್ಜೆ ಹೋದವು.
ಅಂಗಲಿಂಗಸಂಗಸಮರಸವೆಂಬ ಲಿಂಗದ ಗುಡಿಯಲ್ಲಿ ಅಡಗಿಪ್ಪವಯ್ಯ.
ಆ ತಳವಾರನು ಹೆಜ್ಜೆಯನೆತ್ತಿ ಆ ಕಳ್ಳನ ಹೆಜ್ಜೆಯ ಹಿಡಿದ ಭೇದವ
ನಿಮ್ಮ ಶರಣರೆ ಬಲ್ಲರಲ್ಲದೆ ಉಳಿದವರೆತ್ತ ಬಲ್ಲರಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೮೧ ॥

೯೪೦

ಕಾಯವಿಲ್ಲದ ಹಂಸನು ಗೂಡನಿಕ್ಕುವುದ ಕಂಡೆನಯ್ಯ.
ಅದು ಹೇಗೆಂದಡೆ:
ಅದಕ್ಕೆ ಬುಡ ಒಂದು, ಕೊನೆ ಮೂರು,
ಆರು ಕಡ್ಡಿಯ ಹೂಡಿ, ನಾದಬ್ರಹ್ಮವೆಂಬ ಕಟ್ಟ ಕಟ್ಟಿ,
ಒಂಬತ್ತು ಯಜ್ಞದ ಗೂಡಿನೊಳಗೆ ಇಪ್ಪ ಹಂಸನ

ಒಬ್ಬ ಸತಿಯಳು ಕಂಡು ಬೇಂಟೆಗಾರಂಗೆ ಹೇಳಲೊಡನೆ,
ಆ ಬೇಂಟೆಕಾರ ಗದೆಯ ತಕ್ಕೊಂಡು ಇಡಲೊಡನೆ,
ಸ್ವರ್ಗ ಮರ್ತ್ಯ ಪಾತಾಳವನೊಡೆದು
ಆಕಾಶ ನಿರಾಕಾಶವೆಂಬ ನಿರ್ಬಯಲಲ್ಲಿ ಬಿತ್ತು ನೋಡಾ!
ಆ ಬೇಂಟೆಕಾರ, ಆ ಗುರಿಯನೆತ್ತಲು
ಆ ಕಾಯವಿಲ್ಲದ ಹಂಸ ಆ ಗದೆಯ ಕಚ್ಚಿತ್ತು ನೋಡಾ!
ಇದೇನು ವಿಚಿತ್ರವೆಂದು ಬೆರಗಾಗುತಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ ನಿಮ್ಮ ಶರಣನು. || ೮೨ ||

೯೪೧

ಆದಿಯಲ್ಲಿ ಒಬ್ಬ ಶಿವಶರಣನು
ಮನೆಯ ಕಟ್ಟಿಸಲಿಕ್ಕೆ ಅನುವಂಗೈದನಯ್ಯ.
ಅದು ಹೇಗೆಂದಡೆ:
ಒಂದಾಮೋದವ ಮಾಡಿ, ಮೂವತ್ತಾರು ಕಂಬಗಳ ಮಾಡಿ,
ಐವತ್ತೆರಡು ತೊಲೆ ಜಂತಿಗಳ ಹಮ್ಮಿ, ಇಪ್ಪತ್ತೈದು ಬೋದಂಗಳ ಭೇದಿಸಿ,
ಸಾಪಾಯವೆಂಬ ಮೇಲುಮುದ್ದಿಯ ಹಾಕಿ,
ಮನೆಯ ಕಟ್ಟಿದನಯ್ಯ ನಮ್ಮ ಶಿವಶರಣನು.
ಆ ಮನೆಯು ನಾ ಘನವೆಂದರೆ ನನ್ನ ನುಂಗಿತ್ತು, ನೀ ಘನವೆಂದರೆ ನಿನ್ನ ನುಂಗಿತ್ತು
ನಾನು ನೀನೆಂಬ ಕೊನೆಕೋಣೆಯಲ್ಲಿ ತಾನೇ ನೋಡಾ !
ತನ್ನೊಡನೆ ಒಬ್ಬ ಭಾಮಿನಿಯು ಹುಟ್ಟಿದಳು.
ಐದಗಲ ಮಾಡಿ ತಂದು,
ಪೃಥ್ವಿಗೆ ಒಂದು ಸಂಬಂಧಿಸಿ, ಅಪ್ಪುವಿಂಗೆ ಒಂದು ಸಂಬಂಧಿಸಿ,
ತೇಜಕ್ಕೆ ಒಂದು ಸಂಬಂಧಿಸಿ, ವಾಯುವಿಂಗೆ ಒಂದು ಸಂಬಂಧಿಸಿ,
ಆಕಾಶಕ್ಕೆ ಒಂದು ಸಂಬಂಧಿಸಿ,
ಈ ಐದಗಲ ಬಿಟ್ಟು ನೀಡಿದ ಭಾಮಿನಿಯ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೮೩ ||

೯೪೨

ತನ್ನಿಂದ ತಾನಾದವನು, ಉನ್ಮನಿಯ ಬಾಗಿಲ ಮುಂದೆ ನಿಂದು
ಬತ್ತಲೆಯಾದ ಭಾಮಿನಿಯ ಕರೆದು,
ಮಹಾಜ್ಞಾನವೆಂಬ ಹಸ್ತದಿಂದ ಹವಳ ನೀಲ ರತ್ನ ಪಚ್ಚೆ

ಮುತ್ತು ಮಾಣಿಕ್ಯದ ಗದ್ದುಗೆಯ ಮೇಲೆ
ಮಹಾಲಿಂಗವೆಂಬ ಮೂರ್ತಿಯ ನೆಲೆಯಂಗೊಳಿಸಿ
ಆ ಲಿಂಗಕ್ಕೆ ಸಜ್ಜನವೆಂಬ ಮಜ್ಜನವ ನೀಡಿ,
ಅಂತರಂಗದ ಬೆಳಗಿನ ಮಹಾ ಚಿದ್ವಿಭೂತಿಯಂ ಧರಿಸಿ,
ನಿರ್ಮಲವೆಂಬ ಗಂಧವನೊರೆದು, ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ, ನಿರ್ದ್ವಂದ್ವವೆಂಬ ಧೂಪವ ತೋರಿ,
ಭಕ್ತನೆಂಬ ಅಡ್ಡಣಿಗೆಯ ಮೇಲೆ,
ಮಹೇಶ್ವರನೆಂಬ ಹರಿವಾಣವನಿಕ್ಕಿ,
ಮಹಾಪ್ರಸಾದವ ನೆಲೆಯಂಗೊಂಡು
ಪ್ರಾಣಲಿಂಗಿಯೆಂಬ ತುಪ್ಪವನೆರೆದು
ಶರಣನೆಂಬ ಸಕ್ಕರೆಯ ತಳೆದು
ಆ ಲಿಂಗಕ್ಕೆ ತೃಪ್ತಿಯನೆಯ್ದಿಸುತಿರ್ಪಳು ನೋಡಾ!
ನವರತ್ನದ ಹರಿವಾಣದೊಳಗೆ ಸಪ್ತದ್ವೀಪಂಗಳ ರಚಿಸಿ
ಓಂ ನಮೋ ಓಂ ನಮೋ, ಓಂ ನಮೋ ಶಿವಾಯಯೆಂದು
ಬೆಳಗುತಿಪ್ಪಳು ನೋಡಾ.
ಝೇಂಕಾರ ನಿಜಲಿಂಗಪ್ರಭುವೆ. || ೮೪ ||

೯೪೩

ಓಂ ನಮೋ ಶಿವಾಯವೆಂಬ ಮಂತ್ರವು ನೆನಹಿಂಗೆ ಬಾರದಂದು.
ತಾನುತಾನೆಂಬುದು ಭಾವಕೆ ತೋರದಂದು.
ಎಂತಿರ್ದ ಬ್ರಹ್ಮವು ತಾನೇ ನೋಡಾ !
ಆ ಬ್ರಹ್ಮದ ಚಿದ್ವಿಲಾಸದಿಂದ ಚಿದಾತ್ಮನಾದ.
ಆ ಚಿದಾತ್ಮನ ಭಾವದಿಂದ ಜ್ಞಾನಾತ್ಮನಾದ.
ಆ ಜ್ಞಾನಾತ್ಮನ ಭಾವದಿಂದ ಆಧ್ಯಾತ್ಮನಾದ.
ಆ ಆಧ್ಯಾತ್ಮನ ಭಾವದಿಂದ ನಿರ್ಮಲಾತ್ಮನಾದ.
ಆ ನಿರ್ಮಲಾತ್ಮನ ಭಾವದಿಂದ ಶುದ್ಧಾತ್ಮನಾದ.
ಆ ಶುದ್ಧಾತ್ಮನ ಭಾವದಿಂದ ಬದ್ಧಾತ್ಮನಾದ.
ಆ ಬದ್ಧಾತ್ಮನ ಭಾವಕೆ ಭಕ್ತನಾದ.
ಆ ಶುದ್ಧಾತ್ಮನ ಭಾವಕೆ ಮಹೇಶ್ವರನಾದ.
ಆ ನಿರ್ಮಲಾತ್ಮನ ಭಾವಕೆ ಪ್ರಸಾದಿಯಾದ
ಆ ಆಧ್ಯಾತ್ಮನ ಭಾವಕೆ ಪ್ರಾಣಲಿಂಗಿಯಾದ.
ಆ ಜ್ಞಾನಾತ್ಮನ ಭಾವಕೆ ಶರಣನಾದ.

ಆ ಚಿದಾತ್ಮನ ಭಾವಕೆ ಐಕ್ಯನಾದ.
ಆ ಐಕ್ಯನ ಕರಕಮಲಕೆ ಮಹಾಲಿಂಗನಾದ.
ಆ ಶರಣನ ಕರಕಮಲಕೆ ಪ್ರಸಾದಲಿಂಗನಾದ.
ಆ ಪ್ರಾಣಲಿಂಗಿಯ ಕರಕಮಲಕೆ ಜಂಗಮಲಿಂಗನಾದ.
ಆ ಪ್ರಸಾದಿಯ ಕರಕಮಲಕೆ ಶಿವಲಿಂಗನಾದ.
ಆ ಮಹೇಶ್ವರನ ಕರಕಮಲಕೆ ಗುರುಲಿಂಗನಾದ.
ಆ ಭಕ್ತನ ಕರಕಮಲಕೆ ಆಚಾರಲಿಂಗನಾದ.
ಆ ಆಚಾರಲಿಂಗಕೆ ಕ್ರಿಯಾಶಕ್ತಿ, ಆ ಗುರುಲಿಂಗಕೆ ಜ್ಞಾನಶಕ್ತಿ,
ಆ ಶಿವಲಿಂಗಕೆ ಇಚ್ಛಾಶಕ್ತಿ, ಆ ಜಂಗಮಲಿಂಗಕೆ ಆದಿಶಕ್ತಿ,
ಆ ಪ್ರಸಾದಲಿಂಗಕೆ ಪರಾಶಕ್ತಿ, ಆ ಮಹಾಲಿಂಗಕೆ ಚಿಚ್ಛಕ್ತಿ.
ಆ ಚಿಚ್ಛಕ್ತಿಸಂಗದಿಂದ ಚಿದ್ಬ್ರಹ್ಮವ ಕೂಡಿ
ಚಿದಾನಂದಸ್ವರೂಪವಾದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೮೫ ॥

೬೪೪

ನೊಸಲಕಣ್ಣು, ಪಂಚಮುಖ, ದಶಭುಜ,
ತನುವೇಕ, ದ್ವೀಪಾದ, ಸ್ಫಟಿಕವರ್ಣ,
ಈರೇಳುಭುವನ ಹದಿನಾಲ್ಕುಲೋಕಂಗಳ ಹೊತ್ತವನಯ್ಯ.
ರವಿ ಶಶಿಯ ಬೆಳಗನೊಳಕೊಂಡು
ಆಕಾಶ ನಿರಾಕಾಶವೆಂಬ ನಿರ್ವಯಲಲ್ಲಿ ನಿಂದು
ತೊಳಗಿಬೆಳಗುತಿಪ್ಪನು ನೋಡಾ !
ಆತಂಗೆ ಅತಳಾಧಾರವಿಲ್ಲ, ವಿತಳಾಧಾರವಿಲ್ಲ
ಮಹಾಘನ ಅಗಮ್ಯ ಅಗೋಚರ ಅಪ್ರಮಾಣ ನಿರಾಕುಳ ನಿರಂಜನ ನಿರ್ಭರಿತ
ನಿರವಯಲಿಂಗ ತಾನೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೮೬ ॥

೬೪೫

ಆದಿಯ ಸಂಗದಿಂದ ಆದವನಲ್ಲ,
ಅನಾದಿಯ ಸಂಗದಿಂದ ಆದವನಲ್ಲ,
ಆದಿ ಅನಾದಿಯನೊಳಗೊಂಡು
ತಾನು ತಾನಾಗಿರ್ದನಯ್ಯ ಆ ಶರಣನು.
ಆಧಾರವಿಡಿದು ಭಕ್ತನಾಗಿ,

ಆಚಾರಲಿಂಗವ ನೆಲೆಯಂಗೊಂಡುದೆ ಆಚಾರಲಿಂಗವೆಂಬೆನಯ್ಯ.
ಸ್ವಾಧಿಷ್ಠಾನವಿಡಿದು ಮಹೇಶ್ವರನಾಗಿ
ಗುರುಲಿಂಗವ ನೆಲೆಯಂಗೊಂಡುದೆ ಶಿವಲಿಂಗವೆಂಬೆನಯ್ಯ.
ಮಣಿಪೂರಕವಿಡಿದು ಪ್ರಸಾದಿಯಾಗಿ
ಶಿವಲಿಂಗವ ನೆಲೆಯಂಗೊಂಡುದೆ ಶಿವಲಿಂಗವೆಂಬೆನಯ್ಯ.
ಅನಾಹತವಿಡಿದು ಪ್ರಾಣಲಿಂಗಿಯಾಗಿ
ಜಂಗಮಲಿಂಗವ ನೆಲೆಯಂಗೊಂಡುದೆ ಜಂಗಮಲಿಂಗವೆಂಬೆನಯ್ಯ.
ವಿಶುದ್ಧಿವಿಡಿದು ಶರಣನಾಗಿ
ಪ್ರಸಾದಲಿಂಗವ ನೆಲೆಯಂಗೊಂಡುದೆ ಪ್ರಸಾದಲಿಂಗವೆಂಬೆನಯ್ಯ.
ಆಜ್ಞೇಯವಿಡಿದು ಐಕ್ಯನಾಗಿ
ಮಹಾಲಿಂಗವ ನೆಲೆಯಂಗೊಂಡುದೆ ಮಹಾಲಿಂಗವೆಂಬೆನಯ್ಯ.
ಬ್ರಹ್ಮರಂಧ್ರವಿಡಿದು ಮಹಾಜ್ಞಾನಿಯಾಗಿ
ಚಿಲ್ಲಿಂಗವ ನೆಲೆಯಂಗೊಂಡುದೆ ಚಿಲ್ಲಿಂಗವೆಂಬೆನಯ್ಯ.
ಶಿಖಾವಿಡಿದು ಸ್ವಯಜ್ಞಾನಿಯಾಗಿ
ಚಿದಾನಂದಲಿಂಗವ ನೆಲೆಯಂಗೊಂಡುದೆ ಚಿದಾನಂದಲಿಂಗವೆಂಬೆನಯ್ಯ.
ಪಶ್ಚಿಮವಿಡಿದು ನಿರಂಜನನಾಗಿ
ಚಿನ್ಮಯಲಿಂಗವ ನೆಲೆಯಂಗೊಂಡುದೆ ಚಿನ್ಮಯಲಿಂಗವೆಂಬೆನಯ್ಯ.
ಅಣುಚಕ್ರವಿಡಿದು ಪರಿಪೂರ್ಣನಾಗಿ
ಓಂಕಾರಲಿಂಗವ ನೆಲೆಯಂಗೊಂಡುದೆ ಓಂಕಾರಲಿಂಗವೆಂಬೆನಯ್ಯ.
ನಿಷ್ಪತಿವಿಡಿದು ನಿಃಕಲನಾಗಿ
ನಿರವಯಲಿಂಗವ ನೆಲೆಯಂಗೊಂಡುದೆ ನಿರವಯಲಿಂಗವೆಂದೆಂಬೆನಯ್ಯ.
ಇಂತಪ್ಪ ಸುಖವ ನಿಮ್ಮ ಮಹಾಶರಣರೆ ಬಲ್ಲರಲ್ಲದೆ
ಉಳಿದಾದವರು ಇವರೆತ್ತ ಬಲ್ಲರಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ॥ ೮೭ ॥

## ನಿರಾಲಂಬಲಿಂಗಸ್ಥಲ

೯೪೬

ಅಗ್ನಿಗಿರಿಯ ಪಟ್ಟಣದ ಚಂದ್ರಗಿರಿಯ ಪಟ್ಟಣದ ನಡುವೆ
ಎರಡೆಸಳ ಸ್ಥಾವರ ಗದ್ದುಗೆಯ ಕಂಡೆನಯ್ಯ.
ಆ ಗದ್ದುಗೆಯ ಮೇಲೆ ಸ್ಫಟಿಕವರ್ಣದ ಮೂರ್ತಿ
ನೆಲೆಯಂಗೊಂಡಿರ್ಪನು ನೋಡಾ.

ಆ ಸ್ಫಟಿಕವರ್ಣದಮೂರ್ತಿಯ ಕೂಡಿ
ಅಗ್ನಿಗಿರಿಯ ಪಟ್ಟಣಮಂ ಹೊಗಲು,
ಅಲ್ಲಿ ಆಚಾರಲಿಂಗದೇವರು, ಗುರುಲಿಂಗದೇವರು,
ಶಿವಲಿಂಗದೇವರು ನೆಲೆಯಂಗೊಂಡಿರ್ಪರು ನೋಡಾ.
ಅವರಿಗೆ ಸೂಚನೆಯ ಮುಟ್ಟಿಸಲು
ಆಚಾರಲಿಂಗದೇವರು ನಾಶಿಕಾಗ್ರದಲ್ಲಿ ನೆಲೆಯಂಗೊಂಡರು.
ಗುರುಲಿಂಗದೇವರು ಜಿಹ್ವಾಗ್ರದಲ್ಲಿ ನೆಲೆಯಂಗೊಂಡರು.
ಶಿವಲಿಂಗದೇವರು ನೇತ್ರಸ್ವಯದಲ್ಲಿ ನೆಲೆಯಂಗೊಂಡರು.
ಆ ಸ್ಫಟಿಕವರ್ಣದ ಮೂರ್ತಿಯಂ ಕೂಡಿ
ಚಂದ್ರಗಿರಿಯ ಪಟ್ಟಣಮಂ ಪೊಗಲು
ಅಲ್ಲಿ ಜಂಗಮಲಿಂಗದೇವರು, ಪ್ರಸಾದಲಿಂಗದೇವರು,
ಮಹಾಲಿಂಗದೇವರು ನೆಲೆಯಂಗೊಂಡಿರ್ಪರು ನೋಡಾ.
ಅವರಿಂಗೆ ಸೂಚನೆಯಂ ಮುಟ್ಟಿಸಲು,
ಜಂಗಮಲಿಂಗದೇವರು ತ್ವಕ್ಕಿನ ಸ್ವಯದಲ್ಲಿ ನೆಲೆಯಂಗೊಂಡಿರ್ಪರು.
ಪ್ರಸಾದಲಿಂಗದೇವರು ಶ್ರೋತ್ರಸ್ವಯದಲ್ಲಿ ನೆಲೆಯಂಗೊಂಡಿರ್ಪರು.
ಮಹಾಲಿಂಗದೇವರು ಭಾವಸ್ವಯದಲ್ಲಿ ನೆಲೆಯಂಗೊಂಡಿರ್ಪರು.
ಆ ಸ್ಫಟಿಕವರ್ಣದ ಮೂರ್ತಿಯಂ ಕೂಡಿ,
ಅಗ್ನಿಗಿರಿಯಪಟ್ಟಣ ಚಂದ್ರಗಿರಿಯ ಪಟ್ಟಣದ
ಮುಂದಳ ದಿಕ್ಕಿನಲ್ಲಿ ಸಾವಿರೆಸಳಮಂಟಪ ಕಂಡೆನಯ್ಯ.
ಆ ಮಂಟಪದೊಳಗೆ ಮಹಾಜ್ಞಾನಪ್ರಕಾಶವು ಹೊಳೆವುತಿರ್ಪುದು ನೋಡಾ.
ಆ ಬೆಳಗಿನೊಳು ಕೂಡಿ ತಾನುತಾನಾಗಿರ್ಪನಯ್ಯ
ಝೇಂಕಾರ ನಿಜಲಿಂಗಪ್ರಭುವೆ ನಿಮ್ಮ ಶರಣನು. ॥ ೮೮ ॥

೯೪೭

ಸರ್ವಾಂಗಪಟ್ಟಣದೊಳಗೆ ಐದು ಮೊದಲಗಿತ್ತೇರಿಗೆ
ಒಬ್ಬ ಮದಲಿಂಗ ನೋಡಾ!
ಬ್ರಹ್ಮ ವಿಷ್ಣು ರುದ್ರ ಈಶ್ವರರೆಂಬ ನಾಲ್ಕು ಕಂಬವ ನಿಲಿಸಿ
ಆಕಾಶವೆಂಬ ಚಪ್ಪರವಂಗೈದು,
ಕಾಮಕ್ರೋಧಲೋಭಮೋಹಮದಮತ್ಸರಗಳೆಂಬ ಆರು ತೊಂಡಲಂಗಳ ಕಟ್ಟಿ,
ಜ್ಞಾನಶೃಂಗಾರವೆಂಬ ಹಾಲಗಂಬವ ನಿಲಿಸಿ,
ಭಕ್ತನೆಂಬ ಅಡ್ಡಣಿಗೆಯ ಮೇಲೆ ಮಹೇಶ್ವರನೆಂಬ ಹರಿವಾಣವನಿಕ್ಕಿ,
ಮಹಾಪ್ರಸಾದವ ನೆಲೆಯಂಗೊಂಡು

ಪ್ರಾಣಲಿಂಗಿಯೆಂಬ ತುಪ್ಪವನೆರೆದು, ಶರಣನೆಂಬ ಸಕ್ಕರೆಯ ತಳೆದು,
ಆಚಾರಲಿಂಗದೇವರು ಗುರುಲಿಂಗದೇವರು ಶಿವಲಿಂಗದೇವರು
ಜಂಗಮಲಿಂಗದೇವರು ಪ್ರಸಾದಲಿಂಗದೇವರು ಈ ಐವರು
ಮದಲಿಂಗನ ಕೂಡ ಭೂಮಾಸವಿಯೂಟವ ಸವಿವುತಿರ್ಪರು ನೋಡಾ.
ಐದು ಮೊದಲಗಿತ್ತೇರಿಗೂ ಮದಲಿಂಗಂಗೂ ಸೇಸೆಯನಿಕ್ಕಿ
ನಮಃ ಶಿವಾಯವೆಂಬ ಪಂಚದೀಪವ ಬೆಳಗಿ
ಓಂ ನಮಃ ಶಿವಾಯಯೆಂದು ಬರೆದಿದ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೮೯ ॥

೯೫೮

ಬೇರು ಇಲ್ಲದ ಮರ ಹೋಗಿ ಆದಿಯ ಸೇರಿತ್ತಯ್ಯ,
ಆ ಮರಕ್ಕೆ ಐದು ಕೊಂಬೆಗಳು ಬೆಳೆದಿರ್ಪವು ನೋಡಾ.
ಬ್ರಹ್ಮವೊಂದನೇರಿದ, ವಿಷ್ಣುವೊಂದನೇರಿದ, ರುದ್ರವೊಂದನೇರಿದ,
ಈಶ್ವರನೊಂದನೇರಿದ, ಸದಾಶಿವನೊಂದನೇರಿದ-
ಈ ಐದು ಕೊಂಬೆಗಳ ಮೆಟ್ಟಿ
ತುಟ್ಟತುದಿಯಲೊಂದು ಬಟ್ಟಬಯಲ ಹಣ್ಣಾಗಿಪ್ಪುದು ನೋಡಾ !
ಆ ಹಣ್ಣ ಸವಿಯಲೊಡನೆ, ಹಣ್ಣಿನ ಒಡೆಯ ಬಂದು
ಸವಿದಾತನ ನುಂಗಿದ ನೋಡಾ, ಝೇಂಕಾರ ನಿಜಲಿಂಗಪ್ರಭುವೆ. ॥ ೯೦ ॥

೯೫೯

ಒಂದು ಮುಳ್ಳುಮೊನೆಯ ಮೇಲೆ
ಅರವತ್ತು ಆರು ಕೋಟಿ ಪಟ್ಟಣಂಗಳು ಪುಟ್ಟಿಇದ್ದಾವು ನೋಡಾ !
ಪಾತಾಳಲೋಕದಲ್ಲಿ ಆಧಾರವೆಂಬ ಠಾಣ್ಯ; ಬ್ರಹ್ಮನೆಂಬ ಮುಜುಮದಾರ.
ಮರ್ತ್ಯಲೋಕದಲ್ಲಿ ಸ್ವಾಧಿಷ್ಠವೆಂಬ ಠಾಣ್ಯ; ವಿಷ್ಣುವೆಂಬ ಹುದ್ದೆಯದಾರ.
ಸ್ವರ್ಗಲೋಕದಲ್ಲಿ ಮಣಿಪೂರಕವೆಂಬ ಠಾಣ್ಯ; ರುದ್ರನೆಂಬ ಮಹಲದಾರ.
ತತ್ಪುರುಷಲೋಕದಲ್ಲಿ ಅನಾಹತವೆಂಬ ಠಾಣ್ಯ; ಈಶ್ವರನೆಂಬ ಗೌಡ .
ಈಶಾನ್ಯಲೋಕದಲ್ಲಿ ವಿಶುದ್ಧಿಯೆಂಬ ಠಾಣ್ಯ; ಸದಾಶಿವನೆಂಬ ಪ್ರಧಾನಿ.
ಅಂಬರಲೋಕದಲ್ಲಿ ಆಜ್ಞೇಯವೆಂಬ ಠಾಣ್ಯ; ಪರಶಿವನೆಂಬ ಅರಸು.
ನಾದಲಕ್ಷ ಬಿಂದುಲಕ್ಷ ಕಳಾಲಕ್ಷ ಇಂತೀ ತ್ರಿವಿಧಲಕ್ಷವನೊಳಕೊಂಡು
ಪರಶಿವನೆಂಬ ಅರಸು ಕೂಡಿ ವಿಶ್ವತೋ ಬೆಳಗಿಂಗೆ ಬೆಳಗಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೧ ॥

೯೫೦

ಆರು ನೆಲೆಯ ಮಂಟಪದೊಳಗೆ ಸಾರುತಿರ್ದವಯ್ಯ ಶ್ರುತಿಗಳು.
ಆರು ನೆಲೆಗಳ ಮೀರಿ, ಮೂರು ಕೋಣೆಗಳ ದಾಂಟಿ,
ನಾದ ಬಿಂದು ಕಳಾತೀತನಾಗಿ ನಿಂದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೨ ॥

೯೫೧

ದೇಗುಲದೊಳಗಣ ಲಿಂಗಕ್ಕೆ ಒಂಬತ್ತು ಶಿಖರ,
ಆರು ಬಾಗಿಲು, ಮೂರು ಮಂಟಪವು,
ಮನೋಹರನೆಂಬ ಪೂಜಾರಿ, ನವರತ್ನವ ತೊಂಡಲಂಗಳ ಕಟ್ಟಿ,
ಗೋಪ್ಯದಿಂದ ಲಿಂಗಾರ್ಚನೆಯ ಮಾಡೆ,
ಅಂಗವಿಲ್ಲದಾಕಿ ಮಂಗಳಾರ್ತಿಯ ತಂದು
ಓಂ ನಮಃಶಿವಾಯವೆಂದು ಬೆಳಗುತಿರ್ಪಳಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೯೩ ॥

೯೫೨

ಅಂತರಂಗದ ಸುಳುವಿನ ಭೇದವ ಚಿತ್ತವೆಂಬ ಹಸ್ತದಲ್ಲಿ ಹಿಡಿದು,
ಈಡಾಪಿಂಗಳನಾಳದಲ್ಲಿ ಸುಷಮ್ನಸ್ವರವ ಬಲಿದು
ಶಾಂತಿಸಜ್ಜನಿತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೪ ॥

೯೫೩

ಊರೊಳಗಣ ಸೂಳೆಯ ಕರೆದು
ಮೂವರಿಗೆ ಒತ್ತೆಯ ಕೊಡುವುದು ಕಂಡೆನಯ್ಯ.
ಬೇರೆ ನಾಲ್ವರು ಬೇರೆ ಹುಯ್ಯಲು ಹೋಗುವರು ನೋಡಾ.
ಮೇಲಿಂದ ಒಬ್ಬ ಸತಿಯಳು ಐವರ ಹಿಡಿದು ನೋಡಲು
ಒತ್ತೆಯ ಕೊಟ್ಟ ಸೂಳೆಯ ಮನೆ ಒಡೆಯಿತ್ತು ನೋಡಾ !
ಬೇರೆ ನಾಲ್ವರು ಬೇರೆ ಮಡಿದರು ನೋಡಾ !
ಐವರ ಹೆಜ್ಜೆವಿಡಿದು ನೋಡಲು
ಆ ಹೆಜ್ಜೆಯೇ ಮಂಗಳ ಉಭಯವೆಂಬ ಲಿಂಗದಲ್ಲಿ ಅಡಗಿಪ್ಪವಯ್ಯ.
ಆ ಸತಿಯಳ ಅಂಗವ ಕೂಡಿ ನಿರಂಜನವಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೫ ॥

೯೫೪

ನಡುವಿಲ್ಲದ ಬಾಲೆಯು ಕಣ್ಣಿಲ್ಲದ ಅಂಧಕನ ಕೂಡಿಕೊಂಡು
ನೀರಿಲ್ಲದ ಬಾವಿಗೆ ಹೋಗಿ ನೀರಸೆ ಮೊಗೆದು
ಕಣ್ಣಿಲ್ಲದ ಅಂಧಕ ಬಿದ್ದ, ನಡುವಿಲ್ಲದ ಬಾಲೆಯು ಅಡಗಿಪ್ಪಳಯ್ಯ.
ಇದೇನು ವಿಚಿತ್ರವೆಂದು ಝೇಂಕಾರಪ್ರಭು ಬಂದು ವಿಚಾರಿಸಲು
ಮಕ್ಕಳಿಲ್ಲದಾಕಿ ಬಂದು, ಕಣ್ಣು ಇಲ್ಲದ ಅಂಧಕನ ಕೂಡಿಕೊಂಡು,
ನಡುವಿಲ್ಲದ ಬಾಲೆಯ ಕರೆದು
ಅವರಿಬ್ಬರನು ಮಹಾಲಿಂಗಕ್ಕೆ ಒಪ್ಪಿಸುತಿರ್ದಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೬ ॥

೯೫೫

ಅಂಗಡಿಯ ರಾಜಬೀದಿಯಲ್ಲಿ ಶಿಶುವಿಪ್ಪುದ ಕಂಡೆನಯ್ಯ.
ಆ ಶಿಶುವಿಂಗೆ ಮೂವರು ಮಕ್ಕಳು ಹುಟ್ಟಿದರು ನೋಡಾ !
ಈ ಮಕ್ಕಳ ಕೈ ಬಾಯೊಳಗೆ ಮೂರು ಲೋಕಂಗಳೆಲ್ಲ
ನಚ್ಚುಮಚ್ಚಾಗಿಪ್ಪವು ನೋಡಾ !
ಅದು ಕಾರಣ, ಆದಿಯಲ್ಲಿ ಗುರುನಿರೂಪಣವಂ ಪಡೆದು
ಚಿತ್ತಾಜ್ಞೆಪ್ರಭೆದೋರಲು ಮೂರು ನಚ್ಚುಮಚ್ಚುಗಳು ಕರಗಿ
ಮೂರು ಮಕ್ಕಳು ಬಿಟ್ಟುಹೋದವು ನೋಡಾ !
ಆ ಶಿಶುವಿಂಗೆ ನಿರಾಳವೆಂಬ ದಾರಿಯ ತೋರಿ, ಊರಿಂಗೆ ಹೋಗಲೊಡನೆ
ಅಲ್ಲಿ ಮಂಜಿನ ಕೊಡದ ಅಗ್ಗವಣಿಯ ಕಂಡು
ಲಿಂಗಕೆ ಮಜ್ಜನವ ನೀಡಿ, ನಿರಾವಲಂಬಲಿಂಗದೊಳು ಬೆರೆದು
ನಿಃಪ್ರಿಯವೆನಿಸಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೭ ॥

೯೫೬

ಹರಿತವರ್ಣದ ಮರಕ್ಕೆ ಶ್ವೇತವರ್ಣದ ಕೊಂಬೆಗಳು ಹುಟ್ಟಿದವು ನೋಡಾ!
ಆ ಕೊಂಬೆಗೆ ಸ್ಫಟಿಕವರ್ಣದ ಕಡ್ಡಿಗಳಿಪ್ಪವು ನೋಡಾ !
ಅವಕ್ಕೆ ಸಾಸಿರದಳ ಎಲೆಗಳು ಹತ್ತಿಪ್ಪವು ನೋಡಾ !
ತುಟ್ಟತುದಿಯಲೊಂದು ಬಟ್ಟಬಯಲ ಹಣ್ಣಾಗಿಪ್ಪುದು ನೋಡಾ !
ಆ ಹಣ್ಣಿನ ಬೆಳಗಿನೊಳಗೆ ಐಕ್ಯಗಣಂಗಳು, ಶರಣಗಣಂಗಳು,
ಪ್ರಾಣಲಿಂಗಿಗಣಂಗಳು, ಪ್ರಸಾದಿಗಣಂಗಳು, ಮಹೇಶ್ವರಗಣಂಗಳು,
ಭಕ್ತಗಣಂಗಳು ತಿಂಥಿಣಿಯಾಗಿಪ್ಪರಯ್ಯ

ಆ ಬೆಳಗಿನೊಳು ಕೂಡಿ ನಿಃಪ್ರಿಯವೆನಿಸಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೮ ॥

೯೫೭

ಭಾವಬತ್ತಲೆಯಲ್ಲಿ ನಿರಾಳಕೋಣನಿಪ್ಪುದು ನೋಡಾ !
ಅಲ್ಲಿ ಅತಿಂಥಿಣಿಗಣಂಗಳು ನೆಲೆಯಂಗೊಂಡಿಪ್ಪರು ನೋಡಾ !
ಆ ಕೋಣದ ಅಮೃತವ ತೆಗೆದು, ಮಹಾಗಣಂಗಳು ಸ್ವೀಕರಿಸಿ
ಸರ್ವಾಂಗಲಿಂಗವಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೯ ॥

೯೫೮

ಉಚ್ಛ್ವಾಸ ನಿಶ್ವಾಸಂಗಳ ಬ್ರಹ್ಮರಂಧ್ರದ ತನುಮನದ ಕೊನೆಯಲ್ಲಿ ಹಿಡಿದು
ಸಾಸಿರದಳಕಮಲವಂ ಪೊಕ್ಕು ನಿಃಪ್ರಿಯವೆನಿಸಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೦೦ ॥

೯೫೯

ವಾಚಾತೀತ ಮನೋತೀತ ಭಾವಾತೀತ
ಸರ್ವಾಂಗಾತೀತವೆನಿಸಿಕೊಂಡಿಪ್ಪನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೦೧ ॥

## ಅನಾದಿಲಿಂಗಸ್ಥಲ

೯೬೦

ಆಕಾರನಿರಾಕಾರವಿಲ್ಲದಂದು,
ಋತುವಡಗಿದ ಲಿಂಗವು, ನೆನವಂ ಬೆರೆಸಲು ಝೇಂಕಾರ ಪುಟ್ಟಿತ್ತು.
ಆ ನೆನವೆ ಆತ್ಮನಂ ಬೆರೆಸಲು ಆಕಾಶ ಪುಟ್ಟಿತ್ತು.
ಆ ನೆನವೆ ಮನವಂ ಬೆರೆಸಲು ವಾಯು ಪುಟ್ಟಿತ್ತು.
ಆ ನೆನವೆ ಬುದ್ಧಿಯಂ ಬೆರೆಸಲು ತೇಜ ಪುಟ್ಟಿತ್ತು.
ಆ ನೆನವೆ ಚಿತ್ತವಂ ಬೆರೆಸಲು ಅಪ್ಪು ಪುಟ್ಟಿತ್ತು.
ಆ ನೆನವೆ ಪೃಥ್ವಿಯಂ ಬೆರೆಸಲು ಅಹಂಕಾರ ಪುಟ್ಟಿತ್ತು.
ಆ ಅಹಂಕಾರವೇ ನಿವೃತ್ತಿ ಎನಿಸಿತ್ತು,
ಚಿತ್ತವೆ ಪ್ರತಿಷ್ಠೆ ಎನಿಸಿತ್ತು, ಬುದ್ಧಿಯೇ ವಿದ್ಯೆಯೆನಿಸಿತ್ತು,
ಮನವೇ ಶಾಂತಿಯೆನಿಸಿತ್ತು, ಆತ್ಮವೇ ಶಾಂತ್ಯತೀತವೆನಿಸಿತ್ತು.

ಶಬ್ದದಲ್ಲಿ ಶರಣನಾದ, ಸ್ಪರುಶನದಲ್ಲಿ ಪ್ರಾಣಲಿಂಗಿಯಾದ,
ರೂಪಿನಲ್ಲಿ ಪ್ರಸಾದಿಯಾದ, ರಸದಲ್ಲಿ ಮಹೇಶ್ವರನಾದ,
ಗಂಧದಲ್ಲಿ ಭಕ್ತನಾದ-ಇದು ಅಂಗಸಂಬಂಧ.
ಇನ್ನು ಇದಕ್ಕೆ ಲಿಂಗಸಂಬಂಧವು :
ಶ್ರೋತ್ರದಲ್ಲಿ ಪ್ರಸಾದಲಿಂಗ, ತ್ವಕ್ಕಿನಲ್ಲಿ ಜಂಗಲಿಂಗ,
ನೇತ್ರದಲ್ಲಿ ಶಿವಲಿಂಗ, ಜಿಹ್ವೆಯಲ್ಲಿ ಗುರುಲಿಂಗ, ಘ್ರಾಣದಲ್ಲಿ ಆಚಾರಲಿಂಗ.
ಇಂತಪ್ಪ ಶರಣನು ಅಂಗಲಿಂಗಸಂಬಂಧವನೊಳಕೊಂಡು,
ಚಿತ್ತ ಆಶ್ರಯದೊಳು ಕೂಡಿ ನಿಃಪ್ರಿಯವೆನಿಸಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೦೨ ॥

೯೬೧

ಆನೆ ಮೊದಲು ಇರುವೆ ಕಡೆ ಎಂಬತ್ತುನಾಲ್ಕುಲಕ್ಷ ಜೀವರಾಶಿಯಲ್ಲಿ
ಸತ್ತು ಹುಟ್ಟಿ ಮಾಡಿದ ಪಾಪಂಗಳಿಗೆ ಕಡೆ ಇಲ್ಲವು ನೋಡಾ !
ಒಬ್ಬ ಶಿವನ ಅಂಗವ ಕಂಡೆನಾಗಿ ಹರಿದುಹೋಹವು ನೋಡಾ !
ಆ ಶಿವನ ತನು ಮನದ ಕೊನೆಯಲ್ಲಿ ನಿರಾಲಂಬಲಿಂಗವಿಪ್ಪದು ನೋಡಾ !
ಆ ಲಿಂಗವು ಒಂದೇ ಮೂರುತೆರನಾಯಿತ್ತು.
ಅದು ಹೇಗೆಂದಡೆ :
ಗುರು-ಲಿಂಗ-ಜಂಗಮವೆಂದು ಮೂರುತೆರನಾಯಿತ್ತು.
ಈ ಮೂರು ಒಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ :
ಗುರುವಿಡಿದು ಭಕ್ತ-ಮಹೇಶ್ವರನೆಂದು ಎರಡುತೆರನಾಯಿತ್ತು.
ಲಿಂಗವಿಡಿದು ಪ್ರಸಾದಿ-ಪ್ರಾಣಲಿಂಗಿಯೆಂದು ಎರಡುತೆರನಾಯಿತ್ತು.
ಜಂಗಮವಿಡಿದು ಶರಣ-ಐಕ್ಯನೆಂದು ಎರಡುತೆರನಾಯಿತ್ತು.
ಹೀಂಗೆ ಮೂರು ಆರುತೆರನಾಯಿತ್ತು.
ಅದು ಹೇಗೆಂದಡೆ;
ಇಷ್ಟ-ಪ್ರಾಣ-ಭಾವವೆಂದು ಮೂರುತೆರನಾಯಿತ್ತು.
ಈ ಮೂರು ಒಂದೊಂದಾಗಿ ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ;
ಇಷ್ಟಲಿಂಗವಿಡಿದು ಆಚಾರಲಿಂಗ-ಗುರುಲಿಂಗವೆಂದು ಎರಡುತೆರನಾಯಿತ್ತು.
ಪ್ರಾಣಲಿಂಗವಿಡಿದು ಶಿವಲಿಂಗ-ಜಂಗಮಲಿಂಗವೆಂದು ಎರಡುತೆರನಾಯಿತ್ತು.
ಭಾವಲಿಂಗವಿಡಿದು ಪ್ರಸಾದಲಿಂಗ-ಮಹಾಲಿಂಗವೆಂದು ಎರಡುತೆರನಾಯಿತ್ತು.
ಹೀಂಗೆ ಮೂರು ಆರುತೆರನಾಯಿತ್ತು.

ಅದು ಹೇಗೆಂದಡೆ:
ಧ್ಯಾನ ಧಾರಣ ಸಮಾಧಿಯೆಂದು ಮೂರುತೆರನಾಯಿತ್ತು.
ಈ ಮೂರನೊಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ;
ಧ್ಯಾನವಿಡಿದು ಕ್ರಿಯಾಶಕ್ತಿ-ಜ್ಞಾನಶಕ್ತಿಯೆಂದು ಎರಡುತೆರನಾಯಿತ್ತು.
ಧಾರಣವಿಡಿದು ಇಚ್ಛಾಶಕ್ತಿ-ಆದಿಶಕ್ತಿಯೆಂದು ಎರಡುತೆರನಾಯಿತ್ತು.
ಸಮಾಧಿವಿಡಿದು ಪರಾಶಕ್ತಿ-ಚಿಚ್ಛಕ್ತಿಯೆಂದು ಎರಡುತೆರನಾಯಿತ್ತು.
ಇದಕ್ಕೆ ಭಕ್ತಿ ಆರುತೆರನಾಯಿತ್ತು.
ಅದು ಹೇಗೆಂದಡೆ:
ಸದ್ಭಕ್ತಿ, ನೈಷ್ಠಿಕಭಕ್ತಿ, ಸಾವಧಾನಭಕ್ತಿ, ಅನುಭಾವಭಕ್ತಿ, ಸಮರತಿಭಕ್ತಿ,
ಸಮರಸಭಕ್ತಿಯೆಂದು ಆರುತೆರನಾಯಿತ್ತು.
ಒಬ್ಬ ನಿಃಕಲಶಿವನು ಒಂದೇ ಮೂರುತೆರನಾಯಿತ್ತು.
ಮೂರೇ ಆರುತೆರನಾಯಿತ್ತು.
ಆರೇ ಮೂವತ್ತಾರುತೆರನಾಯಿತ್ತು.
ಮೂವತ್ತಾರೇ ಇನ್ನೂರಹದಿನಾರುತೆರನಾಯಿತ್ತು.
ಇನ್ನೂರಹದಿನಾರಾದ ಶಿವನು ಮೂವತ್ತಾರಾದ.
ಮೂರಾದ ಶಿವನು ಆರಾದ.
ಆರಾದ ಶಿವನು ಮೂರಾದ, ಮೂರಾದ ಶಿವನು ಒಂದಾದ,
ಒಂದಾದ ಶಿವನು ಅಂಗಲಿಂಗಸಂಬಂಧ ಗರ್ಭೀಕರಿಸಿಕೊಂಡು
ತಾನು ತಾನಾಗಿರ್ಪನು ನೋಡಾ.
ಇಂತಪ್ಪ ನಿಃಕಲಶಿವನ ಮಹಾಮಹಿಮೆ ಕಂಡು
ನೆನೆದ ನೆನಹಿಂಗೆ ತೃಪ್ತಿಯಾಯಿತ್ತು ಕಾಣಾ,
ಅಂದವಾಗಿ ಎನ್ನ ಸಲಹಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೧೦೩ ||

೯೬೨

ಹದಿನಾರು ಎಸಳ ಸ್ಥಾವರಗದ್ದುಗೆಯಿಂದತ್ತತ್ತ,
ಚಂದ್ರಕಾಂತದ ಲಿಂಗವ ಕಂಡೆನಯ್ಯಾ.
ಆ ಲಿಂಗದ ಬೆಳಕು ಕೆಳಗೇಳು ಲೋಕಕ್ಕೆ ಮೇಲೇಳು ಲೋಕಕ್ಕೆ
ನಿರಾಳಬಯಲ ತೋರಿತ್ತು.
ಆ ಲಿಂಗದ ಬೆಳಗಿನೊಳಗೆ
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನಿಂದತ್ತತ್ತ

ಸಾವಿರೆಸಳ ಮಂಟಪವ ಪೊಕ್ಕು, ನಿರಾಲಂಬಲಿಂಗದೊಳು ಕೂಡಿ
ನಿಃಪ್ರಿಯನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೦೪ ||

೯೬೩

ಒಬ್ಬಳ ಬಸಿರಲಿ ಶಿಶುವು ಹುಟ್ಟಿ,
ಬ್ರಹ್ಮರಂಧ್ರವೆಂಬ ತೊಟ್ಟಿಲು ಕಟ್ಟಿ, ಆ ಶಿಶುವ ಮಲಗಿಸಿ,
ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ ಚಿಚ್ಛಕ್ತಿ
ಈ ಶಕ್ತಿಯರು ಆ ಶಿಶುವಿಂಗೆ ಜೋಗುಳವ ಪಾಡುತಿರ್ದರು ನೋಡಾ!
ಆ ಶಿಶುವಿಂಗೆ ಹಡೆದ ತಾಯಿ ಬಂದು
ಚಂದ್ರ ಸೂರ್ಯರೆಂಬ ದೀವಿಗೆಯಂ ಮುಟ್ಟಿಸಿ,
ನವರತ್ನದ ಹರಿವಾಣದೊಳಗೆ ಪಂಚಾರ್ತಿಯ ಮೇಲೆ ಪಂಚದೀಪವನ್ನಿಕ್ಕಿ
ಓಂ ನಮೋ ಓಂ ನಮೋ ಎಂದು ಬೆಳಗುತಿರ್ಪಳಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೧೦೫ ||

೯೬೪

ಒಬ್ಬಳ ಸಂಗದಿಂದ ಐವರು ಮೊದಲಗಿತ್ತೇರು ಬಂದ ಬೆಡಗ ನೋಡಾ!
ಮಹಾ ಅರಿವುಯೆಂಬ ಗದ್ದುಗೆಯ ಮೇಲೆ, ಮದಲಿಂಗನ ಕುಳ್ಳಿರಿಸಿ,
ಕೆಂಡದ ಬಾಸಿಂಗ ಕಟ್ಟಿ, ಉರಿಯ ಹಚ್ಚಡ ಹೊಚ್ಚಿ,
ಆ ಮದಲಿಂಗನ ಬಸುರಲಿ ಬಂದ ಶಿಶುವು ನಲಿನಲಿದಾಡುತ್ತ ಇರಲು
ಅಲ್ಲಿ ಒಬ್ಬಳು ಕಂಡು ಎತ್ತಿಕೊಂಡು
ಗಮನಕ್ಕೆ ನಿರ್ಗಮನವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೦೬ ||

೯೬೫

ತಂದೆಯೊಡನೆ ಒಬ್ಬ ಮಗ ಹುಟ್ಟಿ, ಐವರ ಸಂಗವ ಮಾಡುತ್ತಿರಲು,
ಆಡುತಾಡುತ ಒಬ್ಬ ಗೊಲ್ಲತಿಯು ಕಂಡು,
ಕುಂಟಣಿಗಿತ್ತಿಂಗೆ ಹೇಳಲು,
ಆ ಕುಂಟಣಿಗಿತ್ತಿಯು ಆ ಮಗನ ಪಿಡಿಯಲು,
ಈ ಐವರು ಹೆಂಡರಾದ ಬೆಡಗ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೦೭ ||

೯೬೬

ಊರೊಳಗಣ ಕಪ್ಪೆ ಮತ್ತೆ ಸರ್ಪನ ನುಂಗುವುದ ಕಂಡೆನಯ್ಯ!
ನುಂಗಿ ಸಾಯದು, ಸತ್ತು ಕೂಗುವುದು,
ಭ್ರಾಂತಿದೋರದು, ಮತ್ತೆ ಬಾರದು.
ಒಬ್ಬಳ ಸಂಗದಿಂದ ಭಾವ ಮೈದುನ ಮಲಮಗ
ಈ ಮೂವರು ಕತ್ತಲೆ ಹರಿದರು ನೋಡಾ!
ಸತ್ತು ಚಿತ್ತುವೆಂಬ ಭಾಮಿನಿಯ ಮನೆಗೆ ಹೋಗಲಾಗಿ
ತನ್ನ ಗಮನವ ತಾನೇ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೦೯ ||

೯೬೭

ಸಹಸ್ರದಳಕಮಲಮಂಟಪದಲ್ಲಿ ಓಂಯೆಂಬ ತಾಯಿ
ಒಬ್ಬ ಮಗನ ಹಡೆದು ಸಾಕಿ ಸಲುಹಿ ತನ್ನಂತೆ ಮಾಡಿಕೊಂಡು
ತತ್ಪುರುಷಲೋಕದಲ್ಲಿರುವ ಈಶ್ವರನ ಮಗಳ ತಕ್ಕೊಂಡು,
ನಿಟಿಲವೆಂಬ ಹಸೆಯಜಗುಲಿಯ ಮೇಲೆ ಮದಲಿಂಗ ಮೊದಲಗಿತ್ತಿಯ ಕುಳ್ಳಿರಿಸಿ,
ಅಂತಃಕರಣಚತುಷ್ಟಯಂಗಳೆಂಬ ನಾಲ್ಕು ಕಂಬವ ನಿಲ್ಲಿಸಿ,
ಮಹಾಜ್ಞಾನವೆಂಬ ಹಂದರವ ಹೊಂದಿಸಿ,
ಪ್ರಾಣಾಪಾನ ವ್ಯಾನ ಉದಾನ ಸಮಾನ ನಾಗ
ಕೂರ್ಮ ಕೃಕರ ದೇವದತ್ತ ಧನಂಜಯಯೆಂಬ
ಹತ್ತು ತೋರಣವ ಕಟ್ಟಿ, ಚಂದ್ರ ಸೂರ್ಯರೆಂಬ ದೀವಿಗೆಯ ಮುಟ್ಟಿಸಿ,
ಪಾತಾಳಲೋಕದಲ್ಲಿರ್ಪ ಭಕ್ತನ ಕರೆಸಿ,
ಮರ್ತ್ಯಲೋಕದಲ್ಲಿರ್ಪ ಮಹೇಶ್ವರನ ಕರೆಸಿ,
ಸ್ವರ್ಗಲೋಕದಲ್ಲಿರ್ಪ ಪ್ರಸಾದಿಯ ಕರೆಸಿ,
ತತ್ಪುರುಷಲೋಕದಲ್ಲಿರ್ಪ ಪ್ರಾಣಲಿಂಗಿಯ ಕರೆಸಿ,
ಈಶಾನ್ಯಲೋಕದಲ್ಲಿರ್ಪ ಶರಣನ ಕರೆಸಿ,
ಈ ಪಂಚಮೂರ್ತಿಗಳಂ ಮಜ್ಜನಂಗೈಸಿ ಕುಳ್ಳಿರ್ದರು ನೋಡಾ !
ಬ್ರಹ್ಮಂಗೆ ತಾಳ, ವಿಷ್ಣುವಿಂಗೆ ವೀಣೆ, ರುದ್ರಂಗೆ ಮೃದಂಗ,
ಈಶ್ವರಂಗೆ ಶಂಖ, ಸದಾಶಿವಂಗೆ ಘಂಟೆ,
ಈ ಪಂಚಮೂರ್ತಿಗಳು ನಾದವಾಲಗವಂ ಮಾಡುತಿಪ್ಪರು ನೋಡಾ !
ಆದಿಶಕ್ತಿ ಮಂತ್ರಶಕ್ತಿ ಕ್ರಿಯಾಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ
ಈ ಐವರು ನಾಂಟ್ಯವನಾಡುತ್ತಿಪ್ಪರು ನೋಡಾ !
ನಿಷ್ಪತ್ತಿಯೆಂಬ ಬಸವಣ್ಣನ ಮೇಲೆ ಮದಲಿಂಗ ಮೊದಲಗಿತ್ತಿಯ ಕುಳ್ಳಿರಿಸಿ,

ಸೋಮಬೀದಿ ಸೂರ್ಯಬೀದಿಯಲ್ಲಿ ಮೆರವಣಿಗೆಯಂ ಮಾಡಿ,
ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ
ಈ ಐವರು ನವರತ್ನದ ಹರಿವಾಣಗಳಲ್ಲಿ ಪಂಚಾರ್ತಿಯ ಮೇಲೆ
ಏಕಾರ್ತಿಯನಿಕ್ಕಿ ಸಪ್ತದೀಪಂಗಳ ರಚಿಸಿ ಓಂ ನಮೋ ಓಂ ನಮೋ
ಶಿವಾಯಯೆಂದು ಬೆಳಗುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೧೯ ||

೯೬೮

ಮೂರು ಬಾಯುಳ್ಳ ಪಕ್ಷಿಂಗೆ ಆರು ಕಾಲುಗಳುಂಟು,
ಬೇರೆ ಒಂದು ಮನೆಯ ಮಾಡಿಕೊಂಡು
ತನ್ನ ಸುಳುವಿನ ಭೇದವ ತಾನೆ ಕಂಡು
ನಿರ್ವಯಲಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೧೦ ||

೯೬೯

ಕೋಳಿಯ ಧ್ವನಿಯ ಕೇಳಿ ಒಬ್ಬಳು
ತಿಪ್ಪೆಯ ಸೋಸಿ ನೋಡುವ ವ್ಯಾಳ್ಯದಲ್ಲಿ,
ಒಂದು ಸರ್ಪನ ತಲೆಯ ಮೇಲೆ ರತ್ನವಿರ್ಪುದ ಕಂಡೆನಯ್ಯ !
ಆ ರತ್ನವ ಕಪ್ಪೆ ನುಂಗಿದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೧೧ ||

೯೭೦

ಪೂರ್ವದಲ್ಲಿ ಓಂಕಾರವೆಂಬ ಲಿಂಗದ ಸಂಗದಿಂದ
ಪ್ರಣವವೆ ಆದಿಯಾಯಿತ್ತು ನೋಡಾ.
ಆ ಆದಿಯ ಸಂಗದಿಂದ ಒಬ್ಬ ಶಿವನಾದ.
ಆ ಶಿವನ ಸಂಗದಿಂದ ಈಶ್ವರನಾದ.
ಆ ಈಶ್ವರನ ಸಂಗದಿಂದ ರುದ್ರನಾದ.
ಆ ರುದ್ರನ ಸಂಗದಿಂದ ವಿಷ್ಣುವಾದ.
ಆ ವಿಷ್ಣುವಿನ ಸಂಗದಿಂದ ಬ್ರಹ್ಮನಾದ.
ಬ್ರಹ್ಮಂಗೆ ಸರಸ್ವತಿಯಾದಳು,
ವಿಷ್ಣುವಿಂಗೆ ಲಕ್ಷ್ಮಿಯಾದಳು,
ರುದ್ರಂಗೆ ಕ್ರಿಯಾಶಕ್ತಿಯಾದಳು,
ಈಶ್ವರಂಗೆ ಸ್ವಯಂಭೂಶಕ್ತಿಯಾದಳು,

ಸದಾಶಿವಂಗೆ ಜ್ಞಾನಶಕ್ತಿಯಾದಳು.
ಈ ಐವರ ಸಂಗದಿಂದ ನರರು ಸುರರು ದೇವಾದಿದೇವರ್ಕಳು
ಕಿನ್ನರಕಿಂಪುರುಷರು ಗರುಡಗಂಧರ್ವರು ಹುಟ್ಟಿದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೧೨ ||

೯೭೧

ಆದಿಯಲ್ಲಿ ಒಂದು ಲಿಂಗ ಜೇರೆ ಮೃದಂಗವ ನುಡಿಸಾಡುತ್ತಿರಲು ಆ ಲಿಂಗದ
ಸಂತತಿಯಿಂದ ಆದ ಭಾವುಕನು ಬಂದು,
ಸತ್ತ ಹೆಣನ ಎತ್ತಿಕೊಂಡು ಮಸಣಕ್ಕೆ ಒಯ್ಯಲು,
ಆ ಹೆಣ ಎದ್ದು ಕುಳಿತು ಲಿಂಗಾರ್ಚನೆಯ ಮಾಡುವ ವ್ಯಾಳ್ಯದಲ್ಲಿ
ಭಾವುಕ ನುಂಗಿ ನಿರ್ವಯಲಾದ ಭೇದವು
ಸತ್ತವರಿಗೆ ಕಾಣಬಹುದು ಇದ್ದವರಿಗೆ ಕಾಣಬಾರದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೧೩ ||

೯೭೨

ಹುಲ್ಲುಮಾರುವ ಹಾವಾಡಿಗಂಗೆ
ಏಳುಮಂದಿ ಮಕ್ಕಳು ಹುಟ್ಟಿದರು ನೋಡಾ !
ಆ ಮಕ್ಕಳ ಕೈಬಾಯೊಳಗೆ ಈರೇಳು ಲೋಕಂಗಳೆಲ್ಲ
ನಚ್ಚುಮಚ್ಚಾಗಿ ಇರ್ಪವು ನೋಡಾ !
ಆದಿಯ ಲಿಂಗದ ಸಂಗದಿಂದ ಒಬ್ಬಳು ಬಂದು
ಹುಲ್ಲುಮಾರುವ ಹಾವಾಡಿಗನ ಹಿಡಿಯಲು
ಏಳು ಮಂದಿ ಮಕ್ಕಳು ಬಿಟ್ಟು ಹೋದರು ನೋಡಾ !
ಆ ಹಾವಾಡಿಗನ ಕೈಯಲ್ಲಿ ರತ್ನವಿಪ್ಪುದು ನೋಡಾ !
ಆ ರತ್ನವು ನಡುಮಧ್ಯದಲ್ಲಿ ಉಳಿದಿತ್ತು.
ನವನಾಳಕ್ಕೆ ಒಂದೇ ಬೆಳಗಾಯಿತ್ತು ನೋಡಾ !
ಆದಿಯ ಲಿಂಗವ ಕೂಡೆ ಲಿಂಗವಾಯಿತ್ತು,
ಅಯ್ಯಾ ಝೇಂಕಾರ ನಿಜಲಿಂಗಪ್ರಭುವೆ. || ೧೧೪ ||

೯೭೩

ಓಂ ಪ್ರಥಮದಲ್ಲಿ ಲಜ್ಜೆಗೆಟ್ಟು ಕಳ್ಳನು ಐವರ ಕೂಡಿಕೊಂಡು
ಮಹಾಜ್ಞಾನವೆಂಬ ಕನ್ನಗಂಡಿಯ ಕೊರೆದು,
ಹವಳ ನೀಲ ರತ್ನ ಧವಳ ಮುತ್ತು ಮಾಣಿಕ್ಯವ ಕದ್ದು,
ಆರು ಕೇರಿಯ ದಾಂಟಿ, ಮೂರು ಗ್ರಾಮವ ಮೀರಿ ಹೋದ ಕಳ್ಳನ

ಏಕೋಭಾವವೆಂಬ ಕಂಬಕ್ಕೆ ಕಟ್ಟಿ, ಕಂಬ ಕರಗಿ,
ಕಳ್ಳ ಅಡಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೧೫ ॥

೯೭೪

ತನ್ನೊಳಗೆ ಮಹಾಲಿಂಗವಿಪ್ಪ ಸುಳುವಿನ ಭೇದವ
ಸಮರಸಭಾವದಿಂದ ತಿಳಿದು,
ನಿಶ್ಚಿಂತ ನಿರಾಕುಳದ ಮೇಲೆ ಒಂದು ಗುಡಿಯ ಕಂಡೆನಯ್ಯ.
ಆ ಗುಡಿಯ ಶಿಖರದ ಮೇಲೆ ತೊಳಗಿ ಬೆಳಗುತ್ತಿತ್ತಯ್ಯ
ಪರಬ್ರಹ್ಮದ ಪ್ರಕಾಶವು
ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೧೧೬ ॥

೯೭೫

ನಾನಾ ದೇಶವ ತಿರುಗಿ ಒಂದು ಮುಳ್ಳುಮೊನೆಯ ಮೇಲೆ
ಒಬ್ಬ ಪುರುಷನು ನಿಂದಿರುವುದ ಕಂಡೆನಯ್ಯ.
ಆ ಪುರುಷನ ಸತಿಯಳು ಒಬ್ಬ ಮಗನ ಹಡೆದು
ಆರು ಮೂರು ಗ್ರಾಮವ ಕಟ್ಟಿಸಿ
ಆ ಶಿಶುವ ಆ ಪುರುಷಂಗೆ ಕೊಟ್ಟು,
ಹೆಂಡತಿ ಬತ್ತಲೆಯಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೧೭ ॥

೯೭೬

ಕಾಡಾರಣ್ಯದೊಳಗೆ ಒಬ್ಬ ಸೂಳೆ ಕರೆದು
ಐವರಿಗೆ ಒತ್ತೆಯಕೊಡುವುದ ಕಂಡೆನಯ್ಯ !
ಊರೊಳಗಣ ಗೊಲ್ಲತಿ ಐವರ ಒಪ್ಪಿಸಿಕೊಟ್ಟು,
ಸೂಳೆ ಗೊಲ್ಲತಿ ಒಂದಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೧೮ ॥

೯೭೭

ಮೇರುವೆಯ ಗುಡಿಯಲ್ಲಿ ಒಬ್ಬ ಪುರುಷನು
ಲಿಂಗಾರ್ಚನೆಯ ಮಾಡುವ ವೇಳ್ಯೆಯಲ್ಲಿ
ಪಂಚಮುಖದ ಸರ್ಪನು ಹೆಡೆಯನೆತ್ತಿ ಬರಲು
ಆ ಸರ್ಪನ ಕಪ್ಪೆ ನುಂಗಿ ನಿರ್ವಯಲಾದ ವಿಚಿತ್ರದಿಂದ

ಆ ಪುರುಷ ಲಿಂಗದೊಳು ಅಡಗಿ ನಿಶ್ಯಬ್ದವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೧೯ ||

೯೭೮

ಕೋಳಿ ಕೂಗಿದ ಕೂಗ ಕೇಳಿ ಒಬ್ಬ ತಳವಾರನು
ಐವರ ಕೂಡಿಕೊಂಡು ಆರು ಮೂರು ದಾರಿಯ ದಾಂಟಿ ಮೀರಿ ಎಚ್ಚ.
ತಳವಾರನ ಕೋಳಿ ನುಂಗಿ ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೨೦ ||

೯೭೯

ವಿಶ್ವತೋಬ್ರಹ್ಮಾಂಡವನೊಳಕೊಂಡು ಇರ್ದ ಲಿಂಗವ
ನೋಡಹೋಗದಮುನ್ನ ಅದು ಎನ್ನನೊಳಗೊಂಡಿತ್ತಯ್ಯ.
ಅದಕ್ಕೆ ಮುಖ ಒಂದು, ಅಂಗ ಮೂರು,
ಹಸ್ತಂಗಳಾರು, ಪಾದ ಮೂವತ್ತಾರು.
ಒಂಬತ್ತು ಬಾಗಿಲ ಗುಡಿಯೊಳಗೆ ಪೂಜೆಗೊಂಬ ಲಿಂಗವನು
ಅಂಗಕರಣವನುಳಿದು ಲಿಂಗಕಿರಣವಾದವರಿಂಗೆ ಕಾಣಬಪ್ಪುದಯ್ಯ,
ಅಂಗಕರಣವಿರ್ದು ಲಿಂಗಕಿರಣವಿಲ್ಲದವರಿಂಗೆ
ದೂರವಾಗಿಪ್ಪುದಯ್ಯ ಆ ಲಿಂಗವು
ಝೇಂಕಾರ ನಿಜಲಿಂಗಪ್ರಭುವೆ. || ೧೨೧ ||

೯೮೦

ಮುಳ್ಳುಮೊನೆಯ ಕೆಳಗೆ ಒಂದೂರು ಹುಟ್ಟಿದುದ ಕಂಡೆನಯ್ಯ.
ಮೂರು ದಾರಿಯನೊಡೆದು ಹೊಕ್ಕ ಆರುಮಂದಿ ಕಳ್ಳರು
ಒಂಬತ್ತು ಮನೆಯೊಳಗೆ ಮೂವತ್ತಾರು ನಾಣ್ಯವ ಕದ್ದು
ಮೀರಿ ಹೋಹರು.
ಕಳ್ಳನ ಹಿಡಿ ಹಿಡಿಯೆಂದಡೆ ಇಲ್ಲ ಇಲ್ಲವೆಂದು
ನಿಷ್ಪತಿಯಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೨೨ ||

೯೮೧

ಧರೆಯಾಕಾಶವೆಂಬ ಅಂಡವ
ಒಂದು ಇರುವೆ ಕಚ್ಚಿ ಒಯ್ಯುವುದ ಕಂಡೆನಯ್ಯ !
ಆ ಇರುವೆ ಅಣೋರಣೀಯಾನ್ ಮಹತೋಮಹೀಯಾನ್‌ಯೆಂಬ

ನಿರ್ವಯಲನೊಳಕೊಂಡು ನಿಃಶಬ್ದವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೨೩ ॥

೯೮೨

ಒಂಬತ್ತು ಮನೆಯೊಳಗೆ ಸುಳಿದಾಡುವ ಮಾನವಂಗೆ
ಐವರು ಮಕ್ಕಳು ಹುಟ್ಟಿದರು ನೋಡಾ !
ಮೇಲಿಂದ ಒಬ್ಬ ಸತಿಯಳು ಐವರು ಮಕ್ಕಳ ಕೂಡಿಕೊಂಡು
ಆ ಮಾನವನ ನುಂಗಿ, ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೨೪ ॥

೯೮೩

ಆಕಾಶವೆಂಬ ಲಿಂಗಕ್ಕೆ ಐದು ಮುಖಂಗಳು ತೋರಿದವು ನೋಡಾ !
ಒಂದು ಮುಖದಲ್ಲಿ ಲಿಂಗವ ಸಂಬಂಧಿಸಿ,
ಒಂದು ಮುಖದಲ್ಲಿ ಅಂಗವ ಸಂಬಂಧಿಸಿ,
ಒಂದು ಮುಖದಲ್ಲಿ ಸಂಬಂಧವ ಸಂಬಂಧಿಸಿ,
ಒಂದು ಮುಖದಲ್ಲಿ ನಾನು ಸಂಬಂಧಿಸಿ,
ಒಂದು ಮುಖದಲ್ಲಿ ನೀನು ಸಂಬಂಧಿಸಿ,
ನಾನೂ ಇಲ್ಲದೆ, ನೀನೂ ಇಲ್ಲದೆ, ನಿರಾಲಂಬಲಿಂಗದೊಳು
ನಿಃಪ್ರಿಯವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೨೫ ॥

೯೮೪

ಆತ್ಮನೆಂಬ ಅಂಗಕ್ಕೆ ನಿರಾತ್ಮನೆಂಬ ಲಿಂಗವು
ಒಳಹೊರಗೆ ಪರಿಪೂರ್ಣವಾಗಿ ಕಿರಣವ ಸೂಸುತಿರ್ಪುದು ನೋಡಾ !
ಆ ಕಿರಣವ ಆತ್ಮನು ನುಂಗಿ,
ನಿರಾತ್ಮನೆಂಬ ಲಿಂಗವ ನಿರ್ವಯಲು ನುಂಗಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೨೬ ॥

೯೮೫

ಇಪ್ಪತ್ತೈದು ಗ್ರಾಮದ ಮುಂದೆ
ಒಂದು ಗುಡಿಯ ಲಿಂಗವ ಕಂಡೆನಯ್ಯ.
ಐವರು ಮುತ್ತೈದೆಯರು ಲಿಂಗಾರ್ಚನೆಯ ಮಾಡುತಿರ್ಪರು ನೋಡಾ !
ಮೇಲಿಂದ ಒಬ್ಬ ಪುರುಷನು ಐವರ ಕೂಡಿಕೊಂಡು

ಆ ಪುರುಷನು ಲಿಂಗದೊಳಡಗಿ ನಿಃಕ್ರಿಯವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ‖ ೧೨೮ ‖

೯೮೬

ತನ್ನೊಳಿಹ ಮೂರು ಲೋಕವ ನುಂಗಿ
ಮುಂದೆ ತೋರುತಿಹ ಪರಬ್ರಹ್ಮ ಕಿರಣವು
ಆ ಕಿರಣದೊಳು ನೆನವನಡಗಿಸಿ
ಸುಷುಪ್ತಿಯ ನಿಲವ ಕಾಣಬಲ್ಲಾತನೆ ಪರಮ ಲಿಂಗೈಕ್ಯ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ‖ ೧೨೯ ‖

೯೮೭

ಆರು ಕೇರಿಯ ಮುಂದೆ ಮೂರು ಗ್ರಾಮವ ಕಂಡೆನಯ್ಯ.
ಮೂರು ಗ್ರಾಮದ ಮುಂದೆ ಒಂದು ಲಿಂಗವ ಕಂಡೆನಯ್ಯ.
ಆ ಲಿಂಗವ ನೋಡ ಹೋಗದ ಮುನ್ನ
ಆರು ಕೇರಿ ಅಳಿದು, ಮೂರು ಗ್ರಾಮ ಹೋಗಿ,
ಮೀರಿ ಕಂಡೆನಯ್ಯ ಆ ಲಿಂಗವನು
ಝೇಂಕಾರ ನಿಜಲಿಂಗಪ್ರಭುವೆ. ‖ ೧೨೯ ‖

೯೮೮

ಆರು ನೆಲೆಯ ಮಂಟಪದ ಮುಂದೆ
ಮೂರು ಕೋಣೆಯ ಕಂಡೆನಯ್ಯ.
ಮೂರು ಕೋಣೆಯ ಮುಂದೆ ಸಾಸಿರದಳದ ಕಮಲವ ಕಂಡೆನಯ್ಯ.
ಆ ಸಾಸಿರದಳದ ಮುಂದೆ ಒಂದು ಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ತನ್ನ ಮರೆದು
ಮುಂದೆ ಕಾಣಬಲ್ಲಾತನೆ ನಿಮ್ಮ ಪ್ರಮಥ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ‖ ೧೩೦ ‖

೯೮೯

ವಸ್ತು ವಸ್ತುವೆಂದು ಹೆಸರಿಟ್ಟು ನುಡಿವ ಅಣ್ಣಗಳು ನೀವು ಕೇಳಿರಯ್ಯ.
ಆ ವಸ್ತುವು ಪೃಥ್ವಿಯೆಂತೆಂಬೆನೆ ? ಪೃಥ್ವಿಯಂತಲ್ಲ ಕಾಣಿರಯ್ಯ.
ಅಪ್ಪುವಿನಂತೆಂಬೆನೆ ? ಅಪ್ಪುವಿನಂತಲ್ಲ ಕಾಣಿರಯ್ಯ.
ತೇಜದಂತೆಂಬೆನೆ ? ತೇಜದಂತಲ್ಲ ಕಾಣಿರಯ್ಯ.
ವಾಯುವಿನಂತೆಂಬೆನೆ ? ವಾಯುವಿನಂತಲ್ಲ ಕಾಣಿರಯ್ಯ.

ಆಕಾಶದಂತೆಂಬೆನೆ ? ಆಕಾಶದಂತಲ್ಲ ಕಾಣಿರಯ್ಯ.
ಆತ್ಮನಂತೆಂಬೆನೆ ? ಆತ್ಮನಂತಲ್ಲ ಕಾಣಿರಯ್ಯ.
ನಾದಬಿಂದುಕಲೆಯಿಲ್ಲದ ಮುನ್ನ ಅತ್ತತ್ತಲೆ ನಿರಾಲಂಬಲಿಂಗವುಂಟು.
ಆ ಲಿಂಗದಲ್ಲಿ ತನ್ನ ನೆನವನಡಗಿಸಿ ಮುಂದೆ ಕಾಣಬಲ್ಲಾತನೆ
ನಿಮ್ಮ ಪರಮ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೧೩೧ ॥

೯೯೦

ಊರೊಳಗೆ ಒಬ್ಬ ಮಾನವನ ಕಂಡೆನಯ್ಯ,
ಆ ಮಾನವನ ಕೈಯೊಳಗೆ ಒಂದು ರತ್ನವಿಪ್ಪುದ ಕಂಡೆನಯ್ಯ.
ಮೇಲಿಂದ ಸತಿಯಳು ಕಂಡು, ಆ ರತ್ನವ ತಕ್ಕೊಂಡು,
ಊರ ಮುಂದಳ ಗುಡಿಯಲ್ಲಿ ಆ ಮಾನವನ ಬಯಲುನುಂಗಿ,
ಆ ರತ್ನವ ನಿರ್ವಯಲು ನುಂಗಿ
ಆ ಸತಿಯಳು ಅಡಗಿದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೨ ॥

೯೯೧

ಬಯಲಲ್ಲಿ ಒಂದು ಪಕ್ಷಿ ಗೂಡನಿಕ್ಕುವುದ ಕಂಡೆನಯ್ಯ.
ಆ ಪಕ್ಷಿಯ ಒಡಲಲ್ಲಿ ಮೂರು ಹಂಸಗಳು ಹುಟ್ಟಿ,
ಒಂದು ಹಂಸ ಪಾತಾಳಲೋಕಕ್ಕೆ ಮರ್ತ್ಯಲೋಕಕ್ಕೆ ಹೋಯಿತ್ತು.
ಒಂದು ಹಂಸ ಸ್ವರ್ಗಲೋಕಕ್ಕೆ ತತ್ಪುರುಷಲೋಕಕ್ಕೆ ಹೋಯಿತ್ತು.
ಒಂದು ಹಂಸ ಈಶಾನ್ಯಲೋಕಕ್ಕೆ ಅಂಬರಲೋಕಕ್ಕೆ ಹೋಯಿತ್ತು.
ಆ ಪಕ್ಷಿಯ ನಿರ್ವಯಲು ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೩ ॥

೯೯೨

ಐವತ್ತೆರಡು ಎಸಳ ತಾವರೆಯ ಗದ್ದುಗೆಯ ಮೇಲೆ
ಸ್ವಯಂಪ್ರಕಾಶವೆಂಬ ಲಿಂಗವು ತೊಳಗಿ ಬೆಳಗುತಿರ್ಪುದಯ್ಯ.
ಆ ಬೆಳಗಿನೊಳಗೆ ಐದು ರತ್ನಂಗಳಿಪ್ಪವು ನೋಡಾ !
ಒಬ್ಬ ಜಾಲಗಾರನು ಐದು ರತ್ನಂಗಳನಾಯ್ದುಕೊಂಡು
ಸ್ವಯಂಪ್ರಕಾಶವೆಂಬ ಲಿಂಗಕ್ಕೆ ಏರಿಸಿ
ಆ ಜಾಲಗಾರನ ನಿರ್ವಯಲು ನುಂಗಿಪ್ಪ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೪ ॥

೯೯೩

ಐದು ಕೇರಿಯ ಮುಂದೆ ಒಂದು ಗ್ರಾಮವ ಕಂಡೆನಯ್ಯ,
ಆ ಗ್ರಾಮದ ಮುಂದೆ ಒಂದು ಗುಡಿಯ ಕಂಡೆನಯ್ಯ.
ಆ ಗುಡಿಯೊಳಗೊಬ್ಬ ಪುರುಷನು
ಲಿಂಗಾರ್ಚನೆಯ ಮಾಡುತಿರ್ಪನು ನೋಡಾ !
ಆ ಪುರುಷನ ಸರ್ಪ ನುಂಗಿ, ಆ ಸರ್ಪನ ಕಪ್ಪೆ ನುಂಗಿ
ನಿರ್ವಯಲಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೫ ॥

೯೯೪

ಆದಿಯ ಸಂಗದಿಂದ ಮೂವರು ಹುಟ್ಟಿ,
ಆರು ಗ್ರಾಮವ ಪೊಕ್ಕು, ಒಂಬತ್ತು ಬೀದಿಯನೇರಿ ಬರಲು,
ಕಡೆಯ ಬಾಗಿಲಲ್ಲಿ ಸ್ವಯಂಪ್ರಕಾಶವೆಂಬ ಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ತನ್ನ ಮರೆದು ಮುಂದೆ ಕಾಣಬಲ್ಲಾತನೆ
ನಿಮ್ಮ ಶರಣನೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೬ ॥

೯೯೫

ಒಂದು ಕಪ್ಪೆ ನವಗ್ರಹಗಳ ನುಂಗಿ ಕೂಗುತ್ತಿದೆ ನೋಡಾ.
ಆ ಕೂಗ ಕೇಳಿ ಒಂದು ಸರ್ಪನು ಸ್ವರ್ಗ ಮರ್ತ್ಯ ಪಾತಾಳವನೊಡೆದು
ನಿರ್ವಯಲೆಂಬ ಆದಿಯನೇರಿ ಆ ಕಪ್ಪೆಯ ನುಂಗಿರ್ದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೭ ॥

೯೯೬

ಒಂದು ಲಿಂಗದ ಸಂಗದಿಂದ ಮೂವರು ಪುರುಷರು ಹುಟ್ಟಿದರು ನೋಡಾ!
ಅವರಿಂಗೆ ಆರು ಮಂದಿ ಅಂಗನೆಯರ ಮದುವೆಯ ಮಾಡಿ
ಒಬ್ಬ ಕುಂಟಣಿಗಿತ್ತಿಯು ಬಂದು
ಆರು ಮಂದಿ ಅಂಗನೆಯರ ಮೂವರು ಗಂಡರಿಗೆ ಕೊಟ್ಟು
ಆ ಕುಂಟಣಿಗಿತ್ತಿಯು ಲಿಂಗದೊಳು ಮಡಿದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೮ ॥

೯೯೭

ಒಂಬತ್ತು ಬಾಗಿಲ ತ್ರಿಪುರದ ಮುಂದೆ
ಸ್ವಯಂಪ್ರಕಾಶವೆಂಬ ಲಿಂಗವ ಕಂಡೆನಯ್ಯ.

ಆ ಲಿಂಗದ ಕಿರಣದೊಳಗೆ ಐವರು ಶಕ್ತಿಯರ ಕಂಡೆನಯ್ಯ.
ಒಬ್ಬ ಪುರುಷನು ಪರಬ್ರಹ್ಮದ ನಿಲವಿಂಗೆ ಹೋದೇನು ಹೋಗೆನೆಂದರೆ
ತನ್ನ ಸುಳುವಿನ ಭೇದವ ತಾನೇ ನುಂಗಿ
ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩೯ ॥

೯೯೮

ಸಂಗಸಂಯೋಗವೆಂಬ ಪಟ್ಟಣದಲ್ಲಿ
ಒಂದು ಲಿಂಗದ ಗುಡಿಯ ಕಂಡೆನಯ್ಯ.
ಆ ಗುಡಿಯೊಳಗೆ ಒಬ್ಬ ಪೂಜಿತ ರೂಪನ ಕಂಡೆನಯ್ಯ.
ಆ ಪೂಜಿತನ ಪಂಚಮುಖದ ಸರ್ಪ ನುಂಗಿ,
ಆ ಸರ್ಪನ ಕೋಳಿ ನುಂಗಿ,
ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೦ ॥

೯೯೯

ಊರ ಮುಂದಳ ಕಡೆಯ ಬಾಗಿಲಲ್ಲಿ
ಒಬ್ಬ ಪುರುಷ ನಿಂದಿರುವುದ ಕಂಡೆನಯ್ಯ.
ಆ ಪುರುಷನು ಚಿತ್ತಾಗ್ನಿಯೆಂಬ ಸತಿಯಳ ಸಂಗಸಂಯೋಗಮಂ ಮಾಡಲು
ಆಕೆಯ ಬಸುರಲ್ಲಿ ಐವರು ಮಕ್ಕಳು ಹುಟ್ಟಿದರು ನೋಡಾ.
ಆ ಮಕ್ಕಳ ಬಯಲು ನುಂಗಿ, ಆ ಸತಿಯ ನಿರ್ವಯಲು ನುಂಗಿ,
ಆ ಪುರುಷ ನಿಃಶಬ್ದವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೧ ॥

೧೦೦೦

ತನ್ನೊಳಗಿಪ್ಪ ಲಿಂಗದ ಭೇದವನು ಮಹಾಜ್ಞಾನದಿಂದ ತಿಳಿದು,
ಹೃದಯದಲ್ಲಿಪ್ಪ ಅಂಜನವ ತೆಗೆದು,
ನಿರಂಜನವೆಂಬ ಜ್ಯೋತಿಯ ಮುಟ್ಟಿಸಲು
ಆ ಜ್ಯೋತಿಯ ಬೆಳಗಿನೊಳಗೆ ಸುಳಿದಾಡುವ ಸುಳುಪಸರಿತ ಮಹಾತ್ಮರ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೨ ॥

೧೦೦೧

ಒಬ್ಬ ಸತಿಯಳು ಪಂಚಮುಖದ ಸರ್ಪನ ಸಾಕುವುದ ಕಂಡನಯ್ಯ.
ಮೇಲಿಂದ ಒಬ್ಬ ಗಾರುಡಿಗನು ನಾಗಸ್ವರವನೂದಲು
ಆ ಸರ್ಪ ನಾಗಸ್ವರದ ನಾದವ ಕೇಳಿ
ಆ ಗಾರುಡಿಗನ ನುಂಗಿ ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೩ ॥

೧೦೦೨

ಒಬ್ಬ ಕನ್ನೆಯು ಐದು ಮುಖದ ಪಕ್ಷಿಯ ಸಂಗವ ಮಾಡಲು
ಮೇಲಿಂದ ಒಬ್ಬ ಪುರುಷನ ನೋಡಲು
ಪಕ್ಷಿಯು ಗಗನಕ್ಕೆ ಹಾರಿ ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೪ ॥

೧೦೦೩

ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮರೆಂಬ
ಅಷ್ಟತನುವಿನ ಮೇಲೆ ದೃಷ್ಟಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ತನ್ನ ಮರೆದು ಮುಂದೆ ನಿಶ್ಚೈಸಬಲ್ಲಾತನೆ
ನಿಮ್ಮ ಪ್ರಮಥನೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೫ ॥

೧೦೦೪

ಬಯಲಿಂಗೆ ಹಾರಿದ ಪಕ್ಷಿಯ ತಳವಾರನೆಸೆಯಲು,
ಆ ತಳವಾರನ ಸಿಂಹ ನುಂಗಿ,
ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೬ ॥

೧೦೦೫

ಊರೊಳಗೊಬ್ಬ ನಾರಿಯು
ಆರುಮೂರು ಗ್ರಾಮವನೇರಿ ನಿಲ್ಲಲು
ಮೇಲುತುದಿಯಲ್ಲಿ ಒಬ್ಬ ಪುರುಷನು ಉದಯದೋರಲು,
ಆರು ಮೂರು ಗ್ರಾಮವಳಿದು, ಆ ನಾರಿಯ ಪುರುಷ ನುಂಗಿ,
ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೭ ॥

೧೦೦೬

ದೇಗುಲದೊಳಗೆ ಒಬ್ಬ ಗಂಡಂಗೆ ಐವರು ಹೆಂಡರಾಗಿಪ್ಪರು ನೋಡಾ.
ಕಂಡ ಕಂಡ ದಾರಿಯನಳಿದು ಮಂಡೆ ಬೋಳ ಮಾಡಿ
ಹೆಂಡರು ಆ ಗಂಡನ ಕೂಡಿದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೮ ॥

೧೦೦೭

ಐವತ್ತೆರಡು ದೇಶವನು ಒಂದು ಕಪ್ಪೆ ನುಂಗಿ ಕೂಗುವುದ ಕಂಡೆನಯ್ಯ.
ಆ ಕೂಗ ಕೇಳಿ ಒಂದು ಸರ್ಪನು ಸ್ವರ್ಗ ಮರ್ತ್ಯ ಪಾತಾಳವನೊಡೆದು
ಆ ಕಪ್ಪೆಯ ನುಂಗಿದುದ ಕಂಡೆನಯ್ಯ.
ಹಂತಲಿರ್ದ ಕೋಳಿ ಮೂವರ ನುಂಗಿದುದ ಕಂಡೆನಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ॥ ೧೪೯ ॥

೧೦೦೮

ಇರುವೆಯ ಒಡಲಲ್ಲಿ ಐವರು ಹುಟ್ಟಿದುದ ಕಂಡೆನಯ್ಯ.
ಆ ಐವರು ಮೇರುವೆಯ ಗುಡಿಯ ಹತ್ತಿ
ಇರುವೆಯ ಒಡಲ ಹರಿದು ನಿರವಯದಲ್ಲಿ ಅಡಗಿದ್ದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫೦ ॥

೧೦೦೯

ಉರಿಯ ಮೇಲೆ ಹರಿವ ಹಾವ ಕಂಡೆನಯ್ಯ.
ಗಾರುಡಿಗನು ಜಗವನೆಲ್ಲಾ ಜರೆದು
ನಾಗಸ್ವರದ ನಾದವ ಮಾಡಿ,
ಆ ಹಾವ ಹಿಡಿದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫೧ ॥

೧೦೧೦

ಊರೊಳಗೊಬ್ಬ ಹಗಲುಗಳ್ಳನು ಮನೆಯ ಮಾಡಿಕೊಂಡು
ಐವರು ಇರುಳುಗಳ್ಳರ ಕೂಡಿಕೊಂಡು
ಅರಸಿನ ಅರಮನೆಯ ಕನ್ನವ ಕೊರೆದು
ಮಾಣಿಕ್ಯವ ಕದ್ದು ಐವರು ಕಳ್ಳರಿಗೆ ಕೊಟ್ಟ.
ಅರಸು ಎದ್ದು ಹಗಲುಗಳ್ಳನ ಹಿಡಿದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫೨ ॥

೧೦೧೧

ಆಧಾರದಲ್ಲಿ ಬ್ರಹ್ಮನೆಂಬ ಮೂರ್ತಿ.
ಸ್ವಾಧಿಷ್ಠದಲ್ಲಿ ವಿಷ್ಣುವೆಂಬ ಮೂರ್ತಿ.
ಮಣಿಪೂರಕದಲ್ಲಿ ರುದ್ರನೆಂಬ ಮೂರ್ತಿ
ಅನಾಹತದಲ್ಲಿ ಈಶ್ವರನೆಂಬ ಮೂರ್ತಿ
ವಿಶುದ್ಧಿಯಲ್ಲಿ ಸದಾಶಿವನೆಂಬ ಮೂರ್ತಿ
ಆಜ್ಞೇಯದಲ್ಲಿ ಪರಶಿವನೆಂಬ ಮೂರ್ತಿ
ಅಲ್ಲಿಂದತ್ತತ್ತಲೆ ನಿರವಯ ಪರಬ್ರಹ್ಮವು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫೩ ॥

೧೦೧೨

ಆದಿಯಲ್ಲಿ ಒಬ್ಬ ಪುರುಷನು ಎಳೆಯ ಗನ್ನಕಿಯ ಕೈವಿಡಿಯಲು
ಆಕೆಯ ಬಸುರಲ್ಲಿ ಮೂವರು ಮಕ್ಕಳು ಹುಟ್ಟಿದರು ನೋಡಾ !
ಒಳಗಿನ ಆರು ಮಂದಿ ನೋಡಬಂದ ಬೆಡಗ ನೋಡಾ !
ಮೇಲಿಂದ ಒಬ್ಬ ಪುರುಷನು ಕೈ ಸೊನ್ನೆಯ ಮಾಡಲೊಡನೆ
ಮೂವರ ಮಕ್ಕಳ ಕೂಡಿಕೊಂಡು
ಬಂದಾರುಮಂದಿ ಹೆಂಡರಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫೪ ॥

೧೦೧೩

ಸರ್ವಮಯವ ಗರ್ಭೀಕರಿಸಿಕೊಂಡಿರ್ದ ಲಿಂಗವ
ನೋಡಹೋಗದ ಮುನ್ನ ಅದು ಎನ್ನನೊಳಕೊಂಡಿತ್ತು ನೋಡಾ !
ಅದಕ್ಕೆ ಪಾದ ಒಂದು, ಹಸ್ತ ಮೂರು, ಅಂಗವಾರು,
ಮೂವತ್ತಾರು ತಲೆಯು, ಐವತ್ತೆರಡು ನಾಲಗೆಯು,
ಒಂಬತ್ತು ಬಾಗಿಲ ದೇಗುಲದೊಳಗೆ ಇಪ್ಪ ಲಿಂಗವನು
ಮನೋಹರನೆಂಬ ಪೂಜಾರಿಯು,
ನವರತ್ನವೆಂಬ ತೊಂಡಲಂಗಳ ಕಟ್ಟಿ,
ಗೋಪ್ಯದಿಂದ ಲಿಂಗಾರ್ಚನೆಯಂ ಮಾಡಿ,
ಅಂತರಂಗದ ಬೆಳಗಿನ ಮಹಾಚಿದ್ವಿಭೂತಿಯಂ ಧರಿಸಿ,
ನಿರ್ಮಲವೆಂಬ ಗಂಧವನೊರೆದು,
ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ,

ನಿರ್ವ್ಯಾಂಧ್ವವೆಂಬ ಧೂಪವ ತೋರೆ,
ಆ ಮನೋಹರನೆಂಬ ಪೂಜಾರಿಯ ನಿರ್ವಯಲ ನುಂಗಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೫೫ ||

೧೦೧೪

ಮೇಲೆ ಭಾಮಿನಿಯೊಳಗೆ ಮೂರು ರತ್ನವ ಕಂಡೆನು.
ಆವಾವಲ್ಲಿ ಕಂಡೆನೆಂದರೆ:
ಒಂದು ರತ್ನ ನಾದದಲ್ಲಿ ಕಂಡೆನು.
ಒಂದು ರತ್ನ ಬಿಂದುವಿನಲ್ಲಿ ಕಂಡೆನು.
ಒಂದು ರತ್ನ ಕಳೆಯಲ್ಲಿ ಕಂಡೆನು.
ಆ ಭಾಮಿನಿಯ ನಿರ್ವಯಲಲ್ಲಿ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೫೬ ||

೧೦೧೫

ಆರು ಬಾಗಿಲ ಮುಂದೆ ಮೂರು ದೇಗುಲವ ಕಂಡೆನಯ್ಯ.
ಮೂರು ದೇಗುಲದ ಮುಂದೆ ಒಂದು ಲಿಂಗವ ಕಂಡೆನಯ್ಯ.
ಏಕೋ ಮನೋಹರನೆಂಬ ಪೂಜಾರಿಯು
ಐವತ್ತೆರಡು ಸೋಪಾನಂಗಳನ್ನೇರಿ,
ಆ ಲಿಂಗಾರ್ಚನೆಯ ಮಾಡುವುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೫೭ ||

೧೦೧೬

ಆಕಾಶದ ಮೇಲೆ ಏಕಾಂತ ಸೂಳೆಯ ಕಂಡೆನಯ್ಯ.
ಆ ಸೂಳೆಯ ಗೃಹದಲ್ಲಿ ಸಾಸಿರದಳ ಕಮಲಮಂಟಪವ ಕಂಡೆನಯ್ಯ.
ಆದಿಯಲ್ಲಿ ಒಬ್ಬ ವಿಟನು, ಮೂವರು ಗೆಳೆಯರ ಕೂಡಿಕೊಂಡು,
ಹೃದಯದಲ್ಲಿರ್ದ ರತ್ನವ ತೆಗೆದು, ಆ ಸೂಳೆಗೆ ಒತ್ತೆಯಂ ಕೊಟ್ಟು,
ಸಂಗಸಂಯೋಗಮಂ ಮಾಡುವುದ ಮೂವರು ಗೆಳೆಯರು ಕಂಡು
ನಿರ್ವಯಲಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೧೫೮ ||

೧೦೧೭

ಪರಮಾನಂದಪ್ರಭೆಯೊಳಗೆ ಸುಜ್ಞಾನ ಮಹಾಜ್ಞಾನವೆಂಬ ಸತಿ ಪುರುಷರು
ಬ್ರಹ್ಮರಂಧ್ರವೆಂಬ ಪೌಳಿಯಂ ಪೊಕ್ಕು

ಶಿಖಾಚಕ್ರವೆಂಬ ಮೇಲುಪ್ಪರಿಗೆಯಂ ತೆಗೆದು
ಪಶ್ಚಿಮದ್ವಾರವೆಂಬ ನಿರಂಜನಜ್ಯೋತಿಯಂ ಕೂಡಿ,
ನಿರವಯವೆಂಬ ಕರಸ್ಥಲದ ಮೇಲೆ
ಝೇಂಕಾರವೆಂಬ ಲಿಂಗವು ಪೂಜೆಗೊಂಬುವುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೫೯ ॥

೧೧೧೮

ಆದಿಯಲ್ಲಿ ಪರಬ್ರಹ್ಮವೆಂಬ ಮೂರ್ತಿಯು ಪಾತಾಳಲೋಕಕ್ಕೆ ಬಂದು
ನರಮುನೀಶ್ವರನ ಭಕ್ತನಂ ಮಾಡಿ
ಆತನ ಕರಸ್ಥಲಕ್ಕೆ ಆಚಾರಲಿಂಗವ ಕೊಟ್ಟನಯ್ಯ.
ಆ ಪರಬ್ರಹ್ಮವೆಂಬ ಮೂರ್ತಿಯು ಮರ್ತ್ಯಲೋಕಕ್ಕೆ ಬಂದು
ಸುರಮುನೀಶ್ವರನ ಮಹೇಶ್ವರನಂ ಮಾಡಿ
ಆತನ ಕರಸ್ಥಲಕ್ಕೆ ಗುರುಲಿಂಗವ ಕೊಟ್ಟನಯ್ಯ.
ಆ ಪರಬ್ರಹ್ಮವೆಂಬ ಮೂರ್ತಿಯು ಸ್ವರ್ಗಲೋಕಕ್ಕೆ ಬಂದು
ದೇವಮುನೀಶ್ವರನ ಪ್ರಸಾದಿಯಂ ಮಾಡಿ
ಆತನ ಕರಸ್ಥಲಕ್ಕೆ ಶಿವಲಿಂಗವ ಕೊಟ್ಟನಯ್ಯ.
ಆ ಪರಬ್ರಹ್ಮವೆಂಬ ಮೂರ್ತಿಯು ತತ್ಪುರುಷಲೋಕಕ್ಕೆ ಬಂದು
ಮನುಮುನೀಶ್ವರನ ಪ್ರಾಣಲಿಂಗಿಯ ಮಾಡಿ
ಆತನ ಕರಸ್ಥಲಕ್ಕೆ ಜಂಗಮಲಿಂಗವ ಕೊಟ್ಟನಯ್ಯ.
ಆ ಪರಬ್ರಹ್ಮವೆಂಬ ಮೂರ್ತಿಯು ಈಶಾನ್ಯಲೋಕಕ್ಕೆ ಬಂದು
ಆತ್ಮಮುನೀಶ್ವರನ ಶರಣನಂ ಮಾಡಿ
ಆತನ ಕರಸ್ಥಲಕ್ಕೆ ಪ್ರಸಾದಲಿಂಗವ ಕೊಟ್ಟನಯ್ಯ.
ಆ ಪರಬ್ರಹ್ಮವೆಂಬ ಮೂರ್ತಿಯು ಅಂಬರಲೋಕಕ್ಕೆ ಬಂದು
ಮಹಾಮುನೀಶ್ವರನ ಐಕ್ಯನಂ ಮಾಡಿ
ಆತನ ಕರಸ್ಥಲಕ್ಕೆ ಮಹಾಲಿಂಗವ ಕೊಟ್ಟನಯ್ಯ.
ಇಂತಪ್ಪ ಆ ಪರಬ್ರಹ್ಮವೆಂಬ ಮೂರ್ತಿಗೆ
ನಮೋ ನಮೋ ಎಂಬೆನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೬೦ ॥

೧೧೧೯

ಪಂಚಮುಖದ ಮೇಲೆ ಮಿಂಚುವ ಶಿವಲಿಂಗವ ಕಂಡೆನಯ್ಯ.
ಆ ಲಿಂಗವಂಚಿನ ಬೆಳಗಿನೊಳಗೆ ಸುಳಿದಾಡುವ ಸತಿಯಳು

ತನ್ನ ಸುಳುವಿನ ಭೇದವ ತಾನೆ ನುಂಗಿ
ನಿರ್ವಯಲಾದುದ ಕಂಡೆ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. || ೧೯೧ ||

೧೦೨೦

ಅಷ್ಟಕುಲಪರ್ವತದ ಮೇಲೆ ದೃಷ್ಟಲಿಂಗವ ಕಂಡೆ ನೋಡಾ !
ಆ ಲಿಂಗವು ಬಟ್ಟಬಯಲನೊಳಕೊಂಡು
ಘಟ್ಟಿಯಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೯೨ ||

೧೦೨೧

ಸರ್ವಬ್ರಹ್ಮಾಂಡವ ಗರ್ಭೀಕರಿಸಿಕೊಂಡಿರ್ದ ಮೂರ್ತಿಗೆ
ಭಕ್ತನೆ ಎಡದ ಪಾದ, ಮಹೇಶ್ವರನೆ ಬಲದ ಪಾದ,
ಪ್ರಸಾದಿಯೆ ಎಡದ ಹಸ್ತ, ಪ್ರಾಣಲಿಂಗಿಯೆ ಬಲದ ಹಸ್ತ,
ಶರಣನೆ ಎಡದ ಕಣ್ಣು, ಐಕ್ಯನೆ ಬಲದ ಕಣ್ಣು,
ಓಂಕಾರವೆ ನಿಜಮುಖ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೯೩ ||

೧೦೨೨

ನವಗೃಹದ ಮೇಲೆ ನಿರ್ವಯಲೆಂಬ ಸತಿಯಳು
ನಿಂದಿರುವುದನ್ನು ಕಂಡೆನಯ್ಯ.
ಆಕಿಂಗೆ ಚಿದಾತ್ಮನೆಂಬ ಮಗ ಹುಟ್ಟಿ, ಐವರ ಸಂಗವ ಮಾಡಿ,
ಸಾಸಿರದಳಕಮಲವ ಪೊಕ್ಕು, ಶಿಖಾಚಕ್ರವೆಂಬ ಮೆಟ್ಟಿಗೆವಿಡಿದು,
ಪಶ್ಚಿಮದ್ವಾರವೆಂಬ ನಿರಂಜನಜ್ಯೋತಿಯ ಕೂಡಿ
ನಿರವಯವೆಂಬ ಸತಿಯಳ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೯೪ ||

೧೦೨೩

ಬಯಲನೇರಿದ ಪಕ್ಷಿಂಗೆ ಮುಖ ಮೂರು, ಒಡಲಾರು,
ಮೂವತ್ತಾರು ಪಾದಂಗಳು, ಐವತ್ತೆರಡು ನಾಲಗೆಯು,
ಒಬ್ಬ ಬೇಂಟೆಕಾರನು ಅರಿವೆಂಬ ಬಿಲ್ಲು ಹಿಡಿದು,
ಕುರುಹೆಂಬ ಅಂಬು ತಕ್ಕೊಂಡು ಎಸೆವ.
ಆ ಬೇಂಟೆಕಾರನ ಆ ಪಕ್ಷಿ ನುಂಗಿ ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೯೫ ||

೧೦೨೪

ಪ್ರಥಮಕಾಲದಲ್ಲಿ ಓಂಕಾರವೆಂಬ ಲಿಂಗಕ್ಕೆ ನಾದಮೂರ್ತಿಯಾದ.
ಆ ನಾದಮೂರ್ತಿಗೆ ಬಿಂದುಮೂರ್ತಿಯಾದ.
ಆ ಬಿಂದುಮೂರ್ತಿಗೆ ಕಳಾಮೂರ್ತಿಯಾದ.
ಆ ಕಳಾಮೂರ್ತಿಗೆ ಶಿವನಾದ, ಆ ಶಿವನಿಂಗೆ ಸದಾಶಿವನಾದ,
ಆ ಸದಾಶಿವಂಗೆ ಈಶ್ವರನಾದ, ಆ ಈಶ್ವರಂಗೆ ರುದ್ರನಾದ,
ಆ ರುದ್ರಂಗೆ ವಿಷ್ಣುವಾದ, ಆ ವಿಷ್ಣುವಿಂಗೆ ಬ್ರಹ್ಮನಾದ,
ಆ ಬ್ರಹ್ಮಂಗೆ ನರರು ಸುರರು ದೇವಾದಿದೇವರ್ಕಳಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೬೬ ॥

೧೦೨೫

ಬ್ರಹ್ಮಂಗೆ ಸರಸ್ವತಿಯಾಗಿ ವಿಷ್ಣುವಂ ಪೂಜೆಯಂ ಮಾಡಲು,
ವಿಷ್ಣುವಿಂಗೆ ಲಕ್ಷ್ಮಿಯಾಗಿ ರುದ್ರನ ಪೂಜೆಯ ಮಾಡಲು,
ರುದ್ರಂಗೆ ಕ್ರಿಯಾಶಕ್ತಿಯಾಗಿ ಈಶ್ವರನ ಪೂಜೆಯಂ ಮಾಡಲು,
ಈಶ್ವರಂಗೆ ಇಚ್ಛಾಶಕ್ತಿಯಾಗಿ ಸದಾಶಿವನ ಪೂಜೆಯಂ ಮಾಡಲು,
ಸದಾಶಿವಂಗೆ ಜ್ಞಾನಶಕ್ತಿಯಾಗಿ ಪರಶಿವನ ಪೂಜೆಯನ್ನು ಮಾಡಲು,
ಪರಶಿವಂಗೆ ಪರಾಶಕ್ತಿಯಾಗಿ ಪರಬ್ರಹ್ಮನ ಪೂಜೆಯ ಮಾಡಲು,
ಪರಬ್ರಹ್ಮಂಗೆ ಚಿತ್‌ಶಕ್ತಿಯಾಗಿ ಇಂತಿರ್ದ ಬ್ರಹ್ಮರ ಪೂಜೆಯಂ ಮಾಡುವುದ
ಕಂಡೆ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೧೬೭ ॥

೧೦೨೬

ಆತ್ಮನೆಂಬ ಬೆಳಗಿನೊಳು ನಿರಾತ್ಮನೆಂಬ ಉದಯದೋರಿ
ಅತ್ತತ್ತಲೆ ಘನಕೆ ಘನವ ತೋರಿ ನಿಂದಬಳಿಕಿನ್ನು ಎತ್ತ ಯೋಗ ಹೇಳಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೬೮ ॥

೧೦೨೭

ಆದಿ ಅಪಾನದಲ್ಲಿ ಸೋಪಾನವಿಡಿದು ನಿಂದು
ತಾಪತ್ರಯಂಗಳನಳಿದು ಸೊಂಪಾಗಿ ಲಿಂಗದೊಳಗಿಪ್ಪ
ಬಾಗಿಲ ದಾಂಟಿ ಗಪ್ಪಾದನು ನೋಡಾ ಸ್ವಯಂಜ್ಯೋತಿಲಿಂಗದಲ್ಲಿ
ಝೇಂಕಾರ ನಿಜಲಿಂಗಪ್ರಭುವೆ. ॥ ೧೬೯ ॥

## ಚಿಜ್ಜಂಗಮಸ್ಥಲ

೧೦೨೮

ಆಧಾರವೆಂಬ ಹಾವುಗೆಯ ಮೆಟ್ಟಿ,
ವಿಷಯ ವ್ಯಸನಂಗಳೆಂಬ ಸರ್ಪಳಿಯಂ ಹಾಕಿ,
ಜನನ ಮರಣಂಗಳೆಂಬ ಜಂಗವ ಕಟ್ಟಿ,
ಸಲಿಲವೆಂಬ ಕೌಪವ ಹಾಕಿ,
ನಿರ್ಧಾರವೆಂಬ ಕಟಿಯಂ ಧರಿಸಿ,
ಅಷ್ಟಮದಂಗಳೆಂಬ ಯೋಗವಟ್ಟಿಗೆಯಂ ಹಾಕಿ,
ಕುಂಡಲಿಯೆಂಬ ನಾಗಬೆತ್ತಮಂ ಪಿಡಿದು,
ಭಾವವೆಂಬ ಕಪನಿಯಂ ಧರಿಸಿ,
ಚಂದ್ರಸೂರ್ಯಾದಿಗಳೆಂಬ ಸರವ ಹಾಕಿ,
ಓಂಕಾರವೆಂಬ ಪಾವಡವ ಸುತ್ತಿ,
ಹೃದಯಧಾರಣವೆಂಬ ಸೆಜ್ಜೆಯಂ ಮಾಡಿ,
ಕಂಠಸ್ಥಾನವೆಂಬ ಶಿವದಾರವಂ ಮಾಡಿ,
ಮಹಾಲಿಂಗವೆಂಬ ಮೂರ್ತಿಯಂ ನೆಲೆಗೊಳಿಸಿ,
ಆ ಲಿಂಗಕ್ಕೆ ಸಜ್ಜನವೆಂಬ ಮಜ್ಜನ ನೀಡಿ,
ಅಂತರಂಗದ ಬೆಳಗಿನ ಚಿದ್ವಿಭೂತಿಯಂ ಧರಿಸಿ,
ನಿರ್ಮಲವೆಂಬ ಗಂಧವನೊರೆದು,
ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ,
ನಿರ್ದ್ವಂದ್ವವೆಂಬ ಧೂಪವ ತೋರಿ,
ಆ ಲಿಂಗಕ್ಕೆ ಒಬ್ಬ ಸತಿಯಳು
ಭಕ್ತನೆಂಬ ಅಡ್ಡಣಿಗೆಯ ಮೇಲೆ ಮಾಹೇಶ್ವರನೆಂಬ ಹರಿವಾಣವನಿಕ್ಕಿ,
ಮಹಾಪ್ರಸಾದವ ನೆಲೆಯಂಗೊಂಡು,
ಪ್ರಾಣಲಿಂಗಿಯೆಂಬ ತುಪ್ಪವನೆರೆದು,
ಶರಣನೆಂಬ ಸಕ್ಕರೆಯಂ ತಳೆದು,
ಆ ಸತಿಯಳು ಆ ಲಿಂಗಕ್ಕೆ ನೈವೇದ್ಯವ ತೋರುತಿರ್ಪಳು ನೋಡಾ !
ಆ ಲಿಂಗಕ್ಕೆ ನಾದವಾಲಗವಂ ಮಾಡುವುದ ಕಂಡೆನಯ್ಯ.
ಅದು ಹೇಗೆಂದಡೆ- ಬ್ರಹ್ಮಂಗೆ ತಾಳ, ವಿಷ್ಣುವಿಂಗೆ ವೇಣು,
ರುದ್ರಂಗೆ ಮೃದಂಗ, ಈಶ್ವರಂಗೆ ಉಪಾಂಗ, ಸದಾಶಿವಂಗೆ ಗಾಯನ,
ಈ ಐವರು ನಾದದ ವಾಲಗವ ಮಾಡುವುದ ಕಂಡೆನಯ್ಯ.

ಆದಿಶಕ್ತಿ ಮಂತ್ರಶಕ್ತಿ ಕ್ರಿಯಾಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ
ಈ ಐವರೂ ನಾಂಟ್ಯವನಾಡುತಿರ್ಪರು ನೋಡಾ !
ನವನಾಳದಲ್ಲಿ ನವಮೂರ್ತಿಗಳು
ನವದೀಪವ ನವಧೂಪವ ಬೆಳಗುತಿರ್ಪರು ನೋಡಾ !
ಸೋಪಾನವಿಡಿದು ಪ್ರಣವಬೆಳಗಿನೊಳು ಸುಳಿದಾಡುವ ಜಂಗಮಕ್ಕೆ
ಓಂ ನಮೋ ಓಂ ನಮೋ ಓಂ ನಮೋ
ಎನುತಿರ್ದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೧೭೦ ॥

೧೦೨೯

ಬ್ರಹ್ಮ ವಿಷ್ಣು ರುದ್ರಾದಿಗಳನೊಳಗೊಂಡಿದ್ದಂತಾತನೇ ಈಶ್ವರ.
ಈಶ್ವರ ಸದಾಶಿವ ಪರಶಿವನೊಳಕೊಂಡಿದ್ದಂತಾತನೇ ಪರಬ್ರಹ್ಮವು.
ನಾದಬಿಂದುಕಲಾತೀತನನೊಳಕೊಂಡಿದ್ದಂತಾತನೇ ಬ್ರಹ್ಮವು ನೋಡಾ.
ಆ ಬ್ರಹ್ಮದ ಅಂಗವು ಹೇಗೆಂದಡೆ :
ಜಾಗ್ರವು ಅಲ್ಲ, ಸ್ವಪ್ನವು ಅಲ್ಲ, ಸುಷುಪ್ತಿಯೂ ಅಲ್ಲ.
ಮರೆದೊರಗಿದ ಹಾಂಗೆ ನಿಷ್ಪತಿಯಾಗಿ ಕೂಡಬಲ್ಲರಿಗೆ ಕೂಡಿತ್ತು
ಕೂಡಲರಿಯದವರಿಂಗೆ ದೂರಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೧ ॥

೧೦೩೦

ಧರ್ಮವೆಂಬ ದಾರಿಯಲ್ಲಿ ಒಬ್ಬ ಸತಿಯಳು ನಿಂದು
ವರ್ಮವ ಮಾಡುತಿರ್ಪಳು ನೋಡಾ !
ಆ ವರ್ಮವ ಈ ಲೋಕದವರು ಆರಾರು ಕೇಳಬಲ್ಲರೆ ಅಯ್ಯಾ ?
ಬ್ರಹ್ಮ ವಿಷ್ಣು ರುದ್ರಾದಿಗಳಿಗೆ ಅಗೋಚರವೆನಿಸಿತ್ತು ಅಯ್ಯಾ !
ಇದು ಕಾರಣ ನಿರ್ದ್ವಂದ್ವವಾದ ಶರಣನು ಆ ವರ್ಮವ ಕೊಳಬಲ್ಲನಯ್ಯ.
ಆ ವರ್ಮದ ದಾರಿಯ ನೆರೆ ಬಲ್ಲನಯ್ಯ
ಆ ಸತಿಯಳ ಅಂಗವ ಕೂಡಬಲ್ಲನಯ್ಯ
ನಿಷ್ಪತಿಲಿಂಗದಲ್ಲಿ ರಾಜಿಸಬಲ್ಲನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೨ ॥

೧೦೩೧

ಅಂತಃಕರಣಚತುಷ್ಟಯಂಗಳೆಂಬ
ನಾಲ್ಕು ಕಂಬದ ಗುಡಿಯ ಶಿಖರದ ಮೇಲೆ
ಪರಂಜ್ಯೋತಿಯೆಂಬ ಲಿಂಗವು ತೊಳಗಿ ಬೆಳಗುತ್ತಿತ್ತಯ್ಯ.

ಆ ಬೆಳಗಿನ ಸುಳುಹ ತಾನೇ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೩ ॥

೧೦೩೨

ಒಂದು ಗುಡಿಯೊಳಗೆ ಮೂರು ಲಿಂಗವ ಕಂಡೆನಯ್ಯ.
ನವಗ್ರಹಂಗಳ ಮೀರಿ ನಿಂದಿರುವ ಪುರುಷನ ಕಂಡು
ಎನ್ನ ಮನದ ಭ್ರಾಂತು ಹಿಂಗಿತು ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೪ ॥

೧೦೩೩

ಕರ್ಮವೆಂಬ ಕತ್ತಲೆಯಲ್ಲಿ ಒಬ್ಬ ಮಾನವನು
ವರ್ಮಗೆಟ್ಟು ಬಿದ್ದಿರುವುದ ಕಂಡೆನಯ್ಯ.
ಧರ್ಮವೆಂಬ ಗುರುವು ನಿರ್ಮಳವೆಂಬ ಚಬಕ ಹಾಕಲು,
ಕರ್ಮವೆಂಬ ಕತ್ತಲೆ ಹರಿದು, ವರ್ಮವೆಂಬ ದಾರಿಯನೇರಿ,
ಧರ್ಮವೆಂಬ ಗುರುವ ಕೂಡಿ
ನಿರವಯವೆಂಬ ಕರಸ್ಥಲದಲ್ಲಿ ನಿಂದಿರುವ ಬೆಡಗ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೫ ॥

೧೦೩೪

ಆಕಾರ ನಿರಾಕಾರವಿಲ್ಲದಂದಿನ
ಋತುವಡಗಿದ ಲಿಂಗವು ನೆನೆದ ಕಾರಣ,
ನಿರ್ಮಾಯವೆಂಬ ಸತಿಯಳು ಹುಟ್ಟಿದಳು ನೋಡಾ !
ಆಕೆಯ ಅಂಗದಲ್ಲಿ ಮೂವರು ಹುಟ್ಟಿದರು ನೋಡಾ !
ಆರು ದೇಗುಲವ ಕಟ್ಟಿಸಿ, ನವಗ್ರಹಗಳ ಮೀರಿ ನಿಂದಿರುವ ಸತಿಯಳ ಕಂಡು
ಎನ್ನ ಮನಕ್ಕೆ ನಿಶ್ಚಿಂತವಾಯಿತ್ತು ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೬ ॥

೧೦೩೫

ಒಂಬತ್ತು ಬಾಗಿಲ ಮನೆಯೊಳಗೆ ಆರು ಮೂರು ಕೋಣೆಯ ಮುಂದೆ
ಒಂದು ಲಿಂಗವ ಕಂಡೆನಯ್ಯ.
ಆ ಲಿಂಗದ ಕಿರಣವ ಒಬ್ಬ ಸತಿಯಳು ಕಂಡು ತನ್ನ ಪುತ್ರಂಗೆ ಹೇಳಲು
ಆ ಪುತ್ರನು ನಿರಾಮಯವೆಂಬ ಕರಸ್ಥಲದಲ್ಲಿ ನಿಂದು ರಾಜಿಸುತಿರ್ಪ ನೋಡಾ !
ಆ ಕರಸ್ಥಲದ ಮೇಲೆ ಒಂದು ಲಿಂಗವ ಕಂಡೆನಯ್ಯ.

ಆ ಲಿಂಗದ ಸಂತತಿಯಲ್ಲಿ ಮೂವರು ಪೂಜಾರಿಗಳು
ಲಿಂಗಾರ್ಚನೆಯ ಮಾಡುತಿರ್ಪರು ನೋಡಾ !
ಊರೊಳಗಣ ಸತಿಯಳು ಒಂಬತ್ತು ಸೋಪಾನಂಗಳನೇರಿ
ಮಂಗಳಾರತಿಯನೆತ್ತಿ ಆ ಲಿಂಗಕ್ಕೆ ಬೆಳಗುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೭॥

೧೦೩೬

ಆರು ಮೂರು ಕೇರಿಯ ಮುಂದೆ ಸುಳಿದಾಡುವ
ತಾಯ ಅಂಗದಲ್ಲಿ ಒಬ್ಬ ಬಾಲಕ ಹುಟ್ಟಿ,
ನೆನವೆಂಬ ಸತಿಯಳ ಕೂಡಿಕೊಂಡು, ಸಪ್ತಸಾಗರವ ದಾಂಟಿ,
ಅಷ್ಟಕುಲಪರ್ವತವ ಮೆಟ್ಟಿ, ಒಂಬತ್ತು ಬಾಗಿಲ ಮುಂದೆ
ನಡೆದು ಹೋಗುವ ಕಳ್ಳನನಟ್ಟಿ
ಮುಂದಳ ಮೇರುವೆಯಲ್ಲಿ ಹಿಡಿದು ಒಪ್ಪಿಸಿಕೊಟ್ಟು,
ಆ ನೆನವೆಂಬ ಸತಿಯಳ ಬಯಲು ನುಂಗಿ
ಆ ಬಾಲಕನು ತಾಯ ಅಂಗವ ಪೊಕ್ಕನು.
ಮೇಲೆ ಒಬ್ಬ ಪುರುಷನು ಹಿಡಿದುದ ಸೋಜಿಗವ ಕಂಡು
ಓಂ ನಮೋ ಓಂ ನಮೋ ಎನುತಿರ್ದನಯ್ಯ ನಿಮ್ಮ ಶರಣ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೮ ॥

೧೦೩೭

ಘನದ ಮೇಲೊಂದು ಇರುವೆಯ ಕಂಡೆನಯ್ಯ.
ಆ ಇರುವೆಯೊಳಗೊಬ್ಬ ಭಾಮಿನಿಯ ಕಂಡೆನಯ್ಯ.
ಆ ಭಾಮಿನಿಯ ಸಂಗದಿಂದ ಒಬ್ಬ ಬೇಂಟೆಕಾರ ಹುಟ್ಟಿ,
ಇಪ್ಪತ್ತೈದು ಗ್ರಾಮಂಗಳ ಕಾಯ್ದುಕೊಂಡಿರ್ಪನು ನೋಡಾ !
ಆ ಬೇಂಟೆಕಾರನ ಬಯಲು ನುಂಗಿತ್ತು ನೋಡಾ !
ಆ ಭಾಮಿನಿಯ ನಿರ್ವಯಲು ನುಂಗಿತ್ತು ನೋಡಾ !
ಅಂಗವಿಲ್ಲದ ಬಾಲೆಯು ಇದೇನು ವಿಚಿತ್ರವೆಂದು ನೋಡುತಿರ್ಪಳಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೭೯ ॥

೧೦೩೮

ಒಂದು ಲಿಂಗದ ಸಂಗದಿಂದ ಒಬ್ಬ ಭಾಮಿನಿಯು ಹುಟ್ಟಿದಳು ನೋಡಾ!
ಆಕೆಯ ಒಡಲಲ್ಲಿ ಸ್ವರ್ಗ ಮರ್ತ್ಯ ಪಾತಾಳವ ಕಂಡೆನಯ್ಯ.
ಈರೇಳುಭುವನ ಹದಿನಾಲ್ಕು ಲೋಕಂಗಳ ಕಂಡೆನಯ್ಯ.

ಅಷ್ಟಕುಲಪರ್ವತವ ಕಂಡೆನಯ್ಯ.
ಸಪ್ತೇಳು ಸಾಗರವ ಕಂಡೆನಯ್ಯ.
ಹತ್ತು ಮೇರುವೆಯ ಮೀರಿ, ಕಡೆಯ ಬಾಗಿಲ ಮುಂದೆ ನಿಂದಿರುವುದ ಕಂಡೆನಯ್ಯ.
ಅಲ್ಲಿಂದತ್ತತ್ತ ತನ್ನ ಗಮನವ ತಾನೇ ನುಂಗಿ,
ನಿರ್ವಯಲಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೮೦ ||

೧೦೩೯

ನವದ್ವಾರಬೀದಿಗಳಲ್ಲಿ ಸುಳಿದಾಡುವ ಹಂಸನ ಕೊರಳಲ್ಲಿ
ಇಪ್ಪತ್ತೈದು ಗ್ರಾಮಗಳ ಕಟ್ಟಿ ತೂಗುತದೆ ನೋಡಾ !
ಸಮುದ್ರವೆಂಬ ಘೋಷದಲ್ಲಿ ಒಂದು ಕಪ್ಪೆ ಕುಳಿತು
ಆ ಹಂಸನ ನುಂಗಿ ಕೂಗುತಿದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೮೧ ||

೧೦೪೦

ಉಲುವಡಗಿದ ಮರದ ಮೇಲೆ ಒಬ್ಬ ಸತಿಯಳು ನಿಂದು
ಫಲವ ಮಾರುತಿಪ್ಪಳು ನೋಡಾ !
ಆ ಫಲವ ಕೊಳ್ಳಹೋಗದ ಮುನ್ನ, ಆತನ ನುಂಗಿ
ತನ್ನ ಸುಳುವ ತಾನೇ ತೋರುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೮೨ ||

೧೦೪೧

ಪೃಥ್ವಿಯೊಳಗಣ ಬಾಲಿಂಗೆ
ಇಪ್ಪತ್ತೈದು ಯುವತೇರು ವಿಶ್ವಾಸವಂ ಮಾಡುತಿಪ್ಪರು ನೋಡಾ !
ಅವರಿಂಗೆ ಹತ್ತೆಂಟು ಮುಖದೋರಿ
ಈ ಜಗವನೆಲ್ಲಾ ಏಡಿಸ್ಯಾಡುತಿರ್ಪರು ನೋಡಾ !
ಆದಿಯಲ್ಲಿ ಒಬ್ಬ ದೇವ ಬಂದು, ಹತ್ತೆಂಟು ಮುಖವ ಕೊಯ್ಯಲು,
ಇಪ್ಪತ್ತೈದು ಯುವತೇರು ಬಿಟ್ಟು ಹೋದರು ನೋಡಾ !
ಆ ಪೃಥ್ವಿಯೊಳಗಣ ಬಾಲೆಯ ಹಿಡಿದು
ಪೃಥ್ವಿಂಗೆ ವರಿಸಿ ಭೂಮಂಡಲದೇವನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೧೮೩ ||

೧೦೪೨

ಮೂರು ರತ್ನದ ಒಂದು ಲಿಂಗವ ಕಂಡೆನಯ್ಯ.
ಆ ಲಿಂಗದ ಕಿರಣದೊಳಗೆ
ಇಪ್ಪತ್ತೈದು ಕಂಬದ ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಮನೋಹರನೆಂಬ ಪೂಜಾರಿಯು
ಘನತರವೆಂಬ ಲಿಂಗಾರ್ಚನೆಯ ಮಾಡುತಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೮೪ ॥

೧೦೪೩

ಐದು ಎಲೆಯ ಮಂಟಪದ ಮೇಲೆ
ಒಂದು ಲಿಂಗದ ಗುಡಿಯ ಕಂಡೆನಯ್ಯ.
ಆ ಗುಡಿಯೊಳಗೆ ಒಬ್ಬ ಸತಿಯಳು ನಿಂದು
ತನ್ನ ಸುಳುವಿನ ಭೇದವ ತಾನೇ ನೋಡುತಿರ್ಪಳು ನೋಡಾ !
ಮೇಲಿಂದ ಒಬ್ಬ ಪುರುಷನು ಆ ಸತಿಯಳ ಕೈವಿಡಿದು
ನಿರ್ವಯಲಾದನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೮೫ ॥

೧೦೪೪

ಪ್ರಥಮಕಾಲದಲ್ಲಿ ನಿರವಯನೆಂಬ ಸತಿಯಳಂಗದಲ್ಲಿ
ಒಬ್ಬ ಬಾಲಕ ಹುಟ್ಟಿ
ಮೂವತ್ತಾರು ಕೇರಿಯ ನೋಡಿ,
ಒಂಬತ್ತು ಬಾಗಿಲ ಸುತ್ತಿ,
ಕಡೆಯ ಬಾಗಿಲಲ್ಲಿ ನಿಂದು
ತನ್ನ ಸುಳುವ ತಾನೇ ನುಂಗಿದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೮೬ ॥

೧೦೪೫

ಓಂಕಾರವೆಂಬ ಲಿಂಗದಲ್ಲಿ ನುಡಿದಾಡುವನಾರಯ್ಯ ?
ನೋಡುವನಾರಯ್ಯ ? ಕೊಂಬುವನಾರಯ್ಯ ?
ಇಂತೀ ಭೇದವರಿತು ಸದಾಶಿವಲಿಂಗದಲ್ಲಿ ನೆಲೆಯಂಗೊಂಡು
ಐದು ಅಂಗವ ಗರ್ಭೀಕರಿಸಿಕೊಂಡು ಈಶ್ವರನೆಂಬ ಮೆಟ್ಟಿಗೆಯ ಮೆಟ್ಟಿ
ಬ್ರಹ್ಮ ವಿಷ್ಣು ರುದ್ರಾದಿಗಳೆಂಬ ಭವಸಾಗರವ ಹರಿದು
ಒಂಬತ್ತು ನೆಲೆಯ ಮೇಲೆ ನಡೆದು ಹೋಗುವ

ಗಂಭೀರ ನಿರವಯನೆಂಬ[ನ] ಸತಿಯಳುವಿಡಿದು
ಎಂತಿರ್ದಂತಿರ್ದಳು ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೧೮೭ ॥

೧೦೪೬

ನವಸಾಗರದ ಮುಂದೆ ಕಪ್ಪೆ ಕೂಗುತಿದೆ ನೋಡಾ !
ಆ ಕೂಗ ಕೇಳಿ ನಾಗಲೋಕದಲ್ಲಿರ್ದ ಸರ್ಪನು
ನವಸಾಗರವ ಹಾರಿ, ಆ ಕಪ್ಪೆಯನು ನುಂಗಿ,
ತನ್ನ ಸುಳುಹ ತಾನೇ ತೋರುತ್ತಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೮೮ ॥

೧೦೪೭

ಊರೊಳಗಣ ಮಾನವನು
ಮೇರುವೆಯೊಳಗಣ ಸೂಳೆಯ ಸಂಗವ ಮಾಡಲು
ಆ ಸೂಳೆಯ ಬಸುರಲ್ಲಿ ಪಂಚಮುಖದ ಬಾಲಕ ಹುಟ್ಟಿ,
ನಿರವಯವೆಂಬ ಕರಸ್ಥಲದ ಮೇಲೆ ನಿಂದು
ರಾಜಿಸುತಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೮೯ ॥

೧೦೪೮

ಮಹಾಮೇರುವೆಂಬ ಪಟ್ಟಣದರಸಂಗೆ ಮೂರು ಪ್ರಧಾನಿಗಳು,
ಆರು ಮಂದಿ ವಜೀರರು, ಮೂವತ್ತಾರು ಮಂದಿ ಸರದಾರರು,
ಐವತ್ತೆರಡು ಮಂದಿ ಮಹಾಲದಾರರು ಕೂಡಿ
ಕತ್ತಲ ಕಾಳಂಧವೆಂಬ ದೇಶವನು
ಕಾಳಗವ ಮಾಡಿ ತಕ್ಕೊಂಬುವುದ ಕಂಡೆನಯ್ಯ.
ಅದು ಹೇಗೆಂದಡೆ:
ಹತ್ತುಲಕ್ಷ ರಾವುತರ ಹಿಡಿದು,
ಎಂಟು ಸಾವಿರ ಕುದುರೆಗಳ ಹಿಡಿದು,
ಅರವತ್ತು ಕೋಟಿ ಕಾಲಮಂದಿಯ ಸಂದಿಸಂದಿನಲ್ಲಿ ನಿಲಿಸಿ,
ಸಪ್ತೇಳುಸಾಗರವ ದಾಂಟಿ, ಕತ್ತಲಕಾಳಂಧವೆಂಬ ದೇಶವನು,
ಕೈಸೆರೆಯ ಮಾಡಿಕೊಂಡು,
ಐದು ಠಾಣ್ಯವ ಬಲಿದು, ಕಡೆಯ ಠಾಣ್ಯದ ಮುಂದೆ
ಚಾವಡಿಯ ರಚಿಸುವುದ ಕಂಡೆನಯ್ಯ.
ಅದು ಹೇಗೆಂದಡೆ:
ಅದಕೆ ಕಂಬ ಒಂದು, ತೊಲೆ ಮೂರು,

ಆರು ಜಂತಿಗಳು, ಮೂವತ್ತಾರು ನೆಲೆಗಳ ಹೂಡಿ.
ಒಂಬತ್ತು ಬಾಗಿಲಲ್ಲಿ ನವ ಬೊಂಬೆಗಳ ನಿಲಿಸಿ,
ಅವಕ್ಕೆ ನವರತ್ನವ ಕೆತ್ತಿಸಿ, ಐದು ತೊಂಡಲಂಗಳ ಕಟ್ಟಿ,
ಹವಳ ನೀಲ ರತ್ನ ಧವಳ ಮುತ್ತು ಮಾಣಿಕ್ಯದ ಗದ್ದುಗೆಯ ಮೇಲೆ
ಆ ಅರಸನ ಮೂರ್ತಂಗೊಳಿಸಿ, ಸಪ್ತದ್ವೀಪಂಗಳಂ ರಚಿಸಿ,
ಸೋಮವೀದಿ ಸೂರ್ಯವೀದಿಯ ಶೃಂಗಾರವ ಮಾಡಿ,
ಆ ಅರಸಿಂಗೆ ಒಡ್ಡೋಲಗವಂ ಮಾಡುವುದ ಕಂಡೆನಯ್ಯ.
ಅದು ಹೇಗೆಂದಡೆ :
ಪಾತಾಳಲೋಕವೆಂಬ ಠಾಣ್ಯದಲ್ಲಿ
ತಾಳ, ಕಂಸಾಳ, ಘಂಟೆ, ಜಾಗಟೆ ಮೊದಲಾದ ಶಬ್ದಂಗಳು,
ಮರ್ತ್ಯಲೋಕವೆಂಬ ಠಾಣ್ಯದಲ್ಲಿ
ಕಿನ್ನರವೇಣು ತಂಬೂರವೇಣು ಕೈಲಾಸವೇಣುಗಳು ಮೊದಲಾದ ಶಬ್ದಗಳು,
ಸ್ವರ್ಗಲೋಕವೆಂಬ ಠಾಣ್ಯದಲ್ಲಿ
ಭೇರಿ ಡಮರು ತುಡುಮೆ ಡಿಂಡಿಮ ಮೊದಲಾದ ಶಬ್ದಂಗಳು,
ತತ್ಪುರುಷವೆಂಬ ಲೋಕದಲ್ಲಿ,
ಕೊಳಲು ನಾಗಸ್ವರ ಶಂಖ ಸನಾಯ ಬುರುಗು ನಪಿರಿ
ಹೆಗ್ಗಾಳೆ ಚಿನಿಗಾಳೆ ಚಂದ್ರಗಾಳೆ ಮೊದಲಾದ ಶಬ್ದಂಗಳು,
ಈಶಾನ್ಯಲೋಕವೆಂಬ ಠಾಣ್ಯದಲ್ಲಿ
ಗೀತಪ್ರಬಂಧ ರಾಗಭೇದ ಮೊದಲಾದ ಶಬ್ದಂಗಳು,
ಇಂತಿವು ಆ ಅರಸಿಂಗೆ ಒಡ್ಡೋಲಗವ ಮಾಡುವುದ ಕಂಡೆನಯ್ಯ.
ಬ್ರಹ್ಮಂಗೆ ತಾಳ, ವಿಷ್ಣುವಿಂಗೆ ವೇಣು, ರುದ್ರಂಗೆ ಮೃದಂಗ,
ಈಶ್ವರಂಗೆ ಉಪಾಂಗ, ಸದಾಶಿವಂಗೆ ಗಾಯನ-
ಇಂತೀ ಐವರು ಆ ಅರಸಿಂಗೆ ಗಂಧರ್ವರಾಗಿರ್ಪರು ನೋಡಾ.
ಆದಿಶಕ್ತಿ ಮಂತ್ರಶಕ್ತಿ ಕ್ರಿಯಾಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ
ಇಂತೈವರು ನಾಂಟ್ಯವನಾಡುತಿರ್ಪರು ನೋಡಾ.
ಒಬ್ಬ ಸತಿಯಳು ಆ ಅರಸಿಂಗೆ ಸಜ್ಜನವೆಂಬ ಮಜ್ಜನವ ನೀಡಿ,
ಅಂತರಂಗದ ಬೆಳಗಿನ ಮಹಾಚಿದ್ವಿಭೂತಿಯಂ ಧರಿಸಿ,
ನಿರ್ಮಲವೆಂಬ ಗಂಧವನೊರೆದು, ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ, ನಿರ್ದ್ವಂದ್ವವೆಂಬ ಧೂಪವ ತೋರಿ,
ಭಕ್ತನೆಂಬ ಅಡ್ಡಣಿಗೆಯ ಮೇಲೆ, ಮಹೇಶ್ವರನೆಂಬ ಹರಿವಾಣವನಿಕ್ಕಿ,
ಮಹಾಪ್ರಸಾದವ ನೆಲೆಯಂಗೊಂಡು, ಪ್ರಾಣಲಿಂಗಿಯೆಂಬ ತುಪ್ಪವನೆರೆದು,

ಶರಣನೆಂಬ ಸಕ್ಕರೆಯ ತಳೆದು,
ಆ ಅರಸಿಂಗೆ ನೈವೇದ್ಯವ ಮಾಡುತಿರ್ಪಳು ನೋಡಾ.
ನವರತ್ನದ ಹರಿವಾಣದೊಳಗೆ ಪಂಚಾರ್ತಿಯ ಮೇಲೆ ಏಕಾರ್ತಿಯನಿಕ್ಕಿ
ಪಂಚದೀಪಂಗಳ ರಚಿಸಿ,
ಆ ಅರಸಿಂಗೆ ಓಂ ನಮೋ ಓಂ ನಮೋ ಎಂದು ಬೆಳಗುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೦ ॥

೧೦೪೯

ನಾನು ಇಲ್ಲದಂದು, ನೀನು ಇಲ್ಲದಂದು,
ತಾನುತಾನೆಂಬುದು ನೆನಪಿಂಗೆ ಬಾರದಂದಿಗೆ
ಒಬ್ಬ ಮೂರ್ತಿ ಓಂ ಎಂಬ ದಾರಿ ಹಿಡಿದು ಬಂದು
ಸದಾಶಿವನೆಂಬ ಕಳ್ಳನ ನಿಟಿಲಮುಂದಳ ಚಾವಡಿಯಲ್ಲಿ ಹಿಡಿದು
ಲಿಂಗಧ್ಯಾನವ ಮಾಡುತಿರ್ಪನು ನೋಡಾ !
ಪಶ್ಚಿಮದಿಶೆಯಲ್ಲಿ ನಿರಂಜನಗಣೇಶ್ವರ ನಿಂದು,
ಒಳಹೊರಗೆ ಪರಿಪೂರ್ಣವಾಗಿ, ಕಿರಣವ ಸೂಸುತಿರ್ಪನು ನೋಡಾ !
ಆ ಕಿರಣದ ಸುಳುವಿನ ಭೇದವನರಿತು
ಸಪ್ತೇಳು ಸಾಗರವ ದಾಂಟಿ ಅಷ್ಟಕುಲಪರ್ವತವ ಮೆಟ್ಟಿ,
ಒಂಬತ್ತು ಬಾಗಿಲ ದೇಗುಲವ ಸುತ್ತಿ, ಕಡೆಯ ಬಾಗಿಲಲ್ಲಿ ನಿಂದು,
ತನ್ನ ಮನವ ತಾನೇ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೯೧ ॥

೧೦೫೦

ಪ್ರಣವಪಂಚಾಕ್ಷರಿಯೆಂಬ ಕೊನೆಯ ಮೇಲೆ
ಅಣಿಮಾಯಾಲಿಂಗವು ಸರ್ವ ಬ್ರಹ್ಮಾಂಡವ ಗರ್ಭೀಕರಿಸಿಕೊಂಡು
ತನ್ನ ನಿಜವ ತಾನೇ ತೋರುತ್ತಿತ್ತು ನೋಡಾ !
ಆ ನಿಜವ ಈ ಲೋಕದವರು ಆರಾದಡೆಯು ಅರಿಯಬಲ್ಲರೇನಯ್ಯ ?
ಬ್ರಹ್ಮ ವಿಷ್ಣು ರುದ್ರಾದಿಗಳಿಗೆ ಅಗೋಚರವೆನಿಸಿತ್ತು ನೋಡಾ.
ಇದು ಕಾರಣ ಅಂಗಕರಣವನಳಿದು ಲಿಂಗಕಿರಣವಾದ ಶರಣನು
ಆ ನೆನವನರಿಯಬಲ್ಲನಯ್ಯ; ಸರ್ವ ಬ್ರಹ್ಮಾಂಡವ ನೋಡಬಲ್ಲನಯ್ಯ;
ಅಣಿಮಾಯಾಲಿಂಗವ ಕೂಡಬಲ್ಲನಯ್ಯ,
ಝೇಂಕಾರ ನಿಜಲಿಂಗಪ್ರಭುವೆ, ನಿಮ್ಮ ಶಿವಶರಣನು. ॥ ೯೨ ॥

೧೦೫೧

ನಾದಮೂರ್ತಿಗಳು ತಮ್ಮ ನಿಲವು ಕಾಣಬಾರದಂದಿಗೆ,
ಬಿಂದುಮೂರ್ತಿಗಳು ನೆಲೆಗೊಳ್ಳದಂದಿಗೆ,
ಕಲಾಮೂರ್ತಿಗಳು ತಮ್ಮ ಪ್ರಕಾಶದೋರದಂದಿಗೆ,
ಅತ್ತತ್ತಲೆ ತಾನೇ ಲಿಂಗವಾಗಿರ್ದನಯ್ಯ.
ತನ್ನ ನೆನವಿನಿಂದ ಒಬ್ಬ ಸತಿಯಳು ಪುಟ್ಟಿದಳು ನೋಡಾ !
ಆಕೆಯ ಸಂಗದಲ್ಲಿ ಐವರು ಕನ್ನೆಯರ ಕಂಡೆನಯ್ಯ.
ಆ ಐವರು ನವರತ್ನದ ಹರಿವಾಣದೊಳಗೆ ಪಂಚಾರ್ತಿಯ ಮೇಲೆ
ಏಕಾರ್ತಿಯನಿಕ್ಕಿ ಪಂಚದೀಪವ ರಚಿಸಿ,
ಆ ಲಿಂಗಕ್ಕೆ ಓಂ ನಮೋ ಓಂ ನಮೋ ಓಂ ನಮೋಯೆಂದು
ಮಂಗಳಾರ್ತಿಯನೆತ್ತಿ ಬೆಳಗುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೩॥

೧೦೫೨

ಆವು ಹೋಗಿ ಆರುದಿನವೆಂಬುದ ನಾನು ಬಲ್ಲೆನಯ್ಯ.
ಕರು ಹೋಗಿ ಮೂರು ದಿನವೆಂಬುದ ನೀನು ಬಲ್ಲೆಯಯ್ಯಾ.
ಮೀರಿದಮನೆಯಲ್ಲಿ ತಾನು ತಾನೆಂಬುದ ತಾನೆ ಬಲ್ಲನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೪ ॥

೧೦೫೩

ಒಂಬತ್ತು ತಲೆಯ ಮೇಲೆ ಶಂಭುಲಿಂಗದ ಗುಡಿಯ ಕಂಡೆನಯ್ಯ.
ಆ ಗುಡಿಯೊಳಗೆ ಒಬ್ಬ ಸತಿಯಳು
ತನ್ನ ಸುಳುವ ತಾನೆ ತೋರುತಿರ್ಪಳು ನೋಡಾ !
ಒಬ್ಬ ಮಾನವನು ಸುಳುವಿನ ಭೇದವನರಿತು
ನೆನವೆಂಬ ಸತಿಯಳ ಕೂಡಿಕೊಂಡು
ಆ ಗುಡಿಯ ಪೊಕ್ಕು ಲಿಂಗಾರ್ಚನೆಯ ಮಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೫ ॥

೧೦೫೪

ಆರು ಕೋಟೆಯಮೇಲೆ ಮೂರು ಕೊತ್ತಳವ ಕಂಡೆನಯ್ಯ,
ಮೂರು ಕೊತ್ತಳದ ಮೇಲೆ
ಒಬ್ಬ ತಳವಾರನು ಆ ಊರ ಕಾವುತಿರ್ಪನು ನೋಡಾ,

ಆ ತಳವಾರನ ಹೆಜ್ಜೆಯತ್ತ ನೋಡಲು ಹೆಜ್ಜೆ ಹೋದವು
ಸಂಗಸಂಯೋಗವೆಂಬ ಲಿಂಗದ ಗುಡಿಗೆ,
ಆ ಹೆಜ್ಜೆಯನರಿವ ಶರಣರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೬ ॥

೧೦೫೫

ಕಾಯವಿಲ್ಲದ ಹೆಂಗೂಸು ಬಸುರಿಲ್ಲದ ಮಗನ ಹಡೆದು
ಅಂಗನೆಯರ ಆರು ಮಂದಿಯ ಕರೆದು
ಲಿಂಗವೆಂಬ ತೊಟ್ಟಿಲೊಳಗೆ ಆ ಮಗನ ಮಲಗಿಸಿ
ಜೋಗುಳಮಂ ಪಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೭ ॥

೧೦೫೬

ದಶನಾದಗಳು ಇಲ್ಲದಂದು, ಸುನಾದಗಳು ನೆಲೆಗೊಳ್ಳದಂದು,
ಝೇಂಕಾರವು ಮೊನೆದೋರದಂದು,
ಅತ್ತತ್ತಲೆ ನಿಶ್ಚಿಂತ ನಿರಾಕುಳನಾಗಿದ್ದನಯ್ಯ.
ತನ್ನ ನೆನವಿನ ಮಂತ್ರದಲ್ಲಿ ಓಂಕಾರನೆಂಬ ಮೂರ್ತಿಯಾದನಯ್ಯ.
ಆ ಓಂಕಾರನೆಂಬ ಮೂರ್ತಿಂಗೆ ಚಿಚ್ಛಕ್ತಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ಪರಶಿವನಾದ.
ಆ ಪರಮಶಿವಂಗೆ ಪರಾಶಕ್ತಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ಸದಾಶಿವನಾದ,
ಆ ಸದಾಶಿವಂಗೆ ಜ್ಞಾನಶಕ್ತಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ಈಶ್ವರನಾದ,
ಆ ಈಶ್ವರಂಗೆ ಇಚ್ಛಾಶಕ್ತಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ರುದ್ರನಾದ,
ಆ ರುದ್ರಂಗೆ ಕ್ರಿಯಾಶಕ್ತಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ವಿಷ್ಣುವಾದ,

ಆ ವಿಷ್ಣುವಿಂಗೆ ಲಕ್ಷ್ಮಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ಬ್ರಹ್ಮನಾದ,
ಆ ಬ್ರಹ್ಮಂಗೆ ಸರಸ್ವತಿಯ ಸಂಬಂಧಿಸಿ
ಧಾರೆಯನೆರೆದರಯ್ಯ.
ಅವರಿಬ್ಬರಿಗೂ ನರಲೋಕಾದಿ ಲೋಕಂಗಳು ಆದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೮ ॥

೧೦೫೭

ನಾನೇಯೆಂದು ವಾದಿಸದಂದು, ಓಂಯೆಂದು ಓಂಕರಿಸದಂದು,
ಝೇಯೆಂದು ಝೇಂಕರಿಸದಂದು,
ಅತ್ತತ್ತಲೇ ಶೂನ್ಯ ನಿಃಶೂನ್ಯ ನಿರಾಳಭರಿತನಾಗಿದ್ದೆಯಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೯೯ ॥

೧೦೫೮

ಜೀವಾತ್ಮ ಅಂತರಾತ್ಮ ಪರಮಾತ್ಮಯೆಂಬ ಭೇದವ ತಿಳಿದು
ನಿಶ್ಚಿಂತ ನಿರಾಕುಳದ ಮೇಲೆ ನಿಂದು ನೋಡಲು
ನಿರ್ವಯಲಿಂಗವು ಘೋಷಿಸುತಿರ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೦೦ ॥

೧೦೫೯

ನಾದಲಕ್ಷವ ನೋಡಿದರೇನಯ್ಯ ?
ಬಿಂದುಲಕ್ಷವ ನೋಡಿದರೇನಯ್ಯ ?
ಕಲಾಲಕ್ಷವ ನೋಡಿದರೇನಯ್ಯ ?
ಇಂತಿವನೊಳಗೊಂಡು ಪರಬ್ರಹ್ಮವೆಂಬ ಲಕ್ಷವ ನೋಡಬಲ್ಲಾತನೆ
ನಿಮ್ಮ ಲಿಂಗೈಕ್ಯ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೦೧ ॥

೧೦೬೦

ನಾದಲಕ್ಷವ ನೋಡಿದೆನೆಂದು, ಬಿಂದುಲಕ್ಷವ ಕಂಡೆನೆಂದು,
ಕಲಾಲಕ್ಷವ ಕಂಡೆನೆಂದು,
ಆತ್ಮದಳವನುಂಟುಮಾಡಿಕೊಂಡು ಪೂಜ್ಯರಾದೆವೆಂದು ನುಡಿದಾಡುವಿರಿ.
ಇದು ಅಲ್ಲ ಬಿಡಿರೊ.

ನಾದಬಿಂದುಕಲಾತೀತವೆಂಬ ಲಿಂಗದಲ್ಲಿ ಕೂಡಿ
ಪೂಜ್ಯನಾಗಬಲ್ಲಾತನೆ ನಿಮ್ಮ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೦೨ ॥

೧೦೬೧

ಭೂಮಿಯಿಲ್ಲದ ಪೃಥ್ವಿಯ ಕಂಡೆನಯ್ಯ.
ನೀರು ಇಲ್ಲದ ಸಮುದ್ರವ ಕಂಡೆನಯ್ಯ.
ಅಗ್ನಿಯಿಲ್ಲದ ಒಲೆಯ ಕಂಡೆನಯ್ಯ.
ವಾಯುವಿಲ್ಲದ ಮರನ ಕಂಡೆನಯ್ಯ.
ಆಕಾಶವಿಲ್ಲದ ಬಯಲ ಕಂಡೆನಯ್ಯ.
ಆತ್ಮನಿಲ್ಲದ ಜ್ಞಾನವ ಕಂಡೆನಯ್ಯ.
ಸೂರ್ಯನಿಲ್ಲದ ಪ್ರಕಾಶವ ಕಂಡೆನಯ್ಯ.
ಚಂದ್ರನಿಲ್ಲದ ಚಿದ್ರೂಪವ ಕಂಡೆನಯ್ಯ.
ನಾದವಿಲ್ಲದ ಸುನಾದವ ಕಂಡೆನಯ್ಯ.
ಇದು ಕಾರಣ, ಬಯಲಿಂಗೆ ಬಯಲು
ನಿರ್ವಯಲನೈದಿದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೦೩ ॥

೧೦೬೨

ಮೂರು ಮುಖದ ಸೂಳೆ, ಆರನೆಯ ಸ್ಥಳದಲ್ಲಿ ನಿಂದು
ಬೇರೆ ಒಬ್ಬಳ ಕೂಡಿಕೊಂಡು
ಆರು ಕೇರಿಯ ಹೊಕ್ಕು ನೋಡುತಿರಲು,
ಆ ಕೇರಿಗಳಲ್ಲಿ ಭಕ್ತಾಂಗನೆ ಉದಯವಾದಳು ನೋಡಾ.
ಆ ಭಕ್ತಾಂಗನೆಯ ಸಂಗದಿಂದ ನಾಲ್ಕು ಮೂರ್ತಿಗಳ ಕೂಡಿ
ಪರಕೆಪರವಾದ ಲಿಂಗವನಾಚರಿಸಿ
ಆ ಮೂರುಮುಖದ ಸೂಳೆಯ ನೆರೆಯಬಲ್ಲ ಹಿರಿಯರ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೦೪ ॥

೧೦೬೩

ಅಂಗದೊಳಗೊಂದು ಮಂಗಳದ ಹಕ್ಕಿ ಕುಳಿತಿಪ್ಪುದ ಕಂಡೆನಯ್ಯ.
ಆ ಹಕ್ಕಿಯ ಹಿಡಿದು ಹೋಗದ ಮುನ್ನ
ಅದು ಗಗನಕ್ಕೆ ಹಾರಿತ್ತು ನೋಡಾ!

ಹಕ್ಕಿ ಹೋಯಿತ್ತು ಲಿಂಗದ ಗುಡಿಗೆ.
ಮತ್ತೆ ಕಂಡನು ಒಬ್ಬ ತಳವಾರನು.
ಆ ತಳವಾರನು ಗದೆಯ ತಕ್ಕೊಂಡು ಇಡಲೊಡನೆ
ಮಂಗಳನೆಂಬ ಹಕ್ಕಿ ಬಿತ್ತು ನೋಡಾ!
ಇದ ನೀವಾರಾದಡೆ ಹೇಳಿರಯ್ಯ,
ನಾನಾದರೆ ಅರಿಯೆನು ಝೇಂಕಾರ ನಿಜಲಿಂಗಪ್ರಭುವೆ. || ೨೦೫ ||

೧೦೬೪

ಧ್ಯಾನ ಮೌನವ ನುಂಗಿರ್ದುದ ಕಂಡೆನಯ್ಯ.
ಮೌನ ಧ್ಯಾನವ ನುಂಗಿರ್ದುದ ಕಂಡೆನಯ್ಯ.
ಧ್ಯಾನ ಮೌನಂಗಳು ಇಲ್ಲದೆ
ತಾನು ತಾನೆ ನುಂಗಿರ್ದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೦೬ ||

೧೦೬೫

ಓಣಿಯೊಳಗೆ ಒಬ್ಬ ಬಾಣತಿ ಕುಳಿತು ಏಳೆಂಟನೆಣಿಸುತಿರ್ಪಳು ನೋಡಾ!
ಆದಿಯಲ್ಲಿ ಒಬ್ಬ ಮೂರ್ತಿ ಬಂದು, ಏಳೆಂಟು ಕೆಡಿಸಿ
ಆ ಬಾಣತಿಯ ಒಡಲ ಸೀಳಿ, ಶಿಶುವ ತಕ್ಕೊಂಡು
ಸಾಸಿರಕಂಬದ ಮನೆಯೊಳಗಿಟ್ಟು, ತಾನುತಾನಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೦೭ ||

೧೦೬೬

ಹೊರಗೆ ನೋಡಿದರೆ ಬಯಲು, ಒಳಗೆ ನೋಡಿದರೆ ಬಯಲು,
ಊರೊಳಗೆ ಆವು ಇಲ್ಲ, ಕೇರಿಯೊಳಗೆ ಕರುವು ಇಲ್ಲ.
ಊರು ಕೇರಿಗಳ ನುಂಗಿತ್ತು ಒಂದು ಇರುಹೆ.
ಇರುಹೆ ಹೋಯಿತ್ತು ತಾನು ತಾನಾದಲ್ಲಿಗೆ
ಝೇಂಕಾರ ನಿಜಲಿಂಗಪ್ರಭುವೆ. || ೨೦೮ ||

೧೦೬೭

ಒಳಗೆ ನೋಡಿದರೆ ತಾನೇ, ಹೊರಗೆ ನೋಡಿದರೆ ತಾನೇ.
ಒಳಗು ಹೊರಗ ನುಂಗಿತ್ತು, ಹೊರಗು ಒಳಗ ನುಂಗಿತ್ತು,
ಒಳಗೆ ಹೊರಗೆ ಇಲ್ಲದೆ ತಾನು ತಾನಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೦೯ ||

೧೦೬೮

ತಾನು ತಾನಾದಲ್ಲಿ ಒಬ್ಬ ಸತಿಯಳು
ನಿಶ್ಚಿಂತ ನಿರಾಕುಳನೆಂಬ ಲಿಂಗದಲ್ಲಿ
ನಿಷ್ಪತಿಯಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೦ ॥

೧೦೬೯

ಐವರು ಕನ್ನೆಯರು ಮೇರುವೆಯ ಗುಡಿಯ ಹತ್ತಿ
ತಮತಮಗೆ ಲಿಂಗಾರ್ಚನೆಯ ಮಾಡುತಿರ್ಪರು ನೋಡಾ!
ಅವರಿಂಗೆ ಸ್ವಾನುಭಾವ ಉದಯದೋರಿ
ನಿಷ್ಪತಿಯಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೧ ॥

೧೦೭೦

ತಾಳಮರದ ಮೇಲೆ ಒಂದು ಕಪ್ಪೆ ಕುಳಿತು
ನವರತ್ನವ ನುಂಗಿ ಕೂಗುತಿದೆ ನೋಡಾ!
ಕೂಗಿ ಸಾಯದು, ಸತ್ತು ಕೂಗುವದು,
ಶಬ್ದವಡಗದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೨ ॥

೧೦೭೧

ನಾನು ಇಲ್ಲದೆ ನೀನು ಇಲ್ಲದೆ
ತಾನು ತಾನೆಂಬುದು ಇಲ್ಲದೆ
ಏನೇನೂ ಇಲ್ಲದೆ ಹೋಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೩ ॥

೧೦೭೨

ನಾನೆಂಬ ನಾದಗಳು ಇಲ್ಲದಂದು, ನೀನೆಂಬ ನಿನಾದಗಳಿಲ್ಲದಂದು,
ತಾನು ತಾನೆಂಬ ಅವಸ್ಥೆಗಳು ಇಲ್ಲದಂದು,
ಅತ್ತತ್ತಲೆ ನಿಶ್ಚಿಂತ ನಿರಾಕುಳನಾಗಿರ್ದೆಯಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೪ ॥

೧೦೭೩

ಕಾಡೊಳಗೆ ಒಬ್ಬ ಸೂಳೆ ಕುಳಿತು
ಆಡುವ ಮೂವರ ಕೂಡಿಕೊಂಡು
ಆರುಕೇರಿಯ ಹೊಕ್ಕು, ಮೂರು ಮಂಟಪವನೇರಿ,
ಪರಕೆಪರವಾದ ಲಿಂಗಾರ್ಚನೆಯ ಮಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೫ ॥

೧೦೭೪

ಬತ್ತಲೆ ಬಯಲಾದ ಹೆಂಗಸು
ನಿತ್ಯವಾದ ಕೇರಿಗಳಲ್ಲಿ ಸುಳಿದಾಡುತಿಪ್ಪಳು ನೋಡಾ!
ಮೇಲಾದ ದಾರಿಯಲ್ಲಿ ಸಾಧಕನೆಂಬ ಮೂರ್ತಿ ಬಂದು
ಬತ್ತಲೆ ಬಯಲಾದ ಹೆಂಗಸ ನೆರೆದು
ನಿಶ್ಚಿಂತ ನಿರಾಕುಳವೆಂಬ ಲಿಂಗದಲ್ಲಿ ಅಡಗಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೬ ॥

೧೦೭೫

ಮೂರು ಕೊಂಬೆಯ ಮೇಲೆ,
ಕೋಗಿಲೆ ಕುಳಿತು ಕೂಗುತಿದೆ ನೋಡಾ.
ಆ ಕೋಗಿಲೆ ಕೂಗಿದ ನಾದಕ್ಕೆ
ಸಪ್ತೇಳುಸಾಗರಂಗಳು ಅರತಿದ್ದವು ನೋಡಾ.
ಸ್ವರ್ಗ ಮರ್ತ್ಯ ಪಾತಾಳಂಗಳು ಅಡಗಿರ್ದವು ನೋಡಾ.
ಅಷ್ಟಕುಲಪರ್ವತಂಗಳು ಕರಗಿದವು ನೋಡಾ.
ಈರೇಳುಭುವನ ಹದಿನಾಲ್ಕುಲೋಕಂಗಳೆಲ್ಲಾ ಬಯಲಾದವು ನೋಡಾ.
ಮೂರು ಕೊಂಬೆಗಳು ಅಳಿದುಹೋದವು ನೋಡಾ.
ನಿಶ್ಚಿಂತ ನಿರಾಕುಳನೆಂಬ ಗುಡಿಗೆ
ಆ ಕೋಗಿಲೆ ಹಾರಿಹೋಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೧೭ ॥

೧೦೭೬

ನವನಾಳಮಧ್ಯದಲ್ಲಿ ಅಷ್ಟದಳಪಟವ ಮೆಟ್ಟಿ ನಿಂದೆನಯ್ಯ.
ಹತ್ತು ವಾಜಿಯಂಗಳ ಏರಿ ಷೋಡಶ ಬಾಗಿಲ ದಾಂಟಿ
ನಾಡೊಳಗೆ ಏಕಲಿಂಗವ ಕಂಡು, ಭೇರಿ ಮೃದಂಗವ ನುಡಿಸಿ,

ನಿರಾಲಂಬಲಿಂಗದೊಳು ಬೆರದಿದ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೧೮ ||

೧೦೭೭

ಬಯಲಿಂಗೆ ಬಯಲಾದ ಮನೆಯಲ್ಲಿ ಮೂವರು ಮಕ್ಕಳು
ಆರು ಕೇರಿಯ ಹೊಕ್ಕು, ಶಿವಾಲಯ ಕಟ್ಟಿಸುವುದ ಕಂಡೆನಯ್ಯ.
ಅದು ಹೇಗೆಂದಡೆ :
ಅಂತಃಕರಣಚತುಷ್ಟಯಂಗಳೆಂಬ ನಾಲ್ಕು ಕಂಬವ ನಿಲಿಸಿ
ಇಪ್ಪತ್ತೈದು ಬೋದಂಗಳ ಭೇದಿಸಿ,
ಮಹಾಜ್ಞಾನವೆಂಬ ತೊಲೆ ಜಂತಿಗಳ ಹಮ್ಮಿ,
ಸಾವಯವೆಂಬ ಮೇಲುಮುದ್ದಿಯ ಹಾಕಿ
ಪರಬ್ರಹ್ಮವೆಂಬ ಶಿಖರದ ಮೇಲೆ ನಿಷ್ಪತಿಲಿಂಗವಿಪ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೧೯ ||

೧೦೭೮

ಜ್ಞಾನ ಜ್ಞಾತೃವಿನ ಮೇಲೆ ಒಂದು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೊಬ್ಬ ಭಾಮಿನಿಯು
ಲಿಂಗಾರ್ಚನೆಯ ಮಾಡುತಿರ್ದಳು ನೋಡಾ.
ಆ ಭಾಮಿನಿಯ ಸಂಗದಿಂದ ನಿರಂಜನದೇಶಕೆ ಹೋಗಿ
ನಿಶ್ಚಿಂತ ನಿರಾಕುಳ ನಿರ್ಭರಿತನಾದ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. || ೨೨೦ ||

೧೦೭೯

ಸ್ವರ್ಗ ಮರ್ತ್ಯ ಪಾತಾಳವ ಒಂದು ಹಂಸ ನುಂಗಿ,
ಗಗನಕ್ಕೆ ಹಾರಿ, ಚಿದಂಗನೆಯ ಸಂಗವ ಮಾಡುತಿಪ್ಪುದು ನೋಡಾ.
ಆ ಚಿದಂಗನೆಯ ಸಂಗದಿಂದ ಅವಿರಳ ಸ್ವಾನುಭವ ಸಿದ್ಧಾಂತವನರಿದು
ಪರಕೆ ಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೨೧ ||

೧೦೮೦

ಊರ ಮುಂದಳ ಪಾರಿಯಲ್ಲಿ ಸರ್ಪನು
ಬಾಲವ ಗಗನದಲ್ಲಿಟ್ಟು,
ಶಿರವ ನಾಗಲೋಕದಲ್ಲಿಟ್ಟು,

ಈರೇಳುಭುವನ ಹದಿನಾಲ್ಕು ಲೋಕಂಗಳ
ನುಂಗಿಕೊಂಡಿರ್ಪುದು ನೋಡಾ.
ಕಡೆಯ ಬಾಗಿಲಲ್ಲಿ ಗಾರುಡಿಗ ನಿಂದು,
ನಾಗಸ್ವರದ ನಾದವ ಮಾಡಲು
ಆ ನಾಗಸ್ವರವ ಕೇಳಿ ನಾಗಲೋಕದಿಂದ ಎದ್ದ ಸರ್ಪನು
ಆ ಗಾರುಡಿಗನ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೨ ॥

೧೦೪೧

ಬಿದುರಿನ ಮಲೆಯೊಳಗೆ ಚದುರೆರೊಂದ್ಯೆವರು ಇಪ್ಪರು ನೋಡಾ.
ಅವರಿಂಗೆ ಏಳು ಮಂದಿ ಗಂಡರು ಹುಟ್ಟಿ,
ಅಂಗಡಿ ರಾಜಬೀದಿಗಳನಿಕ್ಕಿ
ಭವಭಾರಂಗಳ ಮಾರುತಿರ್ಪರು ನೋಡಾ.
ಇದು ಕಾರಣ ಆದಿಯಲ್ಲಿ ಒಬ್ಬ ದೇವ ಬರಲಾಗಿ
ಅಂಗಡಿ ರಾಜಬೀದಿಗಳ ಮುಚ್ಚಿ
ಏಳು ಮಂದಿ ಗಂಡರು ಬಿಟ್ಟುಹೋದರು ನೋಡಾ.
ಆ ಚದುರೆರೊಂದ್ಯೆವರ ಹಿಡಿದು ಚಿದ್ರೂಪವಂ ಮಾಡಿ
ನಿರಾಲಂಬಲಿಂಗದೊಳು ಬೆರೆದಿದ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೩ ॥

೧೦೪೨

ಅರುವಿನ ಮನೆಯೊಳಗೆ ಕುರುವಾದ ಸೂಳಿಯು
ಐವರ ಕೂಡಿಕೊಂಡು ಒಂದು ಶಿವಾಲಯಕ್ಕೆ ಹೋಗಿ,
ಲಿಂಗಾರ್ಚನೆಯ ಮಾಡಿ ನಿಷ್ಪತಿಯಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೪ ॥

೧೦೪೩

ಅಂಗವೆಂಬ ಗದ್ದುಗೆಯ ಮೇಲೆ
ಸಂಗಮೇಶ್ವರನೆಂಬ ಲಿಂಗವ ಕಂಡೆನಯ್ಯ.
ಆ ಲಿಂಗದ ಸುಳುವಿನಲ್ಲಿ ಮೂವರ ಕಂಡೆನಯ್ಯ.
ಒಬ್ಬ ಸತಿಯಳು ಇಪ್ಪತ್ತೈದು ಗ್ರಾಮಂಗಳ ಮೀರಿ
ಸಂಗಮೇಶ್ವರನೆಂಬ ಲಿಂಗವ ಪೂಜಿಸುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೫ ॥

೧೦೮೪

ಸ್ವರ್ಗಮರ್ತ್ಯಪಾತಾಳವ ನುಂಗಿತ್ತಯ್ಯ ಒಂದು ಎರಳೆ.
ಆ ಎರಳೆಯ ಕೊಂಬಿನ ತುದಿಯ ಮೇಲೆ
ಅರವತ್ತು ಆರು ಕೋಟಿ ಪಟ್ಟಣಂಗಳು ಅಡಗಿರ್ದವು ನೋಡಾ.
ಒಬ್ಬ ತಳವಾರನ ಹೆಂಡತಿ ಹಾವಿನ ಸಿಂಬೆಯ ಮಾಡಿಕೊಂಡು,
ಬಯಲ ಕೊಡನ ತಕ್ಕೊಂಡು, ನೀರಿಲ್ಲದ ಬಾವಿಗೆ ಹೋಗಿ
ನೀರನೆ ಮೊಗೆವ ಸತಿಯಳ ಇರುವೆ ನುಂಗಿತ್ತು ನೋಡಾ.
ಆ ತಳವಾರನ ಸರ್ಪ ನುಂಗಿತ್ತು ನೋಡಾ.
ಇದೇನು ವಿಚಿತ್ರವೆಂದು ನಿಶ್ಚಿಂತನಿವಾಸಿಗಳಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೬ ॥

೧೦೮೫

ಕತ್ತಲೆಮನೆಯೊಳಗೆ ಒಬ್ಬ ಸೂಳೆ ನಾಲ್ವರ ಕೂಡಿಕೊಂಡು
ಹತ್ತೆಂಟು ಕೇರಿಗಳಲ್ಲಿ ಸುಳಿದಾಡುತಿರ್ಪಳು ನೋಡಾ.
ಮೇಲಣ ದಾರಿಯಲ್ಲಿ ಒಬ್ಬ ಕುಂಟಣಗಿತ್ತಿಯು ಬಂದು
ಆ ಸೂಳೆಯ ಕೈವಿಡಿಯಲು,
ಹತ್ತೆಂಟು ಕೇರಿಗಳು ಅಳಿದುಹೋದವು ನೋಡಾ.
ನಾಲ್ವರು ಬಿಟ್ಟು ಹೋದರು ನೋಡಾ.
ಆ ಸೂಳೆಯ ಕೂಡಿಕೊಂಡು ಒಂಬತ್ತು ಬಾಗಿಲ ಮುಂದೆ ನಿಂದು
ಪರಕೆ ಪರವಾದ ಲಿಂಗವನಾಚರಿಸುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೭ ॥

೧೦೮೬

ಒಬ್ಬ ಶಿವಶರಣನು ಶಿವರಾತ್ರಿಯಲ್ಲಿ
ನಿತ್ಯ ಶಿವಯೋಗವ ಮಾಡುವುದ ಕಂಡೆನಯ್ಯ.
ಅದು ಹೇಗೆಂದಡೆ: ಅರುಹೆಂಬ ಸಮ್ಮಾರ್ಜನೆಯ ಮಾಡಿ,
ಕುರುಹೆಂಬ ಗದ್ದುಗೆಯ ನೆಲೆಯಂಗೊಳಿಸಿ,
ಸುಜ್ಞಾನವೆಂಬ ರಂಗವಾಲಿಯ ತುಂಬಿ,
ಚಂದ್ರಸೂರ್ಯಾದಿಗಳೆಂಬ ದೀವಿಗೆಯ ಮುಟ್ಟಿಸಿ,
ಮಹಲಿಂಗವೆಂಬ ಮೂರ್ತಿಯಂ ನೆಲೆಯಂಗೊಳಿಸಿ,
ಆ ಲಿಂಗಕ್ಕೆ ಸಜ್ಜನವೆಂಬ ಮಜ್ಜನವಂ ನೀಡಿ,
ಅಂತರಂಗದ ಬೆಳಗಿನ ಮಹಾಚಿದ್ವಿಭೂತಿಯಂ ಧರಿಸಿ,

ನಿರ್ಮಳವೆಂಬ ಗಂಧವನೊರೆದು, ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ, ನಿರ್ದ್ವಂದ್ವವೆಂಬ ಧೂಪವ ತೋರಿ,
ಒಬ್ಬ ಮೂರ್ತಿ ನವರತ್ನದ ಹರಿವಾಣದಲ್ಲಿ
ಪಂಚಾರ್ತಿಯ ಮೇಲೆ ಏಕಾರ್ತಿಯನಿಕ್ಕಿ, ಪಂಚದೀಪಂಗಳ ರಚಿಸಿ,
ಆ ಲಿಂಗಕ್ಕೆ ಓಂ ನಮೋ ಓಂ ನಮೋ ಎಂದು ಬೆಳಗುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೮ ॥

೧೦೮೭

ನಾಲ್ಕು ಕಾಲುಳ್ಳ ಪಕ್ಷಿಂಗೆ ಆರು ರೆಕ್ಕೆಗಳುಂಟು,
ಮೂರು ಮುಖ, ಒಂದು ಕಣ್ಣು,
ದ್ವಂದ್ವವಾಗಿ ಕಾಣಬಲ್ಲವರಿಗೆ ಕಾಣಬಂದಿತ್ತಯ್ಯ.
ಕಾಣಲರಿಯದವರಿಂಗೆ ದೂರವಾಗಿತ್ತಯ್ಯ ಆ ಪಕ್ಷಿ
ಝೇಂಕಾರ ನಿಜಲಿಂಗಪ್ರಭುವೆ. ॥ ೨೨೯ ॥

೧೦೮೮

ಆರು ಕಂಬದ ಮೇಲೆ ಮೂರು ದೇಗುಲವ ಕಂಡೆನಯ್ಯ.
ಮೂರು ದೇಗುಲದ ಮೇಲೆ ಒಂದು ಶಿಖರವ ಕಂಡೆನಯ್ಯ.
ಆ ಶಿಖರವನೊಂದು ವಸ್ತು ಒಳಗೊಂಡಿರ್ಪುದು ನೋಡಾ.
ಆ ವಸ್ತುವಿನ ಕುರುಹ ನೀವಾರಾದರೆ ಹೇಳಿರಯ್ಯ; ನಾನೊಂದ ಅರಿಯೆನು.
ತಾನಾಗಿ ಕಾಣಬಲ್ಲವರಿಂಗೆ ಕಾಣಬಂದಿತ್ತಯ್ಯ.
ಕಾಣಲರಿಯದವರಿಂಗೆ ದೂರವಾಗಿತ್ತಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೦ ॥

೧೦೮೯

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಶಿವನೆಂಬ
ಆರು ತತ್ವದ ಮೇಲೆ ಮೀರಿದ ಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ಒಬ್ಬ ಸತಿಯಳು ತನ್ನ ಸುಳುವ ತಾನೇ ನುಂಗಿ
ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೧ ॥

೧೦೯೦

ಇಪ್ಪತ್ತೈದು ಕಂಬದ ಶಿವಾಲಯದೊಳಗೆ
ಒಬ್ಬ ಅಂಗನೆ, ಹದಿನೆಂಟು ಕೇರಿಗಳಲ್ಲಿ ಸುಳಿದಾಡುತಿರ್ಪಳು ನೋಡಾ.
ಮೇಲಣ ದಾರಿಯಲ್ಲಿ ಒಬ್ಬ ಕುಂಟಣಗಿತ್ತಿಯು ಬಂದು

ಆ ಅಂಗನೆಯ ಕೈಹಿಡಿದು ಹದಿನೆಂಟು ಕೇರಿಗಳ ಕೆಡಿಸಿ
ಇಪ್ಪತ್ತೈದು ಕಂಬದ ಶಿವಾಲಯವ ಮೀರಿ
ನಿಶ್ಚಿಂತ ನಿರಾಳಲಿಂಗದಲ್ಲಿ ಬೆರೆದಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೨ ॥

೧೯೧

ಐದು ತಲೆಯ ಮೇಲೆ ಒಂದು ದೇಗುಲವ ಕಂಡೆನಯ್ಯ.
ಆ ದೇಗುಲದೊಳಗೆ ಒಬ್ಬ ಭಾಮಿನಿಯು ಲಿಂಗಾರ್ಚನೆಯ ಮಾಡಿ
ನಿಃಪ್ರಿಯವಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೩ ॥

೧೯೨

ಜ್ಞಾನವೆಂಬ ಗದ್ದುಗೆಯ ಮೇಲೆ ಸದಮಲವೆಂಬ ಪಾವಡವ ಹಾಸಿ,
ಪರಬ್ರಹ್ಮವೆಂಬ ಲಿಂಗನ ಮೂರ್ತಿಗೊಳಿಸಿ,
ಆ ಲಿಂಗಕ್ಕೆ ಸಜ್ಜನವೆಂಬ ಮಜ್ಜನವ ನೀಡಿ,
ಅಂತರಂಗದ ಬೆಳಗಿನ ಮಹಾಚಿದ್ವಿಭೂತಿಯಂ ಧರಿಸಿ,
ನಿರ್ಮಲವೆಂಬ ಗಂಧವನೊರೆದು, ಸುಜ್ಞಾನವೆಂಬ ಅಕ್ಷತೆಯನಿಟ್ಟು,
ನಿರ್ಭಾವವೆಂಬ ಪತ್ರಿಯನೇರಿಸಿ, ನಿರ್ದ್ವಂದ್ವವೆಂಬ ಧೂಪವ ತೋರಿ,
ಹರಹರಾ ಶಿವಶಿವಾಯೆಂದು ಅರ್ಚಿಸುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೪ ॥

೧೯೩

ಊರ ಮುಂದಳ ಕೇರಿಯಲ್ಲಿ ಐದು ಬೇರಿನ ಮರನ ಕಂಡೆನಯ್ಯ.
ಆ ಮರಕ್ಕೆ ಏಳೆಂಟು ಎಲೆಗಳು ಇಪ್ಪವು ನೋಡಾ.
ಹತ್ತು ವರ್ಣದ ಹಣ್ಣ ಸವಿದು, ಮೇರುವೆಯ ಪಟಕ ತೆಗೆದು,
ಮಹಾಲಿಂಗದೊಳು ಬೆರೆದಿದ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೫ ॥

೧೯೪

ಅಷ್ಟ ಮಂದಿಗಳೊಳಗೆ ಪುಟ್ಟಿರ್ದ ಈತನಾರಯ್ಯ?
ಕಟ್ಟಳೆಯವಿಡಿದು, ಹೊಟ್ಟು ಹಾರಿ, ಗಟ್ಟಿ ಉಳಿದಿತ್ತು ನೋಡಾ.
ಬಟ್ಟಬಯಲನೇರಿ, ಸ್ಫಟಿಕಜ್ಯೋತಿಯ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೬ ॥

೧೮೫

ಅರಿವು ಮರವ ನುಂಗಿತ್ತು ಅಯ್ಯಾ.
ಮರವು ಅರಿವ ನುಂಗಿತ್ತು ಅಯ್ಯಾ.
ಅರಿವು ಮರವನೊಳಕೊಂಡು ಪರಿಪೂರ್ಣವಾಗಿದ್ದೆನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೭ ॥

೧೮೬

ಕರ್ಮವೆಂಬ ಕೋಟಲೆಯ ಹರಿದು
ನಿರ್ಮಳವೆಂಬ ಆತ್ಮನ ಹೊಕ್ಕು
ಪರಬ್ರಹ್ಮವೆಂಬ ಲಿಂಗವನಾಚರಿಸುತಿದ್ದೆನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೮ ॥

೧೮೭

ಮೇರುವೆಯೊಳಗಣ ಪುರುಷನು
ಊರೊಳಗಣ ನಾರಿಯ ಕೈವಿಡುದು,
ಆರು ಕೇರಿಯ ದಾಂಟಿ, ಮೂರು ಗ್ರಾಮವ ಮೀರಿ,
ಪರಕೆ ಪರವಾದ ಲಿಂಗವನಾಚರಿಸಿ
ನಿಶ್ಚಿಂತ ನಿರಾಕುಳನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೩೯ ॥

೧೮೮

ಒಬ್ಬ ಪುರುಷನು ಐದು ಮುಖದ ಸೂಳೆಯ ಸಂಗವ ಮಾಡಲು
ಆ ಸೂಳೆಯ ಬಸುರಲ್ಲಿ ಒಬ್ಬ ಮಗ ಹುಟ್ಟಿ
ಆ ಪುರುಷನ ನುಂಗಿ, ಲಿಂಗಾರ್ಚನೆಯ ಮಾಡುವುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೦ ॥

೧೮೯

ಒಂದು ಲಿಂಗ ಮೂರಾಗಿತ್ತು ನೋಡಾ.
ಆ ಲಿಂಗವ ಒಬ್ಬ ಚಿದಂಗನೆ ಕಂಡು
ಮನೋಹರನೆಂಬ ಪೂಜಾರಿಂಗೆ ಹೇಳಲು
ಆ ಪೂಜಾರಿಯು ಸಾಸಿರದಳಮಂಟಪವ ಪೊಕ್ಕು
ಆ ಲಿಂಗಾರ್ಚನೆಯ ಮಾಡಿ ನಿಃಪ್ರಿಯವಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೧ ॥

೧೧೦೦

ಅನಂತಕೋಟಿಬ್ರಹ್ಮಾಂಡವ ನುಂಗಿಕೊಂಡಿರ್ಪುದಯ್ಯ ಒಂದು ಲಿಂಗ.
ಆ ಲಿಂಗವೇ ಒಂದು ಮೂರಾಯಿತ್ತಯ್ಯ,
ಮೂರೇ ಆರಾಯಿತ್ತಯ್ಯ, ಆರೇ ಮೂವತ್ತಾರಾಯಿತ್ತಯ್ಯ,
ಮೂವತ್ತಾರೇ ಇನ್ನೂರಹದಿನಾರಾಯಿತ್ತಯ್ಯ,
ಇನ್ನೂರಹದಿನಾರೇ ಎಪ್ಪತ್ತೆರಡುಸಾವಿರವಾಯಿತ್ತಯ್ಯ,
ಎಪ್ಪತ್ತೆರಡುಸಾವಿರವೇ ಅರವತ್ತುಆರುಕೋಟಿಯಾಯಿತ್ತಯ್ಯ,
ಅರವತ್ತುಆರು ಕೋಟಿ ಆದ ಸದಾಶಿವನು,
ಒಳಹೊರಗೆ ಪರಿಪೂರ್ಣವಾಗಿಪ್ಪ ನೋಡಾ.
ಅರವತ್ತು ಆರುಕೋಟಿ ಅರಿದು ಆಚರಿಸಿದಲ್ಲಿಗೆ ಎಪ್ಪತ್ತೆರಡು ಸಾವಿರವಾದ.
ಎಪ್ಪತ್ತೆರಡುಸಾವಿರವಾದಲ್ಲಿಗೆ ವ್ಯಾಪ್ತಿಯಾಗಿ ಲಿಂಗದ ಕಿರಣವಾದ.
ವ್ಯಾಪ್ತಿಯಾಗಿ ಲಿಂಗಕಿರಣವಾದಲ್ಲಿಗೆ ಇನ್ನೂರಹದಿನಾರಾದ.
ಇನ್ನೂರಹದಿನಾರಾದಲ್ಲಿಗೆ ಸುಜ್ಞಾನ ಉದಯವಾಯಿತ್ತು.
ಸುಜ್ಞಾನ ಉದಯದೋರಿದಲ್ಲಿಗೆ ಮೂವತ್ತಾರಾದ.
ಮೂವತ್ತಾರಾದಲ್ಲಿಗೆ ಮಹಾಜ್ಞಾನವು ಘಟಿಸಲು,
ಮಹಾಜ್ಞಾನವು ಘಟಿಸಿದಲ್ಲಿಗೆ ಆರಾದ.
ಆರಾದಲ್ಲಿಗೆ ಭಾವ ತಲೆದೋರಲು,
ಭಾವ ತಲೆದೋರಿದಲ್ಲಿಗೆ ಮೂರಾದ.
ಮೂರಾದಲ್ಲಿಗೆ ನಿಶ್ಚಿಂತನಾದ, ನಿಶ್ಚಿಂತನಾದಲ್ಲಿಗೆ ಒಂದೇ ಆದ,
ಒಂದಾದಲ್ಲಿಗೆ ಅನಂತ ಕೋಟಿ ಬ್ರಹ್ಮಾಂಡವ ನುಂಗಿಕೊಂಡಿದ್ದೆಯಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೨ ॥

೧೧೦೧

ಧರೆ ಆಕಾಶವಿಲ್ಲದಂದು, ಅಪ್ಪು ವಾಯುಗಳಿಲ್ಲದಂದು,
ಅಗ್ನಿ ತಾಮಸವಿಲ್ಲದಂದು ಶೂನ್ಯನಳಿದು
ನಿಃಶೂನ್ಯ ನಿರಾಕುಳ ನಿರ್ಭರಿತನಾಗಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೩ ॥

೧೧೦೨

ಮಾತು ಮಥನಗಳಿಲ್ಲದಂದು, ನೋಟ ಬೇಟಗಳಿಲ್ಲದಂದು,
ಶೂನ್ಯ ನಿಃಶೂನ್ಯವಿಲ್ಲದಂದು,
ಬಯಲು ನಿರ್ವಯಲು ಇಲ್ಲದಂದು,

ಏನೇನೂ ಇಲ್ಲದಂದು, ಅತ್ತಲೆ ತಾನು ತಾನಾಗಿದ್ದೆಯಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೪೪ ||

೧೧೦೩

ರವಿ ಶಶಿಗಳಿಲ್ಲದಂದು, ಕತ್ತಲೆ ಕಾಳಾಂಧಗಳಿಲ್ಲದಂದು,
ಜ್ಞಾನ ಮಹಾಜ್ಞಾನಂಗಳು ಇಲ್ಲದಂದು,
ಅತ್ತತ್ತಲೆ ತಾನೆ ತಂದೆಯಾಗಿದ್ದೆಯಯ್ಯ.
ತನಗೆ ಮಕ್ಕಳು ಬೇಕಾಗಿ ನೆನಹಂಗೈಯಲು.
ಓಂಕಾರವೆಂಬ ಪ್ರಣವ ಪುಟ್ಟಿತ್ತು ನೋಡಾ.
ಆ ಓಂಕಾರವೆಂಬ ಪ್ರಣವದಲ್ಲಿ ಅಕಾರ ಉಕಾರ ಮಕಾರಂಗಳಾದವು ನೋಡಾ.
ಅಕಾರ ಉಕಾರ ಮಕಾರಂಗಳೊಡನೆ ಷಡಕ್ಷರಂಗಳು ಆದವು ನೋಡಾ.
ಆ ಷಡಕ್ಷರಂಗಳೊಡನೆ ಷಟ್ಚಕ್ರಂಗಳಾದವು ನೋಡಾ.
ಆ ಷಟ್ಚಕ್ರಂಗಳೊಡನೆ ಷಡ್ವಿಧಮೂರ್ತಿಗಳಾದವು ನೋಡಾ.
ಆ ಷಡ್ವಿಧಮೂರ್ತಿಗಳೊಡನೆ ಷಡ್ವಿಧಲಿಂಗವಾದವು ನೋಡಾ.
ಆ ಷಡ್ವಿಧಲಿಂಗದೊಡನೆ ಷಡ್ವಿಧಶಕ್ತಿಯರಾದರು ನೋಡಾ.
ಆ ಷಡ್ವಿಧಶಕ್ತಿಯರೊಡನೆ ಷಡ್ವಿಧಭಕ್ತಿಯಾಯಿತು ನೋಡಾ.
ಆ ಷಡ್ವಿಧಭಕ್ತಿಯನರಿತು ನಾದಬಿಂದುಕಲೆಗಳ ಮೀರಿ
ಪರಕೆ ಪರವಾದ ಲಿಂಗವನಾಚರಿಸುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೪೫ ||

೧೧೦೪

ಮೂರು ರತ್ನದ ಮೇಲೆ ಒಂದು ಮಂಡೂಕ ಕುಳಿತು
ನವಗ್ರಹಂಗಳ ನುಂಗಿ ಕೂಗುತಿದೆ ನೋಡಾ.
ಆ ಕೂಗಿನ ಭೇದವನರಿದ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೪೬ ||

೧೧೦೫

ಆರು ಕಂಬದ ದೇಗುಲದ ಮೇಲೆ
ಮೂರು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಒಬ್ಬ ಭಾಮಿನಿಯ ಕಂಡೆನಯ್ಯ.
ಆ ಭಾಮಿನಿಯು ಐವರ ಕೂಡಿಕೊಂಡು,
ಪರಕೆ ಪರವಾದ ಲಿಂಗವನಾಚರಿಸುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೪೭ ||

೧೧೦೭

ಮೂರು ಲೋಕದ ಮೇಲೆ ಒಂದು ಎರಳೆಯ ಕಂಡೆನಯ್ಯ.
ಒಬ್ಬ ತಳವಾರನು ಅರಿವು ಎಂಬ ಬಿಲ್ಲ ಹಿಡಿದು
ಕುರುಹೆಂಬ ಅಂಬ ತಕ್ಕೊಂಡು ಎಸೆದ.
ಬೇಂಟೆಕಾರನ ಆ ಎರಳೆ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೮ ॥

೧೧೦೭

ಆದಿಯಲ್ಲಿ ಒಬ್ಬ ಶರಣನು ಮನೆಯ ಮಾಡಿ,
ಒಂದುದಿನ ಊರ ಮಾಡಿ, ಮೂರುದಿನ ಕೇರಿಯ ಮಾಡಿ,
ಆರು ದಿನ ಹೊಲವ ಮಾಡಿ,
ಮೂವತ್ತಾರು ದಿನ ಹೊಲದಲ್ಲಿ ಬೆಳೆಯಿಲ್ಲ,
ಕೇರಿಯಲ್ಲಿ ಮಾನವರು ಇಲ್ಲ, ಊರಲ್ಲಿ ತಂದೆ ತಾಯಿ ಇಲ್ಲ,
ಮನೆಯಲ್ಲಿ ಆರೂ ಇಲ್ಲ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೯ ॥

೧೧೦೮

ಎಂಟು ಮೇರುವೆಯ ಮೇಲೆ
ಒಬ್ಬ ಸತಿಯಳು ನಿಂದಿರುವುದ ಕಂಡೆನಯ್ಯ.
ಆ ಸತಿಯಳ ಬಸುರಲ್ಲಿ ಒಬ್ಬ ಬಾಲಕ ಹುಟ್ಟಿ,
ಈಶ್ವರನೆಂಬ ಗದ್ದುಗೆಯ ಮೇಲೆ ನಿಂದು,
ಬ್ರಹ್ಮ ವಿಷ್ಣು ರುದ್ರಾದಿಗಳು ಗುಣತ್ರಯಂಗಳನಳಿದು
ಜ್ಞಾನವೆಂಬ ಸತಿಯಳ ಕೂಡಿಕೊಂಡು.
ಸಾಸಿರದಳ ಕಮಲವಂ ಪೊಕ್ಕು
ಲಿಂಗಧ್ಯಾನವ ಮಾಡುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೦ ॥

೧೧೦೯

ಒಬ್ಬ ಮಾನವನ ಕರಸ್ಥಲದಲ್ಲಿ ಮೂರು ಲಿಂಗವ ಕಂಡೆನಯ್ಯ.
ಮೂರು ಲಿಂಗದಲ್ಲಿ ಆರು ಕೇರಿಯ ಕಂಡೆನಯ್ಯ.
ಆರು ಕೇರಿಯಲ್ಲಿ ಒಂಬತ್ತು ದೇಗುಲವ ಕಂಡೆನಯ್ಯ.
ಆ ಒಂಬತ್ತು ದೇಗುಲದ ಮೇಲೆ ಒಂದು ಶಿವಾಲಯವಿರ್ಪುದು ನೋಡಾ.

ಆ ಶಿವಾಲಯವ ಪೊಕ್ಕು, ಆ ಮಾನವನ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೧ ॥

೧೧೧೦

ಏನೂ ಇಲ್ಲದಲ್ಲಿ ಒಂದು ಮರನ ಕಂಡೆನಯ್ಯ.
ಆ ಮರಕೆ ಬುಡವೊಂದು, ಕೊಲ್ಲೆ ಮೂರು,
ಆರು ಕವಲು ಇರ್ಪವು ನೋಡಾ!
ಆ ಮರದ ಭೇದವ ಬಲ್ಲರೆ ಆರಾದರೆ ಹೇಳಿರಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೨ ॥

೧೧೧೧

ಒಬ್ಬ ಶಿವನ ಕರಸ್ಥಲದಲ್ಲಿ ಐದು ಲಿಂಗವ ಕಂಡೆನಯ್ಯ.
ಐದು ಲಿಂಗಕ್ಕೆ ಇಪ್ಪತ್ತೈದು ಮುಖವ ಕಂಡೆನಯ್ಯ.
ಆ ಮುಖಂಗಳಲ್ಲಿ ಜ್ಞಾನಶಕ್ತಿ ಉದಯವಾದಳು ನೋಡಾ.
ಆ ಸತಿಯಳ ಅಂಗನು ಕೂಡೆ, ಆ ಶಿವನ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೩ ॥

೧೧೧೨

ಧರೆಯಾಕಾಶದ ಮೇಲೆ ಒಬ್ಬ ಸೂಳೆ ನಿಂದು,
ಪರಿಪರಿಯ ತೋರುತಿರ್ಪಳು ನೋಡಾ.
ಆ ಸೂಳೆಯ ಗೃಹದಲ್ಲಿ ಸಾಸಿರಕೋಟಿ ಕಿರಣವ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೪ ॥

೧೧೧೩

ಊರ ಮೇಲೆ ಆಡುವ ಗಿಳಿಯ ಕಂಡೆ ನೋಡಾ.
ಕೇರಿಯೊಳಗೆ ಹಾರುವ ಬೆಕ್ಕ ಕಂಡೆನಯ್ಯ.
ಬೆಕ್ಕಿಗೆ ತಲೆಯಿಲ್ಲ ನೋಡಾ, ಗಿಳಿಗೆ ಮೂಗಿಲ್ಲ ನೋಡಾ.
ಆ ಹಾರುವ ಬೆಕ್ಕಿಂಗೆ ತಲೆ ಬಂದಲ್ಲದೆ,
ಆಡುವ ಗಿಳಿಗೆ ಮೂಗು ಬಂದಲ್ಲದೆ,
ನಿಃಕಲಪರಬ್ರಹ್ಮ ಲಿಂಗವು ಕಾಣಬಾರದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೫ ॥

೧೧೧೪

ಆರು ಬುಡದ ಮೇಲೆ ಮೂರು ಕೊನೆಯ ಕಂಡೆ ನೋಡಾ.
ಮೂರು ಕೊನೆಯ ಮೇಲೆ ಒಂದು ಹಣ್ಣು ಇರ್ಪುದು ನೋಡಾ.

ಆ ಹಣ್ಣ ಕಣ್ಣು ಇಲ್ಲದವ ಕಂಡು, ಕೈಯಿಲ್ಲದವ ಕೊಯ್ದು,
ಉಂಡ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೬ ॥

೧೧೧೫

ಐದು ಕೇರಿಯ ಮೇಲೆ ಒಂದು ಗ್ರಾಮವಿರ್ಪುದು ನೋಡಾ.
ಆ ಗ್ರಾಮದೊಳಗೆ ಒಬ್ಬ ಪರಮಜ್ಞಾನಿಯ ಕಂಡೆನಯ್ಯ.
ಆ ಪರಮಜ್ಞಾನಿಯ ಅಂತರಂಗದೊಳಗೆ
ಅನಂತಕೋಟಿ ಬ್ರಹ್ಮಾಂಡಗಳು ಅಡಗಿರ್ದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೭ ॥

೧೧೧೬

ಹೃದಯದೊಳಗಿರ್ಪ ಜ್ಯೋತಿಯ ಬೆಳಗಿನೊಳಗೆ
ಮೂರು ಲೋಕಂಗಳೆಲ್ಲವು ಅಡಗಿರ್ದವು ನೋಡಾ.
ಆ ಜ್ಯೋತಿಯ ಜ್ಞಾನವೆಂಬ ಸತಿಯಳು ಕಂಡು ತನ್ನ ಪುರುಷಂಗೆ ಪೇಳಲು
ಆ ಪುರುಷನು ಆ ಜ್ಯೋತಿಯ ತೆಗೆದು
ನಿಃಕಲ ಬ್ರಹ್ಮಲಿಂಗಕೆ ಬೆಳಗುತಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೮ ॥

೧೧೧೭

ಅಂಗವೆಂಬ ಪಟ್ಟಣದೊಳಗೆ
ಮಂಗಳವಾದ ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಒಬ್ಬ ಚಿಚ್ಛಕ್ತಿ ಉದಯವಾದಳು ನೋಡಾ.
ಆ ಚಿಚ್ಛಕ್ತಿಯ ಸಂಗದಿಂದ ಪರಬ್ರಹ್ಮವ ಕೂಡಿ
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೯ ॥

೧೧೧೮

ಸಪ್ತೇಳುಸಾಗರದ ಮೇಲೆ ಅಷ್ಟ ಕುಲಪರ್ವತವ ಕಂಡೆನಯ್ಯ.
ಅಷ್ಟಕುಲಪರ್ವತದ ಮೇಲೆ ಒಂದು ದೇಗುಲವ ಕಂಡೆನಯ್ಯ.
ಆ ದೇಗುಲದೊಳಗೆ ಒಬ್ಬ ಭಾಮಿನಿ
ಲಿಂಗಧ್ಯಾನವ ಮಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೬೦ ॥

೧೧೧೯

ಈರೇಳುಭುವನವ ಹದಿನಾಲ್ಕುಲೋಕವನೊಂದು ಇರುವೆ ನುಂಗಿತ್ತು ನೋಡಾ.
ಆ ಇರುವೆಯ ತಲೆಯ ಮೇಲೆ ಒಂದು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಒಬ್ಬ ಭಾಮಿನಿಯು
ತನ್ನ ಮನವ ತಾನೇ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೬೧ ॥

೧೧೨೦

ಊರೊಳಗೆ ಆಡುವ ಹಕ್ಕಿಯ ಕಂಡೆನಯ್ಯ.
ಮೇರುವೆಯ ಮೇಲೆ ಕುಳಿತಿರುವ ಕಪ್ಪೆಯ ಕಂಡೆನಯ್ಯ.
ಆ ಕಪ್ಪೆಗೆ ಧ್ವನಿಯಿಲ್ಲಾ ನೋಡಾ,
ಆ ಹಕ್ಕಿಗೆ ಗರಿಯಿಲ್ಲ ನೋಡಾ!
ಹಕ್ಕಿಗೆ ಗರಿ ಬಂದಲ್ಲದೆ, ಕಪ್ಪೆಗೆ ಧ್ವನಿ ಬಂದಲ್ಲದೆ
ತಾನಾರು ಎಂಬುದು ಕಾಣಿಸದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೬೨ ॥

೧೧೨೧

ಮನವೆಂಬ ಕೋಗಿಲೆಯ ಮೇಲೆ ಘನವೆಂಬ ನಿಜವ ತೋರಿ
ಅನುಕರಣವಿಲ್ಲದೆ ತಾನು ತಾನಾಗಿ ನಿಃಪ್ರಿಯವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೬೩ ॥

೧೧೨೨

ಸರ್ವಾಂಗದೊಳಹೊರಗಿರ್ಪ ಲಿಂಗವು ಹಿಂಗಿ ತೋರುತಿದೆ ನೋಡಾ.
ಆ ಲಿಂಗವು ನೋಡಹೋಗದ ಮುನ್ನ ಅದು ಎನ್ನ ನುಂಗಿತ್ತಯ್ಯಾ.
ಆ ಲಿಂಗಕ್ಕೆ ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೬೪ ॥

೧೧೨೩

ಅಜ್ಞಾನವೆಂಬ ಕರ್ಮಕೋಟಲೆಯ ಹರಿದು
ಸುಜ್ಞಾನವೆಂಬ ಪಥದೊಳು ಕೂಡಿ
ಘನಕೆಘನವಾದ ಲಿಂಗದೊಳು ಆಚರಿಸಬಲ್ಲಡೆ
ಆತನೆ ನಿರ್ಮುಕ್ತ ಕಾಣಾ ಝೇಂಕಾರ ನಿಜಲಿಂಗಪ್ರಭುವೆ. ॥ ೨೬೫ ॥

೧೧೨೪

ಹುಚ್ಚಮನದೊಳು ಸಿಕ್ಕಿ ಕಿಚ್ಚಾಗಿ ಬೆಂದಿರಲ್ಲಾ,
ಆ ಹುಚ್ಚಮನಪನಳಿದು ನಿಶ್ಚಿಂತ ನಿರಾಕುಳ ನಿರ್ಭರಿತನಾಗಬಲ್ಲಡೆ
ಆತನೆ ನಿರ್ಮಲಜ್ಞಾನಿ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೬೬ ||

೧೧೨೫

ಮನದ ಅಂಕುರಗಳ ಹರಿದು ಜ್ಞಾನವ ನಿಶ್ಚೈಸಿ
ಘನತರಲಿಂಗವಾಚರಿಸಬಲ್ಲಾತನೆ ನಿರ್ಮಲಜ್ಞಾನಿ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೬೭ ||

೧೧೨೬

ಜ್ಞಾನ ಉಪಾಧಿಯಲ್ಲಿ ಮನವ ನಿಶ್ಚೈಸಿ, ಮಹಾಜ್ಞಾನದಲ್ಲಿ ನಿಂದು,
ಪರಕೆ ಪರವನಾಚರಿಸಬಲ್ಲಡೆ
ಆತನೆ ಪರಮಜ್ಞಾನಿ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೨೬೮ ||

೧೧೨೭

ಅಂಗಗುಣಾದಿಗಳನಳಿದು, ಲಿಂಗಸಾವಧಾನಿಯಾಗಿ,
ಮಂಗಳಾತ್ಮಕನ ಕೂಡಿ, ಮಂಗಳಮಯವನೈದಬಲ್ಲಾತನೆ
ನಿಜಲಿಂಗೈಕ್ಯ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೨೬೯ ||

೧೧೨೮

ಮಂಚದ ಎಕ್ಕೆಯಲ್ಲಿ ಸಣ್ಣ ಮಣಿಯ ಪೋಣಿಸಬಲ್ಲೆನೆಂಬುವರು
ನೀವಾರಾದಡೆ ಪೋಣಿಸಿರಯ್ಯ, ನಾನಾದರೆ ಅರಿಯೆನಯ್ಯ.
ಒಂದು ತೆಂಗಿನ ವೃಕ್ಷದ ಮೇಲೆ ಮೂರು ರತ್ನವಿಪ್ಪುದ ನಾನು ಬಲ್ಲೆನಯ್ಯಾ.
ಒಂದು ರತ್ನ ಉತ್ಪತ್ತಿ ಸ್ಥಿತಿ ಲಯಕ್ಕೊಳಗಾಯಿತ್ತು ನೋಡಾ.
ಒಂದು ರತ್ನ ಚತುರ್ದಶಭುವನಕ್ಕೊಳಗಾಯಿತ್ತು ನೋಡಾ.
ಇನ್ನೊಂದು ರತ್ನಕೆ ಬೆಲೆ ಇಡಲಳವಲ್ಲ ನೋಡಾ.
ಆ ರತ್ನದ ಕುರುಪನರಿತು ನಿಶ್ಚಿಂತ ನಿರಾಕುಳ ಲಿಂಗವನಾಚರಿಸಬಲ್ಲಾತನೆ
ನಿಮ್ಮ ನಿಃಕಲಶರಣ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೨೭೦ ||

೧೧೨೯

ಒಬ್ಬ ಕನ್ನೆಯ ಮನೆಯೊಳಗೆ ಐವರು ಪುರುಷರ ಕಂಡೆನಯ್ಯ.
ಆ ಐವರು ಪುರುಷರ ಒಂದು ಇರುವೆ ನುಂಗಿತ್ತು ನೋಡಾ.

ಆ ಇರುವೆಯ ನಿರ್ವಯಲು ನುಂಗಿ ನಿಃಶಬ್ದವಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೧ ॥

೧೧೩೦

ನಾದಲಕ್ಷ್ಯ ಬಿಂದುಲಕ್ಷ್ಯ ಕಳಾಲಕ್ಷ್ಯದ ಮೇಲೆ
ನಿರ್ವಯ ಲಕ್ಷ್ಯವ ಕಂಡೆನಯ್ಯ.
ಆ ನಿರ್ವಯ ಲಕ್ಷ್ಯದೊಳಗೆ
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೨ ॥

೧೧೩೧

ಒಂಬತ್ತು ಸೋಪಾನದ ಮೇಲೆ
ತುಂಬಿ ತೋರುತ್ತಿತ್ತಯ್ಯ ಒಂದು ಲಿಂಗ.
ಆ ಲಿಂಗದ ಕುರುಹು ಬ್ರಹ್ಮ ವಿಷ್ಣು ರುದ್ರಾದಿಗಳಿಗೆ
ಅಗೋಚರವೆನಿಸಿತ್ತು ನೋಡಾ.
ನಿಃಶಬ್ದ ನಿರಾಳವಾದ ಶರಣನು
ಆ ಲಿಂಗಧ್ಯಾನವ ಮಾಡುತಿರ್ಪನು ನೋಡಾ.
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೩ ॥

೧೧೩೨

ಹುಟ್ಟಿದ ಮನವಿಲ್ಲ, ಬಂದ ಬಟ್ಟೆಗಳಿಲ್ಲ,
ಹೋಗಿ ಹೋಗಿ ಬರಲಿಲ್ಲ, ಸೃಷ್ಟಿಯೊಳು ತಾನಾಗಲಿಲ್ಲ.
ಭವಸಾಗರವ ಹರಿದು, ಬಟ್ಟಬಯಲನೊಳಕೊಂಡು
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೪ ॥

೧೧೩೩

ಕರ್ಮದ ವಾಸನೆಗಳ ಹರಿದು, ಶಿವಧರ್ಮದಲ್ಲಿ ನಿಂದು
ಪರಮಾನಂದಪ್ರಭೆಯಲಿ ಕೂಡಿ
ನಿರಾಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೫ ॥

೧೧೩೪

ಜ್ಞಾನದ ಉಪಾಧಿಯಲ್ಲಿ ಸಂಗವನರಿತು
ನಿರ್ಮಲಜ್ಞಾನಿಯಾಗಿ, ಪರಕೆಪರವನಾಚರಿಸಿ

ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೬ ॥

## ಮಹಾಲಿಂಗಸ್ಥಲ

೧೧೩೫

ಸಕಲ ನಿಃಕಲಗಳು ಇಲ್ಲದಂದು, ಪರಾಪರಗಳಿಲ್ಲದಂದು,
ಇವೇನೇನೂ ಇಲ್ಲದಂದು ಅತ್ತತ್ತಲೇ.
ಅಪರಂಪರ ಮಹಾಮಹಿಮ ನಿಷ್ಕಲಶಿವತತ್ವ ತಾನೊಂದೆ ನೋಡಾ.
ಆ ನಿಷ್ಕಲಶಿವತತ್ವದಿಂದ ಜ್ಞಾನಚಿತ್ತು ಉದಯಿಸಿತ್ತು ನೋಡಾ.
ಆ ಜ್ಞಾನಚಿತ್ತುವಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆ
ಚಿತ್ಪ್ರಕಾಶ ಚಿಚ್ಛಕ್ತಿಯೆ ಆದಿಯಾಗಿ ಓಂಕಾರವೆಂಬ ಪ್ರಣವವಾಯಿತ್ತು ನೋಡಾ.
ಆ ಓಂಕಾರವೆಂಬ ಪ್ರಣವದಲ್ಲಿ ಅಕಾರ ಉಕಾರ ಮಕಾರವೆಂದು
ಮೂರು ತೆರನಾಯಿತ್ತು.
ಈ ಮೂರು ಒಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ : ಅಕಾರವೆ ನಕಾರ ಮಕಾರವೆಂದು ಎರಡುತೆರನಾಯಿತ್ತು.
ಉಕಾರವೆ ಶಿಕಾರ ವಕಾರವೆಂದು ಎರಡುತೆರನಾಯಿತ್ತು.
ಮಕಾರವೆ ಯಕಾರ ಓಂಕಾರವೆಂದು ಎರಡುತೆರನಾಯಿತ್ತು.
ಇಂತಪ್ಪ ಓಂಕಾರವೆಂಬ ಪ್ರಣವದಲ್ಲಿ
ನಾದ ಬಿಂದು ಕಳೆಯೆಂದು ಮೂರುತೆರನಾಯಿತ್ತು.
ಅದು ಹೇಗೆಂದಡೆ :
ನಾದವೇ ಕರ್ಮಸಾದಾಖ್ಯ, ಕರ್ತೃಸಾದಾಖ್ಯವೆಂದು ಎರಡುತೆರನಾಯಿತ್ತು.
ಬಿಂದುವೇ ಮೂರ್ತಿಸಾದಾಖ್ಯ ಅಮೂರ್ತಿಸಾದಾಖ್ಯವೆಂದು ಎರಡುತೆರನಾಯಿತ್ತು.
ಕಳೆಯೇ ಶಿವಸಾದಾಖ್ಯ ಮಹಾಸಾದಾಖ್ಯವೆಂದು ಎರಡುತೆರನಾಯಿತ್ತು.
ಇಂತಪ್ಪ ಓಂಕಾರವೆಂಬ ಪ್ರಣವದಲ್ಲಿ
ಗುರು-ಲಿಂಗ-ಜಂಗಮವೆಂದು ಮೂರುತೆರನಾಯಿತ್ತು.
ಈ ಮೂರು ಒಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ :
ಗುರುವೇ ಭಕ್ತ-ಮಹೇಶ್ವರನೆಂದು ಎರಡುತೆರನಾಯಿತ್ತು.
ಲಿಂಗವೇ ಪ್ರಸಾದಿ-ಪ್ರಾಣಲಿಂಗಿಯೆಂದು ಎರಡುತೆರನಾಯಿತ್ತು.
ಜಂಗಮವೇ ಶರಣ-ಐಕ್ಯನೆಂದು ಎರಡುತೆರನಾಯಿತ್ತು.
ಇಂತಪ್ಪ ಓಂಕಾರವೆಂಬ ಪ್ರಣವದಲ್ಲಿ ಇಷ್ಟ ಪ್ರಾಣ ಭಾವವೆಂದು

ಮೂರುತೆರನಾಯಿತ್ತು.
ಈ ಮೂರು ಒಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ :
ಇಷ್ಟಲಿಂಗವೇ ಆಚಾರಲಿಂಗ-ಗುರುಲಿಂಗವೆಂದು ಎರಡುತೆರನಾಯಿತ್ತು.
ಪ್ರಾಣಲಿಂಗವೇ ಶಿವಲಿಂಗ-ಜಂಗಮಲಿಂಗವೆಂದು ಎರಡುತೆರನಾಯಿತ್ತು.
ಭಾವಲಿಂಗವೇ ಪ್ರಸಾದಲಿಂಗ-ಮಹಾಲಿಂಗವೆಂದು ಎರಡುತೆರನಾಯಿತ್ತು.
ಇಂತಪ್ಪ ಓಂಕಾರವೆಂಬ ಪ್ರಣವದಲ್ಲಿ
ಧ್ಯಾನ-ಧಾರಣ-ಸಮಾಧಿಯೆಂದು ಮೂರುತೆರನಾಯಿತ್ತು.
ಈ ಮೂರು ಒಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ :
ಧ್ಯಾನವೇ ಕ್ರಿಯಾಶಕ್ತಿ-ಜ್ಞಾನಶಕ್ತಿಯೆಂದು ಎರಡುತೆರನಾಯಿತ್ತು.
ಧಾರಣವೇ ಇಚ್ಛಾಶಕ್ತಿ-ಆದಿಶಕ್ತಿಯೆಂದು ಎರಡುತೆರನಾಯಿತ್ತು.
ಸಮಾಧಿಯೆ ಪರಾಶಕ್ತಿ-ಚಿತ್‌ಶಕ್ತಿಯೆಂದು ಎರಡುತೆರನಾಯಿತ್ತು.
ಸ್ಥೂಲ-ಸೂಕ್ಷ್ಮ-ಕಾರಣವೆಂದು ಮೂರುತೆರನಾಯಿತ್ತು.
ಈ ಮೂರು ಒಂದೊಂದೂ ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ :
ಸ್ಥೂಲವೇ ಸದ್ಭಕ್ತಿ-ನೈಷ್ಠಿಕಭಕ್ತಿ ಎಂದು ಎರಡುತೆರನಾಯಿತ್ತು.
ಸೂಕ್ಷ್ಮವೇ ಸಾವಧಾನಭಕ್ತಿ-ಅನುಭಾವಭಕ್ತಿಯೆಂದು ಎರಡುತೆರನಾಯಿತ್ತು.
ಕಾರಣವೇ ಅನುಪಮಭಕ್ತಿ-ಸಮರಸಭಕ್ತಿಯೆಂದು ಎರಡುತೆರನಾಯಿತ್ತು.
ಇಂತಪ್ಪ ಓಂಕಾರವೆಂಬ ಪ್ರಣವದಲ್ಲಿ
ಜಾಗ್ರ-ಸ್ವಪ್ನ-ಸುಷುಪ್ತಿಯೆಂದು ಮೂರುತೆರನಾಯಿತ್ತು.
ಈ ಮೂರು ಒಂದೊಂದು ಎರಡೆರಡಾಗಿ ಆರುತೆರನಾಯಿತ್ತು.
ಅದು ಹೇಗೆಂದಡೆ :
ಜಾಗ್ರವೇ ನಿವೃತ್ತಿಕಲೆ-ಪ್ರತಿಷ್ಠಾಕಲೆಯೆಂದು ಎರಡುತೆರನಾಯಿತ್ತು.
ಸ್ವಪ್ನವೇ ವಿದ್ಯಾಕಲೆ-ಶಾಂತಿಕಲೆಯೆಂದು ಎರಡುತೆರನಾಯಿತ್ತು.
ಸುಷುಪ್ತಿಯೇ ಶಾಂತ್ಯತೀತಕಲೆ-ಶಾಂತ್ಯಾತೀತೋತ್ತರಕಲೆಯೆಂದು
ಎರಡುತೆರನಾಯಿತ್ತು.
ಇಂತಪ್ಪ ಓಂಕಾರವೆಂಬ ಪ್ರಣವದಲ್ಲಿ ಸಕಲ ತತ್ವಂಗಳನಂಗೀಕರಿಸಿಕೊಂಡು
ಅಖಂಡಪರಿಪೂರ್ಣಗೋಳಕಾಕಾರ ತೇಜೋಮಯವಪ್ಪುದು
ಮಹಾಲಿಂಗ ತಾನೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೭ ॥

೧೧೩೭

ನಿಃಕಲಶಿವತತ್ವದಿಂದ ಜ್ಞಾನಚಿತ್ತು ಉದಯಿಸಿತ್ತು ನೋಡಾ.
ಆ ಜ್ಞಾನಚಿತ್ತುವಿನಿಂದ
ಅಕಾರ ಉಕಾರ ಮಕಾರವೆಂದು ಈ ಮೂರು ಬೀಜಾಕ್ಷರ;
ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಲೆ.
ಈ ನಾದ ಬಿಂದು ಕಲೆಗೆ ಪ್ರಕೃತಿಯೇ ಆಧಾರ.
ಪ್ರಕೃತಿಗೆ ಪ್ರಾಣವೇ ಆಧಾರ, ಪ್ರಾಣಕ್ಕೆ ಲಿಂಗವೇ ಆಧಾರ.
ಲಿಂಗಕ್ಕೆ ಶಿವಶಕ್ತಿ ಆದಿಯಾಗಿ ಓಂಕಾರವಾಯಿತ್ತು ನೋಡಾ.
ಆ ಓಂಕಾರವೇ ಅಖಂಡ ಪರಿಪೂರ್ಣ ಗೋಳಕಾಕಾರ
ತೇಜೋಮಯವಪ್ಪ ಮಹಾಲಿಂಗ ತಾನೇ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೮ ॥

೧೧೩೮

ಆ ಜ್ಯೋತಿಯ ಬೆಳಗಿನೊಳಗೆ ಅನಂತಕೋಟಿಬ್ರಹ್ಮರು,
ಅನಂತಕೋಟಿ ವಿಷ್ಣುಗಳು, ಅನಂತಕೋಟಿ ರುದ್ರರು,
ಅನಂತಕೋಟಿ ಈಶ್ವರರು, ಅನಂತಕೋಟಿ ಸದಾಶಿವರು ಇರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೭೯ ॥

೧೧೩೯

ಅಂತಿರ್ದ ಬ್ರಹ್ಮದ ಅಂಗದಲ್ಲಿ ಜ್ಞಾನಚಿತ್ತು ಉದಯಿಸಿತ್ತು ನೋಡಾ.
ಆ ಜ್ಞಾನಚಿತ್ತುವಿನಿಂದ ಪರಶಿವರು ಹುಟ್ಟಿದರು ನೋಡಾ.
ಆ ಪರಶಿವರು ಹುಟ್ಟಿದಲ್ಲಿಗೆ ಸದಾಶಿವರು ಹುಟ್ಟಿದರು.
ಆ ಸದಾಶಿವರು ಹುಟ್ಟಿದಲ್ಲಿಗೆ ಈಶ್ವರರು ಹುಟ್ಟಿದರು.
ಆ ಈಶ್ವರರು ಹುಟ್ಟಿದಲ್ಲಿಗೆ ರುದ್ರರು ಹುಟ್ಟಿದರು.
ಆ ರುದ್ರರು ಹುಟ್ಟಿದಲ್ಲಿಗೆ ವಿಷ್ಣುಗಳು ಹುಟ್ಟಿದರು.
ಆ ವಿಷ್ಣುಗಳು ಹುಟ್ಟಿದಲ್ಲಿಗೆ ಬ್ರಹ್ಮರು ಹುಟ್ಟಿದರು.
ಆ ಬ್ರಹ್ಮರು ಹುಟ್ಟಿದಲ್ಲಿಗೆ ಲೋಕಾದಿಲೋಕಂಗಳು
ಸಚರಾಚರಂಗಳು ಹುಟ್ಟಿದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮೦ ॥

೧೧೪೦

ಕಾಯವೆಂಬ ಹುತ್ತಿನಲ್ಲಿ
ಮಾಯವೆಂಬ ಸರ್ಪನು ಮನೆಯ ಮಾಡಿಕೊಂಡು

ತ್ರಿಜಗವನೆಲ್ಲ ನುಂಗಿಕೊಂಡಿರ್ಪುದು ನೋಡಾ.
ಕಡೆಯ ಬಾಗಿಲಲ್ಲಿ ಗಾರುಡಿಗ ನಿಂದು
ನಾಗಸ್ವರದ ನಾದವ ಮಾಡಲು
ಆ ನಾಗಸ್ವರದ ನಾದವ ಕೇಳಿ
ತ್ರಿಲೋಕದಿಂದ ಎದ್ದ ಸರ್ಪನ ತಲೆಯ ಮೇಲೆ
ರತ್ನವಿಪ್ಪುದು ನೋಡಾ.
ಆ ರತ್ನವ ಕಣ್ಣು ಇಲ್ಲದವ ಕಂಡು,
ಕೈಯಿಲ್ಲದವ ತಕ್ಕೊಂಡು
ಮಣ್ಣು ಇಲ್ಲದ ಹಾಳಿನಲ್ಲಿ ಇಟ್ಟು,
ಆ ರತ್ನವು ಮಹಾಲಿಂಗಕ್ಕೆ ಸಂದಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮೧ ॥

೧೧೪೦

ಜ್ಞಾನಸಂಬಂಧವನರಿತು, ಸುಜ್ಞಾನದೊಳು ನಿಂದು
ಪರಕೆ ಪರವಾದ ಜ್ಯೋತಿಯ ಕೂಡಿ ಸ್ವಯಂಜ್ಞಾನಿಯಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮೨ ॥

೧೧೪೧

ಬಯಲೆ ಅಂಗವಾಗಿ, ನಿರ್ವಯಲೆ ಲಿಂಗವಾಗಿ,
ಭಾವಕೆ ಸಂಬಂಧವಾಯಿತ್ತು ನೋಡಾ.
ಬಯಲಿಂದ ಅಂಗವಿಲ್ಲದೆ, ನಿರ್ವಯಲೆಂಬ ಲಿಂಗವು ನಿಶ್ಶಬ್ದವಾಗಿ,
ಭಾವಕ್ಕೆ ಬೆರಗಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮೩ ॥

೧೧೪೨

ಇಪ್ಪತ್ತೈದು ದೇಗುಲದ ಮೇಲೆ ಒಂದು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಒಬ್ಬ ಪೂಜಕನು
ಲಿಂಗಾರ್ಚನೆಯ ಮಾಡುತಿರ್ಪನು ನೋಡಾ.
ಆ ಪೂಜಕನ ಹಿಡಿದು ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮೪ ॥

೧೧೪೩

ಸಾಗರದ ತೆರೆಯ ಮೇಲೆ ಮಂಡೂಕ ಕುಳಿತು ಕೂಗುತಿದೆ ನೋಡಾ.
ಆ ಕೂಗ ಕೇಳಿ ಸಮಪಾತಳದಲ್ಲಿಪ್ಪ ಸರ್ಪನು ಐದು ಮುಖವ ತೋರಿ

ಆ ಮಂಡೂಕನ ನುಂಗಿ, ತನ್ನ ಸುಳುವ ತಾನೇ ತೋರುತ್ತಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೮೫ ||

೧೧೪೪

ಮಹಾಮನೆಗೆ ಹೋಗುವ ದಾರಿಯಲ್ಲಿ
ಇಲಿ ಬೆಕ್ಕ ಹಿಡಿವುದ ಕಂಡೆನಯ್ಯ !
ಮೊಲ ನಾಯ ನುಂಗುವುದ ಕಂಡೆನಯ್ಯ !
ಇರುವೆ ಆಕಾಶವ ನುಂಗುವುದ ಕಂಡೆನಯ್ಯ !
ಧೂಮ್ರ ಗಗನವ ನುಂಗುವುದ ಕಂಡೆನಯ್ಯ !
ಕರಿ ಸಿಂಹನ ಸೀಳುವುದ ಕಂಡೆನಯ್ಯ !
ಎರಳೆ ಹುಲಿಯ ಹಿಡಿವುದ ಕಂಡೆನಯ್ಯ !
ಕಪ್ಪೆ ಸರ್ಪನ ನುಂಗುವುದ ಕಂಡೆನಯ್ಯ !
ಬಯಲು ನಿರ್ವಯಲ ನುಂಗಿದ್ದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೮೬ ||

೧೧೪೫

ಅಂತರಂಗದಲ್ಲಿ ಜ್ಞಾನಸಂಬಂಧವಾದ ಶರಣಂಗೆ
ಅಜ್ಞಾನದ ಭಯವುಂಟೇನಯ್ಯ ?
ಅಜ್ಞಾನಭಯವಳಿದು ನಿಶ್ಚಿಂತ ನಿರಾಕುಳಲಿಂಗದಲ್ಲಿ ಕೂಡಬಲ್ಲಾತನೆ
ಜ್ಞಾನಿ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೨೮೭ ||

೧೧೪೬

ಸಮುದ್ರದೊಳಗೊಂದು ಮೊಸಳೆಯ ಕಂಡೆನಯ್ಯ.
ಆ ಮೊಸಳಿಂಗೆ ಏಳು ಮೀನುಗಳು ವಿಶ್ವಾಸಮಂ ಮಾಡುತಿರ್ಪುವು ನೋಡಾ !
ಆಡುತಾಡುತ್ತ ತೆರೆ ಹಾಕಲು ಮೊಸಳೆ ಸತ್ತಿತು ನೋಡಾ.
ಮೀನುಗಾರ ಬಂದು, ಮೀನ ಕೊಯ್ದು,
ಸಮುದ್ರಕ್ಕೆ ಕಾವಲದಾರನಾದನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೮೮ ||

೧೧೪೭

ಕರ್ಮದ ಪಾಶವ ಹರಿದು ನಿರ್ಮಲಶರಣನಾಗಿ
ಪರಕ್ಕೆ ಪರವಾದ ಪರಂಜ್ಯೋತಿಯನಾಚರಿಸಿ
ನಿರ್ಮುಕ್ತನಾದ ಸ್ವಯಜ್ಞಾನಿಗೆ

ನಮೋ ನಮೋ ಎನುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೮೯ ॥

೧೧೪೮

ಅಹಂಕಾರವೆಂಬ ಕೊಂಬ ಮುರಿದು
ನಾನು ನೀನುಗಳೆಂಬ ಉಭಯಗಳನಳಿದು ನಿಂದು
ಸ್ವಾನುಭಾವಸಿದ್ಧಾಂತದೊಳು ಮೈಮರೆದು ಆಚರಿಸಬಲ್ಲಾತನೆ
ನಿಮ್ಮ ಸಂಬಂಧಿ ಕಾಣಾ ಝೇಂಕಾರ ನಿಜಲಿಂಗಪ್ರಭುವೆ. ॥ ೨೯೦ ॥

೧೧೪೯

ಕತ್ತಲೆ ಕವಿದ ಮಾನವರಿಗೆ ಜ್ಞಾನದ ಪ್ರಭೆಯುಂಟೇನಯ್ಯ ?
ಅಂಗವ ಮರೆದು ನಿಂದವರಿಗೆ ಆವ ಚಿಂತೆ ಉಂಟೇನಯ್ಯ ?
ಒಳಹೊರಗೆ ಪರಿಪೂರ್ಣವಾದ ಶರಣಂಗೆ ಆವ ಭ್ರಾಂತಿ ಉಂಟೇನಯ್ಯ ?
ಇದು ಕಾರಣ, ತನ್ನ ನಿಲವ ತಾನೇ ತಿಳಿಯಬಲ್ಲಾತನೆ
ಪರಮಜ್ಞಾನಿ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೨೯೧ ॥

೧೧೫೦

ಒಲ್ಲೆನೆಂಬ ಭಾವವು ಎಲ್ಲರಿಗೂ ಸಲ್ಲದು ಬಿಡಿರೊ.
ಬಲ್ಲೆಬಲ್ಲೆನೆಂದು ನಾನಾ ದೇವ ದಾನವ ಮಾನವರು ಅಳಿದರು ನೋಡಾ.
ಇದು ಶಿವನೊಲಿದ ಜ್ಞಾನವು,
ಭಾವ ಬೆರಗಾದ ಕಾರಣ ಉದಯವಾಯಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೨ ॥

೧೧೫೧

ಕಾಯ ನನ್ನದೆಂದು ನಚ್ಚಬೇಡಿರೋ,
ಜೀವ ನನ್ನದೆಂದು ನಚ್ಚಬೇಡಿರೋ.
ಕಾಯ ಜೀವವೆಂಬ ಪ್ರಕೃತಿಯನಳಿದು, ಶಿವಯೋಗದಲ್ಲಿ ನಿಂದು,
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೩ ॥

೧೧೫೨

ಸಂಚಲಿಸುವ ಮನಗಳನಳಿದು, ನಚ್ಚುಮಚ್ಚುಗಳನಳಿದು,
ಸ್ವಚಿತ್ತದೊಳು ಕೂಡಿ ನಿಷ್ಪತ್ತಿ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೪ ॥

೧೧೫೩

ಅಂಗಪ್ರಕೃತಿಯನಳಿದು, ಲಿಂಗಧ್ಯಾನವ ಮಾಡಿ,
ಮಂಗಳಮಯದಲ್ಲಿ ಕೂಡಿ,
ನಿರ್ಮಲಜ್ಞಾನಿಯಾದ ಶರಣಂಗೆ ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೫ ॥

೧೧೫೪

ಅಂಗದ ಕಳವಳವ ಲಿಂಗದಲ್ಲಿ ಅಳಿದು,
ಮನದ ಭ್ರಾಂತಿಯ ಭಾವದಲ್ಲಿ ಅಳಿದು,
ಇದು ಕಾರಣ, ಶಿವಜ್ಞಾನಿಯಾದ ಶರಣನು
ತನ್ನತಾನೇ ಬಲ್ಲನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೬ ॥

೧೧೫೫

ಮಾತು ಇಲ್ಲದ ಮನೆಯಲ್ಲಿ ಒಬ್ಬ ಸತಿಯಳು ಕುಳಿತು
ನೀತಿಯ ಹೇಳುತಿರ್ಪಳು ನೋಡಾ.
ಆ ನೀತಿಯ ಜ್ಞಾನವೆಂಬ ಪುರುಷ ಕೇಳಿ
ಮೌನವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೭ ॥

೧೧೫೬

ಅಂಗವಿಲ್ಲದ ಬಾಲೆಯು ಅಂಗಳದೊಳಗೆ ಕುಳಿತು
ಮಂಗಳಾರತಿಯ ಅಂಗಲಿಂಗ ಸಂಯೋಗವೆಂಬ ಲಿಂಗಕ್ಕೆ
ಬೆಳಗುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೮ ॥

೧೧೫೭

ಕಪ್ಪೆಯ ಒಡಲಲ್ಲಿ ಮುಪ್ಪಾಗಿ ಆರುಮಂದಿ ಸತ್ತಿರುವುದ ಕಂಡೆನಯ್ಯ.
ನಿಷ್ಪತಿಯಾಗಿ ಸತ್ತವರ ಕಂಡು, ಆ ಕಪ್ಪೆಯ ಹಿಡಿದಲ್ಲದೆ
ನಿಃಕಲಪರಬ್ರಹ್ಮಲಿಂಗವು ಕಾಣಿಸದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೯೯ ॥

೧೧೫೮

ಮನೆಮನೆಗೆ ಹಾರುವ ಕೋಡಗನ ಒಡಲಲ್ಲಿ
ಅರವತ್ತಾರು ಕೋಟಿ ನುಸುಳುಗುಂಡಿಯ ಕಂಡೆನಯ್ಯ.

ಆ ಕೋಡಗನ ಒಂದು ಇರುವೆ ನುಂಗಿತು ನೋಡಾ !
ಆ ಇರುವೆಯ ತಲೆಯ ಮೇಲೆ ಒಂದು ಮೇರುವೆಯ ಕಂಡೆನಯ್ಯ.
ಆ ಮೇರುವೆಯೊಳಗೊಬ್ಬ ಭಾಮಿನಿಯು
ತನ್ನ ನಿಲವ ತಾನೆ ನೋಡಿ ನೋಡಿ ನಿಶ್ಚಯಿಸುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೦೦ ||

೧೧೫೯

ಋತುವಿಲ್ಲದ ಹಂಸನು ತತ್ತಿಯನಿಕ್ಕುವುದ ಕಂಡೆನಯ್ಯ.
ಆ ತತ್ತಿಯೊಳಗೆ ಒಂದು ವಿಚಿತ್ರವಿಪ್ಪುದು ನೋಡಾ.
ಅದು ಹೇಗೆಂದಡೆ; ಅದಕ್ಕೆ ಶಿರ ಒಂದು, ಮುಖ ಮೂರು.
ಆರು ಕಂಬದ ಶಿವಾಲಯದೊಳಗೆ ಒಬ್ಬ ಬಾಲಕನ ಕಂಡೆನಯ್ಯ.
ಆ ಬಾಲಕನು ಸಪ್ತಶರಧಿಯ ದಾಂಟಿ,
ಅಷ್ಟಕುಲಪರ್ವತದ ಮೇಲೆ, ಒಂಬತ್ತು ಬಾಗಿಲ ಗುಡಿಯ ಶಿಖರವ ಪೊಕ್ಕು,
ಆ ಶಿಖರದ ಮೇಲೆ ಸ್ವಯಜ್ಞಾನಪ್ರಕಾಶವು
ತೊಳಗಿ ಬೆಳಗುತಿರ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೦೧ ||

೧೧೬೦

ಸಂಚಲಿಸುವ ಮನಕ್ಕೆ ಮಿಂಚುದೋರುವುದೇನಯ್ಯ ?
ಸಂಚಲಂಗಳನಳಿದು, ಪಂಚಬ್ರಹ್ಮವ ಕೂಡಿ,
ನಿಶ್ಚಿಂತ ನಿರಾಕುಳಲಿಂಗವನಾಚರಿಸಬಲ್ಲಾತನೆ ಸ್ವಯಜ್ಞಾನಿ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೦೨ ||

೧೧೬೧

ಸಜ್ಜನವೆಂಬ ಮಾರ್ಗದಲ್ಲಿ ಒಬ್ಬ ಬಾಲೆಯು ನಿಂದು
ನಿಜವ ತೋರುತಿರ್ಪಳು ನೋಡಾ.
ಆ ನಿಜವ ಈ ಜನಂಗಳೇನು ಬಲ್ಲರಯ್ಯ ?
ಅಜ ಹರಿ ಸುರ ನಾರದ ಮೊದಲಾದವರಿಗೆ ಅಗೋಚರವೆನಿಸಿತ್ತು ನೋಡಾ.
ಸ್ವಜ್ಞಾನಿಯಾದ ಶರಣನು ಆ ನಿಜವ ನೋಡಬಲ್ಲನಯ್ಯಾ.
ಆ ಬಾಲೆಯ ಅಂಗವ ಕೂಡಬಲ್ಲನಯ್ಯ.
ಆ ಸಜ್ಜನವೆಂಬ ಮಾರ್ಗವ ಹತ್ತಬಲ್ಲನಯ್ಯ.
ಇಂತಪ್ಪ ಶರಣಂಗೆ ನಮೋ ನಮೋ ಎನುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೦೩ ||

೧೧೬೨

ಕಂಗಳ ಮುಂದಣ ರೂಪವನಳಿದು,
ಮಂಗಳಪ್ರಭೆಯಲ್ಲಿ ನಿಂದು
ಸಂಗಸಂಯೋಗವೆಂಬ ಲಿಂಗದಲ್ಲಿ
ಇರಬಲ್ಲಾತನೆ ನಿರ್ಮಲಜ್ಞಾನಿ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೦೪ ॥

೧೧೬೩

ಕತ್ತಲೆ ಮನೆಯೊಳಗೆ ಬೆಳಗುಂಟೇನಯ್ಯ ?
ಆ ಕತ್ತಲೆ ಮನೆಯೊಳಗೆ ಜ್ಯೋತಿಯ ಮುಟ್ಟಿಸಲು
ಕತ್ತಲೆ ಹರಿದುಹೋಯಿತ್ತು ನೋಡಾ.
ಈ ಪರಿಯಾದಲ್ಲಿ ಮನವೆಂಬ ಕತ್ತಲೆಯಲ್ಲಿ
ಜ್ಞಾನವೆಂಬ ಜ್ಯೋತಿಯ ಮುಟ್ಟಿಸಲು
ಒಳಹೊರಗೆ ಪರಿಪೂರ್ಣವಾಗಿ ಬೆಳಗಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೦೫ ॥

೧೧೬೪

ಆಕಾಶಕ್ಕೆ ಬೈಗುಬೆಳಗುಂಟೇನಯ್ಯ ?
ಸೂರ್ಯನಂಗದಲ್ಲಿ ಕಪ್ಪು ಉಂಟೇನಯ್ಯ ?
ಹಾಲಸಾಗರದಲ್ಲಿ ವಿಷವುಂಟೇನಯ್ಯ ?
ಜ್ಞಾನಿಯಂತರಂಗದಲ್ಲಿ ಅಜ್ಞಾನ ಉಂಟೇನಯ್ಯ ?
ಝೇಂಕಾರ ನಿಜಲಿಂಗಪ್ರಭುವೆ. ॥ ೩೦೬ ॥

೧೧೬೫

ಚಿಪ್ಪಿನೊಳಗಣ ಮುತ್ತಿನಂತೆ, ಕಲ್ಲೊಳಗಣ ವಜ್ರದಂತೆ,
ನಿರೊಳಗಣ ಪ್ರತಿಬಿಂಬದಂತೆ, ಕ್ಷೀರದೊಳಗಣ ಘೃತದಂತೆ,
ಬೀಜದೊಳಗಣ ವೃಕ್ಷದಂತೆ, ಅಗ್ನಿಯೊಳಗಣ ಪ್ರಕಾಶದಂತೆ,
ಭಾವದೊಳಗಣ ನಿರ್ಭಾವದಂತೆ ನಿಮ್ಮ ಶರಣ ಸಂಬಂಧವು
ಝೇಂಕಾರ ನಿಜಲಿಂಗಪ್ರಭುವೆ. ॥ ೩೦೭ ॥

೧೧೬೬

ತಲೆ ಒಂದು, ಮುಖ ಮೂರು, ಹಸ್ತವಾರು,
ಮೂವತ್ತಾರು ಪಾದಂಗಳು,

ಒಂಬತ್ತು ಬಾಗಿಲ ಶಿವಾಲಯದೊಳಗೆ ಪೂಜೆಗೊಂಬ ಲಿಂಗವನು,
ಏಕೋಮನೋಹರನೆಂಬ ಪೂಜಾರಿಯು
ನವರತ್ನದ ತೊಂಡಲಂಗಳಂ ಕಟ್ಟಿ
ಲಿಂಗಾರ್ಚನೆಯ ಮಾಡುತಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೦೮ ||

೧೧೬೭

ನಾಲ್ಕು ಮುಖದ ಸೂಳೆಯು
ಅರವತ್ತಾರು ಕೋಟಿ ಕೇರಿಗಳಲ್ಲಿ ಸುಳಿಸುಳಿದಾಡುತಿರ್ಪಳು ನೋಡಾ.
ಆ ಸೂಳೆಯೊಳಗೆ ಬ್ರಹ್ಮ ವಿಷ್ಣು ರುದ್ರಾದಿಗಳು ಅಡಗಿರ್ಪರು ನೋಡಾ.
ಇದು ಕಾರಣ, ಆದಿಯಲ್ಲಿ ಶಿವಜ್ಞಾನ ಉದಯದೋರಲು
ಅರವತ್ತಾರು ಕೋಟಿ ಕೇರಿಗಳು ಅಳಿದು ಹೋದವು.
ಆ ಸೂಳೆಯ ಮುಖ ಮುರಿದು ನಿಂದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೦೯ ||

೧೧೬೮

ಕಳವಳಿಸುವ ಕರಣಂಗಳಿಗೆ ಮುಖಗೊಡದೆ
ಒಳಹೊರಗೆ ಪರಿಪೂರ್ಣವಾದ ಜ್ಞಾನವನರಿತು
ಪರಕೆಪರವಾದ ಲಿಂಗವನಾಚರಿಸಿ,
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೧೦ ||

೧೧೬೯

ಕಾಯದ ಕರಣಂಗಳಿಗೆ ನಿಲ್ಲದೆ
ಮಾಯದ ಬಲೆಯ ಹರಿದು ನಿಂದು, ದೇವ ದೇವನನರ್ಚಿಸಿ,
ಸ್ವಯಜ್ಞಾನಿಯಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೧೧ ||

೧೧೭೦

ಆದಿಯಲ್ಲಿ ಸ್ವಯಜ್ಞಾನಿ ಉದಯವಾದ ಕಾರಣ,
ಪರಬ್ರಹ್ಮವೆಂಬ ಲಿಂಗವು ಭಾವಕ್ಕೆ ತೋರಿತ್ತು ನೋಡಾ.
ಆ ಲಿಂಗದಲ್ಲಿ ಇದ್ದ ಕಾರಣ, ಆ ಭಾವಕ್ಕೆ ಬೆರಗಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೧೨ ||

೧೧೨೧

ಮನದ ವಾಸನೆಗಳ ಹರಿದು, ಘನತರ ಲಿಂಗವನಾಚರಿಸಿ,
ನಾನು ನೀನೆಂಬುಭಯಗಳನಳಿದು,
ಸ್ವಾನುಭವಸಿದ್ಧಾಂತವಳವಟ್ಟ ಲಿಂಗೈಕ್ಯನ
ಎನಗೊಮ್ಮೆ ತೋರಿಸಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೩೧೩ ॥

೧೧೨೨

ಆದಿಯಲ್ಲಿ ಶಿವಾತ್ಮನು ಉದಯವಾದ ಕಾರಣ
ಮಹಾಲಿಂಗದ ಬೆಳಗು ತೋರಿತಯ್ಯ.
ಆ ಲಿಂಗದ ಬೆಳಗಿನೊಳಗೆ ತಾನು ತಾನೆಂಬುದ ಮರೆದು
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧೪ ॥

೧೧೨೩

ಆರು ಸ್ಥಲದಲ್ಲಿ ಆರು ಮೂರ್ತಿಗಳ ಕಂಡೆನಯ್ಯ.
ಆರು ಮುಖಂಗಳಲ್ಲಿ ಆರು ಲಿಂಗವ ಕಂಡೆನಯ್ಯ.
ಆರರಿಂದತ್ತ ಮೀರಿದ ಮಹಾಮಹಿಮನ ಕಂಡು
ನಿಶ್ಚಿಂತ ನಿರಾವಾಶಿಗಳಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧೫ ॥

೧೧೨೪

ತನ್ನೊಡನೆ ಒಬ್ಬ ಭಾಮಿನಿ ಪುಟ್ಟಿದಳು ನೋಡಾ.
ಆ ಭಾಮಿನಿಯ ಅಂಗದೊಳಗೆ ಐದು ಗ್ರಾಮಂಗಳು ಹುಟ್ಟಿದವು ನೋಡಾ.
ಆ ಗ್ರಾಮದೊಳಗೆ ಸುಳಿದಾಡುವ ಹಂಸನ ಕಂಡೆನಯ್ಯ.
ಆ ಹಂಸನ ಹಿಡಿಯಲಾಗಿ ಆ ಹಂಸ ಹಾರಿ
ಆ ಭಾಮಿನಿಯ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧೬ ॥

೧೧೨೫

ಆರು ಮೂರು ದೇಶದ ಮುಂದೆ
ಒಬ್ಬ ಪುರುಷ ನಿಂದಿರುವುದ ಕಂಡೆನಯ್ಯ.
ಆ ಪುರುಷಂಗೆ ಒಬ್ಬ ಸತಿ ಇಪ್ಪಳು ನೋಡಾ.
ಆ ಸತಿಯಳಿಗೆ ಒಂದು ಶಿಶು ಹುಟ್ಟಿ,

ಐವರ ಸಂಗವ ಮಾಡುತಿರ್ಪುದು ನೋಡಾ.
ಆ ಐವರ ಒಂದು ಇರುವೆ ನುಂಗಿತ್ತು ನೋಡಾ.
ಆ ಶಿಶುವು ಹೆತ್ತ ತಾಯ ನುಂಗಿ,
ತಂದೆಯೊಡನೆ ಇರ್ದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧೭ ॥

೧೧೭೬

ಕಣ್ಣು ಇಲ್ಲದವ ಕಂಡನಯ್ಯ ಒಂದು ಲಿಂಗವ.
ಆ ಲಿಂಗಕ್ಕೆ ತಲೆ ಒಂದು, ಮುಖ ಮೂರು,
ಆರು ಹಸ್ತ, ಮೂವತ್ತಾರು ಪಾದಂಗಳು.
ಐವತ್ತೆರಡು ಎಸಳಿನ ಶಿವಾಲಯದೊಳಗೆ
ಪೂಜೆಗೊಂಬ ಲಿಂಗವನು
ಏಕೋಮನೋಹರನೆಂಬ ಪೂಜಾರಿಯು ಕಂಡು
ನವರತ್ನ ತೊಂಡಲಂಗಳ ಕಟ್ಟಿ
ಆ ಲಿಂಗಾರ್ಚನೆಯ ಮಾಡುತಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧೮ ॥

೧೧೭೭

ತಂದೆಯೊಡನೆ ಒಬ್ಬ ಮಗ ಹುಟ್ಟಿ
ಐದು ಕೇರಿಗಳೊಳಗೆ ಸುಳಿದಾಡುತಿರ್ಪನು ನೋಡಾ.
ಆ ಕೇರಿಗಳಲ್ಲಿ ಭಕ್ತಾಂಗನೆ ಉದಯವಾದಳು ನೋಡಾ.
ಭಕ್ತಾಂಗನೆಯ ಸಂಗದಿಂದ ಒಂಬತ್ತು ಸೋಪಾನಂಗಳನೇರಿ
ಕಡೆಯ ಬಾಗಿಲಲ್ಲಿ ನಿಂದು, ತನ್ನ ಗಮನವ ತಾನೇ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೧೯ ॥

೧೧೭೮

ಆರು ಕಂಬದ ಶಿವಾಲಯದ ಮೇಲೆ
ಸಾಸಿರದಳದ ಮಂಟಪವ ಕಂಡೆನಯ್ಯ.
ಆ ಮಂಟಪದೊಳಗೆ ಒಬ್ಬ ಸತಿಯಳು ನಿಂದಿರುವುದ ಕಂಡೆನಯ್ಯ.
ಆ ಸತಿಯಳು ತನ್ನ ನಿಲವ ತಾನೆ ನೋಡಿ
ನಿಃಪ್ರಿಯವಾದಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೦ ॥

೧೧೭೯

ಓಂಕಾರವೆಂಬ ಉಲುಹಿನಲ್ಲಿ ಪ್ರಣವಸೋಹಂಕಾರವಿಡಿದು
ಆಚರಿಸುತಿದ್ದನಯ್ಯ ಆ ಶರಣನು.
ಆ ಶರಣಂಗೆ ಇಹಲೋಕವೆಂದಡೇನು? ಪರಲೋಕವೆಂದಡೇನು?
ಇಹಪರವನೊಳಕೊಂಡು ತಾನು ತಾನಾದ ಭೇದವ ತಾನೇ ಬಲ್ಲನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೧ ॥

೧೧೮೦

ಆಧಾರಚಕ್ರದಲ್ಲಿ ಬ್ರಹ್ಮಜ್ಯೋತಿ,
ಸ್ವಾಧಿಷ್ಠಚಕ್ರದಲ್ಲಿ ವಿಷ್ಣುಜ್ಯೋತಿ,
ಮಣಿಪೂರಕ ಚಕ್ರದಲ್ಲಿ ರುದ್ರಜ್ಯೋತಿ,
ಅನಾಹತಚಕ್ರದಲ್ಲಿ ಈಶ್ವರಜ್ಯೋತಿ,
ವಿಶುದ್ಧಿಚಕ್ರದಲ್ಲಿ ಸದಾಶಿವಜ್ಯೋತಿ,
ಆಜ್ಞೇಯಚಕ್ರದಲ್ಲಿ ಪರಶಿವಜ್ಯೋತಿ,
ಬ್ರಹ್ಮರಂಧ್ರಚಕ್ರದಲ್ಲಿ ಮಹಾಜ್ಞಾನಜ್ಯೋತಿ,
ಶಿಖಾಚಕ್ರದಲ್ಲಿ ಸ್ವಯಜ್ಞಾನಜ್ಯೋತಿ,
ಪಶ್ಚಿಮಚಕ್ರದಲ್ಲಿ ನಿರಂಜನಜ್ಯೋತಿ,
ಅಣುಚಕ್ರದಲ್ಲಿ ಪರಬ್ರಹ್ಮಜ್ಯೋತಿ.
ಇಂತು ದಶಚಕ್ರಂಗಳನರಿತು ನಿಶ್ಚಿಂತ ನಿರಾಳನಾಗಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೨ ॥

೧೧೮೧

ಏನೇನೂ ಇಲ್ಲದಲ್ಲಿ ಒಬ್ಬ ಪುರುಷ ನಿಂದಿರುವುದ ಕಂಡೆನಯ್ಯ.
ಆ ಪುರುಷಂಗೆ ಒಬ್ಬ ಸತಿಯಳು ಹುಟ್ಟಿದಳು ನೋಡಾ.
ಆ ಸತಿಯಳ ಅಂಗದಲ್ಲಿ ಮೂವರು ಮಕ್ಕಳು ಇರುವುದ ಕಂಡೆನಯ್ಯ.
ಆ ಮಕ್ಕಳು ಒಂದೊಂದು ಎರಡೆರಡಾಗಿ,
ಆರು ಕೇರಿಗಳಲ್ಲಿ ಸುಳಿದಾಡುತಿರ್ಪರು ನೋಡಾ.
ಆ ಕೇರಿಗಳನಳಿದು, ಮೂರು ಮಕ್ಕಳ ಬಿಟ್ಟು
ಆ ಸತಿಯಳ ಅಂಗವ ಕೂಡಿ, ಆ ಪುರುಷನಾಚರಿಸುತಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೩ ॥

೧೧೮೨

ಅಂಗದ ಗುಣಾದಿಗಳನಳಿದು, ಭಾವ ಬೆಳಗಿನೊಳು ಕೂಡಿ,
ತ್ರಿಕೂಟದಲ್ಲಿ ನಿಂದು, ಪರಬ್ರಹ್ಮರಂಧ್ರವೆಂಬ ಪೌಳಿಯಂ ಪೊಕ್ಕು,
ಶಿಖಾಚಕ್ರವೆಂಬ ಮೇರುವೆಯಂ ಹತ್ತಿ ,
ಪಶ್ಚಿಮದ್ವಾರವೆಂಬ ನಿರಂಜನಜ್ಯೋತಿಯ ನೋಡಿ
ನಿರಾವಯವೆಂಬ ಕರಸ್ಥಲದ ಮೇಲೆ ನಿಃಶಬ್ದ ನಿರಾಳಲಿಂಗವಿಪ್ಪುದು ನೋಡಾ.
ಆ ಲಿಂಗಕ್ಕೆ ಓಂ ನಮೋ ಓಂ ನಮೋ ಎನುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೪ ॥

೧೧೮೩

ಕಾಯದ ಗುಣಗಳನಳಿದು, ಮಾಯದ ಬಲೆಗೆ ಸಿಲ್ಕದೆ.
ಮನೋಭಾವದೊಳು ಕೂಡಿ, ಆತ್ಮನೆಂಬ ಬೆಳಗಿನೊಳು ನಿಂದು
ಬಯಲಿಂಗೆ ಬಯಲು ಇದೆಯೆಂದು ಆಚರಿಸುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೫ ॥

೧೧೮೪

ಊರೊಳಗೆ ಇರುವ ನಾರಿಯ ಕಂಡೆನಯ್ಯ.
ಮೇರುವೆಯೊಳಗೆ ಇರುವ ಪುರುಷನ ಕಂಡೆನಯ್ಯ.
ಊರೊಳಗಣ ನಾರಿಂಗೆ ಕಣ್ಣು ಇಲ್ಲ ನೋಡಾ.
ಮೇರುವೆಯೊಳಗಣ ಪುರುಷಂಗೆ ತಲೆಯಿಲ್ಲ ನೋಡಾ.
ಊರೊಳಗಣ ನಾರಿಂಗೆ ಕಣ್ಣು ಬಂದಲ್ಲದೆ,
ಮೇರುವೆಯೊಳಗಣ ಪುರುಷಂಗೆ ತಲೆ ಬಂದಲ್ಲದೆ
ನಾನಾರು ಎಂಬ ಭೇದವು ಕಾಣಿಸದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೬ ॥

೧೧೮೫

ಹೃದಯದೊಳಗಿರ್ಪ ಪ್ರಾಣಲಿಂಗವನರಿತು,
ತ್ರಿಕೂಟದಲ್ಲಿ ನಿಂದು,
ಬ್ರಹ್ಮಚಕ್ರ ಶಿಖಾಚಕ್ರ ಪಶ್ಚಿಮಚಕ್ರದಲ್ಲಿ ನಿಂದು,
ನಿರಂಜನಜ್ಯೋತಿಯ ಕೂಡಿ,
ನಿಶ್ಚಿಂತ ನಿರಾಳಲಿಂಗವ ಬಯಸುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೨೭ ॥

೧೧೮೬

ಹಲವು ಕಡೆಗೆ ಹರಿವ ಮನವ ಚಿತ್ತದಲ್ಲಿ ನಿಲಿಸಿ,
ಆ ಚಿತ್ತವ ನಿಶ್ಚಿಂತದಲ್ಲಿ ಕರಗಿಸಿ,
ನಿರಾಕುಳಲಿಂಗವನಾಚರಿಸುವ ಸ್ವಯಜ್ಞಾನಿಗೆ
ಓಂ ನಮೋ ಓಂ ನಮೋ ಎನುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೨೮ ||

೧೧೮೭

ಹುಟ್ಟುವ ಕರಣಂಗಳ ಮುರಿದು,
ತಟ್ಟುಮುಟ್ಟುಗಳಿಗೆ ಸಿಲ್ಕದೆ,
ಬಟ್ಟಬಯಲ ಘಟ್ಟಿಗೊಳಿಸಿದ ಶರಣಂಗೆ
ಇಹಲೋಕವೆಂದಡೇನಯ್ಯ? ಪರಲೋಕವೆಂದಡೇನಯ್ಯ?
ಇಹಪರಕೆ ಸಿಲ್ಕದೆ ನಿಶ್ಚಿಂತ ನಿರಾಳನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೨೯ ||

೧೧೮೮

ಪೃಥ್ವಿ ಆಕಾಶದ ಮೇಲೆ ಏಕಾಂತಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ಏಕೋಮನೋಹರನೆಂಬ ಪೂಜಾರಿಯು
ಲಿಂಗಾರ್ಚನೆಯ ಮಾಡಿ
ನಿಃಪ್ರಿಯವಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೩೦ ||

೧೧೮೯

ಮೂರುಲೋಕದ ಮೇಲೆ
ಒಂದು ಕೋಡಗ ಕುಳಿತಿರುವುದ ಕಂಡೆನಯ್ಯ.
ಆ ಕೋಡಗದ ತಲೆಯ ಮೇಲೆ ಒಂದು ರತ್ನವಿಪ್ಪುದು ನೋಡಾ.
ಆ ಕೋಡಗನ ಕೊಂದು ಆ ರತ್ನವ ನುಂಗಿದಲ್ಲದೆ
ತಾನಾರು ಎಂಬ ಭೇದವು ಕಾಣಿಸದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೩೧ ||

೧೧೯೦

ಬಯಲೆ ಅಂಗವಾದ ಶರಣಂಗೆ, ನಿರ್ವಯಲೇ ಲಿಂಗ ನೋಡಾ.
ಆ ಲಿಂಗಕ್ಕೆ ಒಂಬತ್ತು ಬಾಗಿಲ ಶಿವಾಲಯವಿಪ್ಪುದು ನೋಡಾ.

ಆ ಶಿವಾಲಯದೊಳಗೊಬ್ಬ ಸತಿಯಳು ನಿಂದು,
ಐವರ ಕೂಡಿಕೊಂಡು, ಆ ಲಿಂಗಾರ್ಚನೆಯ ಮಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೨ ॥

೧೧೯೧

ನಾದ ಬಿಂದು ಕಲೆಗಳು ಇಲ್ಲದ ಮುನ್ನ,
ಅತ್ತತ್ತಲೆ ಓಂಕಾರನೆಂಬ ಗಣೇಶ್ವರನಿರ್ಪ ನೋಡಾ.
ಆ ಓಂಕಾರಗಣೇಶ್ವರಂಗೆ ಒಬ್ಬ ಸತಿಯಳು ಇರ್ಪಳು ನೋಡಾ.
ಆ ಸತಿಯಳ ಅಂಗದಲ್ಲಿ ಐವರು ಮಕ್ಕಳು ಇರ್ಪರು ನೋಡಾ.
ಐವರು ಮಕ್ಕಳು ಇಪ್ಪತ್ತೈದು ಕೇರಿಗಳಲ್ಲಿ ಸುಳಿದಾಡುತಿರ್ಪರು ನೋಡಾ.
ಆ ಇಪ್ಪತ್ತೈದು ಕೇರಿಗಳ ಒಂದು ಇರುವೆ ನುಂಗಿತು ನೋಡಾ.
ಆ ಇರುವೆಯ ಒಬ್ಬ ಸತಿಯಳು ನುಂಗಿದಳು ನೋಡಾ.
ಆ ಸತಿಯಳ ಓಂಕಾರಗಣೇಶ್ವರನು ನುಂಗಿದನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೩ ॥

೧೧೯೨

ನಾದಘೋಷವೆಂಬ ಲಿಂಗದಲ್ಲಿ ಪಾತ್ರ ಸತ್ಪಾತ್ರವನರಿತು,
ಆ ಲಿಂಗದಲ್ಲಿ ಕೂಡಿ ಪರಿಪೂರ್ಣವಾದ ಶರಣಂಗೆ,
ಇಹಲೋಕವೆಂದಡೇನಯ್ಯ? ಪರಲೋಕವೆಂದಡೇನಯ್ಯ?
ಇಹಪರವನೊಳಕೊಂಡು ತಾನು ತಾನಾದಲ್ಲಿಗೆ
ಶೂನ್ಯವಳಿದು ನಿಃಶೂನ್ಯ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೪ ॥

೧೧೯೩

ಕಾಡುವ ಕರಣಂಗಳೇ ಮಕ್ಕಳು, ಬೇಡುವ ಮನವೇ ಭ್ರಾಂತಿ.
ಕಾಡುವ ಕರಣಂಗಳಿಗೆ ಸಿಲ್ಕದೆ, ಬೇಡುವ ಭ್ರಾಂತಿಗೆ ಸಿಲ್ಕದೆ
ತ್ರಿಕೂಟದಲ್ಲಿಪ್ಪ ಲಿಂಗವ ನೋಡಿ
ಭ್ರಮಿಸುವ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಕಾರ ನಿಜಲಿಂಗಪ್ರಭುವೆ. ॥ ೩೩೫ ॥

೧೧೯೪

ಮೂರು ತನುಗಳ ಗತಿಗೆಡಿಸಿ, ಜ್ಞಾನೈಕ್ಯದಲ್ಲಿ ನಿಂದು,
ಪರಂಜ್ಯೋತಿಯೆಂಬ ಲಿಂಗವನಾಚರಿಸಿ

ನಿಶ್ಚಿಂತ ನಿರಾಕುಳನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೬ ॥

೧೧೯೫

ಮೂರು ಮೇರುವೆಯ ಮೇಲೆ
ಮೀರಿ ತೋರುತಿತ್ತಯ್ಯ ಒಂದು ಲಿಂಗ.
ಆ ಲಿಂಗದಲ್ಲಿಯೆ ಒಬ್ಬ ಪುರುಷನು ಐವರ ಕೂಡಿಕೊಂಡು
ಆ ಲಿಂಗಾರ್ಚನೆಯ ಮಾಡಿ ನಿಃಪ್ರಿಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೭ ॥

೧೧೯೬

ಅಂತಃಕರಣಚತುಷ್ಟಯಂಗಳೆಂಬ ನಾಲ್ಕು ಕಂಬದ ಮೇಲೆ
ಆಕಾಶವೆಂಬ ಚಪ್ಪರವನಿಕ್ಕಿ, ಮಹಾಜ್ಞಾನವೆಂಬ ಗದ್ದುಗೆಯ ನೆಲೆಯಂಗೊಳಿಸಿ,
ಚಂದ್ರ ಸೂರ್ಯಾದಿಗಳೆಂಬ ದೀವಿಗೆಯ ಮುಟ್ಟಿಸಿ,
ನಿಃಕಲಪರಬ್ರಹ್ಮಲಿಂಗಕ್ಕೆ ಓಂ ನಮೋ ಓಂ ನಮೋ ಎನುತಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೮ ॥

೧೧೯೭

ಅಂಗವಿಲ್ಲದ ಹಂಸಗೆ ಪಾದವೊಂದು, ಮುಖ ಮೂರು, ರೆಕ್ಕೆ ಆರು,
ಮೂವತ್ತಾರು ಗರಿಗಳಿಪ್ಪವು ನೋಡಾ.
ಆರುಮೂರು ದೇಶ ಮೀರಿ ನಿಂದು, ನಿರಾಲಂಬಲಿಂಗವ ಕೂಡಲಾಗಿ,
ಅಂಗವಿಲ್ಲದ ಹಂಸ ಉದಯದೋರಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೩೯ ॥

೧೧೯೮

ಅಷ್ಟಕುಲಪರ್ವತದ ಮೇಲೆ ದೃಷ್ಟಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ಒಬ್ಬ ಪುರುಷನು ಕಷ್ಟಕರ್ಮವನಳಿದು,
ಬಟ್ಟಬಯಲನೊಳಗೊಂಡು, ನಿಃಶಬ್ದವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೪೦ ॥

೧೧೯೯

ಕಣ್ಣಮೇಲೆ ಕಣ್ಣು ಹುಟ್ಟಿ ಕಂಡೆನಯ್ಯ ಒಂದು ಲಿಂಗವ,
ಆ ಲಿಂಗದಲ್ಲಿ ಒಬ್ಬ ಸತಿಯಳು ಇರ್ಪಳು ನೋಡಾ.
ಆ ಸತಿಯಳ ಅಂಗದಲ್ಲಿ ಒಬ್ಬ ಬಾಲಕ ಹುಟ್ಟಿ, ನಾಲ್ಕು ದೇಶವನೊಂದುಮಾಡಿ

ಬಯಲಿಂಗೆ ಬಯಲು, ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೪೧ ||

೧೨೦೦

ಕತ್ತಲೆಯ ಮನೆಯೊಳಗೊಂದು ಪಶುವಿಪ್ಪುದು ನೋಡಾ.
ಆ ಪಶುವಿಂಗೆ ಏಳೆಂಟು ಕೋಣಗಳು ಸ್ನೇಹವಾಗಿರ್ಪವು ನೋಡಾ.
ಆದಿಯಲ್ಲಿ ಮಹಾಜ್ಞಾನವುದೋರಲು
ಕತ್ತಲೆಮನೆ ಹರಿದು, ಪಶು ಬಯಲಾಯಿತ್ತು ನೋಡಾ.
ಏಳೆಂಟು ಕೋಣಗಳು ಅಡಗಿದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೪೨ ||

೧೨೦೧

ಆದಿಯ ಲಿಂಗವು, ಆರು ಕಂಬದ ಶಿವಾಲಯವ ಪೊಕ್ಕು ನೋಡಲು,
ಆ ಶಿವಾಲಯದೊಳಗೊಂದು ಶಿಶು ಇಪ್ಪುದು ನೋಡಾ.
ಆ ಶಿಶುವು ಮೂರು ಮಂಟಪವನೇರಿ
ಆದಿಯ ಲಿಂಗವ ಕೂಡಿದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೪೩ ||

೧೨೦೨

ಸಾಕಾರವಳಿದು ನಿರಾಕಾರವಾದ ಶರಣಂಗೆ
ಲೋಕದ ಹಂಗುಂಟೇನಯ್ಯ? ಭ್ರಾಂತಿಸೂತಕ ಉಂಟೇನಯ್ಯ?
ತನ್ನ ನಿಜವ ತಾನೇ ತಿಳಿದು, ನಿಃಪ್ರಿಯನಾಗಿ
ಸ್ವಯಂಜ್ಞಾನವ ಆಚರಿಸುವ ಶರಣಂಗೆ
ಓಂ ನಮೋ ಓಂ ನಮೋ ಎನುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೪೪ ||

೧೨೦೩

ಒಳಗೆ ನೋಡಿದರೆ ನಿರಾಕುಳಲಿಂಗವು.
ಹೊರಗೆ ನೋಡಿದರೆ ನಿರಾಕುಳಲಿಂಗವು.
ಒಳಹೊರಗೆ ಪರಿಪೂರ್ಣವಾದ ಶರಣಂಗೆ
ಇಹಲೋಕವೆಂದಡೇನಯ್ಯಾ? ಪರಲೋಕವೆಂದಡೇನಯ್ಯಾ?
ಇಹಪರವನೊಳಕೊಂಡು ತಾನು ತಾನಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೪೫ ||

೧೨೦೪

ಆರು ಮತಗಳಿಲ್ಲದೆ, ತನ್ನ ಮನವ ತಾನೇ ಶುದ್ಧ ಮಾಡಿ,
ಸ್ವಯಜ್ಞಾನದಲ್ಲಿ ನಿಂದು, ನಿರಾಕುಳಲಿಂಗವನಾಚರಿಸಿ
ನಿರ್ಭರಿತನಾಗಿರ್ದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೩೪೬ ॥

೧೨೦೫

ಪಾತಕಾಂಗದವನಿಗೆ ನೀತಿ ನಿರ್ಮಳಲಿಂಗವು ಕಾಣಬರ್ಪುದೇನಯ್ಯಾ?
ಆ ಪಾತಕಂಗೆ ಅಹಂಕಾರವೆಂಬ ಕೋಣ ಹುಟ್ಟಿ
ಸ್ವಯಜ್ಞಾನಿಯೆಂದರಿಯದೆ
ಬಲ್ಲೆನೆಂದು ಗರ್ವಿತನಾಗಿ ನುಡಿದಾಡುವ
ಪಾತಕನ ಮುಖವ ನೋಡಲಾಗದು ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೪೭ ॥

೧೨೦೬

ಒಂದೊಂದಾಗಿ ಕೂಡಿದಲ್ಲಿಗೆ ಬಂದನಯ್ಯ ಒಬ್ಬ ವಿಶ್ವಾಸಘಾತಕನು.
ಒಂದು ಒಂದಾಗಿರ್ದುದ ಕೆಡಿಸಿ
ಛಂದವಾಯಿತೆಂದೆಂಬ ಮುದುಗುರಿಯ ಮುಖವ ನೋಡಲಾಗದು ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೪೮ ॥

೧೨೦೭

ಅಜಹರಿಸುರನಾರದರು ಮೊದಲಾದವರಿಂಗೆ
ಶಿವಜ್ಞಾನ ಅಗೋಚರವೆನಿಸಿತ್ತು ನೋಡಾ.
ಸ್ವಯಜ್ಞಾನ ಉದಯವಾದ ಶರಣಂಗೆ
ಆ ಶಿವಜ್ಞಾನ ಘಟಿಸುವುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೪೯ ॥

೧೨೦೮

ಕಾಯದ ಕರಣಂಗಳಿಗೆ ಸಿಲ್ಕಿ
ನಾನಾ ದೇವ ದಾನವ ಮಾನವರಳಿದರು ನೋಡಾ.
ನಾನು ನೀನೆಂಬ ಉಭಯಕ್ಕೆ ಸಿಲ್ಕದೆ
ಬಯಲಿಂಗೆ ಬಯಲು ನಿರ್ವಯಲು ಕೂಡಿ
ನಿಶ್ಚಿಂತನಾಗಿರ್ದನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೩೫೦ ॥

೧೨೦೯

ಹಲವು ಕಡೆಗೆ ಹರಿದಾಡುವ ಮನವ ನಿಲಿಸಿ,
ಪ್ರಾಣಲಿಂಗಸಂಬಂಧಿಯಾಗಿರ್ದನಯ್ಯ ನಿಮ್ಮ ಶರಣನು.
ಆ ಶರಣನು ನಿರಾಕುಳಲಿಂಗವನಾಚರಿಸಿ ನಿರ್ಭರಿತನಾಗಿರ್ದನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ૩೫೧ ||

೧೨೧೦

ಬತ್ತಲೆಯಾದ ಭಾಮಿನಿಯ ಅಂಗದಲ್ಲಿ
ಇಪ್ಪತ್ತೈದು ಗ್ರಾಮವ ಕಂಡೆನಯ್ಯ.
ಆ ಗ್ರಾಮದೊಳಗೊಬ್ಬ ಪುರುಷನು ಹತ್ತೆಂಟು ಕೇರಿಗಳ ದಾಂಟಿ
ನಿರವಯಲಿಂಗವನಾಚರಿಸಿ ನಿರ್ಮುಕ್ತನಾದ ಶರಣನ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ૩೫೨ ||

೧೨೧೧

ಕಾಳಮನವ ಪರಿಹರಿಸಿ, ತೊಳಲಿ ಬಳಲುವ ಜಲ್ಮವನಳಿದು,
ಬಳಲಿಕೆಯ ಕಳೆದುಳಿದು, ಅನಾದಿಲಿಂಗವನಾಚರಿಸಿ
ನಿಶ್ಚಿಂತ ನಿರಾಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ૩೫૩ ||

೧೨೧೨

ಅಂಗಕಳೆ ಲಿಂಗದಲ್ಲಿ ಅರತು, ಲಿಂಗಕಳೆ ಭಾವದಲ್ಲಿ ಅರತು,
ಆ ಭಾವಕ್ಕೆ ಬೆರಗಾಗಿ ತೋರುತಿದೆ ಒಂದು ಲಿಂಗ.
ಆ ಲಿಂಗದ ನೆನಹಿನಲ್ಲಿ ಅಡಗಿಪ್ಪ ಶರಣರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ૩೫೪ ||

೧೨೧૩

ಅಂತರಂಗ ಬೆಳಗಿನ ಸುಳುವನರಿತು ಶಾಂತಲಿಂಗವ ಕೂಡಿ
ನಾನು ನೀನೆಂಬ ಉಭಯವನಳಿದು
ಲಿಂಗೈಕ್ಯದಲ್ಲಿ ನಿಂದ ನಿರ್ಮಳಜ್ಞಾನಿಯ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ૩೫೫ ||

೧೨೧೪

ಮಾತುಮಥನಗಳಿಲ್ಲದೆ, ಜಾತಿಸೂತಕವಿಲ್ಲದೆ,
ಶಿವಾತ್ಮಜ್ಞಾನದಿಂದ ಪಂಚಮುಖವನರಿತು

ಪರಬ್ರಹ್ಮಲಿಂಗವನಾಚರಿಸಿ, ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೫೬ ॥

೧೨೧೫

ನಿತ್ಯವನರಿತು, ಪಾತಕವ ಕಳೆದು,
ಜ್ಞಾನಸ್ವಯವನರಿತು, ತ್ರಿಕೂಟದಲ್ಲಿ ನಿಂದು,
ಪರಕೆಪರವನಾಚರಿಸಿ, ಲಿಂಗಪರಿಣಾಮಿಯಾಗಿರ್ದನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೫೭ ॥

೧೨೧೬

ಮನ ಬುದ್ಧಿ ಚಿತ್ತ ಅಹಂಕಾರವೆಂಬ ನಾಲ್ಕು ಗುಣಾದಿಗಳ ಹಿಡಿದು,
ಜ್ಞಾನದಲ್ಲಿ ನಿಂದು, ಸ್ವಯಂಜ್ಯೋತಿಲಿಂಗವ ನೋಡಿ,
ಸ್ವಯಜ್ಞಾನಿಯಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೫೮ ॥

೧೨೧೭

ಅಂತರಂಗ ಬಹಿರಂಗ ಶುದ್ಧನಾದ ಶರಣನ ದಿಟಪುಟವ ನೋಡಿರಯ್ಯ.
ಅಂತಪ್ಪ ಶರಣನ ಕಂಡು ನಮೋ ನಮೋ ಎನುತಿರ್ದೆಯಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೫೯ ॥

೧೨೧೮

ಧರೆಯಾಕಾಶದ ಮೇಲೆ ಒಬ್ಬ ಪುರುಷ ನಿಂದು
ಪರಕೆಪರವಾದ ಲಿಂಗವ ತೋರುತಿಪ್ಪ ನೋಡಾ.
ಆ ಲಿಂಗದಲ್ಲಿ ನಿಶ್ಚಿಂತ ನಿರಾವಾಸಿಯಾಗಿದ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೬೦ ॥

೧೨೧೯

ಆಕಾರವಳಿದು ನಿರಾಕಾರವಾದ ಶರಣನು
ಏಕಮೇವ ಪರಬ್ರಹ್ಮಲಿಂಗವನಾಚರಿಸುತಿರ್ದನು ನೋಡಾ.
ಸಾಕಾರವಿಡಿದು, ಆ ಲಿಂಗದಲ್ಲಿ ಕೂಡಿ,
ನಿಶ್ಚಿಂತ ನಿರಾಕುಳನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೬೧ ॥

೧೨೨೦

ಆರು ನೆಲೆಯ ಮಂಟಪದ ಮೇಲೆ
ಮೂರು ಕೋಣೆಯ ಕಂಡೆನಯ್ಯ.

ಆ ಮೂರು ಕೋಣೆಯ ಮೇಲೆ ಮೀರಿದ ಲಿಂಗವ ಕಂಡೆನಯ್ಯ.
ಆ ಮೀರಿದ ಲಿಂಗವು ತನ್ನ ತಾನೇ ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೬೨ ॥

೧೨೨೧

ಆತ್ಮನೆಂಬ ಅಂಗದಲ್ಲಿ ನಿರಾತ್ಮನೆಂಬ ಲಿಂಗವು ತೋರಿತ್ತು ನೋಡಾ.
ಆ ಲಿಂಗದಲ್ಲಿ ತನ್ನ ಸುಳುವ ತಾನೇ ನೋಡಿ
ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೬೩ ॥

೧೨೨೨

ಆಕಾಶದ ಮೇಲೊಬ್ಬ ಸೂಳೆ ನಿಂದು
ಬೇಕುಬೇಡೆಂಬುಭಯವನಳಿದು ತೋರುತಿಪ್ಪಳು ನೋಡಾ.
ಆ ಸೂಳೆಯ ಅಂಗವ ಪೊಕ್ಕು
ನಿರವಯಲಿಂಗವನಾಚರಿಸುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೬೪ ॥

೧೨೨೩

ಬ್ರಹ್ಮ ವಿಷ್ಣು ರುದ್ರಾದಿಗಳ ಮೇಲೆ ಈಶ್ವರಲಿಂಗವ ಕಂಡೆನಯ್ಯ.
ಆ ಈಶ್ವರನ ಅಂಗವ ಪೊಕ್ಕು ಸದಾಶಿವನ ಕಂಡೆನಯ್ಯ.
ಆ ಸದಾಶಿವನ ಪೊಕ್ಕು ನಾನು ನೀನೆಂಬ ಉಭಯವಳಿದು
ನಿರ್ವಯಲಲಿಂಗವನಾಚರಿಸುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೬೫ ॥

೧೨೨೪

ಮೂರು ಮಂಟಪದ ಶಿವಾಲಯದ ಶಿಖರದ ಮೇಲೆ
ಅಘಟಿತಲಿಂಗವಿರ್ಪುದು ನೋಡಾ.
ಆ ಲಿಂಗದ ಹೃದಯಕಮಲದಲ್ಲಿ ಆರು ಮೂರ್ತಿಗಳಿಪ್ಪರು ನೋಡಾ.
ಆರು ಮೂರ್ತಿಗಳಲ್ಲಿ ಆರು ಶಕ್ತಿಯರು
ಆರಾರು ಲಿಂಗಾರ್ಚನೆಯ ಮಾಡುತಿರ್ಪರು ನೋಡಾ.
ಏಕೋಮನೋಹರನೆಂಬ ಪೂಜಾರಿಯು,
ನಿಶ್ಚಿಂತ ನಿರಾಕುಳದ ಮೇಲೆ ನಿಂದು
ಅಘಟಿತಲಿಂಗಕ್ಕೆ ಮಹಾಜ್ಞಾನವೆಂಬ ಪೂಜೆಯ ಕಟ್ಟಿ
ನಿರಾಳನಾದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೩೬೬ ॥

೧೨೨೫

ನಾಲ್ಕು ಕಂಬದ ಪೌಳಿಯ ಮೇಲೆ
ಆಕಾಶವರ್ಣದ ಸೂಳೆಯ ಕಂಡೆನಯ್ಯ.
ಆ ಸೂಳೆಯ ಅಂಗದಲ್ಲಿ ಒಬ್ಬ ಬಾಲಕ ಹುಟ್ಟಿ
ಇಪ್ಪತ್ತೈದು ಗ್ರಾಮಂಗಳನೊಂದು ಮಾಡಿ
ಮಹಾಮೇರುವೆಯ ಪೊಕ್ಕು ಗಮನಕ್ಕೆ ಗಮನ
ನಿರ್ಗಮನವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ‖ ೩೬೭ ‖

೧೨೨೬

ತಾಪತ್ರಯಂಗಳ ಕಳೆದು, ತತ್ವರೂಪಾದಿಗಳನರಿದು,
ಮಹಾಜ್ಞಾನಾದಿಗಳಲ್ಲಿ ನಿಂದು
ನಿರ್ವಯಲಿಂಗವನಾಚರಿಸಬಲ್ಲಾತನೆ ನಿರ್ಮುಕ್ತ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ‖ ೩೬೮ ‖

೧೨೨೭

ನಿತ್ಯವಿಡಿದು ಮುಕ್ತನಾಗಿ,
ಮಹಾಜ್ಞಾನವನ್ನಾಚರಿಸಿ,
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ‖ ೩೬೯ ‖

೧೨೨೮

ಹಲವು ಕಡೆಗೆ ಹರಿದಾಡುವ ಮನವ
ನಿಲಿಸಬಲ್ಲ ಶರಣನ ಅಂತರಂಗದಲ್ಲಿ
ಪರಬ್ರಹ್ಮಲಿಂಗವಿರ್ಪುದು ನೋಡಾ.
ಆ ಲಿಂಗದಲ್ಲಿ ತನ್ನ ಮರೆದು ಇರಬಲ್ಲ ಹಿರಿಯರ
ಎನಗೊಮ್ಮೆ ತೋರಿಸಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ‖ ೩೭೦ ‖

೧೨೨೯

ಕೊಂಬೆಕೊಂಬೆಗೆ. ಹಾರುವ ಕೋಡಗನ ತಲೆಯ ಮೇಲೆ
ರತ್ನವಿರ್ಪುದು ನೋಡಾ.
ಆ ಕೊಂಬೆಗಳ ಮುರಿದು, ಕೋಡಗನ ಕೊಂದು

ಆ ರತ್ನವ ತಕ್ಕೊಂಡಲ್ಲದೆ ಲಿಂಗವ ಕಾಣಬಾರದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೭೧ ||

೧೨೩೦

ಐದು ಕಂಬದ ಗುಡಿಯ ಶಿಖರದ ಮೇಲೆ
ಪರಂಜ್ಯೋತಿಯೆಂಬ ಲಿಂಗವು ತೊಳಗಿ ಬೆಳಗುತ್ತಿತ್ತು ನೋಡಾ.
ಆ ಲಿಂಗದ ಬೆಳಗಿನೊಳಗೆ ತನ್ನ ಮರೆದು ನಿಃಪ್ರಿಯನಾದ ಶರಣನ
ಎನಗೊಮ್ಮೆ ತೋರಿಸಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೩೭೨ ||

೧೨೩೧

ಮನ ನಿರ್ಮಳವಾದ ಶರಣನು
ಘನತರದ ಲಿಂಗವನಾಚರಿಸುತ್ತಿಪನು ನೋಡಾ.
ಆ ಲಿಂಗದಲ್ಲಿ ನಿಂದು, ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೭೩ ||

೧೨೩೨

ಕರ್ಮಕೋಟಲೆಯ ಹರಿದು, ಧರ್ಮದಲ್ಲಿ ನಿಂದು,
ನಿರ್ಮಳಾತ್ಮಕವಾಗಿ, ಪರಮಾನಂದದೊಳು ಕೂಡಿ,
ಪರಕೆಪರವನಾಚರಿಸಿ, ನಿರ್ಮುಕ್ತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೭೪ ||

೧೨೩೩

ಊರೊಳಗೊಂದು ಮನೆಯ ಕಂಡೆನಯ್ಯ.
ಆ ಮನೆಯೊಳಗೊಂದು ಮಾಣಿಕ್ಯವ ಕಂಡೆನಯ್ಯ.
ಆ ಮಾಣಿಕ್ಯದೊಳಗೆ ಸಪ್ತೇಳುಸಾಗರಂಗಳು ಅಷ್ಟಕುಲಪರ್ವತಂಗಳು,
ಸ್ವರ್ಗ ಮರ್ತ್ಯ ಪಾತಾಳ, ಈರೇಳುಭುವನ ಹದಿನಾಲ್ಕು ಲೋಕಂಗಳು
ಆ ಮಾಣಿಕ್ಯದ ಬೆಳಗಿನೊಳಗೆ ಇಪ್ಪವು ನೋಡಾ.
ಗಗನದ ತುಟ್ಟ ತುದಿಯ ಮೇಲೆ ಇರುವ ಹಂಸನು
ಆ ಮಾಣಿಕ್ಯವ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ || ೩೭೫ ||

೧೨೩೪

ಸರ್ವಗುಣಾದಿಗಳನಳಿದು, ಲಿಂಗಸಂಬಂಧಿಯಾಗಿ
ಘನಕೆಘನವನಾಚರಿಸಿ, ಪರಂಜ್ಯೋತಿಯೆಂಬ ಲಿಂಗದಲ್ಲಿ ಕೂಡಿದ ಶರಣಂಗೆ

ಓಂ ನಮೋ ಓಂ ನಮೋ ಓಂ ನಮೋ ಎನುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೭೬ ॥

## ಇಷ್ಟಲಿಂಗಸ್ಥಲ

೧೨೩೪

ಸಪ್ತೇಳುಸಾಗರಗಳಿಲ್ಲದಂದು, ಅಷ್ಟಕುಲಪರ್ವತಂಗಳಿಲ್ಲದಂದು,
ಸ್ವರ್ಗ ಮರ್ತ್ಯ ಪಾತಾಳಂಗಳಿಲ್ಲದಂದು,
ರವಿ ಶಶಿಗಳಿಲ್ಲದಂದು, ಆಕಾಶನಿರಾಕಾಶವಿಲ್ಲದಂದು,
ಶೂನ್ಯ ನಿಃಶೂನ್ಯವಿಲ್ಲದಂದು,
ಏನೇನು ಇಲ್ಲದಂದು ತಾನೇ ನಿರಾಳನಾಗಿರ್ದನಯ್ಯ.
ಆ ನಿರಾಳ ಚಿದ್ವಿಲಾಸದಿಂದ ಒಬ್ಬ ಶಿವನಾದ.
ಆ ಶಿವನ ಅಂತರಂಗದಲ್ಲಿ ಗುರು ಲಿಂಗ ಜಂಗಮವಿಪ್ಪುದು ನೋಡಾ.
ಆ ಶಿವನು ಮರ್ತ್ಯಲೋಕಕೆ ಬಂದು,
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂಬ
ಷಡ್ವಿಧಮೂರ್ತಿಗಳ ನಿರ್ಮಿಸಿ,
ಭಕ್ತಂಗೆ ಆಚಾರಲಿಂಗವ ಕೊಟ್ಟನಯ್ಯ.
ಮಹೇಶ್ವರಂಗೆ ಗುರುಲಿಂಗವ ಕೊಟ್ಟನಯ್ಯ.
ಪ್ರಸಾದಿಗೆ ಶಿವಲಿಂಗವ ಕೊಟ್ಟನಯ್ಯ.
ಪ್ರಾಣಲಿಂಗಿಗೆ ಜಂಗಮಲಿಂಗವ ಕೊಟ್ಟನಯ್ಯ.
ಶರಣಂಗೆ ಪ್ರಸಾದಲಿಂಗವ ಕೊಟ್ಟನಯ್ಯ.
ಐಕ್ಯಂಗೆ ಮಹಾಲಿಂಗವ ಕೊಟ್ಟನಯ್ಯ.
ಬ್ರಹ್ಮರಂಧ್ರದಲ್ಲಿಪ್ಪ ಸುನಾದ ಚಿತ್ಕಲಾಸ್ವರೂಪವನೆ ತೆಗೆದು
ಕರಸ್ಥಲಕ್ಕೆ ಇಷ್ಟಲಿಂಗವ ಕೊಟ್ಟನಯ್ಯ.
ಮನಸ್ಥಲಕ್ಕೆ ಪ್ರಾಣಲಿಂಗವ ಕೊಟ್ಟನಯ್ಯ.
ಪರಸ್ಥಲಕ್ಕೆ ಭಾವಲಿಂಗವ ಕೊಟ್ಟನಯ್ಯ.
ಆ ಪರಸ್ಥಲಕ್ಕೆ ಭಾವಲಿಂಗವ ಕೊಟ್ಟ ಕಾರಣ,
ಕರಸ್ಥಲದ ಲಿಂಗಕ್ಕೆ ಗುರುವಾದನಯ್ಯ.
ಮನಸ್ಥಲದ ಲಿಂಗಕ್ಕೆ ಗುರುಲಿಂಗವಾದನಯ್ಯ.
ಪರಸ್ಥಲದ ಲಿಂಗಕ್ಕೆ ಜಂಗಮವಾದನಯ್ಯ.
ಇದು ಕಾರಣ ಇಂತಪ್ಪ ಭೇದವನರಿದು ಆಚರಿಸಬಲ್ಲಾತನೆ
ಇಷ್ಟಲಿಂಗಸಂಬಂಧಿ ಕಾಣಾ, ಝೇಂಕಾರ ನಿಜಲಿಂಗಪ್ರಭುವೆ. ॥ ೩೭೭ ॥

೧೨೩೬

ಯೋಗೀಶ್ವರನಾದರೇನಯ್ಯ ?
ಅಹಂಕಾರವನಳಿದು, ನಿರಹಂಕಾರವನಾಚರಿಸಬೇಕಯ್ಯ.
ಜೋಗಿವೇಷವ ತೊಟ್ಟಿದ್ದರೇನಯ್ಯ ?
ಸರ್ವಚಿಂತೆಯ ಬಿಟ್ಟು, ನಿಶ್ಚಿಂತವನಾಚರಿಸಬೇಕಯ್ಯ.
ಪ್ರಣವಮತದಲ್ಲಿ ಇದ್ದರೇನಯ್ಯ ?
ವ್ಯಾಕುಳವನಳಿದು, ನಿರಾಕುಳವನಾಚರಿಸಬೇಕಯ್ಯ.
ಸನ್ಯಾಸಿಮತದಲ್ಲಿ ಇದ್ದರೇನಯ್ಯ ?
ಆಸೆಯನಳಿದು, ನಿರಾಸೆಯನಾಚರಿಸಬೇಕಯ್ಯ.
ಕಾಳಾಮುಖಮತದಲ್ಲಿದ್ದರೇನಯ್ಯ ?
ಭ್ರಾಂತಿಯನಳಿದು ನಿರ್ಭ್ರಾಂತಿಯನಾಚರಿಸಬೇಕಯ್ಯ.
ಪಾಶುಪತಮತದಲ್ಲಿ ಇದ್ದರೇನಯ್ಯ ?
ಪರವನಳಿದು ಪರಕೆ ಪರವನಾಚರಿಸಬೇಕಯ್ಯ.
ಶಿವಶರಣನಾದರೇನಯ್ಯ ?
ಸರ್ವಗುಣಾದಿಗಳನಳಿದು,
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವ ಸ್ವೀಕರಿಸಿ
ಕರಸ್ಥಲದಲ್ಲಿ ಪರಬ್ರಹ್ಮವನಾಚರಿಸಬೇಕಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೩೭೮ ||

೧೨೩೭

ಅಂತರಂಗದಲ್ಲಿ ಗುರುಲಿಂಗಜಂಗಮವ ಕಂಡೆವೆಂದು,
ಬಹಿರಂಗದಲ್ಲಿ ಹಳಿದಾಡುವರೇನಯ್ಯ ?
ಬಹಿರಂಗದಲ್ಲಿ ಗುರುಲಿಂಗಜಂಗಮವ ಕಂಡೆವೆಂದು
ಅಂತರಂಗದಲ್ಲಿ ಹಳಿದಾಡುವರೇನಯ್ಯ ?
ಅಂತರಂಗ ಬಹಿರಂಗದಲ್ಲಿ ಸಂಶಯವಿಲ್ಲದೆ
ಬಹಿರಂಗದಲ್ಲಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವನರಿತು
ಇಷ್ಟಲಿಂಗಕ್ಕೆ ಅರ್ಪಿಸಿ, ಪ್ರಾಣಲಿಂಗದಲ್ಲಿ ಕೂಡಿದ್ದೇ ಭಕ್ತಿಯೆಂಬೆನಯ್ಯ.
ಅಂತರಂಗದಲ್ಲಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವನರಿತು
ಭಾವಲಿಂಗದಲ್ಲಿ ಕೂಡಿದ್ದೇ ಸದ್ಭಕ್ತಿಯೆಂಬೆನಯ್ಯ.
ಭಕ್ತಿ ಸದ್ಭಕ್ತಿಯೆಂಬ ಭೇದವನು ಅರಿತಾತನೇ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೩೭೯ ||

೧೨೩೮

ಅನಾದಿಲಿಂಗವು ಕರಕ್ಕೆ ಬಂದಿತು ನೋಡಾ.
ಕರಕ್ಕೆ ಬಂದ ಕಾರಣ,
ಮನಸ್ಥಲಕ್ಕೆ ಅರುಹುದೋರಿತ್ತು ನೋಡಾ.
ಆ ಮನಸ್ಥಲಕ್ಕೆ ಅರುಹುದೋರಿದ ಕಾರಣ
ಪರಸ್ಥಲಕ್ಕೆ ಬೆರಗಾಯಿತ್ತು ನೋಡಾ.
ಆ ಪರಸ್ಥಲಕ್ಕೆ ಅರುಹುದೋರಿದ ಕಾರಣ
ಮನಸ್ಥಲಕ್ಕೆ ಹಂಗಿಲ್ಲ ನೋಡಾ.
ಆ ಮನಸ್ಥಲಕ್ಕೆ ಹಂಗಿಲ್ಲವಾದ ಕಾರಣ
ಕರಸ್ಥಲದ ಲಿಂಗವು ಕೈಸಾರಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೮೦ ||

೧೨೩೯

ಅಂತರಂಗದಲ್ಲಿ ವಸ್ತುವ ಕಂಡೆನಯ್ಯ.
ಬಹಿರಂಗದಲ್ಲಿ ಆಚಾರವಿರಬೇಕಯ್ಯ.
ಆ ಆಚಾರವಿಡಿದು
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವ ಸ್ವೀಕರಿಸಬೇಕಯ್ಯ.
ಆ ಪಾದೋದಕ ಪ್ರಸಾದವನರಿತು
ಆ ವಸ್ತುವಿನಲ್ಲಿ ಕೂಡಬಲ್ಲಾತನೆ
ಒಳಗೆ ಲಿಂಗಮಯ, ಹೊರಗೆ ಲಿಂಗಮಯ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೮೧ ||

೧೨೪೦

ಗುರು ಲಿಂಗ ಜಂಗಮ ಪಾದೋದಕ ಪ್ರಸಾದವನರಿಯದ
ಪಾತಕರ ಮುಖವ ನೋಡಲಾಗದಯ್ಯ.
ಅಂತಪ್ಪ ಪಾತಕರ ಮಾತ ಕೇಳಲಾಗದು, ಹೇಳಲಾಗದು.
ಅದೇನು ಕಾರಣವೆಂದರೆ :
ಗುರುವಿಡಿದು ಕಾಯ ಪಾವನವಾಯಿತ್ತಯ್ಯ.
ಲಿಂಗವಿಡಿದು ಜೀವ ಪಾವನವಾಯಿತ್ತಯ್ಯ.
ಜಂಗಮವಿಡಿದು ಪ್ರಾಣ ಪಾವನವಾಯಿತ್ತಯ್ಯ.
ಪಾದೋದಕ ಪ್ರಸಾದವಿಡಿದು ನಿರ್ವಿಕಲ್ಪ ನಿತ್ಯಾತ್ಮಕನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೮೨ ||

೧೨೪೧

ಷಡುರುಚಿಪದಾರ್ಥಂಗಳ ಇಷ್ಟಲಿಂಗಕೆ ತೋರಿ,
ಪ್ರಾಣಲಿಂಗದಲ್ಲಿ ಕೂಡಿ,
ಭಾವಲಿಂಗದಲ್ಲಿ ತೃಪ್ತಿಯನೆಯ್ದಿ,
ಸವಿಯಬಲ್ಲಾತನೆ ನಿರ್ಮಲ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೮೩ ॥

೧೨೪೨

ಅಂಗಕೆ ಗುರುವಾದನಯ್ಯ, ಪ್ರಾಣಕೆ ಲಿಂಗವಾದನಯ್ಯ,
ಭಾವಕೆ ಜಂಗಮವಾದನಯ್ಯ.
ಆ ಜಂಗಮದ ಪರಮಪ್ರಸಾದವ ಸ್ವೀಕರಿಸಬಲ್ಲಾತನೆ
ಅನಾದಿಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೮೪ ॥

೧೨೪೩

ತಂದೆ ಸತ್ತ ಮೇಲೆ ಆ ಲಿಂಗವ ತೆಗೆದು
ತಾನೇ ತನ್ನ ಕೈಯಲ್ಲಿ ಕಟ್ಟಿಕೊಂಡು ಶಿವಭಕ್ತರೆಂದು
ಈ ಮರ್ತ್ಯದಲ್ಲಿ ನಡೆದಾಡುವರು ನೋಡಾ.
ಅವರಿಂಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪಾದೋದಕ ಪ್ರಸಾದವಿಲ್ಲ.
ಇದು ಕಾರಣ, ಅವರು ಪಿತೃಲಿಂಗಸಂಸ್ಕಾರಿಗಳು ನೋಡಾ.
ಇಂತಪ್ಪ ನರಕಜೀವಿಗಳ ಮುಖವ ನೋಡಲಾಗದು
ಝೇಂಕಾರ ನಿಜಲಿಂಗಪ್ರಭುವೆ. ॥ ೩೮೫ ॥

೧೨೪೪

ಧರೆಯ ಮೇಲೆ ಹರಡಿರುವ ಶಿಲೆಯ ತಂದು
ಕಲ್ಲುಕುಟಿಕ ಕಟೆದು ಲಿಂಗವ ಮಾಡಿದರೆ ಅದೆಂತು ಲಿಂಗವೆಂಬೆನಯ್ಯ ?
ಅದು ಶಿಲೆಯು. ಆ ಲಿಂಗವ ತಂದು, ಗುರುವಿನ ಕೈಯಲ್ಲಿ ಕೊಟ್ಟು
ದೀಕ್ಷೆ ಉಪದೇಶವಂ ಮಾಡಿ,
ಆ ಲಿಂಗವ ಧರಿಸಿಕೊಂಡು
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವ ಸ್ವೀಕರಿಸಿ,
ಶಿಲಾಲಿಖಿತವ ತೊಡೆದು ಕಲಾಭೇದವನರಿದು
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯಗಳನರಿದು

ಇರಬಲ್ಲ ಶರಣರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೩೮೬ ||

೧೨೪೫

ಸರ್ವಾಂಗದೊಳಹೊರಗಿಪ್ಪ ಪರಬ್ರಹ್ಮಲಿಂಗವು
ಕರಕಮಲಕ್ಕೆ ಬಂದಿತು ನೋಡಾ.
ಆ ಲಿಂಗವ ಸಾಧಿಸಿ ಭೇದಿಸಲರಿಯದೆ
ಅನ್ಯದೈವಂಗಳಿಗೆ ಎರಗಿ ಭವಕ್ಕೆ ಗುರಿಯಾದರು ನೋಡಾ.
ಇದು ಕಾರಣ, ಆ ಲಿಂಗವನರಿತು ಪರತತ್ವದಲ್ಲಿ ಕೂಡಿ
ಪರಿಪೂರ್ಣವಾಗಬಲ್ಲಡೆ ಆತನೆ ನಿರ್ಮುಕ್ತ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೮೭ ||

೧೨೪೬

ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯವನರಿತು
ಮಹಾಜ್ಞಾನದೃಷ್ಟಿಯೊಳು ನಿಂದು
ಪರಕೆಪರವಾದ ಲಿಂಗವನಾಚರಿಸುವ ಶರಣನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೩೮೮ ||

೧೨೪೭

ಷಡುರುಚಿಪದಾರ್ಥಂಗಳ ಇಷ್ಟಲಿಂಗಕೆ ತೋರದೆ
ಬಾಯಿಗೆ ಬಂದಂತೆ ತಿಂಬ ನರಕಿಗಳ ಕಂಡು,
ನಮ್ಮ ಶಿವಶರಣರು ಮೆಚ್ಚುವರೇನಯ್ಯ ?
ಅಂತಪ್ಪ ನರಕಿ ಕೀಳರ ಎನಗೊಮ್ಮೆ ತೋರದಿರಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೩೮೯ ||

೧೨೪೮

ಆಚಾರವನರಿತು ನಡೆವ ಭಕ್ತನು ಶಿವಾಚಾರಿಯೆಂಬೆನಯ್ಯ.
ಆ ಭಕ್ತನ ಅಂಗದ ಒಳಹೊರಗೆ ಲಿಂಗಮಯ ನೋಡಾ.
ಅಂತಪ್ಪ ಭಕ್ತನ ಅಂಗವ ಕಂಡು
ಎನ್ನ ಮನಕ್ಕೆ ಅಗೋಚರವೆನಿಸಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೯೦ ||

೧೨೪೯

ಶಿವಾಚಾರದಲ್ಲಿ ನಡೆವ ಶರಣರ ಪಾದದ ಅಂಘ್ರಿಯಲ್ಲಿ ಎನ್ನನಿರಿಸಯ್ಯ.
ಅಂತಪ್ಪ ಶಿವಶರಣರ ಗೃಹವ ಹೊಗಲಾಗಿ

ಸರ್ವಾಂಗವೆಲ್ಲವೂ ಲಿಂಗಮಯವಾದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೯೧ ॥

೧೨೫೦

ಆದಿಯ ಬೀಜ ಶಿವಸಂಸ್ಕಾರಿ ಅನಾದಿಶರಣನಯ್ಯ.
ಆ ಶರಣನ ಅಂತರಂಗದಲ್ಲಿ ನಿರಾಳಘೋಷಲಿಂಗವಿಪ್ಪುದು ನೋಡಾ.
ಆ ನಿರಾಳಘೋಷಲಿಂಗದೊಳಗೆ ಅನಂತಕೋಟಿ ಕಿರಣಂಗಳು
ಒಳಹೊರಗೆ ಪರಿಪೂರ್ಣವಾಗಿಹುದು ನೋಡಾ.
ಅಂತಪ್ಪ ಅನಾದಿ ಶರಣನ ಕರಸ್ಥಲಕ್ಕೆ
ಇಷ್ಟಲಿಂಗವು ಕಾರುಣ್ಯವಾಗಿ ಬಂದಿತ್ತು ನೋಡಾ.
ಬಂದ ಕಾರಣ ಮನಸ್ಥಲದ ಪ್ರಾಣಲಿಂಗಕ್ಕೆ ಅರುಹುದೋರಿತ್ತು ನೋಡಾ.
ಆ ಮನಸ್ಥಲದ ಪ್ರಾಣಲಿಂಗಕ್ಕೆ ಅರುಹುದೋರಿದ ಕಾರಣ
ಪರಸ್ಥಲದ ಭಾವಲಿಂಗವು ಬೆರಗಾಯಿತ್ತು ನೋಡಾ.
ಆ ಪರಸ್ಥಲದ ಭಾವಲಿಂಗವು ಬೆರಗಾದ ಕಾರಣ
ಅಗಮ್ಯಸ್ಥಲದ ನಿರಾಳಘೋಷಲಿಂಗವು ಘೋಷಿಸುತಿಪ್ಪುದು ನೋಡಾ.
ಇದು ಕಾರಣ, ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯಗಳು
ನಿರಾಳಘೋಷಲಿಂಗದಲ್ಲಿ ಅಡಗಿಪ್ಪವು ನೋಡಾ.
ಇದು ಕಾರಣ, ಆ ನಿರಾಳಘೋಷಲಿಂಗದಲ್ಲಿ
ನಿಃಕ್ರಿಯವಾದ ಶರಣರ ಪಾದದಂಘ್ರಿಯ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೩೯೨ ॥

೧೨೫೧

ಆಜ್ಞೇಯಚಕ್ರದೊಳಗೆ ಗಂಭೀರನಿಪ್ಪ ಬೆಡಗ ನೋಡಾ.
ಆ ಗಂಭೀರನು ಐವರು ಶಕ್ತಿಯರ ಕೂಡಿಕೊಂಡು
ನಿರಾಲಂಬಲಿಂಗವನಾಚರಿಸುವುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೩೯೩ ॥

೧೨೫೨

ಇಪ್ಪತ್ತೈದು ಗ್ರಾಮದ ಮೇಲೆ ಸುಳಿದಾಡುವ
ಪುಷ್ಪದತ್ತನ ಕಂಡೆನಯ್ಯ.
ಆ ಪುಷ್ಪದತ್ತನ ಕರಕಮಲದಲ್ಲಿ
ಸಾವಿರೆಸಳ ಪುಷ್ಪವಿಪ್ಪುದು ನೋಡಾ.

ಆ ಪುಷ್ಪದ ಪರಿಮಳವ ಅರುಹುವ ಹಿರಿಯರ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೩೯೪ ||

೧೨೫೩

ಕುರುಡಂಗೆ ಕನ್ನಡಿಯ ತೋರಿದಡೆ
ಆ ಕುರುಡಂಗೆ ಮುಖ ಕಾಣಲಾರದು ನೋಡಾ.
ತುಡುಗಂಗೆ ಜ್ಞಾನವ ಹೇಳಿದರೆ
ಆ ತುಡುಗ ಗಡಣದ ಬೆಳಗ ಬಲ್ಲನೇನಯ್ಯ ?
ಪೊಡವಿಗೊಡೆಯ ಈಶ್ವರನು
ತನ್ನ ಮಾರ್ಗದಲ್ಲಿ ನಡೆವರ ಕಂಡು,
ಕೂಡಿಕೊಂಡಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೯೫ ||

೧೨೫೪

ಶಿವಭಕ್ತನ ಅಂತರಂಗದಲ್ಲಿ ಭಾವಲಿಂಗವಿಪ್ಪುದು ನೋಡಾ.
ಆ ಭಾವಲಿಂಗದ ಸಂಗದಿಂದ ಪ್ರಾಣಲಿಂಗವಿಪ್ಪುದು ನೋಡಾ.
ಆ ಪ್ರಾಣಲಿಂಗದ ಸಂಗದಿಂದ ಇಷ್ಟಲಿಂಗವಿಪ್ಪುದು ನೋಡಾ.
ಆ ಇಷ್ಟಲಿಂಗಕ್ಕೆ ಗುರುಲಿಂಗಜಂಗಮದ ಪಾದೋದಕ ಪ್ರಸಾದವ ಅರ್ಪಿಸಿ,
ಪ್ರಾಣಲಿಂಗವ ಕೂಡಿ, ಭಾವಲಿಂಗದಲ್ಲಿ ಬೆರೆದ ಶಿವಭಕ್ತನ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೩೯೬ ||

೧೨೫೫

ಇಷ್ಟಲಿಂಗದ ಭೇದವನರಿಯದೆ
ಪ್ರಾಣಲಿಂಗದ ಭೇದವ ಬಲ್ಲೆನೆಂಬ ಭ್ರಷ್ಟಾಚಾರಿಗಳು ನೀವು ಕೇಳಿರೋ.
ಇಷ್ಟಲಿಂಗದ ಕಳಾಭೇದವನರಿತು, ಪ್ರಾಣಲಿಂಗಸಂಬಂಧಿಯಾಗಿ,
ದೃಷ್ಟಲಿಂಗವ ಕಾಣಬಲ್ಲಾತನೆ ಅನಾದಿ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೯೭ ||

೧೨೫೬

ಮಂತಿಗೆಲಿಂಗವ ಕಟ್ಟಿಕೊಂಡು
ಸಂತೆಯ ಸೂಳೆಯಂತೆ ಇರುವರು ನೋಡಾ.

ಅಂತಪ್ಪ ಪಾತಕರಿಗೆ ಗುರುವಿಲ್ಲ, ಜಂಗಮವಿಲ್ಲ.
ಪಾದೋದಕ ಪ್ರಸಾದವಿಲ್ಲ.
ಇಂತಪ್ಪ ಕರ್ಮಿಗಳ ಕಂಡು ಎನ್ನ ಮನ ನಾಚಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೯೮ ||

೧೨೫೭

ಅಂಗದ ಮೇಲೆ ಶಿವಲಿಂಗವ ನೆಲೆಗೊಂಡು,
ಲಲಾಟದಲ್ಲಿ ಶ್ರೀ ವಿಭೂತಿಯಂ ಧರಿಸಿ,
ಗರಳದಲ್ಲಿ ರುದ್ರಾಕ್ಷಿಯ ಧರಿಸಿ, ಓಂ ನಮೋ ಶಿವಾಯವೆಂಬ ಮಂತ್ರ
ಅಷ್ಟಾವರಣಯುಕ್ತನಾಗಿ ಇರಬಲ್ಲವನೆ ನಿಮ್ಮ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೩೯೯ ||

೧೨೫೮

ಯೋಗಿ ಜೋಗಿ ಶ್ರವಣ ಸನ್ಯಾಸಿ ಕಾಳಾಮುಖ
ಪಾಶುಪತಿಯೆಂಬ ಷಡ್ದರುಶನಕ್ಕೆ ಶಿವಾಚಾರವೆ ಮಿಗಿಲು ನೋಡಾ.
ಶಿವಾಚಾರವಿಡಿದು ಪರಬ್ರಹ್ಮಲಿಂಗವನಾಚರಿಸಬಲ್ಲಾತನೆ ನಿಮ್ಮ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೦೦ ||

೧೨೫೯

ಸಂಗನಬಸವಣ್ಣನೆ ಅಂಗ, ಚನ್ನಬಸವಣ್ಣನೆ ಲಿಂಗ,
ಅಲ್ಲಮಪ್ರಭುದೇವರೇ ಸಂಬಂಧ ನೋಡಾ.
ಇದು ಕಾರಣ ಅಂಗಲಿಂಗಸಂಬಂಧವನರಿತು ಆಚರಿಸಬಲ್ಲಾತನೆ
ನಿಮ್ಮ ಶರಣ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೪೦೧ ||

೧೨೬೦

ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯವನರಿತು
ಪರಬ್ರಹ್ಮಲಿಂಗವನಾಚರಿಸಬಲ್ಲಾತನೆ ನಿರ್ಮುಕ್ತಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೦೨ ||

೧೨೬೧

ಸಂಗನಬಸವಣ್ಣನೇ ಎನ್ನ ಗುರುವು.
ಚನ್ನಬಸವಣ್ಣನೇ ಎನ್ನ ಲಿಂಗವು.
ಅಲ್ಲಮಪ್ರಭುವೇ ಎನ್ನ ಜಂಗಮವು
ಇದು ಕಾರಣ, ಈ ಗುರುಲಿಂಗಜಂಗಮವನರಿತು ನಾನು ಬದುಕಿದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೪೦೩ ||

೧೨೬೨

ಐದು ಮೇರುವೆಯ ಮೇಲೆ ಒಬ್ಬ ಪುರುಷ ನಿಂದಿರುವುದ ಕಂಡೆನಯ್ಯ.
ಆ ಪುರುಷನು ತನ್ನ ನಿಲವ ತಾನೇ ನೋಡಿ
ಸಾವಿರ ಎಸಳ ಮಂಟಪವ ಪೊಕ್ಕು, ಶಿಖಾಚಕ್ರದಲ್ಲಿ ನಿಂದು,
ಪಶ್ಚಿಮಚಕ್ರದಲ್ಲಿಪ್ಪ ನಿರಂಜನಜ್ಯೋತಿಯ ಬೆಳಗನೊಳಕೊಂಡು
ಸಾಜಸಮಾಧಿಯಲ್ಲಿ ನಿಂದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೦೪ ॥

೧೨೬೩

ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ ಐದಂಗವ ಗರ್ಭೀಕರಿಸಿಕೊಂಡು,
ನಿತ್ಯವಿಡಿದು, ಪಶ್ಚಿಮಚಕ್ರದಲ್ಲಿಪ್ಪ ನಿರಂಜನಜ್ಯೋತಿಯ ಬೆಳಗನೊಳಕೊಂಡು
ಸಾಜಸಮಾಧಿಯಲ್ಲಿ ನಿಂದು ನಿರಂಜನಲಿಂಗವನಾಚರಿಸುತಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೦೫ ॥

೧೨೬೪

ಅಂತರಂಗದಲ್ಲಿ ಶುದ್ಧವಾದ ಶಿವಭಕ್ತನು ನಿತ್ಯವಿಡಿದು,
ನಿರಾಲಂಬಲಿಂಗವನಾಚರಿಸಿ,
ನಿಶ್ಚಿಂತ ನಿರಾಕುಳ ನಿರ್ಭರಿತನಾದ ಭಕ್ತನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೦೬ ॥

೧೨೬೫

ಆತ್ಮನೆಂಬ ಅಂಗಕ್ಕೆ ನಿರಾತ್ಮನೆಂಬ ಲಿಂಗವು ನೋಡಾ.
ಆತ್ಮನೆಂಬ ಅಂಗವನು, ನಿರಾತ್ಮನೆಂಬ ಲಿಂಗವನು
ಗರ್ಭೀಕರಿಸಿಕೊಂಡಿರುವ ಮಹಾಮಹಿಮನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೦೭ ॥

೧೨೬೬

ಹಸಿವು ತೊರೆದರೇನಯ್ಯ ? ಮನದ ಕೊನೆಯ ಮುಟ್ಟಬೇಕಯ್ಯ.
ತೃಷೆ ತೊರೆದರೇನಯ್ಯ ? ಮನದ ಕಳವಳವನಳಿಯಬೇಕಯ್ಯ.
ನಿದ್ರೆ ತೊರೆದರೇನಯ್ಯ ? ಮನದ ಕ್ಷುದ್ರವನಳಿಯಬೇಕಯ್ಯ.
ಇಂತೀ ಹಸಿವು ತೃಷೆ ನಿದ್ರೆಯಂಗಳನರಿತು ಮಹಾಕಾರಣದೇಹಿಯಾಗಿ,
ಶೂನ್ಯ ನಿಃಶೂನ್ಯ ನಿರಾಳಪೀಠದಲ್ಲಿ ನಿಂದು ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೦೮ ॥

೧೨೬೭

ಆದಿಯಲ್ಲಿ ಒಬ್ಬ ದೇವನು ಮೂವರ ಕೂಡಿಕೊಂಡು
ಆರು ಕೇರಿಗಳ ಪೊಕ್ಕು ನೋಡಲು
ಆ ಕೇರಿಗಳಲ್ಲಿ ಆರು ಶಕ್ತಿಯರು ನಿಶಿಧ್ಯಾನವ ಮಾಡಿ
ಒಳಹೊರಗೆ ಪರಿಪೂರ್ಣವಾಗಿಹರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೯ ॥

೧೨೬೮

ಸ್ಥೂಲವಾದರೇನಯ್ಯ ?
ಆ ಸ್ಥೂಲಕ್ಕೆ ಕ್ರಿಯವ ನಟಿಸಬೇಕಯ್ಯ.
ಸೂಕ್ಷ್ಮವಾದರೇನಯ್ಯ ?
ಆ ಸೂಕ್ಷ್ಮಕ್ಕೆ ಮಂತ್ರವ ನಟಿಸಬೇಕಯ್ಯ.
ಕಾರಣವಾದರೇನಯ್ಯ?
ಆ ಕಾರಣಕ್ಕೆ ಸದಾಚಾರವ ನಟಿಸಬೇಕಯ್ಯ.
ಮಹಾಕಾರಣವಾದರೇನಯ್ಯ?
ಆ ಮಹಾಕಾರಣಕ್ಕೆ ಲಿಂಗಾಂಗಸಮರಸವ ನಟಿಸಬೇಕಯ್ಯ.
ಪರಕಾರಣವಾದರೇನಯ್ಯ?
ಆ ಪರಕಾರಣಕ್ಕೆ ನಿಃಶಬ್ದ ನಿರಾಳವ ನಟಿಸಬೇಕಯ್ಯ.
ಜ್ಞಾನಕಾರಣವಾದರೇನಯ್ಯ?
ಆ ಜ್ಞಾನಕಾರಣಕ್ಕೆ ಸ್ವಾನುಭವಸಿದ್ಧಾಂತವ ನಟಿಸಬೇಕಯ್ಯ.
ಇಂತೀ ಷಡ್ವಿಧ ಅಂಗವನರಿತು ಆಚರಿಸಬಲ್ಲ ಶರಣನ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೦ ॥

೧೨೬೯

ಪ್ರಥಮ ಕಾಲದಲ್ಲಿ ಒಬ್ಬ ಶಿವಶರಣನಿಪ್ಪ ನೋಡಾ.
ಆ ಶಿವಶರಣನ ಅಂತರಂಗದಲ್ಲಿ ಮೂವರು ಕಂಡಿಕಾರರು ಇಪ್ಪರು ನೋಡಾ.
ಆರುಮಂದಿ ಪೂಜಾರಿಗಳು,
ಆರುಲಿಂಗಾರ್ಚನೆಯ ಮಾಡುತಿಪ್ಪರು ನೋಡಾ.
ಏಕೋಭಾಮಿನಿಯೆಂಬ ಸತಿಯಳು
ನವರತ್ನದ ಹರಿವಾಣಂಗಳಲ್ಲಿ
ಪಂಚಾರ್ತಿಯ ಮೇಲೆ ಏಕಾರ್ತಿಯನಿಕ್ಕಿ, ಪಂಚದೀಪಂಗಳ ರಚಿಸಿ,

ಓಂ ನಮೋ ಓಂ ನಮೋ ಓಂ ನಮೋ ಎಂದು ಬೆಳಗುತಿಪ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೧ ॥

೧೨೭೦

ವೇದದಲ್ಲಿ ನಾಲ್ಕು ನುಡಿಯ ಕಲಿತರೇನು ?
ಶಾಸ್ತ್ರದಲ್ಲಿ ನಾಲ್ಕು ನುಡಿಯ ಕಲಿತರೇನು ?
ಪುರಾಣಗಳಲ್ಲಿ ನಾಲ್ಕು ನುಡಿಯ ಕಲಿತರೇನು ?
ಆಗಮದಲ್ಲಿ ನಾಲ್ಕು ನುಡಿಯ ಕಲಿತರೇನು ?
ಕಲಿತು ಜ್ಯೋತಿಷ್ಯವ ಹೇಳಿದರೇನು ? ಶ್ರುತಿಪಾಠಕನಾದರೇನು?
ಚೌಷಷ್ಠಿ ವಿದ್ಯವ ಕಲಿತರೇನು ?
ತನ್ನ ಅಂತರಂಗದ ಪರಬ್ರಹ್ಮದ ನಿಲವ ತಾನರಿಯದೆ
ನಾ ಬಲ್ಲೆನೆಂದು ಅಹಂಕರಿಸಿಕೊಂಡಿಪ್ಪ ತರಕಿಮೂಳರ
ಎನಗೊಮ್ಮೆ ತೋರದಿರಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೨ ॥

೧೨೭೧

ವೇದ ದೊಡ್ಡದೆಂದು ನುಡಿವ ವಾದಿಯ ಮಾತ
ಹೇಳಲಾಗದು ಕೇಳಲಾಗದು.
ಶಾಸ್ತ್ರ ದೊಡ್ಡದೆಂದು ನುಡಿವ ಪಾತಕನ ಮಾತ
ಹೇಳಲಾಗದು ಕೇಳಲಾಗದು.
ಪುರಾಣ ದೊಡ್ಡದೆಂದು ನುಡಿವ ಪುಂಡರ ಮಾತ
ಹೇಳಲಾಗದು ಕೇಳಲಾಗದು.
ಆಗಮ ದೊಡ್ಡದೆಂದು ನುಡಿವ ಅಹಂಕಾರಿಯ ಮಾತ
ಹೇಳಲಾಗದು ಕೇಳಲಾಗದು.
ಜ್ಯೋತಿಷ್ಯ ದೊಡ್ಡದೆಂದು ನುಡಿವ ಘಾತುಕನ ಮಾತ
ಹೇಳಲಾಗದು, ಕೇಳಲಾಗದು.
ಅದೇನು ಕಾರಣವೆಂದಡೆ,
ತನ್ನ ಅಂತರಂಗದಲ್ಲಿ ಪರಬ್ರಹ್ಮದ ನಿಲವ ಅರಿತ ಮಹಾತ್ಮಂಗೆ
ಇನ್ನೆಲ್ಲಿಯ ವೇದವೋ ? ಇನ್ನೆಲ್ಲಿಯ ಶಾಸ್ತ್ರವೋ ?
ಇನ್ನೆಲ್ಲಿಯ ಪುರಾಣವೋ?
ಇನ್ನೆಲ್ಲಿಯ ಆಗಮವೋ ? ಇನ್ನೆಲ್ಲಿಯ ಜ್ಯೋತಿಷ್ಯವೋ ?
ಇಂತೀ ಇವಕ್ಕೆ ಸಿಲ್ಕದೆ ಅತ್ತತ್ತಲೆಯಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೩ ॥

೧೨೬೨

ಮಾತಿನಲ್ಲಿ ಬ್ರಹ್ಮ, ನೀತಿಯಲ್ಲಿ ಕ್ರೋಧಿ.
ಈ ಲೋಕದ ಭುಂಜಕರು,
ನಾ ಹೆಚ್ಚು, ತಾ ಹೆಚ್ಚುಯೆಂದು ನಡೆದಾಡುವರಯ್ಯ.
ನಾನು ನೀನೆಂಬ ಉಭಯವಳಿದು
ತಾನು ತಾನಾದುದ ನಾನಾರನೂ ಕಾಣೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೪ ॥

೧೨೬೩

ನುಡಿಯಲ್ಲಿ ವಾಚಾಳತ್ವ, ಹೃದಯದಲ್ಲಿ ಕರ್ಮೇಂದ್ರಿ.
ಈ ಹೊಲೆಯ ಕಳೆಯಲರಿಯದೆ
ಭವಕ್ಕೆ ಗುರಿಯಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೫ ॥

೧೨೬೪

ಹಿಂದಳ ಮಾತ ಕೇಳಿ ಮುಂದೆ ನಿಂದ್ಯವನಾಡುವ
ಹೊಲೆಯನ ಮಾತ ಹೇಳಲಾಗದು, ಕೇಳಲಾಗದು.
ಮುಂದಲ ಮಾತ ಕೇಳಿ ನಿಂದ್ಯವನಾಡುವ
ಮಾದಿಗನ ಮಾತ ಹೇಳಲಾಗದು, ಕೇಳಲಾಗದು.
ಇಂತೀ ಇವರಿಬ್ಬರ ಮಾತು
ಸತ್ತಶ್ವಾನನ ಹೊಲಸಿನಿಂದತ್ತತ್ತಲಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೧೬ ॥

೧೨೬೫

ವೇದ ಶಾಸ್ತ್ರ ಪುರಾಣ ಆಗಮಂಗಳ ನೋಡಿದರೇನಯ್ಯ ?
ಗುರು ಉಪದೇಶದಿಂದ ಪ್ರಾಣಲಿಂಗಸಂಬಂಧವನರಿತು
ವೇದ ಶಾಸ್ತ್ರ ಪುರಾಣ ಆಗಮಂಗಳನೋದಬಲ್ಲಾತನೆ
ನಿಮ್ಮ ಶರಣ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೧೭ ॥

೧೨೬೬

ನಿಂದಕರು ನಿಂದಿಸಿದರೆ ಸ್ವಯಜ್ಞಾನಿ ಅಂಜುವನೇನಯ್ಯ ?
ಆ ನಿಂದಕನ ಅಂತರಂಗದಲ್ಲಿ ಅಹಂಕಾರನೆಂಬ ಕೋಣ ಹುಟ್ಟಿ,
ಜ್ಞಾನಿಗಳೆಂದರಿಯದೆ, ಬಾಯಿಗೆ ಬಂದಂತೆ ನುಡಿವ ತರಕಿಮೂಳರ
ಎನಗೊಮ್ಮೆ ತೋರದಿರಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೪೧೮ ॥

೧೨೭೭

ಇಷ್ಟಲಿಂಗದ ಕಳಾಭೇದವನರಿತು, ಪ್ರಾಣಲಿಂಗದಲ್ಲಿ ಕೂಡಿ,
ಭಾವಲಿಂಗದಲ್ಲಿ ಬೆರಗಾಗಿ ಪರಬ್ರಹ್ಮವನಾಚರಿಸಬಲ್ಲಾತನೆ
ನಿಮ್ಮ ಶರಣ ನೋಡಾ, ಝೇಂಕಾರ ನಿಜಲಿಂಗಪ್ರಭುವೆ. ॥ ೪೧೯ ॥

೧೨೭೮

ಪರಬ್ರಹ್ಮವೆಂಬ ಲಿಂಗದಿಂದ ಭಾವಲಿಂಗ ಉದಯವಾಯಿತ್ತು.
ಆ ಭಾವಲಿಂಗದಿಂದ ಪ್ರಾಣಲಿಂಗ ಉದಯವಾಯಿತ್ತು.
ಆ ಪ್ರಾಣಲಿಂಗದಿಂದ ಇಷ್ಟಲಿಂಗ ಉದಯವಾಯಿತ್ತು.
ಆ ಇಷ್ಟಲಿಂಗಕ್ಕೆ ಗುರು ಲಿಂಗ ಜಂಗಮ
ಪಾದೋದಕ ಪ್ರಸಾದವ ಅರ್ಪಿಸಬಲ್ಲಾತನೆ ನಿಮ್ಮ ಸದ್ಭಕ್ತ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೦ ॥

೧೨೭೯

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯಯೆಂಬ
ಷಡುಸ್ಥಲಕ್ಕೆ ಷಡ್ವಿಧಮೂರ್ತಿಗಳಿಪ್ಪವು ನೋಡಾ.
ಅದು ಹೇಗೆಂದಡೆ : ಆಧಾರದಲ್ಲಿ ಬ್ರಹ್ಮನೆಂಬ ಮೂರ್ತಿ,
ಸ್ವಾಧಿಷ್ಠಾನದಲ್ಲಿ ವಿಷ್ಣುವೆಂಬ ಮೂರ್ತಿ,
ಮಣಿಪೂರಕದಲ್ಲಿ ರುದ್ರನೆಂಬ ಮೂರ್ತಿ,
ಅನಾಹತದಲ್ಲಿ ಈಶ್ವರನೆಂಬ ಮೂರ್ತಿ,
ವಿಶುದ್ಧಿಯಲ್ಲಿ ಸದಾಶಿವನೆಂಬ ಮೂರ್ತಿ,
ಆಜ್ಞೇಯದಲ್ಲಿ ಪರಶಿವನೆಂಬ ಮೂರ್ತಿ,
ಇಂತೀ ಭೇದವ ಮರೆತು ಇರಬಲ್ಲಾತನೆ ನಿಮ್ಮ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೧ ॥

೧೨೮೦

ಆರು ಮೂರು ಮಂಟಪದ ಮೇಲೆ
ಒಂದು ಕೋಗಿಲೆ ಕುಳಿತು ಕೂಗುತ್ತಿದೆ ನೋಡಾ.
ಆ ಕೋಗಿಲೆಯ ಸ್ವರವ ಕೇಳಿ, ಒಬ್ಬ ಬೇಂಟೆಕಾರನು
ಅರುಹೆಂಬ ಗದೆಯ ತಕ್ಕೊಂಡು ಇಡುವ
ಬೇಂಟೆಕಾರನ ಆ ಕೋಗಿಲೆ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೨ ॥

೧೨೮೧

ಇಪ್ಪತ್ತೈದು ದೇಶದ ಮೇಲೆ
ಒಬ್ಬ ಸತಿಯಳು ನಿಂದಿರುವುದ ಕಂಡೆನಯ್ಯ.
ಆ ಸತಿಯಳು ಸಾವಿರೆಸಳ ಮಂಟಪವ ಪೊಕ್ಕು
ಲಿಂಗಾರ್ಚನೆಯ ಮಾಡುತಿರ್ಪಳು ನೋಡಾ.
ಏಕೋಮನೋಹರನೆಂಬ ಪೂಜಾರಿಯು ಆ ಸತಿಯಳ ಕೈವಿಡಿದು
ಆ ಲಿಂಗದಲ್ಲಿ ನಿಃಪ್ರಿಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೩ ॥

೧೨೮೨

ಅಂಗಕ್ಕೆ ಆಚಾರ ನೆಲೆಗೊಂಡಲ್ಲದೆ
ಲಿಂಗ ಸಾಧ್ಯವಾಗದು ನೋಡಾ.
ಲಿಂಗ ಸಾಧ್ಯವಾದಲ್ಲದೆ
ಜಂಗಮದ ಪ್ರಸಾದ ಸಾಧ್ಯವಾಗದು ನೋಡಾ.
ಜಂಗಮಪ್ರಸಾದ ಸಾಧ್ಯವಾದಲ್ಲದೆ
ಶುದ್ಧ ಸಿದ್ಧ ಪ್ರಸಿದ್ಧ ಸಾಧ್ಯವಾಗದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೪ ॥

೧೨೮೩

ಅಂಗದ ಮೇಲೆ ಶಿವಲಿಂಗವ ಧರಿಸಿ
ಲಿಂಗ ಜಂಗಮದ ಪ್ರಸಾದವ ಕೊಂಡು
ನಿರ್ಧರವಿಲ್ಲದ ಅನ್ಯದೈವಂಗಳಿಗೆ ಎರಗುವ ಭಂಗಹೀನರ
ಎನಗೊಮ್ಮೆ ತೋರದಿರಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ॥ ೪೨೫ ॥

೧೨೮೪

ಈ ಧರೆಯ ಮೇಲೆ ಹುಟ್ಟಿ
ಕಲ್ಲದೈವಂಗಳಿಗೆ ಎರಗಿದರೆ ಭವ ಹಿಂಗುವುದೇ ?
ಹಿಂಗದು ನೋಡಾ.
ಅದೇನು ಕಾರಣವೆಂದಡೆ:
ಮನದ ಗುಣಾದಿಗಳ ಶುದ್ಧಮಾಡಲರಿಯದೆ
ನಿಶ್ಚಿಂತ ನಿರ್ಮಲ ಲಿಂಗದಲ್ಲಿ ಕೂಡಲರಿಯದೆ

ಹಲವು ದೈವಂಗಳಿಗೆ ಅಷ್ಟಷ್ಟ ಬಿದ್ದು
ಎದೆ ದಪ್ಪಾಗಿ, ಹಣೆ ದಪ್ಪಾಗಿ, ಭವದ ಕುರಿಗಳಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೨೬ ||

೧೨೮೫

ಇಷ್ಟಲಿಂಗದ ಭೇದವನರಿತು
ಪ್ರಾಣಲಿಂಗದಲ್ಲಿ ಕೂಡಿ ಭಾವಲಿಂಗದಲ್ಲಿ ನಿಂದು
ಪರಕೆಪರವಾದ ಲಿಂಗವನಾಚರಿಸುತಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೪೨೭ ||

೧೨೮೬

ಇಷ್ಟಲಿಂಗದಲ್ಲಿ ಗುರುವಿಡಿದು, ಪ್ರಾಣಲಿಂಗದಲ್ಲಿ ಲಿಂಗವಿಡಿದು,
ಭಾವಲಿಂಗದಲ್ಲಿ ಜಂಗಮವಿಡಿದು
ಪರಮಪ್ರಸಾದವ ಸ್ವೀಕರಿಸಬಲ್ಲಾತನೆ ನಿಮ್ಮ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೨೮ ||

೧೨೮೭

ಇಷ್ಟಲಿಂಗದಲ್ಲಿ ಶುದ್ಧವಾಗಿ, ಪ್ರಾಣಲಿಂಗದಲ್ಲಿ ಸಿದ್ಧವಾಗಿ,
ಭಾವಲಿಂಗದಲ್ಲಿ ಪ್ರಸಿದ್ಧವಾಗಿ ಇರಬಲ್ಲಾತನೆ
ನಿರ್ಮಲಜ್ಞಾನಿ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೪೨೯ ||

೧೯೮೮

ಭಕ್ತನಾದರೇನಯ್ಯ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವ ಸ್ವೀಕರಿಸಿ
ತನ್ನ ಮನವ ಶುದ್ಧಮಾಡಿ, ಮಹಾಲಿಂಗದಲ್ಲಿ ಕೂಡಬಲ್ಲಾತನೇ
ಅನಾದಿಭಕ್ತ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೪೩೦ ||

೧೨೮೯

ಆರ ಗೊಡವೆಯಿಲ್ಲದೆ ಗುರುವು ಹೇಳಿದಂತೆ
ವಾಕ್ಯವ ಪಿಡಿದುಕೊಂಡು ಇರುವುದು ಸುಖವಲ್ಲದೆ,
ಕುಳಿತಲ್ಲಿ ನಿಂತಲ್ಲಿ ಹೇಳಿಕೇಳಿದರೆ ಏನಾಗುವದು ಹೇಳಾ
ಝೇಂಕಾರ ನಿಜಲಿಂಗಪ್ರಭುವೆ. || ೪೩೧ ||

೧೨೯೦

ಆಚಾರ ಶುದ್ಧವಾದ ಭಕ್ತನ ಅಂತರಂಗದಲ್ಲಿ ಶಿವನಿಪ್ಪನು ನೋಡಾ.
ಆ ಶಿವನ ಅಂತರಂಗದಲ್ಲಿ ಒಬ್ಬ ಸತಿಯಳು ಹುಟ್ಟಿ

ಆರಾರು ಲಿಂಗಾರ್ಚನೆಯ ಮಾಡಿ
ಮೂರು ಮೇರುವೆಯ ದಾಂಟಿ ಪರಶಿವನನಾಚರಿಸುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೩೨ ॥

೧೨೯೧

ಆರು ಕೇರಿಗಳಲ್ಲಿ ಆರು ಮೂರ್ತಿಗಳಿಪ್ಪರು ನೋಡಾ.
ಆರು ಮೂರ್ತಿಗಳಲ್ಲಿ ಆರು ಶಕ್ತಿಗಳಿಪ್ಪರು ನೋಡಾ.
ಆರು ಶಕ್ತಿಗಳು ಆರಾರು ಲಿಂಗಾರ್ಚನೆಯ ಮಾಡಿ
ಮೂರು ಬಾಗಿಲ ದಾಂಟಿ ಮಹಾಘನಲಿಂಗವನಾಚರಿಸುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೩೩ ॥

೧೨೯೨

ಇಷ್ಟಲಿಂಗವಿಡಿದು ಕಾಯ ಶುದ್ಧವಾಯಿತ್ತಯ್ಯ.
ಪ್ರಾಣಲಿಂಗವಿಡಿದು ಮನ ಶುದ್ಧವಾಯಿತ್ತಯ್ಯ.
ಭಾವಲಿಂಗವಿಡಿದು ಚಿತ್ತ ಶುದ್ಧವಾಯಿತ್ತಯ್ಯ.
ಹೀಂಗೆ ಮುಮ್ಮಯ್ಯ ಸಿರಿವಂತನಾಗಿ
ನಿಶ್ಚಿಂತ ನಿರಾಕುಳಲಿಂಗವನಾಚರಿಸುತಿಪ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೩೪ ॥

೧೨೯೩

ಈ ಧರೆಯ ಮೇಲೆ ಭಕ್ತರೆಂದು ಗುರು ಲಿಂಗ ಜಂಗಮಕ್ಕೆ ನಡೆವರಯ್ಯ.
ಬಹಿರಂಗದ ಬಳಕೆಯನಳಿದು ಶಬ್ದಮುಗ್ಧನಾದರೆ, ಗುರುವೆಂಬೆನಯ್ಯ.
ಭ್ರಾಂತಿಸೂತಕವನಳಿದು ನಿರ್ಭ್ರಾಂತನಾದರೆ, ಲಿಂಗವೆಂದೆಂಬೆನಯ್ಯ.
ವಿಷಯವ್ಯಸನಗಳನಳಿದು ಶುದ್ಧ ಸಿದ್ಧ ಪ್ರಸಿದ್ಧವಾದರೆ, ಜಂಗಮವೆಂದೆಂಬೆನಯ್ಯ.
ಇಂತೀ ಗುರು ಲಿಂಗ ಜಂಗಮವನರಿತು
ಆ ಗುರು ಲಿಂಗ ಜಂಗಮಕ್ಕೆ ನಡೆಯಬಲ್ಲಾತನೆ ನಿರ್ಮಲಸ್ವರೂಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೩೫ ॥

೧೨೯೪

ಈ ಲೋಕದೊಳಗೆ ಶೀಲವಂತರೆಂದು ಪಾದೋದಕ ಪ್ರಸಾದವ ಕೊಂಬರಯ್ಯ.
ಬ್ರಹ್ಮನನಳಿದು ಭಕ್ತನಾಗಿ ಆಚಾರಲಿಂಗವ ನೆಲೆಯಂಗೊಂಡರೆ
ಪಾದಪೂಜೆಯೆಂದೆಂಬೆನಯ್ಯ.
ವಿಷ್ಣುವನಳಿದು ಮಹೇಶ್ವರನಾಗಿ ಗುರುಲಿಂಗವ ನೆಲೆಯಂಗೊಂಡರೆ

ಪಾದೋದಕವೆಂದೆಂಬೆನಯ್ಯ.
ರುದ್ರನನಳಿದು ಪ್ರಸಾದಿಯಾಗಿ ಶಿವಲಿಂಗವ ನೆಲೆಯಂಗೊಂಡರೆ
ಮಹಾಪ್ರಸಾದಿಯೆಂದೆಂಬೆನಯ್ಯ.
ಇಂತೀ ಪಾದೋದಕ ಪ್ರಸಾದವನರಿತು,
ಆ ಪಾದೋದಕ ಪ್ರಸಾದವ ಕೊಳ್ಳಬಲ್ಲಾತನೆ ನಿಮ್ಮ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೩೬ ॥

೧೨೫೫

ಅಂತರಂಗದ ಬೆಳಗಿನೊಳು ಸದಮಲಜ್ಞಾನವನರಿತು
ತಾನು ತಾನಾಗಿ ಪರಕೆ ಪರವನಾಚರಿಸಬಲ್ಲಾತನೆ
ನಿಮ್ಮ ಶರಣ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೩೭ ॥

೧೨೫೬

ಅಂತಃಕರಣಚತುಷ್ಟಯಂಗಳೆಂಬ ನಾಲ್ಕು ಗುಣಂಗಳವಿಡಿದು
ಆತ್ಮನೆಂಬ ಬೆಳಗಿನೊಳು ನಿಂದು
ನಿಃಕಲಪರಬ್ರಹ್ಮಲಿಂಗವನಾಚರಿಸುವ ಶರಣನ
ಎನಗೊಮ್ಮೆ ತೋರಿಸಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೪೩೮ ॥

೧೨೫೭

ಬ್ರಹ್ಮ ವಿಷ್ಣು ರುದ್ರಾದಿಗಳ ಮೇಲೆ ಈಶ್ವರನಿಪ್ಪ ನೋಡಾ.
ಆ ಈಶ್ವರನ ತನುಮನದ ಕೊನೆಯ ಮೇಲೆ ಒಬ್ಬ ಸತಿಯಳು
ಅನಂತಕೋಟಿ ಬ್ರಹ್ಮಾಂಡವ ಗರ್ಭೀಕರಿಸಿಕೊಂಡು
ತನ್ನ ಸುಳುವ ತಾನೇ ತೋರುತಿಪ್ಪಳು ನೋಡಾ.
ಆ ಸುಳುವಿನ ಭೇದವ ಅರುಹುವ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೩೯ ॥

೧೨೫೮

ಒಂದು ದಾರಿಯ ಮೇಲೆ ಎರಡು ಮಿಕವಿಪ್ಪವು ನೋಡಾ.
ಎರಡು ಮಿಕವಿಪ್ಪಲ್ಲಿ ಮೂರು ಕೇರಿಗಳಿಪ್ಪವು ನೋಡಾ.
ನಾಲ್ವರು ಪುರುಷರು ಐವರ ಸಂಗವ ಮಾಡಿ,
ಆರು ದೇಶವ ಪೊಕ್ಕು, ಏಳು ಸಾಗರವ ದಾಂಟಿ,
ಅಷ್ಟಕುಲ ಪರ್ವತವ ಮೆಟ್ಟಿ, ಒಂಬತ್ತು ದ್ವಾರಂಗಳ ದಾಂಟಿ ,
ಹತ್ತನೆಯ ಮನೆಯಲ್ಲಿ ನಿಂದು,

ಬರಿದಾದ ಮನೆಗೆ ಹೋಗಿ ಬರುವ ಶರಣನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೪೪೦ ||

೧೨೯೯

ಕರ್ಮವೆಂಬ ಕತ್ತಲೆಯಲ್ಲಿ ವರ್ಮಗೆಟ್ಟು ಮೂವರು ಐದ್ದಿರ್ಪರು ನೋಡಾ.
ಅವರಿಂಗೆ ಐವರು ಹೆಂಡರು, ಏಳು ಮಂದಿ ಮಕ್ಕಳು,
ಎಂಟು ಮಂದಿ ನೆಂಟರು, ಹತ್ತು ಮಂದಿ ಬಾಂಧವರು ಇಪ್ಪರು ನೋಡಾ.
ಒಬ್ಬ ಸತಿಯಳು ಅಂಗಡಿ ಬೀದಿಯನಿಕ್ಕಿ,
ಭವಭಾರಂಗಳ ಮಾರುತಿಪ್ಪಳು ನೋಡಾ.
ಇದು ಕಾರಣ, ಮೇಲಣ ದೇಶದಿಂದ ನಿರಂಜನ ಗಣೇಶ್ವರ ಬಂದು,
ಅಂಗಡಿ ಬೀದಿಯ ಕೆಡಿಸಿ, ಕರ್ಮವೆಂಬ ಕತ್ತಲೆಯ ಹರಿದು,
ಪ್ರಾಣಲಿಂಗಸಂಬಂಧಿಯಾಗಿ, ಆತ್ಮನಿರಾತ್ಮನೆಂಬ ಬೆಳಗಿನೊಳು ನಿಂದು
ಪರಕೆಪರವ ತೋರುತಿಪ್ಪನು ನೋಡಾ ಝೇಂಕಾರ ನಿಜಲಿಂಗಪ್ರಭುವೆ. ||೪೪೧||

೧೩೦೦

ಶಿವಾತ್ಮಜ್ಞಾನ ಉದಯವಾದ ಮಹೇಶ್ವರನ ಅಂತರಂಗದಲ್ಲಿ
ಕಾಮ ಕ್ರೋಧಗಳುಂಟೇನಯ್ಯ ?
ಲೋಭ ಮೋಹಗಳುಂಟೇನಯ್ಯ ?
ಮದ ಮತ್ಸರಂಗಳುಂಟೇನಯ್ಯ ?
ಭ್ರಾಂತು ಸೂತಕಂಗಳುಂಟೇನಯ್ಯ ?
ಕರ್ಮದೋಷಂಗಳುಂಟೇನಯ್ಯ ?
ಈ ಅಜ್ಞಾನಕ್ಕೆ ಸಿಲ್ಕದೆ, ತನ್ನ ನಿಲವ ತಾನೇ ನೋಡಿ
ನಿರಾಲಂಬಲಿಂಗದೊಳಿಪ್ಪ ಮಹೇಶ್ವರಂಗೆ
ಓಂ ನಮೋ ಓಂ ನಮೋ ಓಂ ನಮೋ ಎನುತಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೪೨ ||

೧೩೦೧

ಒಬ್ಬ ಪುರುಷನು ಮೂರು ಶಿವಾಲಯವಂ ಪೊಕ್ಕು,
ಆರು ದೇಗುಲಕ್ಕೆ ಬಂದು, ಮೂವತ್ತಾರು ಲಿಂಗಾರ್ಚನೆಯಂ ಮಾಡಿ,
ಆರು ದೇಗುಲವಂ ಪೊಕ್ಕು, ಮೂರು ಶಿವಾಲಯವ ದಾಂಟಿ
ತನ್ನ ಮನೆಗೆ ಹೋಗುವುದ ತಾನೆ ಬಲ್ಲನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೪೪೩ ||

೧೩೦೨

ಆರು ದೇಶದ ಮೇಲೆ ಮೂರು ಮಂಡಲವ ಕಂಡೆನಯ್ಯ,
ಮೂರು ಮಂಡಲದ ಮೇಲೆ ಒಬ್ಬ ಪುರುಷನ ಕಂಡೆನಯ್ಯ.
ಆ ಪುರುಷನ ಸತಿಯಳು, ತತ್ಪುರುಷಲೋಕಕ್ಕೆ ಬಂದು,
ಈಶ್ವರನೆಂಬ ಮಗನ ಕೂಡಿಕೊಂಡು, ನಿಟಿಲವೆಂಬ ಘಟದಲ್ಲಿ ನಿಂದು,
ಬ್ರಹ್ಮರಂಧ್ರವೆಂಬ ಪೌಳಿಯಂ ಪೊಕ್ಕು,
ಶಿಖಾಚಕ್ರವೆಂಬ ಮೇರುವೆಯ ಹತ್ತಿ,
ಪಶ್ಚಿಮಚಕ್ರವೆಂಬ ನಿರಂಜನಜ್ಯೋತಿಯ ಕೂಡಿ,
ಅತ್ತತ್ತಲೆ ಪರಕ್ಕೆ ಪರವ ತೋರುತಿಪ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೪೪ ॥

೧೩೦೩

ಊರೊಳಗಣ ಸೂಳೆಯು ಮೇರುವೆಯೊಳಗಣ ಪುರುಷನ ಕರೆದು
ಬೇರೊಂದು ಮನೆಗೆ ಹೋಗಿ ನಿರ್ವಯಲಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ ॥ ೪೪೫ ॥

೧೩೦೪

ಮೂರು ಲೋಕದ ಮೇಲೆ ಒಂದು ಪಕ್ಷಿ ಕುಳಿತು
ಐವರ ಸಂಗವ ಮಾಡಿ, ಸಾವಿರೆಸಳ ಮಂಟಪಕ್ಕೆ
ಹಾರಿಹೋದ ಸೋಜಿಗವ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥೪೪೬॥

೧೩೦೫

ಅಂತರಂಗದ ಬೆಳಗಿನೊಳು ನಿಂತಾತನೆ ನಿರ್ಮಳಜ್ಞಾನಿ ನೋಡಾ.
ಆ ನಿರ್ಮಳಜ್ಞಾನಿಯ ಸಂಗದಿಂದ
ಅಗಮ್ಯ ಅಗೋಚರ ಅಘಟಿತ ಅಪ್ರಮಾಣ ಲಿಂಗವು
ತೋರಲುಪಟ್ಟಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೪೭ ॥

೧೩೦೬

ಅನಾದಿಯ ಜಂಗಮವು ಶಿವಭಕ್ತನ ಮಠಕೆ ಬಂದು
'ಭಿಕ್ಷೆ ಲಿಂಗಾರ್ಪಿತಾ' ಎನಲು ಆ ಭಕ್ತನು ಜಂಗಮಕ್ಕೆ ಎರಗಿ,
ಸಿಂಹಾಸನವ ಗದ್ದುಗೆಯ ಮಾಡಿ, ಆ ಜಂಗಮವ ಮೂರ್ತಂಗೊಳಿಸಿ
ತನ್ನಲ್ಲಿರ್ದ ಪರಮಪ್ರಸಾದವ ಎಡೆಮಾಡಿ ನೀಡಲೊಡನೆ,

ಆ ಜಂಗಮವು ಸ್ವೀಕರಿಸಲು,
ಆ ಭಕ್ತನ ಕರ್ಮದೋಷವೆಲ್ಲ ಹಿಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೫೮ ॥

೧೩೦೭

ಭಕ್ತ ಮಹೇಶ್ವರನಲ್ಲಿ ಅಡಗಿ ಪ್ರಸಾದಿಯಾದನಯ್ಯ.
ಪ್ರಸಾದಿ ಪ್ರಾಣಲಿಂಗಿಯಲ್ಲಿ ಅಡಗಿ ಶರಣನಾದನಯ್ಯ.
ಶರಣ ಐಕ್ಯನಲ್ಲಿ ಅಡಗಿ ನಿಃಕಲಪರಬ್ರಹ್ಮಲಿಂಗವನಾಚರಿಸುತಿರ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೫೯ ॥

೧೩೦೮

ಆಚಾರಲಿಂಗ ಗುರುಲಿಂಗದಲ್ಲಿ ಅಡಗಿ ಶಿವಲಿಂಗವಾಯಿತ್ತಯ್ಯ.
ಶಿವಲಿಂಗ ಜಂಗಮಲಿಂಗದಲ್ಲಡಗಿ ಪ್ರಸಾದಲಿಂಗವಾಯಿತ್ತಯ್ಯ.
ಪ್ರಸಾದಲಿಂಗ ಮಹಾಲಿಂಗದಲ್ಲಿ ಅಡಗಿ,
ನಿಶ್ಚಿಂತ ನಿರಾಕುಳ ಲಿಂಗವು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೦ ॥

೧೩೦೯

ಇಷ್ಟಲಿಂಗವು ಪ್ರಾಣಲಿಂಗದಲ್ಲಿ ಅಡಗಿ ಭಾವಲಿಂಗವಾಯಿತ್ತಯ್ಯ.
ಆ ಭಾವಲಿಂಗವು ಪರಬ್ರಹ್ಮದಲ್ಲಿ ಅಡಗಿ ನಿರ್ವಯಲಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೧ ॥

೧೩೧೦

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಸೂರ್ಯ-ಚಂದ್ರ ಆತ್ಮರೆಂಬ
ಅಷ್ಟತನುವಿನ ಮೇಲೆ ದೃಷ್ಟಲಿಂಗವ ಕಂಡು
ಬಟ್ಟಬಯಲಲಿಂಗವನಾಚರಿಸುತಿರ್ದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೨ ॥

೧೩೧೧

ಸರ್ವಾಂಗದೊಳಹೊರಗೆ ಲಿಂಗಮಯವಾಗಿ
ಪರಬ್ರಹ್ಮ ಸುಖದಲ್ಲಿ ಕೂಡಿ
ನಿರ್ವಿಕಲ್ಪ ನಿತ್ಯಾತ್ಮನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೩ ॥

೧೩೧೨

ಒಳಹೊರಗೆ ಪರಿಪೂರ್ಣವಾದ ಸ್ವಯಜ್ಞಾನಿ
ಕ್ರಿಯಾಮಯ ನಾನಯ್ಯ, ನಿಃಕ್ರಿಯ ನಾನಯ್ಯ,
ಶೈವ ನಾನಯ್ಯ, ವೀರಶೈವ ನಾನಯ್ಯ,
ಧರ್ಮವೇ ನಾನಯ್ಯ, ಅಧರ್ಮವೇ ನಾನಯ್ಯ,
ಬೇಕುವೆ ನಾನಯ್ಯ, ಬೇಡವೆ ನಾನಯ್ಯ,
ಅಹುದು ನಾನಯ್ಯ, ಅಲ್ಲವೆ ನಾನಯ್ಯ,
ನೀನು ನಾನಯ್ಯ, ನಾನುವೆ ನಾನಯ್ಯ, ಏನೇನುವೆ ನಾನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೪೫೪ ||

೧೩೧೩

ನಿಃಕಲಪರಬ್ರಹ್ಮಲಿಂಗವನಾಚರಿಸಿದ ಶರಣನು
ಭಕ್ತನುವೆ ನಾನಯ್ಯ, ಮಹೇಶ್ವರನುವೆ ನಾನಯ್ಯ,
ಪ್ರಸಾದಿಯೆ ನಾನಯ್ಯ, ಪ್ರಾಣಲಿಂಗಿಯೇ ನಾನಯ್ಯ,
ಶರಣನೆ ನಾನಯ್ಯ, ಐಕ್ಯನೆ ನಾನಯ್ಯ.
ಏನೇನುವೆ ನಾನಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೪೫೫ ||

೧೩೧೪

ನಿತ್ಯವಿಡಿದು ಮುಕ್ತನಾಗಿ,
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣನಾಗಿ
ಅತ್ತತ್ತಲೆ ತಾನು ತಾನಾಗಿರ್ಪ ನೋಡಾ.
ಝೇಂಕಾರ ನಿಜಲಿಂಗಪ್ರಭುವೆ. || ೪೫೬ ||

೧೩೧೫

ಆಕಾಶದ ಮೇಲೆ ಏಕಾಂತಮಂಟಪವ ಕಂಡೆನಯ್ಯ.
ಆ ಮಂಟಪದೊಳಗೆ ಅನಾದಿಜಂಗಮವ ಕಂಡೆನಯ್ಯ.
ಆ ಅನಾದಿ ಜಂಗಮದ ಪರಮಪ್ರಸಾದವ ನಾನು ಸ್ವೀಕರಿಸಿ ಬದುಕಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೪೫೭ ||

೧೩೧೬

ಸರ್ವಾಂಗದೊಳಹೊರಗೆ ಪರಿಪೂರ್ಣವಾಗಿ
ತುಂಬಿಕೊಂಡಿಪ್ಪ ಪರಬ್ರಹ್ಮಲಿಂಗವು.
ಆ ಪರಬ್ರಹ್ಮಲಿಂಗದೊಳು ಕೂಡಿ ನಿಃಪ್ರಿಯವಾದ ಶರಣನ

ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೪೫೮ ॥

೧೩೧೭

ಆತ್ಮನೆಂಬ ಪ್ರಭೆಯಲ್ಲಿ ನಿಂದು
ನಿತ್ಯವಾದ ಲಿಂಗವ ಹಿಡಿದು
ಅತ್ತತ್ತಲೆ ಪರಕೆ ಪರವನಾಚರಿಸಿ ನಿರ್ಮುಕ್ತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೫೯ ॥

೧೩೧೮

ಆಚಾರಲಿಂಗದ ಬೆಳಗಿನೊಳು ಶಾಂತ ಸದಮಲಜ್ಞಾನವನರಿತು
ನಿತ್ಯಪರಿಪೂರ್ಣವಾದ ಲಿಂಗದಲ್ಲಿ ಸತ್ತುಹೋಹ ಶರಣರ
ಎನಗೊಮ್ಮೆ ತೋರಿಸಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೪೬೦ ॥

೧೩೧೯

ಇರುಳು ಹಗಲುಗಳೆಂಬ ಸಂದೇಹಗಳನಳಿದು ನಿಂದು
ನಿರುತನಿರಂಜನಲಿಂಗದೊಳು ಕೂಡಿ ಪರವಶನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೧ ॥

೧೩೨೦

ಅಂಗದ ಗುಣಾದಿಗಳನಳಿದು ಲಿಂಗಸಂಗಿಯಾಗಿ
ಮಂಗಳಪ್ರಭೆಯಲ್ಲಿ ಕೂಡಿ
ಹಿಂಗದೆ ಪರಕ್ಕೆ ಪರವಾದ ಲಿಂಗವನಾಚರಿಸಬಲ್ಲಾತನೆ
ನಿಮ್ಮ ಶರಣನು ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೬೨ ॥

೧೩೨೧

ಮನದ ವಾಸನೆಗಳನಳಿದು, ಜ್ಞಾನದಲ್ಲಿ ಕೂಡಿ,
ಸ್ವಾನುಭವ ಸಿದ್ಧಾಂತವಳವಟ್ಟಾತನೆ
ಜಗದಯ್ಯ ತಾನೆ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೬೩ ॥

೧೩೨೨

ಹೃದಯದೊಳಗಿಪ್ಪ ಪ್ರಾಣಲಿಂಗವನು ತ್ರಿಕೂಟದಲ್ಲಿ ತಂದು,
ಮಹಾಲಿಂಗದೊಳು ಸಮರಸವ ಮಾಡಿ
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೪ ॥

೧೩೭೩

ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರ ಮೇಲೆ
ಅನಾದಿಯ ಜಂಗಮವ ಕಂಡೆನಯ್ಯ,
ಆ ಜಂಗಮದ ಸಂಗದಿಂದ ಸಾಜಸಮಾಧಿಯ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೫ ॥

೧೩೭೪

ತನ್ನ ತಾನೇ ತಿಳಿದು, ಗನ್ನಘಾತಕವನಳಿದು, ಸನ್ನಹಿತನಾಗಿ
ಅಘಟಿತಘಟಿತ ಪರಂಜ್ಯೋತಿಯ ಕಂಡು
ನಿಃಪ್ರಿಯವಾದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೬೬ ॥

೧೩೭೫

ತತ್ವಮಸಿ ವಾಕ್ಯದಿಂದ ಪರಂಜ್ಯೋತಿಲಿಂಗವ ಕಂಡು,
ನಿತ್ಯ ನಿರಂಜನ ನಿರಾಳನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೬೭ ॥

೧೩೭೬

ಐದು ತತ್ವದ ಮೇಲೆ ಒಬ್ಬ ಸತಿಯಳು ಇಪ್ಪಳು.
ಆ ಸತಿಯಳು ಸಾವಿರ ಎಸಳ ಮಂಟಪವ ಪೊಕ್ಕು
ಪರಕ್ಕೆ ಪರವಾದಳು ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೬೮ ॥

೧೩೭೭

ಪ್ರಸಾದ ಪ್ರಸಾದವೆಂದು ಹೆಸರಿಟ್ಟುಕೊಂಡು ನುಡಿವಿರಿ,
ಪ್ರಸಾದವಾವುದು ಹೇಳಿರೋ, ಅರಿಯದಿದ್ದರೆ ನೀವು ಕೇಳಿರೋ.
ಅದು ಹೇಗೆಂದಡೆ:
ಸಾವಿರ ಕಂಬದ ಮಂಟಪದಲ್ಲಿ ಅನಾದಿಯ ಜಂಗಮವಿಪ್ಪುದು ನೋಡಾ
ಆ ಜಂಗಮದಲ್ಲಿ ಮನಪವನಾದಿಗಳ ನಿಲಿಸಿ
ತಲೆವೋಡಿನಲ್ಲಿ ಹೊತ್ತಿಪ್ಪ ಪರಮಪ್ರಸಾದವ ಸ್ವೀಕರಿಸಬಲ್ಲಡೆ
ಆತನೆ ನಿರಂಜನ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೬೯ ॥

೧೩೭೮

ಪೃಥ್ವಿಗುಣವಳಿದು ಭಕ್ತನಾದೆನಯ್ಯ,
ಅಪ್ಪುವಿನ ಗುಣವಳಿದು ಮಹೇಶ್ವರನಾದೆನಯ್ಯ.

ಅಗ್ನಿಗುಣವನಳಿದು ಪ್ರಸಾದಿಯಾದೆನಯ್ಯ.
ವಾಯುವಿನ ಗುಣವನಳಿದು ಪ್ರಾಣಲಿಂಗಿಯಾದೆನಯ್ಯ,
ಆಕಾಶದ ಗುಣವನಳಿದು ಶರಣನಾದೆನಯ್ಯ.
ಆತ್ಮನ ಗುಣವನಳಿದು ಐಕ್ಯನಾದೆನಯ್ಯ.
ತನ್ನ ತಾನೇ ಅಳಿದು ನಿರಾಳನಾದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೦ ||

೧೩೨೯

ಅಂತರಂಗದ ಬೆಳಗಿನೊಳು ಸದಮಲಜ್ಞಾನವನರಿತು,
ನಿತ್ಯವಿಡಿದು, ಆನಂದಪ್ರಭೆಯೊಳು ಕೂಡಿ,
ಚಿತ್ತದಿಂದ ಸ್ವಾನುಭವದೊಳು ಮೈಮರೆದು
ಅತ್ತತ್ತಲೆ ಘನಕ್ಕೆ ಘನವನಾಚರಿಸಿ ನಿರ್ಮುಕ್ತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೧ ||

೧೩೩೦

ಉಲುಹುವಡಗಿದ ವೃಕ್ಷದ ಮೇಲೆ ಫಲಗಳಿಪ್ಪುದ ಕಂಡೆನಯ್ಯ.
ಆ ಫಲಗಳ ಸ್ವೀಕರಿಸಬಲ್ಲಡೆ ಆತನೆ ನಿರ್ಮುಕ್ತ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೨ ||

೧೩೩೧

ಹೃದಯದಲ್ಲಿಪ್ಪ ಪ್ರಾಣಕ್ಕೆ ವಾಯುವೇ ಆಧಾರ.
ಆ ವಾಯುವಿಗೆ ಪ್ರಾಣವೇ ಆಧಾರ,
ಈ ಪರಿಯಿಂದ ರೇಚಕ ಪೂರಕಂಗಳಿಂದ ನಡೆವುತಿಪ್ಪುದು ನೋಡಾ.
ಆ ರೇಚಕ ಪೂರಕಂಗಳ ಸುಷುಮ್ನನಾಳಕೆ ತಂದು,
ಪರಕೆಪರವಶನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೩ ||

೧೩೩೨

ಅಜನಸ್ಥಾನಗಳಿಂದ ನಾಭಿಯ ಪವನವತ್ತಿ
ನಾಶಿಕಾಗ್ರದಲ್ಲಿ ನಿಂದು, ರವಿ ಶಶಿಯ ಬೆಳಗನೊಳಕೊಂಡು,
ಉನ್ಮನಿಯ ಸ್ಥಾನದಲ್ಲಿ ನಿಂದು, ನಿರ್ವಿಕಲ್ಪ ನಿತ್ಯಾತ್ಮಕನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೪ ||

೧೩೩೩

ಮನ ಪವನಾದಿಗಳ ತ್ರಿಕೂಟದಲ್ಲಿ ತಂದು
ಬ್ರಹ್ಮರಂಧ್ರವೆಂಬ ಪೌಳಿಯ ಪೊಕ್ಕು
ಶಿಖಾಚಕ್ರದಲ್ಲಿಪ್ಪ ಪರಮಪ್ರಸಾದವ ಸ್ವೀಕರಿಸಿ
ನಿರಂಜನದೇಶಕೆ ಹೋಗಿ ನಿರ್ವಯಲಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೫ ||

೧೩೩೪

ಇಷ್ಟಲಿಂಗವಿಡಿದು ಗುರುಪ್ರಸಾದವ ಕಂಡೆನಯ್ಯ.
ಪ್ರಾಣಲಿಂಗವಿಡಿದು ಲಿಂಗಪ್ರಸಾದವ ಕಂಡೆನಯ್ಯ.
ಭಾವಲಿಂಗವಿಡಿದು ಜಂಗಮಪ್ರಸಾದವ ಕಂಡೆನಯ್ಯ.
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯಂಗಳಲ್ಲಿ
ಒಳಹೊರಗೆ ಪರಿಪೂರ್ಣವಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೬ ||

## ಪ್ರಾಣಲಿಂಗಸ್ಥಲ

೧೩೩೫

ಪೃಥ್ವಿ-ಅಪ್ಪು-ತೇಜ-ವಾಯು-ಆಕಾಶವಿಲ್ಲದಂದು,
ರವಿ-ಶಶಿ-ಆತ್ಮರಿಲ್ಲದಂದು, ನಾದ-ಬಿಂದು-ಕಲೆಗಳಿಲ್ಲದಂದು,
ಸಾಕ್ಷಿ-ಸಭೆಗಳಿಲ್ಲದಂದು, ಶೂನ್ಯ-ನಿಃಶೂನ್ಯವಿಲ್ಲದಂದು,
ಏನೇನೂ ಇಲ್ಲದಂದು ಅತ್ತತ್ತಲೆ, ಅಪರಂಪರ ನಿರಾಳ ತಾನೇ ನೋಡಾ.
ಆ ನಿರಾಳನ ಚಿದ್ವಿಲಾಸದಿಂದ ಪರಬ್ರಹ್ಮನಾದನಯ್ಯ.
ಆ ಪರಬ್ರಹ್ಮನ ಭಾವದಿಂದ ಪರಶಿವನಾದ.
ಆ ಪರಶಿವನ ಭಾವದಿಂದ ಸದಾಶಿವನಾದ.
ಆ ಸದಾಶಿವನ ಭಾವದಿಂದ ಈಶ್ವರನಾದ.
ಆ ಈಶ್ವರನ ಭಾವದಿಂದ ರುದ್ರನಾದ.
ಆ ರುದ್ರನ ಭಾವದಿಂದ ವಿಷ್ಣುವಾದ.
ಆ ವಿಷ್ಣುವಿನ ಭಾವದಿಂದ ಬ್ರಹ್ಮನಾದ.
ಆ ಬ್ರಹ್ಮಂಗೆ ಸರಸ್ವತಿಯ ಸಂಬಂಧಿಸಿ ಧಾರೆಯನೆರೆದರು.
ವಿಷ್ಣುವಿಂಗೆ ಲಕ್ಷ್ಮಿಯ ಸಂಬಂಧಿಸಿ ಧಾರೆಯನೆರೆದರು.
ರುದ್ರಂಗೆ ಕ್ರಿಯಾಶಕ್ತಿಯ ಸಂಬಂಧಿಸಿ ಧಾರೆಯನೆರೆದರು.
ಈಶ್ವರಂಗೆ ಇಚ್ಛಾಶಕ್ತಿಯ ಸಂಬಂಧಿಸಿ ಧಾರೆಯನೆರೆದರು.

ಸದಾಶಿವಂಗೆ ಜ್ಞಾನಶಕ್ತಿಯ ಸಂಬಂಧಿಸಿ ಧಾರೆಯನೆರೆದರು.
ಪರಶಿವಂಗೆ ಪರಾಶಕ್ತಿಯ ಸಂಬಂಧಿಸಿ ಧಾರೆಯನೆರೆದರು.
ಪರಬ್ರಹ್ಮಕೆ ಚಿತ್‌ಶಕ್ತಿಯ ಸಂಬಂಧಿಸಿ ಧಾರೆಯನೆರೆದರು.
ಇಂತೀ ಭೇದವನರಿತು ಇರಬಲ್ಲರೆ
ಅವರೇ ಪ್ರಾಣಲಿಂಗಸಂಬಂಧಿಗಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೭ ||

೧೩೩೬

ಮಾತು ಮಥನಂಗಳಿಲ್ಲದಂದು, ನೀತಿ ನಿರ್ಮಲವಿಲ್ಲದಂದು,
ಜಾತಿಸೂತಕವಿಲ್ಲದಂದು,
ನಾಮ-ರೂಪ-ಕ್ರಿಯೆಗಳಿಲ್ಲದಂದು,
ಏನೇನೂ ಇಲ್ಲದಂದು, ತಾನೇ ನಿಪ್ಪತಿಯಾಗಿರ್ದನಯ್ಯ.
ತನ್ನ ಚಿದ್ವಿಲಾಸದಿಂದ ಓಂಕಾರವೆಂಬ ಪ್ರಣವವಾಯಿತ್ತು ನೋಡಾ.
ಆ ಓಂಕಾರವೆಂಬ ಪ್ರಣವದಲ್ಲಿ ಅಕಾರ ಉಕಾರ ಮಕಾರಂಗಳಾದವು.
ಆ ಅಕಾರ ಉಕಾರ ಮಕಾರಂಗಳೊಡನೆ ನಾದ-ಬಿಂದು-ಕಲೆಗಳಾದವು.
ಆ ನಾದ ಬಿಂದು ಕಲೆಗಳೊಡನೆ ಷಡಾಧಾರಚಕ್ರಂಗಳಾದವು.
ಆ ಷಡಾಧಾರಚಕ್ರಂಗಳಲ್ಲಿ
ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯರೆಂಬ
ಷಡ್ವಿಧಮೂರ್ತಿಗಳಾದರು ನೋಡಾ.
ಭಕ್ತಂಗೆ ಆಚಾರಲಿಂಗ, ಮಹೇಶ್ವರಂಗೆ ಗುರುಲಿಂಗ,
ಪ್ರಸಾದಿಗೆ ಶಿವಲಿಂಗ, ಪ್ರಾಣಲಿಂಗಿಗೆ ಜಂಗಮಲಿಂಗ,
ಶರಣಂಗೆ ಪ್ರಸಾದಲಿಂಗ, ಐಕ್ಯಂಗೆ ಮಹಾಲಿಂಗವಾಗಿ,
ನಿಶ್ಚಿಂತ ನಿರಾಕುಳ ನಿರ್ಭರಿತ ಲಿಂಗವ ಅರಿಯಬಲ್ಲಡೆ
ಆತನೆ ಪ್ರಾಣಲಿಂಗಸಂಬಂಧಿ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೭೮ ||

೧೩೩೭

ಹೃದಯದಲ್ಲಿಪ್ಪ ಪ್ರಾಣಲಿಂಗವನು ತ್ರಿಕೂಟದಲ್ಲಿ ತಂದು,
ಆ ತ್ರಿಕೂಟದಲ್ಲಿಪ್ಪ ಆತ್ಮಲಿಂಗವನು ಬ್ರಹ್ಮರಂಧ್ರದಲ್ಲಿ ತಂದು,
ಆ ಬ್ರಹ್ಮರಂಧ್ರದಲ್ಲಿಪ್ಪ ಮಹಾಜ್ಞಾನವನು ಶಿಖಾಚಕ್ರದಲ್ಲಿ ತಂದು,
ಆ ಶಿಖಾಚಕ್ರದಲ್ಲಿಪ್ಪ ಸ್ವಯಜ್ಞಾನವನು ಪಶ್ಚಿಮಚಕ್ರಕ್ಕೆ ತಂದು,
ಆ ಪಶ್ಚಿಮಚಕ್ರದಲ್ಲಿಪ್ಪ ನಿರಂಜನವ ಅಣುಚಕ್ರಕ್ಕೆ ತಂದು,

ಆ ಅಣುಚಕ್ರದಲ್ಲಿಪ್ಪ ಝೇಂಕಾರಲಿಂಗವನು ನಿಶ್ಚಿಂತ ನಿರಾಳದಲ್ಲಿ ತಂದು
ತಾನು ತಾನಾಗಿರ್ಪ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೪೭೯ ॥

೧೩೩೮

ನಿರಾಳ ಝೇಂಕಾರ ನಿಜಲಿಂಗಪ್ರಭು ನುಡಿಸಿದರೆ ನುಡಿದೆನಲ್ಲದೆ,
ನಾನಾದರೆ ನುಡಿಯಲರಿಯೆನಯ್ಯ.
ಇದು ಕಾರಣ, ಎನ್ನಂತರಂಗದಲ್ಲಿ ಶಿವಾತ್ಮಜ್ಞಾನ ಉಕ್ಕಿ
ಹಾಡಿಸಿದರೆ ಹಾಡಿದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೪೮೦ ॥

೧೩೩೯

ಒಳಹೊರಗೆ ಪರಿಪೂರ್ಣವಾಗಿಹ ಮೂಲ ಪ್ರಣವವ ತಿಳಿದು
ಪರಮಾನಂದದೊಳು ಕೂಡಿ
ಅತ್ತತ್ತಲೆ ಪರಕೆಪರವಶವಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೮೧ ॥

೧೩೪೦

ಬಯಲೆ ಅಂಗವಾದ ಶರಣಂಗೆ ನಿರ್ವಯಲೆ ಲಿಂಗ ನೋಡಾ.
ಆ ನಿರ್ವಯಲೆಂಬ ಲಿಂಗದಲ್ಲಿ, ತಾನು ತಾನೆಂಬುದ ಮರೆದು
ನಿಶ್ಚಿಂತ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೮೨ ॥

೧೩೪೧

ರೂಪ ಕುರೂಪವನೊಳಕೊಂಡು
ಪರಿಣಾಮದಿಂದ ಪರಬ್ರಹ್ಮಲಿಂಗದಲ್ಲಿ ಕೂಡಿ
ಪರವಶನಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೪೮೩ ॥

೧೩೪೨

ಹಲವು ಕಡೆಗೆ ಹೊಯ್ದಾಡುವ ಮನವನೊಬ್ಬುಳಿಮಾಡಿ
ಘನತರವೆಂಬ ಲಿಂಗದಲ್ಲಿ ಕೂಡಿ
ಅಗಮ್ಯ ಅಗೋಚರ ಅಪ್ರಮಾಣನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೮೪ ॥

೧೩೪೩

ಬ್ರಹ್ಮ ವಿಷ್ಣು ರುದ್ರಾದಿಗಳೆಂಬ ಭವಸಾಗರವ ಹರಿದು
ಪ್ರಾಣಲಿಂಗಸಂಬಂಧಿಯಾಗಿ,
ಶರಣೈಕ್ಯರೆಂಬ ನಿಜಸ್ಥಲವನಂಗಂಗೊಂಡು,
ನಿಶ್ಚಿಂತ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ || ೪೮೫ ||

೧೩೪೪

ಒಳಹೊರಗೆ ಪರಿಪೂರ್ಣವಾಗಿಹ ಲಿಂಗದಲ್ಲಿ
ಸಂಗಸಂಯೋಗದಿಂದ ಸಮರಸವನ್ನೈದಿ
ನಿರ್ವಿಕಲ್ಪ ನಿತ್ಯಾತ್ಮನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೮೬ ||

೧೩೪೫

ಅಂಗಲಿಂಗಸಂಬಂಧವ ಗರ್ಭೀಕರಿಸಿಕೊಂಡು
ಜೀವಾತ್ಮ ಅಂತರಾತ್ಮ ಪರಮಾತ್ಮವೆಂಬ ಭೇದವನರಿತು
ಅತ್ತತ್ತಲೆ ನಿಶ್ಚಿಂತ ನಿರಾಕುಳಲಿಂಗದಲ್ಲಿ
ನಿರ್ವಿಕಾರನಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೪೮೭ ||

೧೩೪೬

ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂಬ ಪಂಚಮುಖವನು
ಮಹಾಲಿಂಗವಿದ್ದೆಡೆಯಲ್ಲಿ ತಂದು,
ಪರಕೆ ಪರವಶನಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೪೮೮ ||

೧೩೪೭

ಪೃಥ್ವಿ-ಅಪ್ಪು-ತೇಜ-ವಾಯು-ಆಕಾಶವೆಂಬ ಐದಂಗವ
ಒಂದು ಹಂಸ ನುಂಗಿ ಸುಳಿದಾಡುತಿಪ್ಪುದು ನೋಡಾ!
ಆ ಹಂಸಂಗೆ ಮೂವರು ಮಕ್ಕಳು ಹುಟ್ಟಿ ಆರು ಕೇರಿಗಳಲ್ಲಿಪ್ಪರು ನೋಡಾ.
ಆ ಆರು ಕೇರಿಗಳಲ್ಲಿ ಹಾರಿ ಆಡುವ ಹಾರುವಿತಿಯ ಕೊಂದು,
ಏಕೋಮನೋಹರನೆಂಬ ಪೂಜಾರಿಯು ನಿಶ್ಚಿಂತ ನಿರಾಕುಳಲಿಂಗದಲ್ಲಿ ನಿಂದು
ತಾನು ತಾನಾಗಿ ಪೂಜೆಗೊಂಬ ಪರಿಯೆಂತು ಹೇಳಾ
ಝೇಂಕಾರ ನಿಜಲಿಂಗಪ್ರಭುವೆ. || ೪೮೯ ||

೧೩೪೮

ಅಂಗದೊಳಹೊರಗಿಪ್ಪ ಲಿಂಗವನು ಅರಿತು
ಆ ಲಿಂಗದಲ್ಲಿ ಅಂಗವನಳಿದು ಲಿಂಗಸಂಗಿಯಾಗಿ ಇರಬಲ್ಲಡೆ
ಆತನೆ ನಿರಂಜನ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೯೦ ॥

೧೩೪೯

ಸಕಲ ನಿಃಕಲದಲ್ಲಿ ಅಡಗಿ, ನಿಃಕಲ ಸಕಲದಲ್ಲಿ ಅಡಗಿ,
ಸಕಲ ನಿಃಕಲವಿಲ್ಲದೆ,
ಏಕಾಂತ ಲಿಂಗದಲ್ಲಿ ಪರಕೆ ಪರವಶನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೯೧ ॥

೧೩೫೦

ಅಂಗಕ್ಕೆ ಲಿಂಗವೇ ಆಧಾರ, ಲಿಂಗಕ್ಕೆ ಸಂಬಂಧವೆ ಆಧಾರ,
ಸಂಬಂಧಕ್ಕೆ ಪರಬ್ರಹ್ಮವೆ ಆಧಾರವಾಗಿ
ತಾನು ತಾನಾಗಿಪ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೯೨ ॥

೧೩೫೧

ಊರೊಳಗೆ ಆನೆಯ ಕಂಡೆನಯ್ಯ.
ಮೇರುವಿನೊಳಗೆ ಸಿಂಹರಾಜನ ಕಂಡೆನಯ್ಯ.
ಆ ಮೇರುವಿನೊಳಗಣ ಸಿಂಹರಾಜನು ಊರೊಳಗಣ ಆನೆಯ ಕೊಂಡು
ಮೇರುವೆಗೆ ಹಾರಿಹೋದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೯೩ ॥

೧೩೫೨

ಮೂರೂರ ಮೇಲೆ ಸುಳಿದಾಡುವ ಸೂಳೆಯ ಕಂಡೆನಯ್ಯ.
ಒಬ್ಬ ಪುರುಷನು ಆ ಮೂರೂರ ಕೆಡಿಸಿ,
ಆ ಸೂಳೆಯ ಕೊಂಡು ಕಡೆಯ ಬಾಗಿಲ ದಾಂಟಿ
ನಿರಂಜನ ದೇಶಕೆ ಹೋದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೪೯೪ ॥

೧೩೫೩

ಒಳಗ ಹೊರಗು ನುಂಗಿ, ಹೊರಗ ಒಳಗು ನುಂಗಿ,
ಒಳ ಹೊರಗೆ ಇಲ್ಲದೆ, ಬೆಳಗಿಂಗೆ ಬೆಳಗು ನುಂಗಿ,

ಬೆಳಗು ತನ್ಮಯವಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೯೫ ||

೧೩೫೪

ಭಕ್ತಿ-ಜ್ಞಾನ-ವೈರಾಗ್ಯದಿಂದತ್ತತ್ತ ಅಗಮ್ಯಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ಕೂಡಿ
ಅವಿರಳ ಸ್ವಾನುಭಾವಸಿದ್ಧಾಂತನಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೪೯೬ ||

೧೩೫೫

ಅಷ್ಟಮದಂಗಳ ಸುಟ್ಟು, ಕಷ್ಟಕರ್ಮವ ಹರಿದು,
ಬಟ್ಟಬಯಲಲ್ಲಿ ದೃಷ್ಟಲಿಂಗವ ಕಂಡು,
ಶ್ರೇಷ್ಠನಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೪೯೭ ||

೧೩೫೬

ಇಪ್ಪತ್ತೈದು ನೆಲೆಯ ಮೇಲೆ ಸುಪ್ಪಾಣಿಯ ಕಂಡೆನಯ್ಯ.
ಆ ಸುಪ್ಪಾಣಿಯ ಸಂಗದಿಂದ ಕೂಗುವ ಕಪ್ಪೆಯ ಕಂಡೆನಯ್ಯ.
ಆ ಕೂಗುವ ಕಪ್ಪೆ ಸರ್ಪನ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೪೯೮ ||

೧೩೫೭

ಅಂಗಪ್ರಕೃತಿಯನಳಿದು, ಲಿಂಗಸಮರಸವಾಗಿ,
ಹಿಂಗದೆ ಓಂಕಾರಲಿಂಗವ ಜಪಿಸಿ
ನಿಸ್ಸಂಗಿಯಾಗಿರ್ದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೪೯೯ ||

೧೩೫೮

ಮನ ಬುದ್ಧಿ ಚಿತ್ತ ಅಹಂಕಾರ ಕರಣಚತುಷ್ಟಯಂಗಳ
ನಿರ್ಮಲಸ್ವರೂಪ ಮಾಡಿ,
ಜ್ಞಾನೈಕ್ಯವೆಂಬ ಶಿವಾಲಯವ ಹೊಕ್ಕು
ಪರಬ್ರಹ್ಮಲಿಂಗವ ಪೂಜೆಗೊಂಬ ಪರಿಯ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೦೦ ||

೧೩೫೯

ಊರೊಳಗಣ ನಾರಿಯು ಮೇರುವೆಯ ಗುಡಿಯ ಪೊಕ್ಕು
ಪರಬ್ರಹ್ಮಲಿಂಗದಲ್ಲಿ ಕೂಡಿ

ತಾನು ತಾನಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೦೧ ॥

೧೩೬೦

ಮೂರು ದಾರಿಯಲ್ಲಿ ಮಾರಣಿ ಕುಳಿತಿಪ್ಪಳು ನೋಡಾ.
ಆ ಮಾರಣಿಯ ಕೋಡಗ ನುಂಗಿ,
ಹತ್ತು ಕೇರಿಗಳಲ್ಲಿ ಹಾರಾಡುತಿಪ್ಪುದು ನೋಡಾ.
ಆ ಕೋಡಗನ ಇರುವೆ ನುಂಗಿ, ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೦೨ ॥

೧೩೬೧

ಸರ್ಪ ಸತ್ತು ಕಪ್ಪೆಯ ನುಂಗುವುದ ಕಂಡೆನಯ್ಯ.
ಕಪ್ಪೆ ಹಾರಿ ಬಯಲಾದುದ ಕಂಡೆನಯ್ಯ.
ಚಿಪ್ಪು ಒಡೆದು ಮುತ್ತಾದುದ ಕಂಡೆನಯ್ಯ.
ಶಬ್ದವಡಗಿ ನಿಶ್ಶಬ್ದವಾದುದ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೫೦೩ ॥

೧೩೬೨

ಒಂದು ಬಿಚ್ಚಿ ಮೂರಾದುದ ಕಂಡೆನಯ್ಯ.
ಮೂರು ಬಿಚ್ಚಿ ಆರಾದುದ ಕಂಡೆನಯ್ಯ.
ಆರು ಬಿಚ್ಚಿ ಮೂವತ್ತಾರಾದುದ ಕಂಡೆನಯ್ಯ.
ಮೂವತ್ತಾರರಲ್ಲಿ ಒಬ್ಬ ಸತಿಯಳಿಪ್ಪಳು.
ಆ ಸತಿಯಳು ಆರು ಕೇರಿಯ ಪೊಕ್ಕು, ಮೂರು ಬಾಗಿಲ ಮುಚ್ಚಿ,
ಮೀರಿದ ಲಿಂಗದಲ್ಲಿ ತಾನು ತಾನಾಗಿಪ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೦೪ ॥

೧೩೬೩

ಗುರುವಿಡಿದು ಕಾಯದ ಕರ್ಮವ ಹರಿದೆನಯ್ಯ.
ಲಿಂಗವಿಡಿದು ಜೀವದ ಕರ್ಮವ ಹರಿದೆನಯ್ಯ.
ಜಂಗಮವಿಡಿದು ಪ್ರಾಣದ ಕರ್ಮವ ಹರಿದೆನಯ್ಯ.
ಪ್ರಸಾದವ ಹಿಡಿದು ಸರ್ವಕರ್ಮವ ಹರಿದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೫೦೫ ॥

೧೩೬೪

ಮನ ಘನವ ನುಂಗಿ, ಪರಕೆಪರವಶನಾಗಿ,
ಪರಬ್ರಹ್ಮಲಿಂಗವು ಒಂದು ಮೂರಾಗಿ
ಐವತ್ತೆರಡಕ್ಷರವ ನುಡಿವ ಶಬ್ದವನು ನಿರ್ವಯಲು ನುಂಗಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೦೬ ||

೧೩೬೫

ಹಲವು ಯಜ್ಞದ ಮನೆಯಲ್ಲಿ
ಒಬ್ಬ ಸತಿಯಳು ಬಲೆಯ ಬೀಸುತಿಪ್ಪಳು ನೋಡಾ.
ಆ ಸತಿಯಳ ಕಪ್ಪೆ ನುಂಗಿ ಕೂಗುತಿದೆ ನೋಡಾ.
ಆ ಕೂಗಿನ ಶಬ್ದವನರಿವ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೫೦೭ ||

೧೩೬೬

ಒಂಬತ್ತು ಬಾಗಿಲ ಮನೆಯೊಳಗೆ
ಒಂದು ಪಕ್ಷಿ ಇಂಬನರಿತು ಗೂಡನಿಕ್ಕುವುದ ಕಂಡೆನಯ್ಯ.
ಅದು ಹೇಗೆಂದಡೆ:
ಅದಕ್ಕೆ ಬುಡವೊಂದು, ಕೊನೆ ಮೂರು,
ಆರು ಕಂಬದ ಶಿವಾಲಯವ ರಚಿಸಿ,
ಇಪ್ಪತ್ತೈದು ಸೋಪಾನಂಗಳ ಮಾಡಿ,
ಐವತ್ತೆರಡು ಎಸಳಿನಿಂದ ರಚಿಸಿ ಆಡುವ ಹಂಸನ
ಒಬ್ಬ ಸತಿಯಳು ಹಿಡಿದು, ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೦೮ ||

೧೩೬೭

ಆರು ಸ್ಥಲದಲ್ಲಿ ಆರು ಮೂರ್ತಿಗಳ ಕಂಡೆನಯ್ಯ.
ಆರು ಮೂರ್ತಿಗಳಲ್ಲಿ ಆರು ಲಿಂಗವ ಕಂಡೆನಯ್ಯ.
ಆರರಿಂದತ್ತತ್ತ ಮೀರಿದ ಮಹಾಘನಲಿಂಗವ ಕಂಡು,
ನಿರ್ವಿಕಲ್ಪ ನಿತ್ಯಾತ್ಮಕನಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೫೦೯ ||

೧೩೬೮

ಕರ್ಮದ ಕಂಡಣೆಯ ಹರಿದು,
ನಿರ್ಮಲಂಗವ ಪೊಕ್ಕು, ಧರ್ಮದ ಮಾರ್ಗದೊಳು ನಿಂದು,

ಪರಿಪೂರ್ಣಲಿಂಗವನಾಚರಿಸಿ, ಪರಕೆಪರವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೦ ||

೧೩೬೯

ಹೃದಯದಲ್ಲಿಪ್ಪ ಪ್ರಾಣಲಿಂಗವನು ನಿಟಿಲಭ್ರೂಮಧ್ಯದಲ್ಲಿ ತಂದು,
ನಾದ ಬಿಂದು ಕಲೆಯನೊಳಕೊಂಡು,
ಪರಬ್ರಹ್ಮಲಿಂಗದಲ್ಲಿ ಪರವಶನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೧ ||

೧೩೭೦

ಬ್ರಹ್ಮ ವಿಷ್ಣು ರುದ್ರಾದಿಗಳೆಂಬ ಭವಸಾಗರವ ಹರಿದು
ಕರಸ್ಥಲಕೆ ಇಷ್ಟಲಿಂಗವಾದನಯ್ಯ.
ಮನಸ್ಥಲಕೆ ಪ್ರಾಣಲಿಂಗವಾದನಯ್ಯ.
ಪರಸ್ಥಲಕೆ ಭಾವಲಿಂಗವಾದನಯ್ಯ.
ಇಂತೀ ಭೇದವನರಿತು,
ನಿಶ್ಚಿತ ನಿರಾಕುಳಲಿಂಗದಲ್ಲಿ
ನಿರ್ಭರಿತನಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೫೧೨ ||

೧೩೭೧

ಹಲವು ಬಣ್ಣದ ಪಕ್ಷಿಯ
ಒಂದು ಮಂಡೂಕ ನುಂಗಿ ಕೂಗುತಿದೆ ನೋಡಾ.
ಆ ಕೂಗಿನ ಶಬ್ದವ ಕೇಳಿ ಪಂಚಮುಖದ ಸರ್ಪನೆದ್ದು,
ಆ ಮಂಡೂಕನ ನುಂಗಿ,
ತನ್ನ ಸುಳುವ ತಾನೇ ತೋರುತಿಪ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೩ ||

೧೩೭೨

ಭೂತದೇಹಾದಿಗಳನಳಿದು, ತತ್ವಾದಿಗಳನೆಲ್ಲ ಲಿಂಗವ ಮಾಡಿ,
ಚಿದಾತ್ಮದೊಳು ಕೂಡಿ ಪರಿಪೂರ್ಣವಾದ ಶರಣಂಗೆ,
ಇಹಲೋಕವೆಂದಡೇನಯ್ಯ? ಪರಲೋಕವೆಂದಡೇನಯ್ಯ?
ಇಹಪರವನೊಳಕೊಂಡು ತಾನು ತಾನಾಗಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೪ ||

೧೩೭೩

ಉದಯಕಾಲದಲ್ಲಿ ಒಬ್ಬ ಮದಲಿಂಗನು
ಹಸೆಯ ಜಗುಲಿಯ ಮೇಲೆ ಕುಳಿತು
ಐವರು ಸತಿಯರ ಕೂಡಿಕೊಂಡು,
ಚಂದ್ರಸೂರ್ಯಾದಿಗಳ ಬೆಳಗನೊಳಕೊಂಡು,
ಪರಕೆ ಪರವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೫ ||

೧೩೭೪

ಕೂಗುವ ಕೋಗಿಲೆಯ ಒಡಲಲ್ಲಿ
ಇಪ್ಪತ್ತೈದು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೊಬ್ಬ ಪೂಜಕ ನಿಂದು
ಆರಾರ ಲಿಂಗಾರ್ಚನೆಯ ಮಾಡಿ
ನಿರ್ವಿಕಾರನಾದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೫೧೬ ||

೧೩೭೫

ಆದಿಲಿಂಗದ ಸಂಗದಿಂದ ಒಬ್ಬ ಚಿದಂಗನೆಯ ಕಂಡೆನಯ್ಯ.
ಆ ಚಿದಂಗನೆಯ ಬಸುರಲ್ಲಿ ಮೂವರು ಮಕ್ಕಳು ಹುಟ್ಟಿ,
ಆರು ಕೇರಿಗಳಲ್ಲಿ ಇಪ್ಪರು ನೋಡಾ.
ಆರು ಕೇರಿಗಳಲ್ಲಿ ಆರು ಮೂರ್ತಿಗಳು
ಆರಾರ ಲಿಂಗಾರ್ಚನೆಯ ಮಾಡಿ
ಮಹಾಮೇರುವೆಯ ಪೊಕ್ಕು, ಪರಕ್ಕೆಪರವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೭ ||

೧೩೭೬

ಆರು ವರ್ಣದ ಪಕ್ಷಿ, ಮೂರು ಬಾಗಿಲವ ಪೊಕ್ಕು,
ಸಾವಿರೆಸಳ ಮಂಟಪದೊಳು ನಿಲ್ಲಲು,
ಅಲ್ಲಿ ಒಬ್ಬ ಚಿದಂಗನೆಯ ಕಂಡೆನಯ್ಯ.
ಆ ಚಿಂದಗನೆಯು ಆ ಪಕ್ಷಿಯ ಹಿಡಿದು
ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೧೮ ||

೧೩೭೭

ನಯನದ ಸಂಚಲವನಳಿದವರ ಅಂಗವ ತೋರಿಸಯ್ಯ.
ಪ್ರಾಣದ ಪ್ರಕೃತಿಯ ಕಳೆದವರ ಲಿಂಗವ ತೋರಿಸಯ್ಯ.
ಶಬ್ದದ ಮೂಲವ ಬಲ್ಲವರ ಸಂಬಂಧವ ತೋರಿಸಯ್ಯ.
ಜಾತಿಯ ಆಶ್ರಯವನಳಿದವರ ಸಮರಸವ ತೋರಿಸಯ್ಯ.
ಅಂಗದ ಸಕೀಲವ ಬಲ್ಲವರ ಮಹಾಜ್ಞಾನವ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೫೧೯ ||

೧೩೭೮

ಒಂದು ಲಿಂಗಕ್ಕೆ ಮುನ್ನೂರು ಮುಖ,
ಆರುಸಾವಿರ ಹಸ್ತ, ಮೂವತ್ತಾರು ಲಕ್ಷ ಪಾದಂಗಳು,
ನವಕೋಟಿ ಮನೆಗಳಲ್ಲಿ ಸುಳಿದಾಡುತಿಪ್ಪನು ನೋಡಾ.
ಆ ನವಕೋಟಿಬಾಗಿಲ ಮುಚ್ಚಿ ನೋಡಲು,
ಕಡೆಯ ಬಾಗಿಲಲ್ಲಿ ಕಪ್ಪೆ ಕುಳಿತು ಕೂಗುತ್ತಿದೆ ನೋಡಾ.
ಆ ಕೂಗಿನ ಶಬ್ದವ ಕೇಳಿ, ಪಾತಾಳಲೋಕದಲ್ಲಿಪ್ಪ ಸರ್ಪನೆದ್ದು,
ಆ ಕಪ್ಪೆಯ ನುಂಗಿ, ತನ್ನ ಸುಳುವ ತಾನೇ ತೋರುತಿಪ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೦ ||

೧೩೭೯

ಬೆಟ್ಟದ ತುದಿಯ ಮೇಲೊಂದು ಬಟ್ಟಬಯಲ ಕಂಡೆನಯ್ಯ.
ಆ ಬಟ್ಟಬಯಲಲ್ಲಿ ಘಟ್ಟಲಿಂಗವಿಪ್ಪುದು ನೋಡಾ.
ಆ ಲಿಂಗದಲ್ಲಿ ಕೂಡಿ ಶ್ರೇಷ್ಠವಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. || ೫೨೧ ||

೧೩೮೦

ಗಿರಿಯ ತುದಿಯ ಮೇಲೆ ಹಾರುವ ಹಂಸನ ಕಂಡೆನಯ್ಯ.
ಆ ಹಂಸನು ಚಂದ್ರಸೂರ್ಯಾದಿಗಳ ಬೆಳಗನೊಳಕೊಂಡು
ಪರಿಪೂರ್ಣವಾದ ಲಿಂಗಕ್ಕೆ ಹಾರಿಹೋದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೨ ||

೧೩೮೧

ದೇಗುಲದೊಳಗೊಂದು ಲಿಂಗವಿಪ್ಪುದು ನೋಡಾ.
ಆ ಲಿಂಗದಲ್ಲಿ ಒಬ್ಬ ಚಿದಂಗನೆಯ ಕಂಡೆನಯ್ಯ.

ಆ ಚಿದಂಗನೆಯು ಐವರ ಕೂಡಿಕೊಂಡು
ಆ ಲಿಂಗಾರ್ಚನೆಯ ಮಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೩ ||

೧೩೮೨

ಮಾತು-ಮಥನಗಳಿಲ್ಲದೆ, ಜಾತಿ-ಜನನವಿಲ್ಲದೆ,
ಭ್ರಾಂತಿ-ಸೂತಕವಿಲ್ಲದೆ, ನೀತಿ-ನಿರ್ಮಲದಿಂದ ಸುಖಿಸಿ,
ಅತ್ತತ್ತಲೆ ನಿಶ್ಚಿಂತ ನಿರಾಕುಳಲಿಂಗದಲ್ಲಿ ತಾನು ತಾನಾಗಿಪ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೪ ||

೧೩೮೩

ಹೊಲೆಹದಿನೆಂಟುಜಾತಿ ನೂರೊಂದು ಕುಲದಲ್ಲಿ
ಆರಾದರೂ ಆಗಲಿ ಗುರುವಿರ್ದು ಲಿಂಗವಿರ್ದು ಜಂಗಮವಿರ್ದು
ಪಾದೋದಕ ಪ್ರಸಾದವಿರ್ದು ಶಿವಾಚಾರವಿರ್ದಲ್ಲಿ
ಶಿವಾರ್ಪಣವ ಮಾಡಬಹುದಯ್ಯಾ.
ದೇವರಾಗಲಿ ಭಕ್ತರಾಗಲಿ ಅವರ ಕುಲವನರಸಿ
ಶಿವಾರ್ಪಣವ ಮಾಡಬಾರದೆಂದು ಸೂತಕವ ಮಾಡಿದರೆ
ಅವರು ರೌರವ ನರಕದೊಳು ಬೀಳುವರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೫ ||

೧೩೮೪

ಗುರುಲಿಂಗಜಂಗಮದ ಪಾದೋದಕ ಪ್ರಸಾದವ ಸ್ವೀಕರಿಸುವವರಿಂಗೆ
ಅಂತು ಇಂತು ಎಂದೊಡೆ
ನಾಯಕನರಕದೊಳು ಬೀಳುವರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೬ ||

೧೩೮೫

ಭಕ್ತ ಮಹೇಶ್ವರರು ಆರಾದರೂ ಆಗಲಿ
ಶಿವಗಣಂಗಳಲ್ಲಿ ಕುಲವನರಸಿದರೆ
ಅವರು ಕುಲಸೂತಕರೆಂದು ಶಿವನು ಯಮನ ಕೈಯಲ್ಲಿ ಕೊಟ್ಟು
ಅಘೋರ ನರಕದೊಳು ಹಾಕೆಂದನು ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. || ೫೨೭ ||

೧೩೮೬

ಆರು ಕಂಬದ ದೇಗುಲದೊಳಗೆ
ಮೂರು ಬಾಗಿಲ ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಘನಲಿಂಗವ ಕಂಡೆನಯ್ಯ.
ಆ ಘನಲಿಂಗದ ಸಂಗದಿಂದ ನಿರಂಜನದೇಶಕ್ಕೆ ಹೋಗಿ
ನಿರ್ವಯಲಾದ ವಿಚಿತ್ರವ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೫೨೮ ॥

೧೩೮೭

ಪಶುವಿನ ಒಡಲಲ್ಲಿ ಒಂದು ಶಿಶುವಿಪ್ಪುದ ಕಂಡೆನಯ್ಯ.
ಆ ಶಿಶುವ ಒಬ್ಬ ಸತಿಯಳು ಹಿಡಿದು
ಮಹಾಮೇರುವೆಗೆ ಹೋಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೨೯ ॥

೧೩೮೮

ಹಾಳೂರಲ್ಲಿ ಒಂದು ಕೋಡಗ ಕುಳಿತಿರುವುದ ಕಂಡೆನಯ್ಯ.
ಆ ಕೋಡಗನ ತಲೆಯ ಮೇಲೆ ಒಂದು ರತ್ನವಿಪ್ಪುದು ನೋಡಾ.
ಆ ರತ್ನವ ಒಬ್ಬ ಭಾಮಿನಿಯು ಕಂಡು,
ಆ ಕೋಡಗನ ಕೊಂದು,
ಆ ರತ್ನವ ತಕ್ಕೊಂಡ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೩೦ ॥

೧೩೮೯

ಸಂತೆಯ ಬೀದಿಯಲ್ಲಿ ಒಬ್ಬ ಸೂಳೆ ಕುಳಿತಿರುವುದ ಕಂಡೆನಯ್ಯ.
ಆ ಸೂಳೆಗೆ ಐವರು ಮಕ್ಕಳು ಹುಟ್ಟಿ
ಜಗವನೆಲ್ಲ ಏಡಿಸ್ಯಾಡುತಿಪ್ಪರು ನೋಡಾ.
ಇದು ಕಾರಣ, ಮೇಲಣ ದಾರಿಯಿಂದ ಒಬ್ಬ ಪುರುಷ ಬಂದು
ಆ ಐವರು ಮಕ್ಕಳ ಕೊಂದು ಆ ಸೂಳೆಯ ಹಿಡಿಯಲೊಡನೆ
ಸಂತೆ ಹರಿದು ಬಯಲಾದ ಸೋಜಿಗನ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೩೧ ॥

೧೩೯೦

ಕೋಣನ ಹಣೆಯ ಮೇಲೆ ಗಾಣಗಾರನ ಕಂಡೆನಯ್ಯ.
ಆ ಗಾಣಗಾರಂಗೆ ಐವರು ಹೆಂಡರು,

ಏಳುಮಂದಿ ಮಕ್ಕಳು, ಎಂಟುಮಂದಿ ನೆಂಟರು,
ಹತ್ತುಮಂದಿ ಬಾಂಧವರು ಇಪ್ಪರು ನೋಡಾ.
ಇದು ಕಾರಣ, ಆ ಕೋಣನ ಹಣೆ ಒಡೆದು,
ಗಾಣಗಾರ ಸತ್ತು, ಜ್ಞಾನ ಉದಯವಾಗಲೊಡನೆ
ಐವರು ಹೆಂಡರಡಗಿ, ಏಳುಮಂದಿ ಮಕ್ಕಳುಡುಗಿ,
ಎಂಟುಮಂದಿ ನೆಂಟರು ಹೋಗಿ,
ಹತ್ತುಮಂದಿ ಬಾಂಧವರು ಬಯಲಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೩೨ ॥

೧೩೯೧

ಕರ್ಮದ ಕೋಟಲೆಯ ಹರಿದು, ನಿರ್ಮಲಂಗವ ಪೊಕ್ಕು,
ಪರಿಪೂರ್ಣಲಿಂಗವ ಕೂಡಿ
ಪರಕೆ ಪರವನಾಚರಿಸುತಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೩೩ ॥

೧೩೯೨

ತನ್ನೊಳಗೆ ತಾನು ತಾನಾದ ಬಳಿಕ
ಭಿನ್ನಪ್ರಕೃತಿಗಳಿನ್ನಾತಕಯ್ಯ.
ಸನ್ಮಾರ್ಗದೊಳು ನಿಂದು, ಪರಕೆ ಪರವನಾಚರಿಸಬಲ್ಲಡೆ
ಆತನೆ ಸ್ವಯಜ್ಞಾನಿ ಕಾಣಾ ಝೇಂಕಾರ ನಿಜಲಿಂಗಪ್ರಭುವೆ. ॥ ೫೩೪ ॥

೧೩೯೩

ಆರು ವರ್ಣದ ಅಂಗನೆಯು
ಮೂರು ಬಾಗಿಲ ಮಾಡಿಕೊಂಡು
ಬೇರೊಂದು ಸ್ಥಾನದಲ್ಲಿ ಲಿಂಗಧ್ಯಾನವ ಮಾಡುತಿರ್ಪಳು ನೋಡಾ.
ಆ ಲಿಂಗದ ಬೆಳಗಿನೊಳಗೆ ಪರಿಪೂರ್ಣವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೩೫ ॥

೧೩೯೪

ಐದು ದಾರಿಯ ಮೇಲೆ ಒಬ್ಬ ಪುರುಷ ನಿಂದಿರುವುದ ಕಂಡೆನಯ್ಯ.
ಆ ಪುರುಷಂಗೆ ಒಬ್ಬ ಸತಿಯಳಿಪ್ಪಳು ನೋಡಾ.
ಆ ಸತಿಯಳ ಸಂಗದಿಂದ ಆರು ದೇಶವ ದಾಂಟಿ,
ಮೂರು ಗ್ರಾಮವ ಮೀರಿ,

ಪರಕೆಪರವನಾಚರಿಸುತಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೩೬ ||

## ಭಾವಲಿಂಗಸ್ಥಲ

೧೩೯೫

ಉಸಿರು ಉನ್ಮನಿಗೆ ಸಿಲ್ಕಿದ ಬಳಿಕ ಪರಿಮಳದ ಹಂಗಿನ್ನ್ಯಾತಕಯ್ಯ?
ಶಬ್ದ ನಿಃಶಬ್ದವಾದ ಬಳಿಕ ಅನುಭಾವದ ಹಂಗಿನ್ನ್ಯಾತಕಯ್ಯ?
ಭಾವ ನಿರ್ಭಾವವಾದ ಬಳಿಕ ಲೋಕದ ಹಂಗಿನ್ನ್ಯಾತಕಯ್ಯ?
ಇದು ಕಾರಣ, ಇಂತೀ ತ್ರಿವಿಧ ಭೇದವನರಿತು ಇರಬಲ್ಲಡೆ
ಆತನೇ ಭಾವಲಿಂಗಸಂಬಂಧಿ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. || ೫೩೭ ||

೧೩೯೬

ಬತ್ತಲೆಯಾದ ಭಾಮಿನಿಯ ಅಂಗದಲ್ಲಿ
ಇಪ್ಪತ್ತೈದು ಗ್ರಾಮವ ಕಂಡೆನಯ್ಯ.
ಆ ಗ್ರಾಮದೊಳಗೊಬ್ಬ ಪುರುಷನು
ಒಂಬತ್ತು ಬಾಗಿಲು ಶಿಖರದಲ್ಲಿ ನಿಂದು
ಪರಕೆ ಪರವನಾಚರಿಸುತಿಪ್ಪ ನೋಡಾ.
ಝೇಂಕಾರ ನಿಜಲಿಂಗಪ್ರಭುವೆ. || ೫೩೮ ||

೧೩೯೭

ನಡೆದು ನಡೆದು ಬಯಲಾದುದ ಕಂಡೆನಯ್ಯ.
ನುಡಿದು ನುಡಿದು ಬಯಲಾದುದ ಕಂಡೆನಯ್ಯ.
ನೋಡಿ ನೋಡಿ ಬಯಲಾದುದ ಕಂಡೆನಯ್ಯ.
ಮಾಡಿ ಮಾಡಿ ಬಯಲಾದುದ ಕಂಡೆನಯ್ಯ.
ಕೇಳಿ ಕೇಳಿ ಬಯಲಾದುದ ಕಂಡೆನಯ್ಯ.
ಬಯಲಿಂಗೆ ಬಯಲು ನಿರ್ವಯಲಾದುದ ಕಂಡೆನಯ್ಯ.
ಇಂತಪ್ಪ ಭೇದವನರಿತು ಇರಬಲ್ಲಡೆ ಆತನೇ ಭಾವಲಿಂಗಸಂಬಂಧಿ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. || ೫೩೯ ||

೧೩೯೮

ಅಂಗಪಟ್ಟಣದೊಳಗೆ ಭೃಂಗನಾಟ್ಯವನಾಡಿ,
ಸಂಗೀತ ಸ್ವರಂಗಳ ತಿಳಿದು, ಸಂಗಸುಖದೊಳುಳಿದು,

ನಿಸ್ಸಂಗವಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೦ ॥

೧೩೯೯

ಕರ್ಮದೋಷಂಗಳ ಹರಿದು, ಕನಸು ಕಳವಳಂಗಳನಳಿದು,
ನಿರ್ಮಲವ ಕೂಡಿ, ನಿಜವ ಲಾಲಿಸಿ,
ಪರಮಾನಂದದೊಳು ಕೂಡಿ, ನಿರ್ಮಳಾತ್ಮಕನ ಪಾಡಿ,
ಪರಬ್ರಹ್ಮಲಿಂಗದೊಳು ಕೂಡಿ,
ಪರಕೆ ಪರವನಾಚರಿಸಿದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೧ ॥

೧೪೦೦

ಕತ್ತಲೆ ಮನೆಯೊಳಗೆ ಜ್ಯೋತಿಯ ಮುಟ್ಟಿಸಿದರೆ
ಕತ್ತಲೆ ಹರಿದು ಬೆಳಗಾಯಿತ್ತು ನೋಡಾ.
ಸುಜ್ಞಾನದಿಂದ ಅಜ್ಞಾನವಳಿದು
ಅತ್ತತ್ತಲೆ ನಿರಂಜನಲಿಂಗದೊಳು
ನಿರ್ವಿಕಾರನಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೨ ॥

೧೪೦೧

ತಾಮಸಕೆ ಸಿಲ್ಕಿ ಭ್ರಮಿತನಾಗಬೇಡ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವನಳಿದು
ಪರಬ್ರಹ್ಮಲಿಂಗದೊಳು ಕೂಡಿ ಉಪಮಾತೀತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೩ ॥

೧೪೦೨

ಹತ್ತುಕಡೆಗೆ ಹರಿದಾಡುವ ಕರಣಂಗಳಿಗೆ ಮುಖಗೊಡದೆ
ಚಿತ್ತದಿಂದ ಪ್ರಾಣಲಿಂಗಸಂಬಂಧಿಯಾಗಿ,
ಸತ್‌ವಿಡಿದು ಮಹಾಲಿಂಗದೊಳು ಕೂಡಿ,
ಅತ್ತತ್ತಲೆ ಪರಿಪೂರ್ಣನಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೪ ॥

೧೪೦೩.

ನಾನು ನೀನೆಂಬುಭಯವನಳಿದು,
ಸ್ವಾನುಭಾವ ಸಿದ್ಧಾಂತದಿಂದ ತಾನು ತಾನೆಂಬುದನರಿದು,
ಅನಂತಕೋಟಿ ಬ್ರಹ್ಮಾಂಡವ ನುಂಗಿರ್ದ ಲಿಂಗಕೆ
ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೫ ॥

೧೪೦೪

ಆರು ಸ್ಥಲದಲ್ಲಿ ಆರು ಮೂರ್ತಿಗಳು
ಆರು ಶಕ್ತಿಯರ ಸಂಗವ ಮಾಡಿ,
ಮೂರು ದೇಶವ ಮೀರಿ, ಸಾವಿರೆಸಳಮಂಟಪವ ಪೊಕ್ಕು,
ಸಾವಿರ ಲಿಂಗಾರ್ಚನೆಯ ಮಾಡುತಿಪ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೬ ॥

೧೪೦೫

ಐವತ್ತೆರಡು ಸೋಪಾನದ ಮೇಲೆ
ಪರವಾಸನಿಯೆಂಬ ಸತಿಯಳ ಕಂಡೆನಯ್ಯ.
ಆ ಸತಿಯಳ ಬಸುರಲ್ಲಿ ಒಬ್ಬ ಬಾಲಕ ಹುಟ್ಟಿ,
ಮೂವತ್ತಾರು ಕೇರಿಗಳಲ್ಲಿ ಸುಳಿದಾಡುತಿಪ್ಪನು ನೋಡಾ.
ಆ ಬಾಲಕನ ಇರುವೆ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೭ ॥

೧೪೦೬

ಹೃದಯದಲ್ಲಿಪ್ಪ ಅಂಜನವ ತೆಗೆದು
ನಿರಂಜನವೆಂಬ ಜ್ಯೋತಿಯ ಮುಟ್ಟಿಸಲು
ಆ ಜ್ಯೋತಿಯ ಬೆಳಗಿನೊಳಗೆ
ಸರ್ವ ಬ್ರಹ್ಮಾಂಡಂಗಳಡಗಿಪ್ಪ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೮ ॥

೧೪೦೭

ನಿತ್ಯವಾದ ಶರಣನು ಐವರ ಕೂಡಿಕೊಂಡು
ಪರಕೆ ಪರವಾದ ಲಿಂಗಾರ್ಚನೆಯಂ ಮಾಡಿ
ನಿರ್ವಿಕಲ್ಪ ನಿರಾತ್ಮಕನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೪೯ ॥

೧೪೦೮

ಬಟ್ಟಬಯಲನೊಳಕೊಂಡ ಶರಣನು
ದೃಷ್ಟಲಿಂಗಾರ್ಚನೆಯಂ ಮಾಡಿ
ಕಷ್ಟಕರ್ಮವನಳಿದು
ಶ್ರೇಷ್ಠನಾಗಿರ್ದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೫೫೦ ॥

೧೪೦೯

ಸುಟ್ಟಸುಡುಗಾಡಿನೊಳಗೊಬ್ಬ ಬಟ್ಟಬಯಲಾದ ಹೆಂಗಸು ಹುಟ್ಟಿ
ಐವರ ಸಂಗವ ಮಾಡುತಿರ್ಪಳು ನೋಡಾ.
ದೃಷ್ಟದಿಂದ ನೆಟ್ಟನೆ ಅಖಂಡಲಿಂಗಾರ್ಚನೆಯ ಮಾಡುತಿರ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೧ ॥

೧೪೧೦

ಇಪ್ಪತ್ತೈದು ಶಿವಾಲಯದ ಮೇಲೆ
ಸುತ್ತಿಕೊಂಡಿಪ್ಪ ಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ಮೂವರು ಪೂಜಾರಿಗಳಿಪ್ಪರು ನೋಡಾ.
ಆ ಪೂಜಾರಿಗಳು ಆರು ದೇಶವ ಪೊಕ್ಕು,
ಭಕ್ತಾಂಗನೆಯ ಸಂಗವ ಮಾಡಿ,
ಮುಕ್ತಿಸಾಮ್ರಾಜ್ಯಕೆ ಹೋಗಿ
ನಿರ್ವಿಕಲ್ಪ ನಿತ್ಯಾತ್ಮಕರಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೨ ॥

೧೪೧೧

ಆರು ಕಂಬದ ಮನೆಯೊಳಗೆ
ಮೂರು ಕೋಣೆಗಳಿಪ್ಪವು ನೋಡಾ.
ಆ ಮೂರು ಕೋಣೆಗಳಿಂದತ್ತತ್ತ
ಸಾವಿರೆಸಳ ಮಂಟಪವ ಕಂಡೆನಯ್ಯ.
ಆ ಸಾವಿರೆಸಳ ಮಂಟಪದೊಳಗೆ ಒಬ್ಬ ಸತಿಯಳು
ತನ್ನ ಗಮನವ ತಾನೇ ನೋಡುತಿಪ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೩ ॥

೧೪೧೨

ನಾದ ಬಿಂದು ಕಳಾತೀತಲಿಂಗದಲ್ಲಿ ಒಬ್ಬ ಭಾಮಿನಿಯು
ಐವರ ಕೂಡಿಕೊಂಡು ಮಹಾಮೇರುವೆಯ ಹತ್ತಿ

ಪರಕೆಪರನಾದ ಲಿಂಗಾರ್ಚನೆಯ ಮಾಡಿ
ತಾನು ತಾನಾಗಿಪ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೪ ॥

೧೪೧೩

ಐದು ರತ್ನದ ಮೇಲೆ ಒಂದು ಮಾಣಿಕ್ಯವ ಕಂಡೆನಯ್ಯ.
ಆ ಮಾಣಿಕ್ಯವ ಒಂದು ಕೋಗಿಲೆ ನುಂಗಿ ಕೂಗುತಿದೆ ನೋಡಾ.
ಆ ಕೋಗಿಲೆಯ ಒಬ್ಬ ಬೇಂಟೆಕಾರ ಕಂಡು
ತಟ್ಟನೆ ಎಚ್ಚಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೫ ॥

೧೪೧೪

ಸರ್ವಾಂಗಪಟ್ಟಣದೊಳಗೆ ಇರುತಿಪ್ಪ ಪರಮನ ಕಂಡೆನಯ್ಯ.
ಊರೊಳಗಣ ನಾರಿ ಆರು ಸೋಪಾನಂಗಳನೇರಿ,
ಮೂರು ಬಾಗಿಲ ಪೊಕ್ಕು,
ಆ ಪರಮನ ಧ್ಯಾನವ ಮಾಡುತಿಪ್ಪಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೬ ॥

೧೪೧೫

ಇರುವೆಯ ಮಸ್ತಕದ ಮೇಲೆ ಇರುತಿಪ್ಪ
ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಅಘಟಿತಲಿಂಗವಿಪ್ಪುದು ನೋಡಾ.
ಆ ಲಿಂಗದ ಕಿರಣದೊಳಗೆ ರಾಜಬೀದಿಯ ಕಂಡೆನಯ್ಯ.
ಆ ರಾಜಬೀದಿಯಲ್ಲಿ ಒಬ್ಬ ಪುರುಷನು
ಐವರ ಕೂಡಿಕೊಂಡು ಮಹಾಮೇರುವೆಯ ಹತ್ತಿ,
ಅಘಟಿತ ಲಿಂಗಾರ್ಚನೆಯ ಮಾಡುತಿಪ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೫೭ ॥

೧೪೧೬

ಹಾರುವಗೇರಿಯಲ್ಲಿ ಇರುತಿಪ್ಪ ಐವರು ನಾರಿಯರ ಕಂಡೆನಯ್ಯ.
ಅವರಿಂಗೆ ಏಳುಮಂದಿ ಮಕ್ಕಳು ಹುಟ್ಟಿ
ಎಂಟುಮಂದಿ ನೆಂಟರ ಸಂಗವ ಮಾಡಿ,
ಈ ಜಗವನೆಲ್ಲಾ ಏಡಿಸ್ಯಾಡುತಿಪ್ಪರು ನೋಡಾ.

ಇದು ಕಾರಣ, ಪ್ರಥಮಕಾಲದಲ್ಲಿ ಆದಿಯ ಗಣೇಶ್ವರ ಬಂದು,
ಏಳುಮಂದಿ ಮಕ್ಕಳ ಹಿಡಿದು, ಐವರು ನಾರಿಯರ ಕೊಂದು,
ಹಾರುವಗೇರಿಯ ಸೂರೆಮಾಡಿದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೫೮ ||

೧೪೧೭

ಉರಿಯೊಳಗಣ ಪ್ರಕಾಶದಂತೆ
ಮೊಗ್ಗೆಯೊಳಗಣ ಪರಿಮಳದಂತೆ
ಕ್ಷೀರದೊಳಗಣ ಘೃತದಂತೆ
ಭಾವದೊಳಗಣ ನಿರ್ಭಾವದಂತೆ
ಶಬ್ದದೊಳಗಣ ನಿಶ್ಶಬ್ದದಂತೆ
ಝೇಂಕಾರ ನಿಜಲಿಂಗಪ್ರಭುವೆ
ನಿಮ್ಮ ಶರಣನ ಅನಾದಿಯ ಅರಿವು. || ೫೫೯ ||

೧೪೧೮

ಮೂರು ಮುಖದ ಭಾಮಿನಿಯು
ಆರುಮುಖದ ಪುರುಷನ ಸಂಗವ ಮಾಡುತಿರ್ಪಳು ನೋಡಾ.
ಬೇರೊಂದು ಸ್ಥಲದಲ್ಲಿ ಒಬ್ಬ ಸತಿಯಳು ಭೇರಿನಾದವ ಕೇಳಿ
ಪರಕೆಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೬೦ ||

೧೪೧೯

ಆರು ಕಾಲುಳ್ಳ ಗೋವಿಂಗೆ
ಮೂರು ಬಾಲುಳ್ಳ ಕರುವ ಕಂಡೆನಯ್ಯ
ಆ ಕರುವಿಂಗೆ ಮುಖ ಒಂದು,
ಎರಡು ಕೊಂಬುಗಳಿಪ್ಪವು ನೋಡಾ.
ಆ ಕರುವ ಹಿಡಿದಾಡುವ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೫೬೧ ||

೧೪೨೦

ಕಾಮದ ಕಳವಳವಳಿದು, ಸೀಮೆಯ ದಾಂಟಿ ನಿಸ್ಸೀಮನಾಗಿ,
ಮಹದರಿವಿನಸಂಬರವೆಂಬ ನಿರ್ವಯಲಲ್ಲಿ
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರ ಕೂಡಿ

ನಿರವಯಲಿಂಗವನಾಚರಿಸುತಿರ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೨ ||

೧೪೨೧

ಕೊಂಬಿನ ತುದಿಯ ಮೇಲೆ ಎಂಟಾನೆ ಹುಟ್ಟಿದುದ ಕಂಡೆನಯ್ಯ.
ಅವಕ್ಕೆ ಏಳು ಬೀದಿ, ಆರು ಕೇರಿ,
ಐದು ಮನೆಗಳಲ್ಲಿ ಬೈಯುವ ನಾರಿಯ ಕಂಡೆನಯ್ಯ.
ಆ ನಾರಿಯ ಹಿಡಿದು ಕೊಂದಲ್ಲದೆ
ನಿಃಕಲಪರಬ್ರಹ್ಮಲಿಂಗವು ಕಾಣಿಸದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೩ ||

೧೪೨೨

ಹಾದಿಯಲ್ಲಿ ಬಿದ್ದಿಪ್ಪ ಮಾಣಿಕ್ಯವ ಕಂಡೆನಯ್ಯ.
ಆ ಮಾಣಿಕ್ಯವ ಸಾಧಿಸಿ ಭೇದಿಸಿ ನೋಡುತಿಪ್ಪಳು ಒಬ್ಬ ಸತಿಯಳು.
ಆ ಸತಿಯಳ ಸಂಗದಿಂದ ಮುಕ್ತಿಸಾಮ್ರಾಜ್ಯಕೆ ಹೋಗಿ
ನಿರ್ವಿಕಲ್ಪ ನಿತ್ಯಾತ್ಮಕನಾದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೪ ||

೧೪೨೩

ಊರಿಗೆ ಹೋಗುವ ದಾರಿಯಲ್ಲಿ ಉರಗನ ಕಂಡೆನಯ್ಯ.
ಆ ಉರಗನು ಮೂರು ಲೋಕವನ್ನೆಲ್ಲಾ ನುಂಗಿ
ವಿಷವನುಗುಳುತಿಪ್ಪುದು ನೋಡಾ.
ಆ ವಿಷವ ಕೆಡಿಸಿ, ಉರಗನ ಕೊಂದು,
ಊರಿಗೆ ಹೋಗುವ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೫೭೫ ||

೧೪೨೪

ಆತ್ಮನೆಂಬ ಪ್ರಭೆಯಲ್ಲಿ ತ್ರಿಕೂಟಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೊಬ್ಬ ಪುರುಷನು
ಪವನಧ್ಯಾನ ಲಿಂಗಧ್ಯಾನವಂ ಮಾಡಿ
ರವಿ ಶಶಿಯ ಬೆಳಗನೊಳಕೊಂಡು ತಾನುತಾನಾಗಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೬ ||

೧೪೨೫

ಸ್ಥೂಲ ಸೂಕ್ಷ್ಮ ಕಾರಣ ಸಂಗದೊಳು ನಿಂದು
ಜೀವಾತ್ಮ ಅಂತರಾತ್ಮ ಪರಮಾತ್ಮನೆಂಬ ಭೇದವನರಿತು
ನಿಶ್ಚಿಂತ ನಿರಾಕುಳಲಿಂಗದಲ್ಲಿ ನಿಂದು ನಿರ್ವಯಲಾದ
ನಿಮ್ಮ ಶರಣ ಝೇಂಕಾರ ನಿಜಲಿಂಗಪ್ರಭುವೆ. ॥ ೫೬೭ ॥

೧೪೨೬

ಆರು ಬಣ್ಣದ ಪಟ್ಟಣದೊಳಗೆ
ಮೂರು ಬಣ್ಣದ ಕೊತ್ತಳವ ಕಂಡೆನಯ್ಯ.
ಮೂರು ಬಣ್ಣದ ಕೊತ್ತಳದಿಂದತ್ತತ್ತ
ಸಾವಿರಕಂಬದ ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೆ ಪರಮಾನಂದ ಲಿಂಗವು
ತೊಳಗಿ ಬೆಳಗುತಿಪ್ಪುದು ನೋಡಾ.
ಆ ಬೆಳಗಿನೊಳು ಕೂಡಿ ಪರಿಪೂರ್ಣವಾದ ಶರಣನ
ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೫೬೮ ॥

೧೪೨೭

ಸಾಗರವ ನುಂಗಿದ ಕಪ್ಪೆ
ಕೂಗಿ ಆಗ್ರಹ ಮಾಡುತಿಪ್ಪುದು ನೋಡಾ.
ನಿಗ್ರಹಂಗಳ ಹರಿದು ಆಗ್ರಹವ ಪೊಕ್ಕು ನೋಡಲು
ಸಾಗರವ ನುಂಗಿದ ಕಪ್ಪೆ ಸತ್ತಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೬೯ ॥

೧೪೨೮

ಬೆಟ್ಟದ ತುದಿಯ ಮೇಲೆ ತೊಟ್ಟಿಡುವ ಅಮೃತವ ಕಂಡೆನಯ್ಯ.
ಆ ಅಮೃತವ ಸ್ವೀಕರಿಸಿ ನಿರಂಜನ ದೇಶಕೆ ಹೋಗಿ
ನಿರ್ವಯಲ ಲಿಂಗವನಾಚರಿಸಿ ಪರಕೆಪರವಶನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೭೦ ॥

೧೪೨೯

ಮೂರು ಮನೆಯ ಮೇಲೆ ಇಪ್ಪ ನಿರ್ವಾಣವ ಕಂಡೆನಯ್ಯ.
ಊರೊಳಗಣ ಪುರುಷನು ಐವರ ಕೂಡಿಕೊಂಡು

ನಿರ್ವಾಣಕೆ ಹೋದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೧ ||

೧೪೩೦

ಮೂರು ರತ್ನವ ಒಂದು ಕೋಗಿಲೆ ನುಂಗಿ ಕೂಗುತಿದೆ ನೋಡಾ.
ಕೂಗಿನ ಶಬ್ದವ ಕೇಳಿ
ನಾಗಲೋಕದಲ್ಲಿಪ್ಪ ನಾಗಪುರುಷನು ಅನಾದಿಯಲ್ಲಿ ನಿಂದು
ಆ ಕೋಗಿಲೆಯ ಹಿಡಿದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೨ ||

೧೪೩೧

ಹೃದಯದೊಳಗಿಪ್ಪ ಪ್ರಾಣಲಿಂಗವನು
ಸದಮಲ ಬೆಳಗಿನೊಳು ತಂದು ಅನಾದಿಯಲ್ಲಿ ನಿಂದು
ಸಾಧಿಸಿ ಭೇದಿಸಿ ತಾನುತಾನಾಗಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೩ ||

೧೪೩೨

ಜ್ಞಾನಶಕ್ತಿಯ ಸಂಗದಿಂದ
ಅವಿರಳಸ್ವಾನುಭಾವಸಿದ್ಧಾಂತವನರಿತು
ಅತ್ತತ್ತಲೆ ಪರಕ್ಕೆ ಪರವಶನಾಗಿರ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೪ ||

೧೪೩೩

ಮನ ಬುದ್ಧಿ ಚಿತ್ತ ಅಹಂಕಾರವೆಂಬ
ಕರಣಚತುಷ್ಟಯಂಗಳ ನಿವೃತ್ತಿಯಂ ಮಾಡಿ,
ಸುಜ್ಞಾನದೊಳು ನಿಂದು,
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೫ ||

೧೪೩೪

ಒಂಬತ್ತು ಬಾಗಿಲ ಪಟ್ಟಣದೊಳಗೆ
ಇಂಬುಗೊಂಡಿಪ್ಪ ತಳವಾರನ ಕಂಡೆನಯ್ಯ.
ಆ ತಳವಾರನ ಅತ್ತೆ ಅಳಿಯ ಮಾವ ಮೂವರೂ ಕೂಡಿಕೊಂಡು
ಬತ್ತಲೆಯಾದ ಭಾಮಿನಿಯ ಸಂಗವ ಮಾಡಲು

ಅತ್ತೆ ಅಳಿಯ ಮಾವ ಮೂವರೂ ಬಯಲಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೬ ||

೧೪೩೫

ಸುಂದರವಾದ ಮೇರುವೆಯೊಳಗೆ
ಮದನಗಿತ್ತಿಯು ಮದಕರಿಗಳ ಕೊಂದು
ಸದಮಲ ಬೆಳಗಿನೊಳು ನಿಂದು
ಮಹಾಜ್ಞಾನವೆಂಬ ನಿಧಾನವ ಪಿಡಿದು
ಸ್ವಯಜ್ಞಾನಿಯ ಸಂಗವ ಮಾಡಿ
ಪರಿಪೂರ್ಣವಾಗಿ ನಿರವಯಸ್ಥಲವನೈದಿದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೭ ||

೧೪೩೬

ಒಳಹೊರಗೆ ಪರಿಪೂರ್ಣವಾದ ನಿಃಕಲಪರಬ್ರಹ್ಮಲಿಂಗದೊಳು ಕೂಡಿ
ನಿಃಪ್ರಿಯವಾದ ಮಹಾಮಹಿಮನ ಕಂಡು
ನಿಶ್ಚಿಂತನಾದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೫೭೮ ||

೧೪೩೭

ಓಣಿಯೊಳಗೆ ಒಬ್ಬ ವಾಣಿಗಿತ್ತಿ ಕುಳಿತು
ಕಾಣದೆ ಮೂರು ಲೋಕಂಗಳಲ್ಲಿ ನಡೆದಾಡುತಿಪ್ಪಳು ನೋಡಾ.
ಆ ವಾಣಿಗಿತ್ತಿಯ ಕೊಂದು, ಮೂರು ಲೋಕವ ನುಂಗಿದಲ್ಲದೆ
ಪ್ರಾಣಲಿಂಗಸಂಬಂಧವು ಕಾಣಿಸದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೭೯ ||

೧೪೩೮

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಐದು ಮನೆಯಲ್ಲಿ
ಒಬ್ಬ ಸತಿಯಳು ನಿಂದು,
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆಂಬ ಐದಂಗವ ಗರ್ಭೀಕರಿಸಿಕೊಂದು
ಅತ್ತತ್ತಲೆ ಪರಕೆಪರವಾಗಿರ್ದಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೮೦ ||

೧೪೩೯

ತಾಯ ಒಡಲಲ್ಲಿ ಒಂದು ಮರಿ ಹುಟ್ಟಿ,
ಆ ಮರಿ ತಾಯ ನುಂಗಿರ್ದುದ ಕಂಡೆನಯ್ಯ.

ಅರುಹು ಮರಹು ಪರವ ನುಂಗಿರ್ದುದ ಕಂಡೆನಯ್ಯ.
ಪರಕ್ಕೆ ಪರವ ತಾನು ತಾನೇ ನುಂಗಿರ್ದುದ ಕಂಡೆನಯ್ಯ.
ಇದು ಕಾರಣ ಇಂತಪ್ಪ ಭೇದವನರಿಯಬಲ್ಲರೆ
ನಿಮ್ಮ ಶರಣನೆಂಬೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. || ೫೮೧ ||

೧೪೪೦

ಬೆಟ್ಟದ ತುದಿಯ ಮೇಲೆ ಘಟ್ಟಿಲಿಂಗವ ಕಂಡೆನಯ್ಯ.
ಆ ಲಿಂಗದಲ್ಲಿ ಒಬ್ಬ ಸತಿಯಳು ಕಷ್ಟಕರ್ಮವ ಹರಿದು
ಬಟ್ಟಬಯಲಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೮೨ ||

೧೪೪೧

ಐದು ಮೇರುವೆಯ ಮೇಲೆ ಒಂದು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೊಂದು ಲಿಂಗವ ಕಂಡೆನಯ್ಯ.
ಊರೊಳಗಣ ಪುರುಷನು ಜ್ಞಾನಶಕ್ತಿಯ ಸಂಗವ ಮಾಡಿ
ಆ ಲಿಂಗದಲ್ಲಿ ಕೂಡಿ ನಿಃಪ್ರಿಯವನೈದಿದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೮೩ ||

೧೪೪೨

ಪಿಂಡಬ್ರಹ್ಮಾಂಡವ ಗರ್ಭೀಕರಿಸಿಕೊಂಡು
ಒಳಹೊರಗೆ ಪರಿಪೂರ್ಣವಾಗಿ,
ಅಖಂಡತೇಜೋಮಯವಾಗಿಪ್ಪ ನೋಡಾ.
ತನ್ನೊಡನೆ ಒಬ್ಬ ಭಾಮಿನಿಯು ಪುಟ್ಟಿದಳು.
ಆ ಭಾಮಿನಿಯ ಬಸುರಲ್ಲಿ ಒಬ್ಬ ಬಾಲಕ ಹುಟ್ಟಿ,
ಅವರ ಸಂಗವ ಮಾಡಿ, ನಿಶ್ಚಿಂತ ನಿರಾಕುಳದಲ್ಲಿ ನಿಂದು,
ನಿರ್ವಯಲಲಿಂಗವನಾಚರಿಸುತಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೮೪ ||

೧೪೪೩

ಸರ್ವಬ್ರಹ್ಮಾಂಡವ ಒಬ್ಬ ದೇವ ನುಂಗಿಕೊಂಡಿಪ್ಪ ನೋಡಾ.
ಆ ದೇವನ ನೆನಹಿನಿಂದ ಪರಶಿವನಾದ.
ಆ ಪರಶಿವನ ಸಂಗದಿಂದ ಸದಾಶಿವನಾದ.
ಆ ಸದಾಶಿವನ ಸಂಗದಿಂದ ಈಶ್ವರನಾದ.

ಆ ಈಶ್ವರನ ಸಂಗದಿಂದ ರುದ್ರನಾದ.
ಆ ರುದ್ರನ ಸಂಗದಿಂದ ವಿಷ್ಣುವಾದ.
ಆ ವಿಷ್ಣುವಿನ ಸಂಗದಿಂದ ಬ್ರಹ್ಮನಾದ
ಆ ಬ್ರಹ್ಮನ ಸಂಗದಿಂದ ಸಕಲ ಜಗಂಗಳು
ಉತ್ಪತ್ತಿಯಾದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೮೫ ॥

೧೪೪೪

ಬಯಲೇ ಅಂಗವಾದ ಶರಣಂಗೆ
ನಿರ್ವಯಲೇ ಲಿಂಗವಾಗಿ ತೋರುತಿಪ್ಪುದು ನೋಡಾ.
ಆ ಲಿಂಗದ ಬೆಳಗಿನೊಳಗೆ ಆರು ಮೂರ್ತಿಗಳು
ಆರಾರ ಲಿಂಗಾರ್ಚನೆಯ ಮಾಡುತಿಪ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೫೮೬ ॥

೧೪೪೫

ಅಷ್ಟದಳದ ಮೇಲೆ ನಲಿದಾಡುವ ಹಂಸನ
ಜ್ಞಾನದೃಷ್ಟಿಯ ಮೇಲೆ ನಿಲಿಸಿ,
ಬಟ್ಟಬಯಲ ನೋಡಿ ದೃಷ್ಟನಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೮೭ ॥

೧೪೪೬

ಲಿಂಗದ ನೆನಹಿನಿಂದ ಮಂಗಳಪ್ರಭೆಯ ನೋಡಿ,
ಸಂಗಸಂಯೋಗದಲ್ಲಿ ನಿಂದು,
ನಿರಂಗವಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೫೮೮ ॥

೧೪೪೭

ಐದು ಮನೆಯೊಳಗೆ ಏಳುಮಂದಿ ಹೆಂಡರ ಕಂಡೆನಯ್ಯ.
ಆ ಏಳುಮಂದಿ ಹೆಂಡರು
ಎಂಟುಮಂದಿ ನೆಂಟರ ಸಂಗವ ಮಾಡುತಿಪ್ಪರು ನೋಡಾ.
ಕಂಟಕಂಗಳ ಗೆಲಿದ ಪುರುಷನು,
ಎಂಟುಮಂದಿ ನೆಂಟರ ಕೊಂದು,
ಏಳುಮಂದಿ ಹೆಂಡರ ಹಿಡಿದು,

ಐದು ಮನೆಯ ತೊರೆದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೮೯ ||

೧೪೪೮

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳೆಂಬ
ಅರಿಷಡ್ವರ್ಗಂಗಳ ಗುರುನಿರೂಪಣದಿಂದ ಹರಿಯಲೊದ್ದು
ಪರವಾಸಿನಿಯೆಂಬ ಸತಿಯಳ ಸಂಗವ ಮಾಡಿ
ನಿರ್ವಿಕಲ್ಪ ನಿತ್ಯಾತ್ಮಕನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೦ ||

೧೪೪೯

ಸಚ್ಚಿದಾನಂದವೆಂಬ ಬೆಳಗಿನೊಳು
ಪರಂಜ್ಯೋತಿಯೆಂಬ ಲಿಂಗವು ತೊಳಗಿ ಬೆಳಗುತಿಪ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೧ ||

೧೪೫೦

ಲಕ್ಷವ ನೋಡಿದರೇನಯ್ಯ? ಲಕ್ಷವ ಹೇಳಿದರೇನಯ್ಯ?
ಲಕ್ಷವ ಕೇಳಿದರೇನಯ್ಯ? ಮೋಕ್ಷಾರ್ಥ ಉಂಟೇನಯ್ಯ?
ಸಾಕ್ಷಾತ್ ಶಿವಜ್ಞಾನವಾದ ಶರಣನು ತಾನೇ ಮೋಕ್ಷಾರ್ಥ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೨ ||

೧೪೫೧

ಕರಿಯ ಮುಖದ ಸೂಳೆ ಹತ್ತೆಂಟು ಮುಖದೋರಿ
ಪರಿಪರಿ ಕೇರಿಯಲ್ಲಿ ಸುಳಿದಾಡಿ,
ಈ ಜಗವನೆಲ್ಲಾ ಏಡಿಸ್ಯಾಡುತಿಪ್ಪಳು ನೋಡಾ.
ಇದು ಕಾರಣ, ಪ್ರಥಮ ಕಾಲದಲ್ಲಿ ನಿರಂಜನ ಗಣೇಶ್ವರನು ಬಂದು
ಆ ಸೂಳೆಯ ಹಿಡಿದು ನೆರೆದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೩ ||

೧೪೫೨

ಕತ್ತಲಕಾವುಳದ ಮನೆಯಲ್ಲಿ ಒಬ್ಬ ಪುರುಷನು ಸೀಮೆಯ ಪೊಕ್ಕು,
ಪರಿಪರಿಯ ಮಾಡುತಿಪ್ಪನು ನೋಡಾ.
ಇದು ಕಾರಣ, ಕತ್ತಲಕಾವುಳದ ಮನೆಯ ಕೆಡಿಸಿ, ಆ ಪುರುಷನ ಹಿಡಿದು,
ಸೀಮೆಯನಳಿದು ನಿಸ್ಸೀಮನಾಗಬಲ್ಲರೆ

ಆತನಿಗೆ ಭಾವಲಿಂಗಸಂಬಂಧಿಯೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೫೯೪ ||

೧೪೫೩

ಅಂಗಕ್ಕೆ ಆರುದಿನವೆಂಬುದ ನೀನು ಬಲ್ಲೆಯಯ್ಯಾ?
ಲಿಂಗಕ್ಕೆ ಮೂರು ದಿನವೆಂಬುದ ನೀನು ಬಲ್ಲೆಯಯ್ಯಾ?
ಸಂಬಂಧಕ್ಕೆ ಒಂದು ದಿನವೆಂಬುದ ನೀನು ಬಲ್ಲೆಯಯ್ಯಾ?
ನಿನ್ನಿಂದ ಸಕಲ ಜಗಂಗಳು ಆದುದ ನೀನೇ ಬಲ್ಲೆಯಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೫ ||

೧೪೫೪

ಕರ್ಮದೋಷಂಗಳ ಪರಿಹಾರವಂ ಮಾಡಿ
ನಿರ್ಮಲ ಆತ್ಮವ ನೋಡಿ
ಪರಮಾನಂದ ಪ್ರಕೃತಿಯೊಳು ಕೂಡಿ
ಪರಕ್ಕೆ ಪರವನ್ನೈದಬಲ್ಲರೆ ಆತನೇ ನಿರ್ಮುಕ್ತ ಶರಣ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೬ ||

೧೪೫೫

ಗುಡ್ಡದೊಳಗೊಬ್ಬ ಮಡ್ಡ ಕುಳಿತು
ಕಡ್ಡತನವ ಮಾಡುತಿಪ್ಪ ನೋಡಾ.
ಇದು ಕಾರಣ, ಗುಡ್ಡದ ಕಸವ ತೆಗೆದು,
ಮಡ್ಡನ ಹಿಡಿದು, ಕಡ್ಡತನವ ಕೆಡಿಸಿದಲ್ಲದೆ
ದೊಡ್ಡ ಶರಣನಲ್ಲ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೫೯೭ ||

೧೪೫೬

ಒಳಹೊರಗೆ ಪರಿಪೂರ್ಣವಾದ ನಿಜಬೆಳಗಿನೊಳಗೆ
ಮಹಾಮಹಿಮನ ಕಂಡು ನಿಶ್ಚಿಂತನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೫೯೮ ||

## ಶಿವಾತ್ಮಜ್ಞಾನ ಉದಯವಾದ ಸ್ಥಲ

೧೪೫೭

ಎನ್ನ ನಾನರಿಯದಂದು
ನೀನೇ ಗುರುವಾಗಿ ಎನ್ನ ತೋರಿದೆಯಯ್ಯ.

ಎನ್ನ ತೋರಿದ ಕಾರಣ ಎನ್ನಂತರಂಗದಲ್ಲಿ ಶಿವಾತ್ಮಜ್ಞಾನ ಉಕ್ಕಿ,
ಶಿವಶಿವಾ ಎನುತಿರ್ದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೫೯ ॥

೧೪೫೮

ಅನಾದಿ ಸದ್ಗುರುವೆ, ಎನ್ನ ಕರ್ಮದೋಷಂಗಳ ಪರಿಹಾರವಂ ಮಾಡಿ
ನಿರ್ಮಲವ ತೋರಿದೆಯಯ್ಯ.
ಆ ನಿರ್ಮಲದಿಂದ ಪರಂಜ್ಯೋತಿಯೆಂಬ ಲಿಂಗವ ನೋಡಿ
ಪರಕ್ಕೆ ಪರವಾದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೬೦ ॥

೧೪೫೯

ದೇವರ ನಿರೂಪದಿಂದ ಎನ್ನಂತರಂಗದಲ್ಲಿ ಶಿವಾತ್ಮಜ್ಞಾನ ಉಕ್ಕಿ,
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನ ಕೂಡಿ
ನಿಷ್ಕಲಪರಬ್ರಹ್ಮಲಿಂಗವನಾಚರಿಸಿ ನಿರ್ಮುಕ್ತನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧ ॥

೧೪೬೦

ಕಾಯದ ಕರಣಂಗಳನಳಿದು ಗುರುಸಂಬಂಧಿಯಾದನಯ್ಯ.
ಜೀವದ ಕರಣಂಗಳನಳಿದು ಲಿಂಗಸಂಬಂಧಿಯಾದನಯ್ಯ.
ಪ್ರಾಣದ ಕರಣಂಗಳನಳಿದು ಜಂಗಮಸಂಬಂಧಿಯಾದನಯ್ಯ.
ಇಂತೀ ತ್ರಿವಿಧ ಸಂಬಂಧವನಳಿದು
ಮಹಾಸಂಬಂಧಿಯಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೬೨ ॥

೧೪೬೧

ಗುರುಲಿಂಗಜಂಗಮವೆಂಬ ತ್ರಿವಿಧಭೇದವನು ಏಕಾಗ್ರದಲ್ಲಿ ನೋಡಿ,
ಪರಕೆಪರವನಾಚರಿಸಿ, ನಿರ್ಮುಕ್ತನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೩ ॥

೧೪೬೨

ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯುವನರಿತು,
ಇಷ್ಟಲಿಂಗಕ್ಕೆ ಗುರುವಾದನಯ್ಯ.
ಪ್ರಾಣಲಿಂಗಕ್ಕೆ ಲಿಂಗವಾದನಯ್ಯ,
ಭಾವಲಿಂಗಕ್ಕೆ ಜಂಗಮವಾದನಯ್ಯ.

ನಿರ್ಭಾವಕ್ಕೆ ಪರಿಪೂರ್ಣವಾದ ಸೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೦೪ ||

೧೪೬೩

ಆರರಿಂದತ್ತತ್ತ ಮೀರಿದ ಮಹಾಮಹಿಮನ ಸಂಗದಿಂದ
ಸಕಲನಿಃಕಲವ ನೋಡಿ, ಮೂರು ಮಂದಿರವ ದಾಂಟಿ,
ಮಹಾಮಹಿಮನ ಕೂಡಿ,
ನಿಃಪ್ರಿಯವಾದ ಶರಣನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೦೫ ||

೧೪೬೪

ಅಂಗವೆಂಬ ಶಿವಾಲಯದೊಳಗೆ
ಅನಾದಿಲಿಂಗವು ಚತುರ್ದಶ ಭುವನಂಗಳ ನುಂಗಿಕೊಂಡು
ತನ್ನ ಸುಳುವ ತಾನೇ ತೋರುತ್ತಿಪ್ಪುದು ನೋಡಾ.
ಆ ಸುಳುವಿನ ಭೇದವನರಿತು ಲಿಂಗಾರ್ಚನೆಯಂ ಮಾಡಿ
ಕೂಡಿ ಸಮರಸವಾದ ಶರಣಂಗೆ ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೦೬ ||

೧೪೬೫

ಕಣ್ಣಿಲ್ಲದಂಧಕಂಗೆ ಮೂವರು ಮಕ್ಕಳು ಹುಟ್ಟಿ,
ಏಳೆಂಟು ಕೋಣೆಗಳಲ್ಲಿ ಬಡಿದಾಡುತಿಪ್ಪರು ನೋಡಾ.
ಇದು ಕಾರಣ, ಅಂಧಕಂಗೆ ಕಣ್ಣು ಬರಲೊಡನೆ ಮೂವರು ಮಕ್ಕಳು ಸತ್ತು,
ಏಳೆಂಟು ಕೋಣೆಗಳು ಬಯಲಾದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೦೭ ||

೧೪೬೬

ಆದಿಯನರಿತು ಭಕ್ತನಾಗಿ,
ಆಚಾರಲಿಂಗವ ನೆಲೆಗೊಂಡುದೆ ಸದ್ಭಕ್ತಿಯೆಂಬೆನಯ್ಯ.
ಮಂತ್ರವನರಿತು ಮಹೇಶ್ವರನಾಗಿ,
ಗುರುಲಿಂಗವ ನೆಲೆಯಂಗೊಂಡುದೆ ನೈಷ್ಠಿಕಭಕ್ತಿಯೆಂಬೆನಯ್ಯ.
ಕ್ರೀಯವನರಿತು ಪ್ರಸಾದಿಯಾಗಿ,
ಶಿವಲಿಂಗವ ನೆಲೆಯಂಗೊಂಡುದೆ ಸಾವಧಾನಭಕ್ತಿಯೆಂಬೆನಯ್ಯ.
ಇಚ್ಫೆಯನರಿತು ಪ್ರಾಣಲಿಂಗಿಯಾಗಿ,

ಜಂಗಮಲಿಂಗವ ನೆಲೆಯಂಗೊಂಡುದೆ ಅನುಭಾವಭಕ್ತಿಯೆಂಬೆನಯ್ಯ.
ಜ್ಞಾನವನರಿತು ಶರಣನಾಗಿ,
ಪ್ರಸಾದಲಿಂಗವ ನೆಲೆಯಂಗೊಂಡುದೆ ಅನುಪಮಭಕ್ತಿಯೆಂಬೆನಯ್ಯ.
ಪರವನರಿತು ಐಕ್ಯನಾಗಿ,
ಮಹಾಲಿಂಗವ ನೆಲೆಯಂಗೊಂಡುದೆ ಸಮರಸಭಕ್ತಿಯೆಂಬೆನಯ್ಯ.
ಚಿತ್ತವನರಿತು ನಿಜಲಿಂಗವಾಗಿ,
ಪರಬ್ರಹ್ಮವು ನೆಲೆಯಂಗೊಂಡುದೆ ನಿಷ್ಪತಿಭಕ್ತಿಯೆಂಬೆನಯ್ಯ.
ಇದು ಕಾಣಾ, ಝೇಂಕಾರ ನಿಜಲಿಂಗಪ್ರಭುವೆ
ನಿಮ್ಮ ಶರಣನ ಆಚರಣೆಯು. ॥ ೬೦೮ ॥

೧೪೬೭

ಹೊನ್ನು ಹೆಣ್ಣು ಮಣ್ಣು ಬಿಟ್ಟು
ಸರ್ವಸಂಗವ ಪರಿತ್ಯಾಗವಂ ಮಾಡಿ ನಿಂದ ನಿಃಕಲಂಗೆ
ಪೂರ್ವಾಶ್ರಯ ಉಂಟೇನಯ್ಯ?
ಆ ನಿಃಕಲತ್ವವನಳಿದು,
ಮರಳಿ ಹೊನ್ನ ಹಿಡಿಯಲಾಗದು,
ಮರಳಿ ಹೆಣ್ಣ ಹಿಡಿಯಲಾಗದು,
ಮರಳಿ ಮಣ್ಣ ಹಿಡಿಯಲಾಗದು.
ಇಂತೀ ತ್ರಿವಿಧಗುಣಗಳಿಗೆ ಸಿಲ್ಕಿ,
ಬಯಲಾಶ್ರಯದಲ್ಲಿ ಬಯಲಾಟವ ಹೂಡಿ
ಬಯಲನಿಬ್ಬೆರಗನೈದಿ ಹೋಗುವ ಮಹೇಶ್ವರನ
ಪಾದೋದಕ ಪ್ರಸಾದವ ಭೇದಿಸಿ ಕೊಂಬ ಭಕ್ತನ ದೃಢವೆಂತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೦೯ ॥

೧೪೬೮

ದೇಹವೆಂಬ ದೇಗುಲದೊಳಗೆ
ಇಪ್ಪತ್ತೈದು ಶಿವಾಲಯವಿಪ್ಪುವು ನೋಡಾ.
ಆ ಶಿವಾಲಯದೊಳಗೊಬ್ಬ ಪೂಜಕನು ತ್ರಿಕೂಟದಲ್ಲಿ ನಿಂದು
ಪರಂಜ್ಯೋತಿಯೆಂಬ ಲಿಂಗವ ಕೂಡಿ
ಪರಿಪೂರ್ಣವಾದ ಶರಣನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧೦ ॥

೧೪೬೯

ಅಂಗವೆಂಬ ದೈಗುಲದೊಳಗೆ ಒಬ್ಬ ಸತಿಯಳು ನಿಂದು
ಚಿಲ್ಲಿಂಗಾರ್ಚನೆಯಂ ಮಾಡಿ
ಚಿದ್ಘನಸ್ವರೂಪವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೧೧ ||

೧೪೭೦

ಭೂತದೇಹಿಕವನಳಿದು ಚಿದಾತ್ಮಕನಾಗಿ,
ನಿಃಕಲಪರಬ್ರಹ್ಮವ ಕೂಡಿ
ತಾನು ತಾನಾದ ಶರಣನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೧೨ ||

೧೪೭೧

ಊರಿಗೆ ಹೋಗುವ ಮಾರ್ಗದಲ್ಲಿ ಒಬ್ಬ ನಿರ್ಮಲಗಿತ್ತಿ ಕುಳಿತು
ನಾಲ್ವರ ಕೂಡಿಕೊಂಡು
ಸೀಮೆಯ ದಾಂಟಿ ನಿಸ್ಸೀಮಕೆ ಹೋಗಿ
ನಿಜಸ್ವರೂಪವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೧೩ ||

೧೪೭೨

ದೇಶಕ್ಕೆ ಹೋಗುವ ಮಾರ್ಗದಲ್ಲಿ ಒಬ್ಬ ಭಾಷೆಗಳ್ಳ ಕುಳಿತು
ಕಂಡಕಂಡವರ ಹಾಸ್ಯ ಮಾಡುತಿಪ್ಪ ನೋಡಾ.
ಇದು ಕಾರಣ ಹೆತ್ತ ತಾಯ ಶಿಶುವು ನುಂಗಿ
ಆ ಭಾಷೆಗಳ್ಳನ ಕೊಂದು, ದೇಶಕ್ಕೆ ಹೋದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೧೪ ||

೧೪೭೩

ವಾಸನೆಗಳ ಹರಿದು ನಿಂದು, ಲೇಸಾದ ಜ್ಞಾನವ ಹಿಡಿದು,
ಸಾಸಿರದಳದ ಮಂಟಪವ ಹತ್ತಿ,
ನಿರ್ಭರಿತವಾದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೬೧೫ ||

೧೪೭೪

ಹಲವು ಕಡೆಗೆ ಹರಿದಾಡುವ ಮನವ ಏಕಾಗ್ರದಲ್ಲಿ ನಿಲಿಸಿ
ಸಾಕಾರವಿಡಿದು ಪರಬ್ರಹ್ಮವ ಕೂಡಿ

ನಿಃಪ್ರಿಯವಾದ ಶರಣರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧೬ ॥

೧೪೭೫

ಕರ್ಮದ ಗುಣವನಳಿದು ಅಸಮಾಯಲಿಂಗದೊಳು ಕೂಡಿ
ಸೀಮೆಯ ದಾಂಟಿ ನಿಸ್ಸೀಮನಾದ ಶರಣನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧೭ ॥

೧೪೭೬

ಸರ್ವಗುಣವ ಕಳೆದುಳಿದ ಪರಮನ ಸಂಗವ ಮಾಡಿ
ಪರಿಣಾಮದೇಹಿಯಾಗಿ,
ನಿರ್ಮುಕ್ತ ನಿಜಸ್ವರೂಪವನಾಚರಿಸಬಲ್ಲಾತನೆ ನಿಮ್ಮ ಶರಣನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧೮ ॥

೧೪೭೭

ಸಾಗರದ ತುದಿಯ ಮೇಲೆ ಆಗರದ ಹಣ್ಣಾಗಿಪ್ಪುದು ನೋಡಾ.
ಅಲ್ಲಿ ಒಬ್ಬ ಸತಿಯಳು ನಿಂದು,
ಆ ಹಣ್ಣ ಹಿಡಿದು, ಶಿವಶರಣರಿಗೆ ತೋರುತಿಪ್ಪಳು ನೋಡಾ,
ಆ ಹಣ್ಣ ಮುಟ್ಟಿ ಸ್ವೀಕರಿಸಬಲ್ಲ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೧೯ ॥

೧೪೭೮

ಐವರು ಅಂಗನೆಯರು
ಒಂಬತ್ತು ಮನೆಯ ಬಾಗಿಲವ ಮಾಡಿಕೊಂಡು
ಕುಂಭಿನಿಯ ಶಿವಾಲಯಕ್ಕೆ ಹೋಗಿ
ಶಂಭುಲಿಂಗಾರ್ಚನೆಯ ಮಾಡಿ
ಗಗನಂಬರಗಿತ್ತಿಯರಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೦ ॥

೧೪೭೯

ಆರು ಮಂದಿರದೊಳಗೆ ಮೀರಿದ ಸತಿಯಳ ಕಂಡೆನಯ್ಯ.
ಆ ಸತಿಯಳ ಸಂಗದಿಂದ ಮೂರು ದೇಶವ ದಾಂಟಿ
ಪರವಶವೆಂಬ ಲಿಂಗಾರ್ಚನೆಯಂ ಮಾಡಿ
ನಿರ್ಮುಕ್ತನಾದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೬೨೧ ॥

೧೪೪೦

ಗುರುವಿನಲ್ಲಿ ಗುಣವನರಸಲಿಲ್ಲ,
ಲಿಂಗದಲ್ಲಿ ರೂಪವನರಸಲಿಲ್ಲ,
ಜಂಗಮದಲ್ಲಿ ಕುಲವನರಸಲಿಲ್ಲ,
ಇದು ಕಾರಣ, ಬೇರುಪಡಿಸಿ
ಗುರುವಿನಲ್ಲಿ ಗುಣವನರಸಿದೆನಾದೊಡೆ ಕರ್ಮಕೆ ಬೀಳುವೆನಯ್ಯ.
ಲಿಂಗದಲ್ಲಿ ರೂಪವನರಸಿದೆನಾದೊಡೆ ಭವಕೆ ಬೀಳುವೆನಯ್ಯ.
ಜಂಗಮದಲ್ಲಿ ಕುಲವನರಿಸಿದೆನಾದೊಡೆ ಅಘೋರ ನರಕದಲ್ಲಿ ಬೀಳುವೆನಯ್ಯ.
ಇದಕ್ಕೆ ಸಾಕ್ಷಿ-ಅಗ್ನಿಯಲ್ಲಿ ಸಕಲ ತರುವಾದಿಗಳ ತಂದು
ಸುಟ್ಟು , ಭಸ್ಮವ ಮಾಡಲೊಡನೆ
ಆ ಭಸ್ಮವ ಕುರುಹು ಇಟ್ಟು ನುಡಿಯಲಾಗದಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೨ ॥

೧೪೪೧

ಗುರುವು ಕಾಯಸುಖಿಯ ಮಾಡಿದನಯ್ಯ.
ಲಿಂಗವು ಜೀವಸುಖಿಯ ಮಾಡಿದನಯ್ಯ.
ಜಂಗಮವು ಪ್ರಾಣಸುಖಿಯ ಮಾಡಿದನಯ್ಯ.
ಇಂತೀ ತ್ರಿವಿಧ ಭೇದವನರಿತು, ಜ್ಞಾನಶಕ್ತಿಯ ಸಂಗವ ಮಾಡಿ,
ನಿತ್ಯವಾದ ಲಿಂಗದ ಗುಡಿಗೆ ಹೋಗಿ,
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆಂಬ ಐದಂಗವ ಗರ್ಭೀಕರಿಸಿಕೊಂಡು
ನಿರಪೇಕ್ಷಲಿಂಗದಲ್ಲಿ ಕೂಡಿ
ನಿಃಪ್ರಿಯವಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೩ ॥

೧೪೪೨

ಊರೊಳಗೆ ಆರು ನೆಲೆಯ ಮಂಟಪವ ಕಂಡೆನಯ್ಯ.
ಮೇರುವೆಯೊಳಗೆ ಮೂರು ಶಿವಾಲಯವ ಕಂಡೆನಯ್ಯ.
ಬೇರೊಂದು ಸ್ಥಲದಲ್ಲಿ ಒಂದು ಲಿಂಗವು
ಸಕಲ ಬ್ರಹ್ಮಾಂಡಗಳ ಗರ್ಭೀಕರಿಸಿಕೊಂಡು ಇಪ್ಪುದು ನೋಡಾ.
ಆ ಲಿಂಗದ ಅರುವನರಿತು ಆಚರಿಸುವ ಶರಣನ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೪ ॥

೧೪೮೩

ಸಾಜವೆಂಬ ನಿಜಮಾರ್ಗದಲ್ಲಿ ವಾಜಿಯುಳ್ಳ ಸತಿಯಳು ನಿಂದು,
ಬೀಜವ ತೋರುತಿಪ್ಪಳು ನೋಡಾ.
ಆ ಬೀಜವ ಬಿತ್ತಿ, ಫಲವನುಂಬ ಹಿರಿಯರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೫ ॥

೧೪೮೪

ಹಲವು ಕಡೆಗೆ ಹರಿದಾಡುವ ಹೊಲೆಮನವ ನಿಲಿಸಿ,
ಏಕದಲ್ಲಿ ನಿಂದು, ಸದ್ಗುಣಸಂಪನ್ನನಾಗಿ,
ನಿರ್ವಿಕಲ್ಪ ನಿತ್ಯನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೬ ॥

೧೪೮೫

ಜ್ಞಾನಸಂಪನ್ನರಾದವರಿಂಗೆ ಹೀನವೃತ್ತಿವುಂಟೇನಯ್ಯ?
ಭಾವಬೆರಗಾದವರಿಂಗೆ ಲೋಕದ ಹಂಗುಂಟೇನಯ್ಯ?
ಶಿವಜ್ಞಾನ ಉದಯವಾದ ಬಳಿಕ ಮಾತಿನ ಹಂಗುಂಟೇನಯ್ಯ?
ತಾನುತಾನಾದ ಬಳಿಕ ಯಾರ ಹಂಗಿಲ್ಲವಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೭ ॥

೧೪೮೬

ತಾಮಸ ತಮಂಧಗಳಿಲ್ಲದೆ, ನೇಮ ನಿತ್ಯಗಳಿಲ್ಲದೆ,
ಕಾಮ ಮೋಹಾದಿಗಳಿಲ್ಲದೆ, ಸೀಮೆ ನಿಸ್ಸೀಮಗಳಿಲ್ಲದೆ,
ನಾಮನಾಸ್ತಿಯಾಗಿರ್ದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೮ ॥

೧೪೮೭

ದೇವರ ನಿರೂಪದಿಂದ ದೇವಿಯ ಸಂಗವ ಮಾಡಿ
ಸದಮಲ ಬೆಳಗಿನೊಳು ನಿಂದು,
ದೇವಿ ದೇವ ಅನಾದಿ ಪ್ರಸಿದ್ಧನ ಆಚರಿಸುತಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೨೯ ॥

೧೪೮೮

ಕಾಲಿಲ್ಲದ ಪುರುಷನು ಕೈಯಿಲ್ಲದ ನಾರಿಯ ಸಂಗವ
ಮಾಡುತಿರ್ಪನು ನೋಡಾ.

ಆ ಕಾಲಿಲ್ಲದ ಪುರುಷನ, ಕೈಯಿಲ್ಲದ ನಾರಿಯ,
ಅವರಿಬ್ಬರನು ಕಪ್ಪೆ ನುಂಗಿ ಕೂಗುತಿದೆ ನೋಡಾ.
ಆ ಕೂಗಿನ ಶಬ್ದವ ಕೇಳಿ, ತ್ರಿಲೋಕದಿಂದ ಎದ್ದ ಸರ್ಪನ
ಇರುವೆ ನುಂಗಿತ್ತು ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. || ೬೩೦ ||

೧೪೮೯

ಹುಟ್ಟಿಲ್ಲದ ನಾರಿ, ಹೊಂದಿಲ್ಲದ ಪುರುಷನ ಸಂಗವ ಮಾಡಿ,
ಐವರ ಮಕ್ಕಳ ಹಡೆದು, ನೀರಿಲ್ಲದ ಹೊಳೆಗೆ ಹೋಗಿ,
ಬರಿಯ ಬಯಲನೆ ಸುತ್ತಿ, ಬರಿದಾದ ಮನೆಗೆ ಹೋದಳು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೩೧ ||

೧೪೯೦

ಕಟ್ಟಕಡೆಯಲೊಂದು ಬಟ್ಟಬಯಲ ಮನೆಯ ಕಂಡೆನಯ್ಯ.
ಆ ಮನೆಯ ತುಟ್ಟತುದಿಯಲೊಂದು ಘಟ್ಟಲಿಂಗವ ಕಂಡೆನಯ್ಯ.
ಆ ಲಿಂಗದ ಕುಕ್ಷಿಯೊಳಗೆ ಅನಂತಕೋಟಿ ಬ್ರಹ್ಮಾಂಡಂಗಳು
ಅಡಗಿಪ್ಪವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೩೨ ||

೧೪೯೧

ತನುವಿನೊಳಗಿಪ್ಪ ಅನುಪಮ ಲಿಂಗವನು
ಘನದಿಂದ ಲಿಂಗಾರ್ಚನೆಯಂ ಮಾಡಿ,
ಚಿದ್ರೂಪಚಿನ್ಮಯನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೩೩ ||

೧೪೯೨

ಉಲುಹು ಅಡಗಿದ ವೃಕ್ಷದಲ್ಲಿ ಫಲವಾದ ಹಣ್ಣು ಸವಿದು
ಮೇಲುಗಿರಿಯ ಶಿವಾಲಯವ ಪೊಕ್ಕು,
ಚಿದ್ಬಿಂದುಕಳಾಸ್ವರೂಪನಾಗಿ,
ಬರಿಯ ಬಯಲಿಂಗೆ ಹೋಗಿ ಬರಿದಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೩೪ ||

೧೪೯೩

ಅಂಬರದ ಮನೆಯೊಳಗೆ
ತುಂಬಿತೋರುವ ಶಂಭುಲಿಂಗವ ಕಂಡೆನಯ್ಯ.

ಆ ಲಿಂಗದ ಕಿರಣದೊಳಗೆ ಅನಂತಕೋಟಿ ಚಂದ್ರಸೂರ್ಯಾದಿಗಳು
ಅಡಗಿಪ್ಪರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೩೫ ॥

೧೪೯೪

ಧರೆ ಆಕಾಶವೆಂಬ ಅಂಡವನು ಒಂದು ಇರುವೆ ನುಂಗಿ,
ತನ್ನ ಸುಳುವ ತಾನೇ ತೋರುತಿಪ್ಪುದು ನೋಡಾ.
ಆ ಸುಳುವಿನ ಭೇದವನರಿತು ಆಚರಿಸುವ ಹಿರಿಯರ
ಎನಗೊಮ್ಮೆ ತೋರಿಸಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ॥ ೬೩೬ ॥

೧೪೯೫

ಹಲವು ಬಣ್ಣದಲ್ಲಿ ಒಬ್ಬ ಕಾಲಗಿತ್ತಿಯು
ಸುತ್ತಿ ಸುತ್ತಿ ಬರುತಿಪ್ಪಳು ನೋಡಾ.
ಇದು ಕಾರಣ, ಆ ಕಾಲಗಿತ್ತಿಯ ಹಿಡಿದು ಹಲವು ಬಣ್ಣವ ಕೆಡಿಸಿ,
ಏಕಾಗ್ರದಲ್ಲಿ ನಿಂದು ಪರಕೆಪರವಶವಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೩೭ ॥

೧೪೯೬

ಜ್ಞಾನಶಕ್ತಿಯ ಸಂಗದಿಂದ ಅವಿರಳಸ್ವಾನುಭಾವಸಿದ್ಧಾಂತವನರಿತು
ನಿರ್ಮಲ ಸ್ವಯಜ್ಞಾನಿಯಾಗಿ,
ಅಖಂಡಪರಿಪೂರ್ಣಲಿಂಗದೊಳು ಬೆರೆಸಿಪ್ಪ ಪರಿಯ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೩೮ ॥

೧೪೯೭

ತನುಮನದ ಕೊನೆಯ ಮೇಲೆ
ಅಘಟಿತಲಿಂಗವಿಪ್ಪುದು ನೋಡಾ.
ಆ ಲಿಂಗದ ಸಂತತಿಯಲ್ಲಿ ಒಬ್ಬ ಸತಿಯಳು ಐವರ ಸಂಗವ ಮಾಡಿ
ನಿರವಯವೆಂಬ ಕರಸ್ಥಲದಲ್ಲಿ ನಿಂದು
ಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೩೯ ॥

೧೪೯೮

ನಿರುತ ನಿರಂಜನ ನಿರ್ದೇಶದಲ್ಲಿ ನಿಜಶರಣನಿಪ್ಪ ನೋಡಾ.
ಆ ಶರಣನ ಸಂಗದಿಂದ ನಿರ್ವಿಕಲ್ಪ ನಿತ್ಯ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೦ ॥

೧೪೯೯

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚಭೂತಂಗಳಿಂದತ್ತತ್ತ ನಿರಾಲಂಬಲಿಂಗವಿಪ್ಪುದು ನೋಡಾ!
ಆ ಲಿಂಗದಲ್ಲಿ ಕೂಡಿ, ಒಳಹೊರಗೆ ತೆರಹಿಲ್ಲದೆ
ಪರಿಪೂರ್ಣವಾದ ಶರಣನ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೧ ॥

೧೫೦೦

ನಾಲ್ಕು ಕಂಬದ ಗುಡಿಗೆ ಇಪ್ಪತ್ತೈದು ರತ್ನಂಗಳ ಕೆತ್ತಿಸಿ,
ಮಹಾಜ್ಞಾನವೆಂಬ ಶಿಖರವನಿಕ್ಕಿ,
ಪರಂಜ್ಯೋತಿಯೆಂಬ ಲಿಂಗಾರ್ಚನೆಯಂ ಮಾಡಿ
ಪರಕೆಪರವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೨ ॥

೧೫೦೧

ಹಗಲಾರುದಿನವೆಂಬುದ ನೀನೇ ಬಲ್ಲೆಯಯ್ಯಾ,
ಇರುಳು ಮೂರುದಿನವೆಂಬುದ ನೀನೇ ಬಲ್ಲೆಯಯ್ಯಾ.
ಹಗಲಾರುದಿನವಿಲ್ಲದೆ ಇರುಳು ಮೂರು ದಿನವಿಲ್ಲದೆ
ಹಗಲಿರುಳನೊಳಕೊಂಡು, ತಾನು ತಾನಾಗಿರ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೩ ॥

೧೫೦೨

ನಿರುತನಿಜಸ್ವರೂಪದಲ್ಲಿ ಪರಮಾನಂದ ಲಿಂಗವಿಪ್ಪುದು ನೋಡಾ.
ಆ ಲಿಂಗದಲ್ಲಿ ಕೂಡಿ, ಪರಿಪೂರ್ಣವಾದ ಶರಣನ ಅಂತರಂಗವ ಕಂಡು
ಆನು ಬದುಕಿದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೬೪೪ ॥

೧೫೦೩

ಘಟ್ಟದ ತುದಿಯ ಮೇಲೆ ಮುಟ್ಟಿ ಆಡುವ ಬೆಳ್ಳಕ್ಕಿಯ ಕಂಡೆನಯ್ಯ.
ಬೆಳ್ಳಕ್ಕಿಯ ಹಿಡಿಯಹೋದ ಬೇಂಟೆಕಾರನ

ನಿರ್ವಯಲು ನುಂಗಿತ್ತು ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೫ ॥

೧೫೦೪

ಶರೀರವೆಂಬ ಆಲಯದೊಳಗೆ ಮೂವರು ಭಾಮಿನಿಯರ ಕಂಡೆನಯ್ಯ.
ಒಂದು ಭಾಮಿನಿಯ ಹಿಡಿದಾತ ಮರ್ತ್ಯಕೆ ಒಳಗಾದ.
ಒಂದು ಭಾಮಿನಿಯ ಹಿಡಿದಾತ ಮರ್ತ್ಯಾತೀತನಾದ.
ಒಂದು ಭಾಮಿನಿಯ ಹಿಡಿದಾತ ನಿರ್ವಯಲವೆರಸಿ
ನಿಶ್ಚಿಂತ ನಿರಾಳವಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೬ ॥

## ಮಹಾಜ್ಞಾನ ಉದಯವಾದಸ್ಥಲ

೧೫೦೫

ಪೃಥ್ವಿ ಅಂಗವಾದ ಭಕ್ತನು, ಅಪ್ಪು ಅಂಗವಾದ ಮಹೇಶ್ವರನು,
ತೇಜ ಅಂಗವಾದ ಪ್ರಸಾದಿ, ವಾಯು ಅಂಗವಾದ ಪ್ರಾಣಲಿಂಗಿ,
ಆಕಾಶವೆ ಅಂಗವಾದ ಶರಣನು, ಆತ್ಮನೆ ಅಂಗವಾದ ಐಕ್ಯನು,
ನಿರಾತ್ಮನೆ ಅಂಗವಾದ ಉಪಮಾತೀತನು,
ಇಂತಪ್ಪ ಭೇದಾಭೇದವನರಿತು ಇರಬಲ್ಲಡೆ
ಆತನೆ ಮಹಾಜ್ಞಾನಸಂಬಂಧಿ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೭ ॥

೧೫೦೬

ದ್ವೈತ ಅದ್ವೈತಾನಂದದಲ್ಲಿ ಚಿದ್ರೂಪ ಚಿದಾನಂದಲಿಂಗವ ಕೂಡಿ
ಪರಿಪೂರ್ಣವಾದ ಶರಣಂಗೆ ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೪೮ ॥

೧೫೦೭

ಆದಿಯಿಂದಲಾದ ಪುರುಷನು ಮೇದಿನಿಗೆ ಬಂದು,
ಐವರ ಸಂಗವ ಮಾಡಿ, ಅನಾದಿಯೆಂಬ ಕರಸ್ಥಲದಲಿ ನಿಂದು,
ಪರಕೆಪರವನೈದಿದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೬೪೯ ॥

೧೫೦೮

ವಾಸನೆಗಳಿಲ್ಲದೆ ನಿರ್ವಾಸನಿಯಾದನಯ್ಯ.
ವಂಚನೆಗಳಿಲ್ಲದೆ ನಿರ್ವಂಚಕನಾದನಯ್ಯ.

ಸಂಚುಗಳಿಲ್ಲದೆ ನಿಸ್ಸಂಚನಾದನಯ್ಯ.
ಭಾವವಿಲ್ಲದೆ ನಿರ್ಭಾವವಾದನಯ್ಯ
ಇದು ಕಾರಣ, ಝೇಂಕಾರ ನಿಜಲಿಂಗಪ್ರಭುವೆ. ॥ ೬೫೦ ॥

೧೫೦೯

ಮನವು ಮನವ ನುಂಗಿ, ನೆನವು ನೆನವ ನುಂಗಿ,
ಘನವು ಘನವ ನುಂಗಿ, ಉಪಮೆಯ ಉಪಮಾತೀತ ನುಂಗಿ,
ನಿರ್ವಯಲಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೫೧ ॥

೧೫೧೦

ತ್ರಿಕೂಟದ ಶಿವಾಲಯದೊಳಗಿಪ್ಪ
ಉಪಮಾತೀತ ಲಿಂಗವನು ಮಹಾಜ್ಞಾನದಿಂದ ತಿಳಿದು
ನಿರವಯವೆಂಬ ಕರಸ್ಥಲದಲ್ಲಿ ನಿಂದು
ಪರಕೆಪರವನ್ನೈದಿದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೬೫೨ ॥

೧೫೧೧

ಐದು ಮೇರುವೆಯ ಮೇಲೆ ಐದಿಪ್ಪ ಸತಿಯಳ ಕಂಡೆನಯ್ಯ.
ಆ ಸತಿಯಳ ಸಂಗದಿಂದ ನಾನು ನೀನೆಂಬುದ ಮರೆದು
ತಾನುತಾನಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೫೩ ॥

೧೫೧೨

ಆರುಮಂದಿ ಅಂಗನೆಯರು ಮೂವರ ಸಂಗವ ಮಾಡಿ
ಒಂಬತ್ತು ನೆಲೆಯ ಮೆಟ್ಟಿ, ಹತ್ತನೆ ಮನೆಯಲ್ಲಿ ನಿಂದು,
ಬರಿದಾದ ಮನೆಗೆ ಹೋದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೫೪ ॥

೧೫೧೩

ಕಾಲಕರ್ಮಿಗಳಿಗೆ ಸಿಲ್ಕದೆ ಲಿಂಗಾಂಗಸಮರಸವನರಿತು
ಪರಮಾನಂದದೊಳು ಕೂಡಿ
ಪರಿಪೂರ್ಣವಾದ ಮಹಾಮಹಿಮನ ಕಂಡು
ನಿಶ್ಚಿಂತ ನಿರಾವಾಸಿಯಾದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೫೫ ॥

೧೫೧೪

ಹಲವು ಕಡೆಗೆ ಹರಿದಾಡುವ ಕರಣಂಗಳಿಗೆ ಮುಖಗೊಡದೆ
ಮೇಲುಗಿರಿಯ ಶಿಖರವ ಪೊಕ್ಕು ಲೋಲಾಡುವ
ಮಹಾಶರಣನ ಕಂಡು, ಧನ್ಯನಾದೆ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. || ೬೫೬ ||

೧೫೧೫

ತನುವಿನ ಗುಣಕ್ರಿಯಂಗಳಿಗೆ ಮುಖಗೊಡದೆ
ಲಿಂಗಸಂಬಂಧಿಯಾಗಿ, ಪರಮಾನಂದಪ್ರಭೆಯಲ್ಲಿ ಕೂಡಿ,
ಪರಕ್ಕೆ ಪರವನೈದಿದ ಮಹಾಶರಣಂಗೆ
ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೫೭ ||

೧೫೧೬

ರವಿಶಶಿಯ ಬೆಳಗನೊಳಕೊಂಡಿಹ
ಪರಶಿವತತ್ವದಲ್ಲಿ ಪರಿಣಾಮಿತನಾಗಿ
ಪರಕ್ಕೆ ಪರವನೈದಿದ ಮಹಿಮನ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೫೮ ||

೧೫೧೭

ಮಾತುಮಥನಗಳಿಲ್ಲದೆ, ಜಾತಿಜನನವಿಲ್ಲದೆ, ಭ್ರಾಂತಿಸೂತಕವಿಲ್ಲದೆ,
ತತ್ವಮಸಿವಾಕ್ಯದಿಂದತ್ತತ್ತ ನಿತ್ಯವಾದ ಪರಂಜ್ಯೋತಿಲಿಂಗದಲ್ಲಿ
ಪರಿಪೂರ್ಣವಾದ ಮಹಾಶರಣನ ಕಂಡು ಧನ್ಯನಾದೆ ಕಾಣಾ
ಝೇಂಕಾರ ನಿಜಲಿಂಗಪ್ರಭುವೆ. || ೬೫೯ ||

೧೫೧೮

ಹತ್ತು ಮುಖದಲ್ಲಿ ಕಾಡುವ ದಶಯಿಂದ್ರಿಯಗಳಿಗೆ ಮುಖಗೊಡದೆ
ನಿತ್ಯವಾದ ಲಿಂಗದಲ್ಲಿ ಕೂಡಿ, ನಾನು ನೀನೆಂಬುದ ಮರೆದು
ತಾನು ತಾನಾದುದ ಕಂಡೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೬೦ ||

೧೫೧೯

ಬೆಟ್ಟದ ತುದಿಯ ಮೇಲೆ
ಮುಟ್ಟಿ ಕೂಗುವ ಕೋಗಿಲೆಯ ಕಂಡೆನಯ್ಯ.

ಆ ಕೋಗಿಲೆಯ ಇರುವೆ ನುಂಗಿ,
ಆ ಇರುವೆಯ ನಿರ್ವಯಲು ನುಂಗಿ,
ಆ ನಿರ್ವಯಲ ತಾನು ತಾನೇ ನುಂಗಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೬೧ ॥

೧೫೨೦

ಬತ್ತಲೆಯಾದ ಭಾಮಿನಿಯು,
ನಿತ್ಯವಾದ ಲಿಂಗದ ಗುಡಿಗೆ ಹೋಗಿ
ಪರವಶವಾದ ಪುರುಷನ ಸಂಗವ ಮಾಡಿ,
ಪರಿಪೂರ್ಣವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೬೨ ॥

೧೫೨೧

ಐವರು ಭಾಮಿನಿಯರು ಐದು ಮುಖದಲ್ಲಿ ನಿಂದು,
ಬೇರೊಂದು ಸ್ಥಾನದಲ್ಲಿ ಒಬ್ಬ ಪುರುಷ ನಿಂದು,
ಸಕಲವನೊಳಕೊಂಡು, ನಿಃಕಲನಾಗಿಪ್ಪನು ನೋಡಾ,
ಆ ನಿಃಕಲವನರಿತು ಆಚರಿಸುವ ಹಿರಿಯರ ಎನಗೊಮ್ಮೆ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೬೩ ॥

೧೫೨೨

ಅಂಗವೆಂಬ ಭೂಮಿಯಲ್ಲಿ ಸಂಗಸಮರಸವೆಂಬ ಪುರುಷನು
ಹಿಂಗದೆ ಪರಮಾನಂದ ಪ್ರಭೆಯಲ್ಲಿ ಕೂಡಿ
ಮಂಗಳಮಯವಾದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೬೬೪ ॥

೧೫೨೩

ಮಹಾಜ್ಞಾನಿಯ ಸಂಗದಿಂದ
ಅವಿರಳ ಸ್ವಾನುಭಾವಸಿದ್ಧಾಂತವನರಿತು,
ನಿರುತ ನಿರಂಜನ ನಿರ್ದೇಶಕನಾದ ನೋಡಾ.
ಇಂತಪ್ಪ ಶರಣನ ಕಂಡು ಮಹಾಧನ್ಯನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೬೫ ॥

೧೫೨೪

ನಿರಪೇಕ್ಷಲಿಂಗದಲ್ಲಿ ನಿರ್ಭರಿತವಾದ ಸತಿಯಳು
ನಿರ್ಮಾಯವೆಂಬ ಪುರುಷನ ಸಂಗವ ಮಾಡಿ

ನಿರವಯವೆಂಬ ದೇಶಕ್ಕೆ ಹೋಗಿ
ನಿಃಶೂನ್ಯನಿಷ್ಪತಿಯಾದರು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೬೬ ||

೧೫೨೫

ನಾದಬಿಂದುಕಲೆಗಳಿಂದತ್ತತ್ತ ಮಹಾಪುರುಷನ ಕಂಡೆನಯ್ಯ.
ಆ ಪರುಷನ ಸಂಗದಿಂದ ಒಬ್ಬ ಸತಿಯಳು ಹುಟ್ಟಿದಳು ನೋಡಾ.
ಆ ಸತಿಯಳ ಸಂಗದಲ್ಲಿ ಐವರು ಮಕ್ಕಳು ಹುಟ್ಟಿ,
ಇಪ್ಪತ್ತೈದು ಗ್ರಾಮಗಳಲ್ಲಿ ಸುಳಿದಾಡುತಿಪ್ಪರು ನೋಡಾ.
ಆ ಸುಳುವ ನಿಲವು ನುಂಗಿತು, ಆ ನಿಲವ ಇರುವೆ ನುಂಗಿತು,
ಆ ಇರುವೆಯ ಧೂಮ್ರ ನುಂಗಿತು,
ಆ ಧೂಮ್ರುವ ನಿರ್ವಯಲು ನುಂಗಿತು,
ಆ ನಿರ್ವಯಲ ತಾನು ತಾನೇ ನುಂಗಿತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೬೭ ||

೧೫೨೬

ಜ್ಞಾನ ತನ್ನೊಳಗಾದ ಬಳಿಕ ಲೋಕದ ಹಂಗಿನ್ನ್ಯಾತಕಯ್ಯ?
ಮಹಾಲಿಂಗ ತನ್ನೊಳಗಾದ ಬಳಿಕ ಇಹಪರದ ಹಂಗಿನ್ನ್ಯಾತಕಯ್ಯ?
ನಿಃಕಲನಿಜಲಿಂಗದಲ್ಲಿ ತಾನು ತಾನಾದ ಬಳಿಕ
ಸಕಲ ಬ್ರಹ್ಮಾಂಡದ ಹಂಗಿನ್ನ್ಯಾತಕಯ್ಯ?
ಇದು ಕಾರಣ, ಝೇಂಕಾರ ನಿಜಲಿಂಗಪ್ರಭುವೆ
ನಿಮ್ಮ ಶರಣನ ಸಂಬಂಧವು. || ೬೬೮ ||

೧೫೨೭

ಪಂಚಮುಖದ ಸರ್ಪನ ತಲೆಯ ಮೇಲೆ
ಒಂದು ಮಾಣಿಕ್ಯವ ಕಂಡೆನಯ್ಯ.
ಆ ಮಾಣಿಕ್ಯದ ಪ್ರಭೆಯಲ್ಲಿ ನಾನು ನೀನೆಂಬುದ ಮರೆದು
ಸ್ವಾನುಭಾವ ಸಿದ್ಧಾಂತವನಳವಟ್ಟು
ತಾನು ತಾನಾಗಿಪ್ಪನು ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೬೬೯ ||

೧೫೨೮

ಈಡಾ ಪಿಂಗಳ ಸುಷಮ್ನನಾಳದಿಂದತ್ತತ್ತ
ಸಾವಿರೆಸಳಮಂಟಪವ ಕಂಡೆನಯ್ಯ,

ಆ ಮಂಟಪದೊಳಗೊಬ್ಬ ಸತಿಯಳು ನಿಂದು
ಚಿಲ್ಲಿಂಗಾರ್ಚನೆಯಂ ಮಾಡಿ,
ಚಿದ್ಘನಸ್ವಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೭೦ ||

೧೫೨೯

ಆರು ಚಕ್ರಂಗಳಲ್ಲಿ ಆರು ಮೂರ್ತಿಗಳ ಕಂಡೆನಯ್ಯ,
ಆರು ಶಕ್ತಿಯರು ಆರಾರ ಲಿಂಗಾರ್ಚನೆಯಂ ಮಾಡಿ
ಆರರಿಂದತ್ತತ್ತ ಮೀರಿದ ಮಹಾಮಹಿಮನ ಕಂಡು ಧನ್ಯನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೭೧ ||

೧೫೩೦

ಸ್ವಯಂಪ್ರಕಾಶಲಿಂಗದಲ್ಲಿ ಸ್ವಯಂಜ್ಞಾನಿ ನಿಂದು,
ಸ್ವಯವ ತೋರುತಿಪ್ಪನು ನೋಡಾ.
ಆ ಸ್ವಯವ ನೋಡಹೋಗದ ಮುನ್ನ ಅದು ಎನ್ನ ನುಂಗಿತ್ತು.
ಅದಕ್ಕೆ ಓಂ ಎಂಬ ಶ್ರುತಿ, ಪವನಧ್ಯಾನ ಲಿಂಗಧ್ಯಾನ ಮಹಾಧ್ಯಾನ.
ಧ್ಯಾನ ಮೌನವ ನುಂಗಿ, ಮೌನ ಧ್ಯಾನವ ನುಂಗಿ,
ಧ್ಯಾನಮೌನವಿಲ್ಲದೆ ಪರವಶದಲ್ಲಿ ನಿಂದು ಪರಕ್ಕೆ ಪರವನ್ನೈದಿದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೭೨ ||

೧೫೩೧

ಐದು ತತ್ವ, ಐದು ಭೂತ, ಐದು ಅಂಗ,
ಐದು ಲಿಂಗ, ಐದು ಸುಗಂಧ,
ಐದರಿಂದತ್ತತ್ತ ಮಹಾಲಿಂಗದ ಬೆಳಗು.
ಆ ಬೆಳಗಿನೊಳು ಕೂಡಿ ತಾನು ತಾನಾಗಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೭೩ ||

೧೫೩೨

ಆರು ಚಕ್ರ, ಆರು ಮೂರ್ತಿಗಳು,
ಆರು ಶಕ್ತಿಯರು, ಆರು ಲಿಂಗವು, ಆರು ಹಸ್ತ, ಆರು ರುಚಿ,
ಆರರಿಂದತ್ತತ್ತ ಮೀರಿದ ಮಹಾಮಹಿಮನ ಕಂಡು ಧನ್ಯನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೭೪ ||

೧೫೩೩

ಆಜ್ಞೇಯಚಕ್ರದಲ್ಲಿಪ್ಪ ಲಿಂಗವನು ಬ್ರಹ್ಮಚಕ್ರಕೆ ತಂದು,
ಬ್ರಹ್ಮಚಕ್ರದಲ್ಲಿಪ್ಪ ಲಿಂಗವನು ಶಿಖಾಚಕ್ರಕೆ ತಂದು,
ಶಿಖಾಚಕ್ರದಲ್ಲಿಪ್ಪ ಲಿಂಗವನು ಪಶ್ಚಿಮಚಕ್ರಕೆ ತಂದು,
ಪಶ್ಚಿಮಚಕ್ರದಲ್ಲಿಪ್ಪ ಲಿಂಗವನು ಅಣುಚಕ್ರಕೆ ತಂದು,
ಅಣುಚಕ್ರದಲ್ಲಿಪ್ಪ ಲಿಂಗವನು ನಿರವಯದಲ್ಲಿ ತಂದು,
ಪರವಶನಾಗಿರ್ದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೬೭೫ ॥

೧೫೩೪

ನಿರ್ಮಲಸ್ವರೂಪನಾದ ಶರಣನು ನಿತ್ಯನಿಜದಲ್ಲಿ ನಿಂದು
ಮಹಾಲಿಂಗದ ಬೆಳಗಿನೊಳು ಕೂಡಿ
ಪರವಶವೆಂಬ ಸತಿಯಳ ಸಂಗವ ಮಾಡಿ
ನಿರ್ವಿಕಲ್ಪ ನಿತ್ಯಾತ್ಮಕನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೭೬ ॥

೧೫೩೫

ಕಪ್ಪೆಯ ನುಂಗಿದ ಕೋಗಿಲೆ ಸತ್ತು ಕೂಗುವುದ ಕಂಡೆನಯ್ಯ.
ತಿಪ್ಪೆಯ ಸೋಸಿದ ಸರ್ಪ ಮಾಣಿಕ್ಯವ ನುಂಗಿದುದ ಕಂಡೆನಯ್ಯ.
ಕಾಯ ಸತ್ತು, ಲಿಂಗವುಳಿದು,
ಆ ಲಿಂಗದ ಭೇದವ ಬಲ್ಲ ಹಿರಿಯರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೭೭ ॥

೧೫೩೬

ನಾದದೊಳಗಣ ನಾದವ ತೋರಿಸಯ್ಯ.
ಕಂಗಳೊಳಗಣ ಮಂಗಳಪ್ರಭೆಯ ತೋರಿಸಯ್ಯ.
ಸೋಮಸೂರ್ಯರ ನುಂಗಿದ ಪರಮನ ತೋರಿಸಯ್ಯ.
ಇಂತೀ ತ್ರಿವಿಧವ ಬಲ್ಲ ಪರಮಶರಣನ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೭೮ ॥

೧೫೩೭

ಸದಮಲದರುಹಿನಿಂದ ಸಾಧಿಸಿದಮಲಲಿಂಗವ ಕಂಡು
ಭೇದಿಸಿ ನಿಜದಲ್ಲಿ ನಿಂದು,
ಸ್ವಾನುಭವ ಸಿದ್ಧಾಂತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೭೯ ॥

೧೫೩೮

ಸಮುದ್ರಘೋಷವೆಂಬ ಲಿಂಗದಲ್ಲಿ ಮುದ್ರಿತನ ಕಂಡೆನಯ್ಯ.
ಆ ಮುದ್ರಿತನ ಸಂಗದಿಂದ ನಿರಂಜನ ದೇಶಕೆ ಹೋಗಿ
ನಿರವಯವೆಂಬ ಲಿಂಗಾರ್ಚನೆಯ ಮಾಡಿ
ತಾನು ತಾನಾಗಿಪ್ಪ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೭೪೦ ॥

೧೫೩೯

ಸುಜ್ಞಾನಪ್ರಭೆಯಲ್ಲಿ ನಿಂದು,
ಮಹಾಲಿಂಗದ ಪ್ರಕಾಶವ ನೋಡಿ
ನಿತ್ಯನಿಜವ ಕೂಡಿ, ನಿರ್ಮುಕ್ತ ನಿತ್ಯನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೪೧ ॥

## ಸ್ವಯಜ್ಞಾನ ಉದಯವಾದ ಸ್ಥಲ

೧೫೪೦

ನಿಃಕಲನ ಸಂಗದಿಂದ ಝೇಂಕಾರನಾದನಯ್ಯ.
ಝೇಂಕಾರನ ಸಂಗದಿಂದ ನಿರಂಜನನಾದನಯ್ಯ.
ನಿರಂಜನನ ಸಂಗದಿಂದ ಸ್ವಯಜ್ಞಾನಿಯಾದನಯ್ಯ.
ಸ್ವಯಜ್ಞಾನಿಯ ಸಂಗದಿಂದ ಪರಮಜ್ಞಾನಿಯಾದನಯ್ಯ.
ಪರಮಜ್ಞಾನಿಯ ಸಂಗದಿಂದ ಮಹಾಜ್ಞಾನಿಯಾದನಯ್ಯ.
ಮಹಾಜ್ಞಾನಿಯ ಸಂಗದಿಂದ ಸುಜ್ಞಾನಿಯಾದನಯ್ಯ.
ಸುಜ್ಞಾನಿಯ ಸಂಗದಿಂದ ಮನಜ್ಞಾನಿಯಾದನಯ್ಯ.
ಮನಜ್ಞಾನಿಯ ಸಂಗದಿಂದ ನಿರ್ಮಲಜ್ಞಾನಿಯಾದನಯ್ಯ.
ನಿರ್ಮಲಜ್ಞಾನಿಯ ಸಂಗದಿಂದ ಬದ್ಧಜ್ಞಾನಿಯಾದನಯ್ಯ.
ಬದ್ಧಜ್ಞಾನಿಯ ಸಂಗದಿಂದ ಶುದ್ಧಜ್ಞಾನಿಯಾದನಯ್ಯ.
ಶುದ್ಧಜ್ಞಾನಿಯೇ ಭಕ್ತ, ಬದ್ಧಜ್ಞಾನಿಯೇ ಮಹೇಶ್ವರ,
ನಿರ್ಮಲಜ್ಞಾನಿಯೇ ಪ್ರಸಾದಿ, ಮನಜ್ಞಾನಿಯೇ ಪ್ರಾಣಲಿಂಗಿ,
ಸುಜ್ಞಾನಿಯೇ ಶರಣ, ಪರಮಜ್ಞಾನಿಯೇ ಐಕ್ಯ,
ಮಹಾಜ್ಞಾನಿಯೇ ಪರಬ್ರಹ್ಮ, ಸ್ವಯಜ್ಞಾನಿಯೇ ಚಿದ್ಘನ,
ನಿರಂಜನವೇ ಚಿನ್ಮಯ, ಝೇಂಕಾರವೇ ಅಣುಮಯ,
ನಿಃಕಲವೇ ತಾನು ತಾನೆ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೭೪೨ ॥

೧೫೪೧

ಮಹಾಜ್ಞಾನಸಂಬಂಧದಿ ಅವಿರಳಸ್ವಾನುಭವಸಿದ್ಧಾಂತವನರಿತು
ಒಳಹೊರಗೆ ಪರಿಪೂರ್ಣವಾಗಿ,
ಅಖಂಡತೇಜೋಮಯಲಿಂಗದಲ್ಲಿ ಕೂಡಿ
ತಾನು ತಾನಾಗಬಲ್ಲಡೆ ಸ್ವಯಜ್ಞಾನಸಂಬಂಧಿಯೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೮೩ ||

೧೫೪೨

ನಾದದೊಳಗಣ ಚಿನ್ನಾದವ ತೋರಿಸಯ್ಯ.
ಬಿಂದುವೊಳಗಣ ಚಿದ್ಬಿಂದುವ ತೋರಿಸಯ್ಯ.
ಕಲೆಯೊಳಗಣ ಚಿತ್ಕಲೆಯ ತೋರಿಸಯ್ಯ.
ಪತಿಯೊಳಗಣ ಮಹಾನಿಷ್ಪತಿಯ ತೋರಿಸಯ್ಯ.
ಇಂತೀ ಚತುರ್ಭೇದವ ಬಲ್ಲ ಮಹಾಶರಣನ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೮೪ ||

೧೫೪೩

ಸ್ಥೂಲ ಸೂಕ್ಷ್ಮ ಕಾರಣ ಅವಸ್ಥೆಯನರಿತು
ಮಹಾಕಾರಣದೇಹಿಯಾಗಿ
ನಿಶ್ಚಿಂತ ನಿರಾಕುಳದಲ್ಲಿ ನಿಂದು
ನಿರ್ಭರಿತಲಿಂಗವನಾಚರಿಸಬಲ್ಲಾತನೆ
ಸ್ವಯಜ್ಞಾನಸಂಬಂಧಿಯೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೮೫ ||

೧೫೪೪

ನಾನೂ ಇಲ್ಲದೆ, ನೀನೂ ಇಲ್ಲದೆ,
ತಾನೆಯಾದ ಶಿವನ ಸಂಗದಿಂದ ಒಬ್ಬ ಸತಿಯಳು ಪುಟ್ಟಿ,
ಐವರ ಸಂಗವ ಮಾಡಿ, ನಿತ್ಯನಿಜದಲ್ಲಿ ನಿಂದು,
ನಿಶ್ಚಿಂತ ನಿರಾಕುಳ ನಿರ್ಭರಿತನಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೮೬ ||

೧೫೪೫

ನಿರ್ಮಲಸ್ವರೂಪವಾದ ಶರಣನು ನಿತ್ಯನಿಜದಲ್ಲಿ ನಿಂದು
ಪರಂಜ್ಯೋತಿಲಿಂಗದಲ್ಲಿ ತೊಳಗಿಬೆಳಗಿ

ನಿಷ್ಪತಿಯಾದವರಿಗೆ ಶರಣು ಶರಣು ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೮೭ ॥

೧೫೪೬

ಹೃತ್ಕಮಲದಲ್ಲಿಪ್ಪ ಜಂಗಮವು ನಿತ್ಯನಿಜದಲ್ಲಿ ನಿಂದು,
ಅನಂತಕೋಟಿ ಸೋಮಸೂರ್ಯರ ಬೆಳಗನೊಳಕೊಂಡು
ತಾನು ತಾನಾದುದ ತಾನೆ ಬಲ್ಲನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೮೮ ॥

೧೫೪೭

ಅಂತರಂಗ ಬಹಿರಂಗ ಭೇದವನರಿತು
ಮಹಾಲಿಂಗದಲ್ಲಿ ಕೂಡಿ, ಪರಿಪೂರ್ಣವಾದ ಮಹಾಶರಣಂಗೆ
ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೬೮೯ ॥

೧೫೪೮

ನಿರಂಜನದಿಂದತ್ತತ್ತ ಪರವಸ್ತು ತಾನೇ ನೋಡಾ.
ತನ್ನ ನೆನಹಿನಿಂದ ಓಂಕಾರವೆಂಬ ಪ್ರಣವ ಪುಟ್ಟಿತ್ತು.
ಓಂಕಾರವೆಂಬ ಪ್ರಣಮವೇ ಮೂರುತೆರನಾಯಿತ್ತು.
ಆ ಮೂರೇ ಆರುತೆರನಾಯಿತ್ತು.
ಆರು ಮೂರೆಂಬ ಉಭಯಸ್ಥಲವನು ಪರವಶದಲ್ಲಿ ಅರಿತು
ಪರಕೆ ಪರವಾದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೬೯೦ ॥

೧೫೪೯

ಅಂಗಕೆ ಆರುದಿನ, ಲಿಂಗಕೆ ಮೂರುದಿನ,
ಸಂಬಂಧಕೆ ಒಂದೇ ದಿನ ನೋಡಾ.
ಅಂಗಲಿಂಗಸಂಬಂಧವೆಂಬ ತ್ರಿವಿಧಭೇದವನರಿತು
ಉಪಮಾತೀತಲಿಂಗದಲ್ಲಿ ಕೂಡಿ
ನಿರ್ವಿಕಲ್ಪ ನಿತ್ಯಾತ್ಮಕನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೬೯೧ ॥

೧೫೫೦

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ಪರಶಿವರೆಂಬ ಷಡ್ವಿಧಮೂರ್ತಿಗಳಿಂದತ್ತತ್ತ,

ಅಗಮ್ಯ ಅಪ್ರಮಾಣ ಅಗೋಚರ ಅಘಟಿತ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೯೨ ॥

೧೫೫೧

ಬೆಟ್ಟದ ತುದಿಯ ಮೇಲೆ
ಹುಟ್ಟಿ ಆಡುವ ಹಂಸನ ಕಂಡೆ ನೋಡಾ,
ಅದಕೆ ತಲೆ ಒಂದು, ನಾಲಗೆ ಮೂರು, ಹಸ್ತವಾರು,
ಮೂವತ್ತಾರು ಪಾದಂಗಳು,
ಐವತ್ತೆರಡು ಎಸಳಿನ ಮನೆಯಲ್ಲಿ ಸುಳಿದಾಡುತಿಪ್ಪುದು ನೋಡಾ.
ಆ ಸುಳುವಿನ ಭೇದವನರಿವ ಶರಣರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೭೯೩ ॥

೧೫೫೨

ಅಗಮ್ಯ ಅಗೋಚರ ಅಪ್ರಮಾಣಲಿಂಗದಲ್ಲಿ
ಲಿಂಗಸಂಗಿಯಾದ ಮಹಾಶರಣರ ಪಾದವ ಹಿಡಿದು
ಆನು ಬದುಕಿದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ. ॥ ೭೯೪ ॥

೧೫೫೩

ಸರ್ವಾಂಗಲಿಂಗಮಯವಾದ ಶರಣನು
ಒಳಹೊರಗೆ ಪರಿಪೂರ್ಣವಾಗಿ ತೋರುತಿಪ್ಪನು ನೋಡಾ.
ಅಂತಪ್ಪ ಶರಣನ ಸಂಗದಿಂದ ನಿತ್ಯಮುಕ್ತನಾದೆ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೯೫ ॥

೧೫೫೪

ಸಾವಿರೆಸಳಮಂಟಪದಲ್ಲಿ ಒಬ್ಬ ಸತಿಯಳು ನಿಂದಿರುವುದ ಕಂಡೆನಯ್ಯ.
ಆ ಸತಿಯಳ ಅಂಗದಲ್ಲಿ ಇಪ್ಪತ್ತೈದು ಶಿವಾಲಯವ ಕಂಡೆನಯ್ಯ.
ಆ ಶಿವಾಲಯದೊಳಗೊಬ್ಬ ಪುರುಷನು ಐವರ ಕೂಡಿಕೊಂಡು
ಆ ಸತಿಯಳ ಸಂಗದಿಂದ ಚಿದುಲಿಂಗಾರ್ಚನೆಯಂ ಮಾಡಿ
ಚಿದ್ಘನಸ್ವರೂಪನಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೯೬ ॥

೧೫೫೫

ಭಕ್ತಗಣ, ಮಹೇಶ್ವರಗಣ, ಪ್ರಸಾದಿಗಣ,
ಪ್ರಾಣಲಿಂಗಿಗಣ, ಶರಣಗಣ, ಐಕ್ಯಗಣ, ಮಹಾಗಣದೊಳು ಕೂಡಿ

ಪರಿಪೂರ್ಣವನ್ನೈದಿದವರಿಗೆ ಶರಣು ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೬೯೭ ||

೧೫೫೬

ತತ್ವಮಸಿ ವಾಕ್ಯದಿಂದತ್ತತ್ತ ಸ್ವಯಂಜ್ಯೋತಿಲಿಂಗವಿಪ್ಪುದು ನೋಡಾ.
ಆ ಲಿಂಗದ ಸಂಗದಿಂದ ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ
ಐದಂಗವ ಗರ್ಭೀಕರಿಸಿಕೊಂಡು
ನಿತ್ಯನಿಜದಾರಂಭಕೆ ಹೋಗಿ ಪರವಶನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೯೮ ||

೧೫೫೭

ತನುಮನದ ಕೊನೆಯ ಮೇಲೆ ಮಹಾಘನಲಿಂಗವಿಪ್ಪುದು ನೋಡಾ.
ಆ ಲಿಂಗದ ಕುಕ್ಷಿಯೊಳಗೆ ಅನಂತಕೋಟಿ
ಸೋಮಸೂರ್ಯರ ಬೆಳಗು ನೋಡಾ.
ಆ ಬೆಳಗ ನೋಡ ಹೋಗದ ಮುನ್ನ
ಬೆಳಗು ತನ್ಮಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೬೯೯ ||

೧೫೫೮

ಕಂಗಳಾಟದ ಮಧ್ಯದಲ್ಲಿಪ್ಪ ಮಂಗಳಮಹಾಲಿಂಗವು
ಒಳಹೊರಗೆ ಪರಿಪೂರ್ಣವಾಗಿಪ್ಪನು ನೋಡಾ.
ಆ ಲಿಂಗದೊಳು ಕೂಡಿ ನಿಃಪ್ರಿಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೦೦ ||

೧೫೫೯

ಉಪ್ಪು ಅಪ್ಪು ಕೂಡಿದಂತೆ,
ಉರಿ ಕರ್ಪುರ ಕೂಡಿದಂತೆ,
ಮಾರುತ ಪರಿಮಳವ ಕೂಡಿದಂತೆ,
ಆಕಾಶ ಬಯಲ ಕೂಡಿದಂತೆ,
ತಾನು ತಾನಾದುದ ತಾನೇ ಕೂಡಿದಂತೆ
ಝೇಂಕಾರ ನಿಜಲಿಂಗಪ್ರಭುವೆ. || ೭೦೧ ||

೧೫೬೦

ಶಿವಾನುಭಾವಿಗಳ ಸಂಗದಿಂದ ಲಿಂಗಾನುಭಾವವ ಕಂಡೆನಯ್ಯ.
ಲಿಂಗಾನುಭಾವದಿಂದ ಪರಮಸುಖವ ಕಂಡೆನಯ್ಯ.
ಆ ಪರಮಸುಖದಿಂದ ನಿಮ್ಮ ಕಂಡೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೭೦೨ ||

## ನಿರಪೇಕ್ಷಲಿಂಗಸ್ಥಲ

೧೫೬೧

ನಿರಾಮಯವೆಂಬ ಭಕ್ತನ ಅಂಗದಲ್ಲಿ
ಝೇಂಕಾರವೆಂಬ ಜಂಗಮವು ಜಂಗಿಟ್ಟು ನಡೆಯಲೊಡನೆ
ನಿರಂಜನವಾಯಿತ್ತು.
ಆ ನಿರಂಜನದೊಡನೆ ನಿರಾಕಾರವಾಯಿತ್ತು.
ಆ ನಿರಕಾರದೊಡನೆ ಆಕಾರಲಿಂಗವಾಗಿ,
ಮಂತ್ರಘೋಷವ ಘೋಷಿಸುತಿರ್ಪುದು ನೋಡಾ.
ಆ ಲಿಂಗದ ಬೆಳಗಿನೊಳಗೆ ನಾದಪ್ರಭೆ, ಬಿಂದುಪ್ರಭೆ, ಕಳಾಪ್ರಭೆ
ಇಂತೀ ತ್ರಿವಿಧಪ್ರಭೆಗಳು ಒಂದೊಂದು ಎರಡೆರಡಾಗಿ
ಆರುತೆರನಾಯಿತ್ತು ನೋಡಾ.
ನಾದಪ್ರಭೆಯು ಭಕ್ತ-ಮಹೇಶ್ವರ,
ಬಿಂದು ಪ್ರಭೆಯು ಪ್ರಸಾದಿ-ಪ್ರಾಣಲಿಂಗಿ,
ಕಳಾಪ್ರಭೆಯು ಶರಣ-ಐಕ್ಯ.
ಇಂತೀ ಷಡ್ವಿಧಮೂರ್ತಿಗಳಿಗೆ ಷಡ್ವಿಧಲಿಂಗವು.
ಅವು ಆವಾವುಯೆಂದೊಡೆ:
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಿಲಿಂಗ
ಮಹಾಲಿಂಗ.
ಈ ಷಡ್ವಿಧಲಿಂಗಕು ಷಡ್ವಿಧ ಶಕ್ತಿಯರು
ಅವು ಆವಾವುಯೆಂದೊಡೆ:
ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿತ್‌ಶಕ್ತಿ.
ಇಂತೀ ಶಕ್ತಿಯರಿಗೂ ಷಡ್ವಿಧಭಕ್ತಿ.
ಅವು ಆವಾವುಯೆಂದೊಡೆ:
ಸದ್ಭಕ್ತಿ, ನೈಷ್ಠಿಭಕ್ತಿ, ಸಾವಧಾನಭಕ್ತಿ, ಅನುಭಾವಭಕ್ತಿ, ಸಮರತಿಭಕ್ತಿ,
ಸಮರಸಭಕ್ತಿ.

ಈ ಷಡ್ವಿಧ ಭಕ್ತಿಗೂ ಷಡ್ವಿಧಹಸ್ತ.
ಅವು ಆವಾವುಯೆಂದೊಡೆ:
ಸುಚಿತ್ತಹಸ್ತ, ಸುಬುದ್ಧಿಹಸ್ತ, ನಿರಹಂಕಾರಹಸ್ತ,
ಸುಮನಹಸ್ತ, ಸುಜ್ಞಾನಹಸ್ತ, ನಿರ್ಭಾವಹಸ್ತ,
ಈ ಷಡ್ವಿಧಹಸ್ತಗಳಿಗೂ ಷಡ್ವಿಧ ಕಲೆಗಳು.
ಅವು ಆವಾವುಯೆಂದೊಡೆ:
ನಿವೃತ್ತಿಕಲೆ, ಪ್ರತಿಷ್ಠಕಲೆ, ವಿದ್ಯಾಕಲೆ, ಶಾಂತಿಕಲೆ, ಶಾಂತ್ಯತೀತಕಲೆ,
ಶಾಂತ್ಯತೀತೋತ್ತರ ಕಲೆ.
ಈ ಷಡ್ವಿಧಕಲೆಗಳಿಗೂ ಷಡ್ವಿಧಪರಂಗಳು.
ಅವು ಆವಾವುಯೆಂದೊಡೆ:
ಶುದ್ಧಜ್ಞಾನವೇ ಪರ, ಬದ್ಧಜ್ಞಾನವೇ ಪರ, ನಿರ್ಮಲಜ್ಞಾನವೇ ಪರ,
ಮನೋಜ್ಞಾನವೇ ಪರ, ಸುಜ್ಞಾನವೇ ಪರ, ಪರಮಜ್ಞಾನವೇ ಪರ.
ಈ ಷಡ್ವಿಧಪರಗಳಿಂದತ್ತತ್ತ ಮಹಾಜ್ಞಾನದ ಬೆಳಗು,
ಸ್ವಯಜ್ಞಾನದ ತಂಪು, ನಿರಂಜನದ ಸುಖ.
ಆ ನಿರಂಜನದ ಸುಖದೊಳಗೆ ಸುಳಿದಾಡುವ ಝೇಂಕಾರವೆಂಬ ಜಂಗಮವ
ನಿರಾಮಯವೆಂಬ ಭಕ್ತನೇ ಬಲ್ಲ ನೋಡಾ
ಝೇಂಕಾರ ನಿಜಲಿಂಗಪ್ರಭುವೇ. || ೭೦೩ ||

೧೫೬೨

ಬದ್ಧಜ್ಞಾನಿಯ ಸಂಗದಿಂದ ಅಭೇದ್ಯನಾದನಯ್ಯ.
ಶುದ್ಧಜ್ಞಾನಿಯ ಸಂಗದಿಂದ ಪ್ರಸಿದ್ಧನಾದನಯ್ಯ.
ನಿರ್ಮಲಜ್ಞಾನಿಯ ಸಂಗದಿಂದ ನಿಜಸ್ವರೂಪನಾದನಯ್ಯ.
ಮನಜ್ಞಾನಿಯ ಸಂಗದಿಂದ ಅಗಮ್ಯನಾದನಯ್ಯ.
ಸುಜ್ಞಾನಿಯ ಸಂಗದಿಂದ ಅಗೋಚರನಾದನಯ್ಯ.
ಪರಮಜ್ಞಾನಿಯ ಸಂಗದಿಂದ ಅವಿರಳನಾದನಯ್ಯ.
ಮಹಾಜ್ಞಾನಿಯ ಸಂಗದಿಂದ ಸ್ವಾನುಭವಸಿದ್ಧಾಂತನಾದನಯ್ಯ.
ಸ್ವಯಜ್ಞಾನಿಯ ಸಂಗದಿಂದ ನಿಶ್ಚಿಂತನಾದನಯ್ಯ.
ನಿರಂಜನನ ಸಂಗದಿಂದ ನಿರಾಕುಳನಾದನಯ್ಯ.
ಝೇಂಕಾರನ ಸಂಗದಿಂದ ನಿರ್ಭರಿತನಾದನಯ್ಯ.
ನಿರಾಮಯನ ಸಂಗದಿಂದ ತಾನು ತಾನೇಯಾಗಿರ್ದನಯ್ಯಾ
ಝೇಂಕಾರ ನಿಜಲಿಂಗಪ್ರಭುವೇ. || ೭೦೪ ||

೧೫೬೩

'ಅಣೋರಣೀಯಾನ್ ಮಹತೋಮಹೀಯಾನ್' ಎಂಬ ಶ್ರುತಿಗಳಿಲ್ಲದಂದು,
ನಿರಾಮಯಲಿಂಗವು ತಾನೇ ನೋಡಾ.
ಆ ಲಿಂಗವು ನೆನೆದ ನೆನಹು ಒಂದೇ ಮೂರು ತೆರನಾಯಿತ್ತು;
ಮೂರೇ ಆರು ತೆರನಾಯಿತ್ತು.
ಆರು ಮೂರರ ಭೇದವನು ಮಹಾಜ್ಞಾನದಿಂದ ತಿಳಿದು
ನಿರಪೇಕ್ಷಲಿಂಗದಲ್ಲಿ ಕೂಡಿ, ನಿಸ್ಸಂಗಿ ನಿರಾಕುಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೦೫ ॥

೧೫೬೪

ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮಗಳು ಇಲ್ಲದಂದು,
ಅತ್ತತ್ತಲೆ ನಿರಾಮಯಲಿಂಗವು ತಾನೇ ನೋಡಾ.
ಆ ಲಿಂಗವು ಮನೋತೀತ, ವಾಚಾತೀತ, ಭಾವಾತೀತ, ಉಪಮಾತೀತ,
ನಿಃಕಲಾತೀತ ತಾನೇ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೭೦೬ ॥

೧೫೬೫

ವಾಸನಿಧರ್ಮಗಳಿಲ್ಲದೆ ನಿರ್ವಾಸಕಧರ್ಮಿಯಾಗಿ,
ಪರಂಜ್ಯೋತಿಲಿಂಗದಲ್ಲಿ ಕೂಡಿ,
ಪರಿಪೂರ್ಣವಾದ ಶರಣಂಗೆ ನಮೋ ನಮೋ ಎನುತಿರ್ದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೭೦೭ ॥

೧೫೬೬

ವಿಮಲಜ್ಞಾನದಿಂದ ಪರತತ್ವವನರಿತು
ಪರಾಪರಜ್ಞಾನ ಅಗಮ್ಯ ಅಗೋಚರ ನಿರಾಕಾರ ನಿರಾವಯ
ನಿರಾಕುಳ ನಿರಂಜನ ನಿರ್ದ್ವಂದ್ವ ನಿರಾಮಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೦೮ ॥

೧೫೬೭

ಪರಮಾನಂದ ಸುಖ, ಮಹಾಲಿಂಗದ ಬೆಳಗು,
ಅಗೋಚರ ಅಪ್ರಮಾಣ ನಿರಂಜನ ನಿರಾಮಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೦೯ ॥

೧೫೬೮

ಸಾವಿರ ಕಂಬದ ಮುತ್ತಿನಮಂಟಪದೊಳಗೆ
ಒಬ್ಬ ಸತಿಯಳು ನಿಂದಿರುವುದ ಕಂಡೆನಯ್ಯ.
ಆ ಸತಿಯಳ ಸಂಗದಿಂದ
ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ ಐದಂಗವ ಗರ್ಭೀಕರಿಸಿಕೊಂಡು
ನಿರಂಜನ ದೇಶಕೆ ಹೋಗಿ ನಿರಪೇಕ್ಷಲಿಂಗದಲ್ಲಿ ಕೂಡಿ
ನಿಸ್ಸಂಗಿ ನಿರಾಳನಾದೆ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೭೧೦ ॥

೧೫೬೯

ಪರಮಸುಖದಿಂದ ಪರವಶವೆಂಬ ಸತಿಯಳ ಸಂಗವ ಮಾಡಿ,
ಪರಾಪರಜ್ಞಾನ ಅಗಮ್ಯ ಅಗೋಚರ ಅಪ್ರಮಾಣ
ನಿರಾಕುಳ ನಿರಂಜನ ನಿರಾವಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೧೧ ॥

೧೫೭೦

ದೇಗುಲದೊಳಗಿರುವ ದೇವರ ಕಂಡೆನಯ್ಯ.
ಆ ದೇವಿ ದೇವರ ಸಂಗದಿಂ ಮಹಾಮಧುರಸ ತೊಟ್ಟಿಡುವುದ ಕಂಡೆನಯ್ಯ.
ಆ ಮಧುರಸವನುಂಡು, ಪರಿಪೂರ್ಣಜ್ಞಾನಿಯಾಗಿ,
ನಿಶ್ಚಿಂತ ನಿರಾಕುಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೧೨ ॥

೧೫೭೧

ಅನಂತಮುಖ, ಅನಂತಲೋಚನ, ಅನಂತಪ್ರಕಾಶ,
ಅನಂತಮಯ, ಅನಂತಸುಖ, ವಿಶ್ವಂಭರಿತ ನಿರಾಮಯಲಿಂಗವು
ತಾನೇ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೭೧೩ ॥

೧೫೭೨

ಅಂಗವಿಲ್ಲದ ನಾರಿಯ ಮನೆಯಲ್ಲಿ
ಆರುಮೂರು ಶಿವಾಲಯವ ಕಂಡೆನಯ್ಯ.
ಆರುಮೂರು ಶಿವಾಲಯದೊಳಗೆ
ಆರುಮೂರು ಲಿಂಗವಿಪ್ಪುವು ನೋಡಾ.
ಆರುಮೂರು ಲಿಂಗದ ಭೇದವನರಿತು

ಅಂಗವಿಲ್ಲದ ನಾರಿಯ ನೆರೆದು, ನಿಸ್ಸಂಗಿ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೧೪ ||

೧೫೭೩

ದೇಹವೆಂಬ ದೇಗುಲದೊಳಗೆ
ಒಬ್ಬ ಸತಿಯಳು ನಿಂದಿರುವುದ ಕಂಡೆನಯ್ಯ.
ಆ ಸತಿಯಳ ಸಂಗದಿಂದ ಅಂಗಲಿಂಗಸಂಬಂಧವ ಗರ್ಭೀಕರಿಸಿಕೊಂಡು
ನಿರಂಜನದೇಶಕೆ ಹೋಗಿ
ನಿಃಪ್ರಿಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೧೫ ||

೧೫೭೪

ಮಹಾಮೇರುವೆಯೊಳಗೆ
ಪರಮಾನಂದಲಿಂಗವು ತೊಳಗಿ ಬೆಳಗುತಿಪ್ಪುದು ನೋಡಾ.
ಆ ಬೆಳಗಿನ ಸುಳುವ ಒಬ್ಬ ಸತಿಯಳರಿದು
ಐವರ ಕೂಡಿಕೊಂಡು, ಮಹಾಮೇರುವೆಯ ಹತ್ತಿ,
ಪರಮಾನಂದ ಲಿಂಗಾರ್ಚನೆಯ ಮಾಡಿ
ಪರವಶನಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೧೬ ||

೧೫೭೫

ಬ್ರಹ್ಮ ವಿಷ್ಣು ರುದ್ರಾದಿಗಳಿಂದತ್ತತ್ತ
ಈಶ್ವರನ ಪುಣ್ಯಾಂಗನೆಯ ಕಂಡೆನಯ್ಯ.
ಆ ಈಶ್ವರನ ಪುಣ್ಯಾಂಗನೆಯ ಸಂಗದಿಂದ ಜ್ಞಾನಶಕ್ತಿಯ ಕಂಡೆನಯ್ಯ.
ಆ ಜ್ಞಾನಶಕ್ತಿಯ ಸಂಗದಿಂದ ಮಹಾಲಿಂಗದ ಗುಡಿಗೆ ಹೋಗಿ,
ಪರಮಾನಂದದ ಬೆಳಗಿನೊಳಗೆ ನಿಂದು,
ಪರಿಪೂರ್ಣವನೈದಿ, ನಿಶ್ಚಿಂತ ನಿರಾಕುಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೧೭ ||

೧೫೭೬

ನಾಲ್ಕು ಕಂಬದ ದೇಗುಲದೊಳಗೆ ಸುಳಿದಾಡುವ ಶಿಶುವ
ಒಬ್ಬ ಸತಿಯಳು ಹಿಡಿದು, ಸಾವಿರ ಕಂಬದ ಮಂಟಪಕ್ಕೆ ಒಯ್ದು,
ಚಿದ್ಘನದಿಂದ ನಿಃಪ್ರಿಯವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೧೮ ||

೧೫೭೭

ಐವರು ನಾರಿಯರು ತ್ರಿಕೂಟದ ಗಿರಿಯನೇರಿ
ಚಿದಂಗನೆಯ ಸಂಗದಿಂದ
ನಿಶ್ಚಿಂತ ನಿರಾಕುಳ ನಿರ್ಭರಿತವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೧೯ ॥

೧೫೭೮

ಆರು ಶಿಲೆಯ ಮಂಟಪದೊಳಗೆ ಮೂವರು ಪುರುಷರು ಕೂಡಿ
ಮಹಾಲಿಂಗದ ಧ್ಯಾನವಂ ಮಾಡಿ,
ಪರಿಪೂರ್ಣದೇಶಕೆ ಹೋಗಿ ನಿಸ್ಸಂಗಿ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೨೦ ॥

೧೫೭೯

ಆರುತತ್ವದ ಮೇಲೆ ನಿತ್ಯತ್ವ ನಿಜಪರಬ್ರಹ್ಮಲಿಂಗವು ತಾನೇ ನೋಡಾ.
ಆ ಲಿಂಗದ ಸಂಗದಿಂದ ಒಬ್ಬ ಸತಿಯಳು
ಆರು ಮೂರು ದೇಶವ ನೋಡಿ ನಿರ್ದೇಶದಲ್ಲಿ ನಿಂದು
ಪರವಶವಾದ ಸೋಜಿಗವ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥೭೨೧॥

೧೫೮೦

ಅಷ್ಟಕುಲಪರ್ವತದ ಮೇಲೆ ಮಹಾ ದೃಷ್ಟಲಿಂಗವ ಕಂಡೆನಯ್ಯ.
ಆ ಲಿಂಗವ ನೋಡಹೋಗದ ಮುನ್ನ, ಅದು ಎನ್ನ ನುಂಗಿತು.
ಅದಕ್ಕೆ ಮನಧ್ಯಾನ ಲಿಂಗಧ್ಯಾನ ಮಹಾಧ್ಯಾನ
ಇಂತೀ ತ್ರಿವಿಧ ಧ್ಯಾನಗಳಿಂದತ್ತತ್ತ ತಾನು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೨೨ ॥

೧೫೮೧

ಐವತ್ತೆರಡೆಸಳಿನ ಸ್ಥಾವರಗದ್ದುಗೆಯ ಮೇಲೆ
ಪರಂಜ್ಯೋತಿಲಿಂಗವ ಕಂಡೆನಯ್ಯ.
ಆ ಲಿಂಗದೊಳಗೆ ಅನಂತಕೋಟಿ ಸೋಮಸೂರ್ಯರ ಬೆಳಗು ನೋಡಾ.
ಆ ಬೆಳಗ ನೋಡಹೋಗದ ಮುನ್ನ, ಅದು ಎನ್ನ ನುಂಗಿ,
ಬೆಳಗು ತನ್ಮಯವಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೨೩ ॥

೧೫೮೨

ಒಂಬತ್ತು ಮಂದಿರದೊಳಗೆ
ತುಂಬಿಕೊಂಡಿರ್ಪ ಮಹಾಘನಲಿಂಗವ ಕಂಡೆನಯ್ಯ.
ಆ ಲಿಂಗದ ಸಂಗದಿಂದ ಒಬ್ಬ ಸತಿಯಳು ನಿಂದು,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ ಐದಂಗವ ಗರ್ಭೀಕರಿಸಿಕೊಂಡು
ನಿತ್ಯನಿಜದಾರಂಭಕ್ಕೆ ಹೋಗಿ ಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೨೪ ||

೧೫೮೩

ಜಾಗ್ರಾವಸ್ಥೆಯ ಸ್ಥೂಲದಿಂದರಿದು ಭಕ್ತನಾದೆನಯ್ಯ.
ಸ್ವಪ್ನಾವಸ್ಥೆಯ ಸೂಕ್ಷ್ಮದಿಂದರಿದು ಮಹೇಶ್ವರನಾದೆನಯ್ಯ.
ಸುಷುಪ್ತಿಯವಸ್ಥೆಯ ಕಾರಣದಿಂದರಿದು ಪ್ರಸಾದಿಯಾದೆನಯ್ಯ.
ತೂರ್ಯಾವಸ್ಥೆಯ ಮಹಾಕಾರಣದಿಂದರಿದು ಪ್ರಾಣಲಿಂಗಿಯಾದೆನಯ್ಯ.
ತೂರ್ಯಾತೀತ ಅವಸ್ಥೆಯ ನಿಃಕಲಕಾರಣದಿಂದರಿದು ಶರಣನಾದೆನಯ್ಯ.
ನಿರಾವಸ್ಥೆಯ ಪರಿಪೂರ್ಣದಿಂದರಿದು ಐಕ್ಯನಾದೆನಯ್ಯ.
ನಿತ್ಯಾವಸ್ಥೆಯ ನಿರಾಕುಳದಿಂದರಿದು ಅಖಂಡತೇಜೋಮಯನಾದೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೨೫ ||

೧೫೮೪

ಸಹಜಸಮ್ಯಕ್ಜ್ಞಾನದಿಂದ ಪರಮಾನಂದಬೆಳಗಿನೊಳು ನಿಂದು,
ಪರಿಪೂರ್ಣವನೈದಿ, ಪರಕೆಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೨೬ ||

೧೫೮೫

ನಿರಂಜನಸ್ಥಲದಲ್ಲಿ ನಿರಾವರಣವಾದ ಶರಣನು
ನಿರಾಕುಳ ನಿರಾಮಯ ನಿಃಶೂನ್ಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೨೭ ||

## ಪರಿಪೂರ್ಣಲಿಂಗಸ್ಥಲ

೧೫೮೬

ಬ್ರಹ್ಮನಿಲ್ಲದಂದು, ವಿಷ್ಣುವಿಲ್ಲದಂದು, ರುದ್ರನಿಲ್ಲದಂದು,
ಈಶ್ವರನಿಲ್ಲದಂದು, ಸದಾಶಿವನಿಲ್ಲದಂದು, ಪರಶಿವನಿಲ್ಲದಂದು,
ಅತ್ತತ್ತಲೆ ಪರಿಪೂರ್ಣಲಿಂಗವು ತಾನೇ ನೋಡಾ.

ಆ ಲಿಂಗವ ನೋಡಹೋಗದ ಮುನ್ನ, ಅದು ಎನ್ನ ನುಂಗಿತ್ತು.
ಅದಕ್ಕೆ ನಯನ ಒಂದು, ವದನ ಮೂರು, ಹಸ್ತವಾರು,
ಮೂವತ್ತಾರು ಪಾದಂಗಳು.
ಒಂಬತ್ತು ಬಾಗಿಲಮನೆಯೊಳಗೆ ಸುಳಿದಾಡುತಿಪ್ಪನು ನೋಡಾ.
ಆ ಸುಳುವಿನ ಸುಳುವ ಒಬ್ಬ ಸತಿಯಳು ಕಂಡು
ನಿರ್ಗತವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೨೮ ॥

೧೫೮೭

ಬೇರೊಂದು ಸ್ಥಾನದಲ್ಲಿ ಒಬ್ಬ ಸತಿಯಳು ನಿಂದು,
ಮೂವರ ನುಂಗಿ, ಜೋಗುಳವ ಪಾಡುತಿಪ್ಪಳು ನೋಡು.
ಆಕೆಯ ಬಸುರಲ್ಲಿ ಆರುಮಂದಿ ಮಕ್ಕಳು ಹುಟ್ಟಿ
ಆರಾರ ಲಿಂಗಾರ್ಚನೆಯ ಮಾಡಿ
ಪರಿಪೂರ್ಣಲಿಂಗದೊಳು ಕೂಡಿ, ಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೨೯ ॥

೧೫೮೮

ನಿರಂಜನದೇಶದಲ್ಲಿ ಮಹಾಮಹಿಮನ ಕಂಡೆನಯ್ಯ.
ಆ ಮಹಿಮನ ಸಂಗದಿಂದ ಒಬ್ಬ ಸತಿಯಳು
ಮೂರಾರ ದೇಶವ ನೋಡಿ, ತ್ರಿಕೂಟವೆಂಬ ಗಿರಿಯನೇರಿ,
ಸಾವಿರೆಸಳಮಂಟಪವ ಪೊಕ್ಕುದ ನಾನೇನೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೭೩೦ ॥

೧೫೮೯

ಓಂ ನಮಃ ಶಿವಾಯವೆಂಬ ಷಡಕ್ಷರಮಂತ್ರವ
ಮಹಾಜ್ಞಾನದಿಂದ ತಿಳಿದು,
ನಿರಪೇಕ್ಷಲಿಂಗದೊಳು ಕೂಡಿ
ನಿಸ್ಸಂಗಿ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೩೧ ॥

೧೫೯೦

ತನುಮನದ ಕೊನೆಯ ಮೇಲೆ ಮಹಾಘನಲಿಂಗವಿಪ್ಪುದು ನೋಡಾ.
ಆ ಘನಲಿಂಗದ ಸಂಗದಲ್ಲಿ

ಒಬ್ಬ ಸತಿಯಳು ಐವರ ಕೂಡಿಕೊಂಡು
ಆ ಲಿಂಗಾರ್ಚನೆಯಂ ಮಾಡಿ
ಪರಕೆಪರವಶವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೩೨ ||

೧೫೯೧

ಬ್ರಹ್ಮರಂಧ್ರದಲ್ಲಿಪ್ಪ ಮಹಾಜ್ಞಾನಲಿಂಗವೇ ಚಿನ್ನಾದ ನೋಡಾ.
ಶಿಖಾಚಕ್ರದಲ್ಲಿಪ್ಪ ಸ್ವಯಜ್ಞಾನಲಿಂಗವೇ ಚಿದ್ಬಿಂದು ನೋಡಾ.
ಪಶ್ಚಿಮದಲ್ಲಿಪ್ಪ ನಿರಂಜನಲಿಂಗವೇ ಚಿತ್ಕಳೆಯು ನೋಡಾ.
ಆ ಚಿತ್ಕಳೆಯೇ ಭಾವಲಿಂಗ ನೋಡಾ.
ಆ ಚಿದ್ಬಿಂದುವೆ ಪ್ರಾಣಲಿಂಗ ನೋಡಾ.
ಆ ಚಿನ್ನಾದವೆ ಇಷ್ಟಲಿಂಗ ನೋಡಾ.
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಲಿಂಗತ್ರಯವನರಿತು,
ಸಾವಿರೆಸಳ ಮಂಟಪವ ಪೊಕ್ಕು, ಮುತ್ತಿನ ಗದ್ದುಗೆಯಲ್ಲಿ ನಿಂದು,
ಮಹಾಬೆಳಗ ನೋಡಿ, ಪರಿಪೂರ್ಣಲಿಂಗದೊಳು ತಾನು ತಾನಾಗಿಪ್ಪ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೩೩ ||

೧೫೯೨

ಆಕಾರಲಿಂಗದ ಸಂಗದಿಂದ ನಿರಾಕಾರಲಿಂಗವ ಕಂಡೆನಯ್ಯ.
ಆ ನಿರಾಕಾರ ಲಿಂಗದ ಸಂಗದಿಂದ ನಿರಾಕುಳಲಿಂಗವ ಕಂಡೆನಯ್ಯ.
ಆ ನಿರಾಕುಳಲಿಂಗದ ಸಂಗದಿಂದ ನಿರಂಜನಲಿಂಗವ ಕಂಡೆನಯ್ಯ.
ಆ ನಿರಂಜನಲಿಂಗದ ಸಂಗದಿಂದ ನಿರಾಳಲಿಂಗವ ಕಂಡೆನಯ್ಯ.
ಆ ನಿರಾಳಲಿಂಗದ ಸಂಗದಿಂದ ನಿಃಕಲಲಿಂಗವ ಕಂಡೆನಯ್ಯ.
ಆ ನಿಃಕಲಲಿಂಗದ ಸಂಗದಿಂದ ಝೇಂಕಾರ ನಿಜಲಿಂಗಪ್ರಭುವೆ
ನಿಮ್ಮ ಕಂಡೆನಯ್ಯ. || ೭೩೪ ||

೧೫೯೩

ನಿರ್ಮಲಸ್ವರೂಪದಿಂದ ಜ್ಞಾನಸಂಬಂಧಿಯಾಗಿ,
ಮಹಾಲಿಂಗದೊಳು ನಿಂದು, ಪರಿಪೂರ್ಣಲಿಂಗದೊಳು ಕೂಡಿ,
ಅಖಂಡತೇಜೋಮಯಲಿಂಗವು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ||೭೩೫ ||

### ೧೫೯೪

ಊರಮುಂದಳ ಗುಡಿಯಲ್ಲಿ ಕೋಳಿ ಕುಳಿತು ಕೂಗಲೊಡನೆ
ಕತ್ತಲೆ ಹರಿದು, ಸೂರ್ಯ ಉದಯವಾದ ನೋಡಾ.
ಆ ಕೋಗಿಲೆಯ ಇರುವೆ ನುಂಗಿ ನಿರ್ವಯಲಾದ ವಿಚಿತ್ರವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೩೬ ||

### ೧೫೯೫

ಇರುಳು ಹಗಲೆಂಬೆರಡು ಮಹಾಘನಲಿಂಗದೊಳಡಗಿ
ಗರ್ಭಗತವಾಗಿಪ್ಪವು ನೋಡಾ.
ಆ ಲಿಂಗದ ಸಂಗದಿಂದ ಒಬ್ಬ ಸತಿಯಳು ಐವರ ಕೂಡಿಕೊಂಡು,
ಚಿದುಲಿಂಗಾರ್ಚನೆಯಂ ಮಾಡಿ
ಚಿದ್ಘನಸ್ವರೂಪವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೩೭ ||

### ೧೫೯೬

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಶಿವನಿಂದತ್ತತ್ತ,
ಮಹಾಜ್ಞಾನದ ಬೆಳಗು, ಸ್ವಯಜ್ಞಾನದ ತಂಪು, ನಿರಂಜನದ ಸುಖ,
ಆ ಸುಖದೊಳು ಕೂಡಿ, ಪರಿಪೂರ್ಣವಾದ ಶರಣರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೩೮ ||

### ೧೫೯೭

ಆರು ಸ್ಥಲದಲ್ಲಿ ಆರು ಲಿಂಗವ ಕಂಡೆನಯ್ಯ.
ಆರು ಲಿಂಗಸಂಗಸಮರಸದಿಂದ,
ಅಗಮ್ಯ ಅಗೋಚರ ಅಪ್ರಮಾಣ ನಿರಾಕುಳ
ನಿರಂಜನ ಪರಿಪೂರ್ಣ ನಿರವಯಲಿಂಗವು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೨೩೯ ||

### ೧೫೯೮

ಉತ್ತಮಜ್ಞಾನದಿಂದ ಪರಮಾನಂದಲಿಂಗವ ನೋಡಿ,
ಆ ಲಿಂಗದೊಳಗೆ ಅನಂತಕೋಟಿ ಕಿರಣಂಗಳು ಅಡಗಿಪ್ಪವು ನೋಡಾ.
ಆ ಲಿಂಗದಲ್ಲಿ ಕೂಡಿ ಪರಿಪೂರ್ಣವಾದ ಮಹಾಶರಣರ ತೋರಿಸಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೨೪೦ ||

೧೫೯೯

ಪೃಥ್ವಿ ಅಪ್ಪು ತೇಜ ವಾಯು ಆಕಾಶದಿಂದತ್ತತ್ತ ಮಹಾಲಿಂಗದ ಬೆಳಗು.
ಆ ಬೆಳಗಿನೊಳಗೆ ನಾನು ನೀನೆಂಬುದ ಮರೆದು,
ಅವಿರಳ ಸ್ವಾನುಭಾವಸಿದ್ಧಾಂತವನರಿತು,
ತಾನು ತಾನಾಗಿಪ್ಪನು ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೭೪೧ ||

೧೬೦೦

ಅಂಗವಿಲ್ಲದ ನಾರಿಯು ಸಂಗವಿಲ್ಲದ ಪುರುಷನ ನೆರೆದು
ಸಕಲ ಜಗಂಗಳ ಗರ್ಭೀಕರಿಸಿಕೊಂಡು, ಪರವಶದಲ್ಲಿ ನಿಂದು,
ಪರಕೆಪರವಾದ ಸೋಜಿಗವ ನಾನೇನೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. || ೭೪೨ ||

೧೬೦೧

ಅಂಗದೊಳಗಿಪ್ಪ ಲಿಂಗವನು ಸಹಜಸಮ್ಯಕ್‌ಜ್ಞಾನದಿಂದ ತಿಳಿದು,
ಏಕೋಭಾವದಲ್ಲಿ ನಿಂದು, ನಿರ್ವಿಕಲ್ಪ ನಿತ್ಯಾತ್ಮಕವಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೪೩ ||

೧೬೦೨

ಒಂಬತ್ತು ಬಾಗಿಲ ಮನೆಯೊಳಗೆ ಅಂಬರಗಿತ್ತಿಯ ಕಂಡೆನಯ್ಯ.
ಆ ಅಂಬರಗಿತ್ತಿಯು ಶಂಭುನಾರೇರ ಕೂಡಿಕೊಂಡು,
ಸಾವಿರೆಸಳಮಂಟಪಕೆ ಹೋಗಿ, ಚಿದುಲಿಂಗಾರ್ಚನೆಯ ಮಾಡಿ,
ಚಿದಾನಂದಸ್ವರೂಪವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೪೪ ||

೧೬೦೩

ಇರುಳು ಹಗಲ ನುಂಗಿ, ಹಗಲು ಇರುಳ ನುಂಗಿ,
ಇರುಳು ಹಗಲಿಲ್ಲದೆ ಪರವಶದಲ್ಲಿ ನಿಂದು
ಪರಕ್ಕೆ ಪರವನೈದಿದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೭೪೫ ||

೧೬೦೪

ಒಳಹೊರಗೆ ಪರಿಪೂರ್ಣವಾದ ಮಹಾಶರಣನ ಸಂಗದಿಂದ
ನಿಶ್ಚಿಂತ ನಿರಾಕುಳ ನಿರ್ಭರಿತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೪೬ ||

೧೬೦೫

ಕುಲಛಲಕ್ಕೆ ಹೋರಿ ಆಡುವರೆಲ್ಲ ಶಿವಭಕ್ತರೆ ?
ಶಿವಭಕ್ತರಲ್ಲ ; ಅವರು ಕುಲದ ಪಾತಕರು.
ಅವರಿಂಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕ-ಪ್ರಸಾದವಿಲ್ಲ, ವಿಭೂತಿ-ರುದ್ರಾಕ್ಷಿಯಿಲ್ಲ,
ಓಂ ನಮಃ ಶಿವಾಯವೆಂಬ ಮಂತ್ರವಿಲ್ಲ.
ಇಂತೀ ಕುಲ ಛಲಂಗಳ ಬಿಟ್ಟು, ನಿರ್ಮಲಸ್ವರೂಪನಾಗಿ,
ಗುರುಕಾರುಣ್ಯದಿಂದ ಜ್ಞಾನಸಂಬಂಧಿಯಾಗಿ,
ಅಷ್ಟಾವರಣವನಾಚರಿಸಬಲ್ಲಾತನೆ ಭಕ್ತನೆಂಬೆನಯ್ಯ, ಮಹೇಶ್ವರನೆಂಬೆನಯ್ಯ,
ಪ್ರಸಾದಿಯೆಂಬೆನಯ್ಯ, ಪ್ರಾಣಲಿಂಗಿಯೆಂಬೆನಯ್ಯ,
ಶರಣನೆಂಬೆನಯ್ಯ, ಐಕ್ಯನೆಂಬೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೭ ॥

೧೬೦೬

ಸಕಲ ಜಗಂಗಳೆಲ್ಲ ನಿಃಕಲದ ಭೇದವ ಬಲ್ಲರೇನಯ್ಯ ?
ಅಂತಪ್ಪ ನಿಃಕಲದ ಭೇದವ ಮಹಾಜ್ಞಾನದಿಂದ ತಿಳಿದು
ಪರಿಪೂರ್ಣವಾದನಯ್ಯ ನಿಮ್ಮ ಶರಣನು
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೮ ॥

## ನಿಃಶೂನ್ಯಲಿಂಗಸ್ಥಲ

೧೬೦೭

ಪೃಥ್ವಿ ಅಪ್ಪುಗಳಿಲ್ಲದಂದು, ತೇಜ ವಾಯುಗಳಿಲ್ಲದಂದು,
ಆಕಾಶ ಆತ್ಮನಿಲ್ಲದಂದು, ರವಿ ಶಶಿಗಳಿಲ್ಲದಂದು,
ನಾದ ಬಿಂದು ಕಲೆಗಳಿಲ್ಲದಂದು,
ಓಂ ನಮಃ ಶಿವಾಯವೆಂಬ ಮಂತ್ರಗಳಿಲ್ಲದಂದು,
ಅತ್ತತ್ತಲೆ, ನಿಃಶೂನ್ಯನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೪೯ ॥

೧೬೦೮

ಬ್ರಹ್ಮ ವಿಷ್ಣು ಆದಿಗಳಿಲ್ಲದಂದು,
ರುದ್ರ ಈಶ್ವರರು ಇಲ್ಲದಂದು,
ಸದಾಶಿವ ಪರಶಿವರಿಲ್ಲದಂದು,

ಅತ್ತತ್ತಲೆ, ತಾನೇ ನಿಃಶೂನ್ಯನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೦ ॥

೧೬೦೯

ಭಕ್ತ ಮಹೇಶ್ವರರಿಲ್ಲದಂದು,
ಪ್ರಸಾದಿ ಪ್ರಾಣಲಿಂಗಿಯಿಲ್ಲದಂದು,
ಶರಣ ಐಕ್ಯರಿಲ್ಲದಂದು, ಏನೇನೂ ಇಲ್ಲದಂದು,
ತಾನೇ ನಿಃಶೂನ್ಯನಾಗಿರ್ದನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೧ ॥

೧೬೧೦

ಗುರು ಲಿಂಗ ಜಂಗಮವಿಲ್ಲದಂದು,
ಪಾದೋದಕ ಪ್ರಸಾದವಿಲ್ಲದಂದು,
ವಿಭೂತಿ ರುದ್ರಾಕ್ಷಿಗಳಿಲ್ಲದಂದು,
ಓಂ ನಮಃ ಶಿವಾಯವೆಂಬ ಮಂತ್ರಗಳಿಲ್ಲದಂದು,
ಅತ್ತತ್ತಲೆ, ತಾನೇ ನಿಃಶೂನ್ಯನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೨ ॥

೧೬೧೧

ಲಿಂಗವೇ ತಾನಾಗಿ, ತಾನೇ ಲಿಂಗವಾಗಿ,
ಹಿಂಗದೆ ಪ್ರಣಮಪಂಚಾಕ್ಷರಿಯ ಜಪಿಸಿ,
ಮಂಗಳ ಪ್ರಭೆಯಲ್ಲಿ ಕೂಡಿ,
ನಿಃಸಂಗಿ ನಿರಾಳನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೩ ॥

೧೬೧೨

ಅಂಗವಿಲ್ಲದ ಪುರುಷನು ಲಿಂಗಾರ್ಚನೆಯಂ ಮಾಡಿ,
ಸಂಗಸಂಯೋಗದಲ್ಲಿ ನಿಂದು, ಮಂಗಳಪ್ರಭೆಯಲ್ಲಿ ಕೂಡಿ,
ಅಖಂಡತೇಜೋಮಯನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೨೫೪ ॥

೧೬೧೩

ಆತ್ಮನೆಂಬ ಬೆಳಗಿನಿಂದತ್ತತ್ತ ನಿರಾತ್ಮನೆಂಬ ಲಿಂಗವು,
ಅನಂತಕೋಟಿ ಸೋಮಸೂರ್ಯರ ಬೆಳಗನೊಳಕೊಂಡು,

ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವೆಂಬ ಐದಂಗವ ಗರ್ಭೀಕರಿಸಿಕೊಂಡು
ಚಿದಾನಂದಸ್ವರೂಪ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೫೫ ||

೧೬೧೪

ಐದರಿಂದತ್ತತ್ತ ಮಹಾಮಹಿಮನ ಕಂಡೆನಯ್ಯ,
ಆ ಮಹಾಮಹಿಮನ ಸಂಗದಿಂದ ಒಬ್ಬ ಸತಿಯಳು ಹುಟ್ಟಿ,
ಚಿಲ್ಲಿಂಗಾರ್ಚನೆಯಂ ಮಾಡಿ,
ಚಿದ್ಘನಸ್ವರೂಪವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೫೬ ||

೧೬೧೫

ಪರಶಿವತತ್ವದಿಂದ ಪರಮಜ್ಞಾನಿಯಾಗಿ,
ಆ ಪರಾಪರಜ್ಞಾನದಿಂದ ಅಗಮ್ಯ ಅಗೋಚರ
ಅಪ್ರಮಾಣ ನಿಶ್ಚಿಂತ ನಿರಾಕುಳ ನಿರ್ಭರಿತನಾದ ಸೋಜಿಗವ ನೋಡಾ.
ಝೇಂಕಾರ ನಿಜಲಿಂಗಪ್ರಭುವೆ. || ೭೫೭ ||

೧೬೧೬

ಆರು ಚಕ್ರಂಗಳಲ್ಲಿ ಆರು ಮೂರ್ತಿಗಳು
ಆರಾರ ಲಿಂಗಾರ್ಚನೆಯ ಮಾಡಿ,
ಆರರಿಂದತ್ತತ್ತ ಮೀರಿದ ಮಹಾಮಹಿಮನ ಸಂಗದಿಂದ
ನಿಶ್ಚಿಂತ ನಿರಾಕುಳ ನಿರ್ಭರಿತನಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೫೮ ||

೧೬೧೭

ಸರ್ವಾಂಗಪಟ್ಟಣದೊಳಗೆ ಇರುತಿಪ್ಪ ಮಹಾಮಹಿಮನ
ಇರುವೆ ನುಂಗಿ ಒಳಹೊರಗಾಯಿತ್ತು.
ಒಳಹೊರಗೆ ನುಂಗಿ ಪರಿಪೂರ್ಣವೆನಿಸಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೫೯ ||

೧೬೧೮

ಅತ್ತೆಯ ಬಸುರಲಿ ಮಗಳು ಹುಟ್ಟಿ,
ಅಳಿಯಂಗೆ ಮದುವೆಯ ಮಾಡಲೊಡನೆ,
ಅಳಿಯ ಅತ್ತೆಯನಪ್ಪಿ, ಸೊಸೆ ಮಾವನನಪ್ಪಿ,

ಈ ನಾಲ್ವರು ನಿರ್ವಯಲಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬೦ ||

೧೬೧೯

ಅಂಗಲಿಂಗ ಸಮರಸವಾದಲ್ಲದೆ,
ಸಂಗವ ಮಾಡನಯ್ಯ ನಿಮ್ಮ ಶರಣನು.
ಶ್ರೋತ್ರಲಿಂಗ ಸಮರಸವಾದಲ್ಲದೆ,
ಶಬ್ದಾದಿಗಳ ಕೇಳನಯ್ಯ ನಿಮ್ಮ ಶರಣನು.
ತ್ವಕ್ಕುಲಿಂಗ ಸಮರಸವಾದಲ್ಲದೆ,
ಸ್ಪರುಶನಾದಿಗಳ ಮಾಡನಯ್ಯ ನಿಮ್ಮ ಶರಣನು.
ನೇತ್ರಲಿಂಗ ಸಮರಸವಾದಲ್ಲದೆ,
ರೂಪಾದಿಗಳ ನೋಡನಯ್ಯ ನಿಮ್ಮ ಶರಣನು.
ಜಿಹ್ವೆಲಿಂಗ ಸಮರಸವಾದಲ್ಲದೆ,
ಷಡುರುಚಿಯ ಕೇಳನಯ್ಯ ನಿಮ್ಮ ಶರಣನು.
ಪ್ರಾಣಲಿಂಗ ಸಮರಸವಾದಲ್ಲದೆ,
ಗಂಧವ ಕೇಳನಯ್ಯ ನಿಮ್ಮ ಶರಣನು.
ಇದು ಕಾರಣ, ಇಂತಪ್ಪ ಭೇದವನರಿತು,
ಮಹಾಲಿಂಗದ ಬೆಳಗಿನೊಳು ಕೂಡಿ
ಪರಿಪೂರ್ಣತ್ವದಿಂದ ಪರಾಪರಂ ನಾಸ್ತಿಯಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬೧ ||

೧೬೨೦

ನಾದಬಿಂದುಕಳಾತೀತಲಿಂಗವನು ಮಹಾಜ್ಞಾನದಿಂದ ತಿಳಿದು,
ಚಿದಾನಂದಸ್ವರೂಪವಾದ ಸೋಜಿಗವ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬೨ ||

೧೬೨೧

ಹೃತ್ಕಮಲದಲ್ಲಿ ನೆಲೆಸಿಪ್ಪ ಪ್ರಾಣಲಿಂಗವನು ಸ್ವಯಜ್ಞಾನದಿಂದ ತಿಳಿದು,
ಅವಿರಳ ಸ್ವಾನುಭಾವಸಿದ್ಧಾಂತನಾದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬೩ ||

೧೬೨೨

ಸರ್ಪನ ತಲೆಯ ಮೇಲೆ ಒಂದು ರತ್ನವಿಪ್ಪುದು ನೋಡಾ.
ಆ ರತ್ನವ ಕಪ್ಪೆ ನುಂಗಿ ಕೂಗುತಿದೆ ನೋಡಾ.

ಆ ಕಪ್ಪೆಯು ಸರ್ಪ ನುಂಗಿ, ಆ ಸರ್ಪನ ಇರುವೆ ನುಂಗಿ,
ಸಾವಿರ ಕಂಬದ ಮಂಟಪದೊಳಗೆ ಸುಳಿದಾಡುತಿಪ್ಪುದು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೬೪ ॥

೧೬೨೩

ಅಂಗನೆಯರು ಆರುಮಂದಿ, ಸಂಗಸಮರಸದಿಂದ
ಹಿಂಗದೆ ಲಿಂಗಾರಾಧನೆಯಂ ಮಾಡಿ, ಮಂಗಳಪ್ರಭೆಯಲ್ಲಿ ನಿಂದು,
ಅತ್ತತ್ತಲೆ ನಿಸ್ಸಂಗ ನಿರಾಳ ತಾನುತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೬೫ ॥

## ನಿರವಯಲಿಂಗಸ್ಥಲ

೧೬೨೪

ನಾನು ಇಲ್ಲದೆ, ನೀನು ಇಲ್ಲದೆ,
ತಾನೇ ಭಕ್ತನಾದನಯ್ಯಾ,
ತಾನೇ ಮಹೇಶ್ವರನಾದನಯ್ಯಾ,
ತಾನೇ ಪ್ರಸಾದಿಯಾದನಯ್ಯಾ,
ತಾನೇ ಪ್ರಾಣಲಿಂಗಿಯಾದನಯ್ಯಾ,
ತಾನೇ ಶರಣನಾದನಯ್ಯಾ,
ತಾನೇ ಐಕ್ಯನಾದನಯ್ಯಾ,
ತಾನೇ ಗುರುವಾದನಯ್ಯಾ,
ತಾನೇ ಲಿಂಗವಾದನಯ್ಯಾ,
ತಾನೇ ಜಂಗಮವಾದನಯ್ಯಾ,
ತಾನೇ ನಿಷ್ಕಲ ಕೇವಲ ಪರಬ್ರಹ್ಮವಾದನಯ್ಯಾ,
ತಾನೇ ನಿರವಯಲಿಂಗವಾದನಯ್ಯಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೬೬ ॥

೧೬೨೫

ಚಿದ್ರೂಪ ಚಿದಾನಂದದಲ್ಲಿ
ಮಹಾಘನ ನಿರಾಕುಳ ನಿರಂಜನ ನಿರ್ಭರಿತ ನಿರವಯಲಿಂಗ
ತಾನು ತಾನೇ ನೋಡಾ ಝೇಂಕಾರ ನಿಜಲಿಂಗಪ್ರಭುವೆ. ॥ ೭೬೭ ॥

೧೬೨೬

ಅಷ್ಟಾಂಗಯೋಗವ ದಾಂಟಿ,
ಇಷ್ಟ ಪ್ರಾಣ ಭಾವಗಳಿಂದತ್ತತ್ತ,

ಅಪರಂಪರ ಮಹಾಘನ ನಿರುಪಮ ತಾನು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬೮ ||

೧೬೨೭

ಭೂಚರ ಖೇಚರ ಅಗೋಚರ ಚರಾಚರ
ಉನ್ಮನಿಯೆಂಬ ಪಂಚಮುದ್ರೆಗಳಿಂದತ್ತತ್ತ,
ನಿಃಶೂನ್ಯ ನಿರಾಳ ನಿಃಕಲ ನಿರವಯ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೬೯ ||

೧೬೨೮

ಷಣ್ಮುದ್ರೆಗಳಿಂದತ್ತತ್ತ ಮಹಾಘನ ಪರಾಪರಜ್ಞಾನ,
ಅಗೋಚರ ಅಪ್ರಮಾಣ ನಿಷ್ಪತಿ ನಿರಾಳ ನಿರವಯಲಿಂಗವು ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೭೦ ||

೧೬೨೯

ಆಜ್ಞೇಯಚಕ್ರದಲ್ಲಿ ಮಹಾಗೋಚರಲಿಂಗವ ಕಂಡೆನಯ್ಯ.
ಆ ಲಿಂಗದೊಳಗೆ ಅನಂತಕೋಟಿ ಕಿರಣಂಗಳು ಅಡಗಿಪ್ಪವು ನೋಡಾ.
ಆ ಲಿಂಗವ ನೋಡ ಹೋಗದ ಮುನ್ನ
ಅದು ಎನ್ನ ನುಂಗಿ, ನಿರವಯವಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೭೧ ||

೧೬೩೦

ಒಂಬತ್ತು ಬಾಗಿಲ ಮನೆಯೊಳಗೆ
ತುಂಬಿಕೊಂಡಿಪ್ಪ ಮಹಾಲಿಂಗವ ಕಂಡೆನಯ್ಯ.
ಆ ಲಿಂಗದ ಸಂಗದಿಂದ ನಾನುನೀನೆಂಬುದ ಮರೆದು
ಅವಿರಳಸ್ವಾನುಭಾವಸಿದ್ಧಾಂತವನರಿತು ನಿರಂಜನದೇಶಕೆ ಹೋಗಿ
ನಿರವಯವನೈದಿದ ನೋಡಾ ಝೇಂಕಾರ ನಿಜಲಿಂಗಪ್ರಭುವೆ. || ೭೭೨ ||

೧೬೩೧

ಅಂಗಲಿಂಗಸಮರಸವಾದ ಬಳಿಕ ಕರಣದ ಹಂಗಿನ್ನ್ಯಾತಕಯ್ಯ?
ಮಹಾಜ್ಞಾನಸಂಬಂಧವಾದ ಬಳಿಕ ಮಾತಿನ ಹಂಗಿನ್ನ್ಯಾತಕಯ್ಯ?
ಭಾವನಿರ್ಭಾವವಾದ ಬಳಿಕ ನಾದಬಿಂದುಕಳೆಯ ಹಂಗಿನ್ನ್ಯಾತಕಯ್ಯ?
ನಿಷ್ಕಲಲಿಂಗದಲ್ಲಿ ತಾನುತಾನಾದ ಬಳಿಕ ಯಾತರ ಹಂಗಿನ್ನ್ಯಾತಕಯ್ಯ
ಝೇಂಕಾರ ನಿಜಲಿಂಗಪ್ರಭುವೆ? || ೭೭೩ ||

೧೬೩೨

ಅಂಬರದ ಮನೆಯೊಳಗೆ ಗಾಂಭೀರ್ಯತ್ವದ ಅಂಗನೆಯ ಕಂಡೆನಯ್ಯ.
ಆಕೆಯ ಸಂಗದಿಂದ ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆಂಬ
ಐದಂಗವ ಗರ್ಭೀಕರಿಸಿಕೊಂಡು
ಪರವಶದಲ್ಲಿ ನಿಂದು, ಪರಕೆ ಪರವನೈದಿದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೭೪ ||

೧೬೩೩

ಇಪ್ಪತ್ತೈದು ತಲೆಯ ಮೇಲೆ ಸುಳಿದಾಡುತಿಪ್ಪ
ನಿರ್ವಾಣಿಯ ಕಂಡೆನಯ್ಯ.
ಆ ನಿರ್ವಾಣಿಯ ಕರಕಮಲದಲ್ಲಿ ನಿರಪೇಕ್ಷಲಿಂಗವಿಪ್ಪುದು ನೋಡಾ.
ಆ ಲಿಂಗದಲ್ಲಿ ತನ್ನ ಮರೆದು, ನಿರವಯಸ್ಥಲವನೈದಬಲ್ಲಾತನೆ
ನಿಮ್ಮ ನಿರಂಜನಗಣೇಶ್ವರ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೭೫ ||

೧೬೩೪

ಬ್ರಹ್ಮ ವಿಷ್ಣುವಿನಲ್ಲಿ ಎಯ್ದಿ, ವಿಷ್ಣು ರುದ್ರನಲ್ಲಿ ಎಯ್ದಿ,
ರುದ್ರ ಈಶ್ವರನಲ್ಲಿ ಎಯ್ದಿ, ಈಶ್ವರ ಸದಾಶಿವನಲ್ಲಿ ಎಯ್ದಿ,
ಸದಾಶಿವ ಪರಶಿವನಲ್ಲಿ ಎಯ್ದಿ, ಪರಶಿವ ನಿತ್ಯನಿಜದಲ್ಲಿ ಎಯ್ದಿ,
ಅತ್ತತ್ತಲೆ, ನಿರಾಕುಳ ನಿರಂಜನ ನಿಷ್ಪತಿ ನಿರವಯ ತಾನೇ ನೋಡಾ.
ಮನೋಲಯವಾಯಿತ್ತು, ಭಾವ ನಿಃಶೂನ್ಯವಾಯಿತ್ತು
ನೆನಹು ನಿಷ್ಪತಿಯಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭೭೬ ||

೧೬೩೫

ಭಕ್ತ ಮಹೇಶ್ವರನಲ್ಲಿ ಅಡಗಿ,
ಮಹೇಶ್ವರ ಪ್ರಸಾದಿಯಲ್ಲಿ ಅಡಗಿ,
ಪ್ರಸಾದಿ ಪ್ರಾಣಲಿಂಗಿಯಲ್ಲಿ ಅಡಗಿ,
ಪ್ರಾಣಲಿಂಗಿ ಶರಣನಲ್ಲಿ ಅಡಗಿ,
ಶರಣ ಐಕ್ಯನಲ್ಲಿ ಅಡಗಿ,
ಐಕ್ಯ ನಿರಂಜನದಲ್ಲಿ ಅಡಗಿ ಅತ್ತತ್ತ
ನಿರಾಕಾರ ನಿರಾಕುಳ ನಿರಂಜನ ನಿಃಶೂನ್ಯ ನಿರವಯಲಿಂಗ ತಾನೇ ನೋಡಾ.

ಮನೋಲಯವಾಯಿತ್ತು, ಜ್ಞಾನ ನಿಃಶೂನ್ಯವಾಯಿತ್ತು,
ಭಾವ ನಿಷ್ಪತ್ತಿಯಾಯಿತ್ತು, ನೆನಹು ನಿರವಯವಾಯಿತ್ತು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ॥ ೭೭೭ ॥

೧೬೩೬

ಆಚಾರಲಿಂಗ ಗುರುಲಿಂಗದಲ್ಲಿ ಅಡಗಿ,
ಆಚಾರಲಿಂಗ ಗುರುಲಿಂಗ ಶಿವಲಿಂಗದಲ್ಲಡಗಿ,
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗದಲ್ಲಡಗಿ,
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗದಲ್ಲಿ ಅಡಗಿ,
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗದಲ್ಲಿ ಅಡಗಿ,
ಆಚಾರಲಿಂಗ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ,
ಮಹಾಲಿಂಗ ನಿತ್ಯನಿಜದಲ್ಲಿ ಅಡಗಿ,
ಅತ್ತತ್ತಲೆ ಚಿದ್ಘನ ಚಿದಾನಂದ ಚಿನ್ಮಯ ನಿಷ್ಕಳಂಕ
ನಿರವಯಲಿಂಗ ತಾನೆ ನೋಡಾ, ಝೇಂಕಾರ ನಿಜಲಿಂಗಪ್ರಭುವೆ. ॥ ೭೭೮ ॥

■■

# ಅನುಬಂಧ

# ವಚನಗಳ ಅಕಾರಾದಿ

## ಕಾಡಸಿದ್ಧೇಶ್ವರನ ವೀರಶೈವ ಷಟ್‌ಸ್ಥಲ


ಅ

ಅಂಗದ ಮೇಲೆ ಇಷ್ಟಲಿಂಗವ ೧೬೯
ಅಂಗ ಭಾವ ಹಿಂಗಿ ೪೩೨
ಅಂಗವಿಲ್ಲದ ಪುರುಷ ೨೭೩
ಅಂಗೈಯೊಳಗಿನ ಕೂಸು ೧೮೮
ಅಂತಪ್ಪ ಭವಭಾರಿ ೧೯೫
ಅಂಬರದ ಕೂಸು ೨೩೭
ಅಂಬರದ ಪಕ್ಷಿಗೆ ೨೩೪
ಅಕ್ಕನ ಪುರುಷನ ೪೭೨
ಅಂಗಮ್ಯ ಅಗೋಚರವಾದ ೧೫
ಅಗ್ನಿ ವರ್ಣದ ಚಿತ್ರ ೩೭೩
ಅಚ್ಚಪ್ರಸಾದ ನಿಚ್ಚಪ್ರಸಾದ ೧೬೪
ಅಚ್ಚಪ್ರಸಾದಿಗಳೆಂದು ೧೬೩
ಅಟಮಟ ವೃಕ್ಷದ ೩೧೩
ಅಟ್ಟುಂಬ ಜನರಿಗೆ ೩೪೪
ಅಡ್ಡಕ್ಕೆ ಆರು ೧೦೩
ಅಡ್ಡಗುಡ್ಡದ ಬೆಟ್ಟವ ೨೧೭
ಅಣ್ಣಗಳು ಅಕ್ಕನ ೪೭೦
ಅತ್ತೆ ಅಳಿಯನ ನೆರೆದು ೨೨೮
ಅನೇಕ ಹೊಲಿಗೆಯ ೩೬೬
ಅಮ್ಮನ ಮೊಮ್ಮಗಳ ೧೮೦
ಅರಗಿನ ಭೂಮಿ ೧೮೪
ಅರಗಿನ ಭೂಮಿ ನೀರ ೧೧೭
ಅರಣ್ಯದ ಅಡ್ಡಗುಡ್ಡದ ೧೬೬
ಅರಣ್ಯದ ಬೆಟ್ಟದಲ್ಲಿ ೪೭೧
ಅರಣ್ಯದೊಳಗಿರುವಣ್ಣಗಳ ೩೦೬
ಅರಣ್ಯವ ಸುಟ್ಟು ೭೧
ಅರಸನ ಹೆಂಡತಿಯ ೨೭೦
ಅರಸಿಯ ಪುತ್ರನು ೪೨೮
ಅರಸು ಪ್ರಧಾನಿ ೩೬೦
ಅರಸು ಪ್ರಧಾನಿ ಬಂಟರು ೪೬೩
ಅರಸು ಪ್ರಧಾನಿಗಳು ೩೧೧
ಅರಳಿ ಅತ್ತಿ ಆಲದ ೩೯೮
ಅಲ್ಲಂಗೆ ದ್ವಯಜ್ಯೋತಿ ೩೯೪
ಅಲುಕುಮಲುಕಿನ ೨೦
ಅವಿದ್ಯಾ ಪಟ್ಟಣದ ೨೨೭
ಅಷ್ಟಪರ್ವತ ಮೇಲುಗಿರಿ ೧೮೬

ಆ

ಆಕಾರ ಪ್ರಸಾದ ೨೪೦
ಆಕಾರವಿಲ್ಲ ನಿರಾಕಾರವಿಲ್ಲ ೧೯
ಆಡ ಅಣ್ಣ ತಿಂದ ೨೯೨
ಆಡ ಕೊಂದು ಗಡಿಗೆಯಲಿಕ್ಕಿ ೨೯೪
ಆಡಿನ ಹಾಲ ಹರಿವಿಯ ೨೯೫
ಆದಿ ಅನಾದಿಯಿಲ್ಲದಂದು ೬
ಆದಿ ಅನಾದಿ ಸುರಾಳ ನಿರಾಳ ೧೪೯
ಆಧಾರ ಸ್ವಾಧಿಷ್ಠಾನ ೪೮೭
ಆನೆ ಕುದುರೆ ಒಂಟೆ ೪೦೯
ಆನೆ ಕುದುರೆ ವೈಲಿ ೩೮೫
ಆನೆಯ ಐರುವಾತ ೧೩೭
ಆನೆಯ ಹಿಂಡು ೩೧೨
ಆಯತಲಿಂಗ ೪೪೭
ಆರು ಇಲ್ಲದ ಅರಣ್ಯ ೨೫೭
ಆರು ಇಲ್ಲದ ಭೂಮಿ ೭೩
ಆರುಕಾಲವನ ಸುದ್ದಿ ೪೭೯
ಆರುವರ್ಣದ ಪಕ್ಷಿ ೨೧
ಆರುವರ್ಣದ ಭೂಮಿಯ ೨೯೦

ಆರೂ ಇಲ್ಲದ ಅರಣ್ಯ ೧೭೬
ಆರೂ ಇಲ್ಲದ ಅರಣ್ಯದ ೪೦೨
ಆರೇಣಿನ ಬೆಸೆ ೩೮೮
ಆಶೆಯುಳ್ಳವರಿಗೆ ವೇಷವ ೩೫೬
ಆಳಿಂಗೆ ವರುಷದ ಚಿಂತೆ ೪೭೫

ಇ

ಇಂತಪ್ಪ ಗುರುಶಿಷ್ಯರ ೨೦೮
ಇಂತಪ್ಪ ತ್ರಿವಿಧಾಚರಣೆ ೨೧೬
ಇಂತಪ್ಪ ದೇಹವ ತಾಳಿ ೩೬
ಇಂತಪ್ಪ ನಿರ್ಣಯವನರಿಯದೆ ೫೩
ಇಂತಪ್ಪ ನಿರ್ಣಯವನು ೧೧೩
ಇಂತಪ್ಪ ನಿರ್ಣಯವನು ೧೯೪
ಇಂತಪ್ಪ ಭಿನ್ನ ಗುರುವಿನ ೧೧೪
ಇಂತಪ್ಪ ಭೇದವ ೧೨೫
ಇಂತಪ್ಪ ಪ್ರಣಮಮಂತ್ರ ೮೪
ಇಂತಪ್ಪ ಪ್ರಣಮ ಪಂಚಾಕ್ಷರಿ ೮೦
ಇಂತಪ್ಪ ಪ್ರಸಾದವ ೯೭
ಇಂತಪ್ಪ ಮಾಯೆಯ ೨೩
ಇಂತಪ್ಪ ಮೂಢಾತ್ಮರ ೧೦೪
ಇಂತಪ್ಪ ರುದ್ರಾಕ್ಷಿಯನು ೭೪
ಇಂತಪ್ಪ ರುದ್ರಾಕ್ಷಿಯನು ೭೭
ಇಂತಪ್ಪ ಲಿಂಗಧಾರಣದ ೬೬
ಇಂತಪ್ಪ ಲಿಂಗಧಾರಣದ ೬೨
ಇಂತಪ್ಪ ಲಿಂಗಾಂಗದ ೨೧೨
ಇಂತಪ್ಪ ಲಿಂಗೈಕ್ಯದ ೧೩೦
ಇಂತಪ್ಪ ಲಿಂಗೈಕ್ಯವಹ ೧೮೯
ಇಂತಪ್ಪ ವಿಚಾರವ ೨೦೭
ಇಂತಪ್ಪ ವಿಚಾರವ ೯೧
ಇಂತಪ್ಪ ವಿಚಾರವನು ೧೫೩
ಇಂತಪ್ಪ ವಿರಕ್ತನ ೨೫೪
ಇಂತಪ್ಪ ಶಿವಪ್ರಸಾದದ ೧೬೭
ಇಂತಪ್ಪ ಶಿವಾಚಾರದ ೨೨೦
ಇಂತಪ್ಪ ಶ್ರೀವಿಭೂತಿಯ ೭೦
ಇಂತಪ್ಪ ಶ್ರೀವಿಭೂತಿಯ ೭೨
ಇಂತಪ್ಪ ಸಂಸಾರವ ೪೫
ಇಂತೀ ಕ್ರಮದಲ್ಲಿ ೮೭
ಇಂತೀ ಕ್ರಮವನರಿದು ೫೨
ಇಂತೀ ನಿರ್ಣಯದಲ್ಲಿ ೬೮
ಇಂತೀ ವಿಚಾರವನು ೧೭೩
ಇಂದಿನ ಚಿಂತೆಯುಳ್ಳವರು ೨೦೪
ಇಬ್ಬರಲ್ಲಿ ಹುಟ್ಟದೆ ೧೨೭
ಇಬ್ಬರ ಸಂಗದಲ್ಲಿ ೩೯
ಇಬ್ಬರಿಗೆ ಮೂರು ೩೬೨
ಇರುವೆ ಕುಕ್ಕುಟ ೪೧೦
ಇಹವ ತಿಳಿಯದೆ ೩೨೭

ಈ

ಈರಾರು ಮಣಿಯ ೧೮೩
ಈ ಲೌಕಿಕದ ಮಧ್ಯದಲ್ಲಿ ೨೧೩

ಉ, ಊ

ಉಂಡು ಕಾರುವಾತ ೨೦೬
ಉಣ್ಣ ಬೇಕು ಉಡಬೇಕು ೨೦೫
ಉದಯಕಾಲದ ಸೂರ್ಯ ೯
ಉದಯಕ್ಕೆ ತನುವೆಂಬ ೧೧೦
ಉದಯದ ಉದಕವ ೪೧೪
ಊರ ಬಾರಿಕನ ಬಾಗಿಲಲ್ಲಿ ೨೨೬
ಊರ ಬೆಂಕಿ ಊರ ಸುಟ್ಟಿತ್ತಕಂಡೆ ೧೧

ಎ, ಏ

ಎಡಭಾಗದ ಮುರಗಿಂದ ೩೪೦
ಎನಗೆ ಭಕ್ತನೆಂಬರು ೨೦೯
ಎನಗೊಂದು ವ್ಯಾಧಿ ೫೬
ಎನ್ನ ಕಾಳಿಯ ಧ್ವನಿ ಕೇಳಿ ೪೭೬
ಎನ್ನ ತಾಯಿ ಹೊಲೆಯನ ೧೫೯

ಎನ್ನ ಮನದಲ್ಲಿ ೫೭
ಎಮ್ಮ ಶಿವಗಣಂಗಳು ೧೨೪
ಎಮ್ಮ ಶಿವಶರಣರ ೧೬೫
ಎಮ್ಮಿಯ ಕೊಂದು ೪೮೧
ಎಮ್ಮೆ ಕೋಣನ ೩೧೬
ಎರಕದ ಭಾಂಡಕ್ಕೆ ೪೩೪
ಎರಡಿಲ್ಲದ ಭೂಮಿಯಲ್ಲಿ ೨೮೫
ಎರಡು ಕೊಟ್ಟು ೩೮
ಎರಡುಗಾಲಿಯ ಬಂಡಿ ೩೦೧
ಏಕ ಪಾವುಮೇ ಶತ ೩೯೭
ಏಳುಕೊಳ್ಳದ ಕಲ್ಲು ೧೨೧
ಏಳು ತೊಲಿಗೆ ೧೦೭

ಒ, ಓ, ಔ

ಒಂದನೆಯ ಗಾಣಕ್ಕೆ ೪೫೮
ಒಂದು ಅಚ್ಚಿಗೆ ೧೦೮
ಒಂದು ಕೊಟ್ಟು ೩೭
ಒಂದು ಕ್ಷೇತ್ರಕ್ಕೆ ೧೫೪
ಒಂದು ಜಡಿಯ ಬಿಚ್ಚಿ ೧೭೦
ಒಂದು ಜನ್ಮದಲ್ಲಿ ೧೪೦
ಒಂದು ಟಗರು ೪೯೪
ಒಕ್ಕಲಿಗನ ಸಂಗದಲ್ಲಿ ೪೯೬
ಒಬ್ಬನ ಮಾತ ಕೊಟ್ಟು ೪೬೭
ಒಬ್ಬ ಪುರುಷಂಗೆ ೨೮೧
ಒಮ್ಮನದ ಯೋನಿಯಲ್ಲಿ ೩೭೯
ಓಮ್ಮನದವರಿಗೆ ೩೮೯
ಒಳ್ಳೆ ಪದಾರ್ಥ ಬಂದಡೆ ೧೬೧
ಒಳ್ಳೆಯವರ ಸಂಗವ ೪೬೮
ಓದಿದರೆ ಓದಬಹುದು ೪೮೮
ಔಷಧಿಯ ಕೊಂದು ೪೧೨

ಕ, ಖ

ಕಂಡವರಿಗೆ ಒಂದು ೫೦೧
ಕಕ್ಷೆ ಕರಸ್ಥಲ ೬೦
ಕಟ್ಟಿದ ಮನೆ ಬಿಚ್ಚದೆ ೨೪೬
ಕಣ್ಣಿಲ್ಲದ ಒಡ್ಡರು ೧೨೨
ಕತ್ತಲಿ ಪುರದಲ್ಲಿ ೨೪೮
ಕತ್ತೆಯ ಕಟ್ಟದೆ ೩೩೯
ಕತ್ತೆಯ ಕಟ್ಟಲಿಲ್ಲಾ ೧೭೮
ಕತ್ತೆ ರುದ್ರಾಕ್ಷಿಯ ಹೊತ್ತು ೭೫
ಕನ್ಯಾಸ್ತ್ರೀಯಳ ಕುಚವ ೩೧೯
ಕಪ್ಪಿನ ಭೂಮಿಗೆ ೩೦೩
ಕಮಲಪ್ರಸಾದ ೨೮೦
ಕರಿಚರ್ಮದ ಮಚ್ಚಿ ೩೨೫
ಕರಿದು ಕೆಂಪು ಬಿಳಿದು ೪೪೪
ಕರಿಭೂಮಿಯ ಬಿದಿರ ೪೦೪
ಕರಿಯ ಕಂಬಳಿಯ ೨೭೬
ಕರಿಯ ಬಣ್ಣದ ಸೂಲು ೪೪೫
ಕರಿಶಾಲಿಯ ಹರಕ ೩೭೬
ಕರಿಹಾಸ ಆರುಮಳ ೩೮೭
ಕರೆದವರಿಗೆ ಕೊಡುವರು ೫೦೩
ಕರೆಯದೆ ಬಂದವರು ೪೧೫
ಕರ್ಲಭೂಮಿ ನೀರಭೂಮಿ ೪೩೬
ಕರ್ಲಭೂಮಿಯ ಹರಳ ೩೭೬
ಕರ್ಲಭೂಮಿ ಸವುಳಭೂಮಿ ೪೬೦
ಕಲ್ಯಾಣನಗರದ ಬಸವೇಶ್ವರ ೪೨೬
ಕಲ್ಯಾಣಪುರದೊಳಗೆ ೩೪೧
ಕಲ್ಲುದೇವರೆಂದು ೧೩೯
ಕಲ್ಲುಮರದ ಕೋಡಗದ ೨೫೬
ಕಾಮವಿಲ್ಲದ ಸ್ತ್ರೀಗೆ ೧೩೪
ಕಾಲಿಲ್ಲದೆ ನೂರಾವಂದು ೧೮೨
ಕಾಶಿಗೆ ಹೋಗಬೇಕಂಬಣ್ಣಾಗಳು ೧೫೦
ಕಾಶಿಗೆ ಹೋಗಬೇಕೆಂಬಣ್ಣಾಗಳು ೩೨೪
ಕಾಳಮ್ಮನ ಪೂಜಿಸದೆ ೩೪೬
ಕಾಳಿಯ ಉದರದ ೨೮೬
ಕಾಳಿಯ ಧ್ವನಿ ೪೭೭

ಕೀಲಿಲ್ಲದ ಕತ್ತರಿ ೩೬೭
ಕೀಲಿಲ್ಲದ ಬಂಡಿಯ ೩೦೨
ಕುಬಟಗಿಯನೊಡೆದು ೩೪೭
ಕುರಿಯಹಾಲ ಮರಿಯು ೨೯೭
ಕುರಿದೊಗಲು ಬಿಸಿಲಿಗೆ ೩೨೨
ಕುರುಡ ಕುಂಟ ೪೫೯
ಕುರುಡಿ ಕುಂಟರ ೪೦
ಕೆಚ್ಚಿಲ್ಲದ ವೃಕ್ಷಕ್ಕೆ ೪೪೨
ಕೇಳು ಕೇಳಯ್ಯ ೧೯೮
ಕೊಂಬಿಲ್ಲದ ಪಶುವಿನ ೪೧೬
ಕೊಟ್ಟ ಪಡಿಯನುಣ್ಣದೆ ೪೫೪
ಕೊಟ್ಟ ಹಣವ ಮುಟ್ಟದೆ ೩೩೧
ಖುದಾ ಜಾತಕು ೩೯೬

ಗ

ಗಂಡಗೊಂದು ಲಿಂಗ ೬೩
ಗಂಡನಿಲ್ಲದ ಸ್ತ್ರೀಯರು ೪೬೪
ಗಜಿಬಿಜಿಯೆಂಬ ಪಟ್ಟಣದ ೩೧೫
ಗಿಲಾಯದ ಮಣ್ಣಿನ ೩೭೧
ಗುಂಗರಿಯ ಮೂರು ೨೬೯
ಗುಡಿಗೊರವ ಗುಡಿಸಿ ೧೦
ಗುರುಕಾರುಣ್ಯವಾದಡೆ ೧೧೫
ಗುರು ಗುರುವೆಂದ ೪೫೦
ಗುರುಪ್ರೇಮಿಯಾದಡೆ ೨೦೩
ಗುರುಪೂಜೆಮಾಡುವಣ್ಣಗಳ ೩೦೪
ಗುರುಪೂಜೆ ಮಾಡುವಾತ ೨೬೨
ಗುರು ಮುನ್ನವೋ ೨೭೭
ಗುರುಲಿಂಗಜಂಗಮದ ೨೦೧
ಗುರುಲಿಂಗಜಂಗಮದಲ್ಲಿ ೨೦೨
ಗುರುವೆಂಬವನೇ ಹೊಲೆಯ ೯೭
ಗುರುವೆನಲು ಕೊರವದು ೪೭
ಗೊಲ್ಲಂಗೆ ಕಲ್ಲಿನ ಕಷ್ಟ ೪೦೬
ಗೊಲ್ಲನ ಕೊಳಲಧ್ವನಿ ೪೭೮

ಚ

ಚಮ್ಮಾರನಲ್ಲಿ ಮಚ್ಚೆಯ ೩೨೬
ಚಿತ್ರವನರಿಯದವರು ೩೭೪

ಜ

ಜಂಗಮರ ಕಂಡರೆ ೧೧೬
ಜಲದೊಳಗಣ ಸೂರ್ಯನಂತೆ ೭
ಜ್ಯೋತಿ ಉದಕದಂತೆ ೪೩೫

ತ

ತನ್ನ ಗ್ರಾಮವ ಬಿಟ್ಟು ೩೫೯
ತಮ್ಮನ ಪ್ರಸಾದ ೨೭೯
ತಲೆಯಿಲ್ಲದ ಪುರುಷನಿಗೆ ೧೩೩
ತಾಡಿನ ಮರದ ಮೇಲೆ ೨೮೭
ತುಡುಗು ವ್ಯಾಪಾರದವರಿಗೆ ೪೫೩
ತೊಟ್ಟ ಕಾಶಿಯ ಕಳೆಯದೆ ೪೯೩
ತ್ರಿಪುರಮಧ್ಯದಲ್ಲಿ ೨೮೮

ದ

ದಿನಚರಿ ಮಾಸದೊಳಗೆ ೨೧೧
ದೀಕ್ಷೋಪದೇಶವ ೫೪
ದೇವನಾದಡೆ ಅಗ್ನಿಯ ೪೪೯
ದೇವರಿಗೆ ಅಗ್ನಿಯಿಲ್ಲ ೪೪೮
ದೇವರು ದೇವರು ಎಂದು ೪೪೬
ದೇವರು ದೇವರು ಎಂಬಿರಿ ೧೪೧
ದ್ವಾದಶಮಾಸ ಚತುರ್ದಶಿ ೨೧೫
ದ್ವಾದಶಮಾಸದೊಳಗೆ ೨೧೪

ನ

ನವಖಂಡ ಪೃಥ್ವಿ ೨೧೮
ನವಖಂಡ ಮಂಡಲ ೧೦೫
ನಾನು ಪರಶಿವತತ್ವದಿಂ ೧೫೭
ನಾ ಪುಟ್ಟಿದುದ ಎಲ್ಲರೂ ೧೮೭
ನಾ ಹುಟ್ಟಿದ ದ್ವಾದಶವರ್ಷಕ್ಕೆ ೮೩
ನಿನ್ನಿನವರೂ ಇಂದಿನವರೂ ೪೭೪
ನಿಮ್ಮ ತಂದಿ ಸತ್ತದ್ದು ೨೫

ನಿರವಯನೆಂಬ ಗಣೇಶ್ವರನ ೫
ನೀರಲಫಲ ಉತ್ತತ್ತಿ ೧೭೫
ನೀರಿಲ್ಲದೆ ಬೆಳೆದ ೪೮೨
ನೀರಿಲ್ಲದ ಭೂಮಿಯಲ್ಲೊಂದು ೨೨೪
ನೀರಿಲ್ಲದ ಭೂಮಿಯ ೩೭೭
ನೀರಿಲ್ಲದ ಮರದ ಬೇರ ೫೫
ನೀರಿಲ್ಲದ ಸಮುದ್ರದಲ್ಲಿ ೨೩೮
ನೀರಿಲ್ಲದ ಸಾಗರ ೪೫೫
ನೀಲವರ್ಣದ ಮಾಣಿಕಕೆ ೧೨೬
ನೆಲದೊಳಗಣ ಮಧುರದಂತೆ ೮೫
ನೆಲವಿಲ್ಲದ ಭೂಮಿ ೪೩೯
ನೆಲವಿಲ್ಲದ ಭೂಮಿಯ ೨೩೩
ನೆಲವಿಲ್ಲದ ಭೂಮಿಯ ೩೪೨
ನೆಲವಿಲ್ಲದ ಭೂಮಿಯಲ್ಲಿ ೧೭೭
ನೆಲವಿಲ್ಲದ ಭೂಮಿಯಲ್ಲಿ ೪೧೧
ನೆಲೆಯಿಲ್ಲದ ಬಾವಿಗೆ ೪೪೦

ಪ

ಪಂಕದೊಳಗಿನ ಪಶುವಿಗೆ ೩೨೦
ಪಂಚರಸದ ಪಡಿಗೆ ೪೫೧
ಪಂಚಲೋಹದ ಕಬ್ಬಿಣವ ೩೩೬
ಪಂಚಲೋಹವ ಕರಗಿ ೪೨೯
ಪಂಚವರ್ಣದ ಗಾಣ ೩೮೧
ಪಂಚವರ್ಣದ ಗಾಣಕ್ಕೆ ೩೮೦
ಪಂಚವರ್ಣದ ಗೋವಿನ ೬೭
ಪಂಚವರ್ಣದ ಗೋವಿನಹಾಲ ೪೮೦
ಪಂಚವರ್ಣದ ಚಿತ್ತದ ೨೨೬
ಪಂಚವರ್ಣದ ನಗರದಲ್ಲಿ ೧೦೬
ಪಂಚವರ್ಣದ ಭಸ್ಮವನು ೬೯
ಪಂಚವರ್ಣದ ಭೂಮಿಯ ೫೯
ಪಂಚವರ್ಣದ ವಟವೃಕ್ಷದ ೧೭೨
ಪಂಚಶತಕೋಟಿಯೋಜನ ೨೮೯
ಪಂಚಾಂಗವ ಬರೆದು ೩೫೩
ಪಂಚಾಂಗವ ಸುಟ್ಟವರಿಗೆ ೩೫೭
ಪಂಚಾಕ್ಷರಮಂತ್ರದಿಂದ ೭೯
ಪಂಚಾಕ್ಷರವೆಂದಡೆ ಪರಬ್ರಹ್ಮ ೭೮
ಪಂಚಾಗ್ನಿ ಪುರವೆಂಬ ೨೩೯
ಪರಶಿವತತ್ವದ ಸ್ವರೂಪವ ೧೪
ಪರ್ಣ ಉದುರಿದ ವೃಕ್ಷ ೩೩೫
ಪರ್ವತಕ್ಕೆ ಹೋಗಬೇಕಾದರೆ ೧೫೨
ಪರ್ವತಮಲ್ಲಯ್ಯನ ೧೫೧
ಪಶ್ಚಿಮದೇಶದ ಧಾನ್ಯಕ್ಕೆ ೪೦೮
ಪಶುವಿಗೆ ಕರುವಿನ ೪೭೩
ಪಾಕವಾದನ್ನವನುಣ್ಣದೆ ೪೯೧
ಪಾದೋದಕ ಪಾದೋದಕವೆಂದು ೧೯೬
ಪಾದೋದಕ ಪ್ರಸಾದಗಳೆಂದೆಂಬಿರಿ ೨೭೫
ಪಿಂಡದಲ್ಲಿ ಶಿವಜ್ಞಾನ ೧೩
ಪುಣ್ಯಕ್ಷೇತ್ರಯಾತ್ರೆ ೧೪೮
ಪುರುಷನನಗಲಿ ೪೬೫
ಪುರುಷನ ಮರೆದು ೪೯೦
ಪುರುಷ ಸತ್ತಬಳಿಕ ೩೩೨
ಪೃಥ್ವಿಯಲ್ಲಿ ಹುಟ್ಟಿದ ೨೭೮
ಪ್ರಮಥಗಣಂಗಳ ೪೨೭
ಪ್ರಪಂಚ ಪಾರಮಾರ್ಥ ೩೫೦
ಪ್ರಸಾದಗ್ರಾಹಕನಾದ ೨೦೦
ಪ್ರಸಾದ ಪ್ರಸಾದವೆಂದು ೧೯೨
ಪ್ರಸಾದ ಪ್ರಸಾದವೆಂದು ೧೯೦
ಪ್ರಸಾದವೆಂಬುದು ಆಕಾರವಲ್ಲ ೧೯೭
ಪ್ರಸಾದವೆಂಬುದು ಪುಣ್ಯಪಾಪ ೧೯೧
ಪ್ರಸಾದಿ ಪ್ರಸಾದಿಗಳೆಂದು ೧೬೨
ಪ್ರಸಾದಿಗೆ ಪರದ್ರವ್ಯದ ಪ್ರೇಮ ೧೬೦
ಪ್ರಾಣಲಿಂಗಿಗೆ ಪದಾರ್ಥ ೧೬೮
ಪ್ರಾಣಲಿಂಗಿ ಪ್ರಾಣಲಿಂಗಿ ೨೨೧
ಪ್ರಾಣಲಿಂಗಿ ಪ್ರಾಣಲಿಂಗಿ ೨೪೧
ಪ್ರಾಣಲಿಂಗಿಗೆ ಚತುರ್ವಿಧಭಕ್ತಿ ೨೪೩

ಪ್ರಾಣಲಿಂಗಿಗೆ ಪರದೈವ ೨೪೪
ಪ್ರಾಣಲಿಂಗಿಯ ನಿಲವ ೨೪೨

ಬ

ಬಯಲ ಪಟ್ಟಣದ ೨೨೩
ಬಯಲಭೂಮಿಯಲ್ಲಿ ೩೯೧
ಬಯಲ ಹೊತ್ತವರು ೩೬೩
ಬಾಲತ್ವದಲ್ಲಿ ತನ್ನ ೮೧
ಬುದ್ಬಲಿಕೆ ಎಣ್ಣೆಯ ೩೮೩
ಬೆಳ್ಳನ್ನವರ ಭಾಷೆಯ ೪೦೭
ಬೆಳ್ಳಿ ಬಂಗಾರ ತಾಮ್ರ ೧೨೮
ಬೇಡಿಸಿಕೊಂಡು ನೀಡುವಾತ ೯೩
ಬೇರಿಲ್ಲದ ಭೂಮಿಗೆ ೨೫೯
ಬೇವಿವ ಮರಕ್ಕೆ ಬೆಲ್ಲದ ೨೭೧
ಬೇವಿನಮಗದ ಬೆಂಕಿ ೧೨
ಬ್ರಹ್ಮಂಗೆ ಕಾಲಕೊಟ್ಟು ೪೬೬
ಬ್ರಹ್ಮಯ್ಯನವರು ನಿತ್ಯದಲ್ಲಿ ೪೨೨
ಬ್ರಹ್ಮಾಂಡವು ಹೇಗೆ ೧೬

ಭ

ಭಕ್ತನಾದಮೇಲೆ ೮೬
ಭಕ್ತನಾದರೆ ಬಾಳೆಹಣ್ಣಿನಂತಿರಬೇಕು ೯೪
ಭಕ್ತರಮನೆಗೆ ಕರೆಯದೆ ೧೩೮
ಭಕ್ತಿಗೆ ತೋಲಾಗಿ ೯೫
ಭವಬಂಧನಂಗಳ ಹಿಂಗಿಸಬೇಕೆಂಬ ೩೨೧
ಭವಿಗಳ ಕಪ್ಪಡ ೩೩೮
ಭವಿಗಳ ನೂಲ ಪಿಡಿದು ೩೮೬
ಭೂಮಿಬಿಟ್ಟವರಿಗೆ ೩೬೧
ಭೂಮಿಯ ಬೆಳೆ ೪೦೫
ಭೂಮಿಯಲ್ಲಿ ಲಿಂಗಸ್ಥಾಪನೆ ೨೧೯
ಭೂಮಿಯಲ್ಲಿ ಹುಟ್ಟಿದ ೫೮
ಭೂಮಿಯಿಲ್ಲದ ಊರೊಳಗೆ ೨೩೬
ಭೂಲೋಕದಲ್ಲಿ ಪುಟ್ಟಿದ ೩೯೯

ಮ

ಮಂಗಳಾಂಗಿ ಮಧುರವಾಣಿ ೨೮೨
ಮಂಡಲತ್ರಯದ ೨೨೫
ಮಣ್ಣತುಳಿದು ೨೪೩
ಮಣ್ಣಪಡಿಯಿಂದ ೪೫೨
ಮಣ್ಣ ಮೆಚ್ಚಿ ಗುರುವಿಗೆ ೩೦
ಮಣ್ಣಿಲ್ಲದ ಮುಸಿಯೊಳಗೆ ೩೩೭
ಮದನಂಗದ ಗುಹ್ಯದ ೪೦೧
ಮದುವೆಯಿಲ್ಲದವರಿಗೆ ೩೫೨
ಮನುಜರಿಲ್ಲದ ಊರ ೩೪೮
ಮನೆಯ ಕಟ್ಟುವಾತ ೨೪೫
ಮನೆಯೆನ್ನದು ಧನವೆನ್ನದು ೨೪
ಮನೆಯೊಳಗಣ ಜ್ಯೋತಿ ೨೩೨
ಮನೆಯೊಳಗೊಂದು ಮಾಯದ ೨೪೯
ಮನೆಸುಟ್ಟು ಸತಿಸುತರು ೩೬೪
ಮರಿದುಂಬಿ ಮರದ ೩೧೪
ಮಲವ ಭುಂಜಿಸುವ ೨೬೪
ಮಲೆಯ ಕುಡಿದು ೩೩೪
ಮಲೆಯ ಮಂದಿರದ ೨೩೧
ಮಹಾಬಲ ಸರೋವರದ ೧೨೯
ಮಹಾಮಲೆಯಲ್ಲಿ ೨೫೮
ಮಹಾಮಲೆಯವ್ಯಾಘ್ರ ೧೮೫
ಮಾನವರಿಗೆ ಮರ್ತ್ಯಲೋಕ ೧೪೨
ಮಾಳಿಮೂರಳಿದು ೪೩೮
ಮಾಳಿಯ ಉಪ್ಪು ೪೩೭
ಮುಖದಲ್ಲಿ ಮಂತ್ರ ೮೫
ಮುದ್ರಕಿ ಪಶುವಿಂಗೆ ೩೯೭
ಮುದುಕಿ ಮುದುಕನ ೨೬೮
ಮುದ್ದುಮುಖದ ೧೧೮
ಮುಪ್ಪಿಯ ಚಡಾಯಿಸಿ ೧೪೩
ಮೂಗಿಲ್ಲದ ಸತಿಗೆ ೧೨೦

ಮೂಡಿ ಮೂಡದ ಮುನ್ನ ೪೮೯
ಮೂದೇವಿಯ ಮಕ್ಕಳೆಲ್ಲಾ ೩೭೫
ಮೂರಳಿದು ಮೂರುಳಿದು ೩೫೫
ಮೂರಾರು ಕಂಡಿಕಿ ೩೦೭
ಮೂರಾರು ಪರ್ವತದ ೨೨೨
ಮೂರಾರು ಬಾಗಿಲಲ್ಲಿ ೧೭೯
ಮೂರು ಗಂಟಿನ ದಂಡಿಗಿ ೩೦೮
ಮೂರು ಜರಿ ಬಾವಿಯ ೩೧೮
ಮೂರು ದಿಬ್ಬದ ಅರಣ್ಯ ೨೯೩
ಮೂರು ಮಲವ ಜರಿದು ೮೮
ಮೂರು ಸುತ್ತಿನ ಹಟ್ಟಿಯ ೨೯೬
ಮೂರು ಹೊನ್ನಿಗೆ ೩೨೮
ಮೂರು ಹೊನ್ನು ಕೊಟ್ಟು ೪೨
ಮೂರು ಹೊನ್ನು ಕೊಟ್ಟು ೩೫೮
ಮೇಲುಗಿರಿಯ ಮೇಲಣ ೧೭೧
ಮೋಟಗಿಡದಲ್ಲಿ ೨೬೦
ಮೋಟಮರದ ಹಾಟ ೪೦೦
ಮೋಟ ಮುಕಾರ್ತಿಯ ೨೭೪
ಮೋರೆಯಿಲ್ಲದವರಿಗೆ ೨೭೨
ಮೃತ್ಯುವೆಂಬ ಪಟ್ಟಣದಲ್ಲಿ ೨೬೭

**ಯ, ರ**

ಯೋನಿಯಿಲ್ಲದ ಸ್ತ್ರೀಗೆ ೧೩೫
ರಂಜಣೆಗೆಯ ಉದಕವ ೩೪೫
ರಂಜನಿಪುರದಲ್ಲಿ ಕಪಿ ೨೪೭
ರಂಡೆಮುಂಡೆಯ ಮಗ ೨೩೫
ರಾತ್ರಿಯಲ್ಲಿ ಬಹು ಕುಲದಲ್ಲಿ ೧೫೮

ಲ

ಲಿಂಗಜಂಗಮ ಒಂದೆಂದರಿಯದೆ ೧೦೧
ಲಿಂಗಧಾರಣದ ನಿರ್ಣಯ ೬೧
ಲಿಂಗನಿಷ್ಠೆಯುಳ್ಳ ವೀರಶೈವ ೨೧೦
ಲಿಂಗಪೂಜೆಯುಳ್ಳನ್ನಕ್ಕ ೩೦೯
ಲಿಂಗವಂತರಿಗೆ ೩೫೪
ಲಿಂಗೈಕ್ಯಂಗೆ ಕಾಮವಿಲ್ಲ ೪೨೦
ಲಿಂಗೈಕ್ಯರು ಲಿಂಗೈಕ್ಯರು ೪೧೯
ಲಿಂಗೈಕ್ಯವಾಗಬೇಕೆಂದು ೧೩೧
ಲೇಸಹಿದರು ಆಕರ್ ೩೯೫
ಲೋಕದ ಗಂಡರ ಪರಿ ೧೧೨
ಲೋಡಿಗೆ ಮೂರು ಹಣವ ೩೬೯
ಲೌಕಿಕದ ಮಧ್ಯದಲ್ಲಿ ೧೩೨
ಲೌಕಿಕದಲ್ಲಿ ಒಬ್ಬ ಪುರುಷ ೧೧೧
ಲೌಕಿಕ ಪಾರಮಾರ್ಥ ೪೩೦

ವ

ವಂದಿಸಿದಲ್ಲಿ ಶತಕೋಟಿ ೨೬೧
ವನಾಂತರದಲ್ಲಿ ಕೋಗಿಲೆ ೨೮೩
ವಸ್ತುವೆಂದರೆ ಪರಬ್ರಹ್ಮದ ೧೭
ವಿಭೂತಿ ರುದ್ರಾಕ್ಷಿಯ ೧೩೬
ವಿಭೂತಿಯ ಪೂಸುವ ೧೪೬
ವಿರಕ್ತನಾದಡೆ ಕುಳ್ಳ ೨೫೧
ವಿರಕ್ತನಾದಡೆ ಮನೆಯ ೨೫೨
ವಿರಕ್ತನಾದಡೆ ರಂಡೆಯ ೨೫೩
ವಿರಕ್ತನಾದೆನೆಂಬರು ೨೫೦
ವೀರಮಾಹೇಶ್ವರರು ೨೮೪
ವೇದವನೋದುವರೆಲ್ಲ ೨೬೩

ಶ

ಶಕಲಾತಿ ಬ್ರಹ್ಮಂಗೆ ೩೨೯
ಶರಣನ ನಿಲವು ೨೯
ಶರಣನಾದೊಡೆ ೩೦೦
ಶರಣರು ಶರಣರು ೨೯೮
ಶರಣರು ಶರಣರು ಎಂದು ೧೭೪
ಶರಣಸತಿ ಲಿಂಗಪತಿ ೧೦೯
ಶಶಿರವಿಕಿರಣ ಕೋಟಿ ೪೨೧
ಶಿಕಾರಿಯ ಹೋದಲ್ಲಿ ೪೧೪

ಶಿವಶಿವಾ ಈ ಮರುಳ ೩೨
ಶಿವಶಿವಾ ಈ ಮರುಳಮಾನವರು ೩೩
ಶಿವಶಿವಾ ಈ ಮರುಳಮಾನವರಿಗೆ ೨೯
ಶಿವಶಿವಾ ಈ ಮಾಯಾಸಂಸಾರ ೨೭
ಶಿವಶಿವಾ ಈ ಲೋಕದ ೩೪
ಶಿವಶಿವಾ ಈ ಲೋಕದ ೪೮
ಶಿವಶಿವಾ ಈ ಲೋಕದೊಳಗೆ ೫೦
ಶಿವಶಿವಾ ಈ ಸಂಸಾರ ೩೧
ಶಿವಶಿವಾ ಗುರುಲಿಂಗಾಂಗಿ ೪೯
ಶಿವಶಿವಾ ತಾವಾರೆಂಬುದ ೨೬
ಶಿವಶಿವಾ ನಾವು ಗುರುಗಳು ೨೮
ಶಿವಶಿವಾ ನಾವು ಗುರುಲಿಂಗ ೧೯೩
ಶಿವಶಿವಾ ನಾವು ಗುರುಲಿಂಗ ೧೯೯
ಶಿವಶಿವಾ ಮತ್ತೊಂದು ೫೧
ಶಿಶುವಿನ ಗರ್ಭದೊಳಗೆ ೧೮
ಶೀಲ ಮಾಡುವಣ್ಣಗಳ ೩೦೫
ಶೀಲವಂತರ ಶೀಲಕೊಳ್ಳದೆ ೪೪೩
ಶೀಲವಂತರೆಲ್ಲ ಶೂಲದ ೧೪೫
ಶುಕ್ಲ ಶೋಣಿತಾತ್ಮ ಸಂಬಂಧ ೩೫
ಶುಕ್ಲ ಶೋಣಿತಾತ್ಮ ಸಂಬಂಧವಾದ ೧೫೬
ಶೈವರು ಕಟ್ಟಿದ ಗುಡಿಯ ೧೨೩
ಶ್ರೀಗುರು ಬಂದು ತ್ರಿವಿಧದೀಕ್ಷೆ ೯೯
ಶ್ವೇತವರ್ಣದ ವಸ್ತ್ರವನೆಲ್ಲ ೩೩೦

**ಸ**

ಸಂದಿ ಕೇರಿ ಗೊಂದಿ ೨೩೦
ಸಕಲ ಲೋಕಾದಿಲೋಕಂಗಳು ೪೬
ಸತ್ತವರ ಮನೆಗೆ ೫೦೪
ಸತ್ತವರ ಸಂಗ ೪೯೫
ಸತ್ತವರ ಸಮಾಧಿಯಲ್ಲಿ ೧೪೪
ಸತ್ತವರ ಸುದ್ದಿ ೪೯೮
ಸತ್ತವರು ಸಾಯದವರ ೫೦೦
ಸತ್ತ ಹೆಣವ ಮುಂದೆ ೫೦೨
ಸರ್ಪನ ಧ್ವನಿಗೆ ೪೧೮
ಸಮಾಧಿ ಸಮಾಧಿ ೮೨
ಸವುಳ ಭೂಮಿಯನು ೪೪೧
ಸಹಸ್ರಮುಖ ರುದ್ರಾಕ್ಷಿಯನು ೭೬
ಸಹೋದರ ಖುರಾನವ ೩೯೨
ಸಹೋದರು ಕೊಟ್ಟ ೩೯೩
ಸಾಣೆಯ ಮೇಲೆ ೨೫೫
ಸಾಯದ ಪಶುವಿಂಗೆ ೪೮೪
ಸಾಯದವರು ಸತ್ತವರ ೪೮೫
ಸಾಲ ಮಾಡಲಿಲ್ಲ ೪೧
ಸುಟ್ಟ ಸುಣ್ಣವ ೩೭೮
ಸೂಜಿಯ ಹಿನ್ನಿಯ ೩೬೮
ಸೂರ್ಯವರ್ಣದ ಚಾಪಿ ೪೦೩
ಸೆರೆಯ ಕುಡಿದವ ೯೬
ಸೆಳವಿನ ಮಡದ ೪೫೭
ಸೆಳವು ನೆಲೆಯಿಲ್ಲದ ೪೫೬
ಸೌಟೆಣ್ಣೆಯ ಪ್ರೇಮಿಗಳು ೩೮೪
ಸ್ಥಾವರ ಜಂಗಮ ೧೦೨

**ಹ**

ಹಂದಿ ಮೊಲ ಪಶುವ ೯೮
ಹಗಲಳಿದು ಇರುಳಲ್ಲಿ ೧೮೧
ಹಗಲೋದಿ ಬ್ರಹ್ಮಂಗೆ ೪೮೬
ಹಡಿಯದವರಿಗೆ ೩೪೯
ಹತ್ತಕ್ಕೆ ನೀಡಿ ೯೨
ಹರಕರವಿಯ ಹುರಿಯಿಲ್ಲದ ೩೭೦
ಹರಹರಾ ಈ ಮಾಯೆ ೨೨
ಹರಿವ ನೀರ ೨೯೧
ಹಸಿ ತೊಗಲಿಗೆ ೩೨೩
ಹಸಿಯ ಗೋಡೆಗೆ ೩೭೨
ಹಸಿಹುಲ್ಲಿನ ರಸವ ೪೬೧
ಹಸಿಹುಲ್ಲು ಮೆಯ್ವ ೪೮೩
ಹಳದಿಯ ಪೂಸಿ ೧೪೭

ಹಳೆಯ ರಗಳೆಯ ೮೯
ಹಾದರಗಿತ್ತಿಗೆ ೪೨೫
ಹಾದರದಲ್ಲಿ ಹುಟ್ಟಿದ ೪೨೪
ಹಾದರವನಾಡುವರಿಗೆ ೪೨೩
ಹಾದಿಹೊಲವ ಮಾಡಿ ೯೦
ಹಾರುವರ ಬಿಟ್ಟಿಯ ೬೫
ಹಾಲು ಕುಡಿದ ಶಿಶು ೨೬೬
ಹಾಳುಗೋಟಿನ ಭಿತ್ತಿ ೩೧೦
ಹಾಳು ಬಾವಿ ೩೧೭
ಹಿಡಿಯಿಲ್ಲದ ಉಳಿ ೩೩೩
ಹಿತ್ತಾಳಿಯ ಭಾಂಡಕ್ಕೆ ೪೩೩
ಹಿರಿಬೇನೆಯನಳಿಯಬೇಕು ೪೧೩
ಹುಟ್ಟಿದ ಮುನ್ನ ೧೫೫
ಹುಟ್ಟಲಿಲ್ಲದ ಮರದಲ್ಲಿ ೪೬೯
ಹುಟ್ಟಿದ ಶಿಶುವಿಂಗೆ ೩೯೦
ಹುಟ್ಟಿಸಾಯಬೇಕೆಂಬಾತ ೪೯೨
ಹುಲ್ಲ ಕೊಯ್ಯದೆ ೪೬೨
ಹೆಂಡದ ಹರವಿಗೆ ೨೬೫
ಹೊತ್ತಾರೆ ಎದ್ದು ೬೪
ಹೊನ್ನು ತೆತ್ತಲ್ಲದೆ ೪೩
ಹೊನ್ನು ತೆತ್ತಲ್ಲದೆ ೪೪
ಹೊನ್ನು ಹೆಣ್ಣು ಮಣ್ಣೆಂಬ ೩೫೧
ಹೊನ್ನು ಹೆಣ್ಣು ಮಣ್ಣೆಂಬ ೪೩೧
ಹೊಲಗೇರಿಯಲ್ಲಿ ೧೧೯
ಹೊಲತಿ ಹೊಲೆಯನ ೪೯೯

### ಕುಷ್ಟಗಿ ಕರಿಬಸವೇಶ್ವರನ ಚಿತ್ತಸದ್ಗತಿಯ ವಚನ

ಅಂದಿನ ಕಾಲದ ಹನುಮ ೫೪೬
ಅಗಸಗಿತ್ತಿ ನಾಯಿದಗಿತ್ತಿ ೫೨೭
ಅತ್ತ ಬರುವ ಹಾದರಗಿತ್ತಿ ೫೩೧
ಅಷ್ಟವಿಧಾರ್ಚನೆ ೬೦೦
ಆಜ್ಞೆಸಹಿತ ಗುರು ೫೨೧
ಆದಿಯ ಪರಮೇಶ್ವರ ೫೧೪
ಇದ್ದೂರಲ್ಲಿ ಗುರುವಿದ್ದು ೫೭೨
ಇದ್ದೂರೊಳಗೆ ಗುರುವಿದ್ದು ೫೭೧
ಉಡಿಯಲಿಂಗವ ಬಿಟ್ಟು ೫೪೨
ಉದಯದಲೆದ್ದು ಗಡಗಡನೆ ೫೭೮
ಉಪ್ಪು ಹುಳಿಯನು ಬಿಟ್ಟು ೫೬೨
ಉಳ್ಳಿ ಇಂಗು ಬೆಲ್ಲ ಮೆಣಸು ೫೬೩
ಊರೆಲ್ಲ ಹೇತ ಹೇಲ ೫೩೪
ಎಲ್ಲರು ಅಹುದೆಂಬ ೫೫೧
ಒಂದು ಮನೆಯೊಳಗೆ ೫೭೩
ಒಂದೂರೊಳಗೆ ಗುರುವಿದ್ದು ೫೭೦
ಒತ್ತೆಯ ಸೂಳೆಗೆ ೫೪೪
ಒಬ್ಬರುತ್ತಮರೆಂಬರು ೫೪೦
ಒರತೆಯಾಯತವೆಂಬ ೫೬೧
ಕಂದನ ಕೊಂದು ೫೯೨
ಕತ್ತಿಯ ಕಟ್ಟಿ ಗರ್ದಿಸಿ ೫೯೫
ಕಾಲ ಕಾಮನ ಗೆಲುವುದಕ್ಕೆ ೫೩೮
ಕಾಲದ ಗಂಡ ಕರ್ಮದಗಂಡ ೫೫೦
ಕಾಲನ ಸುಟ್ಟ ಭಸಿತವಲ್ಲ ೫೧೯
ಕಾಳಗದೊಳು ಜೆಡೆದಲೆಗೆ ೫೯೩
ಕಿರುಕುಳ ದೈವದ ಹರಕೆ ೫೮೦
ಕುಗ್ಗಿನ ಕುಳಿ ಸಿಳ್ಳಿನ ಗುಳ್ಳೆ ೫೨೮
ಕುಲಗೇಡಿ ಖೂಳರಿಗೆ ೫೮೪
ಕುಲವೆಣ್ಣು ಬಿಟ್ಟು ೫೨೨
ಕೆರೆ ತೊರೆಯ ಮುಳುಗುವ ೫೮೯
ಕೆರೆಯನೊಡೆದ ಬಳಿಕ ೫೫೫
ಕೊರಡು ಕೊನರಬಲ್ಲುದೆ? ೫೫೪
ಕ್ಷುದ್ರ ಕುಚೇಷ್ಟೆ ೫೨೦
ಗಂಡನಿಂದ ಹೆಂಡತಿ ೫೧೩
ಗುರು ಕೊಟ್ಟ ಕುರುಹ ಬಿಟ್ಟು ೫೪೧
ಗುರು ಬಡವನೆಂದು ೫೮೨

ಗುರುಮುಖದಲ್ಲಿ ಕೊಂಬುದು ೫೧೬
ಗುರುವಿನಲ್ಲಿ ಕುಲ ವಿದ್ಯೆ ೫೭೬
ಗುರುವು ಉಂಡು ಉಟ್ಟನು ೫೮೩
ಗುರುವೆ ಪರಮೇಶ್ವರನೆಂದು ೫೦೯
ಗುರುಹಿರಿಯರ ದರುಶನ ೫೮೬
ಗುರುಹಿರಿಯರ ಪಾದಸೇವೆ ೫೮೭
ಗುರೂಪದೇಶವ ಪಡೆದು ೫೧೧
ಚಿತ್ತ ಸದ್ಗತಿಯ ವಚನವ ೬೦೧
ಚಿತ್ತ ಸದ್ಗತಿಯ ವಚನವ ೬೦೨
ಚಿತ್ರದಬೊಂಬೆ ೫೩೫
ಚೆನ್ನಯ್ಯ ನನ್ನಯ್ಯ ೫೯೬
ಜೆಟ್ಟಿಗ ಬೀರ ಮೈಲಾರ ೫೮೧
ಜೇನುತುಪ್ಪದೊಳುಬಿದ್ದ ೫೩೬
ತನಗೆ ಹುಟ್ಟಿದ ಮಕ್ಕಳಿಗೆ ೫೬೯
ತಸ್ಮದ ಮೇಲಣ ೫೨೫
ತಿಥಿ ಮತಿ ಮಹಳವ ೫೭೯
ತೊರೆಯೊಳಗಣಶಂಖ ೫೪೭
ತ್ರಿವಿಧ ತೀರ್ಥ ೫೧೭
ದಂಡನಾಯಕ ದಾಸಿಮಯ್ಯಂಗೆ ೫೯೭
ಧರೆಯನಾಳುವ ಪರವಾದಿ ೫೯೧
ಧೂಳಿಪಾವುಡ ಸರ್ವಾಂಗ ೫೬೬
ನಚ್ಚು ಮಚ್ಚಿಗೆ ೫೮೫
ನಾಟ್ಯಶಾಲೆಯೊಳು ೫೪೮
ನೀರಮಡಿಯ ಕಟ್ಟಿ ೫೫೩
ಪರದೈವ ಪತಿಪೂಜೆಯ ೫೬೫
ಪಾದಪೂಜೆಯೆಂಬುವದು ೬೦೩
ಪಾದರಗಿತ್ತಿ ಪಾದಲುಂಬಿ ೫೫೭
ಪಾದೊದಕ ಪ್ರಸಾದ ೫೭೭
ಪಾಳುಕದ ಆಗರದ ೫೨೪
ಪುರಜನಂಗಳ ಮೆಚ್ಚಿಸುವರೆ ೫೩೭
ಪುರಾತರ ಗೀತವನೋದಿ ೫೪೯
ಪ್ರಣಮದ ಮಂತ್ರ ೫೧೮

ಬಚ್ಚಲ ಕುಳಿಯೊಳು ೫೨೬
ಭವತಿಮಿರ ಜ್ಞಾನದಿಂದ ೫೦೬
ಭವಾರಣ್ಯದಲ್ಲಿ ೫೦೭
ಭವಿಜನ್ಮವ ಕಳದು ೫೦೫
ಭವಿತನಕ್ಕೆ ಹೇಸಿ ೫೩೩
ಮಂಡಲದೊಳಿರ್ದು ೫೯೦
ಮತವಲ್ಲ ಹೆಣ್ಣ ಹಿಡಿದು ೫೭೪
ಮಲದ ಕುಳಿಯೊಂದು ೫೫೬
ಮಲಮೂತ್ರದ ಬಿಲದಲ್ಲಿ ೫೨೩
ಮಾಳಿಗೆಯ ಮಣ್ಣು ೫೪೫
ಮಿಂಡಂಗಯಿದರೆಡೆಯ ೫೪೩
ಮಿಥ್ಯಾದೇವತೆಯ ಸೂಳೆ ೫೩೦
ರಂಡೆವೆಂಡಿರ ಮಾತಕೇಳಿ ೫೬೦
ಲಿಂಗದ ನೆಲೆಯನರಿದವರಿಗೆ ೫೧೫
ಶಂಕರದಾಸಿಮಯ್ಯನಿಗೆ ೫೯೮
ಶಿವಭಕ್ತರಿಗೆ ಭವಿಸರಿಯೆಂಬ ೫೭೫
ಶಿವಾಶ್ರಯದಲ್ಲಿ ಜನಿಸಿ ೫೧೦
ಶೀಲವ್ರತ ನೇಮ ೫೬೪
ಶೀಲ ಶೀಲವೆಂದೇನೊ ? ೫೫೮
ಸಟ್ಟುಗ ಸವಿಯಬಲ್ಲುದೆ ? ೫೫೨
ಸದಾ ವರ್ತೆಯ ಕೊಡುವ ೫೮೯
ಸುರತರು ತರುಗಳೊಳಗಲ್ಲ ೫೧೨
ಸೆರಗೊಡ್ಡಿ ಬೇಡಿಕೊಂಬೆನು ೫೯೯
ಸೃಷ್ಟಿಯೊಳು ಭೋರಿಟ್ಟು ೫೯೪
ಹಂದಿಗೆ ಅಂದಳವನಿಕ್ಕಿದರೆ ೫೩೯
ಹಡಪ ಚಾಮರ ಸುರಗಿ ೫೬೭
ಹದಿರಿನ ಹಗರಣಗಿತ್ತಿ ೫೩೨
ಹಲವು ಜನ್ಮಂಗಳಲ್ಲಿ ೫೦೮
ಹಲುಬಿ ದಯದ ದಾಸೋಹವ ೫೮೮
ಹಾಲು ಹಣ್ಣು ಬೇಳೆ ಬೆಲ್ಲದ ೫೬೮
ಹೇಲುಚ್ಚೆಯ ಕೊಂಡ ೫೨೯

## ಗಣದಾಸಿ ವೀರಣ್ಣನ ವಚನ


| | | | |
|---|---|---|---|
| ಅಂದಿನವರಿಗೆ ಅಷ್ಟಾವರಣವು | ೬೩೨ | ದೇಹದೊಡನೆ ತ್ರಿದೋಷ | ೬೫೪ |
| ಅಂದಿನವರಿಗೆ ಪರುಷನಿಪ್ಪುದು | ೬೪೫ | ಧ್ಯಾನ ಧಾರಣ ಸಮಾಧಿ | ೬೫೭ |
| ಅಖಂಡ ಗೋಳಕಾಕಾರ | ೬೫೩ | ನಮ್ಮ ಗಣಂಗಳ ಸಹವಾಸ | ೬೩೬ |
| ಅಷ್ಟಾವರಣಗಳು ಯಾರಿಗೆ | ೬೪೭ | ನಾಲ್ಕು ವೇದ ಆರು ಶಾಸ್ತ್ರ | ೬೫೬ |
| ಆದಿ ಮಧ್ಯ ಅವಸಾನ | ೬೩೮ | ನಿರಾಕಾರ ಪರವಸ್ತು | ೬೪೩ |
| ಇನ್ನು ಇಷ್ಟಲಿಂಗದ | ೬೬೨ | ನಿರಾಕಾರ ಪರವಸ್ತು | ೬೫೯ |
| ಇನ್ನು ಲಿಂಗಕ್ಕೆ | ೬೬೧ | ಪಾದ ಪೂಜೆಯ ಮಾಡಿ | ೬೨೪ |
| ಇಷ್ಟ ಲಿಂಗಕ್ಕೆ | ೬೬೦ | ಪ್ರಸಾದಿ ಪ್ರಸಾದಿಗಳೆಂದು | ೬೨೬ |
| ಈರೇಳು ಲೋಕವನೊಳಕೊಂಡ | ೬೨೯ | ಬಸವ ನೀಲಲೋಚನೆ | ೬೩೫ |
| ಎನ್ನ ಪಶ್ಚಿಮದಲ್ಲಿ | ೬೩೪ | ಭಕ್ತಗಣಂಗಳು | ೬೪೧ |
| ಓಂಕಾರ ನಾದವು | ೬೪೦ | ಲಿಂಗದೊಳಗೆ ಅಖಿಳಾಂಡ | ೬೫೮ |
| ಕುಲ ಎಷ್ಟು ಎಂದಡೆ | ೬೫೦ | ಲಿಂಗವ ಪೂಜಿಸಿ | ೬೩೭ |
| ಗುರುಭಕ್ತರಾದವರು | ೬೪೯ | ಲಿಂಗವೆ ನಿಮ್ಮ ನೆನೆವ | ೬೪೬ |
| ಗುರುಭಕ್ತರು ವಾರ ತಿಥಿ | ೬೪೨ | ಲಿಂಗಾಂಗ ಸಂಗ ಸಮರಸದ | ೬೨೮ |
| ಗುರುಲಿಂಗ ಜಂಗಮಾರ್ಚನೆಯ | ೬೨೭ | ಲಿಂಗಾರ್ಚನೆಯ | ೬೨೫ |
| ಗುರುಲಿಂಗ ಶಿವಭಕ್ತ | ೬೩೩ | ವಸ್ತುವೆಂದಡೆ | ೬೪೪ |
| ಗುರುವೆ ಪರಶಿವನು | ೬೨೩ | ಶಿವನು ಗುರುಭಕ್ತರ | ೬೩೧ |
| ಘಟಾಕಾಶ ಮಹಾಕಾಶ | ೬೪೮ | ಶಿವಭಕ್ತ ಆವ | ೬೫೧ |
| ಜೀವನ್ಮುಕ್ತಿ ಯಾವುದೆಂದಡೆ | ೬೫೫ | ಸತ್ತು ಚಿತ್ತು ಆನಂದ | ೬೩೦ |
| ತಮಂಧಾಕಾರದೊಳು | ೬೩೯ | ಸಹಜ ಶಿವಭಕ್ತರಾದವರು | ೬೫೨ |


## ಗುರುಸಿದ್ಧದೇವರ ವಚನ


| | | | |
|---|---|---|---|
| ಅಂಗದ ಮೇಲೆ ಲಿಂಗವಧರಿಸಿ | ೭೦೩ | ಅಯ್ಯ ಇಂತು ಶಿಖಿ ಕರ್ಪೂರ | ೭೫೭ |
| ಅಯ್ಯ ಅರ್ಧಚಂದ್ರಾಕೃತಿ | ೭೫೦ | ಅಯ್ಯ ಇದೆ ಮಹಾಪ್ರಭುವಿನ | ೭೫೮ |
| ಅಯ್ಯ ಆಚರಣೆಯಲ್ಲಿ | ೭೪೦ | ಅಯ್ಯ ಇನ್ನು ಪ್ರವೃತ್ತಿ | ೭೩೫ |
| ಅಯ್ಯ ಇಂತು ಅನಾದಿ | ೭೬೧ | ಅಯ್ಯ ಇನ್ನು ಹಠಯೋಗವ | ೭೩೬ |
| ಅಯ್ಯ ಇಂತು ಕಲ್ಯಾಣ | ೭೬೦ | ಅಯ್ಯ ಎನ್ನ ಕರಮನಭಾವ | ೭೦೮ |
| ಅಯ್ಯ ಇಂತು ನಿರಂಜನ | ೭೬೩ | ಅಯ್ಯ ಏಕವಿಂಶತಿ ದೀಕ್ಷೆಯ | ೭೪೨ |
| ಅಯ್ಯ ಇಂತು ನಿರಾಮಯ | ೭೫೯ | ಅಯ್ಯ ಒಂದು ಅನಾದಿ | ೭೨೦ |
| ಅಯ್ಯ ಇಂತು ಮಹಾಪ್ರಮಥ | ೭೬೨ | ಅಯ್ಯ ಒಂದು ಜೀವಾತ್ಮನೆ | ೭೦೦ |

ಅಯ್ಯ ಕುಂಡಲಾಕೃತಿ ೭೪೯
ಅಯ್ಯ ಕೇಳ ಪ್ರಮಥಗಣ ೭೩೧
ಅಯ್ಯ ಗುರುಕರಜಾತನಾಗಿ ೭೪೪
ಅಯ್ಯ ಗುರುಜಂಗಮದ ೭೪೧
ಅಯ್ಯ ಘನಮಹಾ ೭೧೬
ಅಯ್ಯ ಚಿದ್ಘನತೀರ್ಥವ ೭೩೭
ಅಯ್ಯ ಜ್ಯೋತಿರಾಕೃತಿ ೭೫೨
ಅಯ್ಯ ತಾರಕಾಕೃತಿ ೭೫೬
ಅಯ್ಯ ತಾರಕಾಕೃತಿ ೭೪೭
ಅಯ್ಯ ದಂಡಕಾಕೃತಿ ೭೪೮
ಅಯ್ಯ ದರ್ಪಣಾಕೃತಿ ೭೫೧
ಅಯ್ಯ ನಿಃಕಲಾಕೃತಿ ೭೫೩
ಅಯ್ಯ ನಿಃಶೂನ್ಯಾಕೃತಿ ೭೫೪
ಅಯ್ಯ ನಾದನಾಳಂಗಳು ೭೪೬
ಅಯ್ಯ ನಿನ್ನ ಅಷ್ಟತನುವಿನ ೭೧೧
ಅಯ್ಯ ನಿನ್ನ ಚಿದಂಗದ ೭೨೨
ಅಯ್ಯ ನಿನ್ನ ಷಟ್ಚಕ್ರಂಗಳಲ್ಲಿ ೭೨೧
ಅಯ್ಯ ನಿನ್ನ ಸ್ವಾತ್ಮಜ್ಞಾನದಿಂದ ೭೧೮
ಅಯ್ಯ ನಿರಂಜನಾಕೃತಿ ೭೫೫
ಅಯ್ಯ ನಿರಾಲಂಬ ೭೩೯
ಅಯ್ಯ ನಿರ್ವಂಚಕತ್ವದಿಂದ ೭೩೮
ಅಯ್ಯ ನಿವೃತ್ತಿ ಮಾರ್ಗ ೭೩೪
ಅಯ್ಯ ನಿಷ್ಕಲ ಪರಶಿವ ೬೯೭
ಅಯ್ಯ ಬಸವ ಮೊದಲಾದ ೭೧೭
ಅಯ್ಯ ಪರಮ ಪತಿವ್ರತೆಗೆ ೭೨೪
ಅಯ್ಯ ಪರಮ ಸಚ್ಚಿದಾನಂದ ೭೧೩
ಅಯ್ಯ ಪ್ರಥಮದಲ್ಲಿ ೭೧೦
ಅಯ್ಯ ಪ್ರವೃತ್ತಿಮಾರ್ಗ ೭೩೩
ಅಯ್ಯ ಮರ್ತ್ಯದ ೭೧೯
ಅಯ್ಯ ವರಕುಮಾರ ೭೦೪
ಅಯ್ಯ ವರಕುಮಾರ ೭೦೯
ಅಯ್ಯ ವರಕುಮಾರ ೭೪೩
ಅಯ್ಯ ವರವೀರಶೈವ ೭೧೫
ಅಯ್ಯ ಷೋಡಶ ಕಮಲ ೭೩೨
ಅಯ್ಯ ಶರಣಸತಿ ಲಿಂಗಪತಿ ೭೨೬
ಅಯ್ಯ ಶ್ರೀಗುರುದೇವನು ೭೧೪
ಅಯ್ಯ ಶ್ರೀಗುರುಲಿಂಗಜಂಗಮ ೭೧೨
ಅಯ್ಯ ಶ್ರೀಗುರುಲಿಂಗ ಜಂಗಮ ೭೨೭
ಅಯ್ಯ ಶ್ರೀಗುರುಲಿಂಗ ಜಂಗಮ ೭೩೦
ಅಯ್ಯ ಶ್ರೀಗುರುಲಿಂಗ ಜಂಗಮ ೭೪೫
ಅಯ್ಯ ಸತ್ತುಚಿತ್ತಾನಂದ ೭೨೩
ಅಯ್ಯ ಸತ್ತು ಚಿತ್ತಾನಂದ ೭೨೮
ಅಯ್ಯ ಸತ್ಯಸದಾಚಾರ ೭೨೯
ಅಯ್ಯ ಸತ್ಯ ಸದಾಚಾರಲಿಂಗ ೭೨೫
ಅಯ್ಯ ಸದ್ಗುರು ಬಸವಣ್ಣನೆ ೬೯೯
ಆ ಇಷ್ಟ ಮಹಾಲಿಂಗವೆ ೬೭೧
ಆಚಾರ ಅರುಹಿನಲ್ಲಿ ೬೯೪
ಆ ಮಹಾಲಿಂಗವೆ ೬೭೦
ಇಂತೀ ಅಷ್ಟಾವರಣ ೬೯೬
ಇಂತು ಸದ್ಗುರು ೭೦೧
ಇಂದ್ರಿಯಂಗಳ ೭೦೭
ಎಲೆ ವರಕುಮಾರ ೬೯೮
ಕಾಳಿಕಾದೇವಿ ಚಾಮುಂಡಿ ೭೦೨
ಕಿಂಕರತ್ವದಿಂದ ೬೬೪
ಗುರುವೆ ಸರ್ವಲೋಕಜನಕ ೬೬೭
ಗುರುವೆ ಸುಜ್ಞಾನ ಮೂರ್ತಿ ೬೬೮
ಜಂಗಮವೆ ಮಂತ್ರಮೂರ್ತಿ ೬೭೪
ಜಂಗಮವೆ ಮಹಾರುದ್ರ ೬೭೩
ತನುತ್ರಯಂಗಳಲ್ಲಿ ೬೯೩
ದೀಕ್ಷಾತ್ರಯಂಗಳಲ್ಲಿ ೬೯೩
ನಿಚ್ಚ ಪ್ರಸಾದ ೭೦೫
ಬಸವಣ್ಣ ಚೆನ್ನಬಸವಣ್ಣ ೭೦೭

ಭೃತ್ಯತ್ವದಿಂದ ಕಾಯಶುದ್ಧ ೬೬೫
ಶ್ರೀಗುರುಲಿಂಗ ಜಂಗಮದ ೬೮೩
ಶ್ರೀಗುರುಲಿಂಗ ಜಂಗಮದ ೬೮೨
ಶ್ರೀಗುರುಲಿಂಗ ಜಂಗಮದ ೬೭೯
ಶ್ರೀಮಹಾಚಿನ್ಮಯ ೬೮೬
ಶ್ರೀ ಮಹಾಮಂತ್ರವ ೬೮೮
ಶ್ರೀ ಮಹಾಮಂತ್ರವ ೬೮೯
ಶ್ರೀ ಗುರುಲಿಂಗ ಜಂಗಮದ ೬೮೦
ಶ್ರೀ ಗುರುಲಿಂಗ ಜಂಗಮದ ೬೮೫
ಶ್ರೀ ಗುರುಲಿಂಗ ಜಂಗಮದ ೬೭೭
ಶ್ರೀ ಗುರುಲಿಂಗ ಜಂಗಮದ ೬೭೬
ಶ್ರೀ ಗುರುವಿನ ಕರ ಕಂಗಳು ೬೬೯
ಹರಹರ ಶಿವಶಿವ ೬೯೦
ಹರಹರ ಶಿವಶಿವ ೬೬೩
ಹರಹರ ಶಿವಶಿವ ೬೬೬
ಹರಹರ ಶಿವಶಿವ ೬೭೨
ಹರಹರ ಶಿವಶಿವ ೬೭೫
ಹರಹರ ಶಿವಶಿವ ೬೭೮
ಹರಹರ ಶಿವಶಿವ ೬೮೧
ಹರಹರ ಶಿವಶಿವ ೬೮೪
ಹರಹರ ಶಿವಶಿವ ೬೮೭
ಹರಹರ ಶಿವಶಿವ ೬೯೨
ಹೀಂಗೆ ಪೂರ್ವಪುರಾತನರ ೬೯೧

## ಗುಹೇಶ್ವರಯ್ಯನ ವಚನ

ಅಂಗಗರಡಿಯೊಳು ೮೦೪
ಅಕ್ಷರದ ಆದಿಮೂಲ ೭೯೦
ಅರಿವಿನ ನಡೆ ೭೭೧
ಅರಿಷಡ್ವರ್ಗವೆಂಬ ೭೮೦
ಅರಿಷಡ್ವರ್ಗವೆಂಬ ೭೮೧
ಅರುಹಿನ ಕುರುಹ ೮೦೩
ಅಷ್ಟವಿಧಾರ್ಚನಂ ೭೬೬
ಆಕಾಶದಲ್ಲಿ ಹಾರಿಹೋಹ ೭೬೮
ಆದಿ ಅನಾದಿಗಳಿಲ್ಲದಂದಿನ ೮೦೧
ಆರು ಗುಣವೆಂಬೋ ೭೯೭
ಆರುಚಕ್ರದಲ್ಲಿ ೭೯೫
ಆರು ಲಿಂಗದಲ್ಲಿ ೭೭೯
ಆರು ಸ್ಥಲದಲ್ಲಿ ೭೬೪
ಇಂದ್ರದಳದಲ್ಲಿ ೭೮೨
ಇಷ್ಟಲಿಂಗವೆಂಬ ೭೮೮
ಈಶ್ವರಂಗೆ ಗುಹೇಶ್ವರ ೭೭೭
ಓಡು ಗುಂಡುಗಳಿಗೆ ೭೬೯
ಕಲಿಯುಗ ಮೊದಲಾದ ೭೭೩
ಕವಿಗಳುಯೆಂದು ಹೆಸರಿಟ್ಟು ೭೯೩
ಕಳ್ಳ ಆಡಿನ ಕಾಲ ಕಡಿದು ೮೦೨
ಗುರುಲಿಂಗ ಉಪದೇಶ ೭೯೪
ಗುರುಲಿಂಗ ಜಂಗಮದ ೭೮೯
ಗುರುಲಿಂಗ ಜಂಗಮವೆಂದು ೭೭೫
ಗುರುಹೃದಯ ಚಿನ್ಮಯ ೭೮೫
ಗುಹೇಶ್ವರ ಎಂಬ ಅಕ್ಷರದ ೮೦೦
ತಾರಿ ತಂಡಸಿ ತೇಗು ೭೬೨
ದಾನಿಯಾದಡೇನು ೮೦೫
ನಾನು ಭಕ್ತ ನಾನು ಶರಣ ೭೬೫
ನಾನು ಭಕ್ತ ನಾನು ಶರಣ ೭೭೬
ಪಾದ ಪ್ರಾಸ ಗಣವ ೭೯೨
ಪ್ರಾಣಲಿಂಗವ ಬಲ್ಲೆ ೭೮೬
ಪೃಥ್ವಿಯ ಮಧ್ಯದಲ್ಲೊಂದು ೭೯೬
ಪೃಥ್ವಿಯ ಮೂಲವನಳಿದು ೭೯೧
ಫಲವನಳಿದವಂಗೆ ೭೮೭
ಬರಿದೆ ಶಿವಶಿವಯೆಂದಡೆ ೮೦೬
ಬಿದಿರ ಲಳಿಗೆಯ ತಂದು ೭೮೩

ಬ್ರಹ್ಮ ಗುರು ವಿಷ್ಣುಲಿಂಗ ೭೭೮
ಬ್ರಹ್ಮೇಶ್ವರಿ ೭೮೪
ಭಕ್ತಿ ಜ್ಞಾನ ವೈರಾಗ್ಯ ೭೯೮
ಭಕ್ತಿಯನಡೆ ಭಕ್ತಿಯ ನುಡಿ ೭೭೨
ಮನಹೀನ ಬಂಟನ ಕೈಯಲ್ಲಿ ೭೭೪
ಮೇರುಗಿರಿ ಉದಯಗಿರಿ ೭೯೯
ಲಿಂಗದ ನಡೆ ಲಿಂಗದ ನುಡಿ ೭೭೦

## ಚೆನ್ನಯ್ಯನ ಕಂಡಿತದ ವಚನ

ಅಂಗದ ಮೇಲೆ ಲಿಂಗವ ೮೪೬
ಅಂಗವೇ ಶರಣನಾದ ೮೩೫
ಅಚ್ಚಪ್ರಸಾದ ನಿಚ್ಚಪ್ರಸಾದ ೮೨೦
ಅಚ್ಚಪ್ರಸಾದವೆಂಬುದು ೮೨೧
ಆತನ ಅಗಲೊಳಗೆ ೮೪೭
ಇಷ್ಟ ಪ್ರಾಣ ಭಾವ ೮೩೧
ಇಷ್ಟಲಿಂಗ ಇನ್ನೂರಹದಿನಾರು ೮೩೨
ಇಷ್ಟಲಿಂಗಕ್ಕೆ ತೋರಿ ೮೩೪
ಇಷ್ಟಲಿಂಗವೇ ಅನಾದಿ ೮೫೮
ಏನೂ ಏನೂ ಇಲ್ಲದ ೮೪೯
ಗುರು ಹಸ್ತಮಸ್ತಕ ಸಂಯೋಗ ೮೪೦
ಜಲವಂ ತೊಳೆದು ಕುಡಿದು ೮೧೭
ತೀರ್ಥಃ ಜಂಗಮಾನಾಂ ೮೧೯
ನರದೇಹಿನಾಂ ನಾಸ್ತಿಲಿಂಗಂ ೮೩೮
ನಾನಾ ವೇಳೆಯಲ್ಲಿ ೮೪೮
ಪಂಚತತ್ವದೊಳು ಪಂಚಕೃತಿ ೮೨೯
ಪಂಚಮೂರ್ತಿಯ ತತ್ವ ೮೩೦
ಪಾದೋದಕ ಪ್ರಸಾದ ೮೫೭
ಪಾದೋದಕ ಪಾದೋದಕ ೮೫೪
ಪಾದೋದಕವ ಕೊಂಡೆವೆಂಬ ೮೫೫
ಪ್ರಸಾದದಿಂದ ತೋರಿತ್ತು ೮೨೩
ಪ್ರಸಾದ ಪ್ರಸಾದವೆಂದು ೮೫೦
ಪ್ರಸಾದ ಪ್ರಸಾದವೆಂದು ೮೫೧
ಪ್ರಸಾದ ಪ್ರಸಾದವೆಂಬುವದು ೮೫೨
ಪ್ರಸಾದವ ಕೊಂಡ ಶರಣನ ೮೨೪
ಪ್ರಸಾದವ ಕೊಂಡ ಶರಣನ ೮೨೫
ಪ್ರಸಾದವ ಕೊಂಡ ಶರಣನ ೮೨೬
ಪ್ರಸಾದವ ಕೊಂಡೆ ೮೫೩
ಪ್ರಸಾದವೆಂದು ನುಡಿವಿರಿ ೮೨೮
ಪ್ರಸಾದವೆಂಬುದು ನಿರ್ಮಳ ೮೨೨
ಪ್ರಸಾದ ಸೋಂಕಿದಾತ ೮೨೭
ಭವಿಮಾಡಿದುದನುಂಡರೆ ೮೪೪
ಭವಿಮಿಶ್ರವೆಂಬಿರಿ ೮೪೩
ಮಲದೇಹಿಗಳ ಅಂಗದ ಮೇಲೆ ೮೩೨
ಯಥಾ ಪಾದೋದಕಂ ೮೧೮
ಲಿಂಗ ಸೋಂಕಿ ಲಿಂಗ ೮೪೧
ಲಿಂಗಾಂಗಿ ಲಿಂಗಪ್ರಾಣಿಗಳು ೮೪೨
ಲಿಂಗಾಂಗಿ ಲಿಂಗಪ್ರಾಣಿ ೮೪೫
ವೃಕ್ಷಕ್ಕೆ ಭೂಮಿ ೮೩೩
ಶಿವಲಿಂಗ ಸಂಸ್ಕಾರ ಸಂಪನ್ನ ೮೩೬
ಶಿವಲಿಂಗಾಂಗಿ ಲಿಂಗಪ್ರೇಮಿ ೮೩೯
ಶ್ರೀ ಗುರುಲಿಂಗ ಜಂಗಮದ ೮೫೬

## ಜಕ್ಕಣಯ್ಯನ ನಿರಾಳಮಂತ್ರಗೋಪ್ಯ

ಅ
ಅಂಗಕಳೆ ಲಿಂಗದಲ್ಲಿ ೧೨೧೨
ಅಂಗಕ್ಕೆ ಗುರುವಾದನಯ್ಯ ೧೨೪೨
ಅಂಗಕ್ಕೆ ಆಚಾರ ೧೨೮೨
ಅಂಗಕ್ಕೆ ಆರುದಿನ ೧೪೫೩
ಅಂಗಕ್ಕೆ ಆರುದಿನ ೧೫೪೯

ಅಂಗಕ್ಕೆ ಲಿಂಗವೇ ಆಧಾರ ೧೩೫೦
ಅಂಗ ಗುಣಾದಿಗಳನಳಿದು ೧೧೨೭
ಅಂಗಡಿಯ ರಾಜಬೀದಿಯಲ್ಲಿ ೯೫೫
ಅಂಗದ ಕಳವಳವ ೧೧೫೪
ಅಂಗದ ಗುಣಾದಿಗಳ ೧೧೮೨
ಅಂಗದ ಗುಣಾದಿಗಳನಳಿದು ೧೩೨೦
ಅಂಗದ ಮೇಲೆ ಶಿವಲಿಂಗವ ೧೨೫೭
ಅಂಗದ ಮೇಲೆ ಶಿವಲಿಂಗವ ೧೬೮೩
ಅಂಗದೊಳಗಿಪ್ಪಲಿಂಗವನು ೧೬೦೧
ಅಂಗದೊಳಗೊಂದು ೧೦೬೩
ಅಂಗದೊಳಹೊರಗಿಪ್ಪ ೧೩೪೮
ಅಂಗನೆಯರು ಆರುಮಂದಿ ೧೬೨೩
ಅಂಗಪಟ್ಟಣದೊಳಗೆ ೧೩೯೮
ಅಂಗಪ್ರಕೃತಿಯನಳಿದು ೧೧೫೩
ಅಂಗಪ್ರಕೃತಿಯನಳಿದು ೧೩೫೭
ಅಂಗವಿಲ್ಲದ ನಾರಿಯ ೧೫೭೨
ಅಂಗವಿಲ್ಲದ ನಾರಿಯು ೧೬೦೦
ಅಂಗವಿದ ಪುರುಷನು ೧೬೧೨
ಅಂಗವಿಲ್ಲದ ಬಾಲೆಯು ೧೧೫೬
ಅಂಗವಿಲ್ಲದ ಹಂಸಗೆ ೧೧೯೭
ಅಂಗವೆಂಬ ಗದ್ದುಗೆಯ ೧೦೮೩
ಅಂಗವೆಂಬ ದೇಗುಲದೊಳಗೆ ೧೪೬೯
ಅಂಗವೆಂಬ ಪಟ್ಟಣದೊಳಗೆ ೧೧೧೭
ಅಂಗವೆಂಬ ಭೂಮಿಯಲ್ಲಿ ೧೫೨೨
ಅಂಗವೆಂಬ ಶಿವಾಲಯ ೧೪೬೪
ಅಂಗಲಿಂಗ ಸಂಬಂಧವ ೧೩೪೫
ಅಂಗಲಿಂಗ ಸಮರಸವಾದ ೧೬೩೧
ಅಂಗಲಿಂಗ ಸಮರಸವಾದಲ್ಲದೆ ೧೬೧೯
ಅಂತಃಕರಣಚತುಷ್ಟಯ ೧೦೩೧
ಅಂತಃಕರಣಚತುಷ್ಟಯ ೧೧೯೬
ಅಂತಃಕರಣಚತುಷ್ಟಯ ೧೨೯೬
ಅಂತರಂಗ ಬಹಿರಂಗ ೧೨೧೭
ಅಂತರಂಗ ಬಹಿರಂಗ ೧೫೪೭
ಅಂತರಂಗದ ಬೆಳಗಿನೊಳು ೧೨೯೫
ಅಂತರಂಗದ ಬೆಳಗಿನೊಳು ೧೩೦೫
ಅಂತರಂಗದ ಬೆಳಗಿನೊಳು ೧೩೨೯
ಅಂತರಂಗದಲ್ಲಿ ಜ್ಞಾನ ೧೧೪೫
ಅಂತರಂಗದಲ್ಲಿ ಗುರು ೧೨೩೭
ಅಂತರಂಗದಲ್ಲಿ ವಸ್ತುವ ೧೨೩೯
ಅಂತರಂಗದಲ್ಲಿ ಶುದ್ಧವಾದ ೧೨೬೪
ಅಂತರಂಗದ ಸುಳುವಿನ ೯೫೨
ಅಂತರಂಗ ಬೆಳಗಿನ ೧೨೧೩
ಅಂತಿರ್ದಬ್ರಹ್ಮದ ೧೧೩೮
ಅಂಬರದ ಮನೆಯೊಳಗೆ ೮೭೮
ಅಂಬರದ ಮನೆಯೊಳಗೆ ೯೨೫
ಅಂಬರದ ಮನೆಯೊಳಗೆ ೧೪೯೩
ಅಂಬರದ ಮನೆಯೊಳಗೆ ೧೬೩೨
ಅಖಿಳಕೋಟಿ ಬ್ರಹ್ಮಾಂಡ ೯೨೧
ಅಗಮ್ಯ ಅಗೋಚರ ೧೫೫೨
ಅಗ್ನಿ ಗಿರಿಯ ಪಟ್ಟಣದ ೯೪೬
ಅಜನ ಸ್ಥಾನಗಳಿಂದ ೧೩೩೨
ಅಜಹರಿಸುರನಾರದರು ೧೨೦೭
ಅಜ್ಞಾನವೆಂಬ ಕರ್ಮ ೧೧೨೩
ಅಣೋರಣೀಯಾನ್ ೧೫೬೩
ಅತ್ತೆಯ ಬಸುರಲಿ ೧೬೧೮
ಅನಂತಕೋಟಿ ಬ್ರಹ್ಮಾಂಡ ೧೧೦೦
ಅನಂತಮುಖ ೧೫೭೧
ಅನಾದಿಯ ಜಂಗಮವು ೧೩೦೬
ಅನಾದಿಲಿಂಗವು ಕರಕ್ಕೆ ೧೨೩೮
ಅನಾದಿ ಸದ್ಗುರುವೆ ೧೪೫೮
ಅಮಲಬ್ರಹ್ಮದಲ್ಲಿ ೯೧೬
ಅರಿವು ಮರವ ೧೦೯೫

ಅರುಹಿನ ಮನೆಯೊಳಗೆ ೧೦೮೨
ಅಷ್ಟ ಕುಲಪರ್ವತದ ೧೦೨೦
ಅಷ್ಟಕುಲಪರ್ವತದ ೧೯೮
ಅಷ್ಟಕುಲಪರ್ವತದ ೧೫೮೦
ಅಷ್ಟದಳದಮೇಲೆ ೧೪೪೫
ಅಷ್ಟಮದಂಗಳ ಸುಟ್ಟು ೧೩೫೫
ಅಷ್ಟಮಂದಿಗಳೊಳಗೆ ೧೦೯೪
ಅಷ್ಟಾಂಗಯೋಗದ ೧೬೨೬
ಅಹಂಕಾರವೆಂಬ ೧೧೪೮
ಅಹಂಕಾರಗಳಿಲ್ಲದಂದು ೮೬೧

ಆ

ಆಕಾರ ನಿರಾಕಾರವಿಲ್ಲದಂದು ೯೬೦
ಆಕಾರ ನಿರಾಕಾರವಿಲ್ಲದಂದಿನ ೧೦೩೪
ಆಕಾರಲಿಂಗದ ಸಂಗದಿಂದ ೧೫೯೨
ಆಕಾರವಳಿದು ನಿರಾಕಾರ ೧೨೧೯
ಆಕಾಶಕ್ಕೆ ಬೈಗು ೧೧೬೪
ಆಕಾಶದ ಮೇಲೆ ೯೦೭
ಆಕಾಶದ ಮೇಲೆ ೧೦೧೬
ಆಕಾಶದ ಮೇಲೆ ೧೩೧೫
ಆಕಾಶದ ಮೇಲೊಬ್ಬ ೧೨೨೨
ಆಕಾಶವೆಂಬ ಲಿಂಗಕ್ಕೆ ೯೮೩
ಆಚಾರಲಿಂಗ ಗುರುಲಿಂಗ ೮೯೬
ಆಚಾರಲಿಂಗ ಗುರುಲಿಂಗ ೧೩೦೮
ಆಚಾರಲಿಂಗ ಗುರುಲಿಂಗ ೧೬೩೬
ಆಚಾರಲಿಂಗದ ಬೆಳಗಿನೊಳು ೧೩೧೮
ಆಚಾರವನರಿತು ನಡೆವ ೧೨೪೮
ಆಚಾರ ಶುದ್ಧವಾದ ೧೨೯೦
ಆ ಜ್ಯೋತಿಯು ೧೧೩೭
ಆಜ್ಞೇಯಚಕ್ರದಲ್ಲಿಪ್ಪ ೧೫೩೩
ಆಜ್ಞೇಯಚಕ್ರದಲ್ಲಿ ೧೬೨೯
ಆಜ್ಞೇಯಚಕ್ರದೊಳಗೆ ೧೨೫೧
ಆಟವ ಮೀರಿದ ೯೦೪
ಆತ್ಮನೆಂಬ ಅಂಗಕ್ಕೆ ೧೨೬೫
ಆತ್ಮನೆಂಬ ಅಂಗದಲ್ಲಿ ೧೨೨೧
ಆತ್ಮನೆಂಬ ಅಂಗಕ್ಕೆ ೧೨೬೫
ಆತ್ಮನೆಂಬ ಪ್ರಭೆಯಲ್ಲಿ ೧೩೧೭
ಆತ್ಮನೆಂಬ ಪ್ರಭೆಯಲ್ಲಿ ೧೪೨೪
ಆತ್ಮನೆಂಬ ಬೆಳಗಿನಿಂದ ೧೬೧೩
ಆತ್ಮನೆಂಬ ಬೆಳಗಿನೊಳು ೧೦೨೬
ಆದಿ ಅನಾದಿ ಇಲ್ಲದಂದು ೯೩೫
ಆದಿ ಅನಾದಿಗಳಿಲ್ಲದಂದು ೮೭೨
ಆದಿ ಅಪಾನದಲ್ಲಿ ೧೦೨೭
ಆದಿಯನರಿತು ಭಕ್ತ ೧೪೬೬
ಆದಿಯ ಬೀಜ ಶಿವ ೧೨೫೦
ಆದಿಯ ಲಿಂಗವು ೧೨೦೧
ಆದಿಯಲ್ಲಿ ಉದಯವಾದ ೯೦೮
ಆದಿಯಲ್ಲಿ ಒಬ್ಬ ೧೦೧೨
ಆದಿಯಲ್ಲಿ ಪರಬ್ರಹ್ಮ ೧೦೧೮
ಆದಿಯಲ್ಲಿ ಒಂದುಲಿಂಗ ೯೭೧
ಆದಿಯಲ್ಲಿ ಒಬ್ಬ ದೇವನು ೧೨೬೭
ಆದಿಯಲ್ಲಿ ಒಬ್ಬ ಶರಣನು ೧೧೦೭
ಆದಿಯಲ್ಲಿ ಒಬ್ಬ ಶಿವಶರಣನು ೯೪೦
ಆದಿಯಲ್ಲಿ ಶಿವಾತ್ಮನು ೧೧೨೯
ಆದಿಯಲ್ಲಿ ಸ್ವಯಜ್ಞಾನಿ ೧೧೭೦
ಆದಿಯ ಸಂಗದಿಂದ ೯೪೫
ಆದಿಯ ಸಂಗದಿಂದ ೯೯೪
ಆದಿಯಿಂದಲಾದ ಪುರುಷ ೧೫೦೭
ಆದಿಲಿಂಗದಸಂಗದಿಂದ ೧೩೨೨
ಆಧಾರಚಕ್ರದಲ್ಲಿ ೧೧೮೦
ಆಧಾರದಲ್ಲಿ ಬ್ರಹ್ಮ ೧೦೧೧
ಆಧಾರವೆಂಬ ಹಾವುಗೆ ೧೦೨೮
ಆಧಾರ ಸ್ವಾಧಿಷ್ಠಾನ ೧೨೭೯

ಆನೆಮೊದಲು ೯೬೧
ಆರರಿಂದತತ್ತ ೧೪೬೩
ಆರು ಕಂಬದ ದೇಗುಲ ೧೧೦೫
ಆರು ಕಂಬದ ದೇಗುಲದೊಳಗೆ ೧೩೮೬
ಆರು ಕಂಬದ ಮನೆ ೧೪೧೧
ಆರು ಕಂಬದ ಮೇಲೆ ೧೦೮೮
ಆರು ಕಂಬದ ಶಿವಾಲಯ ೯೦೯
ಆರು ಕಂಬದ ಶಿವಾಲಯ ೧೧೭೮
ಆರು ಕಾಲುಳ್ಳ ೧೪೧೯
ಆರು ಕೇರಿಗಳಲ್ಲಿ ೧೨೯೧
ಆರು ಕೇರಿಯ ಮುಂದೆ ೯೮೭
ಆರು ಕೋಟೆಯ ೧೦೫೪
ಆರ ಗೊಡವೆಯಿಲ್ಲದೆ ೧೨೮೯
ಆರುಚಕ್ರ ಆರು ಮೂರ್ತಿ ೧೫೩೨
ಆರು ಚಕ್ರಂಗಳಲ್ಲಿ ೧೫೨೯
ಆರು ಚಕ್ರಂಗಳಲ್ಲಿ ೧೬೧೬
ಆರು ತತ್ವದ ಮೇಲೆ ೧೫೭೯
ಆರು ದೇಶದ ಮೇಲೆ ೧೩೦೨
ಆರು ನೆಲೆಯ ಮಂಟಪ ೯೫೦
ಆರು ನೆಲೆಯ ಮಂಟಪ ೯೮೮
ಆರು ನೆಲೆಯ ಮಂಟಪದ ೧೨೨೦
ಆರು ಬಣ್ಣದ ಪಟ್ಟಣ ೧೪೨೬
ಆರು ಬಾಗಿಲ ಮುಂದೆ ೧೦೧೫
ಆರು ಬುಡದ ಮೇಲೆ ೧೧೧೪
ಆರು ಮಂದಿ ಅಂಗನೆಯರು ೧೫೧೨
ಆರು ಮಂದಿರದೊಳಗೆ ೧೪೭೯
ಆರು ಮತಗಳಿಲ್ಲದೆ ೧೨೦೪
ಆರು ಮೂರ್ತಿಗಳ ೮೮೩
ಆರು ಮೂರು ಕೇರಿಯ ೧೦೩೬
ಆರು ಮೂರು ದೇಶದ ೧೧೭೫
ಆರು ಮೂರು ಮಂಟಪದ ೧೨೮೦
ಆರು ವರ್ಣದ ಅಂಗನೆ ೧೩೯೩
ಆರು ವರ್ಣದ ಪಕ್ಷಿ ೧೩೭೬
ಆರು ಶಿಲೆಯ ಮಂಟಪ ೧೫೭೮
ಆರು ಸ್ಥಲದಲ್ಲಿ ೧೧೨೩
ಆರು ಸ್ಥಲದಲ್ಲಿ ೧೩೬೭
ಆರು ಸ್ಥಲದಲ್ಲಿ ೧೪೦೪
ಆರು ಸ್ಥಲದಲ್ಲಿ ೧೫೯೭
ಆವು ಹೋಗಿ ೧೦೫೭

ಇ

ಇಪ್ಪತ್ತೈದು ಕಂಬದ ೧೦೯೦
ಇಪ್ಪತ್ತೈದು ಗ್ರಾಮದ ೯೮೫
ಇಪ್ಪತ್ತೈದು ಗ್ರಾಮದ ೧೨೫೨
ಇಪ್ಪತ್ತೈದು ತಲೆಯ ೧೬೩೩
ಇಪ್ಪತ್ತೈದು ದೇಗುಲದ ೧೧೪೨
ಇಪ್ಪತ್ತೈದು ದೇಶದ ೧೨೮೧
ಇಪ್ಪತ್ತೈದು ನೆಲೆಯ ೧೩೫೬
ಇಪ್ಪತ್ತೈದು ಶಿವಾಲಯ ೧೪೧೦
ಇರುವೆಯ ಒಡಲಲ್ಲಿ ೧೦೦೮
ಇರುವೆಯ ಮಸ್ತಕದ ೧೪೧೫
ಇರುಳು ಹಗಲನುಂಗಿ ೧೬೦೩
ಇರುಳು ಹಗಲುಗಳೆಂಬ ೧೩೧೯
ಇರುಳು ಹಗಲೆಂಬೆರಡು ೧೫೯೫
ಇಷ್ಟಲಿಂಗದ ಕಳಾಭೇದ ೧೨೭೭
ಇಷ್ಟಲಿಂಗದ ಭೇದವ ೧೨೫೫
ಇಷ್ಟಲಿಂಗದ ಭೇದವ ೧೨೮೫
ಇಷ್ಟಲಿಂಗದಲ್ಲಿ ಗುರು ೧೨೮೬
ಇಷ್ಟಲಿಂಗದಲ್ಲಿ ಶುದ್ಧವಾಗಿ ೧೨೮೭
ಇಷ್ಟಲಿಂಗ ಪ್ರಾಣಲಿಂಗ ೧೨೪೬
ಇಷ್ಟಲಿಂಗ ಪ್ರಾಣಲಿಂಗ ೧೨೬೦
ಇಷ್ಟಲಿಂಗ ಪ್ರಾಣಲಿಂಗ ೧೪೬೧
ಇಷ್ಟಲಿಂಗವಿಡಿದು ಕಾಯ ೧೨೯೨

ಇಷ್ಟಲಿಂಗವಿಡಿದು ಗುರು ೧೩೩೪
ಇಷ್ಟಲಿಂಗವು ಪ್ರಾಣಲಿಂಗ ೧೩೦೯

**ಈ**

ಈಡಾಪಿಂಗಳ ೧೫೨೮
ಈ ಧರೆಯ ಮೇಲೆ ೧೨೮೪
ಈ ಧರೆಯ ಮೇಲೆ ೧೨೯೩
ಈರೇಳು ಭುವನವ ೧೧೧೯
ಈ ಲೋಕದೊಳಗೆ ೧೨೯೪

**ಉ, ಊ, ಋ**

ಉಚ್ಛ್ವಾಸ ನಿಶ್ವಾಸಂಗಳ ೯೫೮
ಉತ್ತಮ ಜ್ಞಾನದಿಂದ ೧೫೯೮
ಉದಯ ಕಾಲದಲ್ಲಿ ೧೩೭೩
ಉಪ್ಪು ಅಪ್ಪು ಕೂಡಿ ೧೫೫೯
ಉರಿಯ ಮೇಲೆ ೧೦೦೯
ಉರಿಯೊಳಗಣ ಪ್ರಕಾಶ ೧೪೧೭
ಉಲುವಡಗಿದ ಮರದ ೧೦೪೦
ಉಲುಹು ಅಡಗಿದ ೧೪೯೨
ಉಲುಹುವಡಗಿದ ೧೩೩೦
ಉಸಿರು ಉನ್ಮನಿಗೆ ೧೩೯೫
ಊರ ಮುಂದಳ ೯೯೯
ಊರ ಮುಂದಳ ೧೦೮೦
ಊರ ಮುಂದಳ ೧೫೯೩
ಊರ ಮುಂದಳ ೧೫೯೪
ಊರ ಮೇಲೆ ೧೧೧೩
ಊರಿಗೆ ಹೋಗುವ ೧೪೨೩
ಊರಿಗೆ ಹೋಗುವ ೧೪೭೧
ಊರೊಳಗಣ ಕಪ್ಪೆ ೯೬೬
ಊರೊಳಗಣ ನಾರಿಯು ೧೩೫೯
ಊರೊಳಗಣ ಮಾನವನು ೧೦೪೭
ಊರೊಳಗಣ ಸೂಳೆಯ ೯೫೩
ಊರೊಳಗಣ ಸೂಳೆಯು ೧೩೦೩
ಊರೊಳಗೆ ಆಡುವ ೧೧೨೦
ಊರೊಳಗೆ ಆನೆಯ ೧೩೫೧
ಊರೊಳಗೆ ಆರು ೧೪೮೨
ಊರೊಳಗೆ ಇರುವ ೧೧೮೪
ಊರೊಳಗೆ ಒಬ್ಬ ೯೯೦
ಊರೊಳಗೊಂದು ೧೨೩೩
ಊರೊಳಗೊಬ್ಬ ನಾರಿ ೯೧೧
ಊರೊಳಗೊಬ್ಬ ನಾರಿ ೧೦೦೫
ಊರೊಳಗೊಬ್ಬ ಹಗಲುಗಳ್ಳ ೧೦೧೦
ಋತುವಿಲ್ಲದ ಹಂಸ ೧೧೫೯

**ಎ, ಏ, ಐ**

ಎಂಟು ಮೇರುವೆಯ ೧೦೮
ಎನ್ನ ನಾನರಿಯದಂದು ೧೪೫೭
ಏನೂ ಇಲ್ಲದಲ್ಲಿ ಒಂದು ೧೧೧೦
ಏನೇನೂ ಇಲ್ಲದಲ್ಲಿ ೧೧೮೧
ಐದರಿಂದತ್ತತ್ತ ೧೬೧೪
ಐದು ಎಲೆಯ ೧೦೪೩
ಐದು ಕಂಬದ ೧೨೩೦
ಐದು ಕೇರಿಯ ೯೯೩
ಐದು ಕೇರಿಯ ೧೧೧೫
ಐದು ತತ್ವ ೧೫೩೧
ಐದು ತತ್ವದ ೧೩೨೬
ಐದು ತಲೆಯ ೧೦೯೧
ಐದು ದಾರಿಯ ೧೩೯೪
ಐದು ಮನೆಯೊಳಗೆ ೧೪೪೭
ಐದು ಮೇರುವೆಯ ಮೇಲೆ ೯೨೯
ಐದು ಮೇರುವೆಯ ಮೇಲೆ ೧೨೬೨
ಐದು ಮೇರುವೆಯ ಮೇಲೆ ೧೪೪೧
ಐದು ಮೇರುವೆಯ ಮೇಲೆ ೧೫೧೧
ಐದು ರತ್ನದ ಮೇಲೆ ೧೪೧೩
ಐವತ್ತೆರಡು ಎಸಳ ೯೯೨

ಐವತ್ತೆರಡು ದೇಶವನು ೧೦೦೭
ಐವತ್ತೆರಡು ಸೋಪಾನದ ೧೪೦೫
ಐವತ್ತೆರಡೆಸಳಿನ ೧೫೮೧
ಐವರು ಅಂಗನೆಯರು ೧೪೭೮
ಐವರು ಕನ್ನೆಯರು ೧೦೬೯
ಐವರು ನಾರಿಯರು ೧೫೭೭
ಐವರು ಭಾಮಿನಿಯರು ೧೫೨೧

**ಒ, ಓ**

ಒಂದು ಕಪ್ಪೆ ೯೯೫
ಒಂದು ಗುಡಿಯೊಳಗೆ ೧೦೩೨
ಒಂದು ದಾರಿಯ ಮೇಲೆ ೧೨೯೮
ಒಂದು ಬಿಚ್ಚಿ ೧೩೬೨
ಒಂದು ಮುಳ್ಳು ೯೪೯
ಒಂದು ಲಿಂಗಕ್ಕೆ ೧೩೭೮
ಒಂದು ಲಿಂಗದ ಸಂಗದಿಂದ ೯೯೬
ಒಂದು ಲಿಂಗದ ಸಂಗ ೧೦೩೮
ಒಂದು ಲಿಂಗ ಮೂರಾಗಿತ್ತು ೧೦೯೯
ಒಂದೊಂದಾಗಿ ಕೂಡಿ ೧೨೦೬
ಒಂಬತ್ತು ತಲೆಯ ೧೦೫೩
ಒಂಬತ್ತು ಬಾಗಿಲ ೯೯೭
ಒಂಬತ್ತು ಬಾಗಿಲ ೧೦೩೫
ಒಂಬತ್ತು ಬಾಗಿಲ ೧೩೬೬
ಒಂಬತ್ತು ಬಾಗಿಲ ೧೪೩೪
ಒಂಬತ್ತು ಬಾಗಿಲ ೧೬೦೨
ಒಂಬತ್ತು ಬಾಗಿಲ ೧೬೩೦
ಒಂಬತ್ತು ಮಂದಿರ ೧೫೮೨
ಒಂಬತ್ತು ಮನೆಯೊಳಗೆ ೯೮೨
ಒಂಬತ್ತು ಸೋಪಾನದ ೧೧೩೧
ಒಬ್ಬ ಕನ್ನೆಯ ಮನೆ ೧೧೨೯
ಒಬ್ಬ ಕನ್ನೆಯು ಐದು ೧೦೦೨
ಒಬ್ಬ ಪುರುಷನು ೧೦೯೮
ಒಬ್ಬ ಪುರುಷನು ೧೩೦೧
ಒಬ್ಬ ಮಾನವನ ೧೧೦೯
ಒಬ್ಬ ಶಿವನ ೧೧೧೧
ಒಬ್ಬ ಶಿವಶರಣನು ೧೦೮೬
ಒಬ್ಬ ಸತಿಯಳು ೧೦೦೧
ಒಬ್ಬ ಸಹಜಗಳ್ಳನು ೯೩೯
ಒಬ್ಬಳ ಬಸಿರಲಿ ೯೬೩
ಒಬ್ಬಳ ಸಂಗದಿಂದ ೯೬೪
ಒಲ್ಲೆನೆಂಬ ಭಾವವು ೧೧೫೦
ಒಳಗ ಹೊರಗು ೧೩೫೩
ಒಳಗೆ ನೋಡಿದರೆ ೧೦೬೨
ಒಳಗೆ ನೋಡಿದರೆ ೧೨೦೩
ಒಳಹೊರಗೆ ಪರಿಪೂರ್ಣ ೧೩೧೨
ಒಳಹೊರಗೆ ಪರಿಪೂರ್ಣ ೧೩೩೯
ಒಳಹೊರಗೆ ಪರಿಪೂರ್ಣ ೧೩೪೪
ಒಳಹೊರಗೆ ಪರಿಪೂರ್ಣ ೧೪೩೬
ಒಳಹೊರಗೆ ಪರಿಪೂರ್ಣ ೧೪೫೬
ಒಳಹೊರಗೆ ಪರಿಪೂರ್ಣ ೧೬೦೪
ಓಂಕಾರವೆಂಬ ೯೨೮
ಓಂಕಾರವೆಂಬ ೧೦೪೫
ಓಂಕಾರವೆಂಬ ೧೧೭೯
ಓಂ ನಮಃ ಶಿವಾಯ ೧೫೮೯
ಓಂ ನಮೋ ಶಿವಾಯ ೯೪೩
ಓಂ ಪ್ರಥಮದಲ್ಲಿ ೯೭೩
ಓಣಿಯೊಳಗೆ ಒಬ್ಬ ೧೦೬೫
ಓಣಿಯೊಳಗೆ ಒಬ್ಬ ೧೪೩೭

**ಕ**

ಕಂಗಳ ಮುಂದಳ ೧೧೬೨
ಕಂಗಳಾಟದ ಮಧ್ಯ ೧೫೫೮
ಕಟ್ಟಕಡೆಯಲೊಂದು ೧೪೯೦
ಕಣ್ಣ ಮೇಲೆ ಕಣ್ಣು ೧೧೯೯

ಕಣ್ಣಿಲ್ಲದಂಧಕಂಗೆ ೧೪೬೫
ಕಣ್ಣು ಇಲ್ಲದವ ೧೧೭೬
ಕತ್ತಲ ಕಾವುಳದ ೧೪೫೨
ಕತ್ತಲೆ ಕವಿದ ೧೧೪೯
ಕತ್ತಲೆ ಮನೆಯೊಳಗೆ ೧೦೮೫
ಕತ್ತಲೆ ಮನೆಯೊಳಗೆ ೧೧೬೩
ಕತ್ತಲೆ ಮನೆಯೊಳಗೆ ೧೪೦೦
ಕತ್ತಲೆಯ ಮನೆಯೊಳಗೊಂದು ೧೨೦೦
ಕಪ್ಪೆಯ ಒಡಲಲ್ಲಿ ೧೧೫೭
ಕಪ್ಪೆಯ ನುಂಗಿದ ೧೫೩೫
ಕರ್ಮ ಕೋಟಲೆಯ ಹರಿದು ೧೩೯೧
ಕರ್ಮದ ಕಂಡಣೆಯ ೧೩೬೮
ಕರ್ಮದ ಕೋಟಲೆಯ ೧೨೩೨
ಕರ್ಮದ ಗುಣವ ೧೪೭೫
ಕರ್ಮದ ಪಾಶವ ೧೧೪೭
ಕರ್ಮದ ವಾಸನೆಗಳ ೧೧೩೩
ಕರ್ಮದೋಷಂಗಳ ೧೩೯೯
ಕರ್ಮದೋಷಂಗಳ ೧೪೫೪
ಕರ್ಮವೆಂಬ ಕತ್ತಲೆ ೧೦೩೩
ಕರ್ಮವೆಂಬ ಕತ್ತಲೆಯಲ್ಲಿ ೧೨೯೯
ಕರ್ಮವೆಂಬ ಕೋಟಲೆ ೧೦೯೬
ಕರಿಯ ಮುಖದ ೧೪೫೧
ಕಳವಳಿಸುವ ಕರಣ ೧೧೬೮
ಕಾಡಾರಣ್ಯದೊಳಗೆ ೯೭೬
ಕಾಡುವ ಕರಣಂಗಳೆ ೧೧೯೩
ಕಾಡೊಳಗೆ ಒಬ್ಬ ಸೂಳೆ ೧೦೭೩
ಕಾಮ ಕ್ರೋಧ ಲೋಭ ೧೪೪೮
ಕಾಮದ ಕಳವಳ ೧೪೨೦
ಕಾಯದ ಕರಣಂಗಳ ೧೪೬೦
ಕಾಯದ ಕರಣಂಗಳ ೧೧೪೪
ಕಾಯದ ಕರಣಂಗಳಿಗೆ ೧೨೦೮
ಕಾಯದ ಗುಣಗಳ ೧೧೮೩
ಕಾಯ ನನ್ನದೆಂದು ೧೧೫೧
ಕಾಯವಿಲ್ಲದ ಹಂಸನು ೯೪೦
ಕಾಯವಿಲ್ಲದ ಹೆಂಗೂಸು ೧೦೫೫
ಕಾಯವೆಂಬ ಹುತ್ತಿನಲ್ಲಿ ೧೧೩೯
ಕಾಲಕರ್ಮಿಗಳಿಗೆ ೧೫೧೩
ಕಾಲಿಲ್ಲದ ಪುರುಷನು ೧೪೮೮
ಕಾಳಮನವ ಪರಿಹರಿಸಿ ೧೨೧೧
ಕಿಚ್ಚಿನ ಮನೆಯೊಳಗೆ ೮೮೯
ಕುರುಡಂಗೆ ಕನ್ನಡಿಯ ೧೨೫೩
ಕುಲಛಲಕ್ಕೆ ಹೋರಿ ೧೬೦೫
ಕೂಗುವ ಕೋಗಿಲೆಯ ೧೩೭೪
ಕೊಂಬಿನ ತುದಿಯ ೧೪೨೧
ಕೊಂಬೆಕೊಂಬೆಗೆ ೧೨೨೯
ಕೋಣನ ಹಣೆಯ ೧೩೯೦
ಕೋಳಿ ಕೂಗಿದ ೯೭೮
ಕೋಳಿಯ ಧ್ವನಿಯ ೯೬೯


**ಗ, ಘ**


ಗಿರಿಯ ತುದಿಯ ೧೩೮೦
ಗುಡ್ಡದೊಳಗೊಬ್ಬ ಮಡ್ಡ ೧೪೫೫
ಗುರುಲಿಂಗಜಂಗಮದ ೧೩೮೪
ಗುರುಲಿಂಗಜಂಗಮ ೧೨೪೦
ಗುರುಲಿಂಗಜಂಗಮ ೧೪೬೧
ಗುರುಲಿಂಗಜಂಗಮ ೧೬೧೦
ಗುರುವಿಡಿದು ಕಾಯದ ೧೩೬೩
ಗುರುವಿನಲ್ಲಿ ಗುಣವ ೧೪೮೦
ಗುರುವು ಕಾಯಸುಖಿ ೧೪೮೧
ಘಟ್ಟದ ತುದಿಯ ೧೫೦೩
ಘನದ ಮೇಲೊಂದು ೧೦೩೭


**ಚ**


ಚಿತ್ತಸುಖದಲ್ಲಿ ೯೨೭

ಚಿತ್ಪ್ರಕಾಶಲಿಂಗದಲ್ಲಿ ೮೮೫
ಚಿತ್ಪ್ರಕಾಶವಾದ ಲಿಂಗದಲ್ಲಿ ೮೯೪
ಚಿದ್ರೂಪ ಚಿದಾನಂದ ೮೮೦
ಚಿದ್ರೂಪ ಚಿದಾನಂದ ೧೬೭೫
ಚಿಪ್ಪಿನೊಳಗಣ ೧೧೬೫

ಜ, ಜ್ಞ

ಜಾಗ್ರಾವಸ್ಥೆಯ ಸ್ಥೂಲ ೧೫೮೩
ಜೀವಾತ್ಮ ಅಂತರಾತ್ಮ ೧೦೫೮
ಜ್ಞಾನ ಉಪಾಧಿಯಲ್ಲಿ ೧೧೭೬
ಜ್ಞಾನ ಉಪಾಧಿಯಲ್ಲಿ ೧೧೩೪
ಜ್ಞಾನ ಜ್ಞಾತೃವಿನ ಮೇಲೆ ೧೦೨೮
ಜ್ಞಾನ ತನ್ನೊಳಗಾದ ೧೫೭೬
ಜ್ಞಾನವೆಂಬ ಗದ್ದುಗೆ ೧೦೯೭
ಜ್ಞಾನಶಕ್ತಿಯ ಸಂಗದಿಂದ ೧೪೩೭
ಜ್ಞಾನಶಕ್ತಿಯ ಸಂಗದಿಂದ ೧೪೯೬
ಜ್ಞಾನಸಂಪನ್ನರಾದ ೧೪೮೫
ಜ್ಞಾನಸಂಬಂಧವನರಿತು ೧೧೪೦

ತ

ತಂದೆಯೊಡನೆ ಒಬ್ಬ ಮಗ ೯೬೫
ತಂದೆಯೊಡನೆ ಒಬ್ಬ ಮಗ ೧೧೨೨
ತಂದೆ ಸತ್ತ ಮೇಲೆ ೧೭೪೩
ತತ್ವಮಸಿ ವಾಕ್ಯದಿಂದ ೧೩೭೫
ತತ್ವಮಸಿ ವಾಕ್ಯದಿಂದ ೧೫೫೬
ತನ್ನಂತರಂಗದಲ್ಲಿ ೯೭೪
ತನ್ನ ತಾನೆ ತಿಳಿದು ೧೩೭೪
ತನ್ನಿಂದ ತಾನಾದವನು ೯೪೭
ತನು ಮನದ ಕೊನೆಯ ೮೮೭
ತನು ಮನದ ಕೊನೆಯ ೧೪೯೨
ತನು ಮನದ ಕೊನೆಯ ೧೫೫೨
ತನು ಮನದ ಕೊನೆಯ ೧೫೯೦
ತನುವಿನ ಗುಣ ೧೫೧೫
ತನುವಿನೊಳಗಿಪ್ಪ ೧೪೯೧
ತನ್ನೊಡನೆ ಒಬ್ಬ ೧೧೨೪
ತನ್ನೊಳಗಿಪ್ಪ ಲಿಂಗದ ೧೦೦೦
ತನ್ನೊಳಗೆ ತಾನು ೧೩೯೭
ತನ್ನೊಳಗೆ ಮಹಾಲಿಂಗ ೯೨೪
ತನ್ನೊಳಿಹ ಮೂರು ೯೮೬
ತಲೆ ಒಂದು ಮುಖ ಮೂರು ೧೧೬೬
ತಾನು ತಾನಾದಲ್ಲಿ ೧೦೬೮
ತಾನು ತಾನಾದ ಭೇದವ ೮೯೭
ತಾಪತ್ರಯಗಳ ಕಳೆದು ೧೭೭೬
ತಾಮಸಕ್ಕೆ ಸಿಲ್ಕಿ ೧೪೦೧
ತಾಮಸ ತಮಂಧ ೧೪೮೬
ತಾಯ ಒಡಲಲ್ಲಿ ೧೪೩೯
ತಾಳ ಮರದ ಮೇಲೆ ೧೦೨೦
ತುಟ್ಟ ತುದಿಯಲೊಂದು ೯೦೭
ತ್ರಿಕೂಟದ ಶಿವಾಲಯ ೧೫೧೦

ದ

ದಶನಾದಗಳು ಇಲ್ಲದಂದು ೧೦೫೬
ದೇಗುಲದೊಳಗಣ ೯೫೧
ದೇಗುಲದೊಳಗಿರುವ ೧೫೨೦
ದೇಗುಲದೊಳಗೆ ಒಬ್ಬ ೧೦೦೬
ದೇಗುಲದೊಳಗೊಂದು ೧೩೮೧
ದೇವರ ನಿರೂಪದಿಂದ ೧೪೫೯
ದೇವರ ನಿರೂಪದಿಂದ ೧೪೮೨
ದೇಶಕ್ಕೆ ಹೋಗುವ ೧೪೨೭
ದೇಶದ ಮುಂದೆ ೮೨೪
ದೇಶದ ಮೇಲೆ ೯೧೦
ದೇಹವೆಂಬ ದೇಗುಲ ೧೪೬೮
ದೇಹವೆಂಬ ದೇಗುಲ ೧೫೨೩
ದ್ವೈತ ಅದ್ವೈತಾನಂದ ೧೫೦೬
ಧರ್ಮವೆಂಬ ದಾರಿಯಲ್ಲಿ ೧೦೩೧

ಧರೆ ಆಕಾಶವಿಲ್ಲದಂದು ೧೧೦೧
ಧರೆ ಆಕಾಶವೆಂಬ ೧೪೯೪
ಧರೆಯ ಮೇಲೆ ೧೨೪೪
ಧರೆಯಾಕಾಶದ ಮೇಲೆ ೧೧೧೨
ಧರೆಯಾಕಾಶದ ಮೇಲೆ ೧೨೧೮
ಧರೆಯಾಕಾಶವೆಂಬ ೯೮೧
ಧ್ಯಾನ ಮೌನವ ನುಂಗಿ ೧೦೬೪

ನ

ನಕಾರ ಮಕಾರಗಳಿಲ್ಲದಂದು ೮೬೫
ನಡುವಿಲ್ಲದ ಬಾಲೆ ೯೫೪
ನಡೆದು ನಡೆದು ೧೩೯೭
ನಯನದ ಸಂಚಲವ ೧೩೭೭
ನವಗೃಹದ ಮೇಲೆ ೧೦೨೨
ನವದ್ವಾರ ಬೀದಿಗಳಲ್ಲಿ ೧೦೩೯
ನವನಾಳ ಪಟ್ಟಣ ೯೩೨
ನವನಾಳ ಮಧ್ಯದಲ್ಲಿ ೧೦೭೬
ನವಸಾಗರದ ಮುಂದೆ ೧೦೪೬
ನಾದಘೋಷವೆಂಬ ೧೧೯೨
ನಾದದೊಳಗಣ ಚಿನ್ನಾದ ೧೫೪೨
ನಾದದೊಳಗಣ ನಾದ ೧೫೩೬
ನಾದ ಬಿಂದು ಕಲೆಗಳಿಂದ ೧೫೨೫
ನಾದ ಬಿಂದು ಕಲೆಗಳು ೧೧೯೧
ನಾದ ಬಿಂದು ಕಳಾತೀತ ೮೭೦
ನಾದ ಬಿಂದು ಕಳಾತೀತ ೯೩೪
ನಾದ ಬಿಂದು ಕಳಾತೀತ ೧೪೧೨
ನಾದ ಬಿಂದು ಕಳಾತೀತ ೧೬೨೦
ನಾದ ಬಿಂದು ಕಳಾತೀತವನು ೯೦೩
ನಾದಮೂರ್ತಿಗಳು ೧೦೫೧
ನಾದ ಲಕ್ಷ ಬಿಂದು ಲಕ್ಷ ೧೧೩೦
ನಾದ ಲಕ್ಷವ ನೋಡಿದ ೧೦೫೯
ನಾದ ಲಕ್ಷವ ನೋಡಿದೆ ೧೦೬೦
ನಾನಾ ದೇಶವ ತಿರುಗಿ ೯೭೫
ನಾನು ಇಲ್ಲದಂದು ೧೦೪೯
ನಾನು ಇಲ್ಲದೆ ನೀನು ೧೦೭೧
ನಾನು ಇಲ್ಲದೆ ೧೬೨೪
ನಾನು ನೀನೆಂಬುಭಯ ೧೪೦೩
ನಾನೂ ಇಲ್ಲದೆ ೧೫೪೪
ನಾನೆಂಬ ನಾದಗಳು ೧೦೭೨
ನಾನೇನೆಂದು ವಾದಿಸದಂದು ೧೦೫೭
ನಾಮರೂಪ ಕ್ರಿಯೆಯಿಲ್ಲದ ೯೩೭
ನಿರ್ಮಲ ಸ್ವರೂಪನಾದ ೧೫೦೯
ನಾಲ್ಕು ಕಂಬದ ಗುಡಿಗೆ ೧೫೦೦
ನಾಲ್ಕು ಕಂಬದ ದೇಗುಲ ೧೫೭೬
ನಾಲ್ಕು ಕಂಬದ ಪೌಳಿಯ ೧೨೨೫
ನಾಲ್ಕು ಕಾಲುಳ್ಳ ೧೦೮೭
ನಾಲ್ಕು ಮುಖದ ಸೂಳೆಯು ೧೧೬೭
ನಿಂದಕರು ನಿಂದಿಸಿದರೆ ೧೨೭೬
ನಿಃಕಲನ ಸಂಗದಿಂದ ೧೫೪೦
ನಿಃಕಲ ಪರಬ್ರಹ್ಮಲಿಂಗವ ೧೩೧೩
ನಿಃಕಲ ಶಿವತತ್ವದಿಂದ ೧೧೩೬
ನಿಟಿಲತಟದಲ್ಲಿ ೯೦೦
ನಿತ್ಯ ನಿರಾಳದಲ್ಲಿ ೮೮೪
ನಿತ್ಯವನರಿತು ೧೨೧೫
ನಿತ್ಯವಾದ ಶರಣನು ೧೪೦೭
ನಿತ್ಯವಿಡಿದು ಮುಕ್ತನಾಗಿ ೧೨೨೫
ನಿತ್ಯವಿಡಿದು ಮುಕ್ತನಾಗಿ ೧೩೧೪
ನಿರ್ಮಲಸ್ವರೂಪದಿಂದ ೧೫೯೩
ನಿರ್ಮಲಸ್ವರೂಪನಾದ ೧೫೩೪
ನಿರ್ಮಲಸ್ವರೂಪವಾದ ೧೫೪೫
ನಿರಂಜನದಿಂದತ್ತತ್ತ ೧೫೪೮
ನಿರಂಜನದೇಶದಲ್ಲಿ ೧೫೮೮
ನಿರಂಜನಲಿಂಗದಲ್ಲಿ ೮೯೩

ನಿರಂಜನ ಸ್ಥಲದಲ್ಲಿ ೧೫೮೫
ನಿರಪೇಕ್ಷಲಿಂಗದಲ್ಲಿ ೧೫೨೪
ನಿರಾಮಯವೆಂಬ ಭಕ್ತನ ೧೫೬೧
ನಿರಾಳ ಝೇಂಕಾರ ನಿಜಲಿಂಗ ೧೩೩೮
ನಿರುತ ನಿಜಸ್ವರೂಪದಲ್ಲಿ ೧೫೦೨
ನಿರುತ ನಿರಂಜನ ೧೪೯೮
ನುಡಿಯಲ್ಲಿ ವಾಚಾಳತ್ವ ೧೨೭೩
ನೊಸಲ ಕಣ್ಣು ೯೪೪

ಪ

ಪಂಚತತ್ವದ ಮೇಲೆ ೮೨೦
ಪಂಚಮುಖದ ಮೇಲೆ ೧೦೧೯
ಪಂಚಮುಖದ ಸರ್ಪನ ೧೫೨೭
ಪರತತ್ವದಲ್ಲಿ ಬೆರಸಿಪ್ಪ ೮೮೬
ಪರಬ್ರಹ್ಮವೆಂಬ ಲಿಂಗ ೧೨೭೮
ಪರಮ ಚಿತ್ಕಲೆಯಲ್ಲಿ ೮೬೯
ಪರಮಚಿದಂಶಿಕದಲ್ಲಿ ೯೨೬
ಪರಮಸುಖದಿಂದ ೧೫೬೯
ಪರಮಾನಂದ ಪ್ರಭೆಯಲ್ಲಿ ೮೭೩
ಪರಮಾನಂದ ಪ್ರಭೆಯಲ್ಲಿ ೮೮೭
ಪರಮಾನಂದದ ಪ್ರಭೆಯಲ್ಲಿ ೮೯೮
ಪರಮಾನಂದ ಪ್ರಭೆಯೊಳಗೆ ೧೦೧೭
ಪರಮಾನಂದ ಸುಖ ೧೫೬೭
ಪರಮಾನಂದ ಸುಖದಲ್ಲಿ ೯೧೩
ಪರಶಿವತತ್ವದಲ್ಲಿ ೯೧೮
ಪರಶಿವತತ್ವದಿಂದ ೧೬೧೫
ಪಶುವಿನ ಒಡಲಲ್ಲಿ ೧೩೮೭
ಪಾತಕಾಂಗದವನಿಗೆ ೧೨೦೫
ಪಿಂಡಬ್ರಹ್ಮಾಂಡಕೆ ೯೧೭
ಪಿಂಡಬ್ರಹ್ಮಾಂಡವ ೧೪೪೨
ಪೂರ್ವದಲ್ಲಿ ಓಂಕಾರ ೯೭೦
ಪೃಥ್ವಿ ಅಂಗವಾದ ೧೫೦೫
ಪೃಥ್ವಿ ಅಪ್ಪುಗಳಿಲ್ಲದಂದು ೮೬೦
ಪೃಥ್ವಿ ಅಪ್ಪುಗಳಿಲ್ಲದಂದು ೧೬೦೭
ಪೃಥ್ವಿ ಅಪ್ಪು ತೇಜ ೧೩೧೦
ಪೃಥ್ವಿ ಅಪ್ಪು ತೇಜ ೧೩೩೫
ಪೃಥ್ವಿ ಅಪ್ಪು ತೇಜ ೧೩೪೭
ಪೃಥ್ವಿ ಅಪ್ಪು ತೇಜ ೧೪೩೮
ಪೃಥ್ವಿ ಅಪ್ಪು ತೇಜ ೧೪೯೯
ಪೃಥ್ವಿ ಅಪ್ಪು ತೇಜ ೧೫೯೯
ಪೃಥ್ವಿ ಆಕಾಶದ ೧೧೮೮
ಪೃಥ್ವಿ ಗುಣವಳಿದು ೧೩೨೮
ಪೃಥ್ವಿಯೊಳಗಣ ಬಾಲಿಂಗೆ ೧೦೪೧
ಪೃಥ್ವಿ ಸಲಿಲ ಪಾವಕ ೧೦೦೩
ಪೃಥ್ವಿ ಸಲಿಲ ಪಾವಕ ೧೫೬೪
ಪ್ರಣವ ಪಂಚಾಕ್ಷರಿ ೧೦೫೦
ಪ್ರಥಮಕಾಲದಲ್ಲಿ ಅನಾದಿ ೯೩೮
ಪ್ರಥಮಕಾಲದಲ್ಲಿ ೯೧೨
ಪ್ರಥಮಕಾಲದಲ್ಲಿ ೧೦೨೪
ಪ್ರಥಮಕಾಲದಲ್ಲಿ ೧೦೪೪
ಪ್ರಥಮಕಾಲದಲ್ಲಿ ೨೯
ಪ್ರಸಾದ ಪ್ರಸಾದವೆಂದು ೧೩೨೭

ಬ

ಬಟ್ಟಬಯಲನೊಳಕೊಂಡ ೧೪೦೮
ಬಟ್ಟಬಯಲಲಿ ಘಟಿತವಾದ ೯೦೧
ಬತ್ತಲೆ ಬಯಲಾದ ೧೦೭೪
ಬತ್ತಲೆಯಾದ ಭಾಮಿನಿಯ ೧೨೧೦
ಬತ್ತಲೆಯಾದ ಭಾಮಿನಿಯ ೧೩೯
ಬತ್ತಲೆಯಾದ ಭಾಮಿನಿಯು ೧೫೨೦
ಬದ್ಧಜ್ಞಾನಿಗಳು ಇಲ್ಲದಂದು ೮೬೪
ಬದ್ಧಜ್ಞಾನಿಯ ಸಂಗದಿಂದ ೧೫೬೨
ಬಯಲನೇರಿದ ಪಕ್ಷಿಂಗೆ ೧೦೨೩
ಬಯಲಲ್ಲಿ ಒಂದು ಪಕ್ಷಿ ೯೯೧

ಬಯಲಿಂಗೆ ಬಯಲಾದ ೧೦೨೨
ಬಯಲಿಂಗೆ ಹಾರಿದ ೧೦೦೪
ಬಯಲೆ ಅಂಗವಾಗಿ ೧೧೪೧
ಬಯಲೆ ಅಂಗವಾದ ೧೧೯೦
ಬಯಲೆ ಅಂಗವಾದ ೧೩೪೦
ಬಯಲೆ ಅಂಗವಾದ ೧೪೪೪
ಬರಿಯ ಬಯಲಲ್ಲಿ ೮೯೧
ಬಿದುರಿನಮಲೆಯೊಳಗೆ ೧೦೮೧
ಬೆಟ್ಟದ ತುದಿಯ ಮೇಲೆ ೯೭೩
ಬೆಟ್ಟದ ತುದಿಯ ಮೇಲೆ ೧೪೭೮
ಬೆಟ್ಟದ ತುದಿಯ ಮೇಲೆ ೧೪೪೦
ಬೆಟ್ಟದ ತುದಿಯ ಮೇಲೆ ೧೫೧೯
ಬೆಟ್ಟದ ತುದಿಯ ಮೇಲೆ ೧೫೫೧
ಬೆಟ್ಟದ ತುದಿಯ ಮೇಲೊಂದು ೧೩೨೯
ಬೇರು ಇಲ್ಲದ ಮರ ೯೪೮
ಬೇರೊಂದು ಸ್ಥಾನದಲ್ಲಿ ೧೫೮೨
ಬ್ರಹ್ಮಂಗೆ ಸರಸ್ವತಿಯಾಗಿ ೧೦೭೫
ಬ್ರಹ್ಮನಿಲ್ಲದಂದು ೧೫೮೬
ಬ್ರಹ್ಮರಂಧ್ರದಲ್ಲಿಪ್ಪ ೮೮೧
ಬ್ರಹ್ಮರಂಧ್ರದಲ್ಲಿಪ್ಪ ೧೫೯೧
ಬ್ರಹ್ಮರಂಧ್ರುಲ್ಲಿಪ್ಪ ೧೫೬೬
ಬ್ರಹ್ಮ ವಿಷ್ಣು ಆದಿಗಳಿಲ್ಲದಂದು ೧೬೦೮
ಬ್ರಹ್ಮ ವಿಷ್ಣುಗಳಿಲ್ಲದಂದು ೮೯೬
ಬ್ರಹ್ಮ ವಿಷ್ಣು ರುದ್ರ ೮೨೬
ಬ್ರಹ್ಮ ವಿಷ್ಣು ರುದ್ರ ೧೦೮೯
ಬ್ರಹ್ಮ ವಿಷ್ಣು ರುದ್ರ ೧೫೫೦
ಬ್ರಹ್ಮ ವಿಷ್ಣು ರುದ್ರ ೧೫೯೬
ಬ್ರಹ್ಮ ವಿಷ್ಣು ರುದ್ರಾದಿ ೯೩೬
ಬ್ರಹ್ಮ ವಿಷ್ಣು ರುದ್ರಾದಿಗಳ ೧೦೭೯
ಬ್ರಹ್ಮ ವಿಷ್ಣು ರುದ್ರಾದಿಗಳ ೧೭೭೩
ಬ್ರಹ್ಮ ವಿಷ್ಣು ರುದ್ರಾದಿಗಳ ೧೭೯೨
ಬ್ರಹ್ಮ ವಿಷ್ಣು ರುದ್ರಾದಿಗಳಿಂದ ೧೫೨೫
ಬ್ರಹ್ಮ ವಿಷ್ಣು ರುದ್ರಾದಿಗಳೆಂಬ ೧೩೪೩
ಬ್ರಹ್ಮ ವಿಷ್ಣು ರುದ್ರಾದಿಗಳೆಂಬ ೧೩೨೦
ಬ್ರಹ್ಮ ವಿಷ್ಣುವಿನಲ್ಲಿ ೧೬೩೪
ಭಕ್ತಗಣ ಮಹೇಶ್ವರಗಣ ೧೫೫೫
ಭಕ್ತನಾದರೇನಯ್ಯ ೧೭೮೮
ಭಕ್ತ ಮಹೇಶ್ವರನಲ್ಲಿ ೧೩೦೨
ಭಕ್ತ ಮಹೇಶ್ವರನಲ್ಲಿ ೧೬೩೫
ಭಕ್ತ ಮಹೇಶ್ವರ ಪ್ರಸಾದಿ ೧೩೭೩
ಭಕ್ತ ಮಹೇಶ್ವರರಿಲ್ಲದಂದು ೧೬೦೯
ಭಕ್ತ ಮಹೇಶ್ವರ ಪ್ರಸಾದಿ ೮೯೨
ಭಕ್ತ ಮಹೇಶ್ವರರು ೧೩೮೫
ಭಕ್ತಿ ಜ್ಞಾನ ವೈರಾಗ್ಯ ೧೩೫೪
ಭಾವನಿಬ್ಬೆರಗಿನೊಳು ೮೮೮
ಭಾವಬತ್ತಲೆಯಲ್ಲಿ ೯೫೨
ಭೂಚರ ಖೇಚರ ೧೬೭೨
ಭೂತದೇಹಾದಿಗಳನಳಿದು ೧೩೨೭
ಭೂತದೇಹಿಕವನಳಿದು ೧೪೨೦
ಭೂಮಿಯಿಲ್ಲದ ಪೃಥ್ವಿಯ ೧೦೬೧


ಮ


ಮಂಚದ ಎಕ್ಕೆಯಲ್ಲಿ ೧೧೭೮
ಮಂಡಲವನಳಿದು ೮೨೫
ಮನಘನವ ನುಂಗಿ ೧೩೬೪
ಮನದ ಅಂಕುರಗಳ ೧೧೭೫
ಮನದ ವಾಸನೆಗಳ ೧೧೬೧
ಮನದ ವಾಸನೆಗಳ ೧೩೭೧
ಮನ ನಿರ್ಮಳವಾದ ೧೭೩೧
ಮನ ಪವನಾದಿಗಳ ೧೩೩೩
ಮನ ಬುದ್ಧಿ ಚಿತ್ತ ೧೭೧೬
ಮನ ಬುದ್ಧಿ ಚಿತ್ತ ೧೩೫೮
ಮನ ಬುದ್ಧಿ ಚಿತ್ತ ೧೪೩೩

ಮನವು ಮನವ ನುಂಗಿ ೧೫೦೯
ಮನವೆಂಬ ಕೋಗಿಲೆಯ ೧೧೨೧
ಮನೆಮನೆಗೆ ಹಾರುವ ೧೧೫೮
ಮಹಾಘನ ಅಪರಂಪರ ೮೬೮
ಮಹಾಜ್ಞಾನ ಸಂಬಂಧ ೧೫೪೧
ಮಹಾಜ್ಞಾನಿಗಳ ಸಂಗದಿಂದ ೮೯೯
ಮಹಾಜ್ಞಾನಿಯ ಸಂಗದಿಂದ ೧೫೨೩
ಮಹಾಮನೆಗೆ ಹೋಗುವ ೧೧೪೪
ಮಹಾಮೇರುವೆಂಬ ೧೦೪೮
ಮಹಾಮೇರುವೆಯೊಳಗೆ ೧೫೭೪
ಮಾತಿನಲ್ಲಿ ಬ್ರಹ್ಮ ೧೨೭೨
ಮಾತು ಇಲ್ಲದ ಮನೆಯಲ್ಲಿ ೧೧೫೫
ಮಾತು ಮಥನಗಳಿಲ್ಲದಂದು ೧೧೦೨
ಮಾತು ಮಥನಂಗಳಿಲ್ಲದಂದು ೧೩೩೬
ಮಾತು ಮಥನಗಳಿಲ್ಲದೆ ೧೨೧೪
ಮಾತು ಮಥನಗಳಿಲ್ಲದೆ ೧೩೮೨
ಮಾತು ಮಥನಗಳಿಲ್ಲದೆ ೧೫೧೭
ಮುಳ್ಳು ಮೊನೆಯ ಕೆಳಗೆ ೯೮೦
ಮೂರು ಕೊಂಬೆಯ ಮೇಲೆ ೧೦೭೫
ಮೂರುದಾರಿಯಲ್ಲಿ ೧೩೬೦
ಮೂರು ತನುಗಳ ಗತಿಗೆಡಿಸಿ ೧೧೯೪
ಮೂರು ಬಾಯುಳ್ಳ ಪಕ್ಷಿ ೯೬೮
ಮೂರು ಮಂಟಪದ ೧೨೨೪
ಮೂರು ಮನೆಯ ೧೪೨೯
ಮೂರು ಮುಖದ ಸೂಳೆ ೧೦೬೨
ಮೂರು ಮುಖದ ೧೪೧೮
ಮೂರು ಮೇರುವೆಯ ೧೧೯೫
ಮೂರು ರತ್ನವ ೧೦೪೨
ಮೂರು ರತ್ನದ ೧೧೦೪
ಮೂರು ರತ್ನವ ೧೪೩೦
ಮೂರು ಲೋಕದ ೧೧೦೬
ಮೂರು ಲೋಕದ ೧೧೮೯
ಮೂರು ಲೋಕದ ೧೩೦೪
ಮೂರೂರ ಮೇಲೆ ೧೩೫೨
ಮೂಲ ಪ್ರಣವದಲ್ಲಿ ೯೩೩
ಮೇರುವೆಯ ಗುಡಿಯಲ್ಲಿ ೯೭೭
ಮೇರುವೆಯೊಳಗಣ ೧೦೯೭
ಮೇಲೆ ಭಾಮಿನಿಯೊಳಗೆ ೧೦೧೪
ಮೊರಡಿಯ ಮೇಲೆ ೯೨೨


ಯ


ಯೋಗಿ ಜೋಗಿ ಶ್ರವಣ ೧೨೫೮
ಯೋಗೀಶ್ವರನಾದರೇನಯ್ಯ ೧೨೩೬


ರ


ರವಿಶಶಿಗಳಿಲ್ಲದಂದು ೧೧೦೩
ರವಿಶಶಿಯ ಬೆಳಗ ೧೫೧೬
ರೂಪ ಕುರೂಪವ ೧೩೪೧
ರೇಚಕ ಪೂರಕ ೮೬೩


ಲ


ಲಕ್ಷವ ನೋಡಿದರೇನಯ್ಯ ೯೦೫
ಲಕ್ಷವ ನೋಡಿದರೇನಯ್ಯ ೧೪೫೦
ಲಿಂಗದ ನೆನಹಿನಿಂದ ೧೪೪೬
ಲಿಂಗವೇ ತಾನಾಗಿ ೧೬೧೧
ಲಿಂಗ ಸೌಖ್ಯದಲ್ಲಿ ೯೧೪
ಲೋಕ ಲೌಕಿಕಂಗಳಿಲ್ಲದಂದು ೮೬೬
ಲೋಕ ಲೌಕಿಕದ ರಂಜನೆ ೯೧೫


ವ


ವಂತಿಗೆ ಲಿಂಗವ ೧೨೫೬
ವಸ್ತು ವಸ್ತುವೆಂದು ೯೮೯
ವಾಚಾತೀತ ೯೫೮
ವಾಸನಿಗಳಿಲ್ಲದೆ ೧೫೦೮
ವಾಸನಿ ಧರ್ಮಗಳಿಲ್ಲದೆ ೧೫೬೫
ವಾಸನೆಗಳ ಹರಿದು ೧೪೭೩

| | | | |
|---|---|---|---|
| ವಿಮಲಜ್ಞಾನದಿಂದ | ೯೫ | ಸತ್ಯಜ್ಞಾನದಿಂದ | ೮೭೭ |
| ವಿಮಲಜ್ಞಾನದಿಂದ | ೧೫೬೬ | ಸತ್ತು ಚಿತ್ತಾನಂದ ನಿತ್ಯ | ೮೬೨ |
| ವಿಶ್ವತೋ ಬ್ರಹ್ಮಾಂಡ | ೯೭೯ | ಸತ್ತು ಚಿತ್ತಾನಂದ ನಿತ್ಯಪರಿಪೂರ್ಣ | ೧೨೬೩ |
| ವೇದದಲ್ಲಿ ನಾಲ್ಕು | ೧೨೭೦ | ಸದಮಲದರುಹಿನಿಂದ | ೧೫೩೭ |
| ವೇದ ದೊಡ್ಡದೆಂದು | ೧೨೭೧ | ಸದಾ ಸನ್ನಹಿತವಾದ | ೮೭೯ |
| ವೇದವ ನೋಡುವ | ೯೦೬ | ಸರ್ಪನ ತಲೆಯ | ೧೬೨೨ |
| ವೇದಶಾಸ್ತ್ರ ಪುರಾಣ | ೧೨೭೫ | ಸರ್ಪ ಸತ್ತು ಕಪ್ಪೆಯ | ೧೩೬೧ |
| **ಶ** | | ಸಪ್ತದ್ವೀಪಂಗಳ | ೮೭೧ |
| ಶರೀರವೆಂಬ ಆಲಯ | ೧೫೦೪ | ಸಪ್ತದ್ವೀಪಂಗಳಲ್ಲಿ | ೮೯೦ |
| ಶಿವಭಕ್ತನ ಅಂತರಂಗ | ೧೨೫೪ | ಸಪ್ತೇಳುಸಾಗರಗಳಿಲ್ಲದಂದು | ೧೨೩೫ |
| ಶಿವಾಚಾರದಲ್ಲಿ ನಡೆವ | ೧೨೪೯ | ಸಪ್ತೇಳುಸಾಗರದ ಮೇಲೆ | ೧೧೧೮ |
| ಶಿವಾತ್ಮಜ್ಞಾನ ಉದಯ | ೧೩೦೦ | ಸಮುದ್ರ ಘೋಷವೆಂಬ | ೧೫೩೮ |
| ಶಿವಾನುಭಾವಿಗಳ ಸಂಗದಿಂದ | ೯೧೯ | ಸಮುದ್ರದೊಳಗೊಂದು | ೧೧೪೬ |
| ಶಿವಾನುಭಾವಿಗಳ ಸಂಗ | ೧೫೬೦ | ಸರ್ವಗುಣವ ಕಳೆದುಳಿದ | ೧೪೭೬ |
| ಶ್ರೋತ್ರ ತ್ವಕ್ಕು ನೇತ್ರ | ೧೩೪೬ | ಸರ್ವಗುಣಾದಿಗಳನಳಿದು | ೧೨೩೪ |
| **ಷ, ಸ** | | ಸರ್ವಬ್ರಹ್ಮಾಂಡವ | ೧೦೨೧ |
| ಷಡುರುಚಿ ಪದಾರ್ಥಗಳ | ೧೨೪೧ | ಸರ್ವಬ್ರಹ್ಮಾಂಡವ | ೧೪೪೩ |
| ಷಡುರುಚಿ ಪದಾರ್ಥಂಗಳ | ೧೨೪೭ | ಸರ್ವಮಯವ ಗರ್ಭೀಕರಿಸಿ | ೧೦೧೩ |
| ಷಡ್ವಿಧಚಕ್ರಂಗಳಿಲ್ಲದಂದು | ೮೫೯ | ಸರ್ವಾಂಗದೊಳಹೊರಗಿಪ್ಪ | ೧೨೪೫ |
| ಷಣ್ಮುದ್ರೆಗಳಿಂದತತ್ತ | ೧೬೨೮ | ಸರ್ವಾಂಗದೊಳಹೊರಗಿರ್ಪ | ೧೧೨೨ |
| ಸಂಗನಬಸವಣ್ಣನೇ | ೧೨೫೯ | ಸರ್ವಾಂಗದೊಳಹೊರಗೆ | ೧೩೧೬ |
| ಸಂಗನಬಸವಣ್ಣನೇ | ೧೨೬೧ | ಸರ್ವಾಂಗದೊಳಹೊರಗೆ | ೧೩೧೧ |
| ಸಂಗಸಂಯೋಗವೆಂಬ | ೯೯೮ | ಸರ್ವಾಂಗಪಟ್ಟಣದೊಳಗೆ | ೯೪೭ |
| ಸಂಚಲಿಸುವ ಮನಕ್ಕೆ | ೧೧೬೦ | ಸರ್ವಾಂಗಪಟ್ಟಣದೊಳಗೆ | ೧೪೧೪ |
| ಸಂಚಲಿಸುವ ಮನಗಳ | ೧೧೫೨ | ಸರ್ವಾಂಗಪಟ್ಟಣದೊಳಗೆ | ೧೬೧೭ |
| ಸಂತೆಯ ಬೀದಿಯಲ್ಲಿ | ೧೩೮೯ | ಸರ್ವಾಂಗಲಿಂಗಮಯವಾದ | ೧೫೫೩ |
| ಸಕಲ ಜಗಂಗಳೆಲ್ಲ | ೧೬೦೬ | ಸಹಜ ಸಮ್ಯಕ್‌ಜ್ಞಾನದಿಂದ | ೧೫೮೪ |
| ಸಕಲ ನಿಃಕಲಗಳು | ೧೧೩೫ | ಸಹಸ್ರದಳಕಮಲ | ೯೬೭ |
| ಸಕಲ ನಿಃಕಲದಲ್ಲಿ | ೧೩೪೯ | ಸಾಕಾರವಳಿದು ನಿರಾಕಾರ | ೧೨೦೨ |
| ಸಚ್ಚಿದಾನಂದವೆಂಬ | ೧೪೪೯ | ಸಾಗರದ ತೆರೆಯ | ೧೧೪೩ |
| ಸಜ್ಜನವೆಂಬ ಮಾರ್ಗದಲ್ಲಿ | ೧೧೬೧ | ಸಾಗರದ ತುದಿಯಮೇಲೆ | ೧೪೭೭ |

ಸಾಗರವ ನುಂಗಿದ ಕಪ್ಪೆ ೧೪೨೭
ಸಾಜವೆಂಬ ನಿಜಮಾರ್ಗ ೧೪೮೩
ಸಾವಿರಕಂಬದ ಮುತ್ತಿನ ೯೩೧
ಸಾವಿರಕಂಬದ ಮುತ್ತಿನ ೧೫೬೮
ಸಾವಿರೆಸಳಮಂಟಪದಲ್ಲಿ ೧೫೫೪
ಸುಂದರವಾದ ಮೇರುವ ೧೪೩೫
ಸುಜ್ಞಾನಪ್ರಭೆಯಲ್ಲಿ ೧೫೩೯
ಸುಟ್ಟ ಸುಡುಗಾಡಿನೊಳಗೊಬ್ಬ ೧೪೦೯
ಸ್ವರ್ಗ ಮರ್ತ್ಯ ಪಾತಾಳ ೧೦೭೯
ಸ್ವರ್ಗ ಮರ್ತ್ಯ ಪಾತಾಳ ೧೦೮೪
ಸ್ವಯಂಪ್ರಕಾಶಲಿಂಗದಲ್ಲಿ ೧೫೩೦
ಸ್ಥೂಲವಾದರೇನಯ್ಯ ೧೨೬೮
ಸ್ಥೂಲ ಸೂಕ್ಷ್ಮ ಕಾರಣ ೧೪೨೫
ಸ್ಥೂಲ ಸೂಕ್ಷ್ಮ ಕಾರಣ ೧೫೪೩

ಹ

ಹಗಲಾರುದಿನವೆಂಬುದ ೧೫೦೧
ಹತ್ತು ಕಡೆಗೆ ಹರಿದಾಡುವ ೧೪೦೨
ಹತ್ತು ಮುಖದಲ್ಲಿ ೧೫೧೮
ಹದಿನಾರು ಎಸಳ ೯೬೨
ಹರಿತವರ್ಣದ ಮರಕ್ಕೆ ೯೫೬
ಹಲವು ಕಡೆಗೆ ೧೧೮೬
ಹಲವು ಕಡೆಗೆ ೧೨೦೯
ಹಲವು ಕಡೆಗೆ ೧೨೨೮
ಹಲವು ಕಡೆಗೆ ೧೩೪೨
ಹಲವು ಕಡೆಗೆ ೧೪೭೪
ಹಲವು ಕಡೆಗೆ ೧೪೮೪
ಹಲವು ಕಡೆಗೆ ೧೫೧೪
ಹಲವು ಬಣ್ಣದ ೧೩೭೧
ಹಲವು ಬಣ್ಣದಲ್ಲಿ ೧೪೯೫
ಹಲವು ಯಜ್ಞದ ೧೩೬೫
ಹಸಿವು ತೊರೆದರೇನಯ್ಯ ೧೨೬೬
ಹಾದಿಯಲ್ಲಿ ಬಿದ್ದಿಪ್ಪ ೧೪೨೨
ಹಾರುವಗೇರಿಯಲ್ಲಿ ೧೪೧೬
ಹಾಳೂರಲ್ಲಿ ಒಂದು ೧೩೮೮
ಹಿಂದಳ ಮಾತಕೇಳಿ ೧೨೭೪
ಹುಚ್ಚಮನದೊಳು ೧೧೨೪
ಹುಟ್ಟಿದ ಮನವಿಲ್ಲ ೧೧೩೨
ಹುಟ್ಟಿಲ್ಲದ ನಾರಿ ೧೪೮೯
ಹುಟ್ಟುವ ಕರಣಂಗಳ ೧೧೮೭
ಹುಲ್ಲುಮಾರುವ ೯೭೨
ಹೊನ್ನು ಹೆಣ್ಣು ಮಣ್ಣು ೧೪೬೭
ಹೊಲೆಹದಿನೆಂಟು ಜಾತಿ ೧೩೮೩
ಹೊರಗೆ ನೋಡಿದರೆ ೧೦೬೬
ಹೃತ್ಕಮಲದಲ್ಲಿ ೧೬೨೧
ಹೃತ್ಕಮಲದಲ್ಲಿಪ್ಪ ೧೫೪೬
ಹೃದಯಕಮಲದಲ್ಲಿಪ್ಪ ೯೩೦
ಹೃದಯದಲ್ಲಿಪ್ಪ ೧೩೩೭
ಹೃದಯದಲ್ಲಿಪ್ಪ ೧೩೬೯
ಹೃದಯದಲ್ಲಿಪ್ಪ ಅಂಜನ ೧೪೦೬
ಹೃದಯದಲ್ಲಿಪ್ಪ ಪ್ರಾಣಕ್ಕೆ ೧೩೩೧
ಹೃದಯದೊಳಗಿಪ್ಪ ೧೩೨೨
ಹೃದಯದೊಳಗಿಪ್ಪ ೧೪೩೧
ಹೃದಯದೊಳಗಿರ್ಪ ೧೧೧೬
ಹೃದಯದೊಳಗಿರ್ಪ ೧೮೫


■■

# ಕಠಿಣ ಪದಕೋಶ

ಅಂಘ್ರಿ-ಪಾದ
ಅಗಲು-ಊಟದ ತಾಟು, ನೈವೇದ್ಯ
ಅಗ್ರ-ಮೇಲೆ, ತುದಿ
ಅಡಗಲ್ಲು-ತಳಹದಿ, ಕಮ್ಮಾರರ ಬಡಿಗಲ್ಲು
ಅಡ್ಡ-ನಾಣ್ಯವಿಶೇಷ
ಅದ್ವಯ-ಎರಡಿಲ್ಲದ, ಏಕವಾದ, ಶಿವ
ಅನಾಮಿಕ-ಅನಾಮಿಕೆ, ಉಂಗುರದ ಬೆರಳು
ಅಪರಂಪರ-ಎಲ್ಲೆಮೀರಿದ
ಅಪಶೈವ-ಅಶುದ್ಧ ಶೈವ
ಅಭ್ರಕ-ಒಂದು ವಿಧದ ಧಾತು, ಬಿಂಗ
ಅಮಲ-ಶುಭ್ರ, ಶಿವ
ಅಮಳೋಕ್ಯ-ಗಂಟಲು, ಲಿಂಗಧಾರಣ ಮಾಡುವ ಬಾಯಿಯೊಳಗಿನ ಒಂದು ಭಾಗ
ಅರತು-ಕರಗಿ, ಬತ್ತಿಹೋಗಿ
ಅಲಕುಮಲಕು-ಕತ್ತರಿಬತ್ತರಿ, ಗಂಟುಗಂಟಾದ
ಅವಿರಳ-ಬಿಟ್ಟೂಬಿಡದ
ಅಸಮಾಯಲಿಂಗ-ಅಸಾಮಾನ್ಯಲಿಂಗ
ಅಸುಲಿಂಗಿ-ಪ್ರಾಣಲಿಂಗಿ
ಆಕಿಂಗೆ-ಆಕೆಗೆ
ಆಗರ-ಆಶ್ರಯ, ಮನೆ
ಆತ್ಮ-ಜೀವಾತ್ಮ, ಚೈತನ್ಯ
ಆಮೋದ-ಆನಂದ
ಆಯತ-ಸಿದ್ಧಿ, ಸಮಗ್ರತೆ
ಆವಟಿಗ-ಧಾನ್ಯ ಅಳೆಯುವವ
ಆಳಾಪ-ದುಃಖ
ಇಂಬು-ಅವಕಾಶ, ಸ್ಥಳ
ಇಸ-ವಿಷ
ಈಸು-ಕೋಲು
ಉದರಾಗ್ನಿ-ಹಸಿವು
ಉದಕ-ನೀರು
ಮಂಡೂಕ-ಮೊಂಡ, ತಲೆಯಿಲ್ಲದವ, ಕಪ್ಪೆ
ಉಪ್ಪಣಿಗ-ಉಪ್ಪುಮಾಡುವವನು
ಉಪಾವಸ್ತೆ-ಧ್ಯಾನ, ಪೂಜೆ
ಉಮ್ಮಳಿಸು-ಕಳವಳಿಸು, ದುಃಖಪಡು
ಉಲುಕು-ಅಲುಗಾಡು
ಊಲುಹು-ಧ್ವನಿ, ಸಪ್ಪಳ
ಉಳ್ಳಿ-ಈರುಳ್ಳಿ, ಉಳ್ಳಿಗಡ್ಡೆ
ಋತವಡಗು-ಸತ್ಯ ಇಲ್ಲವಾಗು
ಋತುವಡಗು-ಕಾಲವಡಗು
ಎಕ್ಕಲ-ಹಂದಿ
ಎಕ್ಕೆ-ಶ್ರೇಷ್ಠತೆ, ಗುಂಪು
ಎಚ್ಚು-ಹೊಡೆ
ಎಡೆಯಾಡು-ಸುತ್ತಾಡು
ಏಕಕಾನಿ-ಒಂದೇ ಕಿಂಡಿ
ಏಕವಿಂಶತಿ-ಇಪ್ಪತ್ತೊಂದು
ಏಡಿಸ್ಯಾಡು-ನಿಂದಿಸು, ಹಾಸ್ಯಮಾಡು
ಐದಗಿತ್ತೇರು-ಮುತ್ತೈದೆಯರು
ಒತ್ತಿಲಿ-ಹತ್ತಿರ
ಒಬ್ಬುಳಿ-ಗುಂಪು
ಓಡು-ಪಾತ್ರೆ, ಹಂಚು
ಓಸರಿಸು-ಮರೆಯಾಗು, ಓರೆಯಾಗು
ಕಂಡಿಕಾರರು-ಖಡ್ಗಧಾರಿಗಳು
ಕಂಡಿಕಿ-ನೂಲುಸುತ್ತುವ ಸಾಧನ
ಕಂಗಳ-ಕುರುಡ
ಕಂಥೆ-ಬಟ್ಟೆ
ಕಕಲಾತಿ-ಕಕ್ಕುಲತೆ, ಪ್ರೀತಿ
ಕಕ್ಷೆ-ಕಂಕುಳ

ಕಟಿ-ನಡು
ಕಟ್ಟುವಡೆ-ಬಂಧಿತನಾಗು
ಕಡವರ-ಬಂಗಾರ
ಕಣೆ-ಕೋಲು
ಕಪ್ಪಡ-ಬಟ್ಟೆ
ಕಮ್ಮರಿ-ಕೊಳ್ಳ, ಕೊರಕಲು
ಕರ್ಣೆ-ಒಂದು ಚರ್ಮದ ವಾದ್ಯ
ಕರಡ-ಒಣಗಿದಹುಲ್ಲು,
ಕರ್ಲಭೂಮಿ-ಫಲವತ್ತಲ್ಲದ ನೆಲ, ಕಟಗು ನೆಲ
ಕವಾಡ-ಕಪಾಟು
ಕವುಚ-ಕವಚ, ಹೊದಿಕೆ
ಕಾಂಕ್ಷೆ-ಇಚ್ಛೆ, ಬಯಕೆ
ಕಾಂತಾರ-ಅಡವಿ
ಕಾಣಿಕಲ್ಲು-ತೂಕದಕಲ್ಲು
ಕಾಲಮಂದಿ-ಕಾಲಾಳು
ಕಾವ-ಕಾಮ
ಕಾವಡಿ-ಹೆಗಲಮೇಲೆ ಹೊತ್ತುತರುವ ಬಿದಿರಿನ ದಬ್ಬೆ
ಕಾವಳ-ಕತ್ತಲೆ
ಕಾಸಿನಜಂಗಮ-ಹಣದಾಸೆಯುಳ್ಳ ಜಂಗಮ, ಸಣ್ಣ ಮನಸ್ಸಿನ ಜಂಗಮ
ಕಿಂಕರತ್ವ-ಸೇವಾಭಾವ
ಕಿಂಕುರ್ವಾಣ ದೈನ್ಯಸ್ಥಿತಿ
ಕಿಸುಕುಳ-ಕ್ಷುದ್ರ, ಕೀಳು
ಕೀಳ್ಪಡಿಸು-ಕೀಳುಮಾಡು
ಕುಟಿ-ಗುಡಿಸಲು
ಕುಡಿ-ಜಾಗಟೆ ಬಾರಿಸುವ ಕೋಲು
ಕುಬಟಗಿ-ಪತ್ತಾರರು ಬಂಗಾರ ಕರಗಿಸಲು ಉಪಯೋಗಿಸುವ ಮಣ್ಣಿನ ಬೆಂಕಿ ಪಾತ್ರೆ
ಕುಳಿ-ತಗ್ಗು
ಕುಳ್ಳಿ-ಗಿಂಡಿ, ಸಣ್ಣಗಡಿಗೆ
ಕೂಸು-ಗುರುತು
ಕೆರವು-ಚಪ್ಪಲಿ, ಪಾದರಕ್ಷೆ
ಕೆಲಗಯ್ಯಿ-ಎಡಗೈ
ಕೈವಲ್ಯ-ಮೋಕ್ಷ
ಕೊಂಗೆ-ಟೊಂಗೆ, ಕೊಂಬೆ
ಕೊರವದು-ಕೊರೆಯುವುದು
ಕೊಲ್ಲೆ-ಕೊಂಬೆ, ಟೊಂಗೆ
ಕೌಪ-ಲಂಗೋಟಿ
ಕ್ಷಣಿಕ-ಮಿಂಚು
ಕ್ಷುತ್ತು-ಹಸಿವು
ಖಂಡೇಂದುಧರ-ಅರ್ಧಚಂದ್ರನನ್ನು ಧರಿಸಿದವ, ಶಿವ
ಖತಿಹೋಗು-ಕಷ್ಟಕ್ಕೆಗುರಿಯಾಗು
ಖರ್ಪರ-ತಲೆಬುರುಡೆ, ಭಿಕ್ಷಾಪಾತ್ರೆ
ಖಬರು-ಎಚ್ಚರಿಕೆ, ಅರಿವು
ಖಾತ-ಗೊಬ್ಬರ
ಖೂಳ-ದುಷ್ಟ
ಗಣಿತಕ್ಕೆ-ಎಣಿಕೆಗೆ
ಗರ್ದಿಸು-ಗರ್ಜಿಸು, ಬೆದರಿಸು
ಗನ್ನಿಕಿ-ಕನ್ನಿಕೆ, ಕನ್ಯೆ
ಗಪ್ಪಾಗು-ಇಲ್ಲವಾಗು, ಮಾಯವಾಗು
ಗರಹತ್ತು-ದಮ್ಮುಹತ್ತು ತೇಕುಹತ್ತು
ಗವಾಕ್ಷ-ಕಿಡಕಿ, ಬೆಳಕಿಂಡಿ
ಗವಸಣಿಗೆ-ಮುಸುಕು, ಹೊದಿಕೆ
ಗಳೆ-ಊಳುವ ಸಾಧನ
ಗಾಡಿ-ಬಂಡಿ
ಗಿಲಾಯದಗೋಡೆ-ಸಮತಲ ಮಾಡಿದ ಗೋಡೆ, ಗಾರೆಬಳಿದ ಗೋಡೆ
ಗುಂಗರಿ-ಒಂದು ಜಾತಿಯ ಸೊಳ್ಳೆ
ಗುಂಡು-ದುಂಡಾದ ಕಲ್ಲು

ಗುಟಕಿ-ಒಂದು ಸಲ ಕುಡಿಯುವಷ್ಟು
ಗುಡಿಗೊರವ-ಶೈವಸನ್ಯಾಸಿ
ಗುಡುಮಿ-ಗಡಿಗೆ
ಗುಮ್ಮಿ-ಜಲ್ಲಿ, ದೊಡ್ಡ ಆಕಾರದ ಬುಟ್ಟಿ
ಗುರುಗೂರಿ-ಗೂರುಹತ್ತಿ, ದಮ್ಮುಹತ್ತಿ
ಗುರುಚರ-ಜಂಗಮ
ಗುಲ್ಲು-ಸದ್ದು, ಸಪ್ಪಳ
ಗುರೂಪಾವಸ್ತೆ-ಗುರುಧ್ಯಾನ, ಗುರುವಿನಲ್ಲಿ ಮೊರೆ
ಗೊಂಗಡಿ-ಉಣ್ಣೆಯ ವಸ್ತ್ರ, ಕಂಬಳಿ
ಗೋಸುಂಬೆ-ಊಸರವಳ್ಳಿ, ಕ್ಷಣಕ್ಷಣಕ್ಕೂ ಬಣ್ಣ ಬದಲಿಸುವ ಪ್ರಾಣಿ
ಗ್ರಾಸ-ಹುಲ್ಲು, ಅನ್ನ
ಘಟಾಕಾಶ-ದೇಹವೆಂಬ ಆಕಾಶ
ಘಟಿತ-ಸಂಭವಿಸಿದ, ನಡೆದ
ಘಾಟಿಸಿ-ಹೊಡೆದು
ಚಂಚು-ಸಂಚು, ವಂಚನೆ
ಚಂಚರು-ಅಲೆಮಾರಿಜನಾಂಗ
ಚಾಜ-ಹಕ್ಕು, ಬಾಬು,
ಚಿಲಿಕೆ-ಅಗುಳಿ
ಚಡಾಯಿಸು-ಬಾರಿಸು
ಚಬಕ-ಬಾರಕೋಲು
ಚುಲುಕ-ಅಂಗೈಯ ತಲ, ಸಣ್ಣ
ಛತ್ತೀಸ-ಮೂವತ್ತಾರು
ಜಟ್ಟಿಂಗ-ಗ್ರಾಮದೇವತೆ
ಜಡಮತಿ-ಅಜ್ಞಾನಿ
ಜಡಿಗಿಡಿತ-ಬೆದರಿಸುವಿಕೆ
ಜಾಡ್ಯ-ಆಲಸ್ಯ
ಜಾನು-ಮೊಳಕಾಲು
ಜಾರ-ವಿಟ
ಜಾರಸ್ತ್ರೀ-ವ್ಯಭಿಚಾರಿಣಿ
ಜೀನಸು-ಧಾನ್ಯ
ಜೀರು-ಹೂಗಾರರು
ಜಟ್ಟಿಗ-ಶೂರ
ಠಕ್ಕುಠವಳಿ-ಮೋಸ, ವಂಚನೆ
ಡಾಣಕ-ಬಡಿಗೆ
ಡಿಂಗರಿಗ-ಸೇವಕ
ಡೊಗರಿ-ತಗ್ಗು
ಢಾಳಿ-ಡೌಲುಮಾಡುವ ಸ್ತ್ರೀ
ತಂಬಿಸು-ನಿಲ್ಲಿಸು
ತರ್ಜನ್ಯ-ತರ್ಜನಿ, ತೋರಬೆರಳು
ತಡಿಗಿ-ಗದ್ದಿಗೆ, ಗುಡಿ
ತಲೆವೋಡು-ತಲೆಬುರುಡೆ
ತರಕಿಮೂಳರು-ಒಂದು ಬೈಗುಳ
ತಳಗಿ-ತಾಟು
ತಳ್ಳಿತಗಾದಿ-ತಂಟೆ, ಜಗಳ
ತಳೆ-ಧರಿಸು
ತಾಬಾಣ-ಪಾತ್ರೆ, ತಾಬಂಡಿ
ತಾವರಿಪರ್ಣ-ಕಮಲದ ಎಲೆ
ತಿಂಥಿಣಿ-ಗುಂಪು, ಸಮೂಹ
ತಿಗಟೆ-ತೊಗಟೆ
ತಿದಿ-ಹೊಟ್ಟೆಯ ಕರುಳು
ತಿಬ್ಬಿ-ಸಣ್ಣ ಹೊಲಿಗೆ
ತಿಮಿರ-ಕತ್ತಲೆ
ತುಡುಗ-ಕಳ್ಳ
ತುಡುಗುಣಿ-ಕಳವಿನಿಂದ ಜೀವಿಸುವವನು
ತುರುಕ-ಮುಸಲ್ಮಾನ
ತೆರಣಿ-ಜೇಡರಹುಳ
ತೆರಪ-ತೆರವು
ತೊಟ್ಟಿಡು-ಜಿನುಗು, ತಟತಟನೆ ಬೀಳು, ಸೋರು
ತೊನಸಿ-ದನಗಳಿಗೆ ಕಚ್ಚುವ ಒಂದು ಜಾತಿಯ ಹುಳು

ತೋಲಾಗಿ-ಭಾರವಾಗಿ
ತೃಣದಾಸನ-ಹುಲ್ಲಿನಿಂದ ಮಾಡಿದ ಹಾಸಿಗೆ
ತ್ರೈಭುವನ-ಮೂರುಲೋಕ
ದಂಡಿಗೆ-ಪಲ್ಲಕ್ಕಿ
ದಗ್ಧಮಾಡು-ಸುಡು
ದಡ್ಡಾಗು-ಮರಗಟ್ಟು
ದಕ್ಷಿಣಹಸ್ತ-ಬಲಗೈ
ದಡಿಮಾಸಿ-ರಭಸದಿಂದ
ದಮಾಮಿ-ವಾದ್ಯವಿಶೇಷ
ದರವಾಜು-ಬಾಗಿಲು
ದಾವತಿ-ಶ್ರಮ
ದಿಂಡೆ-ಅಸಭ್ಯಸ್ತ್ರೀ
ದಿಂಡೆಯತನ-ಅಸಭ್ಯವರ್ತನೆ
ದಿಟಪುಟ-ಸ್ಪಷ್ಟ, ಸತ್ಯ
ದುಕುಲ-ವಸ್ತ್ರ, ರೇಶಿಮೆ ಬಟ್ಟೆ
ದುಡ್ಡು-ಹಣ, ಬಿಲ್ಲಿ, ಕಡಿಮೆ ಬೆಲೆನಾಣ್ಯ
ದುರ್ಧರ-ಕಠಿಣ
ದುಬ್ಬುಳಕ-ಸಾಮಾನ್ಯ
ದುಮ್ಮಡಿ-ಕೊಳವಿ
ದುರಾಯ-ಆಣೆಯಿಡುವುದು
ದೃಷ್ಟಲಿಂಗ-ಸಾಕಾರಲಿಂಗ, ಇಷ್ಟಲಿಂಗ
ಧಾವತಿ-ಶ್ರಮ, ಸಂಕಟ
ಧಾವನೆ-ತೊಳೆಯುವಿಕೆ
ಧೂಮ್ರ-ಹೊಗೆ
ಧೂಳತಿಟ್ಟು-ಧೂಳಪಾದೋದಕ ಕೊಟ್ಟು
ನಕ್ರ-ಮೊಸಳೆ
ನಾಗರಕಾಟ-ಓತಿಕಾಟ
ನಾತ-ವಾಸನೆ
ನಾಭಿ-ಹೊಕ್ಕಳು
ನಾರಂಗಶಾಟಿ-ನಾರಿನ ಬಟ್ಟೆ
ನಾರಾಸನ-ನಾರಿನಿಂದ ಮಾಡಿದ ಹಾಸಿಗೆ
ನಿಕ್ಷೇಪ-ಹುಗಿದಿಟ್ಟ ಧನ
ನಿಚ್ಚಟ-ನಿಷ್ಕಪಟ, ಯಾವಾಗಲೂ
ನಿಟಿಲತಟ-ಹಣೆಯ ಪ್ರದೇಶ
ನಿರ್ಧರ-ಮನಸ್ಸಿನ ನಿಶ್ಚಯ
ನಿರ್ಮಲಗಿತ್ತಿ-ಶುದ್ಧಮನದವಳು
ನಿಮಿತಾರ್ಥ-ಒಂದು ಕಾರಣಾರ್ಥ
ನಿರಾವಾಸಿ-ವಾಸಸ್ಥಾನವಿಲ್ಲದವನು
ನಿರುಗೆ-ಇರುವಿಕೆ, ಕ್ರಮ, ವ್ಯವಸ್ಥೆ
ನಿರೂಪ-ಆದೇಶ, ಆದೇಶಪತ್ರ
ನಿಲುಕಡೆ-ಸ್ಥಾನ, ನಿಲುವು
ನಿರ್ವಾಣಿ-ಮೋಕ್ಷಯೋಗ್ಯನಾದವನು
ನುಚ್ಚಬಡಕ-ಕೂಳಬಾಕ
ಪಡಿ-ಪ್ರತಿ, ಧಾನ್ಯದ ರೂಪದಲ್ಲಿ ಕೊಡುವ, ಭತ್ಯ, ಅಳತೆ,
ಪಣಜ-ಮುತ್ತಜ್ಜ (?)
ಪದ-ಶಬ್ದ
ಪರವನೆಯ್ದು-ಸಾಯು
ಪರಿಯಂಕ-ಮಂಚ, ಪಲ್ಲಂಗ
ಪವುಜ-ದಂಡು
ಪಾಕುಳ-ಮಲ, ಹೊಲಸು
ಪಾಚ್ಛಾ-ಬಾದಶಹಾ, ಅರಸು
ಪಾತಕಾಂಗ-ಅಧಮಾಂಗ
ಪಾತಿ-ಗಿಡಗಳಿಗಾಗಿ ಮಾಡಿರುವ ಮಡಿ
ಪಾವಡ-ವಸ್ತ್ರ
ಪಿಟ್ಟೆಸಿಕ್ಕು-ಸಿಕ್ಕಿಕೊಂಡು
ಪುಟವಾಗಿ-ಹೆಚ್ಚಾಗಿ, ಪ್ರಜ್ವಲಿಸಿ
ಪುಟುಮಾಡು-ಹೆಚ್ಚುಮಾಡು, ಪ್ರಜ್ವಲಗೊಳಿಸು
ಪೆರತು-ಬೇರೆ
ಪೋಣೆ-ಮುಕ್ಕಾಲು
ಪೋರ-ವಟು, ಮರಿಸ್ವಾಮಿ

ಬಣ್ಣಗಾರ-ನೂಲಿಗೆ ಬಣ್ಣಹಾಕುವವನು
ಬರುಕಿಯೆಲುವು-ಪಕ್ಕೆಲವು
ಬಲಗೊಳ್ಳು-ಪ್ರದಕ್ಷಿಣೆಹಾಕು
ಬಹಿಷ್ಕರಿಸಿ-ಬಹಿರಂಗಕ್ಕೆತಂದು
ಬಹುವಾಕ್ಕರು-ವಾಚಾಳಿಗಳು, ಸುಳ್ಳುಗಾರರು
ಬಾಗಿಣ-ಬಾಗಿನ, ಕಾಣಿಕೆ
ಬಾರಿಕ-ತಳವಾರ
ಬಾವನ್ನ-ಐವತ್ತೆರಡು
ಬಿರಡ-ಬೆಣೆ
ಬುಗುಟಿ-ಗುಮಟಿ
ಬುದ್ದಲಿಕೆ-ಎಣ್ಣೆತುಂಬುವ ಚರ್ಮದಚೀಲ
ಬೂಟಕ-ಮೋಸಗಾರ
ಬೆಚ್ಚು-ಹತ್ತಿಕೊಳ್ಳು
ಬೆಸೆ-ಹತ್ತಿಹಿಂಜುವ ಬಿಲ್ಲು
ಬೇವ-ಹತ್ತಿಹಿಂಜುವ ಬಿಲ್ಲಿನ ಹಗ್ಗ
ಬೋಗಾರ-ಲೋಹದ ಕೆಲಸ ಮಾಡುವವನು
ಬೋದನ-ಬೋಧೆ
ಬೋಳೈಸಿ-ತಲೆಯಮೇಲೆ ಕೈಯಾಡಿಸಿ ಸಮಾಧಾನಪಡಿಸಿ
ಬ್ಯಾಟ-ಬೇಟ, ಪ್ರೇಮದ ಒಪ್ಪಂದ
ಬ್ಯಾನಿಕ್ಕಿ-ನೋವಾಗಿ, ಬೇನೆಯಾಗಿ
ಭಂಗ-ಒಡೆ, ನಾಶವಾಗು
ಭವರಾಟಾಳ-ಹುಟ್ಟುಸಾವಿನ ಚಕ್ರ
ಭಾಜನ-ಪಾತ್ರೆ
ಭಾಮಿನಿ-ಹೆಂಡತಿ
ಭಾಷೆಗಳ್ಳ-ಮಾತು ತಪ್ಪುವವನು
ಭುಜಪತ್ರ-ಭೂರ್ಜಪತ್ರ, ತಾಳೆಗರಿ
ಭೂಮ-ಮದುವೆಯಲ್ಲಿ ವಧೂವರರಿಗೆ ಉಣಿಸುವ ವಿಶೇಷವಾದ ಊಟ
ಭೈತ್ರ-ಹಡಗ, ತೆಪ್ಪ
ಭೃಂಗ-ದುಂಬಿ

ಮಂಡೂಕ-ಕಪ್ಪೆ
ಮಕ್ಷಿಕ-ನೊಣ
ಮಚ್ಚೆ-ಚಪ್ಪಲಿ, ಪಾದರಕ್ಷೆ
ಮಡ್ಡಮಾತು-ಧಡ್ಡತನದ ಮಾತು
ಮಡಿಮಾಡಿ-ಶುಭ್ರಮಾಡಿ
ಮದನಂಗ-ಮದುವಣಿಗ
ಮದನಗಿತ್ತಿ-ಮದುವಣಿಗೆ
ಮದಲಿಂಗ-ಮದುವಣಿಗ
ಮರಿ-ವಟು, ಮರಿಸ್ವಾಮಿ
ಮರೀಚಿಕೆ-ಬಿಸಿಲ್ಗುದುರೆ
ಮಸಬಭೂಮಿ-ಕೆಂಪುಮಣ್ಣಿನ ಮಸಾರಿ ಭೂಮಿ
ಮಹಳ-ಶ್ರಾದ್ಧ, ಪುಣ್ಯತಿಥಿ
ಮಾತ-ಮಾತು, ಭಾಷೆ
ಮಾರಣಿ-ಕೊಲ್ಲುವವಳು
ಮಾರಾಂತು-ಎದುರಾಗಿ
ಮಾಳ-ಉಪ್ಪುಮಾಡುವ ಮಡಿ
ಮಿಕ-ಹಂದಿ
ಮುಂಡಾಸ-ತಲೆಗೆ ಸುತ್ತುವ ವಸ್ತ್ರ, ರುಮಾಲು
ಮುಖಪ್ರಕ್ಷಾಲನ-ಮುಖ ತೊಳೆಯುವುದು
ಮುದ್ರಿಕಪಶು-ಮುದ್ರೆ ಹಾಕಿದ ದೇವರ ಆಕಳು
ಮುಮ್ಮಯ್ಯಿ-ಮುಂದಿನ ಭಾಗ
ಮುರಿಗಡಿ-ಮುರಿದುಹಾಕು
ಮುರಗಿ-ಸುತ್ತುವಳಿ, ಸುರುಳಿ
ಮುಸಿ-ತಂಬಾಕು ಸೇದುವ ಚಿಲುಮೆ
ಮೂಕೊರತಿ-ಮೂಗು ಕೊಯ್ಸಿಕೊಂಡವಳು
ಮೂಲಗುಂಡಿ-ಮೂಲದ್ವಾರ
ಮೂಳರು-ಮೂಗಿಲ್ಲದವರು, ಒಂದು ಬೈಗುಳು
ಮುಳ್ಳೂರು-ಮುಳ್ಳುಚುಚ್ಚು
ಮೇದಾರ-ಬುಟ್ಟಿಹೆಣೆಯುವವ

ಮೇದಿನಿ-ಭೂಮಿ
ಮೇಲಮುದ್ದಿ-ಮನೆಯ ಛತ್ತಿಗೆ ಹಾಕುವ ಮಣ್ಣಿನ ಅರಲು
ಮೇಳಾಪ-ಸ್ನೇಹ, ಕೂಟ
ಮೊರಡಿ-ಸಣ್ಣ ಗುಡ್ಡ, ಹರಳುಕಲ್ಲಿನ ಭೂಮಿ
ಮೊಳೆ-ಹುಟ್ಟು, ಮೊಳಕೆ
ಮೋಟ-ಕೈಯಿಲ್ಲದವ, ಸಣ್ಣ
ಮೋಳಿಗೆ-ಕಟ್ಟಿಗೆ
ಮೋಹರ-ಮುದ್ರೆಯುಳ್ಳ ನಾಣ್ಯ, ಬಂಗಾರದ ನಾಣ್ಯ
ಮೃಡ-ಶಿವ
ಯಾತ-ಬಾವಿಯಿಂದ ನೀರು ಎತ್ತುವ ಸಾಧನ
ಯಾಸಿ-ಸೊಟ್ಟ, ಅಂಕುಡೊಂಕ
ಯೋನಿಸಂಭವ-ಯೋನಿಯಲ್ಲಿ ಹುಟ್ಟಿದವ
ರಂಜಣಗಿ-ಗಂಧತುಂಬುವ ಭರಣಿ
ರಂಭಾ-ಬಾಳೆ, ಅಪ್ಸರೆ
ರಗಟೆ-ಹೊದಿಕೆ, ಅಂಗವಸ್ತ್ರ
ರಚ್ಚೆ-ಕೆಸರು, ಹೊಲಸು
ರಮಣ-ಗಂಡ
ರವಸ-ರಭಸ
ರುಜು-ಸಹಿ
ರೊಕ್ಕ-ಹಣ
ರೋಧನ-ಅಳು, ದುಃಖ
ಲಳಿಗೆ-ಬಿದಿರಕೊಳವೆ
ಲಾಂಛನ-ಚಿಹ್ನ, ಗುರುತು, ವೇಷ
ಲೊಟ್ಟಗಣ್ಣ-ಗಜಗಬೆಳೆದ ಕಣ್ಣುಳ್ಳವ
ಲೋಡು-ತಲೆದಿಂಬು
ಲೋಮಗುಂಡು-ಒಡ್ಡರು ಗೋಡೆಯ ಸಮತೆ ಅಳೆಯಲು ಬಳಸುವ ಕಬ್ಬಿಣದ ಗುಂಡು
ಲೋಲುಪ್ತ-ತಲ್ಲೀನನಾದ, ನಿರತನಾದ
ವಂತಿಗೆ-ದೇಣಿಗೆ
ವನ್ಮಥವಿಕಾರ-ಕಾಮವಿಕಾರ
ವರಹ-ಒಂದು ಚಿನ್ನದ ನಾಣ್ಯ, ನಾಲ್ಕು ರೂಪಾಯಿ
ವರಾಹ-ಹಂದಿ
ವಲ್ಲಿ-ಹೊದ್ದುಕೊಳ್ಳುವ ಅಥವಾ ಉಡುವ ವಸ್ತ್ರ, ಉತ್ತರೀಯ
ವಾಜಿ-ಕುದುರೆ
ವಾಣಗಿತ್ತಿ-ಮಾತುಗಾರ್ತಿ
ವಾಮಹಸ್ತ-ಎಡಗೈ
ವಾಳೆಯಾವು-ದೇವರಿಗೆ ಬಿಟ್ಟ ಆಕಳು
ವಿಭ್ರಮಣ-ತಿರುಗಾಟ
ವಿಶಸನ-ಕತ್ತರಿಸುವಿಕೆ
ವೈದ್ಯ-ಔಷಧ
ವೈಲಿ-ಬೈಲು, ಎತ್ತು (?)
ವೃಶ್ಚಿಕ-ಚೇಳು
ವ್ಯವಹರಣೆ-ವ್ಯವಹಾರ
ವ್ಯಾಕುಳ-ದುಃಖ
ಶಕಲಾತಿ-ಸಕಲ ಹೆಸರಿನ ಬೆಲೆಯುಳ್ಳ ಬಟ್ಟೆ
ಶಾಬಕ-ಮರಿ
ಶಾಲಿ-ವಸ್ತ್ರ
ಶಾಸೆ-ಸೇಸೆ, ಮಂತ್ರಾಕ್ಷತೆ
ಶಿಕಾರಿ-ಬೇಟೆಯಾಡುವುದು
ಶೀಗರಿಮೆಳೆ-ಮುಳ್ಳಿನ ಪೊದೆ
ಶೀರ್ಷ-ತಲೆ
ಶುನಿ-ನಾಯಿ
ಶೇಷ-ಉಳಿದ
ಶ್ರಾವಣೆ-ಸನ್ಯಾಸಿನಿ
ಸಂಚಗರಿಸು-ಹೂಳು
ಸಂತವಿಟ್ಟು-ಸಂತೋಷಪಡಿಸಿ
ಸಂಚಲ-ಚಲಿಸುವಿಕೆ
ಸಗಣ-ಸಗಣಿ

ಸಜ್ಜೆ-ಕರಡಿಗೆ, ಲಿಂಗದ ಭರಣಿ
ಸನಗು-ಆಭರಣ
ಸಪೂರಿ-ಊದುವ ಒಂದು ವಾದ್ಯ
ಸಮ್ಮಾರ್ಜನೆ-ತೊಳೆಯುವುದು, ಶುದ್ಧಿಮಾಡುವುದು.
ಸಲ್ಲು-ಸೊಲ್ಲು, ಧ್ವನಿ
ಸಲಿಲ-ಶುದ್ಧನೀರು
ಸವುಳಭೂಮಿ-ಉಪ್ಪುಭೂಮಿ
ಸಾಜ-ಸ್ವಾಭಾವಿಕ, ನಿಜ
ಸಾರಣ-ಸಾರಿಸುವಿಕೆ
ಸಿಂತರಿಸು-ಸಂತಯಿರಿಸು, ಸಂತಸಪಡಿಸು
ಸೀಳ್ಬಿನ ಕೋವಿ-ಸೀಳಿದ ಬಿದರು
ಸುರತರು-ಕಲ್ಪವೃಕ್ಷ
ಸುರಧೇನು-ಕಾಮಧೇನು
ಸುನತಿ-ಮುಸ್ಲಿಮ ಗಂಡುಮಕ್ಕಳಿಗೆ ಮಾಡುವ ಒಂದು ಸಂಸ್ಕಾರ
ಸುರಚಾಪ-ಕಾಮನಬಿಲ್ಲು
ಸೂತ್ರಿಕ-ಸೂತ್ರಧಾರ
ಸುಪ್ಪಾಣಿ-ಮುತ್ತು
ಸೂಸಲೀಯದೆ-ಹೆಚ್ಚಾಗಗೊಡದೆ, ತುಂಬಿಹರಿಯಗೊಡದೆ
ಸೆದೆ-ಹುಲ್ಲು, ಕಸ
ಸೆಳವು-ರಭಸ, ಎಳೆತ
ಸೊನ್ನಿ-ಹೊಡೆತ
ಸ್ವಯಜ್ಞಾನ-ಸ್ವಾನುಭಾವ
ಹಂತೇಲಿ-ಹತ್ತಿರ, ಸಮೀಪ
ಹಚ್ಚಡ-ವಸ್ತ್ರ
ಪಡಕಿ-ಮಲ, ಅಶುದ್ಧ
ಹಡೆ-ಪಡೆ, ಪ್ರಸವಿಸು
ಹಡಪ-ಸಣ್ಣಚೀಲ, ವೀಳೆಯದ ಚೀಲ
ಹಣೆಚಿಕ್ಕಿ-ಹಣೆಯ ಮೇಲಿನ ಗುರುತು
ಹತವಮಾಡು-ಕೊಲ್ಲು
ಹದಿರು-ಕ್ರಮ, ಕೈಯ ಮಣಿಕಟ್ಟು
ಹರವಿ-ಮಣ್ಣಿನ ದೊಡ್ಡಪಾತ್ರೆ
ಹರಗಡಿ-ತಗ್ಗುಕಡಿ
ಹಸು-ಹಸಿವೆ
ಹಳಚು-ತಾಗು, ಅಪ್ಪಳಿಸು
ಹಳ್ಳಗೊಂಡ-ತೂತುಬಿದ್ದ
ಹಾಗ-ಹಣವೆಂಬ ನಾಣ್ಯದ ಕಾಲುಭಾಗ
ಹಾವುಗೆ-ಪಾದುಕೆ
ಹಾರುವಿತಿ-ಬ್ರಾಹ್ಮಣಸ್ತ್ರೀ
ಹಿಂಗು-ಮುಳುಗು, ಐಕ್ಯವಾಗು
ಹಿಟ್ಟಿಗುಟ್ಟಿ-ಪುಡಿಮಾಡಿ
ಹಿನ್ನಿ-ಸೂಜಿಯ ಹಿಂದಿನ ಭಾಗ, ತೂತು
ಹಿರಿಬೇನೆ-ಕುಷ್ಟರೋಗ
ಹೀರಾವಳಿ-ಮುತ್ತಿನ ಸರ
ಹುಗುಲ-ತೂತು, ರಂಧ್ರ
ಹುಟ್ಟಾವಳಿ-ಜನನ ಚಕ್ರ
ಹುಯ್ಯಲು-ಸದ್ದು, ಧ್ವನಿ
ಹೂಲಿ-ಗಲಭೆ, ಗಲಾಟೆ
ಹೆಂಡಗಾರ-ಹೆಂಡಗುಡುಕ
ಹೆಗ್ಗ-ಮೂರ್ಖ, ಧಡ್ಡ
ಹೆರೆಹಿಂಗದೆ-ಹಿಂದೆಸರಿಯದೆ
ಹೊಡೆಯಹಿರಿದು-ತೆನೆ ಪ್ರಕಟವಾಗಿ
ಹೊಳ್ಳು-ತೌಡು
ಹೋಗಾಡಿ-ಹೋಗುವಂತೆ ಮಾಡಿ, ನೀಗಿಸಿ
ಹೃನ್ಮಂದಿರ-ಹೃದಯಮಂದಿರ

# ಆಕರ ಗ್ರಂಥಗಳು

**ಕಂಡಿತದ ವಚನಗಳು-ಚೆನ್ನಯ್ಯ**

(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)

ಸಂ : ಡಾ. ಬಿ. ಆರ್. ಹಿರೇಮಠ

ಪ್ರ: ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೯೦ (ಪ್ರ. ಆ.)

**ಕಾಡಸಿದ್ಧೇಶ್ವರನ ವಚನಗಳು-ಕಾಡಸಿದ್ಧೇಶ್ವರ**

ಸಂ : ವೇ. ಚಂದ್ರಶೇಖರಶಾಸ್ತ್ರಿ ಹೊಳಲು ಮತ್ತು

ವೇ. ಸೋಮಶೇಖರಶಾಸ್ತ್ರಿ ಹಿರೇಮಠ ಬೆಣಕಲ್ಲು

ಪ್ರ : ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ

ಮೂರುಸಾವಿರಮಠ, ಹುಬ್ಬಳ್ಳಿ

೧೯೩೭ (ಪ್ರ. ಆ.)

**ಕುಷ್ಟಗಿ ಕರಿಬಸವೇಶ್ವರ ವಚನಗಳು-ಕುಷ್ಟಗಿ ಕರಿಬಸವ**

ಸಂ : ಶ್ರೀ ಎಸ್. ಶಿವಣ್ಣ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೯೦ (ಪ್ರ. ಆ.)

**ಗಣದಾಸಿ ವೀರಣ್ಣನ ವಚನಗಳು-ಗಣದಾಸಿ ವೀರಣ್ಣ**

ಸಂ : ಶ್ರೀ ಎಸ್. ಎಸ್. ಭೂಸರೆಡ್ಡಿ

ಪ್ರ : ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,

ಮೂರುಸಾವಿರಮಠ, ಹುಬ್ಬಳ್ಳಿ

೧೯೭೭ (ಪ್ರ. ಆ.)

**ಗುಹೇಶ್ವರಯ್ಯನ ವಚನ-ಗುಹೇಶ್ವರಯ್ಯ.**

(ಇದು ವಚನ ಸಂಕಲನ ಸಂಪುಟ-೧. ಈ ಕೃತಿಯ ಒಂದು ಭಾಗ)

ಸಂ : ಡಾ. ಬಿ. ಆರ್. ಹಿರೇಮಠ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೯೦ (ಪ್ರ. ಆ.)

**ಚಿದ್ವೈಶ್ವರ್ಯ ಚಿದಾಭರಣ-ಗುರುಸಿದ್ಧದೇವರು**

ಸಂ : ಶ್ರೀ ಪಿ. ಎಂ. ಗಿರಿರಾಜು

ಪ್ರ : ಶರಣಸಂತಾನ ಪ್ರಕಾಶನ, ಮೈಸೂರು

೧೯೮೫ (ಪ್ರ. ಆ.)

**ಜ್ಞಾನಷಟ್‌ಸ್ಥಲಸಾರ-ಗುರುಶಂಕರಸ್ವಾಮಿ.**

ಸಂ : ಡಾ. ವೀರಣ್ಣ ರಾಜೂರ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೯೨ (ಪ್ರ. ಆ.)

**ನಿರಾಳಮಂತ್ರಗೋಪ್ಯ-ಜಕ್ಕಣಯ್ಯ**

ಸಂ : ಡಾ. ಬಿ. ವಿ. ಶಿರೂರ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೨ (ಪ್ರ. ಆ.)

**ಬ್ರಹ್ಮಾದ್ವೈತಸಿದ್ಧಾಂತ ಷಟ್‌ಸ್ಥಲಾಭರಣ-ಕರಸ್ಥಲದ ಮಲ್ಲಿಕಾರ್ಜುನ ಒಡೆಯ**

ಸಂ : ಡಾ. ಆರ್. ಸಿ. ಹಿರೇಮಠ

ಪ್ರ : ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೩ (ಪ್ರ. ಆ.)

**ಶರಣಚಾರಿತ್ರದ ವಚನಗಳು-ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು**

ಸಂ : ಡಾ. ಬಿ. ವಿ. ಶಿರೂರ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೪ (ಪ್ರ. ಆ.)

**ಶಿವಯೋಗ ಚಿಂತಾಮಣಿ-ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿ**

ಸಂ : ಡಾ. ಉಮಾದೇವಿ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೭ (ಪ್ರ. ಆ.)

**ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು**

-ಸಂಪಾದನೆಯ ಬೋಳಬಸವೇಶ್ವರ

ಸಂ : ಪ್ರೊ. ಎಸ್. ಉಮಾಪತಿ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೪ (ಪ್ರ. ಆ.)

**ಷಟ್ಸ್ಥಲಕಾರ ಸಂಗ್ರಹ-ಶಾಂತದೇವರು**

ಸಂ : ಜಿ.ಎ. ಶಿವಲಿಂಗಯ್ಯ

ಪ್ರ : ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೭ (ಪ್ರ. ಆ.)

**ಸಂಬಂಧಾಚರಣೆಯ ವಚನಗಳು**

ಸಂ : ಪಿ. ಎಂ. ಗಿರಿರಾಜು

ಪ್ರ : ಶರಣಸಂತಾನ ಪ್ರಕಾಶನ, ಮೈಸೂರು

೧೯೮೬ (ಪ್ರ. ಆ. )

**ಹಸ್ತಪ್ರತಿಗಳು–ಪತ್ರಿಕೆಗಳು :**

–ಕಾಡಸಿದ್ಧೇಶ್ವರನ ವೀರಶೈವ ಷಟ್‌ಸ್ಥಲ

(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ)

–ಗಣದಾಸಿ ವೀರಣ್ಣನ ವಚನಗಳು

(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ)

–ಚೆನ್ನಯ್ಯನ ವಚನಗಳು

(ಗದುಗಿನ ಜಗದ್ಗುರು ತೋಂಟದಾರ್ಯಮಠದ ಹಸ್ತಪ್ರತಿ)

–ಗಣದಾಸಿ ವೀರಣ್ಣನ ಹೆಚ್ಚಿನ ವಚನಗಳು

(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ–೭೯)

–ಕೂಡಲಸಂಗಮೇಶ್ವರ ವಚನ ಸಂ. ಬಿ. ರಾಜಶೇಖರಪ್ಪ

(ಸತ್ಯ ಶುದ್ಧಕಾಯಕ ೭–೩,೪, ಮಾ–ಏ ೧೯೯೭)

–ಘನಲಿಂಗದಯ್ಯನ ವಚನ ಸಂ. ಎಸ್. ಉಮಾಪತಿ

(ಬಸವ ಪಥ ೧-೯೯ ; ಡಿ. ೧೯೯೭)

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ; ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6